CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 39

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 6—6—1963 ಗುರುವಾರ

13 ನೇ ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೩೯

ನ ಮ್ಮ
ರಾಷ್ಟ್ರೀಯ
ರಕ್ಷಣಾ ನಿಧಿ
ಉ ದಾ
ಸ ಹಾ ಯ
ಕ ಳ್ಳಿ ಸಿ

ಭಾರತ—ಚೀನೀ ಗಡಿ ವಿವಾದ

ಚೀನೀಯರ ಭಾರಿ ಪ್ರಮಾಣ ದಾಳಿ

ಭಾರತ ಮತ್ತು ಚೀನಾಗಳ ನಡುವೆ ಹೋರಾಟ ಯಾವಾಗ ಆರಂಭವಾಯಿತ? ಮತ್ತು ಅದಕ್ಕೆ ಕಾರಣಗಳೇನು?

ಭಾರತ-ಚೀನಾ ಗಡಿ ವಿವಾದವನ್ನು ಶಾಂತಿಯುತ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಭಾರತ ಸರ್ಕಾರ ಚೀನಾ ಸರ್ಕಾರಕ್ಕೆ ೧೯೬೨ರ ಆಗಸ್ಟ್ ೨೨ರಂದು ಪತ್ರವೊಂದನ್ನು ಬರೆದು, (ಚೀನಾ ಬಲ ಪ್ರಯೋಗದಿಂದ ೧೨,೦೦೦ ಚದರ ಮೈಲಿಗಳಷ್ಟು ಭಾರತೀಯ ಪ್ರದೇಶವನ್ನು ವಶಪಡಿಸಿಕೊಂಡು) ಲಡಾಖ್‌ನಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಉಭಯ ರಾಷ್ಟ್ರಗಳ ನಡುವೆ ಸಮಾಲೋಚನೆ ನಡೆಯಬೇಕೆಂದು ಸೂಚಿಸಿತು. ಗಡಿ ವಿವಾದವನ್ನು ಅಂತಿಮವಾಗಿ ಬಗೆಹರಿಸುವುದಕ್ಕಾಗಿ ಮಾತುಕತೆಗಳನ್ನು ಪ್ರಾರಂಭಿಸಲು ಅದು ಸಹಾಯಕವಾಗುವುದೆಂದು ಭಾರತ ಸರ್ಕಾರವು ಅಭಿಪ್ರಾಯಪಟ್ಟಿತು.

ಆದರೆ ಗಡಿ ವಿವಾದವನ್ನು ಇತ್ಯರ್ಥಗೊಳಿಸಲು ಚೀನಾ ತನ್ನದೇ ಆದ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ೧೯೬೨ರ ಸೆಪ್ಟೆಂಬರ್ ೮ನೆಯ ದಿನಾಂಕದಂದು ಚೀನೀ ಸೈನಿಕರು ಪ್ರಪ್ರಥಮ ಬಾರಿ ಭಾರತದ ಈಶಾನ್ಯಗಡಿಯನ್ನು ದಾಟಿ ಬಂದು ಆ ಪ್ರದೇಶದಲ್ಲಿನ ಗಡಿ ರಕ್ಷಣಾ ಗಳ ಮೇಲೆ ದಾಳಿ ಮಾಡಿದರು. ೧೯೬೨ರ ಏಪ್ರಿಲ್ ತಿಂಗಳಂದು ನವದೆಹಲಿಯಲ್ಲಿ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಚೀನಾದ ಪ್ರಧಾನ ಮಂತ್ರಿ ಚೌ ಎನ್. ಲಾಯ್‌ರವರು ಮಾತನಾಡುತ್ತಾ, "ಭಾರತ-ಚೀನಾ ಗಡಿರೇಖೆಯ ಪೂರ್ವ ಭಾಗದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ನಾವು ಸಿದ್ಧರಿದ್ದೇವೆ ಎಂದಿಗೂ ಮ್ಯಾಕ್‌ಮಹೋನ್ ರೇಖೆಯನ್ನು ದಾಟಿ ಬರುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದರು.

ಚೀನೀಯರು ಹರಾತ್ತನೆ ದಾಳಿ ಮಾಡಿದ ನಂತರವೂ ಭಾರತವು ಚೀನೀಯರು ಗೋಪ್ಯವಾಗಿ ನಡೆಸಿದ ಕುತಂತ್ರಗಳನ್ನು ಅರಿಯದೆ, ಅಂತಾರಾಷ್ಟ್ರೀಯ ಗಡಿಯಿಂದ ಆಚೆಗೆ ಸೇನೆಯನ್ನು ಹಿಂತೆಗೆದುಕೊಳ್ಳಬೇಕೆಂದು ಚೀನಾ ಸರ್ಕಾರವನ್ನು ಒತ್ತಾಯಪಡಿಸುವುದರಲ್ಲಿ ನಿರತವಾಗಿತ್ತು. ೧೯೬೨ರ ಅಕ್ಟೋಬರ್ ೮ರಂದು ಭಾರತ ಸರ್ಕಾರವು ಚೀನಾಕ್ಕೆ ಪತ್ರ ಬರೆದು, ಹೊಸ ಆಕ್ರಮಣದಿಂದ ಉದ್ಭವಿಸಿದ ಪರಿಸ್ಥಿತಿಯನ್ನು ನಿರಪಡಿಸಬೇಕೆಂದೂ ಗಡಿ ವಿವಾದ ಸಂಬಂಧವಾದ ಬಿಕ್ಕಟ್ಟನ್ನು ಕಡಿಮೆ ಮಾಡುವುದಕ್ಕಾಗಿ ಮಾತುಕತೆಗಳನ್ನು ನಡೆಸಲು ಅದು ಸಹಾಯಕವಾಗುವುದೆಂದೂ ತಿಳಿಸಿತು ಚೀನಾವು ತನ್ನ ನಿಯಮವನ್ನು ತಿರಸ್ಕರಿಸಿ ೧೯೬೨ರ ಅಕ್ಟೋಬರ ೨೦ರಂದು ಭಾರತದ ಪ್ರದೇಶದ ಮೇಲೆ ಬೃಹತ್ ಪ್ರಮಾಣದ ದಾಳಿ ಮಾಡಿತು.

ಹಂಚಿಕೆಯಲ್ಲಿ ಒಪ್ಪಂದ

೧೯೫೪ರ ಎಪ್ರಿಲ್ ೨೯ರಂದು ಭಾರತ ಮತ್ತು ಟಿಬೆಟ್‌ಗಳು ವಾಣಿಜ್ಯ ಮತ್ತು ಇನ್ನಿತರ ಸಂಬಂಧಗಳ ಒಪ್ಪಂದವೊಂದಕ್ಕೆ ಅಂಕಿತ ಹಾಕಿದವು. ಅದೇ ವರ್ಷ ಜೂನ್ ೨೮ರಂದು ಈ ಒಪ್ಪಂದವನ್ನು ಸ್ಥಿರೀಕರಿಸಲಾಯಿತು. ಈ ಒಪ್ಪಂದದನ್ವಯ ಭಾರತವು ಬ್ರಿಟಿಷ್ ಆಳ್ವಿಕೆಯಿಂದ ಪಡೆದಿದ್ದ ಬಾಹ್ಯ ಪ್ರದೇಶಗಳ ಮೇಲಿನ ಎಲ್ಲಾ ಹಕ್ಕುಗಳನ್ನು ಬಿಟ್ಟುಕೊಟ್ಟಿತಲ್ಲದೆ, ಟಿಬೆಟ್ ಚೀನಾದ ಭಾಗವೆಂದು ಮನ್ನಣೆ ನೀಡಿತು.

ಈ ಒಪ್ಪಂದದ ಮುನ್ನುಡಿಯಲ್ಲಿ ಭಾರತ-ಚೀನಾಗಳೆರಡೂ ಪಂಚಶೀಲ ತತ್ವಗಳಿಗೆ ಬದ್ಧವಾಗಿರುವುದಾಗಿಯೂ ಪ್ರಕಟಿಸಿದುವು ಪರಸ್ಪರ ವ್ಯಾಪಾರಿಕ ಸಮಗ್ರತೆ ಮತ್ತು ಪರಮಾಧಿಕಾರಗಳನ್ನು ಗೌರವಿಸುವುದು, ಪರಸ್ಪರ ಅನಾಕ್ರಮಣ, ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪಮಾಡದೇ ಇರುವುದು, ಸಮಾನತೆ ಮತ್ತು ಸಹಜೀವನ ಇದೇ ಒಪ್ಪಂದದ ಪಂಚಶೀಲಗಳು.

ಭಾರತ ಮತ್ತು ಟಿಬೆಟ್‌ಗಳ ನಡುವೆ ೧೯೫೪ರಲ್ಲಾದ ವಾಣಿಜ್ಯ ಮತ್ತು ತತ್ಸಂಬಂಧವಾದ ಒಪ್ಪಂದವು ೧೯೬೨ರ ಜೂನ್ ೨೮ರಂದು ಮುಕ್ತಾಯಗೊಂಡಿತು. ಚೀನೀಯರು ತಮ್ಮ ದ್ವಿಮುಖ ವರ್ತನೆಯಿಂದ ಒಪ್ಪಂದದಲ್ಲಿ ಅಡಕವಾಗಿದ್ದ ಪಂಚ ಶೀಲಗಳಂತಹ ಉದಾತ್ತ ತತ್ವಗಳಿಗೆ ಭಾರತ—ಚೀನಾ ಗಡಿ ವಿವಾದದಲ್ಲಿ ತಿಲಾಂಜಲಿಯನ್ನಿತ್ತರು.

ಶಾಂತಿ ಸ್ಥಾಪನೆಗೆ ಭಾರತದ ಯತ್ನ

ಭಾರತ—ಚೀನಾಗಳ ನಡುವೆ ಒಂಭತ್ತು ವರ್ಷಗಳ ವರೆಗೂ ಗಡಿ ವಿವಾದಕ್ಕೆ ಸಂಬಂಧಪಟ್ಟಂತೆ ಮಾತುಕತೆಗಳು ನಡೆದು ತತ್ಸಂಬಂಧವಾದ ಕಾಗದ ಪತ್ರಗಳ ವಿನಿಮಯವಾದರೂ ಎರಡೂ ರಾಷ್ಟ್ರಗಳಿಗೆ ಈ ವಿಷಯದಲ್ಲಿ ಒಪ್ಪಂದಕ್ಕೆ ಬರಲು ಏಕೆ ಸಾಧ್ಯವಾಗಿಲ್ಲ? ಗಡಿವಿವಾದವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಭಾರತವು ಈ ವರೆಗೆ ಯಾವ ಕ್ರಮಗಳನ್ನು ಕೈಗೊಂಡಿದೆ? ಗಡಿ ವಿವಾದದ ಒಂಭತ್ತು ವರ್ಷಗಳ ಇತಿಹಾಸವು ವಿವಾದವನ್ನು ಸುಖಾಂತವಾಗಿಸಲು ಭಾರತವು ಅದರಲ್ಲಿಯೂ ವೈಯಕ್ತಿಕವಾಗಿ ಪ್ರಧಾನ ಮಂತ್ರಿ ನೆಹರೂರವರು ನಡೆಸಿದ ಅವಿಶ್ರಾಂತ ಪರಿಶ್ರಮದ ಇತಿಹಾಸ ಈ ಪ್ರಯತ್ನಗಳಿಗೆ ಚೀನೀ ನಾಯಕರು ಅಪ್ಪೇ ಬಲವಾಗಿ ಅತಂಕ ವೊಡ್ಡಿದರು. ೧೯೫೪ರ ನಂತರ ಚೀನೀ ನಾಯಕರು ಮುಚ್ಚು ಮರೆಯಿಂದ ಭಾರತದ ಪ್ರದೇಶವನ್ನು ಆಕ್ರಮಿಸಲು ಪ್ರಾರಂಭಿಸಿದರು. ೧೯೫೪ರ ಏಪ್ರಿಲ್ ತಿಂಗಳಲ್ಲಿ ಭಾರತವು ಚೀನಾದೊಂದಿಗೆ ಮಾಡಿಕೊಂಡ ಪಂಚಶೀಲ ಒಪ್ಪಂದದ ಅಡಿಪಾಯವಾಗಿತ್ತು.

೧೯೫೪ರಲ್ಲಿ ಚೀನಾ ಭಾರತೀಯ ಪ್ರದೇಶದಲ್ಲಿ ಅತಿಕ್ರಮಣ ಮಾಡಲಾರಂಭಿಸಿದಾಗ, ಭಾರತವು-ಪ್ರಧಾನ ಮಂತ್ರಿ ಶ್ರೀ ನೆಹರೂರವರು ಚೀನಾದ ಪ್ರಧಾನಿ ಚೌ ಎನ್ ಲಾಯರಿಗೆ ೧೯೫೯ರ ಸೆಪ್ಟಂಬರ ೮ರಂದು ಬರೆದ ಪತ್ರವೊಂದರಲ್ಲಿ ಅಭಿವ್ಯಾಯ ಪಟ್ಟಂತೆ—ಉಭಯ ರಾಷ್ಟ್ರಗಳಲ್ಲೂ ವಿವಾದ ಸಂಬಂಧವಾಗಿ ಅನಾವಶ್ಯಕ ದ್ವೇಷ ಉಂಟಾಗದಂತೆ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗಬಹುದೆಂಬ ಆಶಯದಿಂದ ಚೀನೀಯರ ಈ ಆಕ್ರಮಣ ಕಾರ್ಯ ಚಟುವಟಿಕೆಗಳನ್ನು ಯಾವತ್ತೂ ಅಧಿಕೃತವಾಗಿ ಪ್ರಚಾರ ಮಾಡಲಿಲ್ಲ.

೧೯೫೯ರ ಏಪ್ರಿಲ್-ಮೇ ತಿಂಗಳ ಅವಧಿಯಲ್ಲಿ ಭಾರತ ಸರ್ಕಾರದ ಆಹ್ವಾನದ ಮೇರೆಗೆ, (ಚೀನೀಯರು ಪೂಜೆ ಎಂದು ಕರೆಯುವ) ಭಾರತದ ಬಾರಾಹೋಲೆ ಪ್ರದೇಶದ ಬಗ್ಗೆ ಉಭಯ ಸರ್ಕಾರಗಳ ಪ್ರತಿನಿಧಿಗಳ ನಡುವೆ ಮಾತುಕತೆಗಳು ನಡೆದವು. ಬಾರಾಹೋತಿ ಭಾರತ-ಚೀನಾ ಗಡಿ ರೇಖೆಯ ಮಧ್ಯ ವಿಭಾಗದಲ್ಲಿ, ಉತ್ತರ ಪ್ರದೇಶದ ಗಡಿಯಲ್ಲಿರುವ ನಗರವಾಗಿದೆ. ಚೀನೀಯರು ಅದು ತಮಗೆ ಸೇರಿದ್ದೆಂದು ಪ್ರತಿವಾದಿಸುತ್ತಾರೆ. ಭಾರತ ಹಾಗೂ ಚೀನಾ ಸರ್ಕಾರಗಳ ಪ್ರತಿನಿಧಿಗಳ ನಡುವೆ ಈ ಸಂಬಂಧವಾಗಿ ಮಾತುಕತೆಗಳು ನಡೆದಾಗ ಚೀನೀಯರಿಗೆ—ಅವರು ತಮ್ಮದೆಂದು ಹೇಳಿಕೊಳ್ಳುತ್ತಿರುವ ಪ್ರದೇಶದ ಬಗೆಗೇ ಖಚಿತವಾದ ಜ್ಞಾನವಿರಲಿಲ್ಲವೆಂಬುದು ಬೆಳಕಿಗೆ ಬಂದಿತು. ಮಾತುಕತೆಗಳಿಂದ ಯಾವ ಫಲವೂ ದೊರೆಯಲಿಲ್ಲ.

೧೯೫೯ರ ನವೆಂಬರ್ ೭ರಂದು ಗಡಿ ವಿವಾದವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಭಾರತ ಸರ್ಕಾರವು ಉಡಾಪಿನಲ್ಲಿ ಚೀನೀಯರು ತಮ್ಮದೆಂದು ಪ್ರತಿಪಾದಿಸುವ ಗಡಿ ಪ್ರದೇಶದ ವರೆಗೆ ಭಾರತೀಯ ಸೈನಿಕರನ್ನು ಹಿಂದೆ ಸರಿಯುವಂತೆ ಕರೆಕೊಟ್ಟಿತು. ಚೀನೀ ಸೈನಿಕರು ಭಾರತದ ಭೂಪಟಗಳಲ್ಲಿ ತೋರಿಸಲಾದ ಭಾರತ-ಚೀನಾಗಳ ನಡುವಣ ಸಾಂಪ್ರದಾಯಿಕ ಗಡಿ ರೇಖೆಯಿಂದ ಹಿಂದೆ ಸರಿಯಬೇಕೆಂದೂ ಸೂಚಿಸಿತು. ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಯಾವುದೇ ಘರ್ಷಣೆಗಳು ಆಗಬಾರದೆಂಬುದೇ ಈ ಸೂಚನೆಯ ಅಂತರಾರ್ಥವಾಗಿತ್ತು. ಚೀನಾ ಭಾರತದ ಈ ಸೂಚನೆಯನ್ನು ತಿರಸ್ಕರಿಸಿತು.

೧೯೬೦ರಲ್ಲಿ ಗಡಿ ವಿವಾದವನ್ನು ಕುರಿತು ಉಭಯ ರಾಷ್ಟ್ರಗಳು ತಮ್ಮ ತಮ್ಮ ನಿಲುಮೆಗಳನ್ನು ಸಮರ್ಥಿಸಲು ಮಂಡಿಸುವ ಕಾಗದ ಪತ್ರಗಳನ್ನು ಪರಿಶೀಲಿಸಿ ವರದಿಯನ್ನೊಪ್ಪಿಸಲು ಭಾರತ—ಚೀನಾ ಸರ್ಕಾರಗಳ ಅಧಿಕಾರಿಗಳು ಸಭೆ ಸೇರಿದರು.

೧೯೬೦ರ ಫೆಬ್ರವರಿ ೧೪ರಂದು ಭಾರತವು ಭಾರತ ಮತ್ತು ಚೀನಾ ಸರ್ಕಾರದ ನಿಯೋಗದವರನ್ನೂ ಪ್ರಕಟಿಸಿತು ಚೀನಾ ತನ್ನ ಯಾವುದೇ ವರದಿಯನ್ನು ಸಿದ್ಧಪಡಿಸಿಲ್ಲವೆಂದು ಹೇಳಿ ಅದನ್ನು ನಿರಾಕರಿಸಿತು. ಭಾರತವು ಗಡಿ ವಿವಾದ ಸಂಬಂಧವಾದ ವರದಿಗಳನ್ನು ಪ್ರಕಟಿಸಿ ೧೪ ತಿಂಗಳು ಗತಿಸಿದ ನಂತರ ಚೀನಾ ವರದಿಯಲ್ಲಿ ತನ್ನ ನಿಲುಮೆಗೆ ಅನುಗುಣವಾದ ಅಂಶಗಳನ್ನು ಮಾತ್ರ ಆಯ್ದುಕೊಂಡು ವರದಿಯನ್ನು ಪ್ರಕಟಿಸಿತು.

೧೯೬೨ರ ಮೇ ೧೫ರಂದು ಭಾರತ ಸರ್ಕಾರವು ಈ ವೊದಲು ಲಡಾಖ್‌ನಿಂದ ಉಭಯ ರಾಷ್ಟ್ರಗಳೂ ಸೇನೆಗಳನ್ನು ಹಿಂತೆಗೆದು ಕೊಳ್ಳುವ ಸಂಬಂಧವಾಗಿ ೧೯೫೯ರ ನವೆಂಬರ್ ೭ರಂದು ಮಾಡಿದ ಸೂಚನೆಯನ್ನು ಪುನಃ ಮುಂದೆ ಮಾಡಿತು. ಗಡಿ ವಿವಾದವು ಶಾಂತಿಯುತ ಮಾತುಕತೆಗಳ ಮೂಲಕ ಇತ್ಯರ್ಥವಾಗುವಂತೆ ಮಾಡಲು ಭಾರತವು ಏನು ಮಾಡಲಿಲ್ಲ? ಚೀನೀಯರು ಭಾರತೀಯ ಪ್ರದೇಶವಾದ ಅಕ್ಸಾಯ್‌ಚಿನ್‌ನಲ್ಲಿ ನಿರ್ಮಿಸಿದ ರಸ್ತೆಯನ್ನು ನಾಗರಿಕ ಸಾರಿಗೆಗಾಗಿ ಉಪ

(ಮುಂದಿನ ಪುಟ ನೋಡಿರಿ)

ಹಿರಿಯರು ಅಂದಿದ್ದಾರೆ

ಭಾರ್ಯಾ ರೂಪವತೀ ಶತ್ರು

ಕೈಯಲ್ಲಿ ಹೂ, ಹಣ್ಣು, ತಂಡಿಯ ಹೊಟ್ಟಣಗಳನ್ನು ಹಿಡಿದುಕೊಂಡು ಉತ್ಸಾಹದಿಂದ ಮನೆ ಸೇರಿದ ಮಧುಸೂದನ ಬೇಗ ನಿಕ್ಕಿದ ಬಾಗಿಲನ್ನು ನೋಡಿ ನಿರಾಸೆಯ ನಿಟ್ಟುಸಿರಿಟ್ಟ. ಆ ವರೆಗೂ ವೇಗವಾಗಿ ನಡೆಸುತ್ತಿದ್ದ ಆತುರದ ಹೆಜ್ಜೆಗಳು ಮಂದಗತಿಯಿಂದ ನಾಗ ತೊಡಗಿದವು. ಬಾಗಿಲ ಬಳಿ ನಿಂತಿರಬಹುದಾಗಿದ್ದ ಆಸೆಯ ನಿಟ್ಟುಸಿರನ್ನೆ ಮರುಧ್ವನಿ. ಸೋಕು ಬಂದ ದೇಹಕ್ಕೆ ವಿಶ್ರಾಂತಿ ನೀಡುವ ಮನೆಗೆ ಬಾಗಿಲು, ಮಣಿದ ಮನಕ್ಕೆ ತಂಪೆರೆಯುವ ಸವಿ ಮಾತಿಲ್ಲ, ಉತ್ಸಾಹದ ನಡಿಗೆಯನ್ನು ಸ್ವಾಗತಿಸಿ ಸಂತೋಷಗೊಳಿಸುವ ಇನಿದನಿಯಿಲ್ಲ.

ಆದರೆ...ಇದೇನೂ ಹೊಸತಲ್ಲ. ಬಹಳ ದಿನಗಳಿಂದಲೂ ಇಂತಹ ತಾಪ ಗುಟುಕನ್ನು ಒಳಕ್ಕೆ ಕಸ್ಟದಿಂದಲಾದರೂ ನುಂಗಿ ಕೊಂಡು ಬರುತ್ತಿದ್ದನಾತ.

ಆದರೂ....ಎಂದಿನಂತೆಯೇ ಇಂದೂ ಅವನಲ್ಲಾಂದು ಆಸೆ ..ಹಂಬಲ...ಕನಸು. ಸಂಬಳ ಎರುವ ಈ ದಿನವಾದರೂ ಆಕೆ ಆನೆಯಿಂದು, ಅಲ್ಲವಾದರೆ ಕುತೂಹಲದಿಂದಲಾದರೂ ಕಾಯಲಾರಳೇ? ಅವಳಿಗೆ ಮೆಚ್ಚಿಗೆಯಿಸಿವ ಮಲ್ಲಿಗೆಯ ಚೆಂಡನ್ನೂ, ಕೆತ್ತಳೆಯ ಹಣ್ಣುಗಳನ್ನೂ ತಂದಾ ದೊಡನಾದರೂ ಕಾಯಲಾರಳೆ? ಊಹ್ಞೂ....ಈಗಾಕೆಗೆ ಇಂತಹ ಕ್ಷುಲ್ಲಕ ವಸ್ತುಗಳ ಮೇಲಿನ ಆಸೆಯೇ ತೊಲಗಿಹೋದಂತಿದೆ. ಜಾಗಾಗಿಯೇ ತನಗಿಂತಹ ನಿರಾಸೆಯೇ ಕಾದಿರುವ ಸಂಭವ್ಯನಿದೆ.

..ತೆಗೆದುಕೊಳ್ಳಿ ಬೇಗದ ಕೈ, ಚಿಕ್ಕ ಮ್ಮ ಕೊಟ್ಟಿದ್ದಾರೆ. ನಾಲ್ಕೈದು ವರ್ಷದ ಮಾಲಕನೊಬ್ಬನ ಮೃದು ಧ್ವನಿ ಅವನನ್ನೆಚ್ಚರಿಸಿತು. ಪ್ರತಿ ದಿನವೂ ಆಸೆ, ಉತ್ಸಾಹಗಳಿಂದ ಬರುತ್ತಿದ್ದ ಅವನನ್ನು ಸ್ವಾಗತಿಸಿದ ಬೇಗದ ಕೈ ಗೊಂಜಲು! ಅದನ್ನಾತ ಮುಟ್ಟಿಬುಲ್ಲೊಯ್ದು ಹಿಡುಕಿದ. ಎತ್ತಿ ಬೀದಿಗೆಸೆಯೋಣವೆನ್ನುವಷ್ಟು ಸಿಟ್ಟು ಬಂದಿತ್ತು. ಆದರೆ ಎಂಕಪ ಹುಚ್ಚು ತನ! ನಿರ್ಜೀವ ವಸ್ತುವಿನ ಮೇಲೆ ತನ್ನ ಜಾನ್ಪೋಷ್ಯೋಗದ ಪ್ರದರ್ಶನ! ಕಕ್ಕಿದ ಮನೆ ಯಜ್ಞ ನಿಂತ ಆ ಮಗುವಿನ ತಾಯಿ ಆಕೆ ಈತನ ಹಂಬಲಿಗೆ ನಗಲಾರಳೇ? ಬೇಡವೆಂದರೂ ಆತನ ದೃಷ್ಟಿ ಪಕ್ಕದ ಮನೆಬಾಲ್ಲಿ ಮಗುವನ್ನೆತ್ತಿಕೊಂಡು ನಿಂತಿದ್ದ ಆಕೆಯತ್ತ ಹರಿಯಿತು ಆದರೆ....ಆಕೆ ಇವನತ್ತ ನೋಡುತ್ತಿರಲೂ ಇಲ್ಲ. ನಿತ್ಯವೂ ಆಕೆ ಹಾಗೆಯೇ ದಣಿದು ಬರುವ ಗತಿಯನ್ನು ಸ್ವಾಗತಿಸಲು ನಗುಮೊಗದಿಂದ ನಿಂತಿರುವಳು ಅವಳ ದೃಷ್ಟಿಯೂದರೂ ಪತಿಯನ್ನೇ ಅರಸುತ್ತಿರುವುದಲ್ಲವೆ ಅನಿಸಿತ್ತು. ತೆರುಗಲಾರದ. ಆ ಮೇಲೆಯೂ ಅವಳು ಪತಿಗೆ ಮಾಡಿದ ಆದರೋಪಚಾರವೇನು ಕಡಿಮೆಯೆ? ಆದನ್ನು ಯೋಚಿಸಿದರೇ ಮಧುಸೂದನನ ಹೃದಯ ಮುಳ್ಳರಿದಂತೆ ಉರಿಯುತಿತ್ತು. ವ್ಯಥೆಯಿಂದ ಮಿಡುಕುತಿತ್ತು.

ಆಕೆ ಭಾರತಿ ಆತ ಸುಬ್ಬರಾಯ. ಬಡ ಗುಮಾಸ್ತ. ತನಗಿಂತಲೂ ಕಡಿಮೆ ಸಂಬಳದವ. ಮೂತ್ರವಲ್ಲ ಭಾರತಿ ಆತನ ಎರಡನೇ ಹೆಂಡತಿ. ಮೊದಲ ಪತ್ನಿಹು ಎರಡು ಮಕ್ಕಳು ಬೇರೆ ಇದ್ದಾರೆ. ಆದರೆ ಭಾರತಿ ಆವರಿಗೊಮ್ಮೆಯೂ ಮಲತಾಯಿ ಎಂದೆನಿಸಿಲೇ ಇಲ್ಲವಂತೆ. ಅವರು ಅವಳನ್ನು ಅಮ್ಮನೆಂದೇ ಕರೆಯುತ್ತಾರೆ ಸಬ್ಬರಾಯ ಭಾರತಿಗೆ ಹೂವ ವಿಷಯದಲ್ಲಾ ತಕ್ಕ್ಷವನಲ್ಲ. ಭಾರತಿ ವಿದ್ಯಾವಂತ ಯುವತಿ. ರೂಪಸಿಯೆನಿಸದಿದ್ದರೂ ಲಕ್ಷಣವಾದ ಹುಡುಗಿ, ಗುಣವತಿ. ಈಕ ವಯಸ್ಸಾದವ ಉತ್ಸಾಹ, ಸಂತೋಷಗಳನ್ನರಿಯದ ನೀರಸ ಪ್ರಭಾವದ ಮನುಷ್ಯ. ಆಕೆ ಹಸನ್ಮುಖಿ ಉತ್ಸಾಹಿ. ಆದರೂ ಅವರ ಸಂಸಾರ ಎಷ್ಟೊಂದು ಅನ್ಯೋನ್ಯತೆ, ಪ್ರೀತಿ, ವಿಶ್ವಾಸಗಳಿಂದ ಹೆಣೆದು ಕೊಂಡಿದೆ! ಪತಿ ಬರುವಾಗ ತುಸು ತಡವಾದರೆ ಅವಳ ಕಳವಳ ಪೇಳ್ತು? ವ್ಯಥೆಯೇನು! ಮತ್ತು ಒಂದು ತಾಸು ತಡವಾದರೆ ತೀರಿಯೇ ಹೋಯಿತು. ಆಕೆಗೆ ಆತನ ಯೋಚನೆಯೊಂದೇ ಆಗಿ ಮತ್ಯಾವುದರ ಪರಿವೆಯೂ ಇಲ್ಲದೆ ಹುಚ್ಚಿಯಂತೆಯೇ ಆಗಿ ಬಿಡುತ್ತಾಳೆ. ಆಗ ಆಕೆಗೆ ಮನೆಯ ಮಕ್ಕಳ ಕಳುವಾಗಲೀ, ಬೀದಿಯ ಗದ್ದಲ, ಗಲಾಟೆಗಳಾಗಲೀ ಕೇಳಿಸುತ್ತಿರಲಿಲ್ಲ ಆಕೆಯ ದೀನನೇತ್ರಗಳು ಬೂರ, ಬಹುದೂರ ಪತಿಯನ್ನರಸುತ್ತ ಹೊರಟು ಹೋಗುತಿದ್ದವು

"ಗೀತಾ ಸಿನಿಮಾಕ್ಕೆ ಹೋಗ್ತಾಳಂತೆ. ಜತೇಲಿ ಲಲಿತಮ್ಮನೂ ಇದ್ರು"

ಈ ವರೆಗೂ ನಿಂತೇ ಇದ್ದ ಮಧುಸೂದನ ನತ್ತ ಅಕಸ್ಮಾತ್ ದೃಷ್ಟಿ ಹರಿಸಿದ ಭಾರತಿ ನುಡಿದಳು. ಈ ವರೆಗೂ ನಿಂತೇ ಇದ್ದ ಕನ್ನ ಆವಸ್ಥೆಗೆ ತಾನೇ ನಾಚಿ ಗಡಿಬಿಡಿಯಿಂದ ಬೇಗ ತೆಗೆದು ಒಳಗೆ ಕಾಲಿಟ್ಟನಾತ.

ಮನೆಯೊಳಗೆಲ್ಲ ಅಂಧಕಾರ ವ್ಯಾಪಿಸ ತೊಡಗಿತ್ತು. ಆ ಕತ್ತಲಲ್ಲೇ ಕುರ್ಚಿಯಲ್ಲಿ ಕುಸಿದು ಕುಳಿತ ಮಧುಸೂದನನ ಮಿದುಳನ್ನು ಭಾರತಿಯ ಮಾತುಗಳು ಕೊರೆಯುತ್ತಿದ್ದವು.

"ಜತೇಲಿ ಲಲಿತಮ್ಮನೂ ಇದ್ರು"

ಒಹುಶಃ ಆ ಮಾತು ತನ್ನ ಸಮಾಧಾನಕ್ಕಾಗಿ ಹೇಳಿದುದಾಗಿರಬೇಕು. ಗೀತಾ ಕೊಬ್ಬಳೇ ಹೋಗಲಿಲ್ಲವಲ್ಲ ಎಂಬ ಭಾವನಾವಾದರೂ ಇರಲಿ ಈ ಬಡ ಪಾಯಿಗೆ ಎಂದೇ ಭಾರತಿ ಹಾಗೆ ಹೇಳಿರಬೇಕು.

ಆ ಆರೆಕತ್ತಲಲ್ಲೇ ಮಧುಸೂದನ ತಾನು ಕುಳಿತಿದ್ದ ಕೊರಡಿಯನ್ನೊಮ್ಮೆ ಕೂಲ್ಕ್ಷವಾಗಿ ಪರಿಶೀಲಿಸಿದ

ಒಳಗಿನ ಅವ್ಯವಸ್ಥೆಯೋ...ಅಬ್ಬ.... ಈ ಮನೆಯಲ್ಲಿ ಯಾರಾದರೂ ವಾಸಿಸುತ್ತಾರೆಂದರೇ ನಂಬುವುದೂ ಕಸ್ಟವೆನಿಸುವಂತಿತ್ತು. ದಿನಕ್ಕೊಮ್ಮೆಯಾದರೂ ಮನೆಯ ಕಸ ಗುಡಿಸಲು ಸಮಯ ಸಿಗುತ್ತಿರಲಿಲ್ಲವಾಕೆಗೆ ಹೋಗಲಿ ಕಾಫಿ. ಕುಡಿದ ಲೋಟ ಅಲ್ಲೇ ಬಿದ್ದಿತ್ತು. ಚೆಲ್ಲಿದ ಕಾಫಿಗೆ ಇರುವೆಗಳು ಮುತ್ತಿವೆ. ಮುಚ್ಚಳ ತೆಗೆದ ಪೌಡರ್ ಕರಡಿಗೆ, ತೆರೆದಿಟ್ಟ ಪೆಟ್ಟಿಗೆ, ಎಲ್ಲವೂ ಒಡತಿಯ ಗಡಿಬಿಡಿಯನ್ನು ಸಾರುತ್ತಿದ್ದುವು. ಬಹುಶಃ ಸಿನಿಮಾಕ್ಕೆ ತಡವಾದೀತೆಂಬ ಭಯ, ಅದು ಸಹಜವಾದ್ದೇ. ಟಿಕೇಟು ಕೊಂಡ ಮೇಲೆ ಮೊದಲಿನಿಂದ ಕೊನೆಯವರೆಗೂ ಸರಿಯಾಗಿ ನೋಡಿಕೊಂಡೇ ಬರಬೇಕಲ್ಲವೇ? ಗೀತಾಳಿಂದಂತೆ ಈ ಎಲ್ಲ ಕೆಲಸಗಳಿಗೊಂದು ಜನ ಬೇಕು, ಗೀತಾಳಂತಹ ಓದಿವ, ಚುರುಕು ಬುದ್ಧಿಯ ಹೆಣ್ಣು ಮನೆಯೊಳಗೇ ಕುಳಿತು ಕಸ, ಮುಸುರೆ ತೆಗೆದು ಆಡುಗೆ ಮಾಡಿದರೆ ಸಾಕೇ? ಸಮಾಜ ಸೇವೆ, ದೇಶ ಸೇವೆ ಮೊದಲಾದ ಬಾಹ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ಬೇಡವೇ? ಮನೆಯೊಳಗೇ ಕುಳಿತು ಅವಳ ಬದುಕು ನಿರರ್ಥಕವಾಗಬೇಕೆ? ಹಾಗೆನ್ನುವ ಎದೆಗಾರಿಕೆ ಯಾರಿಗಿದೆ?

ಆಡುಗೆ ಕೆಲಸಕ್ಕೊಬ್ಬಳು ಹೆಂಗಸು, ಕೊರಗಿನ ಕೆಲಸಕ್ಕೊಂದು ಹುಡುಗಿ, ಇಷ್ಟು ಬೇಕೇ ಬೇಕು. ಇದು ಸಾಧ್ಯವಿಲ್ಲವೆಂದಾದರೆ ಹೊತ್ತಿಗೆ ಸರಿಯಾಗಿ ಊಟ, ಕಾಫಿಯ ಯೋಚನೆಯನ್ನೂ, ಬಟ್ಟುಬಿಡಬೇಕು. ಮನೆಯಲ್ಲಿರುವ ಧೂಳು, ಕಸವನ್ನೂ ಅನ್ಯವಸ್ಥೆಯನ್ನೂ ಸಹಿಸಿಕೊಳ್ಳಲೇ ಬೇಕು

ಆದರೆ....ತಿಂಗಳ ಸಂಬಳ ಬರಿಯ ನೂರು ರೂಪಾಯಿ ಆದರಲ್ಲಿ ಕನಿಷ್ಠಪಕ್ಷ ಕಾಲಂಶವಾದರೂ ಗೀತಾಳ ಶೃಂಗಾರ ಸಾಧನಗಳಿಗಾಗಿಯೇ ವ್ಯಯವಾಗಲೇ ಬೇಕು. ಇನ್ನುಳಿದುದು ಮನೆಯ ವೆಚ್ಚ ಕ್ಕೇ ಸಾಕಾಗುತ್ತಿರಲಿಲ್ಲ. ಇದೇ ಗೀತಾಳಿಗಿರುವ ದೊಡ್ಡ ಕೊರತೆ, ಕೊರಗು. ಇದರಿಂದಾಗಿಯೇ ಅವರ ದಾಂಪತ್ಯ ಜೀವನದ ಸುಖ, ಸಂತೋಷ ಪೇಳ ಹೆಸರಿಲ್ಲದಂತಾದುದು.

ಮದುವೆಯಾಗುವ ಮೊದಲು ಆಪ್ಪೇನೂ ಕಾಪಕ್ಯವಿಲ್ಲದ ಮಧುಸೂದನ ಆಡಂಬರ ಪ್ರಿಯನಾಗಿ ತನ್ನ ಉಡುಗೆಗಳ ವಿಚಾರದಲ್ಲಿಯೂ ಆಕರ್ಷಕ ವಸ್ತುಗಳ ಕಡೆಗೆ ಪಕ್ಷಪಾತವಿಲ್ಲದ್ದ ಗೀತಾಳ ಆಕರ್ಷಕ ಸೌಂದರ್ಯಕ್ಕೂ, ಬೆಡಗು ಬಿನ್ನಾಣಕ್ಕೂ, ಮನ ಸೆಳೆಯುವ ಕಣ್ಣೋಟಕ್ಕೂ, ಅಲಂಕಾರ ಪ್ರಿಯತೆಗೂ ಬಲಿ ಬೇಗನೇ ಮರುಳಾಗಿ ಹೋದ.

ಮಧುಸೂದನನ ಕಣ್ಮನವನ್ನು ಸೆಳೆದ ಗೀತಾಳ ಮೋಹಕ ವೈಯಾರವೇ ಇಂದಿನ ದಾಂಪತ್ಯ ವಿರಸಕ್ಕೆ ಮೂಲ ಕಾರಣವಾದೀತೆಂಬುದನ್ನು ಮಾತ್ರ ಆತ ಕನಸಿನಲ್ಲೂ ಎಣಿಸಿರಲಿಲ್ಲ. ಮೊದ ಮೊದಲೇ ನೋ ಹೊಸ ಹೆಂಡತಿಯನ್ನು ನೋಯಿಸ ಬಾರದೆಂಬ ಉಚ್ಚ ಉದ್ದೇಶದಿಂದಲೋ, ಅಥವಾ ನೂತನ ದಾಂಪತ್ಯ ಜೀವನದ ಉತ್ಸಾಹದ ಆವೇಗಲ್ಲೋ ಗೀತಾ ಬಯಸಿದ್ದೆಲ್ಲವೂ ದೊರೆಯುತಿತ್ತು. ಆಕೆ ಬೇಕೆಂದ ಸೀರೆ, ಮೆಚ್ಚಿದ ಸ್ನೋ ಪೌಡರ್ ಇಚ್ಚಿಸಿದ ಇತರ ವಸ್ತುಗಳು, ಇವನ್ನೆಲ್ಲ ಕೊಳ್ಳುತ್ತ ಬಂದಾಗ ಸಂಬಳವೆಲ್ಲ ವ್ಯಯವಾಗಿ ಹೊಟ್ಟೆ ಬಟ್ಟೆಗೆ ಬೇರೆಯೇ ದಾರಿ ಹುಡುಕಿ ಬೇಕಾದ ಸ್ಥಿತಿಯು ಆರಿವು ಬಂದಾಗ ಮಧುಸೂದನನ ಕಣ್ಣು ತೆರೆಯಿತು. ದಾಂಪತ್ಯ ಸುಖದ ಅಮಲಿಳಿಯಿತು. ಡಾಂಭಿಕ ಜೀವನದ ಆಕರ್ಷಣೆ ಸಾಕೆನಿಸಿತು. ಆದರೆ..ಗೀತಾಳಿಗೆ ಹಾಗಲ್ಲ. ಆಕೆ ಚಿಕ್ಕಂದಿನಿಂದಲೂ ಆಡಂಬರದ ಜೀವನವನ್ನೇ ಬಯಸಿ ಅಲಂಕಾರಪ್ರಿಯಳಾಗಿ ಮೆರೆದಾಡಿದವಳು ಆದರೂ ಆರೇಳು ಹೆಣ್ಣು ಮಕ್ಕಳ ತಂದೆಯೂದ ಆಕೆಯ ತಂದೆ ಆಂತಹ ಶ್ರೀಮಂತರೇನೂ ಆಲ್ಲವಾದ್ದರಿಂದ ಆಕೆಯ ಆಸೆ, ಆಕಾಂಕ್ಷೆಗಳು ತವರುಮನೆಯಲ್ಲಿ ಈಡೇರಿರಲಿಲ್ಲ. ಆ ಅತೃಪ್ತ ಬಯಕೆಗಳನ್ನಾಕೆ ಮಧುವೆಯಾದ ಮೇಲಾದರೂ ಹಿಂಗಿಸಿಕೊಳ್ಳಬೇಕೆಂಬ ಹಂಬಲವನ್ನಿಟ್ಟು ಕೊಂಡಿದ್ದ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಿಕ್ಕಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

25,000

ಪ್ರತಿಗಳಿಗೂ ಮಿಕ್ಕಿ

ಈ ವರೆಗೆ ಕರ್ನಾಟಕದಲ್ಲೆಲ್ಲ ಮಿಕ್ಕ್ರಿತವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ ಇದೀಗ ಮೂರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ರಿಯಾಯಿತಿ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ

ಪರರ ಆಕ್ರಮಣದಿಂದ

ರಕ್ಷಿಸುವ ಸಾಮರ್ಥ್ಯ ಇದೆಯೇ ನಮ್ಮ ಸೈನ್ಯಕ್ಕೆ?

ಭಾರತ-ತ್ರಿನಿಷ್ಪ ಗಡಿ ಪ್ರದೇಶದಲ್ಲಿ ಕಮ್ಯೂನಿಸ್ಟ್ ಚೈನಾವು ಭಾರೀ ಪ್ರಮಾಣದಲ್ಲಿ ಸೇನೆಯನ್ನು ಅಣಿಗೊಳಿಸುತ್ತಿದೆಯೆಂಬ ಸುದ್ದಿಗೆ ಭಾರತ ಸರಕಾರದ ಅಂತರರಾಷ್ಟ್ರೀಯ ಸಂಪರ್ಕ ಇಲಾಖೆಯೂ ಹೌದೆನ್ನುವ ಉತ್ತರವನ್ನಿತ್ತಿರುತ್ತದೆ. ಮೂರೆಡೆಗಳಲ್ಲಿ ಅವರು ಸೇನೆಯನ್ನು ಸಿದ್ಧಗೊಳಿಟ್ಟುಕೊಂಡಿದ್ದಾರೆ. ಕಳೆದ ಬಾರಿ ಹೊಡೆದಿದ್ದ ಡೇರೆಯನ್ನು ಬಿಟ್ಟು ಈ ಸಲ ಬೇರೆಡೆಗಳಲ್ಲಿ ಹೊಸ ಡೇರೆಯನ್ನು ಅವರು ಹೊಡೆದಿರುವರು. ಅಷ್ಟು ಮಾತ್ರವಲ್ಲ, ಅವರು ಲಢಾಖಿನಲ್ಲಿ ಗಡಿಯನ್ನು ದಾಟಿ ಆಗಾಗ ಇತ್ತ ಬರುತ್ತಿದ್ದಾರೆ. ಭೂತಾನಿನ ಉತ್ತರ ಗಡಿಯಲ್ಲಿ ಭಾರೀ ಸೇನೆಯು ಸಿದ್ಧವಾಗುತ್ತಿದೆ. ಇದು ಒಂದೆಡೆ.

ಇನ್ನೊಂದೆಡೆ, ಪಾಕಿಸ್ಥಾನ ಬೆದರಿಕೆ ಹಾಕುತ್ತಿದೆ. ತಮ್ಮ ಸ್ಥಾನದ ಭದ್ರತೆಗಾಗಿ ಸಂಧಾನ ಮಾತುಕತೆಗಳನ್ನು ಆರ್ಧದಲ್ಲೇ ಬಿಟ್ಟು ಕಾಂಚಿಗೆ ಹಿಂತೆರಳಿದ್ದ, ಬಿಳ್ಳಿನ ಪರಂಪ್ರಧಾನ ಇಲಾಖೆಯ ಮಂತ್ರಿ ಭುಟ್ಟೋ ಕಾಶ್ಮೀರದ ಕುರಿತು ಮಾತಾಡುತ್ತ ಕಾಶ್ಮೀರದ ಜನತೆಯ ತ್ಯಾಗಶಕ್ತಿಯನ್ನು ಭಾರತವು ಚೈನಾವನ್ನೆದುರಿಸಲು ಉಪಯೋಗಿಸುವುದು ಸರಿಯಲ್ಲ. ಮದ್ರಾಸು ಅಥವಾ ಬೊಂಬಾಯಿನ ಜನತೆಯನ್ನು ತ್ಯಾಗಕ್ಕೆ ಸಿದ್ಧರಾಗಲು ಹೇಳುವಂತೆ ಕಾಶ್ಮೀರದ ಜನತೆಗೆ ಹೇಳುವದು ಸರಿಯಲ್ಲ. ಯಾಕೆಂದರೆ ಅದು ಕಾಶ್ಮೀರದ ಪ್ರಶ್ನೆ ಇರುವುದಿಲ್ಲ ಒಂದು ವೇಳೆ ಭಾರತ ಸರಕಾರ ಹಾಗೆ ಮಾಡಿದಲ್ಲಿ ಪರಿಸ್ಥಿತಿಯು ಕದಡಿಟ್ಟೆತು; ಉದ್ವೇಕಾವಸ್ಥೆಗೆ ತಲುಪೀತೆಂದು ಅವರು ಬೆದರಿಕೆಯ ಮಾತುಗಳನ್ನಾಡಿರುವರು

ಈ ಸಲದ ಲೋಕ ಹಾಗೂ ರಾಜ್ಯಸಭೆಗಳಲ್ಲಿ ಹೆಚ್ಚಿನ ತೆರೆಯ ವಿರುದ್ಧ ಸ್ವರ ಕೇಳಬಂದಿದೆಯೇ ವಿನಃ ಸೇನೆಗೆ ಗಿ ಮಾಸಲಿಟ್ಟ ಅಧಿಕ ವೆಚ್ಚಕ್ಕಾಗಿ ಯಾರೂ ಎದುರಿಂಡಿರುವದಿಲ್ಲ. ಸ್ವತಃ ಶ್ರೀ ಕೃಪಲಾನಿಯವರು ಕೂಡಾ ತಮ್ಮ ಚುನಾವಣಾ ಭಾಷಣದಲ್ಲಿ ಅದನ್ನು ಸ್ಪಷ್ಟಪಡಿಸಿರುವರು. ಕೆಲವು ರಾಷ್ಟ್ರೀಯ ರಾಜಕೀಯ ಪಕ್ಷಗಳಂತೂ ಸೇನಾ ಬಲವನ್ನು ಹೆಚ್ಚಿಸಲು ಬಿನ್ನೈಸಿಕೊಂಡಿದೆಯಲ್ಲದೆ, ಕೆಲವು ಪಕ್ಷಗಳು ರಾಷ್ಟ್ರೀಯರೆಲ್ಲರಿಗೂ ಸೈನಿಕ ಶಿಕ್ಷಣ ಕೊಡುವಂತೆ ಹೇಳಿವೆ ಈಗಿನ ರಕ್ಷಣಾ ಮಂತ್ರಿಯವೂ ಸೇನಾ ಬಲವನ್ನು ಹೆಚ್ಚಿಸುವ ಅಶ್ವಾಸನೆ ಇತ್ತಿದ್ದಾರೆ—ಲೋಕಸಭೆಯಲ್ಲಿ ಇತ್ತೀಚೆಗೆ ಪರೂಕಾ ಬಾನಿನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತಾಡುವಾಗ ಸೇನಾಬಲವನ್ನು ಒಂದು ಮಿಲಿಯಕ್ಕೆ ಏರಿಸುವ ಯೋಚನೆ ಇವೆ ಎಂಬುದನ್ನು ಬಹಿರಂಗಪಡಿಸಿರುವರು ಇದು ಕೇವಲ ಮತಬೇಟೆಗಾಗಿ ಕೊಟ್ಟ ಮಾತಿರದೆ ನಿಜ ಕಾರ್ಯಾಚರಣೆಯ ಮೂಹಾಗಿರಬೇಕು. ಸೇನಾ ಬಲವನ್ನು ಹೆಚ್ಚಿಸದಿದ್ದಲ್ಲಿ ಆಕ್ರಮಣಗಾರರನ್ನು ಎದುರಿಸಲು ಸಾಧ್ಯ ಇಲ್ಲವೇನು? ಈ ಪ್ರಶ್ನೆ ಆಗ ತಾನಾಗಿ ಬರುತ್ತದೆ ರಾಷ್ಟ್ರದ ಹಿತರಕ್ಷಣಾ ದೃಷ್ಟಿಯಿಂದ ಸೇನಾ ಬಲವನ್ನು ಹೆಚ್ಚಿಸುವದು ಅತ್ಯಗತ್ಯವಾದರೂ ನಮ್ಮನ್ನು ರಕ್ಷಿಸುವ ಸಾಮರ್ಥ್ಯ ನಮ್ಮ ಸೈನ್ಯಕ್ಕೆ ಇಲ್ಲವೇನು? ಇದರ ಉತ್ತರವನ್ನು ರಾಜಕೀಯ ಉದ್ದೇಶಗಳಿಂದ ಅಪೇಕ್ಷಿಸುವ ಬದಲು ಸೇನಾಧಿಕಾರಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳೋಣ ಜನರಲ್ ತಿಮ್ಮಯ್ಯನವರು ಕೆಲ ತಿಂಗಳುಗಳ ಹಿಂದೆ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿರುತ್ತದೆ.

ಭಾರತದ ರಕ್ಷಣಾ ಸಮಸ್ಯೆಯ ಕುರಿತು ಯೋಚಿಸುವಾಗ ಈ ಮೂರು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ೧) ಪಾಕಿಸ್ಥಾನ ಹಾಗೂ ಚೈನಾ ಆಕ್ರಮಣಕ್ಕೆ ಸಿದ್ಧವಾಗಿವೆ. ೨) ಶೀತಲ ಯುದ್ಧದಿಂದ ದೂರ ನಿಲ್ಲುವ ನಮ್ಮ ಅಂತರರಾಷ್ಟ್ರೀಯ ಧೋರಣೆಯನ್ನು ಳಿಸಿಕೊಳ್ಳುವದು, ಹಾಗೆಯೇ ಸೈನಿಕ ಒಪ್ಪಂದದಿಂದ ದೂರವಾಗಿ ಇರುವದು ಮತ್ತು ೩) ನಮ್ಮ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯ ವಿಕಾಸಕ್ಕಾಗಿ ಹಾಗೂ ಭದ್ರತೆಗಾಗಿ ರಕ್ಷಣಾ ನೆಚ್ಚನ್ನು ಕಡಿಮೆಗೊಳಿಸುವದು.

ಈಗಿರುವ ನಮ್ಮ ರಕ್ಷಣಾ ವ್ಯವಸ್ಥೆಯಿಂದ ಜನತೆಯು ಜೀವನ, ಆಸ್ತಿಗೆ ಸರಿಯಾದ ಭದ್ರತೆಯಿಸ್ಥೀಯಲು ಸಾಧ್ಯವಿದೆಯೇ? ಇದಕ್ಕೆ ಉತ್ತರ ಕೊಡಬೇಕಾದರೆ ಚೈನಾದ ಹಾಗೂ ಪಾಕಿಸ್ಥಾನೀ ಸೇನಾ ಬಲದ ಹಾಗೂ ರಕ್ಷಣಾ ವ್ಯವಸ್ಥೆಯ ಕುರಿತು ತಿಳಿದುಕೊಳ್ಳಬೇಕು. ಅದು ಮಾತ್ರವಲ್ಲ ಆಲ್ಲಿಯ ಸ್ಥಳದ ತೊಹಿಕಿಯೂ ಇರಬೇಕಾಗುತ್ತದೆ.

ಭಾರತದ ವಿಭಜನೆಯಾದಾಗ ಪಾಕಿಸ್ಥಾನದ ಸೈನ್ಯ ಚಿಕ್ಕದಿತ್ತು. ಈ ಒಂದು ಅಧಾರದ ಮೇಲೆ ಪಾಕಿಸ್ಥಾನವು ಅಂದಿನಿಂದಲೂ ಬೊಬ್ಬೆಹಾಕುತ್ತ ಬರುತ್ತಿದೆ—ಭಾರತದ ಸೇನಾ ಬಲ ಪಾಕಿಸ್ಥಾನಕ್ಕಿಂತ ಮುಮ್ಮಡಿ ಅಧಿಕವಾದೆಂಬುದೇ ಆ ಬೊಬ್ಬೆ. ಇದು ಸರಿಯಲ್ಲವೆಂಬುದು ನಮಗೆ ಗೊತ್ತು. ಪಾಕಿಸ್ಥಾನವು ಕ್ರಮಶಃ ತನ್ನ ಸೇನಾ ಬಲವನ್ನು ಅಭಿವೃದ್ಧಿಪಡಿಸಿಕೊಂಡು ಬಂದಿರುತ್ತದೆ. ಅಮೇರಿಕದ ಸಹಾಯದಿಂದ ಅದು ಆತ್ಯಾಧುನಿಕ ಆಯುಧಗಳನ್ನು ಕೊಂಡಿದೆ. ಹೆಚ್ಚು ಕಡಿಮೆ ನಮ್ಮ ಬಲದಷ್ಟೇ ಬಲ ಆದರ ಬಳಿ ಇದೆ.

ಭಾರತದ ಮೇಲೆ ಯುದ್ಧ ಮಾಡಿರುತ್ತ ಇರಬೇಕಾದಲ್ಲಿ ಪಾಕಿಸ್ಥಾನದ ಸಾಮರ್ಥ್ಯ ಅದೆಷ್ಟು ಇರಬೇಕಾಗುತ್ತದೆ? ಅನೇಕಾಂತವಂತೂ ಆಗಾಗ ಸ್ಪಷ್ಟವಾಗಿ ಹೇಳುತ್ತ ಬಂದಿದೆ—ಅದು ಕೊಟ್ಟರುವ ಸಹಾಯವು ಕಮ್ಯೂನಿಸ್ಟರನ್ನು ಎದುರಿಸಲಿಕ್ಕೆ ಮಾತ್ರವಿದೆ, ಆಲ್ಲದೆ ಅದು ಭಾರತದ ಮೇಲೆ ಆಕ್ರಮಣ ನಡೆಸಲಿಕ್ಕಾಗಿ ಇರುವದಿಲ್ಲ. ಹಾಗೆ ಎಂದಾದರೂ ಅದು ಭಾರತದ ಮೇಲೆ ಆಕ್ರಮಣ ನಡೆಸಿದಲ್ಲಿ ಒಡನೆ ಪರಬರಾಯಿಯನ್ನು ನಿಲ್ಲಿಸಲಾಗುವದೆಂದೂ ಅಮೇರಿಕ ಎಚ್ಚರಿಕೆಯನ್ನಿತ್ತಿರುತ್ತದೆ. ಹಾಗಿದ್ದರೂ ಈಗಾಗಲೇ ಅವರ ಬಳಿ ಇರುವ ಆಯುಧಗಳ ಗತಿ ಏನು? ಅದನ್ನು ಪಾಕಿಸ್ಥಾನವು ತನ್ನ ಅಭಿಲಾಷೆ ಈಡೇರಿಸಿಕೊಳ್ಳಲು, ಉದ್ದೇಶದ ಗುರಿ ಮುಟ್ಟಲು ಉಪಯೋಗಿಸುವದಿಲ್ಲವೇನು?

ಪಾಕಿಸ್ಥಾನದ ಉದ್ದೇಶವಾದರೂ ಏನಿದೆ?—ಭಾರತವನ್ನು ಆಕ್ರಮಿಸುವದೇ? ೧೯೪೬—೪೮ರ ೨ನೆಯ ಆಕ್ರಮಣದ ಮೂಲಕ ವಶಪಡಿಸಿಕೊಳ್ಳಲಾಗದಿರುವ ಕಾಶ್ಮೀರದ ಭಾಗವನ್ನು ಗಿಟ್ಟಿಸಿಕೊಳ್ಳುವದೇ ಅವರ ಉದ್ದೇಶವಿದೆನ್ನುವದು ತಿಮ್ಮಯ್ಯನವರ ಅಭಿಪ್ರಾಯ ಆದುದೇ ಅವರ ಉದ್ದೇಶವಾದಲ್ಲಿ ಅಸ್ಸಾಂ, ತ್ರಿಪುರ, ಬಂಗಾಲ ಮುಂತಾದೆಡೆಗಳಲ್ಲಿ ಅದ್ಯಾಕೆ ಅವರು ಬಂದು ಡೇರೆ ಹೊಡೆದು ಕ್ರಮಶಃ ಗದ್ದಲ ಎಬ್ಬಿಸಬೇಕು? ಅಸ್ಸಾಮಿನಿಂದ ಅವರನ್ನು ಹಿಂದಕ್ಕೆ ಕಳುಹಿಸಬೇಕಾದಲ್ಲಿ ಹೆಚ್ಚಿನವರು ವರ್ಷಗಳೇ ಬೇಕಾದೀತು! ಅಷ್ಟು ಪಾಕಿಸ್ಥಾನಿಗರು ಬರುತ್ತಿರಲು ಕಾರಣವೇನು?—ನಗು ನಗುತ್ತಾ ಪಡೆದೆವು ಪಾಕಿಸ್ಥಾನವನ್ನು, ಯುದ್ಧ ಮಾಡಿ ಪಡೆಯುವೆವು ಪಾಕಿಸ್ಥಾನವನ್ನು' ಇದು ಅವರ ಘೋಷಣೆ ಅಲ್ಲವೇನು? ಪಾಕಿಸ್ಥಾನಿಗಳ ಕಾಶ್ಮೀರದ ವೇಳೆ ಆಕ್ರಮಣ ನಡೆಸಿದಲ್ಲಿ ನಮಗೆ ಕಾಶ್ಮೀರವನ್ನು ಕಾಪಾಡುವ ಹಕ್ಕು ಮಾತ್ರ ಇರುವದಲ್ಲದೆ, ಪಾಕಿಸ್ಥಾನದ ಮೇಲೆ ಯುದ್ಧ ಘೋಷಣೆ ಮಾಡುವ ಹಕ್ಕು ಇದೆ ಎಂಬುದನ್ನು ಆಗಲೇ ಪಾಕಿಸ್ಥಾನಕ್ಕೆ ಸ್ಪಷ್ಟಪಡಿಸಲಾಗಿರುತ್ತದೆ.

ಯಾವ ರೀತಿಯ ಪ್ರದೇಶದಲ್ಲಿ ನಾವು ಸೈನಿಕ ಕಾರ್ಯಾಚರಣೆ ಮಾಡಬೇಕಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಪಂಜಾಬಿನಲ್ಲಿ ಇರುವದು ಬಯಲು ಪ್ರದೇಶ ಬೆಳೆ ಎಲ್ಲೆಲ್ಲೂ ಹೆಲುಸಾಗಿರುತ್ತದೆ. ಆಲ್ಲಿ ಸಂಪರ್ಕ ವ್ಯವಸ್ಥೆ ಚೆನ್ನಾಗಿ ಇದೆ. ಭೂಪ್ರದೇಶದ ನಡುವೆ ಆಲ್ಲಲ್ಲಿ ನದಿಗಳೂ ಕಾಲುವೆಗಳೂ ಓಡುತ್ತಿವೆ.

ಪೂರ್ವ ಪಾಕಿಸ್ಥಾನದಲ್ಲಿ ವಿಷಯ ಸ್ವಲ್ಪ ಬೇರೆ ರೀತಿಯಲ್ಲಿದೆ. ಆಲ್ಲೂ ನೆಲ ಬಯಲಾಗಿದ್ದು, ಎಲ್ಲೆಲ್ಲೂ ಭತ್ತದ ಗದ್ದೆಗಳಿವೆ. ಈ ಭೂಪ್ರದೇಶವನ್ನು ದೊಡ್ಡ ದೊಡ್ಡ ನದಿಗಳು ಆಲ್ಲಲ್ಲಿ ಬೇರ್ಪಡಿಸುತ್ತವೆ. ಹಾಗಿರುವದರಿಂದ ಚಕ್ರಗಳ ವಾಹನಗಳನ್ನು ನಂಬಿಕೊಂಡಿರುವ ವೈನ್ಯಕ್ಕೆ ಆಲ್ಲೇನೂ ಮಾಡಲು ಸಾಧ್ಯವಿರುವದಿಲ್ಲ. ಪಾಕಿಸ್ಥಾನಕ್ಕೆ ಕೂಡಾ ಇಂದಿಗೂ ಈ ಪ್ರದೇಶವನ್ನು ಪೂರ್ಣ ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಿ ಇರುವದಿಲ್ಲ. ಕಲ್ಕತ್ತೆ, ಅಸ್ಸಾಂ, ನೇಫಾಗಳನ್ನು ರಕ್ಷಿಸಲು ಬೇಕಾದಲ್ಲಿ ನಮ್ಮ ಬಳಿಯೂ ಉತ್ತಮ ಶಸ್ತ್ರಧಾರಿ ಸೈನಿಕರಿರಬೇಕು (ಶಸ್ತ್ರ ಮಾತ್ರವಲ್ಲ, ಯುಕ್ತಿ ಹಾಗೂ ಧೈರ್ಯ ಘೋರಣೆಯೂ ಇರಬೇಕು.)

ಆ ಬದಿಯಲ್ಲಿರುವ ನಮ್ಮ ಭೂಭಾಗವು ಗುಡ್ಡಗಾಡು ಪ್ರದೇಶವಿದೆ ಆಲ್ಲಿ ದಟ್ಟಣೆಗಳೂ, ಕಡಿದಾದ ಕಣಿವೆಗಳೂ ಇವೆ. ಆಲ್ಲಿಯ ಗುಡ್ಡಗಾಡು ಹಾದಿಗಳನ್ನು ಚಳಿಗಾಲದಲ್ಲಿ ಹಿಮ ಮುಚ್ಚಿ ಬಿಡುತ್ತದೆ. ಈ ಪ್ರದೇಶದಲ್ಲಿ ಗೊರಿಲ್ಲಾ ಪಡೆಗಳಿಗೆ ಮಾತ್ರ ಹೋರಾಡಲು ಸಾಧ್ಯ. ಆದರೆ ಆಲ್ಲಿ ಈಗಾಗಲೇ ಪಾಕಿಸ್ಥಾನಿಗಳು ಮನೆ ಮಾಡಿಕೊಂಡಿದ್ದಾರೆ. ಆಲ್ಲಿ ಸಂಪರ್ಕ ವ್ಯವಸ್ಥೆ ಚೆನ್ನಾಗಿರುವದಿಲ್ಲ. ಆಲ್ಲಿಗೆ ಇಳ್ಳಿಂದ ಆಯುಧಗಳನ್ನು ಕೊಂಡೊಯ್ಯಲು ಸಾಧ್ಯವೂ ಇರುವದಿಲ್ಲ. ಆಲ್ಲಿ ಹಗುರವಾದ ಆಯುಧಗಳಿಷ್ಟೆತ್ತು, ಆಲ್ಲಿಯ ಸ್ಥಳೀಯ ಜನರಿಗೆಯೇ ಕರಬೇತಿಕೊಡಬೇಕು ಸಮರ ಸಂಭವಿಸಿದಲ್ಲಿ ವಿಮಾನದ ಮೂಲಕ ಮಾತ್ರ ರವ್ವಿಸಿಕೊಳ್ಳಲು ಆಲ್ಲಿ ಸಾಧ್ಯವಿವೆ. ಹಾವಾಗ್ಗಿರ್ಗನ್ನೊಯ್ಯಲು ಹೇಳರ ಕತ್ತೆ ಹಾಗೂ ಹೊರುವವರು ಸಿದ್ಧರಿರಬೇಕು.

ಏನಿದ್ದರೂ ಈ ಕೆಳಗಿನ ಕೆಲ ಕಾರಣಗಳಿಂದಾಗಿ ಪಾಕಿಸ್ಥಾನವು ಈಗ ಪಡೆ ಎತ್ತಿಕೊಂಡು ಬರುವದಿಲ್ಲವೆಂದು ಭಾವಿಸಬಹುದು. (ಪಾ.ಸೂ: ಸೀತಾಂಪಾರ ಬಂಧನವನ್ನು ಕಳೆದ ಸಂಚಿಕೆಯಲ್ಲಿ ಕೊಡಲಾಗಿರುತ್ತದೆ.) (೧) ಪಾಕಿಸ್ಥಾನದ ಸೈನಿಕ ಅಡಳಿತೆಗೊಳಪಟ್ಟಿರುತ್ತದೆ ಗೆಲ್ಲುವ ಧೈರ್ಯ ಇಟ್ಟಿದಿರುವಾಗ, ಸೇನಾಧಿಕಾರಿ ಅಡಳಿತ ಲಗಾಮನ್ನು ಹಿಡಿದುಕೊಂಡಿದ್ದಲ್ಲಿ ಆತ ಯುದ್ಧತ್ಕೆ ಆಜ್ಞೆಕೊಡುವದಿಲ್ಲ. (೨) ಆಲ್ಲಿ ಯುದ್ಧ ವಿರೋಧ ರೇಟೆಯನ್ನು ಪರಿಶೀಲಿಸುತ್ತಿರಲು ಸಂಯುಕ್ತ ರಾಷ್ಟ್ರ ಸಂಘವು ಸ್ಪತಃ ನಿಧಿಗಳನ್ನಿದ್ದಾರೆ (ಕೆಲವು ಬಾರಿ ಉಳಿದ ಭಾಗ ನೋಡಿರಿ



ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ತೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ರೇವಣಾತಿಗಳಲ್ಲಿ ವೃದ್ಧಿ ಹೊಂದಿ ಬೆದವನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನೆಮ್ಮಕಾಯೆಯಲ್ಲಿ ದಯವಿಟ್ಟಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಆಫ್ರಿಕನ್ ಐಕ್ಯಕ್ಕೆ

ಮೂವತ್ತು ರಾಷ್ಟ್ರಗಳ ತಾಮ್ರಪಟ

ಅಡಿಸ್ ಅಬಾಬಾ ಒಂದು ಕಾಲದಲ್ಲಿ ಆಫ್ರಿಕೆಯ ಅಜ್ಞಾತ ನಗರವೆನಿಸಿದ್ದರೂ ಒಂದು ವಾರಕ್ಕೆ ಮೊದಲು ಅಲ್ಲಿ ತೋರಿದ ಚಟುವಟಿಕೆಗಳು ಇಡಿಯ ಆಫ್ರಿಕನ್ ಭೂಖಂಡಕ್ಕೆ ಪ್ರಕಾಶ ಪ್ರದಾನಿಸಲು ಬಲ್ಲುದು. ಮೊದಲೆಸ್ಟ್ಟುಪೊಂದನ್ನುಳಿದ ೩೦ ಆಫ್ರಿಕನ್ ದೇಶಗಳ ವರಿಷ್ಠರು ಒಂದೆಡೆ ಕಲೆತು ಆಫ್ರಿಕನ್ ತಾಮ್ರ ಪಟವೊಂದಕ್ಕೆ ಸಹಿ ಹಾಕಿದುದು ಆಫ್ರಿಕನ್ ಇತಿಹಾಸದಲ್ಲಿ ಮಾತ್ರವಲ್ಲ, ಜಾಗತಿಕ ಇತಿಹಾಸದಲ್ಲಿಯೂ ರಾಜಕಾರಣದಲ್ಲಿಯೂ ಉಲ್ಲೇಖಾರ್ಹ ಘಟನೆಯೆನಿಸುವುದು. ಸಂರಕ್ಷಣೆ, ವಿಕ್ಷಣ, ಆರೋಗ್ಯ, ಆರ್ಥಿಕಾಭಿವೃದ್ಧಿ ನೊದಲಾದ ರಂಗಗಳಲ್ಲಿ ಪರಸ್ಪರ ಸಹಕರಿಸಿಕೊಂಡು ವರ್ತಿಸುವಂತೆ ಈ ತಾಮ್ರಪಟವು ಹೇಳುತ್ತದೆ. ಆಫ್ರಿಕನ್ ರಾಷ್ಟ್ರಗಳ ನಡುವೆ ಏಳಬಹುದಾದ ಸಮಸ್ಯೆ-ವಿವಾದಗಳನ್ನು ತಾತ್ಕಮ್ಯನಾಯಕರ ಮೂಲಕವೇ ಪರಿಹರಿಸಿಕೊಳ್ಳಬೇಕೆಂದು ಅದು ಕರೆಯಿತ್ತುತ್ತದೆ. ಈ ಮಹತ್ವದ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಇಥಿಯೋಪಿಯಾದ ಮಹಾರಾಜರು, ಆಫ್ರಿಕನ್ ರಾಷ್ಟ್ರಗಳು ಇಂದು ಸಂಯುಕ್ತ ರಾಷ್ಟ್ರ ಸಂಘದ ಮಹತ್ತಿಕೆಯನ್ನು ಅರಿತುಕೊಂಡಿನೆಯೆಂದೂ ಈ ಆಫ್ರಿಕನ್ ರಾಷ್ಟ್ರಗಳ ಐಕ್ಯಕೂಟವು ಇದರ ಪ್ರಾತ್ಯೇಕ್ಷಿಕ ರೂಪನೆಂದೂ ಅಭಿಪ್ರಾಯಪಟ್ಟಿರುವುದರಲ್ಲಿ ಅತಿಶಯೋಕ್ತಿಯಿರುವುದಿಲ್ಲ.

ಅಡಿಸ್ ಅಬಾಬಾ ಸಮ್ಮೇಳನಕ್ಕೆ ಮೊದಲಿಗೂ ಕೆಲವೊಂದು ಆಫ್ರಿಕನ್ ರಾಷ್ಟ್ರಗಳು ಒಂದು ಸೇರಿ ಪರಸ್ಪರ ಸಂಬಂಧ ಬೆಸೆಯುವ ಒಂದೆರಡು ಐಕ್ಯಕೂಟವನ್ನು ರಚಿಸಿಕೊಂಡಿದ್ದುವು. ಇವುಗಳಲ್ಲಿ ಘಾನಾ, ಗಿನಿ, ಮೊರಕ್ಕೊ, ಮಿಸಿಯೊ ಮತ್ತು ಮಾಲಿಗಳ ಕಸಬ್ಲಾಂಕಾ ಐಕ್ಯರಂಗ ಮತ್ತು ನೈಜೀರಿಯಾ, ಲೈಬೀರಿಯಾ ಮತ್ತಿತರ ಫ್ರೆಂಚ್ ಘಾನಾ ರಾಜ್ಯಗಳ ಮೋನ್ರೋವಿಯಾ ಕೂಟಗಳು ಗಣ್ಯವಾದುವು. ಇದೀಗ ಅಡಿಸ್ ಅಬಾಬಾದಲ್ಲಿ ತಾಮ್ರ ಪಟಕ್ಕೆ ಸಹಿ ಬಿದ್ದಂದಿನಿಂದ ಮೊದಲಿನ ಎಲ್ಲ ಐಕ್ಯಾವರಣವು ರದ್ದಾಗುತ್ತದೆ.

ಹೊಸ ತಾಮ್ರ ಪಟದನ್ವಯ, ಆಫ್ರಿಕನ್ ಐಕ್ಯಕೂಟವು ಹಿಂದು ಸರ್ವೋಚ್ಚ ಆಡಳಿತ ಮಂಡಳಿಯು ಮೂಲಕ ನಡೆಸಲ್ಪಡುವುದು. ಈ ಮಂಡಳಿಯಲ್ಲಿ ಎಲ್ಲ ರಾಷ್ಟ್ರಗಳ ವರಿಷ್ಠರು ಸದಸ್ಯರಾಗಿರುವರು ಮತ್ತು ಇವರು ವರ್ಷದಲ್ಲಿ ಒಂದು ಬಾರಿ ಯಾವರೂ ಸಭೆ ಸೇರುವರು. ವಿದೇಶ ಮಂತ್ರಿಗಳು ಕಡಿಮೆಯೆಂದರೆ ಎರಡು ವರ್ಷಗಳಿಗೊಮ್ಮೆಯಾದರೂ ಒಂದು ಸೇರಬೇಕು. ಐಕ್ಯಕೂಟಕ್ಕೆ ಒಂದು ಶಾಶ್ವತ ಸೆಕ್ರಿಟೇರಿಯಟ್ ಇದ್ದು, ಆಡಳಿತವು ಪ್ರಧಾನ ಕಾರ್ಯದರ್ಶಿಯೊಬ್ಬನ ಮೂಲಕ ನಡೆಯುವುದು. ಎಂದರೆ, ಸಂಯುಕ್ತ ರಾಷ್ಟ್ರಸಂಘವು ಇಡಿಯ ಜಗತ್ತಿನ ೧೧೧ ದೇಶಗಳ ಐಕ್ಯಕೂಟವೆನಿಸಿದರೆ, ಈ ಆಫ್ರಿಕನ್ ಐಕ್ಯಕೂಟವು ೩೦ ಆಫ್ರಿಕನ್ ದೇಶಗಳ ಮಟ್ಟಿಗೆ ಮಾತ್ರ ಸೀಮಿತವಿರುತ್ತದೆ.

ಘಾನಾದ ಅಧ್ಯಕ್ಷ ಕ್ವಾಮೆ ನುಕ್ರೂಮಾರವರು ಆಫ್ರಿಕನ್ ಐಕ್ಯ ಕೂಟವು ವಿದೇಶ ನೀತಿ, ಸೇನೆ, ನಾಣ್ಯ ಚಲಾವಣೆ ನೊದಲಾದ ಮುಖ್ಯ ಮುಖ್ಯ ವಿಚಾರಗಳಲ್ಲಿ ಸಮಾನತೆಯನ್ನು ತರಬೇಕೆಂದು ಕರೆಯಿತ್ತಿದ್ದರಾಗು. ಆದರೆ, ಈ ಕರೆಯನ್ನು ಸಮ್ಮೇಳನವು ಕೇಳಿದಂತೆ ಘಾನಾವಾಗುವುದಿಲ್ಲ, ಮಾತ್ರವಲ್ಲ ತಾತ್ಕಮ್ಯ ಪಟವು ನುಕ್ರೂಮಾ-ಇಚ್ಛೆಗಿಂತ ದೂರ-ಬಹು ದೂರ-ನೀತಿಯುಳ್ಳದು. ಐಸ್ಟ್ಪದ ಅಬ್ಬುಲ್ ಗವಾಲ್ ನಸ್ಸೇರರು ಸಮ್ಮೇಳನದ ಮುಂದೆ ವಸಾಹತು ಶಾಹಿಯ ಸಮೂಧಿಗೆ ಸಂಬಂಧಿಸಿದ ಬೇರೊಂದು ಸೂಚನೆಯನ್ನು ಮುಂಸಿಟ್ಟರು. ಇದರಂತೆ ಒಂದು ಉಚಿತ ದಿನವನ್ನು ಗೊತ್ತುಮಾಡಿ, ಅದರೊಳಗೆ ಆಫ್ರಿಕದಿಂದ ವಸಾಹತು ಶಾಹಿಯನ್ನು ಕೊನೆಗೊಳಿಸಲು ಸಮುಚಿತ ವಿಧಾನಗಳೊಡನೆ ಆಂದೋಲನ ಹೂಡಬೇಕು ಎಂಬುದೇ ನಸ್ಸೇರರ ಬಯಕೆ. ಆದರೆ, ಇದನ್ನೂ ಸಮ್ಮೇಳನವು ಇದ್ದದ್ದಿದಂತೆ ಒಪ್ಪಿಕೊಳ್ಳುವಷ್ಟು ಸಾಹಸ ತೋರಿಸಲಿಲ್ಲ. ಇಂತಹ ಸಲಹೆಗಳು ಅಮೂಲ್ಯವಾದುವು ಮತ್ತು ಆಫ್ರಿಕನ್ ಸ್ವಾತಂತ್ರ್ಯವನ್ನೂ ಏಕತೆಯನ್ನೂ ಪ್ರತಿಷ್ಠಾಪಿಸಿ ಮುಂದುವರಿಯುವಲ್ಲಿ, ಶತ್ರುಲೆಯಿಂದ ಬೆಳಕಿನೆಡೆಗೆ ಧಾವಿಸುವಲ್ಲಿ ಅತ್ಯಾವಶ್ಯಕವೆನಿಸಿದ್ದವು.

ಆದರೆ, ಸಮ್ಮೇಳನವು ಈ ಸೂಚನೆಗಳ ಬಗ್ಗೆ ತುಸು ಮಟ್ಟಿಗೆ ಅನಾಸ್ಥೆಯನ್ನೇ ತೋರಿಸಿತು ಎಂದರೂ ಅತಿಶಯೋಕ್ತಿಯಾಗದು. ವೊರಕ್ಕೊವಿಗೆ ಮೌರಿಟಾನಿಯೊಡೊಡನೆ ಜಗಳವಿದ್ದು, ಅದನು ತೀರ್ಮಾನಿಸಿಕೊಳ್ಳಲಾಗದ ಕಾರಣದಿಂದ ಅದು ಈ ಸಮ್ಮೇಳನದಲ್ಲೂ ಭಾಗವಹಿಸಲಿಲ್ಲ. ಸೋಮಾಲಿಯಾ ಮತ್ತು ಇಥಿಯೋಪಿಯಾಗಳ ನಡುವೆ ಗಡಿ ತಂಟೆಯನ್ನು ಒಂದು ನಿರ್ಣಯಕ್ಕೆ ಪರಿಸ್ಥಿತಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಇವೆರಡೂ ಸಮ್ಮೇಳನದಲ್ಲೇನೋ ಭಾಗವಹಿಸಿದ್ದುವು, ಆದರೆ, ಅವುಗಳ ನಡುವೆ ಸರಕ್ಕೆಂತೆ ವಿರಸವೇ ಹೆಚ್ಚಾಗಿತ್ತು ಎಂದು ಅರಿದು ಕೊಳ್ಳುವಂತಿತ್ತು. ಮೊದಲಿಗೆ ಸೋಮಾಲಿಯಾವು ತಾನು ಭಾಗ ವಹಿಸುವ ಬಗ್ಗೆ ತಿಂಸ್ಕಾರ ವಹಿಸಿದ್ದರೂ ಕೊನೆಯ ಗಳಿಗೆಯಲ್ಲಿ ಅದೇನೋ ಮನಸ್ಸನ್ನು ಪರಿವರ್ತಿಸಿತೆಂಬುದನ್ನು ಮರೆಯಬಾರದು.

ಇಷ್ಟು ಮಾತ್ರವಲ್ಲದೆ ಇನ್ನೂ ಪ್ರತ್ಯೇಕ ರಾಷ್ಟ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಬೇರೆಯೇ ಇವೆ. ಪೂರ್ವ ಆಫ್ರಿಕನ್ ಒಕ್ಕೂಟವೊಂದು ಇಂದಿಗೂ ಸವಾಲಾಗಿಯೇ ಉಳಿದಿದೆ. ದಕ್ಷಿಣ ರೊಡೇಸಿಯವನ್ನೂ ಗಣರಾಜ್ಯವಾಗುವ ಪ್ರಶ್ನೆ ಹಾಗೆಯೇ ಉಳಿದಿದೆ. ಹೀಗೆಯೇ ಇನ್ನು ಕೆಲವೊಂದು ಸರ್ವಸಾಮಾನ್ಯ ಚಿಕ್ಕ ಸುಟ್ಟ ಭಿನ್ನಾಭಿಪ್ರಾಯಗಳು ಯಾರಲ್ಲಿರುವುದಿಲ್ಲ?

ಅಂದರೆ ಈ ಮೇಲಿನ ಕಾರಣಗಳಿಂದ ಆಫ್ರಿಕೆಯ ೩೦ ರಾಷ್ಟ್ರಗಳು ಕೆಲವೊಂದು ಪ್ರಶ್ನೆಗಳಲ್ಲಾದರೂ ಒಂದಾಗಿ ಬಾಳಲಾರವು ಎಂದರ್ಥವಲ್ಲ ಅವು ಬದ್ಧಶತ್ರುವು ಮತ್ತು ಬದುಕದೇಕು, ಬದುಕುತ್ತವೆ. ದಕ್ಷಿಣ ಆಫ್ರಿಕೆಯ ವರ್ಣಭೇದ ನೀತಿಯನ್ನು ಪ್ರತಿಭಟಿಸುವುದರಲ್ಲಿ ಮಾತ್ರ ತೃಪ್ತಿಯೊಗದ ಈ ರಾಷ್ಟ್ರಗಳು ಅದಕ್ಕೆ ಆರ್ಥಿಕ ಹಾಗೂ ಇನ್ನಿತರ ಸಹಾಯವನ್ನು ನೀಡಬಾರದೆಂಬ ಒತ್ತಾಯಕ್ಕೆ ಇವು ಬಂದಿವೆ ಮತ್ತು, ಜಗತ್ತಿನ ಇತರ ರಾಷ್ಟ್ರಗಳಿಗೂ ಹೀಗೆ ಮಾಡಲು ಕರೆಯಿತ್ತಿವೆ. ಆಫ್ರಿಕನ್ ದೇಶಗಳು ಪರಸ್ಪರ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಹಕರಿಸಬಲ್ಲವು ಎಂಬುದನ್ನಿದು ಎತ್ತಿ ತೋರಿಸುತ್ತದೆ. ಏಕೆಂದರೆ, ಈ ಕರೆಯಂತೆ ಇನ್ನು ಮುಂದಕ್ಕೆದೆ. ಆಫ್ರಿಕೆಗೆ ತನ್ನ ಅವಸಾನವರ್ಣನೀತಿಯನ್ನು ಮುಂದುವರಿಸಿಕೊಂಡು ಹೊಗುವುದು ಕಷ್ಟ ಸಾಧ್ಯವಾಗುವಂತಿದೆ. ಮುಳ್ಳಿಗಳಿಂದ ಕೂಡಿದ ಅಭಿವೃದ್ಧಿ ಪಥದಲ್ಲಿ ಆಫ್ರಿಕನ್ ದೇಶಗಳು ಒಬ್ಬರಿಗೊಬ್ಬರು ನೆರವು ನೀಡಬಲ್ಲರು. ಸಂಯುಕ್ತ ರಾಷ್ಟ್ರ ಸಂಘದ ಆಫ್ರಿಕನ್ ಆರ್ಥಿಕ ಮಂಡಳಿಯು ಆಡಿಸ್ ಅಬಾಬಾದಲ್ಲೀಗ ಕಾರ್ಯಾಲಯ ಸ್ಥಾಪಿಸಿದೆ; ಆಫ್ರಿಕನ್ ಸಂಸನ್ಮೂಲಗಳು, ವ್ಯಾಪಾರ, ಉದ್ಯಮ ಮತ್ತು ಯೋಜನೆಗಳ ಸಂಬಂಧದ ಅಧ್ಯಯನವನ್ನು ಅದು ಮಾಡತೊದಗಿದೆ ಈ ದಿಸೆಯಲ್ಲಿ ಭಾರತವು ಈಗಾಗಲೇ ಬಹಷಷ್ಟು ಕ್ರಮಗಳನ್ನು ಕೈಗೆಂಡಿದೆ; ಮುಂದೆಯೂ ಬಹಳಷ್ಟು ಮಾಡಲಿದೆ.

ಆಫ್ರಿಕೆಯ ಬಗ್ಗೆ ಹಿಂದಿನಿಂದಲೂ ಕಾಳಜಿ ವಹಿಸುತ್ತ ಬಂದ ರಾಷ್ಟ್ರ ಭಾರತ. ಅದ್ದನ ದೇಶಗಳ ಪ್ರಜ್ಞೆಯನ್ನು ಆದುಮುನ್ನಿಸುತ್ತ ಬಂದಿದೆ. ಹೊಸತಾಗಿ ಸಾರ್ವಭೌಮ್ಯ ಸಡೆದ ಆಫ್ರಿಕನ್ ರಾಷ್ಟ್ರಗಳನ್ನು ಮುಕ್ತ ಹಸ್ತಗಳಿಂದ ಸ್ವಾಗತಿಸಿದೆ. ಮತ್ತು ಇನ್ನೂ ವಾರತಂತ್ರ್ಯದಲ್ಲಿ ನವೆಯುತ್ತಿರುವ ಆಫ್ರಿಕನ್ ರಾಷ್ಟ್ರಗಳು ಶ್ವೇತದಲ್ಲಿಯೇ ಮುಂತಿರುಗೊಳ್ಳಬೇಕೆಂದು ವಾದಿಸುತ್ತಿರುವ ಮತ್ತು ಅಗ್ರಹ ತೊಡಗುತ್ತಿರುವ ರಾಷ್ಟ್ರ ಭಾರತ. ಇವುಗಳ ಉನ್ನತಿ ಕಾರ್ಯದಲ್ಲಿ ಭಾರತವು ಹಿಚ್ಚಿನ ಆಕ್ತಿಯಿಂದ ದುಡಿಯುತ್ತಿದೆ. ಇಂದು ಹಿಚ್ಚಿನ ಆಫ್ರಿಕನ್ ದೇಶಗಳು ಸ್ವತಂತ್ರವಾಗಿನೆ. ಇನ್ನು ಕೆಲವೇ ವರ್ಷಗಳಲ್ಲಿ ಆಫ್ರಿಕನ್ ಬಂಧವಿನೋಚನಾ ಕಾರ್ಯವು ಸಂಪೂರ್ಣ ವಾಗಲಿದೆಯೆಂದು ನಿರೀಕ್ಷಿಸಬಹುದು.

ಆಫ್ರಿಕನ್ ರಾಷ್ಟ್ರಗಳಲ್ಲಿ ಇಂದು ಮುಖ್ಯವಾಗಿ ಆಗಬೇಕಾದ ಕಾರ್ಯಗಳು ಹಲವಿವೆ. ಅವೆಲ್ಲವುಗಳಲ್ಲಿಯೂ ಭಾರತವು ಮನಪೂರ್ವಕ ಸಹಕರಿಸುತ್ತದೆ. ಮುಖ್ಯವಾಗಿ ಸುಧಾರಣೆಯಾಗಬೇಕಾದದು ಆರ್ಥಿಕ ಮತ್ತು ಶಿಕ್ಷಣಿಕ ರಂಗಗಳಲ್ಲಿ. ಇವುಗಳಿಂದಲೇ ಬಡತನ ಮತ್ತು ಅಜ್ಞಾನಗಳಿಂದಾಗಿ ಹಿಂದುಳಿದಿರುವ ಆಫ್ರಿಕನ್ನರು ಉನ್ನತರಾದಾರು. ವರ್ಗಭೇದಗಳಿಗೆ ಎಡೆ ದೊರೆಯದಂತೆ ಪ್ರತಿ ನಾಗರಿಕನನ್ನೂ ಏಕಸಮವಾಗಿ ಪುನಾರೂಪಿಸುವ ಆಫ್ರಿಕನ್ ರಾಷ್ಟ್ರಗಳ ಕರ್ತವ್ಯಗಳಲ್ಲಿ ನಿಮರ್ಥರೂ ಶಕ್ತರೂ ಆದವರು ಹಿಚ್ಚಿನ ಮುಕುವರ್ಜಿಯನ್ನು ತೋರಿಸುವ ಅಗತ್ಯವಿದೆ.

೩೦ ದೇಶಗಳಿಗೆ ಸಂಬಂಧಿಸಿದ ಆಫ್ರಿಕನ್ ತಾಮ್ರಪಟಕ್ಕೆ ಸಹಿ ಹಾಕಿದ್ದರಿಂದಲೇ ಯಾವ ಉದ್ದೇಶವೂ ಸಾಧಿಸಲ್ಪಡಲಾರದೆಂಬುದು ನಿಶ್ಚಯ. ಈ ತಾಮ್ರಪಟದಲ್ಲಿ ಉಲ್ಲೇಖಿತವಾದ ತತ್ವಗಳನ್ನು ಶೀಘ್ರವಾಗಿ ಅನುಷ್ಠಾನಕ್ಕೆ ತರುವಲ್ಲಿ ಅವು ಹಿಂದೆ ಮುಂದೆ ನೋಡಬಾರದು; ಇದರಿಂದಲೇ ಅವುಗಳ ಉದ್ಧಾರ ಮತ್ತು ಉನ್ನತಿ ಅಡಗಿದೆ.

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ಬೈನಂದಿನ ಉಳಿತಾಯ ಯೋಜನೆ —
"ಜನತಾ ದಿಪೊಸಿಟ್ ಸ್ಕೀಮ್"
ಆಕರ್ಷಕ ಕರ್ತವ್ಯಗಳು — ವಿಶೇಷ ಸೌಲಭ್ಯಗಳು
ಏವರಗೆಗಾಗಿ ಇಂದೇ ವಿಚಾರಿಸಿ:
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಉಳಿತಾಯದಿಂದ —
ಇಂದಿಗೆ ವಿಜಯ
ನಾಳೆಗೆ ಅಭಯ

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ್, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನವಾರ ಹೋಪಾಯ ಸೂಚಿಸುವಲುಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಬಿ
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಷ್ಟ್ರೀಯ ಶಿಸ್ತು ಯೋಜನೆಯ ಜನಕ

ಮೇಜರ್ ಜನರಲ್ ಜೆ. ಕೆ. ಭೌಂಸ್ಲೆ

ಮೇಜರ್ ಜನರಲ್ ಜಗನ್ನಾಥ ರಾವ್ ಕೃಷ್ಣರಾವ್ ಭೌಂಸ್ಲೆಯವರು ಮುಂಬೈ ಪ್ರೆಸಿಡೆನ್ಸಿಯ ಸಾವಂತವಾಡಿ ಸಂಸ್ಥಾನಕ್ಕೆ ಸೇರಿದ ತಿರೋಡಾ ಎಂಬಲ್ಲಿ ೧೯೦೭ರ ಡಿಸೆಂಬರ್ ೧೦ರಂದು ಜನ್ಮ ತಳೆದರು. ಕ್ಷಾತ್ರವೃತ್ತಿ ಅವರ ಮನೆತನಕ್ಕೆ ಪರಂಪರೆಯಿಂದ ಬಂದ ವೃತ್ತಿಯಾಗಿತ್ತು. ಆದ್ದರಿಂದ ಅವರು ತಮ್ಮ ಶಾಲಾ ವ್ಯಾಸಂಗವನ್ನು ಮುಗಿಸಿದ ಮೇಲೆ, ಅವರ ಗಣನೆಯ ವಯಸ್ಸಿನಲ್ಲಿ ಡೆಹರಾಡೂನಿನಲ್ಲಿರುವ ಮಿಲಿಟರಿ ಕಾಲೇಜಿಗೆ ಅವರನ್ನು ವಿದ್ಯಾರ್ಥಿ ಸೈನಿಕರನ್ನಾಗಿ ಕಳುಹಿಸಲಾಯಿತು. ೧೯೩೭ರಲ್ಲಿ ಅವರು ಡೆಹರಾಡೂನಿನಲ್ಲಿ ತಮ್ಮ ತರಬೇತಿಯನ್ನು ಮುಗಿಸಿದ ನಂತರ ಸ್ಯಾಂಡ್ ಹರ್ಸ್ಟ್‌ಗೆ ಸೇರಲು ಇಂಗ್ಲೆಂಡಿಗೆ ಹೋದರು. ಅಲ್ಲಿ ೧೯೩೮ರಲ್ಲಿ ಭಾರತೀಯ ಸೇನೆಯಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ಹೊರ ಬಂದರು. ಅಂದಿನ ದಿನಗಳಲ್ಲಿ ಕಿಂಗ್ಸ್ ಕಮಿಷನ್ ಕೆಲವೇ ಮಂದಿ ಭಾರತೀಯರಿಗೆ ದೊರೆಯುತ್ತಿತ್ತು.

ಜನರಲ್ ಭೌಂಸ್ಲೆಯವರ ಸೈನಿಕ ಜೀವನ ದೀರ್ಘವೂ ವೈವಿಧ್ಯಮಯವೂ ಆಗಿತ್ತು. ೧೯೩೮ರಲ್ಲಿ ಅವರಿಗೆ ರಾಯಲ್ ಹೂನೇರ್ ಸೊಸೈಟಿ ಇನ್ನರ್ ಜಂತ ಪದಕವನ್ನಿತ್ತರು. ಈ ಪದಕವನ್ನು ಪಡೆದ ಭಾರತೀಯರಿಬ್ಬರೇ. ಮುಳುಗುತ್ತಿದ್ದ ಕಾರ್ಪೊರಲ್ ಒಬ್ಬರನ್ನು ಉಳಿಸಿದ್ದಕ್ಕಾಗಿ ಈ ಪದಕ ಅವರಿಗೆ ಬಂದಿತ್ತು. ಆಗ ಅವರು ಕ್ಯಾಪ್ಟನ್ ಭೌಂಸ್ಲೆ ಆಗಿದ್ದರು. ಇಂಗ್ಲೆಂಡಿನಲ್ಲಿ ಅರಸನೆಯ ಜಾರ್ಜ್ ರವರ ಪಟ್ಟಾಭಿಷೇಕಕ್ಕಾಗಿ ೧೯೩೭ರಲ್ಲಿ ಲಂಡನ್ನಿಗೆ ಹೋದ ಮೂವರು ಭಾರತೀಯರಲ್ಲಿ ಭೌಂಸ್ಲೆಯವರೂ ಒಬ್ಬರಾಗಿದ್ದರು. ಆದಾದನಂತರ ಅವರು ೯ ತಿಂಗಳ ರಜೆಯನ್ನು ತೆಗೆದುಕೊಂಡು ಪ್ರಪಂಚ ಪ್ರವಾಸ ಹೊರಟರು. ೧೯೪೦ರಲ್ಲಿ ಅವರು ಕ್ವೆಟ್ಟಾದಲ್ಲಿರುವ ಸ್ಟಾಫ್ ಕಾಲೇಜಿನಲ್ಲಿ ತರಬೇತಿ ತೆಗೆದುಕೊಂಡರು. ೧೯೪೧ರಲ್ಲಿ ಅವರು ಸಾಗರೋತ್ತರ ಸೇವೆಗೆ ಹೋಗಿ, ಮೂರನೆಯ ಸ್ಟಾಫ್ ಅಧಿಕಾರಿಯಾಗಿ ಕೆಲಸ ಮಾಡಿದರು. ೧೯೪೨ರ ಫೆಬ್ರುವರಿ ೨೦ರಂದು ಅವರು ಲೆ|| ಕರ್ನಲ್ ರಾಗಿ ಭಡ್ತಿ ಪಡೆದರು. ೧೯೪೨ನೆಯ ರಾಯಲ್ ಗರ್ವಾಲ್ ರೈಫಲ್ಸ್ನ ಕಮ್ಯಾಂಡನ್ನು ವಹಿಸಿಕೊಂಡರು. ಈ ರೀತಿಯ ಎರಡು ಭಡ್ತಿ ಪಡೆದ ಭಾರತೀಯರಲ್ಲಿ ಇವರೇ ಮೊದಲನೆಯವರು.

ಆಗಲೇ, ಅವರ ಜೀವನದಲ್ಲಿ ಮಹತ್ತರ ಪರಿವರ್ತನೆಯ ಘಟ್ಟ ಆರಂಭವಾದದ್ದು. ಯೂರೆ ಪರಿಸ್ಥಿತಿಯಲ್ಲಿ ಯೂನ ಉದ್ವೇಕದಿಂದ ಭಾರತದ ರಾಷ್ಟ್ರೀಯ ಸೇನೆ ರೂಪುಗೊಂಡಿತೆಂಬುದು ಇತಿಹಾಸಕ್ಕೆ ಸೇರಿದವಿಷಯ. ಈ ಸೇನೆಯ ಪ್ರಥಮ ರೂಪದಲ್ಲಿಯೇ, ಭೌಂಸ್ಲೆಯವರು ೧೫೦೦೦ ಸೇನಾದಳದ ಕಮ್ಯಾಂಡ್ ಪಡೆದರು. ಆ ಸೇನೆ ಮುಕ್ತಾಯಗೊಂಡಾಗ, ಎರಡನೆ ಐ. ಎನ್. ಎ. ಯನ್ನು ರೂಪಿಸುವ ಹೊಣೆಗಾರಿಕೆ ಬಹುವಾಗಿ ಭೌಂಸ್ಲೆಯವರ ಹೆಗಲ ಮೇಲೆ ಬಿದ್ದಿತು. ಅವರು ಬಹು ದಕ್ಷ ವ್ಯವಸ್ಥಾಪಕರಾಗಿ, ಕ್ಷಿಪ್ರದಲ್ಲಿ ೫೫,೦೦೦ ಮಂದಿ ಸೈನಿಕರುಳ್ಳ ದಳವೊಂದನ್ನು ಸಿದ್ಧಗೊಳಿಸಿದರು. ನೇತಾಜಿ ಸುಭಾಸ್ ಚಂದ್ರ ಬೋಸರು ಈ ದಳದ ಪ್ರಧಾನ ನಾಯಕರಾದರು. ಶ್ರೀ ಭೌಂಸ್ಲೆಯವರು ಮುಖ್ಯ ದಂಡನಾಯಕರಾದರು. ೧೯೪೪ರ ಆಕ್ಟೋಬರ್ ವರೆವಿಗೂ ಅವರು ಈ ಸ್ಥಾನದಲ್ಲಿದ್ದು ದಕ್ಷತೆಯಿಂದ ಕೆಲಸ ನಿರ್ವಹಿಸಿದರು. ಶ್ರೀ ನೇತಾಜಿಯವರ ಜೊತೆಯಲ್ಲಿ ೧೯೪೩ರ ಪೂರ್ವ ಏಷಿಯನ್ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದರಲ್ಲದೆ, ಫಿಲಿಪೈನ್ಸ್, ಜಪಾನ್ ಇಂಡೋ-ಚೀನಾ ಜಾವಾ, ಸುಮಾತ್ರ, ಬರ್ಮಾ ಮತ್ತಿತರ ರಾಷ್ಟ್ರಗಳಿಗೆ ಭೇಟಿಯಿತ್ತರು. ೧೯೪೪ರ ಆಕ್ಟೋಬರ್ ತಿಂಗಳಲ್ಲಿ ಐ ಎನ್. ಎ. ಚುರುಮಗೀತೆ ಹಾಡಬೇಕಾಗಿ ಬಂದಿತು. "ಬೇಷರತ್ತಾಗಿ ಶರಣಾಗತರಾಗಬೇಕೆಂದು" ಬ್ರಿಟಿಷ್ ಸರ್ಕಾರ ಐ. ಎನ್. ಎ. ಗೆ ಆಜ್ಞೆ ಇತ್ತಿತು. ಶ್ರೀ ಭೌಂಸ್ಲೆಯವರಿಗೇ ಈ ಶರಣಾಗತಿಯ ಆಜ್ಞೆಗೆ ಸಹಿ ಹಾಕುವುದಕ್ಕೆ ಆದೇಶ ಬಂದಿತು. "ಐ.ಎನ್.ಎ. ಕನ್ನ ರಸ್ತ್ರಾಸ್ತ್ರಗಳನ್ನೆಲ್ಲ ಕೆಳಗಿಡಬೇಕಾಗಿ ಬಂದರೂ ಆದು ಎಂದೂ ಶರಣಾಗತವಾಗಲಾರದು" ಇದು ಭೌಂಸ್ಲೆಯವಂತ್ತ ಕೆಚ್ಚಿನ ಉತ್ತರವಾಗಿತ್ತು. ವಿಚಾರಣೆ ನಡೆಸಿ ಗುಂಡಿಕ್ಕಿ ಕೊಲ್ಲುವುದಾಗಿ ಬ್ರಿಟಿಷ್ ಸರ್ಕಾರ ಭೌಂಸ್ಲೆಯವರನ್ನು ಬೆದರಿಸಿತು. ಭೌಂಸ್ಲೆಯವರು ಇದಾವುದಕ್ಕೂ ಬಗ್ಗಲಿಲ್ಲ. ಅವರನ್ನು ಸೆರೆ ಹಿಡಿದು ಭಾರತಕ್ಕೆ ಕರೆದು ತರಲಾಯಿತಾದರೂ ಅವನ್ನು ವಿಚಾರಣೆಗೆ ಗುರಿ ಮಾಡಲಿಲ್ಲ. ಶ್ರೀ ಭೌಂಸ್ಲೆಯವರ ವಕ್ತೀಲರಾಗಿದ್ದ ಶ್ರೀ ಸರ್ದಾರ್ ಬಟೇಲರು ಮಧ್ಯೆ ಪ್ರವೇಶಿಸಿ ಈ ಪ್ರಕರಣವನ್ನು ಅಷ್ಟಕ್ಕೇ ನಿಲ್ಲಿಸಿದರು.

೧೯೪೬ರ ಜನರಲ್ ಭೌಂಸ್ಲೆಯವರನ್ನು ಐ. ಎನ್. ಎ. ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ಆರಿಸಲಾಯಿತು. ೧೯೪೭ರಲ್ಲಿ ಮುಂಬೈ ಸರ್ಕಾರವು ಅವರನ್ನು ಪರಿಹಾರ ಮತ್ತು ಪುನರ್ವಸತಿ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ನೇಮಿಸುವವರೆಗೂ ಶ್ರೀ ಭೌಂಸ್ಲೆಯವರು ಐ.ಎನ್.ಎ.

(ಜನೆ ಪುಟಕ್ಕೆ ನೋಡಿ)

ಶ್ರೀಮನ್ಮಹಾರಾಜರು, ಮೈಸೂರು ರಾಜ್ಯದ ರಾಜ್ಯಪಾಲರೂ ಆದ

ಶ್ರೀ ಜಯ ಚಾಮರಾಜ ಒಡೆಯರ್ರವರು

ಭಾನುವಾರ, **9-6-1963** ರಂದು

ಬೆಂಗಳೂರಿನಲ್ಲಿ ನಮ್ಮ

ಆಡಳಿತ ಕಛೇರಿ ಕಟ್ಟಡದ

ಉದ್ಘಾಟನೆ

ಯನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಲು ಒಪ್ಪಿರುತ್ತಾರೆ.
ನಮ್ಮ ಕೃತಜ್ಞತೆಯನ್ನು ಗೌರವಪೂರ್ವಕವಾಗಿ ಶ್ರೀಮನ್ಮಹಾರಾಜರವರಿಗೆ ಅರ್ಪಿಸುತ್ತೇವೆ.

ಇಂದು ಕೆನರಾ ಬ್ಯಾಂಕ್
ಭಾರತದ ಪ್ರಮುಖ ಷೆಡ್ಯುಲ್ಡ್
ಬ್ಯಾಂಕುಗಳಲ್ಲಿ ಒಂದಾಗಿದೆ.
'ಪ್ರಗತಿ ಶಿಖರದೆಡೆಗೆ ಸಾಗುತ್ತಿದ್ದೇನೆ'
ಎಂಬ ಧೃಡ ನಿಶ್ಚಯದಿಂದ
ಮುನ್ನಡೆಯಲು ಸಂಕಲ್ಪಿಸಿದ್ದೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಂಗಳೂರು (ಸ್ಥಾಪನೆ: 1906) ಆಡಳಿತ ಕಛೇರಿ: ಬೆಂಗಳೂರು

130ಕ್ಕೂ ಮಿಗಿ ಶಾಖೆಗಳು ವಿಶ್ವದಾದ್ಯಂತ ಪ್ರತಿನಿಧಿಗಳು

• ಚಲಾವಣಾ ನಿಧಿ ರೂ. **55** ಕೋಟಿಗೂ ಮಿಗಿದೆ

• **57** ವರ್ಷಗಳ ಸೇವೆ

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ನವಯುಗ ಳಿತಿ	ಉಡುಪಿ ೬-೬-೧೯೬೩	ವಾರ ಕ್ಕೆ

ವಿರೋಧಿ ಐಕ್ಯರಂಗ

ಪಕ್ಷೀಯ ಪದ್ಧತಿಯ ಪ್ರಜಾಪ್ರತ್ಯೇಯ ಕಾರ್ಯಕಲಾಪಗಳು ಸುಯಶಸ್ವಿಯಾಗಿ ನಡೆಯಬೇಕಾಗಿದ್ದರೆ, ಸರಕಾರಿ ಪಕ್ಷವು ಒಪಕಾಲಿಯೂಗಿಯುವಂತೆಯೇ ವಿರೋಧಿ ಪಕ್ಷವೂ ಶಕ್ತಿಸಂಪನ್ನವಾಗಿರಬೇಕು. ಪ್ರಸಾಚಿನ ಆದರ್ಶ ಪಕ್ಷೀಯ ಪದ್ಧತಿಯ ಆಡಳಿತವಿರುವ ಬ್ರಿಟನ್ನಿನಲ್ಲಿ ಆಡಳಿತವು ಸುಗಮವಾಗಿ, ಸಮರ್ಪಕವಾಗಿ ನಡೆಯುತ್ತಿದೆಯೆಂದು ಅನ್ನುವುದಾದರೆ, ಅಲ್ಲಿ ಎರಡೂ ಪಕ್ಷಗಳು ಸರ್ವ ಸಮರ್ಥವಾಗಿರುವುದೇ ಕಾರಣವೆಂದು ಹೇಳಬಹುದು. ಸರಕಾರಿ ಪಕ್ಷವು ಮಾಡಬಹುದಾದ ಅಪಾಯಜನಕ ಕೃತ್ಯಗಳು, ಮತ್ತು ಅವುಗಳ ದುಷ್ಪರಿಣಾಮಗಳಿಂದ ದೇಶವನ್ನು ಬದ್ಧಿಸಿಸುವಲ್ಲಿ ವಿರೋಧಿ ದಳಗಳೇ ಅಗ್ರಗಣ್ಯ ಧ್ಯೇಯವಾಗುತ್ತವೆಯೆಂದು ಇಂದು ಎಲ್ಲರೂ ಹೇಳತೊಡಗಿದ್ದಾರೆ; ಅರಿತುಕೊಂಡಿದ್ದಾರೆ. ಮತ್ತಿದು ಪ್ರಜಾಪ್ರಭುತ್ವದ ರಹಸ್ಯವೂ ಹೌದು ಯಾವ ದೇಶದಲ್ಲಿ ಈ ಎರಡೂ ಪಕ್ಷಗಳ ನಡುವೆ ಸಮತೋಲನವಿರುವುದೋ ಆ ದೇಶದ ಆಡಳಿತ ಯಂತ್ರದಲ್ಲಿ ಯಾವ ದೊಡ್ಡ ಕುಂದುಕೊರತೆಯೂ ಉಳಿಯಲಾರದು. ಒಂದು ವೇಳೆ, ಇಂತಹ ದೋಷಗಳು ಸಂಭವಿಸಿದರೂ ಅವನ್ನು ತಿದ್ದುವಷ್ಟು ವಿರೋಧಿ ಪಕ್ಷವು ಶಕ್ತಿಶಾಲಿಯಾಗಿರುತ್ತದೆ. ಆದರೆ, ನಮ್ಮ ಭಾರತದ ಹಿಚ್ಚಿನ ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಎಷ್ಟು ಬಲವಾದ ತೊಡಕು ಎಂದರೆ, ವಿರೋಧಿ ಪಕ್ಷಗಳ ನಿರ್ಬಲತೆ. ಈ ದುರ್ಬಲತೆಯು ದೂರವಾಗದೆ ಸರಕಾರಿ ಯಂತ್ರ ಸರಿಯಾಗುವುದಿಲ್ಲವೆಂದು ಯಾರಾದರೂ ಅನ್ನಬಹುದು. ಅದುದರಿಂದ ನಮ್ಮ ಪ್ರಜಾರಾಜ್ಯ ಗಟ್ಟಿಯಾಗಬೇಕೆಂದಿದ್ದರೆ, ವಿರೋಧಿ ದಳಗಳ ವೈಚಾರಿಕ ಮತ್ತು ತಾರ್ಕಿಕ ಶಕ್ತಿಯು ಅಭಿವೃದ್ಧಿಗೊಳ್ಳಬೇಕು.

ನಮ್ಮ ಸಂವತ್ತನ್ನು ನೋಡುವಾದರೆ, ಸರಕಾರಿ-ವಿರೋಧಿ ದಳಗಳ ಸಂಖ್ಯಾಬಲಗಳ ನಡುವೆ ಅಕಾಶ-ಪಾತಾಳಗಳಷ್ಟು ಅಂತರವಿದೆ. ವಿರೋಧಿ ಪಕ್ಷಗಳ ಸಂಖ್ಯೆಯು ಕಡಿಮೆಯಿರುವುದಿಲ್ಲ. ಈ ಕಾರಣದಿಂದಲೇ ಇದ್ದವರೆಂದೂ ಒಗ್ಗಟ್ಟಿನಿಂದ ಮುಂದುವರಿಯುತ್ತಿಲ್ಲ. ಕಳೆದ ಬಾರಿ ಸಾರ್ವತ್ರಿಕ ಚುನಾವಣೆಗಳ ವೇಳೆ ಪ್ರತಿಷ್ಠ ವಿರೋಧೀ ನಾಯಕರೆಲ್ಲರೂ ಸರಾಜಿತರಾಗಿದ್ದರೂ, ಆ ಬಳಿಕ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಕೆಲವೆಡೆ ಅನಿವಾರ್ಯವಾಗಿ ಸೋಲೊಪ್ಪಿಕೊಳ್ಳಲೇ ಬೇಕಾಗಿದೆ. ಕೃಪಲಾನಿ, ರಾಮ್ ಮನೋಹರ ಲೋಹಿಯಾ ಈಗ ಗೆದ್ದುಬಂದಿರುವವರೆ. ಎಂತಲೇ ಅಲ್ಲಿ ತುರುಚಟುವಟಿಕೆಗಳು ತೋರಿಬರತೊಡಗಿವೆ, ವಿರೋಧಿ ಪಕ್ಷಗಳೆಲ್ಲವೂ ಒಂದುಗೂಡಿ ಐಕ್ಯರಂಗವೊಂದನ್ನು ರಚಿಸಿಕೊಳ್ಳುವ ಹವಣಿಕೆಯಲ್ಲಿವೆಯೆಂದು ತೋರಿ ಬರುತ್ತಿದೆ. ನಿಜಕ್ಕೂ ಐಕ್ಯರಂಗವು ಸ್ವಾಗತಾರ್ಹವೆನ್ನಲೇ ಬೇಕು. ನಮ್ಮ ವಿರೋಧಿ ಪಕ್ಷಗಳೆಲ್ಲವೂ ನಿರ್ಬಲವಾಗಿವೆಯೆಂಬುದು ಸರ್ವಮಾನ್ಯ ಸಂಗತಿ. ಒಬ್ಬೊಬ್ಬ ವ್ಯಕ್ತಿಯ ಪ್ರತಿಷ್ಠಾಬಲದಿಂದಲೇ ನಿಂತಿರುವ ಪಕ್ಷಗಳೇ ಬಹಳ. ಇಂತಹ ಸಬಲ ವ್ಯಕ್ತಿಯು ಅಧಿಕಾರಿ ಪಕ್ಷದ ನಾಯಕರಲ್ಲಿದ್ದ ಭಿನ್ನಾಭಿಪ್ರಾಯದಿಂದಲೇ ಪ್ರತ್ಯೇಕವಾದ ಪಕ್ಷವೊಂದರ ಜನನಕಾರಣವಾಯಿತು. ಈ ಪಕ್ಷಗಳಲ್ಲಿ ವ್ಯಕ್ತಿಗತ ದ್ವೇಷವು ಹುಟ್ಟಿ ಹೊಗೆಯುತ್ತಿದೆ ಮತ್ತು ತತ್ಪರಿಣಾಮವಾಗಿ ವೈಯಕ್ತಿಕ ಟೀಕೆ-ಟಿಪ್ಪಣಿಗಳಲ್ಲಿಯೇ ಕಾಲಹರಣಮಾಡುವುದರಲ್ಲಿ ಇವು ಅಶಕ್ತವಾಗಿವೆ. ಇದರಿಂದ ಈ ಪಕ್ಷಗಳ ಶಕ್ತಿಯು ಮತ್ತಷ್ಟು ಹ್ರಾಸವಾಯಿತು. ಪ್ರಸಕ್ತ ಪಕ್ಷದ ಇಂದಿನ ಅಸಹಾಯಕ ಪರಿಸ್ಥಿತಿ, ಸಮೂಹವಾದಿ ಪಕ್ಷದ ಉದ್ದೇಶರಹಿತ ಕಾರ್ಯನೀತಿ ಮೊದಲಾದುವನ್ನೇ ಇವಕ್ಕೆಲ್ಲ ನಿದರ್ಶನವಾಗಿ ಕೊಡಬಹುದು. ಈಯೆಲ್ಲಾ ಲೋಪದೋಷಗಳಿಂದ ಅವುಗಳ ಬೆಳವಣಿಗೆಯೂ ಕುಂಠಿತವಾಗುತ್ತ ಬರುತ್ತಿದೆ. ಇದರಿಂದಾಗಿಯೇ ರಾಜಾಜಿಯಂತಹ ಹಿರಿಯ ಮುತ್ಸದ್ದಿಯವರು ವಿರೋಧಿ ಪಕ್ಷಗಳ ಬೆಳವಣಿಗೆಗೆ ಪಂಡಿತ ನೆಹರೂ ಅವಕಾಶ ಕಲ್ಪಿಸಿಕೊಡಬೇಕೆಂದು ಅನ್ನುತ್ತಿದ್ದರು. ಇದು ಕಾರ್ಯಗತವಾಗುವುದು ಹೇಗೆ ಎಂಬುದು ಬೇರೆ ವಿಚಾರ. ಸಮರ್ಥ ಸಶಕ್ತ ವಿರೋಧೀ ಪಕ್ಷದ ಅನಿವಾರ್ಯತೆಯಂತೂ ನಮಗಿದೆ—ಇದು ತ್ರಿಕಾಲಾಬಾಧಿತ" ಸತ್ಯ.

ಅದಕ್ಕೆಂದೇ ವಿರೋಧಿ ಪಕ್ಷಗಳ ಐಕ್ಯರಂಗದ ರಚನೆಯ ಪ್ರಶ್ನೆ ಮುಂದೆ ಬಂದಿದೆ—ಇದ್ದವರಂದರೂ ಒಂದಾಗುವ ಎಂಬ ಹವಣಿಕೆಯಿಂದ. ಆದರೆ, ಲೋಕಸಭೆಯಲ್ಲಿರುವ ಎಲ್ಲ ವಿರೋಧ ಪಕ್ಷಗಳೂ ಈ ಐಕ್ಯರಂಗದಲ್ಲಿ ಅಶಕ್ತವಾಗಿವೆಯೆ? ಖಂಡಿತಕ್ಕೂ ಇಲ್ಲ. ಕಮ್ಯುನಿಸ್ಟರು ಕಾಂಗ್ರೆಸ್ಸಿನ ನೀತಿಯನ್ನೇ ಸಮರ್ಥಿಸಿ, ತಮ್ಮನ್ನು ಬೇಳೆ ಬೇಯಿಸಿಕೊಳ್ಳುವ ವೃಥಾ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಹಿಂದೀ ಭಾಷಾ ಧೋರಣೆಯಲ್ಲಿ ಪ್ರಸವಾ ಮತ್ತು ಸ್ವತಂತ್ರ ಪಕ್ಷಗಳಲ್ಲಿ ತೆಳ್ಳಶಃ ಭಿನ್ನಾಭಿಪ್ರಾಯವೇ ಇದೆ. ಲೋಹಿಯಾ ಗೊತ್ತುಗುರಿಯಿಲ್ಲದೆ ಓಡುವ ಉದುರೆಯ ಬೆನ್ನ ಮೇಲೆ ಕೂತಿಬ್ಬಾಲಿ—ಯಾವಾಗ ಜಾರಿಬೀಳುತ್ತಾರೋ ಗೊತ್ತಿಲ್ಲ—ಹೀಗೆಯೇ ಉಳಿದ ನಾಮ ಮಾತ್ರಿಕ ಪಕ್ಷಗಳ ಸ್ಥಿತಿಗತಿ. ಹಾಗಿರುವಾಗ ಅನಿಲ್ಲವೂ ಒಂದಾಗುವುದು ಸಾಧ್ಯವೆಂಬುದೇ ಸಂದೇಹಾಸ್ಪದ; ಒಂದು ವೇಳೆ ಐಕ್ಯರಂಗವಾದರೂ ಎನ್ನುವುದೂ ಪರಮ ಕಷ್ಟ, ಆದೆಂತೂ ಇರಲಿ. ನಮ್ಮ ವಿರೋಧಿ ಪಕ್ಷಗಳು ನಿರರ್ಥಕ ವ್ಯಕ್ತಿಗತ ಟೀಕೆ-ಟಿಪ್ಪಣಿಗಳನ್ನು ಬಿಟ್ಟು ಕೊಡುವುದು ಅವಶ್ಯ. ಸರಕಾರದ ನೀತಿಯನ್ನು ಖಂಡಿಸುವುದರಲ್ಲಿ ಮಾತ್ರ ತೃಪ್ತಿ ತಾವೇ ಅದರ ಮುಂದಿ ಕುಂದು ಕೊರತೆಯನ್ನು ತಿಳಿಯೇಳಿ, ರಚನಾತ್ಮಕ ಸಲಹೆ ನೀಡಬೇಕು. ಆಕಾಶದಲ್ಲಿ ಹಾರಾಟ ಮಾತ್ರ ಮಾಡುವುದರಿಂದ ಪ್ರಯೋಜನವಿಲ್ಲ. ದೇಶವನ್ನು ಪುನಾರೂಪಿಸುವಲ್ಲಿ ತಮ್ಮ ಶಕ್ತಿ-ಪ್ರತಿಷ್ಠೆ ಮತ್ತು ಜ್ಞಾನಗಳ ಸಂಪೂರ್ಣ ಪ್ರಯೋಜನವು ಆದಷ್ಟಿ ಪಕ್ಷಕ್ಕೆ ದೊರೆಯುವಂತೆ ಅವರು ಮಾಡಬೇಕು. ಸರಕಾರಿ ನೀತಿಯನ್ನು ವಿರೋಧಿಸುವುದಷ್ಟೇ ತಮ್ಮ ಕರ್ತವ್ಯವೆಂದು ತಿಳಿಯದೆ, ಅದನ್ನು ವಿವರ್ಶಿಸಿ, ವಧಿಸಿ ಸಾರವನ್ನು ಜನತೆಗೆ ಊಡುವುದು ತಮ್ಮ ಕರ್ತವ್ಯವೆಂದು ವಿರೋಧೀ ದಳಗಳು ಮನವರಿಕೆ ಮಾಡಿಕೊಂಡು ಐಕ್ಯರಂಗ ರಚಿಸಿಕೊಂಡರೆ, ಏನಾದರೂ ಪ್ರಯೋಜನವಾಗಬಹುದು. ಅದಿಲ್ಲದೆ ಹೋದರೆ, ಅಂತಃಕಲಹಗಳಿಗೆ ನಾಂದಿಯೆನಿಸಲಾಬಹುದು ಈ ಐಕ್ಯರಂಗ.

ಅನ್ಯಾಯ ಬೇಡ

ಜೂನ್ ತಿಂಗಳು ಕಾಲಿರಿಸಿದರೂ ನಮ್ಮ ಕರ್ನಾಟಕ ರಾಜ್ಯದ ಸರಕಾರಕ್ಕೆ ಮಳೆಗಾಳಿಗಳು ಸೋಂಕಿಲ್ಲ. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ತುಂಬಿಸಿಕೊಳ್ಳುವ ನೀತಿಯನ್ನೂ ರೂಪಿತವಾಗಿಲ್ಲ ಮಳೆಗಾಲ ಒಮ್ಮೆಲೇ ಪ್ರಾದಾರ್ಪಣ ಗೆಯ್ದೊಡನೆಯೇ ಚಿತಸಡಿಸುವ ಅಸಿದ್ಧ ಕೃಷಕನಂತೆ ಇನ್ನು ಒಂದು ದಿನ ಏನಾದರೊಂದು ನೀತಿಯನ್ನು ಸ್ಕ್ರೀಟಗೊಳಿಸಿ, ಅದರ ಬಾಯಿಗೆ ಸಾವಿರಾರು ಯೋಗ್ಯತಾ ಸಂಪನ್ನರನ್ನು ಬಲಿಕೊಡುವ ಪೂರ್ವ ಸೂಚನೆ ಇದೀಗ ಕಂಡು ಬರುತ್ತಿದೆ. ಈ ಮೊದಲು ಸರಕಾರ ಹೊರಡಿಸಿದ ಜಾತೀಯ ಆಜ್ಞೆಗಳೆಲ್ಲವೂ ಹನ್ನೊಂದನೆಯ ತಿಂಗಳಲ್ಲಿ ಜನ್ಮ ತಾಳಿದುವು—ಎಂತಲೇ ಅವೊಂದೂ ಬದುಕಲಿಲ್ಲ. ಸರ್ವೋಚ್ಚ ನ್ಯಾಯಾಲಯವು ಕಳೆದ ವರ್ಷದ ಜಾತೀಯ ಆಜ್ಞೆಯ ಸಂವಿಧಾನ ವಿರೋಧಿ ಎಂದು ಘೋಷಿಸಿ ಹೆಲವು ತಿಂಗಳುಗಳು ಕಳೆದುವು. ಬಯಸುತ್ತಿದ್ದರಿ, ಈ ನಡುವೆ ಉದಾತ್ತವಾದ ಆದರ್ಶವಾವ ನೀತಿಯೊಂದನ್ನು ಇಸ್ಪರಲ್ಲೇ ರೂಪಿಸಬಹುದಿತ್ತು. ವಿಲಂಬ ನೀತಿಯಿಂದಲೇ ಪರ್ವತ ಪ್ರಸವ ಮತ್ತು ತಜ್ಜನ್ಯ ದುರಂತ. ಕೃಷಕವಾದ ಜಾತೀಯ ತಳಹದಿಯಿಂದ ದೂರವಿದ್ದು, ಆರ್ಥಿಕ ನ್ಯಾಯಮೂಲಗಳ ಮಾಪನದಿಂದ ಹಿಂದುಳಿಯುವಿಕೆಯನ್ನು ಅಳೆಸುಟೆಕೆಂದು ನಾವು ಹಲವು ಬಾರಿ ವಾದಿಸಿದ್ದೇವೆ. ಕೊನೆಯ ಗಳಿಗೆಯಲ್ಲಾದರೂ ಇದೇ ಅಭಿಪ್ರಾಯವನ್ನು ಮತ್ತೊಮ್ಮೆ ಉಚ್ಚರಿಸುತ್ತೇವೆ ಸರಕಾರವು ಮತಳಿ ಅನ್ಯಾಯ ಮಾಡದಿರಲಿ.

ವಾರ್ತಾನಿವೇದಿಕೆ

ಇರಾಣದ ಶಹ

ರಾಷ್ಟ್ರಪತಿ ರಾಧಾಕೃಷ್ಣನ್ ಇರಾಣವನ್ನು ಸಂದರ್ಶಿಸಿ ಮರಳಿದ ಬಳಿಕ ಕಳೆದುದು ಕೆಲವೇ ದಿನಗಳಾದರೂ ಅವರು ಅಮೆರಿಕೆಗೆ ಹೊರಡುತ್ತಾರೆಯೆನ್ನುವುದರಲ್ಲಿಯೇ ಒಂದು ಮಹತ್ವದ ಸುದ್ದಿ ಹೇಡಿದೆ. ನೆನೆಗುದಿಗೆ ಬಿದ್ದಿರುವ ಕಾಶ್ಮೀರದ ತಂಟೆಯಲ್ಲಿ ಇರಾಣ ಶಹ ಮಧ್ಯಸ್ಥಿಗೆ ನಡೆಸುವರು ಎಂಬ ಈ ಸುದ್ದಿಯು ಗಾಳಿಗೆ ಬಿಟ್ಟ ಕಸ್ತೂರಿಯಾಗಿದೆ. ಪಾಕಿಸ್ತಾನ-ಅಫಘಾನಿಸ್ತಾನಗಳ ಭಿನ್ನಾಭಿಪ್ರಾಯಗಳ ನಡುವೆ ಪ್ರವೇಶಿಸಿ, ಅವನ್ನು ನಿವಾರಿಸುವಲ್ಲಿ ಬಹುಪಾಲು ಯಶಸ್ವಿಯಾದ ಶಹ ಈ ಜಗಳ ನಿವಾರಿಸುವಲ್ಲಿಯೂ ಗಣನೀಯ ಪಾತ್ರ ವಹಿಸಬಲ್ಲರು. ಆದರೆ, ಈ ವರ್ತಮಾನವು ಯಾವ ಮೂಲದಿಂದ ಹೊರಟಿದೆಯೆಂಬುದಿನ್ನೂ ಅಸ್ಪಷ್ಟವಿದೆ.

ಕೃಷ್ಣಮೂಚಾರಿ

ಯಶಸ್ವಿಯಾಗಿ ತನ್ನ ಕೆನಾಡ ಅಮೆರಿಕೆ—ಬ್ರಿಟನ್ನಾಗಳ ಸಂಚಾರವನ್ನು ಮುಗಿಸಿ ಬಂದ ಟಿಟಿಕೆ ತನ್ನ ಯಾತ್ರೆ ಸಫಲವಾದೆಯೆಂದು ವಿಶ್ವಾಸ ತಳೆದಿದ್ದಾರೆ. ಭಾರತದ ಮೇಲೆ ಕೆಂಪು ಚೀನಾವು ಮಾಡಿದ ಅಕ್ರಮಣ ಮತ್ತು ಮಿತ್ರದ್ರೋಹ ವಾರ್ತ್ತವಲ್ಲ. ಅನ್ಯಾಯ ಮತ್ತು ಅಸಹನೀಯ ಭಾರತದ ನೆಲ ಮತ್ತು ಆಕಾಶ ಸೇನಾ ವಿಭಾಗಗಳನ್ನು ಸುಸಜ್ಜಿತವಾಗಿ ಚೀನೀಯರ ಆದಟನವನ್ನು ನೆಲಸಮಮಾಡಲು ತಯಾರಾಗುತ್ತಿರುವ ಭಾರತೀಯ ಸೇನೆಗೆ ಈ ವಿದೇಶೀ ಶಸ್ತ್ರಾಸ್ತ್ರಗಳು ನವಚೇತನ, ನವ ಶಕ್ತಿಯನ್ನು ನೀಡುವುವು. ತನ್ನ ಈ ಸಮಗ್ರ ಯಾತ್ರೆ ಸಫಲಗೊಳ್ಳುವಂತಾದುದಕ್ಕೆ ಟಿಟಿಕೆ ವ್ಯಕ್ತಪಡಿಸುವ ಕೃತಜ್ಞತೆಯ ಹಿಂದೆ ಸಮಸ್ತ ಭಾರತೀಯರ ಹೃದಯಗಳ ಅನುಕಂಠವೂ ಇದೆ.

ಪೊಪ್ ಜಾನ್

ರೋಮನ್ ಕೆಥೋಲಿಕರ ಧರ್ಮಗುರು ಪೋಪ್ ಜಾನರು ತಮ್ಮ ಕೊನೆಯುಸಿರನ್ನು ಎಳೆದರು. ಜಾನ್ ಈ ಸ್ಥಾನಕ್ಕೆ ಒಂದು ವರ್ಷದಿಂದ ಅನಾರೋಗ್ಯ ಪೀಡಿತರಾಗಿದ್ದರೂ, ಕಳೆದ ಕೆಲವು ದಿನಗಳಿಂದ ಅವರ ಆರೋಗ್ಯವು ಮತ್ತಷ್ಟು ಬಿಗಡಾಯಿಸುತ್ತ ಬಂತು. ಒಂದೆರಡು ದಿನಗಳ ಕಾಲ ಪ್ರಜ್ಞಾಶೂನ್ಯರಾಗಿಯೇ ಕಳೆದ ಅವರು ತಮ್ಮ ಇಹಲೋಕದ ಲೀಲೆಗಳನ್ನು ಸರ್ವಕಾಲಕ್ಕೂ ಬಿಟ್ಟು ಅಗಲಿದರು. ಪ್ರಪಂಚದ ಮುಖ್ಯ ಧರ್ಮಗಳಲ್ಲಿ ಒಂದಾದ ಈ ರೋಮನ್ ಕೆಥೋಲಿಕ್ ಪಂಥದ ಜಗದ್ಗುರು ಪೋಪರ ನಿಧನದಿಂದ ಕೆಥೋಲಿಕ್ ಲೋಕ ಚಿಂತಾಕ್ರಾಂತವಾಗಿದೆ; ಜಗತ್ತೂ ಕಳವಳಗೊಂಡಿದೆ, ಮೃತರಾತ್ಮ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುತ್ತಿದೆ.

NAVAYUGA ENTERPRISE LTD.,
Registered Office: **Palukote, UDIPI.**

NOTICE

The register of members and Share transfer books of the Company will remain closed from 10th June to 5th July, 1963 (both days inclusive)

(By order of the Board)

Udipi,
Date 20—5—1963.

H. Honnayya Shetty,
Managing Director.

ಅಲ್ಲಲ್ಲಿಯ ಸುದ್ದಿಸಾರ

ವಿವಾಹ ಸಮಾರಂಭಗಳು

ಕಳೆದ ತಾ 30–5–63ರಂದು ಭಾರತದ ಹಿಂದಿನ ಟೆಸ್ಟ್ ಕ್ರಿಕೆಟ್ ಪಟು ಹಾಗೂ ಮುದ್ರಾಕ್ಷರ ವ್ಯಾಪಾರಿಯೂ ನಾಯಕರಾಗಿದ್ದ ಶ್ರೀ ಶ್ರೀಧರ್ ಅಳ್ವ (ದಿ. ಕೊಡಿಯೂಲ ಗುತ್ತು ರಾಮಯ್ಯ ಆಳ್ವರ ಪುತ್ರ) ಇವರ ವಿವಾಹವು ಚಾರ್ಟರ್ಡ್ ಎಕೌಂಟಂಟ್ ಶ್ರೀ ಪಿ. ಎಸ್. ಹೆಗ್ಡೆಯವರ ಪುತ್ರಿ ಕುಮಾರಿ ಶರತ್ ರೊಂದಿಗೆ ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ವಿಜೃಂಭಣೆಯಿಂದ ಜರಗಿತು.

ದಿ. ಕೆ ಗೋವಿಂದಳಕ್ಷ್ಮಿ ಉಪಾಧ್ಯಾಯರ ಪುತ್ರ ಸುಬ್ರಾಯ ಉಪಾಧ್ಯಾಯರು ದಿ ಪಣಿಯೂರಿ ರಂಭೇಂದ್ರ ಆಚಾರ್ಯರ ಪುತ್ರಿ ಕುಮಾರಿ ಶಕುಂತಳೆಯನ್ನು ತಾ. 30.6.63 ರಂದು ಉಡುಪಿ ಪಣಿಯೂರಿಯ ವಧೂಗೃಹದಲ್ಲಿ ವಿವಾಹವಾದರು.

ಶ್ರೀ ವೆಲ್ಲಲೆ ಕೆರೆಮನೆ ನಾರಾಯಣ ಶೆಟ್ಟರ ಪುತ್ರ ಶ್ರೀ ರಘುರಾಮ ಶೆಟ್ಟರು ಶ್ರೀ ಕಾಪು ಕೋತಲಗುತ್ತು ಮೇಲ್ಮನೆ ದಿಂದಯ್ಯ ಶೆಟ್ಟರ ಪುತ್ರಿ ಸೌ. ನೀತಾಲಕ್ಷ್ಮಿಯನ್ನು ತಾ. 30.5.63ರಂದು ಉಡುಪಿ ವರದೇಂದ್ರ ಕಲಾಮಂದಿರದಲ್ಲಿ ವಿವಾಹ ಮಾಡಿಕೊಂಡರು.

ಶೆಟ್ಟಿ ಫಾರ್ಮಸ್ಯುಟಿಕಲ್ಸ್ ಲಿಮಿಟೆಡಿನ ಮೆನೇಜಿಂಗ್ ಡೈರೆಕ್ಟರ್, ಶ್ರೀ ಬಜ್ಜಾಲ್ ಸಂಜೀವ ಶೆಟ್ಟರ ಪುತ್ರಿ ಕುಮಾರಿ ಕುಸುಮಾ ಮತ್ತು ದಿ| ಇನ್ನಂಜಿ ವಿರಲ ಶೆಟ್ಟರ ಪುತ್ರ ರವಿರಾಜ ಶೆಟ್ಟಿ ಇವರ ವಿವಾಹ ಸಮಾರಂಭವು 2—6—63ರಂದು ಬೊಂಬಾಯಿಯಲ್ಲಿ "ವಸಂತವಿಹಾರ್" ವಿರೆಸರ್ಲೆ ವಧೂಗೃಹದಲ್ಲಿ ವಿಜೃಂಭಣೆಯಿಂದ ಜರಗಿತು

ಶ್ರೀ ಬಡಗಬೆಟ್ಟು ಭವಾನಿಶಂಕರ ಹೆಗ್ಡೆಯವರ ಪುತ್ರಿ ಸೌ. ಸುನಾಸಿನಿಯನ್ನು, ಶ್ರೀ ಬಸ್ರೂರು ನಂದ್ಯಪ್ಪ ಶೆಟ್ಟರ ಪುತ್ರ ಟಿ. ಸಮರಾಜ ಶೆಟ್ಟರು ತಾ 2—6—63ರಂದು ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ವಿವಾಹವಾದರು.

ಶ್ರೀ ಉಳಿಯೂರುಗೋಳಿ ರಾಮಣ್ಣ ಶೆಟ್ಟರ ಪುತ್ರಿ ಯಶೋದಳನ್ನು ಪಾಪಬೆಟ್ಟು ಮಾಗಂದಡಿ ದಿ ಪಟೇಲ ಅಚ್ಚಣ್ಣ ಶೆಟ್ಟರ ಪುತ್ರ ನಗರ ಶೆಟ್ಟರು ತಾ 2—6—63ರಂದು ಉಡುಪಿ ಶ್ರೀ ರಾಮಕೃಷ್ಣ ಧಿಯೇಟರಿನಲ್ಲಿ ಪಾಣಿಗ್ರಹಣ ಮಾಡಿಕೊಂಡರು.

ಹೇರೂರು ದೊಡ್ಡಮನೆ ಮಹಾಬಲ ಶೆಟ್ಟರ ಪುತ್ರಿ ಸಾ. ಪ್ರೇಮಳನ್ನು ದಿ ಮುಲ್ಕಿ ಮುರತೊಟ್ಟು ನಾರಾಯಣ ಶೆಟ್ಟಿ ಪುತ್ರ ಶ್ರೀ ರಾಮಚಂದ್ರ ಶೆಟ್ಟರು ತಾ 2—6—63 ರಂದು ಮಂಗಳೂರು ಹಿಂದಿ ಪ್ರಚಾರ ಭವನ ಪೆಂಪ್ಲೇಂಟ್ ಪೇಟೆಯಲ್ಲಿ ವಿವಾಹ ಮಾಡಿಕೊಂಡರು.

ರ.ಜಾಪುರ ಸಾರಸ್ವತ ಸಂಘ, ಮುಂಬಯಿ— ಇದರ ಹದಿನೂರನೇಯ ವರ್ಷದ ಮಹಾ ಸಭೆಯು 26–5–63ರಂದು ಮಲಬಾರ್ ಸಭಾ ಭವನ ಕಾಂಗ್ರೇಸ್ ಹೌಸಾಲೇನ್ ಇಲ್ಲಿ ಶ್ರೀ ಪಿ. ಶಂಕರ ಪ್ರಭುರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಗೌ ಕಾರ್ಯದರ್ಶಿ ಶ್ರೀ ಡಿ ಡಿ ಪ್ರಭುರವರು ಗತ ವರ್ಷದ ವರದಿಯನ್ನು ಓದಲಾಗಿ ಅದು ಸರ್ವಾನು ಮತದಿಂದ ಸ್ವೀಕರಿಸಲ್ಪಟ್ಟಿತು. ಬರುವ ಶೈಕ್ಷಣಿಕ ವರ್ಷಕ್ಕೆ ರೂ. 1600ನ್ನು ಮರುಪಾವತಿ ಶರತ್ತಿನ ಮೇರೆಗೆ ವಿದ್ಯಾರ್ಥಿ ವೇತನವನ್ನಾಗಿ ಕೊಡುವ ನಿರ್ಣಯವನ್ನು ಅಂಗೀಕರಿಸಲಾಯಿತು ಪೈಸ್ಕೂಲಿನ ವಿದ್ಯಾರ್ಥಿಗಳಿಗೆ ಮರು ಪಾವತಿ ಶರತ್ತಿನ ವಿದ್ಯಾರ್ಥಿ ವೇತನವನ್ನಾಗಿ ರೂ. 200ನ್ನು ನಿರ್ಧರಿಸಿ, ಅದನ್ನು ಹಂಚುವ ಅಧಿಕಾರವನ್ನು ಎಕ್ಸಿಕ್ಯೂಟಿವ್ ಕಮಿಟಿಗೆ ಕೊಡಲಾಯಿತು. ಹೈಸ್ಕೂಲ್ ವಿದ್ಯಾಭ್ಯಾಸದ ಇಬ್ಬರು ವಿದ್ಯಾರ್ಥಿನಿಯರಿಗೆ ಹಾಗೂ ಒಬ್ಬ ವಿದ್ಯಾರ್ಥಿಗೆ ತಲಾ ರೂ. 18ರ ಧರ್ಮಾರ್ಥ. ವೇತನ ಕೊಡುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಮುಂದಿನ ಎರಡು ವರ್ಷಗಳಿಗೆ ಎಕ್ಸಿಕ್ಯೂಟಿವ್ ಕಮಿಟಿಯನ್ನು ರಚಿಸಲಾಯಿತು. ಶ್ರೀ ಕೆ. ಅಪ್ಪು ನಾಯಕ್ (ಅಧ್ಯಕ್ಷ) ಪಿ ಶಂಕರ ಪ್ರಭು (ಉಪಾಧ್ಯಕ್ಷ), ಸೋಮಯ್ಯ ಯಸ್. ನಾಯಕ್ (ಗೌ|| ಕೋಶಾಧಿಕಾರಿ), ಡಿ. ಸುಬ್ರಾಯ ನಾಯಕ್ (ಗೌ ಕಾರ್ಯದರ್ಶಿ) ಸಿ ಯಸ್. ಪ್ರಭು, ಡಿ. ಆರ್. ಪ್ರಭು, ಆನಂದಾಶ್ರಯ ಯಮ್ ನಾಯಕ್, ನಾರಾಯಣ ನಾಯಕ್, ಕೆ ನೋಹಪಡಂದ್ರಾನ್, ಜೆ. ಡಿ. ನಾಯಕ್, ಶಿವರಾಮ್ ದ್ವೋಂಡೆ, ಆನಂದಾಶ್ರಯ ಜೆ ನಾಯಕ್, ವಾಮನ ಜಿ. ಪ್ರಭು, ಯಸ್ ಆರ್ ಪ್ರಭು ದೇವಣ್ಣ ಕೆ. ಪಾಟ್ಕರ್, ಬಿ. ಬಿ. ಪ್ರಭು ಗಳನ್ನು ಮತ್ತು ಕೆ ಎನ್ ನಾಯಕ್ ಇವರನ್ನು ಸದ್ರಿ ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು ಶ್ರೀ ಯಮ್ ಕೃಷ್ಣ ನಾಯಕ್, ಮತ್ತು ಶ್ರೀ ಯಸ್. ಕೇಶವ ನಾಯಕ್ ಇವರುಗಳು ಗೌ|| ಲೆಕ್ಕ ಪರಿಶೋಧಕರನ್ನಾಗಿ ನೇಮಿಸಲಾಯಿತು. ಶ್ರೀಗಳಾದ ವಿ. ಯಸ್. ಪ್ರಭು, ಎ. ಆರ್. ಕಾಮತ್, ಯಸ್ ಯಸ್ ನಾಯಕ್, ಡಿ ಡಿ ಪ್ರಭು, ಡಿ. ಡಿ ನಾಯಕ್ ಮತ್ತು ಕೆ. ಅಪ್ಪು ನಾಯಕ್ ಇವರುಳ್ಳಕ್ಟಿದ ಸಮಿತಿಯನ್ನು ರಚಿಸಲಾಯಿತು

ಈ ಸಭೆಯಲ್ಲಿ ಅನೇಕರು ಸಮಾಜಾಭಿವೃದ್ಧಿ ಮತ್ತು ಸಂಘದ ಕಟ್ಟಡದ ಅವಶ್ಯಕತೆಗಳ ಕುರಿತು ಸೂಕ್ತವಾದಿದರು ಸಭೆಯು ಸಾಂಸ್ಕೃತಿಕ ಚಟುವಟಿಕೆಯು ಅಂಗವಾಗಿ ಕು ಅನಂದಿ ಮತ್ತು ಶ್ರೀ ರಾಮದಾಸ ಕಾಮತ್ ಇವರಿಂದ ಸಂಗೀತ ಮತ್ತು ತಬ್ಲಾನಾದನಗಳಾದವು. ಉಪಾಹಾರ್ ಧನ್ಯವಾದ, ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಉಡುಪಿಯಲ್ಲಿ ಕುಷ್ಠರೋಗ ನಿವಾರಣಾ ಸಂಘ— ದ ಕ.ಜಿಲ್ಲೆಯ ಕುಷ್ಠರೋಗ ನಿವಾರಣಾ ಸಂಘದ ಉಡುಪಿ ಶಾಖೆಯು ತಾ. 25—5—63ರಂದು ಮಣಿಪಾಲದ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಸಹಾರದಲ್ಲಿ ಡಾ| ಟಿ ಎಂ ಎ ಪೈಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಸಿ ಜೆ. ಪದ್ಮನಾಭನವರಿಂದ ಉದ್ಘಾಟಿಸಲ್ಪಟ್ಟಿತು

ಆರಂಭದಲ್ಲಿ ಜಿಲ್ಲಾ ಶಾಖೆಯ ಗೌ| ಕಾರ್ಯದರ್ಶಿ ಡಾ| ಎ ಎಫ್. ಕ್ಯೆಲೋರವರು ಸ್ವಾಗತಿ, ಸಂಘದ ವಿವಿಧ ಚಟುವಟಿಕೆಗಳನ್ನು ವಿವರಿಸಿದರು ಶ್ರೀ ಪದ್ಮನಾಭನವರು ಉದ್ಘಾಟನಾ ಭಾಷಣ ಮಾಡುತ್ತಾ, ಜನರು ತನ್ನು ಮನ್ನ ಧನ ಸಹಾಯ ಮಾಡಬೇಕೆಂದು ಕೇಳಿಕೊಂಡರು ಡಾ| ಪೈಗಳು ನೂತನಾಡುತ್ತಾ, ಉಡುಪಿ ಶಾಖೆಯು ಯೋಗ್ಯ ರೀತಿಯಿಂದ ಕಾರ್ಯ ನಿರ್ವಹಿಸುವಂತೆ ತಾನು ನೋಡಿಕೊಳ್ಳುವೆನೆಂದು ಹೇಳಿದರು ಅಂತ್ಯದಲ್ಲಿ ಉಡುಪಿ ಶಾಖೆಯ ಗೌ| ಕಾರ್ಯದರ್ಶಿ ಡಾ| ಮೋಹನದಾಸ ಪೈಗಳು ಧನ್ಯವಾದ ಸಮರ್ಪಿಸಿದರು.

ಎಂ. ಪಿ. ಸಿ ಸಿಗೆ ಅವಿರೋಧ ಆಯ್ಕೆ – ಮಂಗಳೂರು 2ನೇ ಮತದಾರ ಕ್ಷೇತ್ರದಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೆ ನಾಮಪತ್ರ ಸಲ್ಲಿಸಿದ್ದ ಶ್ರೀ ಎ. ಶಂಕರ ಅಳ್ವ, ಎಂ.ಪಿ.; ಶ್ರೀ ಬಿ. ಎಂ. ಇದಿನಬ್ಬ ಮತ್ತು ಶ್ರೀ ಕೆ ವಿಶ್ವನಾಥ ಕಾಮತ್ ರವರು ತಮ್ಮ ನಾಮಪತ್ರಗಳನ್ನು ಹಿಂತೆಗೆದ ಕಾರಣ ಡಾ. ಕೆ.ಬಾಳಪ್ಪ ಶೆಟ್ಟರು ಅವಿರೋಧವಾಗಿ ಆರಿಸಿ ಬಂದಿರುವರು.

ಬ್ರಾಹ್ಮಣರ ಕ್ಷೇತ್ರ ದಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೆ ನಾಮಪತ್ರ ಸಲ್ಲಿಸಿದ ಶ್ರೀ ಡಾಲಂಡಿ ಮುಹಾಬಲ ಶೆಟ್ಟಿ ಮತ್ತು ಅಲಂಗಾರು ನಾರಾಯಣ ಹೆಗ್ಡೆಯವರು ನಾಮಪತ್ರ ಹಿಂತೆಗೆದ ಕಾರಣ ಶ್ರೀ ಎಫ್. ಎಕ್ಸ್ ಡಿ ಪಿಂಟೋರವರು ಅವಿರೋಧವಾಗಿ ಆಯ್ಕೆಯಾಗಿರುವರು ಎಂದು ತಿಳಿದು ಬರುತ್ತದೆ.

ಜಿಲ್ಲಾ ಕಾಂಗ್ರೆಸ್ ಸಮಿತಿ— ದ ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಸದಸ್ಯರ ಪ್ರಥಮ ಸಭೆಯು ಕಾರ್ಯಕಾರಿ ಸಮಿತಿಯನ್ನು ರಚಿಸಲು ಜೂನ್ 3ರಗಳ ತಾ. 9ರಂದು ಪೂರ್ವಾಹ್ನ 11 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜರಗುವುದೆಂದು ತಿಳಿದು ಬರುತ್ತದೆ.

ಉಡುಪಿಯಲ್ಲಿ ಚ್ಞಾನಸಂತರ್ಪಣೆ ಸ್ಥಳೀಯ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ತಾ. 28–6–63ರಿಂದ ಹತ್ತು ದಿನಗಳ ವರೆಗೆ ಸ್ವತೀ ದಿನ ರಾತ್ರಿ ಮೈಸೂರು ವಿದ್ವಾನ್ ಕೇಶವ ಶೀ ಶ್ರೀ ಪೇಜಾವರ ಪರಮಾಸ ಟಿ. ಯಲ್. ವಾಸುದೇವ ರಾವ್ ಇವರಿಂದ ಚ್ಞಾನ ಸಂತರ್ಪಣೆಯು ಭಕ್ತ ವೃಂದದವರ ಸಹಾಯಾಗಿ ಉಡುಪಿ ತೆಂಕಪೇಟೆ ಶ್ರೀ ಕೃಷ್ಣ ಜುನೆಪ್ಲಾರ್ ಸ್ಟೂಲಿಕರಾದ ಶ್ರೀನಿವಾಸ್ ರಂಭೇಂದ್ರ ಕೃಷ್ಣ ಭಟ್ಟರವರ ಮುಂದಾಳುತ್ವದಲ್ಲಿ ವೈಭವದಿಂದ ನೆರವೇರಿತು

ಬದರಿ ಯಾತ್ರೆ— ಶ್ರೀ ಆಲಿಪೂರು ಬದ್ರಿನಾರಾಯಣಾಚಾರ್ಯರು 16ನೇ ಜೂನ ತಾ 4–6–63ರಂದು 71ನೇ ವಯಸ್ಸಿನಲ್ಲಿ ಬದರಿ ಯಾತ್ರೆ ಕೈಗೊಂಡಿರುವರೆಂದು ತಿಳಿದು ಬರುತ್ತದೆ.

ಲೋಕ ಸೇವಾವೃಂದದ ವಿಶೇಷ ಮಹಾ ಸಭೆಯು ತಾ. 25 5 63ರಂದು ಆಳಿಕೆ ಹಾ ಎ ಶಾಲಾ ವಠಾರದಲ್ಲಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯಾರ್ಥಿನಿಯರಿಗೆ ಬಳಿಕ, ಸೇವಾವೃಂದದ ನಿಯಮಾವಳಿಗಳಲ್ಲಿ ಕೆಲವು ತಿದ್ದುಪಡಿಗಳಾದವು ಹಾಗೂ ಮುಂದೆ ಸ್ಥಾಪಿಸಲ್ಪಡುವ ಲೋಕಸೇವಾ ಹ್ಯಾಸ್ಕೂಲಿನ ಕುರಿತು ಕೆಲವು ನಿರ್ಣಯಗಳಾದವು. ಸಂಜೆಗೆ ತತ್ವ ಸಮರ್ಪಣೆಯೂ ಸಂಗೀತ ಕಾರ್ಯಕ್ರಮವೂ ನೆರವೇರಿದವು

ಪೈಸ್ಕೂಲ್ ಸ್ಥಾಪಿಸಲು ಸರಕಾರದ ಅನುಮತಿ ದೊರೆತಿದ್ದು ಆದರೆ ಉದ್ಘಾಟನೆಯು ತಾ. 6–6 63ರಂದು ವಿದ್ಯಾಮಂತ್ರಿ ಶ್ರೀ ಯಸ್. ಆರ್. ಕಂರಿಯವರಿಂದ ನೆರವೇರಿಸಲ್ಪಡುವುದು.

ವಿದೇಶ ಪ್ರಯಾಣ— ಉಡುಪಿಯ ಶ್ರೀ ಮತ್ತು ಶ್ರೀಮತಿ ರೋಕಿ ಫೆರ್ನಾಂಡಿಸರ ಪುತ್ರ ಶ್ರೀ ಡಯೂನ್ ಫೆರ್ನಾಂಡಿಸರು ಇದೇ ತಾ. 3ರಂದು ಬೊಂಬಾಯಿಯಿಂದ ಲಂಡನ್ನಿಗೆ ಇಂಟರ್‌ನೇಶನಲ್ ಫ್ಲೈಟ್‌ನಲ್ಲಿ ಪ್ರಯಾಣ ಬೆಳೆಸಿದರು. ಅವರು ಬೊಂಬಾಯಿ ಸ್ಟಾಕ್ಸ್‌ಚೇಂಜ್ ಮತ್ತು ಲಿನೋಲಿಯಮ್ ಎಕ್ಸ್‌ಪೋರ್ಟ್ ಕೌನ್ಸಿಲಿನ ಸಹಾಯಕ ಕಾರ್ಯದರ್ಶಿಗಳಾಗಿರುವರು. ಹಿಂತಿರುಗಿ ಬಂದ ಅವರು ಪೇರಿಸ್ ಮತ್ತು ರೋಮಿಗೆ ಹೋಗಲಿರುವರು.

ವಾರ್ಷಿಕೋತ್ಸವ ಮತ್ತು ಪ್ರಮಾಣಪತ್ರ ವಿತರಣೋತ್ಸವ— ತಾ. 2 6–63ರಂದು ಉಡುಪಿ ಹಿಂದಿ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ಪ್ರಮಾಣಪತ್ರ ವಿತರಣೋತ್ಸವವು ಶ್ರೀ ಎಸ್. ಡಿ ಸಾಮ್ರಾಜ್ಯ ಎಸ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಶ್ರೀ ವರದೇಂದ್ರ ಕಲಾ ಮಂದಿರದಲ್ಲಿ ಜರಿಗಿತು ಸಮಿತಿಯ ಅಧ್ಯಕ್ಷೆ ಶ್ರೀ ಟಿ ಎ. ಪೈಯವರು ಸ್ವಾಗತಿಸುತ್ತಾ ಇಲ್ಲಿಯ ನಾಗರಿಕರು ಹಿಂದೀ ಪ್ರಚಾರಕ್ಕೆ ಇನ್ನೂ ಹೆಚ್ಚಿನ ನೆರವನ್ನು ಕೊಡಬೇಕೆಂದರು, ಜತೆ ಕಾರ್ಯದರ್ಶಿ ಕುಮಾರಿ ಯು. ಚಂದ್ರಪ್ರಭಾಗಿಯವರು ಸಮಿತಿಯ ವರದಿಯನ್ನು ಓದಿದರು ನಗರ ಸಭಾಪತಿ ಶ್ರೀ ಸಿ. ರಂಗನಾಥ ಕಿಣ್ಣಿಯವರು ಪ್ರಮಾಣಪತ್ರ ಮತ್ತು ಪುರಸ್ಕಾರ ವಿತರಿಸಿದರು ಅಧ್ಯಕ್ಷರು ಸಮಗ್ರ ಭಾರತ ಹಿಂದಿ ಕೃಷ್ಟಿಯಿಂದ ಹಿಂದಿ ಭಾಷೆಯು ಅನಿವಾರ್ಯಕತೆಯನ್ನು ಒತ್ತಿ ಹೇಳಿದರು. ಅನಂತರ ಸಮಿತಿಯ ಗೌರವದಿಂದ ಮಾರ್ಗದರ್ಶನ ಕಾರ್ಯಕ್ರಮಗಳಾದವು. ಕಾರ್ಯದರ್ಶಿ ಶ್ರೀ ಸಿ ಮುಹಾಬಲ ನಾಯಕರು ಧನ್ಯವಾದ ಸಮರ್ಪಿಸಿದರು.

ಸಾವರ್ಕಾರರ ಜಯಂತಿ— ತಾ. 28—5— 63ರಂದು ಮಂಗಳೂರು, ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಹಿಂದೂ ವಿದ್ಯಾರ್ಥಿ ಮಹಾ ಸಭಾ ವತಿಯಿಂದ 81ನೇ ಸ್ವಾತಂತ್ರ್ಯವೀರ ಸಾವರ್ಕಾರರ ಜಯಂತಿ ಸಮಾರಂಭವು ಡಾ| ಎ. ಎಸ್. ಪರ್ಲಾಡಕರರ ಅಧ್ಯಕ್ಷತೆಯಲ್ಲಿ ನೆರವೇರಿತು ಆರಂಭದಲ್ಲಿ ಸೇಟ್ ವಾಮನ ರಾವ್‌ರವರು ಸ್ವಾಗತಿಸಿದರು. ಸಭಿಕರ ಪರವಾಗಿ ಶ್ರೀ ಕೆ ನಾರಾಯಣ ಶೆಟ್ಟಿ ಕೊಡಿಯಾಲಬೈಲ್ ಇವರು ಸೂತಾಡಿದರು ಡಾ|ಎ.ಎಸ್. ಪರ್ಲಾಡಕರರವರು ತಮ್ಮ ಭಾಷಣದಲ್ಲಿ ಸಾವರ್ಕಾರರ ಮಹಿಮೆಯನ್ನು ಹೊಗಳಿದರು.

ಈ ಸಭೆಯಲ್ಲಿ ಸಾವರ್ಕಾರರಿಗೆ ದೀರ್ಘಾಯುಷ್ಯ ಕೊಡುವಂತೆ ಸಭೆಯು ಪರಮಾತ್ಮನನ್ನು ಪ್ರಾರ್ಥಿಸಿಕೊಂಡಿತಲ್ಲದೆ ರಾಷ್ಟ್ರ ಸೇವೆಯನ್ನು ಮಾಡಲು ಸಶಕ್ತ ದೇಶಿಯರನ್ನು ಕೇಳಿ ಕೊಳ್ಳಲಾಯಿತು. ಸ್ವಾತಂತ್ರ್ಯ ವೀರರ ಅಸ್ತಿಯ ಇಂದಿನ ವ್ಯಾಪಲಕರಿಗೆ ಕನಿಷ್ಠ ಪಕ್ಷ ಪರಿಹಾರ ಧನವನ್ನಾದರೂ ಕೊಟ್ಟು, ಅವರ ಅಸ್ತಿಯನ್ನು ಅವರಿಗೆ ಬಿಟ್ಟು ಕೊಡಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಯಿತು. ಅಂತ್ಯದಲ್ಲಿ ಸೇಟ್ ವಾಮನರಾವ ರವರು ಧನ್ಯವಾದ ಸಮರ್ಪಿಸಿದರು.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ವಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦–೮–೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸುಸಿಯೇ ಕೊಸೆಗೊಳಿಸಿದೆ.

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗಡೆ ೦ ೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಆರಣ ಪರ್ವೋಕ್ತವಾದ ಕೆಲವಾರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವ ದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿನೂತನವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦ ೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ವ.ನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No. 466 N/50 dated 2–12–1950 of the Director of Public Instruction Madras.

ಮೇಜರ್ ಜನರಲ್ ಜಿ. ಕೆ. ಬೌಂಸ್ಲೆ

(ಅನೇ ಪುಟದಿಂದ)

ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದರು. ಅವರ ಸೇವಾ ಮನೋಭಾವ ಅಧಿಕಾರ ವರ್ಗಕ್ಕಷ್ಟೇ ಅಲ್ಲದೆ ಸಾರ್ವ ಜನಿಕರ ಮೆಚ್ಚುಗೆಗೂ ಪಾತ್ರವಾಯಿತು.

ಪ್ರಥಮ ಮಹಾ ಚುನಾವಣೆಯಲ್ಲಿ ಶ್ರೀ ಭೌಂಸ್ಲೆಯವರು ರತ್ನಗಿರಿಯ ಉತ್ತರ ಮತದಾನ ಕ್ಷೇತ್ರದಿಂದ ಲೋಕಸಭೆಗೆ ಆರಿಸಿಬಂದರು. ಆವರ ಆಡಳಿತದಲ್ಲಿನ ದಕ್ಷತೆ, ಪಂಶ್ರಮ, ವ್ಯವಸ್ಥಿತ ಕಾರ್ಯಭಾರ, ಸಾಮರ್ಥ್ಯ ಮತ್ತು ದೃಢ ನಿರ್ಧಾರಕ್ಕೆ ಮನ್ನಣೆ ದೊರೆತ ಅಪೂರ್ವ ಘಟನೆ ೧೯೫೬ರಲ್ಲಿ ಸಂಭವಿಸಿತು. ಅದೆಂದರೆ, ಶ್ರೀ ಭೌಂಸ್ಲೆಯವರನ್ನು ಕೇಂದ್ರ ಸರಕಾರದ ಪುನರ್ವಸತಿ ಶಾಖೆಯ ಉಪ ಮಂತ್ರಿಗಳನ್ನಾಗಿ ನೇಮಿಸಿದುದು.

ಮೇ ೫ ಶ್ರೀ ಭೌಂಸ್ಲೆಯವರು ಸಂಸ್ಥಾಪಕರಾಗಿದ್ದ ರಾಷ್ಟ್ರೀಯ ಶಿಕ್ಷಣ ಕಾರ್ಯ ಯೋಜನೆಯು ೧೯೫೫ರಲ್ಲಿ ನೊತ್ತ ಮೊದಲಿಗೆ ಅನುಷ್ಠಾನದಲ್ಲಿ ಬಂದಿತು. ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಅಶಿಸ್ತಿನ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದೇ ಕಾರ್ಯಯೋಜನೆಯ ಮುಖ್ಯ ಉದ್ದೇಶ. ಯುವ ಜನಾಂಗದಲ್ಲಿ ಶಿಸ್ತಿನ ಮನೋಭಾವವನ್ನುಂಟುಮಾಡಲು, ವಿದ್ಯಾರ್ಥಿ ಜೀವನದ ಮೊದಲ ಹಂತದಲ್ಲಿಯೇ ಅವರು ಶಿಸ್ತನ್ನು ಶಾರೀರಿಕ ಅರ್ಹತೆಯನ್ನು ಅಳವಡಿಸಿಕೊಳ್ಳುವಂತೆ ಮಾಡುವ ಹಾಗೂ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವಂತೆ ಮಾಡುವ ಸುಲಭವಾದ ಕಾರ್ಯಯೋಜನೆಯೊಂದು ಅಗತ್ಯವಿದೆಯೆಂದು ಭಾವಿಸಲಾಯಿತು. ವಿದ್ಯಾರ್ಥಿಗಳಿಗೆ ರಾಷ್ಟ್ರದ ಸಂಪ್ರದಾಯ ಮತ್ತು ಪರಂಪರೆಗಳ ಬಗೆಗೆ ತಿಳಿವಳಿಕೆ ಮೂಡಿಕೊಟ್ಟು ಅವರನ್ನು ಉತ್ತಮ ನಾಗರಿಕರನ್ನಾಗಿ ಮೂಡಲು ಇಂತಹ ಕಾರ್ಯ ಯೋಜನೆಯು ಅಗತ್ಯ ವಿತ್ತು.

ಕೇಂದ್ರ ಶಿಕ್ಷಣ ಮಂತ್ರಿ ಶಾಖೆಯವರು ದ್ವಿತೀಯ ಯೋಜನೆಯಲ್ಲಿ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಅನುಷ್ಠಾನಕ್ಕೆ ತಂದ ರಾಷ್ಟ್ರೀಯ ಶಿಸ್ತು ಕಾರ್ಯಯೋಜನೆಯು ಈಗ ಮೈಸೂರು, ಕೇರಳ, ಮಧ್ಯಪ್ರದೇಶ, ಪಂಜಾಬ್, ಬಂಗಾಳ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಹಾಗೂ ರಾಜಸ್ಥಾನ್ ರಾಜ್ಯಗಳು, ಅಂಡಮಾನ್ - ನಿಕೋಬಾರ್ ದ್ವೀಪಸಮೂಹಗಳಲ್ಲಿಯೂ ಜಾರಿಯಲ್ಲಿದೆ. ಈ ಕಾರ್ಯ ಯೋಜನೆಯನ್ವಯ ಈಗ ಒಟ್ಟು ೧೪ ಲಕ್ಷ ಮಂದಿ ತರಬೇತಿ ಪಡೆಯುತ್ತಿದ್ದಾರೆ. ಎಲ್ಲಾ ರಾಜ್ಯಗಳಿಗೂ ಅದನ್ನು ವಿಸ್ತರಿಸಲಾಗುತ್ತಿದೆ.

ರಾಷ್ಟ್ರದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ನಂತರ, ರಾಷ್ಟ್ರೀಯ ಶಿಸ್ತು ಕಾರ್ಯ ಯೋಜನೆಯನ್ನು ಎಲ್ಲ ಮಿಡ್ಲ್ ಸ್ಕೂಲ್ ಮತ್ತು ಹೈಯರ್ ಸೆಕೆಂಡರಿ ಸ್ಕೂಲ್‌ಗಳಲ್ಲಿ ಆಧ್ಯಯನ ಮಾಡುತ್ತಿರುವ ಸುಮಾರು ಒಂದು ಕೋಟಿ ವಿದ್ಯಾರ್ಥಿಗಳಿಗೂ ಅನ್ವಯಿಸಬೇಕೆಂದು ನಿರ್ಧರಿಸಲಾಯಿತು. ಇದಲ್ಲದೆ ರಾಷ್ಟ್ರೀಯ ಶಿಸ್ತು ಮತ್ತು ವ್ಯಾಯಾಮ ಶಿಕ್ಷಣ ಸಂಬಂಧವಾದ ಸಂಘಟಿತ ಕಾರ್ಯ ಯೋಜನೆಯನ್ನೂ ಅನುಷ್ಠಾನದಲ್ಲಿ ತರಲಾಯಿತು.

ರಾಷ್ಟ್ರೀಯ ಶಿಸ್ತು ಕಾರ್ಯ ಯೋಜನೆಯ ನಿರ್ದೇಶಕರಿಗಾಗಿ ಜಾರಿಸ್ಯಾದಲ್ಲಿರುವ ತರಬೇತಿ ಕೇಂದ್ರವಲ್ಲದೆ ಇತ್ತೀಚೆಗೆ ನಾಲ್ಕು ಹೊಸ ತರಬೇತಿ ಕೇಂದ್ರಗಳನ್ನೂ ಸೇವಾನಿರತರಾದ ವ್ಯಾಯಾಮ ಶಿಕ್ಷಕರ ತರಬೇತಿಗಾಗಿ ಮೂರು ತರಬೇತಿ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ.

ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಲಾದ ಈ ಕಾರ್ಯಕ್ರಮಗಳ ಜೊತೆಗೆ, ಶಾಲಾ ಮಟ್ಟದಲ್ಲಿ ವ್ಯಾಯಾಮ ಶಿಕ್ಷಣ ಮತ್ತು ರಾಷ್ಟ್ರೀಯ ಶಿಸ್ತು ಕಾರ್ಯ ಯೋಜನೆಗಳ ನಡುವೆ ಸಮನ್ವಯ ಸಾಧಿಸಲು ಹಾಗೂ ಕಾಲೇಜ್ ಮಟ್ಟದಲ್ಲಿ ಎನ್. ಸಿ. ಸಿ. ಅಗತ್ಯಗಳಿಗೆ ಅನುಗುಣವಾಗಿ ಮಾಡಲು ಶ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

= ಕರೆ =

— ೧ —

ಕರೆಯದು ಕರೆಯದು
ತಾಯಿಯು ಕರೆಯದು
ಕುಂದಿದೆ ಕರೆಗುದು
ಬೆಂದಿಹ ಕರೆಯದು
ಕಿರುಕುಳ ತಡೆಯಲಾರದೆ- ಕರೆವ
ಕರೆಯದು.

— ೨ —

ಸಾಧು ಸಂತರ ಪಡೆದ ತಾಯಿ
ವೀರ ಶೂರರ ಹಡೆದ ತಾಯಿ
ಸತ್ಯ ಶಾಂತಿಯ ಬಿಡದ ತಾಯಿ
ನ್ಯಾಯ ಧರ್ಮದಿ ನಡೆವ ತಾಯಿ
ಇಂದು ಕೊರಗಿ ಕರೆಯುತಿಹಳಲ್ಲಿ ತಾಯಿ.

— ೩ —

ಮುಸಲಮಾನರು ಬಂದು ಹೋಗಿಹರು
ಮಸಣಗೈದರು— ಭರತ ಭೂಮಿಯನು
ಮತ್ತೆ ಬಂದರು ಫ್ರೆಂಚ್ ಆಂಗ್ಲೇಯರು
ಮೋಹದಿಂ ದೋಚಿದರು ಶಾ ಸೌಭಾಗ್ಯವನು
ಸತ್ಯ ನ್ಯಾಯದಿ ಅಕೆ ಸೋತು ಗೆದ್ದಿಹಳಂದು.

— ೪ —

ನೀ ನಗೆಯೂಡುತಿರೆ ನಾವೆಲ್ಲ ಕುಣಿದಾಡುವೆವು
ನಿನ್ನಧರಗಳು ಅಲುಗೆ ನಾವೆಲ್ಲ ಹಾಡಾಡುವೆವು
ನೀ ಕೈಗೆತ್ತಿ ಕರೆಯೆ ನಾವೆಲ್ಲ ಹಾರಾಡುವೆವು
ನೀ ಬಾಡುತಿರೆ ನಾವು ಬದುಕಲಾರೆವು
ನಿನ್ನ ದುಃಖವನು ತಾಯೆ! ನಾವ್
ತಾಳಲಾರೆವು.

— ೫ —

ದೃಢಗೈದು ಬಂದಿಹೆವು ಮುಂದೊತ್ತಲು
ಏನು ಆಗುವುದೆಂದು ನೋಡುವೆವು ನಾವು
ಬಾದು ಬಂದದ್ದೆಲ್ಲ ನಿನ್ನ ಪ್ರಸಾದವೆಂದು
ನಂಬಿ ನಡೆವೆವು ಮುಂದು ಮುಂದು—
ಎದುರಿಲ್ಲೆಮಗೆ ಇಂದು ಎಂದೂ!

— ೬ —

ನಿನ್ನ ಮಾನವ ಉಳಿಸಲು ನಾವು
ನಮ್ಮ ಶಿರವ ಉರುಳಿಸುವೆವು
ನಿನ್ನ ಕೀರ್ತಿ ಮೊಳಗಲಿ ಎಂದು
ನಮ್ಮ ಕಾಯವ ಸವೆವೆವು ಇಂದು
ಸತ್ಯ–ಪ್ರೀತಿಗಳೇ ತಾಯಿ! ಜಯ
ಗುರಿಯಿದು.

—ಭೋಜ ಎನ್. ಶೆಟ್ಟಿ,
ಮುಂಬಾಯಿ.

ಸಮ್ಮಲ್ಲಿ 14 ಕೆರೆಟ್ ಚಿನ್ನದ ಆಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58½% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.
ಜೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬದಲಾಯಿ ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ ಪಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರಿಕರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮುದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀಕೃಷ್ಣಾ ಜ್ಯುವೆಲರಿ ಮಾರ್ಟ್

ಕೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ—

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.



ಕನ್ನಡ ಸಾಹಿತ್ಯದಲ್ಲಿ

ವಿಚಾರ ಪ್ರಚೋದಕ ಕೃತಿಗಳ ಅಭಾವ

ಒಂದು ಭಾಷೆಯು ಪರಿಪೂರ್ಣ ಪರಿಸ್ಥಿತಿಯನ್ನು ಮುಟ್ಟಬೇಕೆಂದಿದ್ದರೆ,ಆ ಭಾಷೆಯಲ್ಲಿ ಎಲ್ಲ ಪ್ರಕಾರದ ಸಾಹಿತ್ಯ ಕೃತಿಗಳು ನಿರ್ಮಾಣಗೊಳ್ಳಬೇಕು; ಅಧಿಕ ಪ್ರಾಧಾನ್ಯವೂ ಆಗಿರದೆ ತೀರ ಬಾಲಿಸವೂ ಎನಿಸದೆ ಮಧ್ಯಮ ರೀತಿಯ ಲಲಿತ, ಸುಂದರ ಹಾಗೂ ಸುಲಭಗ್ರಾಹಿ ಭಾಷೆಯು ಮತ್ತು ಶೈಲಿಯ ಪ್ರಯೋಗವು ಹೆಚ್ಚಬೇಕು. ಕೇವಲ ಒಂದು ನಾಲಿಗೆ ವರ್ಷಗಳ ಇತಿಹಾಸವಿರುವ ಹಿಂದೀ ಭಾಷೆಯು ಈ ದಿಸೆಯಲ್ಲಿ ಮುಂದುವರಿದು; ಇಂದು ಭಾರತದ ರಾಷ್ಟ್ರಭಾಷೆಯೆನಿಸುವ ಗೌರವ ಪಡೆಯುವಂತಾಗಿದೆ. ಹೀಗೆಯೇ ನಮ್ಮ ಕನ್ನಡ ಭಾಷೆಯೂ ಉನ್ನತವಾಗುವುದು ಬೇಡವೆ?

ಕನ್ನಡ ಭಾಷೆಯು ಉನ್ನತಿಯೆಂದರೆ, ಹಿಂದಿಯ, ಸಮ ಜೋಡಿಯಾಗಿ ನಿಲ್ಲಿಸಿಂವುದೆಂದಾಗಲೀ, ಅಥವಾ ಅದನ್ನೇ ರಾಷ್ಟ್ರ ಭಾಷೆಯನ್ನಾಗಿಸಬೇಕೆಂದು ಚಳವಳಿ ಹೂಡಬೇಕೆಂದಾಗಲೀ ಅರ್ಥವಲ್ಲ. ಇಂದು ಸಂವಿಧಾನ ಮಾನ್ಯವಾದ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಯೆಂದು ಹೇಳುವಷ್ಟು ನಮ್ಮ ಭಾವನೆ ವಿಶಾಲವಾಗಿದೆ. ಸರಕಾರದ ಅಧಿಕೃತ ಭಾಷೆಯಾಗಿ ನಾವು ಹಿಂದಿಯನ್ನು ಬಳಸುವುದರ ಬಗೆಗೇನೇ ವಿವಾದ ಮಾಡುತ್ತಿರುವಾಗ ಮತ್ತೆ ಕನ್ನಡವನ್ನು ಕೇಳುವವರು ಯಾರು?

ಕನ್ನಡದ ಬಗ್ಗೆ ಕಾಳಜಿ ವಹಿಸಬೇಕಾದವರು ಕನ್ನಡಿಗರು. ಕನ್ನಡಿಗರ ಸರ್ವತೋಮುಖ ಅಭಿವೃದ್ಧಿಗಾಗಿ ಉಪಯುಕ್ತ ಸಾಹಿತ್ಯ ಕೃತಿಗಳನ್ನು ಬರೆಯ ಬೇಕಾದವರು ಮತ್ತು ಬರೆಯ ಬಲ್ಲವರು ಕನ್ನಡಿಗರು. ಆದರೆ, ನಮ್ಮ ಕನ್ನಡಿಗರು ಇಂತಹ ಕಾರ್ಯದಲ್ಲಿ ಶ್ರಮ ವಹಿಸುತ್ತಿದ್ದಾರೆಯೆ? ಕನ್ನಡ ನಾಡಿನ ನೈಶಿಕ್ಷಣಗಳಲ್ಲಿ ಒಂದಾದ ಯಕ್ಷಗಾನದ ಕುರಿತಾದ ಒಂದು ಪ್ರಬಂಧವನ್ನು ಹಿಂದೀ ಅಥವಾ ಮತ್ತಾವುದೇ ಭಾಷೆಯಿಂದ ಅನುವಾದ ಮಾಡಿಯೇ ಕನ್ನಡಿಗರಿಗೆ ಅದರ ವಿಚಾರವನ್ನು ತಿಳಿಸಬೇಕಾಗಿರುವಷ್ಟು ಬಡತನ ಕನ್ನಡ ಲೇಖಕರದ್ದಾಗಿದೆಯೆ? ಮಾತು ಮಾತಿಗೆ ಕಾಳಿದಾಸನ ಶೇಕ್ಸ್‌ಪಿಯರನ, ಶೆಲ್ಲಿಯ ತುಲಸಿದಾಸನ ಉದ್ದರಣೆಗಳನ್ನು ನೀಡುವ ಮಹನೀಯರು ಸಂಸ್ಕೃತದ ಬರೆದಿದ್ದಾನೆ, ಎಂದು ನೋಡಿದ್ದಾರೆಯೆ? ಕನ್ನಡ ರಸಋಷಿಟ್ಟ, ರಾಘವಯರ ರಸಾಕಲನವನ್ನು ಎಂದಾದರೂ ಸವಿದಿದ್ದಾರೆಯೆ? ಹೀಗೆ ಕೇಳುವುದಕ್ಕಿಂತ ಕನ್ನಡದ ಬರಹಗಾರ ಬಂಧುಗಳ ಬರಹಗಳಲ್ಲಿ ವೈಚಾರಿಕತೆಯಿಷ್ಟಿನೆಯೆಂದು ಸವಾಲು ಹಾಕುವುದೇ ಉಚಿತವಾದೀತು ಕನ್ನಡ ಸಾಹಿತ್ಯ ಕಾರರ ಮಧ್ಯಮ ವೊಡಲು ಕನ್ನಡವಾಗ ಬೇಡವೆ?

ಇತರ ಭಾಷೆಗೆ ಉತ್ತಮ ಸಾಹಿತ್ಯ ಕೃತಿಗಳನ್ನು ಅನುವಾದ ಮಾಡುವುದು ತಪ್ಪು ಎಂದು ಹೇಳುವುದಲ್ಲ. ಆಥವಾ ಒಬ್ಬ ಲೇಖಕ ತನ್ನದೇ ಅಭಿಪ್ರಾಯವನ್ನು ಮಾತ್ರ ಪ್ರಕಟಿಸಬೇಕೆಂದೂ ಅನ್ನುವುದಲ್ಲಿ. ಹತ್ತು ಅಭಿವ್ಯಾಯಗಳನ್ನು ಓದಿ ಮಥನಮಾಡಿ ತನ್ನ ಅಭಿಮತವನ್ನು ಕೊಡುವುದು ಅತ್ಯುಚಿತ ಅದರೆ, ಪ್ರತಿ ವಿಷಯ ಕ್ಕೂ ಸರಸರೊಡ್ಡವನ್ಕೆ ಕೈಯೊಡ್ಡುವುದು ನಮ್ಮ ಅಜ್ಞಾನ ಮತ್ತು ಸೋಮಾರಿತನದ ದ್ಯೋತಕವಲ್ಲವೆ? ಇಂದಿಂದಾಗಿಯೇ ನಮ್ಮ ಸಾಹಿತ್ಯದಲ್ಲಿ ಮೌಲಿಕತೆಯ ಅಭಾವವಿರೆಯೆನ್ನುವುದು ನಮ್ಮ ಸಾಹಿತಿಗಳು, ಲೇಖಕರು ತಮ್ಮ ಬರಹಗಳತ್ತ ಮೌಲಿಕತೆಯು ಕಡೆಗೆ ವಿಶೇಷ ಗಮನ ಕೊಡ ಬೇಕಾಗಿದೆ.

ಸಾಹಿತ್ಯದ ಹಲವಾರು ಬಗೆಗಳಲ್ಲಿ ಕಥೆಕಾದಂಬರಿಗಳ ಹೊಳೆ ಕೆಲವೊಮ್ಮೆ ಹುಚ್ಚು ಕುಚ್ಚಾಗಿ ಹರಿಯುತಿತ್ತು. ಇಂದದು ಸೀನಿಯೊಳಗೆ ಬರುವಂತಿದೆ. ಅದರೆ, ವಿಮರ್ಶೆ, ವಿಚಾರಲಹರಿ, ಸಮಾಕ್ಷೆ ಮೊದಲಾದುವುಗಳಿಗೆ ಸಂಬಂಧಿಸಿದ ಕನ್ನಡ ಕೃತಿಗಳು ಬೆಳವಣಿಕೆಯು ಸಂಖ್ಯೆಯಲ್ಲಾ ಇಲ್ಲ. ಇವಕ್ಕೆ ಕಾರಣವೂ ಇಲ್ಲದಿಲ್ಲ ಯಾವುದೇ ಪುಸ್ತಕ ಭಂಡಾರಕ್ಕೆ ಕೋಗಿ ನೋಡಿದರೆ, ಅಲ್ಲಿರುವ ಪುಸ್ತಕಗಳಲ್ಲಿ ನೂರಕ್ಕೆರ್ಧ ಕಥೆ ಅಥವಾ ಕಾದಂಬರಿಗಳು. ಭಂಡಾರದ ಪದಸ್ಯರು ಒಯ್ದು ಪುಸ್ತಕಗಳನ್ನು ಕಂಡಾಗ ಅವುಗಳಲ್ಲಿಯೂ ನೂರಕ್ಕೆರ್ಧ ಕಾದಂಬರಿಗಳು ಮಾತ್ರ! ಅಂದರೆ, ಕಥೆ ಕಾದಂಬರಿಯೆಂದರೆ ಮಾತ್ರ ಓದುವ ಸಾಹಿತ್ಯ; ಉಳಿದುದು ಕಷಾಟನ್ನು ತುಂಬಿಸುವುದ ಮಾತ್ರ ಬೇಕಾವ ಹೊಲಳು ಕೃತಿ.

ಇಂದು ನಮ್ಮ ಶಿಕ್ಷಣಾಲಯಗಳ ಭಂಡಾರಗಳಲ್ಲಿ ಕೂಡ ಇದೇ ಪರಿಸ್ಥಿತಿ. ವಿಚಾರರಕ್ತಿಯನ್ನು ಕೆದಕುವಂತಹ ಸಾಹಿತ್ಯವು ವಿದ್ಯಾರ್ಥಿಗಳಿಗೆ ಲಭಿಸುವುದಿಲ್ಲ. 'ಛೆ, ಅದು ಎಂತದಕ್ಕೆ?' ಎಂಬ ಪ್ರಶ್ನೆ ಅವರಿಂದ ಹೊರಡುತ್ತದೆ. ಇನ್ನು ಬಲ್ಲವರಾದ್ದಾರ ಮಾಡಿದರೆ, 'ಲೈಬ್ರೆರಿಯೇ ಬೇಡ" ಎನ್ನತ್ತಾರೆ ಮೇಂಟಲಿಗೇ ಪುಸ್ತಕಗಳನ್ನು ಒಯ್ಯುವವರ ಸಂಖ್ಯೆ ಸೇ. ೧೦. ಒಬ್ಬ ಪುಸ್ತಕಗಳನ್ನು ಹತ್ತಾರು ಮಂಟಗಳ ವರೆಗಾದರೂ ಓದುವವರು ಸೇ. ೫೦ ರಾದರೂ ಇರಲಾರದು, ಅಂದರೆ, ನಮ್ಮಲ್ಲಿ ಹೆಚ್ಚು ಪರಿಶ್ರಮ ಪಡವ ಅಭ್ಯಾಸ ಪ್ರಾರಂಭವಾಗುತ್ತಲೆ ಬರುತ್ತಿದೆ.

ಇದೇ ಸೂತ್ರ ಲೇಖಕರ ವಿಷಯಕ್ಕೂ ಅನ್ವಯವಾಗುತ್ತದೆ. ಕೂಲಂಕಷ ಅಭ್ಯಾಸ ಮಾಡದೆ ಒಂದು ಲೇಖನ ಬರೆಯುವುದು ಸಾಧ್ಯವಿಲ್ಲ. ಅದಕ್ಕಿಂತ ಚಿಕ್ಕು ಕಥೆ, ಇನ್ನು ಕಾದಂಬರಿ ಬರೆಯುವುದು ಬಹು ಸುಲಭ. ಹೆಚ್ಚು ಕಥೆಗಳನ್ನು ಓದಿ, ಒಂದೊಂದರಿಂದ ಒಂದೊಂದಷ್ಟು ಚಾರ್ಯ ಮಾಡಿ ಹನ್ನೊಂದನೆಯ ಕತೆ ರಚನೆಯೊ ದೀತು. ಇನ್ನು ದ್ವಿಭಾಷಾ:-ಬಹು ಭಾಷಾ ವಿದರು ಅತಿ ಶೀಘ್ರದಲ್ಲೇ ದೊಡ್ಡ ಲೇಖಕರೂ ಸಾಹಿತಿಗಳೂ ಆಗುತ್ತಾರೆ, ಇನ್ನು ವಾದದ ಮಹಾ ಕಠಿಣ ಕಾರ್ಯವನ್ನು (೨) ಯಶಸ್ವಿಯಾಗಿ ನಿರ್ವಹಿಸಿ.

ಇಂತಹ ಕೆಲವಗಳ್ಳ ಸಾಹಿತ್ಯ ಕೃತಿಗಾರರಿಂದ ಎಂತಹ ನಿರ್ಮಾಣವಾದೀತು? ಕನ್ನಡ ನಾಡಿನ ಹೆಂಸೆ ಬೇಲೂರು ಶ್ರವಣ ಬೆಳಗೊಳಗಳ ವಿಚಾರನನ್ನು ಆಪನ್ನು ನೋಡಿದ ಒಬ್ಬ ಪರಭಾಷಾ ವಿದನ ಕೃತಿಯನ್ನು ಅನುವಾದಿಸಿಯೇ ತಿಳಿಯಬೇಕೆ? ಕನ್ನಡಿಗರಲ್ಲಿ ಇವನ್ನುನೋಡಿದವರಲ್ಲಿ ಅಭಿಪ್ರಾಯ ಸ್ಫುಟಿಸುವ ಶಕ್ತಿಯಿಲ್ಲವೆ?! ಅಷ್ಟಕ್ಕೂ ಕನ್ನಡದ ಭುವನೇಶ್ವರಿ ಬಂಡೆಯೂಗಿ ಹೋದಳೆ? ಅತನ್ನ ಮಠೆಯು ಕಂಪರಿಯದದನೆ ಹೊರಗೆ ಹುಡುಕುವ ಮೃಗದ ಪಾಡ' ನಮ್ಮದಾಯಿತೆ? ಇದಕ್ಕಿಂತ ದಾರಿದ್ರ್ಯ ಮತ್ತುವುದ.?

ಕನ್ನಡಿಗರಿಗೆ ಉತ್ತಮ ಸಾಹಿತ್ಯವನ್ನು ನಿರ್ಮಿಸುವುದು ಸಾಹಿತ್ಯಕಾರರ ಕರ್ತವ್ಯ ಜನತೆಯನ್ನು ಸನ್ಮಾರ್ಗ ಅಥವಾ ದುರ್ಮಾರ್ಗದಲ್ಲಿ ಒಯ್ಯುವ ಪಥಪ್ರದರ್ಶಕ ನಾತ. ವಿದ್ಯಾರ್ಥಿಗಳಿಗೆ ಶಿಕ್ಷಕನು ಮಾರ್ಗದರ್ಶಿ ಮೊದಂತೆ ಸಮಾಜದ ಮಾರ್ಗದರ್ಶಕನಾತ. ಒಳತು-ಕೆಡಕು, ಸತ್ಯ ಅತತ್ಯಗಳ ಯಥಾರ್ಥ ಜ್ಞಾನವನ್ನು ಅಧ್ಯಯನ ಮೂಲಕ ತಿಳಿದುಕೊಂಡು, ತನ್ನ ಸಮಾಜವು ಸರಿದಾರಿ ತಪ್ಪದಂತೆ ಮುಂದುವರಿಸಿಕೊಂಡು ಹೋಗುವ ಧೀರ ವೀರ ಯೋಧನತನು. ಅದರೆ, ಇಂತಹ ಸಾಹಸ ಪರಿಶ್ರಮಶೀಲರ ನಮ್ಮಲ್ಲಿ ಎಷ್ಟು ಜನರಿದ್ದಾರೆ?

ಇದರ ಹೊಣೆಯನ್ನು ಕೇವಲ ಸಾಹಿತ್ಯಕಾರರ ತಲೆಯ ಮೇಲೂ ಹೊರಿಸುವುದಿಂದು ಪಾಪವಾದೀತು. ಕೋಣವನ್ನು ನಾವು ಬಯಸುವಲ್ಲಿಗೆ ಹೊಡೆಯಬೇಕಾಗಿರುವುದು ನಿಜ; ಅದರೆ, ಕೋಣ ಅತ್ತ ಹೋಗದಿದ್ದರೆ, ಅದು ಹೋದಲ್ಲಿಗಾದರೂ ಬಡೆಯುವುದು ಬೇಕಷ್ಟೆ. ಇದನ್ನೇ ನಾವು ಆಡಳಿತಾತ್ಮಕ ಪರಿಸ್ಥಿತಿಯೆಂದು ಕರೆಯುವುದಾದರೆ, ಇಂದು ನಮ್ಮ ಸಾಹಿತ್ಯಕಾರರೂ ಆಳಹಾಗು ಕಾಣಿದ್ದಾರೆ. ಜನನಿಜ್ಯುಂತಹ ಕೃತಿಗಳನ್ನು ನಿರ್ಮಿಸುವುದಕ್ಕಿಂತ ದುರ್ಗಾರ್ಗಗಾಮಿಯಾಗುವುದಕ್ಕಿಂತ ದುರ್ಗಾರ್ಗಗಾಮಿಯಾಗುವುದು ಸುಲಭ ಮತ್ತು ಕ್ಷಿಪ್ರವೆಂಬುದರಿಂದ ಓದಿ ಎಸೆಯಬಹುದಾದ ಅತ್ಯಲ್ಪಾಯುಷ್ಯ ಕಾದಂಬರಿಗಳ ಕಾದಂಬರಿ ಹೀರುವುದಲ್ಲೇ ಜನತೆ ನಿರಾಗ್ಯವಾಗಿದೆ. ಅದರಿಂದ 'ಕಾದಂಬರಿ'ಯ ಬಗ್ಗೆ ಒಬ್ಬ ಮಿತ್ರರು ವ್ಯಾಖ್ಯೆ ಮಾಡಿದ್ದಾರೆ. ಓದುಗ 'ಕಾದ' ಅದರೆ, ಅಚ್ಚಾಗಿ ಹೊರಗೆ ಬಂದ ನಂತರ ಓದುಗ ಅದು 'ಬರೆ'!

ಇಂತಹ ಬಡತನ ಹೋಗಬೇಕಾದರೆ, ಜನತೆಯು ಮನಸ್ಸು ಅವರ ವಿಚಾರ—ಶಕ್ತಿ ಎತ್ತರಕ್ಕೆ ನಟ್ಟಿಗಲ್ಲಿಂಬೇಕು. ಇಂತಹ ಎತ್ತರಕ್ಕೆ ತರುವ ಹೊಣೆ ಯಾರದ್ದು? ಸರಕಾರದ ಶಾಸನದಿಂದ ಆಗುವುದಲ್ಲ ಇದು. ಪ್ರಾಯಃ ಸಮಾಜ ಶಿಕ್ಷಣಕಾರ ಸಾಹಿತ್ಯಕಾರರೂ ಅವರನ್ನು ಪೋಷಿಸುವ ಸ್ಥಾಪಕರೂ ಈ ಕಡೆಗೆ ಗಮನ ನೀಡಬೇಕೆನಿಸುತ್ತಿದೆ. ನಾಲ್ಕಕ್ಷರ ಕಲಿತವರೆಲ್ಲರೂ ಕವಿಗಳೋ ಬರಹಗಾರರೋ ಆಗುವ ಇಂದಿನ ನವ್ಯ ಕವಿಗಳ ಕಾಲದಲ್ಲಿ ವ್ಯಾವಾರ ದೃಷ್ಟಿಯ ಪ್ರಕಾಶಕರು ಸುಮ್ಮನುಳಿದಾರೆ? ಒಂದು ವೇಳೆ ಕಾವು ಉತ್ತಮ ಸಾಹಿತ್ಯಗಳಿಗೆ ಮೂಲ್ಯ ಆಸ್ಪದ ಕೊಡುತ್ತೇವೆಯೆಂದವರು ಸುಮ್ಮನಾವರು. ಆದರೆ, ನಮ್ಮ ಕೃತಿ ಅಚ್ಚು ಆವದನ್ನು ಕಂಡೇ ಸ್ವರ್ಗ ಸುಖ ಅನುಭವಿಸುವ ಮಹಾ ಲೇಖಕರು ಭಗೀರಥ ಪ್ರಯತ್ನದಿಂದ, ತಾವೇ ಪ್ರಕಾರರಂಗ ನಿಲ್ಲುತ್ತಾರೆಂದಾಗ ಮುದ್ರಣಾಲಯದವರೇ ಸತ್ಯಾಗ್ರಹ ಹೊಡ ಬೇಕಾದೀತು.

ಎಲ್ಲಿ ಪುರೈಸುವ ಅಗತ್ಯವಿದೆಯೋ ಅಲ್ಲಿ ಅಪನ್ನು ತೋರಿಸದೆ, ಅನಗತ್ಯವಿರುವಲ್ಲಿ ತಮ್ಮ ಶಕ್ತಿ, ವಿಚಾರ, ಸಂಪತ್ತಿಯನ್ನು ಅಪವ್ಯಯ ಮಾಡಿ, ಜನತೆಯನ್ನೂ ಕೆಡಿಸುವವರು ನಿಜಕ್ಕೂ ಸಮಾಜ ದ್ರೋಹಿಗಳು. ಇವರಿಗೆ ಸಮಾಜವೇ ಶಿಕ್ಷಕನಾಗಬೇಕು. ಪ್ರಜಾಪ್ರಭುತ್ವದಲ್ಲಿ ಜನತೆಯಂತೆ ಪತ್ರೆ. ಅತೆಯೇ ಜನತೆ ಬಯಸಿದ ಸಾಹಿತ್ಯ ಸೃಷ್ಟಿ ಮಾಡುತ್ತಾನೆ ಸಾಹಿತಿ ಅದೆಂದರಿಂದ ಜನತೆಯು ಸಾಹಿತ್ಯ ಕಾರನಿಂದ ಪಾಠ ಕಲಿಯುವಂತೆ ಕೆಲವೊಂದು ಕೃತಿಕಾರರಿಗೆ ಕಲಿಸುವುದೂ ಅಗತ್ಯವಾಗಿಬಹುದು.

ಸಾಹಿತ್ಯಕಾರ—ಜನತೆ ಎರಡೂ ಪರಿಶ್ರಮ ಶೀಲವಾದ್ದು, ಉನ್ನತ ವಿಚಾರಪರವಾದರೆ ಮಾತ್ರ ಉತ್ತಮ ಸಾಹಿತ್ಯ ಸೃಷ್ಟಿಯೂದೀತು; ಭಾಷಾ ಸಾಹಿತ್ಯದ ವಿವಿಧ ಪ್ರಾಕಾರಗಳೂ ಬೆಳೆದು, ಬಂದಾವು ನಮ್ಮ ನಮ್ಮ ಭಾಷೆಗಳ ಹೆಸರಾದಲ್ಲಿ ನಾವು ದೊಣ್ಣೆಯೆತ್ತುವದಕ್ಕೆ ಸಿದ್ಧತೆ ನಡೆಸುತ್ತೇವೆಯೇ ಹೊರತು, ಅದರಲ್ಲಿ ಹೊಸ ಪ್ರಾಣ ತುಂಬಿ ನಾವಸ ಮಾಡುವುದಿಲ್ಲ ನನಗೆ ವಿಚಾರಪೂ ಸಾಹಿತ್ಯಬೇಕು ಎಂದು ಬಯಸುತ್ತೇನೆ; ಅದರೆ, ಪಿವುಗಳ ರಚನೆಗೆ, ಸ್ವಕಾರನಕ್ಕೆ ಮಾತ್ರಟಕ್ಕೆ ಅತ್ಯಯನಕ್ಕೆ ನಾವು ಅವಿಶ್ರಾಂತ ಶ್ರಮವಹಿಸುತ್ತೇವೆ!

ನಮ್ಮ ಭಾಷೆಯು ಮೇಲಿನ ಅಭಿಪೂರ್ಣವು ನಾಳ್ಕನ್ಯಯ ಎತ್ತರಾಗುವಂತೆ ಮಾಡಲು ಪ್ರತಿಯೊಂತರಾಳದಿಂದ ಬರಬೇಕು. ಯಥಾರ್ಥವಾಗಿರಬೇಕು; ಅತಿರೇಕತ್ವಕ್ಕೆ ಹೋಗಬಾರದು. ಉನ್ನತ ವಿಚಾರಗಳನ್ನು ಅಂತರಾಳಕ್ಕೆ ಇಳಿಯುವಂತೆ ಪ್ರಜ್ಞೆಯನ್ನೂ ಬೆಳಸಿಕೊಳ್ಳ

ರಕ್ಷಿಸುವ ಸಾಮರ್ಥ್ಯ ಇದೆಯೇ ನಮ್ಮ ಸೈನ್ಯಕ್ಕೆ?

(೩ನೇ ಪುಟದಿಂದ)

ಅವರಿಗೂ ಪೆಟ್ಟು ಬಿದ್ದಿರುವದು ಜ್ಞಾಪಕಕ್ಕೆ ಬರಬಹುದು. ಒಮ್ಮೆ ಕೇವಲ ಪ್ರೇಕ್ಷಕನು ಮಾತ್ರ ಇದ್ದಾರೆ. ಅವರಿಂದೇನೂ ಮಾಡಲು ಸಾಧ್ಯ ಇರುವದಿಲ್ಲ.) ಅನೇಕನಿನವರಂತೂ ಮೊದಲೇ ಎಚ್ಚರಿಕೆ ಯನ್ನಿತ್ತಿರುವರು—ಭಾರತದ ಮೇಲೆ ಆ ಕ್ರಮಣ ನಡೆಸಿದ್ದಲ್ಲಿ ಸಹಾಯವನ್ನು ನಿ ರೀಕ್ಷಿಸಲಾಗುವದೆಂದು. ಎಮೇರಿಕದಿಂದ ಯ ವಿಯು ಬಯತ್ತಿರುವ ಪಣದ ಹೊಳೆಯೇ ನ ತೋರು ಇರುವದಿಲ್ಲ. [ಇಂಗಿದ್ದರೂ ಚೈನಾದೊಂಗನೇ ಹೋಗಿ ಪಾಕಿಸ್ಥಾನ ವು ಭಾರತದ ವಿರೋಧ ಕಾರಿಗೆ ಸಹಿಸಾ ಕಿ ಬಂದಿರುತ್ತದೆ. ಕದು ಕಮ್ಯೂನಿಸ್ಟರ ನ್ನು ಎದುರಿಸುವ ವಿಧಾನವೇನು? ಅವರ ಕೈ ಹಿಡಿದ-ಕೊಂಡು ಅವೇರಿಕಕ್ಕೆ ಲತ್ತೆ ಕೊಡುವೆನೆಂದು ಬೆದರಿಸಿ ವ ರೀತಿಯಲ್ಲ ವೇನು? ಭಾರತಕ್ಕೆ ನೆರವನ್ನೀಯಲು ಕೂಡ ಬೆಂದು ಅಮೇರಿಕಕ್ಕೆ ಹೇಳುತ್ತ ಬರುತ್ತಿ ದೆ, ಪಾಕಿಸ್ಥಾನ]

ಈ ಮೂರು ಕಾರಣಗಳನ್ನು ಒಪ್ಪಿ ಕೊಂಡಲ್ಲಿ 'ರಕ್ಷಣಾ ಮುಂಜಾಗರೂಕತೆ ಯ ಆವಶ್ಯಕತೆ ಏನೆಂಬುದನ್ನು ಪ್ರಜೆಗ ಳು ಖಂಡಿತ ಕೇಳುವರೆಂಬ.ದನ್ನು ಮುಂ ಚೆಯೇ ತಿಳಿದ.ಕೊಂಡು ಜ| ತಿಮ್ಮಯ್ಯ ಅದಕ್ಕೂ ಕಾರಣ ಕೊಡುತ್ತಾರೆ. ಅವರ ಅಭಿವ್ಯಾಯಕ್ಕೆ ಅಡಿಪಾಯವಾಗರೋ ಪಾಕಿಸ್ಥಾನದಲ್ಲಿರುವ ಸೈನಿಕ ಸರಕಾರ. ಆದರೆ ನಾಳೆ ಕೂಡಾ ಆದು ಮುಂದುವರಿಯುವದೆಂದು ಹೇಳಲು ಸಾಧ್ಯವಿಲ್ಲ. [ಈಗ ನ್ಯಾಯಾಲಯವನ್ನಿತ್ತಿರುವ ತೀರ್ಪೆ ಅಲ್ಲಿಗೆ ಕಂಠರೇಖವನ್ನಂಟಿಸಾಡಿರುತ್ತದೆ] ರಾಜಕೀಯ ವಾದಲ್ಲಾಗಲೀ, ಆರ್ಥಿಕ ಅಂಗದಲ್ಲಾಗಲೀ ವಿರುದ್ಧೋಗಳುಂಟಾಗ ಲ ಸಹ್ಯವೆನೆ. ಆಗ ಜಡಳಿತ ಒದಲಾಗ ಬಹುದು ಮತ್ತು ಆತಳತೆ ರು ಲಗಾಮು ಮತಾಂಧರ ಕೈಯಲ್ಲಿ ಸಿಕ್ಕಿ ಬಿಟ್ಟರೆ ತವ ರು ಚೆಯಾದಿ ಸಿವ ಸಾತ್ರಿಯನ್ನು ಪಾ ಪಡಿಸಿಕೊಳ್ಳಲು ಸಾಧ್ಯವೆಂದೆ. ಸೇನಾಬ ಲವನ್ನು ಉಪಯೋಗಿಸಿ ಒಕ್ಕುದು.

ಆದೂ ಅಲ್ಲದೆ ಭಾರತದ ದೃಷ್ಟಿಯಿಂದ ಪೂರಕವಿಕ ಕಾರಣಗಳೂ ಇವೆ ಇಂದಲ್ಲವಾ ದರೂ ನಾಳೆ ಪಾಕಿಸ್ಥಾನಕ್ಕೆ ನಮ್ಮ ಮೇ ಲೆಕಾಲಾಗಕ್ಕೆ ಬರುವದು ನಿಶ್ಚಿಯವೆಂಬ ಯೋಜನೆ ಹಲವಾರು ಜನರಲ್ಲಿ ಆಳವಾ ಗಿ ಬೇರೂರಿಬಿಟ್ಟಿರುತ್ತದೆ ಅವರ ಭಯ ನಿವಾರಣೆಗಾಗಿ, ಅವರಿಗೆ ಸ್ಪಷ್ಟಪಡಿಸಲು ಧೈರ್ಯವಿಲ್ಲದೆ ಬಲಶಾಲೀ ಸೇನೆಯ ನ್ನು ಸಿದ್ಧಪಡಿಸಿಟ್ಟುಕೊಳ್ಳಬೇಕು. ಯು ದ್ಧವೆಂದಲ್ಲಿ ಒಡನೆ ಸಿಕ್ಕಿರ ಒಂದಿಷ್ಟು ಜ ನರಿಗೆ ಯಾವ ಯಾವದೋ ಆಯುಧಕೊ ಟ್ಟು ಕಳುಹಿಸಿದಲ್ಲಿ ಈಗಿನ ಕಾಲದಲ್ಲಿ ನ ಡೆಯುವಂತಿಲ್ಲ. ಪಾಕಿಸ್ಥಾನಿಗಳ ಬಲ, ಆತ್ಯಾಧುನಿಕ ಆಯುಧಗಳ ಎದುರಿಗೆ ಬ ಡ ಭಾರತೀಯ ಸರಳ ಸೈನಿಕರು-ಗೂರಿ ಲ್ಲಾಗಳಾದರೂ-ನೂಡುವದೇನು?

ಚೈನಾದ ಆಯುಧ ಬಲ, ಸೇನಾ ಬಲ ನಮ್ಮದಕ್ಕಿಂತ ಬಲಶಾಲಿ ಇದೆ. [ಇದು ನೂರು ಪಾಲೆಂದೇ ಜ| ತಿಮ್ಮಯ್ಯನವರು ತಿಳಿಸುತ್ತಾರೆ] ಅವರಿಗೆ ರಷ್ಯಾದಿಂದ ಸ ಹಾಯ ಬರುತ್ತಿದೆ. ಹಾಗಿರುವಾಗ ಅಲ್ಲ ಹೋಲಿಕೆಗೆ ಎಡೆಯೇ ಇಲ್ಲ. ಇದು ಇಂದಿ ನ ಮಾತು. ರಾಜಕಾರಣಿಗಳಿಗೆ ನಮ್ಮ ಸರಕ್ಷಣೆಯ ಭದ್ರತೆ ಹೇಗೆ ಸಾಧ್ಯವೆಂ ಬುದನ್ನು ಕಂಡುಕೊಳ್ಳಲು ಸಾಧ್ಯವಿದೆ.

ಹಾಗೆಂದೊಡನೆ ನಾವ್ ತಲೆಯ ಮೇ ಲೆ ಕೈ ಇಟ್ಟುಕೊಂಡು ದೊಪ್ಪನೆ ಕುಳಿತು ಕೊಳ್ಳಬೇಕೆಂದಲ್ಲ. ಪುದ್ಧವಶಾತ್ ಗಡಿ ಪ್ರದೇಶವು ನಮ್ಮ ರಕ್ಷಣೆಗಾಗಿ ನಿರ್ಮಿಸ ಲ್ಪಟ್ಟಿರುವ ಪಣತೆ ಇದೆ ಅಲ್ಲಿ ಹಿನೂಲಯದ ತಿಳಿ ರಗಳಿವೆ. ವರ್ಷದ ಆರು ತಿಂಗಳುಗಳಲ್ಲಿ ಅಲ್ಲಿರುವ ಗುಡ್ಡಗಾಡು ಮಾರ್ಗಗಳಲ್ಲಿ ಸಂ ಚರಿಸಲು ಸಾಧ್ಯ ಇರುವದಿಲ್ಲ. ಉಳಿದ ಸಮಯದಲ್ಲೂ ಮನುಷ್ಯರು ಹಾಗೂ ಸ್ತ್ರಾಣಿಗಳು ಮಾತ್ರ ಹೋಗಲು ಸಾಧ್ಯವಿ ದೆ. ಆದುದರಿಂದಲೇ ಉತ್ತಮ ಸಾಧನಗಳ ಲಭ್ಯರೂ ಅವನ್ನು ಚೈನೀಯರಿಗೆ ಉಪ ಯೋಗಿಸಲಿಕ್ಕಾಗದೆ ಹೋದದ್ದು.

ದುರದೃಷ್ಟವಶಾತ್ ಕೆಲವೆಡೆಗಳು ನಿ ರ್ಜನ ಪ್ರದೇಶ ಇವೆ. ಅಲ್ಲಿ ಊಣಲು ಏನೂ ಸಿಗುವಂತಿಲ್ಲ. ಅಂತಹ ಸ್ಥಳಗಳಲ್ಲಿ ಹೇಸರ ಕತ್ತೆಗಳನ್ನಾದರೂ ಕೊಂಡೊ ಯ್ಯುವದೆಂತು? ಆಲ್ಲಿ ರಸ್ತೆ ನಿರ್ಮಾಣ ಕಾರ್ಯ ಮುಂದುವರಿಯುತ್ತದೆ. ಆದರೆ ಅ ಲ್ಲಿ ಜನವಸತಿ ಇಲ್ಲದ ಕಾರಣ ಶತ್ರುವಿರುದ್ಧ ಸೈನಿಕರಿಗೆ ಆಹಾರ, ಬಟ್ಟೆ ಬರೆಗಳ ಕೊರತೆ ಯುಂಟಾಗುವದು ವಿಚಿತ್ರವೇನಲ್ಲ. ಉಳಿದಿರುವ ಮಾರ್ಗ ಆಕಾರ ಮಾರ್ಗ.

ಜ| ತಿಮ್ಮಯ್ಯ ಹಾಗೂ ಡಾ| ಸೀತಾ ರಾಮರ ಅಭಿವ್ಯಾಯದಂತೆ ಸದ್ಯ ಪಾಕಿ ಸ್ತಾನ ನಮ್ಮೊಡನೆ ಯುದ್ಧಕ್ಕೆಬರುವದಿಲ್ಲ ವೆನ್ನಬಹುದು. ಆದರೆ ಚೈನಾ ಪ್ರೇರಣೆ ಯಿಂದ ಇತ್ತಪಾಕಿಸ್ತಾನ ನುತ್ತಿಗೆ ಹಾಕಿ ಲಿಕ್ಕಿಲ್ಲವೆನ್ನುವದು ಕಷ್ಟ ಹಿಂದೆ ಅವರಾಗಿ ಯೇ ರಂಪಿತ್ತಿ ಕೊಂಡು ಬಂದಿರುವ ದಾ ಖಲೆ ಇರುವದರಿಂದ ಈ ಸಂದರ್ಭವನ್ನು ಅವರು ಹಾಳು ಮಾಡಿಕೊಳ್ಳಲಾರರು. ಚೈನಾದೊಡನೆ ಅವರು ಆ ಕುರಿತು ಸ್ಪ ಷ್ಟವಾಗಿ ಮಾತುಕತೆ ನಡೆಸಿರಬಹುದು.

ಆಕ್ರಮಣಗಾರರನ್ನಿದುರಿಸಲು ಈಗಿ ರುವ ಸೈನ್ಯಕ್ಕೆ ಬಹಳ ಕಷ್ಟವೆನ್ನುವ ಮಾ ತನ್ನು ಜ|| ತಿಮ್ಮಯ್ಯನವರು ಸರಿಯೂ ಗಿ ಸೂಚಿಸಿದ್ದಾರೆ. ಅಂದರೆ ನಮ್ಮ ಸೇನೆ ಸೇನಾಧಿಕಾರಿಗಳು ಪ್ರಯೋಜನ ಇಲ್ಲ ವೆಂದಲ್ಲ ರಕ್ಷಣಾ ಸಚಿವ ಚವ್ಹಾಣರು ತಿ ಳಿಸಿರುವಂತೆ ನಮ್ಮ ಸೇನೆ, ಸೇನಾಧಿಕಾರಿ ಗಳು ಧೈರ್ಯಶಾಲಿಗಳೇ ಇದ್ದಾರೆ. ಆದ ರೆ ಏನೋ ರಾಜಕೀಯದ ಗೂಬೆ ಅಶ್ವಿ ತ ಲೆ ಹಾಕಿರಬಹುದು. ಇನು ಪಕ್ಷದೊಳಗೆ ಗುಂಪು ಕಾರುಬಾರು ಅರಂಭವಾದಾಗ ನಡೆಯುವ ರೀತಿ. ಕೇವಲ ತಮ್ಮ ಸ್ಥಾನ ದ ರಕ್ಷಣೆಗಾಗಿ ಯಾರೂ ಹೋರಾಟಿ ನ ಡೆಸದೆ ತಮ್ಮ ದೇಶದ ರಕ್ಷಣೆಗಾಗಿ ಸಿ ದ್ಧರಾಗಬೇಕು. ಸೇನಾ ಬಲವನ್ನು ಹೆಚ್ಚಿಸಿ ಕೊಳ್ಳಬೇಕು, ಅತಾ ಧುನಿಕ ಆಯುಧ ಸಲಕರಣೆಗಳನ್ನು ಪಡೆದುಕೊಳ್ಳಬೇಕು. ಅವು ಯಾವ ದೇಶದಿಂದ ಬಂದರೂ ಸ್ವೀ ಕರಿಸಿಕೊಂಡು ಧನ್ಯನಾದ, ಕೃತಜ್ಞತೆಗಳ ನ್ನರ್ಪಿಸಲೇ ಬೇಕು. ಆ ಕೊಡುಗೈಯ ಹಿಂದೆ ರಾಜಕೀಯದಂಟು ಇರಬಾರದು. ಅನೇರಿಕದಿಂದ ಸಹಾಯ ತೆಗೆದುಕೊಂಡ ಲ್ಲಿ, ರಷ್ಯಾಕ್ಕೆ ದೋಷ ಬರುವದೆಂದೂ, ರ ಷ್ಯಾದಿಂದ ತೆಗೆದ.ಕೊಂಡಲ್ಲಿ ಅಮೇರಿಕಕ್ಕೆ ಅಸಮಾಧಾನವಾಗುವದೆಂದೂ ಸುಮ್ಮಗಿ ದ್ದಲ್ಲಿ ನನ್ಮುಗತಿ ಏನು? ರಷ್ಯಾವೂ ಏನಿ ದ್ದರೂ 'ಸಹೋದರ ರಾಷ್ಟ್ರ'ಕ್ಕೆ ಕೆ ಡದೆ 'ಮಿತ್ರ ರಾಷ್ಟ್ರ'ಕ್ಕೆ ಕೊಡಲಾರದು, ಅ ದಾಗಲೇ ಅಮೇರಿಕವು ಪಾಕಿಸ್ಥಾನಿಗಳಿಗೆ ಸಹಾಯವಿತ್ತಿರುವದರಿಂದ, ಭಾರತಕ್ಕೆ ಸಹಾಯ ಮಾಡಿದಲ್ಲಿ ಪಾಕಿಸ್ಥಾನಿಗಳಿಗೆ ಕೋಪ ಬಂದು ಅವರು ತಮ್ಮಿಂದ ದೂರ ಹೋಗುವರೆಂಬ ಆಲೋಚನೆಯಿಂದಿದ್ದ ಕ್ಕಿಂದ್ದಂತೆ ಭಾರೀ ಪ್ರಮಾಣದ ಸಹಾಯ ಕ್ಕೆ ಅಮೆರಿಕವು ಬರುವಂತಿಲ್ಲ ನನ್ಮು ರಾ ಜಕೀಯ ವಾತಾವರಣವೂ ಹಾಗೆಯೇ ಇದೆ. ಚಿಕ್ಕ ರಾಷ್ಟ್ರಗಳತ್ತ ನಾವು ದೃಷ್ಟಿ ಹರಿಸಬಹುದು.

—ತಿನಕಂಕರ ಮುದ್ರಾಸು

ವಿದ್ಯಾರ್ಥಿಗಳ ಕೈಪಿಡಿ

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಟ್ಟಿಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಐದೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉದಾಹರಣೆಯುಕ್ತ, ವಿದ್ಯಾರ್ಥಿಗಳಿಗೂ, ವಿಶೇಷ ಸಪಕಾರಿ.
ಬೆಲೆ ರೂ 1-4-0 (1=25).

ಸೂ. ಸೂ.—ಅಚಾಯಿ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯರ್ಡರು ಮಾಡಿದರೆ ಪುಸ್ತಕ ರವಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮುಂಗಳೂರಲ್ಲಿ ಶ್ರೀನಿವಾಸ ಬುಕ್ಸ್, ಸ್ಕೂಲ್ ಬುಕ್ ಡಿಪೊ
ಕೆನರಾ ಕೊಆಪರೆಟಿವ್ ಬ್ಯಾಂಕ್ ಲಿ., ಇಂಡಿಯನ್ ಇಂಡಸ್ಟ್ರಿಯಲ್ಸ್ ಹೌಸ್, ವಿಜಯಸೇಲ್ಸ್ ಇವರಲ್ಲಿ
ಮಂ, ಸುಳ್ಯದಲ್ಲಿ ಸೊಸ್ಯಲರ್ ಸ್ಟೋರ್ಸ್ ವಿಜಯನಿಯಲ್ಲಿಯೂ ದೊರೆಯುತ್ತವೆ.

● ಅಮೃತ ಬಿಂದು ●

ಬಯಕೆರಹಿತವಾಗ ಇಡೀ ಜಗತ್ತು ದೊ ರೆತರೂ ತಾಲವೆಂಬವನಿಗೆ ತತ್ತ್ವಗ ಅರಿವು ಸ್ಥಳ ನಾಕಾಗುತ್ತದೆ.

ಒಳಹೊಕ್ಕು ಮುಳುಗಿ ಹುಡುಕುವವ ನಿಗೆ ಸತ್ಯದ ಮುತ್ತು ನಿಸ್ಪಹ ಮೇಲೆ ನಿಂತು ನೋಡುವವನಿಗೆ ತೇಲ ತ್ತಿರುವ ಅಸ ತ್ಯದ ತರಗೆಲೆ ಮಾತ್ರ!

ಒಮ್ಮೆ ತಾಗಿದ ಗಲ್ಲಿಗೆ ಪುನಹ ಕಾ ಲ್ತಾಗಿಸಿಕೊಳ್ಳುವವನು ಅನುಭವದಿಂದ ಅಂತು ಮುಂದಿರಿಯದ ಮೂರ್ಖ.

ತಪ್ಪು ಮಾಡುವದು ಮನುಷ್ಯ ಸ್ವಭಾ ವ. ಆದರೆ ಮಾಡಿದ ತಪ್ಪನ್ನೇ ಪುನಹ ಪುನಕೆ ಮಾಡುವದು ಪಿಶಾಚಿ ಸ್ವಭಾವ.

ಕಡುಕು ಮತ್ತು ಒಳತೆಂಬುದು ದೇವ ರ ಎಡ ಮತ್ತು ಬಲ ಇದ್ದಂತೆ. ದೇವರಿಗೆ ಎರಡೂ ಒಂದೇ. ಮನುಷ್ಯನಿಗೆ ಮಾತ್ರ ಅವುಗಳಲ್ಲಿ ಭೇದ.

ದೇವರು ಒಳ್ಳೆಯವನೆಂಬ ಮಾತು ಎ ಷ್ಟು ಸತ್ಯವೋ, ಯಾರೂ ಬದಲಾಗದಷ್ಟು ದುಷ್ಟರಲ್ಲ ಎಂಬ ಮಾತೂ ಅಷ್ಟೇ ಸತ್ಯ.

ಕೆಸರೆತ್ತಿ ಎಸೆಯುವದು ಬೇಡ. ಎಸೆ ಯುವದರಲ್ಲಿ ಜಯ ದೊರೆತರೂ ಕೈ ಕೆ ಸರಾಗುವದನ್ನು ತಪ್ಪಿಸಲಾರೆ.

ಕಳ್ಳನು ಬೆಳಕನ್ನು ದೂಷಿಸುತ್ತಾನೆ. ಸುಳ್ಳುಗಾರನು ಸತ್ಯವನ್ನು ವಿರೋಧಿಸು ತ್ತಾನೆ.

ನೂರುಬಾರಿ ಕಿವಿಯಲ್ಲಿ ಕೇಳಿದ್ದರೂ ಕೊಡ ಒಂದು ಬಾರಿ ಕಣ್ಣಿನಲ್ಲಿ ನೋಡಿ ದ್ದಕ್ಕೆ ಸಮನಾಗದು.

ಮೂಡಿ ತೋರಿಸುವ ಮೂದರಿ ಶಾಲೆ ಯಲ್ಲಿ ಒಂದುದಿನ ಕಲಿಯುವದನ್ನು ಗೂಡಿ ಬೋಧಿಸುವ ಶಾಲೆಯು ಒಂದು ವರ್ಷದ ಲ್ಲೂ ಕಲಿಯಲಾಗುವದಿಲ್ಲ.

ಇರುವೆಗಿಂಥಾ ದೊಡ್ಡ ಬೋಧಕನಿಲ್ಲ. ಏಕೆಂದರೆ ಅದು ಏನನ್ನೂ ಬೋಧಿಸದೆ ಎ ಲ್ಲವನ್ನೂ ಮಾಡಿ ತೋರಿಸುತ್ತದೆ.

ಓದಿ ಬೋಧಿಸುವದನ್ನು ಕಲಿಯಲು ವಿದ್ಯೆಬೇಕು. ಮಾಡಿ ತೋರಿಸುವದನ್ನು ಕಲಿಯಲು ಕಣ್ಣು ಸಾಕು.

ಕಣ್ಣು ತನ್ನನ್ನು ತಾನು ನಂಬುವ ಅತ್ಯ ವಿಶ್ವಾಸಿ ಕಿವಿ ಇತರರನ್ನು ನಂಬುವ ಪ ರಾವಲಂಬಿ.

ಭಾರ್ಯಾ ರೂಪವತೀ ಶತ್ರು

(ಎರಡನೇ ಪುಟದಿಂದ)

ಳು. ಮಧುಸೂದನನ ವಧುವನ್ನು ನೋಡಲು ಹೋದಾಗ ಧರಿಸಿದ ಆಕರ್ಷಕ ಉಡುಪು ಆತ ಶ್ರೀಮಂತನೆಂಬ ಭ್ರಮೆ ಹುಟ್ಟಿಸಿತ್ತು. ಹೆಮ್ಮೆಯಿಂದುಬ್ಬಿಹೋಗಿಬಿಟ್ಟಿದ್ದಳು. ಇತ್ತೀಚೆಗಂತೂ ಮಹಿಳಾ ಸಮಾಜ, ಸಭೆ ಮೊದಲಾದುವುಗಳಲ್ಲಿ ಭಾಗವಹಿಸಲಾರಂಭಿಸಿ ಅನೇಕ ಶ್ರೀಮಂತ ಮಹಿಳೆಯರೊಡನೆ ಸಂಪರ್ಕವಿರಿಸಿಕೊಂಡಿದ್ದಳು. ಎಂದ ಮೇಲೆ ಅವರ ಅಂತಸ್ತಿನಿರು ತಮ್ಮ ಬಡತನ ಅತ್ಯಂತ ಅಸಹ್ಯವೆನಿಸುವುದು ಅಶ್ಚರ್ಯವೇನಲ್ಲ. ಅನೇಕ ಶ್ರೀಮಂತ ಮಹಿಳೆಯರ ಥಳಕು ಬೆಳಕಿನ ಬಣ್ಣ ಬಣ್ಣದ ಉಡುಪಿನ ಶೋಭೆಯನ್ನು ನೋಡುತ್ತಲಿದ್ದ ಗೀತಾಳಿಗೆ ತಾನೂ ಅವರಂತೆಯೇ ಸಿಂಗರಿಸಿಕೊಳ್ಳಬೇಕೆಂಬ ಆಸೆ ಸಾಮಾನ್ಯವಾಗಿಯೇ ಬಂಟಾಗುತ್ತಿತ್ತು. ಆದರೆ ತನ್ನ ಆ ಎಲ್ಲ ಆಸೆ, ಆಕಾಂಕ್ಷೆ ಬರಿಯ ಕನಸಾಗಿಯೇ ಉಳಿದೀತೆಂಬ ಅರಿವುಂಟಾದಾಗ ನಿರಾಸೆ, ಸಿಟ್ಟು ಅವಳಲ್ಲಿದ್ದ ಅಲ್ಪ ಸ್ವಲ್ಪ ವಿವೇಕವನ್ನೂ ಮಣ್ಣಾಗೂಡಿಸುತಿತ್ತು. ಆಗ ಆಕೆಗೆ ತನ್ನ ಮನೆ, ಪತಿ ಎಂಬ ಆದರ, ವಿಶ್ವಾಸಗಳೇನೂ ಉಳಿಯುತ್ತಿರಲಿಲ್ಲ. ಬದಲಾಗಿ ತಿರಸ್ಕಾರ, ಕ್ರೋಧ, ಜುಗುಪ್ಸೆಗಳೇ ಅತಿಯಾಗಿ ಆಕೆಯನ್ನು ವಿಚಾರ ಶೂನ್ಯಳನ್ನಾಗಿ ಮಾಡುತಿತ್ತು. ಪರಿಣಾಮವಾಗಿ ಮಧುಸೂದನ ಮದುವೆಯಾದ ಒಂದೆರಡು ತಿಂಗಳುಗಳೊಳಗೇ ದಾಂಪತ್ಯ ಜೀವನದ ಕಹಿಯ ಗುಟುಕನ್ನು, ನುಂಗಲಾರಂಭಿಸಿದ್ದ. ಬಡತನದ ಮೇಲೆ ಸಿಡಿಮಿಡಿಗೊಂಡು ಜಗಳವಾಡಿ ಮನೆಬಿಟ್ಟು ಹೊರಟು ಬಿಡುವಳು. ಆ ಮೇಲೆ ಮಹಿಳಾ ಸಮಾಜದ ಗೆಳತಿಯರ ಮನೆಯಲ್ಲೇ ಹೊಟ್ಟೆ ತುಂಬಿಸಿಕೊಂಡು ಆಫೀಂದ ಅವರೊಂದಿಗೇ ಸಭೆ, ಸಿನಿಮಾ, ವಿಹಾರವೆಂದು ದಿನದ ಹೆಚ್ಚಿನ ಸಮಯವನ್ನು ಹೊರಗೆಯೇ ಕಳೆಯುವಳು. ಇದರಿಂದಾಗಿ ನೋಟು ಬಂದ ಮಧುಸೂದನನನ್ನು ಮನೆಯಲ್ಲಿ ಪತ್ತೆನಾಡಿಸುವವರೇ ಇಲ್ಲ. ಉಪಚರಿಸುವ ವಿಚಾರವಂತೂ ದೂರವೇ ಉಳಿಯಿತು ಆದರೆ ಆ ವಿಷಯವಾಗಿ ಗೀತಾಳನ್ನು ಪ್ರಶ್ನಿಸುವ ವಿಚಾರಿಸುವ ಅಧಿಕಾರ ಮಧುಸೂದನನಿಗಿರಲಿಲ್ಲ. ಏಕೆಂದರೆ ಬಹಳ ಸುಲಭವಾಗಿ ವಾಗಿ ಅವಳ ತೀರ್ಮಾನ ಸಿದ್ಧವಾಗಿರುತಿತ್ತು.

"ನೀವಂತೂ ಕೈಹಿಡಿದು ಯಾವ ಸುಖ ಸಂತೋಷವನ್ನೂ ಕೊಡಲಿಲ್ಲ. ಗೆಳತಿಯರೊಂದಿಗೆ ಸಂತೋಷವಾಗಿರುವುದನ್ನು ಸೈರಿಸಲಾರರೇನೋ." ಇದಕ್ಕೇನೆನ್ನಬೇಕು? ಏನೆಂದರೂ ಆಕೆ ಕಿವಿಗೊಡುವ ಸ್ಥಿತಿಯಲ್ಲಿದ್ದರೆ ತಾನೇ? ಎಂದ ಮೇಲೆ ವ್ಯರ್ಥ ಕಂಠಶೋಷಣೆಯೇಕೆ?

"ಇದೇನಿದು? ಬಹಳ ಕಡವಾಗಿ ಬಂದಿರಿ? ಕೆಲಸ ಬಹಳವಿತ್ತೇ? ಬಹಳ ಸೋತಂತೆ ಕಾಣ್ತೀರಲ್ಲ! ಯಾಕೆ? ಕಾಫಿ ಕುಡೀರಿ. ಆರಿ ಹೋಗುತ್ತದೆ." ಪಕ್ಕದ ಮನೆಯ ಗೃಹಿಣಿಯ ಧ್ವನಿ ಕೇಳುತಿತ್ತು. ಸೋತ ಪತಿಯ ಮುಖವನ್ನು ನೋಡಿ ಹೃದಯ ತುಂಬಿ ಬಂದು ಉಡುವ ಮಾತುಗಳವು.

ಆದರೆ ಗೀತಾ... ಮದುವೆಯಾದ ನೊಡ ನೊದಲು ಆಕೆಯು ಮೆಚ್ಚಿನ ಸೀರೆ, ವಡವೆ, ವಸ್ತುಗಳನ್ನು ತಂದಾಗ ನಗು ಮೊಗದಿಂದ ಸ್ವಾಗತಿಸಿದ್ದಳು, ಆಗಲೂ ಆಕೆಯ ದೃಷ್ಟಿ ಆ ಆಭರಣ, ಸೀರೆಗಳನ್ನು ಧರಿಸಲು ಕೆಲಸ ಮಾಡಿ ನೋತ ಗಂಡನತ್ತ ಹರಿಯುತ್ತಿರಲಿಲ್ಲ.

ತಂದ ವಸ್ತುಗಳು ಮೆಚ್ಚಿಗೆಯಾಗದಿದ್ದರೆ ಎತ್ತಿ ಮೂಲೆಗೆಸೆಯಲೂ ಹಿಂದೆ ಮುಂದೆ ನೋಡುವವಳಲ್ಲ.

ಆದರೆ ಈಗ! ನೊದಲಿನಷ್ಟೂ ಆದರೆ ವಿಶ್ವಾಸಗಳಿಲ್ಲ ಮಧುಸೂದನ ಬಂದು ಒಂದೆರಡು ಗಂಟೆಗಳ ಮೇಲೆಯೇ ಅವಳ ಮುಖದರ್ಶನ! ಬೆಳಗ್ಗೆಯೂ ತಡವಾಗಿ ಎದ್ದು ಮಧುಸೂದನ ಆಫೀಸಿಗೆ ಹೊರಡುವ ವೇಳೆಗೆ ಬರಿಯ ಕಾಫಿಯನ್ನು ತಯಾರಿಸುವುದೇ ಪ್ರಯಾಸವೆನಿಸುತ್ತಿತ್ತು.

ಸಂಬಳ ಬಂದ ದಿನವಾದರೂ ತುಸು ಸಂತೋಷವಾಗಿರೋಣವೆಂದು ತಂದ ಹೂಮೇಜಿನ ಮುದುರಿಬ್ಬಿದೆ.

ಭಾರತಿಯು ಗಂಡ ಮಧುಸೂದನನಿಗಿಂತಲೂ ಕಡಿಮೆ ಸಂಬಳದ ಗುಮಾಸ್ತ. ಆದರೆ ವಿಚಾರಶಕ್ತಿಯುಳ್ಳ, ಸಾತ್ವಿಕ ಗುಣ ಸಂಪನ್ನಳಾದ ಪತ್ನಿಯನ್ನು ಪಡೆದ ಭಾಗ್ಯವಂತ!

ಭಾಗ್ಯವಂತ!!

ಅಭಾಗ್ಯ ತನ್ನದಾಗುವುದು ಸಾಧ್ಯವಿತ್ತು. ತನ್ನದಾಗುತ್ತಿತ್ತು. ಭಾರತಿ ಗೀತಾಳ ಅಕ್ಕ. ಈಗ ನಾಲ್ಕು ತಿಂಗಳಿಂದೀಚೆಗೆ ತಮ್ಮ ಮನೆಯ ಪಕ್ಕದಲ್ಲೇ ವಾಸಿಸುವ ದೌರ್ಭಾಗ್ಯ ಅವರದಾಗಿತ್ತು. ಭಾರತಿಯನ್ನು ನೋಡಲೆಂದು ಹೋದ ಮಧುಸೂದನ ಗೀತಳ ಥಳಕಿಗೆ ಮರುಳಾಗಿ ಸೋತು ಹೋದ ಕರಳ ಉಡುಗೆಯು, ಸಾದಾ ರೀತಿಯ, ಸಹಜ ನಡತೆಯು ನಿರಾಡಂಬರ ರೀತಿ ನೀತಿಯು ಭಾರತಿಯಲ್ಲಾವ ಆಕರ್ಷಣೆಯೂ ಕಾಣಿಸಿರಲಿಲ್ಲ.

ವರ ಗೀತಾಳನ್ನು ಮೆಚ್ಚಿ ಭಾರತಿಯನ್ನು ನಿರಾಕರಿಸಿದನೆಂಬುದನ್ನು ತಿಳಿದಾಗಲೂ ಭಾರತಿ ಅಳಲಿಲ್ಲವಂತೆ. ಮೂತ್ರವಲ್ಲ. ಮರು ಮದುವೆಯು ಸುಬ್ಬಯ್ಯನ ಕೈಹಿಡಿಯುವ ಅವಸರದ ಆಕಸ್ಮಿಕ ಸಂದರ್ಭ ಬಂದಾಗಲೂ ಗಲಿಬಿಲಿಗೊಳ್ಳದೆ ಶಾಂತ ರೀತಿಯಿಂದ ಪರಿಸ್ಥಿತಿಯನ್ನು ಇದಿರಿಸಿದ್ದಳವಳು.

ಈಗಲೂ ಅಷ್ಟೆ

ಸುಬ್ಬಯ್ಯನ ಬಾಳಿನ ಬೆಳಕಾಗಿ ಕಂಗೊಳಿಸುತ್ತಿದ್ದಳು. ಆತನ ಬದುಕನ್ನು ನಗುವ ನಂದನವನವನ್ನಾಗಿ ಮಾಡಿ ಸಂತೃಪ್ತಿಯಿಂದಿದ್ದಳವಳು.

ಆದರೆ ಗೀತಾ!

ನೆರೆಮನೆಗೆ ಒಕ್ಕಲಾಗಿ ಬಂದ ಭಾರತಿಯ ಹಿಕ್ಕೋಪ ದೇರಕ್ಕೆ ಗೊಡ್ಡು ಸಂಪ್ರದಾಯವೆಂದು ಜರೆದು ಜಗಳವಾಡಿ ಆಕ್ಕ ನೊಡನೆ ಮಾತನಾಡ ವುದನ್ನೇ ನಿಲ್ಲಿಸಿಬಿಟ್ಟಿದ್ದಳು. ತಂಗಿಯ ಸಂಸಾರದ ದುರವಸ್ಥೆಯನ್ನು ನೋಡಿದ ಭಾರತಿ ಒಳಗೊಳಗೇ ಶಂಕಿಸಿದ್ದಳು ಆದರೆ ಅವಳ ಉಪದೇಶ ಗೀತಾಳಿಗೆ ಬೇಕಾಗಿರಲಿಲ್ಲ. ಆಕೆಯು ಆಧುನಿಕ ಜಗತ್ತಿನಲ್ಲಿ ಪತಿ, ಮನೆ, ಮಕ್ಕಳು ಮುಖ್ಯವಾಗಿರಲಿಲ್ಲ. ಬೆಡಗು, ಬಿನ್ನಾಣ, ಸಭೆ, ಸಮಾರಂಭ, ಅಲಂಕಾರಗಳೇ ಅಗತ್ಯವೆನಿಸಿದ್ದವು.

ಆಗಳಿ ಹಾಕಿದ ಬಾಣಲೆನ್ನು ದೂಡಿದ ಸದ್ದು ಕೇಳಿ ಮಧು ಸೊದನನ ದೃಷ್ಟಿ ಅತ್ತ ಹರಿಯಿತು. ಸಿಂಗರಿಸಿಕೊಂಡ ಗೀತಾ ಒಳಗೆ ಬಂದವಳು ಯೋಚಿಸುತ್ತಿರುವಾಗಿ ಕುಳಿತ ಮಧುಸೂದನನತ್ತ ನೋಡದೆಯೇ ಒಳಗೆ ನಡೆದಳು.

"ಗೀತಾ..." ನಿದ್ದೆಯಿಂದೆಚ್ಚರಿಸಿದವನಂತೆ ಕರೆದನಾತ.

"ಯಾಕೆ ಕರೆದಿರೀನು?" ಎನ್ನುತ್ತಾ ಒಲ್ಲದ ಮನಸ್ಸಿನಿಂದ ಹೊರಗಡಿಕೆಯಳವಳು

"ಹೌದು ಇಲ್ಲಿ ಬಾ ಸ್ವಲ್ಪ ಕೂತ್ಕೊ."

"ನನಗೆ ನಿದ್ದೆ ಬರ್ತಿದೆ. ಬೇಗ ಹೇಳಿ" ಸಿಂತೇ ನುಡಿದಳವಳು.

"ಖಾಲಾದರೆ ಊಟ ಗೀಟ ಎಲ್ಲ ತೀರಿಸಿಯೇ ಬಂದಿದ್ದೀರಂತ ಕಾಣಿಸ್ತದೆ, ಅಲ್ವೇನೆ?"

"ಹೌದು. ನಿಮ್ಮನ್ನೂ ಹೋಟೇಲಲ್ಲೇ ಮುಗಿಸಿ ಅಂದಿದ್ದೆನಲ್ಲ? ನೂಡಿರುವಿನಿ ತಾನೆ? ಮತ್ತೆ ಇಷ್ಟು ರಾತ್ರಿ ಮೇಲೆ ಎಂತಹ ಅಡುಗೆ?"

"ಈಗ ಅಡುಗೆ ಮಾಡಿನ್ನೆಲು ನಿನ್ನೆನ್ನು ಕರೆಯಲಿಲ್ಲ ಗೀತಾ. ಆದರೆ...." ನೊಂದ ಧ್ವನಿಯಿಂದ ನುಡಿದನಾತ.

"ಏನು ಆದರೆ...?" ಬೇಕರದಿಂದ ಆ ಕಳಸುತ್ತಾ ಕೇಳಿದಳವಳು

"ಹೀಗೆ ಎಷ್ಟು ದಿನ ನೀನು ಈ ರೀತಿ ಯೊಗಿರೋದು? ಇದು ಸರಿಯೇ?"

"ಇದೆಂತಹ ವಿಚಿತ್ರ ಪ್ರಶ್ನೆ? ನಾನೇನು ಮಾಡಿದೆ?" ಆಶ್ಚರ್ಯದಿಂದ ಕೇಳಿದಳವಳು,

"ಸಾಕ್ಕು ಬಾಯಿ ಮುಚ್ಚು ಪತಿಯೊಡನೆ ಮಾತನಾಡಲೂ ಸಮಯವಿಲ್ಲದ ನೀನು ಮದುವೆ ಯಾಕಾಪೆ ಹೇಳು? ಯಾಕೆ ಮದುವೆ ಯಾದೆ? ಸಿಟ್ಟು ಬೇಸರ, ವ್ಯಥೆಯಿಂದ ಕೆರಳಿ ಕೇಳಿದನಾತ

"ಅದರಲ್ಲೇನಂತೆ? ಈಗ ವಿಜ್ಞೇದನ ಕ್ಕೂ ಆಪ್ಪದನಿವೆ ಅಂತ ಸಾವಿತ್ರಿನ್ನು ಮೇಳಿದ್ರು. ನಗುತ್ತಲೇ ನುಡಿದಳಾಕೆ.

"ಓ೦! ವಿಜ್ಞೇದನ!" ಬೆಚ್ಚಿ ಬಿದ್ದು ಕೇಳಿದನಾತ.

"ಹೌದು. ಸಂಸಾರ ಸರೀ ಹೊಂದಿಕೊಳ್ಳಲಾರದ ಮೇಲೆ ಹಾನೇ ವಿಚಾರಿಸೀ ಕಂತೆ."

"ಆಗಲಿ. ಈಗ ನನ್ನು ಸಂಸಾರ ಒಡೆಯಲು ಯಾರು ಕಾರಣ ಗೀತಾ?" ಪತಾನಾಗಿ ಪ್ರಶ್ನಿಸಿದನಾತ.

"ಕಾರಣ ಯಾರು? ನೀನೇ. ಕೈಹಿಡಿದ ಹೆಂಡತಿಯನ್ನು ಸುಖವಾಗಿ ನೋಡಿಕೊಳ್ಳಲಾರದ ಮೇಲೆ ನೀನೇಕೆ ಮದುವೆ ಯಾದಿರಿ? ಮೇಲೆ " ತರ್ಕದಲ್ಲಿ ತಾನೇ ಗೆದ್ದೆನೆಂಬಂತೆ ನಗುತ್ತಾ ಕೇಳಿದಳಾಕೆ.

"ಸುಖ! ಸಂತೋಷ!" ಕನ್ನಡಿಗನೇ ನುಡಿದ ಮಧುಸೂದನ

"ಹೌದು ನನಗೆ ನಿಮ್ಮಿಂದ ಬೇಕಾದ ಯಾವ ಸುಖ, ಒಡವೆಗಳೂ ಸಿಗುವಂತಿಲ್ಲ. ಎಂದ ಮೇಲೆ ಇನ್ನೆಂತಹ ಸುಖ, ಸಂತೋಷ! ನನಗೆ ಆಸೂವಾನಿಸೆ. ಸೀರೆ ಬದಲಾಯಿಸಿ ಮಲಗುತ್ತೇನೆ." ಎನ್ನುತ್ತಾ ಉತ್ತರನನ್ನು ನಿರೀಕ್ಷಿಸದೆಯೇ ಒಳಗೆ ನಡೆದಳಾಕೆ

ಮಧುಸೂದನ ಶೂನ್ಯ ನೇತ್ರಗಳಿಂದ ದಿಗಿಂತದತ್ತ ದಿಟ್ಟಿಸಿದ.

"ರಾತ್ರಿ ಸಿದ್ದೆನೆಟ್ಟು ಒಬ್ಬೇಡಿ ನಾಳೆ ಆಫೀಸಿಗೆ ಹೋಗ್ಬೇಕಾದ್ದು! ಹುಷಾರಿಲ್ಲದಿಲಕ್ಕ, ಇನ್ನಾದರೂ ಮಲಗಿ." ಭಾರತಿ ಪತಿಯನ್ನೆಚ್ಚರಿಸುತ್ತಿದ್ದಳು.

ಮಧುಸೂದನನ ಹೃದಯ ಅವ್ಯಕ್ತ ನೋವಿನಿಂದ ನರಳಿತು.

ಸುಬ್ಬಯ್ಯ ಸಂತೃಪ್ತಿಯಿಂದ ಭಾರತಿಯತ್ತ ನೋಡಿ ಮುಗುಳ್ನಗುತ್ತಿದ್ದ.

ಆಕೆ ಸಮಾಧಾನದ ಉಸಿರೆಳೆದಳು, ಗೀತಾಳ ಮುಖದಲ್ಲಿ ಚಿತ್ರವಿಚಿತ್ರ ಭಾವನೆಗಳು ಮಿಸುಕಾಡುತ್ತಿದ್ದವು.

—ಶ್ರೀಮತಿ ಯಶೋದಾ
ಯನ್ನಾ ಜೆನ್ನಿ, ಹಿರಿಯಡ್ಕ.



ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ. 0-13

ಜಾಹೀರಾತುಗಳಿಗೆ ಮುಂಚಿತವಾಗಿ ಹಣ ಕಳುಹಿಸಿಕೊಡಬೇಕು. ಜಾಹೀರಾತಿನ ಬಾಬಲಗಸ್ಥನಾಗಲೀ ಸಂಪಾದಕೀಯ ವಿಚಾರಗಳಿಗಾಗಲೀ ನಮ್ಮ ಪತ್ರಿಕೆಯ ಯಾವುದೇ ಪ್ರತಿನಿಧಿಯಾಗಲೀ ಜವಾಬ್ದಾರರಲ್ಲ. ಜಾಹೀರಾತಿನ ಬಿಲ್ಲಿಗೆ ಸಂಬಂಧಿಸಿದ ಹಾಗೆ ಮಾತ್ರ ಮ್ಯಾನೇಜರ್ ಜವಾಬ್ದಾರರು.

ಪತ್ರಿಕೆಗೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್, ನವಯುಗ
ಕಲ್ಸಂಕ, ಉಡುಪಿ
ದೂರವಾಣಿ ಸಂಖ್ಯೆ 2

ಸಂಪಾದಕೀಯ ವಿಚಾರಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಂಪಾದಕರು, ನವಯುಗ
ಕಲ್ಸಂಕ, ಉಡುಪಿ
ದೂರವಾಣಿ ಸಂಖ್ಯೆ 2

ಮುದ್ರಕರು, ಪ್ರಕಾಶಕರು: ಕೆ. ಸೀತಾರಾಮ ಭಟ್ಟ
ಮುದ್ರಣ ಸ್ಥಳ: ಶ್ರೀ ಲಕ್ಷ್ಮೀ ಪ್ರೆಸ್, ಕಲ್ಸಂಕ, ಉಡುಪಿ

REGD. No. B. G. 176
LICENCE No. 31
Licensed to Post without Prepayment

ಚೀನೀಯರ ಭಾರಿ ಪ್ರಮಾಣ ದಾಳಿ

(ನಿನ್ನೆ ಮುಂದುವರಿದ ಭಾಗ)

ಯೋಗಿಸಬಹುದೆಂದು ಭಾರತವು ಚೀನಾಕ್ಕೆ ಅನುಮತಿ ನೀಡಿತು. ಇದು ವಿವಾದವು ಶಾಂತಿಯುತ ಮಾರ್ಗದಿಂದ ಬಗೆಹರಿಯಬೇಕೆಂಬ ಭಾರತದ ಬಯಕೆಯ ನಿದರ್ಶನ.

೧೯೬೨ ಜೂಲೈ ೭ರಂದು ಗಡಿ ವಿವಾದ ಸಂಬಂಧವಾದ ಬಿಕ್ಕಟ್ಟು ಕಡಿಮೆಯಾಗಿ ಮಾತುಕತೆಗಳಿಗೆ ಸೂಕ್ತವಾದ ವಾತಾವರಣ ನಿರ್ಮಾಣಗೊಂಡಾಗ ಭಾರತವು, ೧೯೬೦ರಲ್ಲಿ ಭಾರತ—ಚೀನಾ ಸರ್ಕಾರಗಳ ಅಧಿಕಾರಿಗಳು ಸಲ್ಲಿಸಿದ ವರದಿಗಳನ್ನೇ ಆಧಾರವಾಗಿಟ್ಟುಕೊಂಡು ಮಾತುಕತೆಗಳನ್ನು ನಡೆಸುವ ಆಶಕ್ತಿಯನ್ನು ವ್ಯಕ್ತಪಡಿಸಿತು.

ಉಭಯ ರಾಷ್ಟ್ರ ಸರ್ಕಾರಗಳ ಅಧಿಕಾರಿಗಳ ವರದಿಯನ್ನೇ ಆಧಾರವಾಗಿಟ್ಟುಕೊಂಡು ಮಾತುಕತೆಗಳು ನಡೆಯಬಹುದೆಂದೂ ಆದರೆ ತಾವು ಆಕ್ರಮಣವಾಗಿ ವಶಪಡಿಸಿಕೊಂಡ ಭಾರತೀಯ ಪ್ರದೇಶದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲವೆಂದೂ ಚೀನಾ ಸರ್ಕಾರದವರು ತಿಳಿಸಿದರೆ.

೧೯೬೨ರ ಆಗಸ್ಟ್ ೨೦ರಂದು ಭಾರತ ಸರ್ಕಾರವು ಲಡಾಖ್ ಪ್ರದೇಶದಲ್ಲಿ ಯಥಾ ಸ್ಥಿತಿಯನ್ನು ಕಾಯ್ದುಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ಧರಿಸುವ ಸಂಬಂಧವಾಗಿ ಉಭಯ ರಾಷ್ಟ್ರಗಳ ನಡುವೆ ಚರ್ಚೆ ನಡೆಯಬೇಕೆಂದು ಸೂಚಿಸಿತು.

ಚರ್ಚೆಯ ದಿನವನ್ನು ಗೊತ್ತುಪಡಿಸುವುದಕ್ಕಾಗಿ ಕಾಗದ ಪತ್ರಗಳ ವಿನಿಮಯ ನಡೆಯುತ್ತಿದ್ದಂತೆಯೇ ಚೀನೀಯರು ಸದ್ದಿಲ್ಲದೆ ೨೦ರಂದು, ಇದು ವರೆಗೂ ಪ್ರಶಾಂತ ಅಂತಾರಾಷ್ಟ್ರೀಯ ಗಡಿಯೆಂದು ಪರಿಚಿತವಾಗಿದ್ದ ನೇಫಾ ಗಡಿಯನ್ನು ದಾಟಿ ಬಂದು ಭಾರತದ ಮೇಲೆ ದಾಳಿ ಮಾಡಿದರು.

೧೯೬೨ರ ಅಕ್ಟೋಬರ್ ೬ರಂದು ಭಾರತವು ಚೀನಾಕ್ಕೆ ಪತ್ರ ಬರೆದು ಆಕ್ರಮಣದಿಂದ ಉದ್ಭವಿಸಿದ ಹೊಸ ಪರಿಸ್ಥಿತಿಯನ್ನು ಪರಿಶೀಲಿಸಬೇಕೆಂದೂ ಸೇನೆಯನ್ನು ಅಂತಾರಾಷ್ಟ್ರೀಯ ಗಡಿಯಿಂದ ಆಚೆಗೆ ಹಿಂತೆಗೆದುಕೊಂಡು ಮಾತುಕತೆಗಳಿಗೆ ಸೂಕ್ತ ವಾತಾವರಣವನ್ನು ನಿರ್ಮಿಸಬೇಕೆಂದೂ ಮನವಿ ಮಾಡಿಕೊಂಡಿತು.

೧೯೬೨ರ ಅಕ್ಟೋಬರ್ ೨೦ರ ನಂತರವೂ ಭಾರತದ ಪ್ರಧಾನ ಮಂತ್ರಿ ಶ್ರೀ ನೆಹರೂರವರು, ಗಡಿ ವಿವಾದವನ್ನು ಹೇಗಾದರೂ ಸರಿ ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದೂ ಇಷ್ಟೇ ಮಧ್ಯಸ್ಥಿಕೆಯ ಮೂಲಕ ಬಗೆಹರಿಸಿಕೊಳ್ಳಬೇಕೆಂದೂ ಸೂಚನೆಯಿತ್ತರು. ಪ್ರಧಾನ ಮಂತ್ರಿಗಳ ಮೊದಲಿನ ಸೂಚನೆಗೆ ಚೀನಾ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ, ಹಾಗೂ ಆದು ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಸೂಚನೆಯನ್ನು ತಿರಸ್ಕರಿಸಿತು.

೧೯೬೨ರ ಡಿಸೆಂಬರ್ ತಿಂಗಳಲ್ಲಿ ಆಫ್ರೋ ಏಷ್ಯಾದ ಆರು ವಿ.ಶ್ರ ರಾಷ್ಟ್ರಗಳು ಕೊಲಂಬೋದಲ್ಲಿ ಸಮಾವೇಶಗೊಂಡು ಭಾರತ-ಚೀನಾಗಳ ನಡುವೆ ಮಾತುಕತೆಗಳು ನಡೆಯಲು ತಳಹದಿ ಹಾಕಿಕೊಟ್ಟವು.

೧೯೬೩ರ ಜನವರಿ ೨೬ರಂದು ಕೊಲಂಬೋ ಸಲಹೆಗಳನ್ನು ಭಾರತವು ಸಂಪೂರ್ಣವಾಗಿ ಅಂಗೀಕರಿಸಿದರೂ ಚೀನಾ ತನ್ನ ಆಕ್ರಮಕಾರೀ ಮನೋವೃತ್ತಿಗೆ ಬಲವಾಗಿ ಅಂಟಿಕೊಂಡಿತು.

ಪುನರವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ಆರ್ಥಿಕ ವರ್ಗ ಭೇದಗಳು ಮತ್ತು ಸಮಸ್ಯೆಗಳು— ಲೇಖಕ ಮತ್ತು ಪ್ರಕಾಶಕರು: ಮೋಹನ ಮುತಾಲಿಕ, ೧೧೮೭, ಅನಂತಶಯನ ಬೀದಿ, ಬೆಳಗಾವಿ. ಪುಟಗಳು: ೪೨. ಬೆಲೆ: ರೂ. ೦ ೭೫.

ಆರ್ಥಿಕ ಸಮಸ್ಯೆಗಳ ವಿಶ್ಲೇಷಣೆಗಳಿಂದ ಕೂಡಿದ ನಾಲ್ಕು ಲೇಖನಗಳ ಸಂಗ್ರಹವಿದು. ಇವುಗಳಲ್ಲಿ 'ಆರ್ಥಿಕ ವರ್ಗ ಭೇದಗಳು' ಎಂಬುದು ಧಾರವಾಡದ ಆಕಾಶವಾಣಿಯ ಮೂಲಕವೂ ಹೊಳೆದ ವ್ಯಕ್ತಿ-ಅವನ ಜೀವನ ಮಟ್ಟ', 'ವ್ಯಕ್ತಿ ಮತ್ತು ಯೋಜನೆ' ಮತ್ತು 'ವಿನಿಮಯದ ಮೂಲ ಧ್ಯಮ' ಇವು ಉಡುಪಿಯ 'ನವಯುಗ' ವಾರ ಪತ್ರಿಕೆಯ ದ್ವಾರವೂ ಸಾರ್ವಜನಿಕರ ಗಮನಕ್ಕೆ ಮೊದಲೇ ಬಂದಿವೆ. ಇದೀಗ ಇವೆಲ್ಲವನ್ನೂ ಒತ್ತಟ್ಟಿಗೆ ಸೇರಿಸಿ ಪುಸ್ತಕದ ರೂಪದಲ್ಲಿ ಮತ್ತೊಮ್ಮೆ ಹೊರ ತರಲಾಗಿದೆ. ಆರ್ಥಿಕ ಸಮಸ್ಯೆಗಳು ನಮ್ಮ ರಾಷ್ಟ್ರವನ್ನಾದರೂ ಅವುಗಳ ಅಧ್ಯಯನ —ವಿಚಾರಗಳ ಕಡೆಗೆ ಗಮನ ಹರಿಸುವಷ್ಟು ನಾವು ಮುಂದುವರಿದಿಲ್ಲ. ಹದಗೆಡುತ್ತಿರುವ ಭಾರತೀಯರ ಆರ್ಥಿಕ ಸ್ಥಿತಿಯನ್ನು ಸ್ಥಿಮಿತಕ್ಕೆ ತರಬೇಕಾದರೆ, ಅವುಗಳ ಪರಾಮರ್ಶೆ ಅತ್ಯವಶ್ಯ. ಕನ್ನಡ ಭಾಷೆ ಆರ್ಥಶಾಸ್ತ್ರ ಸಂಬಂಧಿ ಗ್ರಂಥಗಳಾದರೂ ಬಹಳ ಅಪರೂಪ. ಹಾಗಿರುವಾಗ, ಕೆಲವಾದರೂ ಸಮಸ್ಯೆಗಳನ್ನು ಜನತೆಯ ಮುಂದಿಟ್ಟು ಅವುಗಳ ಸಂಬಂಧದಲ್ಲಿ ವಿಚಾರ ಪ್ರಚೋದನೆಯೊಗುವಂತೆ ಅಪ್ಪದ ಒದಗಿಸಿಕೊಟ್ಟ ಮುತಾಲಿಕರು ಕೃತಜ್ಞತಾರ್ಹರು.

ಆರ್ಥಿಕ ವರ್ಗ-ಭೇದಗಳನ್ನು ದೂರ ಮಾಡಿದಂದೇ ನಮ್ಮಲ್ಲಿ ಪುನರ್ವಸ್ಥಿತ ಅರ್ಥ ವ್ಯವಸ್ಥೆ ನಿರ್ಮಾಣವಾಗುವುದೂ ಜೀವನ ಮಟ್ಟ ಸುಧಾರಣೆಯಾಗುವುದೂ ಸಾಧ್ಯ. ನಮ್ಮ ಆರ್ಥಿಕ ಸ್ಥಿತಿಗತಿಗನುವಾಗಿ ನಮ್ಮ ಯೋಜನೆಯನ್ನೂ ದುಡಿಮೆಯನ್ನೂ ರೂಪಿಸಬೇಕು. ಇಂದಿನ ವಿನಿಮಯ ಮೌಲ್ಯವು ನಮ್ಮ ಹೆಲವಾರು ಸಮಸ್ಯೆಗಳಿಗೆ ಕಾರಣವಾದುದರಿಂದ, ಅದನ್ನು ಬದಲಿಸುವುದು ಸಾಧ್ಯವಿಲ್ಲವೇ ಎಂಬತ್ತ ನಮ್ಮ ಗಮನ ಹರಿಯಬೇಕು ಎಂಬ ವಿಚಾರಗಳನ್ನು ಮುಂದಿಟ್ಟಿರುವ ಕನ್ನಡಿಗರ ಮುಂದಿಟ್ಟಿದ್ದಾರೆ. ಸಮಸ್ಯೆಗಳ ಪರಿಹಾರದ ಮಾರ್ಗಗಳು ಹಲವಿರಬಹುದು. ಆರ್ಥ ಶಾಸ್ತ್ರಜ್ಞರು ಈ ಸಮಸ್ಯೆಗಳನ್ನು ಮತ್ತಿಷ್ಟು ತಮ್ಮ ವಿಚಾರವನ್ನೂ ಬಹಿರಂಗ ಗೊಳಿಸಿ ಸಮುಚಿತ ವಾದವನ್ನು ಪರಿಶೀಲಿಸಿ ಒಪ್ಪುವ ಹಾಗೆ ಜನತೆಗೆ ಅವಕಾಶ ಕಲ್ಪಿಸಿಕೊಡಬೇಕು. ಇಂತಹ ಪ್ರಯತ್ನದಲ್ಲಿ ಮುತಾಲಿಕರು ಇಟ್ಟ ಸಾಹಸದ ಹೆಜ್ಜೆ ಸ್ವಾಗತಾರ್ಹವಾಗಿದೆ.

ಪ್ರೇಕ್ಷಣೀಯ ಸ್ಥಳಗಳು-ಭಾಗ-೧— ವಿದ್ಯಾಭೂಷಣ ಪಂಡಿತ ಭೂಜಬಲಿ ಶಾಸ್ತ್ರಿ. ಎಂದರು ಭಾರತದ ಪ್ರೇಕ್ಷಣೀಯ ಸ್ಥಳಗಳಾದ ಅಜಂತಾ, ರಾಜಗೃಹ, ಸಾರನಾಥ ಮತ್ತು ಶಾಂತಿನಿಕೇತನಗಳ ಸಾಮಾನ್ಯ ಪರಿಚಯವನ್ನು ನಮಗೀಗ ಚಿಕ್ಕ ಪುಸ್ತಕದಲ್ಲಿ ಮಾಡಿಕೆ-ಟ್ಟಿದ್ದಾರೆ. ನಮ್ಮ ದೇಶದ ಬಗ್ಗೆ ಹೆಚ್ಚು ತಿಳಿದುಕೊಳ್ಳುವಂತೆ ಮಾಡುವ ಪುಟ್ಟ ಹೊತ್ತಗೆಯು ಸಹಾಯಕವಾಗಬಲ್ಲುದು. ಇದನ್ನು ಮಂಗಳೂರಿನ ಒಂದಾಣೆ ಮೂಲೆಯವರು ಪ್ರಕಾಶಿಸಿದ್ದಾರೆ.

—ನೋರಾ.

ಎಡೆಬಿಡದೆ ದುಡಿ
ನೂರ್ಮಡಿ
ದುಡಿಮೆಯಿಂದಾಗಲಿ
ರಾಷ್ಟ್ರಶಕ್ತಿ ನೂರ್ಮಡಿ

ಕುಂದಾಪುರ ಡಿ.ಮು. ಕೋರ್ಟಿನಲ್ಲಿ
O. P. 12/1963

ಅರ್ಜಿದಾರಳು — ಗಂಗಮ್ಮ

ಎದ್ರಿರು— 1. ಜಯನ್ನ
2. ಮೈನರ ಪ್ರಕಾಶಿನಿ.

ಉಡ್ಡಿ ತಾಲ್ಲು ಹೆಗ್ಗುಂಜೆ ಗ್ರಾಮದ ಮಂದರ್ತಿಯಲ್ಲಿರುವ ರಾಮಯ್ಯಪ್ಪ ಮಯ್ಯರ ವಿಧವೆ ಜಯಮ್ಮ 1 ಈಕೆಯ ಮಗಳು ಪ್ರಕಾಶಿನಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹಾರಿಯಲ್ಲಿ 1ನೇ ಎದ್ರಿಳಿಗಂಡ ಮೃತ ರಾಮಯ್ಯಪ್ಪ ಮಯ್ಯರ ಬಾಬ್ತು ಶ್ರೀ ದುರ್ಗಾಪರಮೇಶ್ವರಿ ಎಯಿಡೆಡ್ ಎಲಿಮೆಂಟರಿ ಶಾಲೆ ಹೆಗ್ಗುಂಜೆ ಇದರಿಂದ ಸಿಬ್ಬಂದಿ ಸಂಬಳದ ಹಣವನ್ನು ಪಡೆಕೊಳ್ಳುವರೆ ಅರ್ಜಿದಾರಳ ಹೆಸರಿಗೆ ನಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಳ್ಖಲುಮಾಡಿದ ಮೇಲಿನ ಅರ್ಜಿಯು ತಾ. 10-6-1963ಕ್ಕೆ ತಪ್ಪುಗೆ ಇರುತ್ತದೆ. ಆ ಕಾರಣ ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀಸುಮಾಡಿಕೊಳ್ಳಬೇಕೆಂದು, ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwariah,
Advocate for Petitioner.
Coondapoor, 1—6—63.

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟರುಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

"ನಮ್ಮ ಬ್ಯಾಂಕಿನಲ್ಲಿ
ಖಾತೆ ತೆರೆಯಲು
ನಿಮ್ಮ ಬಳಿ ಇರುವ
ಯಾವ ಮೊತ್ತವೂ
ಚಿಕ್ಕದಲ್ಲ"

ನಿಮ್ಮ ಕಸೆಯಳತೆಗೆ ಸರಿಯಾದ ವಿಧ ವಿಧದ
ಯೋಜನೆಗಳಿಗೆ.....

ಸಿಂಡಿಕೇಟ್ ಬ್ಯಾಂಕ್

ಸಹಕರಿಸಬಲ್ಲುದು

ಸನಾನ ಸೇವೆ - - - - ಸರಿಯಾದ ಭದ್ರತೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

Edited, Printed & Published by K. H. Shetty, at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 40

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 13—6—1963 ಗುರುವಾರ

13 ನೇ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೪೦

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ಚೀನೀಯರ ಅಂತರಂಗದಲ್ಲಿ

ತತ್ತ್ವವಿಜಯದ ಮಹತ್ವಾಕಾಂಕ್ಷೆ

ಚೀನೀ ಆಕ್ರಮಣದ ವಾರ್ತೆಯೊಂದಿಗೆ ರಾಷ್ಟ್ರಾಭಿಮಾನದ ಕಿಡಿಯು ಜ್ವಾಲೆಯ ರೂಪ ತಳೆದು ಬಂದು ಆರಿಕ್ಷಣ ಭಾರತದ ನಿಜ ಸ್ವರೂಪವನ್ನು ಸೆರೆ ಹಿಡಿಯಿತು. ಕೆಲವೊಂದು ಜನರ ಸಣ್ಣತನ ಮತ್ತು ದೌರ್ಬಲ್ಯ, ಇನ್ನು ಕೆಲವರ ದೊಡ್ಡತನ ಹಾಗೂ ಬಲಾಢ್ಯತೆಗಳು ಪ್ರಕಟವಾದುದೂ ಆ ಕ್ಷಣದಲ್ಲಿಯೇ. ಘೋರ ವಿಪತ್ತಿನ ಶಂದರ್ಭದಲ್ಲಿ ಭಾರತೀಯರು ತೋರಿಸಿದ ಅಸದೃಶವಾದ ಐಕ್ಯ ಮನೋಭಾವ ಹಾಗೂ ಶೌರ್ಯ ಸಾಹಸಗಳ ಮೇಲೆ ಅದು ಬೆಳಕು ಚೆಲ್ಲಿದೆ.

ಶತ್ರುಗಳನ್ನು ಹೊಡೆದೋಡಿಸಲು ಭಾರತೀಯರು ವೈಯಕ್ತಿಕವಾಗಿ, ಸಾಮೂಹಿಕವಾಗಿ ಹೇಗೆ ಸಂಘಟಿತರಾದರೆಂಬುದು ಈಗಾಗಲೇ ಶರ್ವವಿದಿತವಾಗಿದೆ. ನಾನು ಅಸ್ಸಾಮಿಗೆ ಪ್ರಥಮ ಸಲ ಭೇಟಿ ನೀಡಿದಾಗಅಲ್ಲಿಯ ಜನರುನೀಡಿದ ಹೃದಯ ಮತ್ತು ವಜ್ರದ ಅಧರಣಗಳ ವಂತಿಗೆಯ ಪ್ರಮಾಣವು ನನಗೆ ನಿಜಕ್ಕೂ ಅಚ್ಚರಿಯನ್ನುಂಟು ಮಾಡಿತು. ಆಷ್ಟೊಂದು ಪ್ರಮಾಣದಲ್ಲಿ ವಂತಿಗೆಗಳು ದೊರೆಯಬಹುದೆಂದು ನಾನು ಎಂದೂ ನಿರೀಕ್ಷಿಸಿರಲಿಲ್ಲ.

ಸಾರ್ವಜನಿಕ ಸಹಕಾರದ ವ್ಯಾಪ್ತಿಯನ್ನು ವಿಸ್ತರಿಸಲು, ಈ ಕಾರ್ಯದರ್ಶಿಯ ಸಮನ್ವಯ ಸಾಧಿಸಿ ಮಾರ್ಗದರ್ಶನ ಮಾಡಲು ರಾಷ್ಟ್ರಪತಿಗಳ ಅಶ್ರಯದಲ್ಲಿ ಕಾಗದಕರ ಕೇಂದ್ರ ಪಟಪತ್ರವನ್ನು ರಚಿಸಲಾಯಿತು.

ರಾಜ್ಯಗಳಲ್ಲಿಯೂ ಸ್ವಯಂಸ್ಫೂರ್ತಿಯಿಂದ, ವಿವಿಧ ಅಭಿಪ್ರಾಯಗಳ ಜನರ ನೆರವಿನಿಂದ ಪರಿಷತ್ತುಗಳು ರಚಿತವಾದವು. ರಾಜ್ಯಗಳ ಮೂಲಕ ಅಥವಾ ದೇಶವಿದೇಶಗಳಲ್ಲಿಯ ವ್ಯಕ್ತಿಗಳು ಮತ್ತು ವಾಣಿಜ್ಯ ಸಂಸ್ಥೆಗಳಿಂದ ಬೃಹತ್‌ಪ್ರಮಾಣದಲ್ಲಿ ವಂತಿಗೆಗಳನ್ನು ಪಡೆಯುವ ಕೇಂದ್ರ ನಾಗರಿಕ ಪರಿಷತ್ತಿನ ಮೂಲಕ ಸೌಕರ್ಯಗಳನ್ನು ಒದಗಿಸುವುದೇ ನಮ್ಮ ಕರ್ತವ್ಯವಾಗಿದೆ. ಸೈನಿಕರ ಮತ್ತು ನಾಗರಿಕರ ಆಗತ್ಯಗಳನ್ನು ಕುರಿತ ಯೋಜನೆಗಳನ್ನು ರಾಜ್ಯ ಸಮಿತಿಗಳಿಗೆ ಮತ್ತು ಇನ್ನುಳಿದವರಿಗೆ ನಾವು ಒಪ್ಪಿಸುತ್ತೇವೆ. ಬೇಡಿಕೆಗಳನ್ನು ಸ್ವರಿತವಾಗಿ ಪೂರೈಸಿದುದು ಉಜ್ವಲ ರಾಷ್ಟ್ರ ಪ್ರೇಮದ ನಿದರ್ಶನವಾಗಿದೆ.

ಸೈನ್ಯ ಪತ್ರಿಕೆಗಳ ಪೂರೈಕೆ

ನಾಗರಿಕ ಪಾಪತ್ತು ಭಾರತೀಯ ರೆಡ್‌ಕ್ರಾಸ್ ಸಮಾಜ ಕಲ್ಯಾಣ ಮಂಡಲಿ ಮತ್ತು ಇನ್ನಿತರ ಸಂಸ್ಥೆಗಳ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಶತ್ರುಪರಿಸ್ಥಿತಿ ಸಂಬಂಧವಾದ ಕಾರ್ಯಕ್ರಮಗಳಿಗಾಗಿ, ಹಾಗೂ ಗಾಯಾಳುಗಳಿಗೆ, ಬ್ಯಾಂಡೇಜುಗಳನ್ನು ಕೊಳ್ಳಲು ಲಕ್ಷಾವಧಿ ರೂಪಾಯಿಗಳ ನೆರವು ನೀಡಿದೆ. ಅಸ್ಸಾಂದೊಂದಿಗಿನ ವಿಮಾನ ಸಂಪರ್ಕವನ್ನು ಸ್ಥಗಿತಗೊಳಿಸಿದಾಗ ವೃತ್ತಪತ್ರಿಕೆಗಳ ಪೂರೈಕೆ ಸಮಸ್ಯೆ ಉದ್ಭವಿಸಿತು ವೃತ್ತಪತ್ರಿಕೆಗಳಿಲ್ಲದಿರುವುದೂ ಊಹಾಪೋಹಗಳಿಗೆ ಇಂಬು ಕೊಟ್ಟಿತು. ಪರಿಷತ್ತು ಮಧ್ಯೆ ಪ್ರವೇಶಿಸಿದ ನಂತರ ಈಗ ಲಡ್ಡಾಖ್‌ನಿಂದ ಹಿಡಿದು ನೇಫಾ ವರೆಗಿನ ಸಮಗ್ರ ಪ್ರದೇಶದುದ್ದಕ್ಕೂ ಯೋಧರಿಗೆ ವಿವಿಧ ಭಾಷಾ ಪತ್ರಿಕೆಗಳ ನಿರಂತರ ಪೂರೈಕೆಯಾಗುತ್ತಿದೆ. ಗಡಿ ಪ್ರದೇಶಕ್ಕೆ ಎಲ್ಲ ಸಾಮಗ್ರಿಗಳನ್ನೂ ವಿಮಾನ ಮೂಲಕ ಸಾಗಿಸಬೇಕಾಗುತ್ತದೆ. ಎಷ್ಟೋ ಸಲ ಚಳಿಗಾಲದ ರಾತ್ರಿಗಳಲ್ಲಿಯೂ ಅದೇಶ ದೊರೆತ ಅಲ್ಪಾವಧಿಯಲ್ಲಿಯೇ ಸರಕುಗಳನ್ನು ಸಾಗಿಸಲಾಯಿತು. ಪರಕಾರದ ಸಾರಿಗೆ ವಿಮಾನಗಳಲ್ಲಿ ಸ್ಥಳದ ಅಭಾವವಿದ್ದರಿಂದ ಸಾಗಾಣಿಕೆಗಾಗಿ ಖಾಸಗಿ ವಿಮಾನಗಳ ಕೊಡುಗೆಯನ್ನು ಸ್ವೀಕರಿಸಲಾಯಿತು. ಇಂತಹ ಸಂದರ್ಭಗಳಲ್ಲೆಲ್ಲ ನಮ್ಮ ವಿಮಾನಗಳಲ್ಲಿಯೂ ಸಾಮಗ್ರಿಗಳನ್ನು ತುಂಬಿ ನಾವು ಎರಡುಗಳ ಮಧ್ಯದಲ್ಲಿ ಕ್ಷಿಪ್ರ ಪ್ರಯಾಣ ಮಾಡಿದೆವು.

ನಮಗೆ ನೆರವು ನೀಡಲು ಧಾವಿಸಿಬಂದ ಅನೇಕರನ್ನು ನಾವಿಂತಾಲ್ಲಿ ಅಭಿನಂದಿಸದಿರಲಾರೆ. ಅನೇಕ ಸಲ ಮೇರೆ ಮೀರಿದ ಉತ್ಸಾಹವೂ ಸಮಸ್ಯೆಗಳಿಗೆ ಕಾರಣವಾದುದೂ ಉಂಟು. ಒಮ್ಮೆ ಪಂಜಾಬ್‌ದಿಂದ ಸಾಧನ ಸಾಮಗ್ರಿಗಳಿಂದ ತುಂಬಿದ ೭೬ ಟ್ರಕ್ಕುಗಳು ಬಂದ ದಿನ ನನಗೆ ಸಂಕಟ ಕೊಟ್ಟುಕೊಂಡಿತು ಪ್ರತಿಕೂಲ ಹವಾಮಾನದಿಂದಾಗಿ ವಿಮಾನಗಳ ಹಾರಾಟವನ್ನು ಸ್ಥಗಿತಗೊಳಿಸಲಾಗಿತ್ತು. ದಾಸ್ತಾನು ಮಳಿಗೆಗಳಲ್ಲಿ ಅತ್ಯಗತ್ಯ ಸಾಮಗ್ರಿಗಳ ಮೀಸಲು ಸರಕುಗಳನ್ನು ತುಂಬಲಾಗಿತ್ತು. ಹೆಚ್ಚುವರಿಯಾಗಿ ಉಳಿದ ಸರಕುಗಳ ಸಂಗ್ರಹಣೆಗಾಗಿ ಹೊಸ ಸ್ಥಳವನ್ನು ಹುಡುಕಬೇಕಾದರೆ ಒಂದ ದಿನವೇ ಹಿಡಿಯಿತು.

ಚೀನೀಯರ ಹಠಾತ್ ನಿರ್ಗಮನ

ಬೇನೆಯಿಂದ ಮತ್ತು ಗಾಯಗಳಿಂದ ನರಳುತ್ತಿದ್ದ ಭಾರತೀಯ ಯುದ್ಧಬಂದಿಗಳ ಮೊದಲ ತಂಡವನ್ನು ಚೀನೀಯರು ಬಿಡುಗಡೆ ಮಾಡಿದರು. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧಿಕಾರಿಗಳು ಇನ್ನೇನು ಯುದ್ಧಬಂದಿಗಳನ್ನು ಸ್ವೀಕರಿಸುತ್ತಾರೆ ಎನ್ನುವಷ್ಟರಲ್ಲಿಯೇ ರೆಡ್‌ಕ್ರಾಸ್ ಸಂಸ್ಥೆಯ ಸಂಬಂಧಪಟ್ಟ ಡ್ರೈವರರು ಯುದ್ಧ ಬಂದಿಗಳನ್ನು ಸ್ವೀಕರಿಸಲು ಬಳಿಯ ಬಟ್ಟಿಗಳನ್ನು ಧರಿಸಿಕೊಂಡು ಬರಬೇಕೆಂದು ಚೀನೀಯರು ಪರಕ್ಕು ಹಾಕಿದ ದು ಆಚ್ಚರಿಯನ್ನುಂಟುಮಾಡಿತು. ಧಾನುವಾರ ರಾತ್ರಿ ೮ ಗಂಟೆಗೆ ನಮಗೆ ಒಂದು ಅವಸರದ ಸಂದೇಶ ಬಂದಿತು. ಯುದ್ಧ ಬಂದಿಗಳನ್ನು ಮರಳಿ ಪಡೆಯಲು ರೆಡ್‌ಕ್ರಾಸ್ ಸಿಬ್ಬಂದಿಯು ಮರುದಿನ ಮಧ್ಯಾಹ್ನದ ವೇಳೆಗೆ ನಿಯೋಜಿತ ಸ್ಥಳದಲ್ಲಿರಲು ಬೇಕಾಗಿತ್ತು. ಆ ವೇಳೆಯಲ್ಲಿ ಅಂಗಡಿಗಳ ಬಾಗಿಲುಗಳನ್ನು ತೆರೆಯಿಸಿ ಸಾಧು ಜೊತೆ ಬಿಳಿಯ ಸಮವಸ್ತ್ರಗಳನ್ನು ಕೊಂಡು, ಆ ವುಗಳನ್ನು ಪ್ಯಾಕ್ ಮಾಡಿಸಿ ಬೇಗನೆ ಸಗಂಟೆಯ ವಿಮಾನದ ವೇಳೆಗೆ ಸರಿಯಾಗಿ ತಲುಪುವಂತೆ ಮಾಡುವುದು ಎಷ್ಟು ಕಷ್ಟಕರವಾದ ಕೆಲಸವೆಂಬುದೂ ಊಹನೆಯೇ ತಿಳಿದು ಕೊಳ್ಳಬೇಕು.

ಈ ಘಟನೆಯ ನಂತರ ಚೀನೀಯರು ಬಿಡುಗಡೆ ಮಾಡಿದ ನಮ್ಮ ಯುದ್ಧ ಬಂದಿಗಳಿಗಾಗಿ ನಾಗರಿಕವಸ್ತ್ರಗಳನ್ನು ಪೂರೈಸುತ್ತ ಬಂದಿದ್ದೇವೆ. ಈಗಾಗಲೇ ೭೭೫ ಜೊತೆ ಸಮವಸ್ತ್ರಗಳನ್ನು ಪೂರೈಸಲಾಗಿದ್ದು ಇನ್ನುಳಿಂಥ ಯುದ್ಧ ಬಂದಿಗಳಿಗಾಗಿ ಸಮವಸ್ತ್ರಗಳ ಏರ್ಪಾಡು ಮಾಡಲಾಗುತ್ತಿದೆ.

ಯೋಧರ ಮನರಂಜನೆ

ಯೋಧರ ಮನರಂಜನೆಗಾಗಿ ಕಲಾವಿದರು ಮತ್ತು ಚಲಚ್ಚಿತ್ರ ನಟ-ನಟಿಯರ ತಂಡಗಳಿಂದ ಅಸಂಖ್ಯ ವ ನವಿಗಳು ಬರುತ್ತಿವೆ. ಸಾರಿಗೆ ಸೌಕರ್ಯವಿಲ್ಲದ್ದೇ ಈ ದಿಶೆಯಲ್ಲಿ ಒಂದು ಆತಂಕವಾಗಿದ್ದರೂ, ಯೋಧರ ಮನರಂಜನೆಗಾಗಿ ಸಂಗೀತಕಾರರು, ನರ್ತಕಿ-ನರ್ತಕಿಯರು, ಗೊಂಬೆ ಆಟಗಳನ್ನು ಪ್ರದರ್ಶಿಸುವವರು, ಯಕ್ಷಿಣಿಗಾರರು ಇವರೇ ಮೊದಲಾದ ಕಲಾವಿದರ ತಂಡಗಳನ್ನೂ ಕಳುಹಿಸಿಕೊಡಲಾಯಿತು. ಚಲಚ್ಚಿತ್ರ ಕಲಾವಿದರಾದ ಶ್ರೀ ರಾಜಕಪೂರ್ ಮತ್ತು ಅವರ ಸಂಗಡಿಗರೂ ಈ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದರು.

ಚೀನೀ ಆಕ್ರಮಣದಿಂದಾಗಿ ಅಸ್ಸಾಮಿನ ಬಯಲು ಪ್ರದೇಶಕ್ಕೆ ನಿರಾಶ್ರಿತರು ಅಧಿಕ ಸಂಖ್ಯೆಯಲ್ಲಿ ಆಗಮಿಸಿದರು. ನಾಗರಿಕ ಪರಿಷತ್ತು ಅಸ್ಸಾಂ ರೈಫಲ್ಸ್ ದಳದ ಯೋಧರ ಕುಟುಂಬಗಳಿಗೆ ಆಹಾರ ಧಾನ್ಯಗಳು ಮತ್ತು ಹೊಸಕಾಪಿನ ನೆರವು ನೀಡಿತು. ಟಿಬೇಟಿನ್ನರಿಗೆ ಬಟ್ಟೆಗಳು, ಔಷಧಿಗಳು ಮತ್ತು ಹಾಲನ್ನು ಪೂರೈಸಿತು. ಗಿರಿಜನರು ಮಳಿಗೆ ಹೋದನಂತರ ಅಡಗಿ ತ್ತಿ ಅವರನ್ನು ಪುನಃ ನೆಲಗೊಳಿಸುವ ಸಮಸ್ಯೆಯನ್ನು ಎದುರಿಸಬೇಕಾಯಿತು. ನಮ್ಮ ಸ್ಥಳೀಯ ಕಾರ್ಯಕರ್ತರು "ಕೆಲಸದ ಮೂಲಕ ಪರಿಹಾರ" ಎಂಬ ಕಾರ್ಯಕ್ರಮವನ್ನು ಕೈಗೊಂಡರು. ಇದರಿಂದಾಗಿ ಜೀವನಾಯ, ಚಿಕ್ಕ ಪ್ರಮಾಣದ ಕೈಗಾರಿಕೆಗಳು, ಕೋಣ ಮತ್ತು ಕುರಿ ಸಾಕಣಿಗೆಗಳು ಬಹು ಮಟ್ಟಿಗೆ ನೆರವಾಯಿತು. ಅಂಗವಿಕಲರಾದ ಯೋಧರ ಪುನರ್ನಿವೇಶನ ಅವರ ಕುಟುಂಬಗಳ ಕ್ಷೇಮ ಚಿಂತನೆ ಸರ್ಕಾರದ ಕಾರ್ಯವಾಗಿದ್ದರೂ, ಸಮಾಜವು ಅವರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುವುದರ ಮೂಲಕ ಸರ್ಕಾರದಕಾರ್ಯದಲ್ಲಿ ನೆರವಾಗಬೇಕು ಹಲವು ರಾಜ್ಯ ಪರಿಷತ್ತುಗಳು ಯೋಧರ ಕುಟುಂಬಗಳಿಗೆ ಉಚಿತ ವೈದ್ಯಕೀಯ ನೆರವು ನೀಡುತ್ತಿವೆ ಯಲ್ಲದೆ ಅವರ ವಸತಿಗಾಗಿ ವಿಶೇಷ ಏರ್ಪಾಟು ಮಾಡಿವೆ. ಚೀನೀಯರು ಹಿಂದೆ ಸರಿದ ನಂತರ ಭಾರತದ ಪರಿಸ್ಥಿತಿಯಲ್ಲಿ ಸಂಪೂರ್ಣ ಬದಲಾವಣೆಯಾಗಿದೆ. ಆಕ್ರಮಣವನ್ನು ಹಿಮ್ಮೆಟ್ಟಿಸಲು ಈ ಮೊದಲು ವ್ಯಕ್ತಪಟ್ಟ ಅಮಿತ ಉತ್ಸಾಹ ಈಗ ಕಂಡುಬರುವುದಿಲ್ಲ. ನಮ್ಮ ಐಕ್ಯ ಮತ್ಯ ಹಾಗೂ ದೃಢ ಸಂಕಲ್ಪಗಳನ್ನು ಶಿಥಿಲಗೊಳಿಸಿ ನಮ್ಮ ನೀತಿಯನ್ನು ಬದಲಿಸುವುದೇ ಮುಖ್ಯ ಉದ್ದೇಶವಾಗಿರುವ ಚೀನೀಯರ ಶಾಂತಿ ಸಂಧಾನದ ಕರೆಗಳು ಅವರ ಯುದ್ಧ ತಂತ್ರಗಳಷ್ಟೇ ಅಪಾಯಕಾರಿಯೂಗಿವೆ ಎಂಬ ಅಂಶವನ್ನು ಜೆನ್ನಾಗಿ ಗೃಹಿಸಿದಂತೆ ಕಂಡುಬರುತ್ತಿಲ್ಲ.

ಪೀಕಿಂಗ್ ಸತ್ಯದೂರವಾದ ಸಂಗತಿಗಳನ್ನೇ ಬಿರುಸಾಗಿ ಪ್ರಚಾರ ಮಾಡಲು ಪರದೇಶಿಗಳಿಗೆ ನಿಯೋಗಗಳನ್ನು ಕಳುಹಿಸುತ್ತಿದೆ. ನಾನು ಇತ್ತೀಚೆಗೆ ಇಂಗ್ಲೆಂಡಿಗೆ ಭೇಟಿ ನೀಡಿದಾಗ ಗಡಿ ವಿವಾದ ಸಂಬಂಧವಾದ ಭಾರತದ ನಿಲುವಿನ ಬಗ್ಗೆ ಕೂರಿತು ವಿದೇಶಗಳಲ್ಲಿ ಇನ್ನೂ ಕಪ್ಪು ತಿಲುವಳಿಕೆ ಇದ್ದುದನ್ನು ಕಂಡು ನನಗೆ ಆಚ್ಚರಿಯಾಯಿತು. ಚೀನೀಯರು ಕೇವಲ ವಿಸ್ತಾರವಾದಿಕ ವಿಜಯ, ಸಂಪಾದಿಸುವ ಉದ್ದೇಶದಿಂದ ಭಾರತದ ಮೇಲೆ ಧಾಳಿ ಮಾಡಲಿಲ್ಲವೆಂಬುದು ಈಗ ಸುಸ್ಪಷ್ಟವಾಗಿ

(ಸೀ ಪುಟ ನೋಡಿ)

ಭ್ರಾತೃ ಪ್ರೇಮದಿಂದ

ಸೋತು ಬಂದ ಸೇನಾಪತಿ

"ನಂಬಿ, ನಿಮ್ಮಿಂದಾಗಲಾರದು ಈ ಕಾರ್ಯ!"

"ಬಾಯ್ಮುಚ್ಚು! ನಿನಗೇನು ಗೊತ್ತು?"

"ಗಂಡಸುತನವಲ್ಲವಿದು; ವಂಚನೆಯೂಗಿದೆ."

"ಬಹು ದಿನಗಳಿಂದ ಎನ್ನಂತರಂಗವನ್ನು ದಹಿಸುತ್ತಿರುವ ಜ್ವಾಲೆ ಇಂದು ಶಾಂತವಾಗುವುದು"—ಶಕ್ತಿಸಿಂಹನು ದೀರ್ಘ ಶ್ವಾಸ ಒಂದನ್ನು ಬಿಟ್ಟು ತನ್ನ ಪತ್ನಿ ಎಡೆಗೆ ನೋಡಿದನು.

"..... ...."

"..... ...."

"ಕಲಂಕ ತಗಲುವುದು; ಕುಪರಾಧ್ಯವಾಗ.ವುದು"

"ಅಪಮಾನದ ಪ್ರತೀಕಾರವನ್ನು ತೀರಿಸಿಕೊಳ್ಳಲಿ. ಪ್ರತಾಪನ ಪೌರುಷವನ್ನು ಧೂಳಿನಲ್ಲಿ ಹೊಡಿಗೂಡಿಸುವೆ. ಇಂದೆನ್ನ ವಿಜಯವಾಗುವುದು."—ಸಂಪೂರ್ಣ ದೃಢತೆಯಿಂದ ನುಡಿದು ಶಕ್ತಿಸಿಂಹನು ಏಳಿರವ ಮೊರ ನೋಡಹತ್ತಿದನು. ಮುಗಲ ಸೈನ್ಯದ ಚತುರ ಸಿಪಾಹಿಯು ತನ್ನ ಕುವರಿಯನ್ನು ಪಳಗಿಸುತ್ತಿದ್ದನು. ಧೂಳು ಮೇಲಕ್ಕೇಳುತ್ತಿದ್ದಿತ್ತು. ಅತಿ ಉತ್ಸಾಹದಿಂದ ಒಬ್ಬರಿನ್ನೊಬ್ಬರಿಗೆ ಧೈರ್ಯ ಕೊಡುತ್ತಿದ್ದರು.

"ನಿಜವಾಗಿಯೂ ಮಹಾರಾಣನ ಸೇವಾಭಾಗ್ಯವಿದಿಂದು. ಇಪ್ಪತ್ತೆರಡು ಸಾವಿರ ರಜಪೂತರನ್ನೂ ಮುಗಲ ಸೈನ್ಯವು ಒಂದೇ ಒಂದು ದಿನದೊಳಗೆ ಕೆಡಬ್ಬಿನು ಜ್ಜುನೂರಾಗಿಸುವುದು "— ಹೆಸ್ಮೆಯಿಂದ ಶಕ್ತಿಸಿಂಹ ಕೇಳಿದನು.

"ಅಣ್ಣನ ಮೇಲೆ ದ್ವೇಷಾಟ್ಟ ದೇಶದ್ರೋಹಿಯೂಗುವಂ.?"—ಆ ರಜಪೂತ ರಮಣಿಯ ಕಣ್ಣು ಕಿಡಿಕಾರಿ ಹತ್ತಿದವು.

ಶಕ್ತಿಸಿಂಹನು ಕುಪಾತಧಿಯಂತೆ ಯೋಚಿಸಲಾರಂಭಿಸಿದನು. ದ್ವೇಷದ ಸಿಹಿಲಾಗ್ನಿಯು ಅವನಂತಃಕರಣದ ರೋಮ ರೋಮದಲ್ಲೂ ಪ್ರತಿಧ್ವನಿಸುತ್ತಿತ್ತು. ಪ್ರತಾಪನ ಪ್ರಾಣವನ್ನು ಹೀರಿಯೇ ತೀರುವೆನು — ಎಂಬ ಪ್ರತಿಜ್ಞೆ ಅನನದಿತ್ತು. ಆ ಬೋಧಕ್ಯದಯವು ಯಾವ ಮೂರ್ಗವಾಗಿಯೂ ಬಿಸ್ಪಲಾರದು. ಅವನನ್ನಾರು ಸಮಾಧಾನಗೊಳಿಸಬೇಕ ?

ರಣ ಕಹಳೆ ಸೊಳಗಿತು.

ಕೋಲಾಹಲ ಹುಟ್ಟಿತು. ಮುಗಲ ಸೈನಿಕರು ರಣ ಭೂಮಿಯಲ್ಲಿ ಒಟ್ಟಾಗಿ ಪತ್ತಿದರು. ಎಲೆ ಏಲಿಯೂ ಗಡ-ಗಡನೆ ನಡಗ ಹತ್ತಿಕ್ಕು.

ಸಿಡಿಲ ಸೆಳಕಿನಂತೆ ಖಡ್ಗಗಳು ಹೊಳೆಯ ಹತ್ತಿದವು. ಅಂದೆಲ್ಲವರ ಮುಖದಲ್ಲೂ ಉತ್ಸಾಹದ ಕಳೆ ತಾಂಡವಾಡುತ್ತಿತ್ತು. ಯುದ್ಧಕ್ಕಾಗಿ ಪ್ರತಿಯೊಬ್ಬರ ಭುಜಗಳೂ ಕ.ಜಿಯುತ್ತಿದ್ದುವು.

ಶಕ್ತಿಸಿಂಹನು ಕುದುರೆಯ ಕಡಿವಾಣದ ಹಗ್ಗವನ್ನು ಕೈಯಲ್ಲಿ ಹಿಡಿದು ಹೇಳಿದನು—"ಇದೆನ್ನ ಕೊನೆಯ ನಿರ್ಣಯವಾಗಿದೆ, ಪಡಿಯುವೆ ಇಲ್ಲವೆ ಪ್ರತಾಪನನ್ನು ಇಹಲೋಕದಿಂದ ಕಳಿಸಿ ಬರುವೆ."

ಶಿಬಿರದ ಬಾಗಿಲಲ್ಲಿ ನಿಂತ ಮೋಹಿನಿಯು ತನ್ನ ಭವಿಷ್ಯದ ಚಿಂತೆ ಮಾಡುತ್ತಿದ್ದಳು. ಗಂಭೀರವದನದವಳಾಗಿ ಹೇಳಿದಳು—"ಭಗವಂತನು ಸುದ್ಬುದ್ಧಿಯನ್ನು ದಯಪಾಲಿಸಲಿ ನಿನಗೆ. ಇದೇ ಎನ್ನ ಪ್ರಾರ್ಥನೆ".

— ೨ —

ಆವುದೋ ಒಂದು ಮಹತ್ವಪೂರ್ಣ ವಿಘ್ನೋತ್ಸವನ್ನೇರಗುವ ಸಿದ್ಧತೆಯಂತಿತ್ತದು. ಪ್ರಕೃತಿ ಮೊತೆ ಬೆಟ್ಟಿ ಬಿದ್ದಳು. ಕುದುರೆ-ಆನೆಗಳ ಚೀತ್ಕಾರದಿಂದ ಆಕಾಶ ಗುಡುಗಿತು. ಪಶು—ಪಕ್ಷಿಗಳು ದಿಕ್ಕು ತಪ್ಪಿ ಚಲ್ಲಾಪಿಲ್ಲಿಯಾದವು. ಎಲ್ಲೆಡೆಗೂ ಮಾನವನ ಕರುಣ ಕ್ರಂದನವು ಮೊಳಗಿ ದಿಗಂತ ದಂಚಿನಲ್ಲಿ ವಿಲೀನ ರೂಪದಲ್ಲಿ ಲೀನವಾಯ್ತು. ಬಹು ವಿಷಮ ಗತಿಗೆಯಾಗಿತ್ತದು.

ಆ ಮಹಾ ಭಯಾನಕ ರಣ ಭೂಮಿಯಲ್ಲಿ ರಜಪೂತ ಸೈನ್ಯತ್ತ ಯುದ್ಧ ನಿಯಮದ ನಿಯಂತ್ರಣದಲ್ಲಿ ತತ್ಪೀನವಾಗಿತ್ತು. ಹಲ್ದೀ ಘಾಟು ಶಿಖರದ ತುಟ್ಟ ತುದಿಯಲ್ಲಿ ಭೀಲ ಸರದಾರರು ಹೆವಯನ್ನೇರಿ ಉನ್ಮತ್ತತೆಯಿಂದ ನಿಂತಿದ್ದರು.

"ಮಹಾರಾಜರಿಗೆ ಜಯವಾಗಲಿ!" ಶೃಂಗಶ್ರೇಣಿಯನ್ನಪ್ಪಳಿಸುತ್ತಾ ಧ್ವನಿಯು ಮುಗಲ ಸೈನ್ಯದಲ್ಲಿ ಹೊಕ್ಕಿತು. ಯುದ್ಧ ಆರಂಭವಾಯ್ತು. ಭೈರವಿ ರಣಚಂಡಿಯು ಪ್ರಳಯಂಕಾರವನ್ನು ವಿೂಂಟಿದಳು. ವಾನವನು ಹಿಂಸ್ರ ಪಶುವಿನಂತೆ, ತನ್ನ-ತನ್ನ ಗುರಿಯ ಮೇಲೆ ಮುನ್ನುಗ್ಗಿದನು. ಸೈನಿಕರ ನಿರ್ಭೀತಿಯ ಕುದುರೆಗಳು ಪವನದೊಡನೆ ಹಾರಹತ್ತಿದುವು. ಖಡ್ಗಗಳು ಕಂಪಿಸಹತ್ತಿದುವು. ಪರ್ವತ ಶಿಖರದಿಂದ ವಿಷ ಬಾಣಗಳು ಮುಗಲ ಸೈನ್ಯದ ಮೇಲೆ ಮಳೆ ಗರೆದವು. ದಿನದ ಬಿಸು ಬಿಸಿಲಿಗೆ ಬೆಂದುಹೋದ ಹಲ್ದೀ ಘಾಟುಯಲ್ಲಿ ರಕ್ತ ನದಿ ಹರಿಯಹತ್ತಿತು.

ಮಹಾರಾಣರು ಮುಂದೊತ್ತಿದರು. ಶತ್ರು ಸೇನೆಯ ವ್ಯೂಹ ಒಡೆದು ಚೆಲ್ಲಾ-ಪಿಲ್ಲಿಯಾಯ್ತು. ಒಬ್ಬರಿಯ ಸೈನಿಕರೂ ಕೊಟ್ಟಬೀಳಹತ್ತಿದರು

ತೋಪುಗಳ ಸಿಡಿತ.ದ್ದಿನ ಭಿರುಗಾಳಿ ಎದ್ದಿತು. ಬಲಿವನ ಸೈನಿಕರಿಗೆ ಉದುಕಲು ಮೂರ್ಗ ಉಳಿಯಿತು. ಮುಗಲ ಸೈನ್ಯದಲ್ಲಿ ಹೊಸ ಹುರುಪು ಹುಟ್ಟಿತು. ತೋಪಿನ ಬೆಂಕಿ ಎಲ್ಲೆಡೆಗೂ ಹತ್ತಲಾರಂಭಿಸಿತು. ಧಾಂ ಧಾಂ ಎಂದು ಕೋಟೆಯಿಂದ ಹೊರಟ ಗುಂಡುಗಳು ನಾಲ್ಕೆಡೆಗೂ ಹಾರಾಡುತ್ತಿದ್ದವು. ಆಯ್ಯೋ! ಜೀವನ ಆಡಿಪ್ಪು ಸುಲಭ ಬೆಲೆಯದಾಗಿತ್ತಲ್ಲ!

ಮಹಾರಾಣರು ರತ್ನು ಸೇನೆಯು ಮೈೈಸನ್ಮತ್ತರಂತೆ ತಿರುಗಾಡುತ್ತಿದ್ದರು.

ಪ್ರಾಣಭೀತಿ ಪ್ರಾಣದ ಮೇಲೆ ಹತ್ತಿತ್ತು. ಎಲ್ಲೆಲ್ಲೂ ಕಿಡಿಯಿಂದಲೂ ಸುತ್ತುಗಟ್ಟಿದ್ದರು ಆಕ್ರಮಣದ ಮೇಲಾಕ್ರಮಣವಾಗುತ್ತಿತ್ತು. ಪ್ರಾಣ ಕಂಠಗಟ್ಟಲ್ಲಿದ್ದಿತ್ತು. ಉಳಿಯುವುದು ದುಸ್ತರವಾಗಿತ್ತು. ಏಳು ಬಾರಿ ಗಾಯ ಹೊಂದಿದರೂ ಇಟ್ಟ ಹೆಜ್ಜೆಯನ್ನು ಹಿಂದೆಗೆಯಲಿಲ್ಲ. ಮೇವಾಡದ ಭಾಗ್ಯವು ಆಷ್ಟೆಂದು ದುರ್ಬಲವಾಗಿರಲಿಲ್ಲ. ಮಾನಸಿಂಹನ ಕುತಂತ್ರವು ಸಿದ್ಧವಾಗುವುದರಲ್ಲಿತ್ತು. ಅಂತಹ ಆ ಘೋರ ಆಪತ್ತಿನಲ್ಲಿ ಆ ವೀರ ಸರದಾರನು ಸೇನೆ ಸಂಗಡ ಆಲ್ಲಿಗೆ ಅದ್ದೋಗೆ ಬಂದನು? ಅಶ್ಚರ್ಯದಿಂದ ಮಹಾರಾಣರು. ಅವನೆಡೆಗೆ ನೋಡಿದರು — ವೀರ ಮನ್ನಾಜಿಯೂ ರಾಣರ ತಲೆಯಿಂದ ರಾಜ ಕಿರೀಟವನ್ನು ತೆಗೆದು, ಸ್ವತಃ ತಾನೇ ಧರಿಸಿಕೊಂಡನು. ರಾಣರು ಆಶ್ಚರ್ಯದಿಂದಲೂ ಕ್ರೋಧದಿಂದ ಕೇಳಿದರು—"ಇದೇನಿದ?"

"ಇಂದು ನಾಯುನ ಮೊದಲೊವೈ ರಾಜ ಚಿಹ್ನೆಯನ್ನು ಧರಿಸಬೇಕೆಂದು ತಿಲಾಲಸೆಯಾಗಿದೆ ನುಹಾ ಪ್ರಭು!"— ಶಕ್ತ ಮನ್ನಾಜಿ ಉತ್ತರವಿತ್ತನು. ರಾಣರು ಆ ಉನ್ಮಾದಪೂರ್ಣ ವಿಕಟ ನಗೆಯಲ್ಲಿ ಸ್ಥಿರ ಧೈರ್ಯವನ್ನು ಕಂಡುಕೊಂಡರು.

ಮುಗಲ ಸೇನೆಯ ಹಿದ್ದ ಶಕ್ತಿಸಿಂಹನಿಗೆ ಈ ವಾತಾವರ್ಯವು ಕೂಡಲೇ ಅರ್ಥವಾಯಿತ್ತು. ತಲೆ ಎತ್ತಿ ದೂರದಲ್ಲಿ ನೋಡತ್ತಾನೆ ಗಾಯಗೊಂಡ ರಾಣ ಪ್ರತಾಪನು ರಣ ಭೂಮಿಯಿಂದ ನುಸುಳಿಕೊಂಡು ದೂರ ಹೋಗುತಿದ್ದಾರೆ; ಇಲ್ಲಿ ಮುಗಲ ಸೇನೆಯು ನೀರ ಮನ್ನಾಜಿಯನ್ನೇ ರಾಣ ಪ್ರತಾಪನೆಂದು ತಿಳಿದು ಆಲ್ಲಿಯೇ ಮುಗಿಯ ಬಿದ್ದಿದ್ದಾರೆ.

ಶಕ್ತಿಸಿಂಹನೇ ಇಬ್ಬರು ಮುಗಲ ಸಿಪಾಹಿಗಳೊಡನೆ ಶಕ್ತಿಸಿಂಹನು ತನ್ನ ಕುದುರೆಯನ್ನು ರಾಣರ ಹಿಂದೆ ಓಡಿಸಿದನು.

— ೩ —

ರಣ ಕ್ರೀಡೆ ಮುಗಿಯುತ್ತಾ ಬಂದಿತ್ತು. ಸ್ವತಂತ್ರತೆಯ ಬಲಿ ವೇದಿಕೆಯ ಮೇಲೆ ಮಾಪ ಮುಸುಕಿತ್ತು. ಜನನಿ—ಜನ್ಮ ಭೂಮಿಯ ಚರಣವಡಿಯಲ್ಲಿ ಹುಡಿಗೂಡುವವರು ತಮ್ಮನ್ನು ಉತ್ಸರ್ಗ ಮಾಡಿಕೊಂಡಿದ್ದರು. ಇಪ್ಪತ್ತೆರಡು ಸಾವಿರ ರಜಪೂತ ಸೈನಿಕರಲ್ಲಿ ಕೇವಲ ಎಂಟು ನೂರು ಸೈನಿಕರು ಉಳಿದಿದ್ದರು.

ವಿದ್ರೋಹಿ ಶಕ್ತಿಸಿಂಹನು ತನ್ನಲ್ಲೇ ಯೋಚಿಸುತ್ತಾ ಮುಂದುವರಿಯುತ್ತಿದ್ದನು. ಕುದುರೆ ನಾಗಲೋಟದಿಂದ ಓಡುತ್ತಲೇ ಇತ್ತು. ಮೊಗದಲ್ಲಿ ಶವಗಳ ರಾಸಿಯೇ ಬಿದ್ದಿತ್ತು. ಒಂದೆಡೆ ಬರೀ ಭುಜಗಳು, ಬಿದ್ದಿದ್ದರೆ ಇನ್ನೊಂದೆಡೆ ರುಂಡದ ದಟ್ಟಿ ಮುಂಡವೆ ಇದ್ದಿಲ್ಲ. ಆಡಿಷ್ಟು ಶೀಘ್ರ ಪರವರ್ತನೆಯಿದ.! ಈಗೆರಡು ಗಳಿಗೆಯ ಹಿಂದೆ ನಗುತ್ತಾ—ಕುಣಿಯುತ್ತಾ ಇದ್ದವರೆಗೊಂದಿಗಳೆಲ್ಲಾ ಈಗೆಲ್ಲ ಹೋದವ್ರೆ? ಇಂತಹ ನಿರೀಪ ಜೀವನದ ಮೇಲೆ ಇಷ್ಟೊಂದು ಅಭಿಮಾನವೆ!

ತಾ ಮಾಡಿದ ದುಸ್ಕೃತಿಯು ಕಣ್ಣಾಲಿ ತುಂಬಿಬಂದಿತು. ಇಂದೂ ಸಹ ರಜಪೂತರೇ ಇದ್ದಾರೆ ನನ್ನ ತಂಡದ ರಕ್ತನೇ ಇವರದ್ದೂ ಆಗಿದೆ. ಅದರೆ ನಾನು— ....ನನ್ನ ಪ್ರತೀಕಾರ ಪೂರ್ಣವಾಗಿರುವುದೆ...?

ಖಂಡಿತಕ್ಕೂ ಪೂರ್ಣವಾಗಿರುವುದೆ! ಇಲ್ಲ...ಪ್ರತಿಶೋಧವಲ್ಲವಿದು. ಅಧವ ಶಕ್ತಿಯೂಗಿದೆ ಇದು! ಇದು ನಿನ್ನ ಚಿರ ಕಲಂಕಕ್ಕಾಗಿ ಆಗಿರುವ ವೈಶಾಚಿಕ ಆಯೋಜನೆಯೂಗಿದೆ. ನೀ ಮೋಸಿರುವಿ ಮಾಖಾ! ಪ್ರತಾಪನೊಡನೆ ಸೆಡವನ್ನು ಈಡೇರಿಸಿಕೊಳ್ಳಲು ಬಯಸಿದೆಯಾ? "ಸ್ವರ್ಗಗರೀಯಸಿ ಜನನಿ-ಜನ್ಮಭೂಮಿಯ ಸೇರ್ಯಾದೆಯನ್ನುಳಿಸಲು ಕನ್ನಪ್ಪ, ತನ್ನಂತೆ ಸಹಸ್ರಾರು ರಜಪೂತರರಣರನ್ನು ಸ್ವತಂತ್ರತೆಯ ಬಲಿವೇದಿಕೆಯ ಮೇಲೆ ಒಂದು ಕವಡೆಯ ಬೆಲೆಯೂ ಇಲ್ಲದೆ, ತಮ್ಮ ಜೀವನವನ್ನು ನಗು-ನಗುತ್ತಾ ಅರ್ಪಿಸಲು ಕೊಂಟೆ ಕಂತಹ ಪ್ರತೀಪನಲ್ಲಿ ಸೇಪನ್ನು ಬಯಸಿದೆಯೂ? ನೀನಾದಲೂ ಎಂದದ್ದೆಲ್ಲಿಂದೆ? ಈ ಇದೇ ನಿರ್ಭಾಗ್ಯ ಜನ್ಮ ಭೂಮಿಯಿಂದಲ್ಲವೆ? ಆಲೋಚಿಸು; ನಿನ್ನೂ ಸಮಯವಿದೆ. ಕಾಯುವು ಮುರ್ಖರ ದೆಯ ಬಗ್ಗಾದೂ ಯೋಚಿಸು.

(ರಿನೇ ಮುಟನೋಡಿರಿ)

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ಸಿಯಮಿತ (ಕಂಟ್ರಾಕ್ಟ್) ರೂ.

ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆಚೆಟ್ಟ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಂತೆ ಕೋರಿದೆ.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಲ್ಲರೆ ವ್ಯಾಪಿ, ನಿರಿಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಸುರಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ದೇವಲಿಯ ಶಿಬಿರದಲ್ಲಿ

ಚೀನೀಯ ಸಾನಬದ್ಧರ ಸುಖ ಜೀವನ

ಕೆಂಪು ಚೀನಾವು ಭಾರತದ ಮೇಲೆ ಆಕ್ರಮಣ ನಡಿಸಿದ್ದರ ಪರಿಣಾಮವಾಗಿ ದೇಶದೊಳಗೆ ನೆಲಸಿದ್ದ ಚೀನೀಯರನ್ನು ಸ್ಥಾನಬದ್ಧತೆಯಲ್ಲಿಡುವುದು ಮತ್ತು ತನ್ಮೂಲಕ ಆಕ್ರಮಣ ಪರನೀತಿಯು ಬೆಳೆಯದಂತೆ ನೋಡಿಕೊಳ್ಳುವುದು ಅತ್ಯಗತ್ಯವಾಗಿತ್ತು. ಹೀಗೆ ಸ್ಥಾನಬದ್ಧರೆಂದವರು ಬಯಸುವುದಾದರೆ, ಅವರನ್ನು ಥೈಲೆಂಡಿಗೆ ಕಳಿಸಿಕೊಡುವುದಕ್ಕೆ ಭಾರತ ಸರಕಾರವು ಸಿದ್ಧವಿದೆ. ಇದರಂತೆ ಕೆಲವರು ಆತ್ಮಪ್ರತೋಷದಿಂದಲೇ ತಾಯ್ನಾಡಿಗೆ ಹೋಗಿದ್ದಾರೆ. ಅವರನ್ನು ಮರ್ಯಾದೆ, ಗೌರವ, ಮತ್ತು ಸಕಲ ಸೌಕರ್ಯಗಳಿಂದಲೆ ಕಳಿಸಿಕೊಡುವ ಉದಾರತೆಯನ್ನು ಭಾರತವು ತೋರಿಸಿದೆ. ಇನ್ನು ಸ್ಥಾನಬದ್ಧರಾಗಿಯೇ ಇರುವವರನ್ನಾದರೂ ಉಚಿತ ರೀತಿಯಲ್ಲಿ ಆದೇ ಗೌರವ ಭಾವನೆಯಿಂದ ನೋಡಿಕೊಳ್ಳುವಲ್ಲಿ ಭಾರತವು ಹಿಂದುಳಿದಿಲ್ಲ. ಆದರೆ, ಪೀಕಿಂಗ್ ಸರಕಾರವು ನೂತ್ಯ ಭಾರತ ಸರಕಾರವು ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂಬ ಆಪನಾದವನ್ನು ಹೊರಿಸುವ ಸಾಹಸ ತೋರಿಸಿದೆ. ವಿಶೇಷ ಬಾತ್ಮಿದಾರರೊಬ್ಬರು ಇಂತಹ ಸ್ಥಾನಬದ್ಧರ ದೇವಲಿ ಶಿಬಿರಕ್ಕೆ ಭೇಟ್ಟಿಯಿತ್ತಾಗ ಅವರು ಕಂಡ ಕೊಂಡ ಸ್ವೈಜ ಚಿತ್ರದ ಶಬ್ದರೂಪವನ್ನಿಲ್ಲಿ ಕೂಡಲಂಗಿದೆ. ಚೀನೀಯರ ಅಪಪ್ರಚಾರವನ್ನು ಯಾವ ರೀತಿ ನಾಗುತ್ತಿದೆಯೆಂಬುದಕ್ಕಿದೊಂದು ಪ್ರತ್ಯಕ್ಷ ನಿದರ್ಶನ.

ಚೀನೀ ಸ್ಥಾನಬದ್ಧರು ಇರುವ ದೇವಲಿ ಶಿಬಿರಕ್ಕೆ ಕೋಟಾ ನಗರದಿಂದ ಹೋಗಬೇಕು. ಡಾಮರು ಹಚ್ಚಿರುವ ಉತ್ತಮ ರಸ್ತೆಯಲ್ಲಿ ಸುಮಾರು ಮೂವತ್ತು ಮೈಲಿಗಳಷ್ಟು ದೂರ ಸಾಗಿದಾಗ ಅಲ್ಲಿ ಹಳದಿ ಬಣ್ಣದ ಒಂದು ನಾನುಫಲಕ ನಿಮ್ಮ ಕಣ್ಣಿಗೆ ಬೀಳುತ್ತದೆ. ಡಾಕ್ ಬಂಗಲೆಯ ಆ ಬೋರ್ಡು ಬುಟಕೊಂಡ. ಐನೂರು ಗಜಗಳಷ್ಟು ದೂರ ನೀವು ಹೋದರೆ ಸಾಕು, ಅಲ್ಲಿ ನಿಮಗೆ ಇನ್ನೊಂದು ಫಲಕದ ಕಡೆಗೆ ನಿಮ್ಮ ದೃಷ್ಟಿ ಬೀಳುತ್ತದೆ. ಚೀನೀ ಸ್ಥಾನಬದ್ಧರನ್ನು ಇಟ್ಟಿರುವ ಕೇಂದ್ರ ಶಿಬಿರ ಇಲ್ಲಿಯೇ ಇರುವುದಾಗಿ ಅದು ಸೂಚಿಸುತ್ತದೆ. ಅಲ್ಲಿ ನೀವು ಒಲ ಬದಿಗೆ ತಿರುಗಬೇಕು. ಕಂಪು ಇಟ್ಟಿಗೆಗಳಿಂದ ಕಟ್ಟಿದ ಇರ್ಜಿಯನ್ನು ದಾಟಿಕೊಂಡೇ ನೀವು ಶಿಬಿರದ ಬಾಗಿಲಿಗೆ ತಲಪುತ್ತೀರಿ. ಬಾಗಿಲಲ್ಲಿರುವ ಕ್ಯಾಬಿನ್ ಮುಂಪೆ ಪಹರೆಯಿಸಿಪಾಯಿ. ನಿಂತಿರುತ್ತಾನೆ

ನನ್ನ ದೃಷ್ಟಿ ಚರ್ಚಿನ ಕಡೆಗೆ ಹೊರಳಿದಾಗ ಅದರ ಇಂಗಿತವನ್ನು ಅರಿತಂತೆ ನನ್ನ ಜೊತೆಗಿದ್ದ ಶಿಬಿರದ ಅಧಿಕಾರಿ ಹೇಳಿದರು :

"ಇದರಲ್ಲಿ ಆಶ್ಚರ್ಯ ಪಡಬೇಕಾದ ವಿಷಯವೇನೂ ಇಲ್ಲ! ಸ್ಥಾನಬದ್ಧರಾಗಿರುವ ಚೀನೀಯರ ಪೈಕಿ ಕ್ರೈಸ್ತಿಯನ್ನರಿದ್ದಾರೆ; ಪ್ರೊಟೆಸ್ಟೆಂಟರೂ ಇದ್ದಾರೆ, ರೋಮನ್ ಕ್ಯಾಥಲಿಕರೂ ಇದ್ದಾರೆ.."

"ಹೌದೇನು...?"

"ಹೌದು, ಈ ಇಗರ್ಜಿಯಲ್ಲಿ ಅವರು ಪ್ರಾರ್ಥನೆ ಸಲ್ಲಿಸಬಹುದು. ಒಮ್ಮೆ ಬಿಷಪ್ಪರೇ ಬಿಷಪ್ಪರೂ ಇಲ್ಲಿಗೆ ಬಂದಿದ್ದರು."

ಅಧಿಕಾರಿಯು ಊಹೆ ಸರಿಯೂಗಿತ್ತು. ಶಿಬಿರದ ಇಪ್ಪು, ಸವಿಪದಲ್ಲಿ, ಬಾಗಿಲ ಬ್ಲೇ ಜರ್ಚ್ ನಿಯುತ್ತಿರುವುದನ್ನು ನೋಡಿ ನಾನು. ವಿಸ್ಮಿತನಾಗಿದ್ದೆ.

ಮುಂಬೆ ನಾನು ಕೇಳಿಬಹುದಾದ ಪ್ರಶ್ನೆಗಳನ್ನು ಊಹಿಸಿಕೊಂಡು ಆತ ಪಟಂದುವರಿಸಿದನು.

"ಕ್ರೈಶ್ಚಿಯನ್ನರಷ್ಟೇ ಅಲ್ಲ, ಶಿಬಿರದಲ್ಲಿ ಮುಸಲ್ಮಾನೀಯ ಮತಸ್ಥರೂ ಇದ್ದಾರೆ, ಇನ್ನೂಳಿದವರು ಬೌದ್ಧ ಮತೀಯರು."

ಚೀನೀ ಸ್ಥಾನಬದ್ಧರ ಧರ್ಮನಿಷ್ಠೆಗೆ ಕೊಡಬೇಕಾದ ಗೌರವನ್ನೂ ಕೊಡಲಂಗಿದೆಯೆಂಬುದು ಸ್ಪಷ್ಟವಾಗಿದೆ.

ಕ್ಯಾಂಪ್ ಕಮಾಂಡೆಂಟರ ಕಛೇರಿಯ ಮೆಟ್ಟಿಲುಗಳನ್ನು ಹತ್ತುತ್ತಿದ್ದ ಹಾಗೆಯೇ ಆಫ್ಲೆಯೇ ಒಬ್ಬ ಚೀನೀ ಸ್ಥಾನಬದ್ಧ ವ್ಯಕ್ತಿಯು ದರ್ಶನವೂ ಲಭಿಸಿತು. ನನ್ನನ್ನು ಕಂಡ ಆ ದಸ್ಯ ಪುಸ್ಪ ಕಾಳ್ಳನ್ಯಕ್ಕೆ ಮುಗುಳ್ನಕ್ಕಿ ನನ್ನನ್ನು ವಂದಿಸಿದ. ನಾನೂ ನಮಿಸಿ ವಂದನೆ ಸಲ್ಲಿಸಿದೆ.

ಆವನ ಉದ್ದುಗೆಯ ಕಡೆಗೆ ನನ್ನ ದೃಷ್ಟಿ ಹೊರಳಿತು. ಚೆನ್ನಾಗಿ ಇಸ್ತ್ರಿ ಮಾಡಿದ ಬಿಳ್ಚನೆಯ ಜಿನ್ನಾಗಿ ಇಸ್ತ್ರಿ ಮಾಡಿದ ಬಿಳ್ಚನೆಯ ಪಟಾಯಿ, ಉಣ್ಣೆಯ ಆರ್ಧತೋಳಿನ, ಕತ್ತು ಕಾಣುವಷ್ಟು ಕಟ್ಟಿದ ಸ್ವೆಟರ್. ಆವನ ಕಾಲುಗಳ ಕಡೆಗೆ ನನ್ನ ದೃಷ್ಟಿ ಹೊರಳಿತು ಕಾಲು ಚೀಲಗಳು ಶುಭ್ರವಾಗಿದ್ದುವು. ಮತ್ತು ಷೂಗಳು ಫಳ ಫಳ ಹೊಳೆಯುತ್ತಿದ್ದುವು ಆತ್ಮ ಆವನು ಸ್ವಿತ್ಜಿಂತನಾಗಿರುವಂತೆ ನನಗೆ ಭಾಸವಾಯಿತು. ಒಳ್ಳೆ ಉನ್ನತ ವೃತ್ತಿಯಲ್ಲಿರುವವರು ಒಂದೆ. ಭಾವಭಂಗಿ ಎದ್ದು ಕಾಣುತ್ತಿತ್ತು.

ವೃತ್ತಿಯಿಂದ ತಾನೊಬ್ಬ ಎಂಜಿನಿಯರ್ ಹಾಗೂ ವಿಲ್ಪೆಯೆಂದು ಆತ ನನ್ನೊಡನೇ ಹೇಳಿಕೊಂಡ. ತನ್ನ ಡಿಸೈನ್ ಪ್ರಕಾರ ಭಾರತದಲ್ಲಿ ಬಟ್ಟೆಬಂಗಿಯ ಕೆಲವು ಕಟ್ಟಡಗಳನ್ನೂ ಆತ ಹೆಸರಿಸಿದ. ಆ ಪೈಕಿ ಕಲ್ಕತ್ತೆಯಲ್ಲಿರುವ ದೊಡ್ಡ ಭವನವೂ ಒಂದಾಗಿತ್ತು. ನನಗೆ ಬೇಕಾದ ಸೌಕರ್ಯಗಳನ್ನು ಹಾಗೂ ನನ್ನ ಆಗತ್ಯಗಳನ್ನು ಪೂರೈಸುವ ರೀತಿಯಲ್ಲಿ ಕಟ್ಟಡಗಳ ಡಿಸೈನ್' ತಯಾರಾಗಬೇಕು. ಭಾರತದಲ್ಲಂತೂ ಕಟ್ಟಡ ಶಿಲ್ಪಿಯಾದವನು ಹಲವು ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲಿಯ ಹವಾಗುಣ, ವೈಯಕ್ತಿಕ ಆಚಾರ-ವಿಚಾರಗಳು, ಧನಸಮೃದ್ಧಿ ಇವುಗಳೆಲ್ಲ ಮುಖ್ಯವಾಗುತ್ತವೆ ಎಂದೂ ಆತ ತನ್ನ ಅಭಿಪ್ರಾಯವನ್ನು ತಿಳಿಸಿದ

"ಕ್ಯಾಂಟಿನಲ್ಲಿ ನೀವು ಯಾವ ರೀತಿ ಕಾಲ ಕಳೆಯುತ್ತಿದ್ದೀರಿ?"

"ನನ್ನ ವಿಭಾಗದ ಜನರ ಜೋಗಕ್ಕೇ ವು ನೋಡಿಕೊಳ್ಳುತ್ತೇನೆ," ಎಂದು ಆತ ತಿಳಿಸಿದ. ಶಿಬಿರದಲ್ಲಿ ಚೀನೀ ಸ್ಥಾನಬದ್ಧರ ವಾಸಕ್ಕೆ ಗೊತ್ತು ಮಾಡಿರುವ ಮನೆಗಳನ್ನು ಒಟ್ಟು ೫ ವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವಿಭಾಗದ ಜನರ ದೈನಂದಿನ ಕ್ಷೇಮವನ್ನು ಒಬ್ಬರು ನೋಡಿಕೊಳ್ಳುತ್ತಾರೆ ಸಾಮಾನುಕರನ್ನು ಗುತ್ತು ಮಾಡಿದಾಗ ಸಂದರ್ಭವನ್ನು ಅವಲಂಬಿಸಿ ಆರಿಸುತ್ತಾರೆ

"ಓಹ್, ಇಲ್ಲೇ ಪ್ರಜಾಪ್ರಭುತ್ವದ ಒಂದು ತುಣುಕು ಪ್ರಯೋಗ ನಡೆದಿದೆ, ಎನ್ನಿ" ಎಂದು ನಾನು ಹೇಳಿದೆ

ಆತ ಮುಂಗುಳ್ನಕ್ಕು, ಶಿಬಿರದಲ್ಲಿ ಜೀವನ ಎಸಿ, ಸುವ್ಯವಸ್ಥೆಯಿಂದ ನಡೆಯುತ್ತಿದೆಯೆಂಬುದನ್ನು ತಿಳಿಸಿದ. ಆಹಾರ ಪಡಿಕರ ಹೊಟ್ಟೆ ತುಂಬುವಷ್ಟು ಸಿಗುತ್ತಿತ್ತು. ಮತ್ತು ಕೊಡುವ ಆಹಾರದ ಗುಣ ಪ್ರಮಾಣವೂ ಉತ್ತಮವಾಗಿರುತ್ತಿತ್ತು.

"ನೀವು ಚೀನಾಕ್ಕೆ ಹೋಗುವವರೇ ಅಥವಾ ಭಾರತದಲ್ಲಿಯೇ ಇರುವವರೇ?"

"ಇಲ್ಲ ನಾನು ಚೀನಾಕ್ಕೆ ಹಿಂದಿರುಗುವ ವಿಚಾರವನ್ನೇ ಮಾಡಿಲ್ಲ. ನಾನು ಭಾರತದಲ್ಲಿಯೇ ಇರಲು ಬಯಸುತ್ತೇನೆ"

ಆತನ ಧ್ವನಿಯಲ್ಲಿ ದೃಢ ಸಂಕಲ್ಪವಿದ್ದುದು ಕಂಡು ಬಂತು.

ನಾವು ಕೆಲವು ನಿಮಿಷ. ಸುಮ್ಮನಿದ್ದೆವು. ಆತನ ಸಹವರು ಸ್ನೇಹಿತರು ಬಂದು ನಮ್ಮನ್ನು ಸೇರಿಕೊಂಡರು. ಅವರೂ ಸ್ಥಾನಬದ್ಧರೇ. ಅವರೂ ಅವನನ್ನೇ ಚೆನ್ನಾಗಿ ಉಡುಪು ಧರಿಸಿದ್ದರು. ಅದೇ ರೀತಿಯ ಉಡುಪು.

ಅವರ ಪೈಕಿ ಒಬ್ಬ ಜಬ್ಬಲ್‌ಪುರದ ದಂತ ವೈದ್ಯ ಮಧ್ಯ ಪ್ರದೇಶದ ಪೈರಿಯ ಹಿಂದಿ ಭಾಷೆಯನ್ನು ಆತ ನಿರರ್ಗಳವಾಗಿ ಆಡುತ್ತಿದ್ದ. ಆತ ಕೂಡ ಚೀನಾ ಕೈ ಹಿಂತಿರುಗಿ ಹೋಗುವ ನಿರ್ಧಾರ ಮಾಡಿರಲಿಲ್ಲ. ಆವನ ಸಂಬಂಧಿಕರು ಮನೆಯಿಂದ ಅವಸರಿಸಿದಾಗಿ ಹಣ ಹಾಗೂ ಆಹಾರದ ಪಾರ್ಸಲ್‌ಗಳನ್ನು ಕಳುಹಿಸುತ್ತಿದ್ದರು.

ಶಿಬಿರಕ್ಕೆ ಬಂದು ಅವನನ್ನು ನೋಡಿಕೊಂಡೂ ಹೋಗುತ್ತಿದ್ದರು. ಅವನ ಮಡದಿ ಮಕ್ಕಳೂ ಭಾರತದಲ್ಲಂಯೇ ಇರುವವರು.

ಇನ್ನೊಬ್ಬ ಕಲ್ಕತ್ತಾದ ನಿವಾಸಿ. "ಆ ನೇಕಾನೇಕ ವರ್ಷಗಳಿಂದ" ಆತ ಇಲ್ಲಿ ನೆಲೆಸಿದ್ದ ಒಂದು ಉಪಾಹಾರ ಗೃಹದ ಮಾಲಿಕನೂ ಹೌದು. "ಭಾರತದಲ್ಲಿ ಕಳೆದ ಏಳು ವರ್ಷಗಳಿಂದಲೂ ಇದ್ದೇನೆ ಎಂದೂ ಆತ ಹೇಳುತ್ತಾನೆ. ಆತ ಕೂಡ ಚೀನಾಕ್ಕೆ ಹಿಂತಿರುಗಿ ಹೋಗುವವನಲ್ಲ. ವಿಶೇಷ ಸ್ಥಿತಿಗತಿಗಳು ಹೇಗಿವೆ ಎಂದಾಗ, "ಓಹ್, ಚೆನ್ನಾಗಿವೆ" ಎಂದು ಆತ ಉದ್ಗಾರ ತೆಗೆದ.

ಡಜ್ರ್‌ಲಿಂಗಿನ ಇನ್ನೊಬ್ಬ ಹೊಟೇಲ್ ಮಾಲಿಕ ಕೂಡ ತನ್ನ ಅನುಭವಗಳನ್ನು ತಿಳಿಸುತ್ತ, "ಕಲ್ಕತ್ತ ಮತ್ತು ಡಾರ್ಜಿಲಿಂಗ್‌ಗಳಲ್ಲಿ ನನ್ನ ವ್ಯಾಪಾರ ಇದೆ. ನಾನು ಭಾರತದಲ್ಲಿಯೇ ಇರುವವನು. ನಾನು ಬೌದ್ಧ ಮತೀಯನಾಗಿದ್ದು ಈ ಮತದ ವಿಚಾರವಾಗಿ ಇನ್ನೂ ಬಂಡಿಪಟ್ಟ ಹೆಚ್ಚು ತಿಳಿಯಬಯಸುತ್ತೇನೆ ಭಾರತ ಎಷ್ಟೇ ಆಗಲಿ, ಬೌದ್ಧ ಮತ ಹುಟ್ಟಿಕೊಂಡ ನಾಡಲ್ಲವೇ...!" ಎಂದ. ಆತ ಹೇಳುತ್ತಾನೆ.

ಚೀನಾಕ್ಕೆ ಹಿಂದಿರುಗಿದ್ದ ಕೆಲವು ಜನ ಚೀನೀ ಸ್ಥಾನಬದ್ಧರು ದೇವಲಿ ಶಿಬಿರದಲ್ಲಿದ್ದ ತಮ್ಮ ಸ್ನೇಹಿತರಿಗೆ ಬರೆದಿದ್ದ ಕೆಲವು ಪತ್ರಗಳನ್ನೂ ನಾನು ನೋಡಿದೆ.

ಶ್ರುತಿಯೊಂದು ಕಾಗದದಲ್ಲಿಯೂ ಶಿಬಿರದಲ್ಲಿ ತಮಗೆ ಅಧಿಕಾರಿಗಳು ನೀಡಿದ ಒಂದೆಲ್ಲ ಒಂದು ಉಪಚಾರದ ಪ್ರಸ್ತಾಪವಿದ್ದು ಅದರ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸಲಾಗಿತ್ತು. ಕೋಟಾದಿಂದ ಮಂದಾಲಿಗೆ ವಿಶೇಷ ರೈಲಿನಲ್ಲಿ ಜನರು ಬಂದು ಮಾದರಿನ ಬಂದಾನಲ್ಲಿ ಇಡಗನ್ನು ಹತ್ತಿದಾಗ ತಮಗೆ ಈ ಸೌಜನ್ಯ ಲಭಿಸಿತ್ತು.

ಈ ಪತ್ರಗಳಿಂದ ಆರಿಸಿದ ಕೆಲವು ವಾಕ್ಯಗಳು ಹೀಗಿವೆ.

"ನಾವು ತುಂಬಾ ಸುಖವಾಗಿ ಪ್ರಯಾಣ ಮಾಡಿದೆವು. ನಮ್ಮನ್ನು ಅವರು ತುಂಬಾ ಚೆನ್ನಾಗಿ ನೋಡಿಕೊಂಡರು."

"ನಮ್ಮ ಬಗ್ಗೆ ಅವರು ತುಂಬಾ ಚೆನ್ನಾಗಿ ಆತಿಥ್ಯ ಕೊಂಡರು"

"ರೈಲಿನಲ್ಲಿ ನಾವೆಲ್ಲ ತುಂಬಾ ಸುಖವಾಗಿ ಪ್ರಯಾಣ ಮಾಡುತ್ತಿದ್ದೇವೆ"

"ಪ್ರಯಾಣ ತುಂಬಾ ಸುಖಕರವಾಗಿದೆ. ಸರ್ಕಾರ ನಮಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿದೆ. ನಮಗೆ ಯಾವ ಕೊರತೆಗಳೂ ಇಲ್ಲ"

ಚೀನೀ ಸ್ಥಾನಬದ್ಧರನ್ನು ಭಾರತ ಸರಕಾರ ಸರಿಯಾಗಿ ನೋಡಿಕೊಳ್ಳಲಿಲ್ಲ ಎಂಬ ಚೀನೀ ಸರ್ಕಾರದ ಆಪಾದನೆ ಎಷ್ಟು ಸುಳ್ಳು ಎಂಬುದು ಈ ಪತ್ರಗಳಿಂದ ಮತ್ತು ನಾವು ಇಲ್ಲಿ ಕಾಣುವ ಸ್ಥಿತಿಗತಿಗಳಿಂದ ಸ್ಪಷ್ಟವಾಗಿತ್ತದೆ. ಪೀಕಿಂಗ್ ರೇಡಿಯೋ ಹಾಗೂ ವೃತ್ತ ಪತ್ರಗಳು ಭಾರತದ ಉದಾರತೆಯನ್ನು ಕಡೆಗಣಿಸಿ, ತಮ್ಮ ಸ್ವಾರ್ಥಸಾಧನೆ ಮತ್ತು ಅಪಪ್ರಚಾರದ ನೀತಿಯನ್ನು ಯೇಗೆ ಮುಂದುವರಿಸುತ್ತವೆ ಎಂಬ ದನ್ನು ನಾವು ಅರಿತುಕೊಳ್ಳಬೇಕು. ಎಲ್ಲರನ್ನೂ ಎಲ್ಲ ಕಾಲದಲ್ಲೂ ವಂಚಿಸುವುದು ಸಾಧ್ಯವಿಲ್ಲ; ಹಾಗೆಯೇ ಭಾರತೀಯರನ್ನು ಅಪಪ್ರಚಾರದ ಮೂಢ್ಯಮತದಿಂದ ವಂಚಿಸುವುದೂ ಅಸಾಧ್ಯ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಆನಿಶ್ಚಿತ ಆಪತ್ಕಾಲಕ್ಕೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರೆಕರಿಂಗ್ ಮತ್ತು ನಿರಮ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮಸವಿಪದ ನಮ್ಮಶಾಖೆಯಲ್ಲಿ ದಯಮಾಡಿ ವಿಚಾರಿಸಿ

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಕೇರಳ ಕಾಳಿದಾಸ

ಮಹಾಕವಿ ವಲ್ಲತ್ತೋಳ್

ಶ್ರೀ ವಲ್ಲತ್ತೋಳರು, ಕೇರಳದ ಪ್ರಥಮ ಶ್ರೇಣಿಯ ಕವಿಗಳಾಗಿದ್ದಾರೆ. ಅವರ ಸಂಪೂರ್ಣ ಹೆಸರು ವಲ್ಲತ್ತೋಳ್ ನಾರಾಯಣ ಮೆನೋನ್ ಎಂದಾಗಿದೆ. ಅವರು ಸಂಸ್ಕೃತ ಮತ್ತು ಮಲೆಯಾಳದಲ್ಲಿ ದೊಡ್ಡ ವಿದ್ವಾಂಸರಾಗಿದ್ದರು. ಆದರೆ ಇಂಗ್ಲಿಷ್ ಭಾಷೆ ಆನರಗರಿತಿರಲಿಲ್ಲ. ತಮ್ಮ ಯೌವನದಲ್ಲೆ ಅವರು ವಾಲ್ಮೀಕಿ ರಾಮಾಯಣದ ಮಲೆಯಾಳ ಭಾಷಾಂತರವನ್ನು ಮಾಡಿದರು. ಇದು ಪದ್ಯರೂಪದಲ್ಲಿದೆ ಇದುದರಿಂದ ಅವರನ್ನು "ಕೇರಳ ವಾಲ್ಮೀಕಿ" ಎಂದು ಕರೆಯತೊಡಗಿದರು. ಇದೇ ಸಮಯದಲ್ಲಿ ಅಕಾಸ್ಮಾತ್ ಅವರ ಕೆವು ಡಾದರು. ವಾಲ್ಮೀಕಿ ರಾಮಾಯಣದಂತ ಹ ಮಹಾ ಕಾವ್ಯವನ್ನು ಅನುವಾದಿಸಿದ್ದ ರಿಂದಲೇ ಕವಿ ವಲ್ಲತ್ತೋಳರು ಕೆವುಡರಾ ದರೆಂದು ಕೆಲ ಪೂರ್ವಿಕ ಮನೋಭಾವನೆಯ ಜನರಾಡುತ್ತಿದ್ದರು ಇದರ ನೋಲೆ ಶ್ರೀ ವಲ್ಲತ್ತೋಳರು ಒಂದು ಕಾವ್ಯವನ್ನು ವನ್ನು ಬರೆದರು. "ಬಧಿರ ವಿಲಾಪಂ" (ಕೆವುಡರ ವಿಲಾಪ) ಎಂಬುದೇ ಅದರ ಹೆಸರಾಗಿದೆ. ಇದರಲ್ಲಿ ಕವಿ ತಮ್ಮ ಕೆವುಡತನವನ್ನು ಹೋಗಲಾಡಿಸಲು ದೇವಿ, ದೇವತೆಯರೊಡನೆ ವ್ಯಾಥನೆ ನಡೆಯುತ್ತಾರೆ. ವ್ಯಾಟೀಸ ಪದ್ಧತಿಯ ಅನುಸಾರ ಅವರು "ಚಿತ್ರಯೋಗಂ" ಎನ್ನುವ ಒಂದು ದೊಡ್ಡ ಕಾವ್ಯವನ್ನು ಕೂಡ ಬರೆದಿರುತ್ತಾರೆ. ಆದರೆ ಇದೆಲ್ಲವೂ ಅವರ ಪ್ರಾರಂಭದ ರಚನೆಯಾಗಿದೆ.

ಕೇರಳದಲ್ಲಿ ಶ್ರೀ ವಲ್ಲತ್ತೋಳರ ಜೀವನ ಮೂರ್ತಿ ನವಯುಗ ಆರಂಭವಾಯಿತು. ಇದೇ ಸಮಯದಲ್ಲಿ ಅವರು "ಚಿತ್ರ"ವೆಂಬ ಒಂದು ಕವಿತೆಯನ್ನು ರಚಿಸಿ ಪ್ರಕಟಿಸಿದರು. ಇದರಲ್ಲಿ ಬಾಲಕೃಷ್ಣ ಮತ್ತು ಅವನ ಮುರಲಿಯ ವರ್ಣನೆಯು ಹೊಸ ಕ್ರಮದಲ್ಲಿ ಮೂಡಲಾಗಿದೆ. ಆ ಕವಿತೆಯು ಭಾಷೆ ಅತ್ಯಂತ ಸುಧಾರವಾಗಿದೆ. ಅದನ್ನೋದಿ ಜನರು ಮುಗ್ಧರಾಗುತ್ತಿದ್ದರು. ವಲ್ಲತ್ತೋಳರ ಕೃತಿಗಳು ನಾನಿರ ಗಟ್ಟಲೆ ಸಂಖ್ಯೆಯಲ್ಲಿ ಮೂರಾಟವಾಗತೊಡಗಿದುವು.

ಸಂಸ್ಕೃತದಲ್ಲಿ ಕಾಳಿದಾಸನದರಂತೆಯೇ ಮಲೆಯಾಳದಲ್ಲಿ ವಲ್ಲತ್ತೋಳರಿಗೂ ಮಹತ್ವವ ಸ್ಥಾನವಿತ್ತು. ಆದುದರಿಂದ ಕೆಲವು ವಿದ್ವಾಂಸರು ಶ್ರೀಯುತರನ್ನು "ಕೇರಳ ಕಾಳಿದಾಸ" ಎಂದು ಕರೆಯುಲೂ ಸುರು ಮಾಡಿದರು. ಆದರೆ ಕೆಲವರು ಇದಕ್ಕೆ ಘೋರ ವಿರೋಧವನ್ನು ಪ್ರಕಟಿಸಿದರು. ಅವರು ಶ್ರೀ ವಲ್ಲತ್ತೋಳರ ಲೋಕ ಪ್ರಿಯತೆಯನ್ನು ನೋಡಿ ಮತ್ಸರಿಸ ತೊಡಗಿದ್ದರು. ಆದರೆ ಕಾಲಕ್ರಮೇಣ ಅವರೆಲ್ಲರೂ ವಲ್ಲತ್ತೋಳರ ಭಕ್ತರಾದರು. ಇವರ ಈ ಲೋಕಪ್ರಿಯತೆಯಿಂದಾಗಿ ಮದ್ರಾಸು ಸರಕಾರವು ಅವರಿಗೆ "ಆಸ್ಥಾನ ಕವಿ" ಎಂದು ಸನ್ಮಾನಿಸಿತು.

ಶ್ರೀ ವಲ್ಲತ್ತೋಳರು ಸಾಧಾರಣ ಒಂದುನೂರು ಗ್ರಂಥಗಳನ್ನು ರಚಿಸಿದ್ದಾರೆ. ಅವರ ಸಾಮಾಜಿಕ, ರಾಜನೀತಿಕ ಮತ್ತು ಸಾಂಸ್ಕೃತಿಕ ರಚನೆಗಳು "ಸಾಹಿತ್ಯ ಮಂಜರಿ"ಯಲ್ಲಿ ಸಂಗ್ರಹವಾಗಿದೆ. ಅದರ ಎಂಟು ಭಾಗಗಳು ಇದುವರೆಗೆ ಪ್ರಕಾಶಿಸಲ್ಪಟ್ಟಿದೆ.

ಶ್ರೀ ವಲ್ಲತ್ತೋಳರಿಗೆ ಸಂಪ್ರದಾಯಿಕತೆಯ ಸ್ಪರ್ಶ ಸ್ವಲ್ಪವೂ ಆಗಿರಲಿಲ್ಲ. ಕೃಷ್ಣನಂತೆಯೇ ಅವರು ನುತ್ತು ಹಜಾರ್ ಮಹಿಳೆಯರ ಗುಣಗಾನವನ್ನೂ ಅವರು ಗೈದಿದ್ದಾರೆ. ಅವರು ರಾಷ್ಟ್ರೀಯ ಕವಿಗಳಾಗಿದ್ದಾರೆ ಕೇರಳದಲ್ಲಿ ಪ್ರಥಮವಾಗಿ, ಕವಿತೆಗಳಲ್ಲಿ ರಾಷ್ಟ್ರೀಯ ವಿಚಾರಗಳನ್ನು ತಂದವರು ವಲ್ಲತ್ತೋಳರೇ. ಧ್ವಜ-ಗೀತ, ಚರಕಾಗೀತ ಇತ್ಯಾದಿ. ಇತ್ಯಾದಿಗಳನ್ನು ಮಲೆಯಾಳದಲ್ಲಿ ಮೊದಲಾಗಿ ಬರೆದವರು.

"ಪೋಣ ಪೋವೊ" ಕೇರಳದ ಧ್ವಜ-ಗೀತೆಯಾಗಿದೆ. ಇದರ ಕರ್ತವೂ ವಲ್ಲತ್ತೋಳರೇ ಆಗಿದ್ದಾರೆ. ಇದನ್ನು ಓದಿ ಕೇಳಿ ಕೇರಳದ ಸಾವಿರಗಟ್ಟಲೆ ಮಂದಿ ಮನದಲ್ಲಿ ರಾಷ್ಟ್ರೀಯ ಭಾವನೆಗಳು ಬಂದುವು. ಈ ಗಾನವನ್ನು ಹಾಡುತ್ತಾ ಸಹಸ್ರ ಸಹಸ್ರಮಂದಿ ಜೈಲನ್ನು ಸೇರಿದರು. ಸ್ವಾತಂತ್ರ್ಯ ಯುದ್ಧದಲ್ಲಿ ಭಾಗವಹಿಸಿದರು.

ಶ್ರೀ ವಲ್ಲತ್ತೋಳರು ಮಹಾತ್ಮಾ ಗಾಂಧಿಯವರನ್ನು ತಮ್ಮ ಗುರುವಾಗಿ ತಿಳಿದು ಕೊಂಡಿದ್ದಾರೆ. "ಎಂಡೆ ಗುರುನಾಥನ್" (ನನ್ನ ಗುರುನಾಥ) ಎಂಬ ಕವನವೇ ಇದಕ್ಕೆ ಪ್ರಮಾಣವಾಗಿದೆ. ಅವರು ಸಂಸಾತ್ಮಾ ಗಾಂಧೀಜಿಯವರಲ್ಲಿ ಭಾರತೀಯ ಗುರು-ಪರಂಪರೆಯ ಎಲ್ಲಾ ಗುಣಗಳನ್ನು ಕಾಣುತ್ತಿದ್ದರು. ಆ ಅವರ ಜ್ಯೋತಿಯು ಅರಂಧಕಾರವಾಗಿದ್ದಾಗ; ಗಾಯ ಕರಾಗಿದ್ದಾರೆ. ವಲ್ಲತ್ತೋಳರ ಈ ಭಕ್ತಿ ಸಮ್ಮನ್ನು ದೇಶಕ್ಕಾಗಿ ಸರ್ವಸ್ವ ಸಮರ್ಪಣ ಮಾಡಲು ಆಹ್ವಾನವನ್ನೀಯುತ್ತಿದೆ.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
Crown RUBBER STAMP CO.
BALMATTA ROAD, MANGALORE

ಹರಟೆ —

ತೆರಿಗೆಗಳು ಎಷ್ಟಾದರೂ ಬರಲಿ, ಬರಲಿ!

"ಆಯ್ಯೋ, ನಾನು ಬಡವ, ಒಂದಿಷ್ಟು ದಾನಾ ಧರ್ಮ ಮಾಡಿ! ಪುಣ್ಯಾ ಕಟ್ಟಿ ಕೊಳ್ಳಿ" ಎಂಬ ದೀನ ಕೊರಳು ಎಷ್ಟೋ ಕೇಳಿದ್ದೇವೆ. ಬಡ ಜನತೆಯು ಸಂಕೇತನೇ ಆ ಧ್ವನಿಯೆಂದು ಎಂಥವರಿಗೂ ಗೊತ್ತಾದ ಮಾತು. ಸಾವಾನ್ಯ ಬಡವರಿಂದ ಕಡೂ ಬಡವರ ವರೆಗಿರುವ ಎಲ್ಲಾ ಬಡಾ ಬಡ ಜನತೆಗೂ ಅಧಿಪತಿಯೆನಿಸಿದ ಭಿಕ್ಷುಕೇಶ್ವರನ ಕೊರಳ ಕೀಕ್ಷ್ಣ ಧ್ವನಿಯದು. ಈ ಧ್ವನಿಗೆ ಮಾರ್ದನಿಯಾಗಿ ಬೀಳುವ ಧ್ವನಿಯೇ ಕಾಸುಗಳ ಝಣ ಝಣಿಕೆ.

ಶ್ರೀ ವಲ್ಲತ್ತೋಳರ ಕವಿತೆಗಳು ಅನೇಕ ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿವೆ. ಅವರು ಮಹಾಕವಿಗಳಾಗಿರುವುದಕ್ಕೂ ಅಧಿಕರೂ ಆಗಿದ್ದಾರೆ. "ಕಥಕ್ಕಳಿ"ಯ ಪುನರುದ್ಧಾರವನ್ನೂ ಸಹ ಅವರು ನಿರಂತರ ಪರಿಶ್ರಮದಿಂದ ಮಾಡಿದರು. 'ಕಲಾ ಮಂಡಲಂ' ಎಂಬ ನೃತ್ಯ—ಕಲಾಲಯವನ್ನು ಸ್ಥಾಪಿಸಿ ವಲ್ಲತ್ತೋಳರು ಜಗತ್ತಿನ ಧ್ಯಾನವನ್ನು 'ಕಥಕ್ಕಳಿ'ಯ ಕಡೆಗೆ ಆಕರ್ಷಿಸಿದರು. ೨೦—೩೦ ವರುಷಗಳ ಹಿಂದಿನ ವರೆಗೆ ಕಥಕ್ಕಳಿಯು ಮುಂದಿರಗಳಲ್ಲಿ ಮಾತ್ರ ಅಭಿನಯಿಸಲ್ಪಡುತ್ತಿತ್ತು. ಅದು ಕೆಲವು ವೃತ್ತಿಗಾರರಿಗೆ ಅನ್ನ ಸಂಪಾದಿಸುವ ಒಂದು ಕಲಸವಾಗಿ ಮಾತ್ರ ಇತ್ತು. ಅದಕ್ಕೊಂದು ತುಚ್ಛ ಭಾವನೆಯಿತ್ತು. ವಲ್ಲತ್ತೋಳರು ಆ ದಿನ್ನು ಆ ನಾಲ್ಕು ಗೋಡೆಗಳ ಮಧ್ಯದಿಂದ ಜನರ ನಡುವೆ ತಂದು ನಿಲ್ಲಿಸಿದರು. ಕಥಕ್ಕಳಿಯ ಪ್ರಚಾರಕಾರ್ಯಕ್ಕಾಗಿ ಅವರು ಕಥಕ್ಕಳಿ ಸಂಘವೊಡನೆ ದೇಶ—ವಿದೇಶಗಳಿಗೆ ಪ್ರಯಾಣ ಬೆಳೆಸಿದರು. ಭರತ ನಾಟ್ಯ ಮತ್ತು ಮಣಿಪುರಿ ನೃತ್ಯಗಳಂತೆ 'ಕಥಕ್ಕಳಿ'ಯೂ ಲೋಕ ಪ್ರಿಯತೆಯನ್ನು ಗಳಿಸಿತು. ವಿದೇಶಗಳಿಂದಲೂ ಕೂಡ ಜನರು ಕಥಕ್ಕಳಿ ಅಭ್ಯಸಿಸುವುದಕ್ಕಾಗಿ "ಕಲಾಮಂಡಲ"ಕ್ಕೆ ಆಗಮಿಸುತ್ತಾರೆ.

ಶ್ರೀ ವಲ್ಲತ್ತೋಳರು ಆ ಮೇಲೆ ಋಗ್ವೇದದ ಮಲೆಯಾಳ ಅನುವಾದನವನ್ನು ಮಾಡಿದ್ದಾರೆ. ಆದರೆ ದುರ್ದೈವ ವಶಾತ್ ಅವರಿಂದ. ಜೀವಂತವಾಗಿಲ್ಲವೆಂಬುದು ವಿಷಾದಕರ ಸಂಗತಿಯಾಗಿದೆ.

—"SCHITRA" ಚಿತಡ್ಕ.

ಈ ಬಡ ಮೂರ್ತಿಯ ಮಹಿಮೆಯನ್ನು ಇನ್ನುವರೆಗೆ ನಾವು ಅಲಕ್ಷ್ಯವಾಗಿ ಕಂಡಿದ್ದೆವು. ಈಗಿನ ಪರಿಸ್ಥಿತಿಯಲ್ಲಿ ಅದು ತನ್ನಂತೆ ಬಹಿರಂಗವಾಗಿ ಹೋಯಿತು ನೋಡಿ.

ಒಂದು ಕಣ್ಣಿನಿಂದ ದೊಡ್ಡವರ ಚಲನ ವಲನಗಳನ್ನೂ, ಇನ್ನೊಂದು ಕಣ್ಣಿನಿಂದ ಬಡವರ ಚಲನ ವಲನಗಳನ್ನೂ ಭಾರತ ಸರಕಾರದ ಅರ್ಥಮಂತ್ರಿಯು ಕಣ್ಣುಗಳು ಎಷ್ಟು ಸೂಕ್ಷ್ಮವಾಗಿ ನೋಡುತ್ತಿದ್ದುವಂತೀರಿ?

ಚೀನಾ ದುರಾಕ್ರಮಣವಾಯಿತೆಂದಾಗಲೇ ಸರಕಾರದ ಕರೆಗೆ ಓಗೊಟ್ಟು ತಾಯ್ನಾಡ ರಕ್ಷಣೆಗೆ ನಾ ಮುಂದು ನೀ ಮುಂದು ಎಂದು ಓಡಿ ಬಂದವರಾರು? ಬಡವರು. ಧನ ಕನಕಾದಿಗಳನ್ನು ಹೆಚ್ಚು ಕಡಿಮೆ ಜೂರು ಚಾರು ಅಂತ ತಂದು ತಾದು ಉರಿದವರಾರು? ಹೆಚ್ಚಾಗಿ ಬಡ ಜನರೇ. ಹೆಸರು, ಕೀರ್ತಿ, ಪುಣ್ಯ ಇವುಗಳಲ್ಲಿ ಯಾವುದಾದರೊಂದು ಬರಲು ಇದೊಳ್ಳೇ ಸಂದರ್ಭ ಎಂದು ಎಷ್ಟೋ ಮಂದಿಗಾನಿಸಿದ್ದೀತು. ಅವನಿಗಿಂತ ಅವನ ಪ್ರಾಂತಕ್ಕಿಂತ, ತನ್ನದು—ತಮ್ಮ ಪ್ರಾಂತವು ಮುಂದಾಗ ಬೇಕೆಂಬ ಸ್ಪರ್ಧೆಯೂ ಬಹಳಕಡೆಸುಟ್ಟುಕೊಂಡಿತು ಈ ಕಾರ್ಯಕ್ಕೆ ದೊಡ್ಡ ದೊಡ್ಡ ವನೀಹೆಚ್ಚಾಗಿಹುರಿದುಂಬಿಸಿದ್ದೆಲ್ಲಾ ಬಡ ಜನತೆಯನ್ನೇ. ದೊಡ್ಡವರದಂತೂ ಕಟ್ಟಿಟ್ಟ ಗಂಟು—ಯಾವಾಗ ಬೇಕಾದರೂ ಬಿಚ್ಚುವಂತಾದ್ದು—ಉಂಟೇ ಉಂಟಲ್ಲ.

ಅದಕ್ಕಿಂತ ಎಷ್ಟೋ ಪಾಲು ದೊಡ್ಡದಲ್ಲವೇ ದೇಶದಲ್ಲೆಲ್ಲಾ ಹರಡಿರುವ ಕೋಟ್ಯಾನುಕೋಟಿ ಬಡ ಜನತಾ ಸಮುದ್ರದ ಚಿಲ್ಲರೆ ಶಕ್ತಿಯ ಕೂಡಿಕೆ? ಆರ್ಥಿಕ ದೇಶ ರಕ್ಷಣಾ ಕಾರ್ಯದ ಕೀರ್ತಿ ಬಡ ಜನತೆಯ ಕಡೆಗೇ ವಾಲಿದೆಯೆಂದಾಯಿತು.

ಇದರಲ್ಲೇನಾಶ್ಚರ್ಯ? ಹೇಳಿ? ದೊಡ್ಡ ದೊಡ್ಡ ತಾರೆಗಳನ್ನ ಬಾಳಿಸುವಂಥಾ ಸಿನಿಮಾಗಳಿಗೆ ಹಣ ಬರುವುದೂ, ಸಮುದ್ರದಂತೆ ಮುಗಿಸಿದ್ದು ಸಿನಿಮಾ ನೋಡುವ ಈ ಬಡ ಜನರಿಂದ ತಾನೆ? ಸಿನಿಮಾ ಥಿಯೇಟರುಗಳಲ್ಲಿ ಬಡವರ ಸೀಟುಗಳು ಯಾವಾಗಲೂ ಭರ್ತಿಯೇ. ದೊಡ್ಡವರ ಸೀಟುಗಳು 'ಬಾ'ದಲ್ಲೊಂದೋ 'ಲೀ'ದಲ್ಲಿನ್ನೊಂದೋ ಇದ್ದರೆ ಇತ್ತು ಇಲ್ಲದಿದ್ದರಿಲ್ಲ.

ಬೀದಿ ಬದಿಯಲ್ಲಿ ಗುಂಪು ಸೇರಿಸಿ ತಮಾಷೆ ತೋರಿಸಿ ಬಾಳುವವನೂ ಬಡವರ ದುಡ್ಡಿನಿಂದಲೇ ತನ್ನ ಕಲಾ ವ್ಯಾಪಾರ ನಾಗಿಸುತ್ತಾನೆ

ಇನ್ನೂ ಅನೇಕ ವೇದ್ಯವಾದ ಅನೇಕ ವಿಷಯಗಳಿವೆ

ಇಂತಹ ಬಡ ಜನತೆಯನ್ನು ಹಿಡಿಯಲಕ್ಕೆ ಸರಕಾರವು ಇಂಟರಿಗೂ ಗಟ್ಟಿ ಪ್ರಯತ್ನ ಮಾಡಲೇ ಇಲ್ಲ. ಅವರಲ್ಲಾ ಕಷ್ಟವೂ ಇಲ್ಲ. ಸರಕಾರವು ಹೊರಡಿಸುವ ಕಾಯಿದೆ ಕಾನೂನುಗಳಿಗೆ ಸುಲಭವಾಗಿ ಸಿಕ್ಕಿ ತಲೆ ಬಾಳಿಕೊಂಡು ಇರುವವರು ಬ

(ಇನ್ನೇ ಪುಟ ನೋಡಿ)

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿ:
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

• ಕುಮಾರಿ ಬಿಲ್ಲೆಗಳು •
(ರಿಜಿಸ್ಟರ್ಡ್ Regd.)
ಪ್ರಕೃತಿಯು ಪಿಳಲಗೊಂಡಾಗ ಉಂಟಾಗುವ ಕಾತರ ನವಾರಣೆಗೆ
ಸಮರ್ಪೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 10 ಸಾಮಾನ್ಯ ರೂ. 4/- ಮಧ್ಯಮ ರೂ. 6/-
ಉತ್ತಮ ರೂ. 9/-
P. Devee & Co. (N. J.) Calcutta—40

ಪ್ರತ್ಯಕ್ಷದರ್ಶಿಯ ಹೇಳಿಕೆ

ಚೀನಾದ ಕೆಂಪು ಪರದೆಯೊಳಗೆ

(ಲೇಖಾಂಕ ೧)

ನಿನ್ನೆಯ ಚೈನಾ ಇಂದಿರುವದಿಲ್ಲ. ನಿನ್ನೆಯ ಹಳೆದ ಚೈನಾ ಇಂದು ಕೆಂಪಾಗಿರುತ್ತದೆ ಹಿಂದಿನಿಂದಲೂ ಚೈನಾ ಆಕ್ರಮಣ ಮನೋಭಾವನೆಯ ರಾಷ್ಟ್ರವೇ ಇದೆ ಇದನ್ನು ನೆನೆಯೋಲಿಯನಾದಿ ರಾಜಕಾರಣಿಗಳೂ, ಸ್ವಾವಿಶಾ ವಿವೇಕಾನಂದರಾದಿ ದೀರ್ಘದರ್ಶಿಗಳೂ ಹಿಂದೆಯೇ ತಿಳಿಸಿರುವರು. ಆಂಗ್ಲೇಯರು ಭಾರತದಿಂದ ಕಾಲ್ತೆಗೆಯುವದರಲ್ಲಿ ಸಂದೇಹವಿಲ್ಲ. ಈಗ ರು ಹೋದ ನೇಲೆ ಚೈನೀಯರು ಆಕ್ರಮಣ ನಡೆಸುತ್ತಾರೆ. ಆದರೆ ಭಾರತ ಬೆದರಬೇಕಾಗಿರುವದಿಲ್ಲ ಆದು ಪುಟವಿಟ್ಟ ಚಿನ್ನದಂತೆ ಮತ್ತೆ ಕಂಗೊಳಿಸುತ್ತದೆಂದು ಸ್ವಾವಿಶಾ ವಿವೇಕಾನಂದರವರು ಹಲವಾರು ವರ್ಷಗಳ ಹಿಂದೆಯೇ ನಮಗೆ ಮನ್ನಾಷಣೆಯನ್ನಿತ್ತಿದ್ದರು ಒದರಲ್ಲೂ ಆಕ್ರಮಣ ಮನೋಭಾವನೆಯು ರಾಷ್ಟ್ರವೊಂದಕ್ಕೆ ಜಗತ್ತನ್ನೇ ಕಾಲ್ತುಳಿತಕ್ಕೊಳಪಡಿಸಿಕೂಳ್ಳಬೇಕೆನ್ನುವ ಸಿದ್ಧಾಂತದ ರಚಿಯವಾಗಿರುತ್ತದೆ; ಮತ್ತೆ ನವೀನ, ಆತ್ಯಾಧುನಿಕ ಆಯುಧೋಪಕರಣ ಹಾಗೂ ಬೆನ್ನು ತಟ್ಟುವ ಶಕ್ತಿಯ ಗೆಳೆತನವಾದರೆ ತೀರಿತು. ಇನ್ನೇನು ಹೇಳಬೇಕು? ವಂಗನಿಗೆ ಮದಿರೆಯನ್ನಿತ್ತು, ನೈಮೇಲೆ ಇರುನೆಗಳನ್ನು ಬಿಟ್ಟು, ಕೈಯಲ್ಲಿ ಕೊಳ್ಳಿ ಕೊಟ್ಟುಬಿಟ್ಟರೆ ಪರಿಸ್ಥಿತಿ ಹೇಗಿದ್ದೀತ? ಅದಕ್ಕೆ ಸ್ಪಷ್ಟ ಉದಾಹರಣೆಯೆನಿಸಿ ಚೈನಾ ನಮ್ಮ ವಂದೆ ಇದೆ ಹೀಗೆ ಚೈನಾ ಆಕ್ರಮಣ ನಡೆಸಲು ಹಲವಾರು ಕಾರಣಗಳನೆ ಅವುಗಳನ್ನೆಲ್ಲಾ ಅರಿತುಕೊಳ್ಳುವ ಮುಂಚೆ ಚೈನಾದ ಅಂತರಂಗವನ್ನು ಕಂಡು ಬರುವದು ಒಳ್ಳೆಯದು

ಚೈನಾವು ಕಮ್ಯೂನಿಸ್ಟ್ ಆಕ್ರಮಣಕ್ಕೆ ತುತ್ತಾದ ನೇಲೆ ಹಲವಾರು ಲೇಖಕರು ಅನೇಕ ಪುಸ್ತಕಗಳನ್ನು ಬರೆದಿರುವರು ಇಲ್ಲಿಂದ ನಮ್ಮ ಸಂಘ ಸದಸ್ಯರೂ ಅಲ್ಲಿಗೆ ಹೋಗಿ ಬಂದಿರುವರು. ಹಾಗೆ ಹೋಗಿ ಬಂದಿರುವ ಮಹನೀಯರಲ್ಲಿ ಡಾ। ರಘುವೀರ ಪ್ರಮುಖರು ಆದರೆ ದುರದೃಷ್ಟವಶಾತ್ ಅವರಿಂದು ನಮ್ಮ ಕಣ್ಮುಂದೆ ಇಲ್ಲ. ಇತರರು ಹಾಗೆ ಅವರಲ್ಲಿಗೆ ಹೋಗಿ ಖಾಸಾ-ಖಾಸಾ ಹಾಗೂ ದೃಶ್ಯ ನೋಡಲಿಕ್ಕಾಗಿ, ಭಾವಚಿತ್ರಗಳ ನ್ನೀಯಲಿಕ್ಕಾಗಿ ಹೋಗದೆ. ಚೈನಾದ ಕೆಂದು ಪರದೆಯೊಳಗೆ ಏನಿಹೆಂಬ ದನ್ನು ಕಂಡಲು ಪ್ರಯತ್ನಿಸಿದ್ದರು. ತಾ ನು ಕಂಡಿರುವದನ್ನು ಸಂಘ ಸದಸ್ಯರಿಗೂ, ಆಗ ಅವರಿದ್ದ ಪಕ್ಷಕ್ಕೂ ನಂತರ ಜನತೆಗೂ ತಿಳಿಸಿರುವರು ಅದರ ಬದಲ್ಕೆ ಆಗ ಅಷ್ಟು ಗಮನ ಕೊಡದೆ ಇದ್ದುದರಿಂದ ಈಗ ಚೆ ಚೈನ ವಿವರಗಳು ತಕ್ಷಣ ದೊರಕುವದಿಲ್ಲ. ಅನ್ಯ ದೇಶೀಯರೂ ಹಾಗೂ ಕಮ್ಯೂನಿಸ್ಟ್ ಕಪಿಮುಷ್ಟಿಯಿಂದ ತಪ್ಪಿಸಿಕೊಂಡು ಬಂದಿರುವವರೂ ಅನೇಕ ವಿಷಯಗಳನ್ನು ಪತ್ರಿಕೆಗಳ ಮೂಲಕವೂ ಪುಸ್ತಕಗಳ ಮೂಲಕವೂ ಹೊರ ಜಗತ್ತಿಗೆ ತಿಳಿಸಿರುವರು ಇದರಲ್ಲಿ ಮೂತೆಯರೂ ಭಾಗವಹಿಸಿರುವರು. ಅವರಲ್ಲಿ ಕಲವರ ಪುಸ್ತಕಗಳು ಕನ್ನಡಕ್ಕೂ ಭಾಷಾಂತರಿಸಲ್ಪಟ್ಟಿವೆ. ಅನ್ಯಾಗಳಲ್ಲಿ ಉತ್ಪ್ರೇಕ್ಷೆಯಂಶ ವಿದ್ದೀತೆಂಬ ಕಾರಣಕ್ಕಾಗಿ ಇಲ್ಲಿ ಅವುಗಳ ಗೋಜಿಗೆ ಹೋಗದೆ ಬೇರೆಯವರತ್ತ ನೋಡಲಾಗಿರುತ್ತದೆ. ಕ್ಷ-ತನುಭವ ಪಡೆದಿರುವವರ ಹಾಗೂ ಭಾರತದತ್ತ ಅಭಿಮಾನ, ಗೌರವಗಳಿರುವವರ ಅಭಿವಿಶ್ವಾಯಗಳನ್ನು ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಕೆಲವು ತಿಂಗಳುಗಳ ಹಿಂದೆ ಮದ್ರಾಸಿನ ಆಂಗ್ಲ ದೈನಿಕ 'ದಿ ಹಿಂದೂ'ವಿನಲ್ಲಿ ಪ್ರಕಟವಾಗಿರುವ ಲೇಖನದಿಂದ ಅಭಿವಿಶ್ವಾಯಗಳನ್ನು ಸಂಗ್ರಹಿಸಲಾಗಿರುತ್ತದೆ

ಆ ಲೇಖಕರು ೧೯೪೧ನೇ ಇಸವಿಯ ಸಮಯ ಭಾವನಿಪುರದ ಕಾಲೀನ ಬಂಗಾಲಿ ಕುಟುಂಬದಲ್ಲಿ ಜನ್ಮ ತಳೆದರು. ೧೯೪೪ರ ಸಮಯ ಅವರು ಹುತಾತ್ಮರಾಕ್ ಬಿಹಾರಿ ಟೋಸರೊಂದಿಗೆ ಲಾರ್ಡ್ ಹಾರ್ಡಿಂಜನ ನೇಲೆ ಸಿಡಿಗುಂಡು ಪ್ರಯೋಗದಲ್ಲಿ ಪಾತ್ರವಹಿಸಿದ್ದರು. ಆ ಘಟನೆಯಿಂದಾಗಿ ಅವರು ಬಂಗಾಳ್ಯಾಗಿ ಜಪಾನಿಗೆ ಓಡಿಹೋದರು. ೧೯೪೩ರ ವರೆಗೂ ಅವರು ಜಪಾನಿನಲ್ಲೇ ಇದ್ದರು. ಅಷ್ಟರಿಂದ ಶಾಂಘೈಯಿಗೆ ತೆರಳಿದರು. ಅಲ್ಲಿ ಸ್ಥಾಧಾರಣ ೩೫ ವರ್ಷಗಳ ವರೆಗೆ ಇದ್ದರು ತಾನೇತಕ್ಕೆ ಶಾಂಘೈಯಿಯನ್ನು ಬಿಟ್ಟೆನೆಂಬುದನ್ನು ಅವರು ತಮ್ಮ ಲೇಖನದಲ್ಲಿ ತಿಳಿಸಿರುವರು.ಅವರು ಅಫೀವಪ್ರಜಾ ಭರಣಗಳ ವ್ಯಾಪಾರ ನಡೆಸುತ್ತಿದ್ದರು ಕಳೆದ ಕಾಳಗದ ಕಾಲ ಅವರಲ್ಲದ್ದುಕೊಂಡೇ ಭಾರತದ ಬಿಡುಗಡೆಗಾಗಿ ಸ್ರಯತ್ನಿಸಿದ್ದರು ಈಗ ಅವರು ಟೋಕಿಯೋದಲ್ಲಿ (ಜಪಾನ) ಇದ್ದಾರೆ ಕೆಲ ಕಾರಣಾಂತರಗಳಿಂದ ಅವರು ತಮ್ಮ ಹೆಸರನ್ನು ತಿಳಿಸಿರುವದಿಲ್ಲ ಕೇವಲ ಬ-ಬು ಬೊಬ್ಬೆ ಎಂಬ ಹೆಸರನ್ನಲ್ಲಿ ಕೊಟ್ಟಿರುವರು. ಇತರರ ಅಭಿಪ್ರಾಯಗಳಿಗಿಂತ ಇವರ ಇಪ್ರಾಯವು ನವಗೆ ಹೆಚ್ಚು ಪ್ರಯೋಜನಕಾರಿಯೂದೀತು, ಸಂಬಂಧಪಡುವಾಗಿವೆಯೆಂಬ ದೃಷ್ಟಿಯಿಂದ ಅವನ್ನೇ ಇಲ್ಲಿ ಕೊಡಲಾಗಿರುತ್ತದೆ. ಅವರು ಸಾಧಾರಣ ೩೫ ವರ್ಷ ಅಲ್ಲಿದ್ದರಲ್ಲದೆ, ಕಮ್ಯೂನಿಸ್ಟ್ ಆಕ್ರಮಣದ ಕಾಲದಲ್ಲೂ ಅಲ್ಲೇ ಇದ್ದರು.

ಶಾಂಘೈಯಿಂದ ಸ್ವದೇಶಿ ಕಮ್ಯೂನಿಸ್ಟರು ೧೯೪೯ರ ಮೇ ತಿಂಗಳಂದು ಆಕ್ರಮಿಸಿಕೊಂಡರು. ಮತ್ತಿಗೆ ಹಾತಿದೊಡನೆಲೆ ಇದ್ದದ್ದು ನಿವಾಸಿಗಳ ಹೂರ್ಣ ವಿಳಾಸ ಇತ್ಯಾದಿ ಕುಟುಂಬ ವಿವರಣೆಗಳನ್ನು ಪಡೆದುಕೊಂಡರು. ಈ ಕಾರ್ಯವು ಬಹಳ ಪರಿಪೂರ್ಣತೆಯಲ್ಲಿ ನಡೆಸಲ್ಪಟ್ಟಿತು. ಆ ದಿಂದಾಗಿ, ಅದ್ಯಾವನೇ ಆಗಿರಲಿ-ಧನಿಕನೇ ಇರಲಿ, ಬಡವನೇ ಇರಲಿ, ಭೂಮಾಲಿಕನೇ ಇರಲಿ, ವ್ಯಾಪಾರಿಯೇ ಇರಲಿ, ಸೈನಿಕನೇ ಇರಲಿ ತನ್ನ ಪೂರ್ಣ ಪತ್ತೆಯನ್ನು ಸರಕಾರಕ್ಕೆ ಸೂಚಿಸಬೇಕಾಯಿತು. ಆ ಪತ್ತೆಯ ನೇಲೆ ಒಂದು ವರ್ಷದೊಳಗೆ ಹಲವಾರು ಜನರನ್ನು ಸೆರೆಮನೆಯೊಳಗೆ ಕಳುಹಿಸಲಾಯಿತು -ಕಾರಣ, ಪ್ರತಿಗಾಮಿಗಳಾಗಿದ್ದರೆಂಬುದು!

'ಕ್ರಾಂತಿಯ ಹಿಂದುಗಡೆಯೇ ಬಲಾತ್ಕಾರದ ಶಕ್ತಿಯೂ ಬಂದಿತ. ಎಲ್ಲರೂ ಕಮ್ಯೂನಿಸಮನ್ನು [ಸಮತಾವಾದ] ಕಡ್ಡಾಯವಾಗಿ ಕಲಿತುಕೊಳ್ಳಲೇಬೇಕು. ಕ್ರಮಶಃ 'ಮೂರು ಆರಾದನೆಗಳ ಶಿಕ್ಷೆ, 'ಐದು ಆರೋಪದ' ಶಿಕ್ಷೆಗಳು ಪ್ರಯೋಗಕ್ಕೆ ಬಂದುವು. ಮೂರು ಆಸಾದನೆಗಳ್ಯಾವುವೆಂದರೆ--೧)ವ್ಯಾಪಾರಿಗಳು ತೆರಿಗೆ ತಪ್ಪಿಸಲವರು ೨)ಲಂಚ ಸ್ವೀಕರಿಸುವವರು/ ಕೊಡುವವರು. ೩) ಸರಕಾರಿ ಭೋರಡಿಗೆ ಎದುರಾಗಿ ನಿಲ್ಲುವದು ಈ ರೀತಿಯ ಶಿಕ್ಷೆಗಳನ್ನು ಬಳಕೆಗೆ ತಂದು ಭೂಮಾಲಿಕರ ಆಸ್ತಿಯನ್ನು ಸರಕಾರ ವಶಪಡಿಸಿಕೊಂಡಿತು. ವಿಶ್ವವಿದ್ಯಾಲಯದ ಹಾಗೂ ಇತರ ತರುಣರನ್ನು ಸೇರಿಸಿ ಇವರಿಗೆ ತಮ್ಮ ಹಿರಿಯರನ್ನು ಹೀಯಾಳಿಸುವಸವಿಧಾನವನ್ನು ವಿವರಿಸಲಾಯಿತು. ಇವರಿಗೆ ಕಮ್ಯೂನಿಸಂ ಅಂದರೆ ಏನೆಂಬುದು ಲವಲೇಶವೂ ಗೊತ್ತಿರಲಿಲ್ಲ. ಆದರೆ ಅಡಳಿತ ಚಕ್ರದ ಬಲಾತ್ಕಾರದಿಂದಾಗಿ ಇವರು ಹಾಗೆನೂಡಲೆಬೇಕಾಯಿತು. ಕೆಲವೆಡೆಗಳಲ್ಲಿ ಹಿರಿಯರನ್ನು ಹಿಡಿದು ಬಂಧಿಸಿ ದೂರದ ಸೆರೆಮನೆಗೆ ಸಾಗಿಸಲಾಯಿತು. ಇಂತಹ ಘಟನೆಗಳಲ್ಲಿ ಕೆಲವು ಕಲ ತಮ್ಮ ಮಕ್ಕಳೇ ಹಿರಿಯರ ಬಂಧನಕ್ಕೆ ಕಾರಣರಾಂದದ್ದು ಉಂಟು. ಹೀಗೆ ಬಂಧನಕ್ಕೊಳಗಾದ ಅನೇಕ ಹಿರಿಯರು ಆತ್ಮಹತ್ಯೆ ಮಾಡಿಕೂಡದ್ದೂ ಇದೆ.

ರಕ್ಷಣೆಯಿಲ್ಲದ ಸರಳವಸ್ತ್ರಧಾರಿ ತರುಣರು ಹಾಗೂ ಇತರ ಕಾನೂನುಗಾರರು ಪ್ರತಿ ಮನೆಯನ್ನು ಕ್ರಮಶಃ ಕಾಯುತ್ತಿದ್ದರು. ಯಾರನ್ನಾದರೂ ಬಂಧಿಸಬೇಕಾಗಿದ್ದಲ್ಲಿ ಸರಿ, ಎಲ್ಲಾ ಮನೆಗಳನ್ನೂ ಶೋಧಿಸುತ್ತಿದ್ದರು. ಪೋಲೀಸರು ಆಗಾಗ ಪಕ್ಕನೆ ಬಂದು ಯಾರನ್ನಾದರೂ ಪೋಲೀಸ್ ಠಾಣೆಗೆ ಕರೆತಂಕೊಂಡು ಹೋಗುತ್ತಿದ್ದರು ಅಲ್ಲಿ ಇವರು ಕಮ್ಯೂನಿಸ್ಟ್ ಪದಕಾದಿಕ ಉಂಟಾಗಿರುವ ಅನುಭವಗಳನ್ನು ಹಾಗೂ ಅವರ ಯೋಚನೆಗಳನ್ನು ವಿಚಾರಿಸುತ್ತಿದ್ದರು. ಅದು ಸ್ವೀಯರಿಗೂ ತಪ್ಪಿರಲಿಲ್ಲ ಪೋಲೀಸರಿಗೆ ಅವಮಾನೆಯನ್ನು ರಜುವಾತುಪಡಿಸಲಿಕ್ಕಾಗದಿದ್ದಾಗಲೆಲ್ಲಾ ಆರೋಪಿಗಳ ಕೊಲೆ ನಡೆಸಲಾಗುತ್ತಿತ್ತು.

'ಮೂರು ಆರೋಪ', 'ಐದು ಆರೋಪ'ಗಳ ಮೇಲೆ ತೂಗು ಕಂಭಕ್ಕೆ ಕಳಹಿಸಲ್ಪಟ್ಟವರಲ್ಲಿ ಕೆಟ್ಟಿನವರು ಜಮೀನ್ದಾರರಾಗಿದ್ದರೆ. ಕಾರ್ಮಿಕ ರಂಗ ಹಾಗೂ ಸಾಮಾಜಿಕ ಸಾಧಾರಣೆಯಹೆರಿನಲ್ಲಿ ಬಳಕೆ ಒಡವಾಯಿಗಳನ್ನು ಸೆರೆಮನೆಗೆ ಕಳಹಿಸಲಾಯಿತು. ಹೀಗೆ ಹೋದವರಲ್ಲಿ ಅನೇಕರು ತದೆಲ್ಲಿಗೆ ಹೋಗಿದ್ದಾರೆ, ಸತ್ತು ಹೋಗಿದ್ದಾರೆಯೇ? ...ಆದೇನೂ ತೀರ್ಮ ಬಂದಿರುವದಿಲ್ಲ ತನ್ಮ ಶ್ರಮದ ಫಲವನ್ನು ಅನುಭವಿಸದೆ ಹಾಗೆ ಶೇಖರಿಸಿಟ್ಟಿರುವ ಒಡವಂಯಿಗಳ ಕರುಣಾಕ್ರಂದನ ಕೆಥೆಯನ್ನು ಕೇಳಿದರೆ ಹೃದಯ ಬಡಿತ ನಾಪ್ತಿಯೂ ದೀತ. ಇವರ ಸಂಪತ್ತನ್ನೆಲ್ಲಾ ಸೂರೆಮಾಡಿ, ಅವರ ನೇಲೂ ಅಪವಾದೆಗಳನ್ನು ಹೊರಿಸಿ ಒಂಭಿಖಾನೆಗೆ ಕಳುಹಿಸಲಾಗುತ್ತಿತ್ತು.

೧೯೫೨ರಲ್ಲಿ ನಡೆದ ಒಂದು ಘಟನೆ ಈ ರೀತಿ ಇನೆ ಸಾಧಾರಣ ೧೯೫೩ ಆಗೂ ೫೪ ತಿಂಗಳೊಳಗೆ ಪರರಾಷ್ಟ್ರೀಯರನ್ನು ಹೊರಗೆ ಕಳ ಹಿಸಲಾಗುತ್ತದೆಂಬ ವದಂತಿಯನ್ನು ಜೂರೋ ಹುಟ್ಟಿಸಿದರು. ಈ ಸುದ್ದಿ ಬಾಬು ಬೊಬ್ಬಿಯವರ ಶ್ರೀಮತಿಯವರ ಕಿವಿಗೂ ಬಿತ್ತು. ಈ ಸಂಗತಿ ಪೋಲೀಸರ ಕಿವಿಗೂ ಬಿತ್ತು ಅವರು ತಿನೇಕ ಸಲ ಬಾಬು ಬೊಬ್ಬಿಯವರ ಮನೆಗೆ ಬಂದರು. ಅವರಿಗೆ ಆ ಸದ್ದಿ ಎಲ್ಲಿ ಸಿಕ್ಕಿತು, ಹೇಗೆ ಸಿಕ್ಕಿತು...ಇಂತಹ ಹಲವಾರು ಪ್ರಶ್ನೆಗಳನ್ನು ಅವರು ಕೇಳಿದರು. ಅಂತಾರಾಷ್ಟ್ರೀಯ ಸಂಪರ್ಕ ಖಾತೆಯ ಕಾರ್ಯದರ್ಶಿಯಾಂಗ ಮತ್ತು ಲಿಯಾಂಗರಿಗೆ ಬಾಬು ಬೊಬ್ಬಿಯವರು ಈ ರೀತಿ ಹುಡುಕಾಡುವ ದರಲ್ಲೇನೂ ಪ್ರಯೋಜನವಿಲ್ಲ; ಸುದ್ದಿಯನ್ನು ಯಾರಿಂದರೂ ಕ್ರಯಾಣೆರು ಪಡಿಸಿರಬಹುದು; ಈ ರೀತಿ ಸಮಯ ವ್ಯರ್ಥ ಗೊಳಿಸುವದು ಸರಿಯಲ್ಲವೆಂದು ಸ್ಪಷ್ಟವಾಗಿ ಸೂಚಿಸಿದರು ಅನಂತರ ಅವರ್ಯಾರೂ ಅವಕ್ಕಾಗಿ ಅಲ್ಲಿಗೆ ಆಗಮಿಸಲಿಲ್ಲ

ವರ್ತಕರ ನೇಲೆ ಕರಡಿಪ್ಪಿಸುವಿಕೆಯ ಅದರಾಧನೆಯನ್ನು ಹೊರಿಸಿ ಹೇರಳ ದಂಡನನ್ನು ಸೆಳೆದುಕೊಳ್ಳಲಾಯಿತು. ಇನ್ನೂ ಕೆಲವರ ನೇಲೆ ಸಾಮಾನ್ಯಿ ಶೀಲ ಜೆಯ ಅಪವಾದನೆಯನ್ನು ಹೊರಿಸಲಾಗುತ್ತಿತ್ತು. ಆಗ ಎಲ್ಲಾ ಸಾ-ಮಾನ್ಯಿಗಳನ್ನು ಸುಟ್ಟಿಗೋಲು ಹಾಕಿಕೊಳ್ಳಲಾಗುತ್ತಿತ್ತು. ಬಂಡವನ್ನು ತೆರಲಾಗದಿದ್ದವರ ಆಸ್ತಿಪಾಸ್ತಿಗಳನ್ನು ಸರಕಾರ ವಶಪಡಿಸಿಕೊಂಡು ಅವರನ್ನು ಸೆರೆವಾಸಕ್ಕೆ ಕಳ ಹಿಸುತ್ತಿತ್ತು.

ಇಷ್ಟಾಗುವಾಗ ಬಹುತೇ ಸನ್ಯೆತನ್ಮ ಕಂಠಕ್ಕೆ ಮುಖವನ್ನು ಕಾಣಿಸಲಾರಂಭಿಸಿತು ಕೆಲ ಕರಕಾರಿಗಳನ್ನು ತೆಗೆದುಕೊಳ್ಳಬೇಕಾದರೆ ಉದ್ದನೆಯ ಸಾಲಿನಲ್ಲಿ ತಾಸುಗಟ್ಟಲೆ ಕಾಲ ನಿಲ್ಲಬೇಕಾಗುತ್ತಿತ್ತು. ೧೯೫೨ರ ನಿಯಂತ್ರಣ ನಿಯಮದ ನೇರೆಗೆ ಕೆಂಡಲಾಗುತ್ತಿದ್ದ ಆಹಾರ ಸಾಮಾನ್ಯಿಗಳು - ಮಾಸ್ತ್ತೆರಿತು ರಾತ್ಲು ಅಕ್ಕಿ, ಒಂದೂವರೆ ರಾತ್ಲು ಸೂಂಗು, ಒಂದೂವರೆ ರಾತ್ಲು ಮಿನ, ಒಂದ ರಾತ್ಲು ಅಡಗೆಯ ಎಣ್ಣೆ, ಇಪ್ಪತ್ತೈದಂ. ಗ್ರಾಂ ಸಕ್ಕರೆ— ಇದು ಒಬ್ಬ ಮನುಷ್ಯನಿಗೆ ಒಂದು ವಾರಕ್ಕೆ! ಗ್ರಾಮಾಲ್ಲಿ ಸಾಮೂಹಿಕ ಕೃಷಿ (ಕಮ್ಯೂನ್) ಆರಂಭ ಆಪೊಡನೆ ಬಾನಾವಿ, ಮನೆಯಿಡುಗಿ ಎಲ್ಲಾ ನಿಂತೋಯಿತು ಎಲ್ಲರೂ ಸಾಮೂಹಿಕ ಭೋಜನಾಲಯದಲ್ಲಿ ಊಟ ಮಾಡಬೇಕು. ಸಾಮೂಹಿಕ ಕೃಷಿಗೆ ಸೇರಲು ಜನರನ್ನು ಬಲಾತ್ಕರಿಸಲಾಗುತ್ತಿತ್ತು. ಹಾಗೆ ಒಪ್ಪದಿದ್ದವರ ಹೆಸರುಗಳನ್ನು ದೊಡ್ಡ ಅಕ್ಷರಗಳಲ್ಲಿ ಬರೆದು, ಪ್ರೋಹಿಗ ಸಂಘಟನೆಲ್ಲಿ ಸೇರಿಸಿ, ರಸ್ತೆಗಳ ಎದಿಗಳಲ್ಲಿ ತಾಗಿಸುತ್ತಿದ್ದರು. ಹಾಗಾಗಿ ಎಲ್ಲರೂ ಒಪ್ಪಲೇ ಬೇಕಾಗುತ್ತಿತ್ತ.

ಈ ರೀತಿ ಅನತೆಯೆನ್ನು ಒಂದೆಡೆ ಸೇರಿಸಿ, ಒಂದೆಡೆಯಲ್ಲೇ ಊಟಕ್ಕೆ ವಿಸರ್ಜಿಸಲು ಕಾರಣವೇದರೆ, ಆಹಾರ ಪದಾರ್ಥಗಳನ್ನು ಅಪಪ್ಪ ಹೆಚ್ಚು ರಫ್ತು ಮಾಡಲಿಕ್ಕಾಗಿ. ಅಷ್ಟೆ ಒದಗಿಸಲಾಗುತ್ತಿದ್ದ ಆಹಾರವನ್ನು ನಿಯಂತ್ರಣ ನಿಯಮಗಳಿಗೆ ಸ್ಪಷ್ಟವಾಗಿ ಒಳಗಾಗುತ್ತಿತ್ತು. ಅದು ಯಾರ ಅರ್ಧ ಹೆಚ್ಚಿಗೂ ಸಾಕಾಗುತ್ತಿರಲಿಲ್ಲ ಹೆಚ್ಚಿ ಚುರ್ ಚುರ್ ನ್ನುತ್ತಿರುವಾಗ, ಬಾಯಿ ತಪ್ಪಿ ಅದೇನನ್ನಾದರೂ ಆದಿದರೆ ತೀರಿತ, ತಮ್ಮನ್ನು/ಅವರು ಕಾರ್ಮಿಕ ಸಮಯದ ನಾಶರವೂ ದಂಡಿಸುವುದೇಕಾಗುತ್ತಿತ್ತು. ಹೊಟ್ಟೆ ಬಾಲಿ, ಕೆಲಸಕ್ಕೆ ಕೈಯಲ್ಲಿ ತ್ರಾಣವಿಲ್ಲ. ಮುಂದಿನದ್ದೆ ಭಯ ಆವರಿಸಿದಾಗ

(ಉಳಿದ ಮುಂದಿನ ವಾರ)

NAVAYUGA
Kannada Weekly
UDIPI
Founder
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪	ಉಡುಪಿ ೧೩-೬-೧೯೬೩	ವಾರ ೪೦

ಖಾಸಗಿ ಶಿಕ್ಷಣ ರಂಗ

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಶಿಕ್ಷಣಾಪೇಕ್ಷೆಯಿಂದಾಗಿ ವಿದ್ಯಾಲಯಗಳನ್ನು ಅಧಿಕಾಧಿಕವಾಗಿ ತೆರೆಯುವುದಕ್ಕೆ ಸರಕಾರವು ಪ್ರೋತ್ಸಾಹ ಕೊಡುತ್ತಿದೆ; ಇದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಕರ್ನಾಟಕದ ಶಿಕ್ಷಣ ಸಚಿವ ಶ್ರೀ ಎಸ್. ಆರ್. ಕಂಠಿಯವರು ಪ್ರಚಲಿತ ವರ್ಷದಲ್ಲಿ ಇತಿಯ ರಂಜ್ಯದಲ್ಲಿ ೧೫೩ ಹೊಸ ಹೈ ಸ್ಕೂಲುಗಳನ್ನು ತೆರೆಯಲು ಅನುಮತಿ ನೀಡಲಾಗಿದೆಯೆಂದು ತಿಳಿಸಿದ್ದಾರೆ, ಇದು ಸರಕಾರಕ್ಕೆ ವಿದ್ಯಾ ಪ್ರಸಾರದಲ್ಲಿರುವ ಕಳಕಳಿಯನ್ನು ಸೂಚಿಸುತ್ತದೆ. ಇದೇ ರೀತಿಯಲ್ಲಿ ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯುವುದರಲ್ಲೂ ಸರಕಾರವು ಉದಾರ ನೀತಿಯನ್ನು ತಳೆಯುತ್ತಿದೆ; ಖಾಸಗಿ ವಿದ್ಯಾಲಯ ಶಿಕ್ಷಣವನ್ನು ಜ್ಯಾರಿಗೆ ತಂದ ಸರಕಾರವು ಅದನ್ನು ಯಶಸ್ವಿಗೊಳಿಸುವಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸುತ್ತಿದೆ. ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರತಿ ಹಳ್ಳಿಗೂ ಒಂದೊಂದು ಪ್ರಾಥಮಿಕ ಶಾಲೆಯನ್ನು ಒದಗಿಸುವ ಗುರಿಯನ್ನೂ ಸರಕಾರ ಇಟ್ಟುಕೊಂಡಿದ್ದು, ಇದನ್ನು ತಲಪುವಲ್ಲಿ ಅದು ತೀವ್ರವಾಗಿ ಧಾವಿಸುತ್ತಿದೆ. ನಿಜಕ್ಕೂ ಪ್ರಜಾಸ್ಫುತ್ವದಲ್ಲಿ ಇಂತಹ ಯೋಜನೆಯು ಅಭಿನಂದನೀಯವು

ನಮ್ಮ ಸಂವಿಧಾನವು ಅನಿವಾರ್ಯವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಕೂಡಿಕೊಂಡಿದೆ. ಅದು ಸರಕಾರದ ಆದ್ಯ ಕರ್ತವ್ಯವಾಗಿನೆ ಅದು ದರಿಂದಲೇ ಅದು ಹಳ್ಳಿ ಹಳ್ಳಿಯಲ್ಲೂ ಏಕೋಪಾಧ್ಯಾಯ ಶಾಲೆಗಳನ್ನು ತೆರೆಯುತ್ತಿದೆ ವಿದ್ಯಾರ್ಥಿಗಳಿಗೆ ಹಲವು ವಿಧದ ಛಾತ್ರವೃತ್ತಿಗಳನ್ನೂ ಉಚಿತ ಒಟ್ಟಬರಿ ಮತ್ತಿತರ ಉಸರ್ಗೀಗೀ ಸಾಧನೋಪಕರಣಗಳನ್ನೂ ಕೊಡುತ್ತಿದೆ ಒಟ್ಟಿನಲ್ಲಿ ನಾನಾ ಮುಖಗಳಲ್ಲಿ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಮುತುವರ್ಜಿ ವಹಿಸುತ್ತಿದೆ. ಸರಕಾರವು ಉದ್ದೇಶಿಸಿರುವ ಈ ಮಹತ್ವಾಕಾಂಕ್ಷೆಯ ಸರಕಾರಿ ಪಲಯದಂತೆಯೇ ಖಾಸಗಿ ಕ್ಷೇತ್ರವೂ ಶಿಸ್ತಾಸಹದಿಂದ ಕಾರ್ಯನಿರತವಾಗಿದೆ; ಇಂದಿಗೂ ಅದು ವಿದ್ಯಾದಾನದಂತಹ ಮಹಾ ಪುಣ್ಯ ಕಾರ್ಯದಲ್ಲಿ ಅವಿಚ್ಛಿನ್ನವಾಗಿ ನಡೆಯುತ್ತಿದೆ. ಒಂದು ನೇಳೆ, ಖಾಸಗಿ ವಲಯವು ಈ ದಿಸೆಯಲ್ಲಿ ಮುಂದೆ ಬಾರದಿರುತ್ತಿದ್ದರೆ, ಸರಕಾರದ ಜವಾಬ್ದಾರಿಯೂ ದ್ವಿಗುಣಗೊಳ್ಳುತ್ತಿತ್ತು ಹಾಗಾದ ಪಕ್ಷ, ತನ್ನ ಪರವಾಗಿ ಉದ್ದೇಶ ಸಾಧನೆಯಲ್ಲಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ಪ್ರೋತ್ಸಾಹ—ಸಹಾಯಗಳನ್ನು ನೀಡುವುದು ಕೂಡ ಸರಕಾರದ ಕರ್ತವ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ, ನಮ್ಮ ರಾಜ್ಯ ಸರಕಾರ ಖಾಸಗಿ ಶಿಕ್ಷಣ ಕ್ಷೇತ್ರವನ್ನು ಸುದೃಷ್ಟಿಯಿಂದ ನೋಡುತ್ತಿದೆಯೆ? ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ನೀಡುವಲ್ಲಿ ಅದು ಉದಾರ ನೀತಿಯನ್ನು ತಳೆಯುತ್ತಿದೆಯೆ? ಇದಕ್ಕೆ ಸಮೂಹಾನಕರ ಉತ್ತರವು ದೊರೆಯುತ್ತಿಲ್ಲ

ಪ್ರಾಥಮಿಕ ಶಿಕ್ಷಣದ ಹೊರೆ ಸರಕಾರದ್ದಿರುವಾಗ, ಅದೇ ಹೊರೆಯನ್ನು ಹೊತ್ತ ಖಾಸಗಿ ರಂಗಕ್ಕೂ ಅವಶ್ಯಕ ವೆಚ್ಚದ ಬಾಯಿಗೂಡಿಸುವುದಕ್ಕೆ ಅವಶ್ಯವೆನಿಸುವಷ್ಟು ಉದಾರವಾಗಿ ಸಹಾಯಧನ ನೀಡಬೇಕಿತ್ತು. ಆದರೆ, ಸರಕಾರವು ಇಂದು ಅನುಸರಿಸುತ್ತಿರುವ ನೀತಿಯಿಂದ ಖಾಸಗಿ ಪ್ರಾಥಮಿಕ ಶಾಲೆಗಳ ಆಡಳಿತೆಯು ಕುಸಿಯುತ್ತ ಬರುತ್ತಿದೆ; ಮತ್ತು ಇದರ ಪರಿಣಾಮವು ಖಾಸಗಿ ಆಡಳಿತೆಯಲ್ಲಿ ದುಡಿಯುತ್ತಿರುವ ಅಧ್ಯಾಪಕರ ಮೇಲೆ ಪರೋಕ್ಷವಾಗಿ ಬೀಳುತ್ತಿದೆ. ಅಧ್ಯಾಪಕರ ಸ್ಥಿತಿಗತಿಗಳನ್ನು ಎತ್ತರಿಸಬೇಕೆಂದು ಹಲವಾರು ಯೋಜನೆಗಳನ್ನು ರೂಪಿಸಿ ಹೊರಟ ಸರಕಾರವು ಅವರ ಮೇಲಾಗುವ ಈ ಅಘಾತಕ್ಕೆ ಅಪ್ಪದ ಕೊಡುವುದು ನ್ಯಾಯವಲ್ಲ ಖಾಸಗಿ ಆಡಳಿತೆಯವರು ನಷ್ಟವನ್ನು ಕುಂಬಿಸಿಕೊಳ್ಳುವುದು ಸಾಧ್ಯವಿಲ್ಲವಾಗಿದೆ ಹಾಗಿರುವಾಗ, ಇದೇ ಪರಿಸ್ಥಿತಿ ಮುಂದುವರಿದರೆ, ಖಾಸಗಿ ವಲಯವು ಪ್ರಾಥಮಿಕ ಶಾಲೆಗಳನ್ನು ಮುಚ್ಚಿ ಬಿಡಬೇಕಾಗುವ ಪ್ರಸಂಗವೂ ಬಂದೀತು; ಬರುತ್ತಿದೆ ನಮ್ಮ ಜಿಲ್ಲೆಯ ಖಾಸಗಿ ವಿತ್ತ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಿನವು ಬಡತನದ ಆಡಳತೆಗೆ ಸೇರಿದವು ಬಡತನದ ಕಷ್ಟದಲ್ಲಿ ನನೆಯುತ್ತಿರುವ ಇಂತಹ ಆಡಳಿತೆಗಳು ನಷ್ಟವನ್ನು ತಂಬಿಸಿಕೊಳ್ಳುವ ದಾರಿಯೊದರೂ ಯಾವುದು? ಕೇವಲ ಗೌರವ ಮತ್ತು ಪ್ರತಿಷ್ಠೆಗಳಿಗಾಗಿ ಅವನ್ನು ನಡೆಸಿಕೊಂಡು ಬರುವ ಶಕ್ತಿ ಸಂಪನ್ನರ ಸಂಖ್ಯೆಯೂದರೂ ಎಷ್ಟು? ಆದ್ದರಿಂದ ಇಂತಹ ಖಾಸಗಿ ಪ್ರಾಥಮಿಕ ಶಾಲೆಗಳ ಆಡಳಿತೆಯು ಕುಸಿಯದಂತೆ, ಕೆಡದಂತೆ, ಎಂತು ಮಾರ್ಗವನ್ನು ತುಳಿಯ ದಂತೆ ಎಂಬುದರ ಬಗ್ಗೆ ಸರಕಾರವು ತನ್ನ ಸಹಾಯಧನ ನೀಡುವ ನೀತಿಯನ್ನು ತ್ವರಿತದಲ್ಲಿ ತಿದ್ದಿ ಸರಿಪಡಿಸಿಕೊಳ್ಳುವುದು ಅಗತ್ಯವಿದೆ.

ಇನ್ನು ಸೆಕೆಂಡರಿ ಶಿಕ್ಷಣದಲ್ಲೂ ಸಮಸ್ಯೆ ತಪ್ಪಿದ್ದಲ್ಲ ಸರಕಾರವು ಸೆಕೆಂಡರಿ ಶಿಕ್ಷಣದ ಧಾರಣೆಯನ್ನು ಹೆಚ್ಚಿಸಲೇಬೇಕಾದ ಅಗತ್ಯ ವಿಲ್ಲವಾದರೂ ಜನತೆಯ ಬೇಡಿಕೆಯನ್ನು ಮನ್ನಿಸುವುದಕ್ಕಾಗಿಹೈಸ್ಕೂಲುಗಳಲ್ಲಿ ಅದು ತೆರೆಯಲೇಬೇಕಾಗುತ್ತದೆ. ಇದಕ್ಕಾಗಿಯೇ ಜನರು ಸ್ವಯಚ್ಛೆಯಿಂದ ಮುಂದೆ ಬರುವಲ್ಲಿ ಸರಕಾರವು ಹೈಸ್ಕೂಲುಗಳನ್ನು ತೆರೆಯಲು ಅನುಮತಿಯನ್ನು ನೀಡುತ್ತಿದೆ, ಮತ್ತು ಸಹಾಯ ಧನ ನಿಯಮಗಳನ್ವಯ ಸೆರೆದನ್ನೂ ಒದಗಿಸುತ್ತದೆ. ಈ ನಿಯಮಗಳಲ್ಲಿರುವ ಸಾರಾಂಶ ಉದಾರವಾಗಿಯೇ ಇದೆಯೆನ್ನಬೇಕು ಆದರೆ ಸರಕಾರವು ಕಳೆದ ವರ್ಷದಿಂದ ಅನುಸರಿಸುತ್ತಿರುವ ನೀತಿಯಿಂದ ಖಾಸಗಿ ರಂಗವಾದರೂ ಹೈಸ್ಕೂಲುಗಳನ್ನು ತೆರೆಯಲು ಮುಂದೆ ಬರುವುದು ಕಷ್ಟ ಸಾಧ್ಯವಾಗಿದೆ. ಹೊಸ ಹೈಸ್ಕೂಲುಗಳಿಗೆ ಮೊದಲಿನ ಮೂರು ವರ್ಷಗಳಲ್ಲಿ ಸರಕಾರವು ಯಾವ ಸಹಾಯಧನವನ್ನೂ ನೀಡುವುದಿಲ್ಲ—ಎಂಬ ಅದರ ನೀತಿ ಜನರ ಉತ್ಸಾಹಕ್ಕೇನೇ ನೀರೆರೆಯುತ್ತಿದೆ. ಏಕೆಂದರೆ, ಹೈಸ್ಕೂಲು ಸ್ಥಾಪನೆಯೆಂಬುದು ಅತಿ ವೆಚ್ಚ ಬರುವಂತಹದು. ದೊಡ್ಡ ವೆಚ್ಚವನ್ನು ತುಂಬಿಸಿಕೊಳ್ಳಲು ಆಡಳತೆಯು ಯಾವ ಮಾರ್ಗವನ್ನು ಅನುಸರಿಸಬೇಕು? ಸರಕಾರದ ಬಿಗುವಿನ ಅರ್ಥಿಕ ಧೋರಣೆಯಿಂದ ದಾನಿಗಳ ಉದಾರತೆಯೂ ಬತ್ತಿ ಹೋಗಿದೆ. ಹೀಗಿರುವಾಗ, ಭಗ್ನ ವನೋರಥವಾದ ಖಾಸಗಿ ರಂಗವು ಹೊಸ ಹೊಸ ಹೈಸ್ಕೂಲುಗಳನ್ನು ತೆರೆಯಲು ಮುಂದೆ ಬರುವುದಾದರೂ ಹೇಗೆ? ಸರಕಾರದ ಶಿಕ್ಷಣ ಪ್ರಸಾರದ ಕಾರ್ಯದಲ್ಲಿ ಸಹಭಾಗಿಯಾಗುವುದಾದರೂ ಹೇಗೆ? ಅವು ಅರ್ಥಿಕವಾಗಿ ದೃಢ ನಿಲ್ಲುವುದು ಹೇಗೆ? ನಿಜವಾಗಿ ಹೇಳುವುದಾದರೆ, ಯಾವುದೇ ಒಂದು ಸಂಸ್ಥೆಯು ಶೈಶವಾವಸ್ಥೆಯಲ್ಲಿರುವಾಗಲೇ ಅದಕ್ಕೆ ನೆರವಿನ ಆವಶ್ಯಕತೆ ಹೆಚ್ಚು ಬೆಳೆದು ಬಲಿತು ನಿಂತ ಮೇಲೆ ಅದರ ಅಗತ್ಯ ಕಡಿಮೆ. ಈ ಪ್ರಕೃತಿ ನಿಯಮೋಲ್ಲಂಘನೆಯಿಂದ ಉದ್ದೇಶ ಸಾಧನೆಯೂ ಗುತ್ತದೆಯೆಂಬುದು ಕಲ್ಪನಾತೀತವಾಗುತ್ತದೆ ಸರಕಾರದ ಇಂತಹ ಉಗ್ರನೀತಿಯಿರುವಾಗಲೂ ಪ್ರಚಲಿತ ವರ್ಷದಲ್ಲಿ ಹತ್ತಾರು ಖಾಸಗಿ ಪ್ರೌಢ ಶಾಲೆಗಳು ತೆರೆಯಲ್ಪಟ್ಟಿವು ಎನ್ನುವಾಗ, ಅದರ ನೀತಿ ಉದಾರವಾಯಿ ತೆಂದರೆ, ಶಿಕ್ಷಣ ಪ್ರಸಾರದಲ್ಲಿ ಸಂಕಾರ ಪ್ರತ್ಯಕ್ಷವಾಗಿ ಭಾಗವಹಿಸುವ ಅಗತ್ಯವೇ ಬರಲಾರದು ಎಂದು ತೋರುತ್ತದೆ. ಆದುದರಿಂದ ತೀವ್ರ ಶಿಕ್ಷಣ ಪ್ರಸಾರಕ್ಕಾಗಿ ಸರಕಾರವು ತನ್ನ ಕಟುನೀತಿಯನ್ನು ಬಿಟ್ಟು ಉದಾರತೆಯನ್ನು ಹೃದಯಸ್ಪರ್ಶಿಸುವುದು ಅತ್ಯಗತ್ಯವಾಗಿದೆ

ಹೆಫೀಜರ ರಾಜೀನಾಮೆ

ಅಮೆರಿಕಾದ ಉಪ ಚುನಾವಣೆಯು ಕಳೆದ ವಷ ಡಿ ಉತ್ತರ ಮುಂಬಯಿಯ ಮಹಾ ಚ ನಾವಣೆಗಿಂತಲೂ ಮಹತ್ವ ದ್ದಾಗಿದೆ. ಅಲ್ಲಿ ಕೇಂದ್ರದ ಮಂತ್ರಿ ಹೆಫೀಜ ಇಬ್ರಾಹಿಮರು ವತ್ತಾಯದಿಂದೆಂಬಂತೆ ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿದರೂ ಅಲ್ಪಾಧಿಕ ಮತಗಳಿಂದ ಸೋತು ಹೋದರು. ಇದರಿಂದ ಕಾಂಗ್ರೆಸ್ ತನ್ನ ಭವಿಷ್ಯವನ್ನು ರೂಪಿಸುವಲ್ಲಿ ತುಳು ಹಿಂದೆ ಮುಂದೆ ನೋಡ ಬೇಕಾಗಿ ಬಂದಿದೆ. ಸಂಸತ್ ಸಚ್ಸಂಪ್ರದಾಯದಂತೆ ಹೆಫೀಜ ಇಬ್ರಾಹಿಮರು ತನ್ನ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಡಬೇಕಾಗಿತ್ತು; ಅವರು ಕೊಟ್ಟರು; ಆದರೆ, ಚುನಾವಣಾ ಪಲಿತಾಂಶ ಹಾಗೂ ರಾಜೀನಾಮೆಯ ದಿನಗಳ ನಡುವೆ ಬಹಳ ಅಂತರವಿದೆ. ರಾಜೀನಾಮೆಯು ಸ್ವೀಕಾರವಿನ್ನೂ ನಡೆದಿಲ್ಲ. ರಾಷ್ಟ್ರಪತಿಯವರಿಗೆ ಆಮೆರಿಕನ್ ಸಂದರ್ಶನದಲ್ಲಿ ವ್ಯಸ್ತರಾಗಿರುವ ಕಾರಣ ಈ ಸಂಬಂಧ ಸೂಚನೆಯೆ ಹೊರಡುವುದೂ ಸಾಧ್ಯವಿಲ್ಲವಾಗಿದೆ. ರಾಷ್ಟ್ರಪತಿಯವರು ಈ ತಿಂಗಳಂತ್ಯದಷ್ಟಕ್ಕೆ ವಾಪಸು ಬರುವ ನಿರೀಕ್ಷೆಯಿದೆ; ಅದುದರಿಂದ ಆ ಮೇಲೆಯೇ ರಾಜೀನಾಮೆಯು ಸ್ವೀಕರಿಸಲ್ಪಡುವುದು ಸಂಭವನೀಯ. ಆದರೆ, ಈ ರೀತಿಯ ವಿಲಂಬ ನೀತಿಯು ಸಂಸತ್ ಸಚ್ಸಂಪ್ರದಾಯಕ್ಕೆ ಶೋಭೆ ತರುವುದಿಲ್ಲವೆಂದೂ ಪ್ರಧಾನಿ ನೆಹರುರವರು ಇತ್ತೀಚೆಗಿನ ಆಚರಣೆಯು ಉಚಿತ ಮಾರ್ಗದಲ್ಲಿ ನಡೆಯುತ್ತಿಲ್ಲವೆಂದೂ, ದೂರುವವರು ಇದ್ದಾರೆ. ಈ ಆಪವಾದವನ್ನು ಸಂಪೂರ್ಣ ಅಲ್ಲಗಳೆಯುವುದು ಕಷ್ಟ ಸಾಧ್ಯ; ಏಕೆಂದರೆ, ಕೃಷ್ಣಮೆನನ್ನರಿಂದ ಬಯಸಿದಂತೆ ಹೆಫೀಜ ಮಹಮ್ಮದರಿಂದ ರಾಜೀನಾಮೆಯನ್ನು ನೆಹರೂ ಬಯಸಿದುದು ಅವರ ಮೇಲೆ ಸಾಕಷ್ಟು ಒತ್ತಾಯ ಹೇರಿದ ಮೇಲೆಯೇ ಎಂಬುದನ್ನು ಮರೆಯಬಾರದು ಈಗ, ಅದನ್ನು ಸ್ವೀಕರಿಸುವುದರಲ್ಲಿಯೂ ತಡ ಮಾಡುವುದೆಂದರೆ, ಆಷ್ಟು ತೋಛೆಯ ಕಾರ್ಯವಲ್ಲವೆನ್ನುತ್ತಾರೆ ಹೆಚ್ಚಿನವರು; ಇದು ಅಸಕ್ಕೆ ವಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಾ. ಪುಕಾಳಿ ಅವರ ಸಂಚಾರ

ಅಸ್ಥಮಾ ರೋಗಿಗಳ ಉಪಚಾರಾರ್ಥವಾಗಿ ಕರ್ನಾಟಕ ರಾಜ್ಯದಲ್ಲಿ ಸಂಚರಿಸುತ್ತಿರುವ ಡಾ ಪುಕಾಳಿಯವರು ದಕ ಜಿಲ್ಲೆಯ ಕೆಳಗೆ ಕಾಣಿಸಿದ ನಗರಗಳ ಪ್ರವಾಸಿ ಮಂದಿರಗಳಲ್ಲಿ ದಮ್ಮು ರೋಗಿಗಳ ಆಯುರ್ವೇದಿಕ ಚಿಕಿತ್ಸೆ ನಡೆಸುವರು. ಉಡುಪಿ— ಇದೇ ತಾರೀಕು ೧೫-೬; ಕಾರ್ಕಳ—೧೫; ಪುತ್ತೂರು—೧೫-೬ ಅಸ್ಥಮಾ ರೋಗಿಗಳು ಡಾ. ಪುಕಾಳಿಯವರ ವೈದ್ಯಕೀಯ ಸೇವೆಯು ಲಾಭ ಪಡೆದು ಆರೋಗ್ಯಸಂಪನ್ನರಾಗಬೇಕೆಂದು ವಿನಂತಿ

ಕಾರ್ಯದರ್ಶಿ,
ಎಸ್. ಸಿ. ಚಾಳೇಕುಂದ್ರಿ.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 23/1963

1) H ರತಿ ಶೆಡ್ತಿ—ಕೃಷ್ಣ ಶೆಟ್ಟಿ ವಿಧವೆ.
2) H ಗುಲಾಬಿ ಶೆಡ್ತಿ
3) H ಶಿವರಾಮ ಶೆಟ್ಟಿ
4) H ಸುಂದರ ಶೆಟ್ಟಿ
5) H ಶೇಖರ ಶೆಟ್ಟಿ
} ಮೃತರಲ್ಲು ಕೃಷ್ಣ ಶೆಟ್ಟಿ ಮಕ್ಕಳು, ಗಾರ್ಡಿಯನ್ ತಾಯಿ 1ನೆ ಅರ್ಜಿದಾರರು—

ಉಪ್ಪಿ ತಾಲ್ಲು ಪೆರ್ಡೂರು ಗ್ರಾಮ ದಲ್ಲಿರುವವರು— ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯುವಂತೆ ಪಡಿಸುವದೇನಂದ್ರೆ—

ಮೇಲ್ಕಂಡ 1ನೆ ಅರ್ಜಿದಾರಳ ಗಂಡ, ೩೦೦ ರೂ ವರೆಗಿನ ಅರ್ಜಿದಾರರ ತಂದೆ ಮೃತ ಕೃಷ್ಣ ಶೆಟ್ಟಿಗೆ ಬರತಕ್ಕ, ಆಜೀರ್ಯಲ್ಲಿ ಪಿವರಿಸಿದ ಆಸ್ತಿಪಾಸ್ತಿ ವಸೂಲು ಪಡೆಯುವರೆ ತಾವು ವಾರೀಸುದಾರರು ವ ಹಕ್ಕುದಾರರೆಂತ್ಲೂ ಆ ಕಾರಣ 1ನೆ ಅರ್ಜಿದಾರಳ ಹೆಸರಿಗೆ Succession Certificate ಕೊಡಿಸಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿ ತಾರೀಕು 6-8-1963ಕ್ಕೆ ಇದೋ ನಾಗಿದೆಂತ್ಲೂ, ಆ ಕಾರಣ ಆಕ್ಷೇಪ ಹೇಳತಕ್ಕವರು ಇದ್ರಿ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿಬ್ಯಾಹೀರು ಮಾಡಿಕೊಳ್ಳತಕ್ಕದ್ದಿಂತ ಕೂಡಾ ಈ ಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯನೆ.

K Varadaraya Pai,
Advocate for petitioners
ಉಡುಪಿ, 10_6_1963

ಮಿತವ್ಯಯ ಮತ್ತು ಉಳಿತಾಯ ರಕ್ಷಣಾ ತಯಾರಿಗೆ ಸಹಾಯ

ಅಲ್ಲಲ್ಲಿಯ ಸುದ್ದಿಸಾರ

ವಿವಾಹ ಸಮಾರಂಭಗಳು

ಬಜ್ಪೆ ಮುಂಡಾರೆಗುತ್ತು ದಿ| ಉಗ್ಗಪ್ಪ ಆಳ್ವರ ಪುತ್ರಿ ಚಿಮನೋರಮೆಯನ್ನು ಮೂಲ್ಕಿ ಬಸ್ಸ ನಾಡುಗುತ್ತು ದಿ| ನಾರಾಯಣ ಶೆಟ್ಟರ ಪುತ್ರ ಶ್ರೀ ಜಗನ್ನಾಥ ಶೆಟ್ಟರು ತಾ 6–6–63ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾಡಿಕೊಂಡರು

ಕೇ ಕಾಸು ನಾರಾಯಣ ಶೆಟ್ಟರ ಪುತ್ರಿ ಸೌ| ಚಂದಲೇಖಾಳನ್ನು ದಿ| ವಕೀಲ ನಾರಾಯಣ ಭಂಡಾರರ ಪುತ್ರ ಶ್ರೀ ರಾಮಕೃಷ್ಣ ಭಂಡಾರಿಯವರು ತಾ 6–6–63ರಂದು ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ವಿವಾಹ ಮಾಡಿಕೊಂಡರು.

ಹಿರೇಬೆಟ್ಟು ದಿ| ಚಂದಯ್ಯ ಹೆಗ್ಡೆಯವರ ಪುತ್ರ ಶ್ರೀ ಲಕ್ಷ್ಮೀನಾರಾಯಣ ಹೆಗ್ಡೆಯವರು ಆಕಾರು ದಾರೆಮಾರುಗುತ್ತು ದಿ ಮುದ್ದಣ್ಣ ಶೆಟ್ಟರ ಪುತ್ರಿ ಸೌ ಸಾವಿತ್ರಿಯನ್ನು ತಾ 6–6–63ರಂದು ಉಡುಪಿ ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಸಾಡಂಗ್ರಹಣ ಮಾಡಿಕೊಂಡರು.

ದಿ. ಯಂ ಗುರುರಾಜ ಆಚಾರ್ಯರ ಪುತ್ರ ಚಿ ಆಚ್ಯುತರಾಯರು ದಿ ಕಡಿಯಾಳಿ ಗೋಪಾಲಕೃಷ್ಣ ಉಪಾಧ್ಯಾಯರ ಪುತ್ರಿ ಕು ಸಾವಿತ್ರಿಯನ್ನು ತಾ 6–6–63ರಂದು ಉಡುಪಿ ಉಪೇಂದ್ರ ಭಾಗದಲ್ಲಿ ವಿವಾಹಮಾಡಿಕೊಂಡರು.

ಉದಯಿಯ ಉತ್ತಮ ಬರಹಗಾರರೂ, ಗ್ರಂಥಕರ್ತರೂ ಆದ ವಿದ್ವಾನ್ ಗೋಪೀಜಂದಯರು, (ದಿ ಶಿರ್ವ ಮಾಬೆಟ್ಟು ಅಣ್ಣಯ್ಯನವರ ಪುತ್ರ) ಕುಮೂರಿ ಅಹಲ್ಯೆಯನ್ನು (ಶ್ರೀ ಎಲ್ಲೂರು ವೆಂಕಟರಮಣಯ್ಯನವರ ಪುತ್ರಿ) ತಾ 8–6–63ರಂದು ಉಡುಪಿಯ ಕುಂಜಿಬೆಟ್ಟಿನಲ್ಲಿರುವ ಸುಧೀಂದ್ರ ತೀರ್ಥ ಸ್ವಾಮಿಗಳ ಕಲ್ಯಾಣ ಮಂಟಪದಲ್ಲಿ ವಿವಾಹ ಮಾಡಿಕೊಂಡರು

ತೋನ್ಸೆ, ನಂದಯ್ಯ ಹೆಗ್ಡೆಯವರ ಪುತ್ರ ಚಿ ರಮಣನಿಂದ ಹೆಗ್ಡೆಯವರೇ ಇನ್ನ ಬಗ್ಗರಗತ್ತು ರಾಮಣ್ಣ ಶೆಟ್ಟರ ಪುತ್ರಿ ಕುಮೂರಿ ಬೇದಿಯನ್ನೂ, ತೋನ್ಸೆ ನಂದಯ್ಯ ಹೆಗ್ಡೆಯವರ ಪುತ್ರಿ ಕುಮೂರಿ ಯಶೋದಳನ್ನು ದಿ| ತುಂಬೆ ಪಟೇಲ್ ತಿಮ್ಮಣ್ಣ ಶೆಟ್ಟರ ಪುತ್ರ ಚಿ. ರಾಮಚಂದ್ರನೂ ತಾ 10–6–63 ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

ಸಚಿವ ಕಂರಿಯವರಿಂದ ಲೋಕ ಸೇವಾ ಹ್ಯಾಸ್ಟೂಲಿನ ಉದ್ಘಾಟನೆ—

ತಾ 6–6–63ರಂದು ಅಳಿಕೆ ಗ್ರಾಮದಲ್ಲಿ, ಮೈಸೂರು ವಿಧಾನ ಪರಿಷತ್ತಿನ ಸದಸ್ಯರೂ, ದ ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಆದ ಶ್ರೀ ಕೆ ಕೆ ಶೆಟ್ಟರು ಅಧ್ಯಕ್ಷತೆಯಲ್ಲಿ, ವೈ ಮೈಸೂರು ಸರಕಾರದ ವಿದ್ಯಾ ಸಚಿವ ಶ್ರೀ ಎಸ್ ಆರ್ ಕಂರಿಯವರು ಲೋಕಾ ಸೇವಾ ಸ್ಕಂದದ ಪಕಿಯಲ್ಲಿ ನಡೆಯುವ ಲೋಕ ಸೇವಾ ಹ್ಯಾಸ್ಟೂಲಿನ ಉದ್ಘಾಟನೆಯನ್ನು ವಿಜ್ಯಂಭಣೆಯೊಂದಿಗೆ ನೆರವೇರಿಸಿದರು ಶ್ರೀ ಕಂರಿಯವರು ಮಾತನಾಡುತ್ತಾ, ಹಿಂದುಳಿದ ಪ್ರದೇಶಗಳ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಿ ಆ ಭಾಗದ ಉನ್ನತಿಗಾಗಿ ಸರಕಾರವು ಯತ್ನಿಸುತ್ತಿದೆ ದೂರಕ್ಕೆ ಹೋಗಿ ವಿದ್ಯಾಭ್ಯಾಸವನ್ನು ಪಡೆಯಲು ಸಾಧ್ಯವಿಲ್ಲದ ಹಳ್ಳಿಯ ಜನರಿಗೆ ಇದರಿಂದ ಅನುಕೂಲವಾಗುವುದು ಇದಕ್ಕಾಗಿ ಗ್ರಾಮೂಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಹ್ಯಾಸ್ಕೂಲುಗಳನ್ನು ತೆರೆಯುತ್ತೇವೆ ಮದ್ರಾಸು ಸರಕಾರವು 183 ಹೈಸ್ಕೂಲುಗಳಿಗೆ ಮಂಜೂರಾತಿ ನೀಡಿದೆ ಮೈಸೂರು ಅದಕ್ಕಿಂತ ಸಣ್ಣ ಪ್ರಾಂತ್ಯವಾದರೂ ಕೂಡಾ155 ಹ್ಯಾಸ್ಕೂಲುಗಳಿಗೆ ಮಂಜೂರಾತಿ ನೀಡಿದೆ ಈ ವೈಕಿ ದಕ್ಷಿಣ ಕನ್ನಡ ಜಿಲ್ಲೆಗೆ 15 ಹ್ಯಾಸ್ಕೂಲುಗಳನ್ನೂ ಕಾರವಾರ ಜಿಲ್ಲೆಗೆ 8 ಹ್ಯಾಸ್ಕೂಲುಗಳನ್ನೂ ನೀಡಲಾಗಿದೆ ಹ್ಯಾಸ್ಕೂಲುಗಳೆಹೆಚ್ಚಿದಂತೆ ಅಲ್ಲಿಯವಿದ್ಯಾಮಟ್ಟವೂ ಸಿಯುವ ಸಂಭವವೂಇದೆ ಮಾತ್ರಾಸ್ಪದಲ್ಲಿ ಹೀಗಾಗಿನಿತೆ ಹೀಗಾಗದಂತೆ ಶಿಕ್ಷಣ ಸಂಸ್ಥೆಗಳು ಯತ್ನಿಸಬೇಕು ಆರ್ಥಿಕ ದೃಷ್ಟಿಯಿಂದ ಅನುಕೂಲವಾಗಿರುವ ಬಿದಿರು ಪಂಚುಗಳಿಂದ ತಯಾರಿಸಿದ ಈ ಬಗೆಯ ಸರಳ ಕಟ್ಟಡಗಳು ಹತ್ತು ಸಾವಿರಸ್ಟೆದು ನರ್ಸರಿಗಳ ಪ್ರಾಥಮಿಕೆಯನ್ನು ಕೊಡಬಲ್ಲುವು ಶೈಕ್ಷಣಿಕ ಮತ್ತು ಹಾಗೂ ಶಿಕ್ಷಣ ಸಾಮಗ್ರಿಗಳ ಕಡೆಗೆ ಅಧಿಕವಾಗಿ ಗಮನ ಹರಿಸಬೇಕು ಎಂದು ಮುಂತಾಗಿ ಹೇಳಿ ಲೋಕಸೇವಾ ವೃಂದದ ಹಾಗೂ ಹೈಸ್ಕೂಲುಗಳು ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದಿದೆಯೆಂದು ಹಾರೈಸಿದರು.

ಸಭಾಧ್ಯಕ್ಷ ಶ್ರೀ ಕೆ. ಕೆ ಶೆಟ್ಟರು ಪೂರ್ವ ನಾಡುತ್ತಾ "ಹಿಂದಿನ ಕನಸು ಇಂದಿನ ನನಸು ಶ್ರದ್ಧೆ, ದೃಢ ಪ್ರಯತ್ನ, ಕರ್ತವ್ಯ ನಿಷ್ಠೆ ಇವುಗಳಿಂದ ಯಾವ ಕಾರ್ಯವಾದರೂ ಜಯಶೀಲವಾಗುವುದು. ಲೋಕಸೇವಾ ವೃಂದವು ಈ ಹಳ್ಳಿಯಲ್ಲಿ ಇಂತಹ ಉತ್ತಮ ಕಾರ್ಯವನ್ನು ಕೈಗೊಂಡಿದೆ. ಹಳ್ಳಿಯಲ್ಲಿ ವಿದ್ಯಾರ್ಥಿಗಳು ಸ್ಥಾಪಿಸಲ್ಪಟ್ಟು ಗ್ರಾಮಸಂಗಳ ಅಭಿವೃದ್ಧಿಯೂಗಬೇಕು ಪ್ರೌಢಶಾಲೆಗಳೂ, ಕಾಲೇಜುಗಳೂ ಹಳ್ಳಿಯಲ್ಲಿ ತೆರೆಯಲ್ಪಡಬೇಕು ಗ್ರಾಮೂಭಿವೃದ್ಧಿಯ ಇಂತಹ ಯತ್ನಕ್ಕೆ ಯಾವಾಗಲೂ ನನ್ನ ಬೆಂಬಲವಿದೆ ಯಾವುದೇ ಒಂದು ಹ್ಯಾಸ್ಕೂಲು ಜಯಪ್ರದವಾಗಿ ನಡೆಯಬೇಕಿದ್ದರೆ ಅದಕ್ಕೆ ಹಿಂದೆ ಸ್ಫೂರ್ತಿದಾಯಕವಾದ ಸಿಸ್ವಾರ್ಥಂತ ಯುವಕ ಕಾರ್ಯಕರ್ತರಿರಬೇಕಾಗುತ್ತದೆ ಉಚ್ಚ ಧ್ಯೇಯಕ್ಕಾಗಿ ಸ್ಥಾಪಿತವಾದ ಲೋಕ ಸೇವಾ ವೃಂದದಂತಹ ಯೋಗ್ಯ ಸಂಸ್ಥೆಯ ಬೆಂಬಲವಿರಬೇಕು ಎಂದು ಮುಂತಾಗಿ ಹೇಳಿ ಸಂಸ್ಥೆಗೆ ಶುಭವನ್ನು ಕೋರಿದರು

ಪ್ರಾರಂಭದಲ್ಲಿ ಪ್ರಾರ್ಥನೆಯ ನಂತರ ಸಂಸ್ಥೆಯ ಅಧ್ಯಕ್ಷ ಶ್ರೀ ಯಂ. ನಾರಾಯಣ ಭಟ್ಟರು ಅತಿಥಿಗಳನ್ನು ಸ್ವಾಗತಿಸಿದರು ಶ್ರೀಮತಿ ಮತ್ತು ಮೂಲ ಗೌರಮ್ಮನವರು ತಮ್ಮ ಆಡಳಿತದಲ್ಲಿದ್ದ ಅಳಿಕೆ ಹಾಯರ್ ಎಲಿಮೆಂಟರೀ ಶಾಲೆಯು ಒಡೆತನವನ್ನು ಲೋಕ ಸೇವಾ ವೃಂದಕ್ಕೆ ಒಪ್ಪಿಸಿಕೊಟ್ಟರು ಸಭಿಕರ ಪರವಾಗಿ ಶ್ರೀ ವೆಂಕಟ್ರಮಣ ಗೌಡ ಎಂ ಎಲ್. ಎ ಯವರು ಮಾತನಾಡಿ ಸಂಸ್ಥೆಯ ಕಾರ್ಯಕ್ಕೆ ಊರಾ ಜನರ ಸಹಕಾರ ಕೋರಿದರು ಶ್ರೀ ಕೆ ವಿ ಸುಬ್ರಾಯರಿಂದ ವಂದೇಶ ವಾಚನ ನಡೆಯಿತು ಶ್ರೀ ಯಮ್. ನಾರಾಯಣ ಭಟ್ಟರು ಸಿಸ್ಥಾ ಸಂಸ್ಥೆಗೆ ಧನ ಸಹಾಯದ ವಾಗ್ದಾನನಿತ್ತವರ ಮತ್ತು ನಗದು ತೆತ್ತವರ, ಹೆಸರು ಮತ್ತು ಮೊತ್ತಗಳನ್ನು ಓದಿ ಹೇಳಿದರು ಕಾರ್ಯದರ್ಶಿ ಶ್ರೀ ಯ್ಯ. ಗಂಗಾಧರ ಭಟ್ಟರಿಂದ ಧನ್ಯವಾದ ಸಮರ್ಪಣೆಯೊಯಿತು.

ತೆಂಗೆ ರಹಿತ ರಾಜ್ಯಕ್ಕೆವು— ಹೆಸರಾಂತ ಬ್ಯಾಂಕರ್—ಶಿಕ್ಷಣ ತಜ್ಞ ಡಾ. ಟಿ ಎಂ ಎ ಪೈಗಳು ಇದೇ ತಾ. 6ರಂದು ಮಂಗಳೂರಿನ ಸಿಂಡಿಕೇಟ್ ಬೇಂಕಿನಲ್ಲಿ ಜರಗಿದ ಸಭೆಯೊಂದರಲ್ಲಿ,,ತೆಂಗಿನ ರಹಿತ ರಾಜ್ಯ" ದ ಕುರಿತು ಭಾಷಣವಿತ್ತರು.

ಆವರು ತಮ್ಮ ಭಾಷಣದಲ್ಲಿ ವಿಪರೀತ ತೆಂಗಿನಗಳ ಅನಾಸುಳಕರತೆಗಳನ್ನು ವಿವರಿಸಿ, ತಮ್ಮ ಹೊಸ ಸಿದ್ಧಾಂತವಾದ, ತೆಂಗಿನ ರಹಿತ ರಾಜ್ಯ ಕ್ಕಾಗಿ ಸಮವನ್ನು ಜನರ ಮುಂದಿಟ್ಟು ಚೆನ್ನಾಗಿ ವಿವರಿಸಿದರು. ಪ್ರಾರಂಭದಲ್ಲಿ ಆವರ ಸಿದ್ಧಾಂತಕ್ಕೆ ಮನ್ನಣೆ ದೊರೆಯದಿದ್ದರೂ, ಕ್ರಮೇಣ ಎಲ್ಲರೂ ಆವರ ಸಿದ್ಧಾಂತವನ್ನು ಒಪ್ಪುವರೆಂಬ ಭರವಸೆ ಆವರಿಗಿದೆ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ ಸೂರ್ಯನಾರಾಯಣ ಅಡಿಗರು ವಹಿಸಿದ್ದರು. ಅಂತ್ಯದಲ್ಲಿ ಶ್ರೀ ಎಚ್. ಡಿ ಎಸ್. ಸೈಯವರು ವಂದನಾರ್ಪಣೆ ಗೈದರು

ಉದ್ಘಾಟನಾ ಸಮಾರಂಭ- ಬೆಳ್ತಂಗಡಿ ತಾಲೂಕಿನ ಬಂಗಾಡಿ ಸಮೂಹದ ನಾವೂರಿನ ಬೋರ್ಡ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ಇದೇ ತಾ 6ರಂದು ತಾಲೂಕು ಬೋ ಅಧ್ಯಕ್ಷ ಶ್ರೀ ಜಿ ಎನ್. ಭಡಿಯವರು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು ಪ್ರಾರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಬಿ ನಾರಾಯಣ ಶೆಟ್ಟರು ಸ್ವಾಗತಿಸಿದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಕೆ. ಸಿ ಶೆಟ್ಟರು ಶಾಲಾ ವರದಿಯನ್ನೋದಿದರು ಕಟ್ಟಡದ ನವೀಕರಣಕ್ಕೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಎಸ್. ಮೂಲಿಲರವರು ಹಿದಿದ ಸಂತರ್ಪಣೆಗೆ ಶುಭ ಕೋರಿ ಶ್ರೀಗಳಾದ ಎಳ್ಳಿನ್ ಮೇಗಸ್, ಎಂ ಶೇಷಪ್ಪಯ್ಯ, ಬಾಬು ಗೌಡ ಮೊದಲಾದವರು ಬಾಷಣ ಮಾಡಿದರು ಮುಖ್ಯೋಪಾಧ್ಯಾಯರಿಂದ ವಂದನಾರ್ಪಣೆಯೊಂದಿಗೆ ವಿದ್ಯುನ್ನತಿ ಕಲ್ಯಾಣ, ಎಂಬ ಯಕ್ಷಗಾನವು ಆಭಿನಯಿಸಲ್ಪಟ್ಟಿತು

ಯಕ್ಷಗಾನ ತರಬೇತಿ ಶಿಬಿರ ಅಂಬಲಪಾಡಿಯ ಶ್ರೀ ಲಕ್ಷ್ಮೀಜನಾರ್ದನ ಯಕ್ಷಗಾನ ಕಲಾ ಮಂಡಳಿಯ ನೇತೃತ್ವದಲ್ಲಿ ಪ್ರಾಚೀನ ಕಲೆಯೂದ ಬಡಗು ತಿಟ್ಟಿನ ಯಕ್ಷಗಾನ ಕಲೆಯನ್ನು ಪ್ರಚಾರಗೊಳಿಸುವ ಸದುದ್ದೇಶದಿಂದ ತಾ 8–6–63ರಂದು ತಾಳ ಮದ್ದಳೆ ಜೊತೆ, ನರ್ತನ ಇತ್ಯಾದಿ ವಿಷಯಗಳಲ್ಲಿ ಶಿಕ್ಷಣ ದೊರಕಿಸುವ ಶಿಬಿರವನ್ನು ತೆರೆಯಲಾಯಿತು ನುರಿತ ಕಲಾವಿದರಾದ ಶ್ರೀ ಎಚ್ ಗೋಪಾಲಭಂಡಾರಿಯರು ಶಿಕ್ಷಕರಾಗಿ ನೇಮಿಸಲ್ಪಟ್ಟಿರುವರು.

ವಿದ್ಯಾರ್ಥಿ ವೇತನ— ಉಡುಪಿಯವರ ಪ್ರಸಿದ್ಧ ಮಹಾಜನ ಸಂಘ ಶಾಖೆ, ಮುಂಬಾಯಿ ಈ ಸಂಘವು ಎಂದಿನಂತೆ ಈ ವರ್ಷವೂ, ಉಡುಪಿ ತಾಲೂಕು, ಉದಿಯವರ ಗ್ರಾಮದ, ಸ್ವಜಾತಿ ಬಾಂಧವರ ಬಡ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ವೇತನ ಕೊಡುವದೇ ನಿಶ್ಚಯಿಸಿದೆ ವಿದ್ಯಾರ್ಥಿ ವೇತನ ಆಕಾಕ್ಷಿಗಳಾದ ವಿದ್ಯಾರ್ಥಿಗಳು ತಮ್ಮ ಹೆತ್ತವರ ಯೂ ರಕ್ಷಕರ ಸಹಿಯೂಡನೆ ಅನುಮತಿಯೊಂದಿಗೆ ತಮ್ಮ ಅರ್ಜಿಯನ್ನು ಸಂಘದ ಕಾರ್ಯದರ್ಶಿಯವರಿಗೆ, ತಾರೀಕು 30–6–63ರ ಒಳಗೆ ಸಿಗುವಂತೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡತಕ್ಕದ್ದು. The Secretary, Udyavara Billava Mahajana Sangha, Room No 26, 2nd floor, 265, Irere Road, Bombay 1

ಅಂಬಲಪಾಡಿ–ಸ್ಥಳೀಯ ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದಲ್ಲಿ ಬಹಳ ಸಮಯದಿಂದ ಕೆಲಸಮಾಡುತ್ತಿರುವ ಶ್ರೀ ಸುಬ್ರಾಯರು ತನ್ನ ಮಗ ಲಕ್ಷ್ಮೀಂದ್ರ ಗುರುರಾಜನ ಬಹೋಪನಯನೋತ್ಸವ ಶುಭ ಅವಸರದಲ್ಲಿ ತಾ 7.6 63ರಂದು ಭೋಜನ ಕೂಟಪೂರ್ವದಲ್ಲಿ ಸಾವಿರ ಬಡಿಸಿದ್ದರು ದೇವಸ್ಥಾನದ ಆಡಳಿತವರ್ಗದ ಶ್ರೀ ಸಿ ಆನಂದಜೀ ಬಲ್ಲಾಳರು ಸುಬ್ರಾಯರ ಕಾರ್ಯಕ್ಕೆ ಮನಸ್ಸು ಪೂರ್ವಕವಾಗಿ ಸಹಾಯ ಮಾಡಿದ್ದಕ್ಕಾಗಿ ಅವರಿಗೆ ಮತ್ತು ಇತರರಿಗೆ ಧನ್ಯವಾದ ಸಮರ್ಪಿಸಿದರು.

ಉಡುಪಿ ಡಿ ಮುನ್ಸೀ ಕೋರ್ಟಿನಲ್ಲಿ

ಕ್ರಮ ನಂಬ್ರ 68/1963

ಮಹಂತಪ್ಪ ಎಜೆಕ್ಟ್ಸ್ ಕಾರ್ಪರೇಶನ್ ಲಿಮಿಟೆಡ್ ಉಡುಪಿ ಕಚೆರಿಯಿಂದ ಇದ್ದ ಸೆಕ್ರಟರಿ ಕೆ. ಆನಂತಪ್ರಮ ಉಪಾಧ್ಯ— ವಾದಿ.

ಮತ್ತು

H. ಅಬ್ದುಲ್ಲ ಕೂಡಾ— ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ–ಶೇಕಬ್ಬ ಬ್ಯಾರಿ– ಹನ್ಮಬ್ಬ ಬ್ಯಾರಿಗಳ ಮಗ–ಮಂಗಳೂರು ತಾಲೂಕು ಕೈಕಂಬದಲ್ಲಿರುವವರು—

ಸದರಿ 2ನೇ ಪ್ರತಿವಾದಿಗೆ—

1ನೇ ಪ್ರತಿವಾದಿರು ಹಾಯರ್ ಆಗಿಯೂ 2ನೇ ಪ್ರತಿವಾದಿಯು ಗ್ಯಾರಂಟರ್ ಆಗಿ ಸಹಾ–1ನೇ ಪ್ರತಿವಾದಿಯು ವಾದಿಗೆ ಬಡಕೊಟ್ಟ ಹಾಯರ್ ಸರ್ಟೀಫಿಕೇಟು ಎನ್ರಿಮೆಂಟು ಪ್ರಕಾರ ಸ ಬರಕೊಟ್ಟ ದಿವಸಾಂದ ನೋಟು ಪ್ರಕಾರ ದಾವಾತಾರೀಖು ಸಂಬಂಧವಾಗಿ ವಾದಿಯಿಂದ ಪಡೆದ ಸಾಲದ ಬಾಬ್ತು ಪ್ರತಿವಾದಿರಿಂದಾ ವಾದಿಗೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 2766–61ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾ. 27 6–1963ಕ್ಕೆ ತನ್ನಿ ಬಗ್ಗೆ ಇಟ್ಟಿದೆ. ಆ ದಿನ್ನ ಸದರಿ 2ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಕರಿಸದೆ ಇದ್ದ ಆತನ ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು–ಸದರಿ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ

M Damodar Kamath,
Advocate for Plff

ಉಡುಪಿ, 11–6–63

ವಾರ್ತಾವೇದಿಕೆ

ರಾಧಾಕೃಷ್ಣನ್

ಮಂದುವರಿಯತ್ತಿರುವ ಜಗತ್ತಿನಲ್ಲಿ ಮುಖ್ಯವಾಗಿ ಎರಡು ಕತ್ವಗಳು ಬಲಗೊಳ್ಳುತ್ತಿವೆ: ಪ್ರಜಾಪ್ರಭುತ್ವ ಮತ್ತು ಕಮ್ಯುನಿಜಂ. ಒಂದು ಜಗತ್ತಿಯು ತನ್ನನ್ನು ತಾನು ಆಳಿಕೊಳ್ಳುವಂತೆ ನೋಡಿದರೆ, ಎರಡನೆಯದು ಸರ್ವಾಧಿಕಾರಕ್ಕೆ ಮಾರ್ಗ ಕಲ್ಪಿಸಿಕೊಡುತ್ತದೆ ಇಂದು ಕಮ್ಯುನಿಜಂ ಮತ್ತು ಪ್ರಜಾತಂತ್ರಗಳು ಬೇರೆ ಬೇರೆ ಮಾರ್ಗಗಳನ್ನು ಮೆಟ್ಟುತ್ತಿರುವಂತೆ ಮತ್ತು ಅವುಗಳ ನಡುವೆ, ಶತ್ರುತ್ವ ಹಗೆ ದ್ವೇಷ ಭಾವನೆಗಳು ಬೆಳೆಯುತ್ತ ಬರುತ್ತಿರುವಂತೆ ಭಾಸವಾದರೂ ಜಗತ್ತಿನ ಹಿರಿಯ ದಾರ್ಶನಿಕ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಇವೆರಡರ ನಡುವೆಯೇ ಒಂದು ಒಡಂಬಡಿಕೆಯಾಗುವುದೆಂಬ ಆರಯವನ್ನು ವ್ಯಕ್ತಪಡಿಸಿದ್ದಾರೆ.

ಲಾಲಬಹದೂರ

ಚೀನೀಯರ ಆಕ್ರಮಣ ಭೀತಿಯು ಹಿಂದಿಗಿಂತ ಇಂದು ಕಡಿಮೆಯಾಗಿದೆ. ಹಾಗಿರುವಾಗ, ಘೋಷಿಸಿದ 'ಗಂಡಾಂತರ ಪರಿಸ್ಥಿತಿ'ಯನ್ನು ಇನ್ನು ಮುಂದುವರಿಸಬಾರದು ಎಂಬ ವರ್ತಮಾನಗಳೂ ಇನೆ ಕೆಲವೇ ದಿನಗಳಲ್ಲಿ ಆದು ಹಿಂತೆಗೆಯಲ್ಪಡಬಹುದೆಂದೂ ಊಹಿಸಲಾಗಿತ್ತು ಆದರೆ, ಗೌಹವ ಕೇಂದ್ರ ಲಾಲಬಹದೂರ ಶಾಸ್ತ್ರಿಯವರ ಶೇಕೆಯಿಂದ ಈ ಪರಿಸ್ಥಿತಿಯು ಇನ್ನೂ ಬಹುಕಾಲ ಮುಂದುವರಿಯುವ ಸಂಭವನೇ ಹೆಚ್ಚು ಚೀನೀಯರು ತನ್ನ ಆಕ್ರಮಣವನ್ನು ಸಂಪೂರ್ಣ ತೆರವು ಮಾಡದಿರಾಗ, ದೇಶವನ್ನು ಸಂಪೂರ್ಣವಾಗಿ ಒಂದಾಗಿ ಕಟ್ಟಲು, ಆಕ್ರಮಣಕಾರರನ್ನು ಹೊರಗಟ್ಟಲು ಗಂಡಾಂತರ ಪರಿಸ್ಥಿತಿಯು ನೆರವಾಗುವುದು ಎಂಬವರೆ ಮಾತನ್ನು ಅಲ್ಲಗಳೆಯುವುದು ದಾರ್ಷ್ಟ್ಯತನವಾದೀತು

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ದಿ. ವಿಜಯ ಬೇಂಕ್ ಲಿಮಿಟೆಡ್, ಕಾಸರಗೋಡು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗ ಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದು ದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೆನೇ ವಾಪಾಸು ಬಂದಿರುವುದರಿಂ ದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದು ದರಿಂದಲೂ ಸದ್ರಿಯವರಿಗೆ ಮ ಆವರ ವಾದೀಸುವಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಕ್ಲುಪ್ತಕ್ಕೆ ಮೊಬಲಗನ್ನು ಇದೇ ತಿಂಗಳ ತಾ. 20—6—1963 ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ ಸದ್ರಿಯವರು ನಮ್ಮಲ್ಲಿ ಆಡಿಟ್ಟ ನಗಗಳನ್ನು ತಾ. 22—6—1963 ಆಪರಾಹ್ನ ಗಂಟೆ 1ಕ್ಕೆ ಸರಿಯಾಗಿ ಬೇಂಕಿನ ವರಾ ಧಲ್ಲಿ ಬಹಿರಂಗ ಹರಾಜು ಮಾಡಲಾದೀತು. ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗ ಳಲ್ಲಿ ಪುನಃ ನೋಟೀಸು ಕೊಡದೆನೇ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾ ದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜ್ರಿ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ನ.ಪೈ
86/60	ಬಿ. ಚಂದ್ರಶೇಖರ, ಇಲೆಕ್ಟ್ರಿಷಿಯನ್, ಆದರ್ಶ ಇಂಜಿನಿಯರಿಂಗ್, ಪೋಸ್ಟು ಕಾಸರಗೋಡು.	17=74
1243/60	ಬಿ. ಅಬ್ದುಲ್ ಖಾದರ್, ಪೊಕ್ಕ ಮುಕ್ಕಿಯವರ ಮಗ, ಬೇಸಾಯಗಾರ ಅಡೂರು ಗ್ರಾಮ, ಪೋಸ್ಟು ಅಡೂರು.	95=95
1575/60	ಅಬ್ದುಲ್ಲ, ಪೊಕ್ಕ ಮುಕ್ಕಿಯವರ ಮಗ, ಅಡೂರು ಬನ್ನಿತ್ತಾ ಮೂಲೆ, ಪೋಸ್ಟು ಅಡೂರು.	61=43
1717/60	ಮೊಹಮ್ಮದ್, ಮೈದಿನ್ ಕುಂಞಿಯವರ ಮಗ, ಮಾರ್ಕೆಟು ರಸ್ತೆ, ಪೋಸ್ಟು ಕಾಸರಗೋಡು.	49=80
1733/60	ಮೋಕರ್, ಅಬ್ದುಲ್ ರಹಿಮಾನರ ಮಗ, ಮಧೂರು ಗ್ರಾಮ, ಆರಂತೋಡ ಪೋಸ್ಟು, ಮಧೂರು.	131=39
1930/60	ಕಾರಿಚೇರಿ ಕೃಷ್ಣನ್ ನಾಯರ್, ಕಾರಿಚೇರಿ ಕಣ್ಣನ್ ನಾಯರ್‌ರ ಆಳಿಯ, ಕೊಲತ್ತೂರು ಗ್ರಾಮ, ಕೆರಲಡ್ಕ, ಪೋಸ್ಟು ಕೊಲತ್ತೂರು.	180=39
1965/60	ಅಬ್ದುಲ್ಲ ಕುಂಞ, ಅಬ್ದುಲ್ ಖಾದರ್‌ರ ಮಗ, ಬೋವಿಕಾನ, ಮುಳಿಯಾರ್ II ನೇ ಗ್ರಾಮ, ಪೋಸ್ಟು ಮುಳಿಯಾರು.	41=52
258/61	ಎ ಹಸನಾರ್, ಮುಸ್ಸೂಂಞಿಯವರ ಮಗ, ಬಂಡಾಳಿ, ತೆಕ್ಕಿಲ್ ಪೇರಿ, ಪೋಸ್ಟು ತೆಕ್ಕಿಲ್‌ಪೇರಿ.	45=57
556/61	ಎಸ್. ಪಿ. ಅಬ್ದುಲ್ ಹಮೀದ್, ಶೇಕ್ ಕುಂಞಿಯವರ ಮಗ, ಆಡ್ಕತ್ತಬೈಲು, ಬೈರಿ ಗ್ರಾಮ, ಪೋಸ್ಟು ಬೈರಿ.	78=05
658/61	ಬಿ. ಅಬೂ ಬಕ್ಕರ್, ಪಿ ಎ ಅಬ್ದುಲ್ ಖಾದರ್ ಹಾಜಿಯವರ ಮಗ, ಜವಳಿ ವ್ಯಾಪಾರಿ, ಎಸ್.ಎ. ಬಜಾರ್, ಕಾಸರಗೋಡು	717=21
735/61	ಕೆ. ಅಬ್ದುಲ್ ಅಜೀಜ್, ಕೆ.ಅಬ್ದುಲ್ ಲತೀಫ್ ಸಾಹೇಬರ ಮಗ, ಪ್ರಯೋಜಕರ ಬಂಗಲೆಯ ಬಳಿ, ಪೋಸ್ಟು ಕಾಸರಗೋಡು.	27=02
752/61	ಟಿ. ಎ. ಅಬೂಬಕ್ಕರ್ ಅಬ್ದುಲ್ ಖಾದರ್‌ರವರ ಮಗ, ಜವಳಿ ವ್ಯಾಪಾರಿ, ಮಾರ್ಕೆಟ್ ರಸ್ತೆ ಪೋಸ್ಟು ಕಾಸರಗೋಡು.	1,186=77
791/61	ಪಿ ಎಸ್, ಅಬ್ದುಲ್ಲ, ಸ.ಟೇಷನ್‌ರ ಮಗ, ಪಲ್ಲಿಕಾಲ್ ಕಾಜಿ ರಸ್ತೆ, ಪೋಸ್ಟು ಕಾಸರಗೋಡು.	32=84
518/61	ಟಿ. ಎಮ್. ನಾರಾಯಣ, ಕೆ.ಎಮ್. ಕಾರ್ನವರ ಮಗ, ಕಾರಡ್ಕ ಗ್ರಾಮ, ಪೋಸ್ಟು ಕಾರಡ್ಕ.	21=02
867/61	ಪಿ ರವೀಂದ್ರ, ಪರಮೇಶ್ವರವರ ಮಗ, ಸೀತಾ ಸೋಡಾ ಪೆಳ್ಳರಿ, ರೈಲ್ವೆ ಸ್ಟೇಶನ್ ರಸ್ತೆ, ಕಾಸರಗೋಡು.	38/78
898/61	ಕೆ. ಪಿ. ಬಾಲಕೃಷ್ಣ ನಾಯರ್, ಕೆ. ಪಿ. ಕುಂಞಂಬು ನಾಯರ್‌ರವರ ಅಳಿಯ, ಮುಳಿಯಾರು I ನೇ ಗ್ರಾಮ ಕಾನತ್ತೂರು, ಪೋಸ್ಟು ಕಾಸತ್ತೂರು.	80=10
1044/61	ಸಿ. ಎಚ್ ಮುಸ್ತಫಾ, ಬಡವಾನ್ ಕುಂಞ ಮುಸಿಲಿಯಾರ್‌ರವರ ಮಗ, ಪಲ್ಲಿಕಾಲ್, ತಲಂಗರೆ ಗ್ರಾಮ, ಪೋಸ್ಟು ಕಾಸರಗೋಡು.	238=20
1054/61	ಕೆ. ಕೃಷ್ಣ, ಚಂಡಪ್ಪನವರ ಮಗ, ಬೈಪಾಸ್ ಜಾಲ್ಸೂರ್ ರಸ್ತೆ, ಕಾಸರಗೋಡು.	120=80
1067/61	ಪಿ.ಎ.ಇಬ್ರಾಹಿಮ್, ಅಬ್ದುಲ್ ರಹಿಮಾನರ ಮಗ, ತಲಂಗರೆ ಗ್ರಾಮ, ಪೋಸ್ಟು ಕಾಸರಗೋಡು.	353=74
1130/61	ಸಿ. ಆಹಮ್ಮದ್, ಅಬ್ದುಲ್ಲರವರ ಮಗ, ತಲಂಗರೆ ಗ್ರಾಮ, ಪೋಸ್ಟು ಕಾಸರಗೋಡು	80=88
1162/61	ಸಿ. ಎಚ್. ಮುಸ್ತಫಾ, ಬಡ್ಡು ಕುಂಞಿ ಮುಸಿಲಿಯಾರ ಮಗ, ಪಲ್ಲಿಕಾಲ್, ತಲಂಗರೆ ಗ್ರಾಮ, ಪೋಸ್ಟು ಕಾಸರಗೋಡು	90=81
1358/61	ಕೆ. ಮೊಹಮ್ಮದ್, ಅಬ್ದುಲ್ ರಹಿಮಾನರ ಮಗ, ಮರ್ಚಂಟ್, ಎಮ್. ಎ. ಬಜಾರ್, ಕಾಸರಗೋಡು	170=60
1371/61	ಡಿ. ಎನ್. ವಿಷ್ಣು ತಂತ್ರಿ, ಕೃಷ್ಣ ನಾವಸ, ಅಡೂರು I ನೇ ಗ್ರಾಮ, ಉದ್ಯಾರು, ಪೋಸ್ಟು ಉದ್ಯಾರು.	73=25
1512/61	ಕೆ.ವಾಸುದೇವ ರಾವ್, ನೆಂಕಪ್ಪಯನವರ ಮಗ, ಕಂಪೌಂಡರ್ ಸರಕಾರಿ ಆಸ್ಪತ್ರೆ, ಪೋಸ್ಟು ಪುತ್ತೂರು.	719=68
1525/61	ಎನ್. ಕೆ. ಮೊಯಮ್ಮದ್ ಕುಂಞಿ, ಎನ್. ಕುಂಞಾಮುರವರ ಮಗ ತಯಲಂಗರೆ, ಪೋಸ್ಟು ಕಾಸರಗೋಡು.	116=33
1556/61	ಕೆ ವಸಂತರ ರೈ, ಕಂಜಾಂಣ್ಣ ರೈಯವರ ಮಗ, ಕನಕತೋಡಿ ಮನೆ, ನೆಟ್ಟಣಿಗೆ ಗ್ರಾಮ, ಪೋಸ್ಟು ನೆಟ್ಟಣಿಗೆ.	577=09

ಚೀನಾದ ಕೆಂಪು ಪರದೆಯೊಳಗೆ

(ಜನೇ ಪುಟದಿಂದ)

ಅವನು/ಅವಳು ರಚಿಸಿದ ಸಾಮಗ್ರಿಗಳು ಅದೆಷ್ಟು ಉತ್ತಮವಾದಾವು? ಹೀಗೆ ಉತ್ಪನ್ನವಾಗಿ ರಫ್ತಾದ ಸಾಮಾನುಗಳನ್ನು ಪರದೇಶಗಳಲ್ಲಿ ಪಡೆದುಕೊಳ್ಳುವವರು ಯಾರು? ಅವು ಸ್ವಾಭಾವಿಕವಾಗಿ ಹಿಂದ ಕ್ಕೆನೇ ಬರುತ್ತಿದ್ದುವು. ಹಿಂದಕ್ಕೆ ಬಂದು ದನ್ನು ರಾಷ್ಟ್ರೀಯ ದಿನ ಮುಂತಾದ ವಿ ಶೇಷದ ಸಮಯ ಕಾರ್ಮಿಕರಿಗೆನೇ ಮಾರ ಲಾಗುತ್ತಿತ್ತು. ಏಬ್ಬಾ! ಅದರ ಕ್ರಯ ಕೇಳಿದರೆನೇ ತಲೆ ತಿರುಗುತ್ತಿತ್ತು!

ಆರಂಭದಲ್ಲಿ ಸಾಮೂಹಿಕ ಕೃಷಿ ಪ ದ್ಧತಿಗೆ ಅದ್ಯಾರೂ ಎದುರಾಡಲಿಲ್ಲ. ಪ್ರ ಚಾರಕ್ಕೂ ಪ್ರಯೋಗಕ್ಕೂ ಇರುವ ಪ ರಾಕನ್ನು ಅರಿತುಕೊಳ್ಳಲು ಅವರಿಗೆ ಬಹ ಳ ಸಮಯ ಬೇಕಾಗಿಲ್ಲಿ. ವೆಲ್ಲಮೆಲ್ಲನೆ ಕ್ಷೀಣ ಸ್ವರ ಕೇಳಿ ಬರಲಾರಂಭಿಸಿತು—ತಮಗೆ ಆಹಾರ ಸಾಕಾಗುವದಿಲ್ಲವೆಂದು .... ಮುಂದೆ—ತಮ್ಮಿಂದ ಕೆಲಸ ಮಾಡ ಲು ಸಾಧ್ಯವಾಗುವತ್ತಿಲ್ಲವೆಸ್ನುವ ವರೆಗೂ ಬೂತು ಕೇಳಿ ಬರಲಾರಂಭವಾಯಿತು. ಆ ನಿಗೆ ಅವಸ್ಥೆಯಲ್ಲಿ ಬುಡಿಯಲು ಅದೆಂತು ಸಾಧ್ಯವೆಂಬು ಅವರು ಕೇಳಿದರು. ಸಾಮೂಹಿಕ ಕೃಷಿ ಪದ್ಧತಿಯ ಇತಿ ಶ್ರೀಯೊಯತೆನ್ನುವ ವರೆಗೂ ಪರಿ ಸ್ಥಿತಿ ಉಲ್ಬಣಗೊಂಡಿತು. ಕೃಷಿಕರು ಕೆಲ ಸವನ್ನೂಡಲೇ ಇಲ್ಲ. ಸಾಮೂಹಿಕ ಕೃಷಿಯ ಪ್ರಯೋಜನವಾದರೂ ಏನು?—ಅವರು ಕೇಳಲಾರಂಭಿಸಿದರು. ತಾನೇ ಬೆಳೆಸಿದ ತರಕಾರಿ, ಧಾನ್ಯ, ಅಕ್ಕಿ ಇತ್ಯಾದಿ ತಮ ಗೆನೇ ದೊರಕದಿಕವಾಗ ಆ ಕೃಷಿಯಿಂದ ಶಮನೇನಾಗಬೇಕಾಗಿದೆ? ಇದೂ ಆವರ ಸ್ವಶ್ಟಿ. ಸಮತಾವಾದದ ಬಡವರಿಗಾಗಿ ಇರು ವದಲ್ಲವೇನು? ಏಯ್ಯೋ! ಇನೆಂತಕೆ ಸನು ವಾವಾದ! ಇದು ನರಕಯಾತನೆಯೇ ಸರಿ ...ಈ ರೀತಿ ಕ್ಷೀಣ ಸ್ವರ ಧ್ವನಿಗೂಡುತ್ತ ಬಂತು. ಕಾಂಗು ಮತ್ತು ಅನ್ನಕ್ಕೆಗೆ ಬಲವಾ ತ್ಯಾರ ಪರಿಶ್ರಮಕ್ಕಾಗಿ ಕಳುಹಿಸ್ಪಟ್ಟಿದ ರಲ್ಲಿ ಕೆಲವರು ಸತ್ತು ಹೋದರು. ಬದುಕಿ ದ್ದವರಲ್ಲಿ ಅನೇಕರಿಗೆ ಅನೇಕ ರೀತಿಯ ರೋಗಗಳು ಬಂದುವು. ಅವರಿಗೆ ಆಲೈಕ ಯಗಳೇ, ಮೆದ್ದಾಗಲೇ ಎಣಿಕೆಗೂ ಅ ತ್ತಲಾಗಿನ ವಿಷಯವಾಗಿತ್ತ್.

ಆಹಾರ ಪರಿಸ್ಥಿತಿ ತೀವ್ರ ಹದಗೆಟ್ಟಿತು. ಶಾಂಘಾಯಿಯಲ್ಲಿದ್ದ ಸಾಮೂಹಿಕ ಕೃಷಿ ವಿಧಾನವು ನಿಲ್ಲಿಸಲ್ಪಟ್ಟಿತು. ಆಗಿನ ನಿಯಂತ್ರಣದ ಪ್ರಕಾರ ಸಿಗುತ್ತಿದ್ದದ್ದು ಇ ಪ್ಪತ್ತೈದು ರತ್ತು ಅಕ್ಕಿ, ಒಂದೂವರೆ ರತ್ತಲ್ ಎಣ್ಣೆ, ಎರಡೂವರೆ ಗ್ರಾಂ ಬೇವ್, ಹತ್ತೊಂಭತ್ತು ಗ್ರಾಂ ಅಡುಗೆಯೆಣ್ಣೆ. ಇ ದೂ ಕೂಡಾ ಅವರ ನಿಯಂತ್ರಣ ಪತ್ರಗ ಳಲ್ಲಿ ಮಾತ್ರ. ನಿಜವಾಗಿ ಅದೂ ಸಿಗುತ್ತಿರ ಲಿಲ್ಲ. ಬಾಲಿಗೆ ಕೆಲವೊಮ್ಮೆ ಬೇರೆ ಕೆಲವು ಆಹಾರ ವಸ್ತುಗಳು ಸಿಗುತ್ತಿದ್ದುವು. ಪ ಟ್ಟಣದಲ್ಲಿ ಮಾತ್ರ ಪರಿಸ್ಥಿತಿ ಅಷ್ಟು ಹದ ಗೆಟ್ಟಿರಲಿಲ್ಲ.

ಗ್ರಾಮಗಳಲ್ಲಿ ಹಾಗಲ್ಲ. ಅಲ್ಲಿ ಅಕ್ಕಿ, ಉಪ್ಪು, ಎಣ್ಣೆ, ಏನೂ ಸಿಗುತ್ತಿರಲಿಲ್ಲ. ನಿರ್ಬಲತೆ, ರೋಗರುಜಿನಗಳಿಂದಾಗಿ ಕೆಲ ಸ ಮಾಡುತ್ತಿದ್ದಂತೆಯೇ, ಸತ್ತೆಲೆ ಉದುರಿ ಬೀಳುವಂತೆ, ಶ್ರಮಿಕರು--ಕೃಷಿಕರು ಅ ಲ್ಲಲ್ಲೇ ಬಿದ್ದು ಸಾಯುತ್ತಿದ್ದರು ಖಾಲಿ ಹೊಟ್ಟೆ ಅದೆಷ್ಟು ದಿನ ಸಹಿಸಿಕೊಂಡಿದ್ದೀ ತ? ಜಾಗೆ ಸತ್ತು ಬಿದ್ದವರನ್ನು ಅಲ್ಲಲ್ಲೇ ಹೂಳಲಾಗುತ್ತಿತ್ತು ಸಾಧಾರಣವಾಗಿ ರ್ಗಾರ್ಜರಲ್ಲಿ ಪಕೆಯೊಂಗಿನ ಪ್ರಜೆಗಳಿಗೆ ಕೋರುಗಡ್ಡೆಯಲ್ಲದೆ ತಿನ್ನಲು ಬೇರೇನೂ ಸಿಗುತ್ತಿದ್ದಿಲ್ಲ. ನಾನ್-ಕೆಂಗನಲ್ಲಿದ್ದವರಿಗೆ ಮೂಲಂಗಿ, ಕೆಂಪು ಗೂಲಂಗಿಗಳೇ ಪ್ರ ಧಾನ ಆಹಾರ ಪದಾರ್ಥಗಳಾಗಿದ್ದುವು. ಮಂಚೂರಿಯದಲ್ಲಿದ್ದವರಿಗೆ ಜೋಳ ಹಾ ಗೂ ಹುಲ್ಲುಗಳೇ ಆಹಾರಗಳಾಗಿದ್ದುವು. ಅಲ್ಲಿಂದ ಬಂದವನನ್ನು ಕಂಡರೆ ಸಾಕು—ಬಾತುಬೊಗಿರುವ ದೇಹ, ಬೆಳ್ಳಿಗೆ ಬಣ್ಣ ಗೆಟ್ಟ ರೂಪ ಅವರಿಗೆ ದೃಷ್ಟಿ ಚಿನ್ನಾಗಿರ ತ್ತಿದ್ದಿಲ್ಲ. ನಿಜವಾಗಿ ಅದು ಕರುಣಾಜನ ಕ ದೃಶ್ಯವೇ ಸರಿ.

(ಮುಂದುವರಿಯುವುದು)

—ಶಿವಶಂಕರಿ ಮಂದಪ್ಪಸು

1641/61	ಎ. ಆಹಮ್ಮದ್, ಮುಸ್ತಂಜಿಯವರ ಮಗ, ಮರ್ಚಂಟ್, ಚಕ್ಕ ಬಜಾರ್, ಪೋಸ್ಟು ಕಾಸರಗೋಡು.	111=15
1658/61	ಮೈದಿನ್‌ಕುಟ್ಟಿ, ಕುಂಞಾಮ್ಮದ್‌ರವರ ಮಗ, ಪಲ್ಲನ್ಗು, ಪೋಸ್ಟು ಕಾಸರಗೋಡು.	59=49
1673/61	ಬನಾರಿ ಮೂಸ ಕುಂಜಿ, ಮೈದಿನ್ ಕುಟ್ಟಿಯವರ ಮಗ, ಮೂಗು ಗ್ರಾಮ, ಪೋಸ್ಟು ಮೂಗು.	48=09
1677/61	ಕೆ. ಗುರುನಪ್ಪ, ಪೋಸ್ಟುಮೇನ್, ಪೊಗ್ರಾಲು ಪುತ್ತೂರು ಪೋಸ್ಟು ಪೊಗ್ರಾಲು ಪುತ್ತೂರು, ಕಾಸರಗೋಡು.	19=63
22/63	ಎಮ್. ಹಸನಾರ್, ಮುಸ್ತುಂಜಿಯವರ ಮಗ, ಕಲ್ಲಾಡು ಮಹಶ್ತಿಲ್, ಪೋಸ್ಟು ಮೇಲ್‌ಪರಂಬು.	143=84
81/63	ರಾಧಾಕೃಷ್ಣ ಭಟ್, ಶಾಂಡುರಂಗ ಭಟ್ಟರ ಮಗ, ಪೋಟೋಲ್ ಕೇಪರ್, ಪಲ್ಲರಸ್ತೆ, ಕಾಸರಗೋಡು.	42=08
102/63	ಟಿ. ಇ ಮೊಯಮ್ಮದ್, ಇಬ್ರಾಹಿಮ್ ಕುಟ್ಟಿಯವರ ಮಗ, ತೆಕ್ಕೆಪ್ಪತ್ತು, ಪೋಸ್ಟು ಕಾಸರಗೋಡು.	172=71
109/63	ಪಿ. ಕೆ. ಶಿವರಾಮ ನಂಬಿಯೊರ್, ಚೆಂದು ನಾಯರ್‌ರವರ ಮಗ ಪೆರಂಬಳಗ್ರಾಮ, ಪೋಸ್ಟು ಪರವನಡ್ಕ, ಕಾಸರಗೋಡು.	99=30
148/63	ಕಾದರ್ ಹಾಜಿ, ಚಿರಿಯ ಮೊಹಮ್ಮದ್ ಹಾಜಿಯವರ ಮಗ, ಪೊರುವಂಗಾವೆ, ಕಲ್ಲಾಡು ಗ್ರಾಮ, ಪೋಸ್ಟು ಮೇಲ್‌ಪರಂಬ.	233=41
149/63	ಎ ಬಿ. ಅಬ್ದುಸ್ ಕುಟ್ಟಿ, ಹಸನಾ ಕುಟ್ಟಿಯವರ ಮಗ, ಚಿಮ್ಮೊಡುಗ್ರಾಮ, ಪೋಸ್ಟು ಚಿಮ್ಮೊಡು	171=49
253/63	ಚಂದ್ರಶೇಖರ, ಪಿ. ರಂಗರಾಯರ್‌ರವರ ಮಗ, ಟೀಚರ್, ಟ್ರೈನಿಂಗ್ ಶಾಲೆ, ಪೋಸ್ಟು ಪೂಯಿಪಾಡಿ	25=01
349/63	ಪಿ. ಎ. ಮಹಮ್ಮದ್ ಅಲಿ, ಸಿ ಎಚ್ ಅಬ್ದುಸ್ ಕುಟ್ಟಿಯವರ ಮಗ, ಪೊಲ್ಲಚೇಡಿ ಚೆನ್ನೂಡು ಪೋಸ್ಟು ಚೆನ್ನೂಡು	58=27

ಸ್ಥಳ: ಕಾಸರಗೋಡು
ತಾರೀಕು 7—6—1963

ಕ. ಕೋಚಣ್ಣ ರೈ.
ಏಜಂಟ್.

ತತ್ವವಿಜಯದ ಮಹತ್ವಾಕಾಂಕ್ಷೆ

(ನಂತರ ಮುಂದುವರಿದಿದೆ)

ದೆ. ಭಾರತ—ಚೀನಾ ಸಂಘರ್ಷಣವು ವಿವಾದ ಎರಡೂ ರಾಷ್ಟ್ರಗಳ ನಡುವಣ ತಾತ್ವಿಕ ಸಂಘರ್ಷಣೆಯು ಪ್ರತೀಕ. ವಿಶ್ವದ ದೃಷ್ಟಿಯಲ್ಲಿ ಭಾರತವು ಕೆಲವೊಂದು ಮೌಲ್ಯಗಳು ಮತ್ತು ಉನ್ನತ ಆದರ್ಶಗಳನ್ನು ಪ್ರತಿಪಾದಿಸುವ ರಾಷ್ಟ್ರ. ಬಡತನ ಅನಕ್ಷರತೆ, ಸಾಮಾಜಿಕ ಪರಿವರ್ತನೆಯ ಹಂಬಲ, ಆರ್ಥಿಕ ಪ್ರಗತಿ ಇವೇ ಮೊದಲಾದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಭಾರತ ಚೀನಾಗಿಂತ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ವಿಭಿನ್ನ ಮಾರ್ಗಗಳನ್ನೂ ಅನುಸರಿಸಿದೆ ಭಾರತವು ಸಹಕಾರ ಹಾಗೂ ಸಹಬಾಳ್ವೆಯ ಮಾರ್ಗವನ್ನು ಅನುಸರಿಸಿದ್ದರೆ, ಚೀನಾ ಒತ್ತಾಯ ಹಾಗೂ ಬಲಪ್ರಯೋಗ ರೀತಿಯಲ್ಲಿ ಅಚಲ ವಿಶ್ವಾಸವನ್ನಿಟ್ಟಿದೆ. ಚೀನಾದ್ದು ಕಲೆ ಹಾಗೂ ಸಾಹಿತ್ಯ ಎರಡೂ ಸರ್ಕಾರದ ನಿಯಂತ್ರಣದಲ್ಲಿವೆ.

ಪ್ರಶ್ನೆಯನ್ನಿದಿರಿಸೋಣ

ಚೀನೀಯರ ಸವಾಲನ್ನು ಅಷ್ಟೇ ಸಮಬಲದಿಂದ ಎದುರಿಸೋಣ. ಸವಾಲನ್ನೆದುರಿಸುವ ವರೆಗೂ ಪರಿಷತ್ತು ಅಥವಾ ಜನತೆ ವಿರಮಿಸಲಾರದು. ಈ ಪ್ರಯತ್ನ ಸಶಕ್ತವಾಗಿರಬೇಕು ಅದು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿರಬೇಕು. ಸರ್ಕಾರವು ಅನುಸರಿಸುತ್ತಿರುವ ನೀತಿಗಳನ್ನು ಸಮಂಜಸವಾಗಿ ಅರ್ಥಮಾಡಿಕೊಳ್ಳುವುದರ ಮೇಲೆಯೇ ಇದು ಅವಲಂಬಿಸಿದೆ. ನಮ್ಮ ಸಂಪನ್ಮೂಲಗಳಲ್ಲಿ ಅಧಿಕಾಂಶವನ್ನು ರಕ್ಷಣಾ ವ್ಯವಸ್ಥೆಯು ಅಭಿವೃದ್ಧಿಗಾಗಿ ತೊಡಗಿಸಿದರೂ, ನಮ್ಮ ಮಿಲಿಟರಿ ಬಲ ಸಂವರ್ಧನೆಯು ಹಿತಾಸಕ್ತಿಯು ದೃಷ್ಟಿಯಿಂದಲೇ ಆರ್ಥಿಕ ಅಭಿವೃದ್ಧಿ ಕಾರ್ಯವು ತ್ವರಿತವಾಗಿ ನಡೆಯಬೇಕು.

ನಾಗರಿಕ ಪರಿಷತ್ತು ಸಾರ್ವಜನಿಕರ ಹಾಗೂ ಮಿಲಿಟರಿ ಬಲಸಂವರ್ಧನೆಗಾಗಿ ಸರ್ಕಾರವು ರೂಪಿಸಿದ ಕಾರ್ಯಯೋಜನೆಗಳಿಗೆ ಬೆಂಬಲ ನೀಡುವುದರ ಜೊತೆಗೆ ಆಯುಧಗಳಿಗೆ ಪೂರಕವಾಗುವಂತೆ ಪಲವಾರು ದೀರ್ಘವಧಿ ಕಾರ್ಯಕ್ರಮವನ್ನು ಕೈಗೊಂಡಿದೆ. ವ್ಯಾಪಕವಾದ ರಾಷ್ಟ್ರವ್ಯಾಪಿ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅನರ್ಜಂಧ ಅವಕಾಶವಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಸ್ವಯಂ ಸೇವಕದಳಗಳಿಗೆ ಉತ್ತೇಜನ ನೀಡುವುದರ ಮೂಲಕ ಬೇಹಾಯೋತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆ ಮತ್ತು ಗುಣನಿಯಂತ್ರಣ ಮಾಡುವುದೂ ಗ್ರಾಹಕರ ಸಹಕಾರಿ ಸಂಘಗಳ ರಚನೆಯನ್ನು ತೀವ್ರಗೊಳಿಸುವುದು ಅಗತ್ಯವಾಗಿದೆ.

ನಾಗರಿಕ ಸಲಹಾ ಸಮಿತಿಗಳು ನಾಗರಿಕರಿಗೆ ಅವರ ಕರ್ತವ್ಯ, ಹಕ್ಕುಬಾಧ್ಯತೆಗಳು, ಕಾನೂನು ಮತ್ತಿತರ ನಿಬಂಧನೆಗಳ ಕಾರ್ಯವ್ಯಾಪ್ತಿ ಮತ್ತು ಇನ್ನಿತರ ಸಮಸ್ಯೆಗಳ ಸಂಬಂಧವಾಗಿ ಸಲಹೆ ನೀಡಬೇಕು. ಲಡಾಖ್ ಪ್ರದೇಶವಲ್ಲಿನ ಪಲವು ಸಂಚಾರಿಗಿಂಜನರ ವಕ್ಕಳಿಗೆ ವೈದ್ಯಕೀಯ ಸೌಲಭ್ಯವನ್ನೊದಗಿಸುವುದು ಪರಿಷತ್ತಿಗೆ ಸಾಧ್ಯ. ಇನ್ನುಳಿದ ಗಡಿಪ್ರದೇಶಗಳಲ್ಲಿ ಅಲ್ಲಿಯ ಜನತೆ ಹಾಗೂ ಭಾರತದ ವಿವಿಧ ವಿಭಾಗಗಳ ಜನರನ್ನು ಒಂದೆಡೆ ತರುವ, ರಾಷ್ಟ್ರೀಯ ಸಮಗ್ರತೆಗೆ ಉತ್ತಮ ಉದಾಹರಣೆಯಾಗಿ ಪರಿಣಮಿಸುವ ಕೆಲವು ಪ್ರಾಯೋಗಿಕ ಕೇಂದ್ರಗಳನ್ನು ಸ್ಥಾಪಿಸಬೇಕು.

ಸಾರ್ವಜನಿಕರು ಒಮ್ಮೆ ಕಾರ್ಯಯೋಜನೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳುವವರೆಗೂ, ಅತ್ಯಾಸಕ್ತಿಯಿಂದ ಅದನ್ನು ಅಂಗೀಕರಿಸದವರೆಗೂ ಅದು ಯಶಸ್ವಿಯಾಗಲಾರದು." ಪ್ರಜಾಪ್ರಭುತ್ವ ಸರ್ಕಾರವು ನಾಗರಿಕರಿಂದ ಅಪೇಕ್ಷಿಸುವ ಮೊದಲ ಬೇಡಿಕೆಯೂ ಅಪೇಕ್ಷಿಸುವುದಿಲ್ಲ. ಅದು ನಾಗರಿಕರಿಗೆ ನೀಡುವಷ್ಟು 'ಪ್ರತಿಫಲವನ್ನು ಬೇರಾವ ಸರ್ಕಾರವೂ ನೀಡಲಾರದು. ವಾಕ್ ಸ್ವಾತಂತ್ರ್ಯವು ಪ್ರಜಾಪ್ರಭುತ್ವವು ನಾಗರಿಕರಿಗೆ ನೀಡುವ ಹಕ್ಕು, ಅದರ ಸೇನೆಯ ಅಥವಾ ಉತ್ಪೋಷ್ಟಿಯಿಂದ ಕೂಡಿದ ಮಾತುಗಳು ಪ್ರಜಾಪ್ರಭುತ್ವದ ನೈತಿಕ ಅವನತಿಗೆ ಕಾರಣವಾಗುತ್ತವೆ. ಟೀಕೆಯು ಹಲವು ಲೋಪದೋಷಗಳನ್ನು ನಿವಾರಿಸಬಲ್ಲುದಾದರೂ, ಅದು ಪ್ರಜಾಪ್ರಭುತ್ವವನ್ನೆ ದುರ್ಬಲಗೊಳಿಸುತ್ತದೆ.

ಪ್ರತ್ಯೇಕತಾ ಪ್ರವೃತ್ತಿಗಳು ಹಾಗೂ ಆಂತರಿಕ ಭಿನ್ನಾಭಿಪ್ರಾಯಗಳೇ ಇತಿಹಾಸವಾಗಿರುವ ನಾವು ಚೀನೀ ಆಕ್ರಮಣದ ಪ್ರಕಂಗದಲ್ಲಿ ರಾಷ್ಟ್ರೈಕ್ಯತೆ ಐಕ್ಯಮತ್ಯ ಹಾಗೂ ಸ್ಥಿರತೆಯನ್ನು ಸಾಧಿಸಿದುದು ನಿಜಕ್ಕೂ ಒಂದು ಪವಾಡವಾಗಿದೆ. ಐಕ್ಯತೆ ತತ್ಕಾಲಿಕ ಹಾಗೂ ಸ್ಥಿರತೆಗಳ ತಳಹದಿ ಅಲ್ಲಾದಿದ್ದರೆ, ಎಲ್ಲ ಸಾಧನೆಗಳೂ ನಿಷ್ಪ್ರಯೋಜಕವಾಗುವುದಲ್ಲದೆ, ರಾಷ್ಟ್ರದ ಅಸ್ತಿತ್ವ ಅಪಾಯಕ್ಕೆ ಸಿಲುಕಬಹುದು.

ಜನ ಜಾಗೃತಿಯು ರಾಷ್ಟ್ರದಲ್ಲಿನ ಪರಿಸ್ಥಿತಿಯ ಪ್ರಜ್ಞೆಯಿಂದ ಮೈದಳೆದು ಬಂದಿದ್ದರೆ ಅದು ಅರ್ಥಪೂರ್ಣವಾದುದು. ಮಳೆಗಾಲದಲ್ಲಿ ಒಂದು ಕ್ಷಣ ಉಕ್ಕಿ ಹರಿದು ನಂತರ ಇಳಿಯುವ ಪ್ರವಾಹದಂತೆ ನಮ್ಮ ಚೈತನ್ಯ ಹಾಗೂ ಜಾಗೃತಿಗಳು ಧ್ವಾಮಕವಾಗಬಾರದು. ಅಲ್ಪ ಕಾಲಿಕವಾಗಬಾರದು ಆದ್ದರಿಂದ ಯುಗ ಯುಗಗಳಿಂದಲೂ ಒಂದೇ ಸಮನಾಗಿ ಹರಿದು ಜನತೆಗೆ ಸ್ಫೂರ್ತಿಯು ನೆಲೆಯೂರಿದ ಗಂಗಾ ನದಿಯಂತೆ ನಮ್ಮ ಉತ್ಸಾಹ ಸ್ಥಿರವಾಗಬೇಕು. ನಿರಂತರವಾಗಬೇಕು.

(ಶ್ರೀಮತಿ ಇಂದಿರಾ ಗಾಂಧಿಯವರ ಪ್ರಸಾರ ಭಾಷಣದಿಂದ)

ಅಹಿಂಸೆಗೊಂದು ಆಹ್ವಾನ

ಅಣುಬಾಂಬುಗಳ ಅನಾಹುತ

ಆತ್ಮಸಾಕ್ಷಿಯ ಕಾಲದಿಂದ ಮನುಷ್ಯನು ಮನುಷ್ಯನೊತನೆ ಕಾದಾಡುವ ಕ್ರಮವಿತ್ತು. ಆ ಕಾಲದ ಆಯುಧಗಳು ತಿಸ್ತ್ರಶಸ್ತ್ರಗಳಾಗಿದ್ದವು. ಆ ಆಯುಧಗಳಲ್ಲಿ ವಿಶೇಷ ಶಕ್ತಿಯು ತುಂಬಿದ್ದರೂ, ಅವನ್ನು ಉಪಯೋಗಿಸುವ ಧೀರನ ವೈಯಕ್ತಿಕ ಸಾಮರ್ಥ್ಯವೂ ಪ್ರಮುಖ ಕಾರಣವಾಗಿತ್ತು. ಬರೀ ಅಸ್ತ್ರಶಸ್ತ್ರಗಳು ನಿರ್ಜೀವವಾಗಿದ್ದವು. ಕಾಲಕ್ರಮೇಣ ಸೈನಿಕನ ವ್ಯಕ್ತಿತ್ವವು ಕೆಳಗಿಳಿದು ಆಯುಧಗಳೇ ಬಲವತ್ತರವಾಗಿ ಜನನಾಶಕ್ಕೆ ಅವಕಾಶ ಕೊಟ್ಟವು. ಕೊಡಲಿ, ದೊಣ್ಣೆಯಿಂದ ಉದಕ್ರವಿಸಿದ ಯುದ್ಧವು ಈಗ 'ಎಟಂ" ಬಾಂಬುಗಳ ರೂಪಕ್ಕೆ ಬಂದು ಮುಟ್ಟಿಯಿದೆ ಈ ಅನಾಹುತ ಕಾರಕ ಬಾಂಬುಗಳನ್ನ ಕಂಡು ಹಿಡಿದ ವಿಜ್ಞಾನಿಗಳು ಬುದ್ಧಿಶಾಲಿಗಳಿರಬಹುದು. ಆದರೆ ಈ ಬಾಂಬುಗಳ ಉಚ್ಚವದಿಂದ ಮಾನವ ವೀರರ ಪರಾಕ್ರಮವೂ, ಶೌರ್ಯವೂ ತಗ್ಗಿ ಹೋಗಿಯಿದೆ; ಮಾತ್ರವಲ್ಲ ಮಾನವ ವರ್ಗವೆ ಕಾಡು ಮೃಗಗಳ ವರ್ಗಕ್ಕೆ ಸೇರಲು ಅತುರಗೊಂಡಂತೆ ಭಾಸವಾಗುತ್ತಿದೆ. ಒಂದು ಗುಬ್ಬಿಯನ್ನು ಒತ್ತಿಹಿಡಿದು ಹಲವು ವಿಲಿಯಂ ಜನರನ್ನು ನಾಶಗೊಳಿಸುವ ಬಾಂಬುಗಳು ತಯಾರಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಅಮೆರಿಕ ಮತ್ತು ರಶ್ಯ ದೇಶಗಳು ಈ ಚಮತ್ಕಾರದಲ್ಲಿ ಪ್ರಧಾನ ಸ್ಪಾನೆಪನ್ನು ಪಡೆದಿದ್ದು ನಿರ್ವಿವಾದ ವಿಷಯವು. ಈ ಜನಾಂಗಗಳ ಚಮತ್ಕಾರದಿಂದ ಇಡಿ ಜಗತ್ತಿನ ಜನರು ಅಲ್ಲೋಲಕಲ್ಲೋಲವಾಗಿರಬಹುದು. ಈ ಬಾಂಬುಗಳಿಂದ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸುವ ಬಗೆ ಹೇಗೆ ಎಂದು ಸಾತ್ವಿಕ ಜನಾಂಗದವರು ಯೋಚಿಸುತ್ತಲೇ ಇದ್ದಾರೆ. ಮೊಕ್ರನ್ನ ಈ ಹೆಚ್ಚು ವಿಜ್ಞಾನ ಶೋಧನೆಯಲ್ಲಿ ಹಲವು ಇತರ ದೇಶಗಳು ತಮ್ಮ ತನುಮನ ಧನಗಳನ್ನು ಅರ್ಪಿಸಲು ಪ್ರಾರಂಭಿಸಿರುವರು. ಭೂಲೋಕದ ಜನರ ಮುಂದಿನ ಗತಿಯು ಎಲ್ಲಿ ಬಂದು ಮುಟ್ಟಬಹುದು ಎಂಬ ವಿಚಾರವು ಕಂಠಿಸುವುದಕ್ಕಾಗಿಯೆ.

ಅಮೆರಿಕಾ ಮತ್ತು ರಶ್ಯಗಳು ಈ ವಿಜ್ಞಾನ ಓಟದಲ್ಲಿಯೇ ತಮ್ಮ ಐಶ್ವರ್ಯವನ್ನು ಕೆಡಿಸುತ್ತಲಿರುವರು. ಈ ಈರ್ಷ ಭಯಂಕರ ಜನಾಂಗದವರಿಗೆ ಹೆದರಿ ತಮ್ಮ ಪಕ್ಕೆ ತಾವೇ ಇದ್ದ ಇತರ ಜನಾಂಗಗಳು ಕೂಡ ತಮ್ಮಲ್ಲಿರುವ ಅಲ್ಪ ಧನವನ್ನು "ಬಾಂಬು" ಶೋಧನೆಗಾಗಿ ವೆಚ್ಚಮಾಡ ಲಾರಂಭವಾಗಿಯಿದೆ.

ಏನೂ ತಪ್ಪು ಮಾಡದೆ ಯುದ್ಧರಂಗಕ್ಕೆ ಕಾಲಿಡದ, ಸಾಮಾನ್ಯ ಜನ, ಮುದುಕರನ್ನು, ಸ್ತ್ರೀಯರನ್ನೂ, ಮಕ್ಕಳನ್ನು ಕೊಂದು ನಾಶಪಡಿಸುವುದು ತಪ್ಪು ಎಂದು ಎಲ್ಲಾ ಜನಾಂಗಗಳು ಒಪ್ಪಿಕೊಳ್ಳುತ್ತವೆ. ಮೊತ್ತವಲ್ಲ ನಾಶವಾಗಿ ಉಳಿದಿರುವ ಮಾನವ ವರ್ಗದ ಅರೋಗ್ಯವು ಕೂಡ ಸಂಪೂರ್ಣ ಕೆಡಿಸುವ ವಾತಾವರಣವನ್ನು ಉಂಟುಮಾಡುವ ಈ ಅನಾಹುತ ಬಾಂಬುಗಳಿಂದ ಇಡೀ ಜಗತ್ತಿಗೆನೇ ಒಂದು ಕಂಟಕ ಬಂದಿರುವಂತೆ ಸಾಮಾನ್ಯ ಜನರಿಗೆ ಅಂಜಿಕೆ ಹುಟ್ಟಿಯಿದೆ.

'ಸ್ಯಾಕ್ಲಿಯರ್' ಯುದ್ಧವು ಪ್ರಾರಂಭವಾದರೆ 'ಲೋಕನಾಶ'ವೆಂಬುದು ನಿಶ್ಚಯ. ಆಗ ಒಂದು ಬಾರಿ ಕೆಲವು ಜನಾಂಗಗಳು ಅಳಿದು ಉಳಿದೂ ಆ ಜನಾಂಗಗಳಿಗೆ ಜೀವನೋಪಾಯವು ಎಲ್ಲರಬಹುದು ಎಂಬ ಪ್ರಶ್ನೆಯು ವಿಚಿತ್ರವಾಗಿಯಿದೆ. ನಾಶಹೊಂದಿದ ಜನಾಂಗಕ್ಕಿಂತಲೂ ಕರುಣಾಜನಕವಾದ ಅವಸ್ಥೆಯನ್ನು ನಾಶವಾಗದ ಜನಾಂಗಗಳು ಅನುಭವಿಸಬೇಕಾದುದು ಖಂಡಿತ.

ಆದ್ದರಿಂದ ಎಲ್ಲಾ ಜನಾಂಗಗಳು ವಿಶ್ವ ಮನಸ್ಸಿನಿಂದ ಒಗ್ಗಟ್ಟಾಗಿ ಜನೋಪಕಾರಿ ಮತ್ತು ರಶ್ಯ ದೇಶಗಳಿಗೆ ಈ ವಿಚಾರದಲ್ಲಿ ತಡೆಗಟ್ಟಬೇಕು. ಮಹಾತ್ಮಾ ಗಾಂಧಿಜಿಯವರ 'ಅಹಿಂಸಾ' ವಾಸವು ಮೊತ್ತ ಈನಿನ ಭಯವನ್ನು ನಿವಾರಿಸುವ ಒಂದು ಸರಳವಾದ ಉಪಾಯವು. ಈ ವಿಷಯದಲ್ಲಿ ಹಿಂದೂಸ್ಥಾನವು ಮುಂದಾಳುತನವನ್ನು ಧೈರ್ಯದಿಂದ ವಹಿಸಿಕೊಳ್ಳುವುದು ಉತ್ತಮ. ಬಹಳ ಕಠಿಣ ತರವಾದ 'ಅಹಿಂಸಾ ವಾದ'ದಿಂದ ಮೊತ್ತ ಈ ಭಯವನ್ನು ತಗ್ಗಿಸಬಹುದು.

—ಶ್ರೀ ಎಂ. ಬಿ. ಶಂಕರ ರಾವ್,
ಉಡುಪಿ.

ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಬಿಕ್ಕಡಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಪುಟಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳೆ, ಹೆಂಗಸರೆ, ಗರ್ಭಿಣಿಯರೆ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರಕುತ್ತವೆ.
ಪ್ರಭು ಪ್ರಿಂಟಿಂಗ ಪ್ರೆಸ್, ಉಡುಪಿ

ಭಾರತದಲ್ಲಿ

ಕುಟುಂಬ ಯೋಜನೆಯ ಮುನ್ನಡೆ

ಬರೆದವರು
ಡಾ| ಎಂ. ಆರ್. ಶೆಟ್ಟಿ, ಮೂಲ್ಕಿ.

ಜನಸಂಖ್ಯೆಯು ಸಮಸ್ಯೆ:— ಭೂಲೋಕದ ಪೆಟ್ಟಿನ ಭಾಗಗಳಲ್ಲಿ ಈಗ ಜನಸಂಖ್ಯೆಯು ತೀವ್ರಗತಿಯಿಂದ ಹೆಚ್ಚುತ್ತಿರುವುದೂ ಜಗತ್ತಿನ ಹುಟ್ಟುವಳಯು ಮೇಲೆ ಇದರಿಂದ ಪರಿಣಾಮವಾಗುತ್ತಿರುವುದೂ ಒಂದು ಸಾಮಾನ್ಯ ಸಮಸ್ಯೆಯಾಗಿದೆ. ಜಗತ್ತಿನ ಆಹಾರ ಮತ್ತು ಕೃಷಿಗೆ ಸಂಬಂಧಪಟ್ಟ ಸಂಸ್ಥೆಯು ತನ್ನ ವರದಿಗಳಲ್ಲಿ ಜನಸಂಖ್ಯೆಯು ಹೆಚ್ಚುಳಗಾಗುತ್ತಿರುವಂತೆಯೇ ಆಹಾರೋತ್ಪತ್ತಿಯೂ ಹೆಚ್ಚುತ್ತಿಲ್ಲವೆಂದು ಹೇಳುತ್ತಾ ಇದೆ. ಸಂಯುಕ್ತ ರಾಷ್ಟ್ರ ಸಂಘದ ಲೆಕ್ಕದಂತೆ ಈಗ ಜಗತ್ತಿನಲ್ಲಿರುವ ಜನಸಂಖ್ಯೆ 2737 ಮಿಲಿಯನ್ ಗಳಾಗಿದೆ. ಪ್ರತಿವರ್ಷ 47 ಮಿಲಿಯದಂತೆ ಹೆಚ್ಚುತ್ತಾ ಇದೆ ಮತ್ತು ಇನ್ನು ೨೦ ವರ್ಷಗಳಲ್ಲಿ ಈಗಿನ ಜನಸಂಖ್ಯೆಗಿಂತ ಇನ್ನೂರಿಯ್ಯಂಗಬಹುದು. ಆಧುನಿಕ ಕಾಲದಲ್ಲಿ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ವಿಧಾನಗಳು ಮತ್ತು ವೈದ್ಯಕೀಯ ಶೋಧನೆಗಳಿಂದಾಗಿ ಮರಣದ ಸಂಖ್ಯೆಯು ಕಡಿಮೆಯಾಗಿದೆ.

ಭಾರತದ ಜನಸಂಖ್ಯೆಯು ಹೆಚ್ಚಳವು ದೇಶದ ಆರ್ಥಿಕ ಪರಿಸ್ಥಿತಿಗೆ ಮಾರಕವಾಗಿದೆ.— 1961ರಲ್ಲಿ ಭಾರತದ ಜನಸಂಖ್ಯೆ ಹೆಚ್ಚುಕಡಿಮೆ 420 ಮಿಲಿಯನಾಗಿತ್ತು. ಈ ಶತಮಾನದ ಅಂತ್ಯದಲ್ಲಿ ಅದು 650 ಮಿಲಿಯಗಳಷ್ಟಾಗಬಹುದು. ಇತ್ತೀಚಿನ ಅಂದಾಜು ಪ್ರಕಾರ ಈಗ ಪ್ರತಿ ವರ್ಷ ಶೇಕಡಾ ಎರಡರಷ್ಟು ಜನಸಂಖ್ಯೆಯು ಹೆಚ್ಚುತ್ತಾ ಇದೆ. ಆಹಾರ ವಸ್ತುಗಳ ಆಮದು ದ್ವಿತೀಯ ಪಂಚವರ್ಷಿಕ ಯೋಜನೆಯ ಪೂರ್ಣ ಅವಧಿಯಲ್ಲಿ 6 ಮಿಲಿಯ ಟನ್ನುಗಳಿಗಿಂತ ಹೆಚ್ಚಾಗಲಿಕ್ಕಿಲ್ಲವೆಂದು ನಿರೀಕ್ಷಿಸಿದ್ದರೂ ಯೋಜನೆಯ ಪ್ರಥಮಾರ್ಧದಲ್ಲಿಯೇ ಐದು ಮಿಲಿಯ ಟನ್ನುಗಳಿಗೂ ಮಿಕ್ಕಿತು. ನಿರುದ್ಯೋಗ ಸಮಸ್ಯೆ ಅಧಿಕವಾಗುತ್ತಾ ಇದೆ ಹೆಚ್ಚುಕಡಿಮೆ 1961-66ರೊಳಗೆ ಹದಿನಾಲ್ಕು ಮಿಲಿಯ ನಿರುದ್ಯೋಗಿಗಳಿಗೆ ಕೆಲಸ ಒದಗಿಸಿ ಕೊಡಬೇಕಾಗಿ ಬರಬಹುದು. ಒಂದು ಸ್ಥಿತಿ ಮಿತಿಗಿಂತ ಒಂದು ದೇಶದ ಜನಸಂಖ್ಯೆಯು ಬೆಳೆಯುವುದೆಂದರೆ ಅದು ಆ ರಾಷ್ಟ್ರದ ಆರ್ಥಿಕ ಪರಿಸ್ಥಿತಿಗೆ ಗಂಡಾಂತರಕಾರಿಯಾಗಿದೆ. ರಾಷ್ಟ್ರದ ಜನಸಂಖ್ಯೆಯನ್ನು ಆ ರಾಷ್ಟ್ರದ ಆರ್ಥಿಕ ಪರಿಸ್ಥಿತಿಗನುಗುಣವಾಗಿ ನಿಯಂತ್ರಣದಲ್ಲಿಡುವುದು ಈಗಿನ ರಾಜಕೀಯ ಮತ್ತು ಆರ್ಥಿಕ ಆವಶ್ಯಕತೆಗಳಾಗಿವೆ.

ಕುಟುಂಬ ಯೋಜನೆಯ ವಿಸ್ತರಣೆ: ಮುಂದುವರಿದ ರಾಷ್ಟ್ರಗಳಾದ ಉತ್ತರ ಅಮೇರಿಕ ಮತ್ತು ಪಶ್ಚಿಮ ಯುರೋಪು ಮೊದಲಾದ ದೇಶಗಳಲ್ಲಿ ಕುಟುಂಬ ಯೋಜನೆಯು ಸ್ವೀಕೃತವಾಗಿದೆ. ಹೆಚ್ಚಿನ ಮುಂದುವರಿದ ದೇಶಗಳ ತಮ್ಮ ಕುಟುಂಬದ ಸಂಖ್ಯೆಯನ್ನೂ ಮತ್ತು ಜನನದ ಅವಧಿಯನ್ನೂ ಕುಟುಂಬ ಯೋಜನಾ ಪದ್ಧತಿಗಳ ಮುಖಾಂತರ ನಿಯಂತ್ರಿಸುತ್ತಿದ್ದಾರೆ. ಈ ರೀತಿ ಒಂದು ಕುಟುಂಬದ ಮಕ್ಕಳ ಸಂಖ್ಯೆಯನ್ನು ಆರೇಳರಿಂದ ಎರಡು ಲಭವಾ ಮೂರಕ್ಕೆ ಇಳಿಸುತ್ತಿದ್ದಾರೆ. ಆದರೆ ಮುಂದುವರಿಯದ ವಿಶ್ವ ಮತ್ತು ಅಭಿವೃದ್ಧಿಶಾವಲ್ಲಿರುವ ರಾಷ್ಟ್ರಗಳಲ್ಲಿ ಈ ಕುಟುಂಬ ಯೋಜನೆಯು ಜನಪ್ರಿಯವಾಗಿಲ್ಲ.

ಭಾರತದ ಪರಿಸ್ಥಿತಿ:— ಭಾರತದಲ್ಲಿ ಪ್ರತಿ ಸಾವಿರಕ್ಕೆ ಪ್ರತಿ ವರ್ಷ ನಾಮುವ ಸಂಖ್ಯೆ 27 ಆದರೆ ಹುಟ್ಟುವ ಸಂಖ್ಯೆ 40 ಆಗಿದೆ. ಸಾರ್ವಜನಿಕ ಆರೋಗ್ಯ ಇಲಾಖೆಯು ಮತ್ತು ವೈದ್ಯಕೀಯ ಇಲಾಖೆಗಳ ಸುಧಾರಿತ ಕ್ರಮಗಳ ಸೇವೆಯ ಮೂಲಕ ಸಾಯುವ ಸಂಖ್ಯೆ ಈಗ ಕಡಿಮೆಯಾಗಿದೆ. ಆದರೆ ಇದಕ್ಕೆ ಅನುಗುಣವಾಗಿ ಹುಟ್ಟುವ ಸಂಖ್ಯೆಯು ಕಡಿಮೆಯಾಗಿಲ್ಲ. ಆದುದರಿಂದ ನಮ್ಮ ದೇಶದ ಜನಸಂಖ್ಯೆಯು ವರ್ಷಕ್ಕೆ 6 ಮಿಲಿಯದಂತೆ ಹೆಚ್ಚುತ್ತಾ ಇದೆ. ಪ್ರತಿ ವರ್ಷ ಸಾಧಾರಣ ಎರಡು ಮಿಲಿಯದಷ್ಟು ಜನರು ಕೂಲಿ ಕಾರರ ವರ್ಗದಲ್ಲಿ ಅಧಿಕವಾಗುತ್ತಾ ಇದ್ದಾರೆ. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಹೊಸ ಹೊಸ ಉದ್ಯೋಗಗಳನ್ನು ಸೃಷ್ಟಿಸಿದ್ದರೂ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿಲ್ಲ. ನಮ್ಮ ಶಾಲೆಗಳಲ್ಲಿ ಹೆಚ್ಚಿನ ಹುಡುಗಿಯರಿಗೆ ಗಭರ್ಧಾರಣೆಗೆ ಯೋಗ್ಯವಾದ 15–20 ವರ್ಷ ವಯಸ್ಸಿಗೆ ಪದವೀಧರರಾಗುವುದರಿಂದ ಜನನ ಸಂಖ್ಯೆಯು ಹೆಚ್ಚಾಗಲು ಕಾರಣವಾಗಿದೆ. ಮಕ್ಕಳ ಸಂಖ್ಯೆಯು ಅನುರವರಿಸಿದ್ದಷ್ಟದ ಅಧಿಕಾರಿಗಳ ಆಯೆಯ ವೇತನ ಹೊಂದಿಕೊಂಡಿದೆಯೆಂದು ಅನೇಕರು ಭಾವಿಸುತ್ತಾರೆ ಬಹಳ ಹತ್ತಿರದ ಅವಧಿಯಲ್ಲಾಗುವ ಅನಾರೋಗ್ಯದಿಂದ ಮತ್ತು ಯೋಗ್ಯ ಪೌಷಣೆಯಿಂದ ಕೂಡಿರದ ಜನಗಳೇ ತಾಯಿಯಿಂದ ಮತ್ತು ಮಕ್ಕಳ ಅನಾರೋಗ್ಯಕ್ಕೂ ಮರಣಕ್ಕೂ ಕಾರಣವಾಗಿದೆ.

ಯೋಜನಾ ಆಯೋಗದ ಶಿಫಾರಸುಗಳು:— ಪುರುಷರು ಮತ್ತು ಸ್ತ್ರೀಯರ ಶಸ್ತ್ರಕ್ರಿಯೆಯ ಅನುಕೂಲತೆಗಳನ್ನೂ ಜನನ ನಿಯಂತ್ರಣದ ಕುರಿತಾದ ಮಾಹಿತಿಗಳನ್ನೂ ಮತ್ತು ಸೇವೆಯನ್ನೂ ಪ್ರತಿ ಆಸ್ಪತ್ರೆಗಳಲ್ಲೂ ಹೆರಿಗೆಯ ಆಸ್ಪತ್ರೆಗಳಲ್ಲೂ ಪ್ರತಿ ರಾಜ್ಯಗಳ ಒದಗಿಸಿ ಕೂಡಬೇಕೆಂದು ಯೋಜನಾ ಆಯೋಗವು ಶಿಫಾರಸು ಮಾಡಿದೆ. ಜನಸಂಖ್ಯೆಯನ್ನು ನಿಯಂತ್ರಣದಲ್ಲಿಡುವುದು ಮತ್ತು ಹೆಚ್ಚಳವನ್ನು ತಡೆಯುವುದನ್ನೇ ತನ್ನ ರಾಷ್ಟ್ರೀಯ ಧೋರಣೆಯನ್ನಾಗಿ ಸ್ವೀಕರಿಸುವುದರಲ್ಲಿ ಭಾರತವು ಪ್ರಥಮ ದೇಶವಾಗಿದೆ.

ಕುಟುಂಬ ಯೋಜನೆಗಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 97 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿತ್ತು. 300 ಹಟ್ಟಣದ ಚಿಕಿತ್ಸಾಲಯಗಳನ್ನೂ 1800 ಸಣ್ಣಗಳ ಚಿಕಿತ್ಸಾಲಯಗಳನ್ನೂ ಸ್ಥಾಪಿಸಲು ಈ ಐದು ವರ್ಷಗಳಲ್ಲಿ ಉದ್ದೇಶಿಸಲಾಗಿತ್ತು. ಮೂರನೆಯ ಯೋಜನೆಯಲ್ಲಿ ಇದಕ್ಕೆಂತ ಎರಡು ಪಾಲಸ್ಟು ಹಣವನ್ನು ವಿನಿಯೋಗಿಸಲಾಗಿದೆ ಜನರು ಮುಖ್ಯವಾಗಿ ಹಳ್ಳಿಯ ಜನರು. ಈ ನೂತನ ಯೋಜನೆಯ ಲಾಭವನ್ನು ಪಡೆಯಲು ಮುಂದೆ ಬಂದಾರೆಂದು ಭಾವಿಸಲಾಗಿದೆ. ಮತ್ತು ಇನ್ನು ಜನಸಂಖ್ಯೆಯ ನಿಯಂತ್ರಣದಲ್ಲಿ ಮನಃಪೂರ್ವಕ ಸರಕಾರಕ್ಕೆ ಸಹಕಾರವನ್ನು ಕೊಡಬಹುದೆಂದು ನಂಬಲಾಗಿದೆ.

ಅಮೃತ ಬಿಂದು

ಕಾಲನ ತುಳಿತಕ್ಕೆ ಸಿಕ್ಕಿ ಹುಡಿಯಾದ ಧೂಳು, ವರ್ಷಕ್ಕೆ ಕಳುವಿತ್ತು ಹೊವಾಗಿ ಅರಳುತ್ತದೆ.

೦ ೦ ೦ ೦

ತೋರಿಸಿಕೊಳ್ಳುವದಕ್ಕಿಂಥಾ ಹೆಚ್ಚು ನಮ್ಮೊಳಿಗಿರಬೇಕು. ಮಾತಾಡುವದಕ್ಕಿಂಥಾ ಹೆಚ್ಚು ತಿಳಿದಿರಬೇಕು.

೦ ೦ ೦ ೦

ಆದಾಯಕ್ಕಿಂಥಾ ಹೆಚ್ಚು ಹೆಚ್ಚವಿರುವವನಾಗೂ ಶ್ರೀಮಂತನಲ್ಲ; ಹೆಚ್ಚಿನ್ಥಾ ಹೆಚ್ಚು ಆದಾಯ ವಿರುವನೂ ಬಡವನಲ್ಲ.

೦ ೦ ೦ ೦

ಚಿಕ್ಕ ತೂತಿನಿಂದಾಗಿ ದೊಡ್ಡ ಕಡಗ ಮುಳುಗುವುದು. ಚಿಕ್ಕ ಹೆಜ್ಜೆಗಳಿಂದಾಗಿ ದೊಡ್ಡ ಅಪಾಯವೂ ಕಾಗುವುದು.

೦ ೦ ೦ ೦

ಬೆಳೆದ ಮನುಷ್ಯನಿಗೆ ಜೈಲು ಕಟ್ಟುವದಕ್ಕಿಂಥಾ ಬೆಳೆಯದ ಮಗುವಿಗೆ ಶಾಲೆ ಕಟ್ಟುವದು ಜಾಣತನ

೦ ೦ ೦ ೦

ದೊರಗುಕಲ್ಲಿಗೆ ಶಿಲ್ಪಕಲೆ ಸಂಸ್ಕಾರ ಕೊಡುವಂತೆ ಒರಟು ಮನುಷ್ಯನಿಗೆ ವಿದ್ಯೆ ಸಂಸ್ಕಾರ ಕೊಡುತ್ತದೆ.

ಬಹು ಸಂಖ್ಯೆಯ ಲಾಯರುಗಳಿಗೆ ತಮ್ಮ ಫೀಸಿನ ಬಗ್ಗೆ ತಿಳಿದಿರುವಷ್ಟು ಕಾನೂನಿನ ಬಗ್ಗೆ ತಿಳಿದಿರುವದಿಲ್ಲ.

೦ ೦ ೦ ೦

ನನ್ನೆದು, ತನ್ನದೆಂದು ಹೊರಲಾರದ ಹೆಚ್ಚು ಹೊತ್ತುಕೊಂಡವನ ವೃದ್ಧಾಪ್ಯವೆ ಬಹುಭಾರವಾಗಿ ತೋರುತ್ತದೆ.

೦ ೦ ೦ ೦

ನೆರಳು ದುಬಾರಿ ವಸ್ತು ಆದರೆ ಅದನ್ನು ಹೊಡೆದೋಡಿಸುವದು ಸಾಧ್ಯವಿಲ್ಲ ಅಗದ ಕೆಲಸ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ ಎರಡು. ಉತ್ತಮ ಪ್ರತಿ. ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಬಯಾಯು ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಾಗಿ
0 =25 NP ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕ ರವಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಖೆಗಳು— ಮಂಗಳೂರಿನ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಂಕಣಿ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಸಿಟಿ ಇವರಲ್ಲಿಯೂ, ಕಾರ್ಕಳದಲ್ಲಿ ಮೈಸೂರ್ ಸ್ಟೋರ್ಸ್‌ನಲ್ಲಿಯೂ ದೊರೆಯುತ್ತವೆ.

ನೆದರ್‌ಲೇಂಡ್ಸ್‌ನಲ್ಲಿ
ಚಿತ್ರ ಕಲೆಗೆ ಅಪೂರ್ವ ಪ್ರೋತ್ಸಾಹ

ಒಂದು ದೇಶವು ತಾನು ಕಲೆ, ಸಂಗೀತ, ಸಾಹಿತ್ಯ ಮುಂತಾದವುಗಳಿಗೆ ಕೊಡುವ ಪ್ರೋತ್ಸಾಹದಿಂದ ಜಗದ್ವಿಖ್ಯಾತವಾಗುವುದು ಮಾತ್ರವೇ ಅಲ್ಲದೆ, ಉಳಿದ ದೇಶಗಳೊಂದಿಗೆ ಮಧುರ ಬಾಂಧವ್ಯವನ್ನು ಸಹಾ ಕಲ್ಪಿಸಿಕೊಳ್ಳುವುದು. ಇದನ್ನು ಅರಿತೇ ನೆದರ್‌ಲೇಂಡ್ಸಿನಲ್ಲಿ ಚಿತ್ರಕಲೆಗೆ ಬೇರೆಲ್ಲೂ ಕಾಣಸಿಗದ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

ಸಾಮಾನ್ಯ ಜನರಲ್ಲಿಯೂ ಚಿತ್ರ ಕಲೆಯ ಬಗ್ಗೆ ಆಸಕ್ತಿಯನ್ನು ಪ್ರಚೋದಿಸುವುದಕ್ಕಾಗಿಯೇ ನೆದರ್ ಲೇಂಡ್ಸಿನಲ್ಲಿ ಕೆಲವರ್ಷಗಳ ಹಿಂದೆಯೇ ದೇಶೀಯ ಕಲಾ ಭಂಡಾರವನ್ನು ಸ್ಥಾಪಿಸಲಾಯಿತು. ರೇಡಿಯೋ ಮತ್ತು ಟೆಲಿವಿಸನ್‌ಗಳ ಮುಖಾಂತರ ಈ ಸಂಸ್ಥೆಯು ಈಗ್ಗೆ ಆರು ವರ್ಷಗಳ ಹಿಂದೆ ಚಿತ್ರ ಕಲೆಯ ಬಗ್ಗೆ ಶಿಕ್ಷಣವನ್ನು ನೀಡಲಾರಂಭಿಸಿದಾಗಿನಿಂದ ಅತ್ಯಂತ ಜನಪ್ರಿಯವಾಗಿ, ಈಗ್ಗೆ ಇದರ ಸದಸ್ಯರ ಸಂಖ್ಯೆಯು ಒಂದು ಲಕ್ಷವನ್ನು ಮುಟ್ಟಿದೆ.

ನೆದರ್‌ಲೇಂಡ್ಸಿನ ಮ್ಯೂಸಿಯಮ್‌ಗಳಲ್ಲಿಯೂ, ಚಿತ್ರಕಲಾ ಸಂಸ್ಥೆಗಳಲ್ಲಿಯೂ ಪ್ರದರ್ಶಿತವಾಗುತ್ತಿರುವ ಅನೇಕ ಚಿತ್ರಗಳಲ್ಲಿ ಯಾವುದಾದರೊಂದರ ಬಗ್ಗೆ ಅಲ್ಲಿನ ಚಿತ್ರಕಲಾ ಪ್ರವೀಣರಲ್ಲೊಬ್ಬರು ನಿಡುವ ಭಾಷಣವನ್ನು ರೇಡಿಯೋ ಮತ್ತು ಟೆಲಿವಿಸನ್‌ಗಳ ಮೂಲಕ ಪ್ರಸಾರ ಮಾಡಲಾಗುವುದು ಸಾಧಾರಣವಾಗಿ ಪ್ರತಿಯೊಬ್ಬರೂ ತಮ್ಮ ಕೆಲಸಗಳನ್ನು ಮುಗಿಸಿಕೊಂಡು ಮನೆಗೆ ಹಿಂದಿರುಗಿ ರಾತ್ರಿಯ ಊಟ ಮುಗಿಸಿದ ನಂತರ ಆರಾಮದಿಂದ ಕುಳಿತು ಕೇಳಬಹುದಾದ ಈ ಕಾರ್ಯಕ್ರಮವನ್ನು ವಾರಕೊಮ್ಮೆ ಹತ್ತು ನಿಮಿಷಗಳ ಕಾಲ ಪ್ರಸಾರಮಾಡಲಾಗುವುದು. ಈ ಕಾರ್ಯಕ್ರಮಕ್ಕೆ ನೆದರ್‌ಲೇಂಡ್ಸಿನ ಐದು ಸ್ವತಂತ್ರ ಪ್ರಸಾರ ಸಂಸ್ಥೆಗಳೂ ಸಹಕಾರವನ್ನು ನೀಡುತ್ತಿವೆ.

ಸರ್ವರನ್ನೂ ಕಲಾ ಪ್ರೇಮಿಗಳನ್ನಾಗಿ ಮಾಡಬೇಕೆಂದು ಆರಂಭಿಸಲಾಗಿರುವ ಈ ಸಂಸ್ಥೆಗೆ ಸದಸ್ಯನು ನೀಡಬೇಕಾದ ವಾರ್ಷಿಕ ಚಂದಾ ೯ ಫ್ಲಾರಿಗಿಲ್ಡರುಗಳು, ಅಂದರೆ ರು ಮೂರು ಹೆಸ್ಸೆರಡು ರೂಪಾಯಿಗಳು.

ರೇಡಿಯೋ, ಟೆಲಿವಿಸನ್‌ಗಳ ಮೂಲಕ ನೀಡಲಾಗುವ ಶಿಕ್ಷಣವು ಸಾಲಿಭ್ಯವನ್ನು ಸದಸ್ಯೇತರರೂ ಪಡೆಯ ಬಹುದು. ಸದಸ್ಯರಾದವರಿಗೆ, ಶಿಕ್ಷಣ ಪೂರ್ತಿಯಲ್ಲದೆ ಬೇರೆ ಸಾಲಿಭ್ಯಗಳೂ ಉಂಟು. ಒಂದು ಅಂಗಳನಲ್ಲಿ ಯಾವ ಯಾವ ಚಿತ್ರಗಳ ಬಗ್ಗೆ ವಿವರಣೆಯನ್ನು ನೀಡಲಾಗುವುದೆಂಬ, ಆ ಚಿತ್ರಗಳ ೬x೯ ವಿಸ್ತಾರದ ವರ್ಣ ಪ್ರತಿಗಳನ್ನು ಮುಂಚಿತವಾಗಿಯೇ ಸದಸ್ಯರಿಗೆ ಕಳುಹಿಸಿಕೊಡಲಾಗುವುದು. ಆ ಪ್ರತಿಗಳನ್ನು ನೋಡಿ, ಹಾಕಲು ಇಚ್ಛಿಸುವವರಿಗಾಗಿ, ಅಗ್ಗದ ಬೆಲೆಯಲ್ಲಿ ಆಕರ್ಷಣೆಯ ಫ್ರೇಮ್‌ಗಳನ್ನು ಸಹ ಒದಗಿಸಲಾಗುವುದು. ಇದರಿಂದ ವಿದ್ಯಾರ್ಥಿಯು ಭಾಷಣವನ್ನು ಕೇಳುತ್ತಿರುವಾಗ ತನ್ನ ಕಣ್ಣೆದುರಿನಲ್ಲಿಯೇ ಚಿತ್ರವನ್ನಿಟ್ಟುಕೊಂಡಿರಬಹುದು.

ಚಿತ್ರಗಳನ್ನು ಮುಂಗಡವಾಗಿಯೇ ಕಳುಹಿಸುವುದೇಕೆಂದರೆ, ಹಿಂದಿನ ತಿಂಗಳಿನಲ್ಲಿ ಮಾಡಲಾದ ಭಾಷಣಗಳ ಮುದ್ರಿತ ಪ್ರತಿಗಳನ್ನೂ ಕಳುಹಿಸಲಾಗುವುದು, ಇವುಗಳನ್ನು ಕೆದಕಿದಂತೆ ಕ್ರಮಬದ್ಧವಾಗಿ ಜೋಡಿಸಿಟ್ಟು ಕೊಳ್ಳಲಿಕ್ಕೆ ಅನುಕೂಲವಾಗುವಂತೆ ರಟ್ಟಿನಲ್ಲಿ ಮಾಡಿದ ಸುಂದರವಾದ ಸೈಲ್‌ಗಳನ್ನೂ ಉಚಿತವಾಗಿ ಕಳುಹಿಸಲಾಗುವುದು. ಹೀಗಾಗಿ, ಸದಸ್ಯನು ಸರ್ವವೊಂದಲ್ಲಿ ಸಾವಿರ ಕೊಡವ ಚಂದಾ ಹಣಕ್ಕೆ ಬದಲಾಗಿ ಉತ್ತಮವಾದ ನಲವತ್ತೆಂಟು ಚಿತ್ರಗಳ ಪ್ರತಿಗಳನ್ನೂ, ಅವುಗಳ ಬಗ್ಗೆ ನೀಡಲಾದ ಉಪನ್ಯಾಸಗಳನ್ನೂ, ಪಡೆಯುತ್ತಾನೆ. ಚಿತ್ರಕಲೆಗೆ, ಈ ಸಂಗ್ರಹವು 'ಎನ್ಸೈಕ್ಲೋಪಿಡಿಯಾ'ಎಂತೆ ಇರುವುದು.

ಆರಂಭದಲ್ಲಿ, ಇದರ ಸದಸ್ಯತ್ವಕ್ಕೆ ಬೇಕಾದಂತೆ ಪ್ರಚಾರ ನಡೆಸಲಾಯಿತು. ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಐದು ಪ್ರಸಾರ ಸಂಸ್ಥೆಗಳೂ ಶ್ರಮಿಸುವುದಕ್ಕೆ ನೆದರ್ ಲೇಂಡ್ಸಿನ ಸಿಂಹಾಸನದ ಉತ್ತರಾಧಿಕಾರಿಣಿಯೂ ರಾಜ ಕುಮಾರಿ ಬೀಟ್ರಿಕ್ಸ್‌ರವರೇ ಖುದ್ದು ನಿಂತು ಈ ಬಗ್ಗೆ ಪ್ರಚಾರ ಮಾಡಿದರು.

ಈ ಶಿಕ್ಷಣ ಕಾರ್ಯಕ್ರಮವನ್ನು ಆರಂಭಿಸಿದ್ದು ೧೯೫೨ರ ಜನವರಿ ಒಂದನೆಯ ತಾರೀಕಿನಂದು. ಪ್ರಚಾರವು ಭರಾಟೆಯಿಂದ ನಡೆದುದರಿಂದ, ಈ ತಾರೀಕಿಗೆ ಮುನ್ನವೇ ೫೦೦೦ ಸದಸ್ಯರು ಸೇರಿದ್ದಾಗಿತ್ತು. ಒಂದು ವರ್ಷವಾಗುವುದರೊಳಗೆ ೭೮೦೦೦ನನ್ನು ಮುಟ್ಟಿದ ಸದಸ್ಯರ ಸಂಖ್ಯೆಯು ಈಗ ಒಂದು ಲಕ್ಷವನ್ನು ಮುಟ್ಟಿದೆ.

ಮೂಲ ಧನ ಖರ್ಚಿದೆಯೇ, ಈ ಸಂಸ್ಥೆಯನ್ನು ಆರಂಭಿಸಲಾಯಿತು. ಸರಕಾರ ಹಾಗೂ ಕಲಾಸಂಸ್ಥೆಗಳು ಬೆಂಬಲ ನೀಡಿದವು. ಬಗ್ಗೆ ಆಶ್ವಾಸನೆಯನ್ನು ನೀಡಿದ್ದವು. ನೆದರ್ ಲೇಂಡ್ಸಿನ ವಿದ್ಯಾಲಯ, ಕಲಾ, ವೈಜ್ಞಾನಿಕ ವಿಭಾಗದ ಮಂತ್ರಿ ಮಂಡಲವು ಕಲೆಗಾಗಿಯೇ ವಿಶೇಷವಾಗಿರುವ ರಾಜ ಕುಮಾರ ಬರ್ನಾರ್ಡರ ನಿಧಿಯಿಂದ ತಾತ್ಕಾಲಿಕ ಸಹಾಯ ಧನವನ್ನು ನೀಡಿತ್ತು. ಭಂಡಾರವನ್ನು ತೆರೆದ ಒಂದು ವರ್ಷದೊಳಗಾಗಿ ಅದರ ಉತ್ಪತ್ತಿಯಿಂದ ಇದೆಲ್ಲವನ್ನೂ ತೀರಿಸಲಾಯಿತು.

ಈ ಸಂಸ್ಥೆಯನ್ನು ಲಾಭದೃಷ್ಟಿ ನಡೆಸಲಾಗುತ್ತಿಲ್ಲ ಜನರು ತೋರಿದ ಆದರದಿಂದಲೇ ಅದು ಪ್ರೌಢಿಯಿದೆ. ಹಿಂದೆ, ತನಗಿದ್ದ ಸಾಲವನ್ನೆಲ್ಲಾ ತೀರಿಸಿ ಉಳಿದ ಹಣೋಪಾಧಿ ಚಿತ್ರಕಲಾ ಕೃತಿಗಳನ್ನು ಕೊಂಡು ಕೊಂಡಿದೆ. ಈ ಕೃತಿಗಳನ್ನು ರಚಿಸಿದ ಪಾಶ್ಚಿಮಾತ್ಯ ವಂಶಿ ಜೀವನಕ್ರಮಗಳಿಂದಾಗಿ, ಇದರಿಂದಾಗಿ ಇವನ್ನೂ ಉತ್ತಮವಾದ ಕಲಾಕೃತಿಗಳನ್ನು ರಚಿಸುವ ಹಾಬಲವನ್ನು ಜಿವಾಲ್ಲಿ ಪ್ರಚೋದಿಸಿದಂತಾಗಿ ಜನರೂ ತಮ್ಮ ನಡೆ-ನುಡಿಗಳ್ಲೋ ಇವನ ಕಲಾವಿದನ್ನ ಆರಿಯುವಂತಾಗಿದೆ.

ನೆದರ್‌ಲೇಂಡ್ಸಿನ ಚಿತ್ರಕಲಾ ಪ್ರದರ್ಶನದ ಗ್ಯಾಲರಿಗಳಿಗೆ ಉಚಿತ ಪ್ರದರ್ಶನವಿಲ್ಲ. ಆದರೆ, ಪರರಭೆ ಹಾಗೂ ಸಲಹಾರಗಳ ಸಹಕಾರದಿಂದ, ದೇಶೀಯ ಕಲಾ ಭಂಡಾರದ ಸದಸ್ಯರಿಲ್ಲಿಂಗೂ ಈ ಗ್ಯಾಲರಿಗಳಿಗೆ ಉಚಿತ ಪ್ರವೇಶವುಂಟು. ಹೀಗಿರುವುದರಿಂದ, ಆಸಕ್ತರು ಮತ್ತೆ ಮತ್ತೆ ನೋಡಿ ಬರುವ ಅಭ್ಯಾಸವನ್ನು ಬೆಳೆಸಿಕೊಳ್ಳುತ್ತಾರೆ.

ಈ ಸಂಸ್ಥೆಯ ಕೇವಲ ಖಾಸಗೀ ವ್ಯಕ್ತಿಗಳು ಮಾತ್ರ, ಸದಸ್ಯರಲ್ಲ. ಆಸ್ಪತ್ರೆ, ಸಾನಟೋರಿಯಂ, ಸೈನಿಕ ಕಾರ್ಯಾಲಯಗಳು, ಆಫೀಸುಗಳಿಗೂ ಸಹ ಇದರ ಸದಸ್ಯತ್ವವನ್ನು ಪಡೆದಿವೆ. ಪ್ರತಿಯೊಂದು ಸೋಮವಾರ ಸಾಯಂಕಾಲ ಹತ್ತು ನಿಮಿಷಗಳ ಕಾಲ ಪ್ರಸಾರಮಾಡುವ ಕಲೆಯ ಪರಿಚಯದ ಭಾಷಣವನ್ನು ಹತ್ತಿರು ಸಾವಿರ ಮಂದಿ ಆತ್ಯಕ್ತಾಸಹದಿಂದ ಕೇಳಿ-ತ್ತಿರುತ್ತಾರೆ. ವಯಸ್ಸಾದವರಿಗೆ, ಅಂಗವಿಕಲರಿಗೆ, ದೂರ ಪ್ರದೇಶಗಳಲ್ಲಿರುವವರಿಗೆ, ಅಧುನಾ ವಿನಾದರೊಂದು ಕಾರಣದಿಂದ ಚಿತ್ರಕಲಾ ಸಂಸ್ಥೆಗಳನ್ನು ಸಂದರ್ಶಿಸಲಾಗುವುದಿಲ್ಲದವರಿಗೆ ಅಲ್ಲಿಂಗೂ ಈ ವಿಸ್ತಾರವು ಒಂದು ವರ ಪ್ರಸಾದವಂತಿದೆ.

ದೇಶೀಯ ಕಲಾ ಭಂಡಾರದ ಕಾರ್ಯಕಲಾಪಗಳನ್ನು ವಿಸ್ತರಿಸಿ, ಪಡೆಸಿಕೊಂಡು ಹೋಗಲು ಒಂದು ಸಮಿತಿಯು ರಚನೆಯಾಗಿದೆ. ದೇಶೀ ಆಧುನಾ ವಿದೇಶೀ ಉತ್ತಮ ಚಿತ್ರಗಳು ಉತ್ತನು ಭಾಷಣ ಕಾರರು, ಇವನ್ನೆಲ್ಲಾ ಹುಡುಕುವ ಕೆಲಸವು ಈ ಸಮಿತಿಗೆ ಸೇರಿದ್ದು, ಚಿತ್ರಕಾರರಿಗೆ ಭಾಷಣಕಾರರಿಗೆ ಜನಪ್ರಿಯತೆಯನ್ನು ಹೆಚ್ಚಿಸಿ ಆಕರ್ಷಿಸುವ ತೆರದಲ್ಲಿ ಭಾಷಣದ ಬಗ್ಗೆ ಪ್ರಸಾರ ಸಂಸ್ಥೆಗಳು ಸಲಹೆಯನ್ನು ನೀಡುತ್ತಿವೆ.

ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿರುವ ಕಾರಣ ನೆದರ್‌ಲೇಂಡ್ಸಿನ ಜನರು ಚಿತ್ರಾಸಕ್ತರಾಗುತ್ತಿರುವುದರಲ್ಲಿ ಆಶ್ಚರ್ಯವೇನಿದೆ, ಆಲ್ಲಿನ ಚಿತ್ರ ಕಲೆಯಿಂದ ವಿಶೇಷವಾಗಿ ಪ್ರಭಾವಿತವಾಗಿದೆ.

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲಿಲ್ಲ
ನಿಕ್ಕಿತನ. ಗಿರುವ
ಡೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಸಂಖ್ಯಾ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ ಕ

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. 14 CT ಚಿನ್ನದ ಆಭರಣಗಳಲ್ಲಿ ೫೮½% ರುದ್ಧ ಪುತ್ಥಳಿ ಚಿನ್ನ ಇರುತ್ತದೆ. ಟೀಡಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಚಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ ಮಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ವೈಸನ್ನು ನಿಕ್ಕಿರುತ್ತದೆ

ಪೂರ್ಣ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆದು ಪೂರ್ತಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣ ಜ್ಯುವೆಲರಿ ಮಾರ್ಟ್

ಕಿಂಕಣೇಟಿ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: ೬೮

ಇಲ್ಲಿ ಚಿತ್ರಕಲೆಯ ಬಗ್ಗೆ ಪ್ರಸಾರವಾಗುವ ಭಾಷಣಗಳು ಅತ್ಯಂತ ಜನಪ್ರಿಯವಾಗಿವೆ. ಇಲ್ಲಿನ ಚಿತ್ರಕಲಾ ಸಂಸ್ಥೆಗಳಲ್ಲಿ ಪ್ರದರ್ಶಿತವಾಗುವ ಚಿತ್ರಗಳ ಬಗ್ಗೆ ಅಲ್ಲಿನ ಚಿತ್ರಕಲಾ ಪ್ರವೀಣರಲ್ಲೊಬ್ಬರು ನಿಡುವ ಭಾಷಣವನ್ನು ರೇಡಿಯೋ ಮತ್ತು ಟೆಲಿವಿಸನ್‌ಗಳ ಮೂಲಕ ಪ್ರಸಾರ ಮಾಡಲಾಗುವುದು ಸಾಧಾರಣವಾಗಿ ಪ್ರತಿಯೊಬ್ಬರೂ ತಮ್ಮ ಕೆಲಸಗಳನ್ನು ಮುಗಿಸಿಕೊಂಡು ಮನೆಗೆ ಹಿಂದಿರುಗಿ ರಾತ್ರಿಯ ಊಟ ಮುಗಿಸಿದ ನಂತರ ಆರಾಮದಿಂದ ಕುಳಿತು ಕೇಳಬಹುದಾದ ಈ ಕಾರ್ಯಕ್ರಮವನ್ನು ವಾರಕೊಮ್ಮೆ ಹತ್ತು ನಿಮಿಷಗಳ ಕಾಲ ಪ್ರಸಾರಮಾಡುವ ಕಲೆಯ ಪರಿಚಯದ ಭಾಷಣವನ್ನು ಹತ್ತಿರು ಸಾವಿರ ಮಂದಿ ಆತ್ಯಕ್ತಾಸಹದಿಂದ ಕೇಳಿ-ತ್ತಿರುತ್ತಾರೆ. ವಯಸ್ಸಾದವರಿಗೆ, ಅಂಗವಿಕಲರಿಗೆ, ದೂರ ಪ್ರದೇಶಗಳಲ್ಲಿರುವವರಿಗೆ, ಅಧುನಾ ವಿನಾದರೊಂದು ಕಾರಣದಿಂದ ಚಿತ್ರಕಲಾ ಸಂಸ್ಥೆಗಳನ್ನು ಸಂದರ್ಶಿಸಲಾಗುವುದಿಲ್ಲದವರಿಗೆ ಅಲ್ಲಿಂಗೂ ಈ ವಿಸ್ತಾರವು ಒಂದು ವರ ಪ್ರಸಾದವಂತಿದೆ.

ದೇಶೀಯ ಕಲಾ ಭಂಡಾರದ ಕಾರ್ಯಕಲಾಪಗಳನ್ನು ವಿಸ್ತರಿಸಿ, ಪಡೆಸಿಕೊಂಡು ಹೋಗಲು ಒಂದು ಸಮಿತಿಯು ರಚನೆಯಾಗಿದೆ. ದೇಶೀ ಆಧುನಾ ವಿದೇಶೀ ಉತ್ತಮ ಚಿತ್ರಗಳು ಉತ್ತನು ಭಾಷಣ ಕಾರರು, ಇವನ್ನೆಲ್ಲಾ ಹುಡುಕುವ ಕೆಲಸವು ಈ ಸಮಿತಿಗೆ ಸೇರಿದ್ದು, ಚಿತ್ರಕಾರರಿಗೆ ಭಾಷಣಕಾರರಿಗೆ ಜನಪ್ರಿಯತೆಯನ್ನು ಹೆಚ್ಚಿಸಿ ಆಕರ್ಷಿಸುವ ತೆರದಲ್ಲಿ ಭಾಷಣದ ಬಗ್ಗೆ ಪ್ರಸಾರ ಸಂಸ್ಥೆಗಳು ಸಲಹೆಯನ್ನು ನೀಡುತ್ತಿವೆ.

ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿರುವ ಕಾರಣ ನೆದರ್‌ಲೇಂಡ್ಸಿನ ಜನರು ಚಿತ್ರಾಸಕ್ತರಾಗುತ್ತಿರುವುದರಲ್ಲಿ ಆಶ್ಚರ್ಯವೇನಿದೆ, ಆಲ್ಲಿನ ಚಿತ್ರ ಕಲೆಯಿಂದ ವಿಶೇಷವಾಗಿ ಪ್ರಭಾವಿತವಾಗಿದೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ವಿಠಾಳ್, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಸಲವಾರು ಸಾಮಾನ್ಯ ರೋಗಗಳ ಪಟ್ಟಿ, ಕಾರಣ ಮತ್ತು ನಿವಾರಣೋಪಾಯ ಸಾಚಿತ್ರವಾಗಿ ವಿವರಣೆ
ಭೌತಿಕ ದರ್ಶನ
ಒಡಿಕ್ಕಿಲ ಕೃಷ್ಣ ಭಟ್ಟ ಎಲ್.ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಮಸ್ತಕ ಭಂಡಾರ, ಉಡುಪಿ

REGD. No. B. G. 176
LICENCE No. 31
Licensed to Post without Prepayment

ಸೋತು ಬಂದ ಸೇನಾಪತಿ

(ಎನೇ ಪುಟದಿಂದ)

ದೂರದಲ್ಲಿ ಧಾಂ...ಧಾಂ ಘೋರ ಶಬ್ದಗಳೊಡನೆ ಗುಂಡುಗಳೆಂದು ವೇಳಗಿದುವು. ಬೆಚ್ಚಿ ಶಕ್ತಿಸಿಂಹನು ನೋಡಿದನು—ಇಬ್ಬರೂ ಮುಗಲ ಸೈನಿಕರು ಮಹಾರಾಣರ ಬೆನ್ನಟ್ಟಿದ್ದಾರೆ. ಮಹಾರಾಣರ ಕುದುರೆಯು ಆಯಾಸದಿಂದ ಆ ಕಡೆ ಈ ಕಡೆ ಒಲೆದು ಬೀಳುವುದರಲ್ಲಿದೆ. ಸಮಯ ಇನ್ನೂ ಇದೆ ಶಕ್ತಿಸಿಂಹನ ಹೃದಯದಲ್ಲಿ ಭ್ರಾತೃ ಪ್ರೇಮವು ಕಪ್ಪೆಯೊಡೆಯಿತು.

ಸ್ವರದ ಗುಮ್ಮಗೊಂದು ಗುಡುಗಿತು — "ನಿಷ್ಠೆ" ಮರುಗಳಿಗೆ ಶಕ್ತಿಸಿಂಹನ ಕೋವಿಯೂ ಕೆಲಸ ಮಾಡಿತು. ಕಣ್ಣೆವೆ ಮುಚ್ಚುವುದರಲ್ಲಿ ಮುಗಲ ಸೈನಿಕರ ಶವಗಳು ಭೂಮಿಯಲ್ಲಿದ್ದುವು. ಮಹಾರಾಣರು ಕ್ರೋಧದಿಂದ ಕಣ್ಣೆತ್ತಿ ನೋಡಿದರು. ನೋಡಿದ ನೋಟ ಪ್ರಶ್ನಿಸುವಂತಿತ್ತು — "ನನ್ನ ಪ್ರಾಣ ಪಡೆದೇ ನಿನಗೆ ತೃಪ್ತಿಯಾಗುವುದೆ? ಇಷ್ಟೊಂದು ರಜಪೂತರ ರಕ್ತದಿಂದಲೂ ನಿನ್ನ ಹಿಂಸೆ ತೃಪ್ತಿಯಾಗಲಿಲ್ಲೇನು!"

ಆದರೆ....ಇದೇನಿದು? ಶಕ್ತಿಸಿಂಹನು ಮಹಾರಾಣರ ಎದುರಲ್ಲಿ ನತ ಮಸ್ತಕನಾಗಿ ನಿಂತಿದ್ದಾನೆ. ಅವನು ಎಳೆಗೂಸಿನಂತೆ ಬಿಕ್ಕಿ-ಬಿಕ್ಕಿ ಅಳುತಿದ್ದಾನೆ. ಶಕ್ತಿಸಿಂಹ ದೇಳಿದನ — "ಪ್ರಭು! ಈ ಸೇವಕನು ಅಜ್ಞಾನದಿಂದ ಮಹಾಪರಾಧವನ್ನೆಸಗಿರುವನು. ಆಜ್ಞೆಯಾದರೆ ಈ ತಲೆಯೊಪ್ಪಿಸಿ ನಿಮ್ಮ ಪಾದ ತೀರ್ಥವನ್ನು ಸ್ವೀಕರಿಸಿ ಮಾಡಿದ ಘೋರ ಪಾಪ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವನು!"

ರಾಣರು ತಮ್ಮೆರಡೂ ಕೈಯನ್ನು ಮುಂದಕ್ಕೆ ಪಸರಿಸಿದರು ಇಬ್ಬರ ಹೃದಯವೂ ಬಿಸಿಯಪ್ಪುಗೆಯಿಂದ ಒಂದಾಯ್ತು. ಇಬ್ಬರ ಕಣ್ಣಾಗಳೂ ಸ್ನೇಹ ಮಳೆಯನ್ನು ಸುರಿಸಿದವು. ಇಬ್ಬರ ಹೃದಯವೂ ಗದ್ಗದಿತವಾಗಿತ್ತು ಈ ಶುಭ ಮುಹೂರ್ತಕ್ಕೆ ೀಕಾಡು ನರಗಳು ಪುಷ್ಪ ಮಳೆಗರೆದವು. ನದಿಯ ಕಲ-ಕಲ ನಿನಾದವು ಪಂದಸೆಯುನ್ನಿಸಿದುವು

ಪ್ರತಾಪರು ಆಶ್ರುಕಣ್ಣಿನಿಂದಲೇ ನೋಡಿದರು--ಅವರ ಚಿರ ಸಹಚರ ಚೇತನವು ಮರಣದ ಕೊನೆಯ ಮೆಟ್ಟಿಲನ್ನೇರುತ್ತಿದೆ. ಎದುರಲ್ಲೇ ರಕ್ತಸಿಂಹನ ಕುದುರೆ ನಿಂತಿದೆ. ಶಕ್ತಿಸಿಂಹ ಹೇಳಿದನು — "ಅಣ್ಣಾ, ನೀವಿನ್ನು ವಿಳಂಬ ಮಾಡಬೇಡಿ; ಕುದುರೆ ಸಿದ್ಧವಿದೆ." ರಾಣರು ಶಕ್ತಿಸಿಂಹನ ಕುದುರೆಯನ್ನೇರಿ ಆ ದುರ್ಗಮ ಮಾರ್ಗದಲ್ಲಿ ಕಣ್ಮರೆಯಾದರು.

೪

ಶ್ರಾವಣ ಮಾಸವಾಗಿತ್ತು. ದಿನವಿಡಿಯ ಭಯಾನಕ ಯುದ್ಧದ ನಂತರ ರಾತ್ರಿಯು ನಿಶ್ಶಬ್ದ 'ನೀರವವಾಗಿತ್ತು. ಶಿಬಿರಗಳಿಂದೇಳುವ ಮಹಿಳೆಯರ ಶೋಕ ಧ್ವನಿಯು ಹೃದಯವನ್ನು ನಡುಗಿಸುತ್ತಿತ್ತು.

ಸಾವಿರಾರು ಸುಮಂಗಲಿಯರ ಭಾಗ್ಯ ತಲೆಕಳು ಉಳಿಸಿಹೋಗಿತ್ತು. ಅವರಿಗೆ ಧೈರ್ಯ ಹೇಳುವವರೂ ಇದ್ದಿಲ್ಲ. ಇರುವುದಾದರೂ ಏನು? ಬರೀ ಹಾ ಹಾಕಾರ ಚೀತ್ಕಾರ, ಕಣ್ಣಗಳ ಅನಂತ ಪಾರಾವಾರತೆ

ಶಕ್ತಿಸಿಂಹನು ಇನ್ನೂ ತನ್ನ ಶಿಬಿರಕ್ಕೆ ತಿರುಗಿಬಂದಿಲ್ಲ. ಅವನ ಪತ್ನಿ ಸಹ ಅವನ ನಿರೀಕ್ಷೆಯಲ್ಲಿ ವಿಲೀಲಳಾಗಿದ್ದಳು. ಅವಳ ಜೀವನದ ಆಸೆ ನಿರಾಸೆಯು ಕ್ಷಣ-ಕ್ಷಣಕ್ಕೂ ಎದ್ದುಬೀಳುತ್ತಿತ್ತು.

ಕಗ್ಗತ್ತಲೆಯು ಎಲ್ಲೆಡೆಗೂ ಪಸರಿಸಿತ್ತು ಕಪ್ಪು ನೋಡಗಳು ಆಕಾಶ ತುಂಬಾ ಹರಡಿಕೊಂಡಿದ್ದವು. ಒಮ್ಮಿಂದೊಮ್ಮೆಗೇ ಶಕ್ತಿಸಿಂಹನ. ಶಿಬಿರದೊಳಗೆ ಪ್ರವೇಶಿಸಿದನು. ಹೆಂಡತಿ ಕುತೂಹಲದಿಂದ ನೋಡಿದಳು. ಅವನಂಗವೆಲ್ಲಾ ರಕ್ತದಿಂದ ತೊಯ್ದಿತ್ತು.

"ಪ್ರಿಯೆ!"

"ಪ್ರಭೂ!"

"ನಿನ್ನಿಚ್ಛೆಯು ಪೂರ್ಣವಾಯ್ತು. ಪ್ರತಾಪನ ಎದುರಲ್ಲಿ ನೋತುಬಂದಿರುವೆ ನಾನು"

—ಅನು: "ಗಿರಿಬಾಲ", ಮುಂಬಯಿ.

ತೆರಿಗೆಗಳು ಎಷ್ಟಾದರೂ ಬರಲಿ, ಬರಲಿ!

(೪ನೇ ಪುಟದಿಂದ)

ಡವರು. ಪ್ರತ್ಯಕ್ಷ ವಸೂಲಾಗದೆ ಗಂಟು ಕಟ್ಟಿಡಲಾದ ಕೋಟಗಟ್ಟಲೆ ದೊಡ್ಡವರ ಹಣಕ್ಕೆ ಏನೂ ಭಯವಿಲ್ಲ. ಇಂಥಲ್ಲ ನಾಳೆಯಾದರೂ ಗಟ್ಟಿಗಂಟಹುದು.

ಇನ್ನು ತೀರಬಡವರಿದ್ದಾರೆ ನೋಡಿ,ಕೂಲಿ ನಾಲಿ ಮಾಡುವವರೂ, ಸಣ್ಣ ಸಣ್ಣ ಉದ್ಯೋಗದಲ್ಲಿ ಅರ್ಧ ತಿಂಗಳಿಗೆ ಸಂಬಳವನ್ನೂ ಉಳಿದರ್ಧ ತಿಂಗಳಿಗೆ ಸಾಲವನ್ನೂ ಮಾಡಿಕೊಂಡು ಧೈರ್ಯದಿಂದ ದಿನ ದೂಡುವವರೂ, ಪತ್ರಿಕೆಗಳಿಗೆ ಲೇಖನ ದಾನ ಮಾಡುವ ಬರಿಹಗಾರರೂ ಈ ದೇಶಕ್ಕೆ ಅಂಟಿಕೊಂಡಿರುವ ಪ್ರಜೆಗಳುತಾನೆ?

ಇವರಿಲ್ಲರ ಸಂಪೂರ್ಣ ಸಹಕಾರವೂ ದೇಶ ಸಂರಕ್ಷಣೆಗೆ ದೊರೆಯುವ ಬಗೆ ಮೂಡಬೇಕಾದ್ದು ನ್ಯಾಯವಲ್ಲವೆ? ಇಲ್ಲದಿದ್ದರೆ ಇಂಥವರ ಚಿಲ್ಲರೆ ಪಲ್ಲರೆ ಶಕ್ತಿಗಳು ಸುಮ್ಮನೆ ಗಾಳಿಯಲ್ಲಿ ಹಾರಿಹೋಗದೆ!

ಅಸಲು, ಈ ಬಡವರು ಪಾಪ, ಯಾವ ಕಾಯಿದೆ ಕಾನೂನುಗಳಿಗೂ ತಪ್ಪಿಸಿಕೊಳ್ಳುವವರಲ್ಲ; ಕಾಯಿದೆ ಕಾನೂನುಗಳೇ ಹತ್ತಿರ ಬಾರದಷ್ಟು ಹಗುರ ಜನಗಳವರು ಅದರಿ ಅವರ ರಕ್ತ ಮಾತ್ರ ಮಾತೃ ದೇಶಕ್ಕೆ ಬಹಳ ಸಾರಭೂತವಾದದ್ದಂತೆ!

ಅದಕ್ಕಾಗಿಯೇ ಬಂದದ್ದು ಹಲವಾರು ತೆರಿಗೆಗಳು. ಚಿಮಿಣಿಕ್ಕೆಣ್ಣೆ ತೆರಿಗೆ, ಕಾರ್ಡ್, ಬುಕ್‌ಪೋಸ್ಟ್‌ಗಳ ಏರಿಕೆ ಮುಂತಾದ ಚಿಲ್ರೇ ಪಲ್ಲರೇಗಳಿಂದ ಎಲ್ಲ ಬಡವರ ಸಾರವೂ ದೇಶಕ್ಕೆ ಬಿದ್ದ ಡಾಗಾಗಿ ಎಲ್ಲ ಪ್ರಜೆಗಳೂ ಧನ್ಯರಾಗುವಂತಾಯಿತು. ಕಡಾಯಿ ಉಳಿತಾಯ ಯೋಜನೆಗಳಿಂದ ಸಣ್ಣ ದೊಡ್ಡ ಸಾವಾನ್ಯ ಎಲ್ಲಾ ಜಾತಿಯ ಬಡವರೂ ದೇಶ ಸೇವೆ ಮಾಡಿ ಪುಣ್ಯಭಾಜನರಾಗುವಂತಾಯಿತು.

ಶುರೂ ಬಗ್ಗಿದವ ಬಶವ; ಬಗ್ಗಲು ಬಡವನೇ ತಕ್ಕವ; ಬಗ್ಗುವುದೇ ಬಡವನಿಗೆ ಕರ್ತವ್ಯ ಕೂಡಾ; ಬಗ್ಗಿ ಬಗ್ಗಿ ಅಭ್ಯಾಸವಾದವರಿಗೆ ಇನ್ನಷ್ಟು ಹೆಚ್ಚಿಗೆ ಬಗ್ಗುವುದೊಂದು ಭಾರ ಕಷ್ಟವೆ? ಅಂತೆಯೇ ಈ ತೆರಿಗೆಗಳ ಧಾಳಿಯನ್ನು ದೂರುವವರಿಗೆ ಈ ಳ ನೋಟವಿಲ್ಲ.

ದೇಶವನ್ನೇ ಅಡಿಮೇಲು ಮಾಡಿಸಿದ ಹಾಗೆ ಸುವರ್ಣ ಶಾಸನ ಬಂತಲ್ಲ! ಓಹೊ! ಎಂದು ಎಲ್ಲರೂ ಒಂದೇ ಗಲಾಟೆ ಎಬ್ಬಿಸಿಬಿಟ್ಟರು. ಏನಾಯಿತು ಮಹಾ? ಕತ್ತಲೆ ಕವಿದೇ ಹೋಯಿತೆ? ಏನೂ ಇಲ್ಲ ಅಲ್ಲಿ ಇಲ್ಲಿ ಕೆಲ ಮಂದಿ ಧೈರ್ಯಶಾಲಿಗಳಾದ ಅಕ್ಕಸಾಲಿಗರೂ, ಚಿನಿವಾರರೂ ಚಿಕ್ಕ ಹಕ್ಕ ಮಾಡಿಕೊಂಡು, ಅವರವರ ದಾರಿಯನ್ನು ಅವರವರೇ ನೋಡಿಕೊಳ್ಳಿ ಬೇಕೆಂಬುದಕ್ಕೆ ಆದರ್ಶ ಪಂಕ್ತಿ ಹಾಕಿ ಕೊಟ್ಟರು. ಅಲ್ಲವೇ ಮತ್ತೆ, ಕೆಲವಿಲ್ಲದ ಅಕ್ಕಸಾಲಿಗರಿಗೆ ಸರಕಾರವೇ ಕೆಲಸ ಕೊಡ ಬೇಕು. ಪರಿಯಾರ ಕೊಡಬೇಕು ಅನ್ನ ಹಾಳ ಬೇಕು ಅಂತ ಸರಕಾರಕ್ಕೇ ಪೊರೆ ಹೋಗುವುದು ಎಂಥ ಹೇಡಿತನ! ಅಕ್ಕ ಹಕ್ಕನಾದರೂ ಮಾಡಿ ಅವರವರ ದಾರಿ ಅವರವರೇ ನೋಡಿಕೊಳ್ಳುವುದಲ್ಲವೇ ನಿಜವಾದ ಧೀರ ಕರ್ತವ್ಯ!

ಅದೂ ಸಂತಾನ ನಿರೋಧ ಕಾಯಿದೆಯಾಗುವಷ್ಟು ಪ್ರಜಾ ಬಾಹುಲ್ಯವಿರುವ ದೇಶದಲ್ಲಿ ಆತ್ಮಹತ್ಯೆಗಳು ನ್ಯಾಯವೂ ಸ್ವಾಗತಾರ್ಹವೂ ದೇಶಭಕ್ತಿ ದ್ಯೋತಕವಾದ ತ್ಯಾಗವೂ ಆದೀತಲ್ಲವೆ?

ತೆರಿಗೆಗಳನ್ನು ದೂರುವವರೆ ನಾಲಿಗೆಗೆ ಎಲುವಿಲ್ಲ, ಬಲವಿಲ್ಲ ಮಾತೃ ದೇಶದ ರಕ್ಷಣೆಗೆ ಸರ್ವವೂ ಸಮರ್ಪಣೆಯಾಗಲೇ ಬೇಕು. ಎರಡುಕಾಲಿನ ನರ ಪ್ರಾಣಿಗಳಿಂದ ಮಾತ್ರವಲ್ಲ,ನಾಲ್ಕು ಕಾಲಿನ ಪ್ರಾಣಿಗಳೂ, ಹುಳು ಹುಪ್ಪಟೆ, ಹಕ್ಕಿಪಕ್ಕಿ ದೊಡ್ಡಲಾದ ಭಾರತ ಭೂನಭೋಂತ ವಾತಾವರಣದ ಎಲ್ಲಾ ಜೀವರಾಶಿಗಳ ಸತ್ವವೂ ದೇಶರಕ್ಷಣೆಗೆ ಸಹಕಾರಿಯಾಗುವಂತಹ ಇನ್ನು ಎಷ್ಟು ತೆರಿಗೆಗಳಾದರೂ ಬರಲೇ ಕಾದ್ದೇ, ಬರಲಿ. ಬಡವರಿಗೆಲ್ಲಾ ತೆರಿಗೆಗಳೊಂದು ಹೆಮ್ಮೆಯ ವಿಷಯವೆನ್ನಲು ಸಂದೇಹವೇ ಬೇಡ.

—ಎಂ ರಂಗರಾವ್.

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ —

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ವಿದ್ಯಾರ್ಥಿಗಳಿಗೆ
ಮಾತ್ರ

ವಿದ್ಯಾರ್ಥಿಗಳೆ,

- ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆದು,—
- ನಿಮಗಾಗಿ ಮಾತ್ರ ವಿಶೇಷವಾಗಿರಿಸಿದ (ರೂ. ೫೦೦ ವರೆಗೆ ಮುಖತ್ತಾಗಿ ಹಣ ಕಳುಹಿಸುವುದೇ ಇತ್ಯಾದಿ) ಕೆಲವು ವಿಶೇಷ ಸೌಲಭ್ಯಗಳ ಸದುಪಯೋಗವನ್ನು ಮಾಡಿ,—
- ವಿದ್ಯಾರ್ಜನೆಯ ಜೊತೆಗೆ ಉಳಿತಾಯದ ಮನೋವೃತ್ತಿ ಮತ್ತು ಬ್ಯಾಂಕಿಂಗ್ ಅಭ್ಯಾಸಗಳನ್ನೂ ಅಭಿವೃದ್ಧಿಗೊಳಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

— ಸಮಾನ ಸೇವೆ - - - - ಸರಿಯಾದ ಭದ್ರತೆ —

Edited, Printed & Published by K. H.Shetty, at the Navayuga Press, Udupi, S. India

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 41

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 20—6—1963 ಗುರುವಾರ

13 ನೆ. ಪೈಸೆ
ವಾ. ಚಂದಾ ರೂ. 6–75
ಸಂಪುಟ ೪೨ ಸಂಚಿಕೆ ೪೧

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ರಾಷ್ಟ್ರಪತಿಯವರ

ವಿಶ್ವಜಗತ್ತಿನ ಸುಂದರ ಕಲ್ಪನೆ

ಡಾ| ರಾಧಾಕೃಷ್ಣನ್ ರಾಜಕೀಯ ರಂಗವನ್ನು ಅನಿರೀಕ್ಷಿತವಾಗಿಯೇ ಪ್ರವೇಶಿಸಿದವರು ಅವರು ಅನಿರೀಕ್ಷಿತವಾಗಿಯೇ ಉನ್ನತ ಮಟ್ಟದ ರಾಜಕಾರಣಿಯೆನಿಸಿದವರು ಬ್ರಿಟಿಷ ಕಾಮನ್‌ವೆಲ್ತ್ ಮಂತ್ರಿ ಶ್ರೀ ಡಂಕನ್ ಸಾಂಡಸ್‌ರವರು ದೊಡ್ಡದಾದ ಕಾಮನ್‌ವೆಲ್ತ್ ರಾಷ್ಟ್ರವೊಂದರ ಈ ವರಿಷ್ಠಾಧಿಕಾರಿಯನ್ನು ಕುರಿತು 'ಗ್ರೇಟ್ ಬ್ರಿಟನ್ನಿನ ಅಪ್ತ ಮಿತ್ರ, ಭಾರತದ ಸರ್ವೋತ್ಕೃಷ್ಟ ಪುತ್ರರತ್ನಗಳಲ್ಲಿ ಒಬ್ಬ, ವಿಖ್ಯಾತ ತತ್ವಶಾಸ್ತ್ರಜ್ಞ, ಸನ್ನಡತೆಯ ಲೇಖಕ, ಲೇಖಕ ಮತ್ತು ತನ್ನ ವಿಶಾಲ ಮನೋಭಾವನೆ ಹಾಗೂ ಪ್ರತಿಭೆಗಳಿಂದ ಜಗತ್ತಿನ ನೈಜ ನಾಗರಿಕರೆನಿಸಿದವರು" ಎಂದು ವರ್ಣಿಸಿದುದು ಅತ್ಯುಕ್ತಿಯಲ್ಲ; ವಾಸ್ತವಿಕವಾಗಿ ಅವರು ಬೆಳೆದು ಬಂದ ಪರಿಸರವೂ ಪರಿಕ್ರಮವೂ ಅದಕ್ಕೆ ಪೂರಕ ಮತ್ತು ಪ್ರಭಾವಿತವೆನಿಸಿದುದು. ಇಂದಿಗಾದರೂ ಅವರ ವರ್ತನೆ ಮತ್ತು ಜೀವನವು ಈ ಪ್ರಶಂಸೆಯನ್ನು ಸುವ್ಯಕ್ತಗೊಳಿಸುತ್ತಿದೆ.

ವಿಶ್ವ ಜಗತ್ತಿನ ಭವ್ಯಕಲ್ಪನೆ

ಭಾರತವು ಸ್ವತಂತ್ರಗೊಂಡ ಮೇಲೆ ಮತ್ತು ಅದು ತನ್ನನ್ನು ಪ್ರಜಾಪ್ರಭುತ್ವವೆಂದು ಘೋಷಿಸಿಕೊಂಡ ಬಳಿಕ ಪೊತ್ತ ಮೊದಲ ಬಾರಿಗೆ ಅದರ ರಾಷ್ಟ್ರಪತಿಯವರು ಪಾಶ್ಚಾತ್ಯ ರಾಷ್ಟ್ರಗಳ ಸಂಚಾರ ಕೈಗೊಂಡುದರಿಂದ, ರಾಧಾಕೃಷ್ಣನ್ ರವರನ್ನು ಎಲ್ಲೆಡೆಯೂ ಹಾರ್ದಿಕವಾದ ಮತ್ತು ಆದರಪೂರ್ವಕವಾದ ಸ್ವಾಗತವನ್ನು ಕಾಣುತ್ತಿತ್ತು. ಏಕ ಜಗತ್ತಿನ ಕನಸು ಕಾಣುತ್ತಿರುವ ರಾಧಾಕೃಷ್ಣನ್ ರಂತಹ ವಿಶ್ವದ ಪ್ರಥಮ ಪ್ರಜೆಯೊಬ್ಬರಲ್ಲಿ ಬೇಕಾದ ಅತ್ಯುನ್ನತ ಗುಣಗಳನ್ನು ಹೊಂದಿದ್ದಾರೆ. ರಾಷ್ಟ್ರಕಾರಣದಷ್ಟಯೂ ಅವರ ಆಗ್ಗಣ್ಯಂಗಿ ತಮ್ಮ ಕೀರ್ತಿ ಪತಾಕೆಯನ್ನು ಮತ್ತಷ್ಟು ಎತ್ತರಕ್ಕೆ ಹಾರಿಸಿದ್ದಾರೆ ಚೀನೀಯರ ಆಕ್ರಮಣಕ್ಕೆ ತುತ್ತಾದ ಭಾರತದ ಈ ಪ್ರಥಮ ಪ್ರಜೆ ಸ್ವದೇಶಾಭಿಮಾನದ ಆಗರವಾಗಿರುವಂತೆಯೇ ವಿಶ್ವಜಗತ್ತಿನ ಪ್ರತಿನಿಧಿಯೂ ಆಗಿದ್ದಾರೆ. ಅವರಂತಹ ಸಾಮ್ಯಸಾಚಿಗಳ ಪ್ರತಿಯೊಂದು ಮಾತೂ ಉಚಿತವಾದದ್ದು; ಅದು ಜನಶ್ರೇಷ್ಠ ರತ್ನ. ಇದಕ್ಕೆ ಜ್ವಲಂತ ನಿದರ್ಶನವಾಗಿ ನೀತಿಯೆ, ಕವ್ಮ ಪಾಶ್ಚಾತ್ಯ ರಾಷ್ಟ್ರ ಸಂಚಾರಾವಧಿಯಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು.

ಸ್ವತಂತ್ರ ವಿಶ್ವಕ್ಕೆ ನಾಂದಿ

ಲೋಕ, ಬೆಳೆದು ಬರುತ್ತಿರುವ ವೈಜ್ಞಾನಿಕ ಪ್ರಗತಿಪರಾ ಕ್ರಮಗಳಿಂದ ಇಂದು ಸಂಕುಚಿತವಾಗುತ್ತ ಬರುತ್ತಿದೆ. ಹಿಂದೆ, ದೂರಾತಿ ದೂರವೆನಿಸಿರುವ ದೇಶಗಳಂದು ಸವಿಸಮೀಪತಿ ಆಮೂಪವಾಗಿವೆ. ಆದರೆ ಭೌತಿಕ ಸಾಮಿಪ್ಯದೊಡನೆ ಆಂತರಿಕ ಹಾಗೂ ಮಾನಸಿಕ ಸಾಮೀಪ್ಯದೆಡೆಗೆ ಜಗತ್ತು ಮುಂದುವರಿಯುತ್ತಿರೆಯೆ? ವಿಶ್ವವೆಲ್ಲವೂ ಒಂದಾಗಿ ಬಾಳಬೇಕು, ಸ್ನೇಹ ಶೀಲನವನ್ನು ಸಂವರ್ಧಿಸಿಕೊಳ್ಳಬೇಕು; ಐಕ್ಯ ಮನೋಭಾವದಿಂದ, ಸಹಕಾರ ಬುದ್ಧಿಯಿಂದ ಜಗತ್ತು ಪ್ರಗತಿಗೊಳ್ಳಬೇಕು, ಮಾನವನು ತನ್ನ ಬುದ್ಧಿ ಮತ್ತೆಯಿಂದ ಗಳಿಸಿದ ಭೌತಿಕ ಸೌಲಭ್ಯಗಳನ್ನು ಜಗತ್ತಿನ ಪ್ರತಿ ನಾಗರಿಕನೂ ಪಡೆಯುವಂತಾಗಬೇಕು ಅರ್ಥಿಕವಾಗಿ ಬೌದ್ಧಿಕವಾಗಿ ಪ್ರಜೆಯೂಳಿನ್ನತನಾಗಬೇಕು; ಆಗಲೇ ದೇಶದೇಶಗಳ ನಡುವೆ ಸಮಭಾವ ಬಾಂಧವ್ಯ ಸ್ಥಾಪಿತವಾಗುವುದು; ಇದು ನೇ ಸ್ವತಂತ್ರ ವಿಶ್ವದ ನಿರ್ಮಾಣಕ್ಕೆ ನಾಂದಿಯಾಗುವುದು.

ಹೊಸ ಭವ್ಯನಾಗಿಬೆ

ಆದರೆ, ನಾವಿಂದು ನೋಡುತ್ತಿರುವುದೇನನ್ನು? ದೇಶ-ದೇಶಗಳಲ್ಲಿ ಪ್ರತಿಕ್ಷೇತ್ರದಲ್ಲಿಯೂ ಸ್ಪರ್ಧೆಗಳು? ಸ್ಪರ್ಧೆ ಮನೋಭಾವನೆ ಪ್ರಗತಿಯ ಸಂಕೇತವೇನೋ ಹೌದು. 'ಮರುಳಿಸಿನು ಆಡುವರಿರೆ ಮನದ ಮೇಲೈಯುವನೆ?' ಎಂದೊಬ್ಬ ಹಿರಿಯ ಕವಿಗು ಪ್ರಶ್ನಿಸಿದ್ದಾರೆ ಮರುಳು ಆಡಬೇಕು; ಆದರೆ, ಈ ಮರುಳಿತನಗಳಲ್ಲೇ ಪರಿಣಾಮಗಳೇ ಕೇಡನ್ನುಂಟು ಮಾಡಬಾರದು. ಸ್ಪರ್ಧಾಬುದ್ಧಿ ಉತ್ತಮ ಜನುಕರಣೀಯ; ಆದರೆ, ಈ ಅಕಾಕ್ಷೆಯ ಹಿಂದೆ ಸ್ವಾರ್ಥ ಘಟಸರ್ಪನ ವಿಷದ ಜೀಲವಿರಬಾರದು. ಇಂದು ನಾವು ರಾಷ್ಟ್ರ ರಾಷ್ಟ್ರಗಳ ನಡುವೆ ರಾಷ್ಟ್ರ ರಾಷ್ಟ್ರ ಸಂಗ್ರಹದಲ್ಲಿ, ಆರ್ಥಿಕೋತ್ಕರ್ಷದಲ್ಲಿ ತಮ್ಮ ರಕ್ತಿಪ್ರಭುವ ಪ್ರದರ್ಶನದಲ್ಲಿ, ವ್ಯಾಪಾರದಲ್ಲಿ ಹೆಚ್ಚೇನು, ಪ್ರತಿರಂಗದಲ್ಲಿಯೂ ತೀವ್ರ ಪೈಪೋಟಿ ನಡೆಯುತ್ತಿರುವುದನ್ನು ನೋಡುತ್ತೇವೆ. ಈ ಪೈಪೋಟಿಯು ಸಹಿಷ್ಣೆಯಂದ ಕೂಡಿರದೆ, ಸ್ವಾರ್ಥಮಯವಾಗಿದೆ. 'ಆಯುಂ ನಿಜ ಪರಮೇ ನೇಲೆ' ಎಂಬ ತಿಳಿವಳಿಕೆಯಿಂದ ಮುಂದುವರಿದ ಸನ್ನದ್ಧ ರಾಷ್ಟ್ರಗಳು ಕಾರ್ಯತತ್ಪರವಾಗಿರೆ, ಉಳಿದವರು ಏನೇ ಆಗಲಿ? ಇಂತಹ ಪ್ರಸಂಗಗಳು ಮೇಲಿಂದ ಮೇಲೆ ಸಂಭವಿಸುತ್ತ ಇರುವಾಗ, ಜನ ಬಯಸುವ ಲೋಕ ಶಾಂತಿ, ಲೋಕ ಸುಭಿಕ್ಷೆಗಳು ಸೋಂಕೆಯೊವೆ?

ಯಕ್ಷ ಪ್ರಶ್ನೆಯೊಂದು

ಕೇವಲ ಮೂವತ್ತೈದು ವರ್ಷಗಳ ಜಗತ್ತಿನ ಅಲ್ಪಾಯುಷ್ಯ ವಧಿಯಲ್ಲಿಯೇ ಎರಡು ಘನಘೋರ ಭೀಕರ ವಿಶ್ವ ಸಂಗ್ರಾಮಗಳನ್ನು ನಾವು ಕಂಡಿದ್ದೇವೆ; ಅದರ ಕಹಿ-ಅನೂಪಮ-ದುಷ್ಪಲಗಳ ರುಚಿಯನ್ನೂ ಸವಿದಿದ್ದೇವೆ. ಲೋಕಕ್ಷಯ ಕಾರಕವೆನಿಸಿದ ಈ ಸಮರಗಳು ಯಾವ ಕಾರಣದಿಂದ ಸಂಘಟಿಸಿದುವು? ಕೇವಲ ಸ್ವಧಾರ್ಥ ತೆಯಿಂದ-ಸೊದಲನೆಯ ಜಾಗತಿಕ ಯುದ್ಧದ ಅಮೂನುಷ ಬವಣೆಗಳಿಂದ ನೊಂದು ಬೆಂದ ಬಸವಳಿದ ರಾಷ್ಟ್ರಗಳು ಪರಸ್ಪರ ವಿಶ್ವಾವರಣವನ್ನು ಬಯಸಿದುವು; ಜನರಾಂಗ ಸಂಘವೆ ಹುಟ್ಟಿನಲ್ಲಿ ಇದು ರಾಷದಲೆಯಿತು. ಆದರೆ, ಈ ಸಂಘವು ಅಸ್ತಿತ್ವದಲ್ಲಿದ್ದಂತೆಯೇ ಕೇವಲ ಇಪ್ಪತ್ತು ವರ್ಷಗಳೆತ್ತೆಯೇ ಇನ್ನೊಂದು ಮಾರಣ ಹೋಮವು ಸಂಭವಿಸಿತು. ಮಾನವ ಬುದ್ಧಿಯ ಕೋರೆಟದಿಂದ ಪರಿಣಾಮವಾಗಿ ಈ ಹೋಮವು ಮತ್ತಷ್ಟು ಭಯಾನಕತೆನಿಸಿತು ಇದರ ಹಿಂಗೆ ಹಾರುತ್ತಿರುವಾಗ, ಜನಕ್ಕೆ ತನ್ನ ಸರ್ವನಾಶದ ದಿನ ಸವಿಸವಾಗುತ್ತಿರುವುದರ ಅರಿವಾಯಿತು; ಜೀವಂತ ಸಮಾಧಿಗೊಡಜನರಾಂಗ ಸಂಘವು ಸಂಯುಕ್ತ ರಾಷ್ಟ್ರಸಂಘವೆಂಬ ಹೊಸ ಹೆಸರಿನಿಂದ ಪುನರವತಾರ ನೂಡಿತು. ಇಂದು ಈ ಸಂಘೆದಲ್ಲಿ ೧೧೦ ಸದಸ್ಯ ರಾಷ್ಟ್ರಗಳವೆ ಇನ್ನೆಲ್ಲವೂ ಒಂದು ಸಾಮಾನ್ಯ ತತ್ವಸಟದ ತತ್ವಗಳನ್ನು ಅಂಗೀಕರಿಸಿವೆ. ಇವುಗಳಿಗೆ ವ್ಯತಿರೇಕವಾಗದಂತೆ ತಂತಮ್ಮ ನೀತಿಯನ್ನು ರೂಪಿಸಲು ಮತ್ತು ಕಾರ್ಯಗತ ಮಾಡಲು ಸದಸ್ಯ ರಾಷ್ಟ್ರಗಳು ಸ್ವತಂತ್ರವಿವೆ. ಆದರೆ, ಈ ವಿಶ್ವಸಂಘವನ್ನು ಎಲ್ಲ ಸದಸ್ಯರು ಹಾರ್ದಿಕವಾಗಿ ಮನ್ನಿಸಿದ್ದಾರೆಯೆ? ಎಲ್ಲ ಸದಸ್ಯರು ಮೈತ್ರಿಯನ್ನು ಬೆಳೆಸಲು ಮತ್ತು ಅದರ ಸತ್ಫಲಗಳನ್ನು ಸಾಮೂಹಿಕವಾಗಿ ಅನುಭೋಗಿಸಲು ಸಿದ್ಧರಿದ್ದಾರೆಯೆ?

ಹಿರಿಯಣ್ಣನ ಚಾಳಿ

ಪರಸ್ಪರ ವೈಮನಸ್ಯವಿಂದ ಒಳಗೊಳಗೆನೇ ಕಿತ್ತಾಡುತ್ತಿರುವ ಕೆಲವೊಬ್ಬರು ಸದಸ್ಯರು ಇರುವಾಗ, ಸದಸ್ಯತನ ಪಡೆಯದವರ ಪಾಡೇನು? ಸಂಯುಕ್ತ ರಾಷ್ಟ್ರ ಸಂಘವಿಂದ ದೂರವಿರುವ ಕೆಂಪು ಚೀನಾದ ಉನ್ನತ್ತತೆಯು ಹದೆ ವಿರಿಯೆಚ್ಚುತ್ತಿರುವಾಗ, ಅದನ್ನು ಸರಿದಾರಿಗೆ ತರುವುದಾದರೂ ಹೇಗೆ? ಚತುರ್ವರ್ಣಾಶ್ರಮ ರಾಷ್ಟ್ರಗಳಲ್ಲಿ ಸೇರಿರುವ ಆಗ್ರಗಣ್ಯ ರಾಷ್ಟ್ರಗಳಾದ ಅಮೆರಿಕೆ-ರಶ್ಯಗಳೀ ಪೂರ್ವ ಪಶ್ಚಿಮ ಪಂಗಡಗಳನ್ನು ಕಟ್ಟಿಕೊಳ್ಳಲು ಮತ್ತು ಆರೋಪ ಪ್ರತ್ಯಾರೋಪಗಳನ್ನು ಹೊರಿಸಲು ಹಿಂದೆ ಮುಂದೆ ನೋಡದಿರುವಾಗ, ಚೀನೀಯರ ಸ್ವಾರ್ಥಚಿಂತನೆಯು ಕಾದುರಿಗೆ ಲಗಾಮು ಹಾಕುವವರಾದರೂ ಯಾರು? ಅಣ್ವಸ್ತ್ರಗಳ ಸಂಗ್ರಹದಲ್ಲಿ, ಪರೀಕ್ಷಣೆಯ ಪ್ರಯೋಗಗಳಲ್ಲಿ ಕಾರ್ಯನಿರತವಾದ ಸ್ಪರ್ಧೆಗಳಿದು ಪೂರ್ವ – ಪಶ್ಚಿಮಾಭಿಮುಖವಾಗಿ ನಡೆಯುತ್ತಿರುವ ಅಮೆರಿಕೆ-ರಶ್ಯಗಳ ಕ್ಷಿಪಣಿಗಳ ಮೇಲಾಟದಿಂದಾಗಿ ಜಗತ್ತು ಬೀಗುದಿಗೊಂಡಿದೆ; ಅದರ ದುಷ್ಪರಿಣಾಮವು ಬೇಡವೆಂದರೂ ಉಳಿದವರನ್ನು ಬಾಧಿಸುತ್ತದೆ.

ಹೃದಯ ವೈಶಾಲ್ಯ ಬೇಕು

ಯುದ್ಧದ ಹೆಸರಿತ್ತಿ ದೊಡನೆಯೇ ಕವಿ ಮುಚ್ಚುವವರು ಬಹುತೇಕ ಮುಂದು ಆದರೆ, ಕೈಕಟ್ಟಿಕೊಳ್ಳುವವರು ಅತಿ ಕಡಿಮೆ ಜನ. ಪ್ರತಿ ಪ್ರಜೆಗೂ ತನ್ನ ಮೇಲೆ ತಿಳಿ ಮಾನವಿರಲೇಬೇಕು. ವಿಶಾಲವಾದ ಆತ್ಮಾಭಿಮಾನವನ್ನು ಯಾರಿಗೂ ಕೆದುಕಿನ್ನುಂಟು ಮಾಡುವುದಿಲ್ಲ; ಅದು ಕ್ರಮೇಣ ಆ ಸದಭಿಮಾನವನ್ನು ತನ್ನ ಸಮಾಜದತ್ತ ರಾಜ್ಯದೇರೆಗಳತ್ತ ಪಸರುತ್ತದೆ. ಇದನ್ನೇ ನಾವು ರಾಷ್ಟ್ರಾಭಿಮಾನವೆಂದು ಕರೆಯುವುದು. ಜರ್ಮನಿಯ ಡಾಲ್ಫ್ ಹಿಟ್ಲರ್ ಮಿತಿಮೀರಿದ

(ಆನೇ ಪುಟ್ಟ ನೋಡಿರಿ)

ರಾಜಾಜಿಯವರ ಕಲಾಸಿದ್ಧಿ—

ಶಾಸ್ತ್ರಿಗಳ ಸ್ವಪ್ನ

ಶ್ರೀ ರಾಜಾಜಿಯವರ "ಕುಬ್ಜಾಷಂಡರು" ಎಂಬ ಕಥಾ ಸಂಕಲನದಲ್ಲಿ--"ಜಗದೀಶ ಶಾಸ್ತ್ರಿಗಳ ಕನಸು" ಎಂಬ ಕಥೆಯು ಹದಿನಾರನೆಯ ಕಥೆಯಾಗಿದ್ದು ಕೊನೆಯ ಕಥೆಯಾಗಿರುವುದು. ಈ ಕಥೆಯಲ್ಲಿ "ವೃದ್ಧಸ್ಯ ತರುಣೀ ವಿಷಂ" ಎಂಬ ನುಡಿಯು ಶಾಸ್ತ್ರಿಗಳ ಪಾಲಿಗೆ ಸತ್ಯವಾಗಿ ಪರಿಣಮಿಸಿ ಕೊನೆಗೆ ಶಾಸ್ತ್ರಿಗಳು ತರುಣಿಯ ವಿಷ ಸ್ಪರ್ಶದ ಪರಿಣಾಮವಾಗಿಯೇ ಗಂಗಾ ಸ್ನಾನಕ್ಕೆ ಹೊರಟವರು, ಮರಳಿ ಮನೆ ಸೇರುವುದಿಲ್ಲ. ಈ ಕಥೆಯಲ್ಲಿ ಬರುವ ಇನ್ನೊಂದು ಘಟನೆಯೆಂದರೆ, ಇನ್ಯೂರೆನ್ಸ್ ಏಜಂಟೊಬ್ಬರು ಶಾಸ್ತ್ರಿಗಳಿಗೆ ಮಾಡಿದ ಮೋಸ ಈ ಏಜಂಟರು ತಾನು ಸ್ವಂತ ಖರ್ಚಿಗೆ ಉಪಯೋಗಿಸಿಕೊಂಡ ಇನ್ಷೂರೆನ್ಸ್ ಕಂಪೆನಿಯು, ನಾವಿರಾರು ರೂಪ್ಯಗಳನ್ನು ಇನ್ನು ಹೇಗೆ ತುಂಬಿಸಿ ಕೊಡುವುದೆಂದು, ಆಲೋಚಿಸುತ್ತಿರುವಾಗಲೇ- ಈ ಶಾಸ್ತ್ರಿಗಳ ಪರಿಚಯ ಆವರಿಗಾಗುತ್ತದೆ.

ಐವತ್ತೆರಡು ವರ್ಷ ದಾಟಿದ್ದ ಶಾಸ್ತ್ರಿಗಳಲ್ಲಿ ಮದುವೆಯ ಹುಚ್ಚನ್ನು ಕೆರಳಿಸಿ, ತನ್ನ ತಾರುಣ್ಯವತಿಯಾದ ಹಡುಗಿಯನ್ನೆ ಆವರಿಗೆ, ಕೊಟ್ಟು, ಲರು ಸಾವಿರ ರೂಪ್ಯಗಳನ್ನು ಶಾಸ್ತ್ರಿಗಳಿಂದ "ವಧೂದಕ್ಷಿಣೆ!"ಯಾಗಿ ಪಡೆದು, ಕಂಪೆನಿಯ ಹಣವನ್ನು ತುಂಬಿಸಿದ ಈ ಚತುರನಾದ ಏಜಂಟನಿಂದ ಶಾಸ್ತ್ರಿಗಳಿಗೆ ತರುಣಿಯೊಡನೆ ಸುಖ ಅನುಭವಿಸುವ ಯೋಗ ಲಭಿಸುತ್ತದೆ. ಯುವಕರಿಗೆ ಅಮೃತವಾದುದು ವೃದ್ಧರಿಗೆ ವಿಷವಾಗಿ ಪರಿಣಮಿಸುವುದು. ವೃದ್ಧರಿಗೆ ತರುಣಿ ವಿಷದಂತಿದ್ದರೂ ಚಾಪಲ್ಯ ಅವರನ್ನು ಬಿಡಲಿಲ್ಲ. ಈ ಚಾಪಲ್ಯದಿಂದಾಗಿ, ತರುಣಿಯೂದ ಪತ್ನಿಯೊಡನೆ ಸುಖಪಡುವ ಭಾಗ್ಯವಿಯಿಂದ ಎಷ್ಟೋ ಮಂದಿ ವೃದ್ಧರು, ವರಾಬಾವದ ಈ ಕಾಲದಲ್ಲಿ ಹೆಣಕೊಟ್ಟಾದರೂ, ಹುಡುಗಿಯನ್ನು ವರಿಸುವ ಪ್ರಯತ್ನ ಮಾಡುತ್ತಾರೆ. ಸಮಾಜದಲ್ಲಿ ಇಂತಹ ಘಟನೆಗಳು ಅಪರೂಪವಲ್ಲ ಆದರೆ—ಶ್ರೀ ರಾಜಾಜಿಯವರ ಈ ಕಥೆ ತಂತಹ ಒಂದು ಘಟನೆಯಿಂದ ಕೂಡಿದ್ದರೂ, ಅದರ ಕಥಾ ಮುಖೇರೀತಿಯಿಂದ ಕೂಡಿದ್ದು. ಆವರ ಇತರ ಕಥೆಗಳಂತೆ, ಪರಿಣಾಮಕಾರಿಯಾಗಿದೆ.

ಜಗದೀಶಶಾಸ್ತ್ರಿಗಳು, ತನ್ನ ಜೀವನೆಯ ವಯಸ್ಸಿನಲ್ಲಲ್ಲಿ ರಂಗೇನಹಳ್ಳಿಯ ತನ್ನ ಹುಟ್ಟೂರಾದ ತಿರುವಡಿಮರಡೂರಿಗೆ ಬಂದು ತಲುಪಿದರು. ರಂಗೇನಹಳ್ಳಿಲ್ಲಿ ಓರ್ವ ಬ್ಯಾರಿಷ್ಟರರಲ್ಲಿ ಆಡುಗೆ ಮಾಡಿಕೊಂಡಿದ್ದ ಆವರು, ಆ ಊರಿನಲ್ಲಲ್ಲಿ ಪೌರೋಹಿತ್ಯವನ್ನು—ಮಾಡುತ್ತಿದ್ದು ನಾಸಿರಾರು ರೂಪ್ಯಗಳನ್ನು ಸಂಪಾದಿಸಿದ್ದರು. ಊರಿಗೆ ಮರಳಿದ ಅವರಿಗೆ, ಮದುವೆಮಾಡಿಕೊಳ್ಳುವ ಯೋಚನೆ ಬಂದರೂ, ತನ್ನ ವಯಸ್ಸನ್ನು ನೆನೆದ ಅವರು, ಮದುವೆಯ ಆಯೋಚನೆಯನ್ನು ಬಿಟ್ಟುಬಿಟ್ಟರು. ಊರಲ್ಲಿ ಒಂದು ಆಸ್ತಿಯನ್ನು ಖರೀದಿಮಾಡಿ, ಒಬ್ಬ ಯೋಗ್ಯ ಹುಡುಗನನ್ನು ದತ್ತಕ್ಕೆ ತೆಗೆದುಕೊಳ್ಳುವುದೆಂದು, ಅವರು, ಒಂದು ತೀರ್ಮಾನಕ್ಕೆ ಬಂದರು. ಇಷ್ಟರಲ್ಲಿಯೇ ಶಾಸ್ತ್ರಿಗಳಿಗೆ ನಾಗೇಶ್ವರ ಅಯ್ಯರರ ಪರಿಚಯವಾಗಿ, ಅವರು, ತನ್ನ ರೂಪವತಿಯೂದ ಮಗಳನ್ನು ರೂಪ್ಯ ಆರು ಸಾವಿರ ತೆಗೆದುಕೊಂಡು ಮದುವೆ ಮಾಡಿಕೊಡುವುದಾಗಿ ನಿಶ್ಚಯವಾಗಿ, ಮದುವೆಯೂ ನಡೆದು ಹೋಯಿತು. ಮಗಳನ್ನು ಕೊಟ್ಟು ಆರು ಸಾವಿರ ರೂಗಳನ್ನು ಪಡೆದ ಅಯ್ಯರರು ಬಳಿಕ ನಾಪತ್ತೆಯಾದರು.

ಈ ಅನೀಕ್ಷಿತ ಘಟನೆ ನಡೆದ ಬಳಿಕ ಶಾಸ್ತ್ರಿಗಳು ತನ್ನ ಮೋಹದ ಮುದುಮದದಿಯೊಡನೆ, ಸುಗಮ ರಂಗೇನಹಳ್ಳಿಗೆ ಮರಳಿ ಕೆಲವು ಕಾಲ ದಾಂಪತ್ಯ ಸುಖವನ್ನು ಸವಿಯುತ್ತಿರಲು, ಆವರಿಗೆ ಪುತ್ರೋತ್ಪತ್ತಿಯವಾಗುತ್ತದೆ. ವೃದ್ಧಾಪ್ಯದಲ್ಲಿ ಗಂಡು ಮಗು ಹುಟ್ಟಿದ ತನ್ನ ಭಾಗ್ಯವನ್ನು ನೆನೆದ ಶಾಸ್ತ್ರಿಗಳು, ಸಹಜವಾಗಿಯೇ ಸಂತೋಷಪಡುತ್ತಾರೆ. ಆದರೆ, ಮತ್ತೆ ಒಂದೆರಡು ವರ್ಷಗಳೊಳಗಾಗಿಯೇ ಶಾಸ್ತ್ರಿಗಳ ತರುಣಿ ಹೆಂಡತಿಯ ಚಾರಿತ್ರ್ಯದ ಕುರಿತು ಅಲ್ಲಲ್ಲಿ ಗುಸು ಗುಸು ಪಾರ್ಶ್ವ ಹೆರಡುತ್ತದೆ. ಶಾಸ್ತ್ರಿಗಳಿಗೂ ಇದು ಗೊತ್ತಾಗುತ್ತದೆ. ಆದರೆ, ಈ ಭಾಗದಲ್ಲಿ-ತಾನು ತೃಪ್ತಿಪಡಿಸಲು ಅಸಮರ್ಥನೆಂದು ಬಗೆದ ಶಾಸ್ತ್ರಿಗಳು ಸುಮ್ಮನಿದ್ದು ಬಿಡುತ್ತಾರೆ. ಕೊನೆಗೊಂದು ದಿನ ಶಾಸ್ತ್ರಿಗಳ ಮನಮೋಹನಿಯು, ತನ್ನ ವೀಣೆ, ಚಿನ್ನ, ಹಣ, ಎಲ್ಲವನ್ನೂ ದೋಚಿಕೊಂಡು ಯಾರೊದನೆಯೋ ಕೂಡಿಕೊಂಡು,ಪರಾರಿಯಾಗುತ್ತಾಳೆ ಇಲ್ಲಿಗೆ ಶಾಸ್ತ್ರಿಗಳ ದಾಂಪತ್ಯ ಸುಖದ ಇತಿಶ್ರೀಯಾಗುತ್ತದೆ.

ಪತ್ನಿಯ ವಿಯೋಗದ ದುಃಖವನ್ನು ಶಾಸ್ತ್ರಿಗಳು ಮಗನ ಲಾಲನೆ ಪಾಲನೆಗಳಲ್ಲಿ ಮರೆಯಲು ಪ್ರಯತ್ನಿಸುತ್ತಾರೆ ಮುಂದೆ ಆವರ ಮಗನು, ಬಿ. ಎ. ಪದವೀಧರನಾದ ಬಳಿಕ ಶಾಸ್ತ್ರಿಗಳು ರಂಗೇನಹಳ್ಳಿಂಗ, ಊರಿಗೆ ಮರಳುತ್ತಾರೆ.

ಊರಿಗೆ ಹೊರಟ ಶಾಸ್ತ್ರಿಗಳು, ಮದ್ರಾಸಿನಲ್ಲಿ-ಆವರ ಬಿಕ್ಕಪ್ಪನ ಮಗ ಸೀತಾರಾಮ ಅಯ್ಯರರಲ್ಲಿ ತಂಗಿದರು. ಸೀತಾರಾಮರು ಆಲ್ಲಿ ಪಸರಾಂತ ವಕೀಲರಾಗಿದ್ದರು. ಈ ವಕೀಲರಿಗೆ, ರೂಪವತಿಯಲ್ಲದ ಮದುವೆಯ ಪ್ರಾಯದ ಒಬ್ಬ ಹೆಣ್ಣು ಮಗಳಿದ್ದಳು. ಅವಳಾದರೂ ಕಪ್ಪಾಗಿಯೇ ಇದ್ದಳು. ಅಂತಹ, ಮಗಳಿಗೆ, ರಾಮಚಂದ್ರನಂತಹ ಸುಂದರ ಹಾಗೂ ಪದವೀಧರ ಗಂಡ ಸಿಗುವುದು ಕನಸಿನ ಮಾತಾಗಿತ್ತು. ಇದನ್ನು ಮನಗಂಡ ವಕೀಲರ ಹೆಂಡತಿ, ರಾಮಚಂದ್ರನನ್ನು ಅಳಿಯನನ್ನಾಗಿ ಮಾಡಿಕೊಂಡ, I. C. S. ಗೆ ಇಂಗ್ಲೇಂಡಿಗೆ ಕಳುಹಿಸುವುದಾಗಿ ಹೇಳುತ್ತಾಳೆ. ಹುಡುಗಿ ಕಪ್ಪಾಗಿದ್ದರೂ ಇಂಗ್ಲೇಂಡಿಗೆಹೋಗುವ ಸುಯೋಗ ಲಭಿಸುವಕಾರಣ ರಾಮಚಂದ್ರನು-ಆ ಹುಡುಗಿಯನ್ನು ವರಿಸಲು ಒಪ್ಪಿಗೆ ಕೊಡುತ್ತಾನೆ. ಶಾಸ್ತ್ರಿಗಳೂ ಒಪ್ಪುತ್ತಾರೆ. ಆದರೆ, ಅಗಿನ ಶಾರದಾ ಕಾನೂನಿನಂತೆ ಕೂಡಲೇ ಮದುವೆ ಮಾಡಲು ಹುಡುಗಿಯ ವಯ್ಯು ಸ್ವಲ್ಪ ಕಡಿಮೆ ಆಗಿದ್ದ ಕಾರಣ I. C. S. ಮಾಡಿಕೊಂಡು ಬಂದ ಬಳಿಕ ಈ ಮದುವೆ ಮಾಡುವುದಾಗಿ ಬರಹ ನಿಶ್ಚಿಕಾರು ಮಾಡಲ್ಪಡುತ್ತದೆ. ಆ ಬಳಿಕ, ರಾಮಚಂದ್ರನು ಭಾವೀ ಮಾವನ ಖರ್ಚಿನಿಂದ ಇಂಗ್ಲೇಂಡಿಗೆ ಹೋಗುತ್ತಾನೆ.

ರಾವ ಚಂದ್ರನು ಇಂಗ್ಲೇಂಡಿಗೆ ಹೋದ ಬಳಿಕ—ಶಾಸ್ತ್ರಿಗಳು ಪುನಃ ರಂಗೋನಿಗೆ ಹೋಗುತ್ತಾರೆ. ಆದರೆ, ಆಲ್ಲಿ ಆವರಿಗೆ ಮಾನಸಿಕ ಶಾಂತಿ ದೊರೆಯದೆ, ಆವರು ಅನಾರೋಗ್ಯಹೊಂದುತ್ತಾರೆ, ಡಾಕ್ಟರರು, ಆವರಿಗೆ ಊರಿಗೆ ಹೋಗುವಂತೆ, ಸಲಹೆ ಕೊಡುತ್ತಾರೆ. ಹೀಗೆ ರಂಗೋನಿನಿಂದ ಭಾರತಕ್ಕೆ ಸುಂಕುವಾಗ ಸ್ಟೀಮರಿನಲ್ಲಿ ಶಾಸ್ತ್ರಿಗಳಿಗೆ ಓರ್ವ ಮಹಿಳೆ ಭೇಟಿಯಾಗುತ್ತಾಳೆ, ಇಲ್ಲಿ ಒಂದು ಅನಿರೀಕ್ಷಿತ ಘಟನೆ ಒದಗಿ, ಶಾಸ್ತ್ರಿಗಳ ಅಶಾಂತವಾದ ಮನಸ್ಸು ಮತ್ತೂ ಕಳವಳಕ್ಕೆ ಈಡಾಗುತ್ತದೆ. ಆವರಿಗೆ ಭೇಟಿಯಾದ ಆ ಮಹಿಳೆ, ಮತ್ತಾರೂ ಆಗಿರದೆ, ಪರಾರಿಯಾಗಿದ್ದ ಆವರ ಪತ್ನಿಯೇ ಆಗಿದ್ದಳು. ಶಾಸ್ತ್ರಿಗಳು ಆಕೆಯನ್ನು ತನ್ನ ಪತ್ನಿಯೆಂದು ಗುರುತಿಸಿ ಮೂತನಾಡಿಸಿದಾಗ ಆಕೆ, "ಹೌದು, ಕೆಲವು ವರ್ಷಗಳ ಹಿಂದೆ ನಾನು ನಿಮ್ಮ ಪತ್ನಿಯಾಗಿದ್ದೆ. ಈಗ ನಿಮ್ಮೀಮಕ್ಕೆ ಸೇರಿ ನಾನು ಸುಖವಾಗಿದ್ದೇನೆ ನನ್ನನ್ನಲ್ಲಿ ನೊತನಾದ ಬೇಕಿದ್ದರೆ, ನನ್ನ ನಿವಾಸಕ್ಕೆ ಬನ್ನಿ!" ಎಂದು ಹೇಳಿ ನಸು ನಗುತ್ತ ತನ್ನ ವಿಳಾಸವನ್ನು ಕೊಟ್ಟು ಆಕೆ ಹೊರಟು ಹೋದಳು.

ಶಾಸ್ತ್ರಿಗಳು ಮರುದಿನವೇ ಆಕೆಯ ಮನೆ ಹುಡುಕಿಕೊಂಡು ಹೋಗಿ ಆಕೆಯೊಡನೆ ಮೂತನಾಡಿದಾಗ ಗಾಯದ ಮೇಲೆ ಬರೆ ಎಳೆದಂತೆ, ಅವರಿಗಾಗಿ ಮತ್ತೊಂದು ವಿಪತ್ತು ಕಾದಿತ್ತೆಂಬಂತೆ ಭಾಸವಾಯಿತು. ಶಾಸ್ತ್ರಿಗಳು—"ಆದದ್ದು ಆಗಿ ಹೋಯಿತು! ಇನ್ನಾದರೂ ಜೊತೆಯಾಗಿರೋಣ!" ಎಂದು ಆಕೆಗೆ ಹೇಳಿದಾಗ—ಆಕೆ ನಗುತ್ತ "ಜೇ ಜೇ....ನೀವಿನ್ನು ನನ್ನ ಆಸೆಯನ್ನು ಬಿಟ್ಟು ಸುಖವಾಗಿರಿ. ನೀವು ಇನ್ನು ನನ್ನನ್ನ ಸ್ಪರ್ಶಿಸಬಾರದು. ಅಂದು ನನ್ನ ತಂದೆ ನಿಮಗೆ ಮೋಸಮಾಡಿದ್ದರು. ಆವರಿಗೆ ಇನ್ಯೂರೆನ್ಸಿನ ಹಣ ಕಂಬಿಸಬೇಕಿತ್ತು. ಆಗ ನಾವು ನಿಮಗೆ ಮಾಡಿದ ಮೋಸದ-ಪಾಪ ಲೇಶ, ನನಗೆ ಏನು ಜನ್ಮಕ್ಕೂ ಹೋಗದು. ನಾನು ಅಸ್ಪೃಶ್ಯ ಜಾತಿಯಳಾಗಿದ್ದೇನೆ. ಅಸ್ಪೃಶ್ಯಳಾ ದ ನನ್ನ ಸಂಗ ಮಾಡಿದ್ದಕ್ಕಾಗಿ ನೀವು ಗಂಗಾ ಸ್ನಾನ ಮಾಡಿ ಬನ್ನಿರಿ!" ಎಂದಳು.

ಶಾಸ್ತ್ರಿಗಳಿಗೆ ಈಗ ತಲೆಯ ಮೇಲೆ ಸಿಡಿಲೆರಗಿದಂತಾಯಿತು. ಆಗ ಆವರ ಮನಸ್ಸು—'ಇಷ್ಟು ಸುಂದರಿಯೂದ ಈಕೆ ಎಷ್ಟು ಒಳ್ಳೆಯವಳು! ಎಂತಹ ಲೋಸುಲೆ! ಇತಳು ಅಸ್ಪೃಶ್ಯಳೇ? ದೇವರೇ, ಸಮಾಜ ಈ ಜಾತೀಯತೆಯನ್ನು ಏತಾಗಿ ಉಂಟು ಮಾಡಿತೋ?" ಎಂದು ಪ್ರೊಂದಿತು.

ಬಳಿಕ ಶಾಸ್ತ್ರಿಗಳು ಕೂಡಲೇ, ಪಶ್ಚಾತ್ತಾಪದೊಡನೆ, ಪುಣ್ಯಾಗಕ್ಕೆ ಟಿಕೇಟು ತೆಗೆದು, ಗಂಗಾ ಸ್ನಾನಕ್ಕಾಗಿಯೇ ಹೊರಟ

(೧೦ನೇ ಪುಟ ನೋಡಿರಿ)

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರತನಾಗಿರುವ

ಪೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನಾತನ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. 0-50
೧೦೦ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ರೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸೆಡ್ಡಿ ವಿಧ

ಎಲ್ಲಾತರದ ಸಿದಿತವುಳ್ಳ ನೋವುಗಳಿಗೆ
೫೦ ವರ್ಷ ಮೇಲ್ಪಟ್ಟ ಪ್ರಾಯದ
ಪಾಕರ್ ಡಾರ್ಫರ್

ಪ್ರತ್ಯಕ್ಷದರ್ಶಿಯ ಹೇಳಿಕೆ

ಚೀನದ ಕೆಂಪು ಪರದೆಯೊಳಗೆ

(ಲೇಖನಾಂಕ ೨)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಬಟ್ಟೆಯ ಬವಣೆ ಹೇಳತೀರದು. ಒಬ್ಬ ಮನುಷ್ಯನಿಗೆ ವರ್ಷ ಒಂದಕ್ಕೆ ಎರಡೂವರೆ ಆಡಿ ಬಟ್ಟೆ ಕೊಡಲಾಗುತ್ತಿತ್ತು. ಇದ್ದು ಮಾನವನ ಕನಿಷ್ಠ ಅವಶ್ಯಕತೆಯನ್ನಾ ಪೂರೈಸಿಕೊಳ್ಳಲು ಸಾಕಾದೀತೇ? ಸಾಕಾಗದಿದ್ದಲ್ಲಿ ಜಾಸ್ತಿ ಸಿಗುತ್ತದಾದರೂ ಎಲ್ಲಿ? ಒಬ್ಬೊಬ್ಬನಿಗೆ ವರ್ಷ ಒಂದಕ್ಕೆ ಹದಿನೈದು ಗ್ರಾಮ್‌ಗಳಷ್ಟು ಉಣ್ಣೆ ನೂಲನ್ನು ಕೊಡಲಾಗುತ್ತಿತ್ತು. ಬಟ್ಟೆ ಸಾಕಾಗದೆ ಇರುವದರಿಂದ ಹರಿದ ಉಡುಪುಗಳಿಗೆ ಪುನಃ ಪುನಃ ತೇಪೆ ಹಾಕಿಕೊಂಡು ಉಪಯೋಗಿಸಿಕೊಳ್ಳಬೇಕಾಗುತ್ತಿತ್ತು. ಮದುವೆಗೆ ವಿಶೇಷ ಒಟ್ಟೆ ಹಾಸಿಗೆಗೆ ಹೊಸ ಬಟ್ಟೆ.... ಇವೆಲ್ಲಾ ತಿರುಕ ನೋರ್ವ ನೂರಮುಂದೆ ಕನಸ ಕಂಡಂತೆಯೇ ಸರಿ. ಅದು ಮಾತ್ರವಲ್ಲದೆ ಆಡಳಿತ ಸಲಕರಣೆಗಳಿಗೂ ನಿಯಂತ್ರಣವಿತ್ತು.

೧೯೬೦ ಆಕ್ಟೋಬರಿನಲ್ಲಿ ಪ್ರಾದೇಶಿಯರಿಗೆ ಬಾಸ್ತಿ ಸವಲತ್ತುಗಳನ್ನು ಕೊಡಲಾಯಿತು—ಅಂದರೆ, ಮೂವತ್ತು ರಾತ್ಲು ಅಕ್ಕಿ, ಮೂರು ರಾತ್ಲು ಮಿನು ಹಾಗೂ ಮಂಸ, ೩-೬ ಲೀಟರಿನ ಎರಡು ಬಾಟ್ಲಿಯಲ್ಲಿ ಖಾರಾಯಿ, ಅಲ್ಲದೆ ದೊಡ್ಡಕೆದಲ್ಲಿ ತರಕಾರಿಗಳನ್ನು ಅವರು ಕ್ರಯಕ್ಕೆ ನಿರ್ಬಂಧವಿಲ್ಲದೆ ತೆಗೆದುಕೊಳ್ಳಬಹುದೆನ್ನುವ ಆಜ್ಞೆ ಬಂತು. ಆದರೆ ೧೯೬೨ರಲ್ಲಿ ಈ ವಿಶೇಷ ಸವಲತ್ತುಗಳನ್ನು ಮನ್ನಾಮಾಡಲಾಯಿತು. ಯಾಕೆಂದರೆ, ಸ್ವದೇಶ ಬಾಂಧವರಿಗೆನೇ ಗಂಜಿನೀರು ವಿನಃ ದೋಸೆ ವೈರಿ ಕನಸಿನ ಮಂಡಿಗೆಯಾಗಿರುವಾಗ ಅನ್ಯದೇಶೀಯರಿಗೆ ವಿಶೇಷ ಸವಲತ್ತುಗಳನ್ನು ಮುಂದರಿಸಲು ಅವರು ಇಚ್ಛಿಸಲಿಲ್ಲ. ಇದರಲ್ಲೇನೂ ಆಶ್ಚರ್ಯಪಡಬೇಕಾಗಿರಲಿಲ್ಲ. ಹಸಿವಿನ ಹಾಹಾಕಾರ ಎಲ್ಲೆಲ್ಲೂ ಕೇಳಿ ಬರುತ್ತಿರುವಾಗ ಇದ್ಯಾವ ಮೂಲೆಗೆ?

ಜ್ವರ ಅಲ್ಲದೆ ಇನ್ನಿತರ ಅಸ್ವಸ್ಥತೆಯ ನೇಪಲಿ ಕಾರ್ಮಿಕರಿಗೆ ಬಿಡುವು ದೊರಕುತ್ತಿರಲಿಲ್ಲ. ಅಲ್ಲದೆ ಅವರಿಗೆ ಔಷಧಿ ಅಥವಾ ಜೀವನದ ಗುಳಿಗೆಗಳೂ ಸಿಗುತ್ತಿದ್ದಿಲ್ಲ. ಆಹಾರ ದೋಷದಿಂದಾಗಿ ಗರ್ಭಿಣಿಯರು ಗಂಡು ಅಂತರದಲ್ಲಿ ತೊಳಲಾಡುತ್ತಿದ್ದರು. ಬೆಳಕಿಗೆ ಬಂದ ಕಂದಗಳ ಕಷ್ಟ—ಅದು ನರಕವೇ ಸರಿ. ಸೋತು ಬಳಲಿ ಬೆಂಡಾಗಿದ್ದ ಬಡ ಶ್ರಮಿಕರೂ ಕಡ್ಡಾಯ ಕೆಲಸಕ್ಕೆ ಹೋಗಲೇ ಬೇಕಾಗಿತ್ತು. ಇತ್ತೀಚೆಗೆ ಕಲಾಶಾಲೆ, ಪೌಢ ಶಾಲೆ, ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕೂಡಾ ಕಡ್ಡಾಯ ಶ್ರಮದ ಹೆಸರಿನಲ್ಲಿ, ಕೃಷಿಗೆ ಒಗ್ಗಾಗದಿದ್ದ ಭೂಮಿಯಲ್ಲಿ ಬೆಳೆಯನ್ನು ತೋರಿಸಬೇಕೆಂಬ ನಿಯಮವನ್ನುತರಲಾಯಿತು. ಕೃಷಿಗೆ ಆದರಿಂದ ತರಾಗಿರುವವರು ಉತ್ಪಾದನೆ ಮಾಡಿದ ಕೃಷಿ ಯೇಗಿದ್ದೀತು? ಈ ರೀತಿ ಇತರ ಕೆಲಸಕ್ಕಾಗಿ ಬಲಾತ್ಕಾರಿಳಲ್ಪಟ್ಟ ವಿದ್ಯಾರ್ಥಿಗಳ ವಿದ್ಯಾರ್ಜನೆಯೂದಯೂ ಯಾವ ರೀತಿಯಲ್ಲಿದ್ದೀತು?

೧೯೬೨ರ ಆರಂಭದಲ್ಲಿ ಕಚ್ಚಾ ಪದಾರ್ಥಗಳ ತೀವ್ರ ಅಭಾವದಿಂದಾಗಿ ಹಲವಾರು ಕಾರ್ಖಾನೆಗಳು—ಬಟ್ಟೆ ಗಿರಣಿಗಳು, ಕಾಗದ ಕಾರ್ಖಾನೆಗಳು, ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗಳ ಇತ್ಯಾದಿ—ಬಾಗಿಲು ಮುಚ್ಚಬೇಕಾಯಿತು. ಉಗಿಬಂಡಿ (ಟ್ರೈನ್) ಚಲನೆಗೂ ಧಕ್ಕೆ ಬಂತು. ಶಂಘಾಯಿಯಂತಹ ವ್ಯಾಪಾರದ ಜೀವನಾಡಿ ಪಟ್ಟಣಗಳಲ್ಲಿ ವಾರಕ್ಕೆ ಮೂರು ಬಂಡಿಗಳು ಮಾತ್ರ ಓಡಾಡುತ್ತಿದ್ದುವು. ಆದೂ ಶ್ರಮ ಪ್ರಕಾರ ಚಲಾವಣೆಯಲ್ಲಿರಲಿಲ್ಲ. ಆರಂಭದಲ್ಲಿ ಸರಕಾರವು ಎಲ್ಲಾ ಕಾರ್ಖಾನೆ, ಕೃಷಿಗಳನ್ನು ಹಿಂದಕ್ಕೆ ಬಿಟ್ಟು ಕಬ್ಬಿಣ -ಉಕ್ಕಿನ ತಯಾರಿಕೆಗೆ ವಿಶೇಷ ಆವಶ್ಯಕತೆಯನ್ನಿತ್ತಿತ್ತು. ಆದರೆ, ನಂತರ ಅದನ್ನು ಬದಲಾಯಿಸಿ ಆ ಸ್ಥಾನವನ್ನು ಕೃಷಿಗೆ ಕೊಡಲಾಯಿತು. ತಮ್ಮ ಧೋರಣೆಯಿಂದ ಅಭಾವ ಉಕ್ಕಿಸಿಕೊಂಡವರಿಂದ, ಪಡಿತರ ಸ್ಥಳಗಳಿಗೆ ಹೋಗಿ ಕೃಷಿ ಮಾಡುವವರಿಗೆ ವಿಶೇಷ ಪ್ರೋತ್ಸಾಹ ಕೊಡಲಾರದಭವಾಯಿತು.

ಹಾಗಿದ್ದರೂ, ಇಂತಹ ಸ್ಥಳಗಳಿಗೆ ಹೋಗಲು ಜನರು ಮುಂದೆ ಬರಲಿಲ್ಲ. ಯಾಕೆಂದರೆ ಅವರಿಗೆ ಚೆನ್ನಾಗಿ ಗೊತ್ತು. ಶಾಂಘಾಯಿಯಂತಹ ಪಟ್ಟಣಗಳನ್ನು ಬಿಟ್ಟು ಗ್ರಾಮದತ್ತ ಹೋದಲ್ಲಿ ಜೀವನವು ಅದೆಷ್ಟು ದುರ್ಧರವೆಂಬುದು ಅವರಿಗೆ ಚೆನ್ನಾಗಿಗೊತ್ತು. ಆಗ ಅವರು ಅತಿಸೀಜಾಟದಲ್ಲಿ ಸಿಕ್ಕಿ ಬಿದ್ದರು. ಕೆಲ ವರ್ಷಗಳ ಹಿಂದೆ ಆ ರೀತಿ ಇರಲಿಲ್ಲ. ಬರಬರುತ್ತ ಆ ದುಸ್ಥಿತಿ ಬಂದೊದಗಿತು. ಪೇಟೆಗಳಲ್ಲಿ ಕಾರ್ಮಿಕನೆಗಳನ್ನು ಮಚ್ಚಿದ ಮೇಲೆ ಜನರು ಮಾಡುವದಾದರೂ ಏನನ್ನು? ಕೆಲಸ ಮಾಡದಿದ್ದಲ್ಲಿ ತಿನ್ನಲು ಸಿಗುವಂತಿಲ್ಲ. ಆಗಿದ್ದರೂ ಸ್ವ-ಇಚ್ಛೆಯಿಂದ ಹೋಗಲು ಯಾರೂ ಮುಂದೆ ಬರಲಿಲ್ಲ. ಅನಂತರ ಸೈನಿಕ ಬಲವನ್ನು ಉಪಯೋಗಿಸಬೇಕಾಗಿ ಬಂತು. ಹೋಗಲೊಪ್ಪದಿದ್ದವರಿಗೆ ನಿವೃತ್ತಿ ನಿಧಿಯೂ ದೊರಕುವಂತಿಲ್ಲ.

ಉಣ್ಣಲು ಊಟವಿಲ್ಲ, ಉಡಲು ಉಡುಪಿಲ್ಲ ಕೆಲಸಕ್ಕೆ ಶಕ್ತಿ ಇಲ್ಲ—ಇಂತಹ ಪರಿಸ್ಥಿತಿಯನ್ನ ಬಲಾತ್ಕಾರ ಸಾಧ್ಯವಾಗಿದ್ದುದರಿಂದ ಸೇನೆಯು ಕಾವಲು ಇದ್ದರೂ ಮೆಲ್ಲ ಮೆಲ್ಲನೆ ಶ್ರಮಿಕರು ಕೆಂಟೊನಿನಿಂದ ಕಾಲೂನಿಗೆ ಗಡಿ ದಾಟಿ, ತಲೆ ಮರೆಸಿಕೊಂಡು, ಓಡಿಹೋಗಲಾರಂಭಿಸಿದರು. ಒಡನೆ ಹೊಸ ರೀತಿಯ ದಬ್ಬಾಳಿಕೆಗೆ ಆರಂಭವಾಯಿತು ಅಗಲೆ, ಒಬ್ಬ ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರಿಯಂ ವಿಧ ವಿಧದ ಸಾಮಗ್ರಿಗಳನ್ನು ಕಾನೂನುಬಾಹಿರ ರೀತಿಯಲ್ಲಿ ಮೂಂದ್ದ ಆಪಾದನೆ ಸೇರಿಗೆ ಶೋಧನೆಗಾರಂಭಿಸಿದರು. ಅದಕ್ಕಿಂತಲೂ ಮುಂಚೆ ೧೯೬೦ರಲ್ಲಿ ಕಳ್ಳ ವ್ಯಾಪಾರದ ಹೆಸರಿನ ಮೇಲೆ ಸಾವಿರಾರು ಜನರನ್ನು ಬಂಧಿಸಲಾಗಿತ್ತು. ಹಾಗಿದ್ದರೂ ೧೯೬೨ರಲ್ಲಿ ಸ್ವತಂತ್ರ ವ್ಯಾಪಾರಕಟ್ಟೆಯ ರೂಪದಲ್ಲಿ ಸರಕಾರವೇ ಕಳ್ಳ ವ್ಯಾಪಾರಕ್ಕೆರಂಭಿಸಿತು. ಅದು ಹದಿನಾರು ಸೆನ್ ಬೆಲೆ ಬಾಳುವ ಅಕ್ಕಿಯನ್ನು ಇನ್ನೂರು ಸೆನ್ನಿಗೆ ನೂರಿತು; ಒಂದು ಯೊನ್ ಬೆಲೆಯ ವಸ್ತುವನ್ನು ಎರಡು ಯೊನ್ ಬೆಲೆಗೆ ನೂರಿತು. (ಸೆನ್, ಯೊನ್ ಅಲ್ಲಿಯ ನಾಣ್ಯಗಳು. ಒಂದು ಯೊನ್‌ಗೆ ನೂರು ಸೆನ್‌ಗಳು. ಒಂದು ಯೊನ್ ಅಂದರೆ ಸಾಧಾರಣ ಎಂಟು ರೂಪಾಯಿ ಮೌಲ್ಯವಿದೆ.) ನಿಯಂತ್ರಣ ಕ್ರಯಕ್ಕಿಂತಲೂ ಐದು ಪಾಲು ಜಾಸ್ತಿ ಬೆಲೆಗೆ ಕೋಳಿಮೊಟ್ಟೆ, ಹಾಗೂ ಎಣ್ಣೆಯನ್ನು ಮಾರಲಾಗುತ್ತಿತ್ತು. ಕೋಳಿ ಮರಿಗಳನ್ನು ನಿಯಂತ್ರಣ ಪಟ್ಟಿಯಲ್ಲಿ ಸೇರಿಸಿರಲಿಲ್ಲವಾದರೂ ಸ್ವತಂತ್ರ ವ್ಯಾಪಾರ ಕಟ್ಟೆಯಲ್ಲಿ ಐದು ಯೊನ್ ಕೊಟ್ಟರೆನೇ ಆವು ಸಿಗುತ್ತಿದ್ದುವು. ಆಗ ಚೈನಾದಲ್ಲಿ ಸರಸರಿ ಸಂಬಳ ಎಪ್ಪತ್ತು ಯೊನ್‌ಗಳಾಗಿದ್ದುತ್ತು.

ಒಳಗಿನ ದುಸ್ಥಿತಿ ಈ ರೀತಿ ಇದ್ದಾಗ, ಚೈನಾ ಇನ್ನೊಂದು ರೀತಿಯ ಬೊಬ್ಬೆಯನ್ನೆಬ್ಬಿಸಿತು. ಚೈನಾದಲ್ಲಿ ಭಾರತೀಯರನ್ನು ಬಹಳ ಚೆನ್ನಾಗಿ ಕಾಣುತ್ತಿರುವಾಗ, ಚೈನೀಯರನ್ನು ಭಾರತದಲ್ಲಿ ಬಹಳ ತುಚ್ಛವಾಗಿ ಕಾಣಲಾಗುತ್ತಿದೆಂಬ ಕೂಗನ್ನವರೆಬ್ಬಿಸಿದರು. ಇದೊಂದು ವಿನೋದಪೂರ್ಣ ಮೋಸವಿದೆ. ಶಾಂಘಾಯಿಯನ್ನು ಅವರು ವಶಪಡಿಸಿಕೊಂಡಾಗ ಅಲ್ಲಿ ಸಾಧಾರಣ ಮೂರು ಸಾವಿರ ಭಾರತೀಯರು ಇದ್ದರು. ಅಕ್ರಮಿಸಿಕೊಂಡೊಡನೆ ಅನ್ಯದೇಶೀಯರ ಆಸ್ತಿಪಾಸ್ತಿಗಳನ್ನು ಸರಕಾರ ವಶಪಡಿಸಿಕೊಂಡಿತು. ಕ್ರೈಸ್ತಿಯನ್ ಮತ ಪ್ರಸಾರ ಕರ ಆಸ್ತಿ, ನಿಧಿ ಮುಂತಾದುವುಗಳನ್ನೆಲ್ಲಾ ವಶಪಡಿಸಿಕೊಂಡು ಅವರನ್ನ ಕಾರಾಗೃಹಕ್ಕೆ ಅಟ್ಟಲಾಯಿತು.

೧೯೪೯ರ ನಂತರ ಭಾರತೀಯರಿಗೆ ಚೈನಾವಾಸವೆಂದರೆ ನರಕವಾಸ ಆಗುತ್ತ ಬಂತು. ಧನಿಕರು ಹಾಗೂ ದೊಡ್ಡ ವ್ಯಾಪಾರಿಗಳು ಆಗಲೇ ಚೈನಾದಿಂದ ಬೇರೆ ದೇಶಕ್ಕೆ ಹೋಗಿಬಿಟ್ಟಿದ್ದರು. ಬೇರೆ ದೇಶಗಳಲ್ಲಿ ಯಾರೂ ಇಲ್ಲದವರು, ಅನೇಕಾನೇಕ ವರ್ಷಗಳಿಂದ ಅಲ್ಲಿಯೇ ಚೈನೀಕರಣವಾಗಿದ್ದವರು ಹಾಗೂ ಚಿಕ್ಕ ಪುಟ್ಟ ವ್ಯಾಪಾರಿಗಳು ಅಲ್ಲೇ ಹಿಂದುಳಿಯಬೇಕಾಯಿತು. ಅವರಲ್ಲಿ ಕೆಲವರು ಹಾಲು ಮಾರಿಕೊಂಡು ಜೀವನ ನಡೆಸುತ್ತಿದ್ದರು. ಇದಕ್ಕೆಲ್ಲದ ಕ್ಕೂ ಕಡೆಯೂಗಿ ಕಮ್ಯೂನಿಸ್ಟ್ ಸರಕಾರ ಅಸ್ತಿತ್ವಕ್ಕೆ ಬಂತು. ಹೆಜ್ಜೆ ಹೆಜ್ಜೆಗೂ ಅವರು ಕಮ್ಯೂನಿಸ್ಟ್ ಅಧಿಕಾರದ ಕಡೆತಡೆಗೆ ಕಿವಿ ಕೊಡಬೇಕಾಗುತ್ತಿತ್ತು.

ಪರಿಸ್ಥಿತಿ ಇಷ್ಟು ಹದಗೆಟ್ಟಿದ್ದಾಗಲೂ ರಷ್ಯಾದಿಂದ ಬಂದಿದ್ದ ಯಂತ್ರತಜ್ಞರು ಸಂತೋಷದಿಂದಲೆ ಜೀವನ ನಡೆಸಿಕೊಂಡಿದ್ದರು ಚೈನಾದ ಯಂತ್ರತಜ್ಞನಿಗೆ ಎಪ್ಪತ್ತು ಯೊನ್ ಕೊಡಲಾಗುತ್ತಿದ್ದ ಉದ್ಯೋಗದೆನೇ ರಷ್ಯಾದವನಿಗೆ ಸುಮಾರು ಯೊನ್ ಕೊಡಲಾಗುತ್ತಿತ್ತು. ಬರಬರುತ್ತ ಚೈನೀಯರ ಬೇರಿಟ ಬಹಳ ಜಾಸ್ತಿಯಾದುದರಿಂದ ಚೈನಾ ಸರಕಾರ ರಷ್ಯನ್ ತಜ್ಞರಿಗೆ ಸಂಬಳ ಕೊಡುವದನ್ನು ನಿಲ್ಲಿಸಿಬಿಟ್ಟಿತು. ಅವರಿಗೆ ರಷ್ಯಾ ಸರಕಾರವೇ ಸಂಬಳ ಕೊಡಲಾರಂಭಿಸಿತು.

ರಷ್ಯಾದವರಿಗೆ ಈ ರೀತಿ ವಿಶೇಷ ಸವಲತ್ತುಗಳನ್ನು ಕೊಡಲಾಗ ತ್ತಿದ್ದುದರಿಂದ ಇತರ ಅನ್ಯ ದೇಶದವರಿಗೂ ಸ್ವಲ್ಪವಾದರೂ ಸವಲತ್ತುಗಳನ್ನಿತ್ತಿಡಬೇಕಾಗಿತ್ತು. ಆದರೆ ಅದನ್ನು ಅವರು ಸಹಿಸಿಕೊಳ್ಳಲು ಸಿದ್ಧರಿರಲಿಲ್ಲ. ಆದಕ್ಕಾಗಿ ಒಂದು ಹೊಸ ಉಪಾಯವನ್ನು ಕಂಡುಹಿಡಿದರು, ಅದಕ್ಕಾಗಿ ಅನೇಕ ಅಂಗನೆಯರನ್ನು ಉಪಯೋಗಿಸಿಕೊಳ್ಳಲಾಯಿತು. ಈ ಅನ್ಯ ದೇಶೀಯರ ಬಳಿ ಆ ತರುಣಿಯರು ಬಾದು ನೊರೆ ಇಟ್ಟು ತಮ್ಮನ್ನು ಕಾಪಾಡುವಂತೆ ಕೇಳಿಕೊಳ್ಳುತ್ತಿದ್ದರು. ಮನ ಕರಗಿ ಹಾಗೂ ಮೂಂಸದಾಸೆಯಿಂದ ಸದೇಶೀಯರು ಒಪ್ಪಿದಲ್ಲಿ ತೀರಿತು—ಅವರು ತಮ್ಮ ಸಹಧರ್ಮಿಣಿಯನ್ನೇ ಕಟ್ಟಿಕೊಂಡುತಾಗುತ್ತಿತ್ತು. ಅವರ ಬಳಿಗೆ ಬಂದದ್ದು ಅಂಗನೆಯರಲ್ಲಿ ಅಗ್ರಿ; ಸ್ತ್ರೀಯಲ್ಲ ಅವರ ಇತಿಶ್ರೀ. ಅವರ ಹಿಂದುಗಡೆಯೆ ಕಮ್ಯೂನಿಸ್ಟ್ ಅಧಿಕಾರಿಗಳು ಬಂದು ಅವರನ್ನು ಚೈದುಮಾಡಿಕೊಂಡು, ಯೋಗುತ್ತಾರೆ ಚೈನೀಸ್ತ್ರೀಯ ಸತೀತ್ವದ ನಾಶದ ಆರೋಪದ ಮೇಲೆ ಅವರ ಆಸ್ತಿಪಾಸ್ತಿಗಳನ್ನು ಸರಕಾರವು ಸೆಳೆದುಕೊಳ್ಳುತ್ತಿತ್ತು; ಅವರನು ಚೈನಾದಿಂದ ಹೊರಗಟ್ಟಲಾಗುತ್ತಿತ್ತು. ಹೀಗೆ ಅನೇಕ ಮಂದಿ ಆಸ್ತಿಪಾಸ್ತಿಯೆಲ್ಲವನ್ನು ಕಳೆದು ಕೊಂಡಿದ್ದುವರು.

ಆಗ ಚೈನಾ ಭಾರತದ ಮೇಲೆ ಆಕ್ರಮಣ ನಡೆಸಿದೆ ಇದ್ದುದರಿಂದ ಅಲ್ಲಿ ಭಾರತೀಯರಿಗೆ ಸ್ವಲ್ಪ ಸವಲತ್ತುಗಳು ಸಿಗುತ್ತಿದ್ದವು ಆಗ ಭಾರತೀಯರಿಗೆ ಅಲ್ಲಿ ಉದ್ಯೋಗ ದೊರಕುತ್ತಿತ್ತು. ಅವರಲ್ಲಿ ಅನೇಕರು ಹಾಲು ಮಾರಿಕೊಂಡಿದ್ದರು. ೧೯೫೨ರ ಕಾನೂನಿನ ಪ್ರಕಾರ ಅವರಿಗೆ ಹಾಲು ಹಾಗೂ ದನಗಳನ್ನು ಮಾರುವ ಅಧಿಕಾರ ತಪ್ಪಿಸಲಾಯಿತು. ದನಗಳಿದ್ದವರು ದಂಡ ತೆರಬೇಕಾಗುತ್ತಿತ್ತು, ದಂಡತೊಡಲು ಜನಕ್ಕಿರಾಗಿದ್ದವರ ದನಗಳನ್ನು ಸರಕಾರ ಸೆಳೆದುಕೊಂಡು ಹೋಗುತ್ತಿತ್ತು.

೧೯೫೯ರಲ್ಲಿ ಸೂರಸಿಂಘ ಎಂಬವನನ್ನು ಚೈನೀಸ್ತ್ರೀಯ ಸತೀತ್ವ ನೂರಿಗೈದ ಆರೋಪದ ಮೇಲೆ ಕಾಂಸ್ಟ್ರಕ್ಷನ್ ಕೆಲಸಕ್ಕೆ ಕಳುಹಿ

(ಉಳಿದ ಮುಂದೆ ನೋಡಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್, ಚಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಿಮ್ಮ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ವಿವೇಚನೆ

ಪ್ರಜಾಪ್ರಭುತ್ವ ಮತ್ತು ಕಮ್ಯೂನಿಸಂ

ಅಮೆರಿಕಲ್ಲೂ ಸ್ವಲ್ಪಂಚಿದ ಇತರ ಕಡೆಗಳಲ್ಲೂ ಇಂದಿನ ದಿನಗಳಲ್ಲಿ ಪ್ರಜಾಸತ್ತೆ ಮಹತ್ವಪೂರ್ಣವಾದ ಒತ್ತಡಕ್ಕೆ ಒಳಗಾಗಿದೆ. ಇಂಥ ಭಾರ ಇದರ ಮೇಲೆ ಹಿಂದೆಂದೂ ಬಿದ್ದಿರಲಿಲ್ಲ.

ಪ್ರಜಾಸತ್ತೆ ಎಂದರೆ ಏನೆಂದು ನಿಶ್ಚಯವಾಗಿ ಹೇಳುವುದು ಸುಲಭವಲ್ಲ. ವೈತ್ತನನ್ನು ಚದರವಾಗಿ ಪರಿವರ್ತಿಸಬೇಕೆಂಬ ಗಣಿತ ಶಾಸ್ತ್ರಜ್ಞರು ಶತಮಾನಗಳ ಪ್ರಯತ್ನದ ನಂತರ ಇದು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಹೇಗೆ ಬಂದರೋ ಪ್ರಜಾಸತ್ತೆಯ ಸೂತ್ರ ರಚಿಸಿಯ ಕೆಲಸವು ಹಾಗೇ ಆಗುತ್ತದೆ. ಇದೇನಿದು ವಿರೋಧಾಭಾಸ ಎಂದು ನೀವು ದಂಡುವಿರಾದರೆ, ಈ ವಿರೋಧಾಭಾಸವನ್ನು ಒಪ್ಪಿಕೊಳ್ಳುವುದರಲ್ಲಿ ಕಲ್ಪನೆಗೂ ಸಾಧ್ಯವಲ್ಲದ ಆಳತೆಗೂ ನಿಕ್ಕಿದ ಮೂಸನ ಸ್ವಭಾವದ ಅಗಾಧ ಪ್ರವೃತ್ತಿಗಳಿಗೆ ಅವಕಾಶ ಕಲ್ಪಿಸುವುದರಲ್ಲಿ ಪ್ರಜಾಸತ್ತೆಯ ಪ್ರಬಲ ಶಕ್ತಿ ಅಡಕವಾಗಿದೆ ಎನ್ನುತ್ತೇನೆ.

ಪ್ರಾಯೋಜಿತ ಕಮ್ಯೂನಿಸ್ಟ್ ಶಕ್ತಿಯ ಒರಟು ಸವಾಲಿನ ಹಾಗೂ ಸರ್ವಭಕ್ಷಕ ಮಹತ್ವಾಕಾಂಕ್ಷೆಯ ಎದುರಿನಲ್ಲಿ, ಈ ವಿರೋಧಾಭಾಸಗಳ ಶಕ್ತಿಯೆಂಬುದು ಕೇವಲ ಒಣ ಸಮಾಧಾನ ಎಂದು ನೀವು ಹೇಳಬಹುದು.

ಕಮ್ಯೂನಿಸಂ ಹಾಗೂ ಪ್ರಜಾಸತ್ತೆಗೆ ಸಂಬಂಧಿಸಿದ ಪ್ರಶ್ನೆಯಲ್ಲಿ ಕೇವಲ ಸರಳವಾದ ಸಾಮರ್ಥ್ಯಕ್ಕೆ ಸಬಂಧಿಸಿದ್ದೇನೋ ಎಂಬಂತೆ ವಾದಿಸುವುದನ್ನು ಕೆಲವೊಮ್ಮೆ ಕೇಳಿದ್ದೇನೆ. ಕಮ್ಯೂನಿಸಮ್ಮಿನ ಉಪ್ಪೇಕ್ಷ ವಿಕೇಯವಾದುದು; ಪ್ರಪಂಚವ್ಯಾಪಕವಾದ ತನ್ನ ದೇಶದ ಜನರನ್ನೆಲ್ಲ ಸನ್ನದ್ಧತೆಗೆ ತರಬಲ್ಲದು; ಬಯಸಿದ ಕಡೆಗೆಲ್ಲ ತರಬೇತಿ ಪಡೆದ ತನ್ನ ಏಜಂಟರನ್ನು ಕಳಿಸಬಲ್ಲದು, ರಹಸ್ಯವಾಗಿ ಜನರನ್ನೂ ಸಂಪನ್ಮೂಲಗಳನ್ನೂ ಶಸ್ತ್ರಾಸ್ತ್ರಗಳ ನಿರ್ಮಾಣಕ್ಕೆ ಹೊಡಬಲ್ಲದು; ವಿರೋಧಿಗಳನ್ನು ಬೆದರಿಸಬಲ್ಲದು; ನಮ್ಮ ಕಡೆಯಲ್ಲಿ ಬಹಿರಂಗವಾಗಿ ನಡೆಯುವ ಚರ್ಚೆಗಳ ಪೂರ್ಣ ಪ್ರಯೋಜನವನ್ನು ಪಡೆದರೂ, ನಮ್ಮ ಸತ್ಯ ಅನರ ಜನರನ್ನು ಕಲುಷದಂತೆ ತಡೆಗಟ್ಟಿ, ಬಂದ ಸುಳ್ಳುಗಳನ್ನು ಅನರಿಗೆ ಹೊಂಚಬಲ್ಲದು. ನಮ್ಮ ಸ್ವತಂತ್ರವೂ ಬಹಿರಂಗವೂ ಆದ ಸಮಾಜದಿಂದ ಪ್ರಯೋಜನ ತಂತ್ರದ ಪಂಥಿಗಳನ್ನು ತನ್ನ ಏಜಂಟರುಗಳ ಮೂಲಕ ಪಡೆದು ತನ್ನ ಕಡೆಯ ವಿಷಯಗಳಿಗೆ ರಹಸ್ಯದ ತೆರೆಯನ್ನು ಹೆಣೆಯಬಲ್ಲದು. ಇದು ಒಂದು ವಾದ.

ಇಷ್ಟೆಲ್ಲ ಅನಾನುಕೂಲತೆಗಳಿರುವಾಗ ಅನ್ಯವಸ್ಥಿತವಾದ ಚರ್ಚೆಗಳಿಂದಲೂ ಉದ್ದೇಶ ಸ್ಪಷ್ಟತೆಯಿಂದಲೂ ಕೂಡಿದ ಪ್ರಜಾಸತ್ತೆ ನಮ್ಮಿಂದ ಭಂಡಲಾಗದಷ್ಟು ದುಬಾರಿಯು ಭೋಗವಸ್ತುವಾಗುತ್ತಿದೆಯೆ? ಚರಿತ್ರೆ ನಿಜವಾಗಿಯೂ ತಮ್ಮ ಪಕ್ಷನಾತಿ ಎಂಬುದಾಗಿ ಬಹು ಅಸಕ್ತಿಯಿಂದ ಕಮ್ಯೂನಿಸ್ಟ್ ನಾಯಕರುಗಳು ಹೇಳುವ ಮಾತು ಪ್ರಾಯಶಃ ನಿಜವೇ?

ಅವೇ ಮಾತುಗಳಲ್ಲಿ—ಅಂದರೆ ಕಮ್ಯೂನಿಸ್ಟರು ಬಯಸುವ ಮಾತುಗಳಲ್ಲಿ—ನೀವು ಪ್ರಶ್ನಿಸುವುದಾದರೆ, ಆ ಪ್ರಶ್ನೆಗೆ ಈಗಾಗಲೆ ಗಳಿಗೆಯಿಂದಲೂ ಚರಿತ್ರೆ ಉತ್ತರವನ್ನು ನೀಡುತ್ತ ಬಂದಿದೆ; "ನಿಜವಲ್ಲ"ಎಂಬುದೇ ಆ ಉತ್ತರ ಎಂಬುದು ನನ್ನ ಭಾವನೆ.

ಭೂಮಿಯು ಮೇಲಿನ ಯಾವ ರಾಷ್ಟ್ರವೂ ಜನಸಮ್ಮತಿಯಿಂದ ಕಮ್ಯೂನಿಸಂ ಅನ್ನು ಆಯ್ದು ನೂಡಿಕೊಂಡಿರುವ ನಿದರ್ಶನ ಇದುವರೆಗೆ ದೊರೆತಿಲ್ಲ. ಕಮ್ಯೂನಿಸಮ್ಮಿನ ಹಬ್ಬುಗೆಯೂ ಗಿರುವ ಕೆಲ ಪ್ರದೇಶಗಳಲ್ಲಿಯೂ—ಜೆಕೊಸ್ಲೊವೇಕಿಯ, ಉತ್ತರ ವಿಯಟ್‌ನಾಂ ಅಥವಾ ಕ್ಯೂಬಾ ಇತ್ಯಾದಿಗಳಲ್ಲಿಯೂ ಅದರ ಮೂಮೂಲು ಪದ್ಧತಿಯಂತೆ ಯುದ್ಧ ಹಾಗೂ ಹಾಳುದ ಕ್ರಾಂತಿಗಳ ಸ್ಫೂರ್ತಿಯಲಿಯಾಗಿ ತನ್ನ ಹತೋಟಿಯನ್ನು ಸ್ಥಾಪಿಸಿಕೊಂಡಿದೆ.

ಕಮ್ಯೂನಿಸಮ್ಮಿನ ಉಬ್ಬರ ಕೂಡ ತಗ್ಗಬಲ್ಲದು ಎಂಬುದನ್ನೂ ನಾವು ನೋಡಿದ್ದೇವೆ: ಯುಗೋಸ್ಲಾವಿಯ ಉದಗ್ರಹದ ಸ್ಥಿತಿಗೆ ಮುಖ್ತಾಯ ಹೇಳಿದೆ; ಪೋಲೆಂಡು ಒಂದು ಮಟ್ಟಿಗೆ ಸ್ವಯಮೂಡಳಿತವನ್ನು ಗಳಿಸಿಕೊಂಡಿದೆ; ವಿಷ್ಯಾಹಾಗೂ ಅಲ್ಬೇನಿಯ ಒಂದಕ್ಕಿಂತ ಹೆಚ್ಚು ರಾಷ್ಟ್ರಗಳು ಕಮ್ಯೂನಿಸ್ಟ್ ರಾಯಭಾರಿಗಳನ್ನು ಅವರ ವರ ಏಜೆಂಟರುಗಳೊಡನೆ ಸ್ವದೇಶಗಳಿಗೆ ಹಿಂದಿರುಗುವಂತೆ ಕೇಳಿಕೊಂಡಿವೆ.

ಆಂದರೆ, ಕಮ್ಯೂನಿಸ್ಟ್ ವಾಕ್ಸರಣಿಯ ದೃಷ್ಟಿಯಿಂದ ಕೂಡ, ಪ್ರಪಂಚದ ಎರಡು "ವ್ಯವಸ್ಥೆಗಳ ನಡುವಿನ ಹೋರಾಟದಲ್ಲಿ, ಕೇವಲ ಸಾಮರ್ಥ್ಯವೊಂದನ್ನೇ ಗಣನೆಗೆ ಎತ್ತಿಕೊಂಡಾಗಲೂ, ಅಂಕಗಳೆಲ್ಲ ಒಂದೇ ಪಕ್ಷಕ್ಕೆ ಲಭ್ಯರುತ್ತಿವೆ ಎಂದೇನೂ ಹೇಳುವಂತಿಲ್ಲ. ಕಮ್ಯೂನಿಸ್ಟ್ ವಿಜಯದ ಭರವಸೆಯು ದಿನ ನುಂದು ನುಂದಕ್ಕೆ ತಳ್ಳಲ್ಪಡುತ್ತಿದೆ. ಕಮ್ಯೂನಿಸ್ಟ್ ರ ಧ ಉರುಳುತ್ತಿಲ್ಲ. ಪ್ರಜಾಸತ್ತೆ ನಾವು ಹೆದರುವಷ್ಟು ಕೇಳಾಗಿಲ್ಲ ಅಥವಾ ಕಮ್ಯೂನಿಸಂ ಹೇಳಿಕೊಳ್ಳುವಷ್ಟು ಸಮರ್ಥವಾಗಿಲ್ಲ. ಇದಿಷ್ಟೂ ವಾದದ ಒಂದು ಮುಖ. ಸಾಮರ್ಥ್ಯವನ್ನು ಕುರಿತ ಪ್ರಶ್ನೆಯು ತಳದಲ್ಲಿ ಮತ್ತೊಂದು ಮಹತ್ವರವಾದ ಆಳವಾದ ಪ್ರಶ್ನೆಯಿದೆ: ಈ ಸಾಮರ್ಥ್ಯ ಏತಕ್ಕೆ? ಅವರ ಉದ್ದೇಶ ಯಾವುದು—ನಮ್ಮ ಉದ್ದೇಶ ಯಾವುದು?

ಸರ್ವಾಧಿಕಾರಿಷ್ಟಾಹಿ ಸರಕಾರ ವಸ್ತುತಃ ಒಂದು ರೀತಿಯ ಯುದ್ಧ ಯುಂತ್ರವೇ ಆದುದರಿಂದ-ತೀತ ಅಥವಾ ಬಿಸಿಯಾಯವ ಯುದ್ಧವನ್ನೇ ಆಗಲಿ ಸಮರ್ಥವಾಗಿ ನಿರ್ವಹಿಸುವಂತೆ ತೋರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಎಲ್ಲ ಕೃತ್ಯಗಳಲ್ಲೂ ಬಲಶಾಲಿ ಗೂಡವನದೇ ನ್ಯಾಯ; ಅಧಿಕಾರದ ವಿನ್ಯಾಸವೇ ಅದರ ವಿವೇಕಾಂಗ ನೀತಿಯ ಪ್ರಧಾನ ಸೂತ್ರ.

ಪ್ರಜಾಸತ್ತೆಯ ಗುಣಗಳು ಇದಕ್ಕಿಂತ ಭಿನ್ನವಾದವು. "ಗುಲಾಮನಾಗುವ ಇಚ್ಛೆಯಿಲ್ಲದ ನಾನು ಯಜಮಾನನೂ ಆಗಲಾರೆ" ಎಂಬುದು ಪ್ರಜಾಸತ್ತೆಯ ವಿಷಯದಲ್ಲಿ ಅಬ್ರಹಂ ಲಿಂಕನ್ನನಿಗಿದ್ದ ಭಾವನೆ.

ನಮಗೆ ಯಾರ ಮೇಲಿನ ಅಧಿಕಾರವೂ ಯಾವುದೂ ಬೇಕಾಗಿಲ್ಲ. ಈ ಮಾತು ಖಚಿತವೆಂದುದು. ಯಾರೇ ಸನ್ನು ಗುಲಾಮಗಿರಿಗೆ ಇಳಿಸುವುದು ಮೂರ್ಖಲ್ ಯೋಜನೆಯ ಉದ್ದೇಶ ಎಂಬುದಾಗಿ ಮಾಸ್ಕೋ ಹೇಳಿತು. ಆದರೆ ಯಾರೋಪನ್ನ ತನ್ನ ಕಾಲ ಮೇಲೆ ನಿಲ್ಲುವಂತೆ ಮಾಡುವುದೂ ಅದರ ಸ್ವಾತಂತ್ರ್ಯವನ್ನು ಉದ್ಧರಿಸುವುದೂ ಆ ಯೋಜನೆಯ ಗುರಿಯಾಗಿತ್ತು. ಯೋಜನೆಯ ಈ ಲಕ್ಷಣವೇ ಅದರ ಅಗ್ಗಳಿಕೆ. ಉದಯೋನ್ಮುಖ ರಾಷ್ಟ್ರಗಳ ವಿಷಯದಲ್ಲಿಯೂ ಮೂಲಭೂತವಾಗಿ ನಾವು ಅದೇ ಗುರಿಯನ್ನು ಹೊಂದಿದ್ದೇವೆ. ಅಧಿಕಾರಕ್ಕಾಗಿ ನಾವು ಶ್ರಮಿಸಿತ್ತಿಲ್ಲ; ನಮ್ಮ ದೇಶಗಳಲ್ಲಿ ಹೊರ ರಾಷ್ಟ್ರಗಳೊಡನೆ ಸಮುದಾಯದ ಕಲ್ಪನೆಗಾಗಿ ನಾವು ದುಡಿಯುತ್ತೇವೆ. ವೈವಿಧ್ಯದ ಸಂಪತ್ತು, ಪರಸ್ಪರ ಸಹಿಷ್ಣುತೆ—ಈ ಲಕ್ಷಣಗಳನ್ನು ಹೊರಜಿಲ್ಲುವ ಸಮುದಾಯ ಸ್ವಾತಂತ್ರ್ಯಕ್ಕೆ ಸೂಕ್ತವಾದ ಆವರಣ.

ಈ ರೀತಿ ಗುರಿಗಳ ವಿಷಯದಲ್ಲಿ ಮೂಲಭೂತವಾದ ಭೇದಗಳಿರುವಾಗ ಸಾಮರ್ಥ್ಯದ ಪರಿಭಾಷೆಯಲ್ಲಿ ಕಮ್ಯೂನಿಸಂ ಹಾಗೂ ಪ್ರಜಾಸತ್ತೆ ಗಳನ್ನು ಪರಸ್ಪರವಾಗಿ ತುಲನಿಸಿಹೋಡುವುದಾದರೂ ಹೇಗೆ? ಅಂದರೆ ವಾದ್ಯ ಮೇಳಕ್ಕಿಂತ ರೈಲ್ವೆ ಎಂಜಿನ್ನು ಹೆಚ್ಚು ಸಮರ್ಥವೇ ಎಂಬುದಾಗಿ ಕೇಳಿದ ಹಾಗಾಗುತ್ತದೆ.

ನಮ್ಮ ಗುರಿಗಳು ನ್ಯಾಯಬದ್ಧವೆಂದವು. ಈ ಮಾತುಗಳನ್ನು ನಾನು ಹೇಳುತ್ತೇನೆ; ಅವ್ಯೇ ಅಲ್ಲ, ಅವನ್ನು ಹೃತ್ಪೂರ್ವಕವಾಗಿ ನಂಬಿದ್ದೇನೆ ತನ್ನನ್ನು ಹಿಂಡಿದೆಳೆವ ಅಥವಾ ಒಳಗಳೆದುಕೊಳ್ಳಲು ಯತ್ನಿಸುವ ಶಾಸ್ತ್ರಾಂಧತೆಯನ್ನೂ ಸಿದ್ಧಾಂತವನ್ನೂ ಸಿರಂತರವಾಗಿ ಎದಿರಿಸಿ ತಡೆಗಟ್ಟುತ್ತ ಹೋಗುವ ನ ನವನ ಮನಸ್ಸು ಹಾಗೂ ಅಶ್ಯಗಳ ಊಹಾತೀತ ಆಳವನ್ನು ಪ್ರಜಾಸತ್ತೆ ಗಮನಿಸುತ್ತದೆ. ಆದರೆ ಕಮ್ಯೂನಿಸಂ ಅದನ್ನು ಸಂಪೂರ್ಣವಾಗಿ ಅಲಕ್ಷಿಸುವಂತೆ ತೋರುತ್ತದೆ.

ಇದು ವಿನಯದ ವಿವೇಕ; ಇದು ಪ್ರಜಾಸತ್ತೆಯ ಭವ್ಯತೆಗಳಲ್ಲಿ ಒಂದು. ಇದನ್ನು ಒಣ ಹೆಮ್ಮೆಯ ಸರ್ವಾಧಿಕಾರಿಷ್ಟಾಹಿ ಮನಸ್ಸು ಪಡೆಯಲಾರದು ಯಾವ ಮಹತ್ತರವಾದ ತತ್ವಗಳು ನಿಮ್ಮ ತೀರ್ಮಾನಗಳಿಗೆ ಮಾರ್ಗದರ್ಶಕಗಳಾಗಿವೆ ಎಂಬುದಾಗಿ ನ್ಯಾಯ-ಧೀಶ ನೆಂಡರಿ ಹೋವನ್ನು ಅವರನ್ನು ಒಮ್ಮೆ ಕೇಳಿದಾಗ "ನಾನು ದೇವರಲ್ಲ ಎಂಬುದನ್ನು ಕಂದುಕೊಳ್ಳಲು ಎಪ್ಪತ್ತು ವರ್ಷಗಳನ್ನು ಕಳೆದಿದ್ದೇನೆ" ಎಂಬುದಾಗಿ ಉತ್ತರಿಸಿದರು.

ಚರಿತ್ರೆಯ ಉಬ್ಬರವಿಳಿತಗಳ. ಪ್ರಪಂಚವನ್ನು ಇಂದು ಅವ್ಯವಸ್ಥಿತಗೊಳಿಸಿರುವ ಶಕ್ತಿಗಳ ಸಂಯೋಗಕ್ಕೆ ತಂದು ನಿಲ್ಲಿಸಿವೆ ಉಪ್ಪವಲಯದ ಎಲ್ಲ ಕಡೆಗಳಲ್ಲೂ ವಸಾಹತುಷಾಹಿ ವ್ಯವಸ್ಥೆ ಶೀಘ್ರಗತಿಯಿಂದ ಅಳಿಸಿ ಹೋಗುತ್ತಿದೆ. ನೈಜಿಕ್ತಿಕ ಸ್ವಾ

(ಇನೇ ಪುಟ ನೋಡಿರಿ)

ಲೇ: ಅಡ್ಲಾಯ್ ಸ್ಟೀವನ್ಸನ್
ವಿಶ್ವಸಂಸ್ಥೆಯಲ್ಲಿ ಅಮೆರಿಕೆಯ ಪ್ರತಿನಿಧಿ

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವುದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ —

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಕೊಡುಗೆಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಸ್ವಭಾವತಃ ಕಫಗಳಿಂದಾಗಿ ಉಂಟಾಗುವ ಕಾತರ ನಿವಾರಣೆಗೆ
ಸಮಂಜಸವಾದ ಆಯುರ್ವೇದೀಯ ಮಿಶ್ರಣ
ಟ್ಯೂಬ್ 1ರ ಸಾಮಾನ್ಯ ರೂ. ೫/- ಮಧ್ಯಮ ರೂ. ೬/-
ಉತ್ತಮ ರೂ. ೭/-
P. Devee & Co. (N. J.) Calcutta—40

ದಾಸಕೂಟದ ಮುಕುಟಮಣಿ

ಶ್ರೀ ಜಗನ್ನಾಥ ದಾಸರು

ಶ್ರೀ ಜಗನ್ನಾಥದಾಸರು ಕೃಷ್ಣಮುಖ ದಾಸವರ್ಯರಲ್ಲಿ ಒಬ್ಬರು. ಇವರು 'ಜಗನ್ನಾಥ ವಿಠ್ಠಲ' ಎಂಬ ಅಂಕಿತದಿಂದ ನೂರಾರು ಕೀರ್ತನೆಗಳನ್ನು ಮಾಡಿರುತ್ತಾರೆ 'ಹರಿಕಥಾಮೃತಸಾರ' ಎಂಬ ಉತ್ಕೃಷ್ಟ ಭಕ್ತಿರಸ ಪರಿಪೂರ್ಣವಾದ ಕಾವ್ಯವನ್ನು ರಚಿಸಿದ್ದಾರೆ. ಇವರ ಕೀರ್ತನೆಗಳಲ್ಲಿ ಭಕ್ತಿ ವೈರಾಗ್ಯಗಳು ವ್ಯಕ್ತವಾಗಿರುವುದಲ್ಲದೆ ಅವರ ಜೀವನದ ಕೆಲವಂಶಗಳೂ ವ್ಯಕ್ತವಾಗಿವೆ. ಜಗನ್ನಾಥದಾಸರು ಪೂರ್ವಾಶ್ರಮದ ಹೆಸರು ಶ್ರೀನಿವಾಸ. ಜನ್ಮ ಶಾಲಿವಾಹನ ಶಕದ ೧೬೪೯ನೆಯ ಹೇವಿಳಂಬಿ ಸಂವತ್ಸರದ ಬ್ಯಾಗವಟ್ಟಿ ಎಂಬ ಗ್ರಾಮದಲ್ಲಿ. ಇವರ ತಂದೆ ನರಸಿಂಹದಾಸರು ತಾಯಿ ಲಕ್ಷ್ಮೀದೇವಿ. ಶ್ರೀಪಾದೇಂದ್ರ ಮಠದ ವರದೇಂದ್ರ ಸ್ವಾಮಿಗಳಲ್ಲಿ ಇವರು ಅಧ್ಯಯನ ಮಾಡಿದಂತೆ ತಿಳಿಯುತ್ತದೆ. 'ಕರುಣಿಗಳೊಳಗೆಣೆ ಕಾಣೆನೊ ನಿನಗೆ ನಾ| ದ್ಗುರುವರ ರಾಘವೇಂದ್ರ ||" ಎಂದು ಮುಂತಾಗಿ ರಾಘವೇಂದ್ರ ಸ್ವಾಮಿಗಳ ಸ್ತುತಿ ಮಾಡಿದ್ದಾರೆ.

ಜಗನ್ನಾಥದಾಸರು ಮಧ್ವಸಿದ್ಧಾಂತದಲ್ಲಿ ಪಾಂಡಿತ್ಯ ಪಡೆದು ಶ್ರೇಷ್ಠ ಪುಡಿತರೆಂದು ಹೆಸರಾದರು. ಈ ವಿಷಯಕಾಂದಿಂದ ಆಗಿನ ಕಾಲದ ಶ್ರೇಷ್ಠದಾಸರುಗಳಾದ ವಿಜಯದಾಸ, ಗೋಪಾಲದಾಸ ಮೊದಲಾದವರನ್ನು ನಿಂದಿಸಲಾರಂಭಿಸಿದರು. ಅದರ ಪರಿಣಾಮವಾಗಿ ಅವರಿಗೆ ಕ್ಷಯರೋಗವುಂಟಾಯಿತು; ರೋಗ ಪರಿಹಾರಕ್ಕಾಗಿ ವ್ಯಾಸರಾಯರ ಆಂ ಧನೆಯನ್ನು ಆರಂಭಿಸಿದರು 'ಅಪಮೃತ್ಯು ಪರಿಹರಿಸೊ ಅನಿಲದೇವಾ । ಕೃಪಣ ವತ್ಸಲನೆ ಕಾವರ ಕಾಣೆ ಜಗದೊಳಗೇ' ॥ ಎಂದು ಪ್ರಾರ್ಥಿಸಿದ್ದಾರೆ

ಜಗನ್ನಾಥ ದಾಸರ ಭಕ್ತಿಗೆ ಮೆಚ್ಚಿದ ಅಸಲದೇವರು ಸ್ವಪ್ನದಲ್ಲಿ ಬಂದು, 'ವಿಜಯ ದಾಸರನ್ನು ಸಂದರ್ಶಿಸಿದ್ದರಿಂದ ನಿನಗೆ ಈ ರೋಗವಾಗಿದೆ. ಆದ್ದರಿಂದ ಇವರನ್ನೇ ಶರಣು ಹೋಗು' ಎಂದು ಹೇಳಿದರು. ವಿಜಯ ದಾಸರ ಮಹಿಮೆಯು ತಿಳಿದಾಗ ಜಗನ್ನಾಥ ದಾಸರು ತಮ್ಮ ತಪ್ಪಿಗೆ ಪರಿತಾಪ ಪಟ್ಟರು. ವಿಜಯ ದಾಸರಿಗೆ ಶರಣುಹೋದರು. ವಿಜಯ ದಾಸರು ಇವರನ್ನು ಕ್ಷಮಿಸಿ ಅನುಗ್ರಹಕ್ಕಾಗಿ ಗೋಪಾಲ ದಾಸರ ಕಡೆಗೆ ಕಳಿಸಿದರು ವಿಜಯ ದಾಸರ ದಯಾಗುಣವನ್ನು ಕಂಡ. ಕೂಡಿ ದಾಡಿದ ಜಗನ್ನಾಥ ದಾಸರು, 'ರತುನ ದೊರಕಿತಲ್ಲ ಎನೆಗೆ ದಿವ್ಯರತುನ ದೊರಕಿತ ಪ್ಪಿಯತನವಿಲ್ಲದೆ ವಿಜಯಂರಾಯರಂಬ॥' ಎಂದು ಹಾಡಿದ್ದಾರೆ. ಆಲ್ಲದೆ, 'ಘೋರ ವ್ಯಾಧಿಗಳ ನೋಡಿ ವಿಜಯರಾಯ।ಪೂರಕರುಣವ ಪೂಡಿ। ತೋರಿದರಿವರ ಗುಣವ ರಕರೆಂದ ॥" ಎಂದು ಗೋಪಾಲದಾಸರ ಮೇಲಿನ ಕೀರ್ತನೆಯಲ್ಲಿ ಹೇಳಿದ್ದಾರೆ.

ಗೋಪಾಲ ದಾಸರು ನರಸಿಂಹ ನುತ ಶ್ರೋತ್ರಪಥೇ ವಂಡಿ ಇವರ ರೋಗ ಪರಿಹರಿಸುತ್ತಾರೆ. ದಾಸತ್ವಕ್ಕೆ ಅಂಕಿತ ಬೇಡಲು, ಗೋಪಾಲ ದಾಸರು, 'ನೀವು ಪುಂಡರೀಕಪುರಕ್ಕೆ ಹೋಗಿ ದೇವರ ಕೃಪೆಣಿ ಪೂಡುತ್ತ ನದಿಯಲ್ಲಿ ಸ್ನಾನ ಮಾಡುತ್ತಿರಲು ನಿಮ್ಮ ಅಂಕಿತವು ಕೆತ್ತಲ್ಪಟ್ಟ ಶಿಲಾ ಕಲಶವು ಬರುತ್ತದೆ. ಅದನ್ನು ಸ್ವೀಕರಿಸಿರಿ, ಎಂದು ಹೇಳುತ್ತಾರೆ. ಅದರಂತೆ ಮಾಡಲು ಜಗನ್ನಾಥ ವಿಠ್ಠಲ, ಎಂಬ ಅಂಕಿತವು ಬಂತು. ಅದನ್ನು ಸ್ವೀಕರಿಸಿ ಅದೇ ಪೂರಿನಿಂದ ಕೀರ್ತನೆಗಳನ್ನು ರಚಿಸಲಾರಂಭಿಸಿದರು.

ಜಗನ್ನಾಥ ದಾಸರು ಪಂಡರಪುರಕ್ಕೆ ಹೋಗಲು ಎಳ್ಳುಆತ.ರಿಂದಾಗದ್ದರಿಂದಲೂ ಮಾರುತಿಯ । ಇಂದು ಭಾಗ ನಿಮಿತ್ತ ನೆರನ ನಂಬಿಧಿಯು ॥" ಎಂಬ ಕೀರ್ತನೆಯಿಂದ ವ್ಯಕ್ತವಾಗುತ್ತದೆ. ಅಲ್ಲಿ ಪಂಢರಾಪುರ ದರ್ಶನವಾಗಲು, 'ಕಂಡೆ ಪಂಢರಿರಾಯ ನ ತನ್ನನು । ಕೆಂಡಾಂಡ ಪರ ಪ್ರಿಯನ .....ವಿಠ್ಠಲನ ॥" ಎಂದು ಸ್ತುತಿಸಿದ್ದಾರೆ.

ಸಾಧನಾವಸ್ಥೆಯಲ್ಲಿದ್ದಾಗ ನರಸ್ಸ ಹೊಯ್ದಾಡುತ್ತಿರಲು, 'ಶ್ರೀಪ ಪರಿಯಂ ಕಶಯನ, ವಿಷಯದಭಿ । ಲಾಷೆ ಬಿಡಿಸೆನ್ನಕಾಯೊ॥' ಎಂದು ಪದೇಪದೇ ಪ್ರಾರ್ಥಿಸಿದ್ದಾರೆ ಗತಿಯೊವುಸೆನಗೆ ಶ್ರೀಪತಿಯೆ ಪೇಳೋ। ನತಿಗೆಟ್ಟು ಅನುದಿನವು ಪತಿಯ ಬಯಸುವನೇನೋ॥" ಎಂದು ಕಳವಳಪಟ್ಟಿದ್ದಾರೆ. 'ಪರಾರ್ಥತರ್ಯಾಮಿ ಸಲಹೋಯೆನ್ನ । ದುರ್ವಾರ್ತೆ ಕೇಳಿ ಮನ ಬಿಡದೆ ಚಿಂತಿಸುತಿದೆ॥" ಎಂದು ಮೊರೆಯಿಟ್ಟಿದ್ದಾರೆ. 'ಸಿರಿರಮಣ ತವಚರಣ। ದೊರಕುವದು ಹ್ಯಾಗಿನ್ನು । ಪರಮ ಪಾಪಿಷ್ಠ ನಾನ ॥ ಎಂದು ಪ್ರಾತ್ತಾತ್ತಪಪಟ್ಟಿದ್ದಾರೆ.

ಮನಸ್ಸಿಗೂ ಕೂಡಾ ಬಹಳವಾಗಿ ಉಪದೇಶಮಾಡಿದ್ದಾರೆ. 'ಮನವೆ ಮರೆವರೇನೆ ಹರಿಯ, ಬಹು। ಜನುಮಗಳಲಿ ಪಟ್ಟ ಭವ ಜೋರಿಯ ॥" ಹರನೂತ್ಪನ ದರ್ಶನತ್ತ ಬೇಗವಾಗದಿರಲು, 'ನಿನ್ನಂಘ್ರಿ ದರುಶನದ ತೊಡರೆ, ಹೀಗೆ । ಬನ್ನ ಬಡಿಸುವರೇನೊ ಬಿಡದೆಗೆ' ಎಂದು ಕಳವಳಿಸಿದ್ದಾರೆ. ಪರಮಾತ್ಮನೆ ಸರ್ವತ್ರಾತ್ತಿರವಾಗಲು, 'ಧನ್ಯನಾದೆ ವಿಠ್ಠಲನ ಕಂಡು । ಧನ್ಯನಾದೆ ಕಾಮನ್ನ ಪಿತನ ಲಾ । ವನ್ಯ ಮಾರುತಿಯ ಕಣ್ಣಲಿ ಕಂಡು ॥" ಎಂದೂ 'ಇಂದು ನೋಡಿದೆ ಆನಂದ ತೀರ್ಥ ಮು। ಖೀಂದ್ರ ಸಂದಿತ ಚರಣನ್ನ' ಎಂದೂ ಹಾಡಿದ್ದಾರೆ. ತನ್ನ ಜಾಥನೆಯು ಬಲವಿಂದ ಪರಮಾತ್ಮನನ್ನು ಒಲಿಸಿಕೊಂಡು ರಂಗನೊಲಿದ ದಾಸ'ರೆಂದು ಪ್ರಖ್ಯಾತರಾಗಿದ್ದಾರೆ.

'ನಿಲ್ಲು ಬಾರೆಲೆ ದಯೂಸಿಳೆ । ನಿಲ್ಲು ಜಾರೊ ಕರಿಯಿಲ್ಲ ನಿನಗೆ ಲಕ್ಷ್ಯವೇ । ಪಲ್ಲಿಭ ಮನ್ಮನದಲ್ಲಿ ಬಿಡದೆ ಬಂದು ॥" ಎಂದು ಪ್ರಾರ್ಥಿಸಿದ್ದಾರೆ 'ಯಾತಂಬನನಾನ್ಯ ಇಂದಿರೇಶ । ಪೇ ೀತಾಪ್ಯಯ ನಿನ್ನ ಧೀನವೀ ಜಗನ್ನೆಲ್ಲ ॥' ಎಂದು ಎಲ್ಲವೂ ಪರಮಾತ್ಮನ ಆಧೀನವೆಂದರಿತು ಸರ್ವಸವನ್ನೂ ಆತನಿಗೆ ಅರ್ಪಿಸಿ ಆತನ ದಾಸರಾಗಿದ್ದಾರೆ 'ದಾಸೋಹಂ ಕರದಾಸೋಹಂ' ಎಂದು ಕೊಂಡಿದ್ದಾರೆ.

ಹೀಗೆ ಪರಮಾತ್ಮನ ದರ್ಶನ ಪಡೆದು, ಆತನ ದಾಸನಾಗಿ ಪೂರ್ಣಾತ್ಪಕ್ಕೇರಿದಾಗ ಹರಿಯು ಪೂಜೆ ಚತಿ ಸುಲಭವೆನಿಸಿದೆ. 'ಅರಿತವರಿಗತಿ ಸುಲಭ ಕರಿಯು ಪೂಜೆ।, ಎಂದು ಸಾರಿದ್ದಾರೆ 'ಜಗದಾತ್ಮಕ್ಕೆನ್ನಸ್ಸ ಚಿಂತಿಸುದ ಒಧರು । ಭಗವಂತನೆಂಬ ಅಗಸದಲ್ಲಿ ಪರಿಮಿದ ॥, ಎಂದು ಜರನ್ನು ಕೇಳಿದ್ದಾರೆ. 'ಪೀಜನಪ್ಪಿನೆ ಜವನು ನೀಚಸಲ್ಲನೆ ! ಕೀಚಕಾರಿ ಪ್ರಿಯನ ಗುಣವ ॥ ಯೋಚಿಸದಲಿಪ್ಪನಂದು' ಎಂದು ದುರ್ಜನರಿಗೆ ಭೀಪುರಿ ಹಾಕಿದ್ದಾರೆ. ಇನ್ನೇಕ ಉಪದೇಶ ಪರ ಕೀರ್ತನೆಗಳನ್ನು ರಚಿಸಿ ಜನರನ್ನು ಸನ್ಮಾರ್ಗಕ್ಕೆ ಹೆಚ್ಚಲು ಪ್ರಯತ್ನಿಸಿದ್ದಾರೆ

ತಂಥ ಮಹಾ ವ್ಯಕ್ತಿನುರಾದ ನುತ್ತು ಲೋಕ-ಕಲ್ಯಾಣಕ್ಕಾಗಿ ತನ್ನ ದೇಹವನ್ನೇ ತೆತ್ತು ದಾಸ ಸರ್ವೋತ್ತಮರ ಕೀರ್ತನೆಗಳ ಮನನ ಚಿಂತನಗಳಿಂದ ಅವರ ತತ್ವಗಳನ್ನು ಅಚರಣೆಯಲ್ಲಿ ತಾದದ್ದಾದರೆ ಭೂಮಿಯೆ ವೈಕುಂಠವಾಗಿ ಪರಿಣಮಿಸಬಹುದು. ಅನ್ನರಿಂದೆ ಕರ್ನಾಟಕದಲ್ಲಿ ಮತ್ತೊಮ್ಮೆ ಜಗನ್ನಾಥದಾಸರ ಕೀರ್ತನೆಗಳ ಮನನ ಚಿಂತನಗಳು ನಡೆದು ಕರ್ನಾಟಕವು ಭೂವೈಕುಂಠವಾಗಲೆಂದು ಹಾರೈಸುವಾ.

—ವಿಗಂಬರ ಜೋಶಿ, ಬೆಳಗಾವಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ.
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಪವೈದ್ಯ

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಪಿ.ಎಮ್. ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಕೆರಿಗೆ ವಿಧಾನ ಸನಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಮೃತ ಬಿಂದು

ಪ್ರೇಮಿಸಿದಾಗ ಎಲೆ ಹೂವಾಗುತ್ತದೆ: ಆಗಾಧಿಸಿದಾಗ ಹೂತ್ತಿ ಹಣ್ಣಾಗುತ್ತದೆ.

ಂ ಂ

ಭಗವಂತನೆ ಅನೋಳಿ ಶಕ್ತಿ ಭಯಂಕರ ಬಿರುಗಾಳಿಯಲ್ಲಿಲ್ಲ; ಬದಲು ಕಣ್ಣಿಗೆ ಕಾಣದ ಅದರಿ ಜೀವತುಂಬಿನ ಮೃದು ತಂಗಾಳಿಯಲ್ಲಿದೆ!

ಂ ಂ

ಹೊಸಿನ ಎಳೆಗಳನ್ನು ಕೆಕ್ಕು ತೆಗೆದು ಕೊಳ್ಳುವದರಿಂದ ಹಳಿನ ಸೌಂದರ್ಯ ಕರಗತವಾಗದು.

ಂ ಂ

ಉಜ್ವಲ ಸೂರ್ಯನು ಅಸ್ತವಾನನಾಗಿ ಬಿಟ್ಟ ಮಹಾ ಜವಾಬ್ದಾರಿಯನ್ನು ಮಣ್ಣಿನ ಹೊತೆ ತೆಗೆದುಕೊಂಡು ತನ್ನ ಶಕ್ತಿಗೆ ತಕ್ಕಂತೆ ನಿರ್ವಹಿಸುತ್ತದೆ.

ಂ ಂ

ತೆಂದರೆ ತೊಡರುಗಳ ಶಂಕೆಯನ್ನಿಯೇ, ತಿಸ್ತು, ಸಭ್ಯತೆಗಳ ವಿದ್ಯೆ ದೊರೆಯುತ್ತದೆ.

ಂ ಂ

ತನ್ನ ಮೆಚ್ಚಿಕೆಯಂತೆ ಊಟ ಮಾಡಬೇಕು, ಇತರರ ಮೆಚ್ಚಿಕೆಯಂತೆ ಬಟ್ಟೆ ಧರಿಸಬೇಕು.

ಂ ಂ

ಸುಂದರಿಯೂದ ಹೆಂಗಸು ಒಂದು ರತ್ನವಾದರೆ ಗುಣವಂತೆ ಮಾದ ಹೆಂಗಸು ಒಂದು ನಿಧಿಯಂತೆ!

ಂ ಂ

ಚಂದ್ರನು ತನ್ನ ಬೆಳಕನ್ನು ಬೇರೆಯವರ ಉಪಯೋಗಕ್ಕಾಗಿ ಚೆಲ್ಲಿ ತನ್ನ ಕರ್ಪನ್ನು ತನಗಾಗಿ ಇಟ್ಟುಕೊಳ್ಳುತ್ತಾನೆ!

ಂ ಂ

ವೈತನು ಪ್ರಕೃತಿಯ ಮಗು. ಪ್ರಕೃತಿಯನ್ನು ನೋಡಿಯೇ ಅತನ ಕಾರ್ಯ. ಅದರಿಂದಲೇ ಪ್ರಕೃತಿಯಂತೆಯೇ ಅವನು ಸಹನಾಶೀಲ

ಂ ಂ

ಜಗತ್ಪ್ರಸಿದ್ಧರಿಗೆ, "ಘೇತನ" ಅವಕ್ಕೆ ನೂಗುದಾರೆ ಹಾಕಿ ತನ್ನಿಚ್ಛೆಯಂತೆ ನಡೆಸುವುದು.

ಂ ಂ

ಎಂಥ ಉತ್ತಮ ಮನುಷ್ಯನಾದರೂ ತನ್ನ ವಿಧಿಯನ್ನು ವಿಂಗಲಿಸಲಾರ. ಉತ್ತಮನಿಗೆ ಉತಿಮ ಬೇಗ, ಕೆಟ್ಟವನಿಗೆ ನೋಡಿದೆಡೆ ಭೋಗ.

ಂ ಂ

ಬಟ್ಟೆಮಾರು ಮಾಡುವ ಕಪ್ಪುಗಳು ಬುದ್ಧಿವಂತರಿಗಳಿಗೆ ತೃಪ್ತಿಯನ್ನೀಯುತ್ತವೆ.

ಂ ಂ

ದೇವರಿಗೆ ನಾವು ಮೆದರುವಂತೆ ಜೀವಿಸಿದರೆ ಮನುಷ್ಯರಿಗೆ ನಾವು ಹೆದರಬೇಕಾದ ಅಗತ್ಯವಿರವದಿಲ್ಲ.

ಂ ಂ

ಅಜ್ಞಾನವೆ ಭಯಕ್ಕೆ ಕಾರಣ ಭಯವೇ ದೇವರ ಕಲ್ಪನೆಗೆ ಕಾರಣ.

ಂ ಂ

ಬಟ್ಟೆ ಭಗ್ನವಾಡುವ ಭಯಂಕರ ಜ್ವಲನಕಿಂತ ಬೆಳಗಿ ಬೆಚ್ಚಗಿತವ ಚಿಕ್ಕ ಬೆಂಕಿ ಉತ್ತಮ.

NAVAYUGA
Kannada Weekly
UDIPI
Founder
Late Sri A. B Shetty
Former Minister for Public Health, Govt of Madras & Govt of Mysore.

ನವಯುಗ

"ವರುಷ" ೪ನೆ | "ಉಡುಪಿ" ೨೦-೬-೧೯೬೩ | "ವಾರ" ೪೧

'ಯುದ್ಧವಿಲ್ಲ' ಸೂಚನೆ

ಎಂದೆಂದಿಗೂ ಭಾರತದಲ್ಲಿ ಸೇಪಡೆಗೊಂಡಿರುವ ಕಾಶ್ಮೀರದ ಬಗ್ಗೆ ಪಾಕಿಸ್ತಾನವು ತನ್ನ ಬೇಡಿಕೆಯನ್ನು ಅಗ್ರಹಪೂರ್ವಕವಾಗಿ ಮುಂದಿಟ್ಟು ಸಮಸ್ಯೆಯನ್ನು ಹುಟ್ಟಿಸಿ, ಅದನ್ನು ನಿರಂತರವಾಗಿ ಜೀವಂತವಾಗಿರಿಸುತ್ತಾ ಬರುತ್ತಿರುವುದು ಭಾರತಕ್ಕೆ ಮಾತ್ರವಲ್ಲ, ಪ್ರಪಂಚದ ಇತರ ಬುದ್ಧಿವಂತ ರಾಷ್ಟ್ರಗಳಿಗೂ ಬೇಸರವನ್ನುಂಟು ಮಾಡಿದೆ. ಕಾಶ್ಮೀರದ ಮೇಲಿನ ತನ್ನ ಆನ್ಯಾಯದ ನೀತಿಯನ್ನು ಪಾಕಿಸ್ತಾನವು ಮತ್ತಷ್ಟು ಮುಂದುವರಿಸುತ್ತಲೇ ಇರುವುದರಿಂದ ಬಾರತದ ಕಠಿನ ಪರಿಸ್ಥಿತಿಯ ದುರುಪಯೋಗವನ್ನು ಮಾಡಿಕೊಂಡು ಅದು ಪಾಶ್ಚಾತ್ಯರಿಗೂ ಶರಣುಹೋಗುವಷ್ಟು ಮತ್ತು ಭಾರತ—ಪಾಕಿಸ್ತಾನ ನೇರ ಮಾತುಕತೆಯು ಅರು ಸುತ್ತುಗಳನ್ನು ನಡೆಸುವಷ್ಟು ಮುಂದಾಯಿತು. ಆದರೆ, ಇಂತಹ ಒತ್ತಾಯದ ಮಾತುಕತೆಗಳಿಂದ ಸಮಸ್ಯೆಯು ಪರಿಹಾರಗೊಳ್ಳಲಿಲ್ಲ, ಹೆಜ್ಜೇನು, ಉಪಯುತರೂಂ ಸಮಾಧಾನಚಿತ್ತದಿಂದಿರುವಂತಹ ಶಾಂತ ವಾತಾವರಣವಾದರೂ ನಿರ್ಮಾಣಗೊಳ್ಳಲಿಲ್ಲ ಆದರೆ, ಮೂಲಿಕತೆಯ ಪರಿಣಾಮವಾಗಿ ಪಾಕಿಸ್ತಾನದ ದುರ್ನೀತಿ, ದುರಾಡಳಿತಗಳ ವೇಲೆ ಸಾರ್ವಕ್ಕು ಬೆಳಕು ಬಿದ್ದು, ಅದು ಪಾಶ್ಚಾತ್ಯ ಮಿತ್ರರಾಷ್ಟ್ರಗಳಿಗೆ ಗೋಚರವಾಯಿತು. ದಂಡಿನಾಡಳಿತೆಯ ಅಧ್ಯಕ್ಷ ದಂಡಪತಿ ತಯ್ಯೂಬಖಾನರ ನಿಜಬಣ್ಣ ಬದಲಾಯಿತು ಬೇಸಿಯ ಆಕ್ರಮಣದಿಂದ ಭಾರತವು ಮಾಡಿಕೊಳ್ಳಬೇಕಾದ ಆತ್ಮರಕ್ಷಣೆಯ ಪ್ರಶ್ನೆಯನ್ನೂ ಅದಕ್ಕಾಗಿ ಪಾಶ್ಚಾತ್ಯ ಮಿತ್ರರು ನೀಡುವ ಸೈನಿಕ ಸಹಾಯವನ್ನೂ ವಿಕಗಂಟಿನಿಂದ ಬಿಗಿದು, ಭಾರತವನ್ನು ಎಸಿಯಾಖಂಡಗೆ ಕಸಲು ಅವರು ಹೂಡಿದ ಸಂಚು ಇದೀಗ ಸಂಪೂರ್ಣ ನೈರ್ಮಲ್ಯಗೊಂಡಿದೆ ಇದಕ್ಕೆ ಪ್ರಬಲ ನಿದರ್ಶನವನ್ನೆ ಬೇಕು

ಪ್ರಧಾನಿ ನೆಹರುರವರು ಇತ್ತೀಚೆಗೆ ಪಾಕಿಸ್ತಾನ ಸಂಬಂಧದಲ್ಲಿ ನೀಡಿದ ಹೇಳಿಕೆಯು ಭಾರತದ ನಿಜಾಂತರಂಗವನ್ನು ಸ್ಪಷ್ಟಪಡಿಸಿಬಿಸುತ್ತದೆ ಉಭಯ ದೇಶಗಳ ನಡುವೆ ಇರುವ ಸಮಸ್ಯೆಗಳೆಲ್ಲವೂ ಶಾಂತ ವಿಧಾನಗಳಿಂದಲೇ ಬಗೆ ಹರಿಯಬೇಕು—ಎಂಬುದು ಭಾರತದಲ್ಲಿನ್ನೆಲ್ಲ ಇದಕ್ಕಾಗಿ ನಿಷ್ಪಕ್ಷ ಮಧ್ಯಸ್ಥಿಕೆಯ ಪ್ರಶ್ನೆಯೂ ಏಳುವುದಾದರೆ, ಭಾರತವು ಅದಕ್ಕೆ ಸಿದ್ಧವಾಗುವುದು ಪಾಕಿಸ್ತಾನದ ಒಂದು ವರ್ಷಲನ್ನ ಎಂಬ್ಯಸ್ಥಿಕೆಯ. ಪ್ರಶ್ನೆಯನ್ನು ಸ್ವಾಗತಿಸುತ್ತಲೆ, ಒದು ಕಾಶ್ಮೀರದ ಬಗ್ಗೆ ಮಾತ್ರ ನೀನಿಷ್ಕಪಾಗಿರಬೇಕೆಂದು ಬಾಯಿಸುತ್ತದೆ ಇದನ್ನು ಒಪ್ಪುವುದು ಸಾಧ್ಯವಿಲ್ಲ ಮುಖ್ಯವಾಗಿ ಹೇಳುವುದಾದರೆ, ಯಾವುದೇ ಮಧ್ಯಸ್ಥಿಕೆಯು ಸಲಹೆಯ ಕಂಬಂಧದಲ್ಲಿ ಭಾರತವು ಮೂಲಭೂತ ವಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಆದರೆ, ಸದ್ಯದ ಉತ್ತಾಂತ ವಾತಾವರಣದಲ್ಲಿ ಅದು ನಡೆಯುವುದು ಕಷ್ಟ ಸಾಧ್ಯ, ಅದುದರಿಂದಲೇ ಪಂಪಸ್ಥ ಸಮಯಭಾವದಿಂದಾಗಿ ಈ ವಿಚಾರ ನ್ನು ಎತ್ತುವುದು ಸಾಧ್ಯವಿಲ್ಲದಾಗಿದೆ. ಕೆಂಪು ಮೋರೆಯ ಶತ್ರುಗಳು ಭಾರತದ ಮೇಲೆ ಆಕ್ರಮಣ ಮಾಡಿರುವಾಗ, ಸುತ್ತು ಆದನ್ನು ಮತ್ತಷ್ಟು ಬಿಗಿಗೊಳಿಸುವ ಸರ್ವಸಜ್ಜಿಕೆಗಳನ್ನು ಗೈಯ್ಯತ್ತಿರುವಾಗ, ಅನ್ಯಾಯವಾಗಿ ಭಾರತದ ಶತ್ರುವಿನೊಡನೆ ಸೀಮಾ ಒಡಂಬಡಿಕೆಯನ್ನು ಮಾಡಿಕೊಂಡಿರುವ ಪಾಕಿಸ್ತಾನದೊಡನೆ ಇಂತಹ ಮಧ್ಯಸ್ಥಿಕೆಯ ಪ್ರಶ್ನೆಯನ್ನು ಒಪ್ಪುವುದು ಸರ್ವಥಾ ಅಸಮಂಜಸ. ಇದರ ಮೇಲೆ ಪಾಕಿಸ್ತಾನದ ವಂಸ್ಥರೆಲ್ಲರೂ ಭಾರತದ ಮೇಲೆ, ಅದರ ನಾಯಕ ಮಂಡಿಗಳ ಮೇಲೆ ದ್ವೇಷದ ವಿಷಕಾರುತ್ತಿರುವ ಈ ದುರ್ಧರ ಸಂದರ್ಭದಲ್ಲಿ ಅಂತಹ ಮಾತೆತ್ತುವುದೆಂದರೆ ಅದರಿಂದ ಭಾರತದ ಸಾರ್ವಭೌಮತೆಗೂ ಆಂತರಿಕ ಐಕ್ಯಕ್ಕೂ ಬಾಧಕತರವೊಡ್ಡಿದಂತೆ ಈ ಸತ್ಯ ಸಂಗತಿಯನ್ನು ಅರಿತರಿಕೂ ಭಾರತವು ಮಾರ್ಮಿಕನೆಸಿಸಲಾರದು ಆದುದರಿಂದಲೇ ಇಂತಹ ಇಂತಹ ಸಲಹೆ—ಸೂಚನೆಗಳನ್ನು ಒಪ್ಪಿಕೊಳ್ಳಲಾರದು, ಬಾರದು ಕೂಡ.

ಭಾರತವು ಸ್ವರಕ್ಷಣೆಯ ಪ್ರಯತ್ನವನ್ನು ಮುಂದುವರಿಸುತ್ತಿರುವುದರಿಂದ ಮತ್ತು ಇದಕ್ಕಾಗಿ ವಿದೇಶಗಳಿಂದ ಹೇರಳ ಸಹಾಯ ಪಡೆಯುತ್ತಿರುವುದರಿಂದ ಪಾಕಿಸ್ತಾನವು ದಿಗ್ಭ್ರಾಂತವಾದಂತೆ ತೋರಿಸಿಕೊಳ್ಳುತ್ತಿದೆ ಭಾರತದ ಸೈನ್ಯ ಸಂಗ್ರಹದಿಂದ, ಶಸ್ತ್ರಾಸ್ತ್ರ ಶೇಖರಣೆಯಿಂದ ತನ್ನ ಭದ್ರತೆಗೆ ಧಕ್ಕೆ ತಗಲುವುದು ಎಂಬ ಅಪಲಾಪ ಅವರದ್ದು ಇದು ಇಂದಿನ ವಾತಲ್ಲ ಯಾವ ಆಕ್ರಮಣದ ಬೆದರಿಕೆ ಹೆದರಿಕೆಗಳು ಇಲ್ಲದ ಕಾಲದಲ್ಲಿ ಅಮೆರಿಕೆಯಿಂದ ವಿಪುಲ ಸೈನ್ಯ ಸಹಾಯ ಪಡೆಯಲು ಮತ್ತು ವಿವಿಧ ಸೈನಿಕ ಒಡಂಬಡಿಕೆಗಳಲ್ಲಿ ಪಾಲುಗೊಳ್ಳಲು ಹಿಂದು ಮುಂದು ನೋಡದ ಪಾಕಿಸ್ತಾನವು ಭಾರತ ತನ್ನ ಮೇಲಾದ ಮತ್ತು ಆಗಬಹುದಾದ ಕಮ್ಯುನಿಸ್ಟ್ ದಾಳಿಯಿಂದ ರಕ್ಷಿಸಲು ಇಂತಹ ಪ್ರಯತ್ನ ನಡೆಸಿದರೆ, ಅದಕ್ಕಾಗಿ ಅದ ಕರುಬ ಬೇಕಾದರೂ ಯಾಕೆ? ಕೇವಲ ಮೂರ್ಖತ್ವದಿಂದಲ್ಲವೆ? ಭಾರತವು ತನ್ನ ಮೇಲೆ ಆಕ್ರಮಣ ಮಾಡುವುದೇಬ ವ್ಯರ್ಥ ಭಯ ನನ್ನು ಅದು ಯಾಕೆ ಇಟ್ಟುಕೊಳ್ಳಬೇಕು? ಭಾರತವು ಶಾಂತಿಪ್ರಿಯ ದೇಶ ಅದು ಸಮಸ್ಯಾ ಪರಿಹಾರಕ್ಕೆ ಶಾಂತ ವಿಧಾನಗಳನ್ನೇ ಬಳಸಿಕೊಳ್ಳಲು ಮುಂದಾಗಿದೆ, ಮುಂದೆಯೂ ಅದರ ನೀತಿಯಲ್ಲಿ ಪರಿವರ್ತನೆಯೊಗಲಾರದು ಆದರೆ, ಇಂತಹ ನಿಧಾನಗಳು ಸೋತು ಹೋದಲ್ಲಿ ತನ್ನ ಗೌರವಕ್ಕೆ ಕುಂದು ತಂದುಕೊಳ್ಳದೆ ಅದು ಯುದ್ಧಕ್ಕಾದರೂ ಸಿದ್ಧವಾಗುವುದು ಆಕ್ರಮಣಕ್ಕೆ ಆನ್ಯಾಯಕ್ಕೆ ತಲೆವಾಗುವಷ್ಟು ಭೀರುಗಳು ಭಾರತೀಯರಲ್ಲ. ಜೀವನದ ವಿರುದ್ಧ ಅವರು ಕತ್ತಿ ಹಿರಿಯಲು ಮುಂದಾದಿದ್ದರು ಈ ಕಾರಣದಿಂದಾಗಿ ಆದರೆ, ಪಾಕಿಸ್ತಾನ ದೊಡನೆ ಭಾರತವು ಪೌಹಾರ್ದತೆಯನ್ನು ಬಯಸುತ್ತದೆ. ಕನ್ನ ಕೊಡೋದರ ದೇಶವನ್ನು ಪೂರ್ಣ ರೂಪೇಣ ಪ್ರೀತಿಸುತ್ತದೆ, ಕನ್ನಂತೆಯೇ ಅದೂ ಮುಂದುವರಿಯಬೇಕು ಎಂಬ ಪೂರ್ಣೋದ್ದೇಶವನ್ನು ಇಟ್ಟುಕೊಂಡಿದೆ ಅನಕ್ಕಾಗಿ ಪ್ರಯತ್ನವನ್ನೂ ಮಾಡುತ್ತಿದೆ ಪಾಕಿಸ್ತಾನದ ಹ್ಯದಯದಲ್ಲಿ ತುಂಬಿರುವ ಭಾರತದ ಆಕ್ರಮಣದ ವ್ಯರ್ಥ ಭೀತಿಯನ್ನು ತೆಗೆಯಲು ಅದು 'ಯುದ್ಧವಿಲ್ಲ' ಒಡಂಬಡಿಕೆಯನ್ನು ಮಾಡಿಕೊಳ್ಳುವ ಸಲಹೆಯನ್ನು ಬಹಳ ಹಿಂದೆಯೇ ಮುಂದಿಟ್ಟಿದೆ. ಇಂದಿಗಾದರೂ ಅದನ್ನೇ ಪುನರುಚ್ಚರಿಸುತ್ತಿದೆ ಹಾಗಿದ್ದರೂ ಪಾಕಿಸ್ತಾನವು ಇದನ್ನು ಒಪ್ಪುವುದಿಲ್ಲ ತಾನು ಆಕ್ರಮಣ ಮಾಡಿದ ಒಂದು ದೇಶವು ಇಂತಹ ಸೂಚನೆಯನ್ನು ಮುಂದಿಟ್ಟಾಗ, ಅದು ಸಂತೋಷದಿಂದ ಸ್ವೀಕರಿಸಬೇಕಿತ್ತು ಇದರಿಂದ ಪಾಕ್ ಅಂತರಾಳದಲ್ಲಿ ಭಾರತದೊಡನೆ ಶಮಯುಸಾಧಿಸಿ ಸಮರ ಹೂಡುವ ಆಲೋಚನೆಯೂ ಇದೆಯೆಂಬ ವಾದಕ್ಕೆ ಪೆಕ್ರೋತ್ಸಾಹನೆ ದೊರೆಯುತ್ತಿದೆ. 'ಸ್ನೇಹ'ವೆಂಬುದು ಚರ್ಚೆಯಿಂದ, ವಾಗ್ವಾದದಿಂದ, ದ್ವೇಷವಂಜನೆಗಳಿಂದ ಹುಟ್ಟಿಬರುವುದಿಲ್ಲ ಅದು ಹೃದಯಾಂತರಾಳದಿಂದ ನಿಷ್ಕಳಂಕವಾಗಿ ಎದ್ದುಬರಬೇಕು. ನಿಜವಾಗಿ ಪಾಕಿಸ್ತಾನವು ಭಾರತದೊಡನೆ ಸ್ನೇಹ ಬಯಸುವುದಾದರೆ, ಸಮಸ್ಯೆಗಳ ಪರಿಹಾರ ಮಾರ್ಗವನ್ನು ತಿಳಿಗೊಳಿಸಬೇಕಾದರೆ, 'ಯುದ್ಧವಿಲ್ಲ' ಸಲಹೆಗೆ ಒಪ್ಪಿ ಮುಂದೆ ಒರಬೇಕು, ಇದಕ್ಕದು ಸಿದ್ಧವಾಗದೆ ಆರೋಪ ಆರೋಪಿಸುತ್ತಿರುವುದರಲ್ಲೇ ಕಾಲವ್ಯಯ ಮಾಡಿದರೆ, ದೋಸ ಯಾರದು?

ಅಂತರಿಕ್ಷದಲ್ಲಿ ಅಬಲೆ

ಸ್ಪರ್ಧಾ ಪ್ರಧಾನ ಪ್ರಪಂಚದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ತುರುಸಿನ ಸ್ಪರ್ಧೆ ನಡೆಯುವುದು ಸ್ವಾಭಾವಿಕ ಆಕಾಶ ಬಾಣಗಳ ಈ ಯುಗವು ಈ ಕ್ಷೇತ್ರದಲ್ಲಿಯೂ ತೀವ್ರವಾದ ಸ್ಪರ್ಧೆಗೆ ತಕ್ಕ ವಾತಾವರಣವನ್ನು ಒದಗಿಸಿದೆ. ಬರಿಯ ಆಕಾಶ ಬಾಣವನ್ನು ಉಪಗ್ರಹವನ್ನು ಹಾರಿಸಿ ಪಂಥ ಪರಾಕ್ರಮವನ್ನು ಕೊಚ್ಚಿಕೊಂಡವರೆ ಮುಂದೆ ಕಜೀವ ಪ್ರಾಣಿಗಳನ್ನು ವ್ಯೋಮಯಾತ್ರಿಗಳನ್ನಾಗಿ ಮಾಡಿ ಕಳಿಸಿದವರು ತಲೆಯೆತ್ತಿ ನಿಂತರು ಇದರಿಂದ ತಲೆತಗ್ಗಿಸಿದವರು ಗಂಡು ಮೂಸನನ್ನೇ ಎತ್ತಿ ಕಳಿಸಿದರು. ಗಂಡರರು. ಅಂತರಿಕ್ಷ ಯಾತ್ರೆ ಮಾಡುವುದೀಗ ಮನೆಮಾತಾಗಿರುವಾಗ ರಶ್ಯನರು ಇನ್ನೊಂದು ಅದ್ಭುತ ಘಟನೆಯನ್ನೇ ಮಾಡಿದರು, ಹಿಂದಿನ ಕಾಲದಿಂದಲೂ ಅಬಲೆಯರೆಂದು ಉಲ್ಲೇಖಿತರಾಗುತ್ತಿದ್ದ ಮಹಿಳೆಯರನ್ನೇ ಕಳಿಸಿ ತಾವೇಕೆ ವಿಕ್ರಮಶಿಲರಾಗಬಾರದು ಎಂಬಲ್ಲಿ ವರೆಗೆ ಅವರ ಮೆದುಳು ಹರಿಯಿತು ತಮ್ಮ ಒನೇ ಮೋಸ್ಕಾ ಉಡಗ್ರಹದಲ್ಲಿ ವೆಲೆಂಟಿನಾ ತೆರೆಶ್ಕೋವಾಎಂಬ ೨೬ ವರ್ಷ ಪ್ರಾಯದ ತರುಣಿ ಅಬಲೆಯ ನ್ನು ಏರಿಸಿ ಅವರು ಲೋಕಕ್ಕೆ ಪ್ರಥಮ ಮಹಿಳಾ ವ್ಯೋಮಯಾತ್ರಿಯನ್ನು ತೋರಿಸಿಕೊಟ್ಟಿದ್ದಾರೆ. ಪೌರಾಣಿಕ ಯುಗದಲ್ಲಿ ಸೂರ್ಯನತ್ತ ಧಾವಿಸಿದ ಹನುಮಂತ ಪ್ರಥಮ ಪುರುಷ ವ್ಯೋಮಯಾತ್ರಿಯಾಗಿದ್ದ ನಿಜ ಹನುಮಂತನು ಕಪಿ ಎಂಬುದಾಗಿರಲಿಲ್ಲ. ಕಪಿ ಧ್ವಜರ ಸಾಲಿಗೆ ಸೇರಿದವನೆಂಬ ವಾದವನ್ನಿಲ್ಲಿ ಒಪ್ಪಿಕೊಳ್ಳಬಹುದು ಆದರೆ ಆಂದಿನಿಂದ ಇಂದಿನ ವರೆಗೂ ಮರ್ತ್ಯಲೋಕದ ಮಹಿಳೆಯು ಅಂತರಿಕ್ಷ ಗಮನ ಮಾಡಿದಿಲ್ಲ. ಸಾವಿತ್ರಿಯ ಹೆಸರು ಇದಕ್ಕೆ ಅಡ್ಡ ಬರಬಹುದೆ, ಆದರೆ, ಆಕೆ ಯಾವ ಗ್ರಹದತ್ತವೂ ತೆರಳಿರದೆ ತನ್ನ ಪತಿಯ ಪ್ರಾಣ ತರಲು ಯಮರಾಯನನ್ನು ಜಂಬತ್ತಿ ಹೊರಟಿದ್ದಳು ಈಗ, ಅಮೆರಿಕೆಯ ಗೌರವಕ್ಕೆ ಕುಸು ಭಂಗ ಬಂದಂತಾಗಿದೆ. ಆದುದರಿಂದ, ಅದು ತರುಣ-ತರುಣಿಯರನ್ನು ಒಟ್ಟಾಗಿ ಅಂತರಿಕ್ಷ ಗಮನ ಮಾಡುವ ಕಠಿತ ಆಲೋಚನೆ ಬಹುದು ಇದಕ್ಕಾಗಿ ನವ ವಿವಾಹಿತ ದಂಪತಿಗಳನ್ನೋ, ಪ್ರೇಮಿಗಳನ್ನೋ ಆಯ್ದುಕೊಂಡರೆ, ಉಚ್ಚಿಕೆವೆನಿಸಿಸು ಸ್ಪರ್ಧೆಯು ಕೂನೆಯಲ್ಲಿ ಮಟ್ಟುವುದೆಂದು ಈಗಲೇ ಹೇಳುವುದು ಹೇಗೆತಾನೇ ಸಾಧ್ಯ?

ಅತ್ಯುತ್ತಮ ಕಾಲಾ ಸ್ಪರ್ಧೆಯ ಫಲಿತಾಂಶ—೧೯೬೩—ಈನೇ ಸಂಸ್ಥೆಯಲ್ಲಿ ದ ಕ ಜಿಲ್ಲೆಯಲ್ಲಿ ನಡೆಸಿದ್ದ ಅತ್ಯುತ್ತಮ ಕಾಲಾ ದ್ವಿತೀಯ ಸ್ಪರ್ಧೆಯಲ್ಲಿ ಈ ಕೆಳಗಿನ ಸಂಬತ್ತು ಶಾಲೆಗಳು ಪ್ರಥಮಿಕ ಶಾಲೆಗಳು ವೀರೆ ವೀರಿ ವಿಭಾಗಗಳಲ್ಲಿ ರೋಲಿಂಗ್ ಶೀಲ್ಡ್ ಪಡೆದಿರುವವೆಂದು ದ ಕ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ ವಿಟ್ಠಲ ಶೆಟ್ಟಿಯವರು ತಿಳಿಸುತ್ತಾರೆ

೧ ಗವರ್ನಮೆಂಟ್ ಫಿಶರೀಸ್ ಎಲಿಮೆಂಟರಿ ಶಾಲೆ, ಮಲ್ಪೆ, ೨ ಲಿಟ್ಲ್ ಫ್ಲವರ್ ಬಿಡೆಡ್ ಶಾಲೆ, ಕುರ್ಕಡ್ಕೆ (ಪುತ್ತೂರು) ೩ ಗವರ್ನಮೆಂಟ್ ಫಿಶರೀಸ್ ಎಲಿ ಶಾಲೆ, ಹೊಜಮೂಡಿ ಕೊಡಿ. ೪ ಎಸ್ ಎ ಎಸ್ ಎಲಿಮೆಂಟರಿ ಶಾಲೆ ಇನ್ಫಂಜೆ ೫ ಮುನ್ಸಿಪಲ್ ಸೌತ್ ಹಾ ಎ ಶಾಲೆ, ಉಡುಪಿ ೬ ಇನ್ಫೆಂಟ್ ಮೇರೀಸ್ ಹಾ ಎ ಶಾಲೆ, ಜೆಪ್ಪು, ೭ ಬೋರ್ಡಿಂಗ್ ಹಾಯರ್ ಎಲಿಮೆಂಟರಿ ಶಾಲೆ, ವಿಟ್ಲ ೮ ನಿರ್ಮಲಾ ಹಾ ಎ. ಶಾಲೆ, ಬ್ರಹ್ಮಾವರ ೯ ಸುಬ್ರಹ್ಮಣ್ಯ ಹಿಲ್ ಬೋರ್ಡಿಂಗ್ ಜ್ಯೂನಿಯರ್ ಸ್ಕೂಲ್ ಶಾಲೆ, ಉಜಿರೆ, ಅಲ್ಲದೆ ಇನ್ನು ಬೇರೆ ೫೬ ಶಾಲೆಗಳಿಗೆ ಸರ್ಟಿಫಿಕೇಟನ್ನು ಮಾತ್ರ ಘೋಷಿಸಲಾಗಿದೆ

ಕುಂದಾಪುರ ಡಿವಿಜನ್ ಕೋರ್ಟಿನಲ್ಲಿ

R E A ನಂಬ್ರ 42/63
(R S. P No. 604/62)
(O S No 215/1962)

ದಿ ಗೋಪಾಲಕೃಷ್ಣ ಭಂಡಾರಿ

—ಅರ್ಜದಾರರು

ವಿರುದ್ಧ

ರಾಮು ಶಾಸ್ತ್ರಿ (ಪ್ರಾತಿ) ಕೊಡಾ ಎದ್ರಿರು

7 ಶ್ರೀಮತಿ ಶಾರದಾ ಶೆಟ್ತಿಕಾನ ಸುಬ್ಬಾಯ ಶೆಟಿಲಾಯರ ಹೆಂಡತಿ ಮತ್ತು ರಾಮು ಶಾಸ್ತ್ರಿ ಮಗಳು—ಕುಂದಾಪುರ ತಾಲ್ಲೂ ಬೆಳ್ವೆ ಗ್ರಾಮದ ಶೆಟ್ತಿಕಾನಬೆಳ್ಳರ್ಸಿವರರು

—ಇವರಿಗೆ

ಮೇಲಿನ ಅಮಲ್ದಾರಿಯಲ್ಲಿ ನಿಮ್ಮನ್ನು ಮೃತ ರಾಮಕಾಶ್ತಿಗಳ ವಾರೀಸುದಾರರಾಗಿ ನೇಮಿಸಿ ಅಮಲ್ದಾರಿ ಮುಂದುವರಿಸಬೇಕಾಗಿ ಅರ್ಜದಾರನು ಅರ್ಜಿ ಕೊಟ್ಟಿರುವುದರಿಂದ ಆ ಬಾದಿನಲ್ಲಿ ನಿಮ್ಮದೇನಾದರೂ ಆಕ್ಷೇಪ ಇದ್ದರೆ ಅದನ್ನು ಹಜರುಪಡಿಸುವ ಬಗ್ಗೆ ಮೇಲಿನ ಅರ್ಜಿಯು ತಾ 25 6 63 ಕ್ಕೆ ಇಡಲ್ಪಟ್ಟಿದೆ ಎಂಬ ಸಂಗತಿ ನಿಮಗೆ ಈ ಮೂಲಕ ತಿಳಿಸೋಡಾಗಿದೆ.

(ಕೋರ್ಟು ಹ್ಯುಂ ಮೇರೆಗೆ)

K R Shanbhogue,
Advocate for Petitioner

ಕುಂದಾಪುರ, 15—6—63

ಅಲ್ಲಲ್ಲಿಯ ಸುದ್ದಿಸಾರ

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ಭವನಕ್ಕೆ ಮೈಸೂರು—ಯೂಥವು ನಿರ್ಮಿಸುತ್ತಿರುವ ಈ ವಿದ್ಯಾರ್ಥಿ ಭವನವು ತಾ. 1-7-63 ರಿಂದ ಆರಂಭವಾಗುವುದೆಂದೂ ಸೇರಲಿಚ್ಛಿಸುವ ವಿದ್ಯಾರ್ಥಿಗಳು 25 6-63ರ ಒಳಗೆ ಗೊತ್ತಾದ ಫಾರಂನಲ್ಲಿ ಕಾರ್ಯದರ್ಶಿಗಳಿಗೆ ಅರ್ಜಿ ಸಲ್ಲಿಸಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಸುಬ್ರಹ್ಮಣ್ಯೇಶ್ವರ ಹೈಸ್ಕೂಲು.—ಸುಬ್ರಹ್ಮಣ್ಯ ದೇವಸ್ಥಾನದ ಪತಿಯಿಂದ ನಡೆಸಲಾಗುವ ಸುಬ್ರಹ್ಮಣ್ಯೇಶ್ವರ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ಇದೇ ತಾ 10 ರಂದು ಸಂಜೆಟ ನ್ಯಸಿಂಹ ಸ್ವಾಮಿ ಮಠದ ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳವರಿಂದ ಶ್ರೀ ಕೆ. ವೆಂಕಟ್ರಮಣ ಪೌಡೆ, ಎಂ ಎಲ್. ಎ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಅರಂಭದಲ್ಲಿ ದೇವಸ್ಥಾನದ ಟ್ರಸ್ಟಿ ಶ್ರೀ ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿದರು, ಆಮಂತ್ರಣ ಪತ್ರಿಕೆ ದೇವಸ್ಥಾನದ ಮೆನೇಜರ್ ಶ್ರೀ ರಾಮಕೃಷ್ಣ ಭಟ್ಟರು ವಂದನಾರ್ಪಣೆ ಗೈದರು.

ಕಟೀಲಿನಲ್ಲಿ ಶ್ರೀ ದುರ್ಗಾಪರಮೇಶ್ವರಿ ಹೈಸ್ಕೂಲು— ಇದೇ ತಾ. 6ರಂದು ಸಚಿವ ಶ್ರೀ ಕಂರಿಯವರಿಂದ, ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಳ ಧರ್ಮಾದಾಯ ಪಾಲಕಿಯ ಉದ್ಘಾಟನಾ ಸಮಾರಂಭವು ವಿಧಾನ ಸಭಾಸ್ಥಿತ ಸದಸ್ಯ ಡಾ। ಎಸ್. ಚಂದಾರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ಪ್ರಾರ್ಥನೆಯೊದ ಬಳಿಕ ಶ್ರೀ ಎ. ರಾಮಣ್ಣ ಭಟ್ಟರು ಸ್ವಾಗತಿಸಿದರು ಶ್ರೀ ಪಿ. ಹರಿಶ್ಚಂದ್ರ ರಾವ್‌ರವರು ಸಂದೇಶಗಳನ್ನು ಓದಿದರು ಅಧ್ಯಕ್ಷ ಭಾಷಣದ ತರುವಾಯ ಶ್ರೀ ಕೊಡೆತ್ತೂರುಗುತ್ತು ಶ್ರೀಧರ ಶೆಟ್ಟರು ಧನ್ಯವಾದ ಗಳನ್ನರ್ಪಿಸಿದರು.

ಸ್ವಾಮಿ ವಿವೇಕಾನಂದ ಹೈಸ್ಕೂಲು— ಮಿಜಾರು ಎಡ ಪದವಿನಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. 6ರಂದು ವಿದ್ಯಾ ಮಂತ್ರಿ ಶ್ರೀ ಕಂರಿಯವರಿಂದ ಶ್ರೀ ಪಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

ಆರಂಭದಲ್ಲಿ ಶ್ರೀ ಯಂ. ಆನಂದ ಅಳ್ವರು ಸ್ವಾಗತಿಸಿದರು ಶ್ರೀ ಬಾಲಕೃಷ್ಣ ಶಾಸ್ತ್ರಿಗಳು ಆಡಳಿತೆಯ ಯೋಜನೆಗಳನ್ನು ವಿವರಿಸಿದರು. ವಿದ್ವಾನ್ ಶ್ರೀ ವೈ ರಾಮಕಂತ್ರಿಯವರು ನೆರವೇತ್ತವರ ವಿವರಣೆಗಳನ್ನಿತ್ತರು. ಕೊನೆ ಮುಖ್ಯೋಪಾಧ್ಯಾಯ ಶ್ರೀ ವಾಮನ ಶೆಟ್ಟರು ಸಂದೇಶಗಳನ್ನೋದಿದರು. ಕಂರಿಯವರು ಉದ್ಘಾಟನಾ ಭಾಷಣದಲ್ಲಿ, ಜನತೆಯ ಬೆಂಬಲ ಕೋರಿದರು. ಪವಿತ್ರ ವಿದ್ಯಾಲಯವಾಗಲೆಂದು ಹಾರೈಸಿ, ಶ್ರೀ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಆನಾವರಣ ಮಾಡಿದರು. ಶ್ರೀ ಎಸ್ ಮುಕುಂದ ರಾಯರು ಮೊಕ್ತಾಸಾದ ಬಳಿಕ ಅಧ್ಯಕ್ಷರು, ಇಂತಹ ಶಾಲೆಗಳ ಸ್ಥಾಪನೆಗೆ ಸರಕಾರ ಪ್ರೋತ್ಸಾಹವಿತ್ತು ಗ್ರೇಂಟ್‌ಗಳನ್ನೊದಗಿಸಬೇಕೆಂಬ ಕೋರಿಕೊಂಡರು.

ನಾಟಕ ಪ್ರದರ್ಶನ— ಕಳೆದ ತಾ 9 ರಂದು ನೋಪಿ ಕಲಾ ಸಂಘದವರು ಮೂಡಬಿದ್ರಿಯ ಸಮಾಜ ಮಂದಿರದಲ್ಲಿ ಶ್ರೀ ಕೆ. ಜೆ. ಶೆಟ್ಟಿಯವರು ಬರೆದ "ಕಲ್ತಂಡಲಾ ಪೊಣ್ಣೆ" ಎಂಬ ಹಾಸ್ಯಮಯ ನಾಟಕವನ್ನು ಅಡಿದರು ಇಂದಿನ ವಿದ್ಯಾರ್ಥಿವರ್ಗ ಯುವಕ ಯುವತಿಯರಲ್ಲಿರುವ ಅನೈತಿಕತೆಯನ್ನು ವಿಶ್ಲೇಷಿಸುತ ಈ ನಿಟ್ಟಿನಲ್ಲಿ ಸಾಹಿತ್ಯವು ಬಹು ಉಪಯುಕ್ತವೆಂಬ ಸ್ಪಷ್ಟ ಶಿಕ್ಷಣವನ್ನು ಜನಮೆಚ್ಚುಗೆಯನ್ನು ಗಳಿಸಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ. ರಮ್ಮಣ್ಣ ಜಿಲ್ಲಾ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಆಫೀಸರು ವಹಿಸಿದ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಕೆ. ಕೆ. ಶೆಟ್ಟರ ಆಯ್ಕೆ— ತಾರೀಕು 16-6-63ರಂದು ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಜಿಲ್ಲಾವ ಚಾಧಿಕಾರಿ ಶ್ರೀ ಅತ್ತಾವರ ಆನಂದ ಶೆಟ್ಟರ ಸಮ್ಮುಖದಲ್ಲಿ ಜರಗಿತು. ಶ್ರೀ ಕೆ. ಕೆ. ಶೆಟ್ಟ ಎಂ. ಎಲ್. ಸಿ. ಯವರು ಆಸಿರೋಧವಾಗಿ ಆರಿಸಲ್ಪಟ್ಟರು. ಸಮಿತಿಯ ಇತರ ಆಧಿಕಾರಿಗಳನ್ನು ಆರಿಸುವರ ಆಧ್ಯಕ್ಷರಿಗೆ ಆಧಿಕಾರ ಕೊಡಲಾಗಿದೆ ಎಂದು ತಿಳಿದುಬರುತ್ತದೆ.

ಸಂತಾಪ ಸೂಚಕ ಸಭೆ— ತಾರೀಕು 18-6-63ರಂದು ಉಡುಪಿ ಫಿಲ್ಮ್ ಸೊಂದರ ಸಭೆಯೊಂದು ಗುಂಡಿಬೈಲು ಶ್ರೀ ಅನಂತಕೃಷ್ಣ ಚಾರ್ಯರ ಉಡುಪಿ ಮಧ್ವಾಚಾರ್ಯರ ಮೂಲಗೆ ಯಲ್ಲಿ ಶ್ರೀ ಯು ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಹಿರಿಯ ಪತ್ರಿಕೋದ್ಯೋಗಿ ಶ್ರೀ ಯು. ನೀತಾರಾಮ ಭಟ್ಟರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು.

ಮಂಗಳೂರಿನೆಲ್ಲಿ ಗೈಹರಕ್ಷಕ ದಳದ ರಚನೆ ಜಿಲ್ಲಾಧಿಕಾರಿ ಶ್ರೀ ಸಿ ಜಿ ಪದ್ಮನಾಭನವರು, ಸುಮಾರು 177 ನಾನ್ ಕಮಿಶನ್ಡ್ ಆಫೀಸರರನ್ನೊಳಗೊಂಡ ಹಾಗೂ 825 ಮಂದಿಯಿರುವ ಗೃಹರಕ್ಷಕ ದಳವೊಂದನ್ನು ರಚಿಸಲಾಗುವುದೆಂದು ತಿಳಿಸಿರುವರು. ಈ ದಳವನ್ನು ಆರು ಕಂಪೆನಿಗಳಾಗಿ ವಿಭಾಗಿಸಲಾಗುವುದು ಡಿಸ್ಟ್ರಿಕ್ಟ್ ಕಮಾಂಡೆರ್ ಆಗಿ ಡಾ। ಎಂ. ವೇಣು ಗೋಪಾಲ ಶೆಟ್ಟರನ್ನು ಸರಕಾರವು ನೇಮಿಸಿದೆ.

ಪ್ರಾಯ ಇಪ್ಪತ್ತೈದಂದ ಐವತ್ತರ ಒಳಗಿನ, ವೈದ್ಯಕೀಯ ವಿದ್ಯಾರ್ಹತೆ ಪಡೆಯದವರನ್ನು ಸೇರಿಸಿಕೊಳ್ಳಲಾಗುವುದು. ಸದಸ್ಯನ ಆಯ ಧಿಯು ಮೂರು ವರುಷವಾಗಿರುವುದು. ಸದಸ್ಯರ ಆಯ್ಕೆಗೆ ಒಂದು ಕಮಿಟಿ ನೇಮಿಸಲಾಗಿದೆ.

ಇದರ ತಾತ್ಕಾಲಿಕ ಕಚೇರಿಯು ಡಾ। ಎಂ. ವಿ. ಶೆಟ್ಟರ ನರ್ಸಿಂಗ್ ಹೋಮಿನಲ್ಲಿರುವುದು ಸೇರಿಚ್ಛಿಸುವವರು ಅಲ್ಲಿಂದ ಅರ್ಜಿ ಪತ್ರಗಳನ್ನು ಪಡೆಯಬಹುದು. ಕೊನೆಯದಿನ ಜೂನ್ 29 ಹಾಗೂ ವಿದ್ಯಾರ್ಹತೆ ಸಾಲ್ಕನೇ ಕ್ಲಾಸ್ ಎಂದು ತೀರ್ಮಾನ ಬಂದಿದೆ.

ಶ್ರೀ ವಿ. ಎಸ್. ಕುಡ್ವರ ಸ್ವದೇಶಾಗಮನ— ಸುಪ್ರಸಿದ್ಧ ಕೈಗಾರಿಕೋದ್ಯಮಿಗಳೂ ಕೆನರಾ ವರ್ಕ್ಸ್‌ರಾಷ್ಟಿನ ಟಿಕ್ಕಿಲರ್ ಡೈರೆಕ್ಟರರೂ ಆದ ಶ್ರೀ ವಿ. ಎಸ್.. ಕುಡ್ವರು ತಮ್ಮ ಜಪಾನು ಸ್ನೇಹಸಾವನ್ನು ಮುಗಿಸಿ ಮುಂಬಯಿಯ ದಾರಿಯೊಳಗಿ ತಾ. 12ರಂದು ಮಂಗಳೂರಿಗೆ ಹಿಂತಿರುಗಿರುವರು.

ಒಟೋ ಸ್ಟೇರ್ ಪಾರ್ಟ್ಸ್ ಮ್ಯಾನುಫೇಕ್ಚರಿಂಗ್ ಯುನಿಟಿನ ಉದ್ಘಾಟನೆ— ಇದೇ ತಾ. 17ರಂದು ಮಂಗಳೂರಿನ ಬೋಳಾರದಲ್ಲಿ ನಿರ್ಮಾಣವಾಗಿರುವ, ಒಟೋ ಸ್ಟೇರ್ ಪಾರ್ಟ್ಸ್ ಮ್ಯಾನುಫೇಕ್ಚರಿಂಗ್ ಯುನಿಟಿನ ಉದ್ಘಾಟನೆಯನ್ನು ರಾಜ್ಯದ ಆರ್ಥಿಕ ಉಸ ಮಂತ್ರಿ ಎಚ್ ಆರ್. ಆಟ್ಟುಲ್ ಗಫೂರ್ ಅವರು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಾರಂಭದಲ್ಲಿ ಡಾ. ಎಂ. ಎಂ. ಸಾಲಿಯಾನ ವರು ಆತಿಥಿಗಳನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಶ್ರೀ ಗಫೂರರು ಮಾತಾಡುತ್ತಾ, ಸರಾಗಿ ಸಂಂಕರ್ಗಗಳ ಅವಶ್ಯವು ಅಧಿಕವಾಗಿರುವ ಈ ಸಂದರ್ಭದಲ್ಲಿ ಇಂತಹ ಸಂಘಗಳು ಬೆಳೆಯುವುದು ಅಕ್ಷಶ್ಯವಾಗಿದೆ ಇದರ ಭವಿಷ್ಯವು ಉಜ್ವಲವಾಗಲೆ ಎಂದು ಹಾರೈಸಿದರು ಶ್ರೀ ಎಸ್. ಮುಕುಂದ ರಾವ್ ಹಾಗೂ ಮಣೇಲ್ ಶ್ರೀನಿವಾಸ ನಾಯಕರೂ ಈ ಸಂಸ್ಥೆಗೆ ಶುಭ ಕೋರಿದರು;

ಶ್ರೀ ಕುಡ್ವರು ಮಾತಾಡುತ್ತಾ, ದ. ಕ. ಜಿಲ್ಲೆಯಲ್ಲಿ ಈ ವರೆಗೆ ಕೈಕೊಳ್ಳಲಾದ ಕೈಗಾರಿಕಾ ಅಭಿವೃದ್ಧಿಯ ಕಾರ್ಯಕ್ರಮಗಳು ಉತ್ತಮ ರೀತಿಯಲ್ಲಿ ಯಶಸ್ವಿಗೆಗೊಂಡಿರುವುದು ಶೋಚನೀಯ. ಸರಕಾರವು ಇವುಗಳಿಗೆ ಗಮನಕೊಡದಿರುವುದೇ ಇದಕ್ಕೆ ಕಾರಣ. ಈ ಸಂದರ್ಭದಲ್ಲಿ ಇಂತಹ ಪ್ರಾಸಗೇ ಸಾಸ್ಥೆಗಳು ಶ್ರಮಿಸುತ್ತಿರುವುದು ಶ್ಲಾಘನೀಯ. ಇದಕ್ಕೆ ಜನತೆ ಸರ್ವ ಬೆಂಬಲವನ್ನೀಯಬೇಕು ಹಾಗೂ ಸರಕಾರವು ಇನ್ನಾದರೂ ಇಂತಹ ಸಂಸ್ಥೆಗಳಿಗೆ ಗಮನವೀಯಬೇಕು ಎಂದು ಜೇಳಿದರು. ಆಗ್ಕೆಯಲ್ಲಿ ಶ್ರೀ ಎಂ ಎಂ. ಸಾಲಿಯಾನರು ಧನ್ಯವಾದ ಸಮರ್ಪಿಸಿದರು.

ವಾರ್ತಾವೇದಿಕೆ

ಜಾನ್ ಕೆನಡಿ

ಸರಕಾರಿರಂಗದಲ್ಲಿ ಕಟ್ಟುನ ಬಾಕಾ ರೋ ಉಕ್ಕಿನ ಕಾರಕಾನೆಯು ಸದ್ಯದಲ್ಲಿ ಪ್ರಾರಂಭವಾಗಲಿದೆ. ಈ ಸಂಬಂಧದಲ್ಲಿ ಎರಡನೆಯ ಸರ್ವೆ ಕಾರ್ಯವೂ ಮುಗಿದಿದೆ. ಅಮೆರಿಕೆಯು ಇದಕ್ಕೆ ಆರ್ಥಿಕ ನೆರವನ್ನು ನೀಡುವುದೆಂದು ಮೊದಲು ಗೊತ್ತಾಗಿದ್ದರೂ ಅಲ್ಲಿನ ಉಕ್ಕಿನ ಕೈಜ್ಞರ ವರದಿಯು ಕಂಧಿಗ್ಧ ಸ್ಥಿತಿಯನ್ನುಂಟುಮಾಡಿತ್ತು ಆದರೆ, ಅಧ್ಯಕ್ಷ ಕೆನ್ನೆಡಿಯವರು ಈ ಕಾರ್ಯಾನೆಯಲ್ಲಿ ಕಂಬಿ ಕಳಕಳ ತೋರಿಸಿದ್ದಾರೆ. ಅಮೆರಿಕನ್ ಕಾಂಗ್ರೆಸ್ಸಿನ ಮುಂದೆ ಪ್ರಶ್ನೆಯನ್ನು ಇಟ್ಟಿದ್ದಾರೆ. ಕೃಷ್ಣಮೂರ್ತಿ ಮತ್ತು ರಾಷ್ಟ್ರಪತಿ ರಾಧಾಕೃಷ್ಣನ್ನರ ಸಾದರ್ಶನ.ಮೈತ್ರಿಕತೆಗಳ ಪೂರ್ಣಾವಾಗಿ ಕಾಂಗ್ರೆಸ್ಸು ತನ್ನೆ ಅನುಮೋದನೆ ನೀಡುವುದೆಂದು ಭಾರತೀಯರು ದೃಢನಂಬಿದ್ದಾರೆ.

ಚೌ ಎನ್ ಲಾಯ್

ಕೆಂಪು ಚೀನೆಯ ಚೌ ಎನ್ ಲಾಯ್ ಸಮರ ವಿರಾಮದ ಹೆಸರಿನಲ್ಲಿ ಸಮರ ಸನ್ನದ್ಧತೆಯನ್ನೇ ಮುಂದವರಿಸುತ್ತಿದ್ದಾರೆ ರ್ಣಾರ ಕೃತ್ಯಕ್ಕೆ ನಿಯಂತ್ರಣ ರೇಖೆಯಿಂದ ತನ್ನ ಸೇನೆಯನ್ನು ಹಿಂದೆ ಕರೆದಿದ್ದೇನೆ ಎನ್ನುವ ಅವರು ಅದರೀತಿಯಿರುವ ಸ್ಪಷ್ಟಂಗೂ ಪರೋವರವು ತನ್ನದು ಎಂದು ವಾದಿಸ ಹೊರಟಿದ್ದಾರೆ. ಎಂದರೆ, ಅವರ ಸೇನೆಯ ನೈಜ ನಿಯಂತ್ರಣ ರೇಖೆಯಿಂದ ಹಿಂದೆ ಸರಿದಿಲ್ಲವೆಂಬುದಕ್ಕೆ ಬೇರೆ ನಿದರ್ಶನ ಬೇಕೆ? ನಿಸ್ಸೈಸ್ಯೀಕೃತ ಪ್ರದೇಶದಲ್ಲಿಯೂ ಸೈನಿಕ ಠಾಣೆಗಳನ್ನು ಸ್ಥಾಪಿಸುವ ಚಾರವರ ತಂತ್ರವು ಅವರ ಸಾಮ್ರಾಜ್ಯ ವಾದವನ್ನೇ ಪ್ರತಿ ಬಿಂಬಿಸುತ್ತದೆ. ಹಾಗಿರುವಾಗ, ಅವರು ಅಕ್ರಮಣವನ್ನು ಬಿಟ್ಟು ಬಿಡುವ ಪ್ರಶ್ನೆಯಾದರೂ ಎಲ್ಲಿಂದ ಬಂದೀತು?

ಮೈಕಮಿಲನ್

ಬ್ರಿಟನ್ನಿನ ಪ್ರಧಾನಿ ಹೆರಾಲ್ಡ್ ಮೈಕಮಿಲನರು ತಮ್ಮ ಪದವಿಯಲ್ಲಿಯೇ ಥರ ಥರನೆ ಕಂಪಿಸುತ್ತಿದ್ದಾರೆ. ತಮ್ಮ ಸಂರಕ್ಷಣಾ ಮಂತ್ರಿ ಜಾನ್ ಪ್ರೊಫ್ಯೂಮೊ ಮತ್ತು ಅವರ ಪ್ರೇಯಸಿ ಕುಮಾರಿ ಕೀಲರರ ಕಾರಣದಿಂದ ಅವರು ಈ ಪರಿಸ್ಥಿತಿಗೆ ಬಂದು ಮುಟ್ಟಿದ್ದಾರೆ. ಸಂರಕ್ಷಣೆಯ ರಹಸ್ಯ ಸ್ಫೋಟದಂಥಹ ಮಹತ್ವದ ಪ್ರಶ್ನೆಯೇ ಲೆ ಮೈಕಮಿಲನರು ಧೃತಿಗೆಡಲೇ ಬೇಕಾಯಿತು. ಭದ್ರತಾ ಆಧಿಕಾರಿಗಳಿಂದ ತನ್ನಿಗೆ ಸರಿಯೊದ ಮಾಹಿತಿ ಬಂದಿಲ್ಲವೆಂದನರು ಕಾಮನ್ಸ್ ಸಭೆಯಲ್ಲಿ ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಯಿತು. ಆ ಪೂರ್ವನೆನಿಸಿದ ಈ ಪ್ರಕರಣವು ಉಬ್ಬಣಾವಸ್ಥೆಗೇರಿದರೆ ಮತ್ತು ಸದಸ್ಯರು ಆಗ್ರಹ ತೊಟ್ಟರೆ, ಮೈಕಮಿಲನ್ ರಾಜಿನಾಮೆ ನೀತಬೇಕಾಗಿಯೂ ಬರಬಹುದು

ವಿವಾಹ ಸಮಾರಂಭಗಳು

ಶ್ರೀ ಜೋನ್ಸ್ ಸಮುಮನೆ ಕೃಷ್ಣ ಶೆಟ್ಟರ ಪುತ್ರಿ ಇಂದಿರಾಳನ್ನು ಸದಿ ಕೃಷ್ಣಶೆಟ್ಟಿ ಟ್ಟರ ಅಳಿಯ ಟಿ ತಿಮ್ಮಪ್ಪ ಶೆಟ್ಟರು ತಾ. 11 6-63ರಂದು ಬ್ರಮ್ಮಾವರ ಶ್ರೀ ನೇಮಾಲಿಂಗೇಶ್ವರ ದೇವಸ್ಥಾನದಲ್ಲಿ ವಿವಾಹ ಮಾಡಿಕೊಂಡರು

ವಿ. ಸೆಬ್ಬೆಬೆಟ್ಟು ಹಿರಿಯಣ್ಣ ಹೆಗ್ಡೆಯವರ ಪುತ್ರಿ ಕುವಾರಿ ಆಶಾಲತಾಳನ್ನು ಮುಂಡ್ಕೂರು ದೊಡ್ಡಮನೆ ವಾಸಿ ಶೆಟ್ಟರ ಪುತ್ರ ಶ್ರೀ ವಿಶ್ವನಾಥ ಶೆಟ್ಟರು ತಾ. 16—6—63 ರಂದು ಉಡುಪಿ ಧಿಯೇಟರ್ ಕಲ್ಯಾಣದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಸಜ್ಜಾಡಿ ಹೊಕಮನೆ ಶಿವರಾಮ ಶೆಟ್ಟಿ ಪುತ್ರಿ ಪುಷ್ಪಾವತಿಯನ್ನು ವಿ ಮುಂಡ್ಕಾಡಿ ಕೆಳಮನೆ ದೇಜಪ್ಪ ಶೆಟ್ಟರ ಪುತ್ರ ಶ್ರೀ ಗುಡ್ಡಪ್ಪ ಶೆಟ್ಟರು ತಾ. 16—6—63ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪಾಣಿಗ್ರಹಣ ಮಾಡಿಕೊಂಡರು.

ಬಾರಮಕ್ಕಿ ಶ್ರೀ ಹೆರಿಯಣ್ಣ ಶೆಟ್ಟಿ ಪುತ್ರಿ ಚಿ ನಾಗಮ್ಮ ಶೆಟ್ಟಿರು, ಬಾರ್ಕೂರು ದೊಡ್ಡಮನೆ ಶ್ರೀ ಸುಂಜಯ್ಯ ಶೆಟ್ಟಿ ಪುತ್ರಿ ಚಿ. ರುಪ್ಪಾಕ್ಷಿಯನ್ನು, ಮತ್ತು ನಾಗರಮನೆ ಶ್ರೀ ವೆಂಕ್ಟಯ್ಯ ಸೆಟ್ಟಿ ಪುತ್ರ ಚಿ. ಗಣಪಯ್ಯ ಶೆಟ್ಟರು, ಕಳ್ಳಾಡಿ ಶ್ರೀ ಮಹಾಬಲ ಶೆಟ್ಟರ ಪುತ್ರಿ ಚಿ. ಸೌಂಗಾರಿಬಾಯಿಯನ್ನು ತಾ. 16-6-63ರಂದು ಕುಂದಾಪುರ ಕಲಾ ಮಂದಿರದಲ್ಲಿ ವಿವಾಹವಾದರು. (ನಮ್ಮವನೆಗೆ ರಿಟ್ಟರೂ ಚಾರನಕ್ಕಿ ನಾರಾಯಣ ಶೆಟ್ಟರು ಮೆನೇಜಿಂಗ್ ಏಜೆಂಟರಾಗಿರುವ ಶ್ರೀ ಶಂಕರನಾರಾಯಣ ಕಾರ್ಸ್ಟೈರ್ನ್ ಕಂಪೆನಿ, ಕಾಗಲ್ ಇದರ ಏಜೆಂಟರಾಗಿದ್ದಾರೆ.)

ಉಡುಪಿ ಮುನ್ಸಿಪಲ್ ಹೈಸ್ಕೂಲ್

ಉಡುಪಿಯ ಮುನ್ಸಿಪಲ್ ಸೌತ್ ಡಾ। ಎ। ಶಾಲೆಯು ಹೈಸ್ಕೂಲಾಗಿ ಪರಿವರ್ತಿಸಲ್ಪಟ್ಟು ಅದರ ಉದ್ಘಾಟನೆಯು ಇತ್ತೀಚೆಗೆ ನಡೆಯಿತು ಅಧ್ಯಾಪಕಿ ಶ್ರೀಮತಿ ನಾಗವ್ವನವರಿಂದ ನೆರವೇರಿಸಲ್ಪಟ್ಟಿದೆ. ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಅಧ್ಯಾಪಕಿ ಶ್ರೀಮತಿ ಡೆಬ್ಬಾಜೆ ಆಂಚೆರ್‌ರವರು ವಹಿಸಿದ್ದರು. ಸಭಾಂಕ್ಷೆದಲ್ಲಿ ನಗರ ಸಭಾಪತಿ ಶ್ರೀ ಸಿ. ಅನ್. ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಏಕಜಗತ್ತಿನ ಸುಂದರ ಕಲ್ಪನೆ

(ನಂತರ ಮುಂದುವರಿದಂತೆ)

ಶಕ್ತಿಗಳ ಪ್ರಭಾವಕ್ಕೆ ಒಳಗಾಗಿದ್ದ ರಾಷ್ಟ್ರಾಭಿಮಾನವನ್ನು ಕೆಳಸಿತು, ಈ ಎಲ್ಲಾದಕ್ಕಿಂತ ಮಿಗಿಲಾದ ಅವನು ದ್ವಿತೀಯ ಲೋಕ ಮಹಾಯುದ್ಧಕ್ಕೆ ಪ್ರೇರಕ ಶಕ್ತಿಯಾಗಿ ಇಡಿಯ ಲೋಕವನ್ನೇ ಕಷ್ಟಕ್ಕೆ ಗುರಿ ಮಾಡಿದನು ಇಂದು ಕೇವಲ ದೇಶಾಭಿಮಾನವನ್ನು ದೂರ ಇಟ್ಟು, ಅವನ್ನು ಬೆಳಸಿಕೊಂಡರೆ ಮಾತ್ರ ಇಲ್ಲವೆ ನಮ್ಮ ಹೃದಯಗಳಲ್ಲಿ ದೇಶಾಭಿಮಾನಕ್ಕೆ ನಾವು ಸ್ಥಾನಕೊಟ್ಟಿಸಿಕೊಡುತ್ತೇವೆ, ಅದೇ ಆಗ ಪೂರ್ಣ ಇಡಿಯ ಲೋಕಕ್ಕೆ—ಸಕಲ ಮಾನವ ಜಾತಿಗೆ ವಿಸ್ತರಿಸಬೇಕು

ಅಂಧಕಾರವನ್ನು ನೆಟ್ಟಬೇಕು

ಎಷ್ಟೊಂತಗಳ ಎಷ್ಟೊಸಲಿನ ಪ್ರೇರಿತವಾಗುತ್ತವೆ ಅತಿಸ್ಪಷ್ಟವೂ ಕಲವೊಮ್ಮೆ ದುರಂತಗಳಿಗೆ ಪ್ರೇರಕವಾಗುವುದಿದೆ ಮಾನವನ ಜಿಜ್ಞಾಸೆಯಶದಿಂದ ದುರ್ಗಗಮನ ವಾಡುವಂತೆಯೇ ತಿಜ್ಞಾಸಿಗೆಯೂ ಕಲವೊಮ್ಮೆ ಇದಕ್ಕೆ ಒಂದು ಉದಾಹರಣೆಯೆಂಬಂತೆ ಪ್ರಮುಖವಾದ ಸಂಸ್ಥೆಯೂ ಒಂದಲ್ಲ ಒಂದು ದುರ್ಬಲತೆಯ ಪ್ರೇರಿತವಾದ ಆತನು ತನ್ನ ಬಗ್ಗೆ ಸಾಮಾನ್ಯವಾಗಿ ಬೆಟ್ಟಿಸಿದ ವಿಚಾರವೂ ಹುಟ್ಟದಿಲ್ಲ, ಅಂದರೆ, ತನ್ನ ಒಗೆಗಿರುವ ಪ್ರಜ್ಞಾನ ಪ್ರಾಮುಖ್ಯತೆಗೆ ಅತಿಸಿಗೆ ಮಾತ್ರವಿ ವಿಷಯದಲ್ಲೂ ಇರುವುದಿಲ್ಲ ಅದನಾ ಕೆಲವೊಮ್ಮೆ ಅತಿ ತನ್ನ ಒಗೆಗೆ ಅತಿಯಾಗಿ ತೆಗೆದುಕೊಳ್ಳುತಾನೆ ಮತ್ತ ಇದರ ಪರಿಣಾಮವಾಗಿ ಅತನಿಂತಹ ತಪ್ಪಿಗೆ ಪರಿಗ ಪ್ರೇರಣೆಯಿಂತಾನೆ, ಆದುದರಿಂದ ಸರ್ವಜ್ಞನ ತಪ್ಪುಗಳೆಯೇ ತಿಳಿದುಕೊಂಡು ಎಜಿಜ್ಞಾನಿಗಳಿಂದ ದೂರವಿದ್ದಲ್ಲಿ ಮೂರ್ಖನೇ ಸರಪ್ಪರ ಸ್ನೇಹಶೀಲತೆ ಒಲಿದೀತು ಇಂತಾಕ್ಕಾಗಿ ನಮ್ಮ ಮನಸ್ಸು ರಾಷ್ಟ್ರೀಯ ತೆಯ ಸೀಮೆಯನ್ನೂ ಮೀರಿ ಇಡಿಯ ಜಗತ್ತಿನತ್ತ ತನ್ನ ಸ್ನೇಹಹಸ್ತವನ್ನು ಹರಡಿಸಬೇಕು ಅಂದಕಾರವನ್ನು ಪಟ್ಟಿ ಪ್ರೇಮವು ನಿಲ್ಲುವಂತೆ ರಾಜತಿನಕಿಸಿಗೆ ಅತಕಾಶ ಕಲ್ಪಿಸಿಕೊಡಬೇಕು; ಜಗತ್ತಿನಲ್ಲಿ ಶಾಶ್ವತ ಸವಿದಬೇಕು, ವಿಜ್ಞಾಸಿಸಬೇಕು

ಉಸಸಂಪಾದಕರ

ಇದೇ ಎಂಬ ಕಾರ್ಯಾಲಯದ ಡಾ|| ಬಿ ಧಾಕೃಷ್ಣನ್ ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳನ್ನು ಉದ್ದೇಶಿಸಿ ದೊರಗಡಿಸಿದ್ದಾರೆ ಅಂದರು, ಮಾನವ ಪರಿಯಾಗಿ ಪರರಿಗೆ ಉಪಕಾರಿಯಾಗುವುದೇ ಎಂಬವರ ವಿಚಿತ್ರಾಸುಖಲ್ಲಿ ವಿಕೇಂದ್ರಿಕಾ ಸಮಸ್ತ ಸಮಸ್ಯೋತ್ತರಗಳಿಂತ ಎಂದು ಭರತ ವಾಕ್ಯವನ್ನು ತನ ದಿಯಿಂದಲೂ ಹಾಡುತ್ತಾ ಒಂದು ಭಾವಪೂರ್ಣ ಪ್ರಾರ್ಥನೆ ಪಸಿಸಿತ್ತು ಗಳು ವಿಶ್ವ ಜಗತ್ತಿನ ಕಲ್ಪನೆಯನ್ನು ಎಂದೋ ಸಾಕ್ಷಾತ್ಕರಿಸಿದೆ ಏಕ ಜಗತ್ತ ಎಂದರ್ಶಿಸಿದ ಪ್ರವಾದಿಗಳು ತಮ್ಮ ಸ್ವಾತಂತ್ರ್ಯಗಳನ್ನು ಬಲಿಕೊಟ್ಟ ಹೊಸ ವ್ಯವಸ್ಥೆಗಳಿಂದರೆ ಸಮುದಾಯಗಳಿಗೆ ಬದ್ಧರಾಗಿ ಜೀವಿಸಿ ಎಂದಷ್ಟೆ ತನ್ನ ಒಗೆಗೆ ತನ್ನ ಜೀವನ ಸಂವಿಧೇ ಇತರರ ಕುರಿತಾಗಿಯೂ ಅತಯೋಚಿಸಬೇಕು ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವುದರಿಂದಲೇ ನಮ್ಮ ಮನಸ್ಸು ಸಂ

ಸರ್ವದೇಶಗಳ ನ್ಯಾಯವಿದರ ಕೇಂದ್ರ — ಗ್ರೋಷಿಯನ್ ಸಂಸ್ಥೆ

ಅಂತರಾಷ್ಟ್ರೀಯ ಕಾನೂನಿನ ಬಗೆ ಬೆಳಕು ಚೆಲ್ಲುವಲಿಕೆ ನೀಡಲೆಂದೇ ತೆರೆಯಲ್ಪಟ್ಟಿರುವ ಗ್ರೋಷಿಯನ್ ಸಂಸ್ಥೆಯು ಇತ್ತೀಚೆಗೆ ತನ್ನ ಕಾರ್ಯರಂಗವನ್ನು ಮ್ಯೂನಿಚ್ಚಿಗೆ ಒದಲಾಯಿಸಲಿದೆ ವಿಶ್ವದ ಯಾವುದೇ ದೇಶದ ನಾಗರಿಕರೇ ಆದರೂ, ಅವರೆಲ್ಲರಿಗೂ ಸಲಿಸಮಾನವಾದ ಅಂತರ್ಯನ್ನು ನೀಡುವ ಸಂಸ್ಥೆ ಇಡೀ ಜಗತ್ತಿನಲ್ಲಿ ಇದೊಂದೆಯೋ, ಏನೋ! ಪ್ರಖ್ಯಾತ ವಕೀಲ ವಿಜ್ಞಾನಿ ಹ್ಯಾಗೋ ಗ್ರೋಷಿಯನ್ ಎಂಬವರ ಸ್ಮರಣಾರ್ಥವಾಗಿ ಡಚ್ ಹ್ಯಾನ್ಸ್ ಕೆಲ್ಲಿಂರವರು ೧೯೫೧ರಲ್ಲಿ ಇದನ್ನು ಆರಂಭಿಸಿದರು

೧೯೫೧ರಲ್ಲಿ, ಮ್ಯೂನಿಚ್ ನಗರದ ಪೂರ್ವ ಸಭಾ ಸದಸ್ಯರಾದ ಡಾ|| ಹ್ಯಾನ್ಸ್ ಕೆಲ್ಲಿಂರವರು ಪ್ರಖ್ಯಾತ ವಕೀಲ ವಿಜ್ಞಾನಿಯೂ ಆದ ಹ್ಯೂಗೋ ಗ್ರೋಷಿಯಸ್ ಎಂಬುವವರ ಜ್ಞಾಪಕಾರ್ಥವಾಗಿ ಪ್ರಾರಂಭಿಸಿದ ಗ್ರೋಷಿಯನ್ ಸೊಂಡೇಷನ್ ಅನ್ನು ಈಗಿರುವಲ್ಲಿಂದ ಬಾರ್ಹಾರ್ನ್ ಎಂಬಲ್ಲಿರುವ ಮುಖ್ಯ ಕಛೇರಿಯಿರುವಲ್ಲಿಗೆ ಈ ವರ್ಷಾಂತ್ಯದೊಳಗೆ ಸ್ಥಳಾಂತರಿಸಲಾಗುವುದು

ವ್ಯವಹಾರ, ವಿಜ್ಞಾನ, ಸಂಸ್ಕೃತಿ ಮುಂತಾದ ವಿಷಯಗಳಲ್ಲಿ ಹ್ಯಾನ್ಸ್‌ಕೆಲ್ಲರರದು ಅಪಾರ ಜ್ಞಾನ ಜಗತ್ತಿನ ಒಂದೊಂದು ದೇಶವೂ ಒಂದೊಂದು ಬಗೆಯ ನ್ಯಾಯ ಶಾಸ್ತ್ರವನ್ನು ರೂಪಿಸಿಕೊಂಡಿದ್ದು, ಇನ್ನೊಂದು ದೇಶದ ನ್ಯಾಯ ಶಾಸ್ತ್ರದ ಬಗ್ಗೆ ವಿಶೇಷ ತಿಳಿದುಕೊಳ್ಳುವ ಅಕ್ಕರೆಯನ್ನೇ ನ್ಯಕ್ತಪಡಿಸದಿರುವುದನ್ನು ಕಂಡ ಕೆಲ್ಲರ್‌ರವರು ಸರ್ವ ದೇಶಗಳ ನ್ಯಾಯ ಶಾಸ್ತ್ರದ ಒಗ್ಗೆ ತಿಳುವಳಿಕೆ ನೀಡುವ ಉಲುವಾಗಿಯೇ ಈ ಸಂಸ್ಥೆಯ ತೆರೆದರು



ಪ್ರಕೃತಿಯ ಜೀಲಿ ಮಾನವನು ವಿಜಯ ಗಳಿಸಿ ಕೊಯನ ಆಣೆಕಟ್ಟು ನಿರ್ಮಿಸಿದ್ದಾನೆ ಕಟ್ಟೆಯ ಸ್ಥಳಕ್ಕೆ ಕಾಂಕ್ರೀಟ್ ಹಲಗೆಯನ್ನು ಒಯ್ಯುವ ಕೇಬಲ್" ಈ ವಿಜಯದ ಸೇತುವೆ

ವಿಶ್ವಸಂಸ್ಥೆಗಿಂತಲೂ ಗ್ರೋಷಿಯನ್ ಫೌಂಡೇಷನ್ ಒಂದು ಹೆಜ್ಜೆ ಮುಂದಿಟ್ಟಿದೆ ಜಗತ್ತಿನ ಯಾವುದೇ ದೇಶಕ್ಕೆ ಸೇರಿದ ವರಾಗಿದ್ದು, ತಾಟಸ್ಥ್ಯ ಮನೋಭಾವನೆಯನ್ನು ಹೊಂದಿರುವ ದೇಶದವನಾದರೂ ಸರಿ, ಕಮ್ಯೂನಿಸ್ಟ್ ದೇಶದವನಾಗಿದ್ದರೂ ಸರಿ, ಇದ್ದಿನ ಪದಸ್ಥರೆಲ್ಲರಿಗೂ ಸಮಾನ ಸ್ಥಾನವನ್ನು ನೀಡಲಾಗುವುದು

ಅಮೆರಿಕಾದ ಅಂಡ್ರೂ ಜಿ ಹ್ಯಾಲಿ, ಮಾಸ್ಕೋ ವಿಶ್ವವಿದ್ಯಾಲಯದ ಡಾ|| ಯಾಜಿಲ್ ಕೊರೋವಿನ್, ಜಪಾನಿನ ಪ್ರೊಫೆಸರ್ ಓಕಾವೋ ಹ್ಯಾಜೆ ಸಾವಾ, ಪಂಜಾಬ್ ವಿಶ್ವವಿದ್ಯಾಲಯದ ಡಾ|| ಖುಜೀ ಎಸ್ ಅಹಮ್ಮದ್ ಲೈಬ್ರರಿ ವಿಶ್ವವಿದ್ಯಾಲಯದ ಡಾ|| ಗೋಂಜಾ ಕುಸೇಜ್, ಜಿಲಿ ದೇರದ ಡಾ|| ಜೂಲಿಯೋ ಎಸ್ಕುಡೆರೋ ಗೊಂಜಾಲ್ವ್, ಬ್ರಿಟನ್ನಿನ ನೋಬೆಲ್ ಪಾರಿತೋಷಕ ವಿಜೇತ ಡಾ|| ಬರ್ಟ್ರಂಡ್ ರಸ್ಸೆಲ್ ಎತ್ತು ಜರ್ಮನಿಯ ಹಿಡೆಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಡಾ|| ಪ್ರೆಡರಿಚ್ ವಾನ್ ಡಾಂಕಾರ್ಮ್ಟ್—ಮುಂತಾದ ಬೇರೆ ಬೇರೆ ದೇಶಗಳಿಗೆ ಸೇರಿದ ಪ್ರತಿಭಾವಂತರಿಂದ ಕೂಡಿದ ಸವಿತಿಯೊಂದು ಈ ಸಂಸ್ಥೆಯ ಆಡಳಿತವನ್ನು ನೋಡಿಕೊಳ್ಳುತ್ತಿದೆ

ಈ ಸಂಸ್ಥೆಯ ಸ್ಥಾಪಕರಾದ ಹ್ಯಾನ್ಸ್ ಕೆಲ್ಲರರಿಗೆ ಇದರಲ್ಲಿರುವ ಭಕ್ತಿಯ-ಅಪಾರ ಇವರು ತಮ್ಮ ಸ್ವಂತ ಹಣದಿಂದ ಮ್ಯೂನಿಚ್ಚಿನಲ್ಲಿರುವ ಒಂದು ಪುರಾತನ ಭವನವನ್ನು ಕೊಂಡು ಪ್ರಪಂಚದ ಎಲ್ಲೆಡೆಯಿಂದಲೂ ಬರುವ ಗ್ರೋಷಿಯನ್ ಭಕ್ತರಿಗೆ ತಂಗಲು ಅನುವು ಮಾಡಿಕೊಟ್ಟಿದ್ದಾರೆ ಈ ಪ್ರತಿನಿಧಿಗಳೆಲ್ಲಾ ಕಲೆತು ಚರ್ಚಿಸುವುದೂ ಇಲ್ಲಿಯೇ ಈ ಸಮಾಲೋಚನೆಗಳಿಗೆ ಈ ಪುರಾತನ ಭವನದ ಹಳೆಯ ದರ್ಗವು ಅತ್ಯಂತ ಪ್ರಶಸ್ತವಾಗಿದೆ, ಸುತ್ತಲೂ ಅರಣ್ಯಗಳಿಂದ ಕೂಡಿ ಅತ್ಯಂತ ಪೋಷಕವೂ ಆಗಿದೆ

ಈ ಸಂಸ್ಥೆಯನ್ನು ಈ ದುರ್ಗಾದಲ್ಲಿ ಇದೇ ವರ್ಷಾಂತದಲ್ಲಿ ಉದ್ಘಾಟಿಸಲಾಗುವುದು ಜಗತ್ತಿನ ವಿವಿಧತ್ರೇಳಿ ಪ್ರದೇಶಗಳಿಂದ ನಾವಿರ ಪ್ರತಿನಿಧಿಗಳನ್ನು ಹೊಂದಿರುವ ಈ ಸಂಸ್ಥೆಯು ಉದ್ಘಾಟನೆಯನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲಾಗುವುದು ಈ ಹೂಸ ಮಂದಿರದಲ್ಲಿ ಕಟ್ಟಲಗಿರುವ ರಂಗ ಮಂಟಪದಲ್ಲಿ ಆದಿನ ಹ್ಯೂಗೋ ಗ್ರೋಷಿಯಸ್ ರಚಿಸಿದ 'ಪ್ರೈವೈಸ್ ಪೇಸನ್ಸ್' ಎಂಬ ಮಹತ್ವಕರವಾದ ನಾಟಕವನ್ನು ಅಭಿನಯಿಸಲಾಗುವುದು. ಇದನ್ನು ಅತ್ಯಂತ ಮನೋಜ್ಞವಾದ ರೀತಿಯಲ್ಲಿ ಡಾ|| ಹ್ಯಾನ್ಸ್ ಕೆಲ್ಲರ್‌ರವರು ಅನುವಾದಿಸಿದ್ದಾರೆ

ಬೇರೆ ಬೇರೆ ದೇಶಗಳ ನ್ಯಾಯಶಾಸ್ತ್ರವನ್ನು ಅರಿಯಲೂ, ಸರ್ವ ದೇಶೀಯರೂ ಒಂದಡೆ ಕಲೆತು ವಿಚಾರ ವಿನಿಮಯವನ್ನು ಮಾಡಿಕೊಳ್ಳಲೂ ಅತ್ಯಂತ ಸೂಕ್ತ ಕೇಂದ್ರವಾದ ಈ ಗ್ರೋಷಿಯನ್ ಸಂಸ್ಥೆಯು ಉತ್ತರೋತ್ತರ ಪ್ರಗತಿಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ

ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ ಎಸ್ ಪಂಚಾಪಕೇಶ ಅಯ್ಯರ್
ಎಂ ಎ, ಐ ಸಿ ಯೆಸ್, ಬಾರ್-ಎಟ್-ಲಾ, ಎಫ್ ಆರ್ ಎಸ್ ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ಗಾತ್ರದ ಕಥೆಗಳು ಬೆಲೆ ರೂ 1—75 ನ ಪೈ.
ಅನುವಾದಕರು. ವಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ

ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ ವಾಗಿಯೂ ಇರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ಸ್

ಪ್ರಜಾಪ್ರಭುತ್ವ ಮತ್ತು ಕಮ್ಯೂನಿಸಂ

(ಅನೇ ಪುಟದಿಂದ)

ಶಂತ್ರುತ್ವಕ್ಕೆ ತಮ್ಮ ಮೂಲಭೂತ ಅಡಚಣೆಗಳಾದ ಯುಗ ಯುಗಾಂತರಗಳ ಶಾಪವಾದ ದಾರಿದ್ರ್ಯ ಹಾಗೂ ಜಜ್ಜಾನಗಳನ್ನು ತೊಡೆಯಲು ತಮ್ಮ ಹೊಸ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬೇಕೆಂಬುದು ಉದಯೋನ್ಮುಖ ರಾಷ್ಟ್ರಗಳ ಪ್ರಥಿಜ್ಞೋದ್ದೇಶ

ಇದೇ ಅವಧಿಯಲ್ಲಿ ಉತ್ತರ ಅಟ್ಲಾಂಟಿಕ್ ಪ್ರದೇಶವೂ ಅಭೂತಪೂರ್ವವಾದ ಬೆಳವಣಿಗೆ ಹಾಗೂ ಸಂಪದಭಿವೃದ್ಧಿಗಳ ಸಮಾಹುತ್ಸಾಹ ಯುಗದಲ್ಲಿ ಪದಾರ್ಪಣೆ ಮಾಡುತ್ತಿದೆ. ಇತಿಹಾಸದಲ್ಲೇ ಅತ್ಯಂತ ಮುಂದುವರಿದ ಕೈಗಾರಿಕಾ ಹಾಗೂ ತಾಂತ್ರಿಕ ತಳಹದಿಯ ಮೇಲೆ ಆರಂಭವಾಗಿ, ಪ್ರಾದೇಶಿಕ ಐಕ್ಯದಿಂದ ಉತ್ತೇಜನಗೊಂಡ ಈ ಬೆಳವಣಿಗೆ ಹೊಸ ಉದಯೋನ್ಮುಖ ರಾಷ್ಟ್ರಗಳು ಅವಲಂಬಿಸಬೇಕಾದ ಬಂಡವಾಳದ ಹಾಗೂ ತಾಂತ್ರಿಕ ಹಾಗೂ ವೈಜ್ಞಾನಿಕ ಸಾಧನೆ ಸಿದ್ಧಿಗಳ ಸಂಪನ್ಮೂಲವನ್ನೇ ಒದಗಿಸುತ್ತವೆ.

ಅಟ್ಲಾಂಟಿಕ್ ಸಮುದಾಯದ ಯಶಸ್ಸಿನಲ್ಲಿ ಅಮೆರಿಕ ಒಡ್ಡಿದ ಪಣ ಭಾಗಿಯಾಯಿದು. ಇದು ಯುದ್ಧಾನಂತರದ ತಲೆಮಾರಿನ ಚರಿತ್ರಾರ್ಹ ಸೃಷ್ಟ್ಯಾತ್ಮಕ ಅಭಿವೃದ್ಧಿಗಳಲ್ಲಿ ಒಂದು. ಅಟ್ಲಾಂಟಿಕ್ ಸಮುದಾಯ ಸಾರ್ವತ್ರಿಕ ಹಿತಕ್ಕೆ ವಿರುದ್ಧವಾದ ದಾರಿಯಲ್ಲಿ ಹೋಗಿದೆ ಸಮಗ್ರ ಜಗತ್ತಿನ, ವಿಶೇಷತಃ ಅಭಿವೃದ್ಧಿಯ ಹಾದಿಯಲ್ಲಿ ಹೊರಟ ರಾಷ್ಟ್ರ. ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಗಳಿಗೆ ಪೋಷಣೆಯನ್ನೂ ನವ ಜೈತನ್ಯವನ್ನೂ ನೀಡುವ ಹಾದಿಯಲ್ಲಿ ಹೋಗಬೇಕೆಂಬುದು ಅಮೆರಿಕದ ನಿರ್ಧಾರ.

ಬೆಳೆಯುತ್ತಿರುವ ಅಟ್ಲಾಂಟಿಕ್ ಸಮುದಾಯಕ್ಕೆ ಬೆಂಬಲ ನೀಡಬೇಕು ಮತ್ತು ಅದನ್ನು ಪ್ರಪಂಚದ ಐಕ್ಯತೆಯ ನಾಡಿನಿಗಾಗಿ ಸೃಷ್ಟಿಶೀಲ ಶಕ್ತಿಯನ್ನಾಗಿ ಬಳಸಬೇಕೆಂಬ ಎರಡು ಉದ್ದೇಶಗಳೂ ಅಮೆರಿಕಕ್ಕಿವೆ. ಈ ಮೂಲಕ ಸಂಘ ಸ್ವಾತಂತ್ರ್ಯದ ಸಂಸ್ಥೆಗಳನ್ನು ನಾವು ನಡೆಸಬೇಕು ಹೀಗೆ ನಾವು ಪ್ರಾಯರಃ ಇತರ ಖಂಡಗಳಿಗೂ ಕೊನೆಯಲ್ಲಿ ಆಗಲೇ ಬೇಕಾದ ಖಂಡಗಳ ಸಂಘಟನೆಗೂ ಮಾದರಿಗಳನ್ನು ಒದಗಿಸಬಹುದು. ತಾಂತ್ರಿಕ ಸಹಕಾರದ ವಿಶ್ವಸಂಸ್ಥೆಯ ಕಾರ್ಯಕ್ರಮಗಳು, ಪ್ರಪಂಚದ ಬ್ಯಾಂಕು, ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ, ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಘ ಆಹಾರ ಹಾಗೂ ವ್ಯವಸಾಯದ ಸಂಸ್ಥೆ, ವಿಶ್ವಸಂಸ್ಥೆಯ ಇತರ ಅಂಗಗಳು ಹೀಗೆ ಪ್ರಪಂಚ ವ್ಯಾಪಕವಾದ ಎಲ್ಲ ಸಂಸ್ಥೆಗಳನ್ನು ನಾವು ಉಪಯೋಗಿಸಿಕೊಳ್ಳಬೇಕು. ಅಂತರತಃ ಅತ್ಯಗತ್ಯ ಮೂಲಕ ಕೊಡಲಾಗುವ ಅಟ್ಲಾಂಟಿಕ್ ಸಹಾಯ ಅಟ್ಲಾಂಟಿಕ್ ಸಮುದಾಯ ಹಾಗೂ ಅಂತರರಾಷ್ಟ್ರೀಯ ಸಮೂಹಜಗತ್ತನ್ನೂ ಒಕ್ಕೂಟವನ್ನೂ ಬಲಪಡಿಸುವುದು.

ವಾಸ್ತವವಾಗಿ ಅಟ್ಲಾಂಟಿಕ್ ಸಮುದಾಯಕ್ಕೆ ಮುಂಚಿಗಿಂತಲೂ ಹೆಚ್ಚು ಜೈತನ್ಯದಿಂದ ಹೆಚ್ಚು ವಿಸ್ತೃತವಾದ ಉಪಕ್ರಮಗಳಲ್ಲಿ—ಸಾಂಸ್ಕೃತಿಕ ವಿಷಯದಲ್ಲಿ, ಹೊರ ಅಂತರಿಕ್ಷದ ವಿಜ್ಞಾನ ಹಾಗೂ ಟೆಕ್ನಾಲಜಿಯಲ್ಲಿ ಮತ್ತು ಸಮಗ್ರವಾಗಿ ಅಭಿವೃದ್ಧಿಯ ದಶಕದಲ್ಲಿ ಭಾಗವಹಿಸಲು ಸಾಧ್ಯವಾಗುವುದು.

ಪ್ರಶಂಚದ ಮುಂದುವರಿದ, ಅದೃಷ್ಟಶಾಲಿ ರಾಷ್ಟ್ರಗಳು ನಮ್ಮ ಸಂಘವನ್ನು ನಿರ್ಮಿಸುತ್ತಿರುವುದು ನವ್ಯಸರ್ವಮಾನ್ಯ ನೂತನೀಯ ಹೊಣೆಗಾರಿಕೆಗಳಿಂದ ಹಿಂದರಿಯುವ ಉದ್ದೇಶದಿಂದಾಗಿರದೆ, ಅವುಗಳನ್ನು ಹೆಚ್ಚು ಗಾಢವಾಗಿ ಹಾಗೂ ಪರಿಣಾಮಕಾರಿಯಾಗಿ ಪಂಥೋದ್ಧರಿಸುವ ಉದ್ದೇಶದಿಂದಾಗಿರುತ್ತದೆ. ನಮ್ಮ ಸ್ಥಿತ ಸಂಪತ್ತಿನ ಬಗೆಗೆ ಅಂತರ್ಮುಖಿಯಾಗಿಲ್ಲ, ನಮ್ಮ ಸರ್ವ ಸಮೂಹ ಮಾನವೀಯ ಕರ್ತವ್ಯಗಳತ್ತ ಬಹಿರ್ಮುಖಿಗಳಾಗಲು, ಎಂಬುದನ್ನು ಸ್ಪಷ್ಟಪಡಿಸಲು ನಾವು ಎಲ್ಲ ಸಂದರ್ಭಗಳಲ್ಲೂ ಪ್ರಯತ್ನಿಸುವೆವು

ಶಾಂತಿಕಾಲದ ಸ್ಪರ್ಧೆಗಳಲ್ಲಿ ಮೂತ್ರವೇ ಪ್ರಪಂಚದಲ್ಲಿ ಬಹಿರಂಗ ಸಮೂಹದ ಶಕ್ತಿಗಳು ಬಾಳಿ ವೃದ್ಧಿಗೊಳ್ಳಬಲ್ಲವು ಹಾಗೂ ವೈವಿಧ್ಯಪೂರ್ಣ ಮಾನವರ ಸೃಷ್ಟಿಶೀಲತೆಗೆ ಹಾಗೂ ಪ್ರಗತಿಗೆ ಆತ್ಯುತ್ತಮ ವಾತಾವರಣ ಎಂದು ನಾವು ನಂಬುತ್ತೇವೆ ಇತಿಹಾಸದ ಅನಿವಾರ್ಯತೆಯ ಎಲ್ಲ ತಕ್ಕಗಳನ್ನೂ, ರಾಜಕೀಯ ಹಾಗೂ ಸಾಮಾಜಿಕ ವಿಧಿವಾದದ ಎಲ್ಲ ಸಿದ್ಧಾಂತಗಳ ನ್ನೂನಾನ್ಯತೆ ನಿರಾಕರಿಸುತ್ತೇವೆ. ಯಾವುದೇ ದೇಶಕ್ಕೆ ಶಾಶ್ವತ ಸರಿಯೆಂದು ಭಾವಿಸುವ ವಿಷಯವನ್ನು ಇತರರ ಮೇಲೆ ಹೇರುವ ಪ್ರಯತ್ನ ಪೂರ್ಣ ಅರಿವಿದೆಯೇ ಎಂಬುದು ನಮಗೆ ಸಂದೇಹಾಸ್ಪದವಾಗಿರುತ್ತದೆ. ಆಂತರಾಷ್ಟ್ರೀಯ ವ್ಯವಸ್ಥೆಯು ಒಂದು ಸರ್ವಸಮೂಹ ಜ್ಞಾತಿಟ್ಟನ್ನು ಸ್ವೀಕರಿಸುವ ಸ್ವತಂತ್ರ ರಾಷ್ಟ್ರಗಳ ಜಾಗತಿಕ ಸಮುದಾಯವು ನಮ್ಮ ಭೀರಗಳ ರಕ್ಷಣೆಗೆ ಹಾಗೂ ನಮ್ಮ ಜನರ ಭದ್ರತೆಗೆ ಅತ್ಯುತ್ತಮ ಭರವಸೆಯನ್ನು ಒದಗಿಸುತ್ತದೆ ಎಂಬುದನ್ನು ನಾವು ಬಲ್ಲೆವು ವಿಶ್ವಸಂಸ್ಥೆಯ ಪ್ರಣಾಳಿಕೆಯು ಪ್ರಪಂಚಕ್ಕೆ ನಾವು ಬದ್ಧರಾಗಿರುವುದು ನಮ್ಮ ಬಹು ಆಳವಾದ ತಾತ್ವಿಕ ಸಂಪ್ರದಾಯಗಳನ್ನು ಹಾಗೂ ನಮ್ಮ ರಾಷ್ಟ್ರೀಯ ಹಿತಾರ್ಥದ ಅತ್ಯಂತ ವಾಸ್ತವಿಕ ವಿವರಣೆಯನ್ನೂ ವ್ಯಕ್ತಪಡಿಸುತ್ತದೆ.

ವಿಶ್ವಸಂಸ್ಥೆಯಲ್ಲಿ ಕೇವಲ ಮಾತಿಗಾಗಿ ನಾವು ನಮಗೆ ಕೆಲವೊಮ್ಮೆ ಹೀಗೆ ಕಾಣುತ್ತದೆ—ಈ ಸಂಸ್ಥೆಯ ಹೆಸರು ಸರಿಯೂ ದುದು ಆದರೆ ಇದರ ಗುರಿ ಸರಿಯಲ್ಲ ನಿಕರವಾಗಿ ಹೇಳುವುದಿದ್ದರೆ ಇದಕ್ಕೆ ಒಗ್ಗೂಡುತ್ತಿರುವ ರಾಷ್ಟ್ರಗಳ ಸಂಸ್ಥೆ ಎಂಬ ಹೆಸರಿರಬೇಕು. ಶಾಂತಿವಾಲನೆಗಾಗಿ ಅದನ್ನು ಸ್ಥಾಪಿಸಲಾಯಿತು; ಆದರೆ ಅಂಥ ಶಾಂತಿ ಇಂದಿಗೂ ಸ್ಥಾಪಿತವಾಗಿಲ್ಲ. ಆಗಾಗ್ಗೆ ಉಂಟಾಗುವ ಚಿಕ್ಕಪುಟ್ಟ ಕಲಹಗಳ ನಿರ್ವಹಣೆಕ್ಕೆಂದು ಈ ಸಂಸ್ಥೆ ಸ್ಥಾಪಿತವಾಗಿಲ್ಲ. ಇದರ ಆಕಾಂಕ್ಷೆಗಳ ಗುರಿದ್ರ, ತೋರಿಕೆಗೆ ಹೊಂದಾಣಿಕೆಯಿಲ್ಲವೆಂದು ಕಾಣುವ ವಿಷಯಗಳಿಂದನೆ ಸಂತಕ ಹೊಯ್ದಾಟದ ಸಂಕೇತ ಮತ್ತು ಪ್ರಲೋಭನೆಗೊಳಗಾಗುವಷ್ಟು ಸ್ಪಷ್ಟತೆಯಿರುವ ಆದರೆ ನಮ್ಮನ್ನು ವಿಭಜಿಸುವ ಸಂಕುಚಿತ ತಾರ್ಕಿಕ ಸಿದ್ಧಾಂತಗಳನ್ನು ಮೀರಿದ; ಸ್ಪಷ್ಟತೆ ಕಡಿಮೆಯಿರುವ ಆದರೆ ಹೆಚ್ಚು ವಿಶಾಲವಾಗಿರುವ ಹಾಗೂ ಆಳವಾಗಿರುವ ಸಹನೆಗೆ ಇದು ಪ್ರಯತ್ನವಾಗಿರುತ್ತದೆ. ಅಂಥ ಸಹನೆ ಹಾಗೂ ಭಾತೃತ್ವವೇ ಮಾನವಕುಲವನ್ನು ರಕ್ಷಿಸಬಲ್ಲದು.

ಇಂಥ ವಿಧಾನ ಎಷ್ಟು ನಿಧಾನ ಹಾಗೂ ಆಕಾಂಕ್ಷೆಯ ಗುರಿ ಎಷ್ಟು ದೂರ ಎಂದು ಭಾಸವಾಗುತ್ತದೆ. ಆದರೆ "ಮಾನವನ ಗಮ್ಯಪ್ರಪು ಅತನ ಹಿಡಿತವನ್ನು ಮೀರಬೇಕು ಇಲ್ಲದಿದ್ದರೆ ಸ್ವರ್ಗವೇತಕ್ಕೆ?" ಕಾಲಾತೀತ ಸಂಪ್ರದಾಯಗಳ ಎಲ್ಲ ಆತಂಕಗಳ ವಿರುದ್ಧವಾಗಿ ಮಾನವ ಕುಲವನ್ನು ಸಹಿಷ್ಣುತೆಯೇ ಆಧಾರವಾಗಿ ಉಳ್ಳ ಶಾಂತಿಯುತ್ತ ಒಯ್ಯಲು ಶಾಂತಿಯ ಹಂಬಲ ಹಾಗೂ ಭ್ರಾತೃತ್ವದ ಭಾವನೆಯೇ ಸಾಧಕವಲ್ಲದೆ, ಕೇವಲ ಯುದ್ಧ ಭೀತಿ ಸಾಧಕವಲ್ಲ. ಈ ವಿಧಾನವು ಹಿಮಗಡ್ಡೆಯಂತೆ ನಿಧಾನ, ಆದರೆ ಅಸ್ಪೋ ಶಕ್ತಿಶಾಲಿ.

ಈ ಪಥದಲ್ಲಿ ಮುಂದುವರಿಯುವಾಗ ಎಲ್ಲಾವರೊಂದಿಡೆ; ನವುಗೆಲ್ಲರಿಗೂ—ರಷ್ಯನ್ನರಿಗೆ, ಅಮೆರಿಕನರಿಗೆ, ಯುರೋಪಿಯನರಿಗೆ, ಲ್ಯಾಟಿನ್ ಅಮೆರಿಕನರಿಗೆ, ಏಷ್ಯನರಿಗೆ ಮತ್ತು ಆಫ್ರಿಕನರಿಗೆ, ನಮ್ಮ ಸೈನ್ಯಗಳಂದ ಭೀಕರ ಆಯುಧಗಳನ್ನು ನಿವಾರಿಸಬೇಕಾದ ಅವಶ್ಯಕತೆಯೂ ಬರಲಿದೆ ವಾತ್ಸವಾಂಶಗಳ ಜೊತೆಗೂ ಅನಿರ್ಬಂಧ, ಸ್ನೇಹಪರ ಸಂಘಾಸಕ್ತಿಗಳ ಸ್ವಚ್ಛ ವಾರುತಗಳಿಗೆ ನಮ್ಮ ಸೀಮೆಗಳನ್ನು ತೆರೆಯುಬೇಕಾದ ಅವಶ್ಯಕತೆ ಬಂಲಿದೆ ಇಡೀ ಜನಾಂಗಗಳನ್ನೇ ಕಾಲ್ಪನಿಕ ಶತ್ರುಗಳ ಭೀತಿಯಲ್ಲಿ ಜೀವಿಸುವಂತೆ ಮಾಡುವ ಮತಾಂಧ ಸಿದ್ಧಾಂತಗಳನ್ನು ತ್ಯಜಿಸಬೇಕಾದ ಅವಶ್ಯಕತೆ ಬಂಲಿದೆ.

ಇಂದಿನ ಭಯಗ್ರಸ್ತ ತಲೆಮಾರಿನಲ್ಲಿ ಶಾಂತಿಯು ಸಧವು ಮುಕ್ತ ಜಗತ್ತಿನ ಸಾಧನೆಯ ಪಥವೆಂಗಿರುತ್ತದೆ ಎಂಬ ನಮ್ಮ ಅನುಭವ ಸಿದ್ಧ ಸತ್ಯವನ್ನಾಧರಿಸಿ ನಾವು ನಮ್ಮ ಕಾರ್ಯವನ್ನು ರೂಪಿಸಬೇಕು, ಇದು ಒಂದು ಜನಾಂಗದ, ಖಂಡು ಸಾಮ್ರಾಜ್ಯದ ಆಧಾರ ಒಂದು ವ್ಯವಸ್ಥೆಯ ರಕ್ಷಣೆಗಲ್ಲ, ಮಾನವ ಕುಲದ ರಕ್ಷಣೆಗೇ ಅವಶ್ಯ.

ಸಹನೆಯು ಶಾಂತಿಯ ಸೂಕ್ರವಾಗಿರುತ್ತದೆ. ಏಕೆಂದರೆ, ಭಿನ್ನ ಜನಾಂಗಗಳ, ವ್ಯವಸ್ಥೆಗಳ ಹಾಗೂ ಸಂಸ್ಕೃತಿಗಳ ನಡುವೆ ಪರಸ್ಪರ ಸಹನೆಯಿಲ್ಲದಿದ್ದರೆ ಶಾಂತಿಯಿರಲಾರದು, ಶಾಂತಿಯುತ ಸಹ-ಅಸ್ತಿತ್ವವೆಂದರೆ, ಯಾವುದೆ ಒಂದು ವ್ಯವಸ್ಥೆಗೆ ಇನ್ನೊಂದನ್ನು "ಹೊಳಲು", ಅವಕಾಶ ಕೊಡಬೇಕಾಗಿಲ್ಲ, ಅದಕ್ಕೆ ಅಸ್ಪದವೂ ಇಬಾರದು. ಈ ಜಗತ್ತು ಯಾವಾಗಲೂ ವೈವಿಧ್ಯಪೂರ್ಣ ಜಗತ್ತಾಗಿರುವುದು, ಸದಾ ಬದಲಾಗುತ್ತಿರುವ ಸಮತಾನವಿಲ್ಲದ ನಂಬಿಕೆಗಳು ಹಾಗೂ ಸಂಪ್ರದಾಯಗಳಿಂದ ಕೂಡಿರುತ್ತದೆ. ವಿವಿಧ ಪ್ರಯೋಗ ಹಾಗೂ ಅಭಿವೃದ್ಧಿ ವಿಧಾನಗಳಿಂದಲೇ ಮಾನವ ಪ್ರಗತಿಸಾಧಿತವಾಗಿರುತ್ತದೆ, ಇದಕ್ಕೆ ಪ್ರಪಂಚದಲ್ಲಿ ಸಹನೆ ಹಾಗೂ ಸ್ವತಂತ್ರ್ಯದ ವಾತಾವರಣ ಅವಶ್ಯ.

ಅನಿರ್ಬಂಧ ವಾತಾವರಣ ಹಾಗೂ ಅಂಥ ವಾತಾವರಣದಿಂದ ಉಂಟಾಗುವ ಅರಿವು ಸಹನೆಗೆ ಅವಶ್ಯ. ಮಹಾರಾಷ್ಟ್ರಗಳು ಉಳಿದ ಪ್ರಪಂಚದಿಂದ ಪ್ರತ್ಯೇಕವಾಗಿದ್ದು ರಹಸ್ಯವಾಗಿ ಮುಂದುವರಿದರೆ, ಕಮ್ಯೂನಿಸ್ಟ್ ಕೈಕ್ಯಗಳನ್ನು ನಿರ್ಬಂಧಗಳಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬೆಳೆಸಿದರೆ, ವಿದೇಶೀಯರೆಲ್ಲ ಕುಹಕಿಗಳೆಂಬ ಕಂಠರ್ಯ, ಭಯದ ವಾತಾವರಣವನ್ನು ಬೆಳೆಸಿದರೆ, ಜೊರಗಿನ ಸುದ್ದಿ, ಪತ್ರಿಕೆಗಳು, ಪುಸ್ತಕಗಳು ಹಾಗೂ ಪ್ರಸಾರಗಳನ್ನು ನಿರ್ಬಂಧಿಸಿದರೆ, ಸಂಚಾರವನ್ನು ನಿರ್ಬಂಧಿಸಿ, ತಮ್ಮ ಪ್ರದೇಶದ ಹೆಚ್ಚಿನಂಶಗಳನ್ನು ರಹಸ್ಯವಾಗಿರಿಸಿದರೆ, ಸಹನೆ ಅಥವಾ ತಿಳುವಳಿಕೆಯ ಅಳವ್ಯದ್ಧಿಗೆ ಅವಕಾಶವಿಲ್ಲವೇ ಅನಿರ್ಬಂಧ ವಾತಾವರಣದಲ್ಲಿ ಮಾತ್ರವೇ, ಇಂದು ಪ್ರಪಂಚದ ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಅಪನಂಬಿಕೆಯನ್ನು ನಿವಾರಿಸಲು ಸಾಧ್ಯ, ಮುಕ್ತ ಸಮಾಜಗಳಿದ್ದರೆ ನೂತ್ರವೇ, ನವುಗೆಲ್ಲರಿಗೂ ಪರಸ್ಪರೊಡನೆ ವಿಶ್ವಾಸ ಹಾಗೂ ಶಾಂತಿಯಲ್ಲಿ ಜೀವಿಸಲು ಬೇಕಾದ ಸಹನೆಗೆ ಅಸ್ಪದ ಇಂಟಾಗಬಲ್ಲದು.

ಮೊಸ ಪುಸ್ತಕ—

ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಜಾಪುರ.

ನವಯುಗ ಪ್ರೆಸ್, ಉಡುಪಿ.

ಯುವಕರಿಗೊಂದು ಕರೆ

ಸೈನಿಕ ಶಾಲೆಗಳಿಗೆ ಸೇರಬೇಕು

ಮಾತೃ ಭೂಮಿಯ ರಕ್ಷಣೆಯಲ್ಲಿ ಭಾರತೀಯ ಯೋಧರು ಮುನ್ನಡೆಯುತ್ತಿರುವ ದೃಶ್ಯ

ದೇಶದಲ್ಲಿ ರಕ್ಷಣಾ ಸಿಬ್ಬಂದಿಗಾಗಿ ಬೇಡಿಕೆ ಹೆಚ್ಚಿಗಾಗಿದ್ದು ನವ ಮಿಲಿಟರಿ ರಕ್ಷಣಾ ಸಂಸ್ಥೆಗಳಿಗೆ ಅಭ್ಯರ್ಥಿಗಳನ್ನೊದಗಿಸುವ ಸಹಾಯಕ ಸಂಸ್ಥೆಗಳ ಅವಶ್ಯಕತೆ ಹೆಚ್ಚುತಿದ್ದು 'ಸೈನಿಕ ಶಾಲೆ' ಇಂತಹ ಸಹಾಯಕ ಸಂಸ್ಥೆಗಳಲ್ಲೊಂದು. ದೇಶದಲ್ಲಿನ ಸೈನಿಕ ಶಾಲೆಗಳು ೧೦ರಿಂದ ೧೩ ವರ್ಷದ ವಯಸ್ಸಿನ ಬಾಲಕರಿಗೆ ಮಿಲಿಟರಿ ವಿಷಯಗಳ ಬಗ್ಗೆ ರಕ್ಷಣಾ ಸಚಿವಾಲಯದ 'ಸೈನಿಕ್ ಸ್ಕೂಲ್ ಸೊಸೈಟಿ' ಸಂಸ್ಥೆಯು ಈ ಶಾಲೆಗಳನ್ನು ನಡೆಸುತ್ತಿದೆ ಸೊಸೈಟೀಸ್ ರಿಜಿಸ್ಟ್ರೇಷನ್ ಕಾಯಿದೆಯ ಮೇರಿಗೆ ದಾಖಲಾತಿ ಪಡೆದ ಈ ಸ್ವಯಂ ಆಡಳಿತ ಸಂಸ್ಥೆಗೆ ಕೇಂದ್ರ ರಕ್ಷಣಾ ಮಂತ್ರಿ ಶಾಖೆಯು ನೆರವು ನೀಡುತ್ತಿದೆ ಸೈನಿಕ ಶಾಲೆಗಳನ್ನು ನಿರ್ವಹಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವ ರಕ್ಷಣಾ ಮಂತ್ರಿ ಶಾಖೆಯು ಈ ಶಾಲೆಗಳಲ್ಲಿನ ಹಲವಾರು ವಿದ್ಯಾರ್ಥಿಗಳಿಗೆ ವ್ಯಾಸಂಗನೇತನಗಳನ್ನು ಕೂಡುತ್ತಿದ್ದು ಶಾಲೆಗಳ ಪ್ರಿನ್ಸಿಪಾಲರ, ಹೆಡ್ಮಾಸ್ಟರ್ ಮತ್ತು ರಿಜಿಸ್ಟ್ರಾರ್‌ರವರ ವೇತನ ಮತ್ತು ಭತ್ತೆಗಳನ್ನೂ ರಕ್ಷಣಾ ಮಂತ್ರಿ ಶಾಖೆಯೆ ಕೊಡುತ್ತಿದೆ. ಕೇಂದ್ರ ಸರ್ಕಾರವು ನೇರವಾಗಿ ಸೈನಿಕ ಶಾಲೆಗಳನ್ನು ತೆರೆದಿರುವುದಲ್ಲದೆ ಕೆಲವು ತಮ್ಮ ರಾಜ್ಯದಲ್ಲಿ ಸೈನಿಕ ಶಾಲೆಗಳನ್ನು ತೆರೆಯುವುದಕ್ಕಾಗಿ ರಾಜ್ಯ ಸರ್ಕಾರಗಳಿಂದ ಮನವಿಗಳನ್ನು ಸ್ವೀಕರಿಸಲಾಗಿವೆ.

ಪ್ರಸ್ತುತ ಈಗಿರುವ ಸೈನಿಕ ಶಾಲೆಗಳ ವಿವರಗಳ ಪ್ರಕಾರ ಜುಲೈ ೧೯೭೧ರಿಂದ ಎರಡು ಸೈನಿಕ ಶಾಲೆಗಳನ್ನು ಹೊಸದಾಗಿ ತೆರೆಯಲಾಗುವುದಕ್ಕೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಅಲಯದ ಮೇರಿಗೆ ಈ ಶಾಲೆಗಳಲ್ಲಿ ಒಂದನ್ನು ಕರ್ನಾಟಕ ರಾಜ್ಯದ ಬಿಜಾಪುರದಲ್ಲಿಯೂ ಮತ್ತೊಂದನ್ನು ಬಿಹಾರ್ ರಾಜ್ಯದ ಗಲಯಂಬಲ್ಲಿ ಸ್ಥಾಪಿಸಲುಗುವುದು.

ಯುದ್ಧದಲ್ಲಿ ಯಶಸ್ಸನ್ನು ಗಳಿಸಲು ರಣರಂಗದಲ್ಲಿನ ಪರಾಕ್ರಮದ್ದೇ ನಿತ್ಯ ಜೀವನದ ವಿವಿಧ ಕ್ಷೇತ್ರಗಳಲ್ಲಿ—ಮುಖ್ಯವಾಗಿ ಕೈಗಾರಿಕಾ ಮತ್ತು ವ್ಯಾಪಾರ ಕ್ಷೇತ್ರದಲ್ಲಿನ ಶ್ರಮವೂ ಅಗತ್ಯ ಪ್ರಾಣಾಪಾಯದ ದೊಡನೆ ದೀರ್ಘಾವಧಿಗೂ ಹೋರಾಟ ಕಾಲದಲ್ಲಿ ಭಾರತದ ವೀರ ಯೋಧರಿಗೆ ಮತ್ತು ಸಾರ್ವಜನಿಕರಿಗೆ ಧೈರ್ಯ ಪ್ರೋತ್ಸಾಹಕ್ಕಾಗಿ ಪ್ರಮುಖ ಪತ್ರಿಕೆಗಳಲ್ಲಿ ಆಹಾರ ಪದಾರ್ಥಗಳು ದೊರಿಯುವಂತೆ ಮಾಡುವುದು ಪ್ರತಿಯೋರ್ವ ರೈತನ ಕರ್ತವ್ಯವಾಗಿದೆ ಇದಕ್ಕಾಗಿ ರೈತನು ಕೇವಲ ಶ್ರಮಪಟ್ಟು ದುಡಿದರೆ ಮಾತ್ರ ಸಾಲದು ಆಹಾರ ಉತ್ಪಾದನೆಯನ್ನೂ ದ್ವಿಗುಣಗೊಳಿಸುವಂತಹ ಸೂಕ್ತ ಪ್ರಯತ್ನವನ್ನು ಕೈಗೊಳ್ಳುವುದು ಅತಿ ಮುಖ್ಯ. ಈ ಪಥದಲ್ಲಿ ಹೆಚ್ಚು ಆಹಾರವನ್ನು ಬೆಳೆಯಲು ನಡೆಸಲಾದ ಆಂದೋಲನ ಬಹು ಮಟ್ಟಿಗೆ ಸಹಾಯಕವಾಗಿದೆ ವಿಸ್ತರಣ ಕಾರ್ಯಗಳು ಮತ್ತು ಸಮುದಾಯ ಅಭಿವೃದ್ಧಿ ಯೋಜನೆಗಳು ಹೆಚ್ಚು ಆಹಾರವನ್ನು ಬೆಳೆಯುವ ಕಾರ್ಯ ಯೋಜನೆಗೆ ಪೂರಕವಾಗಿವೆ

ಸೈನಿಕರ ಇನ್ನೊಂದು ಮುಖ್ಯ ಬೇಡಿಕೆ ಆಯುಧಗಳು ನವ ದೇಶದಲ್ಲಿನ ಆಯುಧಗಳ ಕಾರ್ಖಾನೆಗಳಲ್ಲಿ ಉತ್ಪಾದನೆಯನ್ನು ದ್ವಿಗುಣಗೊಳಿಸಲಾಗುತ್ತಿದೆ ಆಧುನಿಕ ಆಯುಧ ಸಾಧನಗಳ ಉತ್ಪಾದನೆಯಲ್ಲಿ ಸ್ವಪರಿಪೂರ್ಣತೆಯನ್ನು ಗಳಿಸುವ ಹೆಗ್ಗುರಿಯನ್ನಿಟ್ಟುಕೊಳ್ಳಲಾಗಿದೆ ಇದಕ್ಕಾಗಿ ದಿನವಿಡೀ ಕೆಲಸ ಅನಿವಾರ್ಯವಾಗಿದೆ ದಿನಕ್ಕೆ ಮೂರು ಷಿಫ್ಟ್‌ಗಳ ಮೂಲಕ ಕೆಲಸ ಬರೆದಿಂದ ಸಾಗಿದೆ ಆಯುಧ ಸಾಮಗ್ರಿಗಳ ಉತ್ಪಾದನೆಯಲ್ಲಿ ನಿರಂತರ ಪ್ರಗತಿಯನ್ನು ಕಾಣಬಹುದಾಗಿದೆ

೧೯೭೨-೭೩ರಲ್ಲಿ ೧೪೪೯ ಕೋಟಿ ರೂಗಳಷ್ಟು ಇದ್ದ ಉತ್ಪಾದನೆ ೧೯೭೩-೭೪ರಲ್ಲಿ ೪೫೦ ಕೋಟಿ ರೂಗಳಿಗೆ ಏರಿದೆ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಆಯುಧ ಸಾಮಗ್ರಿಗಳ ತಯಾರಿಕಾ ಕಾರ್ಖಾನೆಗಳನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಲು ಶ್ರಮ ಕೈಗೊಳ್ಳಲಾಗಿದೆ ಇದಕ್ಕಾಗಿ ಈ ಅವಧಿಯಲ್ಲಿ ೨೮೫ ಕೋಟಿ ರೂಗಳನ್ನು ಮಂಜೂರುಗೊಳಿಸಲಾಗಿದೆ ನೂತನ ಶಸ್ತ್ರಾಗಾರ ಕಛೇರಿಗೆ ವಿಶೇಷ ಗಮನ ನೀಡಲಾಗಿದೆ

ಭಾರತೀಯ ಸೇನಾ ವಿಭಾಗಕ್ಕೆ ಧೀರರಾದ ಯೋಧರನ್ನು ಹಾಗೂ ದಕ್ಷ ಸೇನಾನಿಗಳನ್ನು ನೀಡಿಸಿಕೊಳ್ಳುವ ಕಾರ್ಯ ಭರದಿಂದ ಸಾಗಿದೆ. ಪ್ರಾಯಂ ಸೇನಾ ಸಿಬ್ಬಂದಿವರ್ತು ಜೆಂಟ್ಲಿ ಸಿಬ್ಬಂದಿಯನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಳ್ಳಲಾಗುತ್ತಿದೆ ಅತ್ಯಲ್ಪ ಅವಧಿಯಲ್ಲಿ ಅಧಿಕ ಪ್ರಮಾಣದ ಸೇನಾನಿಗಳನ್ನು ಗಳಿಸಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಎನ್ ಜೆಸ್ಸಿ ಕವಿಷನ್‌ಗಳ ನೇಮಕ ಇವುಗಳಲ್ಲಿ ಒಂದು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪ್ರಾಯೋಜಿತ ಮತ್ತು ಹಂಗಾಮಿ ನೌಕರರ ಎಮರ್ಜೆನ್ಸಿ ಕವಿಷನ್‌ಗಳನ್ನು ಪಡೆಯಲು ಅವಕಾಶ ಮಾಡಿಕೊಡಲಾಗಿದೆ ಪ್ರಾದೇಶಿಕ ಸೇನೆಯಲ್ಲಿನ ಸಿಬ್ಬಂದಿ ವರ್ಗದವರೂ ಎನ್‌ಜಿಸಿ ಸಿ ಕವಿಷನ್‌ಗಳಿಗೆ ಅರ್ಹರಾಗಿದ್ದಾರೆ

ಸೇನಾ ವಿಭಾಗದ ಕ್ರೀಡಾ ಪಟುಗಳು (ಸರ್ವೀಸಸ್) ರಾಷ್ಟ್ರದ ಕ್ರೀಡಾ ಕ್ಷೇತ್ರದಲ್ಲಿ ಗಳಿಸುತ್ತಿರುವ ಯಶಸ್ಸು ಕೀರ್ತಿ ಮತ್ತು ಪ್ರತಿಭೆ ಎಂತಹವರಿಗೂ ಅಚ್ಚರಿಯನ್ನುಂಟು ಮಾಡದೆ ಇರದು ಯಾವುದೇ ಕ್ರೀಡಾ ಕೂಟದಲ್ಲಾಗಲಿ ಸೇನಾ ವಿಭಾಗದ ಕ್ರೀಡಾ-ಪಟುವಿನದೇ ಎತ್ತಿದ ಕೈ ಕಳೆದ ವರ್ಷ ಒಟ್ಟು ೧೪ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಸೇನಾ ವಿಭಾಗದವರಿಗೆ ದೊರಕಿತು. ಕ್ರಿಕೆಟ್ ಸ್ಪರ್ಧೆಯಲ್ಲಿ ಎರಡು ಪ್ರಶಸ್ತಿಗಳನ್ನು ಗಳಿಸಿದ ಸೇನಾ ವಿಭಾಗ ಅಥ್ಲೆಟಿಕ್ ಕಾರ್ಯಕ್ರಮದಲ್ಲಂತೂ ಅಧಿಕ ಪ್ರಶಸ್ತಿಗಳನ್ನು ಗಳಿಸಿತು. ಅಥ್ಲೆಟಿಕ್ಸ್, ಆಕ್ವಾಟಿಕ್ಸ್, ಬ್ಯಾಸ್ಕೇಟ್ ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಜಿಮ್ನಾಸ್ಟಿಕ್ಸ್, ಗಾಲ್ಫ್ ಮತ್ತು ಸ್ಕ್ವಾಷ್ ರಾಕೆಟ್ ಇವು ಸೇನಾ ವಿಭಾಗದ ಕ್ರೀಡಾಪಟುಗಳು ಯಾಂಪಿಯನ್‌ಷಿಪ್‌ಗಳಿಸಿದ ಸ್ಪರ್ಧೆಗಳು ತೂಕನೆನ್ನೆತ್ತುವುದು, ವಾಲಿಬಾಲ್, ಫುಟ್‌ಬಾಲ್ ಮತ್ತು ಹಾಕಿ ಕ್ರೀಡೆಗಳಲ್ಲಿ 'ರನ್ನರ್ಸ್' ರನ್ನರ್ಸ್ ಆಗಿ ನಿಂತಿದೆ ರಾಷ್ಟ್ರೀಯ ಕ್ರೀಡಾ ತಂಡಗಳಲ್ಲಿ 'ಎಂವಿಸಸ್' ಆಟಗಾರರು ಇಲ್ಲದ ಸಂದರ್ಭಗಳೇ ಅಪರೂಪ ಎಂದೇ ಅವರು ತಂತಾವಾ ಸ್ಪರ್ಧೆಯ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಖ್ಯಾತಿಗೆ ಕಾರಣರಾಗಿದ್ದಾರೆ

ಅಂತಾರಾಷ್ಟ್ರೀಯ ಸೇನಾ ಕ್ರೀಡಾ ಕೂಟಗಳಲ್ಲಿಯೂ ಭಾರತದ ಸೇನಾ ವಿಭಾಗದವರು ಎತ್ತಿದ ಕೈ ಎಂಬುದಕ್ಕೆ ಒಂದು ನಿದರ್ಶನವೆಂದರೆ ಇತ್ತೀಚೆಗೆ ಗಾಝಿಯಾಬಾದ್‌ನಲ್ಲಿ ನಡೆದ ವಿಶ್ವ ಸಂಸ್ಥೆಯ ತುರ್ತು ಪಡೆಯ ಕ್ರೀಡಾ ಟೂರ್ನಮೆಂಟ್‌ನಲ್ಲಿ ಪಾಲ್ಗೊಂಡ ಸೈನಿಕ ತಂಡಗಳು ಭಾರತದ ಸೈನಿಕ ತಂಡಗಳು ಒಟ್ಟು ೧೪ ಪಂದ್ಯಗಳಲ್ಲಿ ಜಯಗಳಿಸಿದ್ದಾರೆ.

ನಮ್ಮಲ್ಲಿ 14 ಕೆರೆಟ್ ಚಿನ್ನದ ವಿನ್ಯಾಭರಣಗಳು ಮೂರಂಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ ೫೩½% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ
ಬೇಡಿದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ರೇಟಿಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಜಳಿ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರಿಗೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ
ಮಾದುನೆ ಆಸಕ್ತಿಯನ್ನು ಸಮಯ ಬೇಕಾದ 14 CT ಚಿನ್ನದ Order ಪಡೆದುಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ

ಪ್ರೊಪ್ರೈಟರ್. ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ 66

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಶಾಸ್ತ್ರಿಗಳ ಸ್ವಪ್ನ

(ಎಸೇ ಜುಟಿಂದ್)

ರೈ. ಟಿಕೇಟು ತೆಗೆದು ರೈಲಿನಲ್ಲಿ ಕುಳಿತಾಗ ಅವರಿಗೆ, ಯೋಚನೆಗಳೆಡೆಯಲ್ಲೇ ಸ್ವಲ್ಪ ನಿದ್ರೆ ಹಿಡಿಯಿತು. ಆಗ ಅವರಿಗೊಂದು ಕನಸು ಬೀಳುತ್ತದೆ, ಆ ಕನಸೆಂದರೆ, ಭಯಂಕರವಾಗಿತ್ತು.

ಶ್ರೀ ರಾಜಾಜಿಯವರು ನಿರೂಪಿಸಿದ ಶಾಸ್ತ್ರಿಗಳ ಸ್ವಪ್ನ ಅತ್ಯಂತ ಮೂರ್ಖಿಕವಾಗಿದೆ ಅವರ ಉಲಪೇ ನಾಲ್ಕೂಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿದರೆ ನಾಶಕಾಗಬಹುದು ಆ ಕನಸು ಹೀಗಿತ್ತು—ರಾಮ ಚಂದ್ರನು ಇಂಗ್ಲೇಂಡಿನಿಂದ ಮರಳಿದ ಮೇಲೆ, ಅವನು ಸುಂದರನಾಗಿದ್ದರೂ - ಬ್ರಾಹ್ಮಣನಲ್ಲವೆಂಬ ಸಂದೇಹ ಎಲ್ಲರಿಗೂ ಉಂಟಾಗುತ್ತದೆ ಕೊನೆಗೆ ಆತ ಹರಿಜನರ ಹುಡುಗನೆಂದೇ ನಿರ್ಧಾರವಾಗುತ್ತದೆ. ಆತ, I. C. S. ಆದವನಲ್ಲ; ಆತ ಒಬ್ಬ ಕೂಲಿ, ಎಂದು ಬಗೆದ ಎಲ್ಲರೂ ಆತನನ್ನು ಹೊರಗೆ ನೂಕುತ್ತಾರೆ. ಆಗ ಗಾಬರಿಗೊಂದ ಶಾಸ್ತ್ರಿಗಳು ಮಗನೊಡನೆ ಮಬ್ಯಾಸಿಗೆ ಸೀತಾರಾಮ ಆಯ್ಯರಿಂದ್ಲಗೆ ಬರುತ್ತಾರೆ. ಅಲ್ಲಿಯೂ ಆತನಿಗೆ ಒಳಗೆ ಪ್ರವೇಶ ಸಿಕ್ಕುವುದಿಲ್ಲ. ಕಾರಿನ ಪ್ರಕಾರ ಹುಡುಗಿಯನ್ನು ಕೊಡವುದಿರಲಿ, ಆತ ಹೂಲೆಯರ ಹುಡುಗನೆಂದು, ಆತನ ಮುಖವನ್ನೂ ನೋಡುವುದಿಲ್ಲ. ಕೊನೆಗೆ ಕಳವಳಗೊಂಡ ಶಾಸ್ತ್ರಿಗಳು ಓರ್ವ ಸನ್ಯಾಸಿಯ ಬಳಿಗೆ ಹೋಗಿ ಮಗನನ್ನು ಶುದ್ಧೀಕರಿಸ ಬೇಕೆಂದು ಪ್ರಾರ್ಥಿಸುತ್ತಾರೆ. ಆಗ ಆ ಸನ್ಯಾಸಿ 'ಅವನು ಹಟ್ಟು ಹಾಂಡಲ! ಅವನ ದೇಹ ಸುಟ್ಟ ಮೇಲೆಯೇ ಶುದ್ಧಿಯಾಗೀತ!' ಎನ್ನುತ್ತಾನೆ, ಹೀಗೆ ಎಲ್ಲೆಲ್ಲಿ ಹೋದರೂ ಶಾಸ್ತ್ರಿಗಳಿಗೂ ರಾಮಚಂದ್ರನಿಗೂ—ಶಾಶ್ವತವೇ ಸಿಕ್ಕುವುದಿಲ್ಲ. ಯಾರೂ ಕೂಡಿ ಊಟ ಸೀದನ್ನು ಸಹಿ ಕೊಡುವುದಿಲ್ಲ ಕೊನೆಗೆ ತಂದೆ, ಮಗ, ಇಬ್ಬರೂ ಒಂದೇ ಕೆರೆಗೆ ಇಳಿದು ನೀರು ಕೂಡಿದಾಗ, ಆ ಗ್ರಾಮಸ್ಥರು ಚಂಡಾಲರು ಕರೆಯನ್ನು ಕೆಡಿಸಿದರು ಎಂದು ಬೊಬ್ಬೆಹುತ್ತ ಶಾಸ್ತ್ರಿಗಳನ್ನೂ ರಾಮಚಂದ್ರನನ್ನೂ ಜೆನ್ನಾಗಿ ಹೊಡೆಯುತ್ತಾರೆ! ರಾಮಚಂದ್ರನಿಗೆ ವಿಶೇಷ ಪೆಟ್ಟಾಗುತ್ತದೆ. ಈಗ ಶಾಸ್ತ್ರಿಗಳು ಭಯದಿಂದ 'ಅಯ್ಯೋ! ಅಯ್ಯೋ' ಎಂದು ಬೊಬ್ಬಿಡತ್ತಾರೆ! ಈ ಬೊಬ್ಬೆ ಕೇಳಿದ ರೈಲ್ವೆ ಟಿಕೇಟ್ ಚೆಕ್ಕರರು, ಶಾಸ್ತ್ರಿಗಳನ್ನು ಎಬ್ಬಿಸಿ ಟಿಕೇಟನ್ನು ಕೇಳುತ್ತಾರೆ. ಭಯದಿಂದ ನಡುಗುತ್ತಿದ್ದ ಶಾಸ್ತ್ರಿಗಳಿಗೆ, ಇಂಗ್ಲೇಂಡಿನಲ್ಲಿ I. C. S. ಕಲಿಯುತ್ತಿದ್ದ ರಾಮಚಂದ್ರನ ಭವಿಷ್ಯವನ್ನು ನೆನೆದು ಮತ್ತೂ ಭಯಂಕರವಾಗುತ್ತದೆ ಹೀಗೆ ಈ ಕನಸು ಪೂರ್ಣವಾಗುತ್ತದೆ.

ಹನಿಗತೆ

ವಾರಿಸುದಾರರು ಯಾರು?

ಗುರುನಾನಕರು ಮುಂದುಕರಾಗಿದ್ದರು ಮುಂದೆ ತನ್ನ ಗುರು ಪೀಠಕ್ಕೆ ಯಾರನ್ನು ವಾರಸದಾರರನ್ನಾಗಿ ಆರಿಸಬೇಕು ಎಂಬ ಯೋಚನೆಯುಳ್ಳವರಾಗಿದ್ದರು. ತನ್ನ ನ್ನೇ ವಾರಸದಾರರನ್ನಾಗಿ ಆರಿಸಲಾಗುವುದೆಂದು ಅವರ ಮಗನು ನಂಬಿದ್ದ.

ಒಮ್ಮೆ ಗುರುನಾನಕರು ತನ್ನ ಮಗನನ್ನು ಕರೆದು ಗೋಶಾಲೆ (ಕೊಟ್ಟಿಗೆ)ಯನ್ನು ಸ್ವಚ್ಛಗೊಡಿ ಬಾ ಎಂದು ಹೇಳಿದರು

ಇದೇ ಈಗ ನಾನು ಸ್ನಾನಮಾಡಿದ್ದೇನೆ. ಪೂಜಾರಾರ ಮಾಡುವದಿದೆ ಇದೇ ಈಗ ಮಡಿ ಬಟ್ಟೆ ಉಟ್ಟಿದ್ದೇನೆ. ಕಿದ್ದರಿಂದ ಗೋಶಾಲೆ ಸ್ವಚ್ಛ ಎಂದುವ ಕೆಲಸ ನನ್ನಿಂದಾಗದು' ಎಂದು ಅವನು ಉತ್ತರ ಕೊಟ್ಟ.

ಮುಂದೆ I C S. ಪಾಸಾಗಿ, ಮರಳಿದ ರಾಮಚಂದ್ರನು ಕುರ್ನೂಲಿನಲ್ಲಿ ಸಬ್ ಕಲೆಕ್ಟರನಾಗಿ ನೇಮಕಗೊಳ್ಳುತ್ತಾನೆ. ಆ ಬಳಿಕ ಕರಾರಿನ ಪ್ರಕಾರ ರಾಮಚಂದ್ರನ ಮದುವೆ. ಸೀತಾರಾಮ ಅಯ್ಯರ ಮಗಳೊಡನೆ ವೈಭವದಿಂದ ನಡೆಯುತ್ತದೆ ಆದರೆ, ಗಂಗಾ ಸ್ನಾನಕ್ಕೆ ಹೋದ ಶಾಸ್ತ್ರಿಗಳನ್ನು ಎಲ್ಲಿ ಹುಡುಕಿದರೂ ಪತ್ತೆಯಾಗುವುದೇ ಇಲ್ಲ. ಶಾಸ್ತ್ರಿಗಳಿಲ್ಲದೆಯೇ ಮದುವೆಯೂ ನಡೆದು ಹೋಗುತ್ತದೆ. ಶಾಸ್ತ್ರಿಗಳು ತನ್ನ ಪಾಪ ಸಿವಾರಣೆಗಾಗಿ, ಗಂಗೆಯ ಆಶ್ರಯವನ್ನು ಪಡೆಯದೆ ಮತ್ತೇನು ತಾನೆ ಮಾಡಬಲ್ಲರು? ಹೀಗೆ ಈ ಕಥೆ ಪೂರ್ಣವಾಗುತ್ತದೆ.

ಹೀಗೆ ಮನೋವೈಜ್ಞಾನಿಕವಾಗಿ ನಿರೂಪಿಸಲ್ಪಟ್ಟ ಶ್ರೀ ರಾಜಾಜಿಯವರ ಈ ಕಥೆ ಕುಂಟಾ ಪರಿಣ ಮಕಾರಿಯಾಗಿದೆ.

— ಕೆ. ಎನ್. ಭಟ್ ಶಿರಾಡಿಪಾಲ್

'ಹಾಗಾದರೆ ಹೋಗು' ಎಂದು ಹೇಳಿ ಗುರುನಾನಕರು. ಅವನನ್ನು ಕಳಿಸಿಕೊಟ್ಟರು.

ಅನಂತರ ಅವರು ತನ್ನ ಶಿಷ್ಯನಾದ ಅಂಗದನನ್ನು ಕರೆದು ಗೋಶಾಲೆ ಸ್ವಚ್ಛ ಮಾಡಲು ಹೇಳಿದರು.

ಅಂಗದನು ಕನಬರಿಗೆ ತೆಗೆದುಕೊಂಡು ಗೋಶಾಲೆ ಸ್ವಚ್ಛಪಡಿಸತೊಡಗಿದ ಮತ್ತು ಸಗಣಿ ಮೂತ್ರಗಳನ್ನೆಲ್ಲ ಬುಟ್ಟಿಯಲ್ಲಿ ಹೊತ್ತು ಹಿಪ್ಪೆಗೆ ಚೆಲ್ಲಿಹತ್ತಿದ

ಅಂಗದನು ಕೊನೆಯ ಬುಟ್ಟಿ ಒಯ್ಯುತ್ತಲಿದ್ದ ಸಗಣಿ ಬಿದ್ದು ಅವನ ಶರೀರವೆಲ್ಲ ಮೆಲಸಾಗಿತ್ತು. ಒಟ್ಟಿಗೆಲ್ಲ ಕೊಳಕಾಗಿದ್ದಳು. ಅಷ್ಟರಲ್ಲಿ ಗುರುನಾನಕರು ಅಲ್ಲಿಗೆ ಬಂದರು. ಅವನ ವಾಡಗಳ ಹತ್ತಿರ ಕಾಯಿ ನುಕ್ಕು ರೂಪಾಯಿ ಇಟ್ಟರು. ಸಗಣಿಯ ಬುಟ್ಟಿ ಇಳಿಸಿದರು. ಮತ್ತು ತನ್ನ ಸಗಡಿಯನ್ನು ಅವನ ತಲೆಯ ಮೇಲಿ ಇರಿಸಿ ಅವನನ್ನು ಗುರು.ಪೀಠದ ಬಳಿಗೆ ವೈದು ಕೂಡ್ರಿಸಿದರು.

ಅನಂತರ ಗುರುಶುಶ್ರೂಷೆಗೆ ಈ ಸಮೂಹ ತೀರ್ಥಯಿತು. ಅವನು ಅವರ ಒಳಗೆ ಬಂದು ಕೇಸಿದ ಸನ್ನಿಲ್ಲಿ ಜದಾವ ಸ್ನೇನತೆ ಕಂಡಿರಿ ಹೊಟ್ಟಿಯ ಮಗನನ್ನು ಬಿಟ್ಟು ಬೇರೊಬ್ಬನನ್ನೇಕೆ ಗುರುಪೀಠದ ಮೇಲೆ ಕೂಡ್ರಿಸಿದಿರಿ" ಎಂದು.

ಗುರುನಾನಕರು ರಾಂತವಾಗಿ ಹೇಳಿದರು 'ನಿನ್ನಿಂದ ಗೋಶಾಲೆಯ ಸ್ವಚ್ಛತೆ ಮಾಡಲಾಗಲಿಲ್ಲ. ಆದನ್ನೇ ಕೊಂದಿಕೊಂಡು ಸಮೂಹ ಸ್ವಚ್ಛತೆಯೂ ಇದೆ. ಗೋಶಾಲೆ ಸ್ವಚ್ಛ ಮಾಡದ ನಿನ್ನಿಂದ ಇಡೀ ಸಮೂಹದ ಸ್ವಚ್ಛತೆ ಮಾಡುವದೂ ಸಾಧ್ಯವಿಲ್ಲ ಎಂದು ನನ್ನ ಮನಸ್ಸಿಗೆ ಬಾರಿ ಆಯಿತ್ತು" ಎಂದು.

—ರಣಛೋಡ ಆಯರ.
(ಲೋಕ ಜೀವನ)

ಮರೆತು ಬಿಡದಿರು ಎನ್ನ

—೦೮೦—

ದೂರ ಇಹೆ ಎಂದರಿತು
ಮರೆತು ಬಿಡದಿರು ಎನ್ನ
ಊರ ಬಳಿಯೇ ಇಹುದು ನಿಲಯ ಎನ್ನ ||
ನಿನ್ನ ನೆನಸಿನ ಕನಸೇ ಬರುತಿಹುದು
ಹಗಲಿರಿಳು
ನಿನ್ನ ಬಳಿ ನಗೆಯ ಮುಖ
ಕಲುಕುವುದು ಕರುಳು |
ಹಿಂದೆ ನಾ ನಿನ್ನೊಡನೆ
ಕಳೆದಿರುವ ರಸಗಳಿಗೆ
ಇಂದೆನ್ನ ಅಡಿಗಡಿಗೆ
ಎಚ್ಚರಿಸುತಿಹುದು || ೧ ||

ನೀ ನಿರುವೆ ದೂರದಲಿ, ನಾನಿರುವೆ
ಈ ಎಡೆಗೆ
ಮಧ್ಯದಲಿ ಬಂದಿಹುದು ಅರಿವಿನ 'ಕಿಚ್ಚು'|
ಎಚ್ಚರಿಕೆ ಎಂಬ ನುಡಿ ಪಿದರಿಕೆಯು
ಕೊಡುತಿಹುದು,
ಕಿಚ್ಚು ಧಗ-ಧಗಿಸುತಿದೆ ನಮ್ಮ
ಎದುರಲ್ಲಿ || ೨ ||

ಕೊರಗದಿರು ಮನದರಸಿ ಎನ್ನ
ಮುನ್ನಿನ ಜೆನಿಯೆ
ಸೊರಗದಿರು ಎನಗಾಗಿ ಎನ್ನ ಇನಿಯ|
ಇಂದು ಜರಿದಿಹ ಜಗತ್ತ ನಾಳೆ ಪೈ
ಮುಗಿಯುವುದು,
ನಿನ್ನೆ ಸಾತ್ವಿಕ ಕನಸು ಇದಕೆ ಸಾಕ್ಷಿ
|| ೩ ||

ಒಲಿದ ಹೃದಯಗಳೆರಡು
ಬೇರಾಗಲೊಲ್ಲವು,
ಇದ ತಿಳಿದು ನಡೆಯುವು ನೀ ಮುಂದೆ
ಎಂದೆಂದೂ |
ಸಹಿಸುವೆನು ನಿನಗಾಗಿ ಎನಿತು
ಕಷ್ಟಗಳನ್ನು
ಆದರದು ನೀ ಮಾತ್ರ ಮರೆತು
ಬಿಡದಿರು ಎನ್ನ || ೪ ||

—'ಗಿರಿಬಾಲ ಮುಂಬಾಯಿ"

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನಪಹ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರುಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25)

ವಿ ಸೂ.—ಅಯಾಯ ಪುಸ್ತಕದ ಸಿವಿಯೊಂದಿಗೆ ಟಪ್ಪಾಲು ವಿಚಾರಗಾಗಿ 0 =25 NP ಸೇರಿಸಿ ಮನಿಆರ್ಡರು ಮೂಲಕ ಪುಸ್ತಕ ಕಳಿಸಲಾಗುವುದು.

ನವಯುಗದ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಿನ ಶ್ರೀನಿವಾಸ ಬುಕ್ಸ್ ಸ್ಟಾಲ್ ಬಾಂಬೆ ಕೊಕೆನಟ ಕೊಯರ್ ಕೊ. ಇಂಡಿಯನ್ ಇಂಡಸ್ಟ್ರಿಯಲ್ಸ್ ಸಪ್ಲೈಸ್ ಇವರಲ್ಲಿ ಮತ್ತೂ ಮಂಗಳೂರಲ್ಲಿ ಪೈಸ್ಮಳಲ್ಲಿ ಸ್ಥಳೀಯ ಸಮಸ್ಥಾನಗಳಲ್ಲಿಯೂ ದೊರೆಯುತ್ತವೆ

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮ್ ಕಾಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಚಾಪೀರಾತು ದರಗಳು:
ಸಮಮಿತ (ಕಂಪ್ಯಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:
ವಾರ್ಷಿಕ ಚಂದಾ (ಅಂಚೆಖರ್ಚು ಸೇರಿ) ರೂ. 6-75
ಪ್ರತಿ ಪ್ರತಿ ರೂ. 0-13

ಚಂದಾದಾರನನ್ನಾಗಲೀ ಜಾಹೀರಾತಿನ ಗ್ರಾಹಕನನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಂತೆ ಕೋರಿರುವುದು.

REGD. No. B. G. 176
LICENCE No. 31
Licensed to Post without Prepayment

ಚೀನಾದ ಕೆಂಪು ಸರದೆಯೊಳಗೆ

(ಕಡೇ ಸುಟದಿಂದ)

ಸಲಾಯಿಕು. ಆನಾರೋಗ್ಯದ ನಿಮಿತ್ತ ಒಂದೂವರೆ ತಿಂಗಳ ನಂತರ ಅವನನ್ನು ಕೊರಗೆ ಬಿಟ್ಟರು—ಇಪ್ಪತ್ತೈದು ದಿನಗಳೊಳಗೆ ಜೈನಾ ಬಿಟ್ಟು ಹೊರ ಹೋಗುವ ಶರತ್ತಿನ ಮೇಲೆ ಅವನು ಯಃಲುತೂರಿಕೊಂಡು ಜೀವನ ನಡೆಸುತ್ತಿದ್ದನು. ಅವನು ನೆರೆಮನೆಯಿಂದ ಹೊರಬರುವಾಗ ಇನ್ನೊಂದು ಅಪರಾಧ ಆಣಿಯೂಗಿತ್ತು. ಅವನ ದನಗಳನ್ನು ಕಾನೂನಿಗೆ ವಿರೋಧವಾಗಿ ಮಾರಿದ್ದನೆಂಬ ಆವನನ್ನು ಕನಾಟಿಗಳನ್ನು ಸರಕಾರ ವಶಪಡಿಸಿಕೊಂಡಿತ್ತ. ಅವನು ಈಗ ಹಾಂಗ್‌ಕಾಂಗಿನಲ್ಲಿ ದ್ದಾನೆ.

ಆಚಾರ್ಯಸಿಂಘ ಅಲ್ಲೊಂದು ಬ್ರಿಟಿಷ್ ವ್ಯಾಪಾರಿ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದನು ಆ ಸಂಸ್ಥೆಯನ್ನು ಸರಕಾರ ವಶಪಡಿಸಿಕೊಂಡಿತು. ಆನಾರೋಗ್ಯದ ಕಾರಣವಾಗಿ ಅವರು ಏರೋಪ್ಲೇನು ಪಡೆಯಬೇಕಾಯಿತು. ಅವನಿಗೆ ೩.೭೦೦ಯೊನ್ ವಿಂಡಮ ಮೇಲೆ ಸರಕಾರಕೊಡಬೇಕಾಗಿತ್ತು. ಅದೂ ಅಲ್ಲದೆ ಅವನು ಜೈನಾ ಬೇಂಕಿನಲ್ಲಿ ೯,೦೦೦ಯೊನ್ ಕೂಡಿಸಿಟ್ಟಿದ್ದನು. ಗಡಿ ನವಂಬರಿನಲ್ಲಿ ಅವನು ಅಧಿಕಾರ ಕ್ತಿಯೊತ್ತಡದಿಂದಾಗಿ ಮರಣ ಹೊಂದಿದನು ಸರಕಾರ ಎಲ್ಲವನ್ನು ಸ್ವಾಧಾನಪಡಿಸಿಕೊಂಡಿತು.

ಹಾಗೆಯೇ, ಡಯೂರ ಸಿಂಘನು ಬ್ರಿಟಿಷ್ ತಂಬಾಕು ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದನು. ಅವನ ಗಡಿಯಲ್ಲಿ ಆಧಿಕಾರ ಕ್ತಿದೊತ್ತಡದಿಂದ ನಾಯುವಾಗಿ ಹೊಣೆಯನ್ನು ವೈಷಯಿಸಿಸ್ವದ್ದನು ಅವಿಲ್ಲವನ್ನು ಸ್ವೀಕರಿಸಲು ನಿರಾಕರಿಸಿದ್ದರಿಂದ ಸರಕಾರ ನಿಂಗಿಕೊಂಡಿತಲ್ಲದೆ, ಸಂಬಂಧಿಸಿಕರಿಗೆ ಒಂದು ಬಿಡಿಕಾಸನ್ನು ಕೊಡಲಿಲ್ಲ.

ಲೀಸಿ ಸಿಂಘನು ಬ್ರಿಟಿಷ್ ರಾಯಭಾರಿ ಕಾರ್ಯಾಲಯದಲ್ಲಿ ಉದ್ಯೋಗದಲ್ಲಿದ್ದನು. ಆಗ ಅವನು ಏಳು ದನಗಳನ್ನು ಸಾಕುತ್ತಿದ್ದನು. ಚೈನಿಸ್ ಸ್ತ್ರೀಯ ಸಹೀತ್ವನಾಶ ಆದೇಶವನ್ನು ಅವನ ಹೆಂಡತಿ ಹೊರಪಡಿಸಿದರಿಂದ, ಅವರ ಭಾಗಬಳವನ್ನು ಪಡೆಯಲಾಗದೆ. ಅವನು ಜೈನಾ ಬಿಟ್ಟು ಹೋಗಲು ಅನುಮತಿ ಕೇಳಿದನು. ಅಪ್ಪಣೆ ಮೇರೆ ತನ್ನ ದನಗಳನ್ನು ೯,೦೦೦ ಯೊನ್‌ಗಳಿಗೆ ಮಾರಿದನು. ಆ ಪೈಸೆ ೫,೦೦೦ ಯೊನ್‌ಗಳಿಗಿಂತ ಜಾಸ್ತಿ ಹೊರಗೆ ಕೊಂಡು ಹೋಗಬಾರದೆಂದು ಸರಕಾರ ಸೂಚಿಸಿ, ಉಳಿದ ಹಣವನ್ನು ಹಿಡಿದುಕೊಂಡು ಬಿಟ್ಟಿತು.

ಕಾನೂನು ಮೇರೆ ಮೂರಿ ದನಗಳನ್ನು ಮಾರಿದ ಅಪಾದನೆಯ ಮೇಲೆ ಶೆಂಗಾ ಸಿಂಘನಿಗೆ ೧೦,೦೦೦ ಯೊನ್ ದಂಡ ತೆರಬೇಕಾಯಿತು. ದಂಡ ತೆರಲು ಅವನಿಂದ ಸಾಧ್ಯವಾಗದ ಕಾರಣ ಎಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡು ಅವನನ್ನು ಅಲ್ಲಿಂದ ಹೊರಕ್ಕೆ ಬಿಟ್ಟಲಾಯಿತು. ಇದು ೧೯೫೫ರಲ್ಲೇ ನಡೆದದ್ದು.

ಅದೇ ವರ್ಷ ಕಾಮಲ್ ಸಿಂಘನು ಸತ್ತು ಹೋದನು ಅವನ ಆಸ್ತಿಪಾಸ್ತಿಗಳನ್ನು ಭಾರತ ರಾಯಭಾರಿ ಕಾರ್ಯಾಲಯ ಕ್ಕಾಗಲೀ, ಅವನ ಬಂಧುಬಳಗದವರಿಗಾಗಲೀ ಕೊಡದೆ ಸರಕಾರವೇ ಸ್ವಾಧಾನಪಡಿಕೊಂಡು ಬಿಟ್ಟಿತು.

ಬೇರೆಯವರ ವಿಷಯವೇಕೆ? ಸ್ವತಃ 'ಬಾಬು ಬೊಬ್ಬಿ'ಯವರ ವಿಷಯವೇ ಇಲ್ಲಿದೆ. ಅವರು ಶಾಂಘಾಯಿಯಲ್ಲಿ ಆಭರಣ ವ್ಯಾಪಾರ ಮಾಡಿಕೊಂಡಿದ್ದರು. ಅವರ ಅಂಗಡಿಯು ಸರಕಾರದ ಸೊತ್ತೆಂದು ಸರಕಾರ ವಶಪಡಿಸಿಕೊಂಡಿತು. ಜೀವನಾಧಾರಕ್ಕೆ ಏನಾದರೂ ಉಪಾಯಂಬೇಕೆಂದು, ಅವರು ಸಾಂಬಾರು ಪುಡಿ ತಯಾರಿಸಿ ಮಾರುವದಕ್ಕೆ ಅನುಮತಿ ಪತ್ರವನ್ನು ಪಡೆಯಿದರು ಅದೂ ಸಿಗಲಿಲ್ಲ. ಮುಂಬಿ ವಿಭಾಗದ ಅಧಿಕಾರಿಣಿ ಹ್ಯು ಬಳಿಯೂ ಅವರು ಚರ್ಚೆ ನಡೆಸಿದರು ಅಲ್ಲಿ ಅವರಿಗೆ ದೊರಕಿದ ಉತ್ತರ 'ಇದೆಲ್ಲಾ ಸರಕಾರದ ಆಜ್ಞೆ ಇನ್'. ಅವರು ಸ್ವತಃ ಅಲ್ಲಿಯ ಪ್ರಧಾನಿ ಚೌ ಎನ್ ಲೈಯವರಿಗೂ ದನೆ ಪತ್ರವ್ಯವಹಾರ ನಡೆಸಿದರು ಕೊನೆಗಂತೂ ಅನುಮತಿ ಎಂಬುದು. ದೊರಕಿತು ಆದರೆ ಆಗ ಸಾಂಬಾರು ಪದಾರ್ಥಗಳು ತಯಾರಿಸಲು ಬೇಕಾಗುವ ಕಚ್ಚಾವಸ್ತುಗಳು ಮಾರುಕಟ್ಟೆಯಲ್ಲಿ ದೊರಕುತ್ತಿರಲಿಲ್ಲ. ಹಾಂಗ್‌ಕಾಂಗಿನಿಂದ ಪದಾರ್ಥಗಳನ್ನು ತರಿಸಿ ಸಾಂಬಾರ ಪುಡಿ ತಯಾರಿಸಲೂ ಸರಕಾರ ಬಿದಲಿಲ್ಲ ಕೊನೆಗೆ ಉಳಿದ ಏಕಮೇವ ಉಪಾಯ ಜೈನಾಕ್ಕೆ ಕೊನೆಯ ನಮಸ್ಕಾರ ಹೇಳುವದು. ಅವರು ಅದಕ್ಕಾಗಿ ಅನುಮತಿ ಕೇಳಿದಾಗ ಅದಕ್ಕೂ ನಕಾರವೇ ಉತ್ತರ ದೊರಕಿತು. ಆಬರೆ ಅವರು ಸ್ನೇಹಿತರ ಸಹಾಯದಿಂದ ಕೆಲವೇ ತಿಂಗಳೊಳಗೆ ಅನುಮತಿ ದೊರಕಿಸಿಕೊಂಡು ವಾರಾದರು. ಹೋಗುವಾಗ ಕೆಲವು ಉತ್ತಮ ಹರಳುಗಳನ್ನೊಯ್ಯಲು ಪ್ರಯತ್ನಿಸಿದರು. ಐದು ಸಾವಿರ ಯೊನ್ ಬೆಲೆಯ ಹರಳುಗಳನ್ನು ಮಾತ್ರ ಒಯ್ಯಲು ಅವರಿಗೆ ಅನುಮತಿ ನೀಡಲಾಯಿತು ಕೆಂಟೊನಿಗೆ ಬಂದಾಗ ಸಂಂಕದವರು ಅವನ್ನು ವಶಪಡಿಸಿಕೊಂಡು ಭಾರತ ಸರಕಾರದ ರಾಯಭಾರಿ ಕಾರ್ಯಾಲಯಕ್ಕೆ ಕಳುಹಿಸುವುದಾಗಿ ಹೇಳಿದರು. ಅನಂತರ ಅದರ ಸುದ್ದಿಯೇ ಇಲ್ಲ. ಇದು ೧೯೬೨ರ ನವೆಂಬರಿನ ದೆದ್ದು. ಆಮದರಿಂದ ಇಲ್ಲಿ ಕಳೆದ ವರ್ಷದ ವರೆಗಿನ ವಿಷಯಗಳನ್ನು ಮಾತ್ರ ಕೊಡಲಾಗಿರುತ್ತದೆ.

ಡಾರ್ಜಲಿಂಗ್ ಮುಂತಾದೆಡೆಗಳಲ್ಲಿ ಇಲ್ಲಿಯ ಕಮ್ಯೂನಿಸ್ಟರು ಒಳಿತು ಪ್ರಚಾರ ನಡೆಸುತ್ತಿರುವದನ್ನು ಜಂಗಾಲದ ಮುಖ್ಯ ಮಂತ್ರಿಯವರೂ ಒಪ್ಪಿರುವರು. ಅಲ್ಲಿಯ ಶ್ರಮಿಕರ ಬಳಿ ಕಮ್ಯೂನಿಸ್ಟರು ತಮ್ಮ ಜೇಳೆ ಬೀಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆವರು ಅಲ್ಲಿ ತಮ್ಮ ಪಕ್ಷದ ಸಿಧಿಗಾಗಿ ಪ್ರಯತ್ನಿಸುತ್ತಿದ್ದಾರೆ. ತಮ್ಮ ಪಕ್ಷಕ್ಕೆ ಸಹಾಯ ಧನ ಸಲ್ಲಿಸಿದಲ್ಲಿ ತಾವು ಆದಕ್ಕೆ ಕರಿಯೂದ ರಸೀದಿ ಕೊಡುವದಾಗಿ ಆನುಮತಿ ಕೇಳುತ್ತಾರೆ. ಆ ರಸೀದಿಯನ್ನು ತೋರಿಸಿದಲ್ಲಿ 'ಜೈನಿ ಕಮ್ಯೂನಿಸ್ಟರ ಮುಕ್ತದಳ' ಏನೂ ಮಾಡುವದಿಲ್ಲ. ಆದಿಲ್ಲದಿದ್ದಲ್ಲಿ ಹಿಂಸಿಸುತ್ತಾರೆ ಇದು ಅವರ ಆಪಪ್ರಚಾರ ವೈಖರಿ. ಮೂತ್ರವಲ್ಲ ಮುಕ್ತದಳದ ನೇತಾಜಿ ಸುಬಾಸ್ ಬಾಬು ಇದ್ದಾರೆನ್ನವಂತಹ ದುಷ್ಪ್ರಚಾರಕ್ಕೂ ಅವರು ಮುಂದಾಗಿದ್ದಾರೆ. ಅಲ್ಲದೆ ಗುಡ್ಡಗಾಡು ಜನರ ಬಳಿ, ಕಾಡುಗಳ ವೇಷದಲ್ಲಿ ಹೋಗಿ ಧರ್ಮಸಂಸ್ಥಾಪನೆಗಾಗಿ ಗೀತೆಯಲ್ಲಿ ತಿಳಿಸಿರುವಂತೆ ಶ್ರೀ ಕೃಷ್ಣನು ಜಾರ್ಜ್. ಎಸ್. ಬೈಯು ಅವತಾರವಾಗಿ ಬರುತ್ತಿದ್ದಾನೆನ್ನುವ ಮೋಸವನ್ನು ಪ್ರಚಾರಕ್ಕೂ ಅವರು ಪಳಗಿಕೊಂಡಿದ್ದಾರೆ. ಇವೆಲ್ಲ ಕಮ್ಯೂನಿಸ್ಟ್ ಪೀಡೆ ತಪೆ. ಇಂತಹ ಇನ್ನೂ ಅನೇಕ ತರದ ಮೋಸದಾಟಗಳು ಇವೆ.

ಕಮ್ಯೂನಿಸ್ಟರೂ ಅವರ ಸಹಚರರೂ ಈ ಲೇಖನವನ್ನೋದಿದ ನೋಲೆ, ಎದೆಯು ಮೇರೆ ಕಯ್ಯಿಟ್ಟು ಹೇಳಲಿ—ವಿರೋಚನೆ ನೂಡುವ ಸತ್ವಿಕ ಶಕ್ತಿ ಜೈನಾಕ್ಕಿದೆಯೇ? ದೈವಿಕ ಭಕ್ತಿ ಕಮ್ಯೂನಿಸ್ಟ್ ಜೈನಾದಲ್ಲಿದೆಯೇ? ತಮ್ಮ ಸ್ವಾರ್ಥ ಬಾಂಧವರನ್ನು ಯಂತ್ರಗಳಂತೆ ದುಡಿಸುತ್ತಿರುವ ಕಮ್ಯೂನಿಸ್ಟರ ದೇಶದಲ್ಲಿ ಸ್ವಾತಂತ್ರ್ಯ ಸಮರ ಸೇನಾಧಿಪತಿ ಸುಭಾಸ್ ಬಾಬು ನಿಲ್ಲುವರೇ? ಎಂತಹ ಮೋಸ, ಮಂಗಮೂಢನವರ ಮುಂದೆ! ಜೈನಾದಲ್ಲಿ ಹಾಲು, ಜೇನು ಹರಿಯುತ್ತಿದೆಯೂದಲ್ಲಿ ಅದನ್ನು ನೆಕ್ಕಲು ಈ ಕಮ್ಯೂನಿಸ್ಟರು ಏತಕ್ಕೆ ಹೋಗುವಲ್ಲಿ? ಅಲ್ಲಿ ಹರಿಯುತ್ತಿರುವದು ಹಾಲು—ಜೇನಿನ ಹೊಳೆಯಲ್ಲ; ನರನಾರಿಯರ ಕಣ್ಣೀರು, ಮಾನವೀಯತೆ ಬೆವರಾಗಿ ರಕ್ತವಾಗಿ ಹರಿಯುತ್ತಿದೆ ಅಲ್ಲಿ. ಅವರ ಮಾನವೀಯತೆಯ ಮರಣ ಹೋನವಾದ ಮೇಲೆ ರೂಕ್ಷ ಶಕ್ತಿ ಎಮ್ಮ ತಮ್ಮನ್ನ ಬಲಿ ತೆಗೆದುಕೊಳ್ಳದಂತೆ ಇವರು ಜೇರಿ ಬಲಿಯು ಆಲಿ ತೋರಿಸುತ್ತಿದ್ದಾರೆ; ಕತ್ತೆಗೆ ಮೂಲಂಗಿ ತೋರಿಸುವಂತೆ.

ಭಾರತವನ್ನು ಬಗ್ಗುಬಡಿಯಲ್ಲಿ ಚೀನ್ನದ ಗನಿಗರೂ, ಹಾಲಿನ ಹೊಳೆಗಳೂ, ಅನ್ನದ ಅಕ್ಷಯ ಪಾತ್ರೆಗಳೂ ತಮ್ಮ ಪಾಲಾಗುತ್ತವೆ; ಆಗ ತಿಂದು ತೇಗಬಹುದೆಂಬ ಆಶೆಯನ್ನು ಜನರಿಗೆ ತೋರಿಸಲಾಗುತ್ತಿದೆ. ಆದರಲ್ಲೂ ಅಪಜಯವನ್ನೇ ಕಂಡ ಕಮ್ಯೂನಿಸ್ಟ್ ಜೈನಾತ್ರಿ ಅಧಿಕಾರ ಬಲದ ಕತೆಗೇರ ಪ್ರಯೋಗ ನಡೆಸುತ್ತಿದೆ.

ಇಷೆಲ್ಲಾ ನಿಜವಾದಲ್ಲಿ ಅಲ್ಲಿಯ ಬುದ್ಧಿಜೀವಿಗಳು ಸುಮ್ಮನಿರುತ್ತಿದ್ದರೇ ಎಂಬ ಸೂಕ್ಷ್ಮ ಪ್ರಶ್ನೆಯನ್ನು ಕಮ್ಯೂನಿಸ್ಟರು ಕೇಳಬಹುದು. ಹೌದು ಆ ಬುದ್ಧಿಜೀವಿಗಳಿಗೇನಾಗಿರುತ್ತದೆ? ಇದನ್ನು ಮುಂದಿನ ವಾರ ಕಾಣುವ.

(ಮುಗಿದುದು.)

—ಶಿವಶಂಕರ, ಮದ್ರಾಸು.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras.

ಅತ್ಯುತ್ತಮ ಸೇವೆಗಾಗಿ ಸಮಾವೇಶ.....

ಪೊಲ್ಲಾಚಿ ಟೌನ್ ಬ್ಯಾಂಕ್ × ಸಿಂಡಿಕೇಟ್ ಬ್ಯಾಂಕ್

ದಿ ಪೊಲ್ಲಾಚಿ ಟೌನ್ ಬ್ಯಾಂಕ್ ಲಿಮಿಟೆಡ್, ಪೊಲ್ಲಾಚಿ, ಅವರ ಬ್ಯಾಂಕಿಂಗ್ ವ್ಯವಹಾರವನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಅವರು ಶೀಘ್ರದಲ್ಲಿಯೇ ನಹಿಸಿಕೊಳ್ಳುವರು. ಸಿಂಡಿಕೇಟ್ ಬ್ಯಾಂಕಿನೊಡನೆ ಈ ವರೆಗೆ ಸೇರ್ಪಡೆಗೊಂಡ ಬ್ಯಾಂಕುಗಳಲ್ಲಿ ಇದು ಪದಿನಾಲ್ಕನೆಯದು. ನಮ್ಮ ಸುಭದ್ರ, ಸಮರ್ಥ, ಹಾಗೂ ಸೌಜನ್ಯಶೀಲ ಸೇವೆಯನ್ನು ಪೊಲ್ಲಾಚಿ ಟೌನ್ ಬ್ಯಾಂಕಿನ ಗಿರಾಕಿಗಳೂ ಪಡೆಯುವರೆಂಬ ಸದಾಶಯ ನಮಗಿದೆ.

ಡಾ॥ ಟಿ. ಎಂ. ಎ. ಪೈ
ಚೇರ್‌ಮ್ಯಾನ್.

ಶ್ರೀ ಟಿ. ಎ. ಪೈ
ಮ್ಯಾನೇಜಿಂಗ್ ಡೈರೆಕ್ಟರ್.

- ಸಿಂಡಿಕೇಟ್ ಬ್ಯಾಂಕ್ -

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ.

ಒಟ್ಟು ಶಾಖೆಗಳು 181

ಚಲಾವಣಾ ನಿಧಿ 40 ಕೋಟಿಗೂ ಮಿಕ್ಕಿದೆ.

Edited, Printed & Published by K. H.Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

ನವಯುಗ

Estd. 1921 ಸ್ಥಾಪನೆ
Regd No BG 176
Vol. 42 No 42

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 27—6—1963 ಗುರುವಾರ

13 ನ ಪೈಸೆ
ವಾ ಚಂದಾ ರೂ 6_76
ಸಂಪುಟ ೪೨ ಸಂಚಿಕೆ ೪೨

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

ಲೋಕವ್ಯವಹಾರದಲ್ಲಿ

ಕುರುಡನೂ ಕುಂಟನೂ ಒಂದುಗೂಡಿದರೆ . . .?

'ಎಣ್ಣೆ ಜೆಲ್ಲಿದವನೂ ಅತ್ತ; ನೀರು ಜೆಲ್ಲಿದವನೂ ಅತ್ತ' ಎಂಬ ಗಾದೆಯ ಮಾತು ಇಂದು ನಿನ್ನೆಯದಲ್ಲ. ಅನಾದಿಯಿಂದಲೂ ನಡೆಯುತ್ತ ಬಂದ ಈ ಮಾತು ಇಂದಿಗೂ ಸಂಪೂರ್ಣ ಸತ್ಯವಿದೆ ಇದಕ್ಕೆ ಭಾರತ ಪಂಕಿಸ್ತಾನಗಳ ಸಂಬಂಧ-ವಿದೇಶಗಳು ಈ ಯುಗದ ಜ್ವಲಂತ ನಿದರ್ಶನವಾಗಿ ಉಳಿದಿವೆ ಇಂಡಿಯ ಭಾರತದಿಂದ ಪಾಕಿಸ್ತಾನವು ಪ್ರತ್ಯೇಕತೆವಾಗುವುದರೊಡನೆಯೇ ಇವುಗಳ ನಡುವೆ ಹಲವಾರು ಸಮಸ್ಯೆಗಳು-ಪ್ರಶ್ನೆಗಳು-ವಿವಾದಗಳು ಹುಟ್ಟಿಕೊಂಡುವು. ಪಾಕ್ ನಾಯಕರು ಭಾರತದ ನೀತಿ ನಿಷ್ಕಾರಣವಾಗಿ ವಿರೋಧವನ್ನು ತೊರಿಸುತ್ತ ಬಂದರು ಆದರೂ ಅವೆಲ್ಲವನ್ನೂ ಸಹಿಸಿಕೊಂಡು ಉಭಯ ದೇಶಗಳ ನಡುವಣ ವಿವಾದಗಳೆಲ್ಲವನ್ನೂ ಶಾಂತವಿಧಿ ನಗಳಿಂದ ಬಗೆಹರಿಸಿಕೊಳ್ಳುವ ಅಭಿಲಾಷೆಯಿಂದ ಭಾರತವು ಮುಂದಾಯಿತು ದೊಡ್ಡ ಸಂಖ್ಯೆಯಲ್ಲಿ ಭಾರತದ ಸೀಮೆಯತ್ತ ಬರುತಿದ್ದ ಪಾಕ್ ನಿರಾಶ್ರಿತರ ಗಂಭೀರ ಪ್ರಶ್ನೆಯನ್ನು, ಕಾಲುವೆ ನೀರಿನ ತಂಟೆಯನ್ನು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನದ ನಡುವಿನ ಪ್ರದೇಶದ ಕೆರುಕುಳವನ್ನು ತನ್ನಿಂದ ಸಾಧ್ಯವೆನಿಸುವಷ್ಟು ಮತ್ತು ಕೆಲವು ಸಂದರ್ಭಗಳಲ್ಲಿ, ಶಕ್ತಿಗೂ ಮೀರಿ ಸೌಜನ್ಯವನ್ನೂ ತೋರಿಸಿ ಅದು ಪರಿಹರಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಎಲ್ಲ ಪ್ರಯತ್ನಗಳಲ್ಲಿಯೂ ಅದು ಸಂಪೂರ್ಣ ಯಶಸ್ವಿಯಾಗದಿದೆಯೆಂಬ ಕೇಳುವಂತಿಲ್ಲ. ಆದೇನೇ ಇದ್ದರೂ ಸಮಸ್ಯೆಗಳನ್ನು ಇಲ್ಲವಾಗಿಸುವಲ್ಲಿ ಭಾರತವು ಅಪೂರ್ವ ಕಳಕಳಿ ಮಹಿಮೆತ್ತಿದೆಯೆಂಬುದಕ್ಕೆ ನಿಷ್ಪ್ರಯೋಜಕವೆನಿಸಿದರೂ ಕಾಶ್ಮೀರ ಪ್ರಶ್ನೆಯನ್ನು ಆರು ಸತ್ತುಗಳಲ್ಲಿ ಪರಿಹರಿಸುವ ಬಗ್ಗೆ ಸಮಾಲೋಚನೆಗೆ ಮುಂದಾದುದೇ ಒಂದು ಉತ್ತಮ ನಿದರ್ಶನ

ಚೀನೀಯ ಕುತಂತ್ರ

ಕೆಂಪು ಚೀನಾವು ಅಕಾಲದಲ್ಲಿ ಭಾರತವನ್ನು ಆಕ್ರಮಿಸಿತು. ಇದಕ್ಕೆ ಹಲವಾರು ಕಾರಣಗಳೂ ಇರಬಹುದು; ಇವೆ ಏ ಶ್ಯಾದಲ್ಲಿ ತನ್ನ ಸಾಮ್ರಾಜ್ಯ ವಿಸ್ತರಣೆಗೆ ಭಾರತವೊಂದು ಅಡ್ಡ ಒರುತಿದೆಯೆಂಬ ಚೀನೀಯರ ಮನೋವೃತ್ತಿಯು ಭಾರತವನ್ನೇ ಕಬಳಿಸುವಂತೆ ಪ್ರೇರೇಪಿಸಿತು, ಇಂಡೋ-ಚೀನಾ, ಬರ್ಮಾ ಹಾಗೂ ನೇಪಾಳಗಳೂ ಇತರ ಚಿಕ್ಕ ಪುಟ್ಟ ಏಶ್ಯನ್ ರಾಷ್ಟ್ರಗಳಂತೆಯೇ ಚೀನಾದ ವರ್ಚಸ್ಸಿಗೆ ಒಳಗಾಗಿದ್ದವು ಆದರೆ, ಕಾಲ ಕ್ರಮದಲ್ಲಿ ಚೀನಾವು ದುರ್ಬಲವಾದಾಗ, ಆದರ ಪ್ರಭಾವವೂ ಇಳಿಯುತ್ತ ಬಂತು ಸ್ವತಂತ್ರ ಭಾರತವು ತನ್ನ ವಿಶಿಷ್ಟ ನೀತಿಯಿಂದಾಗಿ ತನ್ನನೆರೆಹೊರೆಯಲ್ಲಿ ಮಾತ್ರವಲ್ಲ ಏಶ್ಯದಲ್ಲಿ ಆಫ್ರಿಕಾದಲ್ಲಿ, ಇನ್ನೂ ಹೇಳಬೇಕಾದರೆ, ಇಡಿಯ ಜಗತ್ತಿನಲ್ಲಿ ತನ್ನ ಪ್ರಭಾವವನ್ನು ಬೀರಲು ಸಶಕ್ತವಾಗಿದೆ ಜಾಗತಿಕ ರಾಜಕಾರಣದಲ್ಲಿ ಭಾರತದ ಅಭಿವ್ಯಾಯಕ್ಕೂ ಒಂದು ಅಗ್ರಸ್ಥಾನವಿದೆ ಕೊರಿಯಾ, ಕಾಂಗೋ ವ್ಯವಹಾರಗಳಲ್ಲಿ ಭಾರತವು ನಿಷ್ಪಕ್ಷಪಾತವಾಗಿ ಆರೋಪವನ್ನು ತೊರಿಸುತ್ತ ಬಂದರು ಅದರೂ ಅವೆಲ್ಲವನ್ನೂ ಸಹಿಸಿಕೊಂಡು ಉಭಯ ದೇಶಗಳ ನಡುವಣ ವಿವಾದಗಳೆಲ್ಲವನ್ನೂ ಶಾಂತವಿಧಿ ನಗಳಿಂದ ಬಗೆಹರಿಸಿಕೊಳ್ಳುವ ಅಭಿಲಾಷೆಯಿಂದ ಭಾರತವು ಮುಂದಾಯಿತು ದೊಡ್ಡ ಸಂಖ್ಯೆಯಲ್ಲಿ ಭಾರತದ ಸೀಮೆಯತ್ತ ಬರುತಿದ್ದ ಪಾಕ್ ನಿರಾಶ್ರಿತರ ಗಂಭೀರ ಪ್ರಶ್ನೆಯನ್ನು, ಕಾಲುವೆ ನೀರಿನ ತಂಟೆಯನ್ನು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನದ ನಡುವಿನ ಪ್ರದೇಶದ ಕೆರುಕುಳವನ್ನು ತನ್ನಿಂದ ಸಾಧ್ಯವೆನಿಸುವಷ್ಟು ಮತ್ತು ಕೆಲವು ಸಂದರ್ಭಗಳಲ್ಲಿ, ಶಕ್ತಿಗೂ ಮೀರಿ ಸೌಜನ್ಯವನ್ನೂ ತೋರಿಸಿ ಅದು ಪರಿಹರಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಎಲ್ಲ ಪ್ರಯತ್ನಗಳಲ್ಲಿಯೂ ಅದು ಸಂಪೂರ್ಣ ಯಶಸ್ವಿಯಾಗದಿದೆಯೆಂದು ಕೇಳುವಂತಿಲ್ಲ. ಆದೇನೇ ಇದ್ದರೂ ಸಮಸ್ಯೆಗಳನ್ನು ಇಲ್ಲವಾಗಿಸುವಲ್ಲಿ ಭಾರತವು ಅಪೂರ್ವ ಕಳಕಳಿ ಮಹಿಮೆತ್ತಿದೆಯೆಂಬುದಕ್ಕೆ ನಿಷ್ಪ್ರಯೋಜಕವೆನಿಸಿದರೂ ಕಾಶ್ಮೀರ ಪ್ರಶ್ನೆಯನ್ನು ಆರು ಸತ್ತುಗಳಲ್ಲಿ ಪರಿಹರಿಸುವ ಬಗ್ಗೆ ಸಮಾಲೋಚನೆಗೆ ಮುಂದಾದುದೇ ಒಂದು ಉತ್ತಮ ನಿದರ್ಶನ

ಚೀನೀಯ ಕುತಂತ್ರ

ಕೆಂಪು ಚೀನಾವು ಅಕಾಲದಲ್ಲಿ ಭಾರತವನ್ನು ಆಕ್ರಮಿಸಿತು. ಇದಕ್ಕೆ ಹಲವಾರು ಕಾರಣಗಳೂ ಇರಬಹುದು; ಇವೆ ಏ

ಭಾನುವಾರ ದಿನ

ಗೆಳೆಯನ ಬಿಸಿನೆಸ್

ಎಚ್ಚರವಾಗಿದ್ದರೂ ಕೂಡ ಕೊರೆಯುತಿದ್ದ ಚಳಿಯು ದೆಸೆಯಿಂದ ಕಂಬಳಿಯೊಳಗಿಂದ ಹೊರಗೆ ಬರಲು ಕೇಳಲಿಲ್ಲ, ಆ ರೊಳಗೆ ಹುದುಗಿ ಕೊಂಡಿದ್ದ ನನ್ನ ಬಡ ಶರೀರ. ಎಂದಿನಂತೆ ವ್ಯಾಕ್ಷಕಾಲದಲ್ಲಿ ಮುಖಗು ತೆಗೆಯದೇ ಬಾಳಿನ ಆಗು ಹೋಗುಗಳನ್ನು ಅಂತರಂಗದಲ್ಲೇ ವಿಮರ್ಷಿಸುತ್ತಾ ಇದ್ದಂತೆಯೇ ಗೆಳೆಯ ಆನಂದರು ಹಿಂದಿನ ದಿನ ಹೇಳಿದ್ದ ಪೂರ್ವ ಜ್ಞಾಪಕ ಬಂದು ಚಳಿಯ ಭಯವನ್ನೆಲ್ಲಾ ಓಡಿಸಿ ಮೈ ಕೊಡವಿ ಎದ್ದೆ ಸಾಧಾರಣ್ಯವಾಗಿ ರಜಾ ದಿನಗಳಲ್ಲಿ ಎಂಟು ಒಂಭತ್ತು ಘಂಟೆಯ ವರೆಗೂ ಮಲಗುತಿದ್ದ ನೋಮಾರಿ ದೇಹ ಆ ಭಾನುವಾರ ಮಾತ್ರ ಆನಂದರಿಗಾಗಿ ಬೇಗನೇ ಎದ್ದಿತು ಮುರುಟ್ಟಿದ್ದ ಕೈ ಕಸ್ಸ ಬಿಸಿನೀರಿನಲ್ಲಿ ಅದ್ದಿ ನಡುಗುತಿದ್ದ ಶರೀರಕ್ಕೆ ಬಿಸಿನೀರಿನ ಅಭಿಷೇಕ ಮಾಡಿಸಿ ಬಟ್ಟೆಗಳನ್ನು ತೊಟ್ಟು ಸಾಧಾರಣ ಪಟ್ಟಿನ ಅಲಂಕಾರ ಮಾಡಿಕೊಂಡು ಹೊರಟೆ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಪರವೂರಿನಲ್ಲಿ ಬಾಡಿಗೆಯ ಮನೆಯಲ್ಲಿ ವಾಸಿಸುತಿದ್ದ ನಾನು ಅಂದು ಮನೆಯ ಕಸ ಗುಡಿಸಬೇಕಿತ್ತು, ನೆಲ ಒರಸಬೇಕಿತ್ತು, ಹಾಲು ಕಾಯಿಸಿದ್ದ ಪಾತ್ರೆಯನ್ನು ತೊಳೆದು ಆಗ ತಾನೇ ಬಂದಿದ್ದ ನೀರು ಹಾಲನ್ನು ಕಾಯಿಸಬೇಕಿತ್ತು, ವಾಲ್ಚರು ಬಟ್ಟೆಗಳನ್ನು ಒಗೆಯಬೇಕಿತ್ತು, ಒಂದೆರಡು ಬಟ್ಟೆಗಳಿಗೆ ಇಸ್ತ್ರಿ ಮಾಡಿಸಬೇಕಿತ್ತು, ಆಫೀಸಿಗೆ ಹೋಗಿ ಉಳಿದಿದ್ದ ಕೆಲಸಗಳನ್ನು ಪೂರ್ಣಗೊಳಿಸಬೇಕಿತ್ತು — ಇತ್ಯಾದಿ ಇತ್ಯಾದಿಗಳನ್ನೆಲ್ಲಾ ಒಂದು ಅರ್ಧ ದಿನದ ಮಟ್ಟಿಗೆ ಮುಂದೂಡಿ ಬೀಳುತಿದ್ದ ಮಂದನ್ನು ಹೀಳಿಕೊಂಡು ನಡೆದೆ ಕೃಷ್ಣ ಭವನದ ಅಭಿಮುಖವಾಗಿ. ಸಾಮಾನ್ಯವಾಗಿ ಈ ಊರಿನಲ್ಲಿ ನನ್ನ ಸಿಲ್ಲಾಣಗಳು ಮೂರೇ ಮೂರು. ಒಂದ ಇರಾನಿಯ ಕೊರಿಡಿ, ಇನ್ನೊಂದು ಡೋಗುವಂಥ ಹೋಟೆಲು, ಮತ್ತೊಂದು ದುಡಿಯುವಂಥ ಆಫೀಸು. ಇವತ್ತಿದೆ ಸರ್ಕಲ್‌ಗಳ ಕಲ್ಲು ಬೆಂಚಿನ ಮೇಲೆ ಕುಳಿತು ರಸ್ತೆಯ ಧೂಳು ಕುಡಿಯು ವುದಾಗಲೀ, ಬಿಡಾಸಿಗಾರ ಗೈಯುವುದಾಗಲೀ ನನಗೆ ಹಿಡಿಸದು ಆದ್ದರಿಂದ ನೇರವಾಗಿ ಶ್ರೀ ಕೃಷ್ಣ ಭವನ ಕ್ಕೆ ತೆರಳಿ ಸ್ಪೆಷಲ್ ರೂಮಿನಲ್ಲಿ ಕುಳಿತೆ. ನಾನು ಬಾಯಿ ತೆರೆಯುವ ಮೊದಲೇ ಕ್ಲೀನರ್ ಕೆಲಸದಿಂದ ಪ್ರಮೋಷನ್ ಹೊಂದಿ ಸ್ಪೆಷ್ಯಲಿಯರ್ ಆಗಿದ್ದ ಕೃಷ್ಣ ನನ್ನ ಬಳಿ ಬಂದು 'ಸ್ವಲ್ಪ ಕುಳಿತುಕೊಳ್ಳಿ, ಇಡ್ಲಿ ಬೇಯುತ್ತಾ ಇದೆ. ಇನ್ನೊಂದು ಐದು ನಿಮಿಷದಲ್ಲಿ ಕೊಡುತ್ತೇನೆ, ಎಂದ. 'ಆಗಲಿ ಎಂದು ಹೇಳಿ ದೃಷ್ಟಿಯನ್ನು ರಸ್ತೆಯತ್ತ ಹೊರಳಿಸಿ ಕಿವಿಗಳನ್ನು ಕೇಡಿಯೋದಿಂದ ಹೊರ ಬರುತಿದ್ದ ಹಿಂದೀ ಗೀತೆಗಳನ್ನಾಲಿಸಲು ನಿರಿಸಿದೆ.

ಸ್ವಲ್ಪ ಹೊತ್ತಿನಲ್ಲಿ ಬಿಸಿ ಇಡ್ಲಿ ಚಿಟ್ನಿಯನ್ನು ಕರಗಿಸುತ್ತಾ ಬಂತು. ತಟ್ಟೆಯಲ್ಲಿದ್ದ ಒಂದೆರಡು ಮೂರುನಾಲ್ಕು ಇಡ್ಲಿಗಳು ಹೊಟ್ಟೆಯನ್ನು ಸೇರಿದುವು. ಕಾಫಿಯು ಗಂಟಲಿನಿಂದ ಕೆಳಗಿಳಿಯಿತು. ಕೈ ತೊಳೆದು, ಪುನಃ ಕಿಟಿಕಿಯ ಮೂಲಕ ದೃಷ್ಟಿಯನ್ನು ಹೊರಗೆ ಹಾಕಿದೆ. ದೂರದಿಂದ ಗೆಳೆಯ ಆನಂದರ ಸವಾರಿ ಬರುತಿದ್ದುದು ಕಾಣಿಸಿತು. ಗೋವೆ ಗಡಿಯಾರ ನೋಡಿದೆ. ಒಂಭತ್ತು ಘಂಟೆಗೆ ಹದಿಮೂರು ನಿಮಿಷಗಳಿದ್ದುವು ಕೊಂಚ ಹೊತ್ತಿನಲ್ಲೇ ಸೂಟು ಬೂಟುಧಾರಿಯಾಗಿ ಕೈಯಲ್ಲಿ ಜಿಪ್ ಲೆದರ್ ಬ್ಯಾಗೊಂದನ್ನು ಹಿಡಿದು ಕೊಂಡು ಸಿಗರೇಟಿನ ಹೊಗೆಯನ್ನು ಬಿಡುತ್ತಾ ನನುನಗುತ್ತಾ ಬಂದ ಗುಂಗುರು ಕೂದಲಿನ ಸುಂದರ ಪುರುಷ ಆನಂದರನ್ನು ಕಂಡು ನನಗೂ ಕೊಂಚ ಆನಂದವಾಯ್ತು. ಆದರೆ ಆ ಚಳಿಯ ದೆಸೆಯಿಂದ ಆ ಆನಂದವನ್ನು ವ್ಯಕ್ತಪಡಿಸಲಾಗಲಿಲ್ಲ. 'ಎಂಥ ಜನವಯ್ಯ ನೀನು, ಎಂಟು ಘಂಟೆಗೆ ಬರುತ್ತೇನೆಂದು ಹೇಳಿ ಒಂಭತ್ತಕ್ಕೆ ಬರುವುದೇ, ಎಂದು ಕೇಳಿದೆ.

'ಬನ್ನಿ ಕಾಫಿ ಕುಡಿಯುವ, ಎಂದರು.

'ನನ್ನದಾಯ್ತು. ನಿಮ್ಮದಾಗಲಿ, ಎಂದು ಹೇಳಿ ಅವರಿಗೆ ನಾಲ್ಕಿಡ್ಲಿ ಬೆಣ್ಣೆ ಶಂಡಿಡಲು ಕೃಷ್ಣನೊಡನೆ ಹೇಳಿದೆ.

'ನಾಲ್ಕಿಡ್ಲಿಯೂ, ನನಗೆ ಬೇಡಪ್ಪ ಎರಡೇ ಎರಡಿಡ್ಲಿ ಸಾಕು ಆನಂತರ ಒಂದು ಫರ್ಸ್ಟ್ ಕ್ಲಾಸ್ ಚಾ, ಎಂದರು.

ಆವರು ಇಡ್ಲಿ ತರಿಸಿ ತಿನ್ನತೊಡಗಿದಾಗ 'ಇವತ್ತಿನ ಪ್ರೋಗ್ರಾಂ ಏನು? ಎಂದು ಕೇಳಿದೆ.

'ಸ್ವಲ್ಪ ಕೂತುಕೊಳ್ಳಿ, ಹೇಳುತ್ತೇನೆ, ಎಂದು ಟೇಸು ಗ್ಲಾಸನ್ನು ಬರಿದು ಮಾಡಿ 'ಇನ್ನು ಹೋಗೋಣ ಬನ್ನಿ, ಎಂದರು. ಯಾವ ಆಸೀಲನ್ನೂ ಮುಂದೂಡದೆ ಆವರ ಹಿಂಬಿಲ್ಲೇ ಹೊರಡಲು ನಿಶ್ಚಯಿಸಿದೆ. ಎರಡೆ ಗಾಡಿಗಳೂ ಹೊರಟವು ಹೋಟಿಲಿನ ಬಿಲ್ಲನ್ನು ತೆತ್ತು, ಒಂದು ಹೊಗೆ ಉಗುಳುತಿತ್ತು. ಇನ್ನೊಂದು ಉಗುಳು ನುಂಗುತಿತ್ತು.

ಗಣರಾಜ್ಯ ಗುಡಿಯ ಮುಂದೆ ನಡೆದು, ಹೂವಿನಂಗಡಿದಾಟಿ, ಹಳೇ ಮನೆಯ ತಿರುವಿನ ವರೆಗೆ ಹೋಗುವ ವರೆಗೂ ಮೌನವೇ ಮೌನ—ನಮ್ಮಿಬ್ಬರಲ್ಲೂ ಈ ಮೌನವನ್ನು ಕೊನೆಗೂ ನಾನೇ ಭೇದಿಸ ಬೇಕಾಯ್ತು. 'ಈಗ ನಾವು ಹೋಗುವುದಾದರೂ ಎಲ್ಲಿಗೆ? , ಎಂದು ಕೇಳಿದೆ.

ಕೊನೆಯ ದಂ ಹೊಗೆಯೆಳೆದು ಸಿಗರೇಟಿನ ತುಂಡನ್ನು ಬಿಸುಟು 'ಇವತ್ತೊಂದು ಫಸ್ಟ್ ಕ್ಲಾಸ್ ಕೇಸ್ ಇದೆ. ಕಡಿಮೆ ಎಂದರೆ ಇಪ್ಪತ್ತು ಸಾವಿರಕ್ಕಾದರೂ ಪ್ರಯತ್ನಿಸಬಹುದು. ನೀವಿ ಪ್ರಯತ್ನಿಸಿದರೆ ಖಂಡಿತವಾಗಿಯೂ ಸಿಗುತ್ತದೆ, ಎಂದರು ಆನಂದ್.

'ಎಂಥ ಕೇಸು? , ಎಂದು ಕೇಳಿದೆ ಕಣ್ಣು ಬಾಯಿ ಎಡನ್ನು ಬಿಟ್ಟು.

'ಬೇರೆ ಯಾವುದೂ ಅಲ್ಲ ಲೈಫ್ ಇನ್ಸೂರೆನ್ಸ್, ಎಂದರವರು.

ಇನ್ಸೂರೆನ್ಸ್ ಎಂಬ ಪದ ಕೇಳಿದೊಡನೆಯೇ ಆನಂದಭರಿತನಾಗಿ 'ಎಸ್ಲೆ, ಕೈ ಕೊಡಿ. ನೀವು ಇನ್ಷೂರೆನ್ಸ್ ಏಜಂಟ್ ಆದ ವಿಚಾರ ನನಗೆ ಇಂದೇ ತಿಳಿದದ್ದು. ತುಂಬ ಸಂತೋಷ. ನಿಮಗೆ ಜಯವಾಗಲಿ, ಎಂದು ಹೇಳಿ ಆವರ ಕೈ ಕುಲುಕಿದೆ ಇನ್ಷೂರೆನ್ಸ್ ಏಜಂಟರನ್ನು ಕಂಡರೆ ಎಷ್ಟೋ ಜನರಿಗೆ ಹುಚ್ಚುನಾಯಿಗಳನ್ನು ಕಂಡಷ್ಟು ಹೆದರಿಕೆಯುಂಟಾಗುತ್ತಿದೆಯೊದರೂ ನನಗೆ ಆವರನ್ನು ಕಂಡರೆ ಅಭಿಮಾನ ಹಾಗೂ ಗೌರವ. ತಮ್ಮ ಜೀವನೋಪಾಯದ ದೃಷ್ಟಿಯಿಂದ ಆವರ ಕೆಲಸ ಮಾಡುತ್ತಿದ್ದರೂ ಕೂಡ ಅನೇಕರಲ್ಲಿ ಉಳತಾಯದ ಮನೋಭಾವವನ್ನು ಮೂಡಿಸಿ ಒಂದು ವ್ಯಕ್ತಿಯ ಹಾಗೂ ಒಂದು ಸಂಸಾರದ ಮುಂದಿನ ದಿನಗಳು ಸುಖವಾಗಿ ಸುಲಭವಾಗಿ ಕಳೆಯುವಂತೆ ಮಾಡುವ ವ್ಯಕ್ತಿಗಳು ಆವರು. ಮುಂದಿನ ದಿನಗಳ ಯೋಜನೆಯೇ ಇಲ್ಲದೆ ಅಂದಂದಿನ ಸಂಪಾದನೆಯನ್ನು ಅಂದಂದೇ ಬೇಡವನಸ್ತು ಗಳಿಗೆ ಖರ್ಚ ಮಾಡಿ ದಿನ ದೂಡುವ ಜನರಿಗೆ ವಿಮೆಯ ಮಹಿಮೆಯನ್ನು ಬೋಧಿಸಿ ಆವರು ತಮ್ಮ ಹೆಂಡತಿ ಮಕ್ಕಳಿಗಾಗಿ ಹೆಣವನ್ನು ವಿಮೆಯ ಮೂಲಕ ಕೂಡಿಡ ವಂತೆ ಪ್ರೇರೇಪಿಸುವ ವ್ಯಕ್ತಿಗಳು ಆವರು. ಆವರು ಸಮಾಜ ಜೀವಿಗಳೂ ಹೌದು, ಸಮಾಜ ಸೇವಕರೂ ಹೌದು. ಈ ವಿಚಾರ ಲಹರಿಯನ್ನು ಅಲ್ಲಗೇ ಬಿಟ್ಟು 'ನೀವು ಹೇಳಿದಂಥ ಕಾಲ ಯಾರು? , ಎಂದು ಕೇಳಿದೆ. ಆನಂದರೊಡನೆ, 'ಆವರ ಪರಿಚಯ ನಿನಗಿದೆ. ನೀವು ಬಂದರೆ ಮಾತ್ರ ಆವರು ಇನ್‌ಸೂರು ಮಾಡಿಸಿಯಾರು'.

ಕೈ ಏಕೋ ತಲೆಯನ್ನು ಕೆರೆಯ ತೊಡಗಿತು. ಯಾರಪ್ಪಾ ನನಗೆ ಪರಿಚಯ ವಿರುವಂಥ ಕಾಲ ಎಂದು ಕೊಂಡೆ ಏಕೆಂದರೆ ನಾನು ಯಾವ ಊರಿಗೆ ಹೋದರೂ ನನಗೆ ಆ ಊರಿನ ಜನರ ಪರಿಚಯವಾಗುವುದು ಬಹಳ ವಿರಳ. ಪರಿಚಯ ಆಗುವುದೇನು ಬಂತು ನಾನು ಮಾಡಿಕೊಳ್ಳುವುದೇ ಇಲ್ಲ ಎಲ್ಲಾದರೂ ಕೆರೆ, ಹೊಳೆ, ಕಾಡು ಗುಡ್ಡ ಬೆಟ್ಟ ಬಯಲುಗಳ ಪರಿಚಯ ಮಾಡಿಕೊಳ್ಳುತಿದ್ದೇನೇ ಹೊರತು 'ಸಭ್ಯ ಮನುಷ್ಯರ' ಸಹವಾಸಕ್ಕೆ ನಾನು ಹೋಗುತ್ತಿರಲಿಲ್ಲ ಆದರೆ ಮುಗ್ಧ ಕೂಸುಗಳೊಡನೆ ಚಕ್ಕಂದವಾಡುತಿದ್ದುದುಂಟು. ಆದರೆ ಅದು ಇಲ್ಲಿ ಅಪ್ರಸ್ತುತ.

'ಆವರ ಹೆಸರೇನು? ಎಲ್ಲಿದ್ದಾರೆ? ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ? ಎಂಬ ತ್ಯಾದಿ ವಿವರಗಳನ್ನು ಕೇಳಿದೆ.

ಉತ್ತರ ಬಂತು. 'ನಿಮ್ಮ ಕ್ಲಾಸ್‌ಮೇಟ್ ಎಂದು ಹೇಳುತ್ತಿದ್ದರಲ್ಲ. ಆದೇ ವೈಕುಂಠರಾಯರು. ಆವರ ಪರಿಚಯವ ನ್ನೇಂತೂ ಮಾಡಿಸಿದ್ದೀರಿ. ಆವರನ್ನೇ ಹಿಡಿಯುವ ಎಂದ ಜ್ಞಾನ್ ಹಾಕಿದ್ದೇನೆ ಆದಕ್ಕೆ ನಿಮ್ಮ ಸಹಾಯವೂ ಬೇಕು!

ನನ್ನಿಂದ ಸಹಾಯ ಹೊಂದಿದ್ದವರ ಗುರುತು ಯಾರದ್ದೂ ನನಗಿಲ್ಲ. ಸಹಾಯ ಮಾಡುವಂಥ ಯೋಗ್ಯತೆಯಾದರೂ ಎಲ್ಲಿಂದ ಬರಬೇಕು? ಆದರೆ ಒಂದು ವಾರದ ಸಹವಾಸದಲ್ಲೇ ಆಪ್ತ ಗೆಳೆಯರಾಗಿದ್ದ ಆನಂದರ ಮಾತಿಗೆ ಬೆಲೆ ಕೊಡುವ ದೃಷ್ಟಿಯಿಂದ 'ಆಗಲಿ ನೋಡುವ' ಎಂದು ಮನಸ್ಸಿನಲ್ಲೇ ಹೇಳಿಕೊಂಡೆ

ವೈಕುಂಠರಾಯನನ್ನು ಬಲೆಗೆ ಹಾಕಿಕೊಳ್ಳುವುದು ಅಷ್ಟು ಸುಲಭವಲ್ಲ. ಚಿಕ್ಕಂದಿನಿಂದಲೂ ಅಕ ಜೋಕಿವಾಲ ಎಂಬುದು ನನಗೆ ತಿಳಿವಿತ್ತು. ದುಡ್ಡನ್ನು ಬೇಡದ ವಸ್ತುಗಳಿಗೆ ಎಡೆಬಿಡದೆ ಕೊಡುತಿದ್ದ ಆತ ವಿಮೆಯ ಮೂಲಕ ಹೆಣವನ್ನು ಕೂಡಿಟ್ಟು ತನ್ನೊಂದಿಗೆ ರಾತ್ರ್ಯವೂ ಉದ್ಧಾರವಾಗಬೇಕೆಂದು ಬಯಸಿಯಾನೇ! ಎಂಬ ಶಂಕೆಯು ತಲೆದೋರಿತು ನನಗೆ. ಆದಕ್ಕಾಗಿಯೇ ಆನಂದರೊಡನೆ ಹೇಳಿದೆ— 'ಅದೆಲ್ಲಾ ಸರಿ ಮಹಾಂಯ್ರೇ, ಆದರೆ ಆ ಮನುಷ್ಯ ಈ ವೇಳೆಗೆ ಸಿಗುತ್ತಾನೆಂದು ಏನು ಗ್ಯಾರಂಟಿ? ನಾಂಕಾರು (ಬೇಡದ) ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾನೆ ಆತ. ಅಲ್ಲದೆ ನಾವಿಂಥರು ಆಪ್ರಯೋಜಕ ಸ್ನೇಹಿತರು ಅನಿನಿಗೆ ಯಾರೊಡನೆ ಯಾವ ಕೆಲಸದಲ್ಲಿದ್ದಾನೋ ಏನೋ ಆತ. ಈಗ ನಾವು ಹರ ಹರಾ ಅಂತ ಹೋದರೆ ಆತ ಸಿಗುತ್ತಾನೆಯೆ? - ಎಂದು

'ಅದರ ಬಗ್ಗೆನೀವೇನು ಯೋಚನೆಮಾಡಬೇಡಿ ನಿನ್ನ ರಾತ್ರಿ ನಾವು ಉತ್ತರ ದಕ್ಷಿಣಾಭಿಮುಖವಾಗಿ ಚಡರಿದ ಮೇಲೆ ಊಟ,ಕಾಫಿ ಚಾ,ಹಾಲು, ನೀರು ಹೋಟೆಲಿನಲ್ಲಿ ಸಿಕ್ಕಿದರೆ.—'ಟೊಮ್ಯಾಟೋ ಸಾರಿನಲ್ಲಿ ಅನ್ನವನ್ನು ಕಲಸುತ್ತ. 'ನಾಳೆ ನಿಮ್ಮ ಮನೆಗೆ ಬರುತ್ತೇನೆ' ಎಂದೆ, 'ಓಹೋ ಧಾರಾಳವಾಗಿ ಬನ್ನಿ ಆದಕ್ಕೇನಂತೆ. ನಿಮಗೆ ಮೊದಲೇ ಹೇಳಿದ್ದೆನಲ್ಲಾ ಊಟ ನನುಯಕ್ಕೆ ಬೇಕಾದರೂ ಬರಬಹುದು' ಎಂದರು ಆಸ್ಟ ಶಿವರು ಹೇಳಿದ ಮೇಲೆ

(ಇನ್ನೇ ಮುಂ ಮೇಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಶೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಪಾಸಪತ್ರಾ ಭರ್ಜಿಂಥಗಳಿಲ್ಲದೆ ಚಕ್ಕುಗಳ ಮೂಲಕ ಪುರುಪಾಪತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಭಾರತದ ಕೋಗಿಲೆ

ಸರೋಜಿನಿ ನಾಯಡು



ಚೀನೀ ಆಕ್ರಮಣದಿಂದ ನೇಫಾದ ಜನತೆ ತೀವ್ರ ಚೇತರಿಸಿಕೊಂಡಿದೆ. ಈ ಚಿತ್ರದಲ್ಲಿ ನಾಗನೊಬ್ಬನು ಬಿದಿರು ಬುಟ್ಟಿ ರಫೂರಿಸುತ್ತಿದ್ದಾನೆ.

ಅನುಪಮ ಕವಯಿತ್ರಿ ಮತ್ತು ಅಸಧ್ಯ ಸ್ವಾತಂತ್ರ್ಯ ಪ್ರೇಮಿಯೂದ ಮತ್ತು ಭಾರತದ ನಾರಿಯರ ನಾಯಿಕೆಯೂದ ಸರೋಜಿನಿ ನಾಯಡೂರವರ ಜನ್ಮವು ೧೮೭೯ರ ಫೆಬ್ರುವರಿ ತಿಂಗಳ ೧೩ನೇ ದಿನದಂದಾಯಿತು. ನಿರ್ಮಲ ಹೃದಯದ ಉತ್ತಮ ಭಾವನೆಯ ಆಕೆಯನ್ನು ತಮ್ಮು ಹಿರಿಯಕ್ಕನೆಂದು ಭಾರತದ ಯುವನಾರಿಯರು ತಿಳಿಯುತ್ತಿದ್ದರು.

ಹೈದರಾಬಾದಿನಲ್ಲಿ ಡಾ। ಅಘೋರನಾಥ ಚಟ್ಟೋಪಾಧ್ಯಾಯ ಮತ್ತು ವರದ ಸುಂದರಿ ದೇವಿಯವರ ಪ್ರಥಮ ಕುಪರಿಯಾಗಿ ಸರೋಜಿನಿಯು ಜನ್ಮವಾಯಿತು. ಸರೋಜಿನಿ ದೇವಿಯವರ ಪೂತಾ ಪಿತರಿಬ್ಬರೂ ಸುಸಂಸ್ಕೃತರೂ ವಿದ್ವಾಂಸರೂ ಆಗಿದ್ದು ಕುಪರಿಯ ವಿದ್ಯಾಧ್ಯಾಸದಲ್ಲಿ ಬಹು ಆಸಕ್ತಿಯನ್ನು ವಹಿಸಿದರು. ಇದರಿಂದಲಾಗಿಯೇ ಸರೋಜಿನಿಯವರಿಗೆ ಬಾಲ್ಯದಲ್ಲೇ ವಿಶಾಲವಾದ ಜಗತ್ತಿನ ಜ್ಞಾನವೂ ವಿವಿಧ ಜಾತಿಯ ವ್ಯಕ್ತಿಗಳ ಪರಿಚಯ ತನ್ಮೂಲಕ ಪರಮತ ಸಹನೆಯೂ ಉಂಟಾಯಿತು.

ಚಿಕ್ಕ ವಯಸ್ಸಿನಲ್ಲಿಯ ಶಾಲೆಗೆ ಸರೋಜಿನಿದೇವಿಯವರು ಕಳಹಿಸಲ್ಪಟ್ಟರೂ. ಕಲಿಯುವುದರಲ್ಲಿ ಆವರು ಮುಂದಾಗಿದ್ದರು ಬಾಲ್ಯವಲ್ಲಯೇ ಇಂಗ್ಲಿಷ ನ್ನೂ ಕಲಿತರು ಒಂದು ದಿನ, ತಮ್ಮ ಹಸ್ತೊಂದರ ಹರೆಯದಲ್ಲಿ, ಸರೋಜಿನಿ ದೇವಿ ಸಂಗೀತದ ಒಂದು ಸಮಸ್ಯೆಯನ್ನು ಬಿಡಿಸುವುದರಲ್ಲಿ ಮಗ್ನಳಾಗಿದ್ದರು. ಕೆಲವು ಸಮಯದ ಅನಂತರವೂ ಅವರಿಗೆ ಈ ಸಮಸ್ಯೆಗೆ ಪರಿಹಾರ ದೊರಕಲಿಲ್ಲ ಆದರೆ ಒಂದು ಸುಂದರವಾದ ಕವನವು ಆದರಿಂದಲೇ ರಚಿಸಲ್ಪಟ್ಟಿತ್ತು. ಹೀಗೆ, ಆ ದಿನದಿಂದ, ಆವಳಲ್ಲಿ ಹುದುಗಿದ್ದ ಕಾವ್ಯ ಶಕ್ತಿ ಹೊರ ಹೊಮ್ಮಿ ಎಲ್ಲಾರನ್ನೂ ಆಕರ್ಷಿಸಿತು.

ಹನ್ನೆರಡರ ಹರೆಯದಲ್ಲಿ ಸರೋಜಿ ದೇವಿಯವರು ಮದ್ರಾಸು ವಿಶ್ವವಿದ್ಯಾ ನಿಲಯದ ಮೆಟ್ರಿಕ್ಯುಲೇಸನ್ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ಪಾಸಾದರು. ಇದರಿಂದಲೇ ಅವರ ಬುದ್ಧಿ ಶಕ್ತಿ ಹೆಚ್ಚಿತು. ಒಂದು ವರ್ಷದ ಅನಂತರ ಅವರು "ಲೇಡಿ ಆಫ್ ದಿ ಲೇಕ್" ಎಂಬ ಸುಂದರ ಕಾವ್ಯಗಳನ್ನು ರಚಿಸಿದರು. ೧೩೦೦ ಗೀಟುಗಳಿರುವ ಈ ಕಾವ್ಯವನ್ನು ಅವರು ಆರು ವಾರಗಳಲ್ಲಿ ಬರೆದು ಮುಗಿಸಿದ್ದರು. ಅನಂತರ ಕೆಲವು ವರ್ಷಗಳನ್ನು ಸಾಹಿತ್ಯ; ಚರಿತ್ರೆ, ತತ್ವಶಾಸ್ತ್ರಗಳನ್ನು ಅಭ್ಯಾಸಿಸುತ್ತಾ ಕಳೆದರು. ಅವರ ಜ್ಞಾನ ಭಂಡಾರ ದಿನದಿಂದ ದಿನಕ್ಕೆ ಅಧಿಕ ಅಧಿಕವಾಗುತ್ತಾ ಬರುತ್ತಿತ್ತು.

ಸ್ಥಳೀಯ ರಾಗಿದ್ದ ತತ್ವಜ್ಞಾನಿ ಡಾ. ಗೋವಿಂದ ರಾಜು ನಾಯಡೂರವರೊಡನೆ ಪ್ರೇಮವದಲ್ಲಿ ಸಿಲುಕಿದ್ದು ಆಗ ಆವರ ವಯಸ್ಸು ಹದಿನಾರು ವರುಷಗಳು ಮಾತ್ರವಾಗಿತ್ತು. ಸರೋಜಿನಿದೇವಿ ಬ್ರಾಹ್ಮಣ ಮನೆತನದವಳಾಗಿದ್ದರು ಆದರೆ ಡಾ। ನಾಯಡೂರವರು ಜಾತಿಯಲ್ಲಿ ಶೂದ್ರರು ಕೀಳಾಗಿದ್ದರು. ಆದುದರಿಂದ, ಇಂತಹ ಅಂತರ್ಜಾತಿ ವಿವಾಹವನ್ನು ಚಟ್ಟೋಪಾಧ್ಯಾಯರು ಸಮ್ಮತಿಸಲಿಲ್ಲ ಮಗಳ ಮನವನ್ನು ಬೇರೆಕಡೆಗೆ ಹರಿಸುವ, ನಿವಿತ್ತ ಚಟ್ಟೋಪಾಧ್ಯಾಯರು ಸರೋಜಿನಿದೇವಿಯವರನ್ನು ಇಂಗ್ಲೆಂಡಿಗೆ ಉಚ್ಚ ಶಿಕ್ಷಣಕ್ಕಾಗಿ ಕಳುಹಿಸಿದರು.

ಅವರು ಇಂಗ್ಲೇಂಡಿನ ಕಿಂಗ್ಸ್ ಕಾಲೇಜ್, ಕೇಂಬ್ರಿಡ್ಜ್, ಗಿರ್ಟನ್‌ಗಳ ಕೋಲೇಜ್‌ಗಳಲ್ಲಿ ಅಭ್ಯಾಸಿಸಿದರು. ಹಲವು ವಿಶ್ವವಿದ್ಯಾಲಯಗಳು ಅವರಿಗೆ ಡಾಕ್ಟರೇಟ್ ಪದವಿಯನ್ನಿತ್ತವು. ಅವುಗಳಲ್ಲಿ ಎಡಿನ್‌ಬರ್ಗ್ ವಿಶ್ವವಿದ್ಯಾಲಯವೂ ಒಂದಾಗಿತ್ತು. ತಮ್ಮ ಈ ವಿದೇಶ ಜೀವನದಲ್ಲಿ ಅವರು ಹಲವಾರು ವಿದ್ವಾಂಸರಾದ ಆಂಗ್ಲ ಗೆಳೆಯರನ್ನು ಸಂಪಾದಿಸಿಕೊಂಡು ಮೃತ್ಯು ಭೂಮಿಗೆ ಮರಳಿದರು.

ನಿಜವಾದ, ಪವಿತ್ರ ಪ್ರೇಮ ಎಂದೆಂದಿಗೂ ಜಯಶಾಲಿಯೇ! ಇಂಗ್ಲೆಂಡಲ್ಲಿ ವಿದೇಶದಿಂದ ಮರಳಿನ ಬಳಿಕ, ತಂದೆಯು ವಿರೋಧವಿದ್ದರೂ, ಧೈರ್ಯ ಮತ್ತು ದೃಢ ಮನೋಭಾವನೆಯಿಂದ ಡಾ. ನಾಯಡೂರವರನ್ನು ವರಿಸಿದ ಸರೋಜಿನಿ ದೇವಿ ಸರೋಜಿನಿ ನಾಯ್ಡು ಆದರು. ಇದೇ ರೀತಿಯ, ಇದಕ್ಕಿಂತಲೂ ಅಧಿಕವಾದ ಧೈರ್ಯ ಮತ್ತು ದೃಢ ಮನೋಭಾವನೆಯನ್ನು ಅನಂತರ ಅವರು ಗಾಂಧಿಜಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲೂ ತೋರಿಸಿದರು.

ದಾಂಪತ್ಯ ಜೀವನ ಕೆಲ ಕಾಲ ಸುಮಧುರವಾಗಿತ್ತು. ಇಬ್ಬರು ಗಂಡು ಮಕ್ಕಳು ಮತ್ತು ಅಷ್ಟೇ ಕುವರಿಯರಿಗೆ ಜನ್ಮವಿತ್ತ ಮೂತೆಯಾಗಿ ಅವರು ಪೋಷಿಸಿದರು ಅವರ ಕುವರಿಯರಲ್ಲೊಬ್ಬರಾದ ಪದ್ಮಜಾ ನಾಯ್ಡು ಇಂದು ಪಶ್ಚಿಮ ಬಂಗಾಳದ ಗವರ್ನರ್ ಆಗಿದ್ದಾರೆ

'ದಿ ಗೋಲ್ಡನ್ ಸ್ಪೆರೋಲ್ಡ್', 'ದಿ ಬರ್ಡ್ ಓಫ್ ಟೈಂ' ಮತ್ತು 'ದಿ ಬ್ರೋಕನ್ ವಿಂಗ್' ಅವರ ಅತ್ಯುಚ್ಚ ಕವನ ಸಂಗ್ರಹಗಳು ಈ ಗ್ರಂಥಗಳು ಅವರನ್ನು ವಿಶ್ವ ವಿಶ್ವಕ್ಕೆ ಪರಿಚಯ ಮಾಡಿಸಿಕೊಟ್ಟವು. ಅವರ ಕಿರು ಕವನ—ಬೆಲ್ಸ್—ಮೆರೆಯಲಾರದ ಸುಂದರ ಕೃತಿಯಾಗಿದೆ—ಬೇಂಗಲ್ ಸೆಲ್ಲರ್ಸ್—ಕೋ-ಕೊವೇಂತರ್ ಫಿಸರ್ಸ್—ದಿ ಪಾಲಂಕ್ವೀನ್ ಬೇರರ್ಸ್—ಗ್ಯೂರ್ಲಾರ್ಲ್ಯಾಂಡ್—ದಿ ಡೇನ್ಸ್ ಓಫ್ ಲಾವ್—ಟು ಎ ಬುದ್ಧ ಸೀಟೆಡ್ ಓನ್ ಎ ಲೋಟಸ್—ಗಳು ಅವರ ಮಹಾ ಕವನಗಳಾಗಿವೆ. ಅವರು ಕವನ ಸಂಕಲನಗಳಲ್ಲದೆ ಹಲವಾರು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಇಷ್ಟರಲ್ಲೆಲ್ಲಾ ಪ್ರೇಮಿಕ ನಾಯಡೂರವರು ಪಾಶ್ಚಾತ್ಯ, ಪೌರ್ವಾತ್ಯ ವಿದ್ವಾಂಸರಿಗೆ ತನ್ನ ಕಾವ್ಯಗಳ ಮೂಲಕ ಪರಿಚಿತಳಾಗಿದ್ದರು.

ಆವರ ವಾಣಿಗಳಲ್ಲಿ ಸದಾ ನಿರ್ಮಲ ನಗು ತುಂಬಿತ್ತು ಎಲ್ಲರನ್ನೂ ಸೆಳ್ಳು ನಗುವುದರಲ್ಲೆ ಎಲ್ಲರು ಎತ್ತಿದ ಕೈ ಆದುಬಂತು ಹಾಸ್ಯವಾರದೆ ಪರಿಶುದ್ಧವಾಗಿತ್ತು

೧೯೧೪-೧೮ರಲ್ಲಿ ಇಡೀ ದೇಶದಲ್ಲಿ ಸ್ವಾತಂತ್ರ್ಯ ಕಹಳೆ ಮೊಳಗಿದಾಗ ಆವರ 'ರಾಪರ್ ಓನ್ ಸೋಂಗ್' ಪ್ರಕಟವಾಯಿತು. ಆವರ ಕವಿತೆಗಳೂ ಭಾಷಣಗಳೂ ಜನರನ್ನು ಪ್ರೇರಿಸಿದುವು. ಗಾಂಧಿ, ನೆಹರು, ಪ್ರಸಾದ್ ...ಮೊದಲಾದ ಎಲ್ಲಾ ರಾಷ್ಟ್ರ ನಾಯಕರೂ ಮೇಧಾವಿಗಳೂ ಆವರನ್ನು ಮೆಚ್ಚಿದರು ಭಾರತದ ತೋಗಲೆ ಕೇವಲ ಪ್ರೇಮಗೀತೆಗಳನ್ನಷ್ಟೇ ಸ್ವಾತಂತ್ರ್ಯ ಗೀತೆಗಳನ್ನೂ ಹಾಡತೊಡಗಿತು ಅಂಗ್ಲರ ಅತ್ಯಾಚಾರಗಳನ್ನು ಕಟುವಾಗಿ ಟೀಕಿಸತೊಡಗಿದು ೧೯೧೭ರಲ್ಲಿ ಆವರು ಆಫ್ರಿಕಾದಲ್ಲಿದ್ದ ಭಾರತೀಯರ ಸ್ಥಿತಿಗತಿಗಳನ್ನರಿಯುವುದಕ್ಕಾಗಿ ಸಂದರ್ಶಿಸಿದರು ೧೯೧೮ರಲ್ಲಿ ಕಾನ್ಪುರದಲ್ಲಿ ಸಮ್ಮೇಳನಿಸಿದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷೆಯಾಗಿ "ಕಾಂಗ್ರೆಸ್‌ನ ಅಧ್ಯಕ್ಷೆಯೊದ ಪ್ರಥಮ ಭಾರತೀಯ ಮಹಿಳೆ"ಎನಿಸಿದರು, ಪ ೧೯೨೦ರಲ್ಲಿ ಆವರು ಕಾಂಗ್ರೆಸ್ ಆರ್ಯೋಕಾರಿ ಸಮಿತಿಯ ಸದಸ್ಯೆಯಾಗಿದ್ದರು ೧೯೨೧ರಲ್ಲಿ, ಮಿಸ್ ಮೇಯೋಳ "ಮದರ್ ಇಂಡಿಯಾ"ಳ ಅನೇಕ ರೀತಿಯಲ್ಲಿ ಭಾರತ ಬಗ್ಗೆ ಮೂಡಿದ ತಪ್ಪು ಭಾವನೆಗಳನ್ನು ಹೋಗಲಾಡಿಸುವುದ ಕ್ಕೋಸ್ಕರ, ಆವರು ಕಳಹಿಸಲ್ಪಟ್ಟರು. ತಮ್ಮ ನಯ ವಿನಯಗಳಿಂದ, ಚಾಣಾಕ್ಷ ಬುದ್ಧಿವಂತಿಕೆಯಿಂದ ವಿಜಯಿಯಾಗಿ ಮೂರ್ನಾಲ್ಕೇರಕ್ಕೆ ವರಳಿದರು ಎರಡು ವರ್ಷಗಳ ಅನಂತರ ನಡೆದ ಜಂಡಿಯ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು ೧೯೩೨ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿಗೆ ಭಾರತದ ಪ್ರತಿನಿಧಿಯಾಗಿ ಆಯ್ಕೆಗೊಳ್ಪಟ್ಟರು. 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಆವರು ಖಾಲುದಾರರಾಗಿ, ಗಾಂಧೀಜಿಯ ವರೊಡನೆ ಯೆರವಾಡದ ಜೈಲಿನಲ್ಲಿ ಬಂಧಿತರಾದರು.

೧೯೪೭ನೇ ಆಗೋಸ್ಟ್ ೧೫ರಿಸ್ವಾತಂತ್ರ್ಯ ದಿನದಂದು ಭಾರತ ಮಾತೆ ಸ್ವತಂತ್ರಳಾದಾಗ, ಸರೋಜಿನಿ ನಾಯ್ಡೂರವರು ಉತ್ತರ ಪ್ರದೇಶದ ಗವರ್ನರ್ ಆಗಿ ನೇಮಕಗೊಳ್ಪಟ್ಟಿದ್ದರು. ಕೆಲವೇ ಕಾಲದಲ್ಲಿ ಆವರು ಅತ್ಯಂತ ಜನಪ್ರಿಯ ಗವರ್ನರರೆಲ್ಲೊಬ್ಬರಾಗಿ ಇನ್ನೆನ್ನ ಸ್ಪಷ್ಟಿಯನ್ನೆ ಪಡೆದರು

೧೯೪೯ರ ಫೆಬ್ರುವರಿಯಲ್ಲಿ ಶ್ರೀಮತಿ ನಾಯಡ್ಡರವರು ಅಕ್ಕರೆಕ್ಕೊಳಗಾಗಿ ಅದೇ ವರ್ಷ ಮಾರ್ಚ್ ೨ರಂದೇ ದಿನಾಂದುದು ಸ್ವರ್ಗಸ್ಥರಾದರು. ಸಮಗ್ರ ಭಾರತ ವೂತ್ರವೇಕೆ, ವಿಶ್ವದ ವಿದ್ಯಾವಂ ವ್ಯಕ್ತಿಗಳೂ ಮರುಗಿದರು ಭಾರತದ ಆಧುನಿಕ ಕವಿ, ಕವಯಿತ್ರಿಗಳಲ್ಲಿ, ರಾಜೇಶ್ವರನ್ನು ಹೊರತ, ಶ್ರೀಮತಿ ನಾಯಡ್ಡಿರವರಿಗೆ ಸರಿಸಮಾನಸಮಂದವರು ಬೇರೂ ಇರಲಿಲ್ಲ. ಸರೋಜಿನಿ ನಾಯಡ್ಡಿರವರು ಪರಲೋಕವಸ್ಥೈದಿದರೂ, ಆವರ ಕವನಗಳು, ಕಾವ್ಯಗಳು ಅಜರಾಮರವನ್ನಾಗಿ ಮಾಡಿತು.

—"ಸಚಿತ್ರ" ಯೇತ್ಯ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ ..... ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಶೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಮು ಶೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಾದಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನೆರೆಯ ರಾಷ್ಟ್ರ

ಟಿಬೇಟಿನ ವಿಶಿಷ್ಟ ಸಂಸ್ಕೃತಿ

ಟಿಬೇಟು ಗುಡ್ಡಕಾಡುಗಳ ಪ್ರದೇಶವಾಗಿದೆ. ಅಲ್ಲಿಯ ರಸ್ತೆಗಳು ಒಹಳ ದುರ್ಗಮವಾಗಿದ್ದು ಸಂಚಾರಕ್ಕೆ ತಡೆಯನ್ನುಂಟುಮಾಡುತ್ತವೆ. ಮೇಲಾಗಿ ಟಿಬೇಟಿಯನರ ಅತ್ಯಾಚಾರ, ಅಮಾನುಷ ಕೃತ್ಯಗಳಿಂದಾಗಿ ದಾರಿಹೋಕರು ಅಲ್ಲಿಗೆ ಹೋಗಲು ಹೆದರುತ್ತಾರೆ. ಇದರಿಂದ ಟಿಬೇಟಿಗೆ ಹೋಗುವ ಯಾತ್ರಿಕರ ಸಂಖ್ಯೆ ಬಹು ಅಲ್ಪವೆನ್ನಬಹುದು.

ಟಿಬೇಟಿಯನರ ಮೈಬಣ್ಣ ಕಾಸಿದ ತಾಮ್ರದಂತೆ ಕೆಂಪಾಗಿದೆ. ಗಲ್ಲಗಳ ಎಲುಬುಗಳು ಉಬ್ಬಿದ್ದು ಅದು ಅವರ ಮುಖಕ್ಕೆ ಒಂದು ವಿಶಿಷ್ಟ ರೂಪು ಕೊಡುತ್ತದೆ. ಮೂಗು ಚಪ್ಪಟೆಯಾಗಿದ್ದು ಕಣ್ಣುಗಳು ಚಿಕ್ಕವುಗಳಾಗಿವೆ.

ಟಿಬೇಟಿಯನರ ಸಂಸ್ಕೃತಿಗೂ ಹಿಂದೂ ಸಂಸ್ಕೃತಿಗೂ ಬಹಳ ಅಂತರವಿದೆಯೆನ್ನಬಹುದು. ನಾವು ನಮ್ಮ ದೇಶದಲ್ಲಿ ಹೆಚ್ಚಿನ ಮನೆ, ಹೋಟೆಲುಗಳಲ್ಲಿ ಚಾ, ಕಾಫಿಯನ್ನು ತಯಾರಿಸುತ್ತೇವೆ. ಇಂದಿನ ದಿನಗಳಲ್ಲಿ ಈ ಚಾ ಕಾಫಿಯು ಜನರ ಸಾಮಾನ್ಯ ಪಾನೀಯವಾಗಿ ಹೋಗಿದೆ. ನಾವು ಚಾ ಕಾಫಿಗೆ ಸಕ್ಕರೆ, ಹಾಲನ್ನು ಹಾಕುತ್ತೇವೆ. ಆದರೆ ಟಿಬೇಟಿಯನರು ತಯಾರಿಸುವ ಪಾನೀಯವು ನಿಜಕ್ಕೂ ನಮ್ಮನ್ನು ಆಶ್ಚರ್ಯಗೊಳಿಸಬಹುದು. ಟಿಬೇಟಿಯನರು ತಮ್ಮ ಚಹಾಕ್ಕೆ ಸಕ್ಕರೆಯ ಬದಲು ಉಪ್ಪನ್ನು ಹಾಕುತ್ತಾರೆ ಹಾಲಿನ ಬದಲು ಬೆಣ್ಣೆಯನ್ನು ಹಾಕುತ್ತಾರೆ. ಇದು ಅವರಿಗೆ ಉಪ್ಪಿನ ಮೇಲೆ ಇರುವ ಪ್ರೀತಿಯನ್ನು ಸೂಚಿಸುತ್ತದೆ. ಅವರು ತಯಾರಿಸುವ ಚಹಾದಲ್ಲಿ ಸಂಕುಷ್ಪರಾಗುತ್ತಾರೆ.

ಹಿಂದೂ ದೇಶದಲ್ಲಿ ಯಾರಾದರೂ ಮೃತಪಟ್ಟರೆ ಮೃತ ಶರೀರವನ್ನು ಹಿಂದುಗಳಾದರೆ ಸುಡುತ್ತಾರೆ, ಮುಸಲ್ಮಾನ, ಕ್ರೈಸ್ತರಾದರೆ ಹುಗಿಯುತ್ತಾರೆ. ಆದರೆ ಟಿಬೇಟಿನಲ್ಲಿ ಯಾರಾದರೂ ವ್ಯಕ್ತಪಟ್ಟರೆ ಅವರ ಮೃತದೇಹವನ್ನು ಕಟುಕರ ವಶಕ್ಕೆ ಒಪ್ಪಿಸುತ್ತಾರೆ. ಕಟುಕರು ಆ ಮೃತಶರೀರವನ್ನು ನುಚ್ಚುನೂರು ಮಾಡಿ ಗಾಳಿಯಲ್ಲಿ ತೇಲಬಿಡುತ್ತಾರೆ.

ಯಾರಾದರೂ ರೋಗದಿಂದ ಮೃತಪಟ್ಟರೆ ಅವರು ಈ ಕ್ರಮವನ್ನು ಅನುಸರಿಸುವುದಿಲ್ಲ. ಈ ಕ್ರಮದಿಂದ ರೋಗವು ಇನ್ನೊಬ್ಬರಿಗೆ ಹರಡುವುದು ಎಂದು ಅವರು ಬಲ್ಲರು. ಇಂಥ ಸಂದರ್ಭದಲ್ಲಿ ಅಂತಹ ದೇಹವನ್ನು ಸ್ವತ್ಯೇಕ ಕೋಣೆಯಲ್ಲಿ ಹಾಗೆಯೇ ಇಡುವರು.

ನಮ್ಮ ದೇಶದ ಶ್ರೀಮಂತಿಕೆಯು ಅರ್ಥಿಕ ಪರಿಸ್ಥಿತಿಯು ಮೇಲೆ ಹೊಂದಿಕೊಂಡಿದೆ. ಒಬ್ಬನ ಹತ್ತಿರ ನಾಕಷ್ಟು ನಾಕಾರ ವರ್ಗ, ನೋಟಾರು ಕಾರು, ರೂ ಐತೆ ಗಳಿದ್ದರೆ ಅತನು ಶ್ರೀಮಂತನೆನಿಸಲ್ಪಡುತ್ತಾನೆ. ಆದರೆ ಟಿಬೇಟಿನಲ್ಲಿ ನೋಟಾರು ಕಾರುಗಳಾಗಲೀ, ದೊಡ್ಡ ಬೇಂಕುಗಳಾಗಲೀ ಕಾಣುವುದು ಅಪರೂಪ. ಭಾರತದಲ್ಲಿದ್ದಂತೆ ಟಿಬೇಟಿನಲ್ಲಿ ಅಂತಸ್ತುಗಳ ಮನೆ ಅಲ್ಲಿ ಕಾಣಸಿಗಲಾರವು. ಅಲ್ಲಿಯ ಶ್ರೀಮಂತಿಕೆಯ ಸೂಚಕ ವಸ್ತುವೆಂದರೆ ಉಪ್ಪು ಮತ್ತು ಜಾನುವಾರುಗಳಿಂದರೆ ನಿಮಗೆ ಆಶ್ಚರ್ಯವುಂಟಾಗ ಬಹುದು. ಯಾರೊಡನೆ ಹೆಚ್ಚು ಆನೆ, ಕುದುರೆ, ಕುರಿ, ಆಡುಗಳಿವೆಯೋ ಆತನು ಟಿಬೇಟಿನಲ್ಲಿ ಶ್ರೀಮಂತನೆನಿಸಲ್ಪಡುತ್ತಾನೆ. ಮಾನ್ಯತೆಯನ್ನು ಪಡೆಯುತ್ತಾನೆ.

ಇನ್ನು ಹಿಂದುಸ್ತಾನದ ನಮಸ್ಕಾರ ಪದ್ಧತಿಗೂ ಟಿಬೇಟಿಯನರ ನಮಸ್ಕಾರ ಪದ್ಧತಿಗೂ ಹೆಚ್ಚಿನ ಅಂತರವಿದೆ ನಮ್ಮ ದೇಶದಲ್ಲಿ ನಾವು ಇನ್ನೊಬ್ಬರನ್ನು ಸಂಧಿಸುವಾಗ ಕೈ ಜೋಡಿಸಿ ನಮಸ್ಕಾರ ಸೂಚಿಸುತ್ತೇವೆ, ಕೆಲವರು ಹಣೆಯ ಮೇಲೆ ಕೈ ಎಂಸಿ ನಮಸ್ಕಾರ ಕೂಡುವುದೂ ಇದೆ. ಟಿಬೇಟಿಯನರು ಒಬ್ಬರು ಇನ್ನೊಬ್ಬರನ್ನು ಸಂಧಿಸುವಾಗ ತಮ್ಮ ನಾಲಗೆಯನ್ನು ಹೊರಜಾಚಿ ತಮ್ಮ ನಮಸ್ಕಾರವನ್ನು ಸೂಚಿಸುತ್ತಾರೆ. ಇದರಲ್ಲಿ ವಿಶಿಷ್ಟ ಅರ್ಥವೂ ಇದೆ. ತಮ್ಮ ನಾಲಗೆಯಿಂದ ಇತರರಿಗೆ ಕೇಡನ್ನು ಬಗೆಯುವುದಿಲ್ಲ ಎಂಬುದೇ ಇದರ ವಿಶಿಷ್ಟಾರ್ಥ. ಬೌದ್ಧ ಮತದ ಪ್ರಭಾವವು ಟಿಬೇಟಿನ ಮೇಲೆ ಸಾಕಷ್ಟು ಬೀರಿದೆಯೆನ್ನ ಬಹುದು. ಹೆಚ್ಚಿನ ಟಿಬೇಟಿಯನರು ಬೌದ್ಧ ಮತೀಯರಾಗಿದ್ದಾರೆ. ಇಲ್ಲಿಯ ಬೌದ್ಧ ಸನ್ಯಾಸಿಗಳನ್ನು 'ಲಾಮಾ' ಎನ್ನುವರು. ಮುಖ್ಯ ಲಾಮನನ್ನು ತಿಷಾಲು ಎಂದು ಕರೆಯುತ್ತಾರೆ.

ಟಿಬೇಟಿನ ರಾಜನು 'ದಲಾಯಿಲಾಮಾ' ಎಂದು ಕರೆಯಲ್ಪಡುತ್ತಾನೆ. ದಲಾಯಿಲಾಮನೇ ಟಿಬೇಟಿನ ಸರ್ವಾಧಿಕಾರಿ. ತನ್ನ ಇಷ್ಟದಂತೆ ರಾಜ್ಯವನ್ನು ಆಳುವ ಅಧಿಕಾರವಿದ್ದ ಈ ರಾಜನಿಗೆ ಕೆಲವೊಂದು ಕೆಲಸದಲ್ಲಿ ಕೈ ಹಾಕಲು ಅಧಿಕಾರವಿಲ್ಲ. (೧) ಧಾರ್ಮಿಕತೆಯ ವಿಷಯದಲ್ಲಿ ಹೆಸ್ತಕ್ಷೇಪ ಮಾಡುವುದು ಉತ್ತರಾಧಿಕಾರಿಯನ್ನು ಚುನಾಯಿಸುವುದು. ಈ ಎರಡು ವಿಷಯದಲ್ಲಿ ದಲಾಯಿಲಾಮನಿಗೆ ಅಧಿಕಾರವಿರುವುದಿಲ್ಲ. ಉತ್ತರಾಧಿಕಾರಿಯನ್ನು ಟಿಬೇಟಿನ ಜನರೇ ಆರಿಸುವರು. ದಲಾಯಿಲಾಮನ ಮರಣ ಕಾಲದಲ್ಲಿ ಯಾವ ಬಾಲಕನು ಟಿಬೇಟಿನಲ್ಲಿ ಜನ್ಮ ತಾಳುವನೋ ಅವನೇ ಟಿಬೇಟಿಯನ್ ಪಟ್ಟವಿ ಅಧಿಕಾರಿಯಾಗುವುದು ಟಿಬೇಟಿನ ಸಂಪ್ರದಾಯ ದಲಾಯಿಲಾಮನ ಮರಣ ಕಾಲದಲ್ಲಿ ಅವನಿಗೆ ಕನಸಿನಲ್ಲಿ ಮಗುವಿನ ಜನನದ ವಿಷಯ ತಿಳಿಯುವುದು ಎಂದು ಅವರ ನಂಬಿಕೆ. ಅಂಥ ಮನೆಯಿಂದ ಮಗುವನ್ನು ತಂದು ವಿಜೃಂಭಣೆಯಿಂದ ಪಟ್ಟ ಕಟ್ಟುವರು. ಅಂಥ ಮಗು ಸಿಕ್ಕಿತೆಂದರೆ ಅವರ ಸಂತೋಷಕ್ಕೆ ಪಾರವೇ ಇಲ್ಲ. ವಾದ್ಯಘೋಷದೊಡನೆ ಮಗುವಿನ ಪಟ್ಟಾಭಿಷೇಕ ಮಾಡುವರು.

ಕೆಲವೊಮ್ಮೆ ಈ ರೀತಿಯು ಚುನಾವಣೆಯು ಬಿಕ್ಕಟ್ಟನ್ನು ತರುವುದುಂಟು. ದಲಾಯಿಲಾಮನ ಮರಣ ಕಾಲದಲ್ಲಿ ಮೂರು ನಾಲ್ಕು ಬಾಲಕರು ಟಿಬೇಟಿನಲ್ಲಿ ಜನಿಸಿದರೆ ಪಟ್ಟಾಭಿಷೇಕ ಯಾರಿಗೆ ಕಟ್ಟಬೇಕು ಎಂಬ ಪ್ರಶ್ನೆಯನ್ನು ಟಿಬೇಟಿಯನರು ಎದುರಿಸಬೇಕಾಗುವುದು. ಆದಕ್ಕಾಗಿ ಅಂಥ ಸಂದರ್ಭದಲ್ಲಿ ಅವರು ಮಗುವಿನ ಅದೃಷ್ಟ ಪರೀಕ್ಷಿಸುವುದಿದೆ. ನಿರ್ದಿಷ್ಟ ಸಮಯದಲ್ಲಿ ಜನಿಸಿದ ಮಕ್ಕಳ ಹೆಸರನ್ನು ಕಾಗದದಲ್ಲಿ ಬರೆದು ಮಡಚಿ ಬಂಗಾರದ ಒಂದು ತಟ್ಟೆಯಲ್ಲಿ ಇಡುವರು. ಯಾರಾದರೂ ಒಬ್ಬನಿಂದ ಒಂದು ಕಾಗದ ಹೆಕ್ಕಲು ಹೇಳುವರು. ಆ ಕಾಗದದಲ್ಲಿ ಯಾವ ಬಾಲಕನ ಹೆಸರಿದೆಯೋ ಅವನೇ ಪಟ್ಟದ ಉತ್ತರಾಧಿಕಾರಿಯಾಗುವನು. ಅಮಗುವಿನ ತಂದೆ ತಾಯಿಗಳಿಗೆ ಧನ್ಯವಾದ ಕೊಡುವರು. ಬಹಳ ವಿಜೃಂಭಣೆಯಿಂದ, ವಾದ್ಯ ಘೋಷಗಳಿಂದ ಆ ಬಾಲಕನಿಗೆ ಪಟ್ಟ ಕಟ್ಟುವರು. ಅವನೇ ಟಿಬೇಟಿನ ದಲಾಯಿಲಾಮನಾಗುವನು.

ಈ ರೀತಿ ಟಿಬೇಟಿನ ಸಂಸ್ಕೃತಿಯು ಹಿಂದೂಸ್ಥಾನದ ಸಂಸ್ಕೃತಿಗಿಂತ ಭಿನ್ನವಾಗಿದೆ.

—ರೋಹಿದಾಸ ಕಾಮತ್.

ಕೆಲಸಗಾರರ ಹಿತ ಸಂರಕ್ಷಣೆ ಸೂಲಿಕರ ಕರ್ತವ್ಯ. ಕೊಯಿಲಾ ಆಣೆಕಟ್ಟಿನ ಕಾರ್ಯಚಾರಿಗಳ ವಸತಿಯ ವಿಹಂಗಮ ನೋಟವಿದು

ನಯನದೆದುರಲಿ • ನಲಿಯುವೆ! •

ಆಗಿರುವೆ ನೀನೆಲ್ಲ !
ನೀನಿರದ ಎಡೆಯಿಲ್ಲ !
ಸೃಷ್ಟಿ ಲಯ ಕರ್ತು ದೇವ ॥ ೧ ॥

ನಿಶೆಯ ಜಾಲವ ಹರಿದು
ಬೆಳಕಾಗಿ ನೀ ಬರುವೆ !
ದಿನದ ಬಾಗಿಲ ತೆರೆಯುವೆ ॥ ೨ ॥

ಬಾನಿನಂಗಳದಲ್ಲಿ
ಬಣ್ಣಗಳ ನೀ ಚೆಲ್ಲಿ
ರಂಗವಲ್ಲಿಯ ಬರೆಯುವೆ ॥ ೩ ॥

ಹೆಕ್ಕೆಗಳ ಕಂಠದಲಿ
ನೀನಡಗಿ ಇಂಚರದಲಿ
ಗಾನಸುಧೆಯನ್ನು ಹರಿಸುವೆ ॥ ೪ ॥

ಹೊವಾಗಿ ಸಸ್ಯದಲಿ
ಮನಸೆಳೆದು ನಗುತಿರುವೆ !
ಪರಿಮಳವ ನೀ ಬೀರುವೆ ॥ ೫ ॥

ಹಾವಾಗಿ ಸುಳಿಯುತಲಿ
ಹೆಡೆಬಿಡಿಸಿ ಬೆದರಿಸುವೆ !
ಹರಿದೋಡಿ ನಲಿದಾಡುವೆ ॥ ೬ ॥

ತೊರೆಯಾಗಿ ನದಿಯಾಗಿ
ಹರಿದು ಸಾಗರವಾಗಿ
ಈ ಜಗದ ಮೈದೊಳೆಯುವೆ ॥೭॥

ಶಿಶುತನಕೆ ತಾಯಾಗಿ
ವಾತ್ಸಲ್ಯಮಯಿಯಾಗಿ
ಜೀವನದಿ ನೀ ಬೆಳಗುವೆ ॥ ೮ ॥

ಗುಡುಗಾಗಿ ಗುಡುಗಿಸುವೆ !
ಮೊಡವಿಯನೆ ನಡುಗಿಸುವೆ !
ಕೋಲ್ಮಿಂಚನು ಬೆಳಗುವೆ! ॥ ೯ ॥

ಅಣುರೇಣು ತೃಣ ಕಾಷ್ಠ
ಗಳಲೆಲ್ಲ ಹುದುಗಿರುವೆ !
ವಿಶ್ವವ್ಯಾಪಿಯಾಗಿರುವೆ ! ॥ ೧೦ ॥

ಉಸಿರಾಗಿ ಹಸಿರಾಗಿ
ನಿತ್ಯ ಚೇತನವಾಗಿ !
ನಯನದೆದುರಲಿ ನಲಿಯುವೆ॥೧೧॥

—ಯು. ನಾರಾಯಣ ಸೇರಿಗಾರ,
ಉದ್ಯಾವರ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಪ್ರತ್ಯಕ್ಷದರ್ಶಿಯ ಹೇಳಿಕೆ

ದೇವಲಿ ಶಿಬಿರದಲ್ಲಿ ಒಂದು ದಿನ

ಚೀನೀ ರಾಷ್ಟ್ರೀಯರನ್ನು ಬಂಧಿಸಿಡಲಾಗಿರುವ ದೇವಲಿ ಶಿಬಿರದಲ್ಲಿ ಗಲಭೆಗಳು ನಡೆದಿವೆಯೆಂದೂ ಅನೇಕ ಸೈನಿಕರು ಗುಂಪುಗಳ ಘರ್ಷಣೆಯಿಂದ ಶಿಬಿರದ ವಾತಾವರಣ ಪ್ರಕ್ಷುಬ್ಧಗೊಂಡಿದೆಯೆಂದೂ ಹೇಳುವುದು ದೊಡ್ಡ ಸುಳ್ಳು.

ನೀವು ವಿಶ್ವದಲ್ಲಿ ಎಲ್ಲಿಯೇ ಆಗಲಿ ವಿಹಾರ ಕೇಂದ್ರಕ್ಕೆ ಭೇಟಿ ನೀಡಿದ್ದರೆ, ದೇವಲಿ ಶಿಬಿರದಲ್ಲಿಯ ಜೀವನ ಕ್ರಮದ ಬಗೆಗೆ ಬಹು ಸುಲಭವಾಗಿ ತಿಳಿದುಕೊಳ್ಳಬಲ್ಲಿರಿ. ವಿಶ್ವದ ಇನ್ನುಳಿದ ವಿಹಾರ ಕೇಂದ್ರಗಳು ಹಾಗೂ ದೇವಲಿ ಶಿಬಿರದ ನಡುವೆ ಒಂದೇ ಒಂದು ವ್ಯತ್ಯಾಸವಿದೆ. ದೇವಲಿಯಲ್ಲಿ ಆಹಾರ ಪೂರೈಕೆ, ವಸತಿ ವ್ಯವಸ್ಥೆ ಮತ್ತು ಪೂರ್ಣಾವಧಿಯ ವೈದ್ಯಕೀಯ ನೆರವು ಹಾಗೂ ಇನ್ನಿತರ ಸೌಲಭ್ಯಗಳು ಇನ್ನೆಲ್ಲವೂ ಉಚಿತವಾಗಿ ಬರುತ್ತವೆ.

ಚೀನೀಯರು ಹಿಮಾಲಯ ಪರ್ವತ ಶ್ರೇಣಿಗಳನ್ನು ದಾಟಿ ಬಂದು ಭಾರತದ ಮೇಲೆ ಆಕ್ರಮಣ ನಡೆಸಿದಾಗ, ಭಾರತದಲ್ಲಿನ ಚೀನೀಯರು ಭಾರತ ಸರ್ಕಾರಕ್ಕೆ ಒಂದು ಸಮಸ್ಯೆಯಾಗಿ ಪರಿಣಮಿಸಿದರು. ಭಾರತದಲ್ಲಿ ನೆಲೆಸಿರುವ ಸುಮಾರು ೧೫,೦೦೦ ಚೀನೀಯರಲ್ಲಿ ೨,೦೦೦ ಜನರು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಅಪಾಯಕಾರಿಯಾಗಿ ಕಂಡುಬಂದಿದ್ದರಿಂದ ಅವರನ್ನು ಬಂಧಿಸಿ, ದೇವಲಿ ಶಿಬಿರದಲ್ಲಿಡಲಾಯಿತು. ಅವರೆಲ್ಲರಿಗೂ ಗಾಳಿ ಬೆಳಕಿನ ವ್ಯವಸ್ಥೆಯುಳ್ಳ ಸುಸಜ್ಜಿತ ಕೋಣೆಗಳನ್ನು ಒದಗಿಸಲಾಗಿದೆ. ಪ್ರತಿಯೊಬ್ಬ ಸ್ಥಾನಬದ್ಧರಿಗೆ ನಿತ್ಯವೂ ಬಿಸಿನೀರಿನ ಸ್ನಾನದ ಸೌಲಭ್ಯವನ್ನೂ ಒದಗಿಸಲಾಗಿದೆ. ಪ್ರತಿಯೊಬ್ಬ ಸ್ಥಾನಬದ್ಧರಿಗೆ ನಿತ್ಯವೂ ಒಂದು ಲೋಟ ಹಾಲು ಮತ್ತು ಮೊಟ್ಟೆಯನ್ನು ಕೊಡಲಾಗುತ್ತಿದೆ. ಇದಲ್ಲದೆ ಮಾಂಸಾಹಾರಿಗಳಿಗೆ ಪ್ರತಿದಿನ ಮಾಂಸವನ್ನು ಕೊಡಲಾಗುತ್ತಿದೆ. ಮಾಂಸವನ್ನು ವಾರದಲ್ಲಿ ಮೂರು ಸಲ, ಹಾಗೂ ಹಂದಿ ಮಾಂಸ ಮತ್ತು ಕೋಳಿಯನ್ನು ವಾರದಲ್ಲಿ ಒಂದು ಸಲ ಕೊಡಲಾಗುತ್ತಿದೆ.

ಶಿಬಿರದ ಸ್ಥಾನಬದ್ಧರೇ ಸಂಯುಕ್ತವಾಗಿ ವ್ಯವಸ್ಥೆ ಗೊಳಿಸಿದ ಸಾಮುದಾಯಿಕ ಅಡಿಗೆ ಮನೆಗಳಲ್ಲಿ ದಿನದಿಂದ ಮಧ್ಯಾಹ್ನ ೧ ಗಂಟೆಯ ಒಳಗಾಗಿ ಅಡಿಗೆ ಸಿದ್ಧವಾಗುತ್ತದೆ. ಸುಮಾರು ೧೫೦ ಗಂಟೆಗೆ ಶಿಬಿರದ ನಿವಾಸಿಗಳು ಸಾಮೂಹಿಕ ಊಟದ ನೃಪಗಳಲ್ಲಿ ಒಂದೆಡೆ ಸೇರಿ ಊಟಮಾಡುತ್ತಾರೆ.

ಶಿಬಿರದ ಸ್ಥಾನಬದ್ಧರ ಸೌಲಭ್ಯಕ್ಕಾಗಿ ೫೦ ರೆಯ್ಯೆಗಳುಳ್ಳ ಒಂದು ಆಸ್ಪತ್ರೆಯಿದೆ, ಅತ್ಯಾಧುನಿಕ ರೀತಿಯಲ್ಲಿ ಸುಸಜ್ಜಿತವಾದ ಈ ಆಸ್ಪತ್ರೆಯಲ್ಲಿ ಇಬ್ಬರು ಡಾಕ್ಟರರು– ಅವರಲ್ಲಿ ಒಬ್ಬರು ಮಹಿಳಾ ಡಾಕ್ಟರರು– ಇದ್ದಾರೆ. ಇನ್ನುಳಿದ ವೈದ್ಯಕೀಯ ಸಿಬ್ಬಂದಿಯಲ್ಲಿ ಒಬ್ಬರು ದಾದಿ, ಮೂವರು ಸೂಲಗಿತ್ತಿಯರು, ನಾಲ್ವರು ಕಾಂಪೌಂಡರುಗಳು ನಾಲ್ವರು ವಾರ್ಡ್ ಬಾಯ್ಸ್, ಒರ್ವ ಅಡಿಗೆ ಆಳು, ಹಾಗೂ ಕಸಗುಡಿಸುವವರು ಇದ್ದಾರೆ. ಶಿಬಿರದ ನಾಲ್ಕನೆಯ ವಿಭಾಗದಲ್ಲಿ ಪ್ರತಿದಿನ ಬೆಳಿಗ್ಗೆ ೯ ಗಂಟೆಯಿಂದ ಮಧ್ಯಾಹ್ನ ೧೨ ಗಂಟೆಯ ವರೆಗೆ ಔಟ್‌ಡೋರ್ ಚಿಕಿತ್ಸೆಗೆ ಲಕ್ಷ್ಯಕೊಡಲಾಗುತ್ತದೆ.

ಮನರಂಜನೆ

ಪ್ರತಿಯೊಬ್ಬ ಸ್ಥಾನಬದ್ಧ ಚೀನೀಯನಿಗೂ ಆಹಾರದ ಪಡಿತರವಲ್ಲದೆ, ಅವನ ದೈನಂದಿನ ಪೆಚ್ಚಕ್ಕೆಂದು ತಿಂಗಳಿಗೆ ಐದು ರೂಗಳ ಭತ್ಯೆಯೂ ಸಿಗುತ್ತದೆ. ಇದಲ್ಲದೆ ಸ್ಥಾನಬದ್ಧರು ಶಿಬಿರದ ಅಧಿಕಾರಿಗಳ ಬಳಿ ರೇಸನೆಯೊಳಗಿ ಇಟ್ಟು ಹೊರಜಿಲ್ಲೆಯ ಕ್ಯಾಂಟೀನ್‌ನಿಂದ ಹೆಚ್ಚಿನ ಅಗತ್ಯವಸ್ತುಗಳನ್ನು ಕೊಳ್ಳಲು ಪ್ರತಿ ತಿಂಗಳು ೧೫೦ ರೂಗಳ ವರೆಗೂ ಭಾರತದಲ್ಲಿ ತನ್ನನ್ನು ಅವಲಂಬಿಸಿದ ಕುಟುಂಬಕ್ಕೆ ಕಳುಹಿಸಿಕೊಡಲು ೩೫೦ ರೂಗಳ ವರೆಗೂ ತೆಗೆದುಕೊಳ್ಳಬಹುದು.

ಶಿಬಿರದ ಕ್ಯಾಂಟೀನ್‌ನಲ್ಲಿ ಬಹುಮಟ್ಟಿಗೆ ಗ್ರಾಹಕರಿಗೆ ಅಗತ್ಯವಿದ್ದ ಶ್ರೀಸಾಮಾನ್ಯದ ಜೊತೆಗೆ ಬಿಳಿತ್ವಗಿಗಳಿಂದ ಹಿಡಿದು ಟಾಲ್ಕಂ ಪೌಡರಿನ ವರೆಗೆ ಎಲ್ಲಾ ವಸ್ತುಗಳು ದೊರೆಯುತ್ತವೆ. ಕ್ಯಾಂಟೀನ್ ಪ್ರತಿದಿನ ಬೆಳಿಗ್ಗೆ ೯ರಿಂದ ೧೨ ಗಂಟೆ ವರೆಗೂ ಮಧ್ಯಾಹ್ನ ೨ರಿಂದ ೬.೩೦ ಗಂಟೆಯ ವರೆಗೂ ತೆರೆದಿರುತ್ತದೆ. ಸ್ಥಾನಬದ್ಧರಿಗೆ ಆನುಕೂಲವಾಗಲೆಂದು ಶಿಬಿರದ ಪ್ರತಿಯೊಂದು ವಿಭಾಗದಲ್ಲೂ ವಸ್ತುಗಳನ್ನು ಕೊಳ್ಳುವ ಅವಧಿಯನ್ನು ನಿಯಂತ್ರಿಸಲಾಗುತ್ತದೆ.

ಪ್ರತಿದಿನ ಸಂಜೆ ೬-೩೦ರಿಂದ ೮-೩೦ ಗಂಟೆಯ ವರೆಗೆ ಸ್ಥಾನಬದ್ಧರ ಮನರಂಜನೆಗಾಗಿ ಭಾರತೀಯ ಸಂಗೀತ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತಿದೆ, ನಂತರ ರಾತ್ರಿ ೯ ಗಂಟೆಗೆ ಶಿಬಿರವನ್ನು ಮುಚ್ಚಲಾಗುವುದು. ತುರ್ತು ಸಂದರ್ಭಗಳಲ್ಲಿ, ಉದಾಹರಣೆಗೆ, ಶಿಬಿರದಲ್ಲಿ ಯಾರಾದರೂ ಅಸ್ವಸ್ಥರಾಗಿದ್ದ ಸಂದರ್ಭದಲ್ಲಿ ಕೂಡಲೇ ವೈದ್ಯಕೀಯ ನೆರವು ದೊರೆಯುವಂತೆಯೂ ವ್ಯವಸ್ಥೆ ಮಾಡಲಾಗಿದೆ.

ಸ್ಥಾನಬದ್ಧರ ಸಾಂಸ್ಕೃತಿಕ ಅಗತ್ಯಗಳಿಗೂ ವಿಶೇಷ ಗಮನ ಕೊಡಲಾಗಿದೆ. ಸಂಗೀತಾಭಿರುಚಿಯುಳ್ಳವರಿಗೆ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲು ಅನುಕೂಲವಾಗಲೆಂದು ವೀಣೆ, ಹಾರ್ಮೋನಿಯಂ, ತಬಲಾ ಗಳನ್ನು ಒದಗಿಸಲಾಗಿದೆ. ಇದಲ್ಲದೆ ಮನರಂಜನೆ ಸೌಲಭ್ಯಗಳೂ ಇವೆ. ಇಸ್ಪೀಟ್, ಕೇರಂ, ಟೆನ್ನಿಸ್, ಬ್ಯಾಡ್ಮಿಂಟನ್ ಇತ್ಯಾದಿ ಮೊದಲಾದ ಸ್ವದೇಶಿ ಮತ್ತು ವಿದೇಶಿ ಆಟಗಳ ವ್ಯವಸ್ಥೆಯೂ ಇದೆ.

ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮಾನುಯಾಯಿಗಳಿಗೆ ಧಾರ್ಮಿಕ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಇತ್ತೀಚೆಗೆ ಶಿಬಿರದಲ್ಲಿನ ಬೌದ್ಧರು ಬುದ್ಧ ಜಯಂತಿಯನ್ನು ಸಂಭ್ರಮದಿಂದ ಆಚರಿಸಿದರು.

ಉಲ್ಲಾಸಪೂರ್ಣ ವಾತಾವರಣ

ಶಿಬಿರದ ಆವರಣದಲ್ಲಿ ಉಲ್ಲಾಸದಿಂದ ಒಂದೆಡೆಯಿಂದ ಮತ್ತೊಂದೆಡೆಗೆ ಓಡಾಡುತ್ತ ಆಟವಾಡುವ ಮಕ್ಕಳು ಶಿಬಿರಕ್ಕೆ ಭೇಟಿ ನೀಡುವವರ ಮನಾನಂದಗೊಳಿಸುತ್ತವೆ. ಶಿಬಿರದ ಅಧಿಕಾರಿಗಳು ಮಕ್ಕಳ ಶಿಕ್ಷಣಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಿದ್ದಾರೆ. ಸ್ಲೇಟುಗಳು, ಎಕ್ಸರ್‌ಸೈಜ್ ನೋಟ್ ಪುಸ್ತಕಗಳು ಇತ್ಯಾದಿ ಎಲ್ಲಾ ಶೈಕ್ಷಣಿಕ ಅಗತ್ಯಗಳನ್ನೂ ಪೂರೈಸಲಾಗಿದೆ.

ಶಿಬಿರದಲ್ಲಿನ ಸ್ಥಾನಬದ್ಧರೇ ಮಕ್ಕಳಿಗೆ ಶಿಕ್ಷಣ ಕೊಡುತ್ತಾರೆ.

ಪ್ರತಿದಿನವೂ ಬೆಳಿಗ್ಗೆ ೧೦ರಿಂದ ಮಧ್ಯಾಹ್ನ ೧೨೩೦ ವರೆಗಿನ ಅವಧಿಯಲ್ಲಿ ಶಿಬಿರದ ಸ್ಥಾನಬದ್ಧರ ವಿಳಾಸಗಳಿಗೆ ಬರುವ ರಿಜಿಸ್ಟರ್ಡ್ ಕವರುಗಳು, ಇನ್ಸೂರ್ಡ್ ಪಾರ್ಸಲುಗಳು, ಇತ್ಯಾದಿಗಳನ್ನು ಸಂಬಂಧಪಟ್ಟವರಿಗೆ ಮುಟ್ಟಿಸಲಾಗುವುದು. ಶಿಬಿರದ ಹಿತರಕ್ಷಣಾಧಿಕಾರಿಗಳ ಕಛೇರಿಯಲ್ಲಿಯೇ ಕಾಗದ ಪತ್ರಗಳ ಬಟವಾಡೆ ನಡೆಯುತ್ತದೆ. ಒಂದೇ ಸಮಯದಲ್ಲಿ ಶಿಬಿರದ ನಿವಾಸಿಗಳು ಭಾರತದಲ್ಲಿನ ತಮ್ಮ ಆಪ್ತರಿಗೆ ಕಳುಹಿಸುವ ಕಾಗದ ಪತ್ರಗಳನ್ನೂ ಇಲ್ಲಿ ಕೊಡುತ್ತಾರೆ ಇವೆಲ್ಲಾ ಕಾಗದ ಪತ್ರಗಳಿಗೆ ತಗಲುವ ಅಂಚೆ ವೆಚ್ಚವನ್ನೂ ಶಿಬಿರದ ಅಧಿಕಾರಿಗಳೇ ವಹಿಸಿಕೊಳ್ಳುತ್ತಾರೆ.

ಪೀಕಿಂಗಿನ ಸುಳ್ಳು

ಶಿಬಿರದಲ್ಲಿ ೧೩ ವರ್ಷದ ಬಾಲಿಕೆಯೊಬ್ಬಳನ್ನು ಜೀವಂತವಾಗಿ ಹೊಗಯಲಾಯಿತೆಂದು ಪೀಕಿಂಗ್ ರೇಡಿಯೋ ಇತ್ತೀಚೆಗೆ ಪ್ರಸಾರ ಮಾಡಿತು. ನಿಜಸಂಗತಿ ನಿನೇದು ನಾನು ಕಮೂಂಜೆಂಟ್‌ನನ್ನು ಕೇಳಿದೆ.

ಬಾಲಿಕೆಯು ತನ್ನ ಪಾಲಕರೊಂದಿಗೆ ಶಿಬಿರಕ್ಕೆ ಬಂದಿದ್ದಳು. ಅವಳು ಶ್ವಾಸಕೋಶದ ಕ್ಷಯ ರೋಗದಿಂದ ಬಳಲುತ್ತಿದ್ದಳು ಶಿಬಿರಕ್ಕೆ ಒಂದ ಸ್ವಲ್ಪ ಹೊತ್ತಿನಲ್ಲಿಯೇ ಅವಳು ರಕ್ತವನ್ನು ಕಾರಿ ಸಾವನ್ನಪ್ಪಿದ್ದಳು. ಶವಾಲಯದಲ್ಲಿಯೇ ವೈದ್ಯಕೀಯ ನೆರವು ನೀಡಿದರೂ ವ್ಯರ್ಥವಾಗಲಿಲ್ಲ. ಬಾಲಿಕೆಯ ಕಳೇಬರವನ್ನು ಅವಳ ಕಂಪ ಶಾಯಿಗಳಿಗೆ ಒಪ್ಪಿಸಲಾಯಿತು. ಅಂತ್ಯ ಕ್ರಿಯೆಗೆ ಎಲ್ಲಾ ಏರ್ಪಾಟುಗಳನ್ನೂ ಮಾಡಲಾಯಿತು.

ಇನ್ನೂ 'ವಾಸವಾ' ಎಂದು ಬಳಿತ್ತಿದ್ದ ಬಾಲಿಕೆಯನ್ನು ಜೀವಂತವಾಗಿ ಹೊಗಲಾಯಿತೆಂದು ಪೀಕಿಂಗ್ ರೇಡಿಯೋ ಸತ್ಯವನ್ನು ಮರೆಮಾಚಿ ಅಪಪ್ರಚಾರ ಮಾಡಿತು.

ಚೀನೀಯರು ಸ್ವಪ್ರಚಾರಕ್ಕಾಗಿ ಇಂತಹ ಭಯಾನಕವಾದ ಕಥೆಯನ್ನು ಆವಿಷ್ಕರಿಸಿಕೊಂಡು ಅಂತರ್ಪ್ರಚಾರ ಮಾಡಲು ಪೀಕಿಂಗ್ ಪ್ರಚಾರಕರು ಎಂತಹ ಕೀಳು ಮಟ್ಟಕ್ಕಾದರೂ ಇಳಿಯಬಲ್ಲರೆಂಬುದನ್ನು ಎತ್ತಿ ತೋರಿಸುತ್ತದೆ.

ಇನ್ನೂ ಒಂದು ವಿಷಯ. ನೀವು ಶಿಬಿರವನ್ನು ಸುತ್ತುಹಾಕುತ್ತಿದ್ದಂತೆ ಎಲ್ಲಿಯೂ

(ಉಳಿದ ಪುಟ ನೋಡಿರಿ)

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಲಾಭಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿ:
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ
ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 10 ಸಾಮಾನ್ಯ ರೂ. 4/- ಮಧ್ಯಮ ರೂ. 6/-
ಉತ್ತಮ ರೂ. 9/-
P. Devee & Co. (N. J.) Calcutta—40

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೨೭-೬-೧೯೬೩	೪೨

ವಂಚಕ ನೀತಿ

ಭಾರತ ಮತ್ತು ಚೀನೀಯ ಗಡಿ ತಂಟೆಯ ವ್ಯಾಜ್ಯದಲ್ಲಿ ಬ್ರಹತ್ ಪ್ರಮಾಣದ ಆಕ್ರಮಣವನ್ನು ಮಾಡಿಯೂ ಅನನ್ನು ಏಕ ಪಕ್ಷೀಯವಾಗಿ ನಿಲ್ಲಿಸಿ, ಸಮರ ವಿರಾಮವನ್ನು ಘೋಷಿಸಿ, ನೇರ ಮಾತುಕತೆಗಳನ್ನೆ ನೆಮ್ಮಿ ರಾಂತ ವಿಧಾನಗಳಿಂದಲೇ ತಂಟೆಯನ್ನು ಬಗೆಹರಿಸಲು ಸೂಕ್ತ ವಾತಾವರಣವನ್ನು ನಿರ್ಮಿಸುತ್ತೇವೆಯೆಂದು ಕೊಲಂಬೊ ಪ್ರಸ್ತಪಿತ ಸಲಹೆಗಳನ್ನು ತತ್ವತಃ ಒಪ್ಪುತ್ತೇವೆಂದು ಮೊಕಾಕತೆಗಳಿಗಾಗಿ ತಾನೇ ನವದೆಹಲಿಗೆ ಬರಲು ಉತ್ಸುಕಾಗಿದ್ದೇವೆ ಎಂದು ಮಾಂತ್ರಿಕ ಚಿಕ್ಕಿಗೊಡನೆ ಬಂದ ಚೀನೀ ಪ್ರಧಾನಿ ಚೌ ಎನ್ ಲಾಯ್‌ರವರು ಈಗ ತಮ್ಮ ವರ್ತನೆಯು ಸಂಪೂರ್ಣ ಬೆಳ್ಳು ಸನ್ಯಾಸಿಯದು ಎಂಬುದನ್ನು ವಿಶ್ವಕ್ಕೆ ಮೋಸಕೆಗೆ ತಕ್ಕ ವಾತಾವರಣವನ್ನುಂಟು ಮಾಡುವ ಭರವಸೆಯನ್ನು ಲೋಕಕ್ಕೆ ಕೊಡುತ್ತ ಭಾರತವನ್ನೇ ಆರೋಪಿಯ ಸ್ಥಾನಕ್ಕೆ ಏರಿಸುವ ಹುನ್ನಾರವನ್ನು ಮಾಡುತ್ತ ಜಗತ್ತನ್ನೇ ವಂಚಿಸ ಹೊರಟ ಲಾಯಿಯ ಹುನ್ನಿಸಿದ ಚೀನಾದ ಕತ್ತೆಯಂತೆ ಕಾಣಿಸಿಕೊಳ್ಳುವುದು. ಚೀನೀಯ ಆಕ್ರಮಣದ ಪ್ರವೃತ್ತಿಯ ಬಗ್ಗೆ ಮೊತ್ತಾಂಪೆ. ಮೊತ್ತಕ್ಕೆ ಅದರ ಸಾಮ್ರಾಜ್ಯವಾದದ ಜ್ವಲಂತ ನಿದರ್ಶನ ಉತ್ತರ ಲಡಾಖದಲ್ಲಿನ ಭಾರತೀಯ ಪ್ರದೇಶವೆಂದು ಚೀನಾವೇ ಪಡಾಡಂಗರವಾಗಿ ಸಾರಿ ಹೇಳಿತ್ತು ಬಂದ ಚೀನಾದ ವೀಕ್ಷಕಾಂಗಳಾದ ಒಳ ಹೊಸ ತಾದ ಒಂದು ಸೈನಿಕ ರಾಜೆಯನ್ನು ನಿರ್ಮಿಸಿರುವ ಕೆಂಪು ಲಾಯಿಯವರು ಭಾರತವನ್ನು ನೆಲಕಚ್ಚಿಸಿ ಸಮಾಜಾಸ್ಥಾನ ನಿಲುತ್ತಿರುವರೆಂಬುದು ಮತ್ತಿನ್ನೆಲ್ಲಿಗ ಜಾಜ್ವಲ್ಯಮಾನವಾಗಿದೆ

ಚಳಿಗಾಲದ ಆರಂಭದಲ್ಲಿ ಯುದ್ಧ ಮೊಹವನ್ನು ಹಲವು ಕಾರಣಗಳಿಂದ ಆ ಸಾಧ್ಯವಿರುವ ಸನ್ನಿವೇಶದಲ್ಲಿ ಲಾಯಿಯವರು ಸಮರ ವಿರಾಮವನ್ನು ಘೋಷಿಸಿ ಶಾಂತಿಯ ಸೋಗಿನ್ನು ತೊಟ್ಟುಕೊಂಡರು. ಆದರೀಗ, ಬೇಸಿಗೆಯು ಪ್ರಾರಂಭವಾದುದೇ ತಡ, ಪುನಃ ಆಕ್ರಮಣ ಮನೋವೃತ್ತಿಯನ್ನು ತೋರಿಸಿದರು. ನಿಜವಾಗಿ ಅವರು ಶಾಂತಿಯನ್ನೇ ಬಯಸುವುದಾದರೆ, ಇಂತಹ ದುಸ್ಸಾಹಸಗಳಿಗೆ ಎಡೆ ಕೊಡಬಾರದಾಗಿತ್ತು. ಕೊಲಂಬೊ ವಿಶ್ರಾ ರಾಷ್ಟ್ರಗಳ ನಿಷ್ಪಕ್ಷಪಾತವಾದ ಸೂಚನೆಗಳನ್ನು ತತ್ವತಃ ಒಪ್ಪಿಕೊಂಡೂ ಅವನ್ನು ಜಂತ ಸಮಾಧಿಗೆಯ್ದಿ ಲಾಯಿಯವರು ತಾನೇ ಪ್ರತ್ಯಕ್ಷ ನಿಯಂತ್ರಣ ರೇಖೆಯೆಂದು ತನ್ನ ಘೋಷಣೆಯಲ್ಲೇ ಒಪ್ಪಿಕೊಂಡ ೫೦ಮೈಯನ್ನೂ ಉಲ್ಲಂಘಿಸಿ ಮಾಡಿದ ಅತ್ಯಾಕ್ರಮಣವು ಭಾರತೀಯರ ಸಾರ್ವಭೌಮತೆಗೊಂದು ಪಂಥಾಹ್ವಾನವಲ್ಲದೆ ಮತ್ತೇನು? ಈ ಹೊತ್ತಿತಾದ ಆಕ್ರಮಣವನ್ನು ಮಾಡಿ, ತನ್ನ ೧೯೬೦ರ ನಿಲುವಿನಲ್ಲಿ ಚೀನೀ ಸರಕಾರವು ತಾನೇ ಹೇಳಿದ ಗಡಿಯನ್ನು ಮೀರಿದೆ; ಇತ್ತೀಚೆಗೆ ನೈಜ ನಿಯಂತ್ರಣ ರೇಖೆಯೆಂದು ಕರೆಯುತ್ತಿರುವ ೧೯೫೯ರ ನವಂಬರ ೭ರ ರೇಖೆಯನ್ನು ಮುರಿದಿದೆ; ಸಮರ ವಿರಾಮದ ಬಗ್ಗೆ ೧೯೬೨ರ ನವಂಬರ ೨೧ರಂದು ಮಾಡಿದ ತನ್ನ ಏಕಪಕ್ಷೀಯ ಉಗ್ರ ಘೋಷಣೆಯನ್ನು ಸಹ ಉಲ್ಲಂಘಿಸಿದೆ. ಮಾತ್ರವಲ್ಲ ಕೊಲಂಬೋ ಸೂಚನೆಗಳನ್ನು ಮತ್ತಿನ್ನೆಮ್ಮೆ ಸಮರೂಪಿ ಮಾಡಿದೆ. ಈ ರೀತಿ ದುಷ್ಟಿ ತನ್ನ ಮೂತುಗಳನ್ನೇ ಮುರಿದು, ತನ್ನ ನಿರಂಕುಶ ಕೃತಿಗಳನ್ನು ಮುಂದುವರಿಸುತ್ತ ಬರುತ್ತಿರುವುದು ಉದ್ದೇಶಪೂರ್ವಕವಾಗಿಯೇ ಎಂಬುದು ಸ್ವಯಂ ಸಿದ್ಧವಿದೆ. ಭಾರತದ ಗಡಿಯಲ್ಲಿನ ವಿಷಮ ಪರಿಸ್ಥಿತಿಯು ಒಮ್ಮೆಗೆ ತುಸು ಶಾಂತಮಯವಾಯಿತು ಎಂದು ತಿಳಿದುಕೊಂಡವರಿಗಿಗೊಂದು ಎಚ್ಚರಿಕೆಯ ಪ್ರಕಂಗವಾಗಿದೆ. ದೇಶದಲ್ಲಿ ಗಂಡಾಂತರ ಪರಿಸ್ಥಿತಿಯನ್ನು ಕೊನೆಗಾಣಿಸಬೇಕು ಎಂಬ ಕೆಲವರ ವಾದಕ್ಕೆ ಈ ದುಃಘಟನೆಯು ಸರಿಯೂದ ಉತ್ತರವೇ ಯಾಗಿತ್ತು; ದೇಶರಕ್ಷಣೆಗಾಗಿ ಭಾರತೀಯರು ಕೇಂದ್ರೀಕರಿಸುತ್ತಿರುವ ತಮ್ಮ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಅವಶ್ಯಕತೆಯನ್ನಿದು ಪ್ರತಿಬಿಂಬಿಸುತ್ತದೆ.

ಕೊಲಂಬೊ ಶಿಲಹಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ಚೀನಾದೊಡನೆ ಸಂಧಾನದ ಮಾತುಕತೆಯಿ ಬ್ಲಪಿಂಬುದನ್ನು ನಮ್ಮ ಪ್ರಧಾನಿಯವರು ಹಿಂದಿನಿಂದಲೂ ಉಚ್ಚರಿಸುತ್ತ ಬರುತಿದ್ದಾರೆ. ಭಾರತವು ಕಪಟ ಬಯಸುವುದಿಲ್ಲವಾದರೂ ಅದು ಆಕ್ರಮಣಕ್ಕೆ ಎಂದೆಂದಿಗೂ ತಲೆ ಬಾಗಲಾರದೆಂಬುದನ್ನು ಘಂಟಾಘೋಷವಾಗಿ ಸಾರಿತ್ತ ಬಂದಿದ್ದಾರೆ. ಈಗ ಉದ್ಭವಿಸಿರುವ ಗತಿ ವಿವಾದವು ಒಂದೆರಡು ವರ್ಷಗಳಲ್ಲಿ ಬೇ ಬಗೆ ಹರಿಯುವುದಿಲ್ಲ, ಅದು ಬಹು ಕಾಲ ತೆಗೆದುಕೊಳ್ಳುವುದು ಎಂದವರು ಹೇಳುತ್ತ. ನಮ್ಮ ರಕ್ಷಣೆಗಾಗಿ ಸರ್ವ ಕ್ಷೇತ್ರದಲ್ಲಿಯೂ ಅದ್ಭುತ ಸಾಧನೆಯನ್ನು ಸಾಧಿಸುವ ಅವಶ್ಯಕತೆಯನ್ನವರು ಪ್ರತಿಪಾದಿಸಿದ್ದಾರೆ. ಚೀನಾವು ತನ್ನ ನೈಜ ನಿಯಂತ್ರಣ ರೇಖೆಯನ್ನು ಕಾಲಕಾಲಕ್ಕೆ ಪರಿವರ್ತಿಸುತ್ತ ಬಂದಿದ್ದು, ಇಂದು ಅ ಯೆಲ್ಲ ರೇಖೆಗಳನ್ನೂ ಉಲ್ಲಂಘಿಸಿದೆ. ತನ್ನನ್ನೇ ತಾನು ವಂಚಿಸಿಕೊಂಡ ಕೆಂಪು ಚೀನಾವು ಇತರರನ್ನು ವಂಚಿಸುವುದು ಅಶ್ಚರ್ಯಕರವೆನ್ನಿಸಲಾರದಲ್ಲಿ ಹೃದಯಾಂತರಾಳದಲ್ಲಿ ಸಾಮ್ರಾಜ್ಯವಾದದ ಕನಸು ಕಾಣುತ್ತಿರುವ ಆ ದೇಶಕ್ಕೆ ತನ್ನದಾದೀತೆಂದೆ? ಬೇರೆಯವರದಾದೀತೇನು? ಮತ್ತಲೂ ಲತ್ತಿಕೊಡುವ ಕತ್ತೆಯಂದು- ಆದರೆ ಈ ನವಾಕ್ರಮಣವು ಸಾಮನೋವೃತ್ತಿಯನ್ನೇ ಹೊಂದಿರಿಗಿ ಸ್ಪಷ್ಟವಾಗಿ ಹೇಳಬಹುದು.

ಚೀನಾದ ಈ ಹೊಸ ಆಕ್ರಮಣವನ್ನೂ ಅದು ಸಂಗ್ರಹಿಸಿದ ಬಲವಾದ ಮತ್ತೆ ಏಳು ಸೈನಿಕ ರಾಜೆಗಳನ್ನೂ ಪ್ರತಿಭಟಿಸುವ ಕರ್ತವ್ಯವನ್ನು ಪ್ರಧಾನಿ ನೆಹರು ಮಾಡಿದ್ದಾರೆ. ಆದರೆ, ಕೇವಲ ಪತ್ರ ವ್ಯವಹಾರ ಪ್ರತಿಭಟನೆಗಳಿಂದ ಪರಿಹಾರಗೊಳ್ಳುವ ಸಮಸ್ಯೆಯದಲ್ಲವೆಂಬುದಕ್ಕೆ ಕಳೆದೇಳು ತಿಂಗಳಲ್ಲಿ ಯಾವ ಪ್ರಗತಿಯೂ ಕಾಣದೆ ಮತ್ತಷ್ಟು ನನೆಗುದಿಗೆ ಬಿದ್ದಿರುವುದೇ ಸಾಕ್ಷಿ. ಹೀಗಿರುವಾಗ, ಚೀನೀಯರು ಸಮರವನ್ನೇ ಮುಂದಿಟ್ಟು, ಸಮಯ ಕಾಯುತಿದ್ದಾರೆಂಬುದು ವ್ಯಕ್ತವಾಗುತ್ತದೆ. ಆದುದರಿಂದ, ಆಕ್ರಮಣದ ಭೀತಿ ಇನ್ನಿಲ್ಲವೆಂದು ನೆರೆನಂಬಿದವರು ಇನ್ನಾದರೂ ತಮ್ಮ ವಿಚಾರ ಧಾರೆಯನ್ನು ಪರಿವರ್ತಿಸಿಕೊಳ್ಳಬೇಕಾಗುತ್ತದೆ. ಆಕ್ರಮಣದಿಂದ ಸ್ವದೇಶವನ್ನು ಮುಕ್ತಗೊಳಿಸುವ ಭಾರತದ ಸಾಧನೆಯಲ್ಲಿ ಹೆಚ್ಚಿನ ವಿದೇಶೀಯರು ಸಹಕಾರ ನೀಡುತಿದ್ದಾರೆ. ದೇಶದ ಒಳಗೂ ಹೊರಗೂ ಆತ್ಮರಕ್ಷಣೆಯ ಪ್ರಯತ್ನವನ್ನು ದ್ವಿಗುಣಿತಗೊಳಿಸುವುದು ಅಗತ್ಯವಿದೆ. ಭಾರತವು ಕಳಿಸಿದ ಪ್ರತಿಭಟನಾ ಪತ್ರಕ್ಕೆ ಸಮಾಧಾನಕಾರಕ ಉತ್ತರವನ್ನು ಚೀನೀಯರು ಕೊಡಬಹುದು; ಆದರೆ, ಅದು ಯಾವುದೇ ಸಮಾಧಾನವನ್ನು ಹೇಳಿದರೂ ಅದನ್ನು ನಂಬುವ ಪರಿಸ್ಥಿತಿಯಿಂದ ಉಳಿದಿಲ್ಲ. ಆದುದರಿಂದ ನಾವು ನಮ್ಮ ಕರ್ತವ್ಯ ಸಧದಲ್ಲಿ, ಆಕ್ರಮಣಕಾರ ಚೀನೀಯರನ್ನು ಹೊರದಬ್ಬುವಲ್ಲಿ ಹೆಚ್ಚಿನ ಕಾರ್ಯಕ್ಕೆ ಪ್ರವೃತ್ತರಾಗುವುದು ಅತ್ಯವಶ್ಯ. ಈ ದಿಸೆಯಲ್ಲಿ ಅನಾತ್ಮೈಯನ್ನು ತೋರಿಸದೆ, ಪ್ರಧಾನಿ ನೆಹರು ಇಡುವ ಧೀರತನದ ಹೆಜ್ಜೆಯ ಹಿಂದೆ ಕೆಚ್ಚೆದೆಯಿಂದ ಹೆಜ್ಜೆಯಿಡಲು ಪ್ರತಿ ಭಾರತೀಯನೂ ಬದ್ಧಕಂಕಣನಾಗಬೇಕು. ಎಂಥ ಕಷ್ಟವೇ ಬರಲಿ, ಎಂಥ ನಷ್ಟವೇ ಸಂಭವಿಸಲಿ, ಮಳೆಯಿರಲಿ, ಚಳಿಯಿರಲಿ, ಬಿಸಿಲು ಕಾಯುತ್ತಿರಲಿ, ಮುಮ್ಮುಖದ ಪಯಣವಾಗಲಿ ಹಿಮ್ಮುಖವಾಗಲಿ, ಒಂದಾಗಿ ಕೂಡಿ, ಬಾಳಿ ದೇಶಕ್ಕೆ ತಗುಲಿವ ಕುತ್ತವನ್ನು ದೂರೀಕರಿಸುವಲ್ಲಿ ಜನಜನವೂ ಜಾಗರೂಕರಾಗಬೇಕು. ಈ ಸಪ್ಪೆಗಣಿ ನಮ್ಮಲ್ಲಿ ಉದಿಸಲಿ.

ಹೊಸ ಅಧ್ಯಾಯ

ಕಾಂಗ್ರೆಸ್ ಸಂಸ್ಥೆಯೊಡನೆ ಭಿನ್ನಾಭಿಪ್ರಾಯ ಹುಟ್ಟಿ ಆದರಿಂದ ಸಿಡಿದು ಹೋದ ಕೆಲವೊಂದು ಪ್ರತಿಭಾವಂತ ವ್ಯಕ್ತಿಗಳು ಹೊಸ ರಾಜಕೀಯ ಪಕ್ಷಗಳನ್ನು ಕಟ್ಟಿದ್ದು ಸ್ವಾತಂತ್ರ್ಯಾನಂತರ ಭಾರತದಲ್ಲಿ ಸರ್ವಸಾಮಾನ್ಯವಾಗಿ ಬಿಟ್ಟಿದೆ ಇಂದು ದೇಶದಲ್ಲಿರುವ ಯಾವುದೇ ರಾಜಕೀಯ ಪಕ್ಷವನ್ನು ನಾವು ತೆಗೆದುಕೊಳ್ಳುವುದಾದರೂ ಅದರ ಪ್ರಧಾನ ಸದಸ್ಯರು ಒಂದು ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯೊಡನೆ ಬೆಸೆದುಕೊಂಡವರೇ ಆಗಿದ್ದಾರೆ. ಹೀಗೆ ಸೆಟೆದು ಹೋದ ಜಾರ್ಖಂಡ್ ಪಕ್ಷವು ಈಗ ಕಾಂಗ್ರೆಸ್‌ನೊಡನೆ ವಿಲಯನಗೊಳ್ಳುವುದು ದೃಢವಾಗಿದೆ. ಈ ಪಕ್ಷವು ಅಖಿಲ ಭಾರತ ವ್ಯಾಪ್ತಿಯನ್ನು ಪಡೆದಿಲ್ಲವಾದರೂ ಬಿಹಾರ ಮತ್ತು ಒಡಿಸ್ಸಗಳಲ್ಲಿ ಪ್ರಬಲವಾಗಿ ತಳವೂರಿದೆ. ಇವೆರಡು ರಾಜ್ಯಗಳ ವಿಧಾನ ಸಭೆಗಳಲ್ಲಿಯೂ ಪಕ್ಷದ ಪ್ರಭಾವವು ಸಾಕಷ್ಟಿದೆ. ಮುಖ್ಯವಾಗಿ, ಈ ಪ್ರದೇಶ. ಳ್ಳನ ಆದಿವಾಸಿಗಳ ಹಿತವನ್ನೇ ತನ್ನ ಉದ್ದೇಶವಾಗಿಟ್ಟುಕೊಂಡ ಜಾರ್ಖಂಡ್ ಪಕ್ಷವು ಅವರಿಗಾಗಿ ಪ್ರತ್ಯೇಕ ರಾಜ್ಯವೊಂದನ್ನು ನಾಗಾಲೇಂಡಿನ ಮಾದರಿಯಲ್ಲಿ ರಚಿಸಿಕೊಡುವಷ್ಟು ಮುಂದುವರಿದಿದೆ. ಆದರೆ, ಸದ್ಯ ಅದು ತನ್ನ ಉದ್ದೇಶವು ನ್ಯಾಯೋಚಿತವಲ್ಲ, ತಾನು ಪ್ರತ್ಯೇಕ ಪಕ್ಷವಾಗಿ ಉಳಿಯುವುದಕ್ಕಿಂತ ಕಾಂಗ್ರೆಸ್ ಸಂಸ್ಥೆಯಲ್ಲಿ ವಿಲೀನಗೊಂಡು, ಆದರೊಡನೆ ಸಹಕರಿಸುತ್ತ ನಡೆಯುವುದರಿಂದಲೇ ತನ್ನ ಉದ್ದೇಶವು ಬಹು ಮಟ್ಟಿಗೆ ಸಾಧಿಸಲ್ಪಡುವುದು ಎಂದು ಮನಗಂಡಿರುವುದು ಶ್ಲಾಘ್ಯ. ಉಭಯ ಪಕ್ಷಗಳೂ ವಿಲಯನದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳುವ ಗಟ್ಟಕ್ಕೆ ಬಂದಿವೆ. ತನ್ನಿಂದಲೇ ಹುಟ್ಟಿ ಹೋದವರೊಡನೆ ಈ ಪಕ್ಷಕ್ಕೆ ಮರಳಿ ತನ್ನುಡಿಯಲ್ಲಿ ಅವಕಾಶ ನೀಡುವ ಉದಾರತೆಯನ್ನು ಕಾಂಗ್ರೆಸ್ಸು ತೋರಿಸಲು ಮುಂದಾಗಿದೆ ಅದರ, ಆದಿವಾಸಿಗಳಿಗೆಂದು ಪ್ರತ್ಯೇಕ ರಾಜ್ಯ ಸ್ಥಾಪಿಸುವ ವಿಚಾರವನ್ನು ಜಾರ್ಖಂಡಿಯರು ಕೈಬಿಡಬೇಕಾಗುತ್ತದೆ. ಹಾಗಾದ್ದರೂ ಆದಿ ವಾಸಿಗಳು ತಮ್ಮನ್ನು ವಂಚಿತರೆಂದು ತಿಳಿಯದಂತೆ ಅವರ ಅಭಿವೃದ್ಧಿಗಾಗಿ ಪ್ರತ್ಯೇಕ ಮಹಾ ಮಂಡಳ ರಚಿಸಲು ಕಾಂಗ್ರೆಸ್ಸು ಒಪ್ಪಿಕೊಂಡಿದೆ. ಜಾರ್ಖಂಡ್ ಪಕ್ಷದಂತೆಯೇ ಇನ್ನೂ ಕೆಲವು ಪಕ್ಷಗಳನ್ನೆ ಆವುಗಳೂ ತಮ್ಮ ಸಮೂನ ಧ್ಯೇಯ ವಾಕ್ಯಸ್ವೀಕರಿಸಿದ ಇತರ ಪಕ್ಷಗಳನ್ನು ಸ್ವೀಕರಿಸುವುದರಿಂದ ದೇಶದಲ್ಲಿ ಪಕ್ಷ ಸಂಖ್ಯೆಯು ಕಡಿಮೆಯಾಗಿ ಅಖಿಲ ಭಾರತಕ್ಕೆ ಹೆಚ್ಚಿನ ಶಕ್ತಿಯುತ ಸೇವೆಯನ್ನವು ಸಲ್ಲಿಸುವಂತಾಗಲಿ; ಇದಕ್ಕೆ ಜಾರ್ಖಂಡ್ ಪಕ್ಷದ ವಿಲೀನೀಕರಣವು ನಾಂದಿಯೆನಿಸಲಿ.

ಜವಾಹರಲಾಲ

ಮೂಳವೀಯ, ಹುಳೀಜ ಇಬ್ರಾಹಿಮರ ರಾಜಿನಾಮೆಯಿಂದ ಪ್ರಧಾನಿ ನೆಹರು ತನ್ನ ಸಚಿವ ಸಂಪುಟದ ಪುನರ್ಘಟನೆಗೆ ಮುರಳಿ ಮನೆಯೂರುವುದೀಗ ನಿಶ್ಚಿತವಾಗಿದೆ. ಚೀನೀಯ ಆಕ್ರಮಣದ ವೇಳೆ ಸಂವಿಶ್ರ ಸರಕಾರ ರಚಿತಗೊಳ್ಳಬೇಕು ಎಂಬ ವಾದವೂ ಮುಂದು ಬಂದಿತ್ತು. ಅದಕ್ಕೆ ಮುರಳಿ ಚೀತರೆ ಮೂಡಿದರೂಮೂಡಬಹುದು. ಸದ್ಯದ ಮಂತ್ರಿಗಳಲ್ಲಿ ಗೋಪಾಲ ರೆಡ್ಡಿಯವರು ಪಶ್ಚಿಮ ಬಂಗಾಳಕ್ಕೆ ರಾಜ್ಯಪಾಲರಾಗಿ ಹೋಗುವರೆಂಬ ದಟ್ಟ ವಾರ್ತೆ ಹರಡಿದ್ದರೂ ಕೆ. ಸಿ. ರೆಡ್ಡಿಯವರ ಭವಿಷ್ಯ ಅನಿರ್ದಿಷ್ಟವೆಂದೇ ತಿಳಿಯುತ್ತದೆ. ಅವರೂ ಯಾವುದಾದರೊಂದು ರಾಜ್ಯಕ್ಕೆ ರಾಜ್ಯಪಾಲರಾಗಿ ತೆರಳುವ ಸಂಭವ ಕಡಿಮೆ.

ಮಹಮ್ಮದಾಲಿ

ನಿಜಲಿಂಗಪ್ಪನವರು ಕರ್ನಾಟಕದ ಮುಖ್ಯ ಮಂತ್ರಿಯೆನಿಸಿದ ಬಳಿಕ ತೆರವಾದ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನವನ್ನು ನಿರಾಡಂಬರ ವ್ಯಕ್ತಿ ಮಹಮ್ಮದಾಲಿಯವರು ತಾತ್ಕಾಲಿಕವಾಗಿ ವಿರಿದ್ದರು. ಇದೀಗ ನಡೆದ ಚುನಾವಣೆಯಲ್ಲಿ ಅವರು ಶೃಂಗಡ ಬಹುಮತದಿಂದ ಮುಂದಿನ ಅವಧಿಗೆ ಅಧ್ಯಕ್ಷರೆಂದು ಆಯ್ಕೆಗೊಂಡಿದ್ದಾರೆ ಕಾಂಗ್ರೆಸ್ ಸಂಸ್ಥೆಯ ಮುಖ್ಯ ದೋಷಗಳನೆಯೆಂಬುದನ್ನು ತೋರಿಸಲು ಸಾಂಕೇತಿಕವಾಗಿ ಪ್ರತಿಸ್ಪರ್ಧಿಗಳಾದ ಹಿಂದಿನ ಮಂತ್ರಿ ಚೆನ್ನಬಸಪ್ಪನವರು ತನ್ನ ನಿರೀಕ್ಷೆತ ಸೋಲನ್ನು ಒಪ್ಪಿಕೊಂಡರು. ಪಕ್ಷದೊಳಗಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಿ, ಏಕ್ಯ ಸಂವರ್ಧನೆಯಲ್ಲಿ ಮಹಮ್ಮದಾಲಿ ಯಶಸ್ವಿಯಾಗಲಿ.

ಅಲ್ಲಲ್ಲಿಯ ಸುದ್ದಿಸಾರ

ಚಾರಮಕ್ಕಿ ನಾರಾಯಣ ಶೆಟ್ಟಿ ಹೈಸ್ಕೂಲ್— ಕುಂದಾಪುರ ತಾಲೂಕು ಎಜುಕೇಶನ್ ಸೊಸೈಟಿ (ರಿ) ಯ ವತಿಯಿಂದ ಅಲ್ಪಾಡಿಯಲ್ಲಿ ತಾ. 17—6—63ರಂದು ಚಾರಮಕ್ಕಿ ನಾರಾಯಣ ಶೆಟ್ಟಿ ಹೈಸ್ಕೂಲಿನ ಪ್ರಾರಂಭೋತ್ಸವವು ಶ್ರೀ ಕೆ. ಸಂಜೀವ ರಾಯರಿಂದ ವಿಜ್ಞಾಪನೆಯಿಂದ ನೆರವೇರಿಸಲ್ಪಟ್ಟಿತು. ಅನಂತರ ಸಾರ್ವಜನಿಕ ಸಭೆಯು ಶ್ರೀ ಎನ್. ಎಸ್. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ಸ್ವಾಗತ ಗೀತೆಯೊಡ ಬಳಿಕ ಶ್ರೀ ಎಸ್ತರಿ ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಅವರು ಸ್ವಾಗತಿಸುತ್ತಾ ಇಲ್ಲಿಯ ಸ್ಥಾಪಕಿ ಶ್ರೀ ಎಸ್. ಎಸ್. ಕೊಡ್ಲೆಬೈಲ್ ಎಂ ಎಲ್ ಎ. ಅವರ ಪ್ರಯತ್ನದಿಂದ ಈ ಹೈಸ್ಕೂಲು ತೆರೆಯಲು ಸಾಧ್ಯವಾಯಿತೆಂದೂ ಈ ಶಾಲೆಯು ವಿಶ್ವೇಷನ್ನು ವಹಿಸಲು ಒಪ್ಪಿದ ವಿದ್ಯಾಭಿಮಾನಿ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರ ಔದಾರ್ಯ ಮೆಚ್ಚತಕ್ಕ ಶ್ಲಾಘನೀಯ ವಿಚಾರವೆಂದೂ ಸಕಲರೂ ಸಹಕಾರ ನೀಡಬೇಕೆಂದೂ ಹೇಳಿದರು. ಸಭಿಕರಲ್ಲಿ ಶ್ರೀಗಳಾದ ಎ. ಗೋಪಾಲ ಕೃಷ್ಣ ಕೊಡಗಿ, ಆರ್. ಕೆ. ಸಂಜೀವ ರಾವ್, ಕೆ. ಸೂರ್ಯನಾರಾಯಣ ಅಡಿಗ, ಜರ್ಮನ್ ಮಿತ್ರ ಹಿನ್ಸರ್ ಮೊದಲಾದವರು ಭಾಷಣವಿತ್ತರು ಅಧ್ಯಕ್ಷರು ಶಾಲೆ ತೆರೆಯಲು ಕಾರಣರಾದವರನ್ನು ಕೊಂಡಾಡಿ ಮೂತನಾಡಿದ ಮೇಲೆ ಶ್ರೀ ಎಸ್. ಎಸ್. ಕೊಡ್ಲೆಬೈಲರು ವಂದನೆಗಳನ್ನರ್ಪಿಸಿದರು. ಆರಂಭದಲ್ಲಿ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರನ್ನು ಮೆರವಣಿಗೆಯಿಂದ ಕರತರಲಾಗಿತ್ತು.

ಬಾಳಿಲದಲ್ಲಿ ಹೈಸ್ಕೂಲು— ಪೂ ಸತಾಗಿ ಸಾರ್ವಜನಿಕ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. 19ರಂದು ರಾಜ್ಯ ಸರಕಾರದ ಉಪ ವಿದ್ಯಾ ಸಚಿವೆ ಶ್ರೀಮತಿ ಗ್ರೇಸ್ ಟಕ್ಕರ್‌ರವರಿಂದ ಶ್ರೀ ಎಸ್. ಸುಬ್ಬಯ್ಯ ನಾಯ್ಡು ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಮೆನೆ ಜರ್ ಶ್ರೀ ಎನ್. ವೆಂಕಟ ಸುಬ್ರಾಯರು ಸ್ವಾಗತ ಭಾಷಣಮಾಡಿದರು. ಶ್ರೀ ಎಂ. ಎಸ್. ರಾವ್‌ರವರು ವರದಿಯನ್ನೋದಿದರು. ತರುವಾಯ ಶ್ರೀಮತಿ ಟಕ್ಕರ್‌ರವರು ಉದ್ಘಾಟನಾ ಭಾಷಣ ಮಾಡುತ್ತಾ, ಶಾಲೆಗೆ ಶುಭಕೋರಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು ಶ್ರೀಗಳಾದ ಕೆ ವಿ. ಗೌಡ, ಎಂ. ಎಲ್ ಎ. ಜಿಲ್ಲಾ ವಿದ್ಯಾಧಿಕಾರಿ ಕೆ ವಿ ಶೆಟ್ಟಿ, ಮುಕುಂದ ರಾವ್, ಎಂ. ಎಲ್. ಸಿ. ತಾ. ಬೋ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ಗೌಡ ಇವರು ಮೂತಾಡಿ ಶಾಲೆಗೆ ಶುಭಕೋರಿದರು. ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿಗಳ ಜೊತೆಗೆ ಸಭಾಕಾರ್ಯವಾಯಿತು.

ಜಾನಕಿ ಔಷಧಾಲಯ— ಮಂಡ್ಯದಲ್ಲಿ ಡಾ| ಹೇಮಾವತಿ, ಬಿ ಶೆಟ್ಟರ ಔಷಧಾಲಯವಾದ ಜಾನಕಿ ಫ್ಲಿನಿಕ್‌ನ ಪ್ರಾರಂಭೋತ್ಸವವು ಇತ್ತೀಚೆಗೆ ನೆರವೇರಿತು. ಈ ಸಮಾರಂಭಕ್ಕೆ ಹಲವಾರು ಪುರಸ್ಕಾರಿಗಳು ಆಗಮಿಸಿದ್ದು, ಡಾ| ಹೇಮಾವತಿಯವರಿಗೆ ಶುಭಕೋರಿದರು. ಡಾ| ಹೇಮಾವತಿ ಮತ್ತು ಅವರ ಪತಿ ಬಿ. ಭಾಸ್ಕರ ಶೆಟ್ಟರು ಬಂದ ಅತಿಥಿಗಳನ್ನು ಸ್ವಾಗತಿಸಿದರು.

ಮದ್ರಾಸ್ ಧರ್ಮಪ್ರಕಾಶದಲ್ಲಿ ಧರ್ಮೋಪನಯನ ಸಮಾರಂಭ— ಇದೇ ಳೆಯಿದ ತಾ. 16ರಂದು, ಧರ್ಮಪ್ರಕಾಶ ಮಂದಿರಗಳ ಮೂಲಿಕರಾದ ಶ್ರೀ ಕೆ. ಸೀತಾರಾಮ ರಾಯರು ಮತ್ತು ಅವರ ಪುತ್ರರೂ ಸೇರಿ 102 ಜನ ಬಡ ಬ್ರಾಹ್ಮಣ ಬಾಲಕರಿಗೆ ಯೂಪ ಸಂಪ್ರದಾಯಕ್ಕೂ ದೋಷ ಬಾರದಂತೆ, ಧರ್ಮೋಪನಯನವನ್ನೆಸಗಿಸಿದರು. ಡಾ| ಕೆ. ಎಂ. ಮುನ್ಷಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಬಟುಗಳ ಬಂಧುವರ್ಗದವರೂ ಅಹ್ವಾನಿತರಾಗಿದ್ದರು. ಉಪನಯನದ ಸಮಾರಂಭದ ನಂತರ ಉತ್ತಮ ರೀತಿಯ ಭೋಜನಕೂಟ ವೇರ್ಪಡಿಸಿತ್ತು. ಬಟುಗಳ ಮೂತಾ ಪಿತೃಗಳಿಗೆ ಉಚಿತ ರೀತಿಯ ಬಯಮೂನ ವಿತರಣೆಯೂ ನಡೆಯಿತು.

ಆರಂಭದಲ್ಲಿ ಶ್ರೀ ಕೆ.ಸೀತಾರಾಮ ರಾಯರು ಆತಿಥಿಗಳಿಗೂ ನೆರೆದವರಿಗೂ ಹೃತ್ಪೂರ್ವಕ ಸ್ವಾಗತ ಬಯಸಿದರು. ಅವರು ಮೂತನಾಡುತ್ತಾ, ಈ ಸಮಾರಂಭದ ಮುಖ್ಯ ಕಾರ್ಯಕರ್ತರು ತಮ್ಮ ಸೂಜ್ಯ ಪಿತೃವಾದ ದಿ. ಗೋವಿಂದರಾಜರೇ ಎಂದು ಹೇಳಿದರು. ತಮ್ಮ ಭಾಷಣದ ಅಂತ್ಯದಲ್ಲಿ ಅವರು ಅಧ್ಯಕ್ಷಸ್ಥಾನವಿತ್ತ ಅಲಂಕರಿಸಿದ್ದ ಡಾ| ಮುನ್ಷಿಯವರನ್ನು ಮತ್ತು ವೇದಿಕೆಯ ಮೇಲೆ ಗೌರವನ ಸ್ಥಾನಗಳಲ್ಲಿ ಮಂದಿಸಿದ್ದ ಶ್ರೀಯುತರುಗಳಾದ ಕೆ. ಬಾಂ ಸುಬ್ರಹ್ಮಣ್ಯ ಅಯ್ಯರ್, ಟಿ ಎಸ್. ಕೃಷ್ಣ ಸ್ವಾಮಿ ಅಯ್ಯರ್, ಸಿ. ಆರ್ ಕೃಷ್ಣ ರಾವ್ ಎಸ್. ಪಾರ್ಥಸಾರಥಿ ಅಯ್ಯರ್, ರಾವ್ ಬಹದೂರ್ ವಿ. ಟಿ. ರಂಗಸ್ವಾಮಿ ಅಯ್ಯಂಗಾರ್, ದಿವಾನ್ ಬಹದೂರ್ ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ, ಪಂಡಿತ ಲಕ್ಷ್ಮೀನಾರಾಯಣ ಉಪಾಧ್ಯಾಯ, ಇನ್ನಿತರಿಗೆಲ್ಲ ವಟುಗಳಿಗೆ ಅಶೀರ್ವದಿಸುವಂತೆ ಕೇಳಿಕೊಂಡರು.

ಡಾ ಮುನ್ಷಿಯವರು ಭಾಷಣ ಮಾಡುತ್ತಾ, ಯಜ್ಞೋಪವೀತದ ಮಹತ್ವವನ್ನು ವಿವರಿಸಿದ ನಂತರ ಶ್ರೀ ಸಿ ಆರ್ ಕೃಷ್ಣರಾಯರು ಅಭಿನಂದನೆ ಸಲ್ಲಿಸಿದರು.

ಸಮಾರಂಭದ ನಂತರ ಬಟುಗಳ ಸಮೇತ ತಂದೆ ತಾಯಿಗಳೆಲ್ಲರೂ ಪೆರವಾಗಿ ಕೆಲವು ಮಹನೀಯರು ಶ್ರೀ ಸೀತಾರಾಮರಾಯರಿಗೆ ಸೃತ್ಕೃವ್ಯಕ್ತ ಧನ್ಯವಾದಗಳನ್ನರ್ಪಿಸಿದರು. ರಾತ್ರಿಯ ಊಟದ ನಿರ್ವಾಹವೂ ಇತ್ತು.

ವಿದ್ಯಾರ್ಥಿ ವೇತನ ವಿತರಣೆ— ಉಡುಪಿ ತಾಲೂಕು ಸೇವಾನಿಕ್ಷತ್ರಿಯ ಗಾಣಿಗ ಸಮಾಜವು ತಾ. 16—6—63ರಂದು ಉಡುಪಿಯಲ್ಲಿ ಸಭೆ ಸೇರಿ, ಸಂಘದಿಂದ ಸಹಾಯಧನ ಪಡೆಯುವವರ ಸಮಾಜವ ಬಡ ವಿದ್ಯಾರ್ಥಿಗಳಿಂದ ಬಂದ ಅರ್ಜಿಪತ್ರಗಳನ್ನು ಪರಿಶೀಲಿಸಿ, ಉಡುಪಿ ತಾಲೂಕಿನ ಒಟ್ಟು ಹನ್ನೊಂದು ಮಂದಿ ಆರ್ಹ ಬಡ ವಿದ್ಯಾರ್ಥಿಗಳಿಗೆ ಈ ಚಾಲ್ತಿ ವರ್ಷದ ವಿದ್ಯಾರ್ಥಿ ವೇತನವನ್ನು ವಿತರಣೆ ಮಾಡಿತು. ಹಾಯರ್ ಎಲಿಮೆಂಟರಿ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ರೂ. 12/-ರಂತೆಯೂ, ಮತ್ತು ಹೈಸ್ಕೂಲು ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ರೂ 15/-ರಂತೆಯೂ ವಿದ್ಯಾರ್ಥಿ ವೇತನವೆ ಹಂಚಲ್ಪಟ್ಟಿತು.

ಸಾಧನಾ ಮಂಟಪ, ಉಡುಪಿ—ಧಾರಣಿಯ ಪೂರೋಭಿವೃದ್ಧಿಗಾಗಿ ಪ್ರಚಾರ ಪ್ರವಚನ ಮತ್ತು ಪ್ರದರ್ಶನಗಳನ್ನೇರ್ಪಡಿಸುವ ಧ್ಯೇಯ ವಾಗಿಟ್ಟುಕೊಂಡಿರುವ ಸಾಧನಾ ಮಂಟಪದ ಉದ್ಘಾಟನೆಯನ್ನು ತಾ. 18—6—63ರಂದು ಶ್ರೀ ಸ್ವಾಮಿ ವಿಜ್ಞಾನಂದ ಅವಧೂತರು ಆನಂದ ಮೋರ್ಚಾಶ್ರಮ, ಜನೂಲಪುರ(ಬಿಹಾರ) ಆವರಿಂದ ಡಾ| ಕೆ. ಮುದ್ದಣ್ಣ, ಸಿವಿಲ್ ಸರ್ಜನ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಉ. ಲಕ್ಷ್ಮೀನಾರಾಯಣ ಕಣಿಯವರು ಸ್ವಾಗತಿಸಿ ಸಾಧನಾ ಮುಂಬರುವ ಧ್ಯೇಯೋದ್ದೇಶಗಳನ್ನು ಹೇಳಿದರು. ಶ್ರೀ ಕೆ. ಜಿ. ಪತ್ತರು ಸ್ವಾಮೀಜಿಯವರ ಪರಿಚಯವನ್ನು ಮಾಡಿಕೊಟ್ಟರು. ಸ್ವಾಮೀಜಿಯವರು ಯೋಗ ವಿಜ್ಞಾನದ ಕುರಿತು ಮೂತಾಡಿದರು. ಅಧ್ಯಕ್ಷರ ಭಾಷಣಾನಂತರ ಕೃತಜ್ಞತಾ ಸಮರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ದ ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಮಹಾ ಸಭೆಯು ಶ್ರೀ ಎಮ್. ಮಹ್ಮದ್ ರಾಜ್, ಎಂ ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ತಾ 2—6 ರಿಕಲ್ಲು ಉಡ್ಡಿಯಲ್ಲಿ ಜರಗಿತು. ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದ ತರುವಾಯ ಶ್ರೀ ಕುರುಂಜಲ್ ಗಣಪಯ್ಯ ಶೆಟ್ಟರು ಸಂಘದ ಕೇಳಿಕೆಗಳು ಫಲದಾಯಕವಾಗುವಂತೆ ಸಂಭವ ಈ ವರೆಗೆ ಕೈಗೊಂಡ ಕಾರ್ಯಗಳನ್ನೊಳಗೊಂಡ ವರದಿಯನ್ನು ಓದಿದರು

ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀಗಳಾದ ಎಸ್. ಮುಕುಂದ ರಾವ್, ಎಂ. ಎಲ್. ಸಿ. ಬಿ ಭಾಸ್ಕರ ಶೆಟ್ಟಿ ಎಂ. ಎಲ್. ಎ. ಮತ್ತು ಸಭಾಧ್ಯಕ್ಷರು ಪ್ರಾಥಮ್ಯವಲ್ಲಿರುವ ಖಾಸಗಿ ಶಾಲೆಗಳ ಪೈಕಿ ಅರೆವಾಸಿ ಶಾಲೆಗಳು ಈ ಜಿಲ್ಲೆಯಲ್ಲಿರುವುದಂದಿದ ಜಿಲ್ಲೆಯ ವಿದ್ಯಾಪ್ರಗತಿಗೆ ಧಕ್ಕೆ ಬಾರದಂತೆ ಸಂಘದ ನ್ಯಾಯವಾದ ಕೇಳಿಕೆಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿ ಭಾಷಣಗಳನ್ನಿತ್ತ ಬಳಿಕ ಈ ಕೆಳಗಿನ ನಿರ್ಣಯಗಳು ಮಂಜೂರಾದುವು

1) ಇಡೀ ಪ್ರಾಂತದ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಅನ್ವಯಿಸತಕ್ಕ ಹೊಸ ಗ್ರಾಂಟ್ ಇನ್ ಎಯಿಡ್ ಕೋಡನ್ನು ದೇರಿ ಶಿವಾಯ ಜ್ಯಾರಿಗೆ ತರಬೇಕು, ಹಾಗೆ ಜ್ಯಾರಿಗೆ ತರುವಾಗ ಹಿಂದಿನ ಮದ್ರಾಸು ಪ್ರಾಂತ್ಯದಲ್ಲಿ ದೊರೆಯುತ್ತಿದ್ದ ಸವಲತ್ತು ಗಳಿಗೆ ಲೋಪಬಾರದಂತೆ ತಯಾರಿಸಬೇಕು. 2) ಸಂಘದ ಕಾರ್ಯಕಾರಿ ಸಮಿತಿಯು ಜಿಲ್ಲಾ ಟೀಚರ್ಸ್ ಗಿಲ್ಡ್, ನ, ಇತರ ವಿದ್ಯಾತಜ್ಞರ ಸಲಹೆಯನ್ನು ಪಡೆದು ಒಂದು ಕರಡು ಗ್ರಾಂಟ್ ಇನ್ ಎಯಿಡ್ ಕೋಡನ್ನು ತಯಾರಿಸಿ ಸರಕಾರದ ಅವಗಾಹನೆಗೆ ಕಳುಹಿಸಬೇಕು. 3) ಸದ್ರಿ ಮಸೂದೆಯನ್ನು ತಯಾರಿಸುವ ವಿದ್ಯಾಬೋರ್ಡಿನಲ್ಲಿ ಸಂಘಕ್ಕೆ ಪ್ರಾತಿನಿಧ್ಯ ಸಿಗಬೇಕು. 4. ಖಾಸಗಿ ಶಾಲಾ ಆಡಳಿತದಾರರಿಗೆ ಅಧ್ಯಾಪಕರ ಕ್ಷೇಮ ನಿಧಿಯು ವರ್ಗಣಿ, ಕಟ್ಟೋಣದ ಬಾಡಿಗೆ, ಯೂ ಸ್ಟಂತ ಕಟ್ಟೋಣಕ್ಕಾಗಿ ಎತ್ತಿದ ಸಾಲದ ಬಡ್ಡಿ, ಕಟ್ಟೋಣದ ರಿಪೇರಿ, ಸಾಹಿತ್ಯ ಸಾಮಗ್ರಿ, ಸಾದಿಲವಾರು ಇತ್ಯಾದಿ ವರ್ಷಾವಧಿ ಕೆಗಲುವ ಪ್ರಯೋಗಗಳಿಗಾಗಿ ಮದ್ರಾಸು ಸರಕಾರವು ಕೊಡುತ್ತಿದ್ದಂತೆ ಹೊಸ ಗ್ರಾಂಟ್ ಇನ್ ಎಯಿಡ್ ಕೋಡ್ ಜ್ಯಾರಿಗೆ ಬರುವ ತನಕ ಸೇರಡಾ 15ರ ವರೆಗೆ ಪ್ರೈಂಟಿ ನೆನ್ಸ್ ಗ್ರಾಂಟನ್ನು ಕೊಡಬೇಕು 5 ಟೀಚಸಿಗಿ ಶಾಲೆಗಳ ವೃತ್ತಿ ಶಿಕ್ಷಕರಿಗೆ ತಾರೀಕು 1—6—60ರ ಲಗಾಯ್ತು ಸಂಬಳದಲ್ಲಿ ಕಡಿತ ಮಾಡಿದ ಹುಕ್ಕುಂ ನ್ಯಾಯಬಾಹಿರವಾಗಿರುವುದರಿಂದ, ಆವರಿಗೆ ಆ ಹಿಂದಿನ ದರದ ಸಂಬಳವನ್ನು ಏಕ ಗಂಟಿನಿಂದ ಕೂಡಲೇ ಕೊಡಿಸಬೇಕು ಸಭೆಯು ಮುಕ್ತಾಯದ ಮೊದಲು ಸಂಘದ ಖಾಯಂ ಅಧ್ಯಕ್ಷರಾದ ಶ್ರೀ ಟಿ ಎ. ಪೈಯವರು ಬೆಂಗಳೂರಿನಿಂದ ಆಗ ತಾನೆ ಬಂದವರು ಸಭೆಗೆ ಹಾಜರಾಗಿ, ಸಭಾ ಕಾರ್ಯಕಲಾಪಗಳನ್ನು ಕ್ಷೀಣಿಸಿ ಭಾಷಣವನ್ನಿತ್ತರು. ಮೂಸ್ಯ ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ತಾ 7-6-63 ರಲ್ಲಿ ಮಂಗಳಾಲದಲ್ಲಿ ಮುಕ್ಕಾಂ ಮಾಡುವಾಗ್ಗೆ ಮೇಲಿನ ನಿರ್ಣಯಗಳ ಮನವಿಯನ್ನು ಅರ್ಪಿಸುವಲ್ಲಿ ನಿಯೋಗ ಹೋಗಬೇಕಾಗಿ ನಿರ್ಣಯಿಸಿದ ಪ್ರಕಾರ ಶ್ರೀಗಳಾದ ಎಂ. ಸಾಧ್ವ ರಾಜ್, ಎಂ. ಎಲ್. ಎ ಮತ್ತು ಟಿ ಎ ಪೈಯವರ ಮುಂದಾಳುತನದಲ್ಲಿ, ಶ್ರೀ ಕುರುಂಜಾಲು ಗಣಪಯ್ಯ ಶೆಟ್ಟ, ಬನ್ನಾಡಿ ಸುಬ್ಬಣ್ಣ ಹೆಗ್ಡೆ, ಸರ್ಕಾರಿ ರಾಜೀವ ಕೋಟ್ಯಾನ್ ಕೂಡಾ ಕ್ರಿಸದಸ್ಯರ ನಿಯೋಗ ಜೋಗಿ ಮಂಜೆ ಮಂಗಳಾಲದಲ್ಲಿ ತಾ 7—6—63ರ ಬೆಳ್ಳಿ ಮಂ ಕ್ರಿಸರ್ಯರ ಭೋಜನ ಕೂಟ ಸಮಾರಂಭದಲ್ಲಿ ಮೇಲ್ಕಂಡ ಮನವಿಯನ್ನು ಅರ್ಪಿಸಿದ್ದಲ್ಲದೆ, ಸದ್ರಿ ಮನವಿಯ ಕುರಿತು ನಿಯೋಗದ ಮುಂದಾಳ್ತನವನ್ನೂ ಡಾ. ಟಿ. ಮೂಧನ ಪೈಗಳೂ ಆಗ್ಯದಪೂರ್ವಕವಾಗಿ ಮುಂತ್ರಿಗಳಿಗೆ ಮಂಗಳಾಲದಲ್ಲಿ ಸೂಚಿಸಿದರು. ಮಂತ್ರಿಯರ್ಯರು ತಾವು ಮುಂದಿನ ಜಿಲ್ಲೆಯ ಪ್ರವಾಸದಲ್ಲಿ ಖಂಡಿತವಾಗಿ ಮಂಗಳೂರಿಗೆ ಬಂದು ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆಯಿತ್ತರು.

ಶ್ರೀ ಶಿವಣ್ಣ ಶೆಟ್ಟರ ನಿಧನ— ಸುಮಾರು 20 ವರ್ಷಗಳಿಂದ, ಉಡುಪಿ ಮುನ್ಸಿಪಾಲಿಟಿಯ ಬಿಲ್ ಕಲೆಕ್ಟರರಾಗಿ ದಕ್ಷ ಸೇವೆ ಸಲ್ಲಿಸಿದ ಶ್ರೀ ಬಿ. ಶಿವಣ್ಣ ಶೆಟ್ಟರು ಕೊರಂಗ್ರಪಾಡಿಯಲ್ಲಿರುವ ತಮ್ಮ ಮನೆಯಲ್ಲಿ ತಾ. 18 ರಂದು 42ನೇ ವರ್ಷದಲ್ಲಿ ಹೃದಯಸ್ತಂಭನದಿಂದ ಮೃತರಾದುದು ವಿಷಾದಕರವಿಷಯ ಮೃತರು ಪತ್ನಿಯನ್ನೂ ಮೂರು ಪುತ್ರರನ್ನೂ ಅಗಲಿದ್ದಾರೆ.

ಶೋಚನೀಯ ನಿಧನ— ಮೂಲ್ಕಿ, ಬ್ರಹ್ಮಾವರ, ಗಂಗೊಳ್ಳಿ, ಕುಂದಾಪುರ, ನುಲ್ಕಿ, ಮೂಡಬಿದ್ರೆ, ಬಂಟ್ವಾಳ, ಮೊದಲಾದ ಜಿಲ್ಲೆಯ ಹಲವಾರು ಕಡೆಗಳಲ್ಲಿ ಆತೀ ನಿಷ್ಠೆಯಿಂದ ಮತ್ತು ಕಾರ್ಯತತ್ಪರತೆಯಿಂದ ಸರ್ಪೋಸ್ಟ್ ಮಾಸ್ಟರಾಗಿ ಸೇವೆಯನ್ನು ಸಲ್ಲಿಸಿದ ಶ್ರೀ ಫಲಿಮಾರು ವೇದವ್ಯಾಸ ಪ್ರಭುಗಳು ತಮ್ಮ 53ನೇ ವಯಸ್ಸಿನಲ್ಲಿ ತಾ 18 6—63 ರಲ್ಲಿ ರಾತ್ರಿ 11—45ಕ್ಕೆ ಮಂಗಳೂರು ವೆನ್ಲಾಕ್ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಉದಾರ ಸ್ವಭಾವದವರೂ ಪೂತ್ಮನಲ್ಲಿದೆ ತಾನು ಸೇವೆ ಗೈದ ಸ್ಥಳಗಳೆಲ್ಲೆಲ್ಲಾ ಜನಪ್ರೀತರಾಗಿದ್ದರು. ಕೆಲವೆ ಸಮಯ ಆಸ್ಪತ್ರೆಯಲ್ಲಿದ್ದು ನಿಧನರಾಗಿ ಎರಡು ದಿನಗಳ ನಂತರವೇ ಮೊದಲು ಆಸ್ಪತ್ರೆಗೆ ದಾಖಲು ಮಾಡಲ್ಪಟ್ಟಿದ್ದರು. ಮೃತರಿಗೆ 3 ಮಂದಿ ಪೆಣ್ಣು ಮಕ್ಕಳೂ 3 ಮಂದಿ ಸಹೋದರರೂ ಇರುವರು.

ದಯಾಪಿ ಸೂಚಿಕೆ ಸಭೆ—ಉಡುಪಿಯ ಹಿರಿಯ ಪತ್ರಿಕೋದ್ಯಮಿ ಯೂ. ಸೀತಾರಾಮ ಭಟ್ಟರ ನಿಧನಕ್ಕಾಗಿ ದುಃಖಸೂಚಿಸುವ ಸಭೆಯೊಂದು ಇದೇ ತಾ. 22 ರಂದು ನಗರ ಸಭಾಪತಿ ಶ್ರೀ ಪಿ ಆರ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಭಿನ್ನವಾಣಿ ವಿಲಯದಲ್ಲಿ ಜರಗಿ, ಸಂತಾಪ ಸೂಚಕ ನಿರ್ಣಯವನ್ನು ಸ್ವೀಕರಿಸಲಾಯಿತು. ಶ್ರೀ ಜಿ ಎ. ಆಚಾರ್ಯರು ಶ್ರದ್ಧಾಪೂರ್ವಕ ಭಾಷಣ ಮಾಡಿದ ಮೇಲೆ ಶ್ರೀಗಳಾದ ಎಸ್. ಎಲ್. ನಾರಾಯಣ ಭಟ್ಟ, ಎ. ಜಿ. ಆಲ್ಸೆ ರಾಜಶೇಖರಯ್ಯ, ಜಯ, ಎಂ. ಮಧ್ವಾಸ್ಥ, ಎಂ ಜಿ ಶೆಟ್ಟಿ ಮೊದಲಾದವರು ದಿವಂಗತರಿಗೆ ಕುರಿತು ಮೂತನಾಡಿದರು ಅಧ್ಯಕ್ಷರ ಭಾಷಣದ ನಂತರ ದಿವಂಗತರ ಸ್ಮಾರಕಾರ್ಥ ಒಂದು ನಿಧಿಯನ್ನು ಸಂಗ್ರಹಿಸಿ ಅವರ ಕುಟುಂಬಕ್ಕೆ ಕೊಡುವ ನಿರ್ಣಯವಾಯಿತು. ಕೊನೆಯಲ್ಲಿ ಶ್ರೀ ಕೆ. ಎಲ್. ಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಎ. ಐ ಸಿ ಸಿ. ಗೆ ಆಯ್ಕೆ— ಇದೇ ತಾ. 24ರಂದು ಜರಗಿದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ರಾಜ್ಯದಿಂದ 30 ಪ್ರತಿನಿಧಿಗಳನ್ನು ಎ. ಐ ಸಿ ಸಿ ಗೆ ಆರಿಸಲಾಗಿದೆ. ಇವರಲ್ಲಿ ದ ಕ. ಜಿಲ್ಲೆಯ ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವ ಮತ್ತು ಶ್ರೀ ಟಿ. ಎ. ಪೈ ಆವರು ಸೇರಿದ್ದಾರೆ.

ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರು— ಇದೇ ತಾ 25ರಂದು ಸಂಗಳೂರಿಗೆ ಬಂದಿದ್ದು ತಾ. 27 ರಂದು ಜಿಲ್ಲಾ ಸಂಚಾರ ಕೈಗೊಂಡು ತಾ 29ನೇ ಬೆಳಿಗ್ಗೆ ಹಿಂತೆರಳಲಿರುವರು.

ಉಳಿತಾಯ ಗ್ರಾಮ, ಕಾರ್ಕಳ—ಇದೇ 18ರಂದು ಮಾಳೂರು ಗ್ರಾಮ ದಲ್ಲಿ, ರಾಜ್ಯದ ಉಪಸಚಿವ ಶ್ರೀ ಎಜ್. ಆರ್. ಅಬ್ದುಲ್ ಗಫೂರ್‌ರವರಿಂದ, ಉಳಿತಾಯ ಗ್ರಾಮ ಕಾರ್ಯಕ್ರಮವು ಪ್ರಾರಂಭೋತ್ಸವವು, ತಾ ಪಂ. ಅಧ್ಯಕ್ಷ ಶ್ರೀ ಎಸ್. ಎಂ. ಅಸ್ಕರ್ ಅಂತರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಡಾ ಯು ಕೃಷ್ಣರೆಯರು ಸ್ವಾಗತಿಸಿದರು. ರಾಷ್ಟ್ರೀಯ ಉಳಿತಾಯ ಯೋಜನೆಯ ಪ್ರಾದೇಶಿಕ ನೈತಿಕ ಕೈರ್ ಶ್ರೀ ಮಯಮ್ಮದ್ ಜ್ಯಾರಿಯವರು ಉಳಿತಾಯಯೋಜನೆಯನ್ನು ವಿವರಿಸಿದರು.

ಕುದುಡನೂ ಕುಂಟನೂ ಒಂದುಗೂಡಿದರೆ....?

(ಗತೇ ಪುಟದಿಂದ)

ತ್ರ. ಇದೇ ದುರ್ಧರ ಪ್ರಸಂಗದಿಂದ ತಾನು ಗಳಿಸಬಹುದಾದ ಸ್ವಲ್ಪಲಾಭ ಪಡೆಯಲು ಅನು ಮುಂದಾಯಿತು. ಚೀನಾದೊಡನೆ ಅದು ನಿಕಟ ಸಂಬಂಧವನ್ನಿಟ್ಟುಕೊಳ್ಳುವ ಅಖಿಲಾಷೆಯಿಂದ ತೋರಿಕೆಗು ಸೀಮಾ ಒಡಂಬಡಿಕೆಯನ್ನೂ ಅದು ಮಾಡಿಕೊಂಡಿತು. ಅಂತಾರಾಷ್ಟ್ರೀಯ ನ್ಯಾಯನೀತಿಯನ್ನು ಮೀರಿ, ತನ್ನ ಹಿತ ಚಿಂತಕರ ಹಿತಸಾಧನೆಯನ್ನು ಗಾಳಿಗೆ ತೂರಿ ಭಾರತ ವಿರೋಧಿ ನೀತಿಯೊಂದಂತಲೇ ಅದು ಗಡಿ ಒಪ್ಪಂದವನ್ನು ಮಾಡಿಕೊಂಡಿತು; ತನ್ನದಲ್ಲದ ಕಾಶ್ಮೀರದ ವಿಶಾಲ ಪ್ರದೇಶವನ್ನೂ ಚಿ.ನಾಕ್ಕೆ ಬಳುವಳಿ ಕೊಡುವುದಕ್ಕೆದು ಮುಂದಾಯಿತು. ಇದರ ಅರ್ಥವೇನು? ವಿಶ್ವಾಜ್ಯ ಬಣ್ಣಗ ಕೊಡನೆ ಕೊಡಿಕೊಂಡು ಕಮ್ಯುನಿಸ್ಟ ಅಕ್ರಮಣವನ್ನು ಎದುರಿಸುವ ಶಕ್ತಿಯಾಗಿ ಸೀಟೋ ಹಾಗೂ ಸೆಂಟೊ ಒಡಂಬಡಿಕೆಗಳಲ್ಲಿ ಸೇರಿಕೊಂಡಿರುವ ವಾಕಸ್ತಾನವು ಈಗ ಕಮ್ಯುನಿಸ್ಟ ಚೀನಾದೊಡನೆ ಇಂತಹ ಒಡಂಬಡಿಕೆ ಮಾಡಿಕೊಂಡುದು ಶುಚೋದ್ಯವಲ್ಲವೆ ಮತ್ತಿನ್ನೇನು?

ಅಸಹಾಯಕ ಅಯೂಬ

ಪಾಕ್ ನಾಯಕರು ಒಂದೇ ಸವನೆ ಭಾರತದ ವಿರುದ್ಧ ಪೂತಾಪುತಿದ್ದಾರೆ. ಪಾಕ್ ಪತ್ರಿಕೆಗಳ ದರೂ ಭಾರತಕ್ಕೆ ಪ್ರತಿಯಾಗಿ ದುರ್ಭಾವನೆಯನ್ನು ಹುಟ್ಟಿಸಲು ಪ್ರಚಾರವನ್ನು ಒಕಪ್ಪೋತ್ತವಾಗಿ ಮಾಡುತ್ತಿವೆ. ಇನ್ನು ಚೀನಾದ ನೀತಿಯನ್ನೇ ಸಮರ್ಥಿಸುತ್ತವೆ ಭಾರತ-ಚೀನಾ ಗಡಿಯ ವಿವಾದವು ತೀರ ಸಣ್ಣದೆಂದೂ ಚೀನಾವು ಅಕ್ರಮಣವನ್ನೇ ಮಾಡಿಲ್ಲವೆಂದೂ ಆವು ಹೇಳುತ್ತವೆ. ಪಾಶ್ಚಾತ್ಯರಿಂದ ಅಧಿಕಾರಿಕ ನೆರವನ್ನು ಪಡೆದು, ತನ್ನ ಸಾಮ್ರಾಜ್ಯವಾದ ನೀತಿಯನ್ನು ಕಾರ್ಯರೂಪಕ್ಕೆಳಿಸುವ ಬಗ್ಗೆ ಅದು ಶಕ್ತಿ ಸಂಗ್ರಹ ಮಾಡುತ್ತಿದೆಯೆಂದೂ ದೂರು ಹೊರಿಸುತ್ತಿವೆ. ಪಾಕಿಸ್ತಾನದ ಮೇಲೆಯೂ ಭಾರತವು ದಾಳಿ ನಡೆಸುವುದು ಎಂಬ ಮಿಥ್ಯಾರೋಪವನ್ನೂ ಮಾಡುತ್ತಿವೆ ಭಾರತದ ಮಿತ್ರ ದೇಶಗಳನ್ನು ಅಂಗಲಾಚಿ ಅದಕ್ಕೆ ಸಹಾಯ ನೀಡಬಾರದು ಎಂದದು ಮುಖರಿ ಹೊಡೆಯುತ್ತಿದೆ ಅದರಿಂದ ಪಾಕ್ ನಾಯಕರ ಆರೋಪಗಳೆಲ್ಲವೂ ಹುರುಳಿಲ್ಲದವು ಎಂದು ಎಲ್ಲರೂ ಅರಿತಿದ್ದಾರೆ. ತಮ್ಮ ಮಾತನ್ನು ಮೀರಿ ಚೀನಾದೊಡನೆ ಸೀಮಾ ಒಡಂಬಡಿಕೆ ಮಾಡಿಕೊಂಡ ಪಾಕಿಸ್ತಾನದ ಕಡೆಗೆ ಮಿತ್ರರೂ ಇಂದು ಹೆಚ್ಚಿನ ಕಾಳಜಿ ತಹಿಸುತ್ತಿಲ್ಲ.

ಅಯೂಬರ ಹೊಸರಾಗ

ಪಾಕ್ ಅಧ್ಯಕ್ಷ ಅಯೂಬಖಾನರು ಒಂದು ಹೊಚ್ಚ ಹೊಸರಾಗವನ್ನಲ್ಲಿ ಹಳೆಯ ಹಾಡನ್ನು ಹಾಡಲಾರಂಭಿಸಿದ್ದಾರೆ. ಸಾರ್ವಜನಿಕ ಸಭೆಗಳಿಂದ ತೊಡಗಿ, ರೇಡಿಯೋ ಭಾಷಣಗಳ ವರೆಗೂ ಈ ಹಾಡು ಮೊರೆದನಿಸುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳಿಂದ ಪಡೆದ ಸೈನಿಕ ಸಲಕರಣೆಗಳನ್ನು ಭಾರತವು ಚೀನಾದ ವಿರುದ್ಧ ಉಪಯೋಗಿಸುವುದಿಲ್ಲ; ಬದಲಿಗೆ ತನ್ನ ನೆರೆಯ ದುರ್ಬಲ ದೇಶಗಳನ್ನು ತನ್ನ ಸಾಮ್ರಾಜ್ಯ ಶಾಹಿಯುಡಿಯಲ್ಲಿ ತರುವುದಕ್ಕಾಗಿ ಅದರ ಉಪಯೋಗವಾಗುತ್ತಿದೆ ಎಂಬುದೇ ಈ ಹೊಚ್ಚ ಪಲ್ಲವಿ. ಪಶ್ಚಿಮದಲ್ಲಿ ಅಫಘಾನಿಸ್ಥಾನದಿಂದ ಪೂರ್ವದಲ್ಲಿ ಇಂಡೊನೇಶಿಯಾಗಳ ನರೆಗಿನ ಎಲ್ಲ ರಾಷ್ಟ್ರಗಳನ್ನೂ ತನ್ನ ಸಾಮ್ರಾಜ್ಯಶಾಹಿಯುಡಿಯಲ್ಲಟ್ಟುಕೊಳ್ಳಲು ಭಾರತವು ಹೊಂಚು ಹಾಕುತ್ತಿದೆ-ಎಂದು ಮುಂತಾದ ಚಿಕ್ಕೋತ್ಸಾಹ—ಅಪಪಾದಗಳನ್ನಪರು ಹೇರಿದ್ದಾರೆ. ಸ್ವಾತಂತ್ರ್ಯ ಗೊಂಡ ಬಳಿಕ ಇಂದಿನ ವರೆಗೂ ಭಾರತವು ಪಾಕಿಸ್ತಾನಕ್ಕಾಗಿ ಹೋರಾಡುತ್ತಿರುವ ದೇಶ, ಬಂಧಮುಕ್ತ ದೇಶಗಳಿಗೆ ಮಾರ್ಗದರ್ಶಕವಾದ ದೇಶ. ಅಂತಹ ಒಂದು ದೇಶವು ಸಾಮ್ರಾಜ್ಯವಾದ ದತ್ತತೊನೆಯುತ್ತಿದೆಯೆಂದು ಯಾರಾದರೂ ಹೇಳಿದರೆ, ಅದು ಕುಲವನ್ನು ನಾಲಗೆ ತರುಬಿದಂತೆಯೇ ಸರಿ.

ಉಪಸಂಹಾರ

ಅಪಸ್ಪರ್ಧಿಗಳಿದ ವೈಖರಿಯೇ ಹೀಗೆ. ಇದಕ್ಕೆಲ್ಲ ನೆಪ್ಪು ಹಾಕುವಷ್ಟು ಮೊರ್ಖರು ಯಾರೊಬ್ಬರೂ ಇರಲಾರರು. ಕುಹಕಿಗಳ ಅಪಸ್ಪರಾರದಿಂದ ನಾವು, ಭಾರತೀಯರು ದಿಗ್ಮೂಢರಾಗಬಾರದು. ಬಲಿಗೆ ಯಾರು ಏನನ್ನೆ ಹೇಳಲಿ, ನಮ್ಮ ಶಕ್ತಿ ಸಂವರ್ಧನೆಯತ್ತ ಹೆಚ್ಚಿನ ಉತ್ಸಾಹವನ್ನು ಪರಿಶ್ರಮವನ್ನು ನಾವು ಪಡೆಯುಬೇಕು ಹೀನ ವಾನವರ ದುರ್ನುಡಿಗೆ ಕಿವಿಗೊಡದೆ, ಆತ್ಮರಕ್ಷಣೆಗಾಗಿ ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸುವ ದೃಢ ಸಂಕಲ್ಪ ನಮ್ಮುದಾಗಬೇಕು. ಶಕ್ತ್ಯಗಳಿಂದ ದೇವದಂಗಲ ಭೂಮಿಯೂ ವಿಮೋಚನೆಗೊಂಡಾಗಲೇ ನಮ್ಮ ಧ್ಯೇಯ ಸಾರ್ಥಕ ಅಂತಹ ತತ್ಪಶುಭ ಪರ್ವ ದಿನ ತ್ವರಿತ ದಲ್ಲೇ ಧಾಮಿನಿ ಬರಲಿ.

—ಗೋರಾ.

ಎಚ್ಚರಿಕೆಯಿಂದ ಉಪಯೋಗಿಸಬೇಕಾದ ಕ್ರಿಮಿನಾಶಕಗಳು

ಕ್ರಿಮಿನಾಶಕಗಳು ಬೆಂಕಿಯಂತೆ; ಸರಿಯಾಗಿ ಉಪಯೋಗಿಸಿದರೆ ಅದರಂತಹ ಉಪಕಾರ ಮಾಡುವ ವಸ್ತು ಬೇರೊಂದಿಲ್ಲ. ಸ್ವಲ್ಪ ಉದಾಸೀನ ಮಾಡಿದೆವೋ, ಬೀರಿತು. ಮೂದಬಾರದ ಅನರ್ಥ ಪರಂಪರೆಯನ್ನು ತಂದಿಡುತ್ತದೆ.

ಕ್ರಿಮಿನಾಶಕ ವಸ್ತುಗಳಲ್ಲಿರುವ ವಿಷದ ಪ್ರಭಾವಕ್ಕೆ ತುತ್ತಾದ ಅನೇಕರಿಗೆ ಅನೇಕ ವೇಳೆ ಹಾನಿಗಳು ಸಂಭವಿಸಿದುದನ್ನು ಕೇಳಿದ್ದೇವೆ ಆಗಿಂದು ಹೇಳಿ ಕ್ರಿಮಿನಾಶಕಗಳನ್ನು ದೂರವಿರಿಸುವುದಂತೂ ಸಾಧ್ಯವಿಲ್ಲ. ಏಕೆಂದರೆ ಬೆಳೆ ಉತ್ತಮ ಗೊಂಡು ಫಲಲು ಕೈಸೇರಬೇಕಾದರೆ ಇವು ಅತ್ಯಗತ್ಯ. ಕ್ರಿಮಿನಾಶಕಗಳಿಲ್ಲದಿದ್ದರೆ ರೈತರ ಕೈ ಮುರಿದಂತೆ.

ಇಂತಹ ವಿಷಪೂರಿತ ಕ್ರಿಮಿನಾಶಕ ವಸ್ತುಗಳನ್ನು ಉಪಯೋಗಿಸುವಾಗ ಕೆಲವು ಎಚ್ಚರಿಕೆ ಕ್ರಮಗಳನ್ನು ವಹಿಸಿದರೆ ಅವುಗಳಿಂದಾಗುವ ದೊಡ್ಡ ಚಿಕ್ಕ ಅಪಾಯಗಳನ್ನು ತಡೆಗಟ್ಟಬಹುದ. ಆ ಕ್ರಮಗಳ ಪೈಕಿ ಕೆಲವು ಮುಖ್ಯವಾದುವುಗಳನ್ನು ಇಲ್ಲಿ ಕೊಡಲಾಗಿದೆ.

೧) ಕ್ರಿಮಿನಾಶಕ ವಸ್ತುಗಳನ್ನು ಮಕ್ಕಳು ಮರಿಗಳ ಕೈಗೆ ನಿಲುಕುವ ಜಾಗದಲ್ಲಿಡಬೇಡಿ; ಅವನ್ನು ಪ್ರತ್ಯೇಕ ಜಾಗ ವೊಂದರಲ್ಲಿ ಭದ್ರಪಡಿಸಿ. ಮನೆಯುಲ್ಲಿ ಬಳಸುವ ಔಷಧಿ ಪದಾರ್ಥಗಳೊಂದಿಗೆ ಎಂದಿತ ಇರಿಸಬೇಡಿ.

೨) ಕ್ರಿಮಿನಾಶಕಗಳಿರುವ ಡಬ್ಬಿ ಅಥವಾ ಪೀಪೆಗಳ ಮುಚ್ಚಳಗಳನ್ನು ತೆಗೆದಿಡಬೇಡಿ.

೩) ಉಪಯೋಗಿಸುವುದಕ್ಕೆ ಮುಂಚೆ ಡಬ್ಬಿಗಳ ಹೊರಗೆ ಅಂಟಿಸಿರುವ ಲೇಬಲುಗಳನ್ನು ಓದಲು ಮರೆಯಬೇಡಿ ಅಲ್ಲದೆ ಆ ಲೇಬಲ್ಲುಗಳನ್ನು ಹರಿದು ಹಾಳ ಬೇಡಿ. ಅವುಗಳಲ್ಲಿ ಬರೆದಿರುವ ಸೂಚನೆಗಳನ್ನು ಜಾಗೂ ತಪ್ಪದೆ ಅನುಸರಿಸಿ.

೪) ಕ್ರಿಮಿನಾಶಕಗಳನ್ನು ಬಂಗೈಯಿಂದ ಮುಟ್ಟುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಯಿರಿ.

೫) ತುಂಡು ಬಟ್ಟೆಗಳನ್ನು ಉತ್ತಿಕೊಂಡು ಕ್ರಿಮಿನಾಶಕಗಳನ್ನು ಉಪಯೋಗಿಸಬೇಡಿ ಮೈ ಕೈಗಳು ಮುಚ್ಚುವಂತೆ ಬಟ್ಟೆ ಹಾಕಿಕೊಂಡು ಕೆಲಸಮಾಡಿ. ಅದಾದ ನಂತರ ಸೋಪಿನಿಂದ ಮೈ ಕೈಗಳನ್ನು ಶುಭ್ರವಾಗಿ ತೊಳೆಯಿರಿ. ಕ್ರಿಮಿನಾಶಕಗಳನ್ನು ಸಿಂಪಡಿಸುವಾಗಾಗಲೀ ಎರಚುವಾಗಾಗಲೀ ತಲೆಗೆ ಬಟ್ಟೆಸುತ್ತಿರುವುದು ಒಳ್ಳೆಯದು.

೬) ಗಾಳಿಗೆ ಎದುರಾಗಿ ನಿಂತು ಸಿಂಪಡಿಸಬೇಡಿ; ಮಕ್ಕು ಸಿಂಪಡಿಸುವಾಗ ಆದಕ್ಕೆ ಅಭಿಮುಖವಾಗಿ ಮುಖಮಾಡಿ ನಿಲ್ಲಬೇಡಿ.

೭) ಸಿಂಪಡಿಸುವ ಕಾರ್ಯದಲ್ಲಿ ತೊಡಗಿರುವಾಗ ತಿಂಡಿ ತಿನಸುಗಳನ್ನು ತಿನ್ನುವುದಾಗಲೀ, ಬೀಡಿ ಎಳೆಯುವುದಾಗಲೀ, ಎಲೆ ಅಡಿಕೆಯುವುದಾಗಲಿ ಇತ್ಯಾದಿಗಳನ್ನು ಮಾಡಕೂಡದು.

೮) ಸಿಂಪಡಿಸಿ ಆದ ಮೇಲೆ ಬಟ್ಟೆಗಳನ್ನು ತೆಗೆದು ಶುಭ್ರಮಾಡಿ ಒಗೆಯಬೇಕು. ಆ ಬಟ್ಟೆಗಳನ್ನು ಇತರ ಬಟ್ಟೆಗಳೊಂದಿಗೆ ಬೆರಸಕೂಡದು.

ಸಿಂಪಡಿಸುವ ಕೆಲಸ ಮುಗಿದ ನಂತರದಲ್ಲಿ ತಲೆ ನೋಯುನುದಾಗಲಿ, ತಲೆ ತಿರುಗುವುದಾಗಲಿ ತೋರಿ ಬಂದರೆ ಕ್ರಿಮಿನಾಶಕಗಳ ಸೋಂಕು ತಗುಲಿದೆ ಎಂದು ತಿಳಿಯ ಬಹುದು. ಕ್ಷಿಪ್ರದಲ್ಲಿ ವಾಂತಿಯಾದರೂ ಆಗಬಹುದು. ಈ ಸೂಚನೆಗಳು ಕಂಡು ಬಂದೊಡನೆಯೇ ಡಾಕ್ಟರಲ್ಲಿಗೆ ಹೋಗಿ, ಕೇವಲ ತಲೆ ನೋಸೆಂದು ಉದಾಸೀನರಾಗಬೇಡಿ ಅದು ವಿಷದ ಸೋಂಕಿನ ಆರಂಭದ ಚಿಹ್ನೆಯಷ್ಟೆ.

ವಿಷದ ಸೋಂಕು ಚರ್ಮಕ್ಕೇನಾದರೂ ತಗುಲಿದ್ದರೆ, ತೊಟ್ಟಿರುವ ಬಟ್ಟೆಗಳನ್ನೂ ಕಳಚಿ ಶುಭ್ರವಾಗಿ ಸ್ನಾನಮಾಡಿ. ಕಣ್ಣಿಗಳಿಗೇನಾದರೂ ತಗುಲಿದ್ದರೆ ಬೊಗಸೆಗಳಲ್ಲಿ ತಿಳಿ ನೀರನ್ನು ತೆಗೆದುಕೊಂಡು ಕಣ್ಣುಗಳನ್ನು ನೀರಿನಲ್ಲಿ ಹದುಬಿಸಿ ರೆಪ್ಪೆಗಳನ್ನ ಮಟ್ಟಿ ಹೆಗೆದು ಮಾಡುತ್ತಾ ತೊಳೆಯಿರಿ. ವಿಷ ವಸ್ತುವು ಹೊಟ್ಟೆಗೆ ಸೇರಿದ್ದರೆ, ಉಪ್ಪಿನ ನೀರನ್ನು ಎರಡು ಮೂರು ಬಾರಿ ಕುಡಿದು ವಾಂತಿಯಾಗುವುದಕ್ಕೆ ಉತ್ತೇಜನ ಕೊಡಿ. ಈ ಕ್ರಮಗಳು ಡಾಕ್ಟರು ಬರುವ ಮುಂಚೆ ಅನುಸರಿಸ ಬೇಕಾದುವುಗಳು.

ಡಾಕ್ಟರು ಬಂದ ಕೂಡಲೆ ವಿಷದ ಸೋಂಕು ಯಾವ ಕ್ರಿಮಿನಾಶಕದಿಂದ ತಗಲಿದೆಯೆಂಬುದನ್ನು ಅವರಿಗೆ ತಿಳಿಸಿ, ಕ್ರಿಮಿನಾಶಕ ಡಬ್ಬಿಯ ಮೇಲಿರುವ ಲೇಬಲ್ಲನ್ನು ಅವರಿಗೆ ತೋರಿಸಿ, ಆನೇಕ ವೇಳೆ ವಿಷದ ಸೋಂಕನ್ನು ತಡೆಗಟ್ಟುವ ಪ್ರಥಮ ಚಿಕಿತ್ಸಾ ವಿಧಾನಗಳನ್ನು ಆ ಲೇಬಲ್ಲುಗಳೇ ಸೂಚಿಸುತ್ತವೆ.

(ಇತೇ ಪುಟದಿಂದ)

ಪ್ರಶಾಂತ ವಾತಾವರಣ ನಿಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ. ಸವಧಾನ, ಸಂತೃಪ್ತಿ ಸೂಚಿಸುವ ಶಿಬಿರದ ನಿವಾಸಿಗಳ ಮುಖಭಾವ, ಶಿಬಿರದಲ್ಲಿ ಯಾವುದೇ ಅನಿಷ್ಟ ಸಂಭವಿಸಿಲ್ಲವೆಂದು ಸಾರಿ ಹೇಳುತ್ತಿದೆ.

ಶಿಬಿರದ ನಿವಾಸಿಗಳ ಅನಿರ್ಬಂಧ ಸಂಚಾರ, ಅಧಿಕಾರಿಗಳೊಂದಿಗೆ ಅವರ ವಿನೋದ ಇನಿತ್ವವನ್ನೂ ಕಂಡು ಶಿಬಿರದಲ್ಲಿ ಪರಸ್ಪರ ಎಷ್ಟೊಂದು ಸೌಹಾರ್ದವಿದೆಯೆಂದು ನಿಮಗೆ ಅನಿಸದಿರದು.

ಹೊಸ ಪುಸ್ತಕ—
ನಚಿಕೇತರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ಪೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

ಅನುಭವ

ಹ್ಂಗಿದೆ ಜೀವನ!

ಬೇಸಗೆಯ ಸಮಯ, ಮುದುವೆ, ಪ್ರವಾಸಗಳಿಂದಾಗಿ ಬಸ್ಸಿಗಾಗಿ ಕಾದು, ಕಾದು ಬೇಸರ ಬರುವಂತಹ ಸಂದರ್ಭ, ಯಾರಲ್ಲಿ ಶಕ್ತಿ, ಸಾಮರ್ಥ್ಯಗಳವೆಯೋ, ಯಾರು ನೂಕು, ನುಗ್ಗಲುಗಳ ಸ್ಪರ್ಧೆಯಲ್ಲಿ ಪರಿಣಿತರಿರುತ್ತಾರೋ ಅಂತಹ ಜನಂಗೇ ಸೀಟು ಸಿಗುವ ಕಾಲ, ನಾವೂ ಕಾದು, ಕಾದು ನಿರಾಸೆಗೊಂದು ಕೊನೆಗೊಮ್ಮೆ ಹೇಗೂ ಟಕೇಟು ದೊರಕಿಸಿಕೊಂಡೆವು. ಆದರೆ ಬಳಿಗೆ ಹೋಗುವಷ್ಟರಲ್ಲೇ ಬಸ್ಸಿನೊಳಗೆ ಜನ ತುಂಬಿಯಾಗಿತ್ತು. ಆಗತಾನೆ ಕೊನೆಗೊಮ್ಮೆ ಸಿಲ್ಲುವಷ್ಟರ ಮಟ್ಟಿನ ಜಾಗ ಪ್ರಯಾಸದಿಂದ ದೊರೆಯಿತು.

ಒಬ್ಬಳು ಮುದುಕಿ, ಮತ್ತೊಬ್ಬಾಕೆ ಬಸುರಿ, ಇನ್ನಿಬ್ಬರು ಮಕ್ಕಳ ತಾಯಂದಿರು, ಅವರೆಲ್ಲ ನಿಂತೇ ಇದ್ದರು

ಆದರೆ....ಶಕ್ತಿ ಸಾಮರ್ಥ್ಯಗಳಿಂದ ಸ್ಥಳ ದೊರಕಿಸಿಕೊಂಡವನು ಗೆಲುವಿನ ನಗ್ಮು ಮುಖದಿಂದ ಒರಗಿ ಕೂಳಿತಿದ್ದರು. ಅವರ ನಗುವಿನಲ್ಲಿ ಹೆಮ್ಮೆ ಮತ್ತು ತಾಚ್ಯ ತುಂಬಿ ತುಳುಕುತಿತ್ತು. ಕಂಡೆಕ್ಟರ್ ಮಹಾಶಯರು ಬಸ್ಸೇರಿದರು.

"ಸ್ವಾಮಿ! ನಾನು ಮುದುಕಿ, ಇವಳು ನನ್ನಸೊಸೆ, ಕೈಯಲ್ಲಿ ಮಗುವಿದೆ. ಕಾಯಿಲೆಯವಳು ಹೇಗೆ ನಿಲ್ಲೋದು? ಏನಾದರೂ ಮಾಡಿ ಕ್ಷಲ್ಪ ಸ್ಥಳ ದೊರಕಿಸಿಕೊಟ್ಟು ಉಪಕಾರಮಾಡಿ"ಎಂದು ವೃದ್ಧೆ ಆಸೆಕಂಗಳಿಂದ, ದೈನ್ಯತೆಯಿಂದ ಕಂಡೆಕ್ಟರ ನತ್ತ ನೋಡಿದಳು.

"ಸಾಕು, ಮುಚ್ಚ್ ಬಾಯಿ ರಗಳೆ ಮಾಡ್ಬೇಡ. ಜಾಗ ನಿಲ್ಲಿಲಿಕ್ಕಾಗದವರು ಬಸ್ಸಾಕೆ ಹತ್ತಿದಿರಿ? ಹೊಂ, ಲೈಟ್..." ಎಂದು ಗುಡುಗಿ ಬಸ್ಸಿನಲ್ಲಿನ ಜನಗಣತಿ ಕಾರಂಭಿಸಿದ.

ಪೊದಲೇ ನಿಲ್ಲುವಾಗಲೇ ಕೈ ಕಾಲು ನಡುಗುವ ಮುದುಕಿ ಬಸ್ಸು ಹೊರಟ ಕೂಡಲೇ ಕುಸಿದು ಬಿದ್ದಳು ಮಗುವಿನ ತಾಯಿ ಚೀರುವ ಮಗುವನ್ನು ಸಂತೈಸುತ್ತಾ ಕಂಗಾಲಾಗಿ ಕಣ್ಣರಳಿಸಿ ನಿಂತಳು. ಬಾರಿ ಹೆಂಗಸು ಕಾರುವುದಕ್ಕೆಂದು ಕಿಟಕಿಯ ಬಳಿಗೋಡಲೆತ್ನಿಸಿದಳು. ಯಾರೂ ಸ್ಥಳಕೊಡದ್ದರಿಂದಲೂ ಬಸ್ಸಿನ ವೇಗದಿಂದಾಗಿ ಬದಿಗೆ ಹೋಗಲಾಗದ್ದರಿಂದಲೂ ವಸ್ತ್ರತುಂಬ ಕಾರಿಬಿಟ್ಟಳು. ಅಲ್ಲಲ್ಲೆ ತಲೆ ತಿರುಗಿ ಅಲ್ಲೇ ಕುಸಿತು ಬಿಟ್ಟಳು.

"ಥೂ....ಅಸಹ್ಯ....ಕೊಳಕು..."

"ಬದಿಗೆ ಹೋದರೇನು ಅಂತ?" ಎಂದು ಕಿಟಕಿಯ ಪಕ್ಕದಿಂದ ಚಲಿಸಲಾರದೆ ಭದ್ರವಾಗಿ ಕುಳಿತಾಕೆ ಗಂಭೀರವಾಗಿ ಗಂನುಡಿದಳು.

"ಮುದುಕಿ ನೋಡಿ, ಕೂತಲ್ಲಿ ಪುನಃ ಬೀಳ್ತಿದೆ. ಅಲ್ಲಿ...ಆದಕ್ಕಾಕೆ ಬಸ್ಸು? ಎಂದು ನಿಕ್ಕರೊಬ್ಬರು.

"ಏ ಹೆಂಗ್ಸೇ...ಮಗುವನ್ನು ಗಟ್ಟಿಯಾಗಿ ಹಿಡ್ಕೋ....ಜಾಗ್ರತೆ." ಕೂತವನೊಬ್ಬ ನಿಂತವಳಿಗೆ ನುಡಿದ.

ಅಷ್ಟರಲ್ಲೇ ಕಂಡೆಕ್ಟರ್ ಸೀಟಿಯೂದಿದ, ಬಸ್ಸು ನಿಂತಿತು.

ಯಾವನೋ ಒಬ್ಬ ಪೇಂಟು, ಕೋಟು ಧರಿಸಿದ ಉಬ್ಬಿದ ಹೊಟ್ಟೆಯ ಕೊಬ್ಬಿದ ಮನುಷ್ಯ, ತನ್ನದೇ ದೇಹಾಕೃತಿಯನ್ನು ಹೋಲುವ ಸಿಂಗರಿಸಿದ ಗೊಂಬೆಯಂತಿದ್ದ ಮಧ್ಯಮ ವಯಸ್ಸಿನ ಮಹಿಳೆಯೊಡನೆ ಬಸ್ಸೇರಿದ.

ಈ ಪರಿಗೂ ಗಡಿಬಿಡಿಯಿಂದ ಗುಡುಗುತ್ತಾ, ಉರಿಗಣ್ಣುಗಳಿಂದ ರೇಗುತ್ತಾ ಇದ್ದ ಕಂಡೆಕ್ಟರನ ಮುಖಭಾವ ಒಮ್ಮಿಂದೊಮ್ಮೆಯೇ ಬದಲಾಗಿ ವಿನಯದ ನಗು ನಗು ಮೂಡಿತು.

"ಹೂ....ಸೇರಿ.... ಸೇರಿ.... ಬದಿಗೆ.... ವಾ ಹುಡುಗಾ.... ನೀನು ನಿಂತ್ಕೋ... ಇನ್ನೂ ಸೇರಿ...ಬೇಗ...ಭಾಜೆ ಬರೋದಿಲ್ವಾ....ಇನ್ನೂ ಆಜೆ....ಆಮ್ಮಾ....ನೀವು ಕೂತ್ಕುಳ್ಳಿ..... ಸ್ವಾವಿಮಿ... ಆಲ್ಲಿ.... ಕೂತ್ಕೊಳ್ಳಿ. ಜನರು ಬೇಗ ಬೇಗ ಬದಿಗೆ ಸರಿದರು. ಪ್ರಯಾಣದಿಂದಲಾದರೂ ಇಬ್ಬರಿಗೂ ಸ್ಥಳ ದೊರೆಯಿತು..

ಇದೀ ಟಿಕೇಟಿನ ಇಬ್ಬರು ಹುಡುಗರು ನಿಂತಲ್ಲಲ್ಲಿದೆ ಉಳಿತವರೂ ಬೇಗ ಬೇಗ ಸ್ಥಳ ಮಾಡಿಕೊಟ್ಟರು.

ನಿಂತು ಸೋತ ಬಡಪಾಯಿಗಳು ಬೆರಗುಗಣ್ಣುಗಳಿಂದ ನೋಡುತ್ತಲೆ ಇದ್ದರು

—ಶ್ರೀಮತಿ ಯಶೋದಾ
ಯನ್. ಜೆನ್ನಿ.

ನಾಡ ತಾಯಿಯ ಕರೆ

ನಾಡ ಬಾಂಧವರೆಲ್ಲ ಓಡಿ ಬನ್ನಿ।
ನಾಡ ತಾಯಿಯ ಕಷ್ಟ ನೋಡಿ ಬನ್ನಿ
ಒಗ್ಗಟ್ಟಿನಿಂದ ಮುನ್ನುಗ್ಗಿ ಬನ್ನಿ
ಸೇವೆಯವಕಾಶಕ್ಕೆ ಹಿಗ್ಗಿ ಬನ್ನಿ
ಹೊಲದಿಂದ ಕೆಲದಿಂದಲೊಗೆದು ಬನ್ನಿ
ಛಲದಿಂದ ಬಲದಿಂದ ನೆಗೆದು ಬನ್ನಿ
ಉತ್ತರದ ಎತ್ತರದಿ ನಿಂದೆನ್ನಿ
ಸತ್ತರಲ್ಲೇ ಸ್ವರ್ಗ ಕಾಂದೆನ್ನಿ
ಪೌರುಷದ ಕೆಡಿಯೂಗಿ ಸಿಡಿದು ಬನ್ನಿ
ಸ್ವಾತಂತ್ರ್ಯವಾಣಿಯು ನುಡಿದು ಬನ್ನಿ
ಧನ ಕನಕ ವಸ್ತುಗಳ ಕೀಡೆ ಬನ್ನಿ
ತನು ಮನದಿ ಸೇನೆಯಂ ಮಾಡೆ ಬನ್ನಿ
ಕೈಲಾಸವನು ದಾಟಿ
ಕೈಲಾಗದಿಹ ಕಾರ್ಯ
ಕೈಗೊಂಡವರ ನೆನೆಪಿಲ್ದೆದ್ದು ಬನ್ನಿ
ಇದ ಶಕ್ತಿಗಳನೆಲ್ಲ ಒದ್ದು ಬನ್ನಿ
ಕಡೆ ತನಕ ಕಾದಲಿಕೆ ಸಿದ್ಧರೆನ್ನಿ
ಧೈರ್ಯ ಸಾಹಸಗಳನು ತೋರಿ ಬನ್ನಿ
ಸ್ವಾರ್ಥ ಮತ್ಸರಗಳನು ಮೀರಿ ಬನ್ನಿ
ಸ್ವಾತಂತ್ರ್ಯ ದಾರತಿಯ ನೆತ್ತಿ ಬನ್ನಿ
ಭಾರತಾಂಬೆಗೆ ಜಯತು ಜಯತು ಎನ್ನಿ

—ರಮಾನಂದ ಬನಾರಿ,
ಬೇಲಂಪಾಡಿ.

ಅಮೃತ ಬಿಂದು

ವಿರೋಧಿ ಮಾಡಿದ ತಪ್ಪು ಕ್ಷಮಿಸಲ್ಪಡಬಹುದು; ಆದರೆ ಗೆಳೆಯನು ಮಾಡಿದ ತಪ್ಪನ್ನು ಕ್ಷಮಿಸುವದಿಲ್ಲ.

ಅದೃಷ್ಟದಿಂದ ಓಲೈಸಲ್ಪಡುವನನು ಆ ಓಲೈಕೆಯಿಂದಲೇ ತಿಳಿಗೇಡಿಯೂಗಿ ನತದೃಷ್ಟನಾಗುತ್ತಾನೆ.

ನಿದ್ರಿಸುವ ನೋವೂರಿ ನರಿಯು ಸ್ವಪದಚ್ಛಿಯೇ ಕೋಳಿಗಳನ್ನು ಲೆಕ್ಕ ಮಾಡ ಬೇಕಾಗುವದು

ಸಂಪತ್ತು ಗೆಳೆಯರನ್ನು ಶೋಷಾದಿಸುತ್ತದೆ. ವಿಪತ್ತು ಅವರನ್ನು ಪರೀಕ್ಷಿಸುತ್ತದೆ.

ಉತ್ತಮ ತಂದೆ ತಾಯಿಗಳು ದೊರೆಯುವದು ದೈವ ಆಯ್ಕೆ. ಉತ್ತಮ ಗೆಳೆಯರನ್ನು ಸಂಪಾದಿಸುವದು ನಮ್ಮ ಆಯ್ಕೆ.

ಹಳೆಯ ನಾಯಿ, ಹಳೆಸ್ನಾದ ಹೆಂಡತಿ ಮತ್ತು ನಗದ್ದು ಹಣ ಈ ಮೂರು ಎಂದೂ ನೋಷನೂಡದ ಗೆಳೆಯರು.

ಒಳ್ಳೆಯದೇಬ ಕಾರಣಕ್ಕಾಗಿ ಒಳ್ಳೆಯದನ್ನು ಮಾಡುವವನು ಅಪೇಕ್ಷಿಸದೆಯೇ ಕೀರ್ತಿ ಗೌರವಗಳು ಆತನಲ್ಲಿಗೆ ಬರವವು.

ಬಡತನದಿಂದ ಅರಸುತನ ನಿರ್ನಾಮವಾಗುತ್ತದೆ. ಐಶ್ವರ್ಯದಿಂದ ಪ್ರಜಾತಂತ್ರ ಕುಸಿಯುತ್ತದೆ.

ಕೃತಜ್ಞತೆಯೆಂಬುದು ಪ್ರತಿಯೊಬ್ಬರೂ ತಿರಬೇಕಾದ ಕಂದಾಯ ದಂತೆ. ಆದರೆ ಯಾರೂ ಕೂಡಾ ಅದನ್ನು ಅಪೇಕ್ಷಿಸಿ ಬರಾರದು

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:
ಸ್ಥಾಯಿಮಿತ (ಕಂಟ್ರಾಕ್ಟ್) ರೂ
ಕಲಂ ಸೆಂಟಿಮೀಟರಿಗೆ 1-00
ಅಸ್ಥಿಯಮಿತ (ಕಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ:
ವಾರ್ಷಿಕ ಚಂದಾ (ಅಂಚೆಪೆಟ್ಟಿ ಸೇ) ರೂ. 6-75
ಪ್ರತಿ ರೂ 0-13

ಜಾಹೀರಾತುಗಳಿಗೆ ಜಾಹೀರಾತಿನ ಮೂಲಕಗಳಿಗೆ ಸಿಂದಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉದಾಹರಣೆಗಳು, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25).

ವಿ. ಸೂ.—ಆರ್ಡರಿನ ಪುಸ್ತಕದ ಬೆಲೆಯೊಂದಿಗೆ ಪೋಸ್ಟಲು ಖರ್ಚಿಗಾಗಿ 0 =25 NP ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ನುಂಗಲೂರಿನ ಶ್ರೀನಿವಾಸ ಬ್ರದರ್ಸ್, ಸ್ಟೂಡೆಂಟ್ ಬುಕ್ ಕೊ ಕೆನರಾ ಕಾಲೇಜು ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಸಿಟಿ ಇತರಡೆ ಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ ಸಜೀವ ಮತ್ತು ನಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸಸ್ ಲಿ

ಬೆಲೆ: ರೂ 1=75; ಬಿಳಿ ಕಾಗದದ ಕೂಪನ್ನಿನ M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಲಾಗುವುದು

ಮ್ಯಾನೇಜರಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೆಳೆಯನ ಬಿಸಿನೆಸ್

(ಎರಡನೇ ಪುಟದಿಂದ)

ಇನ್ನೇತಕ್ಕೆ ಸಂಶಯ ನಮಗೀಇಸ್ಟ್ ಹೊತ್ತಿನಲ್ಲಿ ನಮಗೋಸ್ಕರವೇ ಕಾದುಕುಳಿತಿರುತ್ತಾರೆ. ನಡೆಯಿರಿ, ಹೋಗುವ, ಎಂದು ಹೇಳಿ ಮುಗಿಸಿದರು. ಆನಂದ್.

'ಆದರೆ ನೀವು ಇನ್‌ಷೂರೆನ್ಸ್‌ನ ಬಗ್ಗೆ ಏನಾದರೂ ತುರುಕಿಸಿದ್ದೀರಾ ಅವನ ಕೈಯಿಗೆ?,

'ಇಲ್ಲಪ್ಪ,.

'ಹಾಗಾದರೆ ಬಜಾವು. ಇಲ್ಲದಿದ್ದಲ್ಲಿ ಇನ್‌ಷೂರೆನ್ಸ್ ಮಾಡಿಸಬೇಕಾಗುತ್ತದಲ್ಲಾ ಎಂದು ಎಷ್ಟಿಗಾದರೂ ಹಲಾಯುವ ಹಾಕಲೂ ಹಿಂದುರಿಯುವ ಮನುಷ್ಯನಲ್ಲಾ ವೈಕುಂಠರಾಯ,.

ಆನಂದರು ಕೊಂಚ ನಕ್ಕರೋ ಏನೋ ನನ್ನ ಮಾತನ್ನು ಕೇಳಿ.

ನಾವಿಬ್ಬರೂ ಮುಂದೆ ಹೆಜ್ಜೆಗಳನ್ನಿಡತೊಡಗಿದೆವು. ಗಲ್ಲಿಯಲ್ಲಿ ಮೂಗಿಗೆ ಕೈಹಿಡಿದುಕೊಂಡು ನುಂದೆ ಸಾಗಿ ಸದಾ ನೀರು ಸುರಿಯುತ್ತಿರುವ ನಲ್ಲಿಯ ಬಳಿ ಬಲಕ್ಕೆ ತಿರುಗಿ, ಬಾಲವಿಧವಾಪ್ರಸೂದ ಮುಂದಿನ ರಸ್ತೆಯಲ್ಲಿ ನಡೆದು ಹೆರಿಗೆಯೂಪ್ಪತ್ರೆಯ ಹಿಂಭಾಗದಲ್ಲಿ ತಿರುಗಿ ವೈಕುಂಠರಾಯನ ಮನೆಯ ಮುಂಭಾಗದಲ್ಲಿ ನಿಂತಾಗ ಬಾಗಿಲಿಗೆ ಹಾಕಿದ್ದ ಬೀಗ ನಮ್ಮನ್ನು ಎಣಿಸುತ್ತಿತ್ತು—ಸೈಕುಂಠರಾಯ ಮನೆಯಲ್ಲಿಲ್ಲ ಈ ಹೊತ್ತಿನಲ್ಲಿ, ಎಂದು ಹೇಳುತ್ತಾ. ಒಬ್ಬರ ಪಕ್ಕದ ಮನೆಯುತ್ತ ನನ್ನ ದೃಷ್ಟಿ ಹರಿಯಿತು. ಒಂದು ಮಗುವಿನ ತಾಯಿಯಾಗಿರಬಹುದಾದ ಹೆಂಗಸೊಂದು ನಿಂತಿತ್ತು. ಆನುಮಾನಾಸ್ಪದವಾಗಿ ನಿಂತಿದ್ದ ನಮ್ಮನ್ನು ಕಂಡು ನಾಚಿ ಅಧವಾ ಹೇಸಿ ಒಳಗೆ ಓಡಿಹೋಗದೆ ಸ್ವಲ್ಪ ಹೊರಗೆ ಬಂದು 'ಏನು ಬೇಕಿತ್ತಾ. ಎಂದು ಕೇಳಿದಳು ನನ್ನನ್ನು ಒರ್ವ ಹೈಸ್ಕೂಲ್ ವಿದ್ಯಾರ್ಥಿಯೆಂದು ತಿಳಿದಿರಬೇಕು ಏನೋ ಅಕೆ. ನಾನು ಬಾಯಿ ತೆರೆಯುವ ನೊದಲೇ 'ಸ್ಟ್ರೈಲ್ಲ, ಹೆರಿಗೆಯ ಆಸ್ಪತ್ರೆಗೆ ಹೋಗಿದ್ದಾರೆ, ಎಂದಳು. ಮೆನದೊಳಗೇ ಮೂಡಿದ ನಗು ಹೊರಚೆಲ್ಲಲಿಲ್ಲ. ಮೇಸ್ಟ್ರ ಹೆರಿಗೆಯ ವಿಚಾರ ಯಾಂಗೆ ತಾನೇ ಬೇಕಾಗಿದೆ? ನಮಗೆ ಬೇಕಿದ್ದ ವ್ಯಕ್ತಿ ವೈಕುಂಠರಾಯನಲ್ಲವೇ? ವೈಕುಂಠಕ್ಕೆ ಹೋಗಿಬಂದರೂ ಆತನ ಪತ್ತೆ ಮಾಡಬೇಕೆಂಬ ನಿರ್ಧಾರ ನನ್ಮಲ್ಲಿ ಮೂಡಿತ್ತು. 'ನಮಗೆ ಮೇಸ್ಟ್ರು ಬೇಡ. ಅದರೆ ಈ ಮನೆಯಲ್ಲಿದ್ದ ವೈಕುಂಠರಾಯ ಎಂಬವರನ್ನು ನೋಡಬೇಕಿತ್ತು. ಆವರಿಲ್ಲವೇ?" ಎಂದು ಕೇಳಿದೆ.

'ಅವರೂ ಇಲ್ಲ, ಎಲ್ಲಿಗೊ ಹೋಗಿದ್ದಾರೆ, ಎಂದು ಹೇಳಿ ಬಾಗಿಲು ಮುಚ್ಚಿದಳು. ಆಕೆ ಮನೆಯೊಳಗೆ ಹೊಕ್ಕಾಗ ಆನಂದ ಲೆಂದರು—'ಆಕೆ ಕಾಲೇಜ್ ಲೆಕ್ಚರರ ಹೆಂಡತಿ ಅಲ್ಲವೇ,—ಎಂದು. 'ಯೂರ ಹೆಂಡತಿಯೇ ಆಗಿರಿ, ನಮ್ಮ ಹೆಂಡತಿಯೂಗುವುದಂತೂ ಬೇಡ ಆಕೆ. ಬನ್ನಿ ವೈಕುಂಠನ ಪತ್ತೆ ಮಾಡುವ, ಎಂದೆ ನಾನು.

ಬೆಳಗಿನ ವಿಹಾರಕ್ಕಾಗಿ ಆತ ತೆರಳಿರಬಹುದು ಎಂಬ ಊಹೆಯುಂಟಾಯ್ತು ನಮಗೆ. ಏಕೆಂದರೆ ಅನಾವಶ್ಯಕವಾಗಿ ಬೆಳೆದ ತನ್ನ ಹೊಟ್ಟೆಯನ್ನು ಕರಗಿಸಲು ವೈಕುಂಠ ಹಗಲೂ ರಾತ್ರಿ ಕಸರತ್ತು ಮಾಡುತಿದ್ದುದನ್ನು ನಾನು ಕೇಳಿಬಲ್ಲೆ. ಬೆಳಿಗ್ಗೆ ಐದು ಘಂಟೆಗೆ ಎದ್ದು ಐದಾರು ಮೈಲಿ ಓಡಲುಗುವುದರೂ ನಡೆಯುವ ಒಳ್ಳೆಯ ಅಭ್ಯಾಸ ಆತನಿಗಿದೆ. ಬಹುಶಃ ಆಂದು ಭಾನ ವಾರವಾದ್ದರಿಂದ ಸ್ವಲ್ಪ ಹೆಚ್ಚು ದೂರ ನಡೆದು ಹೋಗಿರಬಹುದು ಆತ. ಇನ್ನೊಂದು ಕಾಲು ಅಥವಾ ಅರ್ಧ ಘಂಟೆಯಲ್ಲಿ ವಾಪಸ್ಸು ಬರಲೂ ಬಹುದು ಎಂದುಕೊಂಡು ಅರ್ಧ ಘಂಟೆ ಕಾಲ ನಾವಿಬ್ಬರೂ ನೋಡದ ಬೀದಿಗಳೆಲ್ಲೆಲ್ಲ ಕಾಲಾಡಿಸಿ ಬಂನೆವು. ದೂರದೃಷ್ಟಿಯನ್ನು ಒಮ್ಮೆ ದೂರಕ್ಕೆ ಕರಿಸಿ ನೋಡಿದಾಗ ಐಂಬೆಡೆ ನಾಲ್ಕಾರು ಜನಕೊಂದಿಗೆ ಕೈ ಬಾಯಿಗಳನ್ನಾಡಿಸುತ್ತಾ ನಿಂತಿದ್ದ ವೈಕುಂಠರಾಯನನ್ನು ನೋಡಿದ ಹಾಗಾಯ್ತು. ಆದರೆ ರಸ್ತೆಯಲ್ಲಿ ಆತನನ್ನು ಸುಧಿಸಿ ಇನ್‌ಷೂರೆನ್ಸ್‌ನ ವಿಚಾರ ಮಾತನಾಡಿದರೆ ಮನೆಗೆ ಹೋಗುವ ಆಸೆಯನ್ನು ಬಿಡಬೇಕಾದೀತೆಂದುಕೊಂಡು ಆ ಅಭಿಪ್ರಾಯವನ್ನು ಬದಿನಿಸಿ, ಒನ್ ಬೈ ಟೂ ಕಾಫಿಯೆನ್ನು ಗುಟುಕರಿಸಿ ಬಂದು, ಗಾಯಗೊಂಡ ಬಾಲಕ್ಕೆ ನೋಣಗಳು ಮುತ್ತುವಾಗ ನಿಂತಲ್ಲೇ ಸುತ್ತು ಬರುವ ನಾಯಿಯಂತೆ ಅಲ್ಲಲ್ಲೇ ಸುತ್ತಾಡಿದೆವು ಸ್ವಲ್ಪ ಸಮಯ.

ಹೆಚ್ಚು ಘಂಟೆಯ ವೇಳೆಗೆ ಸರಿಯಾಗಿ ಪುನಃ ವೈಕುಂಠರಾಯನ ವ.ನೆಯತ್ತ ತೆರಳಿದೆವು. ಜೈವಶಾರ್ತಿಗಳಿಗೆ ವೈಕುಂಠದ ಬಾಗಿಲು ತೆರೆದಿತ್ತು. ವೈಕುಂಠರಾಯ ಒಳಗಿರುವ ವಾಸನೆ ಬಂತು. ಆತನ ಗೊಚರವೂ ಆಯಿತು ನನಗೆ. ಲೀಲಾಜಾಲವಾಗಿ ಬಾಯಿಯನ್ನು ಕಿವಿಗಳ ವರೆಗೂ ಅಗಲಿಸಿ ನಮಸ್ಕರಿಸಿದೆವು—ವೈಕುಂಠನಿಗೆಉದರಿಂದ ಸ್ವಾಗತಿಸಿ ಕಿಸ್ಸ ಕೊರಡಿಗೆ ಕರೆದೊಯ್ದ ವೈಕುಂಠ ನಮ್ಮಿರ್ವರನ್ನೂ. ಕ್ಷೇಮ ಸಮಾಚಾರಗಳ ವಿಸಿವ ಯವಾಯ್ತು. ಆನಂತರ ವಾಖದಲ್ಲಿ ಆನಂದದ ಗೆರೆಯೊಂದು ಮಿಂಚಿ ಮೂಯವಾದ್ದು ನನ್ನ ಗಮನಕ್ಕೆ ಬಾರದಿಲ್ಲಿ. ನಾವು ಮೂವರೂ ಕುರ್ಚಿ, ಟ್ರಂಕು ಹಾಗೂ ಬೆಡ್‌ಗಳ ಮೇಲೆ ಆರೂಢರಾದೆವು ಬೇಡಗಂಬರದು ಮಾತಿನ ಪಟಾಕಿಗಳು ಹಾರಿದವು. ಅವರಿಬ್ಬರ ಬಾಯಿಗಳಲ್ಲೂ ಸಿಗರೇಟಿನ ಹೊಗೆ ಏಳತೊಡಗಿತು. ಭೂತ ಭವಿಷ್ಯಗಳ ವಿಚಾರ ವಿಮರ್ಶೆಗಳ ದುವು. ತಮ್ಮ ತಮ್ಮ ಹಿರಿಮೆ ಕಿರಿಮೆಗಳ ಬಗ್ಗೆ ವ್ಯಾಖ್ಯಾನೆಗಳು ನಡೆದುವು ಅವರೀರ್ವರ ಚಲನವಲನಗಳನ್ನು ವೀಕ್ಷಿಸುತಿದ್ದ ನನಗೆ ಮಾತನಾಡುವ ಯಾವ ಅವಕಾಶವೂ ದೊರೆಯಲಿಲ್ಲ. ಕಾಲದ ಬೆಲೆಯನ್ನರಿಯದೆ ಸುಮ್ಮನೆ ಬೇಡದ ವಿಚಾರಗಳನ್ನು ಮಾತನಾಡುವುದನ್ನು ಬಿಟ್ಟು ಮುಖ್ಯ ವಿಷಯವಾದ ವಿಮೆಯ ಅಧ್ಯಾಯವನ್ನೇಕೆ ಆನಂದರು ಆರಂಭಿಸಬಾರದು ಎಂದೆನಿಸಿತು ನನಗೆ. ಸ್ವಲ್ಪ ಹೊತ್ತು ಮೌನವೇನೋ ಆವರಿಸಿತು ಕೊಠಡಿಯಲ್ಲಿ ಆನಂದರು ಏನನ್ನೋ ಮಾತನಾಡಲು ಬಾಯಿ ತೆರೆದೊಡನೆಯೇ ವೈಕುಂಠರಾಯ ತನ್ನ ಕೈ ಗಡಿಯಾರ ನೋಡಿ ಬೆಡ್ಡಿಂಗ್‌ನ ಮೇಲಿನಿಂದೆದ್ದು ಅಲ್ಲೇ ಇದ್ದ ದೊಡ್ಡ ಟ್ರಾವ್ಹಲ್ ಒಂದನ್ನು ವಿಶಾಲವಾಗಿ ನೆಲದ ಮೇಲೆ ಹರವಿದ. ನನಗೆ ಇದರ ಅರ್ಥ ಹೊಳೆಯಲಿಲ್ಲ ಬಹುಶಃ ಆನಂದರಿಗೂ ಹೊಳೆದಿರಲಿಕ್ಕಿಲ್ಲ. 'ಬನ್ನಿ ನಂದ್. ನಾವು ಕುಳಿತುಕೊಳ್ಳುನ. ಉಳಿದವರು ಇಷ್ಟರಲ್ಲೇ ಬಂದು ಬಿಡುತ್ತಾರೆ' ಎನ್ನುತ್ತಾ ಎರಡು ಇಸ್ಪೀಟು ಪ್ಯಾಕುಗಳನ್ನು ಹೊರ ತೆಗೆದು ಟ್ರಾವ್ಹಲಿನ ಮೇಲೆ ಎಸೆದ ವೈಕುಂಠರಾಯ. ನನ್ನ ಹುಬ್ಬು ಮೇಲೇರಿತು. ಹಾಗೆಯೇ ಟೆಂಪರೇಚರ್ ಕೂಡಾ ಏರಿರ ಬೇಕು.

ಅಷ್ಟರಲ್ಲೇ ಇತರ ಆಟೀಳು ಜನ ಒಳನುಗ್ಗಿದರು—ಭೂಮಿದಾಹದಿಂದ ಗಡಿಯ ಒಳನುಗ್ಗಿದ ಚೀನೀ ಕುನ್ನಿಗಳಂತೆ. ನನಗೆ ಅವರನ್ನೆಲ್ಲ ನೋಡಿ ಆಶ್ಚರ್ಯವಾಯ್ತು ಕೆಲವರು ಕಾಲೇಜು ಲೆಕ್ಚರರುಗಳು, ಇನ್ನು ಕೆಲವರು ಕಾಲೇಜು ವಿದ್ಯಾರ್ಥಿಗಳು, ಒಬ್ಬಿಬ್ಬರು ಆಫೀಸರುಗಳು ಥಾನುವಾರವನ್ನು ಇಸ್ಪೀಟಾಟಗಳಲ್ಲಿ ಕಳೆಯುವ ಪರಿವಾರ ಅವರಾಗಿರಬೇಕು. ಆದರೆ ಇಸ್ಪೀಟು ಎಲೆಗಳನ್ನು ಅದುವರೆಗೂ ಮುಟ್ಟದಿದ್ದ ನಮ್ಮ ಅವಸ್ಥೆಯಾದರೂ ಏನು? ಅಡಲು ಬರುವುದಿಲ್ಲ ಎಂದರೆ ಅವರ ಗುಂಪಿನಲ್ಲಿ ನಮಗೆ ಮಯೂರವೆಯೂದರೂ ಹೇಗೆ ಸಿಕ್ಕೀತು. ಪರಿಧಿಗೆ ಹೊಂದಿಕೊಳ್ಳದೆ ದೋಣಿಲ್ಲಿ ಅವಮಾನವಲ್ಲವೇ? ಏಂಕೂ ದೇವರನ್ನು ನೋಡ ಹೋದವರ ತಲೆಯು ಮೇಲೆ ದೇವಸ್ಥಾನವೇ ಕಳಚಿ ಬಿದ್ದಂತಾಯ್ತು.

ಕೊನೆಗೂ ಇಸ್ಪೀಟು ಎಲೆಗಳಿಗೆ ಕೈ ಹಾಕಿದ್ದಾಯ್ತು. ಆನಂದರಿಂದ ಗುಟ್ಟಾಗಿ ಪಡೆದ ನಾಲ್ಕಾರು ರೂಪ್ಯಾಗಳು ಎದುರಾಳಿಗಳ ಕಿಸೆಗಳನ್ನು ಸೇರಿದವು. ಚಿಲ್ಲರೆ ಹಣಗಳು ಬೀಳುತ್ತಲೇ ಇದ್ದವು. ಸಿಗರೇಟುಗಳು ಭಸ್ಮವಾಗುತ್ತಲೇ ಇದ್ದುವು. ಬೇಡದ ಮಾತುಗಳು ಗಾಳಿಯಲ್ಲಿ ಸೇರಿ ಹೋಗುತಿದ್ದುವು. ಆದರೆ ದೇವರು ನಮ್ಮ ಕೈಗಳನ್ನು ಪೂರಾ ಬಿಡುತ್ತಾನೆಯೇ? ಆನಂದರು ತಮ್ಮ ಕೈ ಗಡಿಯಾರ ನೋಡಿ "ಅಯ್ಯೋ, ಆಗಲೇ ಘಂಟೆ ಹನ್ನೊಂದೂವರೆ ಆಗಿ ಹೋಯ್ತು ಪಂಡೈಯಂಗಾರ್ಯರ ಮನೆಗೆ ಹೋಗಬೇಕು. ಒಂದು ಆರ್ಜೆಂಟ್ ಕೆಲಸವಿತ್ತು. ಭಟ್ರೇ ಏಳಿ, ಹೋಗುವ ಎಂದು ಹೇಳುವಂತೆ ಮಾಡಿದ ಆ ದಯಾಮಯ ದೇವ. ಇಷ್ಟದಿದ್ದಲ್ಲಿ ಆ ಆಟ ಮುಗಿಯುವಂತಿರಲಿಲ್ಲ.

ವೈಕುಂಠರಾಯ ನಮ್ಮಿಬ್ಬರನ್ನೂನೋಡಿದ ಹಾಗಾದರೆ ಈಗ ನೀವು ಹೋಗುತ್ತೀರಾ? ಪುರಸೊತ್ತಾದಾಗ ಬರುತ್ತಾ ಇರಿ. ಪ್ರತೀ ಥಾನುವಾರ ನಮ್ಮ ಸೆಷನ್ ನಡೆಯುತ್ತಾ ಇರುತ್ತೆ. ಅಲ್ಲದೆ ಇತರ ದಿನಗಳಲ್ಲೂ ಸಂಜೆ ಆರರಿಂದ ಎಂಟರ ತನಕ ನಡೆಯುತ್ತೆ. ಆಗಲಿ ಬನ್ನಿ ಎಂದ

'ತುಂಬ ಸಂತೋಷ. ಬರುತ್ತಾ ಇರುತ್ತೇವೆ. ಇವತ್ತು ತುಂಬ ಹೊತ್ತಾಯ್ತು ನಮಸ್ಕಾರ ಎಂದು ಕೈ ನುಗಿದು ಹೇಳಿ ನಾವಿಬ್ಬರೂ ಹೊರಬಿದ್ದೆವು.

ರಸ್ತೆಯ ವೇಲೆ ಕಾಲಿಟ್ಟಾಗ ಆನಂದರು ನನ್ನೆ ಮುಖ ನೋಡಿದರು. ನಗುವನ್ನು ತಡೆದುಕೊಂಡು 'ಅಯ್ಯಂಗಾರ್ಯರ ಮನೆಗೆ ಹೋಗುವುದು ಬೇಡ. ನಮಗೆ ಇಲ್ಲೇ ಬಿತ್ತಲ್ಲಾ ನಾವು. ಇನ್ನು ನೇರವಾಗಿ ಮನೆಗೆ ಹೋಗುನ, ಸುತ್ತಿ ಸುತ್ತಿ ಸಾಕಾಗಿದೆ ಎಂದೆ ನಾನು.

'ಆದರೆ ಒಂದು ಮಾತು. ಈ ಘಟನೆಯನ್ನು ಯಾರಿಗೂ ಹೇಳಬೇಡಿ ನಮಗೇ ಅವಮಾನವಾದೀತು—ಬಿಸಿನೆಸ್ ಮಾಡಲು ಹೋಗಿ ಇಸ್ಪೀಟು ಆಡಿ ಬಂದರು ಎಂದು ಯಾರಾದರೂ ಹೇಳಿ,—ಎಂದು ನಿನೆಂತಿಸಿಕೊಂದರು ಆನಂದ್

'ಇಲ್ಲಪ್ಪ, ನಾನು ಯಾರ ಹತ್ತಿರ ಹೇಳಹೋಗುತ್ತೇನೆ ಬೇಕಾದರೆ ಅವರೇ ಓದಿಕೊಳ್ಳಲಿ ನಮ್ಮ ಕಂಪೈಂಡ್ ಬಿಸಿನೆಸ್‌ನ ವಿವರಗಳನ್ನು, ಎಂದೆ. ಅವರಿಗೆ ನಗು ಬರಲಿಲ್ಲ. ಆದರೆ ನಿಮಗೆ ನಗು ಬರಬಹುದೋ ಏನೋ ನಮ್ಮ ಅವಸ್ಥೆಯನ್ನು ಕಂಡು.

—ಕು. ಗೋ.

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ
ಇದೀಗ ಸಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ಪಸ್ತವಾವ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೪೦
ರಮಂ ಪ್ರತಿಗಳ ವರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ ಕ

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. 14 CT ಚಿನ್ನದ ಆಭರಣಗಳಲ್ಲಿ ೫೮½% ಶುದ್ಧ ಪುತ್ತಳಿ ಚಿನ್ನ ಇರುತ್ತದೆ. ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ ಪಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರಿಗೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.

ಮದುವೆ ಮುಹೂರ್ತದ ಸಮಯ ಬೇಕಾದ 14 CT ಚಿನ್ನದ Order ಪಡೆದುಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ಕೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ರಾಷ್ಟ್ರ ರಕ್ಷಣೆಯಲ್ಲಿ

ಗ್ರಾಮ ಸ್ವಯಂ ಸೇವಾದಳದ ಪಾತ್ರ

ಪ್ರಧಾನ ಮಂತ್ರಿ ಶ್ರೀ ನೆಹರುರವರು ಈ ವರ್ಷದ ಗಣರಾಜ್ಯ ದಿನದಂದು ಉದ್ಘಾಟಿಸಿದ ಸ್ವಯಂ ಸೇವಾದಳ ಕಾರ್ಯ ಯೋಜನೆಗೆ ರಾಷ್ಟ್ರವ್ಯಾಪಿ ಉತ್ಸಾಹಪೂರ್ಣ ಪ್ರತಿಕ್ರಿಯೆ ಕಂಡು ಬಂದಿದೆ. ರಾಷ್ಟ್ರದ ಮೂಲೆ ಮೂಲೆಗಳಿಂದ ಈಗಾಗಲೇ ಸುಮಾರು ೬೭ ಲಕ್ಷಕ್ಕೆ ಹೆಚ್ಚು ಮಂದಿ ಈ ಕಾರ್ಯ ಯೋಜನೆಯಲ್ಲಿ ಭಾಗವಹಿಸಲು ಸ್ವಪ್ರೇರಣೆಯಿಂದ ಮುಂದೆ ಬಂದಿದ್ದಾರೆ.

ರಾಷ್ಟ್ರದ ಹಳ್ಳಿಗಳಲ್ಲಿ ಗ್ರಾಮಗಳಲ್ಲಿ ಪ್ರತಿಯೊಂದು ಗ್ರಾಮದ ಬೇಸಾಯೋತ್ಪಾದನೆಯನ್ನು ಹೆಚ್ಚಿಸುವುದು. ಸಾರ್ವತ್ರಿಕ ಶಿಕ್ಷಣ ಸಂವರ್ಧನೆ; ಮತ್ತು ನಾಗರಿಕ ರಕ್ಷಣಾ ವ್ಯವಸ್ಥೆಯನ್ನು ಸಂಘಟಿಸುವುದು ಇವು ಗ್ರಾಮೀಣ ಸ್ವಯಂ ಸೇವಾದಳ ಕಾರ್ಯ ಯೋಜನೆಯ ಮೂರು ಮಹೋನ್ನತ ಉದ್ದೇಶಗಳು. ಗ್ರಾಮದಲ್ಲಿನ ನೂರಾರು ಸಹಸ್ರಾರು-ಜನ ಸ್ತ್ರೀ ಪುರುಷರು ರಾಷ್ಟ್ರದ ಬಲಸಂವರ್ಧನೆಗೆ ಪರಮಾವಧಿ ತ್ಯಾಗ ಮಾಡಲು ಗ್ರಾಮೀಣ ಸ್ವಯಂ ಸೇವಾ ದಳವು ಒಂದು ಸಾಧನವಾಗಿದೆ.

ಬಲಿಷ್ಠನಾದ ಹಾಗೂ ಕ್ರೂರನಾದ ಶತ್ರುವು ನಮ್ಮ ರಾಷ್ಟ್ರದ ಗಡಿಯನ್ನು ಉಲ್ಲಂಘಿಸಿದ ಪ್ರಸ್ತುತ ಸಂದರ್ಭದಲ್ಲಿ, ನಾಡಿನ ಗೌರವ ರಕ್ಷಣೆಗಾಗಿ ಪರಮೋಚ್ಚ ವಿಧಿ ತ್ಯಾಗ ಮಾಡಲು ಪ್ರತಿಯೊಬ್ಬ ಧೀರ ತೀಯನೂ ಸಿದ್ಧನಾಗಿದ್ದಾನೆ. ಆದರೆ ನಾಡಿನ ರಕ್ಷಣೆಗಾಗಿ ಎಲ್ಲರೂ ಸೇನೆ ಸೇರಲು ಸಾಧ್ಯವಿಲ್ಲ. ಗಡಿಯಲ್ಲಿ ಹೋರಾಡುತ್ತಿರುವ ನಮ್ಮ ವೀರ ಯೋಧರನ್ನು ದೀರ್ಘಾವಧಿ ಹೋರಾಟಕ್ಕೆ ಅಣಿಗೊಳಿಸಲು ಅಗತ್ಯವಾದ ಸಾಧನ ಸಾಮಗ್ರಿಗಳಿಂದ ಸಜ್ಜುಗೊಳಿಸಲು, ನಾಡಿನ ಲಕ್ಷಾವಧಿ ಜನರು ನಿರಂತರವಾಗಿ ಶ್ರಮಿಸಬೇಕು,

ಯೋಧರಿಗೆ ಅಗತ್ಯವಿದ್ದ ಆಹಾರವನ್ನೇ ಅಲ್ಲ, ತಾಯ್ನಾಡಿನ ರಕ್ಷಣೆಗೆ ಅಗತ್ಯವಾದ ಸಾಧನ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕೆಗಳಿಗಾಗಿ ಕಚ್ಚಾ ಸರಕುಗಳು ಗ್ರಾಮಗಳಿಂದಲೇ ಬರಬೇಕು.

ಭಾರತದ ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮೀಣ ಸೇವಾದಳ ರಚಿಸುವ ಮೂಲಕ ಗ್ರಾಮಗಳಲ್ಲಿನ ಜನಶಕ್ತಿಯನ್ನು ಈ ಅಗತ್ಯಗಳ ಪೂರೈಕೆಗಾಗಿ ತೊಡಗಿಸಬೇಕಾಗಿದೆ

ರಕ್ಷಣಾ ಶ್ರಮ ಬ್ಯಾಂಕ್

ರಕ್ಷಣಾ ಶ್ರಮ ಬ್ಯಾಂಕ್ ಗ್ರಾಮೀಣ ಸ್ವಯಂ ಸೇವಾ ದಳದ ವಿವಿಧ ಜ್ಯ ಅಂಗವಾಗಿದೆ. ಅದು ಗ್ರಾಮದಲ್ಲಿನ ಸಶಕ್ತ ಸ್ತ್ರೀ-ಪುರುಷರು ಸ್ವಯಂ ಪ್ರೇರಣೆಯಿಂದ, ಶ್ರಮ ಬ್ಯಾಂಕ್‌ನಲ್ಲಿ ಸಂಗ್ರಹಿಸಿದ ಕೆಲಸದ ದಿನಗಳಿಂದ "ಗ್ರಾಮಸ್ಥ ಕುಟುಂಬವು" ಪ್ರಯೋಜನ ಪಡೆಯುವಂತೆ ಮಾಡುವ ಒಂದು ವ್ಯವಸ್ಥೆ ಭಾರತದ ಗ್ರಾಮೀಣ ಸ್ವಯಂ ಸೇವಕರು ಕೆಲಸದ ದಿನಗಳನ್ನು, ನೀರಾವರಿ ಉದ್ದೇಶಗಳಿಗಾಗಿ ಕೆರೆ ಕಟ್ಟೆಗಳು ಕಾಲುವೆಗಳನ್ನು ಅಗಿಯಲು, ಅಥವಾ ಕುಡಿಯುವ ನೀರಿನ ಬಾವಿಯನ್ನು ತೋಡುವುದು, ಗಿಡಗಳನ್ನು ನೆಡುವುದು, ಸಾಗುವಳಿಗಾಗಿ ಹಾಗೂ ಇನ್ನು ಹಲವಾರು ಸಾಮುದಾಯಿಕ ಸಂಪದಭಿವೃದ್ಧಿಗೊಳಿಸುವ ಕಾರ್ಯಕ್ರಮಗಳಿಗಾಗಿ ಉಪಯೋಗಿಸಬಹುದಾಗಿದೆ. ರಕ್ಷಣಾ ಶ್ರಮ ಬ್ಯಾಂಕ್‌ಗಳಲ್ಲಿ ಇದುವರೆಗೆ ಸುಮಾರು ಲಕ್ಷ ಕೆಲಸದ ದಿನಗಳನ್ನು ರೇವಣಿ ಇಡಲಾಗಿದೆಯೆಂಬುದು ನಾವೆಲ್ಲರೂ ಹೆಮ್ಮೆ ಪಡಬಹುದಾದ ಸಂಗತಿ.

ಗ್ರಾಮ ಸ್ವಯಂ ಸೇವಾ ದಳವು ನಿರ್ವಹಿಸುವ ಕಾರ್ಯಕ್ರಮಗಳಲ್ಲಿ ಬೇಸಾಯೋತ್ಪಾದನೆಗೆ ಅಗ್ರ ಪ್ರಾಶಸ್ತ್ಯವಿದೆ. ಸಾರ್ವತ್ರಿಕ ಶಿಕ್ಷಣ ಅಭಿವೃದ್ಧಿ, ಹಾಗೂ ಗ್ರಾಮ ರಕ್ಷಣಾ ಕಾರ್ಯಕ್ರಮಗಳೂ ಅತ್ಯಂತ ಮಹತ್ವಪೂರ್ಣವಾಗಿವೆ.

ಸವಂಜಸವಾದ ವರದಿಗಳನ್ನು ಪ್ರಸಾರ ಮಾಡಿ ಸುಳ್ಳು ವದಂತಿಗಳು ಪ್ರಸಾರವಾಗದಂತೆ ಪ್ರತಿಬಂಧಿಸುವುದೇ ಸಾರ್ವತ್ರಿಕ ಶಿಕ್ಷಣದ ಮುಖ್ಯ ಉದ್ದೇಶ. ಗ್ರಾಮ ರಕ್ಷಣೆಯನ್ನು ಸಂಘಟಿಸಲು, ಸ್ವಯಂ ಸೇವಕರಿಗೆ ಪ್ರಥಮ ಚಿಕಿತ್ಸೆ, ಅಗ್ನಿ ಅವಘಡ ಕಾರ್ಯಗಳು ಮತ್ತು ದೈಹಿಕ ಆರೋಗ್ಯ ಸಂಬಂಧವಾದ ವಿಷಯಗಳಲ್ಲಿ ನೀಡಲಾಗುವುದು. ಅವಲ್ಲದೆ, ಸ್ವಯಂ ಸೇವಕರು ಕಾವಲು ಕೆಲಸಗಳನ್ನು ಹಾಗೂ ಸಂಪರ್ಕ ಸಾಧನಗಳ ರಕ್ಷಣಾ ಕಾರ್ಯಗಳನ್ನು ನಿರ್ವಹಿಸಬೇಕಾಗುವುದು.

ಗ್ರಾಮ ಸ್ವಯಂ ಸೇವಾದಳ ಕಾರ್ಯ ಯೋಜನೆಯನ್ನು ಅನುಷ್ಠಾನದಲ್ಲಿ ತರುವುದಕ್ಕಾಗಿ ಪ್ರಾರಂಭಿಕ ಕ್ರಮವೆಂದು ಆರಿಸಲಾದ ಏಕೈಕ ಯುವಕರಿಗೆ ದಳ ಪತಿಗಳು ವಕ್ತ ಉಪದಳಪತಿಗಳೆಂದು ತರಬೇತಿ ನೀಡಲಾಗುವುದು. ಅವರು ತರಬೇತಿ ಮುಗಿಸಿಕೊಂಡು ಗ್ರಾಮಗಳಿಗೆ ಹಿಂತಿರುಗಿ ಬಂದಾಗ ಗ್ರಾಮ ಸ್ವಯಂ ಸೇವಕರಿಗೆ; ಬೇಸಾಯ ಉತ್ಪಾದನೆ, ಸಾಮೂಹಿಕ ಶಿಕ್ಷಣ ಮತ್ತು ಗ್ರಾಮ ರಕ್ಷಣಾ ಕಾರ್ಯಕ್ರಮಗಳನ್ನು ತೀವ್ರ ಅನುಷ್ಠಾನದಲ್ಲಿ ತರುವ ಸಂಬಂಧವಾಗಿ ತರಬೇತಿ ನೀಡುವರು ರಾಷ್ಟ್ರದ ವಿವಿಧ ಕೇಂದ್ರಗಳಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಯುವಕ-ಯುವತಿಯರು ತರಬೇತಿ ಪಡೆಯುವರು,

ಭಾರತದ ಸ್ವಾತಂತ್ರ್ಯ ಯೋಧನಾಗಿ ಸೇವೆ ಸಲ್ಲಿಸುವ ಅವಕಾಶಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಿರುವ ಪ್ರತಿಯೊಬ್ಬ ಗ್ರಾಮ ಸ್ವಯಂ ಸೇವಕನಿಗೆ ವಿಶ್ವವಾಣಿ ಈ ಕಾರ್ಯ ಯೋಜನೆಯು ಒಂದು ವರ ಪ್ರಧಾನವಾಗಿದೆಯೆಂದೇ ಹೇಳಬಯಸುವು.

ಸ್ವಾಲಂಬನೆಯ ಸಫದಲ್ಲಿ

ನೇಫಾದ ಮುನ್ನಡೆ

ಚೀನೀ ಆಕ್ರಮಣದ ಆಘಾತದಿಂದ ನೇಫಾದ ಆನಂತರ ತೀವ್ರ ಚೇತರಿಕೆಯಾಂದು ಅನೇಕ ಮುನ್ನೇಸ್ಯೆರ್ಯ ಸ್ವಸಹಾಯ ಹಾಗೂ ಧೃಡ ನಿರ್ಧಾರಗಳಂತಹ ಉದಾತ್ತ ಗುಣಗಳೆ ನಿದರ್ಶನವಾಗಿದೆ. ಚೀನೀಯರ ಆಕ್ರಮಣ ಕಾಯ್ ಚಟುವಟಿಕೆಗಳು ತವರನ್ನು ವಿನೇಚನಾ ಪರರನ್ನಾಗಿ ಮಾಡಿದೆ ರಾಷ್ಟ್ರದ ರಕ್ಷಣೆಗೆ ತೀವ್ರ ಸಿದ್ಧರಾಗಬೇಕೆಂದು ಅವರೆಲ್ಲರೂ ಈಗ ಯೋಚಿಸುತ್ತಿದ್ದಾರೆ. ನೇಫಾದ ಗುಡ್ಡಗಾಡು ಬುಡಕಟ್ಟಿನ ಜನರಲ್ಲಿ ಅನೇಕರು ಸೇನೆ ಸೇರಲು ಉತ್ಸುಕರಾಗಿದ್ದಾರೆ. ಅವರಾನಿ ಮಕ್ತು ಡಾಫ್ಲಾ ಯುವಕರು ಈಗಾಗಲೇ ಸೇನೆ ಸೇರಿತಮ್ಮ ಯೋಜನೆಗಳನ್ನು ಕೃತಿಗಳಿಸಿದ್ದಾರೆ.

ಗಿರಿಜನರಂಗದ ವಿವೃದ್ಧಿಗಳು ಎನ್. ಸಿ. ಸಿ. ಸೇರಲು ಕಾತುರರಾಗಿದ್ದಾರೆ, ನೇಫಾದಾದ್ಯಂತ ಇಪ್ಪತ್ತರಲ್ಲಿಯೇ ಎನ್. ಸಿ ಸಿ ಕಾರ್ಯ ಯೋಜನೆಯನ್ನು ಆರಂಭಿಸಲಾಗುವುದು.

ತ್ವರಿತ ಅಭಿವೃದ್ಧಿ

ನೇಫಾ ಆಡಳಿತವು ಈ ಪ್ರದೇಶದಲ್ಲಿ ಆಧುನಿಕ ವೈದ್ಯಶಾಸ್ತ್ರ, ಬೇಸಾಯ, ಶಿಕ್ಷಣ, ವಿಜ್ಞಾನ ಮತ್ತು ತಂತ್ರ ಶಾಸ್ತ್ರಗಳ ಸಾಲಭ್ಯ ಳನ್ನು ಒದಗಿಸಲು ಯತ್ನಿಸುತ್ತಿದೆ. ಹೀಗೆ ಯತ್ನಿಸುವಾಗ ಗಿರಿಜನರ ಜೀವನದ ಮೌಲ್ಯಗಳಿಗೆ ಧಕ್ಕೆಯುದೇ ವಿಧವಾದ ವ್ಯಯ ಒದಗದಂತೆ ನೋಡಿಕೊಳ್ಳಲಾಗುತ್ತಿದೆ.

ನೇಫಾದ ಎಲ್ಲ ಡಿವಿಜನ್‌ಗಳಲ್ಲಿ ತ್ವರಿತ ಗತಿಯಿಂದ ಪ್ರಗತಿ ಸಾಧಿಸುತ್ತಿವೆ. ಅಧಿಕ ಸಂಖ್ಯೆಯಲ್ಲಿ ಆಸ್ಪತ್ರೆಗಳು, ಶಾಲೆಗಳು, ವೃತ್ತಿ ಶಿಕ್ಷಣ ಕೇಂದ್ರಗಳು, ಪ್ರಾಯೋಗಿಕ ಬೇಸಾಯ ಕೇಂದ್ರಗಳು ಸ್ಥಾಪಿತವಾಗುತ್ತಿವೆ ಪಾಸೀಘಾಟ್‌ನಲ್ಲಿರುವ ಆಸ್ಪತ್ರೆಯಲ್ಲಿ ಶಯ್ಯೆಗಳ ಸಂಖ್ಯೆಯನ್ನು ೬೦೦ರಿಂದ ೧೫೦೦ರ ವರೆಗೆ ಹೆಚ್ಚಿಸಲಾಗುತ್ತಿದೆ. ಈ ಆಸ್ಪತ್ರೆಯಲ್ಲಿ ದಾಯಿಗಳಿಗೆ ಹಾಗೂ ಪ್ರಯೋಗಾಲಯಗಳ ಸಹಾಯಕ ಸಿಬ್ಬಂದಿಗೆ ತರಬೇತಿ ಕೊಡಲಾಗುತ್ತಿದೆ.

ಬಿ. ಸಿ. ಜಿ. ತಂಡಗಳು ಹಾಗೂ ಸಿಡುಬು ನಿರ್ಮೂಲನಾ ಕಾರ್ಯ ಯೋಜನೆಯ ತಂಡಗಳಲ್ಲದೆ, ಈಗ ನೇಫಾದಲ್ಲಿ ಇಂಕ್ಕೂ ಹೆಚ್ಚು ಸಂಚಾರಿ ಆಸ್ಪತ್ರೆಗಳಿವೆ.

ಗಿರಿಜನರು ಸಹಜವಾಗಿಯೇ ಸಾಂದರ್ಯಪ್ರಿಯರು. ಉತ್ತಮ ಆಭರಣಗಳು ಹಾಗೂ ಮನರಂಜನಾ ಪ್ರವೃತ್ತಿ ಅವರ ಹುಟ್ಟುಗುಣ ಅವರ ಈ ಪ್ರೀತಿಪ್ಪತ್ರವನ್ನು ಕಾರ್ಯರೂಪಕ್ಕೆ ತರುವುದೇ ನೇಫಾದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯ ಚಟುವಟಿಕೆಗಳ ಮುಖ್ಯ ಉದ್ದೇಶ. ಗಿರಿಜನರಿಗೆ ನೇಯ್ಗೆ, ಹೊಲಿಗೆ, ಮರಗೆಲಸ, ಇವೇ ಮೊದಲಾದ ವೃತ್ತಿಗಳಲ್ಲಿ ತರಬೇತಿ ನೀಡಲು ವ್ಯಾಪಕವಾದ ಕಾರ್ಯಕ್ರಮವೊಂದನ್ನು ಆರಂಭಿಸಲಾಗಿದೆ. ಈ ಕಾರ್ಯಕ್ರಮವೊಂದ ನೇರೆಗೆ ಸುಮಾರು ೧೫,೦೦೦ಕ್ಕೂ ಹೆಚ್ಚು ಮಂದಿ ತರಬೇತಿ ಪಡೆದಿದ್ದಾರೆ ಮತ್ತೆ ೪೦೦೦ ಜನ ಈಗ ತರಬೇತಿ ಪಡೆಯುತ್ತಿದ್ದಾರೆ.

ನೇಫಾಕ್ಕೆ ಭೇಟಿ ನೀಡುವವರ ಮನಸ್ಸಿನ ಮೇಲೆ ಅಲ್ಲಿನ ಯುವಜನಾಂಗದ ಸುಶಿಕ್ಷಿತವರ್ಗವು ತೋರಿಸುತ್ತಿರುವ ಅಮಿತ ಉತ್ಸಾಹ, ಲವಲವಿಕೆ ಮತ್ತು ಸೌಹಾರ್ದ ಬೀರುತ್ತದೆ,

ಕಮಿಂಗಿನಲ್ಲಿ ಮೊನ್ಪಾ ಮಕ್ಕಳಿಂದ ಜಾನಪದ ನೃತ್ಯ

REGD. No. B. G. 176
LICENCE No. 31
Licensed to Post without Prepayment

ನಿನುಗೂ ಗೊತ್ತಿರಲಿ

ಡಾಲರಿನ ಮೂಲ ಯಾವುದು?

ಪ್ಯಾಗ್ ನಗರದ ಲೊರೆಟ್ಟ ವಸ್ತು ಸಂಗ್ರಹಾಲಯದಲ್ಲಿ ಇತ್ತೀಚೆಗೆ ಒಂದು ನಾಣ್ಯ ಪ್ರದರ್ಶನ ನಡೆಯಿತು ಅದು ಅತ್ಯಂತ ಬೋಧಪ್ರದವಾಗಿತ್ತು. ೫೫೦ ವರ್ಷಗಳ ಹಿಂದೆ ಸ್ಥಾಪಿತವಾದ, ೫೦೦ ಜನ ಸದಸ್ಯರುಳ್ಳ ಕಲಾಸಂಸ್ಥೆಯು ಈ ಪ್ರದರ್ಶನವನ್ನು ಏರ್ಪಡಿಸಿತ್ತು. ರಾಷ್ಟ್ರೀಯ ನಾಣ್ಯಸಂಗ್ರಹ ಸಂಸ್ಥೆಯಲ್ಲಿ ೧೯೦೦ ಜನ ಸದಸ್ಯರಿವ್ವಾರೆ. ಅವರೂ ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ನಾಣ್ಯ ಪರಿಚಯವನ್ನು ಕೇವಲ ಹವ್ಯಾಸವಲ್ಲ. ಅದೀಗ ಒಂದು ವಿಜ್ಞಾನ. ಪ್ಯಾಗಿನ ಚಾರ್ಲ್ಸ್ ವಿಶ್ವವಿದ್ಯಾಲಯದಲ್ಲಿ ಅದಕ್ಕೊಂದು ಆಚಾರ್ಯ ಪೀಠವೂ ಇದೆ.

ಈ ನಾಡಿನಲ್ಲಿ ಯಾವ ಕಾಲದಲ್ಲಿ ಯಾವ ಯಾವ ನಾಣ್ಯಗಳು ಬಳಕೆಯಲ್ಲಿದ್ದುವೆಂಬ ವಿಷಯವನ್ನು ಸ್ಪಷ್ಟವಾಗಿ ಚಿತ್ರಗಳ ಮೂಲಕ ನಿವರಣೆಗಳ ಮೂಲಕ ಇಲ್ಲಿ ಪ್ರಕಟಿಸಲಾಗಿದ್ದು, ಅದು ಇತಿಹಾಸವನ್ನು ತಿಳಿಸುತ್ತಿತ್ತು.

ಮೊದಲು ಕಾಣತ್ತಿದ್ದುದು ಗ್ಲಾವರ ಕಾಲಕ್ಕಿಂತ ಮೊದಲಿನ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳು. ೧೫೦೦ ವರ್ಷಗಳ ಹಿಂದೆಯೂ ಸಹ ಈ ನಾಡಿನ ಜನರು ಪ್ರಾಚ್ಯಖಂಡದೊಡನೆ ವಾಣಿಜ್ಯ ಸಂಬಂಧವಿಟ್ಟುಕೊಂಡಿದ್ದರೆಂಬುದನ್ನು ಈ ರಾಜರ ನಾಣ್ಯಗಳು ತೋರಿಸುತ್ತಿದ್ದುವು ಗ್ಲಾವ್ ವಲಸೆಗಾರರು ಪ್ರಥಮ ಬೊಲೆಗ್ಲಾವ್ ದೊರೆಯ ಕಾಲದಲ್ಲಿ (ಕ್ರಿ. ಶ. ೧೦೫೫) ತಮ್ಮ ಮೊದಲನೆಯ ನಾಣ್ಯವನ್ನು ತಯಾರಿಸಿದರು. ಮಧ್ಯ ಯುಗದಲ್ಲಿ ಪ್ರಾಗ್‌ಟಂಕಶಾಲೆಯಲ್ಲಿ ತಯಾರಾದ ವಿನಾಶ ಬೆಳ್ಳಿ ನಾಣ್ಯಗಳು ಇಡೀ ಮಧ್ಯ ಯುರೋಪಿನಲ್ಲಿ ನಾಣ್ಯ ಪ್ರಮಾಣವಾಗಿದ್ದುವು.

೧೫ನೆಯ ಶತಮಾನದಲ್ಲಿ ಒಂದು ವಿಚಿತ್ರ ಪರಿವರ್ತನೆಯುಂಟಾಯಿತು. ನಾಣ್ಯಗಳನ್ನು ಕಾಗದದಷ್ಟು ತೆಳುವಾದ ಬೆಳ್ಳಿಯ ಪದಕ ಬಿಲ್ಲೆಗಳ ಮೇಲೆ ಅಚ್ಚು ಮುದ್ರೆಯೊತ್ತಿ ಮಾಡಲಾಯಿತು. ಇವು ಈಗ ಅಪರೂಪವಾಗಿವೆ. ೧೫ನೆಯ ಶತಮಾನದಲ್ಲಿ ಪ್ರಾಗ್‌ಗ್ರೋಟೆ'ನಾಣ್ಯಬಳಕೆಗೆ ಬಂದಿತ್ತು. ೧೫೧೦ ರವರೆಗೆ ಅದು ಮುಖ್ಯ ಯುರೋಪಿನ ಮೂದಲ ನಾಣ್ಯವಾಗಿತ್ತು.

೧೬ನೆಯ ಶತಮಾನದ ಆದಿಭಾಗದಲ್ಲಿ ಬೊಹೀಮಿಯದ ದೊರೆ ಮೊದಲನೆಯ ಲೂಡ್ರಿಗ್ ತನ್ನ ರಾಜ್ಯದಲ್ಲಿದ್ದ ಗಣಿ ಮಾಲಿಕ ಜಿಂದ್ರಿಚ್‌ಸ್ಟಿಲ್ಸ್ ಎಂಬಾತನಿಗೆ ಆತನ ಗಣಿಯ ಬೆಳ್ಳಿಯಿಂದ ನಾಣ್ಯ ತಯಾರಿಸಲು ಅನುಮತಿಯನ್ನೂ ನೀಡಿದನು. ಆ ಗಣಿ ವ್ಯಾಗಿನಿಂದ ಅಖಾ ಮೈಲಿ ದೂರದ ಜೋಕಿಂಸ್ತಾಲಿನಲ್ಲಿತ್ತು. ಆತನು ತಯಾರಿಸಿದ ನಾಣ್ಯವು ಒಂದು ಬದಿಗೆ ದೊರೆಯ ತಲೆ—ಎದೆ ಚಿತ್ರವನ್ನೂ, ಇನ್ನೊಂದು ಕಡೆ ಆತನ ಸ್ವಂತ ಲಾಂಛನವನ್ನೂ ತೋರಿಸುತ್ತಿತ್ತು. ಈ ಹೊಸ ನಾಣ್ಯವನ್ನು ಜನರು ಜೋಕಿಂಸ್ತಾಲರ್ ಎಂದು ಕರೆಯತೊಡಗಿದರು. ಈ ಹೆಸರು ಕ್ರಮೇಣ ಹ್ರಸ್ವಗೊಂಡು ಸ್ತಾಲರ್ ಆಯಿತು ಇಂಗ್ಲಿಷಿನಲ್ಲಿ ಅದು 'ಡಾಲರ್' ಆಯಿತು ಅದು ಸ್ವಲ್ಪ ಹೆಚ್ಚು ಕಡಮೆ ಈಗಿನ ಡಾಲರಿನಷ್ಟೇ ಇದ್ದಿತು. ೧೩ ಅಮೆರಿಕನ್ ವಸಾಹತು ರಾಜ್ಯಗಳು ಸ್ವಾತಂತ್ರ್ಯ ಸಾಧಿಸಿಕೊಂಡ ತರುವಾಯ, ಈ ಡಾಲರನ್ನು ತನ್ನ ನಾಣ್ಯವಾಗಿ ಮಾಡಿಕೊಂಡುವು. ಆ ವೇಳೆಗೆ ಡಾಲರಿಗೆ ಅಂತಾರಾಷ್ಟ್ರೀಯ ಪ್ರಮಾಣದ ಸ್ಥಾನ ದೊರೆತಿತ್ತು.

ಈಗ ಜೆಕೊಸ್ಲೊವಾಕಿಯಾದಲ್ಲಿ ಕ್ರೌನ್ ನಾಣ್ಯ ಬಳಕೆಯಲ್ಲಿದೆ. ಗತ ಶತಮಾನಾಂತ್ಯದಲ್ಲಿ ಸಾಮ್ರಾಜ್ಞಿ ಮೊದಲನೇ ಮರಿಯಾನ್ ಸಾಮ್ರಾಜ್ಯವು ಕ್ರೌನುಗಳನ್ನು ಚಲಾಯಿಸತೊಡಗಿತು. ೧೯೧೮ರಲ್ಲಿ ಜೆಕೊಸ್ಲೊವಾಕಿಯ ಸ್ವತಂತ್ರವಾದಾಗ, ಹಿಂದಿನ ನಾಣ್ಯದ ಮೇಲೊಂದು ಚೀಟಿ (ಸ್ಟ್ಯಾಂಪ್) ಅಂಟಿಸಿ, ಚಲಾವಣೆಗೆ ತರಲಾಯಿತು. ಈ ಮಧ್ಯೆ ಹೊರ ದೇಶಗಳಲ್ಲಿ ಬ್ಯಾಂಕ್ ನೋಟುಗಳನ್ನು ಮುದ್ರಿಸಲಾಯಿತು. ಈಗ ಜೆಕೊಸ್ಲೊವಾಕಿಯವೇ ವಿದೇಶಗಳಿಗಾಗಿ ಬ್ಯಾಂಕ್ ನೋಟುಗಳನ್ನು ಮುದ್ರಿಸುತ್ತಿದೆ.

ಯುದ್ಧಕಾಲದಲ್ಲಿ ಬೊಹೀಮಿಯ, ಮೊರಾವಿಯ ಮತ್ತು ಸ್ಲೊವಾಕಿಯಗಳಲ್ಲಿ ನಾತ್ಸಿ ಆಕ್ರಮಣಕಾರರು ಬೇರೆ ಬೇರೆ ನಾಣ್ಯಗಳನ್ನು ಚಲಾಯಿಸಿದರು. ನಾವಿರಾರು ಜನ ಯಹೂದೀಯರ ತೆರಿಜಿನ್ ಶಿಬಿರದಲ್ಲಿದ್ದಾಗ ನಾತ್ಸಿಗಳು ಅವರಿಗಾಗಿ ಪ್ರತ್ಯೇಕ ಬ್ಯಾಂಕ್ ನೋಟುಗಳನ್ನು ಚಲಾಯಿಸಿತ್ತಿದ್ದರು. (ಹತ್ತಾರು ಸಾವಿರ ಜನರನ್ನು ಆಗ ಇಲ್ಲಿಂದ ಹೊರ ದೇಶಗಳಿಗೆ ಕೊಂಡೊಯ್ದು ತೀರಿಸಿಬಿಡಲಾಯಿತು) ಈ ನೋಟುಗಳ ಮೇಲೆ ಮೋಸೆಸ್ ಚಿತ್ರವನ್ನೂ, ಹತ್ತು ಆಜ್ಞೆಗಳನ್ನೂ ಅವರ ಪಕ್ಕದಲ್ಲಿ ಡೇವಿಡ್ಡನ ತಾರೆಯನ್ನೂ ಮುದ್ರಿಸಲಾಗಿತ್ತು. ಬೋಟಾನೊ ಟು ತಯಾರಿಸುವವನಿಗೆ ಉತ್ತಮ ಶಿಕ್ಷೆಯೂಗುವುದೆಂದು ವಿಚಿತ್ರ ಎಚ್ಚರಿಕೆಯನ್ನೂ ಮುದ್ರಿಸಲಾಗಿತ್ತು!

ಆದೇ ವೇಳೆಯಲ್ಲಿಯೇ ಪ್ರೊಟಿವಿನ್ ಪಟ್ಟಣದಲ್ಲಿ ತಯಾರಿಸಲಾಗಿದ್ದ ಒಂದು ವಿಶಿಷ್ಟ ನಾಣ್ಯವನ್ನು ಒಂದು ಕಿಲೊಗ್ರಾಂ ರೊಟ್ಟಿಗಾಗಿ (ರೇಷನ್ ಟಿಕೆಟ್ಟಾಗಿ ಬಳಸಲಾಗುತ್ತಿತ್ತು.

ಯುದ್ಧ ಕಾಲದಿಂದೀಚೆಗೆ ಸಂಪೂರ್ಣ ತಃ ಹೊಸ ಶ್ರೇಣಿಗಳ ನಾಣ್ಯಗಳನ್ನೂ, ಬ್ಯಾಂಕ್ ನೋಟುಗಳನ್ನೂ ಚಲಾವಣೆಗೆ ತರಲಾಗಿದೆ ಅತ್ಯಂತ ಇತ್ತೀಚಿನ ಜೆಕೊಸ್ಲೊವಾಕ್ ಕ್ರೌನ್ ನಾಣ್ಯವನ್ನು ೧೯೬೩ರಲ್ಲಿ ಮುದ್ರಿಸಲಾಗಿದ್ದು, ಅದರಲ್ಲಿ ಜೆಕೊಸ್ಲೊವಾಕ್ ಗಣರಾಜ್ಯದ ನೂತನ ಲಾಂಛನವಿದೆ—ಎರಡು ಬಾಲದ ಸಿಂಹ; ಅದರ ಕೆಳಗೆ ಟಿವಿಲ್ಲ; ಐದು ಮೂಲೆಯ ನಕ್ಷತ್ರವಿದೆ—ಇನ್ನೊಂದು ಪಾರ್ಶ್ವದಲ್ಲಿ 'ಲಿಂಡೆನ್' ಸಂಖ್ಯೆಯ ರೆಂಬೆಯನ್ನು ಹಿಡಿದಿರುವ ಮಹಿಳೆಯ ಸಾಂಕೇತಿಕ ಚಿತ್ರವಿದೆ.



ವಿಶ್ರಾಂತಿಗಾಗಿ ಕಾಶ್ಮೀರಕ್ಕೆ ತೆರಳಿದ ಪ್ರಧಾನಿ ನೆಹರು

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವುದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ —

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

ತಿರುಪತಿಗಳ್ಳಿ ಮೂತನಾಡಿಕೊಂಡವು



ಅಂದಾದ ವಿಸುವಲ್ಲಿ ಬೇಕೊಡಗಿತು ಮೊದಲು ಮುಗಿಲ ತುಂಡಿ
ಪಯಣಕ್ಕೆ ತೊಡಗಿದವು ಅಲ್ಲಲ್ಲಾಂದು ಮಿಂಚು, ಘರ್ಜಿಸಿದು ಗುಡುಗು
ಕೆಳಮುಂದ ಬಂದ ಶ್ರೀಕೃಷ್ಣನು ಮಳಗೆ ಚಾಮ್ಲುಬ್ಬು ಚಾಕಳಿ ನೋಡ
ತೊಡಗಿದು ಆಗ ರಭಸಗಳ ನಾಲೊಂದು..

"ಅದಕ್ಕೇ ಮಳೆ ಗುರಿಯಲಿಲ್ಲ ಜನತ್ತು ಕ್ಯಾಲ್ಕಾದಲಲಾಗಿ ಮೀಲಿಯ
ಲಿಲಿ ಕೈ ಹೊಸಸೇಗಿಲ ಕೆಲಸಗೆ ಹೊಡಲಿದ್ದಾನೆ ನಾವೂ ನಮ್ಮ
ಆಕ್ರಯವನ್ನು ಸೀದೀಗಾ ಕೆಳಗಾಲದಲ್ಲಿ ಸಂಗ್ರಹಿಸಿದ ತುಂಬುಳಗಳು
ನಮ್ಮ ಅವಶ್ಯಕತೆಗೆ ಸಾಕಾಗುವಷ್ಟುಮಾತ್ರವಂದ ನಾವು ಸಂತೋಷದಿಂದ
ಮಳೆರಾಯನನ್ನು ಸ್ವಾಗತಿಸೋಣ."

ನಾಲು ಮುಂದೆ ಮುಂದೆ ಸಾಗುತ್ತಿತ್ತು ರವಣಾಯಣ ಸಂಪತ್ತಿನ ಅನಂದ
ರಿಂದ ಕೂಡಿಕೊಂಡು
ರೈತಾಂತಿಯ ಶ್ರೇಷ್ಠತೆಯ ಕುರಿತು ಇರುವೆಗಳಿಗೆ ಮನಕನಾಗಿಕೊಂಡವು

● ಟ್ಯಾಗ್ ● ಕ್ಯಾಮುಲೇಟಿವ್ ● ಲಕ್ಷ್ಮೀಕೇಂ ಸರ್ಟಿಫಿಕೇಟ್
ಇನ್ಸೂರೆನ್ಸ್ ಅಂಡ್ ಸಾಫ್ ಸಂಬಂಧಗಳು

ನಮ್ಮಾನ ಸೇವೆ.... ಸರಿಯಾದ ಭದ್ರತೆ

ಸಿಂಡಿಕೇಟ್ ಬ್ಯಾಂಕ್

ಭಾರತ ಇಂಡಸ್ಟ್ರಿಯಲ್ ಕೆ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪತಾಳ, ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಜೆಕ್ಕಿಲ ಕೃಷ್ಣ ಭಟ್ಟ ಎಲ್.ಬಿ

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H.Shetty. at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd.No. B.G. 176
Vol. 42 No. 43

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 4—7—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೪೩

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿ

ಲಂಚದ ಕಾರುಭಾರು

ಕೇರಳದ ದುರ್ದೈವೀ ಪ್ರಕರಣ

ಪ್ರಜಾಸ್ವಭುತ್ವವಾದೀ ರಾಷ್ಟ್ರಗಳಲ್ಲಿನ ಕೆಲವೊಂದು ಆಂತರಿಕ ಕುರೀತಿಗಳು ದೇಶದ ಭದ್ರತೆ ಹಾಗೂ ಪ್ರಗತಿಗೆ ಬಲವಾದ ಕುಠಾರಪ್ರಾಯವಾಗುವುದೂ ಇದೆ. ಅಯೋಗ್ಯ, ಸ್ವಾರ್ಥಿ ಹಾಗೂ ಅನುಭವ ಹೀನ ಜನರ ಕೈಗೆ ಸರಕಾರ ನಡೆಸುವ ಅಧಿಕಾರ ಬಂದಾಗ ಮಂಗನ ಕೈಗೆ ಮಾಣಿಕ್ಯ ಸಿಕ್ಕಂತಾಗಿ ಅರಾಜಕತೆಯುಂಟಾಗುತ್ತದೆ. ದೇಶದ ಸರ್ವತೋಮುಖವಾದ ಪ್ರಗತಿಗೆ ಇಂದು ನಮ್ಮಲ್ಲಿರುವ ಪ್ರಮುಖ ತಡೆಗಳೆಂದರೆ ನಿಸ್ವಾರ್ಥತೆ; ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಪರಿಶ್ರಮ ಗೈಯ್ಯುವ ಮನೋವೃತ್ತಿ. ಭಾರತವು ಇಂದು ಸಾಂಪತ್ತಿಕವಾಗಿ ಬಡವಾಗಿರುವುದ ಕ್ಕಿಂತ ಉಪರೋಕ್ತ ಗುಣಗಳಲ್ಲಿ ಬಹು ಬಡವಾಗಿದೆ" ಅಧಿಕಾರಿಗಳೇ "ಟೀಲಿಯೇ ಹೊಲವ ಮೆದ್ದಂತೆ" ಮಾಡಿದರೆ ದೇಶದ ಪ್ರಗತಿ ಕೇಗೆ? ಇದರಿಂದಲೇ ಇಂದು ಸರಕಾರದ ಅಧಿಕಾರಿಗಳೆಂದರೆ ಜನರ ಮನಸ್ಸಿನಲ್ಲಿ ವಿರೋಧಭಾವನೆ ಹುಟ್ಟುವಂಥ ಸಾಧನವಾಗಿ ಬಿಟ್ಟಿದ್ದಾರೆ. ಬ್ರಿಟಿಷರು ನಮ್ಮಲ್ಲಿಂದ ತೆರಳಿದ ಬಳಿಕ ನಮ್ಮಲ್ಲಿ ಆಂತರಿಕ ಕಲಹ-ಭಿನ್ನಾಭಿಪ್ರಾಯಗಳು ಬಹಳವಾಗಿ ಬಿಟ್ಟಿವೆ. ಜನತೆಯನ್ನು ಸುಲಿದು ತಮ್ಮ ಮನೆಗೆ ಇನ್ನೊಂದು ಮೂಲೆಗೆ ಕಟ್ಟುವ ಅಧಿಕಾರಿಗಳೂ ಇಂದು ಇದ್ದಾರೆಂಬುದಕ್ಕೆ ನಮ್ಮಲ್ಲಿ ಎಷ್ಟೋ ಪ್ರತ್ಯಕ್ಷ ಉದಾಹರಣೆಗಳು ಘಟಿಸುತ್ತಿವೆ. ಇದಕ್ಕೆ ಕಾರಣವೆಂದರೆ ನಿಸ್ವಾರ್ಥತೆ, ಪ್ರಾಮಾಣಿಕತೆ ಮತ್ತು ಪರಿಶ್ರಮ ಮಾಡುವ ಉತ್ಸಾಹ ಇಲ್ಲದಿರುವುದೇ ಆಗಿದೆ. ಕೇಂದ್ರ ಸರಕಾರದಲ್ಲಿ ಮೂಳವೀಯರು ಲಂಚ ಸ್ವೀಕರಿಸಿದ ಆರೋಪನೆಯ ಮೇಲೆ ರಾಜೀನಾಮೆ ಕೊಡಬೇಕಾದ ಸಂದರ್ಭ ಬಂದಿದ್ದು ನಿಜಕ್ಕೂ ನಮ್ಮ ದೇಶಕ್ಕೆ ತುಂಬಾ ಅಪಹಾಸ್ಯದ ವಿಷಯವಾಗಿದೆ. ಇಂಥದ್ದೇ ಒಂದು ಘಟನೆ ನಮ್ಮ ಕೇರಳದಲ್ಲಾದ್ದುದು ಮತ್ತು ಜನರೆಲ್ಲರ ಕುತೂಹಲ ಕೆರಳಿಸಿದೆ.

ಅಧಿಕಾರ ವ್ಯಾಮೋಹ

ಸ್ವಲ್ಪ ಸಮಯದ ಹಿಂದೆ "ಲಂಚ" ಎಂಬುದು "ಬೂದಿ ಮುಚ್ಚಿದ ಕೆಂಡದಂತೆ" ಇದ್ದರೂ ಈಗ ಸಕ್ಯ ಸ್ಥಿತಿ ಬಯಲಾಗಿದೆ. ಮುಂಧ್ರಾಪ್ರಕರಣದ ನಂತರ ನಮ್ಮ ಅಧಿಕಾರಿಗಳು "ಅಧಿಕಾರದ ಮೇಲಿನ ವ್ಯಾಮೋಹ ಅದಕ್ಕಾಗಿ ಲಂಚ ಸ್ವೀಕರಿಸುವ ಕಳಿಸಿತ್ಸಮನೋವೃತ್ತಿಗಳು ಅವರ ಗೌರವಕ್ಕೆ ಧಕ್ಕೆ ತಂದಿವೆ. ಇಂದು ಯಾವುದೇ ರಾಜ್ಯದ ಕಾಂಗ್ರೆಸ್ಸಿನಲ್ಲಿ ಒಳಜಗಳವಿಲ್ಲದಿರುವುದನ್ನು ಕಾಣದಿರಿ. ಇದಕ್ಕೆ ಈಗ ಪ್ರತಕ್ಷ ಉದಾಹರಣೆಯೆಂದರೆ ಕೇರಳ ಮುಖ್ಯ ಮಂತ್ರಿಗಳ ಮೇಲೆ ಆಗಿರುವ ಲಂಚದ ಆರೋಪನೆಸ್ಸಿಪ್ಪಟೆ ಸೂದ ಜನತೆಯನ್ನು ವಂಚಿಸುವ ಇಂದಿನ ಹಲವು ಮಂತ್ರಿಗಳ ಆಟ ಬಯಲಾಟವಾಗುತ್ತಿದೆ. ಲಂಚ ಸ್ವೀಕರಿಸಿ ಮುಂದೆ ಬುದ್ಧಿವಂತರಾಗಿರುವ ಜನ ಅಧಿಕಾರಿಗಳಾದರೆ ರಾಷ್ಟ್ರರಾಜ್ಯಕ್ಕೆ ಯೋಗ್ಯ ಗಾಂಧಿಯೂದಂತೆಯೇ. ಸರಿ. ನಮ್ಮ ಅಧಿಕಾರಿಗಳು ತಮ್ಮ ಸ್ಥಾನಕ್ಕೆ ಅನುಕೂಲವಾದ ಮಾನ-ಮರ್ಯಾದೆ, ಗೌರವಗಳನ್ನು ಕಾಪಾಡಿಕೊಂಡು ಬರಬಿದ್ದರೆ ಇಂದು ಕೇರಳದ ಮಂತ್ರಿಗಳ ಮೇಲೆ ಅದಂತಹ ಪ್ರತ್ಯಕ್ಷ ಆರೋಪವಾಗುವುದರಲ್ಲಿ ಸಂಶಯವೇ ಇಲ್ಲ. ಇಂದು ನೆಹರೂರವರು ನಿಸ್ವಾರ್ಥಿಯಾಗಿದ್ದಿವರು. ಅವರ ಮಂತ್ರಿ ಮಂಡಲದಲ್ಲೇ ಲಂಚ ಸ್ವೀಕರಿಸುವಂತಹ ಪ್ರತ್ಯಕ್ಷ ಘಟನೆಗಳು ಜರಗುವುದು ಬಹು ಶೋಚನೀಯವಾಗಿದೆ. ಇಂದು ನಮ್ಮ ಪ್ರಧಾನಿಗಳು ದೇಶಕ್ಕಾಗಿ ನಿಃಸ್ವಾರ್ಥತೆಯಿಂದ ಅಧಿಕಾರ ವ್ಯಾಮೋಹ ತೊರೆದು ದುಡಿಯುತ್ತಿದ್ದರೂ ಅವರ ಹಿಂಬಾಲಕರು ಮಂತ್ರಿ ಮಂಡಲದ ಸದಸ್ಯರು ತದ್ವಿರುದ್ಧವಾಗಿ ವರ್ತಿಸುತ್ತಿರುವುದರಿಂದ ಪಂಡಿತ ನೆಹರೂರವರ ಈ ಎಲ್ಲಾ ಪರಿಶ್ರಮ ಬರೇ ನೀರ ಮೇಲಣ ಹೋಮ ದಂತೆಯೇ ಸರಿ. ಇಂದು ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಒಳ ಜಗಳ, ಅಧಿಕಾರ ವ್ಯಾಮೋಹ ಸ್ವಜನ ಪಕ್ಷಪಾತವೇ ಮೊದಲಾದುವುದಕ್ಕಿಂದ ದೇಶದ ಆಂತರಿಕ ಭದ್ರತೆಯೇ ಛಿದ್ರವಾಗುತ್ತಿದೆ.

ಕೇರಳದಲ್ಲಿ ಲಂಚ ಸ್ವೀಕಾರ

ನಮ್ಮ ನೆರೆರಾಜ್ಯ ಕೇರಳದಲ್ಲಿ ಏನಾದರೊಂದು ವೈಶಿಷ್ಟ್ಯಪೂರ್ಣ ಘಟನೆ ಘಟಿಸುವಾರು ಪ್ರಾಂತ ರಚನೆಯ ಬಳಿಕ ಆಗುತ್ತಲೇ ಇದೆ. ಇಂಥ ವೈಶಿಷ್ಟ್ಯಪೂರ್ಣ ರಾಜ್ಯ ಕೇರಳದಲ್ಲಿ ಈಚೆಗಿನ ಕೆಲವು ವಾರಗಳಿಂದ ಬಹು ವಿಚಿತ್ರವಾದ ಬಿಸಿಬಿಸಿ ಸುದ್ದಿ ಹರಡುತ್ತ ಬರುತ್ತಿದೆ. ಇಂಥ ಬಿಸಿಸುದ್ದಿ ಕೇರಳ ಸರಕಾರದ ಹೊಣೆಗಾರಿಕೆ ಹೊತ್ತ ಮುಖ್ಯ ಮಂತ್ರಿ ಯಾಗೂ ಅವರ ಏಹೆಡ್ಯೋಗಿಗಳ ಕುರಿತೇ ಹೊರಟಿದ್ದು ನಿಜಕ್ಕೂ ಶೋಚನೀಯವಾಗಿದೆ. ಒಬ್ಬಿಕದ್ದರೆ ಸಿಗದಿರಬಹುದು ಆದರೆ ಮತ್ತೆ ಮತ್ತೆಯೂ ಕನ್ನ ಸ್ವಧಾನವನ್ನು ಬಿಡದಿದ್ದರೆ ಗುಟ್ಟುರಟ್ಟಾಗದೆ ಇರಲಾರದು. ಕೇರಳದ ಮುಖ್ಯ ಮಂತ್ರಿ ಶ್ರೀ ಆರ್. ಶಂಕರ ರ ಮೇಲೆ ಲಂಚ ಸ್ವೀಕಾರ ಮಾಡಿದಂತಹ ಆರೋಪ ಬರುತ್ತಿರುವುದು ಇದು ಹೊಸತಲ್ಲ. ಹಿಂದಿನ ಸಲ ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ (ಪ್ರ. ಕಾಂಗ್ರೆಸ್ ಇದೇ ತೆರನ ಟೀಕೆಗೆ ಒಳಗಾಗಿದ್ದುದು ಎಲ್ಲರಿಗೂ ಬಲ್ಲ ವಿಚಾರ. ಆದರೆ ಹಿಂದಿನ ಸಲ ಅವರು ಉಪಾಯದಿಂದ ಜಾರಿಕೊಳ್ಳುವುದರಲ್ಲಿ ಸಫಲರಾಗಿದ್ದರು. ಆದರೆ ಈ ಬಾರಿ ಅಂತಲ್ಲ. ಕೇರಳದ ಕಂಪೆನಿಯೊಂದರಿಂದ ದೊಡ್ಡ ಮೊತ್ತದಲ್ಲಿ ಲಂಚ ಸ್ವೀಕಾರ ಮಾಡಿದರೆಂಬ ಅಪವಾದಕ್ಕೆ ಗುರಿಯಾಗಿ ಅವರು ಇಂದು ಎಡಕತ್ತರಿಯಲ್ಲಿ ಸಿಕ್ಕಿಂತಾಗಿದ್ದಾರೆ "ಅತ್ತ ಹುಕ್ಕ ಇತ್ತ, ಬರೆಯಂತಾಗಿದೆ ಅವರ ಪರಿಸ್ಥಿತಿ. ಕೇರಳದ ಮುಖ್ಯ ಮಂತ್ರಿ ಶ್ರೀ ಆರ್. ಶಂಕರನ್ ಮತ್ತು ಆರ್ಥ ಮಂತ್ರಿ ಶ್ರೀ ದಾನೋದರನ್ನರು ಪ್ರೈವೇಟ್ ಕಂಪೆನಿಯೊಂದರಿಂದ ಅದಕ್ಕೆ ವ್ಯಾಪಾರಭಿವೃದ್ಧಿಗೆ ಪೂರ್ಣ ಅವಕಾಶವನ್ನು ಒದಗಿಸಿ ಗಟ್ಟಾಗಿ ಸುಮಾರು ಒಂದು ಲಕ್ಷವೆಂದು ಹೇಳಲಾಗುತ್ತಿರುವ ಲಂಚ ಭಕ್ಷಿಸಿ"ನ್ನು ಸ್ವೀಕರಿಸುತ್ತಿದ್ದಾರೆ ಎಂಬ ಆರೋಪ ನಿಜವಾದರೆ, ಲಂಚ ಸ್ವೀಕಾರವು ಅನ್ಯಾಯವೆಂದು ಹೇಳಿವ ಈ ರಾಜಕೀಯ ಪ್ರವಚನೆಗಾರರ ಈ ಕೃತಿ ಬಹು ಅಸಹ್ಯಕರವಾಗಿದೆ.

ಲಂಚ ತೆಗೆದುಕೊಂಡರೇ?

ಸುಮಾರು ೧೫ ದಿನಗಳ ಹಿಂದೆ ಕೇರಳದ ಎಸೆಂಬ್ಲಿಯಲ್ಲಿ ವಿರೋಧಿ ಪಕ್ಷಗಳಿಂದ ಪ್ರಸ್ತಾಪಿಸಿ ಕಾತೂಹಲವನ್ನು ಕೆರಳಿಸಿದ ಈ ಘಟನೆ ಬಹು ವೇಗದಿಂದ ದೇಶದಾಂತ್ಯ ತೀವ್ರವಾಗಿ ಪಸರಿಸಿತು. ಎಸೆಂಬ್ಲಿಯಲ್ಲಿ ಸದಸ್ಯರ ಬಾಯಿ ಮುಚ್ಚಿಸಲಾರದೆ ಈ ಪ್ರಕರಣವು ಕಾಂಗ್ರೆಸ್ ಸಮಿತಿಗೆ ಒಪ್ಪಿಸಲ್ಪಟ್ಟು ಭೂಮಿಕ ರೂಪತಾಳಿತು. ಆದರೆ ಇದನ್ನು ಸಾರ್ವಜನಿಕವಾಗಿ ತಿಳಿಯದೆ ವೈಯಕ್ತಿಕವೆಂದು ಪರಿಗಣಿಸಿದಾದರ ಪರಿಣಾಮವಾಗಿ ವಿಷಯ ಸ್ವಲ್ಪ ಸ್ತಬ್ಧವಾಯಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಿ. ಕೆ. ಗೋವಿಂದ ನಾಯರರು ಇದನ್ನು ಯಾವ ರೀತಿಯಲ್ಲಿ ಇತ್ಯರ್ಥಗೊಳಿಸಬೇಕೆಂದು ತಿಳಿಯದಾದರು. ಕಾಂಗ್ರೆಸಿನ ನಾಯಕರೇ ಆಗಿದ್ದವರು ಈ ರೀತಿ ಸ್ವಾರ್ಥಿಗಳಾಗಿ ಲಂಚ ಸ್ವೀಕರಿಸಿದುದು ಅವರಿಗೂ ಸಮ್ಮತ ಬೇಲಿಲ್ಲ. ಅವರೂ ಇದರ ಯೋಗ್ಯ ವಿಚಾರಣೆ ನಡೆಯಬೇಕೆಂದು ನಿರ್ಧರಿಸಿದ್ದಾರೆ. ಆದರೆ ಮಂತ್ರಿ ದ್ವಯರಿಬ್ಬರು ಇದರಬಗ್ಗೆ ತೀರ್ಮಿಕೆಗೆ ಬಹು ನಿರ್ಧಾಯತೆಯಿಂದ ಇಷ್ಟು ಬಿಟ್ಟಿದ್ದಾರೆ. ಅದಕ್ಕೆ ಕಾರಣವೆಂದರೆ ತಾವು ಎಸೆಂಬ್ಲಿಯಲ್ಲಿ ಇದಕ್ಕೆ ತಕ್ಕಿ ಉತ್ತರ ಕೊಟ್ಟಿದ್ದೇವೆ ಎಂದೂ, ಅದರ ಬಗ್ಗೆ ಇನ್ನು ಮುಂದೆ ವಿಚಾರಣೆ ಆಗುವಂಥದ್ದು ಏನೂ ಇಲ್ಲವೆಂದೂ ಅವರ ಅಂಬೋಣ. ಅದರ ಪ್ರಜಾಸತ್ತಾತ್ಮಕವಾದ ರಾಷ್ಟ್ರದಲ್ಲಿ ಈ ತೆರನ ಏಕ ಪಕ್ಷೀಯ ವಾದ ಹೇಳಿಕೆಗಳು ಭೂಷಣವಲ್ಲ ಇದನ್ನು ಅರಿತ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಬೇರೆ ಉಪಾಯಗಾಣದೆ ಇದನ್ನು ಪರಿಹಾರಕ್ಕಾಗಿ ಕೇಂದ್ರಕ್ಕೆ ಒಯ್ಯುವುದೆಂದು ನಿರ್ಧರಿಸಿದ್ದಾರೆ

ನೆಹರೂರವರಿಗೆ ದೂರು

ಮಂತ್ರಿಗಳ ಮೇಲಿನ ಲಂಚದ ಈ ದೂರು ನೆಹರೂರವರಿಂದಲೇ ಇತ್ಯರ್ಥವಾಗ ಬಂದುದು ಎಷ್ಟು ಸೂಕ್ತವೋ ಅಷ್ಟೇ ನಾಚಿಗೇಡು. ಯಾಕೆಂದರೆ ಸತ್ಯ ಹಾಗೂ ನ್ಯಾಯಗಳ ದೃಢ ಪಕ್ಷಪಾತಿಯಾದ ಅವರು ವಸ್ತುಸ್ಥಿತಿಯನ್ನು ಬಹಿರಂಗಪಡಿಸಿದಾಗ ಈ ಮುಖ್ಯ ಮಂತ್ರಿಗಳು ಲಂಚ ಸ್ವೀಕಾರ ಮಾಡಿದುದು ದಂಗುರ ನಾಂದಂತೆ ಖಚಿತವಾಗದೆ ಇರಲಾರದು. ಇದರಿಂದ ಮುತ್ಸದ್ದು ಮುಖಭಂಗವಾಗುವುದು. ಆದರೆ ಈ ತೆರನ ವಿಚಾರಣೆ ನಿಜಕ್ಕೂ ಭಾರತದಂತಹ ರಾಜ್ಯದಲ್ಲಿ ಅಗತ್ಯವಾಗಿದೆ. ತಪ್ಪು ಮಾಡಿದವನಿಗೆ ಸರಿಯಾದ ಶಿಕ್ಷೆಯಾಗ ಬೇಕಾದುದು ಅತಿ ಅಗತ್ಯ ಅವನು ಮಂತ್ರಿಯಾಗಿರಲಿ, ಕೂಲಿಯಾಗಿರಲಿ ಶಿಕ್ಷಾ ವಿಧಾನ ಇಬ್ಬರಿಗೂ ಒಂದೇ. ಆದರೂ ಸತ್ಯಸಂಗತಿ ಇಂದು ಹೊರಬಿದ್ದು ಜನತಾ ಜನಾರ್ದನನ್ನು ವಂಚಿಸುವ ಈ ವಿಧಾನ ಬಯಲಾಗಬೇಕು. ಜನತಾ ಜನಾರ್ದನನ ಸೇವೆ ಮಾಡುತ್ತೇವೆ ಎಂದು ಬಾಯಲ್ಲಿ ಭಾಷಣ ಬಿಗಿಯುವ ಪ್ರವೃತ್ತಿ ದೂರವಾಗಿ ವ್ಯಾವಹಾರಿಕವಾಗಿ ನ್ಯಾಯ ಪಾರಿಯಲ್ಲಿ ನಡೆಯುವ ಮನೋವೃತ್ತಿ ಬೆಳೆಯ ಬೇಕು. ಆದುದರಿಂದ ಪಂಡಿತ ನೆಹರೂರವರು ಇದನ್ನು ಚೆನ್ನಾಗಿ ಪರಾಂಬರಿಸಿ ವಿಚಾರಣೆಮಾಡಿ ಅಪರಾಧಿಗಳನ್ನು ಶಿಕ್ಷಿಸಲು ಅಂಜಬಾರದು. ಒಂದು ಸರಕಾರದ ಜವಾಬ್ದಾರಿ ಹೊತ್ತ ಮುಖ್ಯ ಮಂತ್ರಿಗಳೇ ಲಂಚ ಸ್ವೀಕರಿಸಿದರೆಂದು ಇಂದು ಬಹಿರಂಗವಾದುದು ನಿಜಕ್ಕೂ ಸರಕಾರದ ದೌರ್ಬಲತೆ ಸತ್ವಹೀನತೆಯನ್ನು ಎತ್ತಿತೋರಿಸುತ್ತದೆ. ಇಂದು ಸರಕಾರಿ ವಲಯಗಳಲ್ಲಿ ತಾಂಡವವಾಡುತ್ತಿರುವ ಈ ಲಂಚದ ಕಾರುಬಾರು ನಿಲ್ಲಬೇಕಾದುದು ಜನತಾ ಹಿತವೃಷ್ಟಿಯಿಂದ ಅವಶ್ಯಕವಾಗಿದೆ.

ಸಾರ್ವಜನಿಕರಿಗೆ ಪಂಥಾಹ್ವಾನ

ಕೇರಳದ ಈ ಘಟನೆ ಸಾರ್ವಜನಿಕರಿಗೊಂದು ಪಂಥಾಹ್ವಾನ. ಕೇರಳದ ಹಿಂದಿನ ಮುಖ್ಯ ಮಂತ್ರಿ ಶ್ರೀ ನಂಬೂದರಿ ಪಾಡರು "ಕೇರಳದ ಮಂತ್ರಿಗಳ ಮೇಲಣ ಈ ಲಂಚದ ಆರೋಪ ವೈಯಕ್ತಿಕ ವಿಚಾರವಾಗಿರದೆ ಸಾರ್ವಜನಿಕವಾಗಿದ್ದು ಇದರ ನಿರ್ಧಾರವನ್ನು ಸಾರ್ವಜನಿಕರೇ ಮಾಡಬೇಕು" ಎಂದು ಹೇಳಿದುದು ಅತಿಶಯೋಕ್ತಿಯಲ್ಲ. ಜನತೆ ಇನ್ನಾದರೂ ಲಂಚಕೂಡುವ ಪೇಸಿಕೆ ವ್ಯವಹಾರಕ್ಕೆ ತೊಡಗಬಾ

(ಇನ್ನೇ ಸುಟ ನೋಡಿ)

ಮೆನೇಜರರ

ನೀಲಕಾರು ನಿಲ್ಲದೆ ಓಡಿತು

ಯಾವುಯಾನುಮೊ ಕರ್ಕಶ ಧ್ವನಿಯಿಂದ ಕೂಡಿದ ಆ ಕಾರ್ಖಾನೆಯಿಂದೂ ಗಂಟಲನ್ನು ಮುಚ್ಚಿದೇ ಏಕ ಪ್ರಕಾರವಾಗಿ ಮೊರೆಯಿಡುತ್ತಾ ಆಡಿಯಿಟ್ಟಿತ್ತು.

ಸುಂದರ, ಬಾಳಿನ ಕಹಿಯನ್ನು ಅನುಭವಿಸಿ ನಾಕಾಗಿ, ಕಾರ್ಖಾನೆಗೆ ಕೆಲಸ ಕೇಳಲು ಬಂದಿದ್ದ. ಬಾಗಿಲಿನ 'ಸಿಪಾಯ್' ಅಡ್ಡ ಬಂದಿದ್ದರೂ ಅದನ್ನೆಲ್ಲ ತಳ್ಳಿಕೊಂಡು ಮೆನೇಜರ್ ನ ಕೋಣೆಗೆ ಹೊರಟ. ಕೀರಲು ಕರ್ಕಶದ ಹಿನ್ನೆಲೆಯೊಂದಿಗೆ ಆ ಕೋಣೆ ಹೊಕ್ಕ. ನಾಲ್ಕಾರು ಕಬ್ಬಿಣದ ಕುರ್ಚಿಗಳು, ಮೇಜು, ಅದರ ಸನಿಹದಲ್ಲಿ ಒಂದು 'ಬೀರು' ಇವುಗಳಿಷ್ಟಿಗುಗ ಮಧ್ಯೆ ಹೊಗೆಯಾಡುವುದನ್ನು ಕಂಡು ಸುಂದರ ಒಳಗೆ ನಡೆದ. ಸೋಫಾಕ್ಕೆ ತಲೆಯಿತ್ತು ಮೇಜಿನ ಮೇಲೆ ಕಾಲೂರಿ ಸಿಗರೇಟ್ ಹೊತ್ತಿಸಿದ 'ಮೆನೇಜರ್' ಸುಂದರನ ದೃಷ್ಟಿಗೆ ಗೋಚರಿಸಿದ.

"ಸಾರ್ಽ...." ದನಿಯಿಲ್ಲ. ಸುಂದರ ಏನೆಲ್ಲ ಮಾತಾಡ ಬೇಕೆಂದು ಜ್ಞಾಪಿಸಿಕೊಂಡ. ಗಂಟಲು ಆರಿ ಸ್ವರವಿಲ್ಲದ್ದನ್ನು ಸರಪಡಿಸಿ, ಸುನಃ ಸಾರ್, ಅಂದ. ಮೇಜಿನ ಅಸರೆಯನ್ನು ಪಡೆದು ಇನ್ನೊಮ್ಮೆ ಹೇಳಿದ. ಆಲೋಚನಾಮಗ್ನನಾಗಿ ಬಿದ್ದ ಮೆನೇಜರ್ ಸಿದ್ಧಯ್ಯ ಸುಂದರ ಬಂದುದನ್ನು ಗಮನಿಸಿ ಏನು ಎನ್ನುವಂತೆ ಸೋಫಾಕ್ಕೆ ಒರಗಿ ನೆಟ್ಟಿಗೆ ಕುಳಿತು, ಕುಳಿತು ಕೊಳ್ಳುವಂತೆ ಸಂಜ್ಞೆಗೈದ. ಸುಂದರ ನಡುಗುವ ಕಾಲಿನಿಂದ ಒತ್ತಾಯವಾಗಿ ಕುರ್ಚಿಯ ಬಳಿ ಬಂದು ಕುಳಿತು ಮೂತಿಗಾರಂಭಿಸಿದ. "ನನ್ನ ತಂಡೆ ಗರೀಬರು. ನಾನು ಕೂಡ ಕಷ್ಟಗಳಿಂದಲೆ ಕಾಲ ತಳ್ಳಿ ಎಸ್. ಎಸ್. ಎಲ್. ಸಿ. ವರೆಗೆ ಮುಗಿಸಿ ಮುಂದುಗಾಣಮೆ, ಕೆಲಸ ಹುಡುಕುತ್ತಾ ಇದ್ದೇನೆ. ತಾವು ಕುಟುಂಬಕ್ಕೆ ದಿಕ್ಕು ಕಾಣಿಸಿ. ನೀವು ಹೊನ್ನೆ ಹೇಸುನನ್ನ "ಬೇಕು" ಥಾಕಿದಕ್ಕೆ ನಾನೇ ಆಸರನೆಂದು ತನ್ನ ಸ್ನೇಹಿತರು ಕಾಗದ ಇಟ್ಟಿದ್ದಾರೆ. ನನ್ನ ಚೀಲದಿಂದ ಕಾಗದದ ಕಂತೆಯೊಂದನ್ನು ಮೇಜಿನ ಮೇಲಿಟ್ಟು, ಮೆನೇಜರ್ ಸಿದ್ಧಯ್ಯ ಸುಂದರನನ್ನು ಒಮ್ಮೆ ನೋಡಿ, ಕಾಗದವನ್ನು ಬಿಚ್ಚಿ ನೋಡಿದ. ಎಲ್ಲವು ಶಿಫಾರಸ್ಸು ಪತ್ರ 'ಅದಿರಲಿ ನಿನ್ನದು ಪ್ರೈವೇಟ್' ಕಾರ್ಖಾನೆ ಆದ್ದರಿಂದ ಒಂದು ನಾಲ್ಕತ್ತು ರೂ ಕೆ ಡಬಲ್ಲೆ.ದು. ಸಂಬಳ ಕಡಿಮೆಯೆಂತ ಥಾವಿಸ ಬಾ್ದ! ಇಸ್ಟು ವರ್ಕರ್ ಡಿಪಾಸಿತನರು ಎಲ್ಲಿಯೂದರೂ ಸಿಗುವುದಿಲ್ಲ. ಕಾರ್ಖಾನೆ ಕೆಲಸ ಸೇರಬಹುದು" ಭಸ್ಮೀಕೃತವಾದ ಸಿಗರೇಟನ್ನು ಪಾತ್ರೆಗೆಸೆದು ಇನ್ನೊಂದು ಹೊತ್ತಿಸಿದ ಮೆನೇಜರ್, ಸುಂದರ ಮೆದುಳ ಶಕ್ತಿ ಸಾಮರ್ಥ್ಯವನ್ನು ಪೂರ್ತಿ ಕರ್ಚುಮಾಡಿದ್ದರೂ ಮೆನೇಜರರ ಪೂತ. ಪಲ್ಲಟವಾಗಲಿಲ್ಲ. ಅಂತೂ ನಿರಾಶೆಯ ನಿಟ್ಟುಸಿರೊಂದನ್ನು ಬಿಟ್ಟು ಕುರ್ಚಿಯಿಂದ ಎದ್ದ ಸುಂದರನನ್ನು ನೋಡಿ "ಹೋಗುವಿರೇನು?" ಎಂದ ಮೆನೇಜರ್.

ಇಲ್ಲ,ನಾಳೆಯಿಂದಬಾಎಂದ್ರೆಬರುತ್ತೀನೆ" ಸುಂದರ ಮುಖ ತಿರುವಿ ಅವರ ಮುಖ ಕಾಣಲಾರದೆ ಕಿಟಕಿಯಿಂದ ಕಾರ್ಮಿಕರ ಕೆಲಸವನ್ನು ಈಕ್ಷಿಸುತ್ತ ಅಂದ. ಮೆನೇಜರ ಹಾಗಾದರೆ ಬಂದು ಬಿಡಿ ಎಂದೇ ನುಡಿದ. ಸಂಬಳ ಕಡಿಮೆಯೆಂಬುದನ್ನೆಪ ನೆವ ಸುಂದರನನ್ನು ಬಾಧಿಸಿದರೂ ತನ್ನ ತಂಗಿಯ ಮದುವೆಯನ್ನಾದರೂ ಮಾಡಬಹುದಲ್ಲಾಎಂದು ಅನಂದಗೊಂಡ. 'ನಮಸ್ತೆ, ಎಂದ. ಕಾರ್ಖಾನೆಯು ಅವನನ್ನು ಬೀಳ್ಕೊಟ್ಟಿತು.

ಎಣ್ಣೆ ಕಾರ್ಖಾನೆ ದಿನವೂ ಬಿಡದೆ ದುಡಿಯುವ ಒಂದು ಜೀವ. ಅದರಲ್ಲಿ ಹೊದಲಿನಿಂದಲೂ ಮೆನೇಜರ್ ಸ್ಥಾನವನ್ನು ಗಳಿಸಿಕೊಂಡಿದ್ದ ಸಿದ್ಧಯ್ಯ ಕೆಲವಾರು ವರ್ಷಗಳಲ್ಲಿ ಸಾಹುಕಾರ್ ಶಿವಪ್ಪನನ್ನು ಎಲ್ಲಿಗೋ ಸಾಗಿಸಿ ಅವನನ್ನು ಅಂತ್ಯಗೊಳಿಸಿ ಎಲ್ಲ ಕಾರ್ಯಭಾರವನ್ನು ಈಗ ವಹಿಸಿಕೊಂಡಿದ್ದ.

ಮನೆಗೆ ಲಗುಬಗನೆ ಬಂದು ತನ್ನ ಆನಂದದ ವರ್ತಮಾನವನ್ನು ತಿಳಿಸಿ ಮುಂದಿನ ಉಡಿತದ ಭವಿಷ್ಯದ ಕಥೆಸುನ್ನು ಹೇಳಿ ತಂಗಿಯ ಮದುವೆಗೆ ಕೊರತೆಯಿಲ್ಲ ಹೆಂದು ಸಮಭಾವಿಸಿ ಸುಂದರ ಕೈ ಕಾಲು ತೊಳೆದು ಊಟಕ್ಕಾಗಿ ಅಡಿಗೆಯ ವ.ನೆಯತ್ತ ಅಡಿಯಿಟ್ಟ.

ಮಾರನೇ ದಿನ ತನ್ನ ಕೆಲಸಕ್ಕಾಗಿ ಕಾರ್ಖಾನೆಯತ್ತ ದಾರಿ ಹಿಡಿದಿದ್ದ. ತನ್ನ ಮನೆಯಿಂದ ಒಂದರ್ಧ ಮೈಲು ದೂರವಿರುವ ಕಾರ್ಖಾನೆ ಧೈರ್ಯದಿಂದ ನಡೆಯುತ್ತಿತ್ತು. ಸುಂದರ ಒಳ ಹೊಕ್ಕ. ಕೈ ಸನ್ನೆಯಿಂದಲೇ ಮೆನೇಜರ್ ಸಿದ್ಧಯ್ಯ ಬರಮಾಡಿಕೊಂಡ. "ಇಂದು ಯಾರೂ ಕೂಲಿಕಾರರು ಬಂದಿಲ್ಲ. ಅವರ ಸ್ನೆಲ್ಲಾ ಅವರ ಮೇಸ್ತ್ರಿಯಿಂದ ಎಣಿಸಿ ಬರೆದುಕೊಳ್ಳ ಬೇಕು. ಹಾಗೆಯೇ ಪ್ರತಿನಿತ್ಯ ಅವನ್ನು ಅಯೂಯ ಕೆಲಸಕ್ಕೆ ಹಚ್ಚತಕ್ಕದ್ದು. ಅವರ ಸಂಬಳದ ವಿಚಾರದಲ್ಲಿ ನಾನು ಕೆಲಸವಹಿಸುತ್ತೇನೆ. ಅದನ್ನು ಹಂಚಿದರೆ ಸಾಕು. ಇನ್ನು ಬರೆದು ಬಂದ "order" ಗಳಿಗೆ ನೀವೇ ಬರೆದು ಕಳಹಿಸಬೇಕು! ಸುಂದರ ಕೆಲಸದ ವಿವರವನ್ನೆಲ್ಲಾ ಕೇಳಿದ ಹಿಂದೆ ದೀರ್ಘ ಕಾಯದ ವ್ಯಕ್ತಿ ಬಂದು ಕೈ ಮುಗಿದ. ಎದುರಾಗಿ ನಿಂತ ಸಿದ್ಧಯ್ಯ ಗುಡುಗಿದ. "ಎನ್ರೋ ಆಫೀಸೀಗೇಕೆ ಬಂದ್ರೋ? ನಡೀರಿ ಆಚೆ" ಬಂದಿದ್ದ ಆಳು ಪ್ರತ್ಯುತ್ತರವಿತ್ತಿದ್ದ. "ನೀವು ಬಲ್ಲಿದ್ದೆ ಹೇಳಿದ್ರಂತೆ!" ಪುನಃ ಸಿದ್ಧಯ್ಯ ಹೇಳಿದ ಹಾದು ನಿಮ್ಮ ಚಿಕ್ಕ ಯಜಮಾನರು ನಮಗೆ ಸಿಕ್ಕಿದ್ದಾರೆ ಅದಕ್ಕಾಗಿ ನೀವು ಇನರಲ್ಲಿ ಲೆಕ್ಕವನ್ನು ತೋರಿಸಿ ಎಂದ. ಮೇಸ್ತ್ರಿ ಸುಂದರನಿಗೆ ಕೈ ಮುಗಿದ. ಪ್ರಸಮಯ ಬೇಕೆಂದ್ದ ಸುಂದರ ತನ್ನ ಕೆಲಸದ ಗಾರವಕ್ಕೆ ಕುಂದುಂಟಾಯಿತೇನೋ ಎಂಬ ಅನುಮಾನದಿಂದ ನಗೆಯೊಡಿ ಒಪ್ಪಿಕೊಂಡಿದ್ದ. ನೆ ನೇಜರ್ ಸಿದ್ಧಯ್ಯ ತನ್ನ ಕೆಲಸಕ್ಕೆ ತಲ್ಲಾನಎಂದು ಸುಂದರನಿಗೆ ಪ್ರತ್ಯೇಕ ಕೊರಡಿಯನ್ನು ತೋರಿಸಲು ಮುಂದಾದ. ಸುಂದರ ತನ್ನ ಕೆಲಸವನ್ನು ಮೆಲುಕು ಹಾಕುತ್ತಾ ಹಿಂದೆ ಹೆ ರಟ.

ಸುಂದರ ಕಣ್ಣಾರೆಳಸಿ ನೋಡಿದ. ಕಬ್ಬಿಣದ ನೇಯ್ಗೆಯ ಕುರ್ಚಿ ಮೇಜುಗಳು. ಒಣಗಿದ ದೇಹ ಹೊತ್ತ ಸುಂದರನನ್ನು ಆವು ಆಣಕಿಸುವಂತಿತ್ತು. ಅಂತೂ ಎಲ್ಲ ಭಾರ ಹೊತ್ತು ಕಾರ್ಖಾನೆಯು ಕೂಲಿಕಾರರಿಗೆ ಭೇಟಿಯಿಡಲು ಸುಂದರ ನಡೆದಾಗ ತಡೆದು ಸಿದ್ಧಯ್ಯ ಹೇಳಿದ, 'ನೀವು ಅಗಾಗ ಅವರನ್ನು ಪ್ರಶ್ನಿಸಲೇಬಾರದು. ಹಾಗೆ ಆವರಿಗೆ ಸಲಿಗೆ ಕೊಟ್ಟರೆ ನಿಮ್ಮನ್ನೆ ತಿಂದಾರು! ನೀವು ಕಣ್ಣಿಂದ ನೋಡಲೇ ಬಾರದು. ಅದು ಸುಂದರನಿಗೆ ವಿಪರೀತ ವ್ಯಥೆಯನ್ನು ತಂದಿಟ್ಟಿತು. ನಾನವರ ಮೇಲ್ವಿಚಾರಕನೆಂದಾದರೆ ನಾನವರ ವಿಚಾರ ತೆಗೆದುಕೊಳ್ಳುವುದು ಜೀಡಾನೇ? ಎಲ್ಲವನ್ನೂ ಸಿದ್ಧಯ್ಯನ ಮುಖದ ಮೇಲೆ ಎಸೆಯಬೇಕೆಂದಿದ್ದ ಸುಂದರ. ಅವರೆ ತನ್ನ ಸಂಸಾರದ ಬಿಕ್ಕಟ್ಟು? ಕಬ್ಬಿಣದ ಕಡ್ಡಿಯಿಂದ ಕೂಡಿದ ಕುರ್ಚಿಯು ಸುಂದರನ ದೇಹವನ್ನು ಹೊತ್ತಿತ್ತು. ಕಾರ್ಖಾನೆಯ ಕೀರಲು ಸ್ವರದೊಂದಿಗೆ ಇವನ ಕೆಲಸ ಸಂತಾಗವಾಗಿ ಸಾಗಿತು.

ದಿನಗಳು ಕಾಲಯಂತ್ರದ ಚಕ್ರಕ್ಕೆ ಸಿಲುಕಿ ತೇಗಂತೆ ಕಾರ್ಖಾನೆಯ ಕರ್ಕಶ ಸ್ವರದೊಂದಿಗೆ ಸುಂದರನ ದಿನವೂ ಕಂದಿತ್ತು.

'ನಮಸ್ಕಾರ್ ಮರೀ ಮೆನೇಜರ್' ದೀರ್ಘಕಾಯದ ವ್ಯಕ್ತಿ ಪ್ರತಿನಾಡಿಸಿತು. 'ಹ್ಞಾಂ!' ಸುಂದರ ತಿರುಗಿ ನೋಡಿದ. ಯಾವುದೂ ಅರಿವಿಲ್ಲದಂತೆ ಸುಂದರ ತನ್ನ ಕೆಲಸದಲ್ಲಿ ತಲ್ಲೀನನಾದ ಸುಂದರನಿಗೆ ಆ ಕರ್ಕಶವನ್ನು ಮಾತನಾಡಿಸಬೇಕೆಂದು 'ಏನು ಬೇಕಿತ್ತು!' ಎಂದ. ಆತ ತಿಳಿದುಕೊಂಡಿರಬಹುದು. ಮೇನೇಜ್ರುರಂತೆ ಈತ ಕೋಪಿಷ್ಟರಲ್ಲವೆಂದು. ಅದನ್ನು ಅವನ ಮಾತಿನ ಸ್ವರದಲ್ಲಿಯೇ ತಿಳಿದ ಕೊಂಡ ಮೇಸ್ತ್ರಿ ಮೇಗ್ರಣ್ಣಾ! ಎಷ್ಟು ವೇಗವಾಗಿ ನನುಷ್ಯರ ಎಂದು ಹೇಳಿದ್ದನೊ ಏಷ್ಟೆ ಮಂದವಾಗಿ ಕೇಳಿದ. ಒಡೇರ್ರ.... ನನಗೆ ಕೊಡುವ ಸಂಬ್ಳ ಬಾಳ ಕಡಿಮೆ. ಅದನ್ನ ನೀವು ತಿಳಿದೋರು, ಹೆಚ್ಚಿಸಬೇಕು. ನಾವು ಸೈದದ್ದಕ್ಕೆ ಸಂಬ್ಳ ಸಾಲದು. ನೀವಾದರೂ ಕಣ್ಣು ತೆರೆದು ಹೇಳ್ರಿ ಬುದ್ದಿ! ನಮ್ಮ ಕೆಲಸಾ ದಿನ ದುಡಿಬೇಕು ಒಂದೆರಡು ಗಂಟೆ ಕಡಿಮೆ ಮಾಡಿ ಬುದ್ದಿ! ನನ್ನ ಕಷ್ಟವನ್ನು ಹಿಂದೆ ಒಬ್ಬ ಮರೀ ಮೆನೇಜರ್‌ಗೆ ತಿಳಿಸಿದ್ದೆವಾ ನಡೀರಿ ಕೇಸಾನೂ ಇಲ್ಲ ಸಂಬ್ಳಾನೂ ಇಲ್ಲ. ಎಂತ ಜೋರು ಮಾಡಿದ್ರು ಸ್ಕಾವಿಂ! ಆಂತಹರಲ್ಲವೆಂದು ನಿನ್ಮೊಡನೆ ಹೇಳಿಸೆ ಧನ್ಯನೇರ! ಮೇಸ್ತ್ರಿ ಮೇಗ್ರಣ್ಣಾ ತನ್ನ ಸಂಸಾರದ ಕಷ್ಟವನ್ನು ಹೊರಲಾರದೆ ಹೃದಯದಲ್ಲಿ ತಳಮಳಿಸಿ ಅಂದಿರಬೇಕು. ಎಲ್ಲಿಲ್ಲದ ಕರುಣೆಯಿಂದ ಸುಂದರ ಹೇಳಿದ. ನೀನು ಹೇಳುವುದು ಸರಿ ಮೇಸ್ತ್ರಿ! ನಾನವರ ಕ್ಲಾರ್ಕು. ಅವರೆಂದಂತೆ ನಾನು. ನನ್ನಲ್ಲಿ ಹಣ ಇದ್ದಿದ್ದರೆ ನಿನಗೆ ಸಂಬ್ಳ ಹೆಚ್ಚಿಸಿ ಸಂತೋಷಪಡ್ತಿದ್ದೆ. ಆದರೆ....ಎಂದು ಬಾಳನ್ನು ದೊಡ್ಡಲು ಬಂದ ಕಷ್ಟವನ್ನು ತಿಳಿಸಿದ. ಒಂದರೆಗಳಿಗೆ ಮೇಗ್ರಣ್ಣಾ ಕೇಳಿ ಕಣ್ಣೀರುರೆದ. ಆಪ್ಪಕ್ಕೆ ನಿಲ್ಲಿಸಿದ ಸುಂದರ ಹೇಳಿದ. ಎಂದಾದರೂ ಹೇಳಿ ನೋಡ್ತಿನಿ ನಿರಿಸಿದರೆ ನಿರಿಸಿದ್ರು. ಇಲ್ಲವಾದರೆ ನಿನಗೆಲ್ಲಾ ಒಂದುಪಾಯ ಹೇಳ್ತಿನಿ. ಸುಂದರ ಕೆಲಸವನ್ನು ಬಿಟ್ಟು ಇಲವಾರು ಕಂಪಾರದ ಸುಖವನ್ನು ಹೊತ್ತಿದ್ದ. ದೂರದಲ್ಲಿ ಮೆನೇಜರ್ ಸಿದ್ಧಯ್ಯನ 'ಸುಖದ ಹೊಗೆಯ ಕಳರು ಸುಂದರನ ಮನಗಿಗೆ ಬಡಿಯಿತು ಮೇಗ್ರಣ್ಣಾ |ಮೆನೇಜರ್ ಬಂದ ಹಾಗಿದೆ. ಹಾಗೆ ಹೋಗ; ದಿನಾ ಬರ್ತಾ ಇರು. ನನ್ನೊಬ್ಬನಿಗೆ ಈ ಕೋಣೆ ಬೇಸರ ತಂದಿದೆ. ಮೇಗ್ರಣ್ಣಾ 'ಹ್ಞಾಂ' ಸಂಜ್ಞೆಸಿ ಕಾರ್ಖಾನೆಯತ್ತ ಬಿರುಸಿನಿಂದ ನಡೆದ.

'ಏನು ಸುಂದರ ಕೆಲಸ ಇನ್ನೂ ಮೇಜಿನ ಮೇಲಿದೆ. ಸುನ್ಮನೆ ಕುಂತರೆ ಸಂಬಳ ಬರುತ್ತದೆಯೆ? ಸುಂದು ಇಂತಹ ಕರೇರ ನುಡಿಗಳನ್ನು ಕೇಳಲಿಲ್ಲ. 'ಬೆಳಿಗ್ಗೆ ಸ್ವಲ್ಪ ಜ್ವರ ಬಂದಿತ್ತು ಹಾಗೆಯೇ ಕುಳಿತುಕೊಂಡೆ ಸ್ವಲ್ಪ ಸರಿಸಿ ಕೆಲಸ ಮೂರೈಸಿಹೋಗುತ್ತೀನಿ' ನಳ್ಳನ್ನು ಸುಲಭವಾಗಿ ಸುಂದರ ಹೇಳಿದ.

ಕಾರ್ಖಾನೆಯತ್ತ ನಡೆದ ಮೇಗ್ರಣ್ಣ ಎಲ್ಲ ಕೂಲಿಕಾರರಿಗೂ ಆಶ್ವಾಸನೆ ಇತ್ತ. ಇನ್ನೊಂದು ವಾರದಲ್ಲಿ ನಮ್ಮ ಸಂಬ್ಳನೂ ಏರುತ್ತೆ! ಕೆಲಸಾನು ಕಾಸು ಆಗುತ್ತೆ. ನೇಸ್ತ್ರಿ ಮೇಗ್ರಣ್ಣಾ ಹೇಳಿದ ಮಾತ ಒಪ್ಪಬೇಕಾದ್ದೆ ಎಂದು ಕೂಲಿಕಾರರ

(ನೇ ಪುಟ ನೋಡಿರಿ)



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಲ್ಲದೆ ಚಕ್ಯಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಕಪಟಿ ಸನ್ಯಾಸಿ

ಚೀನೀಯ ಸಂಧಾನ ಸೂತ್ರಗಳ ನಿಜಬಣ್ಣ

ಭಾರತ ಮತ್ತು ಚೀನೆಗಳ ನಡುವಣ ಗಡಿ ತಂಟೆಯು ಕೇವಲ ಇತ್ತೀಚೆಗೆ ಉದ್ಭವವಾದುದು. ೧೯೫೯ರ ಜನವರಿಯಲ್ಲಿ ಚೀನೀಯ ಸರಕಾರವು ಮೊದಲಿಗೆ ಭಾರತದೊಡನೆ ಗಡಿ ತಂಟೆಯ ಪ್ರಸ್ತಾಪವನ್ನೆತ್ತಿತು. ಅದೇ ವರ್ಷ ಸಪ್ತಂಬರದಲ್ಲಿ ತಾನು ೧೯೫೯ರಲ್ಲಿ ಪ್ರಕಟಿಸಿದ ಒಂದು ನಕ್ಷೆಯ ಆಧಾರದಿಂದ ಗಡಿಯ ಭಾರತೀಯ ಪ್ರದೇಶಗಳಲ್ಲಿ ಸುಮಾರು ೫೦,೦೦೦ ಚದರ ಮೈಲುಗಳಷ್ಟು ಭೂಮಿಯ ಮೇಲೆ ತನ್ನ ಬೇಡಿಕೆಯನ್ನು ಮುಂದಿಟ್ಟಿತು. ೧೯೬೦ರ ಜೂನಿನಲ್ಲಿ ಎರಡೂ ರಾಷ್ಟ್ರಗಳ ಅಧಿಕಾರಿಗಳು ಈ ತಂಟೆಯನ್ನು ಪರಿಶೀಲಿಸುತ್ತಿರುವಾಗಲೇ ಚೀನಾವು ಇನ್ನೊಂದು ನಕಾಶೆಯನ್ನು ತಯಾರಿಸಿ, ಅದರಲ್ಲಿ ತನ್ನ ಹೊದಲಿನ ಬೇಡಿಕೆಗೆ ಲಡಖ ವಿಭಾಗದಲ್ಲಿ ಮತ್ತೆ ೨೦೦೦ ಚೌರಸ ಮೈಲು ನೆಲವನ್ನು ಕೂಡಿಸಿಕೊಂಡಿತು.

ಭಾರತದೊಡನಿರುವ ತನ್ನ ಗಡಿತಂಟೆಯು "ಸುದೀರ್ಘ ಸಮಯದಿಂದ ಬಂದಿದೆ" ಎಂಬ ಚೀನಾದ ಸಾದದಲ್ಲಿ ಹುರುಳಿಲ್ಲವೆಂಬುದು ಇದರಿಂದಲೇ ತಿಳಿಯುವುದು.

ಭಾರತ-ಚೀನಾಗಳ ನಡುವಣ ಸೀಮೆಯು ೨೬೪೦ ಮೈಲುಗಳಷ್ಟಿರಲೂ ಉದ್ದವಾದುದು ಚೀನಾದ ಸಾರ್ವಭೌಮತೆಯ ಟೆಬೇಟ್ ರಾಜ್ಯದೊಡನೆ ಇರುವ ಸಿಕ್ಕಿಂ ಮತ್ತು ಭೂತಾನಗಳ ಗಡಿಯೂ ಇದರಲ್ಲಿ ಸೇರಿಕೊಂಡಿದೆ. ಸಿಕ್ಕಿಂ ಮತ್ತು ಭೂತಾನಗಳೊಡನೆ ಭಾರತಕ್ಕೆ ವಿಶೇಷ ಸಂಧಿಸಂಬಂಧಗಳನ್ನಿಟ್ಟುಕೊಂಡಿದೆ.

ಈ ದೀರ್ಘ ಸೀಮೆಯು ಒಡಂಬಡಿಕೆಗಳ ಮೂಲಕ ಅಥವಾ ಸಂಪ್ರದಾಯ ಮೂಲಕ ವ್ಯವಸ್ಥೆಯಿಂದ ಇಲ್ಲವೇ ಇವೆರಡಂದಲೂ ನಿರ್ಧರಿಸಲ್ಪಟ್ಟಿದೆ. ಶತ್ರುದ ಭಿನ್ನಾಭಿಪ್ರಾಯಕ್ಕೆ ಮೊದಲು, ಈ ಸಾಂಪ್ರದಾಯಿಕ ಸೀಮೆಯನ್ನು ಕುರಿತು ಚೀನದ ಯಾವುದೇ ಸರಕಾರವು ಭಾರತ ಸರಕಾರದ ಅಧಿಕಾರ ಕ್ಷೇತ್ರವನ್ನು ಪ್ರಶ್ನಿಸಿದ್ದಿಲ್ಲ. ಚೀನೀಯ ಸರಕಾರವೀಗ ಇಡಿಯ ಗಡಿಯನ್ನೂ ಆನಿರ್ಧಾರಿತವೆಂದು ಹೇಳುತ್ತಿದೆ. ಇದು ಸಂಪೂರ್ಣ ಅಪತ್ಯ ಸಾಂಪ್ರದಾಯಿಕ ಗಡಿರೇಖೆಯು ಶತಮಾನಗಳಿಂದಲೂ ಸುವಿದಿತವಿದೆ. ಹಿಮಾಲಯದ ಉನ್ನತೋನ್ನತ ಶಿಖರಾವಳಿಯ ಜಲರಾಶಿಯನ್ನು ಹೊಂದಿಕೊಂಡು ಗುರುತಿಸಿದ ಭೌಗೋಳಿಕ ತತ್ವವನ್ನೂ ಅನುಸರಿಸುವಂತಿದೆ. ಅಲ್ಲದೆ ಇದು ವಿಶಿಷ್ಟ ಆಂಕಾರಾಷ್ಟ್ರೀಯ ಮನ್ನಣೆಯಿಂದಲೂ ಬೆಂಬಲ ಪಡೆದಿದೆ.

ಮೂರು ವಿಭಾಗಗಳು

ಪಶ್ಚಿಮ ವಿಭಾಗದಲ್ಲಿ ಜಮ್ಮು ಮತ್ತು ಕಾಶ್ಮೀರಗಳೊಡನೆ ಸಿಂಕಿಯಾಂಗ್ ಮತ್ತು ಟಿಬೇಟುಗಳ ಗಡಿಯಿದ್ದು ಇದು ಸುಮಾರು ೧,೧೦೦ ಮೈಲು ಉದ್ದವಿದೆ. ಸಾಂಪ್ರದಾಯಿಕವಾದ ಈ ಗಡಿಯು ಅನಾದಿಯಿಂದಲೂ ವಾಸ್ತವವಾಗುತ್ತ ಬಂದಿದೆ. ವಾಸ್ತವವಲ್ಲ ೧೬೪೪ರ ಒಡಂಬಡಿಕೆಯು ಇದನ್ನು ಸ್ಥಿರಗೊಳಿಸಿದೆ. ಜಮ್ಮು ಮತ್ತು ಕಾಶ್ಮೀರಗಳ ರಾಜ ಪ್ರತಿನಿಧಿಗಳಂದ ಹಾಗೂ ಟಿಬೇಟಿನ ದಲಾಯ್ ಲಾಮಾ ಮತ್ತು ಚೀನೀಯ ಮಹಾರಾಜರುಗಳ ನಡುವಣ ೧೭೪೪ರ ಒಡಂಬಡಿಕೆಗಳಿಂದ ಮತ್ತೊಮ್ಮೆ ಸ್ಥಿರೀಕೃತವಾಗಿದೆ. ೧೭೪೪-೪೪ರಲ್ಲಿ ಬ್ರಿಟನ್ ಹಾಗೂ ಚೀನೀ ಸರಕಾರಗಳ ನಡುವೆ ವಿನಿಮಯಗೊಂಡ ಪತ್ರ ವ್ಯವಹಾರಗಳಲ್ಲಿಯೂ ನಿರ್ದಿಷ್ಟಪಡಿಸಿಕೊಂಡಿದೆ.

ಭಾರತ ಮತ್ತು ಟಿಬೇಟುಗಳ ನಡುವಣ ಸೀಮೆಯು ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ಪಂಜಾಬುಗಳೊಡನೆ ಸಂಬಂಧಿಸಿದೆ. ಸ್ಪಿತಿ ಪ್ರದೇಶದಲ್ಲಿರುವ ಸಾಂಪ್ರದಾಯಿಕ ಸೀಮೆಯನ್ನು ಮೇಲೆ ಹೇಳಿದ ೧೭೪೪ರ ಮತ್ತು ೧೭೪೪ರ ಒಪ್ಪಂದಗಳು ಸ್ಥಿರಗೊಳಿಸಿವೆ. ಆ ಸಮಯದಲ್ಲಿ ನೇರೆಯ ಲಾಹೂಲ್ ಪ್ರದೇಶ ಸಹಿತವಾದ ಸ್ಥಿತಿಯು ಲಡಖದ ಭಾಗವಾಗಿತ್ತು. ಬಾರಹೋತಿಯ ಬಳಿಯ ಗಡಿಯು ೧೯೪೪-೧೦ರಲ್ಲಿನ ಪತ್ರ ವ್ಯವಹಾರಗಳಿಗೆ ವಿಷಯವಾಗಿದ್ದರೂ ಇತ್ತೀಚೆಗೆ, ಅಂದರೆ ೧೯೫೪ರ ಒಡಂಬಡಿಕೆಯಲ್ಲಿ ನಿರ್ಧಾರಿತವಾಗಿದೆ. ೧೯೫೪ರಲ್ಲಿ ಭಾರತ ಮತ್ತು ಟಿಬೇಟುಗಳು ಈ ಜಾಗದಲ್ಲಿ ಗಡಿಯು ಉನ್ನತ ಜಲರಾಶಿಯೇ ಸೀಮೆಯೆಂದು ಒಪ್ಪಿಕೊಂಡಿವೆ.

ಪೂರ್ವ ವಿಭಾಗದಲ್ಲಿ ಗಡಿಯು ಹಿಮಾಲಯದ ಉನ್ನತ ಜಲರಾಶಿಯನ್ನು ಹೊಂದಿಕೊಂಡಿದೆ. ೧೯೫೪ರ ಚೌ-ನೆಹರೂ ಒಪ್ಪಂದವು ಈ ಸಾಂಪ್ರದಾಯಿಕ ನೆಡಾವಳಿಯ ಸೀಮೆಯನ್ನು ಮತ್ತೊಮ್ಮೆ ಸ್ಥಿರೀಕರಿಸಿದೆ ಟಿಬೇಟು ಮತ್ತು ಭೂತಾನಗಳ ಸೀಮೆಯು ಕುರಿತು ಈಯೆರಡು ದೇಶಗಳ ಪ್ರತಿನಿಧಿಗಳು ತಿಳಿವಳಿಕೆಯ ಮೂರ್ಚೆ ೧೯೫೪ರಲ್ಲಿ ವಿನಿಮಯ ಮಾಡಿಕೊಂಡ ಸಂಧಿ ಪತ್ರಗಳಲ್ಲಿ ಒಗ್ಗೆ ನುಂಡಿದೆಂದೂ ಚೀನಾವು ಆಕ್ಷೇಪವೆತ್ತಿದ್ದಿಲ್ಲ. ಚೀನಾವು ಕಾಯ್ದಿರಿಸಿದ ನಿರ್ಣಯಗಳೆಲ್ಲವೂ ಸತ್ಯವಾಗಿ ಒಳ ಮತ್ತು ಹೊರ ಟಿಬೇಟಿಗೆ ಸಂಬಂಧಿಸಿದುವು. ೧೯೫೪ರ ಮಾರ್ಚ್ ಕೊನೆಯಲ್ಲಿ ಬ್ರಿಟಿಷ್ ಭಾರತ ಮತ್ತು ಟಿಬೇಟುಗಳು ವಿನಿಮಯ ಮಾಡಿಕೊಂಡ ಕಾಗದ ಪತ್ರಗಳು, ನಕ್ಷೆಗಳ ಸಂಬಂಧದಲ್ಲಿ ಯಾವ ಕಾಲದ ಚೀನೀಯ ಸರಕಾರವಾದರೂ ಆಕ್ಷೇಪವೆತ್ತಿದ್ದಿಲ್ಲ ಅಥವಾ ಟೀಕೆ ಮಾಡಿದುದಿಲ್ಲ, ಅಂತಿದ್ದಲೇ ಈ ಸೀಮೆಯು ವ್ಯೈಶಮ್ಯ ಹೋನ ರೇಖೆಯೆಂದು ಪ್ರಸಿದ್ಧಿಗಳಿಸಿದೆ.

ಚೀನೀಯ ಅತಿಕ್ರಮಣ

ಕಳೆದ ಐದು ವರ್ಷಗಳಿಂದ, ಅಂದರೆ, ೧೯೫೯ರಿಂದ ಚೀನೀಯ ಪಡೆಗಳು ನಿರಂತರವಾಗಿ ಪಶ್ಚಿಮ ವಿಭಾಗದ ಲಡಖದಲ್ಲಿ ಸೀಮೋಲ್ಲಂಘನೆ ಮಾಡುತ್ತಿವೆ. ಮತ್ತು ಬಲಾತ್ಕಾರವಾಗಿ ೧೯೫೯ರಲ್ಲಿ ಮಹಾಕ್ಯ ಮಣಿಸಿಗೆ ಗಡಿಯನ್ನು ಕೆಡಿಸಿಬಿಟ್ಟಿವೆ.

ಆದರೂ, ೮, ಸಪ್ತಂಬರ ೬೦೦ ವರೆಗೆ ನೇಫಾ ಪ್ರದೇಶದಲ್ಲಿ ಲೋಗ್ಜುವೊಂದನ್ನುಳಿದರೆ ಮತ್ತೆಲ್ಲಿಯೂ ಪ್ರತ್ಯಕ್ಷಾಕ್ರಮಣವೂ ನಡೆದಿರಲಿಲ್ಲ. ತಾವು ನೈಕಮ ಹೋನ ರೇಖೆಯನ್ನು ಅತಿಕ್ರಮಿಸುವುದಿಲ್ಲವೆಂದು ಅನೇಕ ಬಾರಿ ಚೀನೀಯರು ಆಶ್ವಾಸನೆಯನ್ನೂ ನೀಡುತ್ತ ಬಂದಿದ್ದರು. ಬ್ರಿಟಿಷ ಸತ್ತಾರೂಢದಿಂದ ಈ ರೇಖೆಯು ತಮ್ಮ ಮೇಲೆ ಒತ್ತಾಯದಿಂದ ಹೇರಲ್ಪಟ್ಟಿರುವುದರಿಂದ ಅದು ಅನ್ಯಾಯದ್ದಾದರೂ ಬರ್ಮಾದೊಡನೆ ಈ ರೇಖೆಯನ್ನು ಉಭಯ ದೇಶಗಳ ಗಡಿಯೆಂದು ಒಪ್ಪಿಕೊಂಡಂತೆಯೇ ಅದನ್ನೇ ಭಾರತ—ಚೀನಾ ಗಡಿಯೆಂದು ಸ್ವೀಕರಿಸುತ್ತೇನೆಯೆಂದು ಭರವಸೆ ನೀಡಿದ್ದರು. ಆದರೆ, ೧೯೫೦ರ ಸಪ್ತಂಬರ ಲಂದು ಚೀನೀಯ ಪಡೆಗಳು ನೇಫಾದ ಪೂರ್ವ ಮೂಲೆಯಲ್ಲಿ ಎಲ್ಲೆಯನ್ನು ಮರಿದು ಅನಿರೀಕ್ಷಿತವಾಗಿ ಭಾರತದೊಳಗೆ ನುಗ್ಗಿ ಬಂದುವು. ಹಲವಾಡೆಗಳಲ್ಲಿ ಅವು ಸೀಮೆಯನ್ನು ಮೀರಿ ಅತಿಕ್ರಮಣ—ಆಕ್ರಮಣ ಮಾಡಿದುವು. ಗಡಿಯ ಪೂರ್ವ-ಪಶ್ಚಿಮ ಕೊನೆಗಳಲ್ಲಿ ಭಾರತೀಯ ನೆಲದ ಮೇಲೆ ಬೃಹತ್ಪ್ರಮಾಣದಲ್ಲಿ ತಮ್ಮ ಆಕ್ರಮಣವನ್ನು ಮುಂದುವರಿಸಿದುವು. ಐದು ವರ್ಷಗಳ ಅತಿಕ್ರಮಣಾವಧಿಯಲ್ಲಿ ಮೊತ್ತ ಮೊದಲ ಬಾರಿಗೆ ಚೀನೀಯ ಸೇನೆಗಳು ಭಾರತದ ಪವಿತ್ರ ನೆಲವನ್ನು ಆಕ್ರಮವಾಗಿ ಆಕ್ರಮಿಸುವ ಸಾಹಸ ಮಾಡಿದುವು. ಲಡಖದಲ್ಲಿ ಭಾರತೀಯ ಸೇನಾ ರಾಜಿಯಗಳಿಗೆದುರಾಗಿ ಚೀನವು ಟ್ಯಾಂಕುಗಳನ್ನೂ ಬಳಸಿಕೊಂಡಿತು. ನೇಫಾದಲ್ಲಿ ಕೆಬುಟು ಮತ್ತು ಬೋಗ್ಜುಗಳ ಮೇಲೆ ಹಲ್ಲೆ ಮಾಡಿತು. ಆ ಬಳಿಕವೇ ಗಡಿಯ ಹಲವಾರು ಎಡೆಗಳಲ್ಲಿ ತನ್ನ ಬಲ ಪ್ರದರ್ಶನ ಮಾಡುತ್ತ ಅದು ನುಗ್ಗಿ ಬಂದಿತು.

ಉಪಾಯೋಂತರದ ಸೂತ್ರ

೧೯೬೦ರ ಒಕ್ಟೋಬರ ತಿಳಿಂದು ಚೀನಾವೊಂದು 'ಸಂಧಾನ' ಸೂಚನೆಯನ್ನು ಮುಂದೂಡಿತು. ಇದರಂತೆ ಎರಡೂ ಕಡೆಯವರೂ "ನೈಜ ನಿಯಂತ್ರಣ ರೇಖೆ" ಯನ್ನು ಮನ್ನಿಸಬೇಕು, ಮತ್ತು ಈ ರೇಖೆಯಿಂದ ಇಬ್ಬದಿಯ ಸೇನೆಗಳೂ ೨೦ ಕಿಲೋಮಿಟರುಗಳಷ್ಟು ಹಿಂದೆ ಸರಿಯಬೇಕು ಇದನ್ನು ನಿಸ್ಸೈನ್ಯಗೊಳಿಸಬೇಕು "ನೈಜ ನಿಯಂತ್ರಣ ರೇಖೆ" ಯೆಂಬುದು ಚೀನಾ ಮತ್ತು ಭಾರತಗಳ ನಡುವೆ ೧೯೫೯ರ ನವಂಬರ ೭ರಲ್ಲಿ ವಾದಗ್ರಸ್ತವಿದ್ದ ನೆಲವನ್ನು ವಿಭಾಜಿಸುವ ರೇಖೆಯೆಂದು ಸ್ಪಷ್ಟೀಕರಿಸಿದರೆ, ಚೀನೀಯರು.

ಅಕ್ಟೋಬರ ೭ರಿಗಿಂತರಲ್ಲಿ ಭಾರತೀಯ ಪ್ರಧಾನಿಯವರು ಈ ಸಲಹೆಯನ್ನು ತಿರಸ್ಕರಿಸಿದರು ಯಾವುದೇ ಸಂಧಾನ ರೀತಿಯ ಪರಿಹಾರಕ್ಕೆ ಚೀನಾದ ಬ್ರಹ್ಮದಾಕ್ರಮಣಕ್ಕೆ ನಾಂದಿಯೂದ ಸಪ್ತಂಬರ ೮, ೧೯೫೦ಕ್ಕೆ ಮೊದಲಿದ್ದ ಸ್ಥಳಗಳಿಗೆ ಸೇನೆಯು ಮರಳಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದರು. ಮತ್ತು ಇದೇ ವಾದಾಂಶಕ್ಕೆ ಪುಷ್ಟಿಕರವಾಗಿ ಮಿಕ ಹೆಚ್ಚಿನ ಬೆಂಬಲ ಬೇಕೆಂದು ಸೂಚಿಸಿದರು.

ಇಕ್ಕೆ ಯಾರಿಂದಾದರೂ ಕೇಳಿಬಹುದಾದ ಮತ್ತು ಕೇಳಲೇ ಬೇಕಾದಪ್ರಶ್ನೆಯೊಂದು ಉದ್ಭವವಾಗುತ್ತದೆ. ಚೀನೀಯರು ಏನೆ ನವಂಬರ ೧೯೫೯ರ ನೈಜ ನಿಯಂತ್ರಣ ರೇಖೆಯಿಂದಲೂ ಹಿಂದೆ ಸರಿಯಲು ಸಿದ್ಧವಾಗಿರುವಾಗ, ಭಾರತ ಅದನ್ನೊಪ್ಪದೆ ಸಪ್ತಂಬರ ೮, ೧೯೫೦ರ ಸ್ಥಿತಿರೇಖೆಯನ್ನೇಕೆ ಮುಂದೆ ಮಾಡುತ್ತದೆ? ಚೀನಾದ ಕೊಡಗೆಯನ್ನೇಕೆ ಭಾರತವು ಸಂತೋಷದಿಂದ ಪ್ರತಿಗ್ರಹಿಸ ಬಾರದು?

ಚೀನಾವು ಮುಂದೆ ಮಾಡಿದ ಕೊಡುಗೆಯು ನಮಗೆ ತೋರಿ ಪಪ್ಪು ಕರಳವಾಗಿಲ್ಲ. ಈ ಸೂಚನೆಯು ಹಿಂದೆ ಭಾರತೀಯರನ್ನೂ ಜಗತ್ತನ್ನೂ ವಂಚಿಸುವ ಮತ್ತು ಡಿಗ್ಭ್ರಮೆಗೊಳಿಸುವ ಇರಾದೆಯು ಭೂತಾಕಾರವಾಗಿ ನಿಂತಿದೆ.

ಚೀನೀಯರು ಹೇಳುವ ೧೯೫೯ರ ನವಂಬರ ೭ರ ರೇಖೆಯನ್ನು ತೆಗೆದುಕೊಳ್ಳುವ. ಈ ರೇಖೆಯಾದರೂ ಯಾವುದು? ಪೂರ್ವ ಭಾಗದಲ್ಲಿ 'ನೈಜ ನಿಯಂತ್ರಣ ರೇಖೆ'ಯು ಸಾಮಾನ್ಯವಾಗಿ ನೈಕಮ ಹೋನ ರೇಖೆಯನ್ನೇ ಹೊಂದಿಕೊಂಡಿದೆಯೆಂದು ಚೀನೀಯರು ವಾದಿಸುತ್ತಿದ್ದಾರೆ. ಕೆಲವೆಡೆ ನೈಕಮ ಹೋನ ರೇಖೆಯು ತಳಹದಿಯಾದ ಉನ್ನತ ಹಿಮಾಲಯ ಜಲರಾಶಿಯನ್ನೇ ಗಡಿಯೆಂದು ಒಪ್ಪುವುದಾದರೂ ಬೇರೆ ಜಾಲವೆಡೆ, ಮುಖ್ಯವಾಗಿ, ಕಿಂಜೆಮನೆ, ಧಾಗ್ಲ ಕಣಿವೆ ಮತ್ತು ಲಾಂಗ್ಜುಗಳಲ್ಲಿ ಈ ತತ್ವದರ್ಥವನ್ನೆನರು ಒಪ್ಪುವುದಕ್ಕೆ ಸಿದ್ಧರಿಲ್ಲ. ನೈಕಮ ಹೋನ ರೇಖೆಯಿಂದ ಭಾರತೀಯ ಸೇನೆಯೂ ೨೦ ಕಿಲೋಮಿಟರು (೧೨½ ಮೈಲು) ಹಿಂದೆ ಸರಿಯಬೇಕೆಂದವರು ಕೇಳಿಕೊಳ್ಳು

(ಇನ್ನೂ ಇದೆ ನೋಡಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ತೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ರೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು, "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಪ್ರತ್ಯಕ್ಷ ವರದಿ

ಜಾಗತಿಕ ಆಹಾರ ಸಮ್ಮೇಳನ

ಪ್ರೊ। ಕು. ಶಿ. ಹರಿದಾಸ ಭಟ್ಟ.

ಜಾಗತಿಕ ಆಹಾರ ಸಮ್ಮೇಳನ, ಎಂದರೆ ಮಾನವನು ಮುಗಿಯುವ ಮುನ್ನವೇ ಇನ್ನು ಕೆಲವೇ ವರ್ಷಗಳಲ್ಲಿ ಜಗತ್ತಿನ ಹಲವು ವಲಯಗಳಲ್ಲಿ, ಮುಖ್ಯವಾಗಿ ಭಾರತ ಪಾಕಿಸ್ತಾನ ಮುಂತಾದ ಏಷಿಯದ ರಾಷ್ಟ್ರಗಳಲ್ಲಿ ಜನಸಂಖ್ಯೆಯ ಹೆಚ್ಚಳದಿಂದಾಗಿಯೂ, ಕೃಷಿಯು ಸುಲ್ಲಡೆಯ ದೆಸೆಯಿಂದಲೂ, ಬರಗಾಲದ ಭೀತಿ ತಲೆದೋರುವುದೆಂಬ ಮುನ್ಸೆಚ್ಚರಿಕೆಯನ್ನು ನೀಡಿ, ಸೂಕ್ತ ಪರಿಹಾರಗಳನ್ನು ಶೋಧಿಸುವ ಸಲುವಾಗಿ ಅನೇಕ ರಾಷ್ಟ್ರಧಾನಿ ವಾಶಿಂಗ್ಟನ್ನಿನಲ್ಲಿ ಜೂನ್ ಆರಂಭದಿಂದ ಪ್ರಸ್ತುತಗೊಂಡ ಮಹಾ ಸಮ್ಮೇಳನ. ಜಗತ್ತಿನ ನೂರು ರಾಷ್ಟ್ರಗಳಿಂದ ಒಟ್ಟು ೧೫೦೦ ಪ್ರತಿನಿಧಿಗಳನ್ನು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ಬಿ. ಆರ್. ಸೇನರು ಎರಡು ವಾರಗಳ ದೀರ್ಘ ಕಾಲ ಆಹಾರ ಸಮಸ್ಯೆಯನ್ನು ಹೂಲಂಕುಶವಾಗಿ ಚರ್ಚಿಸಲೆಂದು ಅವೇರಿಕನ್ ಸರಕಾರದ ಕೃಷಿ ಶ್ರಮಯದ್ದ ಸಭೆ ಸೇರಿಸಿದರು ಸರಕಾರಿ ಜನರ ಸಂಖ್ಯೆಯನ್ನು ಸರಕಾರೇತರ ಜನರೂ ಸೇರಿದ ಈ ಅಭೂತಪೂರ್ವ ಸಮ್ಮೇಳನ ಪ್ರಪೂರ್ಣದಲ್ಲಿಯೂ, ಮಹತ್ವದಲ್ಲಿಯೂ ವಿಶ್ವಸಂಸ್ಥೆಯ ಯಾವುದೇ ಅಂಗಸಂಸ್ಥೆ ಇದು ವರೆಗೆ ನಡೆಸಿದ ಎಲ್ಲ ಸಮ್ಮೇಳನಗಳಿಗಿಂತಲೂ ಮಿಗಿಲೆಂದು ಅಮೆರಿಕದ ಎಲ್ಲ ಪತ್ರಿಕೆಗಳೂ ಒಮ್ಮತದಿಂದ ಸಾರಿದಿವೆ.

ವಿನೋಚನೆ ಹಸಿವಿನಿಂದ

೫೦ ವರ್ಷಗಳ ಕೆಳಗೆ ಅಮೇರಿಕದ ಹಾಟ್ಸ್ಪ್ರಿಂಗ್ಸ್ ಎಂಬಲ್ಲಿ ಜಾಗತಿಕ ಆಹಾರ ಮತ್ತು ಕೃಷಿ ಸಂಸ್ಥೆಯ ಸ್ಥಾಪನಾದಿಯನ್ನಿಟ್ಟ ರೂಸ್‌ವೆಲ್ಟ್‌ರ ಪ್ರಣಾಳಿಕೆಯು ಹಸಿವಿನಿಂದ ವಿಮೋಚನೆ ಪಡೆಯಬೇಕೆಂದು ಕರೆಕೊಟ್ಟರು. ಸಂಸ್ಥೆಯ ಪ್ರಥಮ ಅಧ್ಯಕ್ಷ ಬ್ರೈಡ್ಸನ ಲಾರ್ಡ್ ಬಾಯ್ಡ್ ಆರ್ ಅವರಿಗೆ ಯುದ್ಧ ನಂತರ ಯುರೋಪ ಮತ್ತು ದೂರ ಪ್ರಾಚ್ಯದ ದೇಶಗಳಲ್ಲಿ ಯುದ್ಧ ಸಿರ್ಮಿತ ಬರಗಾಲ ಮತ್ತು ಹಸಿವಿನ ಬವಣೆಯನ್ನು ಹೋಗಲಾಡಿಸುವ ಹೊಣೆಯು ನಡುವೆ ದೀರ್ಘಾವಧಿಯ ಪರಿಹಾರಗಳನ್ನು ಹುಡುಕುವ ಕರ್ತವ್ಯವಿತ್ತು. ಆವರ ಅನಂತರ ಈಜಿಪ್ಟ ಐದಾರು ವರ್ಷಗಳಿಂದ ಈ ಸಂಸ್ಥೆಯು ನಾಯಕತ್ವವನ್ನು ವಹಿಸಿದ ಡಾ. ಸೇನರು ಭಾರತೀಯರು. ಬಡತನ, ಹಸಿವೆ, ಬರಗಾಲವನ್ನು ಪ್ರತ್ಯಕ್ಷ ಕಣ್ಣ ದೇಶದಲ್ಲಿ ಕಂಡು ಅದರ ಪರಿಣಾಮವನ್ನು ಊಹಿಸಿ ಪ್ರಪಂಚದ ಪ್ರಜಾಭಿಪ್ರಾಯವು ಈ ಸಮಸ್ಯೆಯು ಮೇಲೆ ಆಸಕ್ತಿ ವಹಿಸದಿದ್ದರೆ ಕಷ್ಟ ಮಾನವತ್ತೇ ವರ್ಷಗಳಲ್ಲಿ ಜಗತ್ತು ಕಂಡರಿಯದ ಬರಗಾಲದ ಭೀತಿ ಕೆಲವು ಹಿಂದುಳಿದ ಪ್ರದೇಶಗಳಲ್ಲಿ ಆ ಪರಿಹಾರ್ಯವಾದ ರೀತಿಯಲ್ಲಿ ವ್ಯಾಪಿಸುವುದೆಂಬುದನ್ನು ಶಾಸ್ತ್ರೀಯವಾಗಬಲ್ಲ ಡಾ. ಸೇನ ಈಗ ಮೂರು ವರ್ಷಗಳ ಹಿಂದೆ ಒಂದು ಜಾಗತಿಕ ಚಳವಳಿಯನ್ನೇ ಹೂಡಬೇಕೆಂದು ಬಗೆದರು. ಈ ಚಳವಳಿಯ ಹೆಸರು "ಹಸಿವಿನಿಂದ ವಿಮೋಚನೆ" ಚಳವಳಿಯ ಉದ್ದೇಶವನ್ನು ಆಹಾರ ವತ್ತು ಕೃಷಿ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳೂ ಅವುಗಳ ಸಮಾಜ ಸೇವಾಕ್ಷೇತ್ರ ಸಂಘ ಸಂಸ್ಥೆಗಳೂ ಮನಃಪೂರ್ವಕವಾಗಿ ತಾವೇ ಕಾರ್ಯಕ್ರಮದಲ್ಲಿ ಸೇರಿಸಿಕೊಂಡು ಮುಂಬರುವ ಆಹಾರದ ಅಭಾವದ ಕುರಿತು ಸಾರ್ವಜನಿಕರಿಗೆ ಎಚ್ಚರಿಕೆ ನೀಡುವ ಸಲುವಾಗಿ ಸಭೆ ಸಮ್ಮೇಳನ ಪ್ರಕಟನೆಗಳ ಏರ್ಪಾಟು ಮಾಡಿದರು.

ಡಾ. ಸೇನ ಅವರು ಪ್ರಸ್ತುತ ಸಮ್ಮೇಳನದ ಹಿಂದಿನ ದಿನ ವಾಶಿಂಗ್ಟನ್ನಿನ ನ್ಯಾಶನಲ್ ಪ್ರೆಸ್‌ಕ್ಲಬ್ಬಿನಲ್ಲಿ ಉಪನ್ಯಾಸ ಮಾಡುತ್ತ "ಇಪ್ಪತ್ತು ವರ್ಷಗಳಲ್ಲಿ ಮನುಷ್ಯನ ಹಸಿವಿನ ತೃಷೆಗಳನ್ನು ಪರಿಹರಿಸುವ ಸಾಮರ್ಥ್ಯ ಅಸಾಧಾರಣವಾಗಿ ಬೆಳೆದರೂ ಜನಸಂಖ್ಯೆಯ ಹೆಚ್ಚುವರಿ ಮತ್ತು ವೈದ್ಯ ಶಾಸ್ತ್ರದ ಪ್ರಗತಿಯಿಂದಾಗಿ ಮಾನವ ಜನಾಂಗದ ಹಸಿವು, ತೃಷೆ ಅಧಿಕಾಧಿಕ ವೇಗದಿಂದ ಬೆಳೆಯುತ್ತಿದೆ. ಒಂದೆ ರೆ ಭೂಮಿಯಲ್ಲಿ ಇಂದಿನಷ್ಟು ಬೆಳೆಸಲು ಎಂದೂ ಸಾಧ್ಯವಿದ್ದಿಲ್ಲ; ಹಸಿವೆಯಿಂದ ಕಂಗಾಲಾದ ಜನ ಸಂಖ್ಯೆಯು ಇಂದಿನಷ್ಟು ಪ್ರಮಾಣದಲ್ಲಿ ಎಂದೂ ಇರಲಿಲ್ಲ" ಎಂದು ವಿಜ್ಞಾನದ ಶಕ್ತಿಯನ್ನೂ ಮಾನವ್ಯದ ಸಂಘಟನೆಯ ಅಶಕ್ತತೆಯನ್ನೂ ಎತ್ತಿ ತೋರಿಸಿದರು ದೂರಪ್ರಾಚ್ಯದ ದೇಶಗಳಲ್ಲಿ ಜಗತ್ತಿನ ಜನ ಸಂಖ್ಯೆಯ ಅರ್ಧವಾಸಿ ಜನ ವಾಸಮಾಡುತ್ತಾರಾದರೂ ಅವರಿಗೆ ಜಗತ್ತಿನ ಆಹಾರದ ಕಾಲಂಶ ಮಾತ್ರ ಲಭ್ಯವಾಗುತ್ತಿದೆ. ಜಗತ್ತಿನಲ್ಲೆಂದು ನೂರರಲ್ಲಿ ಹತ್ತು ಹದಿನೈದು ಜನ ಪ್ರತ್ಯಕ್ಷ ಹಸಿವಿನಿಂದ ಕಂಗಾಲಾಗಿರುವರು. ಹಾಗೆಯೇ ಪ್ರಪಂಚದ ೬೦೦ ಕೋಟಿ ಜನರಲ್ಲಿ ೧೦-೧೫ ಕೋಟಿ ಜನ ಅರೆ ಪೊಟ್ಟೆ ಉಣ್ಣುತ್ತಿರುವರು. ಹಂತೂ ವರ್ತಮಾನ ಸಮಾಜವು ದೈಹಿಕ ಆಶಕ್ತಿ, ನೈತಿಕ ನಿರಾಶೆ ಮತ್ತು ಸಿಧಾನ ಸಂರಚನೆಗೆ ಕುತ್ತಾಗುವ ಬನಲು ಇಷ್ಟು ಜನರನ್ನು ಉಳಿಸುವ, ಬೆಳೆಸುವ, ದಾರಿಯನ್ನು ಕಂಡುಹಿಡಿಯಬಾರದೆ?

ಮಾನವನ ಜನ್ಮಸಿದ್ಧ ಹಕ್ಕು

ಬೇಕು—ಎಂದರು ಪ್ರಪಂಚದ ಮೇಧಾವಿಗಳು, ನೊಬೆಲ್ ವಾರಿತೋಷಕವನ್ನು ಗೆದ್ದ ವಿಜ್ಞಾನಿಗಳು, ಸಾಹಿತಿಗಳು, ದಾರ್ಶನಿಕರು, ಪಂಡಿತರು, ಹಸಿವಿನಿಂದ ಬಿಡುಗಡೆ ಪಡೆಯುವದು ಮಾನವನ ಜನ್ಮಸಿದ್ಧ ಹಕ್ಕು ಎಂದು ಅವರು ಇದೇ ವರ್ಷ ಮಾರ್ಚ್ ೧೫ರಂದು ರೋಮಿನಲ್ಲಿ ಸಭೆ ಸೇರಿ ಒಂದು 'ಘೋಷಣೆ' (MANIFESTO) ಯನ್ನು ಹೊರಡಿಸಿ ಅದಕ್ಕೆ ತಮ್ಮ ಅಮೂಲ್ಯವಾದ ಸಹಿಯನ್ನಿತ್ತು ಡಾ. ಸೇನರ ಚಳವಳಿಗೆ ಬೃಹದ್ವಿಚಾರಶೀಲರ ಬೆಂಬಲವನ್ನೆ ಎಂದು ಸೂಚಿಸಿದರು. ಇದು ಅವರ ಘೋಷಣೆ:

"ಮನುಕುಲದ ಅರ್ಧವಾಸಿ ಸದಸ್ಯರು ಹಸಿವಿನಿಂದಲೂ ಅರೆಹೊಟ್ಟೆಯಿಂದಲೂ ಬಳಲುತ್ತಿದ್ದಾರೆ" ಕಳೆದ ವರ್ಷ ಯುದ್ಧ ಸಜ್ಜಿಕೆಗಳಿಗೆ ಜಗತ್ತಿನ ಎಲ್ಲ ರಾಷ್ಟ್ರಗಳು ಮಾಡಿದ ವೆಚ್ಚದ ಪ್ರಮಾಣ ೧೫೦,೦೦೦ ಕೋಟಿ ಡಾಲರುಗಳು! ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡ ಹುಟ್ಟಿದ ಮೂರು ಮಕ್ಕಳಲ್ಲಿ ಒಂದಕ್ಕೆ ಆಯುಷ್ಯ ತೀರುವುದೆಂದರೆ ನಮ್ಮ ನಾಗರಿಕತೆ ಮನುಷ್ಯ ಸಂಪತ್ತನ್ನು ಳಿಸಿಕೊಳ್ಳಲಾರದೆ ಪ್ರಗತಿಯ ಅವಕಾಶವನ್ನು ಕಳೆದುಕೊಳ್ಳುತ್ತಿದೆ ಎಂದು ವಿದಿತವಾಗುವದು. ಜನಸಂಖ್ಯೆಯ ಹೆಚ್ಚುವರಿಯಿಂದಲೂ ಕೃಷಿಯು ಮಂದಗತಿಯಿಂದಲೂ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ಜಗದಗಲ ಹಸಿವೆಯನ್ನು ಹೊಡೆದೊಡಿಸಲು ನಮಗೆ ಬೇಕು ಬೇಕಾದ ಸಾಧನೋಪಾಯಗಳಿದ್ದು, ನಾವು ಬಡವರಾಗಿದ್ದೇವೆ.

....ಆಹಾರವು ಮನುಷ್ಯನ ಮೂಲ ಭೂತ ಬೇಡಿಕೆ, ಹಸಿವು ಮತ್ತು ಅರಹೊಟ್ಟೆಯಿಂದ ಬವಣೆಪಡುವ ರಾಷ್ಟ್ರದಲ್ಲಿ ಇತರ ಪ್ರಗತಿಯ ಆಸೆ ವ್ಯರ್ಥ.

"....ಪ್ರತಿ ರಾಷ್ಟ್ರವೂ ತನ್ನ ಸ್ವಯಂ ತ್ನವನ್ನು ನಿರಂತರ ನಡೆಸುತ್ತಿರುವಾಗ ಅಂತಾರಾಷ್ಟ್ರೀಯ ನೆರವನ್ನು ಕೋರಿದರೆ ಅದು ಗೌರವಪೂರ್ವಕವಾಗಿ ನೀಡಲ್ಪಡುವಂತಾಗಬೇಕು. ಅಭಿವರ್ಧಮಾನ ದೇಶಗಳೊಡನೆ ವ್ಯಾಪಾರ ಒಪ್ಪಂದವನ್ನು ಮಾಡುವಾಗ ಈಗಾಗಲೇ ಪ್ರಗತಿಹೊಂದಿದ ರಾಷ್ಟ್ರಗಳು ಅಭಿವರ್ಧಮಾನ ದೇಶಗಳ ಗೌರವ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂಥ ಶರತ್ತುಗಳನ್ನು ಒಪ್ಪಿಕೊಂಡು ಆದೇಶಗಳು ತಾವೇ ಸರಕನ್ನು ಅಂತರಾಷ್ಟ್ರೀಯ ವಾರುಕಟ್ಟೆಗಳಲ್ಲಿ ವಿಫಲಮಯಕ್ಕೆ ತರುವಂತೆ ಪ್ರೋತ್ಸಾಹಿಸಬೇಕು. ಹಸಿವೆ ಮತ್ತು ಬಡತನವನ್ನು ಪರಿಹರಿಸುವ ಈ ಭೂಮಿಕೆಯಲ್ಲಿ ಪ್ರಚುರವಾಗುವ ಸಹಕಾರದ ಸನ್ನಿವೇಶವು ಪರ್ವರ ಪ್ರಗತಿಗೆ ನೇವಾಗಿ ಹಸಿವಿನ ಭೀತಿಯನ್ನೆಂತು ಹೋಗಲಾಡಿಸಬಲ್ಲದೋ ಅಂತೆಯೇ ಮನುಷ್ಯನ ಇನ್ನೊಂದು ಬೃಹತ್ ಭೀತಿ—ಯುದ್ಧ ಭೀತಿಯನ್ನೂ ಹೋಗಲಾಡಿಸಲು ಸಮರ್ಥವಾಗಬಹುದು.

ಹಸಿವೆಯಿಂದ ವಿಮೋಚನೆ ಎಂಬ ಈ ಚಳವಳಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಯತ್ನಗಳಿಗೆ ಪ್ರೇರಣೆ ನೀಡಬೇಕು. ಸರಕಾರಗಳಿಗೂ ಜನರಿಗೂ ಉಚಿತವಾದ ಶಿಕ್ಷಣವನ್ನು ನೀಡಿ ಜಗತ್ತಿನ ಸಂಪತ್ತಿನ ಸದ್ವಿನಿಯೋಗ ನಡೆಯುವಂತಾಗಬೇಕು.

...ಯುದ್ಧ ಸಜ್ಜಿಕೆಯಷ್ಟು ವ್ಯರ್ಥ ಖರ್ಚು ಮಾಡಿದ್ದಲ್ಲವೆಂಬ ವನ್ನು ನಾವು ಮೇಲೆ ಒತ್ತಿ ಹೇಳುತ್ತೇನೆ. ಹಸಿವಿನಿಂದ ವಿಮೋಚನೆ ಪಡೆಯುವದು ಮನುಷ್ಯನ ಜನ್ಮಸಿದ್ಧ ಹಕ್ಕೆಂಬುದನ್ನು ಪುನರುಚ್ಚರಿಸಿ, ಈ ಶತಮಾನದಲ್ಲಿ ರಾಷ್ಟ್ರಗಳು ಪ್ರಯತ್ನಪರವಾಗಿ ಸಹಕರಿಸುವದನ್ನು ಕಲಿತರೆ ಮನುಷ್ಯ ಸಮಾಜದ ಅನೇಕ ಸಮಸ್ಯೆಗಳು ಬಗೆಹರಿಯುವದೆಂಬ ಆಸೆ ನಮಗಿದೆ. ಮನುಷ್ಯ ಜನಾಂಗದ ಏಕ್ಯೈಕ್ಯ ಸಂಬಂಧವನ್ನು ಸೌಜನ್ಯವನ್ನು, ಸುಸಂಬಂಧವನ್ನು, ಕಲಿಸುವ ಈ ಅಂತರಾಷ್ಟ್ರೀಯ ಪ್ರಯತ್ನವು ಯಶಸ್ವಿಯಾಗಬೇಕು."

—ಈ ಘೋಷಣೆಗೆ ಹಸ್ತಾಕ್ಷರ ಹಾಕಿದ ಕೆಲವರು, ಆಲ್ಬರ್ಟ್ ಐನ್‌ಸ್ಟೀನ್ ಅಲ್ಡಸ್ ಹಕ್ಸಲಿ, ಬಾಳ್ಡ್ ಆರ್. ವೋರ್ಕ ಒಲೆಫಾಂಟ್, ಆಬ್ರೆ ಮೇರೆ, ಮ್ಯೂರೋಲ್ಟ್, ಫಲಿಕ್ಸ್ ಶ್ಯಾಯಿದರ್, ಆಲ್ಬರ್ಟ ಸಾಬಿನ್, ಆಂದ್ರೆನೋಯವಾ, ಟ್ರಗ್ವೆಲೀ, ಪಿ. ಪಿ. ಸ್ಕೋರ್ಸ್‌ರಾಲ್ಟ್ ಬುಂಚೆ, ವೂರ್ಡಿನ ಭೂಬರ್, ಜಿ. ಶುಚ್ಟೆ. ಒಟ್ಟೋಹಾನ್, ಲೆಸ್ಟರ್ ಬಿ. ಪಿಯರ್ಸನ್, ಜಾನ್ ಕಾರ್ ಕ್ರಾಫ್ಟ್.

ವಿದ್ವಾಂಸರ ಅಶೀರ್ವಾದದ ಬೆಸ್ಸಲ್ಲೇ ಆರಂಭವಾಯಿತು ಆಹಾರ ಸಮ್ಮೇಳನ. ನಮ್ಮ ಭಾರತದ ಅಧ್ಯಕ್ಷ ರಾಧಾಕೃಷ್ಣನ್ ಮತ್ತು ಅಧ್ಯಕ್ಷ ಕೆನೆಡಿ ಇಬ್ಬರೂ ಸೇರಿ ಸಮ್ಮೇಳನವನ್ನು ಉದ್ಘಾಟಿಸಿದರು. ಜಗತ್ತಿನ ಆಹಾರದ ಬೇಡಿಕೆಯೂ ಪೂ

(೭ನೇ ಪುಟ ನೋಡಿರಿ)

25,000

ಪೈಕಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦
ಇಂಥ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್ ಉಡುಪಿ, ದ. ಕ

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ —
"ಜನತಾ ಡಿಪೊಜಿಟ್ ಸ್ಕೀಮ್"

ಆಕರ್ಷಕ ಕರ್ತವ್ಯಗಳು — ವಿಶೇಷ ಸೌಲಭ್ಯಗಳು

ವಿವರಗಳಿಗಾಗಿ ಇಂದೇ ವಿಚಾರಿಸಿ:

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೪-೭-೧೯೬೩	೪೩

ಶಿಕ್ಷಣದ ಮಟ್ಟ

ಕೇಂದ್ರ ಸರಕಾರದ ಶಿಕ್ಷಣ ಸಚಿವ ಶ್ರೀ ಶ್ರೀಮಾಲಿಯವರು ಇತ್ತೀಚೆಗೆ ಧಾರವಾಡಕ್ಕೆ ಸಂದರ್ಶನವಿತ್ತಾಗ ಪ್ರಜಾಪ್ರಭುತ್ವದಲ್ಲಿ ಶಿಕ್ಷಕರ ಸ್ವಾತ್ರವು ಅಗ್ರಗಣ್ಯವಾದುದೆಂದು ಹೇಳುತ್ತ, ಶಿಕ್ಷಕರು ಆತ್ಮಾಕ್ಷೆಯಾಗಿ ಸ್ವಾರ್ಥತ್ಯಾಗವನ್ನು ದೃಷ್ಟಿಯಲ್ಲಿಟ್ಟುಕೊಂಡು ದುಡಿಯಬೇಕೆಂದೂ ಅವರ ಕಷ್ಟಗಳು ತನಗೆ ಸಂಪೂರ್ಣ ಮನವರಿಕೆಯಾಗಿದ್ದು, ಅವನ್ನು ದೂರೀಕರಿಸಿ, ಅವರನ್ನು ಸಂತುಷ್ಟಗೊಳಿಸುವ ಕಾರ್ಯವನ್ನು ಮಾಡುವಲ್ಲಿ ಸರಕಾರವು ತೀವ್ರಾಸಕ್ತಿ ತಳೆಯುತ್ತದೆಯೆಂದೂ ಹೇಳಿದ್ದಾರೆ. ಶ್ರೀಮಾಲಿಯವರು ವ್ಯಕ್ತಪಡಿಸಿದ ಇನ್ನಿತರ ಅಭಿಪ್ರಾಯಗಳಲ್ಲಿ ಶಿಕ್ಷಣದ ಮಟ್ಟವನ್ನು ಉನ್ನತೀಕರಿಸುವುದು ಕೂಡ ಒಂದಾಗಿರುವುದು. ಶಿಕ್ಷಣವು ಇಂದು ಸಾರ್ವತ್ರಿಕವಾಗುತ್ತ ಬರುತ್ತಿರುವಂತೆ ಅದರ ಮಟ್ಟ ಕೂಡ ಇಳಿಮುಖವಾಗುತ್ತಿರುವುದು ಶೋಚನೀಯವಾದರೂ ಅದನ್ನು ಅನಿವಾರ್ಯವೆನ್ನುವಂತಿಲ್ಲ. ಅದರೂ ಶಕ್ಯವಿದ್ದಷ್ಟು ಮಟ್ಟಿಗೆ ಮಟ್ಟವನ್ನು ಎತ್ತರದಲ್ಲಿಯೇ ಇಟ್ಟುಕೊಳ್ಳುವುದು ಅವಶ್ಯ ಮತ್ತು ಅನಿವಾರ್ಯ. ಈ ದಿಸೆಯಲ್ಲಿ ಶಿಕ್ಷಕರು ವಹಿಸುವ ಪಾತ್ರಕ್ಕೆ ಹಿಂದಿನಂತೆಯೂ ಪರೀಕ್ಷೆಗಳನ್ನು ನಡೆಸುವ ಸರಕಾರಿ ವಿಭಾಗ ಅಥವಾ ವಿಶ್ವವಿದ್ಯಾಲಯಗಳ ಜವಾಬ್ದಾರಿಯೇ ಅಧಿಕವೆಂದು ಹೇಳುವುದು ಕವ್ವಾಗಲಾರದು.

ಶಿಕ್ಷಣದ ಮಟ್ಟವನ್ನು ಆಳೆಯಲು ಯಾವ ಮಾನದಂಡವನ್ನು ಉಪಯೋಗಿಸಬೇಕು ಎಂಬುದೊಂದು ವಿವಾದಾತ್ಮಕ ವಿಚಾರ. ಹಿಂದಿನಿಂದಲೂ ನಡೆದು ಬಂದ ಪರೀಕ್ಷಾಪ್ರಣಾಳಿಯನ್ನೇ ನಾವು ಮಾನದಂಡವನ್ನಾಗಿ ಬಳಸಿಕೊಂಡರೆ, ಈ ಪರೀಕ್ಷಾ ಪದ್ಧತಿಯಲ್ಲಿಯೇ ಆಮೂಲಾಗ್ರ ಪರಿವರ್ತನೆಯಾಗಬೇಕೆಂದೂ ವಾದವು ಕೇಳಿ ಬರುತ್ತಿದೆ. ಆದರೆ, ಈ ವಿಷಯದಲ್ಲಿ ಯಾವುದೇ ನಿರ್ಧಾರಕ್ಕೆ ನಾವು ಬಂದಿರುವುದಿಲ್ಲ. ಶಿಕ್ಷಣದ ಮಟ್ಟವು ಇಳಿಮುಖವಾಗಿರುವುದಕ್ಕೆ ಮುಖ್ಯ ಕಾರಣವು ಸಾರ್ವತ್ರಿಕ ಮತ್ತು ಉಚಿತ ಶಿಕ್ಷಣವೇ ಎಂದು ಹೇಳಬಹುದು. ವಿದ್ಯೆಯು ಗಂಧ ಗಾಳಿಯೂ ಸೋಂಕದ ವಾತಾವರಣದಲ್ಲಿ ಹುಟ್ಟಿ, ಅದರಲ್ಲಿಯೇ ಬೆಳೆದು ಬಂದ ಮಕ್ಕಳಿಗೆ ಶಿಕ್ಷಣದಲ್ಲಿ ತೀವ್ರಾಸಕ್ತಿ ಹುಟ್ಟುವಂತೆ ಮತ್ತು ಆ ಆಸಕ್ತಿಯನ್ನು ಬೆಳೆಸುತ್ತ ಬರುವಂತೆ ಮಾಡುವುದು ಮತ್ತಷ್ಟು ಕಷ್ಟವಾಗಿ ಯಶಸ್ವಿಯಾಗುವುದು ಅಷ್ಟೊಂದು ಸುಲಭವಲ್ಲ; ಇದಕ್ಕೆ ಕೆಲವಾದರೂ ವರ್ಷಗಳು ಕಳೆಯಬೇಕಾಗುವುದು ಇದರ ಜೊತೆಗೆ ಶಿಕ್ಷಣದ ವಿಶಾಲ ಪ್ರಚಾರಕ್ಕಾಗಿ ಕೈಗೊಂಡ ಹೊಸ ಹೊಸ ಶಾಲೆಗಳನ್ನು ತೆರೆಯುವ ಯೋಜನೆಯಂತೆ ನಾಕಷ್ಟು ಅಧ್ಯಾಪಕರಿಲ್ಲದ ಕಾರಣದಿಂದ ಶಿಕ್ಷಣದ ಮಟ್ಟ ಇಳಿಮುಖವಾಗುವುದು ಮತ್ತಷ್ಟು ಸ್ವಾಭಾವಿಕ. ಇರುವ ಶಾಲೆಗಳಲ್ಲಾದರೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಅಧ್ಯಾಪಕರ ಸಂಖ್ಯೆಯನ್ನು ಹೆಚ್ಚಿಸದೆ, ಮತ್ತು ಒಬ್ಬ ಅಧ್ಯಾಪಕ ಒಂದಕ್ಕಿಂತ ಹೆಚ್ಚು ತರಗತಿಗಳನ್ನು ನೋಡಿಕೊಳ್ಳುವಂತಹ ಪ್ರಸಂಗಗಳು, ಅವಶ್ಯಕ ವಿಷಯುಗಳನ್ನು ಕಲಿಸಲು ಬೇಕಾಗುವ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳದೆ ಇರುವುದು.....ಇವೇ ಮೊದಲಾದ ನೀತಿಗಳಿಂದಾಗಿ ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಅಸಕ್ತಿಯು ಹ್ರಾಸಗೊಳ್ಳುತ್ತ ಬರುತ್ತಿದೆಯೆನ್ನಬೇಕಾಗುತ್ತದೆ. ಉತ್ತರ ಕರ್ನಾಟಕದ ಒಂದು ಜಿಲ್ಲೆಯ ಕೆಲವು ಶಾಲೆಗಳಲ್ಲಿ ಏಳನೆಯ ತರಗತಿಯಲ್ಲಿ ಇಂಗ್ಲಿಷ್ ಕಲಿಸಿಕೊಡಲು ಅಲ್ಲಿನ ಸ್ಕೂಲ್‌ಬೋರ್ಡು ಅಧ್ಯಾಪಕರ ವ್ಯವಸ್ಥೆ ಮಾಡದೆ ಇದ್ದುದರಿಂದ, ಅವರು ಇಂಗ್ಲಿಷ್ ವಿಷಯದಲ್ಲಿ ಉತ್ತೀರ್ಣರಾಗದೆ ಹೋದರೂ ಅವರು ಹೊಸ ಎಂಟನೆಯ ತರಗತಿಗೆ ಪ್ರವೇಶ ಪಡೆಯಲು ಅರ್ಹರೆಂದೂ ಆದರೆ, ಮುಂದಿನ ವರ್ಷದೊಳಗೆ ಏಳನೆ ತರಗತಿಯ ಇಂಗ್ಲಿಷ್ ಪರೀಕ್ಷೆಯಲ್ಲಿ ಕುಳಿತು ಉತ್ತೀರ್ಣರಾಗಬೇಕೆಂದೂ ವಿಧಿಸಿದ ಸರಕಾರದ ನೀತಿ ಅದೆಷ್ಟು ನ್ಯಾಯೋಚಿತವೆಂದು ಹೇಳುವಂತಿಲ್ಲ. ಅಂತಹ ಮಕ್ಕಳು ಎಂಟನೆಯ ತರಗತಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಹೇಗೆ ಕಲಿತಾರು? ಎರಡು ವರ್ಷಗಳ ಹೊರೆಯನ್ನವರೆಂತು ಹೊತ್ತಾರು? ಹೀಗೆಯೇ ಪ್ರಾಥಮಿಕ ಆರನೆಯ ತರಗತಿಯಿಂದ ಆನಿವಾರ್ಯ ವಿಷಯವೆಂದು ಗೊತ್ತು ಮಾಡಿದ ಹಿಂದೀ ಭಾಷೆಯ ಕುರಿತೂ ಹೇಳಬಹುದು. ಪ್ರತಿ ಶಾಲೆಗೂ ಬ್ಬರು ಹಿಂದೀ ಅಧ್ಯಾಪಕರು ನೇಮಕವಾಗದೆ, ಆ ಭಾಷೆಯನ್ನು ಅನಿವಾರ್ಯವಾಗಿ ಗೊಳಿಸಿದುದು ಮತ್ತೆದನ್ನು ಐಚ್ಛಿಕಗೊಳಿಸುವುದು ಯಾವ ನ್ಯಾಯ? ಹಿಂದೀ ಭಾಷೆಯಲ್ಲಿಯೂ ಅನುತ್ತೀರ್ಣನಾಗಿ 'ಸಪ್ಲೋಷನ್' ನಿಯಮಗಳಂತೆ ಫೇಲಾದವರ ಮಟ್ಟಿಗೆ ಹಿಂದೀ ವಿಷಯದ ಅಂಕಗಳನ್ನು ಗಣನೆಗೆ ತರಬಾರದೆಂದು ಇತ್ತೀಚಿನ ದಲ್ಲಿ ಆಜ್ಞೆ ಹೊರಡಿಸುವುದರ ಔಚಿತ್ಯವೇನು? ಹೀಗೆಲ್ಲಾ ನಿರ್ದಿಷ್ಟ ನಿಲುಮೆಯಿಲ್ಲದೆ ಸರಕಾರಿ ವಲಯಗಳು ಯದ್ವಾತದ್ವಾ ವರ್ತಿಸಿ, ಅಪಹಾಸ್ಯಕರವಾದ ಧೋರಣೆಯನ್ನು ರೂಪಿಸುತ್ತಿರುವುದು ಶಿಕ್ಷಕರ ಮೇಲೆ ಮತ್ತು ಶಿಕ್ಷಣದ ಮೇಲೆ ದುಷ್ಪರಿಣಾಮಗಳನ್ನು ಬೀರುವುದಿಲ್ಲವೆ? ಶಿಕ್ಷಣದ ಮಟ್ಟವು ಇಳಿಮುಖವಾಗುವುದಕ್ಕೆ ಮುಖ್ಯವಾಗಿ ಇಂತಹ ನೀತಿಯೇ ಪ್ರೇರಕ ಶಕ್ತಿಯೂಗುವುದಲ್ಲವೆ?

ಇಂದು, ನಮ್ಮ ಕರ್ನಾಟಕ ರಾಜ್ಯವಿಡಿಯನ್ನು ಗಮನಿಸಿ ಹೇಳುವುದಾದರೆ, ತರಬೇತಿ ಹೊಂದಿದ ಅಧ್ಯಾಪಕರು ಬಹಳ ಕಡಿಮೆ. ತರಬೇತಿ ಶಾಲೆಗಳ ಸಂಖ್ಯೆಯನ್ನು, ಅವುಗಳಿಗೆ ಭರ್ತಿ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯನ್ನು ರಾಜ್ಯದ ಅವಶ್ಯಕತೆಗಳಿಗೆ ಹೊಂದಿಕೊಂಡು ಹೆಚ್ಚಿಸುವ ಅಗತ್ಯವಿದೆ. ಇಂದು ಅಧ್ಯಾಪಕ ವೃತ್ತಿಗೆ ಬರುತ್ತಿರುವವರ ಸಂಖ್ಯೆಯಾದರೂ ಕಡಿಮೆ; ಬಂದವರಲ್ಲಿಯೂ ದರೂ ಪಾಠಾಯಂ ಆಗಿ ಅದನ್ನೇ ಅವಲಂಬಿಸುವ ಇರಾದೆಯಿಂದಿರುವವರು ಮತ್ತೂ ಅಲ್ಪ. ಇದಕ್ಕೆ ಇತರತ್ರವಿರುವ ಅಕರ್ಷಣೆಯೇ ಕಾರಣ. ಉಳಿದೆಲ್ಲ ಕಡೆಗಳಲ್ಲಿ ಭಡ್ತಿ ಹೊಂದುವ ಅವಕಾಶವಿದೆ; ಆದರೆ, ಅಧ್ಯಾಪಕರಾಗಿ ಸೇರಿಸಿಕೊಂಡವರು ನಿವೃತ್ತರಾಗುವವರೆಗೂ ಯಾವ ಭಡ್ತಿಯ ಆಶೆಯನ್ನೂ ಇಟ್ಟುಕೊಳ್ಳ ಬೇಕಾಗಿರುವುದಿಲ್ಲ; ಏಕೆಂದರೆ, ಇದಕ್ಕೆರುವ ಅವಕಾಶ ಅತ್ಯಲ್ಪ; ಇಲ್ಲವೇ ಇಲ್ಲವೆನ್ನಬಹುದು. ಇನ್ನು, ವೇತನ ಮಟ್ಟವಾದರೂ ಉತ್ತಮವಿದೆಯೆನ್ನುವಂತಿಲ್ಲ; ಪದವೀಧರ ಅಧ್ಯಾಪಕನೊಬ್ಬ ತನ್ನ ಸರ್ವಾವಧಿ ವೇತನವನ್ನು ಮುಟ್ಟುವಷ್ಟು ಹೊತ್ತಿಗೆ ಬೇರೆಂಥಲ್ಲಿಯೋ ಮತ್ತಾತ್ತುದಾದರೂ ಔದ್ಯಮಿಕ ರಂಗದಲ್ಲಿಯೋ ಗುಮಾಸ್ತನಾಗಿ ಸೇರಿದವನು ಎರಡು ಬಾರಿಯಾದರೂ ಭಡ್ತಿ ಹೊಂದಿ ಇವನಿಗಿಂತ ಇಮ್ಮಡಿಯಾದರೂ ವೇತನ ಪಡೆಯುತ್ತಾನೆ. ಆರ್ಥಿಕ ಸ್ಥಿತಿಗತಿಗಳಿಗೆ ಪ್ರಾಧಾನ್ಯವಿರುವ ಇಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತ್ಯಾಗಕ್ಕೆ ಮಾತ್ರ ಅವಕಾಶ ಕೊಡುವುದರಿಂದ ಶಿಕ್ಷಕರು ಶಕ್ತರಾಗುವಂತಿಲ್ಲ. ಆರ್ಥಿಕವಾಗಿಯಾದರೂ ಅವರ ಸ್ಥಿತಿಗತಿಗಳನ್ನು ಎತ್ತರಿಸುವುದಕ್ಕೆ ಇನ್ನೂ ಹೆಚ್ಚಿನ ಮನಸ್ಸು ಹರಿಸಬೇಕು. ಸ್ವಯಂ ಕೃಷ್ಟನಾದ ಅಧ್ಯಾಪಕನು ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಂಬಲ್ಲನು; ಮತ್ತು ಆಕರ್ಷಕ ವೇತನ ಮಟ್ಟವಿರುವುದೆಂದಾದರೆ, ಶಿಕ್ಷಕರ ಅಭಾವವೂ ತಲೆದೋರುವುದಿಲ್ಲ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮ್ಮ ಸರಕಾರಗಳು ಶಿಕ್ಷಕರ ಕಡೆಗೆ ಹೆಚ್ಚಿನ ಗಮನ ಹರಿಸಿವೆ ಮತ್ತು ಅವರ ಸಂಕಷ್ಟಗಳನ್ನು ದೂರ ನೂಡಲು ಅವು ಶ್ರಮಿಸಿವೆ. ಇವಕ್ಕಾಗಿ ಶಿಕ್ಷಕರೂ ಜನತೆಯೂ ಕೃತಜ್ಞವಾಗಿರಬೇಕು. ಆದರೂ ನೋದಲೇ ಇದ್ದ ಕೊಂಡಕ್ಕೆ ಅದೆಷ್ಟು ಮಣ್ಣು ತುಂಬಿದರೂ ಅದು ಮುಚ್ಚದಿರುವಾಗ, ಗುಡ್ಡದಂತಾಗುವುದು ಸಾಧ್ಯವಿಲ್ಲ. ಉಳಿದೆಲ್ಲಾ ವಿಭಾಗಗಳಿಗೂ ಪಡುವನ್ನು ಹುಡುಕಿಕೊಳ್ಳುವ ಸರಕಾರ ಶಿಕ್ಷಕರ ಆರ್ಥಿಕ ಪರಿಸ್ಥಿತಿಯನ್ನು ಉನ್ನತೀಕರಿಸಲು ಸಂಪನ್ಮೂಲವನ್ನೆರಯುವಲ್ಲಿ ಅದೇಕೆ ಹಿಂದೇಟು ಹಾಕುತ್ತಿದೆಯೋ ಕೇಂದರೆ, ಈ ವಿಭಾಗದ ವೆಚ್ಚ ಪ್ರತಿಫಲವಿಲ್ಲದುದೆಂಬುದರಿಂದ. ಆದರೆ, ಪ್ರಜಾಪ್ರಭುತ್ವದಲ್ಲಿ ಪ್ರತಿ ಪ್ರಜೆಯೂ ಸುಶಿಕ್ಷಿತನಾಗಬೇಕಾದುದು ಅತ್ಯವಶ್ಯವಿರುವಾಗ, ಅಂತಹ ಸುಶಿಕ್ಷಿತ ಜನತಾಂಗ ನಿರ್ಮಿಸುವ ಶಿಕ್ಷಕರನ್ನೂ ಎತ್ತುವುದು ಅನಿವಾರ್ಯ. ಶಿಕ್ಷಕರಿಗೆ ಸರಕಾರಗಳು ತ್ಯಾಗದ ಪಾಠ ಮಾತ್ರ ಕಲಿಸುತ್ತ ಕುಳಿತರೆ, ಅವರ ಉದ್ಧಾರವಾ ಗದು. ಶಿಕ್ಷಣ ವಿಭಾಗದ ಲೋಪದೋಷಗಳು ದೂರವಾಗದೆ ಇದರಸ್ತರವೂ ಎತ್ತರವಾಗದು.

ಪಾಕಿಗೆ ಮರಳಿ ಆಹ್ವಾನ

ಇಡಿಯ ಆಫ್ರೋ-ಏಷ್ಯನ್ ರಾಷ್ಟ್ರಗಳಲ್ಲಿ ತಮಗೆ ಸ್ನೇಹದಿಂದಿರುವ ಮಹದಾಶಯ ವಿರುವುದಾದರೂ, ಭಾರತವು ಮಾತ್ರ ಕಪ್ಪೊಡನೆ ಸ್ನೇಹ ಬಯಸುವುದಿಲ್ಲ – ಎಂಬುದು ಪಾಕಿಸ್ತಾನದ ಅಧ್ಯಕ್ಷ ಅಯೂಬ ಖಾನರ ಕಳವಳಿಕೆಯ ಉದ್ಗಾರ. ಅವರ ಮಾತುಗಳಲ್ಲಿ ಹೇಳುವುದಾದರೆ, ಭಾರತವು ಪಾಕಿಸ್ತಾನವನ್ನು ಕಬಳಿಸುವ ಇರಾದೆ ಯಲ್ಲಿದೆ ಮತ್ತು ಅದಕ್ಕಾಗಿಯೇ ಕಾಶ್ಮೀರ ಪ್ರಶ್ನೆಯ ಪರಿಹಾರಕ್ಕೆ ಆತಂಕ ಒಡ್ಡುತ್ತಿದೆ. ಕಾಶ್ಮೀರದ ಸಂಗತಿಯನ್ನೂ, ಭಾರತ-ಪಾಕ್ ಸಂಬಂಧವನ್ನೂ ಆಮೂಲಾಗ್ರ ಬಲ್ಲವರು ಅಯೂಬರ ಈ ಉಕ್ತಿಗಳು ನಿರಾಧಾರ ಮತ್ತು ವಂಚಕ ಪ್ರವೃತ್ತಿಯೆಂದು ಹೇಳಬಹುದು; ಹೇಳುತ್ತಾರೆ. ಭಾರತಕ್ಕೆ ಯಾರೊಡನೆಯೂ ಯುದ್ಧ ಬೇಕಾಗಿಲ್ಲ; ತನ್ನ ದೇಶವನ್ನು ವಿಸ್ತರಿಸುವ ಯೋಚನೆಯೂ ಅದಕ್ಕಿಲ್ಲ. ಸ್ವತಂತ್ರ ಜಗತ್ತಿನ ಕನಸು ಕಾಣುತ್ತಿರುವ ಭಾರತವು ಎಲ್ಲರೊಡನೆಯೂ ಸ್ನೇಹದಿಂದಿರುವ ಆಸೆಯಿಂದ ಕೂಡಿದೆ. ಹಾಗಿಲ್ಲವಾಗಿದ್ದರೆ, ಅದು ತಾಟಸ್ಥ್ಯ ನೀತಿಯನ್ನು ಒಪ್ಪಿಕೊಳ್ಳದೆ, ಪಂಚಶೀಲ ತತ್ವಗಳನ್ನು ಸ್ವೀಕರಿಸದೆ ಯೂ ಇರಬಹುದಾಗಿತ್ತು. ಇಂದು ಭಾರತವು ವಿಶ್ವರಾಜಕಾರಣದಲ್ಲಿ ಅಗ್ರಗಣ್ಯ ಸ್ಥಾನಗಳಿಸಿರುವುದಕ್ಕೆ ಅದರ ನಿಷ್ಪಕ್ಷಪಾತ ನೀತಿಯೇ ಹೇತುವೆಂದು ಧೈರ್ಯವಾಗಿ ಹೇಳಬಹುದು. ಪಾಕಿಸ್ತಾನದೊಡನೆ ಆದಿಕ್ಯೆ ಸ್ನೇಹ ಬೇಡವೆಂದಿದ್ದರೆ, ಅದು ಕಾಶ್ಮೀರ ಮೂಲಕತೆಗಳಿಗೆ ಒಪ್ಪುವ ಸ್ಪಂದನೆಯೇ ಇರುತ್ತಿರಲಿಲ್ಲ; ಇನ್ನೂ ಮುಂದೆ ಹೋಗುವುದಾದರೆ, ಕಾಶ್ಮೀರವು ವಿವಾದ ಗ್ರಸ್ತ ಪ್ರದೇಶವಾಗಿರದೆ, ಆದೆಂದೋ ಶಕ್ತಿಯಿಂದ ವಶವಾಗಿ ಹೋಗುತಿತ್ತು! ಆದೇನೇ ಇದ್ದರೂ ಇಂದು ಕಾಶ್ಮೀರದಲ್ಲಿ ಸಮರ ವಿರಾಮ ರೇಖೆಯೊಂದಿದೆ. ಈ ರೇಖೆಯು ತಕ್ಷಣದಲ್ಲಿ ಈ ಪ್ರಶ್ನೆಯನ್ನೂ ಉಳಿದ ಸಮಸ್ಯೆಗಳನ್ನೂ ಬಗೆಹರಿಸುವ ಸೂಚನೆಯೊಂದನ್ನು ಭಾರತವು ಈ ಮೊದಲೇ ಪಾಕಿಸ್ತಾನಕ್ಕೆ ನೀಡಿತ್ತು. ಆದರೆ, ಇಡಿಯ ಕಾಶ್ಮೀರ ನೆಂಗಸನ ಹೇಂಗಸೆಯಿಂದ ಅಧ್ಯಕ್ಷ ಅಯೂಬಖಾನರು ಇದನ್ನು ಒಡಂಬಡಲಿಲ್ಲ; ಬದಲಿಗೆ ಭಾರತದ ಬಗ್ಗೆ ಅಪ ಪ್ರಚಾರದ ಮಹಾಪವನ್ನು ನಿರಾಂತಕವಾಗಿ ಕೆಡಿಸಿದರು. ಪಾಕ್ ಕೃತಿಗಳು ಏನೇ ಇರಲಿ, ಇಂದಿಗೂ ಭಾರತವು ತಾನು ನೀಡಿದ ಸೂಚನೆಯನ್ನು ಹಿಂದೆಗೆದು ಕೊಂಡಿಲ್ಲ. ಅಧ್ಯಕ್ಷ ಅಯೂಬಖಾನರಿಗೆ ಮಾರಳಿ ಆಹ್ವಾನ ನೀಡಿದ್ದಾರೆ ಪ್ರಧಾನಿ ನೆಹರು—ಸಮರ ವಿರಾಮ ರೇಖೆಯ ತಳಹದಿಯಲ್ಲಿ ಕಾಶ್ಮೀರ ಪ್ರಶ್ನೆ ಇತ್ಯರ್ಥಗೊಳಿಸೋಣವೆಂದು. ನಿಜಕ್ಕೂ ಅಯೂಬರಲ್ಲಿ ಸ್ನೇಹದ ಕಳಕಳಿ ಇರುವುದಾದರೆ, ಅವರೀ ಆಹ್ವಾನವನ್ನು ಸ್ವೀಕರಿಸಿ ಮುಂದೆ ಬರಬೇಕು.

ಕಕ್ವಗುತ್ತು ರಾಮಣ್ಣ ಶೆಟ್ಟರಿ ನಿಧನ—ಪ್ರಸಿದ್ಧ ಬಂಟಮನೆತನಕ್ಕೆ ಸೇರಿದವರೂ ಸಜ್ಜನ ಬಂಧುಗಳೂ, ಗಾಂಧಿಭಕ್ತರೂ ಆಗಿದ್ದ ಮುಲ್ಕಿ ಕಕ್ವಗುತ್ತು ರಾಮಣ್ಣ ಶೆಟ್ಟರು ೭೩ನೇ ವಯಸ್ಸಿನಲ್ಲಿ ತಾ. ೩೦-೬-೧೯೬೩ರಂದು ನಿಧನರಾದರು. ಇವರು ವಿಶಾಲಹೃದಯಿ. ದಿವಂಗತರು ಸ್ವಾತಂತ್ರ್ಯ ಸಂಗ್ರಾಮದ ಕಾಂಗ್ರೆಸ್ ಕಾರ್ಯಕರ್ತರಾಗಿ ಮುಂದಲ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದರು. ಸಾರ್ವಜನಿಕ ಸೇವಾ ಸಂಸ್ಥೆಗಳ ಸಕ್ರಿಯ ಸದಸ್ಯರಾಗಿ ಜನಾನುರಾಗಿ ಗಳಿಸಿದ್ದರು. ಇವರಿಗೆ ಶ್ರೀ ಹರೀಶ ಪದವಾಕ ಶೆಟ್ಟರು ಒಬ್ಬರೇ ಪುತ್ರ, ಮತ್ತು ಇಬ್ಬರು ಪುತ್ರಿಯರು

ನಿಧನ— ಸುಳ್ಯದ ಸಮೀಪದ ಕಾರ್ಕಳ ಗೇರುಕಟ್ಟೆಯಲ್ಲಿ ವಾಸಿಸುತ್ತಿದ್ದ ಶ್ರೀ ಕೊಳ್ಳಾಡು ಬಾಳೆಕಿ ಸಂಜೀವ ಶೆಟ್ಟರು ಕಳೆದ ತಾ. ೩೧ರಂದು ನಿಧನರಾದರು. ದಿವಂಗತರು ಕಟ್ಟುಕ್ಕಟ್ಟಾರೊಂದ ಜನಪ್ರಿಯರಾಗಿದ್ದರು.

ಅಲ್ಲಲ್ಲಿಯ ಸುದ್ದಿಸಾರ

ಬಂಟರ ಯಾನೆ ನಾಡವರ ಸಂಘ, ಮುಂಬಯಿ— ಇದೇ ಬರುವ ಜುಲ್ಯಾ ತಿಂಗಳ ತಾ. 7ನೇ ಆದಿತ್ಯವಾರ ಅಪರಾಹ್ನ ಗಂಟೆ 3ಕ್ಕೆ ನಮ್ಮ ಸಂಘದ 35ನೇ ವಾರ್ಷಿಕ ಸಾಮಾನ್ಯ ಸಭೆಯು ಸಂಘದ ಆಫೀಸಿನ ವಸಾರದಲ್ಲಿ (ಸಮಯುಗ ನಿವಾಸ 4ನೇ ಮಾಳಿಗೆ (ಮಿನರ್ವಾ ಸಿನೆಮಾದ ಹಿಂದಿಗೆ) ಲೆಮಿಂಗ್ಟನ್ ರೋಡ್, ಮುಂಬಯಿ 7) ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿಠಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ ಸ್ವಜಾತಿ ಬಂಧುಗಳೆಲ್ಲಾ ತಪ್ಪದೆ ಸಮಯಕ್ಕೆ ಆಗಮಿಸಬೇಕಾಗಿ ಗೌ॥ ಪ್ರ. ಕಾರ್ಯದರ್ಶಿ ಶ್ರೀ ಮೂಲ್ಕಿ ಗಣಪಯ್ಯ ಶೆಟ್ಟಿರು ವಿನಂತಿಸುತ್ತಾರೆ.

ಬೆಲಿನ ಸಂಘದ ಸ್ನೇಹ ಕೂಟವು ತಾ. 23-6-63ರಂದು ಶಿರೋಡ್ಕಾರ್ ಸ್ಮಾರಕ ನುಂದಿರ, ಸರಿಲ್‌ನಲ್ಲಿ ಅತೀ ವಿಜೃಂಭಣೆಯಿಂದ ಜರಗಿತು.

೧. ಭಾಸ್ಕರ ಜಿ. ಶೆಟ್ಟಿ (ಗ್ರಾಂಟ್ ಮೆಡಿಕಲ್ ಕಾಲೇಜ್) ಇವರಿಂದ ಬರೆಯಲ್ಪಟ್ಟ "ಮುಕ್ತಿ"ಯೆಂಬ ದುರಂತ ಸಾಮಾಜಿಕ ನಾಟಕವನ್ನು ಕನ್ನಡದಲ್ಲೂ, ಕೋಡು ಭೋಜ ಶೆಟ್ಟಿ ಬರೆದ "ನಿರ್ಬಾಗ್ಯ ಫೀರ್" ಎಂಬ ತುಳು ನಾಟಕವನ್ನೂ, ಶ್ರೀ ನರಸಿಂಹ ಯಕ್ಷ ಗಾನ ಮಿತ್ರ ಮಂಡಳಿಯವರಿಂದ ಬಭ್ರುವಾಹನ ಕಾಳಗವನ್ನೂ ಪ್ರದರ್ಶಿಸಲ್ಪಡಲಾಯಿತ್ತಲ್ಲದೆ, ಇನ್ನು ಅನೇಕ ಮನೋರಂಜನೆಗಳಿದ್ದರೂ, ಲಘು ಉಪಹಾರದಿಂದಲೂ ಅಂದಿನ ಸಭೆಯು ಮುಕ್ತಾಯವಾಯಿತು.

ನಿಧನ— ದಿವಂಗತ ಸೂಡಾ ಪಲೇಲ್ ಶಿವಕೋಡು ಶೀನಪ್ಪ ಪೆಗ್ಡೆರವರ ಪತ್ನಿ ಶ್ರೀಮತಿ ಪದ್ಮಾವತಿ ನಿಧನಾಲುಗುತ್ತು ಲಕ್ಷ್ಮೀ ಶೆಟ್ಟಿಯವರು ತಾ. 23.6.63ನೇ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಇಬ್ಬರ್ ಜಗನ್ನಾಥ ಶೆಟ್ಟಿ, ಬೊಂಬ್ಯಾಡಿಕ್ಟರ್ ರಘುನಾಥ ಶೆಟ್ಟಿ ರಾಯಚೂರ್, ನವಿಸಾಲು ಗುತ್ತು ಸದಾಶಿವ ಶೆಟ್ಟಿ ಹೀಗೆ ಮೂರು ಜನ ಗಂಡು ಮಕ್ಕಳೂ, ಶ್ರೀಮತಿ ಸರೋಜಿನಿ ದಿವಾಕರ ಪೆಡ್ಡೆ, ಮತ್ತು ಶ್ರೀಮತಿ ಪ್ರೇಮಲತಾ ಕರುಣಾಕರ ಪೆಡ್ಡೆ ಹೀಗೆ ಎರಡು ಜನ ಹೆಣ್ಣು ಮಕ್ಕಳೂ ಇರುವರು.

ಹೊಸ ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ— ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಕೆ ಶೆಟ್ಟಿ, ಎಂ. ಎಲ್. ಸಿ ಯವರು ಸಮಿತಿಗೆ ಕೆಳಗಿನ ಸದಸ್ಯರನ್ನು ಆರಿಸಿರುವರು.

ಉಪಾಧ್ಯಕ್ಷರುಗಳಾಗಿ ಶ್ರೀ ಕೆ. ಎಸ್. ಎನ್. ಆಡಿಗ, ಪ್ರಧಾನಕಾರ್ಯದರ್ಶಿಗಳಾಗಿ ಶ್ರೀಗಳಾದ ಕೆ. ಮೊನಪ್ಪ, ಕೆ. ವಿಶ್ವನಾಥ ಕಾಮತ್, ಬಿ. ವಿಠಲದಾಸ ಶೆಟ್ಟಿ, ಕೋಶಾಧಿಕಾರಿಯಾಗಿ, ಶ್ರೀ ಬಿ. ವಾಸುದೇವ ಭಂಡಾರಿ ಮತ್ತು ಉಳಿದ ಸದಸ್ಯರುಗಳಾಗಿ, ಶ್ರೀಗಳಾದ ಟಿ. ಎ. ಪೈ, ಹಾಲಾಡಿ ಮಹಾಬಲ ಶೆಟ್ಟಿ, ಬಿ. ಜನಾರ್ದನ ಶೆಟ್ಟಿ, ಬಿ. ನಾರಾಯಣ ನಾಯಕ್, ಡಾ॥ ಕೆ. ಬಿ. ಶೆಟ್ಟಿ, ಡಾ॥ ಎಸ್. ಜಂಪ, ಯಂ. ರಾಮರಾಜ ಕೆಣಿ, ಎ. ಜೆ. ಅಲ್ಫೆ, ಎಫ್. ಎಕ್ಸ್. ಡಿ ಪಿಂಟೊ.

ಪಾಯಂ ಆಮಂತ್ರಿತರು— ಶ್ರೀಮತಿ ಬಿ ಕೃಷ್ಣಯ್ಯ ಆಲ್ಬುಕರ್ಕ್, ಶ್ರೀಗಳಾದ ಎಂ. ಎಂ. ಹೆಗ್ಡೆ, ಕೆ. ಜತ್ತಪ್ಪ ರೈ, ಎಚ್. ಕೆ. ತಿಂಗಳಾಯ, ಬಿ ಎಂ. ಇದಿನಬ್ಬ, ಎಸ್. ಗಿ. ಸಾಮ್ರಾಜ್ಯ, ಟಿ. ಸಿ. ರಾವ್, ಎ. ನಾರಾಯಣ ಹೆಗ್ಡೆ, ಗಣಾನನ ರಾವ್ ಪಂಡಿತ್, ಎಂ. ಶಂಕರ ಆಳ್ವ, ಎಂ. ರಮಾನಾಥ, ಎಂ. ಶ್ರೀನಿವಾಸ ನಾಯಕ್, ಬಿ. ಮಂಜಯ್ಯ ಹೆಗ್ಡೆ, ಎ ಜೊಡಪ್ಪ, ಶ್ರೀಮತಿ ಮನೋರಮ ಸಂಜೀಗೆತ್ತಾಯ.

ರೆಡ್‌ಕ್ರಾಸ್ ಸೊಸೈಟಿಯ ಶತ ಮಾನೋತ್ಸವ— ರಾಜ್ಯದ ಆರೋಗ್ಯ ಸಚಿವ ಹಾಗೂ ರೆಡ್‌ಕ್ರಾಸ್ ಸೊಸೈಟಿಯ ಅಧ್ಯಕ್ಷ ಡಾ ನಾಗಪ್ಪ ಆಳ್ವರವರು ಜಾಗತಿಕ ರೆಡ್‌ಕ್ರಾಸ್ ಸೊಸೈಟಿಯ ಶತಮಾನೋತ್ಸವದ ಅಂಗವಾಗಿ ಜರಗಲಿರುವ ಕಾರ್ಯಕ್ರಮಗಳನ್ನು ತಾ. 28-6-63ರಂದು ನಂಗಳೂರಲ್ಲಿ ಶ್ರೀ ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಆರಂಭದಲ್ಲಿ ಶ್ರೀಮತಿ ಲೀಲಾ ಬಾಯಿ ಬಾಳಿಗರಿಂದ ಪ್ರಾರ್ಥನೆಯೊದ ಬಳಿಕ ಡಾ. ಕೆ ಬಿ. ಶೆಟ್ಟರು ಸ್ವಾಗತಿಸುತ್ತಾ ರೆಡ್‌ಕ್ರಾಸ್ ಸೊಸೈಟಿಯು ಈ ಪರೆಗೆ ಸಲ್ಲಿಸಿದ ಸೇವೆಯನ್ನು ವಿವರಿಸಿದರು.

ಭಾಷಣಗಾರರಾಗಿ ಆಗಮಿಸಿದ್ದ ಡಾ ಎಂ. ಪಿ ಪೈಯವರು ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ಮೊನವರ ಕಷ್ಟ ಪರಂಪರೆಗಳ ಕೈದೀ ವಿಗೆಗಳಂತಿರುವ ರೆಡ್‌ಕ್ರಾಸ್ ಸೊಸೈಟಿಯ ಸೇವೆಗಳನ್ನು ಶ್ಲಾಘಿಸಿದರು

ಶ್ರೀ ಎಂ ರಾಜೀವನಸರು ನೂತನಾಡು ತ್ತಾ ನಿಶ್ಪಬ್ದಾಂಧನ್ಯತೆಗೆ ರೆಡ್‌ಕ್ರಾಸ್‌ಸೊಸೈಟಿಯೂ ರೀತಿಯಲ್ಲಿ ತಳಹದಿಯನ್ನು ಹಾಕಿದೆ ಯೆಂದು ವಿವರಿಸಿದರು.

ಕಾರ್ಯದರ್ಶಿ ಶ್ರೀ ಎನ್ ನಾರಾಯಣ ರಾವ್‌ರವರು ಮಾತಾಡುತ್ತಾ ರೆಡ್‌ಕ್ರಾಸ್ ಸಂಸ್ಥೆಗಳು ಧರ್ಮ, ದಯೆ ಮಾನ, ಕರುಣೆಗಳ ಪ್ರತೀಕವೆಂದರು.

ಜಿಲ್ಲಾಧಿಕಾರಿ ಶ್ರೀ ಸಿ. ಜಿ ಪದ್ಮನಾಭನ ರವರು ಮಾತಾಡುತ್ತಾ ರೆಡ್‌ಕ್ರಾಸ್‌ನ ಬಗ್ಗೆ ಜನತೆಯ ಕರ್ತವ್ಯಗಳನ್ನು ವಿವರಿಸಿದರು ಉದ್ಘಾಟನಾ ಭಾಷಣದಲ್ಲಿ ಡಾ॥ ಆಳ್ವರು, ರೆಡ್‌ಕ್ರಾಸ್ ಸೊಸೈಟಿಯು ಹೃದಯ ಮುಟ್ಟುವ ಒಂದು ಬೆಳಕಾಗಿದೆಯೆಂದು ತಿಳಿಸಿದರು. ಶ್ರೀ ಕೆ.ಕೆ ಶೆಟ್ಟರ ಭಾಷಣವದ ಬಳಿಕ ಶ್ರೀ ಜಿ. ಎ ಬ್ರಿಟ್ಟೋರವರು ವಂದನಾರ್ಪಣೆಗೈದರು.

ವಿದ್ಯೋದಯ ಹೈಸ್ಕೂಲು— ಕಳೆದ ತಾ. 25ರಂದು ಬೆಳ್ಳಾರಿನ ವಿದ್ಯೋದಯ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ಲೋಕೋಪ್ಯೋಗಿ ಮಂತ್ರಿ ಕೆ. ನಾಗಪ್ಪ ಆಳ್ವರಿಂದ ಶ್ರೀ ಎಸ್. ಮುಕುಂದ ರಾವ್, ಎಂ. ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಬೆಳ್ಳೂರು ಇಗರ್ಜಿಯ ಗುರು ಗಳು ಸ್ವಾಗತಿಸಿದರು. ಬಳಿಕ ಶ್ರೀ ಜೆರೋ ಮ್ ಫೆರ್ನಾಂಡಿಸರು, ಕೈಸ್ಕೂರಿನ ಪರವಾಗಿ ಸಚಿವರಿಗೆ ಮಾನಪತ್ರ ಸಮರ್ಪಿಸಿದರು.

ಸಭಿಕರಲ್ಲಿ ಹಲವರು ಮಾತಾಡಿದ ಬಳಿಕ ಸಚಿವರು ಮಾತಾಡುತ್ತಾ, ಆ ಕ್ಷೇತ್ರಕ್ಕೆ ಒಂದು ಆಸ್ಪತ್ರೆ ಸ್ಥಾಪನೆಯಾಗುವಂತೆ ತಾನು ಪ್ರಯತ್ನಿಸುತ್ತೇನೆಂದು ನುಡಿದರು. ಅಂತ್ಯದಲ್ಲಿ ಶ್ರೀ ಅಗ್ಗಪ್ಪ ರೈಗಳು ಧನ್ಯವಾದ ಸಮರ್ಪಿಸಿದರು.

ಕನ್ಯಾನದಲ್ಲಿ ರೂರಲ್ ಡಿಸ್ಪೆನ್ಸರಿ: ಕನ್ಯಾನದಲ್ಲಿ ತೆರೆಯಲಿರುವ ರೂರಲ್ ಡಿಸ್ಪೆನ್ಸರಿಯನ್ನು ಕಳೆದ ತಾ.21ರಂದು ದ.ಕ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರ್ರು, ಶ್ರೀ ಕೆ.ವೆಂಕಟರಮಣ ಗೌಡ,ಎಂ.ಎಲ್.ಎ. ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು

ಆರಂಭದಲ್ಲಿ ಸಂಚಾಯತ್ ಅಧ್ಯಕ್ಷ ಶ್ರೀ ಭೀಮ ಭಟ್ಟರು ಆತಿಥಿಗಳನ್ನು ಸ್ವಾಗತಿಸಿದ ಬಳಿಕ ತಾ. ೦ೋ ಅಧ್ಯಕ್ಷೆ ಶ್ರೀಮತಿ ಕೆ. ಲೀಲಾವತಿ ರೈಯವರು ಶ್ರೀ ಶೆಟ್ಟರನ್ನು ಉದ್ಘಾಟಿಸುವಂತೆ ಕೇಳಿಕೊಂಡರು. ಆನಂತರ ಜರಗಿದ ಸಭೆಯಲ್ಲಿ ಶ್ರೀ ವೆಂಕಟೇಶ ಪೈಗಳು ಸ್ವಾಗತಿಸಿದರು.

ಶ್ರೀ ಶೆಟ್ಟರ ಉದ್ಘಾಟನಾ ಭಾಷಣವಾದ ನಂತರ ಸಭಿಕರ ಪರವಾಗಿ ಶ್ರೀ ಭೀಮ ಭಟ್ಟ್, ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿ ಮತ್ತು ಶ್ರೀ ಬಿ. ದೇವಪ್ಪ ಆಳ್ವರು ಮಾತಾಡಿದರು. ಅಧ್ಯಕ್ಷ ಭಾಷಣವಾದ ಬಳಿಕ ಡಾ. ಕೆ ಸುಬ್ರಹ್ಮಣ್ಯ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಡಾ. ಸವಾಶಿನ ಭಟ್ಟರು ವೈದ್ಯಕೀಯ ಕಾರಣಗಳಾಗಿ ನೇಮಿಸಲ್ಪಟ್ಟಿದ್ದಾರೆಂದು ತಿಳಿದುಬಂದಿದೆ

ಕು. ಶಿ. ಹರಿದಾಸ ಭಟ್ಟರಿಗೆ ಸ್ವದೇಶಾಗಮನ— ಇಟಲಿಯ ಇಕೋನೊಮಿಕ್ ಇನ್ಸ್‌ಟ್ಯೂಟ್‌ನಲ್ಲಿ ಆರು ತಿಂಗಳ ತರಬೇತಿಗಾಗಿ ತೆರಳಿದ್ದ, ಉಡುಪಿ ಎಂ. ಜಿ ಎಂ. ಕಾಲೇಜಿನ ಆರ್ಥಿಕಾಸ್ತ್ರ ವ್ಯಾಖ್ಯಾನಕರೂ, ಸಿಂಡಿಕೇಟ್ ಬ್ಯಾಂಕಿನ ಇಕನೋಮಿಕ್ಸ್ ಇಂಟೆಲಿಜನ್ಸ್ ವಿಭಾಗದ ಮುಖ್ಯಸ್ಥರೂ, ಆದ ಶ್ರೀ ಕು ಶಿ. ಹರಿದಾಸಭಟ್ಟರು ಕಳೆದ ತಾ. 30ರಂದು, ತಮ್ಮ ತರಬೇತಿಯನ್ನು ಮುಗಿಸಿ ಸ್ವದೇಶಕ್ಕೆ ಹಿಂತಿರುಗಿರುವರು ಶ್ರೀ ಯುತರು ಸ್ವಿಜರ್‌ಲೇಂಡ್, ಲಂಡನ್ಸ್, ಆಮೇರಿಕಾ ಪ್ರವಾಸವನ್ನೂ ಕೈಕೊಂಡಿದ್ದರು.

ವಿವಾಹ ಸಮಾರಂಭಗಳು: ನೇಗಿನ ಹಾಳ ಡಾ॥ ಎಂ. ಎಸ್. ಹೆಗಡೆಯವರ ಪುತ್ರಿ ಸೌ॥ ಸರೋಜಿನೀ ದೇವಿಯನ್ನು ದಿವಂಗತ ಶ್ರೀ ಆಂಣಪ್ಪ ಗೌಡ ವೀರಭದ್ರಪ್ಪ ಗೌಡ ಪಾಟೀಲ ಸಾ॥ ಶಹಾಪೂರ ಬೆಳಗಾವಿ ಇವರ ಪುತ್ರ ಡಾ॥ ಶಿವನ ಗೌಡ ಪಾಟೀಲ ಇವರಿಗೆ ಕೊಟ್ಟು, ತಾ. 6-6-63ರಂದು ನೇಗಿನ ಹಾಳ ಹೈಸ್ಕೂಲಿನಲ್ಲಿ ವಿವಾಹವನ್ನು ಜರಗಿಸಲಾಯಿತು.

ಶ್ರೀ ಕೊಡಂಗೆ ಲಕ್ಷ್ಮೀನಾರಾಯಣ ಭಟ್ಟ (ಸಂ। ಭವ್ಯವಾಣಿ)ಇವರ ತಮ್ಮ ಶ್ರೀ ರಾಮಚಂದ್ರ ಭಟ್ಟರು, ಶ್ರೀ ಕೊಡಂಗೆ ರಘುರಾಮ ಭಟ್ಟರ್ರ ಪುತ್ರಿ ಸೌ॥ ಜಯಲಕ್ಷ್ಮಿಯನ್ನು ತಾ. 26.6.63ರಂದು ವಧೂಗೃಹದಲ್ಲಿ ವಿವಾಹವಾದರು.

ನಿವೃತ್ತ ತಹಶೀಲ್ದಾರ್ ಶ್ರೀ ಎ. ಬಾಬು ಶೆಟ್ಟರ್ರ ಪುತ್ರಿ ಕು। ರತ್ನಕಾಂತಿಯನ್ನು ಶ್ರೀ ಎ. ಕೊರಗಪ್ಪ ಶೆಟ್ಟಿಗಳ ಪುತ್ರ ಶ್ರೀ ಜಯರಾಮಶೆಟ್ಟಿಯವರು ತಾ. 3-7-63ರಂದು ಮಂಗಳೂರಿನ ಡಾನ್‌ಬೋಸ್ಕೋ ಹಾಲಿನಲ್ಲಿ ವಿವಾಹವಾದರು.

ಕಾಡಬೆಟ್ಟು ಶ್ರೀ ರಾಮಕೃಷ್ಣ ಗುಂಡ್ ನಾಯಕರ ಪುತ್ರ ಬಿ. ಉಮೇಶ ನಾಯಕರ ವಿವಾಹವು ದಿ। ಶಿರ್ಲಾಲ ಗೋವಿಂದರಾಜ ಎಂ ಕಾಮತರ ಪುತ್ರಿ ಸೌ॥ ವನಿತಾರೊಂದಿಗೆ ತಾ. 29.6.63ರಂದು ಬೊಂಬಾಯಿಯ ಶ್ರೀನರ ಆನಂದಾಶ್ರಮ ಹಾಲಿನಲ್ಲಿ ನೆರವೇರಿತು.

ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನ— ಇತ್ತೀಚೆಗೆ ಹಂಡೆ ವೇದ ವ್ಯಾಸ ಆಚಾರ್ಯರಿಂದಲೂ ಕಲ್ಯಾಣಪುರ ಸಂಜೀವರಾಯರಿಂದಲೂ ಹರಿಕೀರ್ತನೆಗಳು ಕೆಲವಿದಿನಗಳ ವರೆಗೆ ವಿಜೃಂಭಣೆಯಿಂದ ಜರಗಿತು. ಶ್ರೀ ರಾಘವೇಂದ್ರ ಕೃಷ್ಣ ಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ದಾಯಿಯರ ಕ್ಲಬ್ಬಿನ ವಾರ್ಷಿಕೋತ್ಸವ— ಮುಂಗಳೂರಿನ ಪೆರ್ಲಾಕ್ ಹಾಸಿಲ್ ಟೆಲಿನ ನರ್ಸರ್ಸ್ ಕ್ಲಬ್ಬಿನ ವಾರ್ಷಿಕೋತ್ಸವವು ಕಳೆದ ತಾ. 27ರಂದು ಆರೋಗ್ಯ ಮಂತ್ರಿ ಡಾ ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಾರ್ಷಿಕ ವರದಿಯಲ್ಲಿ ಸಾಬಸಲಾದ ವಸತಿ ಸೌಕರ್ಯ ಹಾಗೂ ಇನ್ನಿತರ ಕೊರತೆಗಳನ್ನು ಗಮನಿಸಿ ಮಾತಾಡುತ್ತಾ ಅವರು ಆದಕ್ಕೆ ತೀವ್ರ ಗಮನ ಕೊಡಲಾಗುವುದೆಂದರು. ಮಾನಸಿಕ ಚಿಕಿತ್ಸಾ ಕೇಂದ್ರಗಳ ರಚನೆಗಾಗಿ ಪ್ರಯತ್ನಿಸಲಾಗುವುದೆಂದೂ ತಿಳಿಸಿದರು ಆಲ್ಲದೆ, ನರ್ಸುಗಳ ಅಸೀಮ ಸೇವೆಯನ್ನು ಅವರು ಶ್ಲಾಘಿಸಿದರು. ಅವರಿಗೆ ಉತ್ತಮ ರೀತಿಯ ಸೌಕರ್ಯವನ್ನು ಮುಂದಿತವಾಗಿಯೂ ಒದಗಿಸಲಾಗುವುದೆಂದರು.

ಹಿಂದೀ ಪ್ರಚಾರ ಸಮಿತಿ ಉಡುಪಿ ಇದರ ಮಹಾ ಸಭೆಯು ತಾ. 30-6-63ರಲ್ಲು ಶ್ರೀ ಟಿ. ಎ ಪೈಯವರ ಅಧ್ಯಕ್ಷತೆಯಲ್ಲಿ ಜರಗಿ, 1962ರ ವಾರ್ಷಿಕ ವರದಿ ಮತ್ತು ಪರಿಶೋಧಿತ ಆಯವ್ಯಯದ ಮಂಜೂರಾತಿಯ ನಂತರ ಮುಂಗಡ ಪತ್ರವನ್ನು ಸರ್ವಾನು ಮತದಿಂದ ಸ್ವೀಕರಿಸಲಾಯಿತು. ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಶ್ರೀ ಟಿ ಎ ಪೈ ಅಧ್ಯಕ್ಷ, ಶ್ರೀಗಳಾದ ಎ. ಕೃಷ್ಣ ರಾವ್ ಪುತ್ತು, ಕೆ. ಮುಖ್ಯಪ್ರಾಣ ತಂತ್ರಿಗಳು ಉಪಾಧ್ಯಕ್ಷರು, ಸಿ. ಮಹಾಬಲ ನಾಯಕ್ ಕಾರ್ಯದರ್ಶಿ, ಕುಮಾರಿ ಯು. ಚಂದ್ರಭಾಗಿ ಜತೆ ಕಾರ್ಯದರ್ಶಿ, ಎ. ಜಿ ಆಲ್ಫೆ ಕೋಶಾಧ್ಯಕ್ಷ ಮತ್ತಿತರರು ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು.

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಕ್ರಮಸಂಖ್ಯೆ 52/1963

ವಾಸು ಕೆ. ಶೆಟ್ಟಿ —ವಾದಿ

ಮತ್ತು

ಹೂವಯ್ಯ ಶೆಟ್ಟಿ ಮತ್ತು ಇತರರು

—ಪ್ರತಿವಾದಿರು.

ನೇಲ್ಯಾಡಿಯ ವ್ಯಾಜ್ಯದಲ್ಲಿ ಉಡುಪಿ ತಾಲೂಕು ಹೆಜಮಾಡಿ ಗ್ರಾಮದ ಗರಡಿ ಮನೆಯಲ್ಲಿರುವ ದುಕ್ಕಿಣಿ ಶೆಡ್ತೀರ ಮಗ 8ನೇ ಪ್ರತಿವಾದಿ ಚಂದ್ರಹಾಸಶೆಟ್ಟಿಗೆ ಈ ಮೂಲಕ ತಿಳಿಸುವುದೇನೆಂದರೆ-

ನಿಮ್ಮ ಕುಟುಂಬದ ಸ್ಥಿರಾಸ್ತಿ ಜವಾಬ್ದಾರಿಗಳಿಂದ ತಾವೀಗ 31-8-1946ರಲ್ಲು ಬರೆಕೊಟ್ಟ ಈಡು ದಸ್ತಾವೇಜಿನ ಬಾಬ್ತು ತನಗೆ ಬರಕತ್ತ ಬಾಕಿ ಅಸಲು ಮುತ್ತು ಬಡ್ಡಿ ಬರಬೇಕೆಂದು ವಾದಿಯು ಮೇಲೆ ಕಾಣಿಸಿದ ವ್ಯಾಜ್ಯವಲ್ಲಿ ದಿಕ್ಕ್ ಕೇಳಿಯುತ್ತಾರೆ. ಈ ಬಾಬ್ತು ನಿಮ್ಮಿಂದೇನಾದರೂ ಆಕ್ಷೇಪಣೆಯಿದ್ದರೆ ಜುಲ್ಯಾ ತಿಂಗಳ ತಾರೀಕು 25ನೇ ಗುರುವಾರ ದಿನ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟಿನಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತರ ಸಾಬರಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಯಜುರು ಶಿವಾ ನಂಬ್ರಕ್ಕೆ ತೀರ್ಮಾನವಾಗುವುದು ತಿಳಿದಿರಲಿ.

(ಕೋರ್ಟು ಹುಕುಂ ಪ್ರಕಾರ)

|ಸಹಿ| ಬಿ. ಯೋಗೀಶ್ವರ ಹೊಳ್ಳ

ವಾದಿಕತೆ ಎಡ್ವೋಕೇಟ್.

ಉಡುಪಿ, ತಾ. 28—6—1963

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 293/62 (O. S. 419/58

ಬೀಗಕಾವಲು ಕಡತ —ಅರ್ಜದಾರರು.

1, ರಮ್ಜು ಬ್ಯಾರಿ. 2, ಇಸಾಬು ಬ್ಯಾರಿ ಕುತ್ತೋಡಿ ಪೋಕರೆ ಬ್ಯಾರಿ ಮಕ್ಕಳು —ಎದ್ರಿರು

1ನೇ ಎದ್ರಿ:- ಸಿಜಾಡಿಗ್ರಾನು

2ನೇ ಎದ್ರಿ:- ಲ್ಯಾಂಡ್ ಗ್ರಾಮಸ್ತರು.

ಸದ್ರಿ ಎದ್ರಿಗೆ ಕೋರ್ಟಿಗೆ ಹಾಜರು ಸ್ವಕಾರ ಈ ಮೂಲಕ ತಿಳಿಸಿಹಿಸುವುದೇನೆಂದರೆ

ಮೇಲಿನ ಅಮಲ್ದಾರಿಯಲ್ಲಿ ಬಾಕಿಯಾದ ಬೇಲಿಂ ಇನ್ನು ಹಾಜರ ದರತಗಳನ್ನು ಸ್ವಾರ್ಯಸಿಕ್ಕೂ ಕಾಯ್ದು ಮೇಲಾಂಗೆ ನಿಲ್ಲುವಲೇ ಪಸಾರ್ಡರ್ ಕೇರಿಯೂ ಮೂಡಿದ R E A 59/63ನೇ ಆರ್ಜೆಯನ್ನು ತಾ. 12-7-63ಕ್ಕೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪಸರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾಪಾಡಿ ಯಿಸ್ತೆ ಕಂಡಂತೆ ತೀರ್ಮಾನಿಸಲಾಗುವುದೆಂಬ.

(Sd) M Sadashiva Rao

Vakil for petitioners.

ತಾ. 25—6—1963.



ಚೀನೀಯ ಸಂಧಾನ ಸೂತ್ರಗಳ ನಿಜಬಣ್ಣ

(ಇನೇ ಮುಟದಿಂದ)

ವುದರಿಂದ,ಇದನ್ನು ಭಾರತವು ಒಪ್ಪಿಕೊಂಡರೆ, ಪರ್ವತ ಪ್ರದೇಶದ ಹಲವಾರು ಕಣಿವೆಗಳ ಮೇಲೆ ಭಾರತೀಯ ನಿಯಂತ್ರಣವು ತಪ್ಪಿ, ಆಕ್ರಮಣಶೀಲ ಚೀನೀಯರಿಗೆ ಇನ್ನೂ ಹೆಚ್ಚಿಗೆ ಮುಂದು ಬರಲು ಸದವಕಾಶವೊದಗಿ ತನಗೆ ಬೇಕೆಂಬಾಗ ತನ್ನ ಸಾರ್ವಾಭ್ಯವಾದವನ್ನು ಪ್ರಯತ್ನಿಸಲು ಸಾಧ್ಯವಾಗುತ್ತದೆ.

ಮಧ್ಯ ಭಾಗದಲ್ಲಿ ಕೂಡ, ಸ್ವೀಕೃತ ನೈಜಸೀಮೆಯಾದ ಹಿಮಾಲಯ ಜಲರಾಶಿಯಿಂದ ದಕ್ಷಿಣಕ್ಕೆ ಎಂದೂ ಚೀನೀಯರು ಇರಲಿಲ್ಲ. ಉತ್ತರ ಪ್ರದೇಶದ ಬಾರ ಹೋತಿಯಲ್ಲಿ ಚೀನೀಯರು ೧೯೫೪ರಲ್ಲಿ ಮೊದಲಿಗೆ ಗಡಿ ಉಲ್ಲಂಘಿಸಿದ್ದರೂ ಅದು ಭಾರತೀಯ ಅಡಳಿತೆಯಲ್ಲಿಯೇ ಇಡೆವು ತ್ತದು ಈ ಹಿಂದೆಯೂದರೂ ಚೀನಿಯ ನಿಯಂತ್ರಣದಲ್ಲಿರಲಿಲ್ಲ. ಹಾಗಿರುವಾಗ ಹಿಂದೆ ಸರಿಯುವ ಅಗತ್ಯವಾದರೂ ಏನುಳಿಯಿತು?

ಲಡಖದಲ್ಲಿ ಸತ್ಯ ಚಿತ್ರ

ಚೀನೀಯ ತ್ರಿಸೂತ್ರ ಸೂಚನೆಯ ಕರಾಳತೆಯು ನವಂಬರ ೭ರಂದಿಗೆ ಲಡಖದಲ್ಲಿ ಸರಿಯಾಗಿ ವ್ಯಕ್ತವಾಗುವುದು. ಇಲ್ಲಿ ಚೀನೀಯರು ತಮ್ಮ 'ನೈಜ ನಿಯಂತ್ರಣ ರೇಖೆ" ಯೂವುದೆಂದು ಸ್ಪಷ್ಟವಾದ ವಿವರಣೆ ನೀಡುತ್ತಿಲ್ಲ. ಆದರೆ, ತಾವು ಕರೆಯುವ "ಸಾಂಪ್ರದಾಯಿಕ ಮತ್ತು ಪಾರ್ಶ್ವತಿಕ" ಗಡಿ ರೇಖೆಯನ್ನೇ ಇದು ಪ್ರಧಾನವಾಗಿ ಅನುಸರಿಸುತ್ತಿದೆಯೆನ್ನುತ್ತಾರೆ ೧೯೫೯ರ ನವಂಬರದಲ್ಲಿದ್ದಿತೆಂದು ಅವರು ಹೇಳುವ 'ನೈಜ ನಿಯಂತ್ರಣ ರೇಖೆ"ಯು ಯಾವ ರೇಖೆಯೂ ಅಲ್ಲ. ಭಾರತದೊಡನೆ ತಮಗೆ ಗಡಿ ವಿವಾದವಿಲ್ಲವೆಂದು ಸಾರುತ್ತ ಅದನ್ನು ಒಪ್ಪಿಕೊಳ್ಳುತ್ತ ಬರುತ್ತಿರುವಂತೆಯೇ ೧೯೫೯ರ ನಂತರ ಅನ್ಯಾಯವಾಗಿ ಭಾರತೀಯ ನೆಲದ ಮೇಲೆ ಸ್ಥಾಪಿಸಿದ ಕೆಲವೊಂದು ಸೈನಿಕ ಠಾಣೆಗಳನ್ನಿಡಿ ಒಳಗೊಂಡಿದೆ. ಇದು ನಿರ್ಜನ, ದುರ್ಗಮ ಪ್ರದೇಶ. ೧೯೫೯ರ ನವಂಬರದಲ್ಲಿ ನಿಜವಾಗಿ ಇದ್ದ ಸೈನಿಕ ನಿಯಂತ್ರಣ ರೇಖೆಗೂ ಅದೇ ನವಂಬರ ೭ರ ನೈಜ ನಿಯಂತ್ರಣ ರೇಖೆಯೆಂದು ಈಗ ಚೀನೀಯರು ಕರೆಯುವ ರೇಖೆಗೂ ನಡುವೆ ೨೫೦೦ ಚದರ ಮೈಲು ಭಾರತೀಯ ಪುಣ್ಯಭೂಮಿಯಿದೆ.

ಚೀನೀಯರ ನಿಜ ಬಣ್ಣ

ಇದರಿಂದ ಒಂದು ವಿಚಾರ ವ್ಯಕ್ತವಾಗುತ್ತದೆ. ನವಂಬರ ೭, ೧೯೫೯ರ ನೈಜ ನಿಯಂತ್ರಣ ರೇಖೆಯ ಆರ್ಥ ವಿವರಣೆಯನ್ನು ಚೀನೀಯರು ತಮಗನುಕೂಲವಾಗುವಂತೆ ೧೯೬೨ರ ಅಕ್ಟೋಬರ ೨೦ರ ನಂತರ ತಾವು ನಡೆಸಿದ ಮಹಾಕ್ರಮಣ ನಿಯಂತ್ರಣಕ್ಕೆ ತಂದುಕೊಂಡ ಭಾಗವನ್ನು ನುಂಗಿ ಹಾಕಲು ಅನುಕೂಲವಾಗುವಂತೆ ಮಾಡಿದ್ದಾರೆ.

ಸಪ್ತಂಬರ ೮, ೧೯೬೨ರ ನೈಜನಿಯಂತ್ರಣ ರೇಖೆ ಮತ್ತು ಚೀನೀಯರು ವಿವರಿಸುವ ನವಂಬರ ೭ ೧೯೫೯ರ ರೇಖೆಯ ನಡುವೆ ೩,೫೦೦ ಚದರ ಮೈಲು ಅಂತರವಿದೆ. ಇದನ್ನು ಚೀನಾವು ಕನ್ನ ತೆಗೆದಿರಿಸಿ ಆಕ್ರಮಣದಿಂದ

ಜಾಗತಿಕ ಆಹಾರ ಸಮ್ಮೇಳನ

(ಇನೇ ಮುಟದಿಂದ)

ರೈತೆಯೂ ಸಮಸ್ಯೆಯ ವೇದಿಕೆಯಲ್ಲಿ ನೆರವಿಗೊಂಡ ಈ ದೃಶ್ಯವನ್ನು ಸಾವಿರ ಜನ ಸಭಿಕರು ನೋಡಿದರು. ಡಾ. ರಾಧಾಕೃಷ್ಣನ್ ಸ್ಪಷ್ಟವಾಗಿ ಉಲ್ಲದಿದ್ದರೂ ಪರೋಕ್ಷವಾಗಿ ನಮಗೆ ಕಿವಿ ನಿಮಗೆ ಅಜೀರ್ಣವೆಂದು ಸೂಚಿಸಿದರು. ಇಬ್ಬರೂ ಸೇರಿದರೆ ಪರಿಸ್ಥಿತಿಯ ಅರಿವು, ಪರಿಹಾರವೂ ಏಕಕಾಲಕ್ಕೆ ಒದಗೀತೆಂದರು. ಅಂಕರಾ ನೆರವು ಎಷ್ಟು ಆವಶ್ಯಕವೋ ಪ್ರತಿ ಪೇರದೊಗಿನ ಸರ್ಕಾರಿ ಸಾರ್ವಜನಿಕ ಪ್ರಯತ್ನವೂ ಅಷ್ಟೇ ಅವಶ್ಯಕವೆಂದು ಡಾ. ರಾಧಾಕೃಷ್ಣನ್ ಸಾರಿದರು. ಅಧ್ಯಕ್ಷ ಕೆನೆಡಿ ಸಮ್ಮೇಳನದ ಉನ್ನತ ಉದ್ದೇಶವನ್ನು ಪ್ರಶಂಸಿಸುತ್ತ, ಹಸಿವಿನಿಂದ ವಿಮೋಚನೆ ಪಡೆಯುವ ಈ ಮಹಾ ಪ್ರಯತ್ನಕ್ಕೆ ಅಮೇರಿಕವು ಪೂರ್ತಿ ನೆರವು ನೀಡುವುದೆಂದು ಆಶ್ವಾಸನೆಯನ್ನಿತ್ತರು. ಅಮೇರಿಕವು ಈಗಾಗಲೇ ಶಾಂತಿಗಾಗಿ ಆಹಾರ ಸರಬರಾಜು, ಪ್ರಗತಿಗಾಗಿ ಒಪ್ಪಂದ, ಶಾಂತಿ ಸೇನೆ ಮುಂತಾದ ಮಾರ್ಗಗಳಿಂದಲೂ, ಆಹಾರ ಮತ್ತು ಕೃಷಿ ಸಂಸ್ಥೆಗೆ ಬೆಂಬಲ ನೀಡುವುದರ ಮೂಲಕವೂ ಚಳವಳಿಯಲ್ಲಿ ಪ್ರಾಮುಖವಾಗಿ ಭಾಗವಹಿಸುತ್ತಿದೆಯೆಂದು

ಪಡೆಯಿತು. ಅದುದರಿಂದ ಚೀನಾದ ಸಲಹೆಗಳನ್ನು ಅಂಗೀಕರಿಸುವುದೆಂದರೆ, ಚೀನಾವು ಆಕ್ರಮಣ ಫಲವನ್ನು ಸಂಪೂರ್ಣ ಜೀರ್ಣಿಸಿಕೊಳ್ಳುವಂತೆ ಮತ್ತು ಅದು ಮುಂದೆಯೂ ಹೆಚ್ಚಿನ ಆಕ್ರಮಣವನ್ನು ಮಾಡಲು ಪ್ರೋತ್ಸಾಹಿಸುವಂತೆ ಆಗುವುದು. ಇಂತಹ ಪರಿಸ್ಥಿತಿಯಲ್ಲಿ ಚೀನಾದ ತ್ರಿಸೂತ್ರಗಳನ್ನು ಸ್ವೀಕರಿಸುವುದು ಸರ್ವಥಾ ಸಾಧ್ಯವಿಲ್ಲ.

ಸೂಚಿಸಿದ ಬಳಿಕ ಎಲ್ಲಿ ಚೇಡಿಕೆ ಆತಿಯೂ ದೆಯೋ ಅಲ್ಲಿಯೂ ಹೆಚ್ಚು ಉತ್ಪಾದನೆ ಮಾಡುವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ, ವಿಜ್ಞಾನದ ಪ್ರಗತಿಯಿಂದಾಗಿ ಇದು ಸಾಧ್ಯವೆಂದೂ, ಘೋಷಿಸಿದರು. ಇಬ್ಬರು ಅಧ್ಯಕ್ಷರೂ ಬಹಿರಂಗ ಸಭೆಯಿಂದ ವಿರಮಿಸಿದ ಬಳಿಕ ಗಣ ನಿಮಿತಗಳ ತರುವಾಯ ಸಮ್ಮೇಳನವು ಮಾರಲ ಸಹಿಸಿ, ಟೆಕ್ಸಾಸಿನ ಅಮೇರಿಕನ್ ಫೆಡರಲ್ ಸರಕಾರದ ಕೃಷಿ ಸಚಿವ ಓರ್ ವಿಲ್ ಫ್ರೀಮ್ಯಾನ್ ಅವರನ್ನು ಸಮ್ಮೇಳನದ ಅಧ್ಯಕ್ಷರೆಂದು ಒಪ್ಪಿಕೊಂಡಿತು. ಅನಂತರ ಸಂ. ರಾ. ಸಂಸ್ಥೆಯ ಶೈಕ್ಷಣಿಕ ಆರೋಗ್ಯ, ಹವಾಮಾನ, ಯೂನಿಸೆಫ್ ಮುಂತಾದ ಬೇರೆ ಬೇರೆ ಅಂಗ ಸಂಸ್ಥೆಗಳ ಪರವಾಗಿ ಪ್ರಸ್ತುತ ಸಮ್ಮೇಳನಕ್ಕೆ ಶುಭವನ್ನು ಕೋರಲಾಯಿತು. ಆಹಾರಾಹ್ವದ ಎರಡನೆಯ ಬಹಿರಂಗ ಅಧಿವೇಶನದಲ್ಲಿ ಪಬ್ಲಿಸ್ಪಿಟಿಸ್ಟ್ ಆಹಾರ ಮತ್ತು ಕೃಷಿ ಸಂಸ್ಥೆಯ ಜನನವಾದದ್ದನ್ನು ಸ್ಮರಿಸಿಗೆ ತರುವಂತೆ ಆ ಸಂದರ್ಭದಲ್ಲಿ ಉಪಸ್ಥಿತರಾಗಿದ್ದ ನ್ಯಾಯಮೂರ್ತಿ ಮಿಲ್ಲಿನ್ ಜೋನ್ಸ್ ಅವರು ಡಾ. ಸೇನರಿಗೆ ಒಂದು ನೆನಪಿನ ಫಲಕವನ್ನೊಪ್ಪಿಸಿದ ತರುವಾಯ, ಅದೇ ಸಮ್ಮೇಳನದಲ್ಲಿ ಭಾಗವಹಿಸಿದ ಇನ್ನೊಬ್ಬ ತಜ್ಞರು 'ಜಾಗತಿಕ ಆಹಾರ ಬ್ಯಾಂಕೊಂದನ್ನು ತೆರೆಯಬೇಕೆಂದು ಸೂಚಿಸಿದರು ಅವರ ನಂತರ ಜಾಗತಿಕ ಬ್ಯಾಂಕಿನ ಅಧ್ಯಕ್ಷರು ತಮ್ಮ ಉಪನ್ಯಾಸದಲ್ಲಿ ಕೃಷಿಯು ಮಹತ್ವವನ್ನು ಒತ್ತಿ ಹೇಳಿ, ಜಾಗತಿಕ ಬ್ಯಾಂಕು ಇದುವರೆಗೆ ಪ್ರಪಂಚದ ಕೃಷಿ ಮಂಡಲಕ್ಕೆ ೬೫೦ ಮಿಲಿಯ ಡಾಲರುಗಳ ಸಾಲವನ್ನು ಒದಗಿಸಿರುವುದನ್ನೂ ಭಾರತ, ಪಾಕಿಸ್ತಾನ, ಸೂಡಾನ್ ಮುಂತಾದ ದೇಶಗಳಲ್ಲಿ ಅದರ ಪರಿಣಾಮವಾಗಿ ನಿರ್ದಿಷ್ಟ ಬೆಳವಣಿಗಳಲ್ಲಿ ಅಭಿವೃದ್ಧಿಯು ಕುರುಹು ಕಂಡು ಬಂದುದನ್ನೂ, ವಿಸ್ತೃತವಾಗಿ ವರದಿ ಮಾಡಿದರು. ಔದ್ಯಮಿಕ ರಂಗದಲ್ಲಿಯೂ ಅಕ್ಷರಾಭ್ಯಾಸದಲ್ಲಿಯೂ ಅಭೂತ ಪೂರ್ವ ಪ್ರಗತಿಯನ್ನು ಕಂಡ ಈ ಇಪ್ಪತ್ತು ವರ್ಷಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮನುಷ್ಯ ಜನಾಂಗವು ಹಸಿವಿಗೆ ಈಡಾದುದನ್ನು ಅವರು ವೇದಪೂರ್ವಕವಾಗಿ ಬಿನ್ನವಿಸಿ, ನವ್ಯ ಸಂಸ್ಥೆ ಹೆಚ್ಚು ಹೆಚ್ಚಾಗಿ ಕೈಮಿಸಿಲಬಳಕ್ಕೆ ನೆರವು ನೀಡಲು ಮುಂದಾಗುವುದೆಂದು ಆಶ್ವಾಸನೆ ನೀಡಿದರು. ಆ ಮೇಲೆ ಭಾರತದ ಡಾ. ಚಿಂತಾಮಣ ದೇಶಮುಖ ಅವರನ್ನೊಳಗೊಂಡ ಹತ್ತು ಜನರ ಕಾರ್ಯಕ್ರಮ ಸಮಿತಿ ಚುನಾವಣೆಯಲ್ಲಿ ಆಯ್ಕೆಯಾಯಿತು. ಅಲ್ಲಿಂದ ಸಮ್ಮೇಳನದ ಕಾರ್ಯವು ನಾಲ್ಕು ಮುಖ್ಯ ಸಮಿತಿಗಳಲ್ಲಿ ವಿಭಜಿತವಾಯಿತು:—೧] ತಾಂತ್ರಿಕ ಸಮಿತಿ ೨] ಆರ್ಥಿಕ ಮತ್ತು ಸಾಮಾಜಿಕ ಸಮಿತಿ ೩] ಶಿಕ್ಷಣ ಮತ್ತು ಸಂಶೋಧನೆ ಸಮಿತಿ ೪] ಸಾರ್ವಜನಿಕ ಸಹಕಾರ ಮತ್ತು ಸಾಂಘಿಕ ಪ್ರಯತ್ನ ಸಮಿತಿ.

ಆಹಾರ ಸಮಸ್ಯೆಯ ಮೇಲೆ ಜಿಕ್ಕ ದೃಷ್ಟಿ

ಮುಂದಿನ ೧೦ ದಿನಗಳಲ್ಲಿ ಆಹಾರ ಸಮಸ್ಯೆಯ ಮೇಲೆ ವಿಸ್ತೃತವಾದ ಚಿಕ್ಕ ದೃಷ್ಟಿಯನ್ನು ಹೊರಳಿಸುವುದರಲ್ಲಿ ಈ ಸಮಿತಿಗಳು ಪ್ರಶಸ್ತವಾಗಿರುವುದನ್ನು ನಾನು ನೋಡಿದ್ದೇನೆ. ಆರ್ಥಿಕ ಮತ್ತು ಸಾಮಾಜಿಕ ಸಮಿತಿಯಲ್ಲಿಯೂ, ಸಾರ್ವಜನಿಕ ಸಹಕಾರ ಸಮಿತಿಯಲ್ಲಿ ಭಾಗವಹಿಸಿದ್ದನಿಗೆ ಪ್ರತಿಯೊಂದು ಸಮಿತಿಯು ಬರಿದಿಯೂ ಅಮೂಲ್ಯವಾದ ತೀರ್ಮಾನಗಳನ್ನು ಅಸಕ್ತ ರಾಷ್ಟ್ರಗಳ ಸರಕಾರಗಳಿಗೂ, ಜನರಿಗೂ ಸೂಚಿಸುವುದು ನಿಶ್ಚಿತವೆಂದು ವ್ಯಕ್ತವಾಯಿತು. ತಜ್ಞರು ತಯಾರಿಸಿದ ಲಿಖಿತ ಬಂಧಗಳ ಮೇಲೆ ಲವಾರು ವಿದ್ವಾಂಸರು ತಮ್ಮ ಅಭಿಪ್ರಾಯ ಬೆಳಕನ್ನು ಬೀರಿ ಸಮಸ್ಯೆಗಳ ಪರಿಹಾರಕ್ಕೆ ಸಮನ್ವಿತ ಕಾರ್ಯರೂಪರೇಖೆಯನ್ನು ಸೂಚಿಸುವರೆಂದು ನಿರ್ಣಯವಾಯಿತು. ಆಹಾರ ಮತ್ತು ಕೃಷಿ ಸಂಸ್ಥೆ ಈಗಾಗಲೇ "ಆಹಾರಾಭಾವ ಮತ್ತು ಆರೋಗ್ಯ" "ಜನಸಂಖ್ಯೆ ಮತ್ತು ಆಹಾರ" ಮುಂತಾದ ಹಲವಾರು ಪ್ರಕಟನೆಗಳ ಜತೆಗೆ ಕಳೆದ ಫೆಬ್ರುವರಿಯಲ್ಲಿ ಜಿನೇವಾದಲ್ಲಿ ವೈಜ್ಞಾನಿಕರ ಒಂದು ಸಮ್ಮೇಳನವನ್ನು ಕರೆದು ಕೃಷಿಗೆ ವಿಜ್ಞಾನವನ್ನು ಬೆರೆಸಿಕೊಳ್ಳುವ ಬಗೆಯ ಕುರಿತು ಅಧ್ಯಯನ ನಡೆಸಿದೆ, ಅವರ ಅಧ್ಯಕ್ಷ ಧ್ಯಾಕರ್ (ಭಾರತ) ಅವರು ಹೊರಡಿಸಿದ ಪ್ರಾಮುಖ್ಯ ವಾದಿ ಹಿಂದುಳಿದ ರಾಷ್ಟ್ರಗಳಿಗೆ ತಾಂತ್ರಿಕ ಕೈಪಿಡಿಯಾಗಬಲ್ಲುದಾದರೆ ವಾರಿಂಗ್ಟನ್ನಿನಲ್ಲಿ ಕೂಡಿರುವ ಪ್ರಸ್ತುತ ಸಮ್ಮೇಳನದ ವರದಿಯು ಸರಕಾರದ ಆಹಾರ ಧೋರಣೆ ಎಂತಿರಬೇಕೆಂಬ ಬಗ್ಗೆ ವಿಸ್ತೃತವಾಗಿ ಮಾರ್ಗದರ್ಶನವನ್ನೆ ನೀತಬಲ್ಲುದು ರಾಜಕೀಯ ವಿಷಯ ವೈಲ್ಯದಿಂದ ದೂರವಾದ ಈ ಬೃಹತ್ ಪರಿಷತ್ತಿನ ಪ್ರಯತ್ನ ಸಾರ್ಥಕವಾಗುವುದು. ಸದಸ್ಯ ರಾಷ್ಟ್ರಗಳ ಧೋರಣೆಯಲ್ಲಿ ಅದು ಜೀವಂತವಾಗಿ ಬೆಳೆಯಬಹುದು. ಆಹಾರ ಹೆಚ್ಚು ಬೆಳೆಸುವ ಪ್ರಗತಿಪರ ಕೃಷಿ ಪದ್ಧತಿಯಲ್ಲಿ, ಆರೋಗ್ಯದ ವೇಗೆಯನ್ನು ಅಡಗಿಸುವ ಅವ್ಯವಸ್ಥಿತ ಜಾಗತಿಕ ಆಹಾರ ಸಮ್ಮೇಳನ.

(ಸಂಯುಕ್ತ ಕರ್ನಾಟಕದ ಕೃಪೆಯಿಂದ)

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆರ್ಡರಿನ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿನಿಧಿಗಳು— ಮುಂಗಳೂರಲ್ಲಿ ಶ್ರೀನಿವಾಸ್ ಬುಕ್ಸ್, ಸ್ವದೇಶಿ ಬುಕ್ ಕೊ ಕೆನರಾ ಕಾಲೇಜು ಬುಕ್ ಕೊ., ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಎಜುಕೇಷನ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ರೇಲುದಾರಿಯ ವಿಷಯದಲ್ಲಿ

ಕನ್ನಡಿಗರದು ಕಣ್ಣೀರ ಕಥೆಯೆ?

ಕರ್ನಾಟಕ ರಾಜ್ಯದ ಬಹು ವರ್ಷಗಳ ಬೇಡಿಕೆಗಳಲ್ಲಿ ಮಂಗಳೂರು ಬಂದರ ಮತ್ತು ಹಾಸನ—ಮಂಗಳೂರು ರೇಲು ದಾರಿಯೂ ಒಂದು. ಇನೆರಡೂ ಬಹು ಪ್ರಯತ್ನ ಮತ್ತು ಪರಿಶ್ರಮಗಳ ಫಲವಾಗಿ ಕೈಗೆ ಬಂದಿತು ಎನ್ನುವಾಗ, ಅದು ಮರಳಿ ಕೈಬಿಡುವ ಲಕ್ಷಣಗಳ್ಕಾಗಿ ಸ್ಪಷ್ಟವಾಗಿ ಗೋಚರವಾಗ ತೊಡಗಿವೆ; ಇದನ್ನ ಕನ್ನಡಿಗರ ದುರ್ದೈವವೆನ್ನಬೇಕೇ ಅಥವಾ ರಾಜ್ಯ ಸರಕಾರದ ಆತ್ಮಾರ್ಪಣತೆಯೆಂದು ಕರೆಯಬೇಕೇ ಇಲ್ಲವೇ ಕೇಂದ್ರವು ದಕ್ಷಿಣದ ರಾಜ್ಯಗಳ ಕಡೆಗೆ ಅನಾಸ್ಥೆ ಪ್ರದರ್ಶಿಸುತ್ತಿದೆಯೆಂದು ದೂರ ಬೇಕೆ? ಪ್ರಾಯಶಃ ಈ ಮೂರೂ ಸ್ವಲ್ಪ ಸ್ವಲ್ಪ ಮಟ್ಟಿಗೆ ಸರಿಯೆಂದು ಒಪ್ಪಬೇಕಾಗುವುದೋ ಏನೋ!

ಆಧುನಿಕ ಕಾಲದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉನ್ನತಗೊಳಿಸಲು ಸಾರಿಗೆ ಸಂಪರ್ಕಗಳ ವ್ಯವಸ್ಥೆಯು ಪ್ರಮುಖವಾದುದು. ಕರ್ನಾಟಕದ ವಾಣಿಜ್ಯಿಕ ಸಂಪತ್ತಿನ ಸದುಪಯೋಗವನ್ನು ನಾವು ಮಾಡಿಕೊಳ್ಳುತ್ತಿಲ್ಲ. ಇದಕ್ಕೆ ನಮ್ಮ ಬಂದರಗಳ ಸಿರ್ಮಾತ ಶಕ್ತಿಯು ಬೆಳೆಯದಿದ್ದುದೇ ಪ್ರಬಲಕಾರಣ. ರಾಜ್ಯ ಸರಕಾರವು ಸೃಷ್ಟಿಯು ರಾಜ್ಯಕ್ಕಿತ್ತ ನೈಸರ್ಗಿಕ ಸಂಪತ್ತನ್ನ ಸರ್ವರೀತಿಯಿಂದಲೂ ಉಪಯೋಗಿಸಿಕೊಳ್ಳುವ ಪ್ರಯತ್ನ ನಡೆಸಿದರೆ, ಆದರಿಂದ ನಮ್ಮ ಕಲ್ಯಾಣವಾಗುವುದು ನಿಶ್ಚಿತ. ಆದರೆ, ಈ ದಿನೆಯಲ್ಲಿ ಸಾಕಷ್ಟು ಕೆಲಸ ನಡೆಯುತ್ತಿಲ್ಲ; ಇದರಿಂದಾಗಿ ನಮ್ಮ ವ್ಯಾಕೃತಿಕ ಸಂಪತ್ತು ಕೊಳೆತು ನಾರುತ್ತ ವ್ಯರ್ಥವಾಗುತ್ತ ಸಾಗುತ್ತಿದೆ.

ಕನ್ನಡದ ಭೂಮಿ ದರಿದ್ರಳು. ಇಲ್ಲಿ ಖನಿಜ ಸಂಪತ್ತು ಧಾರಾಳವಾಗಿದೆ; ಅರಣ್ಯ ಸಂಪತ್ತು ಹೇರಳವಾಗಿದೆ. ಬೆಲೆ ತರುವ ಬೆಳೆಗಳಿಗೂ ಸಮೃದ್ಧಿಲೆ ಬರಗಾಲವಿಲ್ಲ. ಆದರೆ, ಕರ್ನಾಟಕವು ಒಂದರಗಳಿಗೂ ಈ ವುಗಳ ಹಿನ್ನಾಡುಗಳಿಗೂ ನೇರ ಸಂಪರ್ಕ ಸಾಧನಗಳ ಅಭಾವದಿಂದಾಗಿ ಅವುಗಳ ಪ್ರಯೋಜನವನ್ನು ನಾವು ಮಾಡಿಕೊಳ್ಳುವುದರಲ್ಲಿ ಅಸಮರ್ಥರಾಗಿದ್ದೇವೆ. ಇದೇ ಪರಿಸ್ಥಿತಿಯು ಇನ್ನು ಮುಂದೆಯೂ ಕೆಲವರ್ಷ ಉಳಿಯುತ್ತೆಂದರೆ, ಕನ್ನಡಿಗನನ್ನು ಕೇಳುವವರೇ ಇಲ್ಲವೆನ್ನುವ ಮಾತು ಸತ್ಯ ಸಿದ್ಧವಾಗುವುದು. ಮಂಗಳೂರು ಪ್ರಬುದ್ಧ ಬಂದರವಾಗುವುದು ಮತ್ತ ಹಾಸನ ಮಂಗಳೂರು ರೇಲುದಾರಿ ನಿರ್ಮಾಣವಾಗುವುದು ಎಂಬ ಆಲೆಯೂ ಈಗ ಸದ್ಯಕ್ಕೆ ನಿರಾಲೆಯಲ್ಲಿಯೇ ಪರ್ಯವಸಾನಗೊಳ್ಳುವಂತಾದರೆ, ಕನ್ನಡಿಗನದು ನಿಜಕ್ಕೂ ಕಣ್ಣೀರ ಕಥೆಯಾಗಿಯೇ ಉಳಿಯುವುದು.

ಮಂಗಳೂರು ಪಟ್ಟಿನ ಕರಾವಳಿಯ ದೊಡ್ಡ ಬಂದರು. ಗೋವೆಯನ್ನು ಪೋರ್ಚುಗೀಸರ ವಸಾಹತೀಕರಿಸುವಾಗ ಪಟ್ಟಿಣ ಕರಾವಳಿಯಲ್ಲೊಂದು ಮುಖ್ಯ ಬಂದರವಾಗಬೇಕೆಂಬ ಅಭಿಪ್ರಾಯವಿದ್ದು, ಈ ಸಂಬಂಧದಲ್ಲಿ ಸಾಕೆಂಬಷ್ಟು ಹೆಗರಣ ನಡೆದಿದೆ. ದರಿಂದಲೇ ಕರ್ನಾಟಕದ ಕರಾವಳಿಯು ಬಂದರ ಪಡೆಯಲು ಅನರ್ಹವಾಯಿತೆಂದರೂ ತಪ್ಪಾಗಲಾರದು. ಇಂದು ಗೋವೆಯು ನಮ್ಮ ಕೈಸೇರಿರುವುದರಿಂದ ಮತ್ತೆ ಮಹಾ ಬಂದರದ ಪ್ರಶ್ನೆಯೇಳುವುದುಅಸ್ವಾಭಾವಿಕ.ಆದರೆ,ಕರ್ನಾಟಕಕ್ಕೊಂದು ಸರ್ವಋತು ಬಂದರಾದರೂ ಬೇಡವೇ? ಆದಕ್ಕೆಂದೇ ಹಲವು ವರ್ಷಗಳ ತಾಕಲಾಟದ ಪರಿಣಾಮವಾಗಿಯೆಂಬಂತೆ ಮಂಗಳೂರಿನ ಆಯ್ಕೆ ನಡೆಯಿತು ಪಣಂಬೂರು ಬದಿಯಲ್ಲಿ ಇದನ್ನು ಕಟ್ಟುವ ನಿರ್ಧಾರವಾಗಿ, ಕಾರ್ಯಕ್ಕೂ ಆರಂಭವಾಯಿತು ಎನ್ನುವಂತಾಯಿತು. ಆದರೆ, ಈ ಬಂದರವು ಎಂದು ಸಂಪೂರ್ಣ ನಿರ್ಮಾಣಗೊಳ್ಳುವುದೆಂಬುದರ ಬಗ್ಗೆ ಯಾರಿಗೂ ನಿರ್ದಿಷ್ಟ ಅಭಿಪ್ರಾಯ ನಿರುವಂತೆ ಕಾಣುವುದಿಲ್ಲ. ಇದಕ್ಕೆ ನಿದರ್ಶನವಾಗಿ ನಿಂತಿದೆ ಹಾಸನ-ಮಂಗಳೂರು ರೇಲುದಾರಿ ರಚನೆಯ ಕುಂಟು ನಡಿಗೆ!

ಭಾರತಕ್ಕೆ ಸ್ವಾತಂತ್ರ್ಯ ಬಂದು ವರ್ಷಗಳುರುಳಿದುವು ಹದಿನೈದು. ಎರಡು ಪಂಚವಾರ್ಷಿಕ ಅಭಿವೃದ್ಧಿ ಯೋಜನೆಗಳು ಮುಗಿದು, ಮೂರನೆಯದರಲ್ಲೂ ಮೂರನೆಯ ವರ್ಷಕ್ಕೆ ಪಾದಾರ್ಪಣ ಮಾಡಿದ್ದೇವೆ ನಾವು.ನಮ್ಮ ದುರ್ದೈವದಿಂದ ಹೇಳಿಸಿಕೊಳ್ಳುವಂತೆ ಕರ್ನಾಟಕದಲ್ಲಿ ಹೊಸ ರೇಲುದಾರಿಗಳ ನಿರ್ಮಾಣವಾಗಿರುವುದಿಲ್ಲ; ಹಳೆಯವುಂತೂ ಅಲ್ಲೊಂದು ಗೀರು, ಇಲ್ಲೊಂದು, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹಾಸನ-ಮಂಗಳೂರು ರೇಲುದಾರಿಯೊಗಲೇಬೇಕೆಂಬ ಒತ್ತಾಯ ಬೀಳಲು ಉಪಾಯಗಾರಣದ ಕೇಂದ್ರ ಸರಕಾರವು ಆ ಬಗ್ಗೆ ಪರಿಶೀಲನೆ ನಡೆಸುವ ಆಶ್ವಾಸನೆ ಕೊಟ್ಟಿತು. ಆಮೇಷ್ಟು ಕಾರ್ಯರೂಪಕ್ಕೆ ಬಂದಿದೆಯೆನ್ನುವುದು ಎಲ್ಲರಿಗೂ ಗೊತ್ತು. ಅಂತೂ ತೃತೀಯ ಯೋಜನೆಯಲ್ಲಿ ಇದನ್ನು ಆಳವಡಿಸುವ ನಾಟಕ ನಡೆಯಿತು. ಪರಿಶೀಲನೆಯೂ ನಡೆಯುತ್ತಿರುವಂತೆ ತೋಚಬಹುದು. ಹಾಸನ, ಸಕಲೇಶಪುರ ಮತ್ತು ಪುತ್ತೂರುಗಳಲ್ಲಿ ಪರಿಶೀಲನಾ ಕೇಂದ್ರವೂ ಉದ್ಘಾಟಿಸಲ್ಪಟ್ಟಿತು; ತಕ್ಕ ಸಿಬ್ಬಂದಿಯ ನೇಮಕವೂ ಆಯಿತು. ಆದು ಕೆಲಸಕ್ಕೂ ಆರಂಭಿಸಿತು; ಮತ್ತು ಸ್ವಲ್ಪ ಮಟ್ಟಿಗೆ ಕೆಲಸವನ್ನೂ ಮಾಡಿತು. ಇದರಿಂದ ಕನ್ನಡಿಗರಿಗೆ ತಮ್ಮ ಬಹು ವರ್ಷಗಳ ಕನಸು ನನಸಾಗುವ ದಿನ ಹೆಚ್ಚು ದೂರವಿಲ್ಲವೆಂದು ಮನವರಿಕೆಯೂ ಆಯಿತು. ತಮ್ಮ ಪರಿಶ್ರಮ ಕೊನೆಗಾದರೂ ಫಲವಾಯಿತೆಂದೂಹಿಸಿ ತೃಪ್ತಿಪಡುವಂತೆಯೂ ಆಯಿತು. ಆದರೆ, ಇಂದು ನೇಮಿಕ ಸಿಬ್ಬಂದಿಯನ್ನು ಅನ್ಯಶ್ರಿ ವರ್ಗಮಾಡಿ, ಸ್ಥಾಪಿತ ಪರಿಶೀಲನಾ ಕೇಂದ್ರಗಳನ್ನು ಮುಚ್ಚುವ ನಿರ್ಧಾರವು ಅವರ ಎಣಿಕೆ ಆಕಾಶ ಗೋಪುರವೆಂಬುದನ್ನು ಪ್ರತ್ಯಕ್ಷ ಸಿದ್ಧಗೊಳಿಸಿತು!

ಈ ಸಂಬಂಧದಲ್ಲಿ ಇಂದು ಒಂದು ಸಮಾಧಾನವನ್ನು ಕೇಂದ್ರ ಸರಕಾರ ಕೊಡುತ್ತಿದೆ. ಹಾಸನ-ಮಂಗಳೂರು ರೇಲುದಾರಿಯನ್ನು ಮಂಗಳೂರು ಸರ್ವಋತು ಬಂದರದೊಡನೆ ಅದು ಜೋಡಿಸಿಕೊಂಡಿದೆ. ಬಂದರ ನಿರ್ಮಾಣವು ಪೂರ್ಣವಾಗುವಷ್ಟರಲ್ಲಿಯೇ ರೇಲುದಾರಿಯೂ ಕೊನೆಗೊಳ್ಳುವುದು ಎಂದದು ಭರವಸೆಯಿಯುತ್ತಿದೆ. ನೀರಲ್ಲಿ ಮುಳುಗುವವಸಿಗೆ ಹುಲ್ಲುಕಡ್ಡಿ ದೊರೆತರೂ ಅದರಿಸುವ ಪ್ರಯತ್ನವನ್ನಾತ ಮಾಡುತ್ತಾನೆ. ಅವನದೇ ದುರದೃಷ್ಟವೆಯೆಂದು ಕನ್ನಡಿಗರಿಗೂ ಸಮಸಿಷಿಯೆಂದರೆ, ಕಪ್ಪೆಸಿನೀತೆ? ಅಥವಾ ತಮ್ಮ ಇಚ್ಛೆ, ಅವಶ್ಯಕತೆಯು ನಡು ನದಿಯಲ್ಲಿ ಕೈ ಬಿಟ್ಟವೆಂದು ಅವರು ನಿರಾಶೆಯಿಂದಲಾದರೂ ನೆಗುವಂತಾಯಿತೆನ್ನ ಬೇಕೆ?

ಬಂದರ-ರೇಲುದಾರಿಗಳ ನಡುನೆ ಸಂಬಂಧವಿದೆಯೆಂಬುದನ್ನು ಒಪ್ಪೋಣ. ಆದರೆ, ಎರಡೂ ಏಕಕಾಲದಲ್ಲಿಯೇ ನಿರ್ಮಾಣಗೊಳ್ಳುವಂತಾಗ ಬೇಕಾದುದು ಅಗತ್ಯವಲ್ಲವೆ? 'ಮದುವೆಯೂಗದೆ ಹುಚ್ಚು ಬಿಡದು; ಹುಚ್ಚು ಬಿಡದೆ ಮದುವೆಯೂಗದ' ಎಂಬಂತೆ ಬಂದರವಾಗದೆ ರೇಲಿಲ್ಲ, ರೇಲಿಲ್ಲದೆ ಬಂದರವಿಲ್ಲವೆಂದಾದರೆ, ರೇಲು ಬಂದರಗಳೆರಡೂ ಕನಸಿನ ಗಂಟೇ ಸರಿ. ಬಂದರದ ಕೆಲಸ ನಿಧಾನವಾಗಿಯಾದರೂ ಸಾಗುತ್ತಿರಲಿ; ಆದರೆ, ತೊಡಗಿದ ರೇಲುದಾರಿಗದು ಬಾಧ್ಯಕವಾಗಿ ಬಾರದು—ಇದು ಕನ್ನಡಿಗರ ಅಂತರ್ಯಾದ ಮೊರೆ.

ಇಲ್ಲಿ ಕೇಂದ್ರ ಸರಕಾರವು ರೇಲುಮಾರ್ಗ ರಚನೆಯಲ್ಲಿ ಅನಾಸ್ಥೆ ತೋರಿಸುತ್ತಿದೆಯೆಂಬ ಆಪವಾದವನ್ನೂ ನಾವು ತುಸು ಪರ್ಯಾಲೋಚಿಸಬೇಕು. ಭಾರತದ ಭೂಪಟವನ್ನು ವೀಕ್ಷಿಸಿದರೆ, ರೇಲು ದಾರಿಗಳೆಲ್ಲವೂ ಕೇಂದ್ರಿಕರಿಸುವುದು ಉತ್ತರ ಭಾರತದಲ್ಲಿ. ದ್ರಾವಿಡ ಮುನ್ನೇತ್ರ ಕಳಗಂ ಆಕ್ಷೇಪಿಸುವಂತೆ ಕೇಂದ್ರ ಸರಕಾರವು ದಕ್ಷಿಣದ ರಾಜ್ಯಗಳನ್ನು ಅಲಕ್ಷಿಸುತ್ತಿದೆಯೆಂಬುದು ರೇಲ್ವೆಗಳ ಮಟ್ಟಿಗೆ ನಿಜವೆನ್ನಬಹುದು ಹಾಗಿರುವಾಗ ಅವರು ದ್ರವಿಡ ಸ್ಥಾನದ ಬೇಡಿಕೆಯನ್ನು ಏಕೆ ಮಂಡಿಸಬಾರದ? ಇಡಿಯ ಭಾರತವು ಏಕ ರಾಷ್ಟ್ರ, ಏಕಮತ್ಯದಿಂದ ನಾವೆಲ್ಲರೂ ಒಂದಾಗಿ ದುಡಿಯಬೇಕು, ಬೆಳೆದು ಬರಬೇಕು. ಇದೇ ನೀತಿಯನ್ನು ರೇಲು ದಾರಿಗಳ ವಿಚಾರದಲ್ಲೂ ಅನುಸರಿಸಬೇಡವೆ? ೨೦೦ ಮೈಲುದ್ದದ ಸಮೃದ್ಧ ಕರ್ನಾಟಕದ ಕರಾವಳಿಯಲ್ಲಿ ಹಲವಾರು ಬಂದರುಗಳಿವೆ; ಅವುಗಳಿಗೆ ಉತ್ತಮ ಹಿನ್ನೆಲೆಯೂ ಇವೆ. ಹಾಗಿರುವಾಗ ಬಂದರ ದಂತೆಯೇ ರೇಲುದಾರಿಗಳೂ ಅವಶ್ಯವಿವೆ. ಇಂದು ಕರಾವಳಿಯಲ್ಲಿರುವ ರೇಲುದಾರಿಗಳುದ್ದ ಕೇವಲ ನೂರಿಲ್ಲು ಮೈಲುಗಳು! ಆದೇನೇಇದ್ದರೂ ತೊಡಗಿದ ಕಾರ್ಯವನ್ನು ಹಿಂದೂಡುವುದೆಂದರೆ, ನಿರಾಶೆಯ ಮಡುವಿನಲ್ಲಿ ಮುಳುಗಿಸಿಡುವುದು ಎಂದರ್ಥ.

ಕರ್ನಾಟಕದಲ್ಲಿ ರೇಲ್ವೆದಾರಿಗಳನ್ನು ನಿರ್ಮಿಸುವ ಬದಲು ಇದ್ದ ದಾರಿಗಳನ್ನು ಕಿತ್ತುಹಾಕುವ ಬೆದರಿಕೆಯನ್ನೂ ರೇಲ್ವೆ ಮಂತ್ರಿಶ್ರೀ ಬೆ ನೀಡಿತ್ತು. ಮೊದಲೊಮ್ಮೆ ಸಾಗರ-ತಾಳಗುಪ್ಪ ದಾರಿಯನ್ನು ಬಂದು ಮಾಡುವ ಆಶಯವನ್ನದು ಪ್ರಕಟಿಸಿತು. ಮತ್ತು, ನಂಜನಗೂಡು-ಚಾಮರಾಜ ನಗರಗಳ ನಡುವಣ ರೇಲುದಾರಿಯನ್ನು ಕೀಳುವ ಆಲೋಚನೆಯನ್ನೂ ಮಾಡಿತ್ತು ಆದರೆ, ಇಂದು ಈ ದುರಾಲೋಚನೆಗಳನ್ನದು ಬಿಟ್ಟುಕೊಟ್ಟಿರುವುದು ಇದ್ದುದರಲ್ಲೇ ತೃಪ್ತಿಗೆ ಕಾರಣ.

ಕೇಂದ್ರದ ರೇಲು ಮಂತ್ರಿ ಶಾಖೆಯು ಕನ್ನಡಿಗರನ್ನು ವಂಚಿಸುತ್ತಿರುವಂತೆ ಭಾಸವಾಗುತ್ತಿದೆ. ಆದುದರಿಂದ ಇಂದು ಕನ್ನಡಿಗರೂ ಅವರ ಸರಕಾರವೂ ಒಂದಾಗಿ ಇಂತಹ ಅಪಚಾರ ನಡೆಯದಂತೆ ನೋಡಬೇಕಾಗಿದೆ. ಕೈಗೆ ಬಂದ ತುತ್ತು ಬಾಯಿಗಿಲ್ಲದಂತಾಗಬಾರದು. ಇದಕ್ಕಾಗಿ ಸರ್ವರಂಗಗಳಲ್ಲಿಯೂ ಸರ್ವ ಪ್ರಯತ್ನ ನಡೆಯಬೇಕು.

ಒಂದು ವೇಳೆ, ರಾಷ್ಟ್ರೀಯ ಗಂಭೀರ ಪರಿಸ್ಥಿತಿಯಿಂದಾಗಿ, ಆರ್ಥಿಕ ದುಸ್ಥಿತಿಯಿಂದ ಈ ದಾರಿಯನ್ನು ಕೈ ಬಿಟ್ಟಿರುವುದಾದರೆ, ದೇಶಹಿತ ದೃಷ್ಟಿಯಿಂದ ಏನು ಮಾಡುವುದೂ ಕಷ್ಟಸಾಧ್ಯವಾಗಬಹುದು ಆದರೂ ತಮ್ಮ ನ್ಯಾಯಮಾರ್ಗ, ಅತ್ಯಗತ್ಯವಾಗಿ ಅವಶ್ಯಕವಾದ ಈ ದಾರಿ ನಿರ್ಮಾಣವಾಗದು ಳದಂತೆ, ನಮ್ಮ ಪಾಡು ಶೋಚನೀಯವಾಗಳುದೆಂಬುದನ್ನಾದರೂ ಮನವರಿಕೆ ಮಾಡಿಕೊಡಬೇಕು.

—ಗೋರಾ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. 14 CT ಚಿನ್ನದ ಆಭರಣಗಳಲ್ಲಿ ೫೮½% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ. ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ದರಗಳಿಗೆ ಪಡೆದುಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸು ಸಿಕ್ಕಿರುತ್ತದೆ.

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಹೌಸ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ಸಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಅಯುರ್ವೇದೀಯ ಮಾತ್ರೆಗಳು!

ಟ್ಯೂಬ್ 10 ಸಾಮಾನ್ಯ ರೂ. 4/. ಮಧ್ಯಮ ರೂ. 6/. ಉತ್ತಮ ರೂ. 9/.

P. Devee & Co. (N. J.) Calcutta—40

ನೀಲಕಾರು ನಿಲ್ಲದೆ ಓಡಿತು

(ಎನೇ ಪುಟದಿಂದ)

ರು ತಿಳಿದರು. ಸುಂದರ ಲಗುಬಗನೆ ಕೆಲಸ ತೀರಿಸಿ ಕಾರ್ಖಾನೆಯತ್ತ ಬಂದಿದ್ದ. ಮೆನೇಜರ್ ಸಿದ್ಧಯ್ಯ ನಿದ್ದೆಯಲ್ಲಿದ್ದ ವರ್ತಮಾನ ಕೇಳಿಯೇ ಬಂದಿದ್ದ. ಊರ ವೊತನ್ನೂ ಅಲ್ಲಗೆಳೆಯದೆ ಎಣ್ಣೆ ಕಾರ್ಖಾನೆಯಿಂದೂ ಸುಂದರ ಬಂದನೆಂಬ ಹೆಸ್ಮೆಯಿಲ್ಲದೇ ತನ್ನ ಪಾಡಿನತ್ತ ಸಾಗಿತ್ತು. ಮೇಗ್ರಣ್ಣ ಎಲ್ಲರ ಪರಿಚಯ ಮಾಡಿಕೊಟ್ಟ ನಮ್ಮ 'ದೊರೆ' ಎಂದೂ ತಿಳಿದ್ದ. ಹಾಗೆಯೇ ಕಾರ್ಖಾನೆಯ ಕೆಲವು ಭಾಗಗಳನ್ನು ನೋಡಲು ಸುಂದರ ಮೇಗ್ರಣ್ಣನನ್ನು ಬರಲು ಕೇಳಿಕೊಂಡ. ಸಂತಸದಿಂದ ಮೇಗ್ರಣ್ಣ ಚಾಚೂ ತಪ್ಪದೆ ಎಲ್ಲಾ ವಿವರವನ್ನೂ ತಿಳಿಸಿದ. ಸುಂದರರಾಯರು ಕೂಲಿಕಾರರ 'ಜೀವಾಳ'ವೆಂದು ಅನೇಕ ಬಾರಿ ಹೊಗಳತೊಡಗಿದ್ದ.

ಮೆನೇಜರ್ ಸಿದ್ಧಯ್ಯನನ್ನು ಸಂಧಿಸಿ ಮೇಗ್ರಣ್ಣ ಸುಂದರನ ಮೊತನಂತೆ ಸಂಬಳ ಏರಿಸಬೇಕೆಂದೂ ದಿನದ ಕೆಲಸ ಕಡಿತ ಮಾಡಬೇಕೆಂದೂ ಸುದಿನ ನೋಡಿ ಕೇಳಿದ. ಅದಕ್ಕೆ ಪ್ರತಿಯಾಗಿ ಮೊತಾಡದೆ ಸುತ್ತಿಗೆಗೆ ಕೈಹಾಕಿ ನೂತಿದ್ದ ಮೆನೇಜರ್, ಮೇಗ್ರಣ್ಣ ಅವನ ಮೇಲೆ ೧೪ಮಾಡುವುದು ಸರಿಯಲ್ಲವೆಂದು ದೂರು ಹೊತ್ತು ಸುಂದರನ ಕೋಣೆಗೆ ಬಂದ. ಅದನ್ನೇ ನಿರೀಕ್ಷಿಸಿದ ಸುಂದರರಾಗೆ ಅದು ವಿಚಿತ್ರವಾಗಿ ಕಂಡಿರಲಿಲ್ಲ. ಜೇಳದ – ಇನ್ನೊಮ್ಮೆ ನಾನೇ ಕೇಳ್ತೀನಿ. ನನ್ನ ಕುತ್ತಿಗೆಗೆ ಕೈಹಾಕಿದಬ್ಬಲಿ. ನೀನು ಕೋಣೆಯ ಬಲ ಮಗ್ಗುಲಿಗೆ ನಿಂತಿರು. ನಾನು ಸೋತೆನೆಂದು ಕೂಗಿದಾಗ ನೀನೆ ....ನಂತರ ಎಲ್ಲ ಕೂಲಿಕಾರರಿಗೂ ಹೇಳಿ ಸ್ಟೈಕ್ ಮಾಡೋಣ ನಾಲ್ಕಾರು ದಿನ ದುಡಿದದ್ದು ಊಟ ಮಾಡಲಿ ನಂತರ ದಾರಿ ತೋರ್ತಿನಿ!—

ಸುಂದರನ ಬಿಸಿ ರಕ್ತ ರೋಮ ದೋ ಮಗಳಲ್ಲಿ ಹೊಗ ಹೊಮ್ಮತೊಡಗಿತು. ಮೆನೇಜರ್ ಭೂತವನ್ನು ಬಲಿ ತೆಗೆದು ಕೊಳ್ಳಲು ಇದೋ ಕಾರ್ಖಾನೆಯ ಕೂಲಿಕಾರರು ಹಲ್ಲುಮಸೆಯುತ್ತಿದ್ದರು. ಆ ದಿನವೂ ಬಾರದೆ ಇರುತ್ತಿರಲಿಲ್ಲವೆಂಬುದು ಸುಂದರ ತಿಳಿದಿದ್ದ ಮೆನೇಜರ್ ಕೋಪಿಷ್ಠ, ಅವನ ಸಂಗಡ ಮೊತನಾಡಿ ಫಲವೂ ತಪ್ಪೆಂದು ಭಾವಿಸಿದ್ದ.

ಎಂದಿನಂತೆ ಸೂರ್ಯ ದಿಕ್ಕಿನಲ್ಲಿಯೇ ಮೂಡಿದ್ದ. ಸುಂದರ ಒಳ ಬಿಸಿ ತಣಿಸಿ ಕಾರ್ಖಾನೆಯತ್ತ ಬಂದಿದ್ದ. ಮೆನೇಜರರು ಗೊರಕೆಯಲ್ಲಿ ಮಗ್ನರಾಗಿದ್ದರು. ಸುಂದರ ತನ್ನ ಕೋಣೆಯ ಬಾಗಿಲಿನ ಕೇಲಿ ಕೈ ಕೇಳಿದ, ಅದಕ್ಕೂ ಹೊಂಗುಟ್ಟಿದ ಮೆನೇಜರ್‌ನ ಮೇಲೆ ಸಿಟ್ಟು ಬಂದು ಅಲ್ಲಿಯೇ ಕುಳಿತ. ಕಣ್ಣು ಬಿಟ್ಟ ಮೆನೇಜರ್ ಸುಂದರ ಬೇಗ ಬಂದಿದನ್ನು ಗಮನಿಸಿ ಇದೇನು ಸುಂದರರಾಯ್ರೆ ಇತ್ತ ಇಷ್ಟು ಬೇಗ ಬಂದಿರಿ! ಸ್ವಲ್ಪ ನಿನ್ನೆಯ ಕೆಲಸವಿತ್ತು ಬೇಗ ಮುಗಿಸೋಣವೆಂದು ಬಂದೆ ಬೇಗದ ಕೈ ಕೊಟ್ಟಿದ್ದರೆ ಜಿನ್ನಾಗಿತ್ತು. ಬೇರು ನಿನ್ನಲ್ಲಿದ್ದ ಜೇ"ದ ಕೈಗೊಂಜಲನ್ನು ಸುಂದರನ ಮುಂದಿಟ್ಟು ಹೇಳಿದ. ಬೇಗದ ಕೈ ಗೊಂಜಲನ್ನು ತೆಗೆದುಕೊಂಡು ಹೋಗಲು ನಾನೇ ಬರುತ್ತೇನೆ ಸುಂದರ ಯೇಳಬೇಕೆಂದಿದ್ದ ಮೊತನ್ನು ಮೆನೇಜರ್ ಬೇಗದ ಕೈ ತೆಗೆದುಕೊಂಡು ಹೋಗಲು ಬಾದಾಗ ಹೇಳಿದರೆ ಆಯ್ತೆಂದು ಕೋಣೆಯ ಬೀಗದ ಕೈ ತೆಗೆದುಕೊಂಡು ಕೋಗಿಯೇ ಬಿಟ್ಟ. ಸಂಬಳ ದಿನವಾದ್ದರಿಂದ ಲೆಕ್ಕ ಆಣಿಗೊಳಿಸಿದ. ಎಲ್ಲ ದಿನಕ್ಕಿಂತಲೂ ಮೇಗ್ರಣ್ಣ ಬೇಗನೆ ಬಂದುದನ್ನು ನೋಡಿದ ಸಂಬಳ ಸಿಕ್ಕಾಗೂ ಆಯ್ತು ನೀತ್ತು ಕೇಳಿದರೆ ಆ ಮೊತು ಕೇಳಿದ್ದಾಗೂ ಆಯ್ತು ಸುಂದರನಿಗೆ ಬೇಗ ಬಂದುದರ ಕಾರಣ ತಿಳಿಸಿ ಕಾರ್ಖಾನೆಯತ್ತ ಹೊರಟು ಹೋದ

ಘಂಟೆ ೯. ಕೂಲಿಕಾರರು ಬಂದು ಲೆಕ್ಕವನ್ನು ಒಪ್ಪಿಸಿ ಹೋಗಿಯಾಯ್ತು. ಮೇಗ್ರಣ್ಣ ಇನ್ನೂ ಕುಂತಿದ್ದ. "ಒಟ್ಟು ಕೈಕೆಳಗೆ ಎಷ್ಟು ಮಂದಿ ದುಡಿಯುತ್ತಾರೆ" ಸುಂದರ ಕೇಳಿದ ಆದಕ್ಕಾಕ್ಕೆ ಗಡಿಬಿಡಿ. ನನ್ನ ಕೈಯಲ್ಲಿ ಅರ್ಧ ಸಾವಿರ ಜನರು ದುಡೀತಾರೆ. ನಾವು ಹೂಂ ಅಂದರೆ ಸಾಕು. ಹೊರಟು ಬಿಡುತ್ತಾರೆ. ಸುಂದರ ಆದಕ್ಕಾಗಿಯೇ ಕೇಳಿದ್ದ. ಆದರೂ ಗುಟ್ಟನ್ನು ಈಗಲೇ ತಿಳಿಸಿದರೆ ಅವರ ಬಿಸಿರುಚಿ ಹಾರುತ್ತೆ ಈತ ಯಾವ ವಿಷಯವನ್ನೂ ಸೂಚಿಸಲಿಲ್ಲ ಮೇಗ್ರಣ್ಣನಿಗೆ! ಬೇಗ ಬೇಗನೆ ಲೆಕ್ಕದ ಪಟ್ಟಿಯನ್ನು ಮಾಡಿಟ್ಟು ಸಂಬಳ ಕೇಳಲು ಮೆನೇಜರ್ ಸಿದ್ಧಯ್ಯನ ಕೋಣೆಗೆ ತೆರಳಿದ.

"ಹ್ಹಿಂ!....ಹ್ಹಿಂ!....ಹ್ಹಿಂ!...." ಕಿಲಕಿಲ ನಗು ಸುಂದರನನ್ನು ಎಚ್ಚರಿಸಿತು. ಅಲ್ಲಿಯೇ ಹಿಂಬೆ ಸರಿದು ಈ ಹೆಣ್ಣು ಧ್ವನಿಯೂ ಎದಿರುಬಹುದು? ಎಂದು ಆಲೋಚಿಸಿದ. ಪುನಃ ತಿರುಗಿ ನೋಡಿದ. "ಸಿದ್ಧಯ್ಯನ ಕೋಳು ಹಾವಿನಂತೆ ಹೆಣ್ಣನ್ನು ಬಳಸಿತ್ತು ಹೆಣ್ಣಿನ ತುಟಿ ಸಿದ್ಧಯ್ಯನ ತುಟಿಗೆ...." ಕಣ್ಣು ಮುಚ್ಚಿತು. ಧಾರವಾಗಿ ಹೆಜ್ಜೆಯನ್ನು ಹಿಂದಕ್ಕೆಟ್ಟು ಕೋಣೆಗೆ ಬಂದ. ಯಾರಾಗಿರಬಹುದು? ಅಕೆಯನ್ನು ಇನ್ನೂ ನೋಡದ ನಾನು, ಇಂದು ಎದ್ದಿಂದ ಬಂದಳು? ಈ ಪ್ರಶ್ನೆಗೆ ಉತ್ತರವನ್ನು ಮೇಗ್ರಣ್ಣನೇ ತಿಳಿಸ ಬೇಕೆಂದು ಕಾರ್ಖಾನೆಯತ್ತ ನಡೆದ. ಮೇಗ್ರಣ್ಣನ ಕೋಣೆಗೆ ಒರಲಿ ಕೈ ಜೇಳ ತಾನು ಕುರ್ಚಿಯಲ್ಲಿ ಕುಳಿತು ಮೇಗ್ರಣ್ಣ ಸಂಬಳ ತರಲು ಟ್ರಜರಿ ಕೋಣೆಗೆ ಹೋದೆ. ಅವನಾಗ ಅಲ್ಲಿ....ನೀವೂ ಕಂಡಿರಾ ಬುದ್ದಿ ವೇಗ್ರಣ್ಣ ಎಲ್ಲ ಗೊತ್ತಿರುವಂತೆ ಮುಖದಲ್ಲಿ ಮಂದಹಾಸ ಬೀರಿದ. 'ಯಾರವಳು?' ಸುಂದರ ಕೇಳಿದ. 'ಆ ವಳ್ಳೇ' ಅವರ ಸೂಳೆ ನಮ್ಮ ಎಣ್ಣೆ ಕಾರ್ಖಾನೇಲಿ ಕೆಲಸ ಮಾಡುತಿದ್ದವಳು. ಈಗ ಪಟ್ಟಿದ ರಾಣಿ ಈಗ ರಾಜನ್ದಾಂಗೆ ಸೇರೀತಾಳೆ. ಈಗೀಗ ಪೋಜಿನಲ್ಲಿ ಕಾಲ ಕಳೆಯುತ್ತಾರೆ. ಅವಕ್ಕಾಗಿ ನಿನ್ನುನ್ನೆ ಕೆಲಸಕ್ಕೆ ಇಟ್ಟು ಕೊಂಡಿದ್ದಾರೆ. ಇಂತಹ ಮೊತನ್ನು ಕೇಳಿ ಸುಂದರನಿಗೂ ನಗು ಬಾರದಿರಲಿಲ್ಲ ನಾನು ಕೋಣೆಗೆ ಹೋಗಲು ಬಂಗಲು ಮರಿಯಲ್ಲಿ ನಿಂತಿದ್ದೆ. ಆಶ್ಚರ್ಯ ಘಟನೆ ಕಣ್ಣಿಗೆ ಆ ಯ್ತಿತು. ಅವಳು ನೋಡಿದರೋ ಏನೋ....ಏನೆಯು ಮೇಗ್ರಣ್ಣ ಛೇ! ಛೇ! ಎಲ್ಲಾದರೂ ನೋಡಿದರೂ ಚಿಂತಿಲ್ಲ. ಅಂತಹ ಮನುಷ್ಯರೇ ಅವರು, ನನಗೆ ಏರಿಸಬೇಕಾದ ಸಂಬ್ಳನೂ ಆ ಮೊತ್ತ! ಇಸ್ಕೊಂಡ್ಬಿ' ಮೇಗ್ರಣ್ಣ ಸಿಟ್ಟಿನಿಂದ ಸುಂದರನನ್ನುರೇಗಿಸಿದ. 'ಮೇಗ್ರಣ್ಣ, ಇವತ್ತು ಕೇಳಿಯೇ ಕೇಳ್ತೀನಿ. ಆ ಕಲಸ್ಲಾಂದೆ ನೀವು ಕೆಲಸಕ್ಕೆ 'ಸ್ಟೈಕ್' ಮಾಡಿಬಿಡಿ. ಆವ ಎಲ್ಲಿಗೆ ಹೋಗ್ತಾನೊ ನೋಡೋಣ. ಸಂಬಳ ಏರಿಸದೆ ಏರಿಸಿದ ಇಲ್ಲದಿದ್ರೆ ಎಣ್ಣೆ ಕಾರ್ಖಾನೇಲಿ ಅವಳೇ ದುಡೀಲಿ, ಎಂದು ಸುಂದರ ಒಡತನದ ಕಷ್ಟ ಪರಿಹಾರ ತಿಳಿಸಿದ.

ಒಂದೆರಡು ಗಂಟೆಗಳು ಗತಿಸಿರಬಹುದು ಸುಂದರ ಇನ್ನೂ ಸುಮ್ಮನೆ ಕುರ್ಚಿಗೆ ಭಾರತಾಕಿ ಕುಳಿತಿದ್ದ ಮೆನೇಜರ್ ಸಿದ್ಧಯ್ಯನ ಆಗಮನ ಅವನನ್ನು ಎಚ್ಚರಿಸಿತು ಇವತ್ತು ಕೆಲಸದವರ ಸಂಬಳ ಕೊಡ ಬೇಕಲ್ಲವೇ? 'ಹೌದು, ಅವರ ಲೆಕ್ಕವನ್ನು ಬರೆದ್ದೀನಿ, ಸುಂದರ ಕೇಳುವುದರಲ್ಲಿದ ಅವಾಗಲೇ ಸಿದ್ಧಯ್ಯನವರು ಹಣದ ಚೀಲದಿಂದ ಹಣವನ್ನು ಲೆಕ್ಕಿಸಿ ಮೇಜಿನ ಮೇಲಿಟ್ಟರು

'ನನ್ನೊಂದು ಸಾರಿ ಸಂಬಳ ಏರಿಸ ಬೇಕಂತೆ ಕಷ್ಟದಿಂದ ಸಾಯುತ್ತಾರಂತೆ.' ಈ ವೊತನ್ನು ಅಂದ ಲಘುವಾಗಿ.

'ಛೇ! ನಿನ್ಮಲ್ಲಿಜೂ ಅವರು ಸಹವಾಸ ಮಾಡಲು ರುರುಹಚ್ಚಿವೆ? ನನ್ನಲ್ಲಿ ಮೇಸ್ತ್ರಿ ಕೇಳಿದ್ದ ಅವನೇನಾದರೂ ಕೇಳಿರಬಹುದು ನಿನ್ಮಲ್ಲಿ. ಆ ವೊತನ್ನು ಕೇಳಬೇಡಿ....,

'ಹಾಗಂತಲ್ಲ. ಅವರು ಕೇಳಬೇಕೆಂದೆನ್ನುವ ವೊತನ್ನು ನಾನು ಕೇಳಿದ್ದೇನೆ. ನೀವು ಹೇಳಿದ್ದನ್ನು ಅವರಿಗೆ ತಿಳಿಸುವ ಜವಾಬ್ದಾರಿ ನನ್ನದು,

ಇಲ್ಲ, ಒಂದು ಕಾಸೂ ಏರಿಸುವ ಹಾಗಿಲ್ಲ.

ಅವರು ಸ್ಟೈಕ್ ಹೊಡಿದರೂ ಹೂಡಲಿ! ಮೆನೇಜರ್ ಸಿದ್ಧಯ್ಯ ಬಿರುಬಿರನೆ ಹೊರಟು ಹೋಗಿದ್ದ. ಸುಂದರ ಎಣಿಸಿದಂತೆ ಕಾರ್ಯನಡೆಗಿದ್ದನ್ನು ನೋಡಿ ಬಂದಗೊಂಡ ಎಲ್ಲ ವಿವರವನ್ನೂ ಮೇಗ್ರಣ್ಣ ಕೇಳಿದ ಕೂಡಲೇ ಕಾದ ಕಬ್ಬಿಣದಂತೆ ಒಂದೇ ಸವನೆ ಸಿಟ್ಟುನೆತ್ತಿಗೇರಿತು.

ಸ್ವಾಮೀ, ನೀತ್ತ ಇಷ್ಟು ದಿನದ ವರೆವಿಗೆ ಏನಾದರೂ ಸುಧಾರಿಸುತ್ತಿರೆಂದು ನಂಬಿದ್ದೆವು. ಈಗ....ಯೂರೋ ಕೂಲಿಯೂಳು ಕಷ್ಟ ಸುಖ ಪರಂಪರೆಯಲ್ಲಿ ಸಿಲುಕಿ ಕೂಗಿದ್ದರು! ಸುಂದರ ಎರಡು ಕೈಯನ್ನು ಮೇಲಕ್ಕೆತ್ತಿ ಆಶ್ವಾಸನೆಯೋಪಾದಿತ್ತಿದ್ದ" ಎಲ್ಲರೂ ಒಬ್ಬಿಂದೊಮ್ಮೆ ನಿರಾಶರಾಗಬೇಡಿ! ನಾಳೆಯಿಂದ ಕೆಲಸಕ್ಕೆ ಯಾರೂ ಬರಬೇಡಿ, ಅಂದರೆ ಕೂಳಿಲ್ಲದೇ ನಾಯುವುದಕ್ಕೆಂದು ನಾನು ಹೇಳುತ್ತಿಲ್ಲ. ಕೇವಲ ಕೆಲವೇ ದಿನಗಳಲ್ಲಿ ಎಲ್ಲವೂ ಸುಧಾರಿಸಲ್ಪಡುತ್ತದೆ. ಯಾರೂ ಗಾಬರಿಯೂಗಬೇಡಿ," —ಮೇಗ್ರಣ್ಣ—ಏಕ ಕಂಠದಿಂದ ಎಲ್ಲರೂ ನಾಳೆಯಿಂದ 'ಸ್ಟೈಕ್', ಎಂದ. ಸೂರ್ಯ ಆಸ್ತಂಗತನಾಗುವ ಸಮಯವನ್ನೆ ಎದರು ನೋಡುತ್ತಿದ್ದು ರವಿಯು ಮುಳುಗಿದ ಕೂಡಲೇ ಎಲ್ಲರೂ ತೆರಳಿದರು.

ಸುಂದರ ಸೇಡು ತೀರಿಸುವತನಂತೆ ಕತ್ತಲಾದೊಡನೆ ಬೀಗದ ಕೈ ಗೊಂಚಲನ್ನು ಸಿದ್ಧಯ್ಯನ ಹತ್ತಿರ ಕೊಡಲು ಕೋಣೆಗೆ ಹೋದ. ಕೋಣೆಯಲ್ಲಿ ಆ ಹೆಣ್ಣು,— ಸಿದ್ಧಯ್ಯನ ಭಾಗದ ಹೆಣ್ಣು, ಸೂಳೆ...ಅವ ನಿಗಿದಿರಾದಳು, ಮುಖದ ಮೇಲೆ ಬೀಗದ ಕೈ ಎಸೆಯುವಷ್ಟು ಸಿಟ್ಟು ಬಂದಿತ್ತು. ಆದರೆ...ಇಂದೆ ಮೆನೇಜರ್ ಸಿದ್ಧಯ್ಯ. ಆ ವಳ ಜೆನ್ನ ಮೇಲೆ ಕೈಯಿಟ್ಟು ಅವ್ವದೋ ವಿಷಯದ ಕುರಿತು ಚರ್ಚಿಸುತ್ತಿದ್ದ ಸುಂದರ ಬೇಗನೆ ಬೀಗದ ಕೈಯಿಟ್ಟು ಮನೆಗೆ ಹೊರಟ.

ಸೂರ್ಯನ ನೇತೃತ್ವದಲ್ಲಿ ದಿನದ ಯಂತ್ರ ಮುಂದೆ ಮುಂದೆ ಸಾಗಿತ್ತು. ಎಂಟು ಗಂಟೆಯ ಹೊತ್ತಿಗೆ ಸುಂದರ ಕಾರ್ಖಾನೆಗೆ ಬಂದಿದ್ದರೂ ಸಿದ್ಧಯ್ಯನಾಗಲೀ, ಆ ಅವಳಾಗಲಿ, ಯಾರೂ ಕಾಣಿಸಿಗಲಿಲ್ಲ. ಕೂಲಸು ಆಗರದ ಆ ಕೋಣೆ ತೆರವಾಗಿತ್ತು. ಎಲ್ಲಿಂದಲೋ ಬಂದಿರದಂತೆ ಸಿದ್ಧಯ್ಯ ಪ್ರತ್ಯಕ್ಷನಿದ್ದ,—'ಯಾರೂ ಬರಲಿಲ್ಲವೇ? ಎಲ್ಲವೂ ನಿನ್ಮುಖೈವಾಡ!' ಸುಂದರ ಅವರ ಮೊತನ್ನು ತುಂಡರಿಸಿ,—'ನನ್ನದೇನು ಮಹಾ! ನೀವು ಹೇಳಿದಂತೆ ಕುಣಿಯುವ ಕೂಲಿಯೂಳು, ಅದರಲ್ಲಿ ನನ್ನ ತಂತ್ರವೇನು?'

ಒಂದು ದಿನ ಯಂತ್ರ ನಿಶ್ಶಬ್ದದಿಂದ

(೧೦ನೇ ಪುಟ ನೋಡಿರಿ)

ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ –

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

REGD. No. B. G. 176
LICENCE No. 31
Licensed to Post without Prepayment

ಕಾಲ ತಳ್ಳಿ ಮರುದಿನದ ಅವಸ್ಥೆಯನ್ನು ಕಾಯುತ್ತಿರ್ತ್ತು...

ಕೂಲಿಕಾರರ ಓಣಿಯಿಂದ ಒಂದು ಸಾವಿರ ಜನರೊಡಗೂಡಿ ದೊರಟ ಆ ಮೆರವಣಿಗೆ ಗಲ್ಲಿ ಗಲ್ಲಿಯನ್ನು ಹಾದು, ಕಾರ್ಖಾನೆಯತ್ತ ನಡೆದಿತ್ತು. ಕಾರ್ಖಾನೆಗೆ ಮುಖವಾಗಿ ಎಲ್ಲರೂ ಸಾಲಾಗಿ ನಿಂತು ಒಕ್ಕೊರಲಿನಿಂದ ಕೂಗುತ್ತಿದ್ದರು. "ಸಂಬಳ ಹೆಚ್ಚಿಸಿ, ಇಲ್ಲವಾದರೆ ಕೆಲಸಕ್ಕೆ ಬರಲಾರೆವು!" ಬೀದಿಯ ಮನುಷ್ಯರ ಮನವನ್ನು ಮುಟ್ಟಿ ಎಲ್ಲರನ್ನೂ ದಿಗಿಲುಗೊಳಿಸಿತ್ತು.

'ಸುಂದರ ರಾಯ್ರೆ ನೀವು ಇವತ್ತಿನಿಂದ ಕೆಲಸಕ್ಕೆ ಬರಬ್ಯಾಡ್ರಿ!' ಸುಂದರನ ಕೆಲಸಕ್ಕೆ ಬಂದ ಹಚ್ಚಿದರು ಮೆನೇಜರ್ ಸಿದ್ಧಯ್ಯ.

'ಇಂದು ಒನ್ನಸತ್ಯಾಗ್ರಹ ಮಾಡೋಣ, ಏನು ಮಾಡತ್ತಾರೆ ನೋಡೋಣ, ಮೇಗ್ರಣ್ಣ ಕರಿಣ ಮನಸ್ಸನಾಗಿ ಒಂದೇ ಮಂತ್ರವನ್ನು ಸರಿಸಿರೆಂದು ತಮ್ಮ ಅನುಯಾಯಿಗೆ ತಿಳಿಸಿದನು. ಒಂದು....ಎರಡು ಮೂರು...ನಾಲ್ಕು...ಘೆಂಟೆ ಗಂಟೆಗಳು ಒಬ್ಬರ ಮೇಲೊಂದು ಕಳೆದರೂ ಈ ಸತ್ಯಾಗ್ರಹ ಉಲ್ಬಣಾವಸ್ಥೆಗೇರಲು ತೊಡಗಿತು. ಸಿದ್ಧಯ್ಯ ಗಾಬರಿಯಿಂದ ಅವರೆಲ್ಲರನ್ನೂ ಕರೆತಂದು ಹೇಳಿದ್ದ—'ಇಲ್ಲಿಂದ ತೊಲಗಿರಿ ಇಲ್ಲವಾದರೆ ಪೋಲಿಸ್ಕೊರು ನಮ್ಮನ್ನೆಲ್ಲ ಲಠೀಗೀಡು ಮಾಡತ್ತಾರೆ ತೊಲಗಿರಿ...ತೊಲಗಿರಿ...' ಪೋಲಿಸ್ ಅಧಿಕಾರಿಗಳ 'ವ್ಯಾನು' ಕಾರ್ಖಾನೆಯತ್ತ ಧಾವಿಸಿ ಬಂದು ನಿಂತಿತು. ಪೋಲಿಸ್ ಇನ್ಸ್ಪೆಕ್ಟರ್ ಗುಡುಗಿದು, ಎರಡರಿಂದ ನಿಮಗೇ ನಾಗಬೇಕಾಗಿದೆ, ನಿಮ್ಮುದ್ದು ತಪ್ಪಾಗಿದ್ದರೆ ಲಾಠೀಚಾರ್ಜು ಕಠೀತೀನಿ ಇನ್ಸ್ಪೆಕ್ಟರ ಮಾತಂ ಮೇಗ್ರಣ್ಣನಿಗೆನ್ನು ಸಂತೈಸಿತು, ನಮಗೆ ಕೊಡುವ ಸಂಬಳ ಸಾಲಿನಲ್ಲಿ ಮಾಡುವ ಕೆಲಸ ವಿಪರೀತ, ಆದುದರಿಂದ ಸಂಬಳ ಹೆಚ್ಚಬೇಕು, ಕೆಲಸ ಕಡಿಮೆ ಮಾಡಿರಬೇಕು.'

"ಮೆ ನೇಜರ್ ಸಿದ್ಧಯ್ಯನವ್ರೆ, ಬಡ ಕೂಲಿಯಾಳುಗಳ ಜೀವಣ ನಮಗೇತಕ್ಕೆ ನೀವು ಕೊಡುವ ಸಂಬಳ ತೀರಾ ಕಡಿಮೆ ಅದನ್ನು ನೀವ್ತ ತಿಳಿಯಲಿಲ್ಲ, ಅದನ್ನು ಪುರಾವೆಸಿದ್ರಿ," ಒರಡ ಜಹಾ ಪಲಾಹಾರನನ್ನು ಸ್ವೀಕರಿಸುತ್ತಾ ಅಂದರು ಇನ್ಸ್ಪೆಕ್ಟರ್. ಹಾಗೆ ಸಿದ್ಧಯ್ಯ ಇನ್ಸ್ಪೆಕ್ಟರ್ ಹೋಳಿದ ಮಾತನ್ನೇ 'ತೆಂಗಿನಲಿ ಓಬಾಚಿಗಳೆಂದು' ಮನಸ್ಸಿನ್ನಲ್ಲಿ ಸಣ್ಣಸ್ವರದಿಂದ ಹೇಳಿದರು. ಇನ್ಸ್ಪೆಕ್ಟರ್ ಸಾಲಾ ಇನ್ಸ್ಪೆಕ್ಟರನ್ನಾಗಿ ಮಾಡಿದ್ದ ಸುಂದರ ರಾಯರನ್ನೇ ಕುರಿತು ಕ್ಲಾರ್ಕರನ್ನಾಗಿ ಮಾಡಬೇಕು. ತಿಂಗಳು ತಿಂಗಳಿಗೆ ನಮ್ಮ ಸಂಬಳ ಕೊಡಬೇಕು" ಪೋಲೀಸ್ ವ್ಯಾನು ಬಂದ ದಾರಿಗೆ ಸಂಕ ಪಡೆದು ಬುರ್ರನೆ ಹೊರಟುಹೋಯಿತು. ನೆರೆದಿದ್ದ ಮೆರವಣಿಗೆ ಬಂದ ದಾರಿಯಲ್ಲಿಯೇ ಹಿಂದಿರುಗಿತು.

ಮೆ-ನೇಜರ್ ಸಿದ್ಧಯ್ಯನ ನೀಲವಾದ ಕಾರು ಅವನನ್ನು ಹೊತ್ತು ಸುಂದರನ ಮನೆಯತ್ತ ಬಿರುಸಿನಿಂದ ಧಾವಿಸಿತು.

—ಎಚ್. ಆನಂದ ರಾವ್.

● ಅಮೃತ ಬಿಂದು ●

ಒಂದು ವಿಷಾನು ದೊರೆಯಬೇಕಾದರೆ ಒಂದು ಕಪ್ಪೆಯನ್ನು ನಷ್ಟಮಾಡಿಕೊಳ್ಳಬೇಕು. ಅದರಂತೆ ದೊಡ್ಡ ಲಾಭಬೇಕಿದ್ದರೆ ಚಿಕ್ಕ ನಷ್ಟ ಅನುಭವಿಸಬೇಕು.

೦ ೦ ೦ ೦

ಸಮಯವರಿತ, ಸ್ವಾರ್ಥ ಬೆರೆತ ಹೊಗಳಿಕೆ ಸುಲಭ. ಯೋಗ್ಯತೆಯರಿತ ಹೃದಯವಂತ ಪ್ರಶಂಸನೆ ಕಷ್ಟ.

೦ ೦ ೦ ೦

ಇಪ್ಪತ್ತು ಬಾಟ್ಲಿ ನೀರಿಟ್ಟುಕೊಂಡವನಿಂಗಿಂತಾ ಒಂದು ಹನಿ ಜೀನಿರುವವನನು ಹೆಚ್ಚು ನೋಣ ಹಿಡಿಯಬಲ್ಲ, ಸತ್ಯವರಿತು ಸಾವಿರ ನುಡಿಯುವವನಿಗಿಂತಾ ಮಿತ್ಯಭರಿತ ಹೊಗಳಿಕೆಯನ ಗುರಿ ಸಾಧಿಸಬಲ್ಲ

೦ ೦ ೦ ೦

ಹೊಗಳಿಕೆಯೆಂಬುದು ತಿಳಿಗೇಡಿಗಳ ಆಹಾರವಾದರೂ ಆ ಆಹಾರ ಮುಂದಿರು ವಾಗಭುಂಜಿಸದವರು ವಿರಳ.

೦ ೦ ೦ ೦

ತಿಳಿಗೇಡಿಯನ್ನು ಅನುಸರಿಸುವ ತಿಳಿಗೇಡಿಗಳು ದೊರೆಯುವದು ಸುಲಭ ಆದರೆ ಬುದ್ಧಿವಂತರನ್ನು ಅನುಸರಿಸುವ ಬುದ್ಧಿವಂತರು ವಿರಳ.

೦ ೦ ೦ ೦

ಅರೆ ಬೆಂದ ಅನ್ನ ಊಟಕ್ಕಾಗದುಃಅರೆ ತಿಳಿದ ಮನುಷ್ಯ ಸ್ನೇಹಕ್ಕಾಗನು.

೦ ೦ ೦ ೦

ದೇವರು ಪ್ರತಿಯೊಬ್ಬರಿಗೂ ಸುಂದರ ವಲ್ಲದಿದ್ದಿರೂ ಸರಳ, ಪ್ರಾಮಾಣಿಕ ಮುಖವನ್ನು ದಯಪಾಲಿಸಿದ್ದಾನೆ. ಅದನ್ನು ನಮ್ಮ ಸ್ವಭಾವದಂತೆ ನಾವು ಮೂರ್ಪಡಿಸಿಕೊಳ್ಳುತ್ತೇನೆ.

೦ ೦ ೦ ೦

ನಿತ್ಯ ಸತ್ಯವೆಂಬುದಿಲ್ಲ. ಇಂದು ಸತ್ಯವೆಂದು ತೋರಿದುದು ನಾಳೆ ಅಸತ್ಯವೆನಿಸ ಬಹುದು. ಆದರಂತೆ ಯಾವ ವಾದವೂ ಅಂತಿಮವಲ್ಲ. ಬದಲಾಗುತ್ತಿರುವ ಜಗತ್ತಿನಲ್ಲಿ ಎಲ್ಲವೂ ಕ್ಷಣಿಕ.

೦ ೦ ೦ ೦

ಉತ್ಸಾಹ ಹಾಗೂ ಹುಮ್ಮಸ್ಸುಗಳ ಅಭಾವವು ಹೆಜ್ಜಾಗಿ ಸೋಲಿಗೆ ಕಾರಣ ವಲ್ಲದೆ ಅವಕಾಶ ಮತ್ತು ಅನುಕೂಲತೆಗಳ ಅಭಾವವಲ್ಲ.

೦ ೦ ೦ ೦

ಹೃತ್ಪೂರ್ವಕ ಪ್ರಯತ್ನಿಸಿ ಸೋಲುವವನು, ಪ್ರಯತ್ನದಲ್ಲಿ ಸಾಯುವವನು ಹೆಚ್ಚಿನ ಗೌರವಕ್ಕೂ, ಕೀರ್ತಿಗೂ, ಕಣ್ಣೀರಿಗೂ ಅರ್ಹನು.

೦ ೦ ೦ ೦

ಪ್ರತಿವಾದಕ್ಕೂ ಎರಡು ಮುಖಗಳವೆ. ಎರಡು ಮುಖಗಳನ್ನೂ ಕೇಳದೆ ನಿರ್ಣಯ ಕೊಡುವದು ಮೌಢ್ಯತೆಯ ಪ್ರದರ್ಶನ.

೦ ೦ ೦ ೦

ನಡೆಯಬಲ್ಲೆನೆಂಬ ವಿಶ್ವಾಸವೇ ನಮ್ಮನ್ನು ನಡೆಸುತ್ತದೆ. ಮಾಡಬಲ್ಲೆನೆಂಬ ವಿಶ್ವಾಸವೇ ನಮಗೆ ಜಯ ಒದಗಿಸುತ್ತದೆ. ವಿಶ್ವಾಸವೇ ಜೀವನದ ಆಡಿಪಾಯ.

೦ ೦ ೦ ೦

ಕೆಟ್ಟವರು ಕೆಳಗೆ ಬಿದ್ದಾಗ ಕರುಣೆ ತೋರುವವರು ಹೇಗೆ ಕಡಿಮೆಯೋ ಹಾಗೆಯೇ ಒಳ್ಳೆಯವರು ಕೆಳಗೆ ಬಿದ್ದಾಗಲೂ ಕರುಣೆ ತೋರಲು ಅವಂಗೆ ಸಮಯವಿರದು.

೦ ೦ ೦ ೦

ಕೆಳಗಿರುವವನಿಗೆ ಬೀಳುವ ಭಯವಿಲ್ಲ. ಬಡವನಿಗೆ ಅಹಾಂಕಾರದ ಸೋಂಕಿಲ್ಲ.

೦ ೦ ೦ ೦

ಸತ್ಯಕ್ಕೆ ಅಸತ್ಯ ಒಪ್ಪಲಾರದು ಮೂತ ವಲ್ಲ; ಅಸತ್ಯ ತನ್ನೊಳಗೆ ತಾನೇ ಕೆತ್ತಾಡ್ಯ ವದು ತಪ್ಪುವದಿಲ್ಲ.

ಕೇರಳದ ದುರ್ಗೈನೀ ಪ್ರಕರಣ

(ನೇ ಪುಟದಿಂದ)

ರದು. ಜನತೆ ಇದನ್ನೊಂದು ಆದರ್ಶವಾಗಿ ತಿಳಿದುಕೊಂಡು ಅಧಿಕಾರಿಗಳಿಗೆ ಲಂಚ ಕೊಟ್ಟು ಕ್ಷಣಿಕ ಸುಖ ಪಡೆವ ಪ್ರವೃತ್ತಿ ತ್ಯಜಿಸಬೇಕು. ಲಂಚ ಕೊಡುವವರಿಗೂ ಲಂಚ ತೆಗೆದುಕೊಳ್ಳುವವರಂತೆಯೇ ಶಿಕ್ಷೆ ಕೊಡುವಂತಾದರೆ ಈ ಲಂಚದ ಆಟೋಪ ನಿಲ್ಲುವುದು ಖಂಡಿತ ಮಧ್ಯವರ್ತಿ ಸೇವಾನಿರತನೊಬ್ಬನು ಏನೇನೋ ಒರಟು ಮೂತನಾಡುವಂತೆ ಲಂಚ ತೆಗೆದುಕೊಂಡವನು ಕಾರ್ಯ ಸಾಧಿಸಬಹುದು. ಆದರೆ ಸತ್ಯ ನ್ಯಾಯಗಳಿಂದ ದೂರವಿರುವ ಕಾರ್ಯ-ಕರ್ತವ್ಯಗಳಿಂದ ಪ್ರಯೋಜನವಿದೆಯೆ? ಆದುದರಿಂದ ಜನತೆ ಇದನ್ನೊಂದು ಪಂಥಾಹ್ವಾನವೆಂದು ತಿಳಿದು ಇಂಥ ಅರೀತಿಗಳನ್ನು ಸಮಾಜದಿಂದ ದೂರೀಕರಿಸಿ ದೇಶದ ಪ್ರಗತಿಗೆ ನೆರವಾಗುವುದು ಅವಶ್ಯಕವಾಗಿದೆ.

—ಶ್ರೀರಾಮತನಯ

ಒಂದು ಆಶ್ಚರ್ಯಕರವಾದ ದೃಷ್ಟಾಂತ

ನಿಮ್ಮ ಭವಿಷ್ಯತ್ಕಾಲದ ಅನಶ್ಯಕತೆಗಳನ್ನು ಪೂರೈಸಿಕೊಡಲು ಬ್ಯಾಂಕುಗಳು ಹೇಗೆ ಸಹಕರಿಸುತ್ತವೆ? ಮಿತವ್ಯಯವನ್ನು ಸಾಧಿಸುವುದರ ಮೂಲಕ ನೀವೊಂದು ಸೇವಿಂಗ್ಸ್ ಖಾತೆಯನ್ನು ತೆರೆದು ಈ ಖಾತೆಯಲ್ಲಿ ನೀವು ಚಕ್ರ ಬಡ್ಡಿಯ ದರದಲ್ಲಿ ಬಡ್ಡಿಯನ್ನು ಗಳಿಸುವಂತೆ ಅವು ನಿಮಗೆ ಪ್ರೋತ್ಸಾಹವನ್ನೀಯುತ್ತವೆ. ಬೆಂಜಮಿನ್ ಫ್ರಾಂಕ್ಲಿನ್‌ನು ಮಿತವ್ಯಯದ ಪ್ರತಿವಾದಿಗಳಲ್ಲೊಬ್ಬನು. ಮೂಲಧನವು ಬಡ್ಡಿಗೆ ಬಡ್ಡಿ ಕೂಡಿ ಹೇಗೆ ವೃದ್ಧಿಯಾಗುತ್ತಿದೆ ಎಂಬುದಕ್ಕೆ ಒಂದು ಆಶ್ಚರ್ಯಕರವಾದ ನಿದರ್ಶನವನ್ನು ಅತನು ಜಗತ್ತಿನ ಮುಂದಿಟ್ಟಿರುವನು.

೧೭೯೧ರಲ್ಲಿ ಫ್ರಾಂಕ್ಲಿನ್‌ನು ೫ ಸಾವಿರ ಪೌಂಡುಗಳನ್ನು ಬೋಸ್ಟನ್ ನಗರದ ಜನರ ಉಪಯೋಕ್ಕೆಂದು ಪಿಸಲಾಗಿರಿಸಿದನು. ೧೦೦ ವರುಷಗಳ ನಂತರ ಅದು ಬಡ್ಡಿ ಕೂಡಿ ವೃದ್ಧಿಯಾದ ಬಳಿಕವೇ ಅದನ್ನು ಪಯೋಗಿಸಬೇಕೆಂದೂ ಅತನು ವಿಧಿಸಿದ್ದನು. ೧೦೦ ವರುಷಗಳ ನಂತರ ಅದು ೪೦,೦೦೦ ಡಾಲರುಗಳಷ್ಟು ಬೆಳೆದಿತ್ತು. ಈ ಮೊತ್ತದಿಂದ ಫ್ರಾಂಕ್ಲಿನ್ ಹೆಸರಿನಲ್ಲಿ ಒಂದು ಟೆಕ್ನಿಕಲ್ ಶಾಲಾ ಕಟ್ಟಡವನ್ನು ಕಟ್ಟಿಸಿದ ನಂತರ ಉದರಲ್ಲಿನ ೨೪,೦೦೦ ಡಾಲರುಗಳನ್ನು ಪುನಃ ವೃದ್ಧಿಯಾಗಲು ಬಿಡಲಾಯಿತು. ಅದೀಗ ಒಂದು ಮಿಲಿಯ ಡಾಲರುಗಳಷ್ಟಾಗಿದೆ.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ

ನಿಮಗೆ ಸವಿಸಮೀಪವಿರುವ 183 ಶಾಖೆಗಳಲ್ಲಿಂದರಲ್ಲಿ ದಯವಿಟ್ಟು ವಿಚಾರಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸಮಾನ ಸೇವೆ - - - ಸರಿಯಾದ ಭದ್ರತೆ.

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ.

O. S. No. 52/1963.

ಲೀಲಾವತಿ— ವಾದಿ.

ಮತ್ತು

ಶ್ರೀಧರ ನ್ಯಾಳ ಕೊಡಾ— ಪ್ರತಿವಾದಿರು

ಯಿವರೊಳಗೆ

೬ನೇ ಪ್ರತಿವಾದಿ— ಸುಮಿತ್ರೆ, ರಂಗಪ್ಪ ನ್ಯಾಳನ ಮಗಳು, ಉಡುಪಿ ತಾಲೂಕಿನ, ಪುತ್ತೂರು ಗ್ರಾಮ—ಇವರಿಗೆ

ವಾದಿಯು ಕಟ್ಟುಂಬದ ಆಸ್ತಿಯಲ್ಲಿ ಪಾಲು ಕೇಳಿ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 22—7—1963ಕ್ಕೆ ಇಟ್ಟಿದೆ. ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಉದ ಹಂಚುವರೆ ತಪ್ಪಿದಲ್ಲಿ ಸದ್ರಿ ದಾನೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

(By order of Court)

Sd. V. G Kedlaya,
M.A., LL.B
ವಾದಿಯ ಅಡ್ವೋಕೇಟ್.

ಉಡುಪಿ, 28—6—63.

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ಸೇವೆಯುಗ ಪ್ರೆಸ್ ಉಡುಪಿ.

Edited, Printed & Published by K. H.Shetty. at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1931 ಸ್ಥಾಪನೆ
Regd. No. B.G. 176
Vol. 42 No. 44

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 11—7—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೪೪

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿ

ಕರ್ನಾಟಕದ ಜನತೆಗೊಂದು ಆಹ್ವಾನ

ರಾಜ್ಯ ಸರಕಾರದ ಹಾಸ್ಯಾಸ್ಪದ ನಿಲುಮೆ

ಕರ್ನಾಟಕ ಸರಕಾರದ ಮುಂದೆ ಹಿಂದಿನಿಂದಲೂ ಘಟಿಸದೆಯೇ ಇರದ ಪ್ರಶ್ನೆ "ಹಿಂದುಳಿದವರು ಯಾರು?" ಎಂಬುದು. ತನಗೆ ಇಚ್ಛೆ ಬಂದಂತೆ ಅದು ವರ್ಷ ವರ್ಷವೂ ಒಂದೊಂದು ದೃಷ್ಟಿಯಿಂದ ಈ ವರ್ಗವನ್ನು ಪ್ರತ್ಯೇಕಿಸುವ ಸಾಹಸ ಮಾಡುತ್ತ ಬಂತು. ಮುಖ್ಯವಾಗಿ ಅದು ಅನುಸರಿಸಿದ ನೀತಿಯು ಜಾತೀಯತೆಯ ಪರ್ಯಾಯವಾಗದ ಮೇಲೆ. ಆದರೆ, ಇವೆಲ್ಲ ನೀತಿಗಳೂ ಸಂವಿಧಾನಕ್ಕೆ ವಿರೋಧವೆಂದು ಉಚ್ಚ ನ್ಯಾಯಾಲಯವೂ ಸರ್ವೋಚ್ಚ ನ್ಯಾಯಾಲಯವೂ ಅಭಿಪ್ರಾಯ ಪಟ್ಟ ಮೇಲೆ ಒಮ್ಮೆಗೆ ಹಾಹಾರಲೇ ಬೇಕಾದರೂ ಮಹಿಷೂರಿನ ಸರಕಾರವು ಜಾಗ್ರತವಾಗಿಲ್ಲಿ. ಜಾತೀಯ ಆಜ್ಞೆಯು ನ್ಯಾಯಬಾಹಿರವೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದು ಬಹು ಮಾಸಗಳು ಸಂದರೂ, 'ಪ್ರತಿಯೊಂದು ಸವಾಲನ್ನೂ ಹನ್ನೊಂದನೆಯ ಗಂಟೆಯಲ್ಲಿ ಎದುರಿಸುವ ಮಹಾ ಧೈರ್ಯಶಾಲಿ" ಸರಕಾರವು ಜುಲೈ ತಿಂಗಳ ಮೊದಲನೆಯ ದಿನದಂದು ಈ ವರ್ಷದ ಹೊಸ ಆಜ್ಞೆಯನ್ನು ವಿಧಿಸಿತು. ಇದು ಕೂಡ ಕೇವಲ ತಾಂತ್ರಿಕ ಶಿಕ್ಷಣಾಲಯಗಳಿಗೆ ಪ್ರವೇಶ ನೀಡುವ ಸಲುವಾಗಿ ಮಾತ್ರ ಸೀಮಿತವಾಗಿದ್ದು, ಸರಕಾರಿ ನೌಕರಿ-ನೌಕರರಭಡ್ತಿ ಮೊದಲಾದುವುಗಳು ಇಂದಿಗೂ ನ್ಯಾಯಕ್ಕೆ ಹೊರತಾದ ಅಕ್ರಮವಾದ ಜಾತೀಯ ತಳಪಾಯದಿಯ ಆಜ್ಞೆಯಂತೆಯೇ ಮುಂದುವರಿಯುತ್ತಿವೆ. ಈಗ ಹೊರಟ ಆಜ್ಞೆಯಾದರೂ ಕ್ರಮಬದ್ಧವಾಗಿದೆಯೇ? ಎಂಬ ಪ್ರಶ್ನೆ ಕೆಲವು ಮೂಲಗಳಲ್ಲಿಯೇ ಇತ್ಯರ್ಥವಾಗ ಬೇಕಾದೀತು

ಸೋಜಿಗದ ಆಜ್ಞೆ

ಸರಕಾರವು ಈ ಸಲ ಹೊರಡಿಸಿದ ಹಿಂದುಳಿದವರನ್ನು ಗೊತ್ತು ಮಾಡುವ ಆಜ್ಞೆ ಆತೀವ ಸೋಜಿಗವಿದೆ. ಈ ಮೊದಲಿನಂತೆಯೇ ಸೇ. ೧೫ರಷ್ಟು ಸ್ಥಾನಗಳು ಪರಿಶಿಷ್ಟ ಜನಾಂಗಗಳಿಗೆ ಮತ್ತು ಗುತ್ತಿಕಾಡು ಜನರಿಗೆ ಏಸಲಾಗಿರುವುವು. ವಾರ್ಷಿಕ ರೂ. ೧,೫೦೦ಕ್ಕಿಂತ ಕಡಿಮೆ ಆದಾಯವುಳ್ಳ ವೃತ್ತಿಯಲ್ಲಿ ವ್ಯವಸಾಯಗಾರನಾಗಿ ಅಥವಾ ಇನ್ನಿತರ ವರ್ಗದ ಸರಕಾರಿ ನೌಕರಿಯಲ್ಲಿ ಇನ್ನೂ ಆದಕ್ಕೆ ಸಮಾನವಾದ ಖಾಸಗಿ ಸಂಸ್ಥೆಗಳಲ್ಲಿಕೆಲಸಗಾರರಾಗಿ ಇರುವವರು ಹಿಂದುಳಿದವರೆಂದು ಗೊತ್ತುಮಾಡಿದ ಸರಕಾರವು ಇಂತಹವರಿಗೆ ಸೇ.೫೦ರಷ್ಟು ಸ್ಥಾನಗಳನ್ನು ಕಾಯ್ದಿರಿಸಿದೆ. ಉಳಿದ ಸೇ. ೫೨ ಸ್ಥಾನಗಳನ್ನು ಕೂಡ ಜಿಲ್ಲಾವಾರಿಯಾಗಿ ಯೋಗ್ಯತೆಯ ಮೇಲೆ ಹಂಚಿಕೊಡುವ ದೂರಾಲೋಚನೆಯನ್ನೂ ಅದು ನೂಡುತ್ತಿದೆಯೆಂದು ದಟ್ಟವಂತಿ ಹಬ್ಬಿದೆ.

ಅನಹೇಳನದ ಜಾಡ್ಯ

ಈ ಆಜ್ಞೆಯಾ ಬಗ್ಗೆ ವ್ಯಾಪ್ತಿಯನ್ನು ಮಾಡುವುದಕ್ಕೆ ಮೊದಲು ಸರಕಾರಕ್ಕೆ ಈ ನೀತಿಯನ್ನು ರೂಪಿಸಲು ಬೇಕಾದ ಸಮಯಾವಕಾಶ ಸಾಲದೆ ಹೋದುದಕ್ಕಾಗಿ ವಿಷಾದಿಸಬೇಕಾಗಿದೆ. ಮದ್ರಾಸು ಸರಕಾರವು ಸ್ವೀಕರಿಸಿ, ಅಲ್ಲಿ ಜಾರಿಯಲ್ಲಿರುವಾದ ಈ ಅರ್ಥಹೀನವಾದ ನೀತಿಯನ್ನು ಕರ್ನಾಟಕ ಸರಕಾರವೇಕೆ ಸ್ವೀಕರಿಸ ಬೇಕಾಗಿತ್ತೋ ತಿಳಿಯದು. ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ನೀಡುವುದು ಈ ವರ್ಷವೇನೂ ಹೊಸದಲ್ಲ. ಹಾಗಿರುವಾಗ, ಈ ಸಂಬಂಧದ ಧೋರಣೆಯನ್ನ ಸಾಕಷ್ಟು ಪೂರ್ವಭಾವಯೋಗಿಯೇ ರೂಪಿಸಬೇಕಾಗಿತ್ತು. ಸಚಿವ ಸಂಪುಟಕ್ಕೆ ಇದಕ್ಕೂ ಅವಕಾಶ ದೊರೆಯದೆ ಹೋದುದು ಅದರ ಅಕರ್ಮಣ್ಯತೆಯ ಪ್ರತೀಕ ಅಥವಾ ಈ ವಿಷಯದಲ್ಲಿ ಆಸಕ್ತರಿರುವ ಅನಾಸ್ಥೆ, ಅದರ ಹಿಂಬದಿಯಲ್ಲಿ ತಲೆ ಹಾಕುವ ವಂಚಕ ಮನೋವೃತ್ತಿಯ ಕುರುಹು—ಇದು ಕನ್ನಡಿಗರಿಗೆ ದುರ್ದೈವ ಹಿಂದೆ ಹಲವು ಬಾರಿ ಅವಸರವಸರವಾಗಿ ಆಜ್ಞೆನಿಧಿಸಿ ಅವ ಹೇಳನಕ್ಕೀಡಾದ ಸರಕಾರವು ಈ ಸಲವೂ ಅದೇ ಜಾಡನ್ನು ಹಿಡಿಯುವಂತಾದುದು ಲಾಂಛನಾಸ್ಪದ.

ವಿಲಕ್ಷಣ ನೀತಿ

ವಮಾನ ಮತ್ತು ವೃತ್ತಿಗಳನ್ನು ಆಸುಲಕ್ಷ್ಯಿಸಿ ಹಿಂದುಳಿದವರನ್ನು ಪ್ರತ್ಯೇಕಿಸುವ ಸೂತ್ರ ಅತ್ಯದ್ಭುತವಾದುದು ಇದಕ್ಕೂ ಮಿಗಿಲಾದ ವಿಲಕ್ಷಣತೆಯೆಂದರೆ, ವಾರ್ಷಿಕ ವರಮಾನದ ಮಿತಿ ರೂ. ೧,೫೦೦ ಎಂದು ಗೊತ್ತುಮಾಡಿದುದು. ತಾಂತ್ರಿಕ ಶಿಕ್ಷಣವು ಮನೆಯೊಳಗೆ ದೊರಕುವುದಿಲ್ಲ. ಬೆಂಗಳೂರು – ಹುಬ್ಬಳ್ಳಿಯೆಂದು ಬಹು ದೂರಕ್ಕೆ ವಿದ್ಯಾರ್ಥಿಗಳು ಹೋಗಬೇಕಾಗುತ್ತದೆ. ಆಲ್ಲದೆ ಸುಮಾರು ೫ ವರ್ಷಗಳ ವರೆಗೆ ಮುಂದವರಿಯುವ ಈ ಶಿಕ್ಷಣವನ್ನು ಗೊನೆ ಮುಟ್ಟಿಸಲು ಕಡಿಮೆಯೆಂದರೆ ೧೦-೧೫ ಸಾವಿರ ರೂಪಾಯಿಗಳ ಬೇಕಾಗುತ್ತದೆ. ವಾರ್ಷಿಕ ರೂ. ೧,೫೦೦ ಅಥವಾ ಅದಕ್ಕಿಂತ ಕಡಿಮೆ ಆದಾಯವಿರುವ ಬೇಸಾಯಗಾರ ಅಥವಾ ಇನ್ನೆ ವರ್ಗದ ನೌಕರನು ತನ್ನ ಮಗನಿಗೆ/ಳಿಗೆ ವರ್ಷಂಪ್ರತಿ ೨-೩ ಸಾವಿರ ರೂಪಾಯಿ ಒದಗಿಸಿ, ತಾಂತ್ರಿಕ ಶಿಕ್ಷಣ ಕೊಡಿಸುವುದು ಎಂದರೆ ಅದರಲ್ಲಿ ಏನೋ ರಹಸ್ಯವಿರಲೇಬೇಕು ಎನಿಸುತ್ತದೆ. ನಿಷ್ಪಕ್ಷಪಾತಿ ಸಮಾಲೋಚಕನು ಖಡಾ ಖಂಡಿತವಾಗಿ ಹೇಳಬಲ್ಲ—ಅಂತಹ ಪಾಲಕನು ಖಂಡಿತಕ್ಕೂತನ್ನ ಮಗಳಿಗೆ ಇಂತಹ ಶಿಕ್ಷಣಕೊಡಿಸುವುದು ಸಾಧ್ಯವಿಲ್ಲ ಎಂದು.

ಹಾಸ್ಯಾಸ್ಪದ ವಿಚಾರ

ಪ್ರಜಾಪ್ರಭುತ್ವದಲ್ಲಿ ಪ್ರಾಥಮಿಕ ಶಿಕ್ಷಣದ ಮಹತ್ವವನ್ನರಿತ ನಾವೆ ಅದನ್ನು ಉಚಿತ ಹಾಗೂ ಅನಿವಾರ್ಯಗೊಳಿಸಿದ್ದೇವೆ. ಮಾಧ್ಯಮಿಕ ಶಿಕ್ಷಣವನ್ನೂ ವಿಸ್ತಾರಗೊಳಿಸಿ, ರೂ. ೨,೪೦೦ಕ್ಕಿಂತ ಕಡಿಮೆ ವಾರ್ಷಿಕಾದಾಯವಿರುವ ಪಾಲಕರ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಒದಗಿಸುತ್ತಿದ್ದೇವೆ; ಮತ್ತು ಈ ಮಿತಿಯನ್ನು ರೂ. ೩,೬೦೦ಕ್ಕೆ ಏರಿಸುವ ಬಗ್ಗೆ ತೀವ್ರ ಗಂಭೀರ ಪರಿಶೀಲನೆ ನಡೆಸುತ್ತೇವೆ. ಇದು ನಿಜಕ್ಕೂ ನಾವೆಲ್ಲರೂ ಹೆಮ್ಮೆ ಪಡಬೇಕಾದ ಸಂಗತಿ. ಈ ನೀತಿಯು ಹಿನ್ನೆಲೆಯನ್ನು ಸರಕಾರ ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ಈಗ ಹೊರಡಿಸಿದ ಹಿಂದುಳಿದವರನ್ನು ಗೊತ್ತು ಮಾಡುವ ಆಜ್ಞೆಯಲ್ಲಿ ವರಮಾನದ ಮಿತಿಯನ್ನು ರೂ. ೧,೫೦೦ಕ್ಕೆ ಕುಂದಿಸುತ್ತಿರಲಿಲ್ಲ. ರೂ. ೨,೪೦೦ ವಾರ್ಷಿಕ ಆದಾಯವುಳ್ಳವರು ತಮ್ಮ ಮಕ್ಕಳ ವೃತ್ತಿಪರ ಶಿಕ್ಷಣಕ್ಕಾಗಿ ವರ್ಷಕ್ಕೆ ಸುಮಾರು ೫೦ ರೂಪಾಯಿ ಶುಲ್ಕ ತೆರುವುದಕ್ಕೂ ಅಸಮರ್ಥರು ಎಂಬುದನ್ನು ಮನವರಿಕೆ ಮಾಡಿಕೊಂಡ ನಮ್ಮ ಅತ್ಯುದಾರ ಪ್ರಜಾಸರಕಾರಕ್ಕೆ ರೂ. ೧,೫೦೦ ವಾರ್ಷಿಕಾದಾಯವಿರುವವನು ರೂ ೨ ಸಾವಿರಕ್ಕೂಮಿಕ್ಕಿದ ವೆಚ್ಚದಿಂದ ತನ್ನ ಮಕ್ಕಳಿಗೆ ತಾಂತ್ರಿಕಶಿಕ್ಷಣ ಕೊಡಿಸಲು ಮುಂದೆ ಬರುತ್ತಾರೆ ಎನ್ನುವ ವಿಚಾರ ಹೊಳೆದದ್ದು ನಿಜಕ್ಕೂ ವಿಚಾರ ರಾಹಿತ್ಯವೆಯಲ್ಲವೆ? ಅಥವಾ ಸರಕಾರದ ಈ ವಿಲಕ್ಷಣ ನೀತಿಯ ಪ್ರಯೋಜನವನ್ನು ಯಾರಿಗಿಬ್ಬರೂ ಕೊಡಿಸುವ ಬಾರದೆಂಬುದೇ ಅದರ ಆಶಯವೆ? ಇಷ್ಟೇ, ಈ ನೀತಿಯು ಹಿಂದೆ ಅವಾಸ ಸಹ್ಯಸಾಕಡ ನಿಲ್ಲ ಸರ್ವ ಸಹೆಯೆತ್ತಿತ್ತು ನಿಂತಿದೆ? ಇದನ್ನು ಎಲ್ಲರೂ ಅವಶ್ಯ ಗಂಭೀರವಾಗಿ ಅಭ್ಯಸಿಸಬೇಕಾದಾನ್ಯಾಸ್ಪದವಾದ ಈ ತನ್ನ ನಿಲುಮೆಯನ್ನು ಸರಕಾರ ಅವಶ್ಯಬದಲಿಸಲೇ ಬೇಕು.

ಆಲಸ್ಯದ ಪ್ರವೃತ್ತಿ

ಇನ್ನು ಸರಕಾರದ ಸೋಪಾನಿತಸದ ಕುರಿತೂ ಈ ಸಂದರ್ಭದಲ್ಲಿ ಪ್ರಸ್ತಾಪಿಸಬೇಕು. ಇದರ ಪರಿಣಾಮವಾಗಿ ತಿಂಗಳಂತರ್ ಪಿಶಾಚಿಗಳಂತೆ ತಮ್ಮ ಆಮೂಲ್ಯವನ್ನು ವ್ಯರ್ಥ ಕಳೆಯ ಬೇಕಾಗಿ ಬರುವ ವಿದ್ಯಾರ್ಥಿಗಳ ಕಣ್ಣೀರ ಕಥೆಯನ್ನು ಕಂಡೂ ಕೇಳಿಯೂ ಕಣ್ಣೀರು ಸುರಿಸಬೇಕು. ತಾಂತ್ರಿಕ ಕಾಲೇಜುಗಳಿಗೆ ಪ್ರವೇಶ ನೀಡುವುದು ಪ್ರತಿವರ್ಷವೂ ನಡೆಯ ಬೇಕಾದ ಒಂದು ನಿಯಮಿತ ಕಾರ್ಯಕ್ರಮ. ಇದು ಸರ್ವಸಾಮಾನ್ಯವಾಗಿ ನಡೆಯು ಬೇಕಾದುದು ಜೂನ್ ಅಂತ್ಯ ಅಥವಾ ಜುಲೈ ಆದಿಯ ಭಾಗದಲ್ಲಿ. ಇದಕ್ಕೂ ತದ ಮಾಡಿದರೆ, ಶಿಕ್ಷಣವನ್ನು ಯಶಸ್ವಿಯಾಗಿ ಕೊಡುವುದೆಂತು, ವಿದ್ಯಾರ್ಥಿಗಳು ಕಲಿಯುವುದೆಂತು? ಅಂತಾ, ಈ ಕಾಲೇಜುಗಳಲ್ಲಿ ಪ್ರವೇಶ ಪಡೆಯುತಿರುವವರು ತಮ್ಮ ಭವಿಷ್ಯವನ್ನು ನಿರ್ಧರಿಸುವುದಾದರೂ ಹೇಗೆ?

ಆವ್ಯವಸ್ಥೆ—ಅಸಾಕಲ್ಯ

ಈ ವರ್ಷ ರಾಜ್ಯದ ಎರಡೂ ವಿಶ್ವವಿದ್ಯಾಲಯಗಳು ಅತಿ ಬೇಗನೇ ಪಿ.ಯು.ಸಿ. ಪರೀಕ್ಷೆಯ ಫಲಿತಾಂಶವನ್ನು ನಾವು ಉಸಕಾರ ಮಾಡಿವೆ. ಇದಕ್ಕಾಗಿ ಅವು ಕೃತಜ್ಞಾರ್ಹವು. ರಾಜ್ಯ ಸರಕಾರವು ಜೂನ್ ಕೊನೆಯ ವಾರದಲ್ಲಿ ಕೇವಲ ೧೦—೧೫ ದಿನಗಳ ಅವಧಿಯನ್ನು ನೀಡಿ, ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ಪಡೆಯುವವರಿಂದ ಆಪೇಕ್ಷಾಶಕ್ತಿಗಳನ್ನು ಬಯಸಿತು. ಈ ಆಲ್ಪಾವಧಿಯ ನಡುವೆ ನಡೆಯ ಬೇಕಾದ ಕೆಲಸಗಳು ಒಂದೆರಡಲ್ಲ. ಆಪೇಕ್ಷಾ ಪತ್ರವನ್ನೂ ವಿವರಣಾ ಪತ್ರವನ್ನೂ ಹಣ ಕಳುಹಿಸಿ ಪಡೆದುಕೊಳ್ಳಬೇಕು; ಆ ಮೇಲೆ, ಇದ್ದಬಿದ್ದ ಸರ್ಟಿಫಿಕೇಟುಗಳನ್ನು ಪ್ರತಿಮಾಡಿ ಅದನ್ನು ಗಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಕೊಳ್ಳಬೇಕು—ಇದು ಎರಡು ಮೂರು ದಿನ ಅನ್ನಿಸಿ ನೀರು ಬಿಟ್ಟು ಮಾಡುವ ಅಲಿದಾಟು; ಏಕೆಂದರೆ, ಗಜೆಟೆಡ್ ಅಧಿಕಾರಿಗಳ ಭೇಟ್ಟಿಯೊಗ ಅತ್ತಿ ಹೂವಿನಂತಾಗಿದೆ. ಆ ಮೇಲೆ ಅವೆಲ್ಲವನ್ನೂ ನಿಶ್ಚಿತ ದಿನದೊಳಗೆ ಮುಟ್ಟುವಂತೆ ಕಳಿಸಿಕೊಡ ಬೇಕು. ಅಂಚೆ ಕಛೇರಿಯು ತನ್ನ ಕಾರ್ಯವನ್ನು ನಿರ್ವಂಚನೆಯಿಂದ ಮಾಡಿದರೂ ಸರಕಾರಿ ವಿಳಾಸವು ಹಣ ತನ್ನ ಕೈ ಸೇರಿದೊಡನೆಯೆ ಆಪೇಕ್ಷಾ ಪತ್ರವನ್ನು ಕಳಿಸುವ ಸಂಪಾಶಯವನ್ನು ಇಟ್ಟುಕೊಂಡಿರುವುದು ಕಡಿಮೆ. ಹಾಗಾಗಿ ಜಾಹೀರಾತು ಬೆಳಕು ಕಂಡ ದಿನವೇ ಹಣ ಕಳಿಸಿದರೂ ಅವಧಿ ವಿರುವ ನಂತರವೇ ಆಪೇಕ್ಷಾಪತ್ರ ಅಭ್ಯರ್ಥಿಯ ಕೈ ಸೇರುವುದು. ಇನ್ನು

(ನಾನೇ ಸುಟ ನೋಡಿ)

ಗಡಿ ವಿವಾದದಲ್ಲಿ

ಚೀನೀಯ ಏಕಪಕ್ಷೀಯ ದೃಷ್ಟಿ

ಕಳೆದ ವಾರ ಇಲ್ಲದ ಗಡಿ ತಂಟೆಯನ್ನು ಇದೆಯೆಂದು ವಾದಿಸುತ್ತ, ನೈಜ ನಿಯಂತ್ರಣ ರೇಖೆಯ ಪೂರ್ವದಲ್ಲಿ ಬಹಳಷ್ಟು ಭಾರತೀಯ ಭೂಮಿಯನ್ನು ನುಂಗುವ ತಹತಹದಿಂದಿರುವ ಚೀನೀಯರ ಕುತಂತ್ರದ ಕುರಿತು ನಾಕಷ್ಟು ವಿವರವನ್ನು ಕೊಟ್ಟು ಚೀನೀಯರ ಸಾಮ್ರಾಜ್ಯವಾದದ ಪ್ರತ್ಯಕ್ಷ ನಿದರ್ಶನವೇ ಭಾರತದ ಮೇಲೆ ಅದು ಮಾಡಿದ ಆಕ್ರಮಣವೆಂಬುದನ್ನು ಸಿದ್ಧಮಾಡಿ ಕೊಡಲಾಗಿದೆ. ಯಾವ ಕಾಲಕ್ಕೂ ತಮ್ಮದಾಗಿರದ, ಆದರೆ ಈಗ ತಮ್ಮದೆಂದು ವಾದಿಸುತ್ತ ತನ್ನ ಆಕ್ರಮಣ ಶೀಲತೆಯನ್ನು ಮುಂದೆ ವರಿಯುತ್ತಿರುವಂತೆಯೇ ಸಮರವಿರಾಮ ಮತ್ತು ಸಮಾಧಾನಕರ ಪರಿಹಾರ ಸಾಧನಗಳೆಂಬ ದೊಡ್ಡ ಹೆಸರಿನಲ್ಲಿ ಭಾರತೀಯರನ್ನು ವಂಚಿಸುವ ಮತ್ತು ತಮ್ಮ ಸ್ವಾರ್ಥವನ್ನು ಸಾಧಿಸುವ ಚೀನೀಯ ತಂತ್ರಜಾಲದ ಪೂರ್ಣ ಮತ್ತಷ್ಟು ಬೆಳಕು ಚೆಲ್ಲುವ ಪ್ರಯತ್ನ ವನ್ನಿಲ್ಲಿ ಮಾಡಬಹುದು.

ಕುತಂತ್ರದ ಸೂಚನೆಗಳು

೧೯೬೦ರಲ್ಲಿ ತೊಡಗಿದ ಚೀನೀಯ ಆಕ್ರಮಣ ಶೀಲತೆಯು ಮತ್ತೂ ಮುಂದುವರಿಯುತ್ತ ಎಂತು, ಭಾರತದ ಭೂಭಾಗಗಳಾದ ಜಾಂಗ್, ವಾಲಾಂಗ್, ತವಾಂಗ್, ಸೇಲಾ, ಜೋಂಡಿಲಾ ಮೊದಲಾದ ನೇಫಾ ಪ್ರದೇಶಗಳ ನೇಲಾಂಗ್ ಚಿಪ್ ಜಾಪ್, ಗಾಲಾಲ್ ಮತ್ತು ಜಾಂಗ್ ಜೆನ್ಮೂ ಕಣಿವೆಗಳಲ್ಲಿನ ಭಾರತೀಯ ಸೇನಾ ಠಾಣೆಗಳ ಮೇಲೂ ಲಡಕದ ಪೆಂಗೊಂಗ್ ಸ್ಟಂಗ್ಗಾರ್ ಸರೋವರ ಪ್ರದೇಶಗಳ ಮೇಲೂ ಚೀನೀಯರು ತಮ್ಮ ದುರಾಕ್ರಮಣವನ್ನು ಮುಂದುವರಿಸಿದರು. ಭಾರತದೊಳಗೆ ಬಹು ದೂರ ಬಂದು ಆವನ್ನು ತಮ್ಮ ಕಪಿಮುಷ್ಟಿಯಲ್ಲಿ ಬಿಗಿಹಿಡಿಯುವ ಮುದ್ದೇಶದಿಂದ ೧೯೬೨ನೆ ನವಂಬರ ೨೦ರಂದು ಏಕಪಕ್ಷೀಯವಾಗಿ ಚೀನಾವು ಸಮರ ವಿರಾಮವನ್ನು ಸಾರಿತು. ಚೀನೀಯ ಸರಕಾರದ ಘೋಷಣೆಯಂತೆ:

೧. ತಾವು ಆಧ್ಯವಿಸಿಕೊಂಡಿರುವ ನೈಜ ನಿಯಂತ್ರಣ ರೇಖೆಯಿಂದ ಚೀನೀಯ ಸೇನೆಯು ೨೦ ಕಿಲೋಮೀಟರು ಹಿಂದಕ್ಕೆ ಸರಿಯಲು ದಶಂಬರ ೧, ೧೯೬೨ರಂದು ತೊಡಗುವುದು.

೨. ಪೂರ್ವ ವಿಭಾಗದಲ್ಲಿ ತಾವು ಆಧ್ಯವಿಸಿಕೊಂಡಿರುವ 'ನೈಜನಿಯಂತ್ರಣ ರೇಖೆ'ಗೆ ತಾವು ಇಂದಿರುವ ಸ್ಥಾನದಿಂದ ಹಿಂದೆ ಸರಿಯುವುದು ಮಾತ್ರವಲ್ಲ, ಆ ರೇಖೆಯಿಂದಲೂ ೨೦ ಕಿಲೋಮೀಟರು ದೂರಕ್ಕೆ ಚೀನೀಯ ಪಡೆಗಳು ಸರಿಯುವುದು.

೩. ಮಧ್ಯ ಮತ್ತು ಪಶ್ಚಿಮ ವಿಭಾಗಗಳಲ್ಲಿ ತಾವು ಆಧ್ಯವಿಸಿರುವ ನೈಜ ನಿಯಂತ್ರಣ ರೇಖೆಯಿಂದ ೨೦ ಕಿಲೋಮೀಟರುಗಳಷ್ಟು ಹಿಂದೆ ಸರಿಯುವರು.

ಪೂರ್ವ ವಿಭಾಗದ ಮಟ್ಟಿಗೆ ತಮ್ಮ 'ನೈಜ ನಿಯಂತ್ರಣ ರೇಖೆ'ಯು ಮೈಕ್ ಮಹೋನ್ ರೇಖೆಯನ್ನೇ ಸಾಮಾನ್ಯವಾಗಿ ಅನುಸರಿಸುತ್ತದೆ; ಪಶ್ಚಿಮ ಮತ್ತು ಮಧ್ಯ ವಿಭಾಗಗಳಲ್ಲಿ ಸಾಂಪ್ರದಾಯಿಕ ಹಾಗೂ ಪಾರಂಪರಿಕ ಸೀಮೆ ವತ್ತು ನೈಜನಿಯಂತ್ರಣ ರೇಖೆಗಳ ನಡುವೆ ದೂರ್ವಾದೊಂದು ಗಲಿಬಿಲಿಯನ್ನೇ ಎಬ್ಬಿಸಿದ್ದಾರೆ.

ಭಾರತದ ಹೆಜ್ಜೆ

ನೈಜನಿಯಂತ್ರಣರೇಖೆಯ ಕುರಿತು ಚೀನೀಯರ ಸ್ವಕಪೋಲಕಲ್ಪಿತಭೌಗೋಳಿಕತೆಯನ್ನು ನಿರಾಕರಿಸುತ್ತ ಭಾರತೀಯ ಪ್ರಧಾನಿಯವರು ೧೯೬೨ರ ದಶಂಬರ ೧೫ರಂದು ಚೀನೀಯ ಪ್ರಧಾನ ಮಂತ್ರಿಯವರಿಗೆ ಈ ರೀತಿ ಬರೆದರು:

"ನವಂಬರ ೨, ೧೯೬೨ರ ಪತ್ರವನು ವಿಭಾಗದ ನೈಜನಿಯಂತ್ರಣರೇಖೆಯೆಂದು ನೀವು ಉಲ್ಲೇಖಿಸಿರುವುದು ತಿರವು ಮಾಡಿದ ಮಿಲಿಟರಿ ರಾಣ್ಯಗಳ ಮೂಲೆಯನ್ನು. ಕಿಜಲ್ಜಿಲ್ಲ, ಶಿಂಗ್‌ಲಿಂಗ್, ಡೆಸ್ಪ್ರು, ಸಂಜನ್-ಗ್ಲಿಂಗ್ ಅಥವಾ ಇವುಗಳ ಪಶ್ಚಿಮಕ್ಕೆ ವತ್ತು ಸ್ಪಂಗ್ಗೂರ್‌ನ ದಕ್ಷಿಣ ಇಳ್ಳಜೇ ನಶ್ಚಿಮಕ್ಕೆ ನವಂಬರ ೧೯೬೨ರಲ್ಲಿ ಚೀನೀಯ ಸೇನಾ ಠಾಣೆ ಇರಲೀ ಇಲ್ಲವೆಂಬುದನ್ನು ನೀವು ಅವಶ್ಯ ತಿಳಿದಿರಬೇಕು. ಇದು ಮಾತ್ರವಲ್ಲದೆ, ನವಂಬರ, ೭, ೧೯೬೨ರ ನೈಜನಿಯಂತ್ರಣರೇಖೆಯೆಂದು ನೀವೀಗ ಹೇಳುತ್ತಿರುವುದು ೨೦ನೆ ಆಕ್ಟೋಬರ ೧೯೬೨ರ ನಂತರ ಬಲಾತ್ಕಾರದಿಂದ ನಡೆಸಿದ ಆಕ್ರಮಣಗಳ ಪರಿಣಾಮವಾಗಿ ನೀವು ಸ್ಥಾಪಿಸಿರುವ ರೇಖೆ. ಪ್ರಾಥಮಿಕ ಕಮರ ವಿರಾಮದ ಹೊಣೆಕೆಯೊಳಗೆ ಚೀನಾವು ತನ್ನದೆಂದು ಅಧಿಕಾರಯುತವಾಗಿ ಹೇಳುವ ಮತ್ತು ತನ್ನ ಸೇನೆಯು ಮೂಲಕ ೨೦ನೆ ಆಕ್ಟೋಬರ ೧೯೬೨ರ ಬಳಿಕ ವಶಪಡಿಸಿಕೊಂಡಿರುವ ಭಾರತೀಯ ನೆಲವನ್ನು ಸದಾಕಾಲ ತನ್ನ ಹಿಡಿತದಲ್ಲಿಯೇ ಇಟ್ಟುಕೊಳ್ಳುವ ಅಭಿಲಾಷೆಯಿಂದ ಕೂಡಿರುವುದು. ಇದನ್ನೆ ನಾವು ಒಪ್ಪಿಕೊಳ್ಳುವುದು ಮಾತ್ರ ಸಾಧ್ಯವಿರುವುದಿಲ್ಲ....."

ಮಧ್ಯ ಮತ್ತು ಪೂರ್ವ ವಿಭಾಗಗಳ ಕುರಿತು ಭಾರತೀಯ ಪ್ರಧಾನಿಗಳು ಹೀಗೆ ಬರೆದಿದ್ದಾರೆ:

"ನಿಮ್ಮ ಸರಕಾರವು ವೂಜೆಯೆಂದು ಕರೆಯುವ ಬಾರಹೋತಿಯು ಚೀನೀಯ ಪ್ರಭುತ್ವದಲ್ಲಿರಲೇ ಇಲ್ಲ...ಪೂರ್ವದಲ್ಲಿನ ಲಾಂಗ್ಜು ಗಡಿಭಾಗದಲ್ಲಿ ಚೀನೀಯ ಪಡೆಗಳು ಒಡರ ನೇಲೆ ಆಕ್ರಮಣ ಮಾಡುವ ಗಳಿಗೆಯು ವರೆಗೆ ಭಾರತೀಯ ನಾಗರಿಕಾಡಳಿತೆಯ ನಿಯಂತ್ರಣದಲ್ಲಿತ್ತು..... ನಮ್ಮೆರಡು ಸರಕಾರಗಳ ನಡುವೆ ವಿನಿಮಯಗೊಂಡ ಹಲವಾರು ಪತ್ರ ವ್ಯವಹಾರಗಳು ಚೀನೀಯರ ಸ್ಪಷ್ಟೀಕರಣದಂತೆ ಕೇಶಿಲಾಂಗ್ ನದಿ ಮತ್ತು ಪೆಡಾಂಗ್ ಪ್ರದೇಶವೆಂದು ಕರೆಯಲ್ಪಡುವ ಥಾಗ್ಲಾ ಕಣಿವೆಯು ದಕ್ಷಿಣಕ್ಕಿರುವ ಕಿನ್ಜಿನುನ ಮತ್ತು ಥೋಲಾ ಖಾಗಗಳು ಅನೆ ಸಪ್ತಂಬರ ೧೯೬೨ರಿಂದ ತೊಡಗಿದ ಚೀನೀ ಆಕ್ರಮಣಕ್ಕೆ ನೊದಲು ಭಾರತೀಯ ಆಡಳಿತೆಗೊಳಪಡದ ಭೂಭಾಗದ ಮೇಲೆ ತಮ್ಮ ಪ್ರಭುತ್ವವನ್ನು ಜಮಾಯಿಸುವ ಸ್ಪಷ್ಟೋದ್ದೇಶದಿಂದ ಕುಂಬಿಪೆ."

ತಾವು ಬರೆದ ಈ ಪತ್ರದಲ್ಲಿ ಪ್ರಧಾನಿ ನೆಹರುರವರು, ಎರಡು ಕಡೆಯವರ ನಡುವೆ ನೂತುಕತೆ ನಡೆಯಬೇಕಾದರೆ, ಸಪ್ತಂಬರ ೮, ೧೯೬೨ರಂದಿದ್ದ ಪರಿಸ್ಥಿತಿಯನ್ನು ಉಳಿಸಿಕೊಳ್ಳಬೇಕು ಎಂಬ ಭಾರತ ಸರಕಾರದ ಸ್ಪಷ್ಟ ಹಾಗೂ ನೇರವಾದ ಸಲಹೆಯನ್ನು ಚೀನೀಯ ಪ್ರಧಾನಿಗಳಿಗೆ ಮರಳಿ ನೀಡಲಾಗಿತ್ತು. ಭಾರತದ ಈ ಸಲಹೆಯು ಸತ್ಯ ಸಮ್ಮತವಾದುದು, ಗಡಿತಂಟೆಯು ಶಾಂತ ರೀತಿಯಿಂದ ಬಗೆ ಹರಿಯಲ್ಪಡಬೇಕಾದರೆ, ಚೀನಾವು ತಾನು ಮಾಡಿದ ಕೊಟ್ಟ ಕೊನೆಯ ಆಕ್ರಮಣವನ್ನಾದರೂ ಹಿಂದೆ ತೆಗೆಯಬೇಕು ಎಂಬ ತನ್ನ ಅಂಗೀಕೃತ ತತ್ವಕ್ಕೆ ಅನುಗುಣವಾಗಿಯೇ ಇದೆ.

ಕೊಲಂಬೊ ಸಲಹೆಗಳು

ದಶಂಬರ ೧೦, ೧೯೬೨ರಂದು ಸಿಂಹಳದ ಪ್ರಧಾನಿ ಶ್ರೀಮತಿ ಸಿರಿಮಾವೋ ಭಂಡಾರನಾಯಿಕೆಯವರು ಅರು ತಟಸ್ಥ ಆಫ್ರೋಏಷ್ಯನ್ ದೇಶಗಳ ಬ್ರಹ್ಮ, ಕಂಬೋಡಿಯ, ಸಿಂಹಳ, ಘಾನಾ, ಇಂಡೊನೇಶ್ಯ ಮತ್ತು ಸಂಯುಕ್ತ ಅರಬ ಪ್ರಜಾರಾಜ್ಯ ಸಮ್ಮೇಳನವೊಂದನ್ನು ಭಾರತ—ಚೀನಾಗಳ ನಡುವಣ ವಿವಾದದ ಕುರಿತು ಚರ್ಚಿಸಲು ಕರೆದರು. ವಿವಾದಕ್ಕೊಂದು ಶಾಂತ ವಿಧಾನಗಳಿಂದ ಪರಿಹಾರವರಸಲೇಕೆಂಬ ಸದುದ್ದೇಶದಿಂದ, ಅವು ವಿರೋಧವಾಗಿ ಕೆಲವೊಂದು ಸಲಹೆಗಳನ್ನು ಮಾಡಿದವು. ಭಾರತ ಮತ್ತು ಚೀನಾಗಳಿಗೆ ಒಪ್ಪಿಸಲಾದ ಸಲಹೆಗಳು ಇವು:

ಪಶ್ಚಿಮ ವಿಭಾಗದಲ್ಲಿ ನವಂಬರ ೫ಗೆ, ೧೯೬೨ರ ಸಮರ ವಿರಾಮ ಸೂಚನೆಗಳಂತೆ ಚೀನಾವು ೨೦ ಕಿಲೋ ಮೀಟರುಗಳಷ್ಟು ಹಿಂದೆ ಹೋಗಬೇಕು. ಅದೇ ಸಮಯದಲ್ಲಿ ಭಾರತವು ತನ್ನ ಈಗಿನಿವ ಸೈನಿಕ ಸ್ಥಿತಿಯನ್ನು ಉಳಿಸಿಕೊಂಡು ಬರಬೇಕು.

ಗಡಿವಿವಾದವನ್ನು ಪರಿಹರಿಸಿಕೊಳ್ಳುವವರೆಗೆ, ಚೀನೀಯರ ಹಿನ್ನಡೆಯಿಂದ ತೆರವಾದ ನೆಲವನ್ನು ನಿಸ್ಸೈನ್ಯೀಕೃತಗೊಳಿಸಿ, ಎರಡೂ ಕಡೆಯವರು ಒಪ್ಪುವಂತೆ ನಾಗರಿಕ ಆಡಳಿತೆಯನ್ನು ಅಲ್ಲಿ ನಡೆಸಬೇಕು. ಆದರೆ, ಈ ಮೊದಲು ಇಲ್ಲಿ ಯಾರೇ ಇದ್ದಿರಲಿ, ಹಾಗೆ ಇದ್ದುದೇ ಅವರ ಅಧಿಕಾರಕ್ಕೆ ಬಲವೆನಿಸಬಾರದು.

ಪೂರ್ವ ವಿಭಾಗದಲ್ಲಿ ಎರಡೂ ಕಡೆಯವರೂ ಒಪ್ಪಿಕೊಂಡಿರುವ ನೈಜ ನಿಯಂತ್ರಣ ರೇಖೆಯೇ ಅವರವರಿಗೆ ಸಮರವಿರಾಮ ರೇಖೆಯಾಗಬೇಕು. ಈ ನಡುವೆ ಉಳಿಯುವ ಭೂಭಾಗದ ಬಗ್ಗೆ ಮುಂದಿನ ಮೂತುಕತೆಗಳ ಕಾಲದಲ್ಲಿ ನಿರ್ಧಾರಕ್ಕೆ ಬರಬಹುದು.

ಮಧ್ಯ ವಿಭಾಗದಲ್ಲಿರುವ ವಿವಾದವನ್ನು ಶಾಂತ ವಿಧಾನಗಳಿಂದಲೇ ತೀರ್ಮಾನಿಸಿಕೊಳ್ಳಬೇಕಲ್ಲದೆ ಶಕ್ತಿಪ್ರಯೋಗದಿಂದಲ್ಲ.

ಸಿಂಹಳದ ಪ್ರಧಾನಿ ಸಿರಿಮಾವೊರವರು ಪೇಕಿಂಗ್ ಮತ್ತು ನವದೆಹಲಿಗೆ ಭೇಟಿಯಿತ್ತು ಎರಡೂ ಸರಕಾರಗಳೊಡನೆ ಸೂಚನೆಗಳ ಕುರಿತು ಚರ್ಚೆ ನಡೆಸಬೇಕು ಎಂದು ಸಮ್ಮೇಳನವು ಬಯಸಿತು.

ವದರಂತೆ ಶ್ರೀಮತಿ ಭಂಡಾರನಾಯಿಕೆಯವರು ದರು ದಶಂಬರ ೨೧, ೧೯೬೨ರಿಂದ ಜನವರಿ ೮, ೧೯೬೩ರ ವರೆಗೆ ಪೇಕಿಂಗನ್ನು ಸಂದರ್ಶಿಸಿದರು. ಅವರು ಪೇಕಿಂಗನ್ನು ಬಿಡುವ (ನನೇ ಪುಟ ನೋಡಿರಿ).

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಚಾಂದಾ ದರಗಳು:

ಸ್ಥಿರಮಿತಿ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00

ಅಸ್ಥಿರಮಿತಿ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆಪೆಚ್ಚು ಸೇರಿ) ರೂ. 6-75
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಷ್ಟಾಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕ್ಯಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪೈಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ಯಶಸ್ವೀ ಜೀವನದ ಗುಟ್ಟು—

ಬ್ರಹ್ಮಚರ್ಯದ ಪಾಲನೆ

ಪುರಾತನ ಸಂಸ್ಕೃತಿಯ ಜೀವಾಳವಾದ ಬ್ರಹ್ಮಚರ್ಯದ ಪಾಲನೆಯು ಕ್ಷಣ ಕ್ಷಣಕ್ಕೂ ಇಂದಿನ ಜನಾಂಗದಿಂದ ದೂರವಾಗುತ್ತಿರುವುದನ್ನು ಕಾಣುತ್ತಿದ್ದೇನೆ. ಇಂದಿನ ನವ ನಾಗರಿಕತೆಯು ಸುಖದ ಸುಪ್ಪತ್ತಿಗೆ ಎಂದು ನಾವು ತಿಳಿಯುತ್ತಿದ್ದೇವೆ. ಇದು ಬರಿಯ ಕಿರುಕನ ಕನಸು ಮಾತ್ರ! ಪ್ರಾಚೀನ ಜನರ ಶರೀರ ಸೌಷ್ಠವ ದಷ್ಟು ಪುಷ್ಟತೆ ಶಾರೀರಿಕ ಕಾಂತಿ, ತೇಜೋಬಲ, ಕ್ರಿಯಾಶಕ್ತಿ ಹಾಗೂ ಕರ್ಮ ಕೌಶಲತೆಯು ಕಾಲವು ನಾಗರಿಕತೆಯಾ ಮೆಟ್ಟಿಲನ್ನು ಹತ್ತುತ್ತಿದ್ದಂತೆಯೇ ಕ್ಷಯಿಸುತ್ತಾ ಬರುತ್ತಿರುವುದು ಸರ್ವವಿದಿತವಾಗುತ್ತಿರುವಾಗ ಇದೂ ಒಂದು ಸುಖದ ಜೀವಾಳವೇ! ಖಂಡಿತ ಅಲ್ಲ. ಬ್ರಹ್ಮಚರ್ಯದ ಸರಿಪಾಲಕರಾದ ಹಿಂದಿನ ಜನರ, ಆದರಲ್ಲೂ ಮುಖ್ಯವಾದ ಯೋಗಿಗಳ ಮತ್ತು ಋಷಿವರ್ಯರುಗಳ, ಅದ್ಭುತ ಶಕ್ತಿಪವಾದಗಳು ಇಂದಿನ ಈ ಯಾಂತ್ರಿಕತೆಯುಗದ ಜನಾಂಗವು ಇದೇ ಮೂಗಿದಲ್ಲಿ ಇನ್ನೆಷ್ಟು ಮುಂದುವರಿದರೂ ಬಿಡಿಸಲಾಗದ ಒಗಟೇ ಎಂಬುದು ಸರ್ವಶ್ರುತವಾದ ಮಾತು.

ಹಿಂದಿನ ಬ್ರಹ್ಮಚಾರಿಗಳ ಹಾಗೂ, ಯೋಗಿ, ಋಷಿವರ್ಯರುಗಳ ದಯೆ, ಧರ್ಮ, ದಾಕ್ಷಿಣ್ಯ—ತೇಜಸ್ಸು ಮೊದಲಾದ ಶಕ್ತಿಗಳ ಸಮ್ಮಿಲನದಿಂದ ತಾಂಡವವಾಡುತ್ತಿದ್ದ ಭಾರತಾಂಬೆಯು ಪುಣ್ಯ ನೆಲವನ್ನು ಇಂದು ವೀಕ್ಷಿಸಿದರೆ ಆಧರ್ಮಿಗಳಾದ, ಸೈಸ್ಸತ್ವ, ತೇಜೋಹೀನ ಜನಾಂಗದ ಮುಖವಾಡವೇ ಎಲ್ಲೆಲ್ಲೂ ಕಂಡು ಬರುತ್ತಿದೆ. ಇದಕ್ಕೇನು ಕಾರಣ? ಇದರ ಉತ್ತರಕ್ಕಾಗಿ ಗುಡ್ಡೆಕಾಡುಗಳಲ್ಲಿ ಅಲೆಯಬೇಕಾಗಿಲ್ಲ. ಯಾವ ನಾಗರಿಕತೆಯನ್ನು ನಾವು ಮೆಚ್ಚಿಕೊಂಡಿಯುತ್ತೇವೋ, ಹಾಗೂ ಅದನ್ನೇ ಸುಖದ ಪರಮಾವಧಿ ಎಂಬುದಾಗಿ ಅನುಕರಿಸುತ್ತಿದ್ದೇವೋ, ಅದೇ ಇಂದಿನ ನೈಸ್ಸತ್ವ ಜನಾಂಗದ ಉದಯಕ್ಕೆ ಮೂಲ ನಾಂದಿಯೂಗಿದೆ.

ನವ ನಾಗರಿಕತೆಯು ಜೀವನದ ಉನ್ನತ ಕಾಫ್ಕಿ ಬೆಳಿಗ್ಗೆ ಎಂಟು ಗಂಟೆಯಾದರೂ ಹಾಸಿಗೆಯಿಂದ ಏಳಲಾಗದ ಸುಖಾಭಿಲಾಷೆ, ಕ್ರಮ ತಪ್ಪಿದ ಜೀವನ, ರಜೋತಮಗಳ ಆಧಿಕ್ಯತೆ, ವಿಲಾಸಜೀವನ, ಕಾಮೋತ್ಸ್ಫುರತೆಯನ್ನು ಹೆಚ್ಚಿಸುವಂತಹ ಸಿನೇಮಾದ ದೃಶ್ಯಗಳು, ಫೇಶನ್ನಿನ ಹಾರಾಟ ದಯೆ,-ದಾನ—ಧರ್ಮಗಳಿಂದ ದೂರವಿರೋಣ—ಇವೇ ಮೊಗಲಾದುವುಗಳು ಇಂದಿನ ನಾಗರಿಕತೆಯ ಸೋಪಾನದಲ್ಲಿಯ ಕಲಾಕೌಶಲ್ಯ. ಬ್ರಹ್ಮಚರ್ಯದ ಮೂಲಕ್ಕೇ ಕೊಡಲಿಯೇಟು ಆಗಿರುವಂತಹ ಈ ಕಲಾ ಕೌಶಲ್ಯಗಳಿಗೆ ಮೂರು ಹೋಗಿರುವಂತವರಿಗೆ ಖಂಡಿತವಾಗಿಯೂ ಮುಖದಲ್ಲಿ ಕಳೆ ಬರಬೇಕಾದರೆ ಪೌಡರ್ ಸ್ನೋಗಳ ದಾಸ್ಯತ್ವ ಅತ್ಯಗತ್ಯವಾದದ್ದೆ.

ಇಂದಿನ ಶಿಶುವು ಜನನವಾದೊಡನೆ ನೋಡುವುದು ಇಂಥ ಕಲುಷಿತ ವಾತಾವರಣವನ್ನು. ಇದರಲ್ಲೇ ಹೇಗೋ ಎಂಟು ವರ್ಷಗಳ ಕಾಲ ಒಂದು ನಿರಪಾಯಕ್ರಮದಿಂದ ಜೀವನವನ್ನು ದೂಡಿದರೂ ಮುಂದೆ ಅದಕ್ಕೆ ಇತರರ ಅನುಕರಣೆಯು ಅಗತ್ಯವು ಕಂಡುಬಂದು ತನ್ನ ಹೇಯವಾದ ಜೀವನಕ್ಕೆ ಶ್ರೀ ಗಣೇಶ ಮಾಡುತ್ತದೆ. ಆಗಲೇ ವೀರ್ಯವೂ ಪರೋಕ್ಷವಾಗಿ ಸ್ವಾಭಾವಿಕವಾಗಿ ಉತ್ಪತ್ತಿಯಾಗಲು ಪ್ರಾರಂಭಿಸಿ ಅದು ಗರ್ಭಾಂಶದಿಂದ ಗಂಡ ವರ್ಷ ವಯಸ್ಸಿನ ಆಂದಾಜಿಗೆ ಒಂದು ತಾದ ಹುಚ್ಚು ಪ್ರೇರಣೆ ಒಳಗಾಗಿ ಬಿಡುತ್ತದೆ. ಇಂಥ ಸಮಯದಲ್ಲಿ ಬ್ರಹ್ಮಚರ್ಯದ ಜೀವಾಳವಾದ ವೀರ್ಯದ ರಕ್ಷಣೆಯು—ಅಗತ್ಯತೆಯನ್ನು ತಿಳಿಸುಪಡಿಸುವ ಗುರು ಇಂದು ಇಲ್ಲವಾಗಿದ್ದಾನೆ. ಅನುಕರಣೆಯು ಜೀವನವೇ ಮೇಲೆಂಬುದಾಗಿ ಭಾವಿಸುವ ಇಂದಿನ ಜನಾಂಗಕ್ಕೆ ಆದರ ಅಗತ್ಯತೆ—ಉಪಯೋಗ ಕಾಣುತ್ತಿಲ್ಲ. ಇದರಿಂದ ಬಾಲಕನ ದೃಷ್ಟಿ ಫೇಶನ್ನಿನ ಕಡೆಗೂ ಇಂದಿನ ನಾಗರಿಕತೆಯಲ್ಲಿ ಪಳಗಿದವರ ರೀತಿಯ ಕಡೆಗೂ ಹರಿಯುತ್ತದೆ. ಇದರಿಂದ ಅವನಿಗೆ ಬ್ರಹ್ಮಚರ್ಯದ ಪಾಲನೆ, ಧರ್ಮಕರ್ಮಾಚರಣೆ, ಅಧ್ಯಯನಶೀಲತೆ ಮೊದಲಾದುವುಗಳಿಂದ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿರುವ ಶತ್ರು ಈ ಉದ್ರೇಕವನ್ನು ತೃಪ್ತಿಪಡಿಸುವುದೇ ಮುಖ್ಯ ಹಾಗೂ ಅದ್ಯಕರ್ತವ್ಯವಾಗಿ ಉದಾಸೀನ ಹೆಚ್ಚಾಗುತ್ತದೆ.

ಅಲಸ್ಯದವನಿಗೆ ಅವಶ್ಯಕವೂ ವಿಷವೆಂಬಂತೆ. ಕಜ್ಜಾನರನ್ನು ದೂರೀಕರಿಸಿ ದುರ್ಜನರ ಸಹವಾಸ ಮಾಡಿ ಕಾಮೋದ್ರೇಕಕಾರಿಗಳಾದ ಸಿನೇಮಾಗಳನ್ನು ನೋಡಿ ಬರುತ್ತಾನೆ. ಕಾಫಿ, ಚಾ, ಬೀಡಿ, ಸಿಗರೇಟು ಇತ್ಯಾದಿ ಚಟಗಳಿಗೆ ಕೇಂದ್ರ ಬಿಂದುವಾಗಿ ತಾನೊಬ್ಬ 'ಜಂಟಲ್‌ಮೆನ್' ಎಂದು ಭಾವಿಸುತ್ತಾನೆ. ಇದರಿಂದ ಶರೀರದಲ್ಲಿ ಇನ್ನೆಷ್ಟು ಬಲವಾಗಿ ಆವನ ಕೈಸುಮ್ಮನಿರದೆ ತನ್ನ ಲಿಂಗದತ್ತ ತಿರುಗಾಗಿ ಸಾಗುತ್ತದೆ. ಹೀಗೆ ಒಬ್ಬ ಮನುಷ್ಯನು ವೈದ್ಯುತವೂಡಿಕೊಂಡರೆ, ಮುಂದೆ ಅವನಿಗೆ ಗರ ಬಡಿದು ಬಿಡುತ್ತದೆ. ಆವನು ಹಿಂದೆ ಮುಂದೆ ನೋಡುವ ಗೋಜಿಗೆ ಹೋಗದೆ ದಿನದಲ್ಲಿ ಹಲವಾರು ಮುಷ್ಠಿವೈಥುನ ಮಾಡಿಕೊಳ್ಳುತ್ತಾನೆ. ಇದು ಕಡೆ ಕಡೆಗೆ ಬಿಡಲಾಗದ ಚಟವಾಗಿ ಬಿಡುತ್ತದೆ. ಇದರಿಂದ ಬ್ರಹ್ಮಚರ್ಯದ ತಾಯಿಬೇರಿಗೇ ಬಲವಾದ ಕೊಡಲಿಯೇಟು ಬೀಳುತ್ತದೆ. ಇದು ಸಾಲದು ದಕ್ಕೆ ವಿವಿಧ ರೀತಿಯ ಕೃತಕ ಉಪಕರಣಗಳು ಇಂದು ಮಾರ್ಕೆಟ್‌ನಲ್ಲಿ ಸಿಗುತ್ತದೆ ಎಂದ ಮೇಲೆ ಇನ್ನು ಹೆಚ್ಚು ಹೇಳಿ ಪ್ರಯೋಜನವಿಲ್ಲವಷ್ಟೇ. ವ್ಯಾಯ ಬಂದಂತೆ ರಕ್ತ ಭೀತವಾಗಿ ನವ ಯೌವನದಿಂದ ಪರಿಪೂರ್ಣವಾದ ಅಂಗ ಸೌಷ್ಠವಹಾಗೂ, ಕಾಂತಿಯಿಂದ ತುಂಬಿ ಓಜೋಪೂರ್ಣವಾಗಿರಬೇಕಾದ ಈ ಶರೀರವು ಈ ತೆರನ ನಿಕೃಷ್ಟವಾದ ಹವ್ಯಾಸದಿಂದ ಕಾಂತಿಹೀನವಾಗಿ, ಒಣಗಿದ ಬೇಳೆ ಹಾಗೂ ಸತ್ವ ಹೀನವಾಗಿ ಗುಳಿಬಿದ್ದ ಕಣ್ಣು, ಮುಖಗಳಿಂದ ಕೂಡಿ, ಮರೆವಿನ ಆಜ್ಞನಾಗಿ ಬಿಡುವಂತೆ ಮಾಡುತ್ತದೆ.

ಬೇಡ,ಈ ತೆರನ ನಾಗರಿಕತೆಗೆ ನಾವೇಡೂ ಮರುಳಾಗುವುದು ಬೇಡ. ಇದು ಧರ್ಮ-ನೀತಿಗಳ ಕಳಪೆಯಿನ್ನೇ ಬಿಟ್ಟು ನಮ್ಮನ್ನು ಅಧಃ ಪತನದ ಶಾಶ್ವತವಾದ ಹಂತಕ್ಕೇ ಒಯ್ಯುತ್ತದೆ ಹೀಗಾಗಲು ಬಿಡಬಾರದು ನಮ್ಮ ಜನಾಂಗವೆಲ್ಲ ಶಕ್ತಿಹೀನವಾಗಿ, ಪರಂಪರೆಯಿಂದ ಗಳಿಸಿದ ಕೀರ್ತಿಯನ್ನು ನಾವಿಂದು ಬಹು ಸುಲಭವಾಗಿ ಬಿಟ್ಟು ಕೊಡಬೇಕಾದೀತು. ಸ್ವಾತಂತ್ರ್ಯದಿಂದ ಬಾಳಲಿಕ್ಕಾಗಿ ಯಾರಾದರೂ ನಮ್ಮ ಇಂದಿನ ಯುವಕರು ಈ ತೆರನ ಕಾಮೋದ್ರೇಕಕಾರೀ ವೃತ್ತಿಗಳನ್ನು ತ್ಯಜಿಸಬೇಕು. ಇಂದು ಈ ತೆರನ ದುಶ್ಚಟಗಳನ್ನು ಬಿಡಲು ಅಸ್ಸೊಂದು ಕಷ್ಟವೇ? ಇದನ್ನು ತ್ಯಜಿಸುವ ಉಪಾಯ ಏನೆಂದು ಕೇಳುತ್ತೀರಾ? ಸ್ವಲ್ಪ ತಾಳಿ; ನೀವು ಕೇಳಿಗೆ ಸೂಚಿಸಿದ ನಿಯಮಗಳನ್ನು ಪಾಲಿಸಿದ್ದೇ ಆದರೆ ಖಂಡಿತವಾಗಿಯೂ ಜಯಶೀಲರಾಗುತ್ತೀರಿ. ಭಾರತದ ಕೀರ್ತಿ ಧ್ವಜವನ್ನು ಹಾರಿಸುವವರಲ್ಲಿ ನೀವೂ ಒಬ್ಬರಾಗುತ್ತೀರಿ. ಇದಕ್ಕೆ ಸಂಶಯವೇ ಇಲ್ಲ.

ಮೊಟ್ಟ ಮೊದಲಾಗಿ ಮುಷ್ಠಿ ವೈಥುನವನ್ನು ತ್ಯಜಿಸಲು ಮನಃಪೂರ್ವಕವಾಗಿ ದೃಢ ನಿರ್ಧಾರವೂಡಬೇಕು ಇದರಿಂದಾಗುವ ಸಂಪೂರ್ಣ ದುಷ್ಪರಿಣಾಮಗಳನ್ನು ನಾವು ಮನನ ಮಾಡಿಕೊಳ್ಳಬೇಕು. ನಿಸ್ತೇಜತೆ ಅಮ್ಲಪಿತ್ತ ಉದ್ಗಾರ, ಕೃಶತೆ, ದೌರ್ಬಲ್ಯ, ಆಸಜನ, ಕೆಮ್ಮು, ಉಬ್ಬಸ, ಪಾಂಡು ರಾಜ್ಞಿಯ ಸ್ಮರಣ ಶಕ್ತಿಯು ನಾಶ ಅಜ್ಞಾನ, ನಪುಂಸಕತೆ, ನಿಶ್ಯಕ್ತಿ, ತಲೆ ತಿರುಗುವಿಕೆ, ಇವೇ ಮೊದಲಾದ ಶಾರೀರಿಕ ಹಾಗೂ, ಮಾನಸಿಕವಾದ ರೋಗಗಳಿಗೆ ಈ ದುಶ್ಚಟವು ಕಾರಣ ವಾಗುತ್ತದೆ.

ದುಶ್ಚಟಗಳ ದಾಸ್ಯತನದಲ್ಲಿ ತೊಳಲಾಡುತ್ತಿರುವ ರಸಿಕ ಸ್ನೇಹಿತರಿಂದ ದೂರವಿದ್ದು ಒಬ್ಬ ಒಳ್ಳೆಯ ಸತ್ವಗುಣಾನ್ವಿತನಾದ ನಿಮ್ಮ ಮೇಲೆ ಕನಿಕರವಿರುವ ಸ್ನೇಹಿತನನ್ನು ಆರಿಸಿಕೊಂಡು ಅವನ ಜೊತೆಯಲ್ಲಿ ಕಾಲವನ್ನು ಹೆಚ್ಚು ಶ್ರೇಯಸ್ಕರ.

ಮನಸ್ಸು ಚಂಚಲವಾದ ಕೂಡಲೇ ನಾವು ಹಾನಿಯನ್ನು ನೆನಪಿಗೆ ತಂದುಕೊಂಡು ಬಿಡಬೇಕು.

ನಿಶ್ಕಾಂತವಾಗಿ ಮಲಗುವ ಗೋಜಿಗೆ ಹೋಗಬಾರದು.

ಕಾಮೋತ್ಪಾದಕ ಮಾಡುವ ಕಥೆ, ಪರಟಿ, ಪದ್ಯ, ಮದ್ಯಪಾನ ಇವೆ ನೊದಲಾದುವುಗಳಿಗೆ ಬಲಿ ಬೀಳಬಾರದು.

ನಿತ್ಯವೂ ರಾತ್ರೆ ಮಲಗುವಾಗ ಮತ್ತು ಬೆಳಿಗ್ಗೆ ಎದ್ದೊಡನೆ ಏಕಾಗ್ರತೆಯಿಂದ ಪರಮೇಶ್ವರನ ಧ್ಯಾನ ಕಪ್ಪತೆ ಮಾಡಬೇಕು.

ಉತ್ತಮವಾದ ಆರಿಸಿದ ಧಾರ್ಮಿಕ ಗ್ರಂಥ ಒಂದನ್ನು ಓದುವುದರಿಂದ ನಮಗೆ ನಿಜವಾದ ಶಾಂತಿ ಸಿಗುವುದು.

(ಉಸಿ ಪುಟ ನೋಡಿರಿ)

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ
ಇದೀಗ ಮೂರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಷನ್!
ದಪ್ಪವಾದ ಬಿಳಿ ಸೆಣಬಿನ ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೪೦
೧೦೦ ಪ್ರತಿಗಳ ದರಕ್ಕೆ ಲಭ್ಯ:
ನವಯುಗ ಪ್ರೆಸ್ ಉಡುಪಿ, ದ. ಕ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಆವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ನೇವಿಂಗ್ಸ್, ಜಾತೆಯಲ್ಲಿ, ರಿಕರಿಂಗ್ ಮತ್ತು ನಿರಪಿ ಠೇವಣಾತಿಗಳಲ್ಲಿ ವೃದ್ಧಿ ಯೊಂದುವುದನ್ನು ಕಂಡು ಸಂತೋಷಿಸುವಿರಿ

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R.E.A. 81/1963 in R.E.P. 56/63

ಲಿಂಗಪ್ಪ ರೈ ಕೂಡಾ —ಅರ್ಜಿದಾರರು.

—vs—

ತಿಂಗಾಣ ರೈ ಸಹಾ —ಎದ್ರಿರು.

೩. ಸಂಕಪ್ಪ ರೈ, ಸುಬ್ಬಣ್ಣ ರೈಗಳ ಅಳಿಯ, ಪುತ್ತೂರು ತಾಲ್ಲು ಕಾನೆಯೂರು ಗ್ರಾಮದಲ್ಲಿ. ೪. ತ್ಯಾಂಪಣ ಶೆಟ್ಟಿ, ಕುಂಞಾಣ ಶೆಟ್ಟಿ ಮಗ, ಬಂಟ್ವಾಳ ತಾಲ್ಲು ವೀರಕಂಬ ಗ್ರಾಮದಲ್ಲಿ.

ಇವರಿಗೆ -

ಮೇಲಿನ ಅಮ್ಜೂರ್ಸ್ಟಿ ಅರ್ಜಿಯಲ್ಲಿ ಅರ್ಜಿದಾರರು ಬಾಧ್ಯಸ್ಥಿಕೆ ಆಜ್ಞೆ ಕೂಟ್ಟರುವುದರಿಂದ ಆ ಅರ್ಜಿಯಲ್ಲಿ ನಿಮಗೇನಾದರೂ ಆಕ್ಷೇಪಣೆ ಇದ್ದರೆ ಅದನ್ನು ಹಾಜರುಪಡಿಸುವ ಬಗ್ಗೆ ತಾ 18—7—1963ಕ್ಕೆ ಇಟ್ಟಿದೆ ಎಂಬ ಸಂಗತಿ ನಿಮಗೆ ಈ ಮೂಲಕ ತಿಳಿಸೋಣವಾಗಿದೆ

ಕೋರ್ಟು ಹುಕುಂ ಮೇರೆಗೆ

K. Rama Bhat
Advocate for Petitioner.

ಪುತ್ತೂರು, ಕಾ. 24—6—1963.

ಕೆಂಪು ಚೀನಾದಲ್ಲಿ

ಬುದ್ಧಿಜೀವಿಗಳ ದುರಂತ ಚಿತ್ರ

ಮಾಸ್ಕೊ—ಟುಂಗೆಯು ಅಧಿಕಾರ ಗದ್ದುಗೆಯನ್ನೇರುವದಕ್ಕೆಂತ ಎಂಟು ವರ್ಷಗಳ ಹಿಂದೆ, ೧೯೪೯ರಲ್ಲಿ, ಬುದ್ಧಿಜೀವಿಗಳ ಕರಿತು ಅವನು ಆಡಿರುವ ಕೆಲ ಮಾತುಗಳು ಇಲ್ಲಿವೆ:— ಉಬ್ಬಿರುವ ತಲೆಯುಳ್ಳವರು, ಕ್ಷೀಣ ಕಾಲುಗಳುಳ್ಳವರು ಗಟ್ಟಿಬೇಳ್ಲದಿರುವವರು, ಬಂಡೆಯ ನೇರಿನ ಬಿದಿರಿನ ಚಿಗುರುಗಳು, ತೀಕ್ಷ್ಣವಾದ ನಾಲಿಗೆಯುಳ್ಳವರು, ದಪ್ಪನೆಯ ಚರ್ಮ ಉಳ್ಳವರು ಮತ್ತು ಬುಲಿ ಹೊಟ್ಟೆಯವರು.....

ಚೈನಾವನ್ನು ಭೌತಿಕ ಹಾಗೂ ಭೌದ್ಧಿಕ ಬಡತನ ಮತ್ತು ಹಿಂದುಳಿಯುವಿಕೆಯ ಕೆಸರಿನ ಕೂಪದಿಂದ ಮೇಲಕ್ಕೆತ್ತಲು ಕೆಲ ವರ್ಷಗಳ ನಂತರ ತನಗೆ ಆಡೇ ಬುದ್ಧಿಜೀವಿಗಳ ಚಿಂತಾರ ಹಾಗೂ ಸಹಕಾರದ ಅವಶ್ಯಕತೆ ಬರಬಹುದೆಂಬುದರ ಅರಿವು ಆಗ ಅವನಿಗೆ ಆಗದಿದ್ದುದರಿಂದ ಅವನು ಆ ರೀತಿ ತುಚ್ಛವಾಗಿ ಆಡಿರಬಹುದು.

ಸಾಂಪ್ರದಾಯಿಕವಾಗಿ, ಚೈನಾದಲ್ಲಿ ಬಲವು ಎರಡು ಕಂಭಗಳ ಮೇಲೆ ಆಧರಿಸಿಕೊಂಡಿದೆ—ಬುದ್ಧಿ ಜೀವಿಗಳು ಹಾಗೂ ಸೈನಿಕರೇ ಎರಡು ಕಂಭಗಳು. ರೈತರ ಸಹಾಯದಿಂದ ಅಧಿಕಾರ ಗದ್ದುಗೆಯನ್ನು ಗಿಟ್ಟಿಸಿಕೊಂಡೊಡನೆ ಆ ಎರಡು ಕಂಭಗಳ ನಡುವಣ ಅಂತರವನ್ನು ಸಂಕುಚಿತಗೊಳಿಸಲು ಚೈನಿ ಕಮ್ಯೂನಿಸ್ಟರು ಯೋಚಿಸಿದರು. ಬುದ್ಧಿ ಜೀವಿಗಳು ಶ್ರಮಿಕ ಹಾಗೂ ರೈತಾಪಿ ಜನತೆಯೊಂದಿಗೆ ಒಂದಾಗಿ ಹೋರಾಡದಿದ್ದಲ್ಲಿ ಒಬ್ಬ ಜೀವಿಗಳಿಂದ ಆಡೇನನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ೧೯೪೯ರಲ್ಲೇ ಮಾವೊತ್ಸೆ—ಟುಂಗ್ ಹೇಳಿದ್ದನು. ಅವನ ಮಾತಿನಲ್ಲೇ ಹೇಳುವದಾದರೆ ಕಾರ್ಮಿಕ ಹಾಗೂ ರೈತಾಪಿ ಜನತೆಯೊಂದಿಗೆ ಒಂದಾಗಲು ನಿಜವಾಗಿ ಇಷ್ಟ ಉಳ್ಳವರು ಹಾಗೂ ನಿಜವಾಗಿ ತಾವೇ ಮಾಡುವವರೇ ನಿಜವಾದ ಬುದ್ಧಿ ಜೀವಿಗಳು.

ಆ ಗುರಿಯನ್ನು ಮುಟ್ಟಲು ವಿಜಯ ಪಥ ಯಾವದೆಂದರೆ ಮನಸ್—ವಿದ್ಯಾಭ್ಯಾಸ ಚಳುವಳಿಯೇ ಇದೆಯೆಂದು ಚೈನಿ ಕಮ್ಯೂನಿಸ್ಟ್ ಆಡಳಿತ ವರ್ಗ ಭಾವಿಸಿಕೊಂಡಿತ್ತು. ಉತ್ಪಾದಕ ಉದ್ಯೋಗಗಳಲ್ಲಿ ಭಾಗವಹಿಸಲು ಬುದ್ಧಿಜೀವಿಗಳಿಗೆ ಅವರು ಆಜ್ಞೆಯನ್ನಿತ್ತರು; ಚಿತರಂತಾಗಿರಬೇಕೆಂಬ ಆಕರ್ಷಕ ಘೋಷಣೆಯನ್ನು ಅದಕ್ಕಾಗಿ ಸೃಷ್ಟಿಸಲಾಗಿತ್ತು.

ಮಾವೊ ತ್ಸೆ ಟುಂಗನ ಸೈರಣೆಯಿಂದ ೧೯೫೧ರಲ್ಲಿ 'ತಾತ್ವಿಕ ಸುಧಾರಣೆಯ ಅಭ್ಯಾಸದ ಚಳುವಳಿ'ಯನ್ನಾರಂಭಿಸಲಾಯಿತು. ಇದರಿಂದ, ಬುದ್ಧಿಜೀವಿಗಳು ಅದರಲ್ಲೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ತಮ್ಮ ಪ್ರಶ್ನೆಗೆ ಪ್ರಯೋಜನ ಬೀಳುವದೆಂಬ ಆಶೆ ಆಡಳಿತ ವರ್ಗಕ್ಕೆ ಇತ್ತು. ಉತ್ತರದ ವಿಶ್ವವಿದ್ಯಾಲಯಗಳಲ್ಲಿ ಅದನ್ನು ಮೊದಲು ಪ್ರಯೋಗ ನಡೆಸಿ ನೋಡಿ, ಒಡನೆ, ಇತರ ವಿಶ್ವವಿದ್ಯಾಲಯಗಳಲ್ಲಿ ಬಳಕೆಗೆ ತಂದರು.

ಈ ಸಮಯದಲ್ಲಿ ಅನೇಕ ಬುದ್ಧಿಜೀವಿಗಳಿಗೆ ಹಾಗೂ ವಿಜ್ಞಾನಿಗಳಿಗೆ ಅಪಮಾನ ಮಾಡಲಾಯಿತು. ಅಲ್ಲದೆ, ಹೈನಾನ ವಸ್ತೆಗೊಳಪಡಿಸಲಾಯಿತು. ಪ್ರಮುಖ ಸ್ವತಂತ್ರ ತತ್ವಜ್ಞಾನಿ ಹಾಗೂ ಪಂಡಿತ ಡಾ| ಹುಶ್ಶಿಯವರನ್ನು ೧೯೪೯ರಿಂದಲೂ ಸಮೂಜದಿಂದ ಬೇರ್ಪಡಿಸಲಾಗಿತ್ತು. ಅವರನ್ನು ತಮ್ಮೊಂದಿಗೆ ತರಲು ಬಹಿರಂಗ ಬೆದರಿಕೆ ಹಾಕಲಾಯಿತು; ಹಿಂಸೆಯನ್ನೇ ಯಲಾಯಿತು. ಡಾ| ಹುರವರು 'ಚೈನಾದ ಪುನರುತ್ಥಾನ'ದ ಮುಂದಾಳಾಗಿದ್ದರು. ಬುದ್ಧಿಜೀವಿಗಳು ಅವರ ತತ್ವದಿಂದ ಪ್ರಭಾವಿತರಾಗಿದ್ದರು. ಅವರ ಪ್ರತಿಭೆಯು ಸಮೂಜವಾದದ ಹಬ್ಬುವಿಕೆಗೆ ತಡೆಯೊಡ್ಡಬಹುದೆಂದು ಆಡಳಿತ ವರ್ಗ ಭಾವಿಸಿಕೊಂಡಿತು. ಅವರ ಹಿಂದಿನ ಪ್ರಭಾವದ ಬಡ ಸಹಿತ ನಾಶಕ್ಕೆ ಎಲ್ಲಾ ಮಾರ್ಗವನ್ನು ಆಡಳಿತ ವರ್ಗ ಉಪಯೋಗಿಸಿಕೊಂಡಿತು. ಅದರಿಂದಲೂ ವಿಜಯ ವೈಜಯಂತಿಯನ್ನು ಹಾರಿಸಲಾರದೆ ರಾಕ್ಷಸೀಯ ಮಾರ್ಗಕ್ಕೆ ಅವರಿಳಿದರು. ಸ್ವತಃ ಅವರ ಮಂಗನನ್ನೇ ಅವರಿಗೆ ಚಿಕ್ಕುಹಿಂಸೆಯನ್ನೀಯಲು ಬಿಡಲಾಯಿತ.!

ಸೆಕಿಂಗ್ ವಿಶ್ವವಿದ್ಯಾಲಯದಲ್ಲಿ ಲಿಯೂಂಗ್ ಶ-ಮಿಂಗ್ ಹಿಂಗೆ ಪ್ರಾಧ್ಯಾಪಕರಾಗಿದ್ದರು. ಅವರು ತತ್ವಶಾಸ್ತ್ರದ ಕಾಲಹಾಗೂ ಗ್ರಾಮೀಣ ಜನತೆಯ ಉದ್ಧಾರ ಮತ್ತು ಸಮೂಜ ಸುಧಾರಣೆಯ ಮೇಲೆ ಹಲವಾರು ಪುಸ್ತಕಗಳನ್ನು ಬರೆದಿರುವರು. ಸಮತಾವಾದಿ ಆಡಳಿತ ವರ್ಗಕ್ಕೆ ಅವರು ಇನ್ನೊಂದು ಕೊಳ್ಳೆಯೂದರು. 'ವರ್ಗ ಹೋರಾಟ'ದ ಪ್ರಾಮುಖ್ಯತೆಯನ್ನು ಅರಿತುಕೊಳ್ಳಲು ಅವರಿಂದ ಆಸಾಧ್ಯವಾಯಿತೆಂಬ ಏಕಮೇವ ಆರೋಪವನ್ನು ಮುಂದಿಟ್ಟು ಅವರಿಗೆ ಅಮಾನುಷ ಹಿಂಸೆ ಕೊಡಲಾರಂಭವಾಯಿತು ಅವರು ೧೯೫೧ರ ಆಕ್ಟೋಬರಿನಲ್ಲಿ ತನ್ನ ಪಕ್ಷರಹಿತ ಯೋಚನೆಗಳು ಸರಿಯೆಂಬುದನ್ನು ಸ್ಪಷ್ಟಪಡಿಸಿದರು. ಆನಂತರ, ಸರಕಾರದ ಕ್ರೂರ ದಬ್ಬಾಳಿಕೆಗೊಳಪಟ್ಟು ಅವರದನ್ನು ಹಿಂದಕ್ಕೆ ತೆಗೆದುಕೊಳ್ಳಲೇಬೇಕಾಯಿತು.

ಪಕ್ಷದೊಳಗಿದ್ದ ಉತ್ತಾನಿಗಳನ್ನೂ ಆ ಜಾಢ್ಯ ಬಿಡಲಿಲ್ಲ. ಇದಕ್ಕೆ ಟಂಗ್‌ಲಿಂಗ್, ಉತ್ತಮ ಉದಾಹರಣೆ. 'ಲಾಂಗ್‌ಕಾನ್ ನದಿಯ ಮೇಲೆ ಸೂರ್ಯನ ಉದಯ' ಪುಸ್ತಕವನ್ನಾಕೆ ಬರೆದಿದ್ದಳು. ಚೈನಿ ಸಾಹಿತ್ಯದ ಉತ್ತಮ ಕೃತಿ ಎಂದು ಆ ಪುಸ್ತಕ ಕ್ಕೆ ಗೌರವ ಸಿಕ್ಕಿತ್ತು. ೧೯೫೧ರಿಂದಲೂ ಆಕೆ ಪಕ್ಷದ್ವೇಷಿಯೆನ್ನಿಸಿದ್ದರೂ ಕೂಡಾ 'ಜನತೆಯ ಶತ್ರು' ಎಂಬ ಆರೋಪನ್ನಾಕೆಯ ಮೇಲೆ ಹೊರಿಸಲಾಯಿತು. ಚೈನಿ ಸಾಹಿತ್ಯ ಹಾಗೂ ಕಲಾ ಕೇಂದ್ರದಿಂದ ಆಕೆಯನ್ನು ಹೊರಗಟ್ಟಲಾಯಿತಲ್ಲದೆ, ನಂತರ, ಬರಹಗಾರರ ಬಳಗದ ಉಪಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲಾಯಿತು.

ಆದರಿಂದಲೂ ಸಮತಾವಾದಿ ಸಂಸ್ಕಾರಕ್ಕೆ ಸಂತೃಪ್ತಿಯಾಗಲಿಲ್ಲ. ಲೇಖಕರ ಸಂಘದ ನೆಲವನ್ನು ತೊಳೆಯುವ ಕೆಲಸವನ್ನಾಕೆಗೆ ಕೊಡಲಾಯಿತು. ಅದೆಲ್ಲವನ್ನು ಆಡಳಿತ ವರ್ಗ ಬಹಿರಂಗಪಡಿಸಲಿಲ್ಲ. ಆ ವರು ಬಡಾಯಿ ಕೊಚ್ಚುವ ಕಾರ್ಯವನ್ನು ಮಾತ್ರ ಚೆನ್ನಾಗಿ ಮಾಡುತ್ತಿದ್ದರು. ೧೯೫೧ರ ಆಕ್ಟೋಬರ ತಿಂಗಳು ಚೈನಿ ಜನರ ರಾಜಕೀಯ ಸಲಹೆಗಾರರ ಸಂಸ್ಥೆಯ ರಾಷ್ಟ್ರೀಯ ಸಭೆಯಲ್ಲಿ ವರದಿಯನ್ನೊಪ್ಪಿಸಿತ್ತು ಚೌ ಎನ್. ಲೈಯು ಸಾರಿದ ವಾಕ್ಯಗಳಿಂತಿವೆ:"ಬಹಳ ಮಂದಿ ಬುದ್ಧಿಜೀವಿಗಳ ಬುದ್ಧಿ ಪರಿವರ್ತನೆಗೊಳಪಟ್ಟಿದೆ. ತಾತ್ವಿಕವಾಗಿ ಅವರು ಸಾಮ್ರಾಜ್ಯಷಾಹಿ ಪ್ರಭಾವದ ಸ್ಮೃತಿ ಅಥವಾ ಭ್ರಮೆಯನ್ನು ದೂರಗೊಳಿಸುತ್ತಿದ್ದಾರೆ. ತಮ್ಮ ಮೆದುಳಿನ ಲ್ಲುಳಿದುಕೊಂಡಿರುವ ಜಹಗೀರು ಪದ್ಧತಿಯ ಚಿಹ್ನೆಗಳನ್ನು ನಿರ್ಮೂಲಗೊಳಿಸುತ್ತಿದ್ದಾರೆ ಮತ್ತು ಕ್ರಮಶಃ ಹೆಳೇ ಸ್ವಾತಂತ್ರ್ಯ ದ ಅಂದರೆ ಬೂರ್ಜ್ವಾ ಸ್ವಾತಂತ್ರ್ಯ ಪರ ದೆಯನ್ನು ಭೇದಿಸುತ್ತಿದ್ದಾರೆ. ಅವರಲ್ಲಿ ಹಲವರು ಈಗಾಗಲೇ ಮಾರ್ಕ್ಸೊ-ಟುಂಗರ ತತ್ವಗಳನ್ನು ಸ್ವೀಕರಿಸಲು ಹಾಗೂ ಪ್ರಯೋಗತಃನೆಡೆಸಲು ಮುಂದಾಗಿದ್ದಾರೆ..."

ನಾಲ್ಕೈದರ ವರ್ಷಗಳ ನಂತರ ತನ್ನ ಅಭಿಪ್ರಾಯವನ್ನು ಅವನು ಬದಲಾಯಿಸಿಕೊಂಡನು. ೧೯೫೫ರಲ್ಲಿ ಕಟ್ಟಳೆ-ಕಾನೂನುಗಳನ್ನು ಸಲ್ಪ ಶಿಥಿಲಗೊಳಿಸಲಾಯಿತು ಯಾಕೆಂದರೆ, ತರುಣ ಪೀಳಿಗೆ ಎದುರಿಸಬೇಕಾಗಿರುವ ಆಡೆತಡಗಳನ್ನೆದುರಿಸಲು ಅವರಲ್ಲಿ ಬೇಕಾದಷ್ಟು ಜ್ಞಾನಶಕ್ತಿ ಇಲ್ಲವೆಂಬುದನ್ನಾಗ ಆಡಳಿತ ವರ್ಗ ಅರಿತುಕೊಂಡಿತು. ಹಿರಿಯರ ಹಿರಿಮೆಗೆ ಗೌರವ ತೋರಿಸಲು ಆರಂಭಿಸಲಾಯಿತು ಹಾಗೆ, ಹಳೆಯ ಹಾಗೂ ಹೊಸ ಜನಾಂಗಗಳ ನಡುವೆ ಸೇತುವೆ ಕಟ್ಟುವ ಪ್ರಯತ್ನಕ್ಕಾರಂಭವಾಯಿತು. ಆದರೆ ಅದು ಕೆಲವೇ ಮಾಸ ಮಾತ್ರ; ಮತ್ತೆ ಆರಂಭವಾಯಿತು. ಪ್ರಾರಂಭದ ಪಾರ-ಸುಧಾರಣಾ ಚಳುವಳಿಯು ಪುನರಾರಂಭವಾಯಿತು. ಈಸಲ ಅವರ ಕ್ರೋಧ ದೃಷ್ಟಿಗೆ ಬದ್ದದ್ದಾ ವ್ಯಾಯು, ಪಿಂಗ್-ಪೋಂ. ಬರೆದಿರುವ ವ್ಯಾಖ್ಯಾನ. ಅವರು ಹದನೆಂಟನೆ ಶತಮಾನದ ಕೃತಿ 'ಕೆಂಪು ಕೊರಡಿಯ ಕನಸು' ಎಂಬುದರ ಮೇಲೆ ವ್ಯಾಖ್ಯಾನ ಬರೆದಿದ್ದರು.

ಪ್ರಾ| ಯು. ಮಾಡಿದ್ದ 'ಅಪರಾಧ' ವೆಂದರೆ ಮೂಲ ಕೃತಿಯನ್ನು ಅರುಗಾಢಾರ್ಥ ಸೂಚಕವು, ನೈಸರ್ಗಿಕ ಹಾಗೂ ಉತ್ತಮ ವಿಷಯಗಳುಳ್ಳ ಕೃತಿಯೆಂದು ಬಗೆದಿದ್ದು. ಈ ದೃಷ್ಟಿಯಿಂದ ರಚಿಸಲ್ಪಟ್ಟಿದ್ದ ಅವರ ಪುಸ್ತಕವು ಮೆನರ್ ಆಜ್ಞಾನಿದ್ದು ೧೯೫೫ರಲ್ಲಿ ಉತ್ತಮ ವಿಮರ್ಶೆಗೊಳಪಟ್ಟಿತ್ತು. ಕೆಲವೇ ತಿಂಗಳೊಳಗೆ ಕಡಿವಾಣವನ್ನು ಬದಲಾಯಿಸಲಾಯಿತು. ಒಡನೆ ವಿರೋಧ ಚಳುವಳಿಗಾರಂಭವಾಯಿತು. ಯು. ಪಿಂಗ್ ಸೋರ ಕೃತಿ ಕಲ್ಪನೆಗೆ ಸಂಬಂಧಪಟ್ಟದ್ದು ಮಾತ್ರ ಮಾದಕ್ಕೆ ಸಂಬಂಧಪಟ್ಟದ್ದು. ಹು—ಫ್ಹಿನಾದ'ಕ್ಕೊಳಪಟ್ಟಿದ್ದೆಂದು ರೀಕೆಗೊಳಗಾಯಿತು. ಒಡನೆ ಯು ತನ್ನ ತಪ್ಪನ್ನೊಪ್ಪಿಕೊಂಡು ಕ್ಷಮೆಯೂಚಿಸಿದರು. ಮುಂದಕ್ಕೆ ಉತ್ತಮ ರೀತಿಯಲ್ಲಿ ಇರುವದಾಗಿ ಆಶ್ವಾಸನೆಯನ್ನಿತ್ತರಲ್ಲದೆ ತನ್ನನ್ನು ತಾನೇ ರೀಕೆಸಿಕೊಂಡರು.

೧೯೫೫ ಚಳಿಗಾಲದಲ್ಲಿ ಇಂತಹ ಇನ್ನೊಂದು ಘಟನೆ ನಡೆಯಿತು. ಅದು ಬುದ್ಧಿಜೀವಿಗಳ ಕಣ್ತೆರಸುವಂತಹದ್ದಾಗಿತ್ತು. ಪಕ್ಷದ ಹಿಡಿತದ ಕುರಿತು ಶ್ರದ್ಧೆ ತೋರುವ ಬುದ್ಧಿ ಜೀವಿಗಳಿಗೆ ಅದು ಸ್ಪಷ್ಟ ಎಚ್ಚರಿಕೆಯಾಗಿತ್ತು, ಆದ ಮೇ ಹುಪೆಂಗರ ಪ್ರಮುಖ ವಿಚಾರಣೆ. ಹು-ಪೆಂಗ್ ಪಕ್ಷದ ಸದಸ್ಯನಾಗಿದ್ದರು, ಹಾಗೂ ಹಿರಿಯ ಸಾಹಿತಿಯಾಗಿದ್ದರು. ಚೈನಾದ ಪ್ರವಾಸಿ ಬರಹಗಾರ ಲು. ಹ್ಸುನ್ ಆವರ ಅಪ್ತಸ್ನೇಹಿತ. ೧೯೫೫ರಲ್ಲಿ ಲು ಕಾಲವಾದನಂತರ ಹು ಅನೇಕ ಕಮ್ಯೂನಿಸ್ಟ್ ಬರಹಗಾರರ ವಿರೋಧಕ್ಕೊಳಪಡಬೇಕಾಯಿತು. ಅದರಲ್ಲಿ ಈಗ ಕಮ್ಯೂನಿಸ್ಟ್ ಚೈನಾದ ಸಾಹಿತಿಗಳ ಮಧ್ಯಸ್ಥಾಗ್ರೇಸರ ಜಾ-ಯೂಂಗನೆ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು (ಮುಂದವರಿಯುವುದು)

—ಶ್ರೀ ಶಿವತಂಕರ, ಮದಭ್ರಾಸು.

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಕರ್ತವ್ಯಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿ:
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಸಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ ೫೪½% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ರೇಟಿಗೆ ಪಡೆದುಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವಕೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆದುಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.
ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ನಂ. ೪೨	ಉಡುಪಿ ೧೧-೨-೧೯೬೩	ವಾರ ೪೪

ಗಂಭೀರ ಸಮಸ್ಯೆ

ಚೀನೀಯರು ದೇಶವನ್ನು ಆಕ್ರಮಿಸಿದುದರಿಂದ, ಗಂಭೀರ ಪರಿಸ್ಥಿತಿಯನ್ನು ಘೋಷಿಸಿದ ಬಳಿಕವೂ ದೇಶದೊಳಗೆ ಕೆಲವೊಂದು ಉಪಚುನಾವಣೆಗಳು ನಡೆದುವು. ಅಡಳಿತ ಪಕ್ಷದ ಬಲವನ್ನು ಭದ್ರಪಡಿಸಲೇ ಬೇಕಾದ ಈ ಸಂದರ್ಭದಲ್ಲಿಯೂ ಉಪಚುನಾವಣೆಗಳಲ್ಲಿ ಹೆಚ್ಚಿನವುಗಳ ಪರಿಣಾಮವು ಈ ಪಕ್ಷಕ್ಕೆ ಪ್ರತಿಕೂಲವಾಗಿಯೇ ಹೊರಬಿತ್ತು. ಇದಕ್ಕೆ ಒಂದಲ್ಲ ಹಲವು ಕಾರಣಗಳು ಇದ್ದಿರಬಹುದು ಮಾತ್ರವಲ್ಲ; ಇವೆ. ಇನ್ನಿಲ್ಲವುಗಳಲ್ಲಿ ಮುಖ್ಯವಾದುದು ಅಡಳಿತ ಪಕ್ಷದ ಲೋಸಪೋಸಗಳೇ ಎಂಬುದೀಗ ಬಹಿರಂಗವಾಗಿ ತೊಡಗಿದೆ. ಕಾಂಗ್ರೆಸ್ ಅಪಖ್ಯಾತಿಗೆ ಬರುತ್ತಿದೆ; ಅದರ ನಾಯಕರಲ್ಲಿ, ಮುಖ್ಯವಾಗಿ ಕಚೇರಿಯಲ್ಲಿ ಸಚ್ಚೇಲಗಳು ದೂರವಾಗುತ್ತ ಅಧಿಕಾರ ಬಲದಿಂದ ಲಂಚ ಸ್ವೀಕರಣವೇ ಮೊದಲಾದ ಲೋಸಪೋಸಗಳು ಬಲವತ್ತರವಾಗುತ್ತ ಬರುತ್ತಿವೆಯೆನ್ನುವ ಆರೋಪವಿಂದು ಹೆಚ್ಚು ಜೋರಾಗಿ ಕೇಳಿ ಬರುತ್ತಿದೆ. ಲಂಚರುಸುವತ್ತುಗಳು, ವಶೀಲಿಗಳು ಅತ್ಯದ್ಭುತ ಕಾರ್ಯವೆಸಗುತ್ತಿವೆಯೆಂಬ ಆರೋಪಗಳು ಶ್ರುತಿಸ್ಫೋಟಗಳಿಂದ ಹಿಂದೆಯೂ ಬಂದಿದ್ದುವು. ಇವು ಅವರು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುತ್ತಿರುವ ತಂತ್ರವೆಂಬ ಸಾಮಾನ್ಯ ಜನಾಭಿಪ್ರಾಯವೂ ಇತ್ತು. ಆದರೆ, ಇಂದು ಇಂತಹ ದೂರು ವಿರೋಧ ಪಕ್ಷದವರಿಂದ ಮಾತ್ರ ಬರುತ್ತಿಲ್ಲ; ಸ್ವಯಂ ನಿಷ್ಠಾವಂತ ಕಾಂಗ್ರೆಸ್ ನಾಯಕರಿಂದಲೂ ಹೊರಟಿರುವುದನ್ನು ಕೇಳಿದವಿ ಕೇಳಿ ಬಿಡುವುದು ಸಾಧ್ಯವಿಲ್ಲ; ಈ ಪರಿಸ್ಥಿತಿಯನ್ನು ತುಂಬ ಗಂಭೀರವಾಗಿ ಅಧ್ಯಯನ ಮಾಡಲೇ ಬೇಕಾಗಿದೆ.

ಭಾರತವು ಪ್ರಪಂಚದ ಬಹು ದೊಡ್ಡ ಪ್ರಜಾಸತ್ತೆ. ವ್ಯಾಯಃ ಇಲ್ಲಿರುವಷ್ಟು ಮತದಾರರು ವತ್ತಾವ ದೇಶದಲ್ಲಿಯೂ ಇರಲಾರರು. ಇಂತಹ ಬೃಹತ್ ದೇಶವೊಂದರ ಆಡಳಿತ, ಹಲವಾರು ಜಟಿಲ ಸಮಸ್ಯೆಗಳ ತಾಯ್ನಾಡಿನ ಪ್ರಕಾಶನ, ನಿಜಕ್ಕೂ ಸಾಹಸದ ಕಾರ್ಯ. ಸಂದೈವದಿಂದ ನಮ್ಮ ಪ್ರಧಾನಿಗಳಿಗಿ ನಿಸ್ವಾರ್ಥರಿಗೆಗೂ ದೇಶಪ್ರೇಮಕ್ಕೂ ಆದರ್ಶ ಪುರುಷರಾದ ನೆಹರು ದೊರೆತಿದ್ದಾರೆ. ಇಂಥ ನಾಯಕತ್ವವಲ್ಲಿ ದೇಶ ಭದ್ರದಿಂದ ಮುಂದಡಿಯಿಡುತ್ತಿದೆ. ಆದರೆ, ಇವರ ಸಹಾಯಕರೆಲ್ಲರೂ ಇವರಂತೆಯೇ ಇದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಬೇರೆಬೇರೆ ರಾಜ್ಯಗಳ ಮಂತ್ರಿಮಂಡಳಿಯ ಸದಸ್ಯರು ಕೂಡ ಅದರ್ಶ ಪುರುಷರಾಗಿದ್ದಾರೆ ಎನ್ನುವುದು ಸಾಧ್ಯವಿಲ್ಲ. ಅಲ್ಪಸ್ವಲ್ಪ ಕುಂದುಕೊರತೆಗಳು, ಹೃದಯ ದೌರ್ಬಲ್ಯಗಳು ಅವರಲ್ಲಿದ್ದರೆ, ಅದನ್ನಷ್ಟು ಗಮನಿಸುವಂತಿಲ್ಲ. ಆದರೆ, ಇಂದು ರಾಜ್ಯರಾಜ್ಯದ ಕಾಂಗ್ರೆಸ್ ಪಕ್ಷಗಳಲ್ಲಿಯೂ ಬಹು ದೊಡ್ಡ ಭಿನ್ನಾಭಿಪ್ರಾಯಗಳು ಮೂಡಿರುವುದಕ್ಕೆ ದೊಡ್ಡ ಕಾರಣವೇ ಇರಬೇಕು. ಒರಿಸ್ಸಾ ಮತ್ತು ಕೇರಳದಲ್ಲಿ ಇಂತಹ ಭಿನ್ನಾಭಿಪ್ರಾಯಕ್ಕೆ ಆಲ್ಲಿನ ಸಚಿವರ ಲಂಚಗೂಳತನವೇ ಕಾರಣವೆನ್ನುವುದು ಇತ್ತೀಚಿಗಿನ ವಾಗ್ವಿವಾದಗಳಲ್ಲಿ ಸ್ಪಷ್ಟವಾಗಿದೆ.

ಜೋಲಾಯಮಾನ ಪರಿಸ್ಥಿತಿಯಲ್ಲಿದ್ದ ಒರಿಸ್ಸಾದಲ್ಲಿ ಡಾ. ಹರಿಕೃಷ್ಣ ಮೆಹತಾಬ ರು ತನ್ನ ಸರಕಾರದ ರಾಜಿನಾಮೆಯನ್ನರ್ಪಿಸಬೇಕಾಯಿತು. ಇದಕ್ಕೆ ಅಗ ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದು, ಕಂದು ಮುಖ್ಯ ಮಂತ್ರಿ ಪದವಿಯನ್ನಲಂಕರಿಸಿದ ಶ್ರೀ ವಿಜಯಾನಂದ ಪಟ್ನಾಯಕರ ಅಗ್ರಹವೇ ಮುಖ್ಯ ಕಾರಣವಾಗಿತ್ತು. ಅಂತೂ ಮರು ಚುನಾವಣೆಯಲ್ಲಿ ಕಾಂಗ್ರೆಸ್ ಅದ್ಭುತ ಬಹುಮತವನ್ನು ಪಡೆದುಗೆದ್ದು ಬಂದಿತ್ತು. ಉತ್ಸಾಹೀ ಪಟ್ನಾಯಕರು ಸರಕಾರದ ಸೂತ್ರವನ್ನೂ ಹಿಡಿದರು. ನಿರ್ವಿಘ್ನವಾಗಿ ಆಲ್ಲಿನ ಸರಕಾರ ಕಾರ್ಯಕ್ರಮ ನಡೆಸುತ್ತ ಬಂತು. ಆದರೆ, 'ಸಿರಾಜುದ್ದೀನ್' ಪ್ರಕರಣದಲ್ಲಿ ಕೇಂದ್ರ ಉರುವಲು ಮತ್ತು ಇಂಧನ ಮಂತ್ರಿಶಾಖೆಯ ಮಂತ್ರಿ ಕೆ ಡಿ ಮಾಳವೀಯರವರು ಲಂಚ ಸ್ವೀಕರಿಸಿದ್ದರೆಂಬ ಆಪಾದನೆಯು ಬೆಳಕಿಗೆ ಬಂದಾಗ, ವಿಜಯಾನಂದ ಪಟ್ನಾಯಕರೂ ಈ ಪ್ರಕರಣದಲ್ಲಿ ಸೇರಿಕೊಂಡಿದ್ದರೆಂಬುದೂ ಬೆಳಕಿಗೆ ಬಂತು. ಈ ಸಂಬಂಧದಲ್ಲಿ ಮೆಹತಾಬ—ಪಟ್ನಾಯಕವಾಗ್ವಿವಾದವು ಲೋಕಕ್ಕೆ ಕೊಳಚೆಯನ್ನು ತೋರಿಸಿಕೊಟ್ಟಿತು ಮೂಳವೀಯರವರು ಭ್ರಷ್ಟಾಚಾರಿಯಲ್ಲವೆಂದು ಸಮರ್ಥಿಸಿದ ಪಟ್ನಾಯಕರ ನಿಲುಮೆಯಿಂದ, ಅವರ ಮಂತ್ರಿ ಮಂಡಳಿಯ ಮೇಲೆ ಲಂಚ ಸ್ವೀಕಾರದ ಆರೋಪವು ಮತ್ತಷ್ಟು ದೃಢನಾಗುತ್ತ ಬಂತು. ಒರಿಸ್ಸಾದ ಉಪ ಮುಖ್ಯ ಮಂತ್ರಿ ಶ್ರೀ ಮಿತ್ರಾರವರಿಗೂ ಹೆಲವಾರು ವ್ಯಾಪಾರಿ ಸಂಸ್ಥೆಗಳೊಡನೆ ಸಂಬಂಧವಿದ್ದು ಅವರೂ ಲಂಚ ಸ್ವೀಕರಿಸಿದ್ದಾರೆ; ಹಾಗೆಯೇ ಒರಿಸ್ಸಾದ ಹೆಚ್ಚಿನ ಮಂತ್ರಿಗಳು ಇದೇ ರೀತಿಯ ದುರ್ನ್ಯವಹಾರದಲ್ಲಿ ನಿರತರಾಗಿದ್ದಾರೆ—ಎಂಬುದೂರ ವೇ ಲೀಗ ಅಧಿಕಾಧಿಕ ಪ್ರಕಾಶ ಬೀಳುತ್ತ ಇದೆ ಶ್ರೀ ಮಿತ್ರಾರವರ ಪ್ರಕರಣದ ಮೇಲೆ ವಿಚಾರಣಾ ಸಮಿತಿಯ ನಿರ್ಧಾರವನ್ನು ತಿಳಿಯಲು ಆಶುರರಾದ ಶ್ರೀ ಪಟ್ನಾಯಕರು ಪರರಿಂದ ಸ್ವೀಕರಿಸಿದ ಧನಬಲದಿಂದಲೇ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಗೆಲ್ಲಿಸಿದರು ಎಂಬ ಊಹಾಪೋಹೆಯೂ ನಡೆಯುತ್ತಿದೆ. ಇದೇ ರೀತಿಯ ಒಂಚದ ಆರೋಪವನ್ನು ಕೇರಳದ ಮುಖ್ಯ ಮಂತ್ರಿ ಶ್ರೀ ಅಲ್. ಶಂಕರರ ಮೇಲೆ ಅಲ್ಲಿನ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಮೆನನ್ ಮೇರಿದ್ದಾರೆ. ಈ ವಿಚಾರದಲ್ಲಿ ವಿವರ್ಸ ನಡೆಸಲು ಪ್ರಧಾನಿ ನೆಹರುರವರನ್ನೇ ಕೇಳಿಕೊಳ್ಳಲಾಗಿದೆ. ಹೀಗೆಯೇ ಉಳಿದ ರಾಜ್ಯಗಳಲ್ಲಿಯೂ 'ಮರಾತಳಿತ'ದ ದೂರು ಕೇಳಿಬರುತ್ತಿವೆ. ಪಕ್ಷದೊಳಗಿನ ಸಾಯೂಥ ಕಲಹದಿಂದ ಬಳಗಿನ ಹೊಲಸುಗಳು ಹೊರಗೆ ಬರುತ್ತಿವೆ.

ಒಂದು ದೃಷ್ಟಿಯಿಂದ ಇಂತಹ ಕಲಹವು ಕಂಟಕಪ್ರಾಯವಾದರೂ, ದೇಶದ ದಾಗೂ ಪಕ್ಷದ ಹಿತದೃಷ್ಟಿಯಿಂದ ಸ್ವಾಗತಾರ್ಹವೆನ್ನಬೇಕು. ಕಾಂಗ್ರೆಸ್ ದೇಶದ ಹಿರಿಯ ರಾಜಕೀಯ ಪಕ್ಷ; ದೇಶದ ಚುಕ್ಕಾಣಿಯನ್ನು ಹಿಡಿದಿರುವ ಪಕ್ಷ ಚುಕ್ಕಾಣಿ ಹಿಡಿಯುವವರೇ ವಿಶ್ವ ಮೂರ್ಗ ಭ್ರಮಣ ಮಾಡಿದರೆ, ಅದರಿಂದ ಉಜ್ವಲ ಭವಿಷ್ಯವು ಕನಸಿನ ಗಂಟೇ ಸರಿ. ನ್ಯಾಯ ಮಾರ್ಗದಲ್ಲಿ ದೇಶದ ಆಡಳಿತೆಯನ್ನು ಮುನ್ನಡೆಸಬೇಕಾಗಿರುವಾಗ, ಅನ್ಯಾಯ ಪಥಗಾಮಿಗಳಾದವರ ಬಗ್ಗೆ ತೀವ್ರ ವಿಚಾರಣೆ ನಡೆಯಲೇ ಬೇಕು; ತಪ್ಪಿತಸ್ಥರು ಯಾರೆಂದು ಕಂಡು ಹಿಡಿದು ಅವರಿಗೆ ಶಿಕ್ಷೆ ಶಾಸ್ತಿ ಮಾಡಲೇ ಬೇಕು. ಲಂಚವತಾರಿಗಳು ಇರುವಲ್ಲಿ ಭೂತಗಳು; ಸರ್ವರಿಗೂ ಸಮಾನತೆಯನ್ನು ನೀಡುವ ನಮ್ಮ ಉದಾರ ಸಂವಿಧಾನವನ್ನೇ ಆಹ್ವಾನಿಸುವ ದುಃಕೃತ್ಯಗಳಿವು. ಅಧಿಕಾರಿವರ್ಗದಲ್ಲಿಯೇ ಇಂತಹ ಕರಾಳತೆಯು ವ್ಯಾಪಿಸಿತೆಂದರೆ, ಅದರ ಪರಿಣಾಮ ನೆಟ್ಟಗಾಗುವುದು ದುಸ್ಸಾಧ್ಯ. ಉಪಚುನಾವಣೆಗಳಲ್ಲಿ ಕಾಂಗ್ರೆಸ್ಸು ಪರಾಜಯವನ್ನೇ ಆಪ್ಪಬೇಕಾಯಿತೆಂಬುದನ್ನು ಪರಿತೀಲಿಸಲು ಶ್ರೀ ಗುಲ್ಜಾರೀಲಾಲ ನಂದಾರ ಹಿರಿತನದಲ್ಲಿ ವಿಚಾರಣೆ ನಡೆಯುವುದೆಂದು ಕೇಳುತ್ತೇವೆ. ಮಂತ್ರಿ ವರ್ಗಗಳಲ್ಲಿ ಬೆಳೆಯುತ್ತಿರುವ ಸ್ವಾರ್ಥ, ಲಂಚಗೂಳತನ ಮತ್ತು ವಕ್ರಪಥಗಮನದ ಪ್ರವೃತ್ತಿಗಳೇ ಆಡಳಿತೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಿದ್ದು, ಮತದಾರರ ಹೃದಯವನ್ನು ನೋಯಿಸಿವೆಯೆಂಬುದಕ್ಕೆ ಸ್ಪಷ್ಟೀಕರ ನಿದರ್ಶನ ಅನಗತ್ಯ. ಸ್ವಯಂ ಪ್ರಧಾನ ಮಂತ್ರಿಗರ ಮನಸ್ಸಿಗೂ ಇಂತಹ ಘಟನೆಗಳು ವೇದನೆಯನ್ನುಂಟು ಮಾಡಿವೆಯೆನ್ನುವಾಗ, ಜನಸಾಮಾನ್ಯರ ಸಾಡೇನು? ಕಾಂಗ್ರೆಸ್ ಯಂತ್ರವನ್ನು ಪುನಾರಚಿಸಿ, ಅದನ್ನು ಸುಸಂಘಟಿತ ಮತ್ತು ನಿಸ್ವಾರ್ಥ ಪಕ್ಷವನ್ನಾಗಿಸಿ ರೂಪಿಸುವುದಿಂದು ಆತ್ಯಗತ್ಯವಿದೆ. ಲಂಚಾದಿ ಆರೋಪಗಳನ್ನು ಬಹಿರಂಗವಾಗಿ ವಿಚಾರಣೆ ನಡೆಸಿ, ಪಕ್ಷದ ಹಾಗೂ ದೇಶದ ಹಿತಕ್ಕೆ ಧಕ್ಕೆ ತಂದವರನ್ನು ಖಂಡ್ಯವಾಗಿ ದಂಡಿಸಲೇ ಬೇಕು. ಇಂದು ಈ ರೀತಿಯ ಕ್ರಮಕೈಗೊಳ್ಳನೆ ಕೋದರೆ, ದೇರದ ಭವಿಷ್ಯ ಸಂಪೂರ್ಣ ಅಂಧಕಾರಮಯವಾದೀತು.

ಮುತ್ತು ಸುತ್ತು ಮೆಳಸು

ಪರ್ಸ್ಪರ ತಾತ್ಕಾಲಿಕ ಭಿನ್ನಾಭಿಪ್ರಾಯವನ್ನು ದೂರಗೊಳಿಸುವುದಕ್ಕೆಂದು ರಶ್ಯ ಮತ್ತು ಚೀನೀಯ ನಾಯಕರು ನೋಸ್ಕೋ ವಿನಲ್ಲಿ ಮೂತುಕತೆಗೆ ತೊಡಗಿದ್ದರು. ಆಮ ಎಲ್ಲಿಯ ವರೆಗೆ ಬಂದಾಯಿತ್ತೆಂಬು ದರ ಬಗ್ಗೆ ಯಾವ ವರದಿಯೂ ಬರಲಿಲ್ಲ. ಈ ಮಾತುಕತೆಗಳು ಪರವೆಯೊಳಗಡೆ, ಗುಪ್ತವಾಗಿ ನಡೆದುವಂತೆ. ಸರ್ವಾಲೋಚಕರ ಅಭಿಪ್ರಾಯದ ಮೇಲೆ ಹೇಳುವುದಾದರೆ, ಭಿನ್ನಾಭಿಪ್ರಾಯವು ಹಾಗೆಯೇ ಉಳಿದಿದೆ; ಆದು ಬಗೆಹರಿಯುವ ಲಕ್ಷಣಗಳೂ ಗೋಚರವಾಗಲಿಲ್ಲ; ಏಂದರೆ, ಒಂದು ಮೇಳೆ ಇವು ನಿವಾರಣೆಯ ದಾರಿಯುದ್ದಕ್ಕಿರುತ್ತಿದ್ದರೆ ಎಂದು ವಾಕ್ಯಗಳ ಹೇಳಿಕೆಯೂದಲೂ ಹೊರಡುತಿತ್ತು. ನೋಸ್ಕೋ ಅಧಿವೇಶನದ ಕೊನೆಗೆ ಬಾನುಲಿಯು ಈ ವಿಷಯದಲ್ಲಿ ಮೌನ ವ್ರತಧಾರಣೆಯನ್ನು ಮಾಡಿರುವುದು ಈ ಅಭಿಪ್ರಾಯಕ್ಕೆ ಪುಟವಿಯುತ್ತಿದೆ. ಇದು ಏರಿಗೆ ತಿಳಿದುಬಂದಂತೆ ರಶ್ಯ—ಚೀನಾಗಳ ನಡುವಣ ತಾತ್ವಿಕ ಭಿನ್ನಾಭಿಪ್ರಾಯಕ್ಕೆ ಹಲವಾರು ಕಾರಣಗಳಿವೆ. ರಶ್ಯದ ಪ್ರಭಲಿತ ನಾಯಕ ನಿಕಿಟಾ ಕ್ರುಶ್ಚೇವರು ಸ್ಟಾಲಿನ್ನರ ಪ್ರಭಾವು ಶಮ್ಯವಾಗಿ, ಅವರ ಸಮರ್ಥಿಯನ್ನೂ ಕೆತ್ತು ದೂರವಿರಿಸಿದ ಮಹಾ ಲೆನಿನ್ವಾದಿ. ಆದರೆ ಚೀನಾವಿಂದು ಮೆಟ್ಟುತ್ತಿರುವುದು ಸ್ಟಾಲಿನ್ ತುಳಿದ ದಾರಿಯನ್ನು. ಈ ಕಾರಣದಿಂದಾಗಿಯೇ ಆವರಿಬ್ಬರೊಳಗೆ ತಾತ್ವಿಕ ಶಿಕ್ಷಾಟಗಳು ಹುಟ್ಟಿಕೊಂಡು, ಗಡಿ ವಿವಾದಗಳಿಗೆ ಎಡೆ ಮಾಡಿಕೊಟ್ಟಿತು. ಭಾರತಕ್ಕೆ ರಶ್ಯವು ಹಲವು ರೀತಿಯಿಂದ ನೆರವು ನೀಡುತ್ತಿರುವಾಗಲೇ ಚೀನಾವು ಅದರ ಮೇಲೆ ನಗಾಳ್ಯಕ್ರಮಣ ಮಾಡಿತು. ಕಾಶ್ಮೀರವು ಭಾರತಕ್ಕೆ ಸೇರಿದ್ದು ಎಂಬ ತನ್ನ ನಿಲುವಿಗೆ ಕ್ರುಶ್ಚೇವರು ಬಲವಾಗಿ ಅಂಟಿಕೊಂಡಿರುವಾಗಲೇ ಯು-ಎನ್-ಲಂಯು ಪಾಕಿಸ್ತಾನದೊಡನೆ ಆದುದಲ್ಲದ ಭೂಮಿಗೆ ಸಂಬಂಧಪಟ್ಟಂತೆ ತಾತ್ಕಾಲಿಕ ಸೀಮೆ ಒಡಂಬಡಿಕೆಯನ್ನು ಮಾಡಿಕೊಂಡರು. ಪರಸ್ಪರ ವಿರುದ್ಧ ದಿಸೆಗಳಲ್ಲಿ ಕಾರ್ಯಸ್ಪರವೈತ್ತರಾಗುವ ಗುಣ ರಶ್ಯ—ಚೀನಾಗಳಲ್ಲಿರುವಾಗ, 'ಅಂತರಾಷ್ಟ್ರೀಯ ಕಮ್ಯುನಿಜಂ'ನ ನೀತಿರೂಪಿಸುವ ಅಧಿಕಾರದ ಮೇಲೆ ಪೈಪೋಟಿ ನಡೆಯುವುದು ಸ್ವಾಭಾವಿಕವೇ. ರಶ್ಯವು ಬಂಡವಾಳಶಾಹಿ ನೀತಿಯಶ್ಟ ಒಲಿಯುತ್ತಿದೆಯೆಂಬ ಚೀನಾದ ಆರೋಪ ಗಂಭೀರವಿರುವಂತೆಯೇ ರಶ್ಯಕ್ಕೆಂತಲೂ ತಾನೇ ಒಂದು ತೂಕ ಮೇಲೆಂಬ ದುರಭಿಮಾನದಿಂದಲೂ ಅದು ಕೂಡಿದೆ. ಹೀಗಿರುವಾಗ ಇವರಿಬ್ಬರೂ ಒಂದಾಗುವುದು ಸಾಧ್ಯವೆ? ಮುತ್ತುಂ ಮೆಳಸುಂ ಒಂದೆಡೆಕೂಡಿಕೊಳ್ಳಬಲ್ಲವೆ?

ವಿಜಯ ಬ್ಯಾಂಕಿನ ಹೊಸ ಶಾಖೆ

ಇದೇ ತಾ ೪ರಂದು ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆಯಲ್ಲಿ ಮಂಗಳೂರಿನ ವಿಜಯಾ ಬ್ಯಾಂಕಿನ ಶಾಖೆಯೊಂದರ ಪ್ರಾರಂಭೋತ್ಸವವು ಮಂಡ್ಯ ಜಿಲ್ಲಾಧಿಕಾರಿ, ಶ್ರೀ ಕೆ. ಲಕ್ಷ್ಮಣ ರಾವ್‌ರವರಿಂದ ನೆರವೇರಿಸಲ್ಪಟ್ಟಿತು.

ಅಂದಭದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಸುಂದರರಾಯ ಶೆಟ್ಟಿಯವರು ಸ್ವಾಗತಿಸಿದರು. ಅವರು ತಮ್ಮ ಭಾಷಣದಲ್ಲಿ ದಿ. ಎ. ಬಿ. ಶೆಟ್ಟಿ ಮತ್ತು ಸ್ನೇಹಿತರಿಂದ ಸ್ಥಾಪಿತವಾದ ಬ್ಯಾಂಕಿನ ಪ್ರಗತಿಯನ್ನು ವಿವರಿಸಿದರು. ಮೊತ್ತವಲ್ಲದೇ ಆಲ್ಲಿರ್ದ ಮತ್ತು ಕೋಲಾರದಲ್ಲಿ ಇನ್ನೆರಡು ಶಾಖೆಗಳನ್ನು ತೆರೆಯಲಾಗುವುದೆಂದು ತಿಳಿಸಿದರು. ಬೇವಾಂಗ ಬ್ಯಾಂಕ್ ವಿಜಯಾ ಬ್ಯಾಂಕ್‌ನೊಂದಿಗೆ ಲೀನವಾಗುವುದೆಂದೂ ತಿಳಿಸಿದರು. ಕೃಷ್ಣರಾಜ ಕಾ. ಬೋ. ಅಧ್ಯಕ್ಷ ಶ್ರೀ ಎಸ್.ಎಂ. ಲಿಂಗಪ್ಪನವರು ಮಾತಾಡುತ್ತಾ ಇಲ್ಲಿದ್ದ ಬ್ಯಾಂಕಿನ ಕೊರತೆಯನ್ನು ವಿಜಯಾ ಬ್ಯಾಂಕಿನವರು ಹೋಗಲಾಡಿಸಿದುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಶ್ರೀ ಬಾಲಕೃಷ್ಣ, ಶ್ರೀ ಎ ರಾಮಣ್ಣ ಮೊದಲಾದವರು ಯಶಸ್ಸೀಲಾ ಮಾಷಾಡಿದರು. ಪ್ರಧಾನ ಆತಿಥಿಗಳ ಭಾಷಣವಾದ ನಂತರ ಬ್ಯಾಂಕಿನ ಮೈಸೂರು ಶಾಖೆಯ ಮ್ಯಾನೇಜರ್ ಶ್ರೀ ಎಸ್ ಬಾಲಕೃಷ್ಣ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಜಿಲ್ಲಾ ಜೋರ್ಡು ಹೈಮರಿ ಶಾಲೆಗಳ ಆಡಳಿತ —

ಬರ್ಜಾಸ್ತಾದ ಜಿಲ್ಲಾ ಜೋರ್ಡು ಹೈಸ್ಕೂರಿ ಶಾಲೆಗಳ ಆಡಳಿತೆಯನ್ನು ಇದೇ ತಾ. ೧೦ರಿಂದ ವಿದ್ಯಾಭಿತೆಗೆ ವಾರ್ಡ್ ಬಿಸಲಾಗಿದ್ದು, ಎಡ್‌ಮಿನಿಸ್ಟ್ರೇಟರ್ ಆಫೀಸರಾಗಿ ಶಾಲೆಗಳ ಪರೀಕ್ಷಾಧಿಕಾರಿಗಳಾಗಿದ್ದ ಶ್ರೀ ವೈ. ಗೋಪಾಲಯ್ಯ ಬಿ ಎ, ಎಲ್. ಬಿ. ಯವರು ತಾ. ೩೧-೧-೬೩ರಂದು ಸ್ವೀಕರಿಸಿದವರು.

ಅಲ್ಲಲ್ಲಿಯ ಸುದ್ದಿಸಾರ

ಶ್ರೀ ಬಿ. ಎಂ. ಕರಿಯಪ್ಪನವರ ವಿದೇಶ ಪ್ರಯಾಣ— ಭಾರತೀಯ ಕೃಷಿ ನಿವಾರಣಾ ಸಂಘದ ಕಾರ್ಯದರ್ಶಿ ಶ್ರೀ ಬಿ ಎಂ. ಕರಿಯಪ್ಪನವರು ರೋಮಿನಲ್ಲಿ ಸೆಪ್ಟಂಬರ 24ರಿಂದ 28ರ ವರೆಗೆ ನಡೆಯಲಿರುವ ಆಂತಾರಾಷ್ಟ್ರೀಯ ಕೃಷಿಯರೋಗ ನಿವಾರಣಾ ಸಂಘದ 17ನೇ ಅಧಿವೇಶನ ಮತ್ತು ಸಾಮಾನ್ಯ ಸಭೆಯಲ್ಲಿ ಭಾಗವಹಿಸಲಿರುವರು. ಈ ಪವಿತ್ರತೆಗೆ ಯೋಗಲಿರುವ ಭಾರತೀಯ ನಿಯೋಗದಲ್ಲಿ ಒಬ್ಬರಾಗಿರುವ ಶ್ರೀ ಕರಿಯಪ್ಪನವರು ಅಲ್ಲಿನ ವಿಶೇಷ ಪ್ರಧಾನ ಭಾಷಣಕಾರರಾಗಿರುವರು. ಈ ಅಧಿವೇಶನದಲ್ಲಿ ಭಾಗವಹಿಸಿದ ನಂತರ ಶ್ರೀ ಕರಿಯಪ್ಪನವರು ಇಂಗ್ಲಂಡಿನ್ನು ಸಂದರ್ಶಿಸಲಿದ್ದಾರೆ.

ಶ್ರೀ ಕರಿಯಪ್ಪನವರು ಈಸ್ಟರ್ನ್ ರೀಜನಲ್ ಕೌನ್ಸಿಲ್ ಆಫ್ ದಿ ಇಂಟರ್ ನೇಶನಲ್ ಯೂನಿಯನ್ ನ ಕಾರ್ಯದರ್ಶಿ ಮತ್ತು ವಿಜ್ಞಾನಿಯೂ ಆಗಿರುವುದರಿಂದ ಈ ಅಧಿವೇಶನದ ಮೇಳೆ ರೋಮಿನಲ್ಲಿ ಏರ್ಪಡುವ ಕೌನ್ಸಿಲ್ ಸಭೆಯಲ್ಲಿಯೂ ಭಾಗವಹಿಸುವರು.

ಎಂ. ಎಸ್. ಸಿ.ಯಲ್ಲಿ ಪ್ರಥಮ ಶ್ರೇಣಿ— ಉಡುಪಿಯ ಕಾಫಿ ಪ್ಲಾಂಟರ್ ಶ್ರೀ ಕೆ. ಪಿ ನಾರಾಯಣ ಶೆಟ್ಟಿಯವರ ಪುತ್ರ ಶ್ರೀ ವಸಂತ ಶೆಟ್ಟಿರು ಧಾರವಾಡದ ಎಗ್ರಿಕಲ್ಚರ್ ಕಾಲೇಜಿನಲ್ಲಿ, ಹಾರ್ಟಿಕಲ್ಚರ್‌ನಲ್ಲಿ ಎಂ. ಎಸ್. ಸಿ. ಪದವಿ ಪರೀಕ್ಷೆಯಲ್ಲಿ, ಕಾಲೇಜಿನಲ್ಲಿಯೇ ಪ್ರಥಮ ರಾಂಕಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಅಪೂರ್ವ ಯಶಸ್ಸನ್ನು ಗಳಿಸಿರುವರೆಂದು ತಿಳಿದು ಬರುತ್ತದೆ.

ಇಂಟರ್ ನಿಕ್ಸ್ ಕ್ಲೆಬ್ ಉದ್ಘಾಟನೆ— ಉಡುಪಿ ಕೋಟೆರಿ ಕ್ಲಬ್ಬಿನ ಅಶ್ರಯದಲ್ಲಿ ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಪ್ರಾರಂಭಿಸಲಾದ "ಇಂಟರ್ ನಿಕ್ಸ್ ಕ್ಲಬ್" ನ್ನು ಕಳೆದ ದಿವಾಂಕ 1ರಂದು ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಂ ಮಧ್ವರಾಜ್, ಎಂ ಎಲ್ ಎ.ಯವರು ಉದ್ಘಾಟಿಸಿದರು. ಡಾ ಟಿ. ಎಂ. ಎ. ಪೈಯವರು ಈ ಸಂಸ್ಥೆಯ ಹಿನ್ನೆಲೆಯನ್ನು ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಸಿಟ್ಟಿಪ್ಪನವರೂ ಶ್ರೀ ಬಿ ರಮೇಶ ಯು. ನೈಯರೂ ನೆರೆದ ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಶ್ರೀಯುತ ಎ. ಟಿ. ಆಳ್ವರವರು "ಇಂಟರ್ ನಿಕ್ಸ್ ಕ್ಲಬ್‌ನ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಕೊನೆಯಲ್ಲಿ ಎಸ್. ಪಾಧ್ಯಾಚಾರ್ಯರು ಕೃತಜ್ಞತೆ ಸಮರ್ಪಿಸಿದರು.

ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕ ಸಭೆ— ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿಯ ಸದಸ್ಯರ 60ನೇ ವಾರ್ಷಿಕ ಸಾಮಾನ್ಯ ಸಭೆಯು ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಬಿ. ಬಂಗೇರರ ಅಧ್ಯಕ್ಷತೆಯಲ್ಲಿ ತಾ. 29—6—63 ರಲ್ಲಿ ಜರಗಿತು. ಪೆನ ಕಾರ್ಯದರ್ಶಿ ಶ್ರೀ ಡಿ. ಟಿ. ಕೋಟ್ಯಾನ್‌ರು ಸದಸ್ಯರಿಗೆ ಸ್ವಾಗತ ಬಯಸಿ, ಸುತ್ತೋಲೆಯನ್ನು ಓದಿ ಹೇಳಿದರು.

ಕಳೆದ ತಾ. 31—3—1962ಕ್ಕೆ ಅಂತ್ಯವಾದ 1962—63ನೇ ವರ್ಷದಲ್ಲಿ ಮಂಡಳಿಯು ಕೈಗೊಂಡ ಕಾರ್ಯಗಳ ಕುರಿತು ಮಹತಾದಾತ್ತ ಮಂಡಳಿಯು ಕಳೆದ 60 ವರ್ಷಗಳಲ್ಲಿ ಮುಂಬಯಿ ನಗರದಲ್ಲಿ ಎಂದಿನಂತೆ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಿರುವದು ಮಂಡಳಿಯು ನಡೆಯಿಸಿಕೊಂಡು ಬರುತ್ತಿರುವ ಹ್ಯಾಸ್ಕೂಲಿನ ವಿದ್ಯಾರ್ಥಿಗಳು ಮಾರ್ಚ್ 1962ರಲ್ಲಿ ಜರಗಿದ ಎಸ್. ಎಸ್. ಸಿ ಪರೀಕ್ಷೆಯಲ್ಲಿ ತೃಪ್ತಿಕರವಾದ ಸರಿಶಾಂಶವನ್ನು (55%) ತಂದಿರುವರು. ಶಾಲೆಯು ಸ್ಕೌಟ್ಸ್‌ಗಳು ಈ ಸಾರಿ ಭಾರತ ಸ್ಕೌಟ್ ಟ್ರೂಪ್ ಮತ್ತು ಕೀರ್ತಿಬ್ಯಾಡ್ಜ್ ಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿರುವರು ಮಂಡಳಿಯ ಇನ್ನಿತರ ಉದ್ದೇಶಗಳನ್ನು ಕೈಗೆತ್ತಿಕೊಳ್ಳಲು ಸಮಿತಿಯು ಸ್ಪಯತ್ನಿಸುತ್ತಿರುವದು" ಎಂದು ಹೇಳಿದರು.

ನಂತರ 1962—63ಕ್ಕೆ ಅಂತ್ಯವಾಗುವ ಮಂಡಳಿಯ ಆಯ-ವ್ಯಯದ ಪಟ್ಟಿಯನ್ನು ಸಾರ್ವಾನುಮತದಿಂದ ಮಂಜೂರುಮಾಡಲಾಯಿತು ನಂತರ 1963/64ಕ್ಕೆ ಶ್ರೀ ಆರ್. ಕೆ. ಕಾರಂತ, ಚಾರ್ಟರ್ಡ್ ಎಕೌಂಟೆಂಟ್, ಇವರನ್ನು ಮಂಡಳಿಯ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಲಾಯಿತು.

ಸಭಿಕರ ಪೈಕಿ ಶ್ರೀಗಳಾದ ಬಿ. ಎ. ಕೋರ್ಮ, ಮುತ್ತಪ್ಪ ಕೆ. ಕೋಟಿಯಾನ್ ಮತ್ತು ಯಂ. ಸಿ. ಕೋಟ್ಯಾನ್ ಕೆಲವು ಸಲಹೆ ಸೂಚನೆಗಳನ್ನಿತ್ತು ಮಾತಾಡಿದರು. ಅಂತ್ಯದಲ್ಲಿ ಜೊ. ಕಾರ್ಯದರ್ಶಿ ಶ್ರೀ ಡಿ.ಟಿ ಕೋಟ್ಯಾನವರು ಧನ್ಯವಾದ ಸಮರ್ಪಿಸಿದನಂತರ ಲಘು ಫಲಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಸತ್ಕಾರ ಸಮಾರಂಭ— ಉಡುಪಿ ಲೈಫ್ ಇನ್ಸೂರೆನ್ಸ್ ಬ್ರಾಂಚಿನಲ್ಲಿ ಶ್ರೀ ಶಿವ ಅಣ್ಣಯ್ಯ ಹೆಗ್ಡೇರು ಅಸಿಸ್ಟಾಂಟ್ ಬ್ರಾಂಚ್ ಮೆನೇಜರರಾಗಿ ಭಡ್ತಿ ಹೊಂದಿದ ಪ್ರಯುಕ್ತ ಕಳೆದ ವಿಮಾ ಏಜಂಟರು, ಶ್ರೀ ಟಿ. ಪಿ. ಯನ್. ನಂಬಿಯಾರ್ ಬ್ರಾಂಚ್ ಮೇನೇಜರ್ ಉಡ್ಡಿ, ಇವರ ಅಧ್ಯಕ್ಷತೆಯಲ್ಲಿ, ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು. ಶ್ರೀ ರಾಜೀವ ಕೋಟ್ಯಾನ್ನರು ಸ್ವಾಗತ ಭಾಷಣ ಮಾಡಿದ ನಂತರ ಸಜಂಟರರ ಪರವಾಗಿ, ಪೂರ್ಣಪತ್ರವನ್ನು, ಶ್ರೀ ಕೆ. ಆನಂದ ಶೆಟ್ಟಿ ಓದಿದ ತರುವಾಯ, ಗಂಧದ ಪೆಟ್ಟಿಗೆಯಲ್ಲಿ ಶ್ರೀ ಹೆಗ್ಡೆ ಯವರಿಗೆ, ಶ್ರೀ ಗುರುರಾಜ ಜೋಶಿಯವರಿಂದ ಆರ್ಪಿಸಲಾಯಿತು ಸಭಿಕರಪರವಾಗಿ ಶ್ರೀಗಳಾದ ಎಂ. ನಾಗಪ್ಪ ಶ್ಯಾನುಭಾಗ್, ಎ. ಕರುಣಾಕರ ರೈ ಮತ್ತು ಎ ಎಸ್. ಕಿಣಿಯವರು, ಮುಖ್ಯ ಅತಿಥಿಗಳ ಕರ್ತವ್ಯ ಕಾರ್ಯವನ್ನು ಕೊಂಡಾಡಿ ಶ್ರೀಯುಸ್ಸನ್ನು ಕೊಂಡಾಡಿ ಶ್ರೀಯುಸ್ಸನ್ನು ಕೊಂಡಾಡಿದರು. ಶ್ರೀ ಹೆಗ್ಡೆಯರು ತನಗಿತ್ತ ಸತ್ಕಾರ ಕ್ಕಾಗಿಯೂ ಇಲ್ಲಿಯ ಜನತೆ ಮತ್ತು ಏಜಂಟರು ತನಗೆ ಕೊಟ್ಟ ಸಹಕಾರಕ್ಕಾಗಿಯೂ ವಂದಿಸಿದ ತರುವಾಯ, ಅಧ್ಯಕ್ಷರು ತಮ್ಮ ವಿಭಾಗದ ಪ್ರಗತಿಯನ್ನು ವಿವರಿಸಿ ಸುರಸ ಭಾಷಣವಿತ್ತರು ಅಂತ್ಯದಲ್ಲಿ ಶ್ರೀ ಕೇಶವ ನಾಕ್ಕರು ಧನ್ಯವಾದ ಸಮರ್ಪಿಸಿದರು.

ಹೊಸತಾಗಿ ಬಸ್ಸು ಸರ್ವಿಸಿನ ಉದ್ಘಾಟನೆ— ಕುಂದಾಪುರದಿಂದ ಸುಮಾರು 3, 4 ಜಿದರ ಮೈಲು ವಿಸ್ತೀರ್ಣದ ಪಳ್ಳಿ ವಲಯದಲ್ಲಿ ಸಾರಿಗೆ ಸೌಕರ್ಯವಿಲ್ಲದೆ ಜನತೆಗೆ ಉಂಟಾಗುತ್ತಿದ್ದ ತೊಂದರೆಯ ನಿವಾರಣೆಯ ಪ್ರಯತ್ನ, ಈ ವಲಯದ ಮಹಾಜನರ ಆಸೆ ಕೈಯ ಮೇರೆಗೆ ಉಡ್ಡಿ ಶ್ರೀ ಮಂಜುನಾಥ ಮೋಟರ್ ಸರ್ವಿಸಿನವರು ತಾ. 6-7-63ರಂದು ಉಡ್ಡಿಯಿಂದ ಹೊರಟು ಕಟಬಾಡಿ, ಸುಬ್ರಹ್ಮಣ್ಯರ ಕುಂಬಾರುಗಿರಿ, ಪಾಡುಕಾಕ್ಷೇತ್ರ, ಪಂಚಮೂರು ರಸ್ತೆಗಾಗಿ ಮಂಜೇಶ್ವರಿಗೂ ಮಂಜೇಶ್ವರದಿಂದ ಅದೇ ದಾರಿಯಾಗಿ ಉಡ್ಡಿಗೂ ದಿನವಹಿ 5 ಸರ್ವಿಸುಗಳು ಓಡಾಡುವಂತೆ ಪ್ರಾರಂಭಿಸಲಿದ್ದಾರೆ.

ಶ್ರೀ ಕುಂಜಾರುಗಿರಿಜಾ ಯುವರ್ ಎಲಿ ಮೆಂಟರಿ ಶಾಲೆಯ ವರಾರಿದಲ್ಲಿ ನೆರೆದ ಸಭೆಯಲ್ಲಿ ಶ್ರೀ ಕುರಿಕಾಲು ಗಣಪಯ್ಯ ಶೆಟ್ಟರು ಹಲವು ವರ್ಷಗಳ ಪ್ರಯತ್ನದ ಫಲವಾಗಿ ಈ ಪಾಡುಕಾಕ್ಷೇತ್ರದ ರಸ್ತೆಯಲ್ಲಿ ಬಸ್ಸು ಓಡಾಡುವಲೇ ಕಾರಣವಾದ ಆನಂದವನ್ನು ಸೂಚಿಸಿ ಸ್ವಾಗತವನ್ನಿತ್ತರು. ಸ್ಥಳೀಯ ಪ್ರತಿನಿಧಿಗಳಾದ ಶ್ರೀ ಬಿ ಭಾಸ್ಕರ ಶೆಟ್ಟಿ ಎಂ. ಎಲ್. ಎ. ಯವರು ಕಾರ್ಯೋಚಿತ ಭಾಷಣವನ್ನಿತ್ತು ಬಸ್ಸು ಸರ್ವಿಸನ್ನು ಉದ್ಘಾಟಿಸಿದರು. ತರುವಾಯ ಬಸ್ಸಿನ ನೈಸರ್ಗಿಕ ಚಾಲಕರಾದ ಶ್ರೀ. ಕೆ. ನಾರಾಯಣ ಶೆಟ್ಟಿ, ಶ್ರೀ ಕೆ. ವಿ. ನರಸಿಂಹಾಚಾರ್ಯ, ಶ್ರೀ ಬೆಳ್ಳೇ ಲಕ್ಷ್ಮೀನಾರಾಯಣ ರಾಯರು ಸಂತೋಷ ಪ್ರದರ್ಶಿಸಿ ಭಾಷಣವನ್ನಿತ್ತ ಬಳಿಕ, ಬಸ್ಸು ಸಮೇತ ಗ್ರೂಪ್ ಫೊಟೋ ತೆಗೆಯಲ್ಪಟ್ಟು, ಬಸ್ಸು ಮಂಜೇಶ್ವರಿಗೆ ಪ್ರಥಮ ಶ್ರೀ ಸರ್ವಿಸನ್ನು ಪ್ರಾರಂಭಿಸಿತು.

ಶ್ರೀ ಸ್ವೇಮನಾಥ ರೈಯವರ ವಿದೇಶ ಪ್ರಯಾಣ— ಪದ್ಮಾಸಿನ ಡಾ. ಕೆ. ಮಂಜುನಾಥ ರೈಯವರ ಪುತ್ರ ಶ್ರೀ ಪ್ರೇಮನಾಥ ರೈರವರು ಉಚ್ಚ ಶಿಕ್ಷಣಕ್ಕಾಗಿ ಇದೇ ತಾ. 20ರಂದು ಬೊಂಬಾಯಿಯಿಂದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾಕ್ಕೆ ತೆರಳಲಿರುವರು. ಅವರು ಅಲ್ಲಿ ಕೈಗಾರಿಕ ಇಂಜನಿಯರಿಂಗ್‌ನಲ್ಲಿ ಎಂ. ಎಸ್. ಸಿ. ವ್ಯಾಸಂಗ ಮಾಡಲಿರುವರಲ್ಲದೆ ಪ್ರಾಯೋಗಿಕ ಕಾರ್ಯವೆಸಗುವರು.

ಉದ್ಘಾಟನಾ ಸಮಾರಂಭ— ಅಂಬಲ್ಪಾಡಿಯ ಹೀರಾಬಾಗಿನಲ್ಲಿ ತಾ. 8-7-63 ರಂದು ಉಡುಪಿ ಡಾ| ಯು ಆರ್. ರಾಯರ ಆಶ್ರಯದಲ್ಲಿ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈ ಇವರ ಅಧ್ಯಕ್ಷತೆಯಲ್ಲಿ "ಬಾಲಸುಕೀರ್ತಿ ಶಾಲೆ" ಎಂಬ ಶಿಕ್ಷಣ ಗಾನ ಪದ್ಧತಿಯ ಬಾಲವಾಡಿ ಶಾಲೆಯನ್ನು ತೆರೆಯಲಾಯಿತು. ಇದರ ಅಧ್ಯಾಪಕರಾದ ಶ್ರೀ ಮುಟ್ಟುಪ್ಪಾಣ ಉಪಾಧ್ಯಾಯರು ಶಿಕ್ಷಣ ಗಾನ ಪದ್ಧತಿಯ ವಿಷಯದಲ್ಲಿ ನೂತನವಾದಿದರು ಅಂಬಲ್ಪಾಡಿ ವಾರ್ಡಿನ ಪ್ರತಿನಿಧಿ ಶ್ರೀ ಎ. ಅಪ್ಪಾಜಿರಾಯರು ಕಾರ್ಯೋಚಿತ ಭಾಷಣವಿತ್ತರು. ಅಧ್ಯಕ್ಷರು ಈ ಶಾಲೆಯ ಮುಂದಿನ ಶ್ರೇಯೋಭಿವೃದ್ಧಿಯನ್ನು ಕೋರಿ ಭಾಷಣ ಕೊಟ್ಟಪ್ಪನ್ನಲ್ಲದೆ ಮಕ್ಕಳಿಗೆ ಸಿಹಿತಿಂಡಿ ಕೊಡುವ ಬಗ್ಗೆ 25 ರೂಪಾಯಿಗಳನ್ನು ಕೊಡುವ ವಾಗ್ದಾನವಿತ್ತರು. ಹೀರಾಬಾಗಿನ ಅಡಳಿತದಾರರಾದ ಶ್ರೀ ಗಣಪತಿ ನಾಯಕರು ಮಕ್ಕಳಿಗೆ ಸಕ್ಕರೆ ಬಿಳೆಹಣ್ಣು ಹಂಚಿದರು.

ವಾರ್ತಾವೇದಿಕೆ

ನೆಹರೂ ದೃಢನಿಲುಮೆ

ಬೆಂಕಿಯನ್ನು ಕೆಚಕಿದಂತೆ ಆದರಲ್ಲಿ ಪ್ರಜ್ವಲಿಸುವ ಗುಣ, ಹೆಚ್ಚುತ್ತದೆ. ಪ್ರಧಾನಿ ನೆಹರುರವರು ಒಂದು ಕಾಲದಲ್ಲಿ ತಾನು ನಿವೃತ್ತರಾಗುವ ಅಶಯವನ್ನು ವ್ಯಕ್ತಪಡಿಸಿದ್ದರು. ಆದರೆ, ಆಗ, ಅವರ ನಾಯಕತ್ವ ದೇಶಕ್ಕೆ ಬೇಕು ಎಂಬ ಬೊಬ್ಬೆ ಎಲ್ಲೆಡೆಗಳಿಂದಲೂ ಕೇಳಿ ಬರತೊಡಗಿತ್ತು. ಇಂದು ನೆಹರೂ ರಾಜಿನಾಮೆ ಈಯಬೇಕೆಂಬ ಏರುಬೊಬ್ಬೆ ಅಲ್ಲಲ್ಲಿ ಪ್ರತಿಧ್ವನಿಸುತ್ತ ಇದೆ. ಆದರೆ, ನೆಹರು ಶರೀರದಲ್ಲಿ ಶಕ್ತಿಯಿರುವಾಗ ನಿಷ್ಕ್ರಿಯನಾಗಿ ಕುಳಿತುಕೊಳ್ಳಲಾರೆ, ರಾಜಿನಾಮೆ ನೀಡಲಾರೆ ಎಂದು ಹೇಳುತ್ತಿರಿ. ರಾಜಿನಾಮೆಯ ಬೇಡಿಕೆ ಹೆಚ್ಚುತ್ತಾ ಬಂದಂತೆ ನೆಹರೂರವರ ನಿಲುಮೆಯು ಜಸ್ಟೇ ದೃಢವಾಗುತ್ತ ಬರುತ್ತಿದೆ. ಇದು ಅಧಿಕಾರದ ಮೋಹವೆನ್ನುವವರು ಕೆಲವಾದರೆ, ದೇಶದ ಸುದೈವವೆನ್ನುವವರು ಹಲವರು.

ಥಾಂಟೆರ ವಿಚಾರಧಾರೆ

ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯು ಥಾಂಟೆರು ತನ್ನ ಸೇವೆ ಮತ್ತು ಕಾರ್ಯನೀತಿಯಿಂದ ಜನತಾಂಗಗಳಿಸಿದ್ದಾರೆ. ಅಭಿವೃದ್ಧಿ ಮತ್ತು ಅನಭಿವೃದ್ಧ ದೇಶಗಳ ನಡುವಣ ಅಂತರ ವೇಗ ಹೆಚ್ಚುತ್ತ ಬರುತ್ತಿರುವುದಕ್ಕೆ ಅವರ ಕಳವಳ ವ್ಯಕ್ತಪಡಿಸುತ್ತಾರೆ. ವೈಜ್ಞಾನಿಕ ವತ್ತು ತಾಂತ್ರಿಕ ಕೇಂದ್ರಗಳನ್ನು ಅನಭಿವೃದ್ಧ ದೇಶಗಳಲ್ಲಿ ರಚಿಸುವುದಕ್ಕೆ ಮುಂದುವರಿದ ದೇಶಗಳು ಮುಂದೆ ಬರಬೇಕು; ದೂರ ಪ್ರಾಚ್ಯ ಮತ್ತು ಲೆಟಿನ್ ಅಮೆರಿಕೆ ಗಳಲ್ಲಿ ಆಹಾರೋತ್ಪಾದನೆಯು ನಾಲ್ಕಡಿಯಾಗಬೇಕು—ಎಂಬುವು ಅವರ ವಿಚಾರಧಾರೆ. ಆಗ ಅಂತರವು ಕಡಿಮೆಯಾಗಿ, ಎರಡೂ ಭಾಗಗಳ ನಡುವೆ ಸೇತುವೇರ್ಪಡುವುದು ಸಂಭವನೀಯವೆಂಬ ಅಶಯ ಅವರದ್ದು. ಇದನ್ನು ಕೇಳುವವರು ಯಾರಿದ್ದಾರೆ?

ಜಾಣತನದ ಹೆಜ್ಜೆ

ಕರ್ನಾಟಕದ ವಿತ್ತ ಮಂತ್ರಿ ಬಿ. ಡಿ. ಜತ್ತಿಯವರು ತಮ್ಮ ಮುಂಗಡ ಪತ್ರದಲ್ಲಿ ನಾನ್‌ಗಜೆಟೆಡ್ ನೌಕರರ ತುಟ್ಟಿ ಭತ್ತೆಯನ್ನು ಹೆಚ್ಚಿಸುವ ಅನಕಾಶ ನೀಡಿದ್ದರು. ಆದರೆ, ಈ ಹೆಚ್ಚಳವು ಅಳ್ಳಿಪ್ತಿಕರವೆಂಬ ದೂರು ಬಂದುದರಿಂದ ಈ ಸಂಬಂಧದ ಚರ್ಚೆ ಹೊರಬೆರಲಿಲ್ಲ. ಇದೀಗ ಪೂರ್ವ ನಿಯೋಜಿತ ಹೆಚ್ಚಳದ ಆಜ್ಞೆ ಹೊರಬಿದ್ದಿದೆ. ಸರಕಾರವು ಕೊಡುವ ಹೆಚ್ಚಳವನ್ನು ಮೊದಲು ಸ್ವೀಕರಿಸಿ, ಅನಂತರ ತಮ್ಮ ಹೆಚ್ಚಿನ ಬೇಡಿಕೆಯನ್ನು ಮುಂದಿಡುವುದು ಜಾಣತನ. ಎನ್. ಜಿ ಯೊ.ಗಳು ಈ ಸಂಪ್ರದಾಯವನ್ನು ಪಾಲಿಸುವ ಉದಾರತೆ ತೋರಿಸಿದ್ದಾರೆಂದೂ ತಿಳಿಯುತ್ತದೆ. ಸರಕಾರವು ಬೆಲೆಗಳ ಇಂಡೆಕ್ಸಿಗೆ ಸರಿಯಾಗಿ ಕುಟ್ಟಭತ್ತೆಯನ್ನು ಕೊಡುವ ಕ್ರಮ ಅನುಸರಿಸ್ಯವುದು ಸೂಕ್ತವೆಂದು ಹೆಚ್ಚಿನವರ ಅಭಿಪ್ರಾಯ.

ಬೊಬ್ಬೆಗೆ ಸಮಾಧಾನ

ಪ್ರಧಾನಿ ನೆಹರುರವರ ಪ್ರಬಲ ಸಮರ್ಥಕರಲ್ಲಿ ಗೃಹಮಂತ್ರಿ ಲಾಲಬಹದೂರ ಶಾಸ್ತ್ರಿಯವರು ಅಗ್ರಗಣ್ಯರು. ಭಾರತದ ವಿದೇಶ ನೀತಿಯನ್ನು ಸವರ್ಥಿಸುತ್ತ ಅವರು ವ್ಯಕ್ತಪಡಿಸಿದ ವಿಚಾರಗಳು ನಿಜಕ್ಕೂ ಪ್ರಶಂಸನೀಯ. "ನಮ್ಮ ತಾಟಸ್ಥ್ಯ ನೀತಿಯ ಫಲವಾಗಿ, ನಮ್ಮ ರಕ್ಷಣಾ ಬಲವನ್ನು ಹೆಚ್ಚಿಸುವ ಕ್ರಮಕ್ಕೆ ಅಮೆರಿಕೆಯೂ ಇನ್ನಿತರ ಮಿತ್ರ ರಾಷ್ಟ್ರಗಳೂ ನಮಗೆ ನೆರವಾಗುತ್ತಿವೆ. ಕೆಲವು ಚೀನಾದೊದನೆ ಗಡಿ ವಿವಾದವಿರುವ ಈ ಸಮಯದಲ್ಲೂ ರಕ್ಷ್ಯವು ನಮ್ಮ ಸೇನೆಯನ್ನು ಬಲಾಢ್ಯಗೊಳಿಸಲು ನೆರವಾಗುತ್ತ ಬಂದಿದೆ." ಯಾವುದೇ ಒಂದು ಶಕ್ತಿ ಬಣಕ್ಕೆ ಸೇರಿಕೊಂಡಿದ್ದರೆ, ಹೀಗೆ ಉಭಯ ಪಕ್ಷಗಳಿಂದಲೂ ಸಹಾಯ ಪಡೆಯುವುದು ಸಾಧ್ಯವಿಲ್ಲ. ಭಾರತದ ವಿದೇಶ ನೀತಿ ಅಕ್ಷರಶಃ ವಾಗಿದೆಯೆಂದು ತಿರುಬೊಬ್ಬಿಡುವವರಿಗೆ ಈ ಸಮಾಧಾನ ಸಾಲದೆ?

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಸ್ಪಯೋಜನಕಾರಿ ಪುಸ್ತಕ—

ಮನ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ರೋಗಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವನ್ನು ವಿವರಿಸಲ್ಪಟ್ಟಿದೆ. ಹೊರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಮೆರಿಕೆಯ ರಾಜಧಾನಿ

ಮಹಾ ಬಂದರ — ನ್ಯೂಯಾರ್ಕ್ ನಗರ

ಎಂಭತ್ತು ಲಕ್ಷಕ್ಕಿಂತ ಹೆಚ್ಚು ಜನರಿರುವ, ಎತ್ತರದ ಕಚೇರಿ ಮತ್ತು ನಿವಾಸೀ ಕಟ್ಟಡಗಳುಳ್ಳ, ಥಿಯೇಟರುಗಳು ಮತ್ತು ವಸ್ತು ಸಂಗ್ರಹಾಲಯಗಳ್ಳು ಡಿಪಾರ್ಟ್‌ಮೆಂಟ್ ಸ್ಟೋರುಗಳು ಮತ್ತು ಅಂಗಡಿಗಳು ತುಂಬಿರುವ ಅಗಾಧವಾದುದು ನ್ಯೂಯಾರ್ಕ್ ನಗರ.

ಅಟ್ಲಾಂಟಿಕ್ ತೀರದಲ್ಲಿ ನ್ಯೂಯಾರ್ಕ್ ರಾಜ್ಯದ ಈಶಾನ್ಯದಲ್ಲಿರುವ ನ್ಯೂಯಾರ್ಕ್ ನಗರ ಅಮೆರಿಕದ ಅತ್ಯಂತ ದೊಡ್ಡ ಬಂದರು. ಈ ಮಹಾ ದ್ವಾರದ ಮೂಲಕ ವಿಶ್ವದ ಎಲ್ಲ ಭಾಗಗಳಿಂದ ಅಮೆರಿಕಕ್ಕೆ ವಲಸೆಗಾರರು ಬಂದಿದ್ದಾರೆ. ಆದರಿಂದಾಗಿ ಈ ನಗರದಲ್ಲಿ ವಿವಿಧ ಬುಡಕಟ್ಟುಗಳ ಜನಗಳಿದ್ದಾರೆ. ಈ ನಗರದ ನಿವಾಸಿಗಳಲ್ಲಿ ಎರಡು ದಶಲಕ್ಷಕ್ಕೂ ಹೆಚ್ಚು ಜನ ವಿದೇಶಗಳಲ್ಲಿ ಜನ್ಮ ತಾಳಿದವರು.

ಅಮೆರಿಕದ ಅತ್ಯಂತ ದೊಡ್ಡ ಪಟ್ಟಣವಾದ ನ್ಯೂಯಾರ್ಕ್ ನಗರವನ್ನು ಐದು ಬರೋಗಳಾಗಿ ವಿಂಗಡಿಸಲಾಗಿದೆ ಇವುಗಳಲ್ಲಿ ಅತ್ಯಂತ ಜನಸ್ಥದು ಮನ್‌ಹಾಟನ್ ದ್ವೀಪ.

ಈ ನಗರ ರಾಷ್ಟ್ರದ ಅತ್ಯಂತ ದೊಡ್ಡ ಬಂದರಾಗಿ ಬೆಳೆಯುವುದರಲ್ಲಿ ಇದರ ನಿಸರ್ಗ ಸುಂದರ ಪ್ರಮುಖ ಪಾತ್ರ ವಹಿಸಿದೆ ರೈಲು ಮತ್ತು ವಿಮಾನ ಸಂಚಾರ ಅಭಿವೃದ್ಧಿ ಹೊಂದುವ ಮೊದಲು, ನಗರದ ಸುತ್ತಲಿನ ಜಲವೂರ್ಗಗಳು ದೇಶದ ಒಳ ಭಾಗಕ್ಕೂ ನಗರಕ್ಕೂ ಸಂಪರ್ಕ ಕಲ್ಪಿಸುತ್ತಿದ್ದವು.

೧೯ನೇ ಶತಮಾನದಲ್ಲಾದ ರೈಲು ಮಾರ್ಗಗಳ ತೀವ್ರ ಅಭಿವೃದ್ಧಿ, ನ್ಯೂಯಾರ್ಕ್ ನಗರದ ಕೈಗಾರಿಕಾಭಿವೃದ್ಧಿಗೆ ಮತ್ತಷ್ಟು ಪುಷ್ಟಿ ಕೊಟ್ಟಿತು. ರೈಲ್ವೆಗಳು ನ್ಯೂಯಾರ್ಕಿನ ಕಾರ್ಖಾನೆಗಳಿಗೆ ಕಚ್ಚಾ ಪದಾರ್ಥಗಳನ್ನು ತಂದು, ಸಿದ್ಧ ಪಡಿಸಿದ ವಸ್ತುಗಳನ್ನು ಕೊಂಡೊಯ್ಯುತ್ತಿದ್ದವು.

ಈ ವಿಸ್ತರಣೆ ಸಾವಿರಾರು ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟಿತು. ಬೇರೆ ಬೇರೆ ರಾಜ್ಯಗಳಿಂದ ನ್ಯೂಯಾರ್ಕಿಗೆ ಬಂದ ಜನರಿಗೂ, ಪ್ರತಿವರ್ಷ ವಲಸೆ ಬರುತ್ತಿದ್ದ ಸಾವಿರಾರು ಜನ ವಲಸೆಗಾರರಿಗೂ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟಿತು.

ಇಂದು ನ್ಯೂಯಾರ್ಕ್ ನಗರ ಜೀವದ ಆರ್ಥಿಕ ಹಿತಾಸಕ್ತಿಗಳ ಮತ್ತು ರಾಜಕೀಯ ಮತ್ತು ಚಿಲ್ಲರೆ ವ್ಯಾಪಾರದ ಕೇಂದ್ರವಾಗಿದೆ. ಗಣಿ ಮತ್ತು ವ್ಯವಸಾಯೋಗಳನ್ನು ಬಿಟ್ಟರೆ ಬೇರೆಲ್ಲ ಕೈಗಾರಿಕೆಗಳಲ್ಲಿ ಈ ನಗರವೇ ಪ್ರಥಮ ಸ್ಥಾನ ಪಡೆಯುತ್ತದೆ

ಪ್ರತಿದಿನ ನ್ಯೂಯಾರ್ಕ್ ನಗರದಲ್ಲಿ ೧೪ ಇಂಗ್ಲೀಷ್ ದಿನ ಪತ್ರಿಕೆಗಳು ಪ್ರಕಟವಾಗುತ್ತವೆ. ಇವುಗಳ ಸರಾಸರಿ ಪ್ರಸಾರ ೬೦ ಲಕ್ಷ. ಆರು ಟೆಲಿವಿಜನ್ ಕೇಂದ್ರಗಳು ಮತ್ತು ೧೭ ರೇಡಿಯೋ ಕೇಂದ್ರಗಳಿಂದ ಸುದ್ದಿಗಳನ್ನು ಮನರಂಜನ ಕಾರ್ಯಕ್ರಮಗಳನ್ನು ಈ ನಗರದಲ್ಲಿ ಪ್ರಸಾರ ಮಾಡಲಾಗುತ್ತದೆ.

ಈ ಮಹಾ ನಗರದ ಪ್ರತಿದಿನದ ಜನ ಸಂಚಾರದ ಅನುಕೂಲಕ್ಕಾಗಿ ೭೦೦೦ಕ್ಕಿಂತ ಹೆಚ್ಚು ಸರ್ವೇ ರೈಲು ಗಾಡಿಗಳಿವೆ. ಈ ಗಾಡಿಗಳು ಈ ನೆಲ್ಬೇಯ ೩೩೪ ಮೂಲೆ ಮಾರ್ಗಗಳಲ್ಲಿ ಪ್ರತಿವರ್ಷ ೩ ವಿಲಿಯ ಜನರಿಗೆ ಸಂಚಾರ ಸೌಲಭ್ಯ ಒದಗಿಸುತ್ತವೆ. ಇದರ ಜತೆಗೆ ಸುಮಾರು ೩೫೦೦ ಬಸ್‌ಗಳು ಮತ್ತು ಸುಮಾರು ೧೫೦೦ ಟ್ಯಾಕ್ಸಿಗಳೂ ಸಂಚಾರ ಸೌಲಭ್ಯಕ್ಕಾಗಿ ಇವೆ. ಕಮ್ಯೂಟರ್ ರೈಲುಗಳು ಮತ್ತು ಬಸ್ಸಗೀ ಮೋಟಾರು ವಾಹನಗಳು ಪ್ರತಿದಿನ ಸಾವಿರಾರು ಜನ ಉಪನಗರಗಳಲ್ಲಿನ ಜನರನ್ನು, ಅವರವರ ಕಾರ್ಯಕ್ಷೇತ್ರಗಳಿಗೆ ಕೊಂಡುಬರುತ್ತದೆ.

ನ್ಯೂಯಾರ್ಕ್ ಬಂದರಿನಲ್ಲಿ ಸುಮಾರು ಹಡಗುಗಳು ನಿಲ್ಲಲು ಅನುಕೂಲತೆಗಳಿವೆ. ನೂರಾರು ಜಲಮಾರ್ಗ ಸಂಸ್ಥೆಗಳ ಧ್ವಜವನ್ನು ಹೊತ್ತು ಬರುವ ಸುಮಾರು ೧೧,೦೦೦ ಹಡಗುಗಳು ಪ್ರತಿ ವರ್ಷ ಈ ಬಂದರನ್ನು ಪ್ರವೇಶಿಸುತ್ತವೆ.

ಆದರ ಬೃಹದ್ವ್ಯಾಪ್ತಿಯಿಂದಾಗಿ, ವಿಶ್ವದ ಅತ್ಯಂತ ದೊಡ್ಡ ಮತ್ತು ತುಂಬಾ ಕೆಲಸ ವಿರುವ ಸರಕು ಸಾಗಾಣಿಕೆಯ ಕೇಂದ್ರವಾಗಿ ನ್ಯೂಯಾರ್ಕ್ ಪರಿಗಣಿತವಾಗಿದೆ. ಈ ಬಂದರಿನಲ್ಲಿ ಪ್ರತಿ ವರ್ಷ ಸುಮಾರು ೬ ಲಕ್ಷ ಟನ್‌ಗಳ ಪ್ರಮಾಣದ ಸರಕು ಸಾಗಾಣಿಕೆ ನಡೆಯುತ್ತದೆಂದು ಅಂದಾಜಾಗಿದೆ.

ಜಗತ್ ಪ್ರಸಿದ್ಧವಾದ ಆಪೆರಾ ಕಂಪೆನಿಯೂ, ದೇಶದ ಅತ್ಯಂತ ಶ್ರೇಷ್ಠ ಸಿಂಫನಿ ಆರ್ಕೆಸ್ಟ್ರಾಗಳೆರಡೂ ಅದ ನ್ಯೂಯಾರ್ಕ್ ಫಿಲ್ ಹಾರ್ಮೋನಿಕ್ ಕಂಪೆನಿ ಇರುವುದು ನ್ಯೂಯಾರ್ಕ್‌ನಲ್ಲಿಯೇ.

ಅಮೆರಿಕದ ರಂಗಮಂಟಪದ ಕೇಂದ್ರ ಸ್ಥಳವೂ ನ್ಯೂಯಾರ್ಕ್ ಆಗಿದೆ. ಜನರ ಮನರಂಜನೆಗಾಗಿ ಪ್ರತಿ ವರ್ಷ ನೂರಕ್ಕೂ ಹೆಚ್ಚು ಹೊಸ ನಾಟಕಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಇಷ್ಟೇ ಅಲ್ಲದೆ ಹಲವು ನೂರು ಚಲನಚಿತ್ರ ಪ್ರದರ್ಶನಾಲಯಗಳೂ, ಇಪ್ಪತ್ತು ಅಧುನಾ ಅದಕ್ಕೂ ಹೆಚ್ಚು ಕಾನ್ಸರ್ಟ್ ಹಾಲ್‌ಗಳೂ ಇವೆ.

ಇಲ್ಲಿನ ವೈಜ್ಞಾನಿಕ ಕೇಂದ್ರಗಳಲ್ಲಿ ಕೊಲಂಬಿಯ, ಫಾರ್ಡಮ, ಸಿಟಿ ಕಾಲೇಜು, ಕೂಪರ್ ಯೂನಿಯನ್ ಮುಂತಾದ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳೂ ಸೇರಿವೆ.

ಇಲ್ಲಿನ ಅಧಿಕ ಪ್ರಸಾರದ ದೊಡ್ಡ ವೃತ್ತ ಪತ್ರಿಕೆಗಳ ಜೊತೆಗೆ, ದೇಶದಲ್ಲಿನ ನಿಯತ ಕಾಲಿಕ ಪತ್ರಿಕೆಗಳಲ್ಲಿ ಶೇಕಡಾ ೨೦ ಕ್ಕಿಂತ ಹೆಚ್ಚು ಭಾಗ ಮತ್ತು ಪುಸ್ತಕಗಳಲ್ಲಿ ಶೇಕಡಾ ೭೦ಕ್ಕಿಂತ ಹೆಚ್ಚು ಭಾಗ ನ್ಯೂಯಾರ್ಕ್ ನಗರದಿಂದ ಪ್ರಕಾಶಿತವಾಗುವುದು.

ಈ ನಗರ ವಸ್ತು ಸಂಗ್ರಹಾಲಯಗಳ ಕೇಂದ್ರವೂ ಹೌದು. ಮೆಟ್ರೊಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್, ದಿ ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್, ಅಮೆರಿಕನ್ ಮ್ಯೂಸಿಯಂ ಆಫ್ ನೇಚುರಲ್ ಹಿಸ್ಟರಿ ಇವುಗಳೂ ಇನ್ನು ಅನೇಕ ಸಣ್ಣ ಸಣ್ಣ ವಸ್ತು ಸಂಗ್ರಹಾಲಯಗಳೂ, ಚಿತ್ರ ಶಾಲೆಗಳೂ ಇಲ್ಲಿವೆ.

ನ್ಯೂಯಾರ್ಕ್ ನಗರದಲ್ಲಿ ಇನ್ನೊಂದು ಸಾಧಾರಣವಾಗಿ ಕಂಡುಬರುವ ದೃಶ್ಯವೆಂದರೆ ಇಲ್ಲಿ ಪ್ರತಿದಿನ ಉಪಯೋಗಿಸಲ್ಪಡುವ ಹೆಚ್ಚಿನ ಸಂಖ್ಯೆಯ ಚಿರ್ಚುಗಳು. ಇಲ್ಲಿ ಗ್ರೀಕ್ ಆರ್ಥೊಡಾಕ್ಸ್ ಚರ್ಚುಗಳೂ, ಈಟಿ ರೋಮನ್ ಕ್ಯಾಥೋಲಿಕ್ ಚರ್ಚುಗಳೂ, ಜಗ ಪ್ರಸಿದ್ಧ ಆರ್ಥಡಾಕ್ಸ್ ಮತ್ತು ಯಹೂದಿ ಸಿನಗಾಗಗಳೂ ಇವೆ. ಇವೆಲ್ಲಾ ಅಮೆರಿಕದ ಸಂಸ್ಕೃತಿಯ ಇನ್ನೊಂದು ಪ್ರಮುಖಾಂಶವಾಗಿರುವ ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿ ತೋರಿಸುತ್ತವೆ.

ವೀಕ್ಷಕರಿಗೆ ನ್ಯೂಯಾರ್ಕ್ ನಗರ ನಿಜವಾದ ಅಂತರರಾಷ್ಟ್ರೀಯ ನಗರದ ರೂಪವನ್ನು ತೋರಿಸುತ್ತದೆ. ಎಲ್ಲ ದೇಶಗಳ ಜನರೂ ಸೇರಿ ಈ ನಗರವನ್ನು ದೇಶದ ಅತ್ಯಂತ ಪ್ರಮುಖ ಕಾಸ್ಮೊಪಾಲಿಟನ್ ನಗರವನ್ನಾಗಿ ನೂಡಿದ್ದಾರೆ. ವಿಶ್ವಸಂಸ್ಥೆಯ ಸರವಾಗಿ ಈ ನಗರ ಎಲ್ಲ ದೇಶಗಳ ಜನರೂ ಸೇರಿ ಸೃಷ್ಟಿಸಿರುವ ಉದಾತ್ತ ಸಂಪ್ರದಾಯಗಳು ಮತ್ತು ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ.



ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S 292/53 R. E P. 175/62

ಪನೆಯಮ್ಮ ಸನಾ — ಅರ್ಜಿದಾರರು,

ಬೀದಿಸೀತಿಅಶಾ (ಪ್ರಾತಿ) ಸಹಾ — ಎದ್ರಿರು

ಅರ್ಜಿದಾರರ ಕಡೆಯಿಂದ ಈ ಕೂಲ್ಲ ಜಾಹೀರಿ ಮಾಡಿಕೊಳ್ಳುವದೇನೆಂದ್ರೆ—

4. ಬೀದಿಅಶಾ-ಉಜ್ಜಾರಿ ಪಿಂಗನ ಹೆಂಡ್ತಿ
5. ಬೀದಿಕಿನ-ಉಸ್ಮಾನ್ ಸಾಹೇಬನ ಹೆಂಡ್ತಿ
6. ಹುಕೇನ ಸಾಹೇಬ— ಮೂವಡ ಹಸನ್ ಸಾಹೇಬನ ಮಗ
7. ಲೇಕ್ ಉಸ್ಮಾನ್ ಸಾಹೇಬ
8. ಮಾಜಿಬಾಪು ಸಾಹೇಬ — ಮಹಮ್ಮದ್ ಆಶ್ರಮ ಸಾಹೇಬರ ಮಕ್ಕಳು
9. ಮಹಮ್ಮದ್ ಯುನೀನ್ ಸಾಹೇಬ
10. ಅಹಮ್ಮದ್ ಬಾಶ್ಯಾ ಸಾಹೇಬ
13. ದಾಬಾಪು ಹಸನ್ ಸಾಹೇಬ
14. ದಾಬಾ ಪು ಮಹಮ್ಮಾನ್ಸೈದ್‌ಸ್ಯಾಬ — ಮೂವಡ ಮೈದಿನ್ ಸಾಹೇಬರ ಮಕ್ಕಳು
15. ದಾಬಾಪು ಮಹಮ್ಮದ್ ಜಾಫರ್
16 ದಾಬಾಪು ಹಮ್ಮದ್ ಕಾದ್ರಿ ಸಾಹೇಬ
17. ಮೂವಡ ಮಿಂಠಾ ಸಾಹೇಬ — ಮೂಸ್ತರ್ ಮೂವಡ ಅಬ್ದುಲ್ ಕಾದ್ರಿ ಸ್ಯಾಬನ ಮಕ್ಕಳು
20 ಮೂವಡ ಸೈದಿನ್ ಸಾಹೇಬ
22. ಸೀತಿಅಶಾಬಿ
23. ಕರುನ್ನಿ ಸಾಬಿ
24. ಉಸ್ಮಾನ ಯೂನೆ ದಾಕ್ಲ ಸ್ಯಾಬ
25 ಅಬ್ದುಲ್‌ಕಾದ್ರಿ ಸ್ಯಾಬ
26. ಗುಲಾಲು ಮೈದಿನ್ ಸ್ಯಾಬ — ಬೀದಿಸೀತಿ ಅಶರ ಮಕ್ಕಳು
27 ಸಾಲಿಮ ಸ್ಯಾಬ
28. ಕರುನ್ನಿ ಸಾಬಿ
29. ಕಾನುಪೀರ
30. ನಾಸೀಫ್ ಬೀದಿ — ಯತ್ತರೆಗ್ರಾನು

ಪೇಲ್ಕುಂಡ ಅನ್ಸುಜಾರಿಯಲ್ಲಿ ಎದ್ರಿರ ಬಾಬ್ತು ಸ್ಟಿರಾಸ್ತಿಯನ್ನು ಯೇಲಂಮತಿ ಸುವ ಗೋಸ್ಕರ ಅರ್ಜಿದಾರರು ಹಾಜ್ರಿ ಪಡ್ಡಿದ ಯೇಲು ಯಿಸ್ತಿಹಾರಿನ ಶರ್ತ ನಿರ್ಣಯಿಸುವ ಗೋಸ್ಕರ ತಾರೀಕು 24—7—1963ಕ್ಕೆ ಅಬ್ಬೆರಿ ತನ್ನಿಗೆ ಯಿನೋಣಾಗಿಯುವೆ. ಆ ಕುರಿತು ನಿಮ್ಮಿನೇನಮ್ಮ ಆಕ್ಷೇಪವಿದ್ರೆ ಸದ್ರಿ ದಿನ್ನ ಮೇಲ್ಕುಂಡ ಕೋರ್ಟು ಮುಂದೆ ಸ್ವತಹಾ ವಕೀಲರ ಮ್ಹಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕ್ಮದು- ತಪ್ಪಿದ್ರೆ ನಿನ್ನ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಗಡಿಯಲಾಗುವದೆಂಬ ಸಂಗ್ತಿ ಅರ್ಜಿದಾರರ ಕಡೆಯಿಂದ ಈ ಕೂಲ್ಲ ತಿಳಿಯಪಡ್ಸಿದೆ.

G. Sanjiva Rao
Vakil for Petitioners.

Kundpur, Date 6—7—'63.

ಅಮೃತ ಬಿಂದು

ಕೀರ್ತಿಯೆಂಬುದು ಜನತೆಯ ಉಸಿರು. ಈ ಉಸಿರೇ ಹೆಲವು ವೇಳೆ ಉಸಿರು ಕಟ್ಟಿಸಿ ಕೊಲ್ಲಬಹುದು.

೦ ೦ ೦ ೦

ಸ್ನೇಹ ಮತ್ತು ಸಾಮರಸ್ಯ ಸೌಂದರ್ಯವನ್ನು ಅಧರಿಸಿ ಕೊಲ್ಲುತ್ತದೆ; ಕುರೂಪವನ್ನು ಅರಿತು ಕರುಣೆ ತೋರುತ್ತದೆ.

ಆನಂದ,ಸುಖದಲ್ಲಿರುವ ಪ್ರತಿ ಕುಟುಂಬವೂ ಒಂದನ್ನೊಂದು ಹೋಲುತ್ತದೆ. ಆದರೆ ಅಕಂತುಷ್ಟಿಯ ಪ್ರತಿ ಕುಟುಂಬಕ್ಕೆ ಒಂದೊಂದು ದಾರಿ. ಸುಖಕ್ಕೆ ಒಂದೇ ಮುಖವಾದರೆ ದುಃಖಕ್ಕೆ ಸಹಸ್ರ ಮುಖ.

೦ ೦ ೦ ೦

ಕಣ್ಣು ಮುಂದೆ ಕಟ್ಟಿದ ಕೇರೆಟಿನ ಆಸೆಯಿಂದ ಕತ್ತೆ ಹೇಗೆ ಮುಂದರಿಯುವದೊ ಅದೇ ರೀತಿ ತಾನು ಮುಂದಿನ ವರ್ಷ ಶ್ರೀಮಂತನಾಗುವ ಆಸೆಯಿಂದ ದೈತ ದುಡಿಯತ್ತಾನೆ. ಕತ್ತೆಗೆ ಕೇರಟ್ ಸಿಗದು. ರೈತನಿಗೆ ಶ್ರೀಮಂತಿಕೆ ಬರದು.

ಸ್ವರ್ಗವೇ ಭಗವಂತನ ಮನೆ. ಮನೆಯೇ ಸದ್ಗೃಹಸ್ಥನ ಸ್ವರ್ಗ.

೦ ೦ ೦ ೦

ಆಲೆ ಮತ್ತು ಭಯ ಒಂದೇ ನಾಣ್ಯದ ಎರಡು ಮುಖಗಳಂತೆ ಆಲೆ ಇರುವಲ್ಲಿ ಭಯವಿದ್ದೇ ಇರುತ್ತದೆ. ಭಯವಿದ್ದಲ್ಲಿ ಆಸೆ ಇದ್ದೇ ಇರುತ್ತದೆ.

ಹಾಲಂಡಿನ ಜನರು

ಸಹಬಾಳ್ವೆಯ ಮಂತ್ರ ಪಾಠಕರು

ನಾವು ನಿತ್ಯ ಜೀವನದಲ್ಲಿ ಹಿಂದಿನಿಂದಲೂ ಬಳಕೆಯಲ್ಲಿರುವ ಕೆಲವು ಶಬ್ದಗಳನ್ನು ಕೇಳುತ್ತಲೇ ಇರುತ್ತೇವೆ. ಕಾಲಕ್ರಮೇಣ, ಆ ಪದಗಳ ಶಬ್ದವು ಇಳಿಯುತ್ತಲೇ ಇರುತ್ತವೆ. ಜೀವನಕ್ರಮ ಎಂಬ ಪದವೂ ಅಂತಹದೊಂದು, ಸ್ವಪಂಚದ ಬೇರೆ ಬೇರೆ ಭಾಗಗಳಲ್ಲಿನ ಜನರು ಬೇರೆ ಬೇರೆ ವಿಧದಲ್ಲಿ ಜೀವನವನ್ನು ನಡೆಸುತ್ತಾ ಬಂದಿರುವುದರಿಂದ ಈ ಪದವೂ ಉಳಿದುಕೊಂಡೇ ಬಂದಿದೆ

ಯೂರೋಪಿನ ಒಂದು ಮೂಲೆಯಲ್ಲಿರುವ ದೇಶ ಹಾಲೆಂಡ್. ಸಮುದ್ರದ ಅಂಚಿನಲ್ಲಿದೆ ಈ ದೇಶ. ಬಹು ಹಿಂದಿನ ಕಾಲದಿಂದಲೂ ನಡೆದು ಬಂದಿರುವ, ಉಚ್ಚ ತರವೆ, ಆದರೆ, ಹೆಚ್ಚು ಪ್ರಚಾರವಿಲ್ಲದ ಒಂದು ಬಗೆಯ ಜೀವನ ಕ್ರಮವನ್ನು ಇಲ್ಲಿ ಕಾಣಬಹುದು. ಮೇಲಿಂದ ನೋಡಿದಲ್ಲಿ ಈ ಜೀವನ ಕ್ರಮವಲ್ಲಿ ಯಾವುದೇ ಒಂದು ವಿಶೇಷವನ್ನೂ ಕಾಣಲು ಸಾಧ್ಯವಿಲ್ಲ. ಹೊಕ್ಕು ನೋಡಿದಲ್ಲಿ ಇದರ ಮಹತ್ವದ ಅರಿವಾಗದೇ ಇರದು.

ಯುರೋಪ್ ಖಂಡವು ಆಫ್ರೇನೂ ವಿಶಾಲವಾಯಿದ್ದಲ್ಲವಾದರೂ, ಅಲ್ಲಿ ಹಲವು ತರಹದ ಸಂಸ್ಕೃತಿಗಳನ್ನು ಕಾಣಬಹುದು. ಅದೇ ರೀತಿಯಲ್ಲಿ, ಒಂದು ಕಾಲದಲ್ಲಿ ಸ್ಪೆಯಿನಿನ ಆಳ್ವಿಕೆಗೆ ಒಳಪಟ್ಟಿದ್ದ ದೇಶವಾದ ಹಾಲೆಂಡ್ ಸಹಾ ವೈವಿಧ್ಯಕ್ಕೆ ಕಾರಣವಾಗಿದೆ.

ಒಂದು ಚಿತ್ರ! ಪೀಟರ್ ಡೀ ಹೂಗ್ ಎಂಬ ಕಲಾವಿದರು ನಿರ್ಮಿಸಿದ್ದು!...ಸುಂದರವಾದ ಗ್ರಾಮ. ಅದೇ ಉದಿಸಿದ ದಿನ ಕರನ ಕಿರಣಗಳು ಮರಗಳ ಸಂದಿನಿಂದ ಪ್ರವೇಶಿಸಿವೆ. ಗೌರವಾನ್ವಿತ ವ್ಯಕ್ತಿಯೊಬ್ಬ ಬಾಯಿಯಲ್ಲಿ ಕೊಳವೆಯಿಟ್ಟುಕೊಂಡು ಹೊಗೆ ಬಿಡುತ್ತಿದ್ದಾನೆ. ಬಳಿಯಲ್ಲಿಯೇ, ಆ ವ್ಯಕ್ತಿಯ ನಾಯಿಕಿ ಕೈಯ್ಯಲ್ಲಿ ಒಂದು ಗಾಜಿನ ಬಟ್ಟಲನ್ನು ಹಿಡಿದು ನೈಯ್ಯಾರದಿಂದ ನಿಂತಿದ್ದಾಳೆ. ಆ ಬಟ್ಟಲಿನಲ್ಲಿ ಸ್ವರ್ಣವರ್ಣದ ಪಾನೀಯವಿದೆ. ಒಂದು ಮೂಲೆಯಲ್ಲಿ ನಾಯಿಯು ಮಲಗಿ ನಿದ್ರಿಸುತ್ತಿದೆ. ಕಿಟಕಿಯಿಂದಾಚೆ ಕಾಣುತ್ತಿರುವ ದೂರದ ತರುಣದ ಸುತ್ತಲೂ ಇರುವ ವೃಕ್ಷಗಳ ಕೆಳಗೆ ಇರುವ ಆಸನಗಳ ಮೇಲೆ ಹಲವಾರು ಮಂದಿ ಕುಳಿತಿದ್ದಾರೆ ಕೆಲವರ ಎದುರಿನಲ್ಲಿರುವ ಮೇಜುಗಳ ಮೇಲೆ ಪಾನೀಯಗಳಡಲ್ಪಟ್ಟಿವೆ.

ಈ ಚಿತ್ರವು ಡಚ್ಚರ ಜೀವನ ಕ್ರಮವನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸುತ್ತದೆ. ಚಿತ್ರದಲ್ಲಿ ಕಂಡು ಬರುವ ಸುಂದರ ಪುಷ್ಪಗಳನ್ನು ಹಾಗೆಯೇ ನೋಡುತ್ತಾ ನಿಂತು ಬಿಡಬೇಕೆನ್ನಿಸುತ್ತದೆ. ಒಂದೊಂದು ವ್ಯಕ್ತಿಯ ಮುಖದಲ್ಲಿ ಯೂ ಪೂರ್ಣ ತೃಪ್ತಿಯು ತಾಂಡವವಾಡುತ್ತಿದೆ. ಚಿತ್ರಿಸಲ್ಪಟ್ಟಿರುವ ಹೂವಿನ ಕುಂಡಗಳಲ್ಲಿ ಬಿರಿದು ನಲಿಯುತ್ತಿರುವ ಹೂಗಳ ಸಮೃದ್ಧತೆಯಿಂದಲೇ ಡಚ್ಚರು ಪ್ರಕೃತಿ ಸೌಂದರ್ಯಾಧಿದೇವತೆಯ ಆರಾಧಕರೆಂದು ತಿಳಿಯಬಹುದಾಗಿದೆ.

ಪ್ರಾಥಃಕಾಲದಲ್ಲಿ ಮಧುವನ್ನು ಹಿಡಿದು ಕುಳಿತಿರುವ ಹೆಣ್ಣು ಗಂಡುಗಳನ್ನು ನೋಡಿ, ಡಚ್ಚರನ್ನು ನೋವೂಂಗಳೆಂದೋ, ಕರ್ತವ್ಯದ್ರೋಹಿಗಳೆಂದೋ ತಿಳಿಯಬಾರದು. ಅವರ ಮುಖದಲ್ಲಿ ಚಿತ್ರಿತವಾಗಿರುವ ಪೂರ್ಣ ತೃಪ್ತಿಯು ಕಾಯಕ ಸ್ಥಗಳನ್ನು ಅನುಭವಿಸಿ, ತತ್ಫಲವಾಗಿ ಜನುಭವಿಸುತ್ತಿರುವ ಸುಖದಭಾಯೆ, ಕರ್ತವ್ಯ ನಿರ್ವಹಣೆಯೇ ಅವರಿಗೆ ಕೊಟ್ಟು ನೀಗಿಸುವ ಸಾಧನ!

ಡಚ್ಚರಿಗೆ ತಮ್ಮ ಮನೆ, ಮಡದಿ, ಸಂಸಾರಗಳೆಂದರೆ ಇನ್ನೆಲ್ಲೂ ಇಲ್ಲದ ಅಭಿಮಾನ! ಅವುಗಳನ್ನು ಸರ್ವಸುಂದರವಾಗಿಡಲು ಯತ್ನಿಸುತ್ತಿರುತ್ತಾರೆ. ಕೈಗಾರಿಕೇ ಕರಣವಾದ ರಾಷ್ಟ್ರಗಳಲ್ಲಿ ಅವಿಭಕ್ತ ಕುಟುಂಬಗಳನ್ನು ಕಾಣುವುದೇ ಕಷ್ಟ. ಆದರೆ, ನೆದರ್‌ಲೆಂಡ್ಸಿನಲ್ಲಿ ಅಜ್ಜರ ಮಹತ್ವವು ಇನ್ನೂ ಮಾಸದಂತಿದೆ.

ಕಾರ್ಖಾನೆಯಲ್ಲಿರಲೀ, ಕಛೇರಿಯಲ್ಲಿರಲೀ ಎಂಟು ಗಂಟೆಗಳ ಕಾಲ ದುಡಿದು ಮನೆಗೆ ಹಿಂದಿರುಗಿದ ಡಚ್ಚನು ಆರಾಮವಾಗಿ ಕುಳಿತುಬಿಡುವುದಿಲ್ಲ. ಗೃಹಾಲಂಕಾರವೋ, ಗೋಡೆಗಳಿಗೆ ವರ್ಣ ಬಳಿಯುವುದರಲ್ಲಿಯೋ ಮಗ್ನನಾಗುತ್ತಾನೆ. ಅನಂತರ, ಅವನೂ, ಅವನ ಸ್ನೇಹಿತರೂ ಕೂಡಿ ಆ ಕಾರ್ಯಗಳ ಬಗ್ಗೆ ಚರ್ಚಿಸುತ್ತಾರೆ. ಯಾವುದೇ ಕಾರ್ಯದಲ್ಲಿಯೂಗಲಿ, ಅವರು ದೇವರನ್ನು ಕಾಣುತ್ತಾರೆ!

ಭಾರತೀಯರಂತೆಯೇ ಡಚ್ಚರೂ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದವರು. ಆದರು ತಮ್ಮ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡು, ದೇಶದ ಪ್ರಗತಿಯನ್ನು ಸಾಧಿಸಿ, ತನ್ಮೂಲಕ ಲೌಕಿಸುಖವನ್ನೂ ರೂಪಿಸಿಕೊಳ್ಳಲು ಹಲವಾರು ವಿರುದ್ಧ ಶಕ್ತಿಗಳೊಂದಿಗೆ ಹೋರಾಡಬೇಕಿತ್ತು. ಸಮುದ್ರದಾಚೆಗಿನ ನೇಶಗಳನ್ನು ಗೆದ್ದು, ಜೀವನವನ್ನೇ ಪಣವಾಗಿಟ್ಟು, ಅಬ್ಬರಿಸುವ ಸಮುದ್ರಗಳಲ್ಲಿ ಧೈರ್ಯವಾಗಿ ಪ್ರಯಾಣ ಮಾಡಿ, ವ್ಯಾಪಾರದ ಅಭಿವೃದ್ಧಿಯನ್ನು ಕಂಡು, ಕೃತಕೃತ್ಯರಾದವರು ಡಚ್ಚರು.

ಡಚ್ಚರು ಯುದ್ಧದ್ವೇಷಿಗಳು! ಸಮಾಧಾನ, ಸಹಬಾಳ್ವೆ ಅವರ ಚಿರಪರಿಚಿತ ಮಂತ್ರಗಳು! ಯುದ್ಧದಿಂದಾಗಿ, ಅವರ ದೇಶವೆಲಾ ಬೆಂಗಾಡಾಗಿ ಹೋಗಿತ್ತು. ಸದ್ಯಕ್ಕೆ ನೆಲಸಿರುವ ಶಾಂತಿಯಿಂದ, ಆ ಬೆಂಗಾಡೆಲ್ಲವನ್ನೂ ಹಚ್ಚ ಹಸುರಿನ ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ ಮಹಾ ಕೀರ್ತಿಗಾಗಿ ಡಚ್ಚರು ಧೈರ್ಯದಿಂದ ಭುಜವನ್ನು ತಟ್ಟಿಕೊಳ್ಳಬಹುದು!

ಬ್ರಹ್ಮಚರ್ಯದ ಪಾಲನೆ

(೩ನೇ ಪುಟದಿಂದ)

ದುಶ್ಚಟಗಳ ಉದ್ರೇಕವಾದಾಗ ನೀವು ಒಬ್ಬಂಟಿಗರಾಗಿದ್ದರೆ ಆ ಸ್ಥಳವನ್ನು ಬಿಟ್ಟು ಬೇರೆ ಜನಂದ್ದೆಡೆಗೆ ಹೋಗಬೇಕು.

ಜನನೇಂದ್ರಿಯದ ತಿಗ್ಗದ ಮುಖವನ್ನು ನಿತ್ಯವು ಬೆಳಿಗ್ಗೆ ಕಣ್ಣೀರಿನಿಂದ ತೊಳೆಯಬೇಕು.

ತಾವು ತಿನ್ನುವ ಆಹಾರವು ನಮ್ಮ ಮನಸ್ಸುಬುದ್ಧಿಗಳ ಮೇಲೆ ಪರಿಣಾಮವನ್ನುಂಟು ಮಾಡುತ್ತವೆಯೆಂದು ತಿಳಿದು ಆಯಾ ದಿನದ ಯೋಗ್ಯವಾಗಲೂ ಸಾತ್ವಿಕ ಆಹಾರವನ್ನು ಹಿತಮಿತವಾಗಿ ಸೇವಿಸುತ್ತಿರಬೇಕು.

ವಿಲಾಸೀ ಜೀವನವನ್ನು ತ್ಯಜಿಸಿ ಬೇಗನೆ ಮಲಗಿ ಬೇಗನೆ ಏಳುವ ಅಭ್ಯಾಸವೂ ಇರಬೇಕು.

ಇದಲ್ಲದೆ ವ್ಯವಸ್ಥಿತವಾದ ಕ್ರಮಬದ್ಧ ಶುದ್ಧ ಸಾತ್ವಿಕ ಜೀವನವನ್ನು ಮಾಡಬೇಕು. ಇದರಿಂದ ಬ್ರಹ್ಮಚರ್ಯದ ಪಾಲನೆಯಾಗಿ ನಮಗೆ ಜೀವನದಲ್ಲಿ ನವ ನವ ಆಸೆ ಆಕಾಂಕ್ಷೆಗಳು ಹುಟ್ಟಿ ಸುಖವು ತಾನಾಗಿ ನಮ್ಮತ್ತ ಬರುತ್ತದೆ. ಪ್ರಾಜ್ಞರು 'ಬ್ರಹ್ಮಚರ್ಯೋ ಸ್ಥಿತಂ ಧೈರ್ಯಂ ಬ್ರಹ್ಮಚರ್ಯೋಸ್ಥಿತಂಯಶಃ"ಎಂದಿದ್ದಾರೆ. ಭೋಗಿ ಸದಾ ರೋಗಿ ಎಂದು ನಮ್ಮ ಆರೋಗ್ಯ ಶಾಸ್ತ್ರಜ್ಞರು ಸಾರಿದ್ದಾರೆ. ಅದುದರಿಂದ ಬ್ರಹ್ಮಚರ್ಯವೇ ಜೀವನ; ವೀರ್ಯನಾಶವೇ ಮೃತ್ಯು ಎಂಬುದು ನಮ್ಮ ಬ್ರಹ್ಮಚರ್ಯವ್ರತದ ದಿವ್ಯ ಮಂತ್ರ. ಇದರ ಪಾಲನೆಯಿಂದ ಭಾರತೀಯರ ಪರಂಪರಾಗತ ಶಕ್ತಿ ತೇಜಸ್ಸುಗಳು ಪುನಃ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ನಾವು ಯಾವನದಿಂದ, ಸ್ಥಿರ ಬ್ರಹ್ಮಚರ್ಯದ ಸುಖ ಶಾಂತಿಯಿಂದ ತುಂಬಿದ ಜೀವನವನ್ನು ಸಾಗಿಸುವ. ನಾವೆಲ್ಲ ಬ್ರಹ್ಮಚರ್ಯದ ಪಾಲನೆಯನ್ನು ಮಾಡಿ ಇಂದು ರಾಷ್ಟ್ರಕ್ಕೆ ಬಂದಿರುವ ಗಂಡಾಂತರ ಪರಿಸ್ಥಿತಿಯನ್ನು ಎದುರಿಸಲು ಶಕ್ತಿವಂತರಾಗೋಣ.

—ಬಿ. ನಾರಾಯಣ ಜೋಗಿತ್ತಾಯ

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. L. P. 123/63
Sub Court S. C. 288/55

ಸುಬ್ಬರಾವ್— ಅರ್ಜಿದಾರ.
ದರ್ಮಶಾಲ ಶೆಟ್ಟಿ — ಪಿ.ದ್ರಿ.

ಸದ್ರಿ ಯಿದ್ರಿ ದರ್ಮಶಾಲ ಶೆಟ್ಟಿ-ಕರ್ಬೆಟ್ಟು ಪದ್ಮರಾಜ ಶೆಟ್ಟಿ ಮಗ-ನರಕೊಂಬು ಗ್ರಾಮದ ಕರ್ಬೆಟ್ಟು ಎಂಬಲ್ಲಿ-ಇವರಿಗೆ—

ಅರ್ಜಿದಾರನು ನಿಮ್ಮ ಮೇಲೆ ಮಾಡಿದ ಮೇಲ್ಕೊರುವ ಆಮ್ಜು ಜಾರಿಯು ತಾ.20 7.68 ರಲ್ಲು ಈ ಕೋರ್ಟಿನಲ್ಲಿ ತನ್ನಿಗೆ ಇಟ್ಟುರುವ ದ್ರಿಂದ ಆ ದಿನ್ನ ಬೆಳಿಗ್ಗೆ 11 ಗಂಟೆಗೆ ಸ್ವತಹಾ ಯೂ ವಕೀಲ ದ್ವಾರ ಹಾಜ್ರಾಗಿ ಉದಹರಿಸದಿದ್ದರೆ ನಿಮ್ಮ ಗೈರ ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತಂಡಂತೆ ತೀರ್ಮಾನಿಸಲಾದೀತು.

('By order of Court')
Ammu Shetty, A.
Advocate for Petitioner.

ಪುತ್ತೂರು, 29—6—68.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಪ್ಪಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಆರ್ಡರು ಮಾಡಿಸಿದರೆ ಪುಸ್ತಕ ರವಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಿನ್ನಿ ಶ್ರೀನಿವಾಸ್ ಬುಕ್ಸ್, ಸ್ಕೂಲ್ ಬುಕ್ ಕೊ ಕೆನರಾ ಕಾಲೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರ ಬಳಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲೆನೂ ದೊರೆಯುತ್ತವೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ
O. P. 27/63

1. A ಲಕ್ಷ್ಮೀನಾರಾಯಣ ರಾವ್.
2. A. ರಾಮಮೋಹನ ರಾವ್.
3 A ಕೃಷ್ಣಮೂರ್ತಿ ರಾವ್.
4. A. ಶ್ರೀಪತಿ ರಾವ್.
5. A. ಭಾಸ್ಕರ ರಾವ್.
6. A. ಮನೋಹರ ರಾವ್.

—ಅರ್ಜಿದಾರರು.

ಮೇಲ್ಕಂಡ ವ್ಯಕ್ತಿಹರೆನ್ನಲ್ಲಿ ಪ್ರತಿಯೊಬ್ಬರೂ ತಿನ್ನಿ ಮುಂಯಸ್ಸನವರೆ ಮಗ—ವ—1ನೆ ಅರ್ಜಿದಾರರ ಅಂಗ ವ, ಮಿಕ್ಕ ಅರ್ಜಿದಾರರು ಹರಿ ತಂದೆ ಆರೂರು ಕಿಂನಿ ಕೇಪಗಿರಿ ರಾಯರು Dunlop Rubber Co (India Ltd., Calcutta ಯಿದ್ರಲ್ಲಿ ರೂಪ್ಯಾ 100/ರ ನಂಬ್ರ 58136; 58137ನೇ ಎರಡು ಶ್ಯಾರುಗನ್ನು ಪಡೆದಿರುವದ್ರಿಂದ ಆ ಶ್ಯಾರುಗಳು ತಮ್ಮ ಹೆಸರಿಗೆ ಟ್ರಾನ್ಸ್‌ಫರ್ ಮಾಡ್ದಿ ಆ ಬಾಬ್ತು 19470ಂದ 1968ರ ತನಕದ ಮುನಾಫೆಯನ್ನು ಪಡೆಯುವರೆ ತಮಗೆ ವಾರೀಸು ಸರ್ಟಿಫಿಕೇಟು ಅನೇಕ್ಷಿಸಿ ಕೊಟ್ಟ ಅರ್ಜಿಯು ತಾ. 14—8—1968ಕ್ಕೆ ತನ್ನಿಗೆ ಇಟ್ಟಿದೆ ಅಕ್ಕೇಪಣಸಕ್ಕವರು ಕೋರ್ಟು ಮುಂದೆ ಆ ದಿನ್ನ 11 ಗಂಟೆಗೆ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದು. ಯಿಲ್ಲವಾದ್ರೆ ವಾರೀಸು ಸರ್ಟಿಫಿಕೇಟು ಅವರಿಗೆ ಕೊಡಲ್ಪಡುವದು.

(By order of Court)
P. Padmanabha Rao'
Vakil for Petitioners.

ಉಡುಪಿ, ತಾ. 6—7—68

ಸಾಮಾಜಿಕ ಸಮಸ್ಯೆ

ವ್ಯಕ್ತಿತ್ವ ಮತ್ತು ನಮ್ಮ ಪೋಷಾಕು

ನಮ್ಮ ಜನರು, ಪ್ರಾಮುಖ್ಯವಾಗಿ ವಿದ್ಯಾವಂತರೆನ್ನುವವರು, ಬಟ್ಟೆಗಳಲ್ಲಿ ಏಕಸೂತ್ರತೆಯನ್ನು ಸಾಧಿಸುವವರು ತಮ್ಮ ಪೋಷಾಕು ಅಂದರೆ ಧರಿಸುವ ಬಟ್ಟೆ ಹಾಗೂ ಅದನ್ನು ಧರಿಸುವ ಮಾದರಿಗೆ ತಮ್ಮ ಜೀವನದಲ್ಲಿ ಅಗ್ರ ಸ್ಥಾನವನ್ನು ಕೊಡುತ್ತಾರೆ. ನಾಗರಿಕರೆಂದು ಕೊಳ್ಳುವ ಈ ಜನರ ಸಂಪಾದನೆಯ ಬಹುದೊಡ್ಡ ಪಾಲು ಬಟ್ಟೆಬರೆಗಳಿಗಾಗಿಯೇ ವೆಚ್ಚವಾಗುತ್ತಿದೆ. ಈ ದುಂದು ವೆಚ್ಚ ಎಷ್ಟರ ವರೆಗೆ ಮುಟ್ಟಿದೆಯೆಂದರೆ ಈ ಬಾಹ್ಯ ಪೋಷಾಕು ಆಡಂಬರಗಳಿಂದ ದೀವಾಳಿಯಾದ ಸಹಸ್ರಾರು ಜನರಿದ್ದಾರೆ. ಇಂದು ಬಟ್ಟೆ ಧರಿಸುವದು ಮೈಯ ಅವಶ್ಯಕತೆ, ಋತುಮಾನದ ಬೇಡಿಕೆ ಯಾ ಮೈ ಮುಚ್ಚುವ ಕಾರಣಕ್ಕಾಗಿ ಉಲ್ಲ, ಫೇಶನಿಗಾಗಿ. ಈ ಫೇಶನ್ ಮಾಡುವವರಿಗೇ ಗೌರವ, ಸ್ಥಾನ. ಹಿರಿಮೆಗಳವೆಯೆಂಬುದಕ್ಕಾಗಿ, ಸಮಾಜವು ಬಟ್ಟೆ ನೋಡಿ ಗೌರವ ಕೊಡುವ ಕುರುಡುತನವನ್ನು ಸಂಪಾದಿಸಿ ಕೊಂಡಿರುವದರಿಂದ ವ್ಯಕ್ತಿಯ ಒಳವೂ ಬಟ್ಟೆಯ ವಿವಿಧ ವಿನ್ಯಾಸದಲ್ಲಿ ಕೇಂದ್ರಿತವಾಗಿದೆ.

ಪರಿಣಾಮವಾಗಿ ಆ ರೀತಿ ಬಟ್ಟೆ ಧರಿಸುವದು, ಈ ತರಗತಿಯ ಸೀರೆ ಉಡುವುದು ನಮ್ಮ ಗೌರವಕ್ಕೆ ಕಡಿಮೆ ಎಂದು ಹೇಳಲ್ಪಡುತ್ತಿದೆ. ಮಾನವನ ಶರೀರ ರಕ್ಷಣೆ ಮಾಡಬೇಕಾದ ಬಟ್ಟೆ ಇಂದು ಆತನ ಆಂತಸ್ಥನ್ನು ಅಳೆಯುವ ಸಾಧನವಾಗಿದೆ. ಮಾತ್ರವಲ್ಲ; ಮನುಷ್ಯನ ಯೋಗ್ಯತೆ, ಘನತೆಗಳನ್ನು ಅವನುಟ್ಟ ಬಟ್ಟೆಯಿಂದಲೇ ನಿರ್ಧರಿಸುವ ಪ್ರತೀತಿ ಹುಟ್ಟಿದೆ.

ಬಟ್ಟೆಗೂ ಮನುಷ್ಯನ ವ್ಯಕ್ತಿತ್ವ ಹಾಗೂ ಘನತೆಗೂ ಹೆಚ್ಚಿನ ಸಂಬಂಧವಿಲ್ಲ ವೆಂಬುದನ್ನು ಅಂದಿನ ಮಹಾತ್ಮಾ ಗಾಂಧಿಯವರ, ಇಂದಿನ ವಿನೋಬಾರ ಹಾಗೂ ಇನ್ನೂ ಅನೇಕ ಮಹಾ ಪುರುಷರ ಜೀವನದಲ್ಲಿ ನಾವು ನೋಡುತ್ತೇವೆ. ನಗ್ನ ಫಕೀರನೆನಿಸಿದ ಗಾಂಧಿ ಮಹಾತ್ಮನಾದನು. ಅರಿಬತ್ತಲೆಯ ಕೃಷ್ಣಮೆ ಮಹಾತ್ಮ ಎಳುವಾದನು. ಬುದ್ಧನಿಂದ ಹಿಡಿದು ರಾಮಕೃಷ್ಣರ ವರೆಗಿನ ಎಲ್ಲರೂ ಕೂಡ ಹೆಚ್ಚು ಕಮ್ಮಿ ಅರಿಬತ್ತಲೆಯಂತೇ. ತಾವು ಧರಿಸುವ ಬಟ್ಟೆ, ಹಾಗೂ ಅದನ್ನು ಧರಿಸುವ ರೀತಿಯಿಂದ ಯಾರೂ ದೊಡ್ಡವರಾಗಿಲ್ಲ, ಘನತೆಗೇಣಾಲ್ಲವೆಂಬುದು ಎಲ್ಲರ ಅನುಭವನಾದರೂ ಎಲ್ಲರೂ ಈ ಪೋಷಾಕಿನ ಆರಾಧನೆಯನ್ನು ನಡೆಸುತ್ತಲೇ ಇದ್ದಾರೆ. ಅದಕ್ಕಾಗಿ ಕೋಟ್ಯಂತರ ನೆಚ್ಚ ಮಾಡುತ್ತಿದ್ದಾರೆ ಈ ಆರಾಧನೆಯಲ್ಲಿ ನಿಜವಾದ ವ್ಯಕ್ತಿತ್ವವೇನೆಂಬುದನ್ನು ಮರೆತುಬಿಟ್ಟ್ದ್ದೇವೆ. ಏಕಿಕವಾದ, ಪ್ರಾಪಂಚಿಕವಾದ ಜೀವನದ ನೂಮಿಯಲ್ಲಿ ಆತ್ಮನ ಇರವನ್ನು ಮರೆತ ಮೂಢರಂತೆ ಈ ಪೋಷಾಕಿನ ಗುಂಗಿನಲ್ಲಿ ಘನತೆಗೆ ಕಾರಣಗಳಾದ ನಿತ್ಯ ಸತ್ಯಗಳನ್ನು ಕಡೆಗಣಿಸಿದ್ದೇವೆ

ಮೊನ್ನೆಯಾಗಿ ಇಂಗ್ಲೆಂಡಿನ ಮುಖ್ಯ ವಂತ್ರಿಗಳಾದ ಮೆಕ್ಕಿಲನ್‌ರವರು ತಮ್ಮ ಮನೆಯ ಹತ್ತಿಂದ ಚರ್ಚಿಗೆ ಹೋದಾಗ ಮತ್ತು ನಂತರ ಗೋಲ್ಫ್ ಆಟದ ಮೈದಾನಕ್ಕೆ ತೆರಳಿದಾಗ ಮೊಣಕಾಲು ಹರಿದು ತೇಪೆ ಹಾಕಿದ ಸುರಾಲನ್ನು ಧರಿಸಿದ್ದರಂತೆ. ಇನ್ನು ಆಫ್ರಿಯ ಅನೇಕರ ಗಮನವನ್ನು ಸೆಳೆದುದು ಮಾತ್ರವಲ್ಲ; ಲಂಡನಿನ ಅನೇಕ ಪತ್ರಿಕೆಗಳೂ ಈ ವಿಚಾರ ಬರೆದವು. ಮೆಕ್‌ಮಿಲನ್‌ರವರು ಈ ವಿಚಾರವಾಗಿ ಹೇಳುತ್ತಾ; "ನಾನು ಒಂದೇ ಸೂಟನ್ನು ಧರಿಸುತ್ತೇನೆ. ಅದು ಹರಿದಾಗ ಟೈಲರಿಗೆ ಹೊಸ ಸೂಟಿಗೆ ಆರ್ಡರ್ ಕೊಡುತ್ತೇನೆ" ಎಂದಿದ್ದಾರೆ.

ಸಂಪತ್ತಿನಿಂದ ಕೂಡಿದ ಇಂಗ್ಲೆಂಡಿನಂಥಾ ಒಂದು ದೇಶದ ಮುಖ್ಯ ಮಂತ್ರಿ ತೇಪೆ ಹಾಕಿದ ಬಟ್ಟೆ ಧರಿಸುವುದನ್ನು ಘನತೆಗೆ ಕಡಿಮೆ ಎಂದು ತಿಳಿದಿಲ್ಲ. ಮಾತ್ರವಲ್ಲ; ಅಲ್ಲಿಯ ಜನತೆಯು ಕೂಡ ಇದನ್ನು ಕೃಪಣತೆಯು ಕುರುಹೆಂದಾಗಲೀ, ನಾಚಿಕೆ ಪಡಬೇಕಾದ ವಿಚಾರವೆಂದಾಗಲೀ ಭಾವಿಸುವದಿಲ್ಲ. ಜೀವನದಲ್ಲಿ ಯಾವುದಕ್ಕೆ ಏನು ಶಸ್ತ್ರ ಎಷ್ಟೆ, ಹೇಗೆ ಕೊಡಬೇಕೆಂದು ಅವರಿಗೆ ಗೊತ್ತಿದೆ. ಆದರೆ ನಮ್ಮಲ್ಲಿ ಹೊಟ್ಟೆಗೆ ಅನ್ನವಿಲ್ಲದಿದ್ದರೂ ಚಿಂತೆಯಿಲ್ಲ ಮೈಗೆ ಹಾಕಲು ಆಧುನಿಕ ಸೂಟ್ ಜೇಕೆನ್ನುತ್ತೇವೆ.

ನಮ್ಮ ಜನರಲ್ಲಿ ನಿಜವಾದ ಸಂಸ್ಕೃತಿ, ಜೀವನ ದೃಷ್ಟಿ ಬೆಳೆದಿಲ್ಲವೆಂಬುದಕ್ಕೆ ಈ 'ಪೋಷಾಕು' ಮೋಹ ಒಂದು ನಿದರ್ಶನ. ಈ ರೀತಿಯ ಕೃತ್ರಿಮ ಜೀವನದ ಕಾರಣವಾಗಿಯೇ ನಮ್ಮ ಸಮಾಜದಲ್ಲಿ ದುಡ್ಡಿರುವವನು ಆರಾಧ್ಯನಾಗಿದ್ದಾನೆ. ಫೇಶನ್ ಮಾಡುವವರು ಆದರ್ಶರೆನಿಸಿದ್ದಾರೆ. ಈ ಕೃತ್ರಿಮತೆ ಕೊನೆಗಾಣದ ವಿನಃ ನಮಗೆ ಪ್ರಗತಿ ಇಲ್ಲ.

—'ನಿರಂಜನ'



ಚೀನೀಯ ಏಕಪಕ್ಷೀಯ ದೃಷ್ಟಿ

(೨ನೇ ಪುಟದಿಂದ)

ನೇಪಾಳ ಚೀನೀಯ ಸರಕಾರವು ಈ ಸೂಚನೆಗಳಿಗೆ ಅನುಕೂಲ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದೇನೆಯೆಂದು ತಿಂದಿತ್ತು. ಆದರೆ, ಈ ಪ್ರತಿಕ್ರಿಯೆಯು ಯಾವ ರೀತಿಯಾಗಿತ್ತು ಎಂಬುದರಲ್ಲಿ ಇನ್ನೂ ಸಂದೇಹವುಳಿದಿದೆ

ಸ್ಪಷ್ಟೀಕರಣಗಳು

ಆ ಮೇಲೆ ಶ್ರೀಮತಿ ಸಿರಿಮಾವೊ ಭಂಡಾರ ನಾಯಿಕೆಯವರು ಡಿಲ್ಲಿಗೆ ಬಂದರು. ಅಲ್ಲಿ ಅವರನ್ನು ಸಂಯುಕ್ತ ಅರಬ ಪ್ರಜಾರಾಜ್ಯದ ಕಾರ್ಯಕಾರಿ ಪಂಡಳದ ಅಧ್ಯಕ್ಷ ಶ್ರೀ ಅಲಿಸಾಬ್ರಿ ಹಾಗೂ ಘಾನಾದ ನ್ಯಾಯಾಂಗ ಸಚಿವ ಶ್ರೀ ಕೋಫೀಅಕಾಂಟಿ ಓಸ್ಸಿ ಅಟ್ಟ ಇವರು ಕೂಡಿಕೊಂಡರು

ಭಾರತ ಸರಕಾರವು ಕೊಲಂಬೊ ಸಮ್ಮೇಳನದ ಸಲಹೆಗಳನ್ನು ವಿವಾದ ಪರಿಹಾರಕ್ಕೆಂದು ತಟಸ್ಥ ರಾಷ್ಟ್ರಗಳು ಮಾಡಿವ ಮಾರ್ಗದರ್ಶನವೆಂದ. ಮತ್ತಿವು ಆ ದೇಶಗಳ ಆಂತರಿಕಾಭಿವೃದ್ಧಿಯ ಪ್ರತೀಕವೆಂದು ತಿಳಿದು, ಇದ್ದಕ್ಕಿದ್ದಂತೆ ಸ್ವೀಕರಿಸಿತು. ಕೊಲಂಬೋ ಸಮ್ಮೇಳನದ ತ್ರಿಮೂರ್ತಿಗಳು ಒಂದಾಗಿ ಭಾರತವು ಬಯಸಿದ ಸ್ಪಷ್ಟೀಕರಣವನ್ನು ನೀಡಿದುವು. ಇವೇ ಸ್ಪಷ್ಟೀಕರಣಗಳನ್ನು ಚೀನೀಯ ಸರಕಾರಕ್ಕೂ ಕಳಿಸಲಾಗಿತ್ತು. ಈ ಸ್ಪಷ್ಟೀಕರಣಗಳಿವು.

ನವಂಬರ ೬, ೧೯೫೪ರ ನೈಜ ನಿಯಂತ್ರಣ ರೇಖೆಯೆಂದು ಚೀನಾವು ಕರೆಯುವ ರೇಖೆಯಿಂದ ಚೀನೀಯ ಸೇನೆಯು ೨೦ ಕಿಲೋಮೀಟರುಗಳವ್ಯ ಹಿಂದೆ ಸರಿಯಬೇಕು.

ಈ ರೀತಿಯ ಮೇಲೆ ವತ್ತುಉದ್ಭಕ್ಕೂ ಭಾರತೀಯ ಸೇನಾ ರಾಸ್ಯಗಳಿರುವುದು. ಚೀನೀಯರು ಹಿಂದೆ ಸರಿಯುವುದರಿಂದ ಉಂಟಾಗುವ ನಿಸ್ಸೈನ್ಯೀಕೃತ ಪ್ರದೇಶದಲ್ಲಿ ಎರಡೂ ಕಡೆಯವರು ಕೂಡಿ ನಾಗರಿಕಾಡಳಿತೆಯನ್ನು ನಡೆಸುವುದು ಕೊಲಂಬೊ ಸಲಹೆಗಳ ವಿಶಿಷ್ಟ ಅಂಶ. ಸೈನಿಕ ರಾಜೆಗಳ ಸಂಖ್ಯೆ ಸ್ಥಾನ ಮತ್ತಿತರ ವಿಚಾರಗಳ ಸಲುವಾಗಿ ಭಾರತೀಯ ಮತ್ತು ಚೀನೀಯ ಅಧಿಕಾರಿಗಳ ನಡುವೆ ನೇರ ಮಾತುಕತೆ ತೊಡಗ ಬೇಕು.

ಪೂರ್ವ ವಿಭಾಗದಲ್ಲಿ ಭಾರತೀಯ ಪಡೆಗಳು ನೈಜನಿಯಂತ್ರಣರೇಖೆ, ಅಂದರೆ ಮೈಕಮಹೋನ್ ರೇಖೆಯು ವರೆಗೂ ಸಂಚರಿಸಬಹುದು; ಆದರೆ, ಭಾರತ ಮತ್ತು ಚೀನಾಗಳ ನಡುವೆ ವಿವಾದಕ್ಕೆ ಒಪ್ಪಿದ ನೀಡಿರುವ ಭಾಗ್ಗ ಕಣಿವೆ ಮತ್ತು ಲಾಂಗ್ಜುಗಳಿಗೆ ಅವು ಹೋಗಬಾರದು. ಈ ಎರಡು ಪ್ರದೇಶಗಳನ್ನುಳಿದು, ಬೇರೆಡೆ ಈ ರೇಖೆಯು ಉತ್ತರ ಬದಿಯ ವರೆಗೂ ಚೀನೀಯ ಸೇನೆಗಳು ತಿರುಗಾಡಬಹುದು. ಈ ಎರಡು ಪ್ರದೇಶಗಳಲ್ಲಿ ಮೂಡಬೇಕಾದ ವ್ಯವಸ್ಥೆಗಳ ಕುರಿತು ಭಾರತ ಮತ್ತು ಚೀನಾಗಳು ಪರಸ್ಪರ ಮಾತಾಡಿಕೊಂಡು ಒಂದು ನಿರ್ಧಾರಕ್ಕೆ ಬರಬಹುದು.

ಮಧ್ಯ ವಿಭಾಗದ ಮಟ್ಟಿಗೆ, ಸಮ್ಮೇಳನಕ್ಕೆ ಮೊದಲಿನ ಯಥಾ ಸ್ಥಿತಿಯನ್ನು ಸಂರಕ್ಷಿಸಿಕೊಂಡು ಬರಬೇಕು. ಯಾವ ಪಕ್ಷವಾದರೂ ಈ ಸ್ಥಿತಿಯನ್ನು ಕೆಡಿಸುವಂತಹ ಕೆಲಸ ಮಾಡಬಾರದು.

ಭಾರತದ ಸ್ವೀಕೃತಿ

ಕೊಲಂಬೊ ಸೂಚನೆಗಳು ಭಾರತೀಯ ಪಾರ್ಲಿಮೆಂಟಿನಲ್ಲಿ ಪೂರ್ಣಪ್ರಮಾಣವಾಗಿ ಚರ್ಚಿಸಲ್ಪಟ್ಟವು. ಒಟ್ಟಿನಲ್ಲಿ ಈ ಸೂಚನೆಗಳ ತನ್ನ ನೆಲುಮೆಗೆ ಹೆಚ್ಚು ಹತ್ತಿರವಿರುವುದರಿಂದ ಮತ್ತು ಕೊಲಂಬೊ ರಾಷ್ಟ್ರಗಳು ವಿವಾದ ಪರಿಹಾರದಲ್ಲಿ ಇದಿಚ್ಛೆಯನ್ನು ವ್ಯಕ್ತಪಡಿಸಿದುದರಿಂದ, ಈ ಸಲಹೆಗಳು ವಾಸ್ತವಿಕ ಮಾತುಕತೆಗೆ ಪ್ರಶಸ್ತವನ್ನೊಗುವುದಷ್ಟೇ ಉದ್ದೇಶವಿರುವುದರಿಂದ, ಭಾರತವು ಇವುಗಳನ್ನು ಇದಕ್ಕಿದೆಂತೆ ಸಂಪೂರ್ಣವಾಗಿ ಅಂಗೀಕರಿಸಿತು. ಮತ್ತು ಸಿಂಹಳದ ಪ್ರಧಾನಿಯವರಿಗೆ ಈ ವಿಚಾರವನ್ನು ತಿಳಿಸಲಾಯಿತು.

ಚೀನಾದಿಂದ ಸಮಾಧಿ

ಕೊಲಂಬೊ ಸಮ್ಮೇಳನದ ಸೂಚನೆಗಳ ಅವಶ್ಯಕ ತಕ್ಷಗಳನ್ನೇ ಚೀನಾವು ಕಿವುಡುಗೇಳಿತು; ನಿರಾಕರಿಸಿತು. ಪಶ್ಚಿಮ ವಲಯದಲ್ಲಿ ಉಟಾಗುವ ನಿಸ್ಸೈನ್ಯೀಕೃತ ಪ್ರದೇಶವನ್ನು ಎರಡೂ ಕಡೆಯ ಅಧಿಕಾರಿಗಳಿಂದ ಕೂಡಿದ ನಾಗರಿಕಾಡಳಿತೆಗೊಳಪಡುವುದು ಅದಕ್ಕೆ ಸರಿಬರಲಿಲ್ಲ. ಆದುದರಿಂದಲೇ ಅದನ್ನು ವಿರೋಧಿಸಿತು. ಸಪ್ತಂಬರ ೭, ೧೯೬೬ಕ್ಕೆ ನೊದಲು ತಾವೀ ಪ್ರದೇಶವನ್ನು ಖಾಲಿಸಿಬಿಡೆಂದು ಅವರು ಹೇಳುವ ಏಳು ಸೈನಿಕ ರಾಜೆಗಳನ್ನು ನಡೆಸುವಷ್ಟಧಿಕಾರ ತಮಗೆ ಮಾತ್ರ ಇಸೆಯೆಂದು ಅವರ ಅಂಬೋಣ. ಆದುದರಿಂದ ಈ ನಿಸ್ಸೈನ್ಯೀಕೃತ ಪ್ರದೇಶದಲ್ಲಿ ಯಾವ ಬಗೆಯಲ್ಲಿಯೂ ಭಾರತೀಯರು ಸಂಚರಿಸುವಾರದು ಎಂದು ಅವರು ವಾದಿಸುತ್ತಾರೆ. ಪೂರ್ವವಲಯದಲ್ಲಾದರೂ ಕೊಲಂಬೊ ಸೂಚನೆಗಳಿಗೆ ವಿರೋಧವಾಗಿ, ಭಾರತೀಯ ಸೇನೆಗಳು ಸ್ವೀಕೃತ ಸೀಮೆಯ ಬಳಿಗೆ ಬರಬಾರದೆಂದು ಹೇಳುತ್ತಾರೆ. ಈ ವಾದಗಳಿಂದಾಗಿ ಚೀನೀಯರು ತಳೆದ ನಿಲುಮೆಯು ಕೊಲಂಬೊ ಸಮ್ಮೇಳನ ರಾಷ್ಟ್ರಗಳ ಸೂಚನೆಗಳನ್ನು ನಿರಾಕರಿಸಿದ ಮತ್ತು ಒಂದು ಪರಿಹಾರಕ್ಕೆ ಬರುವಂತೆ ಮಾಡುವ ಅವುಗಳ ಪ್ರಯತ್ನಗಳನ್ನು ನಿಸ್ಫಲಗೊಳಿಸುವುದಕ್ಕೆ ಕಾರಣವಾಗಿದೆ. ಆದುದರಿಂದ ಚೀನಾವು ಕೊಲಂಬೊ ರಾಷ್ಟ್ರಗಳ ಸೂಚನೆಯನ್ನು ಸಮರ್ಥಿಸಿದ.

ಚೀನಾಕ್ಕೊಂದು ಕರೆ

ಚೀನಕ್ಕೆ ಶಾಂತಯುತ ವಿಧಾನಗಳಲ್ಲಿ ವಿಶ್ವಾಸವಿರುವುದಾದರೆ, ಮತ್ತು ಭಾರತದೊಡನೆ ನೇರ ಮಾತುಕತೆ ನಡೆಯುವ ಇರಾದೆಯಿರುವುದಾದರೆ, ಸಂಧಾನದ ಮಾರ್ಗವಿಂದಿಗೂ ಅದಕ್ಕೆ ತೆರೆದಿದೆ. ಅದು ಭಾರತದಂತೆಯೇ ಕೊಲಂಬೊ ಸಲಹೆಗಳನ್ನೂ ಅವುಗಳ ಸ್ಪಷ್ಟೀಕರಣಗಳನ್ನೂ ಇದ್ದ ಕ್ಕಿದ್ದಂತೆ ಒಪ್ಪಿಕೊಂಡು, ಶಾಂತಿಯಲ್ಲಿ ತನಗಿರುವ ಕಳಕಳಿಯನ್ನು ವ್ಯಕ್ತಪಡಿಸಲಿ.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 10 ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ.8/-

P. Devee & Co. (N. J.) Calcutta—40

REGD. No. B. G. 176
LICENCE No. 31
Licensed to Post without Prepayment

ರಾಜ್ಯ ಸರಕಾರದ ಹಾಸ್ಯಾಸ್ಪದ ನಿಲುಮೆ

(ನಿನ್ನೆ ಪುಟದಿಂದ)

ಲ್ಲೂ ದೂರದ, ಹಳ್ಳಿಯ ಅಭ್ಯರ್ಥಿಗೆ, ಸ ರ್ವಸಾಮಾನ್ಯ. ಇಷ್ಟೊಂದು ಅಲ್ಪಾವಧಿ ಯನ್ನಿಟ್ಟುಕೊಂಡು, ಅನ್ಯವಸ್ಥೆಗಳಿಗೆ ಎ ಡೆನೂಡಿ ಕೊಡುವುದರ ಹಿಂದೆಯೂ ರಹ ಸ್ಯವಡಗಿರಬಹುದೆ? ಇದರಿಂದ ಅಭ್ಯರ್ಥಿ ಗಳಿಗೆ ಆಗುವ ಅನೌಕರ್ಯಗಳ ಪರಿವೆ ಯನ್ನು ಸರಕಾರ ಮಾಡಿಕೊಳ್ಳಬಾರದೆ? ಇದು ಶೋಭನೀಯವೇ?

ಇಷ್ಟೊಂದು ತಡವಾಗಿ ಪ್ರಸವಿಸುವು ದು ಮೂಸಿಕವನ್ನಾದರೆ ಇದರಿಂದ ಯಾರಿ ಗೆ ತಾನೇ ಹಿತ? ಜನತೆಗಾಗಿರುವ ಜನ ತಾ ಸರಕಾರ ಜನಹಿತವನ್ನು ಬಯಸದೆ ಜನಾಹಿತದಲ್ಲೇ ಆಸಕ್ತವಾಗುವುದು ಯಾ ವ ನ್ಯಾಯ? ಅತೀವ ಪ್ರಯಾಸವಟ್ಟು ನಿ ಯಮಿತ ಸಮಯಮೊಳಗೆ ಅಪೇಕ್ಷಿಪ ಪ ತ್ರಗಳನ್ನು ಕಳಿಸಿಬರಲಾಗದೂ ಇಂಟ ರ್ ವ್ಯೂ ನೋಟೀಸು ಮತ್ತೆ ಬರಬೇಕು. ಇಂಟರ್ ವ್ಯೂ ಮುಗಿಸಿ ಮೇಲೆಯೇ ನೋ ಟೀಸು ಕೈ ಸೇರಿದ ನಿದರ್ಶನಗಳು ಸಾಕ ಷ್ಟಿರುತ್ತವೆ. ಇದು ಮುಗಿದ ಮೇಲಾದ ರೂ ಆಯಲ್ಪಟ್ಟ ಅಭ್ಯರ್ಥಿಗಳ ಯಾದಿ ಪ್ರಕಟನಾಗುವುದಕ್ಕೆ ಮತ್ತೆ ಹಲವು ದಿ ನಗಳು ಹಿಡಿಯುತ್ತವೆ. ಇನ್ನೆಲ್ಲ ಮುಗಿದು ಕಾಲೇಜು ತರಂಭವಾಗುವಾಗ, ಖಂಡಿತ ಕ್ಕೂ ಅಗಸ್ತ ತಿಂಗಳು ಕಾಲಿರಿಸಿಯೇ ತೀ ರುತ್ತದೆ. ಇವೆಲ್ಲವೂ ಆಗ ಬೇಕಾದುದೆಂ ದು ಸರಕಾರಕ್ಕೆ ಮೊದಲೇ ಗೊತ್ತಿರುತ್ತ ದೆ. ಆದರ ನಿಲುಂಬ ನೀತಿಯಿಂದ ಪ್ರವೇ ಶ ಪಡೆಯಲಾರದೆ ಅಭ್ಯರ್ಥಿಯು ತನ್ನ ಶಿಕ್ಷಣವನ್ನು ವರ್ತಾವ ಕೋರ್ಸಿಗಾದರೂ ಸೇರಿಕೊಂಡು ಮುಂದುವರಿಸಲು ಬ ಹುಧಾ ಅಸಮರ್ಥನಾಗುತ್ತಾನೆ. ಅತನ ಆಯುಷ್ಯವನ್ನು ದಂಡಪಡಿ, ತನ್ಮೂಲ ಕ ವೈಯಕ್ತಿಕ ಹಾಗೂ ರಾಷ್ಟ್ರೀಯ ನ ಷ್ಟಕ್ಕೆ ಜನತಾ ಸರಕಾರ ಕಾರಣವಾಗು ವುದು ಶೋಭನೀಯವೆ?

ಖಾಸಗಿ ಸಂಸ್ಥೆಗಳ ಮಾದರಿ

ಖಾಸಗಿ ತಾಂತ್ರಿಕ ಶಿಕ್ಷಣಾಲಯಗಳ ನೀತಿ-ಕಾರ್ಯಕ್ರಮವನ್ನು ಸರಕಾರ ತಿಳಿದುಕೊಳ್ಳಬೇಕು. ತನಗೆ ಗೊತ್ತಿಲ್ಲದೆ, ತನ್ನ ಮನಸ್ಸಿಗೆ ನಾಟದ ವಿಚಾರಗಳನ್ನು ಪರ ರಿಂದ ತಿಳಿದುಕೊಳ್ಳಲು ಸರಕಾರ ನಾಚಿಕೆ ಪಡಬೇಕಾಗಿಲ್ಲ. ಖಾಸಗಿ ಕಾಲೇಜುಗಳು ತಮ್ಮ ನೀತಿಯನ್ನು ಸಾಕಷ್ಟು ಪೂರ್ವ ದಲ್ಲಿಯೇ ರೂಪಿಸಿ ಪ್ರಸಿದ್ಧಿಗೊತ್ತವೆ. ಯಾ ವ ಅಭ್ಯರ್ಥಿಗೂ ಅನ್ಯಾಯವಾಗದಂತೆ ಎ ಚ್ಚರಿಕೆ ವಹಿಸುತ್ತಿವೆ. ಅದಷ್ಟು ಬೇಗನೇ ಪಾಠ ಪ್ರವಚನಕ್ಕೆ ತೊಡಗುತ್ತವೆ. ಖಾ ಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥ್ಯಾಸದ ಮಟ್ಟವು ಉನ್ನತವಾಗಿರುವುದಕ್ಕೆ ಅಲ್ಲಿನ ಶಿಕ್ಷಕರಂತೆಯೇ ಅಡಳಿತದವರೂ ಕಾರಣ ರಾಗಿದ್ದಾರೆ. ಅವರೂ ಸರಕಾರದಂತೆ ವಿ ಲಂಬ—ಅವ್ಯವಸ್ಥೆಯ ಜಾಡಿನಲ್ಲಿ ಬದ್ಧ ರೆಂದರೆ, ಮತ್ತೆ ಯಾರನ್ನು ಕೇಳಬೇಕು?

ಸರಕಾರದ ಕರ್ತವ್ಯ

ಆದುದರಿಂದ, ಸರಕಾರವು ಈ ಸಂಬಂ ಧದಲ್ಲಿ ತೀವ್ರ ಆಸಕ್ತಿ ತಳೆಯಬೇಕಾಗು ತ್ತದೆ. ಈ ವಿಷಯವನ್ನು ಹಲವಾರು ಬಾರಿ ಅದರ ಗಮನಕ್ಕೆ ತರಲಾಗಿದ್ದರೂ ಅದು, ವರ್ಷಂ ಪ್ರತಿ ಪಾಲಿಸಿಯನ್ನೇ ಪಾಲಿಸಿ, ತನ್ನ ರಕ್ತಗತವಾಗಿ ಬಂದ ಜಾಡ್ಯವನ್ನು ಬಿಟ್ಟು ಗೊಡದೆ ಅಕ್ಷಮ್ಯ ಅಪರಾಧ ಮಾಡುತ್ತಿ ದೆ. ಪ್ರತಿ ವರ್ಷ ಮೇ ತಿಂಗಳೊಳಗೆ ಸರ ಕಾರವು ಈ ಸಂಬಂಧದ ಪ್ರಾಸ್ಪೆಕ್ಟಸ್ ಸಿ ದ್ಧಪಡಿಸಿ, ಪ್ರವೇಶಾರ್ಥಿಗಳಿಂದ ಜೂನ್ ೧೫-೧೫ರ ಒಳಗೆ ಅಪೇಕ್ಷಾ ಪತ್ರಗಳನ್ನು ತರಿಸಿಕೊಳ್ಳಬೇಕು. ಜೂನ್ ಕೊನೆಯ ಒಳಗೆ ಪೂರ್ವ ಭೇಟಿಯನ್ನು ಮುಗಿಸಿ, ಒಂದೆರಡು ದಿನಗಳಲ್ಲಿಯೇ ಆಯ್ಕೆಗೊಂಡ ವರ ಹೆಸರನ್ನು ಪ್ರಕಟಿಸಬೇಕು. ಅತಿ ತಡ ವೆಂದರೆ, ಜುಲೈ ೧೫ರ ಒಳಗಾದರೂ ವಿ ದ್ಯಾ ಪ್ರವಚನಕ್ಕೆ ತೊಡಗುವಂತೆ ಏರ್ಪಾ ಡು ಮಾಡಬೇಕು. ಸರಕಾರ ಮನಸ್ಸುಮಾ ಡಿದರೆ, ಹೀಗೆ ಕಾರ್ಯವೆಸಗುವುದು ಕಷ್ಟ ವಾಗದು. ಇವೆಲ್ಲ ವಿವರಗಳನ್ನು ಕೂಲಂ ಕುಷವಾಗಿ ಪ್ರಾಸ್ಪೆಕ್ಟಸ್‌ನಲ್ಲಿಯೇ ಸೂಚಿ ಸಿದರೆ, ಪ್ರತ್ಯೇಕ ಆರ್ಡರ್ ಕೊಡಬೇಕಾ ದ ಆಗತ್ಯವೂ ಉಳಿಯುಲಾರದು. ಇದರಿಂ ದ ನಿರಾಶರಾದ ವಿದ್ಯಾರ್ಥಿಗಳು ಮತ್ತಾ ವುದಾದರೂ ದಾರಿ ಹಿಡಿಯುಲು ಅನುಕೂ ಲವಾಗುವುದು.

ಇನ್ನು ಜಿಲ್ಲಾವಾರಾಗಿ ಸ್ಥಾನಗಳನ್ನು ಹಂಚುವ ಯೋಜನೆಯ ಕುರಿತು ಒಂದು ಮಾತು. ಯೋಗ್ಯತೆಯನ್ನಾಗಲೀ, ಹಿಂದು ಳಿಯುವಿಕೆಯನ್ನಾಗಲೀ ಪ್ರಾದೇಶಿಕವಾಗಿ ಹಂಚುವ ರಾಜ್ಯ ಸರಕಾರದ ಈ ಘೋರ ಣೆ ಯು ಸಮಂಜಸವೆ? ಯಾ ರ್ಯಾ ರದೋ ಹಿತಸಾಧನೆಗೆಂದು ಯಾರ್ಯಾ ರನ್ನೋ ಹಿಂದೆ ತಳ್ಳುವ ಕಪಟ ಕೃತ್ಯವಿ ದು. ಕಟ್ಟುವಾದರೂ ಸತ್ಯವಾದ ಈ ಯೆಲ್ಲ ವಿಚಾರವನ್ನು ಜನಹಿತವೂಡಬೇ ಕಾದ ಜನತಾ ಸರಕಾರ ಜನಹಿತಕ್ಕಾಗಿ ಪರ್ಯಾಲೋಚಿಸಿ, ಇರುಳು ಕಂಡ ಬಾವಿ ಗೆ ಹಗಲು ಬೀಳಬಾರದು.

—ಗೋರಾ.

ಶ್ರೀ ಮಂಜುನಾಥಯ್ಯ ಸನ್ಮಾನೋತ್ಸವ

ಕಲಾಭಿಮಾನಿಗಳಲ್ಲಿ ಮನವಿ

ನಮ್ಮ ಜಿಲ್ಲೆಯ ಶ್ರೇಷ್ಠ ಸಂಗೀತಜ್ಞರೂ, ಗಣ್ಯ ಪಟೇಲುವಾದಕರೂ ಆಗಿರು ವ ಸಂಗೀತ ವಿದ್ವಾನ್ ಶ್ರೀ ಕೆ. ಮಂಜು ನಾಥಯ್ಯನವರು ಇದೇ ವರ್ಷದ ಅಗೋ ಸ್ತು ತಿಂಗಳ ಮೊದಲ ವಾರದಲ್ಲಿ 76 ವ ರ್ಷಗಳ ತಮ್ಮ ಫಲದಾಯಕ ಜೀವನದ ಭಾಗವನ್ನು ಕಳೆದು ಇನ್ನೊಂದು ಹೊಸ ವರ್ಷಕ್ಕೆ ಪದಾರ್ಪಣೆ ಮಾಡುವರು.

ತಮ್ಮ ತಾರುಣ್ಯದ ಹೊಸ್ತಿಲಲ್ಲಿ, ಮೈ ಸೂರಿಗೆ ಹೋಗಿ, ಪ್ರತಿಭಾವಂತ ಸಂಗೀತ ವಿದ್ವಾಂಸರಾಗಿದ್ದ ದಿ. ಬಿಡಾರಂ ಕೃಷ್ಣ ಪ್ಪನವರಲ್ಲಿ ಪಿಟೀಲು ವಾದನದಲ್ಲಿ ವ್ಯಾ ಸಂಗಕ್ಕೆ ತೊಡಗಿದ ಶ್ರೀ ಮಂಜುನಾಥ ಯ್ಯನವರು, ಅತಿಯೂಡದ ಶ್ರದ್ಧೆಯಿಂದಲೂ ವಿಶೇಷ ಪರಿಶ್ರಮದಿಂದಲೂ ಸಾಧನೆಯ ನ್ನು ಕೈಕೊಂಡು, ಗುರುವಿನಲ್ಲಿ ಪಡೆದ ವಿ ದ್ಯೆಗೆ ಭದ್ರವಾದ ಳಪವಾಯ ಜಾಕಿಕೊಂ ಡರು. ಒಂಭತ್ತು ವರ್ಷಗಳ ತಮ್ಮ ಶ್ರಮ ಬದ್ಧ ಸಾಧಕ ಜೀವನವನ್ನು ಮೈಸೂರಿ ನಲ್ಲಿ ಮುಗಿಸಿ ಊರುಪಿಗೆ ಬಂದು ನೆಲೆಸಿ ದ ದಿನದಿಂದ ಇಂದಿನ ವರೆಗೆ ಶ್ರೀ ಮಂ ಜುನಾಥಯ್ಯನವರು ಸ್ಥಳೀಯ ಹಾಗೂ ಆಸುಪಾಸಿನ ಊರುಗಳ ಸಂಗೀತ ಜಿಜ್ಞಾ ಸುಗಳಿಗೆ ಶಿಕ್ಷಣ ನೀಡುತ್ತಾ ಬಂದಿದ್ದಾರೆ. ಅವರಲ್ಲಿ ತರಬೇತಿಗೊಂಡ ವಿದ್ಯಾರ್ಥಿಗಳ ಲ್ಲಿ ಬಹು ಮಂದಿ ಇಂದು ರಾಜ್ಯದ ನಾನಾ ಭಾಗಗಳಲ್ಲಿ ಸಂಗೀತ ಶಿಕ್ಷಕರಾಗಿಯೋ, ಸಂಗೀತಗಾರರಾಗಿಯೋ ದುಡಿಯುತ್ತಿ ದ್ದಾರೆ. ಶ್ರೀ ಮಂಜುನಾಥಯ್ಯನವರು ತ ಮ್ಮ ಸ್ವಂತಕ್ಕಾಗಿ ಸಂಪತ್ತನ್ನು ಕೂಡಿತ್ತಾ ದರೂ ಲೇಖರಿಸದಿದ್ದರೂ ನಾಡಿನ ಒಳಿತ ಗಾಗಿ ಅವರು ಯೋಗ್ಯ ಶಿಷ್ಯ ವೃಂದವನ್ನು ಸಿದ್ಧಗೊಳಿಸಿ ಅದನ್ನೇ ತಮ್ಮ ಸಂಪತ್ತನ್ನಾಗಿ ಬಗೆದಿದ್ದಾರೆ. ತ ಮ್ಮ ಈ ಇಳವಯಸ್ಸಿನಲ್ಲೂ ಅವರು ಹಿಂದಿನ ಹುಮ್ಮಸ್ಸಿನಲ್ಲೇ ವಿದ್ಯಾರ್ಥಿಗಳಿ ಗೆ ಪಾಠ ಹೇಳಿಕೊಡುತ್ತಿದ್ದು ಕನ್ಯಾಲಕ ನಾಡಿನಲ್ಲಿ ಸಂಗೀತ ಶಿಕ್ಷಣ ಪ್ರಸಾರ ಕಾ ರ್ಯವನ್ನೆಸಗುತ್ತಿದ್ದಾರೆ.

ಶ್ರೀ ಮಂಜುನಾಥಯ್ಯನವರು ನಮ್ಮ ಜಿಲ್ಲೆಯ ಪಾಲಿಗೆ—ಅದರಲ್ಲೂ ಉಡುಪಿಯ ಪಾಲಿಗೆ—ಒಂದು ಅಮೂಲ್ಯ ನಿಧಿ ಯೆಂದರೆ ಅತಿಶಯೋಕ್ತಿಯಾಗದು. ತಮ್ಮಲ್ಲಿ ಅ ಪಾರ ವಿದ್ವತ್ತು, ಪ್ರತಿಭೆ ಮತ್ತು ಯೋ ಗ್ಯತೆಗಳಿದ್ದೂ, ಸಂಗೀತಕಲೆಗೆ ವಿಶೇಷ ಪುರಸ್ಕಾರವಿರುವ ಹೊರ ಪ್ರಾಂತಗಳಿಗೆ ಹೋಗದೆ ಉಡುಪಿಯನ್ನೇ ತಮ್ಮ ಕಾ ರ್ಯಕ್ಷೇತ್ರವನ್ನಾಗಿ ಆರಿಸಿ, ಇಲ್ಲಿ ಸಂಗೀ ತಗಾರರನ್ನು ಸಿದ್ಧಗೊಳಿಸಿದುದಕ್ಕಾಗಿ ಕ ಲಾಭಿಮಾನಿಗಳಾದ ಉಡುಪಿಯ ನಾಗರಿ ಕರು ಅವರಿಗೆ ಋಣಿಯಾಗಿರಬೇಕು. ಇಂ ತಹ ಮೇಧಾವಿ ಸಂಗೀತಕಾರರು ಇಷ್ಟೊಂದು ಕಾಲ ನಮ್ಮ ನಡುವಿದ್ದರೂ ಉಡುಪಿಯ ಪುರಜನರಿಂದ ಅವರಿಗೆ ಯ ಥಾನುಚಿತವಾದ ಸಾರ್ವಜನಿಕ ಗೌರವ ವಾಗಲಿ, ಪುರಸ್ಕಾರವಾಗಲಿ ದೊರಕದ್ದನ್ನು ಗಂಡು ಉಡುಪಿಯ ಸಂಗೀತ ಸಭೆ ಯು ಬಹಿಗ ಪುರಜನರ ಹಾಗೂ ಜಿಲ್ಲೆ ಯ ಇತರ ಭಾಗಗಳ ಕಲಾಭಿಮಾನಿಗಳ ಸಹಕಾರ ಮತ್ತು ನೆರವಿನಿಂದ ಶ್ರೀ ಮಂ ಜುನಾಥಯ್ಯನವರನ್ನು ಗೌರವಿಸಲು ಮುಂದೆ ಬಂದಿದೆ.

ಇದೇ ಅಗೋಸ್ತು ತಿಂಗಳ ಮೊದಲ ವಾರದಲ್ಲಿ ಅವರ 76ನೆಯ ಜನ್ಮದಿನ ದಂದು ಅವರಿಗೆ ನಿಧಿಯೊಂದನ್ನು ಸಾರ್ವ ಜನಿಕರ ನೆರವಿನಿಂದ ಅರ್ಪಿಸಬೇಕೆಂದು ಸಂಗೀತ ಸಭೆಯು ಆಶಿಸುತ್ತಿದೆ. ನಾಡಿನ ಲ್ಲಿ ಕಲಾಭಿವೃದ್ಧಿಗಾಗಿ ತಮ್ಮ ಜೀವಮಾ ನವಿಡೀ ಶ್ರಮಿಸಿದ ಈ ಕಲಾಕಾರರ ಮೇ ಲಿನ ಕೃತಜ್ಞತಾಭಾವದಿಂದ ತಾವು ಉ ದಾರ ಮನಸ್ಸಿನಿಂದ ಧನಸಹಾಯ ನೀಡ ಬೇಕೆಂದು ನಾವೆತಮ್ಮಲ್ಲಿ ಕೋರುತ್ತೇವೆ.

ತಾವು ನಮ್ಮ ಮನವಿಯನ್ನು ಲಕ್ಷಿಸಿ ದಯವಿಟ್ಟು ತಮ್ಮ ಕಾಣಿಕೆಯನ್ನು ಆ ಪೀಸಿ ಕಲಾಸೇವೆಯಲ್ಲಿ ಪಾತ್ರಧಾರಿಗಳಾ ಗುವಿರೆಂಬ ನಂಬಿಕೆ ನಮ್ಮಲ್ಲಿದೆ

ಕೆ. ಕೆ. ಹೆ.,
ಅಧ್ಯಕ್ಷ, ಸಂಗೀತ ಸಭಾ, ಉಡುಪಿ.

ಉಡುಪಿ, 10—6—63.

ಮತ್ತೆರಡು ಶಾಖೆಗಳು . . . .

ಸಿಂಡಿಕೇಟ್ ಬ್ಯಾಂಕಿನ

ವ್ಯಾಪಾರಿಕ್ಷೇತ್ರದ, ಸಾಲುದಾರರು ಮತ್ತು ನೌಕರರು, ಹೆಚ್ಚೆಚ್ಚು ಜನರ ಸೇವೆಗಾಗಿ ಮತ್ತೆರಡು ಶಾಖೆಗಳನ್ನು ತೆರೆದರೆಂದು ತಿಳಿಸಲು ಸಂತೋಷಪಡುತ್ತಾರೆ.

× × × × × × × ×

ಪೆರಂಬೂರು ಶಾಖೆಯು
(ಮದ್ರಾಸು ನಗರ)
ಇದೇ ಜೂನ್ ತಿಂಗಳ 28ನೇ ತಾರೀಕನೆಂದು ತೆರೆಯಲ್ಪಟ್ಟಿತು.

ಪಾತೆರಗಟ್ಟೆ ಶಾಖೆಯು
(ಹೈದರಾಬಾದ್ ನಗರ)
ಇದೇ ಜುಲಾಯಿ ತಿಂಗಳ ತಾ. 1ರಂದು ತೆರೆಯಲ್ಪಟ್ಟಿತು.

ಇಂದು ನಾವು 183 ಶಾಖೆಗಳ ಮೂಲಕ
ನಮ್ಮ ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಸೇವೆಯನ್ನು ನೂಡುತ್ತಿದ್ದೇವೆಂಬ ಸದಾಶಯ ನಮಗಿದೆ.

ಸಿಂಡಿಕೇಟ್ ಬ್ಯಾಂಕ್

ಡಾ| ಟಿ. ಎಸ್. ಎ. ಪೈ,
ಚೆಯರ್‌ಮ್ಯಾನ್.

ಟಿ. ಎ. ಪೈ,
ಮ್ಯಾನೇಜಿಂಗ್ ಡೈರೆಕ್ಟರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸಮಾನ ಸೇವೆ - - - - - ಸರಿಯಾದ ಭದ್ರತೆ.

Edited, Printed & Published by K. H.Shetty. at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 45

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 18—7—1963 ಗುರುವಾರ

13 ನೆ ಪೈಸೆ
ವಾ. ಚಂದಾ ರೂ. ೬.75
ಸಂಪುಟ ೪೨ ಸಂಚಿಕೆ ೪೫

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿ

ಸ್ವರಕ್ಷಣಾಪಥದಲ್ಲಿ

ಮಿತ್ರರಾಷ್ಟ್ರಗಳ ಮೈತ್ರಿಹಸ್ತ

ಮಿತ್ರದ್ರೋಹಿ ಚೀನೀಯರ ನಗ್ನಾಕ್ರಮಣದ ಸಂದರ್ಭಕಾಲದಲ್ಲಿ ದೇಶವನ್ನು ಸಂರಕ್ಷಿಸುವ ಘನೋದ್ದೇಶದಿಂದ ರಾಷ್ಟ್ರಪತಿಗಳು ಇಡೀ ದೇಶದಲ್ಲಿ ಗಂಭೀರ ಪರಿಸ್ಥಿತಿಯನ್ನು ಸಾರಿದರು. ರಕ್ಷಣೆಗಳು ಹೊಡಿದ ಅಥವಾ ಕೂಡಬಹುದಾದ ಕಪಟ ಜಾಲದಿಂದ ರಾಷ್ಟ್ರವು ಪರತಂತ್ರವಾಗದಂತೆ ಎಚ್ಚರವಾಗಿರುವುದೇ ಈ ಘೋಷಣೆಯ ಮೂಲೋದ್ದೇಶ. ಇದೀಗ ಸುಮಾರು ಎಂಟು ತಿಂಗಳ ಬಳಕವೂ ದೇಶದಲ್ಲಿ ಗಂಭೀರ ಪರಿಸ್ಥಿತಿವಶವೆನಿಸಿಲ್ಲವೆಂಬ ಪ್ರಶ್ನೆ ಅಲ್ಲಲ್ಲಿ ಏಳುತ್ತಿವೆ. ತೋರ್ಪಡಿಕೆಯ ಎಚ್ಚರಿಕೆಗಳಿಂದ ಅತ್ಯಧಿಕರ ಮನಸ್ಸಿನಲ್ಲಿ ಭೀಕರ ಭಯಾನಕತೆ ಇಂದು ಇಲ್ಲ. ಹಾಗಿರುವಾಗ, ಈ ಘೋಷಣೆಯನ್ನು ಹಿಂತೆಗೆದುಕೊಳ್ಳಬಾರದೇಕೆ? ಎಂದು ಅವರು ಕೇಳುವುದುಂಟು. ಎಂಟು ತಿಂಗಳಿಗೆ ಮೊದಲೊಮ್ಮೆ "ಗಂಭೀರ ಪರಿಸ್ಥಿತಿಯ"ನ್ನು ಹಿಂತೆಗೆದುಕೊಳ್ಳಲಾಗಿತ್ತೆಂದೂ ಕಿಂವದಂತಿ ಹರಡಿತ್ತು. ಆದರೆ, ಅನುಕೂಲ ವಾತಾವರಣವು ದೇಶದಲ್ಲಿ ಉಂಟಾಗದೆ ಹೊರತು ಅದನ್ನು ತೆಗೆಯಲಾಗದುದಕ್ಕಿದಂತೆ ಅಭಿಪ್ರಾಯವೀಗ ಸುಸ್ಪಷ್ಟವಾಗುತ್ತಿ ಬರುತ್ತಿದೆ. ದೇಶದಲ್ಲಿ ಗಂಡಾಂತರದ ಭಯವೆಂದು ದೂರವಾಗುತ್ತದೆ ಎಂದು ಈಗಲೇ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಕುಹಕಿ ಚೀನೀಯರು ನಮ್ಮ ವಿಶ್ವಾಸ ನೆಲವನ್ನು ಕಾಲೂರಿ ಕೊಂಡಿರುವಾಗ, ನೀಮೆಯ ಬುತ್ತಿಯ ಕಾಲು ಕೆದರಿ ಜಗಳವನ್ನು ಆಹ್ವಾನಿಸುತ್ತಿರುವಾಗ, 'ಸಂಕಟವಿಲ್ಲ'ನೆಂದ. ನೆಮ್ಮದಿಯಿಂದ ಕೂತಿರುವುದಕ್ಕೆ ಸಾಧ್ಯವಿಲ್ಲ. ಎಂದಿನ ವರೆಗೆ ಕೆಂಪು ಚೀನೀಯರು ನೀಮೆಯ ವಿವಾದದ ಬಗ್ಗೆ ಒಂದು ನಿರ್ದಿಷ್ಟ ಒಡಂಬಡಿಕೆಯನ್ನು ಮಾಡಿಕೊಳ್ಳುವುದಿಲ್ಲವೋ ಅಂದಿನ ವರೆಗೆ ಆವರಿಂದ ನಮಗೆ ಕೇಡು ತಪ್ಪಿದ್ದಲ್ಲ. ಇದಕ್ಕೆ ನಾಲ್ಕಾರು ವರ್ಷಕಾಲವೂ ಬೇಕಾಗಬಹುದು. ಆದುದರಿಂದ ಸ್ವದೇಶ ಸ್ವಾತಂತ್ರ್ಯ ರಕ್ಷಣೆಗಾಗಿ, ಅನ್ಯಾಯವನ್ನು ಕೆಚ್ಚೆದೆಯಿಂದ ಎದುರಿಸುವುದಕ್ಕಾಗಿ ಗಂಡಾಂತರದಿಂದ ಬದುಕಾಳುಮಾಡುವುದಕ್ಕಾಗಿ ದೇಶದಲ್ಲಿ ಗಂಭೀರ ಪರಿಸ್ಥಿತಿ ಇನ್ನೂ ಮುಂದುವರಿಯಬೇಕು.

ಪ್ರಶಂಸನೀಯ ಕಾರ್ಯ

ಬಲು ದೂರದ ಎತ್ತರದ ಜನವಸತಿಯಿಲ್ಲದ ಹಿಮಾಲಯದ ಗುಡ್ಡಗಳಲ್ಲಿ ನಡೆದ ಕಾಳಗದ ಉಗ್ರತೆಯು ದೇಶದ ಜನತೆಗೆ ಮನದಟ್ಟಾಗಿದೆ; ಚೀನೀಯರ ಅನ್ಯಾಯದ ಆಕ್ರಮಣವನ್ನು ಎದುರಿಸುವ ಪೃಥ್ವಿ ಸಂಕಲ್ಪವನ್ನು ದೇಶದ ಜನರು ಮೂಡಿದ್ದಾರೆ ಮತ್ತು ಇದಕ್ಕಾಗಿ ಸಾರ್ವಜನಿಕರಲ್ಲಿ ಸಿದ್ಧರಾಗಿದ್ದಾರೆಯೆಂಬುದು ನಿಜವಾದರೆ, ಇಂತಹ ಅಘೋಷಿತ ಸಂಘರ್ಷದಲ್ಲಿ ಗಂಭೀರ ಪರಿಸ್ಥಿತಿಯ ಘೋಷಣೆಯು ಮಹತ್ವದ ಪಾತ್ರ ವಹಿಸಿದೆ. ರಾಜಧಾನಿಯ ಲೆಂಕನ ವರೆಗೂ ಇಂದಿಗೆ ದೇಶ ಎದುರಿಸುತ್ತಿರುವ ಆಪತ್ಪಾಯವು ಒಗ್ಗೆ ಪರಿಜ್ಞಾನ ಮೂಡಿದೆ 'ಏನೋ ವಿಸ್ಮೃತಿ ತನ್ಮಮುಂದೆ ತಾಂಡವವಾಡುತ್ತಿದೆ' ಎಂಬ ಭಾವನೆ ಪ್ರತ್ಯೇಕವಾಗಿರಿಕನಲ್ಲೂ ಉದ್ಭವಿಸಿದೆ. ಇದರಿಂದ, ಪ್ರಜೆಗಳ ಸ್ವಾತಂತ್ರ್ಯದಲ್ಲಿ ಒಂದು ಪುಟ್ಟ ಅಂಶವನ್ನು ಅನಿವಾರ್ಯವಾಗಿ ಆಪಹರಿಸಿ ಗಂಭೀರ ಪರಿಸ್ಥಿತಿಯನ್ನು ಘೋಷಿಸಿರುವುದು ಪತ್ತು ಅದನ್ನಿನ್ನೂ ಮುಂದು ಪರಿಸಿಕೊಂಡು ಬಂದಿರುವುದು ಸರ್ವಥಾ ಪ್ರಶಂಸನೀಯ ಮತ್ತು ಅತ್ಯವಶ್ಯ ಕೂಡ

ಕರ್ತವ್ಯ ಚ್ಯುತಿ ಬೇಡ

ಸಂಧಾನದಲ್ಲಿ ಕಂಪು ಚೀನೀಯರು ಆಸಕ್ತಿ ತಳೆದಿರುವಾಗ, ಭಾರತವು ಅದನ್ನು ಸ್ವೀಕರಿಸಿದೆ, ದೇಶದ ಸಂರಕ್ಷಣಾ ಶಕ್ತಿಯನ್ನು ಹೆಚ್ಚಿಸುವುದರಲ್ಲಿ ಮತ್ತು ಅದಕ್ಕಾಗಿ ಸಂಪನ್ಮೂಲಗಳನ್ನು ಒದಗಿಸಲು ಅಧಿಕ ಕರಭಾರ ಹೇರುವುದರಲ್ಲಿ ತೀವ್ರ ಸಕ್ತಿ ತಳೆದಿದೆ. ಭಾರತ ಸರಕಾರದ ಈ ನೀತಿಯು ಒಂದು ವರ್ಗದ ದೇಶೀಯರಲ್ಲಿ ತುಸು ಅಸಮಾಧಾನಕ್ಕೆ ಕಾರಣವಾಗಿರಲೂಬಹುದು. ಆದರೆ, ತಾವು ತೆರುವ ಕರದ ಪ್ರತಿಯೊಂದು ಭಾಗವೂ ದೇಶವನ್ನ ಆಕ್ರಮಣದಿಂದ ಉಳಿಸಲು ಮತ್ತು ರಾಷ್ಟ್ರವನ್ನು ಪುನಾರಚಿಸಲು ನೆವಾಗುವುದೆಂಬುದನ್ನು ಇವರು ವಿಸ್ಮರಿಸಬಾರದು. "ದೇಶವೊಂದುಳಿಯೆ ಉಳಿವವರಾರು? ದೇಶವೊಂದಳಿಯೆ ಉಳಿವವರಾರು?" ಎಂಬ ತತ್ವದ ಯಥಾರ್ಥತೆಯನ್ನವರು ಅವಶ್ಯ ಮನನಮಾಡಿಕೊಳ್ಳಬೇಕು. ದೇಶ ರಕ್ಷಣೆಯ ಮಹಾಕಾರ್ಯದಲ್ಲಿ ತನು ಮನಧನಗಳಿಂದ ಸಹಾಯ ಮಾಡುವುದು ಪ್ರತಿ ದೇಶ ಪ್ರಜೆಯ ಕರ್ತವ್ಯ. ಈ ಪವಿತ್ರ ಕರ್ತವ್ಯದಿಂದ ಯಾವ ಪ್ರಜೆಯೂ ಚ್ಯುತನಾಗಿಬಾರದು.

ಹಿಂಜರಿತ ಮಹತ್ವಾಕಾಂಕ್ಷೆ

ಏಕಪಕ್ಷೀಯವಾಗಿ ಸಮರವಿರಾಮವನ್ನು ಇದೀ ಸಂಧಾನದ ಸೂತ್ರಜಾಲವನ್ನು ಹರಡಿ ಕುದರಲು ನವ್ಯನ್ನು ಸಿಕ್ಕೆ ಕೊಳ್ಳಿಸುವಂತೆ ಮಾಡುವಲ್ಲಿ ಚೀನೀಯರು ಯಶಸ್ವಿಯಾಗಿದ್ದಾರೆ. ಅವರಿಗೆ ನಿಜಕ್ಕೂ ಸಂಧಾನವು ಬೇಕಾಗಿದ್ದರೆ, ಮತ್ರ ರಾದ ಕೊಲಂಬೋ ರಾಷ್ಟ್ರಗಳು ಸೂಡಿದ ಸಲಹೆಗಳನ್ನು ಸಂಪೂರ್ಣವಾಗಿ ಒಪ್ಪಿ ಕೊಳ್ಳಬಾರದೇಕೆ? ಅನಾಕ್ರಮಣ ಒಡಂಬಡಿಕೆಯನ್ನು ಮೊದಲೇ ಮಾಡಿಕೊಂಡಿದ್ದೂ ಅನಿರೀಕ್ಷಿತವಾಗಿ ಬ್ರಹದಾಕ್ರಮಣವೆಸಗಿದವರೇತಕ್ಕೆ? ಕೇವಲ ಲಹಿನೂಲಯದ ನಿರ್ಜನ ಹಿಮಾಚ್ಛಾದಿತ ನೆಲಕ್ಕಾಗಿಯೇ ಅನಿರೀತಪಡುವುದಿಲ್ಲವೆಂಬ ಸಕ್ಕೆ ಮನದಟ್ಟಾದರೆ? ರಕ್ತ-ಚೀನಾ ವಿವಾದ-ಸಾತಭೇದಗಳು ಈ ದೆಸೆಯಲ್ಲಿ ಪೆಚ್ಚಿನ ಬೇಕು ಜೆಕ್ಲೊವಿಂತಿವೆ. ತಾನು ಎಲ್ಲರಿಗಿಂತ ಎತ್ತರಕ್ಕೆ ತಲೆಯೆತ್ತಬೇಕೆಂಬ ಹಿಟ್ಲರನ ಮಹತ್ವಾಕಾಂಕ್ಷೆಯಿಂದು ಕೆಂಪು ಚೀನೀಯರಲ್ಲಿ ಮನೆಮಾಡಿರೆ ಇದಕ್ಕೆ ಸೈಷ್ಟಿಯ ವಾಸಿಸು ಕಳಸಮಿಟ್ಟಿದೆ. ತನ್ನ ಸ್ವಪ್ರಜೆಗಳಿಗೆ ಅನ್ನ ನೀಡಲು ಅಸಮರ್ಥನಾದ ಕೆಂಪು ಸರಕಾರವೆಂದು ಜನಗವ ನನ್ನನ್ನು ಇತಂತ್ರ ಪರಡಿಸಲು ಇಂತಹ ಕುತಂತ್ರ ಹೂಡಿದೆ. ಚೀನೀಯ ಆಕ್ರಮಣದ ಉದ್ದೇಶ ಮುಖ್ಯವಾಗಿ ಇವೇ ಇರಬೇಕು.

ಮಿತ್ರರ ನೆರವು

ಭಾರತವು ತನ್ನ ಸೇನಾಪಡೆಗಳನ್ನು ಬಲಿಷ್ಠಗೊಳಿಸುವಲ್ಲಿ ಇಂದು ತತ್ಪರವಾಗಿದೆ. ಸ್ವರಕ್ಷಣೆಗಾಗಿ ಇದು ಅತ್ಯಗತ್ಯ; ಅನಿವಾರ್ಯ. ಈ ನಾಭಿಸಿಕ್ಕಿ ನಮ್ಮ ಮಿತ್ರರಾಷ್ಟ್ರಗಳು ನಾನಾ ವಿಧವಾಗಿ ನೆರವನ್ನು ಲು ಮುಂದೆ ಬಂದಿದ್ದಾರೆ. ಇವುಗಳಲ್ಲಿ ಅಮೆರಿಕೆ ಮತ್ತು ಬ್ರಿಟನ್‌ಗಳ ವಾಕ್ಸ ಅತಿ ಹಿರಿಯ. ಅವು ನಮ್ಮ ಸೈನ್ಯವನ್ನು ಅಧುನಿಕ ರೀತಿಯ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತಗೊಳಿಸಲು ಸಹಾಯ ನೀಡಲು ಸಿದ್ಧಹಸ್ತವಾಗಿದೆ. ಇದರ ಕೂಡೆ ಭಾರತಕ್ಕೆ ವಿಮಾನ ದಾಳಿಯಿಂದ ರಕ್ಷಣೆ ಪಡೆಯುವ ಯೋಜನೆಯೊಂದಕ್ಕೆ ಅಂತಿಮ ರೂಪವನ್ನು ಕೊಡುತ್ತಿವೆ. ಇಂದು ಚೀನೀಯರು ಉತ್ತರದ ದುರ್ಗಮ ಗಡಿಗಳಾಚೆ ತಮ್ಮ ಸೈನ್ಯವನ್ನು ಶೇಕರಿಸಿ, ಭಾರಿ ದಾಳಿಯ ತಯಾರಿ ಮಾಡಿದ್ದಾರೆ. ಅಧವಾ ಬಾರತವನ್ನು ಹೆದರಿಸಿ, ಅದು ತಮ್ಮ ಮಾಡಗಳಿಗೆ ಶರಣಾರ್ಥಿಯಾಗಬೆಂಬ ತೀವ್ರ ಆಶೆಯಿಂದ ಬೆದರಿಕೆಯನ್ನು ಹೇರುವ ಪ್ರಯತ್ನಗಳನ್ನು ಮಾಡಿದ್ದಾರೆ ಹಾಗಿರುವಾಗ, ನಮಗೆ ವಿಮಾನ ಧಾಳಿಯ ಭಯವಿಲ್ಲ; ಮತ್ತು ಇದರಿಂದ ಪ್ರತಿರಕ್ಷಣೆಯು ಯೋಜನೆಗೂ ಆದರೂ ಏಕೆ? ಎಂದು ಯಾರಾದರೂ ಪ್ರಶ್ನಿಸಬಹುದು.

ಲತ್ತೆ ಕೊಡುವ ಕತ್ತೆ

ಒಂದು ಕಾಲದಲ್ಲಿ ಸಹೋದರೆ ರಷ್ಯವೆಂದು ಭಾರತವನ್ನು ಮೆಚ್ಚಿಸಿ, ಮತ್ತೆ ಹಿಂದಿನಿಂದ ಇರಿದ ಮಾಹಾಣ ಹೃದಯಿ ಚೀನೀಯರು ಯಾವ ಕಾಲದಲ್ಲಿ ಏನನ್ನು ಮಾಡಿಯಾರು ಎಂದು ಅನ್ನಿವಂತಿಲ್ಲ. ಇಂದು ಹಿಂದೆ ಇದ್ದಂತೆ ಆಕ್ರಮಣದ ಭೀತಿ ಜೀವ್ರವಾಗಿರುವುದಿಲ್ಲ; ಆದರೆ, ಮೊನ್ನಿನ ಭಾರಿ ಆಕ್ರಮಣದ ವೇಳೆ ಚೀನಿಯ ಪಡೆಗಳು ವಿಮಾನ ಧಾಳಿಯನ್ನೆದುರಿಸುವ ಸಿದ್ಧತೆಯನ್ನೂ ಮಾಡಿದ್ದರು ಎಂಬಾಗ ಅವರೇನು ಮಾಡಿಯಾರು ಎಂದು ಕೇಳುವುದಕ್ಕಿಂತ ಅವರೇನನ್ನು ಮಾಡಲಾರರೆಂದು ಪ್ರಶ್ನಿಸುವುದೇ ಸಕ್ತವಾಗಿತ್ತು. ಚೀನೀಯರು ವಿಮಾನ ದಾಳಿ ಮಾಡಲಿ, ಮಾಡದಿರಲಿ, ನಾವು ಮಾತ್ರ ಅದರಿಂದ ಸಜ್ಜಿತರಾಗಿಯೇ ಇರಬೇಕು. ರಂಧ್ರಣೆಯು ಕ್ರಮವಮ ನನಗೆ ಬೆಂಕಿ ಬಿದ್ದ ಒಳಕ ನೀರಿಗಾಗಿ ಅಲೆದಾಡುವುದಕ್ಕಿಂತ, ಮೊದಲೇ ನೀರನ್ನು ಶೇಕರಿಸಿಡುವುದು (ನಿಜಾ ಪ್ರಮಾಣವಲ್ಲದಿದ್ದರೂ) ಉಚಿತವೆನಿಸುವುದು ಏಕೆಂದರೆ, ಕಳೆದ ಆಕ್ರಮಣದಲ್ಲಿ ಚೀನೀಯರು ವೈಮಾನಿಕ ದಾಳಿ ಮಾಡಿಯಾರೆಂದು ಊರು ತಾನೇ ಊಹಿಸಿದ್ದರು? ವಿನ್ಯಾಸಘಾತಕಗಳನ್ನು ಯಾವ ಕಾಲಕ್ಕೂ ಯಾರೂ ನಂಬಲಾರರು.

ಮುಖ್ಯವಿರಿಯ ದ್ವೇಷ

ಚೀನಾದಿಂದು ಭಾರತದ ಮೇಲೆ ದ್ವೇಷ ಜ್ವಾಲೆಯನ್ನೇ ಉಗುಳುತ್ತಿದೆ. ವಿಶ್ವ ನಲ್ಲಿ—ವಿಶೇಷವಾಗಿ ಭಾರತದ ಘನತೆ ದಿನದಿಂದ ದಿನಕ್ಕೆ ಎತ್ತರಿಬುತ್ತ ಬಂದುದು ತನಗಾದ ಅಪಮಾನವೆಂದು ತಿಳಿದುಕೊಂಡುದೋ ಏನು, ತನ್ನ ಭಾರಿ ಪ್ರಮಾಣದ ಸೈನಿಕಾಕ್ರಮಣದಿಂದಲೂ ವಿಜಯವಿದೆ ಭಾರತವು ದೃಢ ಸಂಕಲ್ಪಿಯೂ ಮೃತ್ಯುಂಜಯವೆಂದು ಜಾಗತಿಕ ಜನಾಭಿಪ್ರಾಯವು ತನಗೆ ಎರವಾಗಿ, ಭಾರತದ ಪರವಾಗಿ ರೂಪಿತವಾಗುತ್ತ ನಡೆದಿರುವುದು ನೂರು—ತನ್ನೊಳಕಜನಿಸಿದ ದ್ವೇಷ-ತ್ವೇಷಗಳಿಂದ ಬಟ್ಟಿಗಾಣದ ಚೀನೀಯರು ಮದೋನ್ಮತ್ತರಾಗಿ ಮರಳಿ ಆಕ್ರಮಣವನ್ನು ಬಗಿಗೊಳಿಸಬಹುದು; ವಿಮಾನ ಧಾಳಿಯನ್ನು ಮಾಡಲಾರರೆಂದು ಎತ್ತಿಯ ವಿಶ್ವಾಸ?

ಧಕ್ಕೆಯಿಲ್ಲದ ನೆರವು

ಭಾರತವು ಪರರಿಂದ ನೆರವನ್ನು ಬಯಸುವುದು; ಆದರೆ, ತನ್ನ ಘನತೆ ಮತ್ತು ಸ್ವಾತಂತ್ರ್ಯಗಳಿಗೆ ಧಕ್ಕೆಯಾಗಲು, ತನ್ನ ಸಾರ್ವಭೌಮತೆಯನ್ನು ಕಳೆದುಕೊಳ್ಳಲು ಇದು ಸಿದ್ಧವಿಲ್ಲ. ತನ್ನ ಈ ನೀತಿಗನುಗುಣವಾದ ಸಹಾಯವೆಲ್ಲಿಂದ ಬರುವುದಾದರೂ ಅದನ್ನು ಮುಕ್ತಹಸ್ತದಿಂದ ಸ್ವಾಗತಿಸುತ್ತದೆ. ಇಂದು ಅಮೆರಿಕೆ ಮತ್ತು ಬ್ರಿಟನ್ನುಗಳು ನೀಡುವ ಸೈನಿಕ ಸಹಾಯವಿದಕ್ಕೆ

(ಬಂಪ ಪುಟ ನೋಡಿರಿ)

ಕೆಂಪು ಚೀನಾದಲ್ಲಿ

ಬುದ್ಧಿಜೀವಿಗಳ ದುರಂತ ಚಿತ್ರ

ಲೇಖಾಂಕ ೨

ಕಮ್ಯೂನಿಸ್ಟ್ ಸಾಹಿತ್ಯ ಬಯಲಿನಲ್ಲಿ ಹುಲುಸಾಗಿ ಬೆಳೆ ಬರಲಿಲ್ಲವೆಂಬುದನ್ನು ಪಕ್ಷ ಒಪ್ಪಿಕೊಂಡಾಗ್ಯೂ, ಕಮ್ಯೂನಿಸ್ಟ್ ಪಕ್ಷದ ಸಾಹಿತ್ಯ ಹಾಗೂ ಕಲೆಯ ದೃಷ್ಟಿಯನ್ನು ರೀತಿಸಿ ಹು-ಪೆಂಗ್ ೧೯೫೫ರಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. 'ಪಂಚ ಕರಾರು' ನೀತಿಯನ್ನು ತೊರೆಯಲು ಅವರು ಪಕ್ಷಕ್ಕೆ ವಿನಂತಿಸಿಕೊಂಡರು. ಪತ್ರಿಕೆಗಳ ಮೇಲೆ ಪಕ್ಷದ ಪ್ರಭಾವ ಇರಕೂಡದು, ಬೇಕಾದ ನಿಷ್ಠುರವಾದ ನಿಲುವುಗಳನ್ನು ತಾಳಿಕೊಳ್ಳಲು ಸಾಹಿತಿಗೆ ಸರ್ವ ಸ್ವಾತಂತ್ರ್ಯ ನೀಡಬೇಕೆಂಬ ಸಲಹೆಯನ್ನು ಅವರಿಂದು ಮುಂದಿಟ್ಟರು.

ಒಡನೆ ಪಕ್ಷವು ಜನವರಿ ತೀಕ್ಷ್ಣವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ವರ್ಕರ್ಸ್ ಪಾರ್ಟಿಯ ವೇಷದಲ್ಲಿ ಬಂಡವಾಳಶಾಹಿ ಧೋರಣೆಗೆ ಉತ್ತೇಜನ ಉಣಬಡಿಸಬೇಕೆಂದು ಅವರ ಮಾತಿಗೆ ಮಸಿ ಬಳಿಯಲು ಕಮ್ಯೂನಿಸ್ಟರು ಮುಂದಾದರು. ಆಜ್ಞಾವರ್ತಿಯಂತೆ ಹು-ಪೆಂಗ ವಿರೋಧ ಟೀಕಾಪ್ರಹಾರ ಆಯಿತು. ಅವರನ್ನು ಬರದಾರಿ ಬಳಗದಿಂದ ದೊಂಗೋಡಿಸಲಾಯಿತು. ಅವರ ಸಾಹಿತ್ಯ ದೃಷ್ಟಿಯನ್ನು ಮಾತ್ರ ಸರಕಾರ ಹಾಗೂ ಪಕ್ಷ ತೀವ್ರವಾಗಿ ಬಹಿಷ್ಕರಿಸಿದುವಷ್ಟೆ, ಅವರನ್ನು 'ಪ್ರತಿಕ್ರಾಂತಿಕಾರಿ' ಮತ್ತು 'ಸಾಹಿತ್ಯ ಪ್ರಾಪ್ತಿಯ ವಾಸಿಗಳ ದಲ್ಲಾಳಿ' ಎಂದೂ ಅವಮಾನಿಸಲಾಯಿತು. ಜನತಾ ಸಾಹಿತ್ಯದ ಸಂವಾದಕನಿಯೆಂದು ಅವರನ್ನು ಕೆಳಗೆ ಮಾಡಲಾಯಿತು. ಜನತಾ ರಾಜಕೀಯ ಸಲಹಾ ಸಮಿತಿಯ ಸದಸ್ಯತನದಿಂದಲೂ ಅವರನ್ನು ಬಿಡುಗಡೆಗೊಳಿಸಲಾಯಿತು. ಜನತಾ ವೈಜ್ಞಾನಿಕ (ಸೋಷ್ಯಲ್ ಸೈನ್ಸ್) ಗಣಿಯ ಪೀಠದಿಂದ ಅವರ ಕೃತಿಯೊಂದನ್ನು ಪ್ರಕಟಿಸಲಾಯಿತು. ಅವರ ಅಭಿಮಾನಿ ವರ್ಗ ಅವನ್ನು ತಿರಸ್ಕರಿಸಿತು. ಅಲ್ಲದೆ ಪಕ್ಷದ ಒಳಸಂಚುಗಾರ ಹಾಗೂ ಬಂಡವಾಳ ಸಾಹಿತಿಗಳ ದಲ್ಲಾಳಿಯೆಂದು ಅವರನ್ನು ಬಹಿಷ್ಕರಿಸಲಾಯಿತು. ಮಿಷ್ಟಾರ ಹಲವಾರು ಸಾಹಿತ್ಯ ಸಂಸ್ಥೆಗಳು ತಮ್ಮನ್ನು ಕಳಕಳಿಯಿಂದ ಛಿನ್ನೈಸಿಕೊಂಡರೂ ಸರಕಾರ ಅವರನ್ನು ಬಹಿಷ್ಕರಿಸಿಲಿಲ್ಲ.

ಬುದ್ಧಿಜೀವಿಗಳ ಮೇಲಿನ ಬಂಧನವನ್ನು ೧೯೫೫ರಲ್ಲಿ ಸ್ವಲ್ಪ ಸಡಿಲುಗೊಳಿಸಲಾಯಿತು. ೧೯೫೬ ಜನವರಿ ತಿಂಗಳಿನಲ್ಲಿ ಸೇರಿದ ವಿಜ್ಞಾನಿಗಳ ಹಾಗೂ ಬುದ್ಧಿಜೀವಿಗಳ ಸಭೆಯಲ್ಲಿ ಅವರೆಲ್ಲರ ಸಹಕಾರವನ್ನು ಚೌ. ಎನ್. ಲೈ ಯಾಚಿಸಿದನು.

ಅವರ ಆಲೋಚನೆಗಳನ್ನು ಸರಕಾರದ ಮುಂದಿಟ್ಟಲ್ಲಿ ಯುಕ್ತ ಪರಿಹಾರ ಕೈಗೊಳ್ಳಲಾಗುವುದೆಂದು ಅವನೆಂದು ತಿಳಿಯಪಡಿಸಿದನು.

ಅದೇ ವರ್ಷ ಮೇಯಲ್ಲಿ 'ಶತಪುಷ್ಪ ಚಳುವಳಿಯೂ ಆರಂಭ ಆಯಿತು. ತಾವಾಗಿಯೇ ದೇಶಭ್ರಷ್ಟರಾಗಿರುವವರು ಹಿಂತಿರುಗಿ ಬಂದು ಮಾತೃಭೂಮಿಯ ಸೇವೆಯಲ್ಲಿ ಭಾಗವಹಿಸಬೇಕೆಂದು ವಿನಂತಿ ಮಾಡಲಾಯಿತು. ಉದಾಹರಣೆಯು ಪೆಕ್ಕಿನ ಸ್ಫೋತ್ಸಾಹ ಮಟ್ಟಕ್ಕಿಂತ ಹೊರ ಹೋದಲ್ಲಿ ಆಪತ್ತು ಕಟ್ಟಿಟ್ಟಗಂಟೆಂಬ ಯೋಚನೆ ಮಾತ್ರ ಯಾರ ಮನಸ್ಸಿನಿಂದಲೂ ಮಾಯವಾಗಲಿಲ್ಲ.

೧೯೫೭ ಫೆಬ್ರವರಿ ತಿಂಗಳಂದು ಮಾವೊ ತ್ಸೆ-ಟುಂಗ್ ತನ್ನ ಭಾಷಣದಲ್ಲಿ ಸ್ವತಂತ್ರವಾದಿಗಳಕ್ತ ಉದಾರವಾಗಿ ಮಾತನಾಡಿದನು. ಅವನು ಭಾಷಣವಿತ್ತದ್ದೇ "ಜನತೆಯ ವಿರೋಧ ಅಭಿಪ್ರಾಯಗಳನ್ನು ಸರಿಯಾಗಿ ವ್ಯವಸ್ಥೆಗೊಳಿಸುವ" ವಿಷಯದ ಮೇಲೆ "ನೂರು ಹೂಗಳು ಅರಳಲಿ, ವಿವಿಧ ವಿಷಯಗಳ ಯೋಚನೆಗಳು ಮುಂದೆ ಬರಲಿ" ಎಂಬ ಘೋಷಣೆಯನ್ನು ಅವನು ಮೂಡಿದನು. "ಏಕ ಪಕ್ಷದ ಅನಿಯಂತ್ರಿತ, ಮತ ಭೇದಾಭಿನಾನದಿಂದ ಸ್ವತಂತ್ರವಾಗಿರುವ" ಏಕೀಕರಣ ವಾದದಿಂದ ಮಾರ್ಕ್ಸ್‌ವಾದಕ್ಕೆ ಸ್ಫೂರ್ತಿಯೋಜನವಿದೆಯೆಂದು ರಾಜಕೀಯ ಸಿದ್ಧಾಂತಿಗಳಿಗೆ ಹೇಳಲಾಯಿತು. ತನ್ನ ಹಿಂದಿನ ಅಭಿಪ್ರಾಯ, ಲೇಖನಗಳ ಆಧಾರದ ಮೇಲೆ ಜನತಾ ಹಾಗೂ ಧುರೀಣರ ನಡುವೆ ಭಿನ್ನಾಭಿಪ್ರಾಯಗಳು ಸಮಾಜವಾದ ರಾಷ್ಟ್ರದಲ್ಲಿ ನ್ಯಾಯಬದ್ಧ ಹಾಗೂ ಅನಿವಾರ್ಯವೆಂದವನು ನುಡಿದನು. ಚೈನಾ ಪ್ರಬಲ ಹಾಗು ಭೇದ್ಯ ರಾಷ್ಟ್ರವಾಗಿರುವದರಿಂದ ಅದನ್ನು ಅನೇಕಾನೇಕ ಅಭಿಪ್ರಾಯಗಳ ಬಹಿರಂಗ ವಾದವಿವಾದಕ್ಕೆ ಪ್ರೋತ್ಸಾಹಕೊಡುವದಾಗಲಿ ಅಪಾಯವೇನೂ ಇಲ್ಲ, ಅಲ್ಲದೆ, ಇದರಿಂದಲೇ ಭಿನ್ನಾಭಿಪ್ರಾಯಗಳನ್ನು ನೀಗಿಸಲು ಸಾಧ್ಯವೆಂದು ಅವನೆಂದು ತಿಳಿಯಪಡಿಸಿದನು.

ಮಾವೊತ್ಸೆ-ಟುಂಗ ಆ ರೀತಿ ಹೇಳಿದರೂ ಆರಂಭದಲ್ಲಿ ಪ್ರತೀಕಾರದ ಭಯದಿಂದ ಬುದ್ಧಿಜೀವಿಗಳು ಅರಳುವದು ಹಾಗೂ ಸ್ಪರ್ಧೆಯತ್ತ ಗಮನ ಕೊಡಲಿಲ್ಲ. ಬರಬರುತ್ತ ಗುಣು ಗುಣು ನಾದ ಜಾಸ್ತಿಯಾಯಿತು, ಶಬ್ದ ಕೇಳಬರಲಾರಂಭಿಸಿತು. ಶ್ರೇಷ್ಠತೆಯ ಅಡಳಿತ ವರ್ಗಕ್ಕೆ ಆಗ ಆತ್ಮಪ್ರತಿಯ ಜ್ವಾಲಾಮುಖಿ ಎಲ್ಲಿ ಸಿಡಿದು ಹೋಗುವದೋ ಎಂಬ ಭಯ ಉಂಟಾಯಿತು. ಬುದ್ಧಿಜೀವಿಗಳ ಸ್ವರಕ್ಕೆ ಪಕ್ಕವಾದ್ಯ ಬರಲಾರಂಭವಾಗಿತ್ತು. ಆವರೀತಿಗೆ ಎದುರಾದ ಒಣಕೆಟ್ಟ ಪಕ್ಷವೊಂದೇ ಭಯವಿಲ್ಲದೆ ಅಭಿಪ್ರಾಯ ಮಂಡಿಸಲು ಬುದ್ಧಿಜೀವಿಗಳಿಗೆ ಅಡಳಿತ ವರ್ಗ ತಿಳಿಸಿದ್ದು ಅಕ್ಷರಶಃ ಪಾಲಿಸಲ್ಪಡಲಾರಂಭವಾಯಿತು. ಒಡನೆ ರಕ್ಷಣಾ ಕವಾಟನ್ನು ಮುಚ್ಚಲಾಯಿತು, 'ನೂರಾರು ಹೂಗಳ ನಡುವೆ ಬಂದಿರುವ ವಿಷಭರಿತ ಕಳೆ'ಗಳ ನಿರ್ಮೂಲನದ ನವೀನ ಚಳುವಳಿಗಾರಂಭವಾಯಿತು.

ಆದಾಗ್ಯೂ, ಇತ್ತೀಚೆಗೆ ಚೈನಾ ಅಡಳಿತ ಘಂಟೆ ಬೇರೆ ನಾದವನ್ನೇಯಲು ಆರಂಭಿಸಿದೆ. ಸುನಃ ಅಡಳಿತ ವರ್ಗವು ತಮ್ಮ ತಪ್ಪನ್ನೊಪ್ಪಿಕೊಂಡು ಕ್ಷಮೆ ಕೋರುವ ರೀತಿಯಲ್ಲಿ ಸ್ವರ ಎತ್ತುತ್ತಿದೆ. ಮಾವೊನ ಕೃತಿಯು ಬುದ್ಧಿಜೀವಿಗಳ ಹಾಗೂ ವಿಜ್ಞಾನಿಗಳ ಅಭಿಪ್ರಾಯಕ್ಕೆ ಅಡಿಪಾಯವಾಗಿರಬೇಕೆಂದು ಈಗ ಚೈನಾ ಹೇಳುವದಿಲ್ಲ. ಈಗ ಬುದ್ಧಿಜೀವಿಗಳನ್ನು ಉತ್ಪಾದಕ ಶ್ರಮಿಕರೊಡನೆ ಬೆರಸದೆ, ಅವರ ಮನವೊಲಿಸಲು ಪ್ರಯತ್ನಿಸಲಾಗುತ್ತಿದೆ.

ಚೈನಾ ಜನತಾ ಗಣರಾಜ್ಯದ (ಕಮ್ಯೂನಿಸ್ಟ್ ಅಡಳಿತ ಚಕ್ರದ) ಅಧ್ಯಕ್ಷ ಲಿಯೊ ಶಾವೊ-ಚಿಯು ೧೯೫೯ ಜೂನ್ ಮುನ್ನತ್ತರಂದು ಪೆಕಿಂಗಿನ ಸಭೆಯೊಂದರಲ್ಲಿ ಭಾಷಣವೀಯುತ್ತ, ಬುದ್ಧಿಜೀವಿಗಳಿಗೆ ಗೌರವ ಸಲ್ಲಿಸುವ ಅವಶ್ಯಕತೆಯ ಕುರಿತು ಒತ್ತಿ ಹೇಳಿರುವನು. ತನ್ನ ಸಮತಾವಾದಿ ರಾಷ್ಟ್ರನಿರ್ಮಾಣದ ವಿಜಯಗಳಲ್ಲಿ ಬುದ್ಧಿಜೀವಿಗಳ ಪಾತ್ರವು ಬಹಳ ಮುಖ್ಯವಾದದ್ದು ಹಾಗೂ ಅವರ್ಜನೀಯವೆಂದೂ ಅವನು ಹೇಳಿರುವನು. "ನೂರು ಹೂಗಳು ಅರಳಲಿ, ವಿವಿಧ ಅಭಿಪ್ರಾಯಗಳು ಸ್ಪರ್ಧಿಸಲಿ" ಎಂಬ ತತ್ವವನ್ನು ಸುನಃ ಆಚರಿಸಲಾಗುವದು. ಆದ್ದರಿಂದ ತಮ್ಮ ದೇಶದಲ್ಲಿ ವಿಜ್ಞಾನ ಹಾಗೂ ಕಲಾಚಾರ ವರ್ಧಿಸುವದೆಂದು ಅವನು ವಿವರಿಸಿದನು

ಈ ರೀತಿ ವೇದವ್ಯಾಸರು 'ದಿ ಹಿಂದೂ' ವಿನಲ್ಲಿ ಲೇಖನ ಬರೆದು ತಿಳಿಸಿರುವರು. ಲಿಯೋ ಶೈತ್ಯಕೊಟ್ಟರೂ ಅದನ್ನು ಯಾರಾದರೂ ನಂಬಿಕೊಂಡು ನಂತರ ನೆರೆಯಾಕನೆಗೊಳಗಾಗಲು ಇಚ್ಛಿಸಲಿಕ್ಕಿಲ್ಲ. ಆ ರೀತಿಯ ಅಶ್ವಾಸನೆ ಅವರ ಮುಂದೆ ಬರುವದು ಅದುವೇ ಮೊದಲ ಸಲವಲ್ಲ. ಹಲವಾರು ಬಾರಿ ಕೇಳಿ, ನಂಬಿ, ಕಾರ್ಯ ಪ್ರವೃತ್ತರಾದಾಗ ಹಿಂದಿನಿಂದ ಅಡಳಿತ ದಮನಕ ಚಕ್ರ ಉರುಳಿಕೊಂಡು ಬಂದಿರುವ ಸ್ವಷ್ಟ ಘಟನೆ ಜನರ ಕಣ್ಮುಂದೆ ಇದೆ. ಪರಿಸ್ಥಿತಿ ಈ ರೀತಿ ಇರುವಾಗ ಬುದ್ಧಿಜೀವಿಗಳು ಮೊನಚೀಯುತೆಗನುಸಾರವಾಗಿ ಬರೆಯಲು ಆದೆಂತು ಸಾಧ್ಯ? ಅದುದರಿಂದ ಹೊರ ಜಗತ್ತು ಅಲ್ಲಿಯ ಲೇಖಕ ಪಟುಗಳಿಂದ ನೈಜ ಸ್ಥಿತಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಲ್ಲಿ ಫಲ ಯೋಜನ ಸಿಗಲಿಕ್ಕಿಲ್ಲ. ಅಲ್ಲಿಂದ ಹಲವಾರು ದಿನಗಳ ಸತತ ಪ್ರಯತ್ನದ ಫಲದಿಂದ ಹೊರಗೋಡಿ ತಪ್ಪಿಸಿಕೊಂಡು ಬಂದಿರುವ ಚೈನಿ ಲೇಖಕರು [ಪುರುಷರೂ, ಮಹಿಳೆಯರೂ] ತಮ್ಮ ಅಭಿಪ್ರಾಯವನ್ನು ಅನುಭವವನ್ನು ಮೂನವೀಯತೆಯ ಮುಂದಿಟ್ಟಿರುವರು.

ಚೈನಾದಲ್ಲಿ ಪ್ರಕಟವಾಗುತ್ತಿರುವ ಕೃತಿಗಳು ತೋಳ ಮಾಡಿಸಿದ ರೀತಿಯಲ್ಲಿರುತ್ತವೆ. ಆದರಿಂದ ಯಾರಿಗೂ ನೈಜ ಪರಿಸ್ಥಿತಿಯ ಅನುಭವವಾಗಲಿಕ್ಕಿಲ್ಲ. ಶ್ರೀ ವೇದವ್ಯಾಸರು ಕೇವಲ ಕೆಲ ಉದಾಹರಣೆಗಳನ್ನು ನೆನ್ನು ಮುಂದಕ್ಕಿಟ್ಟಿದ್ದಾರೆ. ಇಂತಹ ಅಡಿಪ್ಪೇ ಘಟನೆಗಳು ನಡೆದಿರುವದನ್ನು ಬೇರೆ ಕೃತಿಗಳಲ್ಲಿ ಕಾಣಬಹುದು. ಬೆಳಕಿಗೆ ಬಾರದೆ, ಚಿಗುರಿನಲ್ಲೇ ಚಿವುಟಿ ಹಾಕಲಾಗಿರುವ ಘಟನೆಗಳು ಅದೆಷ್ಟೋ!

ಇದು ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಕಾರ್ಯಸ್ತಾನದ ಆಂಶವಿದೆ. ಕಮ್ಯೂನಿಸ್ಟರ ನುಡಿಗೂ ನಡೆಗೂ, ಮಾತಿಗೂ ಕೃತಿಗೂ ಇರುವ ಅಂತರ ಈ ಲೇಖನದಿಂದ ಸ್ಪಷ್ಟವಾಗುತ್ತಿದೆ. ಅಧಿಕಾರ ಗದ್ದುಗೆಯನ್ನೇರಲು, ಅಕ್ಕಮಿಸಿಕೊಳ್ಳಲು, ಅದ್ಯಾವ ರೀತಿಯ ಮಾತಿಗೂ ಕೃತಿಗೂ ಅವರು ಹೇಸುವದಿಲ್ಲವೆಂಬುದಕ್ಕೆ ಈ ಲೇಖನ ಒಂದು ಉದಾಹರಣೆ ಇದೆ. ಈ ಮಾತು ಚೈನಾದ ಕಮ್ಯೂನಿಸ್ಟರಿಗೆ ಮಾತ್ರವಲ್ಲ ಭಾರತದಲ್ಲಿರುವ ಕಮ್ಯೂನಿಸ್ಟರಿಗೂ ಅನ್ವಯಿಸುತ್ತದೆ.

—ಶಿವಶಂಕರ, ಮದ್ರಾಸು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬದೆಕ್ಕಿಲ ಕೃಷ್ಣ ಭಟ್ಟ ಎಲ್. ಬಿ

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಮು ತೀವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ರಶ್ಯ-ಚೀನಾಗಳ ನಡುವಣ

ಮೋಸ್ಕೋ ಮಾತುಕತೆ ಸಫಲವಾದೀತೆ?

ತಮ್ಮೊಳಗಿನ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಪರಿಶೀಲಿಸಲು ರಶ್ಯಾ-ಚೀನಗಳು ಒಟ್ಟುಗೂಡಿದುವು. ಮೊಸ್ಕೋದಲ್ಲಾಗುವ ಈ ಮಾತುಕತೆ ಸಫಲವಾಗುವುದು ಸಾಧ್ಯವೆ? ಒಂದು ವೇಳೆ ಫಲಕಾರಿಯಾದಲ್ಲಿ ಒಮ್ಮಿಂದೊಮ್ಮೆಗೇ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಒಂದು ಅಂತಸ್ತು ಕಳೆಗೆ ಹೋಗುವುದು. ಬದಲಾಗಿ ವಿಫಲವಾದರೆ ಕಮ್ಯುನಿಸ್ಟ್ ಪಾಳಯಕ್ಕೆ ಮಹಾಸತ್ತು ಒದಗೀತು. ಆದರೆ ಇದರಿಂದ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಗಂಡಾಂತರ ಎಂಬುದಿನ್ನು ಹೇರ ಹೇಳಬೇಕಿಲ್ಲ. ಕಮ್ಯುನಿಸಮ್ಮಿನ ಮೂಲಸಿದ್ಧಾಂತ ಪ್ರಕಾರ ಸ್ವಾತಂತ್ರ್ಯವು ಒಂದು ಅಪರಾಧ. ಇತರರು ತಮ್ಮ ಭಿನ್ನತೆಗಳನ್ನು ಬಗೆಹರಿಸಿಕೊಳ್ಳುವಂತೆ ಕಮ್ಯುನಿಸ್ಟರು ಬಗೆಹರಿಸಿಕೊಳ್ಳುವಂತಿಲ್ಲ ಯಾಗೆ ಮಾಡಿದರದು ಅನ್ಯಾಯದೊಂದಿಗೆ ಸಂಧಿಮಾಡಿಕೊಂಡಂತೆ. ಅದೂದರಿಂದ ಒಂದೂಮ್ಮೆಗೆ ಮೊಸ್ಕೋ—ಪೇಕಿಂಗ್ ಭಿನ್ನತೆ ಬಗೆಹರಿದರೆ ಅಂತಾರಾಷ್ಟ್ರೀಯ ಕಮ್ಯುನಿಸಂ ತನ್ನ ವಾಡಿಕೆಯ ಸ್ಥಾನದಿಂದ ಒಂದು ಅಂತಸ್ತು ಕೆಳಗೆ ಒಂದುಂತೆ.

ತಾತ್ವಿಕ ಒಮ್ಮತ ಸಾಧ್ಯವೇ?

ಈಗಿನ ವಿದ್ಯಮಾನಗಳನ್ನು ಗಮನಿಸುವಾಗ ಅವುಗಳೊಳಗೆ ತಾತ್ವಿಕ ಒಮ್ಮತವಾಗುವುದು ಅಸಂಭವೆಂದೇ ತೋರುತ್ತಿದೆ. ಹಾಗೆ ಅದು ತನ್ನ ಹಕ್ಕಿನ ಅಪಜಯಕ್ಕೇಡಾದಲ್ಲಿ ಅದು ಕಮ್ಯುನಿಸ್ಟ್ ಜಗತ್ತಿಗೊಂದು ಗಂಡಾಂತರವಾಗಿ ಪರಿಣಮಿಸುವುದು ಒಂದು ಪ್ರಬಲ ವಿರುದ್ಧ ಪಾಳಯದೊಂದಿಗೆ ಸ್ಪರ್ಧಿಸುತ್ತಿರುವ ಪಾಳಯದೊಳಗೇನೇ ಕಲಹ ಬೆಳೆಯುವುದೆಂದರೆ ಅದು ನಮ್ಮ ಹಿತಚಿಂತಕರಿದಿರು, ಅತ್ಯೋಯರಿದಿರು ನಾವು ಬಡಿದಾಡುಕೊಳ್ಳುವಷ್ಟು ಅಪಾಯಕರವಾಗಿದೆ ಈ ವೈಕಿ ಮೊದಲನೆಯ ಅಧೋಗತಿಗಿಂತಲೂ ಎರಡನೆಯ ಅವಾಂತರವನ್ನು ದೂರವೂಡಬೇಕಾದುದು ಅತ್ಯಗತ್ಯ. ಅವರ ಸೈಕ ತುಸು ಒಬ್ಬರಾದರೂ ವಿವೇಕವಿದ್ದವರಂತೆ ವರ್ತಿಸುವುದು ನ್ಯಾಯ ಈ ವಿವಾದದ ಹಿನ್ನಲೆಯನ್ನು ನಾವು ಅವಲೋಕಿಸಿದ್ದೇ ಆದರೆ ಸೋವಿಯೆಟ್ ಕಮ್ಯುನಿಸ್ಟರು ಪ್ರಾರಂಭದಲ್ಲಿ ಎಂಥ ವಿವೇಕಿಗಳಾಗಿದ್ದುದು ತೋರಿ ಬರುತ್ತದೆ. ಆದರ ಚೀನೀ ಕಮ್ಯುನಿಸ್ಟರ ಮನೋನೈತ್ತಿಯಿಂದಾಗಿ ತಮ್ಮ ಪ್ರಯತ್ನವು ಫಲಿಸಲಾರದೆಂದು ಖಚಿತವಾದುದರಿಂದ ಪ್ರಕೃತ ಮೊಸ್ಕೋ-ಪೇಕಿಂಗ್‌ಗಳು ಒಂದೇ ನಾಣ್ಯದ ಎರಡು ಬದಿಗಳು ಪರಸ್ಪರ ವೈರ ಸಾಧಿಸಿ ಹೊರಟಂತೆ ವಿಕಪ್ರಕಾರವಾಗಿ ಅರೋಪ ಪ್ರತ್ಯಾರೋಪಗಳನ್ನು ತೊರಿಸುತ್ತಿವೆ. ಅದು ಕೂಡಾ ತಮ್ಮೊಳಗಿನ ತಾತ್ವಿಕ ಭಿನ್ನತೆಗಳನ್ನು ಬಗೆಹರಿಸಲು ಮಾತುಕತೆಯು ನಿಶ್ಚಿತವಾದಿನವು ಸವಿಪಿಸುತ್ತಿದೆಯೆನ್ನುವಾಗ ಉಭಯ ರಾಷ್ಟ್ರಗಳ ಅಪಹೇಳನ ವಹಿವಾಟು ಹೆಚ್ಚತ್ತಾ ಬಂದಿರುವುದು ಕಮ್ಯುನಿಸ್ಟ್ ಬಣದ ಇನ್ನೊಂದು ವೈಶಿಷ್ಟ್ಯ. ಸಾಮಾನ್ಯವಾಗಿ ವಿವಾದ ಬಗೆಹರಿಯಲು ಸ್ರಯತ್ನ ನಡೆಯುತ್ತಿರುವಾಗ ವಿವದ ಭಾಗಿಗಳು ಅದಕ್ಕನುಕೂಲವಾದ ವಾತಾವರಣ ನಿರ್ಮಿಸುತ್ತಿರುವುದು ಪದ್ಧತಿಯಾಗಿರುವಾಗ ಹೀಗಾಗುತ್ತಿರುವುದು ಕಥ್ದಿರುದ್ಧ ರಷ್ಯಾ ಚೀನಾ ರಾಷ್ಟ್ರಗಳು ಈ ರೀತಿಯಾಗಿ ವರ್ತಿಸುವುದರಲ್ಲಿ ಒಂದೋ ಅವರದೇ ಆದ ನೈತಿಸ್ಥೈರ್ಯವಿರಬೇಕು. ಇಲ್ಲವೇ ಮಾತ ಕತೆಯನ್ನು ನಿರರ್ಥಕ ಗೊಳಿಸುವ ಉದ್ದೇಶವಿರಬೇಕು. ಈ ವೈಕಿ ಮೊದಲನೆಯದೇ ಸತ್ಯವೆಂದಾದರೆ ಮೂರನೆಯವರು ಚಕಿತಗೊಳ್ಳುವಂಥಾ ಕಾತ್ಕಿಕವನ್ನು ನೋಸ್ಕೋ ಮಾತುಕತೆಯು ಮೂಲರ ಕಮ್ಯುನಿಸ್ಟ್ ರಾಷ್ಟ್ರಗಳು ನಿರ್ವಿವಾದಬಹುದೇನೋ? ಹಾಗಾದಲ್ಲಿ ಕಮ್ಯುನಿಸ್ಟ್ ರಾಷ್ಟ್ರಗಳೊಳಗಿನ ಕಲಹಕ್ಕೆ ವಾಡಿಕೆಯ ಅರ್ಥಕಟ್ಟು ಬಾರದೆಂಬ ತೊಡಕು ಅನುಭವಜ್ಞ ಜಗತ್ತಿಗಾಗಬಹುದು. ಹೀಗೆ ಅವರೊಳಗಿನ ಕಲಹಕ್ಕೆ ಬೇರೆಯೇ ಅರ್ಥವೆಂದಾದಲ್ಲಿ ಅವರ ನಡುವಿನ ಸೈತ್ತಿಗೆ ಮಾತ್ರ ಸಾಂಪ್ರದಾಯಿಕ ಅರ್ಥವಿರುತ್ತದೆಯೇ?

ಕಲಹದ ಉಗಮ

ರಶ್ಯನ್ನರಿಗೂ—ಚೀನೀಯರಿಗೂ ಮೂಲತಃ ತಾತ್ವಿಕ ಭಿನ್ನಾಭಿಪ್ರಾಯವುದಿಸಿ ವರ್ಷಗಳ ಮೇಲೆ ವರ್ಷಗಳುರುಳಿದುವು. ಚೀನೀಯರು ತತ್ವತಃ ಸ್ಟಾಲಿನ್ ವಾದಿಗಳಾದರೆ ಕ್ರುಶ್ಚೇವರು ಅದಕ್ಕೆ ಕಥ್ದಿರುದ್ಧವಾಗಿದ್ದಾರೆ. ಅವರು ಲೆನಿನ್ ವಾದಿಗಳು. ಈ ರೀತಿಯ ಸೈದ್ಧಾಂತಿಕ ಭಿನ್ನತೆಯನ್ನು ಮತಭೇದ ಬೆಳೆದುಕೊಂಡು ಒಂದಿದ್ದರೂ ಅದು ಜಗತ್ತಿಗೆ ತೋರಿಬಮ್ಮ ದೊಡ್ಡ ಪ್ರಮಾಣ ದಲ್ಲಿರಲಿಲ್ಲ. ಮಹಾ ಸ್ಟಾಲಿನ್ ವಾದಿಯಾಗಿ ಮುಂದರಿಯುತ್ತಿರುವ ಚೀನಾ ಇಂದು ತನ್ನ ಸಾರ್ವಾಭ್ಯುದಾಹಪಿಪಾಸೆಯನ್ನು ಹೆಚ್ಚಿಸುತ್ತ ಬಂದು ರಾಷ್ಟ್ರಪೀಠಾರೂಢ ಡಾ| ಸನ್‌ಯಾತ್ ಸೇನರ ಅಪೇಕ್ಷೆಯಲ್ಲು ಮೀರಿಬೆಳಿಲು ಮಾಡುತ್ತಿದೆ ಅವರಿಗೆ ಇದಿಂದು ಅಪಮಾನವಾಗುತ್ತಿದೆಂದರೂ ಅತಿರೋಕ್ತಿಯಲ್ಲ. ಕಳೆದೈದು ವರ್ಷಗಳಿಂದ ಉಬ್ಬಣಿಸುತ್ತಿರುವ ವಿವಾದ ಕ್ರುಶ್ಚೇವರು ರಶ್ಯದ ಸೂತ್ರಧಾರಿಯಾದಂದಿನಿಂದ ತೀವ್ರ ಸ್ಪರ್ಧೆಗೆ ಗುರಿಯಾಗಿದಿ. ರಷ್ಯಾಕ್ಕೆ ತಾವೇನೂ ಕಡಿಮೆಯಿಲ್ಲ ಎಂಬ ದರ್ಪವನ್ನು ಚೀನಾ ತೋರಿಸಕತ್ತಿದೆ. ಮೊಪೋ-ಜೋ-ಎನ್-ಲ್ಯಾಯರ ಈ ತೆರನ ದರ್ಪ ಪ್ರಧಾನ ಸೈದ್ಧಾಂತಿಕ ರಶ್ಯಕ್ಕಾಗಿಲಿಲ್ಲ ನಲಹ ಪ್ರತ್ಯಕ್ಷ ಅರೋಪಗಳ ಸರಮಳೆಯಾಗತೊಡಗಿತು. ಸಂಬಂಧ ಕೊಳೆಯತೊಡಗಿತು. ಮುಂದದು ಅಲ್ಬೆನಿಯೂದ ಘಟನೆಯೆಂದಾಗಿ ವಿಷವೂವಸ್ಥೆಗೇರಿ ರಷ್ಯವೂ ಚೀನಾದೊಂದಿಗಿನ ತನ್ನವ್ಯಾಪಾರ ಸಂಪರ್ಕವನ್ನು ನಿಯಂತ್ರಿಸಿಕೊಂಡವಾದಂತೆ ಚೀನಾವೆ ಕೊಡು ಮುರಿದು ಉಪಾಯವಿಲ್ಲದೆ ರಷ್ಯಾಕ್ಕೆ ರಸ್ಸ ನಿರೋಗವನ್ನು ಕಳುಹಿಸಿ "ತಾವು ಒಂದೇ ಬಾಣಕ್ಕೆ—ಪಕ್ಷಕ್ಕೆ ಸೇರಿದವರು, ನಮ್ಮೊಳಗೆ ಸ್ನೇಹವಿರುವುದು ಜಗತ್ತಿನ ಭದ್ರತೆಗೆ ಅವಶ್ಯ" ಎಂದು ನಟಿಸಲೇಕಾಯಿತು. ಈ ಹಿಂದಯೇ ಸ್ಟಾಲಿನ್ನರ ಕಳೇವರವನ್ನು ಅಗೆದು ತೆಗೆಸಿ ಅವಮಾನಗೊಳಿಸಿದ ರಷ್ಯಾದ ಅಪಹ್ಯಕೃತ್ಯದಿಂದ ನೊಂದ ಚೀನಾ ಅದನ್ನು ತೊಂಡವಾಗಿ ಬೈದಾಗ ಕ್ರುಶ್ಚೇವರು ಕಿಡಿಕಿಡಿಯಾದರು.

ಪ್ರತ್ಯಕ್ಷ ಟೀಕೆಗಳು

ಅಂದಿನಿಂದ ಕ್ರುಶ್ಚೇವರು ಚೀನಾವನ್ನು ತನ್ನ ಭ್ರಾತೃದೇಶವೆಂದುನೋಡಲಿಲ್ಲ. ಭಾರತದ ಮೇಲೆ ಅದು ಮಾಡಿದ ದ್ರೋಹಪೂರ್ಣ ಅಕ್ರಮಣವನ್ನು ಖಂಡಾಪಂಡವಾಗಿ ವಿರೋಧಿಸಿ ಚೀನಾವನ್ನು ಎಚ್ಚರಿಸಿದರು. ಚೀನಾವು ಇವರ ಈ ತೆರನ ಸೋಪರ ದ್ರೋಹವನ್ನು ತಡೆಯಲಾರದೆತನ್ನಪಾಲ್ಗಿನೆಂಟರು ಅಧಿಪೇಶನದಲ್ಲಿ ತುಚ್ಛವಾಗಿ ಟೀಕಿಸಿತು. ತನ್ನ ಸಾರ್ವಾಭ್ಯುದಾಹವನ್ನು ಸಮರ್ಥಿಸಿದಾಗ ಕ್ರುಶ್ಚೇವರು ಅದನ್ನು ಕಾಗದದ ಹುಲಿಗೆ ಹೋಲಿಸಿ ಟೀಕಿಸಿದರು. ಆಗಲೇ ಚೀನಾದ ರಕ್ಷಣಾ ಸಚಿವ ಲಿನ್-ಯಿಯವರು ರಷ್ಯಾವು ನಿರ್ದಿಷ್ಟ ನೀತಿ ಧೋರಣೆಗಳಿಲ್ಲದ ಒಂದು ಕಮ್ಯುನಿಸ್ಟ್ ವಿರೋಧಿ ದೇಶವೆಂದು ಅಂದರು. ಹೀಗೆ ಪರಸ್ಪರ ಇಬ್ಬಣದವರೂ ಒರೆಯಿಂದ ಕತ್ತಿ ಕಳಚಿ ಜಗಳಕ್ಕೆ ನೋಟ್ಟೆದರು.

ಹೀಗೆ ಜಗಳ ಮಾಡಿದರೆ ಜೆನ್ನಲ್ಲವೆಂದು ಮನಗಂಡ ಉಭಯ ದೇಶಗಳ ಧುರೀಣರು ಪತ್ರ ವ್ಯವಹಾರ ನುಮೇನ ಜಗಳ ನಿವಾರಿಸಲು ಯತ್ನಿಸಿದರೂ ಪರಿಸ್ಥಿತಿ ಪತೋಟಿಗೆ ಬರುವುದರ ಬದಲಾಗಿ ವಿಕೋಪಕ್ಕೇರಿತು. ಈ ಸೈದ್ಧಾಂತಿಕ ವಿವಾದದ ಕುರಿತು ಚೀನವು ರಶ್ಯಕ್ಕೆ ಇತ್ತೀಚೆಗೆ ಬರೆದ ಪತ್ರದ ಭಾಷಾಂತರದ (ರಶ್ಯನ್) ಪತ್ರಿಕೆಗಳನ್ನು ಪೇಕಿಂಗ್—ಮೋಸ್ಕೋ ಚೀನೀ ಟ್ರೇಡ್ ಯೂನಿಯನ್ ಶಿಬಂದಿಯವರು ಕಿಟಿಕಿಗಳ ಮೂಲಕ ಜೆಲ್ಲುತ್ತಿದ್ದರೆಂದೂ ಲೌಡು ಸ್ಪೀಕರುಗಳ ಮೂಲಕ ಪ್ರಚಾರ ಮಾಡುತ್ತಿದ್ದರೆಂದೂ ರಶ್ಯವು ಚೀನಾದ ಮೇಲೆ ಆರೋಪ ಮಾಡಿದೆ ಈ ಕುರಿತು ಕರಿನ ವಾಕ್ಯಗಳಿಂದ ಕೂಡಿದ ವಿದೇಶಾಂಗ ಪ್ರಕಟಣೆಯು "ಇಜ್ವುವೆಸ್ಟ್ಯಾ" ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಮೂರು ಮೂರು ಮಂದಿ ಚೀನೀ ರಾಜಕಾರಣಿಗಳನ್ನೂ ಇಬ್ಬರು ವಿದ್ಯಾರ್ಥಿಗಳನ್ನು ಏಕೆ ದೊರ ದಬ್ಬಲಾಗಿದೆಯೆಂಬುದನ್ನು ಅದು ಬರೆದಿದೆ. ಇದರಿಂದ ಅರ್ಥಾತ್ ಚೀನೀ ಕಮ್ಯುನಿಸ್ಟ್ ಪಕ್ಷದ ಕರಪತ್ರಗಳನ್ನು ರಷ್ಯಾದಲ್ಲಿ ಪಂಚುವುದರ ಮೂಲಕ ಚೀನಾವು ರಷ್ಯಾದ ಸಾರ್ವಭೌಮತ್ವವನ್ನು ಉಲ್ಲಂಘಿಸಿದೆಯೆಂದು ಅದು ಹೇಳಿದೆ.

ಚೀನಾದ ಹಸ್ತಕ್ಷೇಪ

ರಷ್ಯಾದ ಕಮ್ಯುನಿಸ್ಟ್ ಪಕ್ಷದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುವ ಮೂಲಕ ಚೀನಾವು ರಷ್ಯದ ಆಂತರಿಕ ವ್ಯವಹಾರಗಳಲ್ಲೇ ಹಸ್ತಕ್ಷೇಪ ಮಾಡಿದೆ ಎಂದು ಪಮಿತಿಯು ಆರೋಪಿಸಿದೆ. ರಷ್ಯಾ—ಚೀನಾ ಸೈದ್ಧಾಂತಿಕ ವಿವಾದದ ಬಗ್ಗೆ ನಡೆಯಲಿರುವ ಮಾತುಕತೆಯಲ್ಲಿ ರಷ್ಯದ ಮುಖ್ಯ ಆರೋಪ ಇದೇ ಎಂದು ಸ್ಪಷ್ಟವಾಗಿದೆ. ಈ ಪ್ರಕಟಣೆಯು ಚೀನಾವು ರಷ್ಯ ಮತ್ತು ಅಮೇರಿಕಗಳನ್ನು ತೊರೆದು ಪ್ರತ್ಯೇಕವಾಗಿ ಉಳಿಯುವ ನಿರ್ಧಾರ ಮಾಡಿದೆಯೆಂದೂ ಹೇಳಿದೆ.

ಜಾದುಗಾರರ ಜಗಳವಲ್ಲ!

ರಷ್ಯಾ-ಚೀನಾಗಳ ಈ ತೆರನ ಪ್ರಸ್ತುತ

(ಉಳಿದ ಪುಟ ನೋಡಿ)

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯು ಕೈಗನ್ನಡಿ

ಗೀತೆಯು ಸನ್ನೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ಪಪ್ಪವಾದ ಬಿಳಿ ನೊಣ ಪುಟಗಳು!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ ೦-೨೦
ಕಮಿ ಪ್ರತಿಗಳ ಬರಕ್ಕೆ ಬರೆಯಿರಿ:
ನವಂಬರಿಗೆ ಪ್ರೆಸ್ ಉಡುಪಿ, ದ ಕ

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಆರ್ಥಿಕ ಅನಿಶ್ಚಿತ ಅನಪೇಕ್ಷಿತತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಯು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮಸಮೀಪದ ನಮ್ಮರಾಂಚಿಯಲ್ಲಿ ದಯವಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನೆಹರು ಉನಾಚೆ

ಜನತೆ ಬಯಸಿದಂತೆ ಅಧಿಕಾರ ಪದ

ಭಾರತದ ಕಣ್ಮಣಿಯೂ, ಜಗತ್ತಿನ ಆದರ್ಶ ನಾಯಕನೂ, ಪಂಚಶೀಲದ ಜನಕನೂ ತನ್ನ ಜೀವನವನ್ನೇ ಭಾರತದ ಸೇವೆಗೆಂದು— ಉದ್ಧಾರಕ್ಕೆಂದು ಮುಡಿಪಾಗಿರಿಸಿದ ಮತ್ತು ಅದಕ್ಕಾಗಿ ಇಂದೂ ತನ್ನ ತನು-ಮನ-ಧನಗಳನ್ನರ್ಪಿಸಿ ಅಹೋ ರಾತ್ರಿ ದುಡಿಯುತ್ತಿರುವ ನಮ್ಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರೂರವರು ಇಂದಿನ ಈ ರಾಷ್ಟ್ರಕ್ಕೆ ಬಂದಿರುವ ಗಂಡಾಂತರ ಪರಿಸ್ಥಿತಿಯಲ್ಲಿ ತನ್ನ ಪ್ರಧಾನಿ ಪಟ್ಟಕ್ಕೆ ತಿಲಾಂಜಲಿಯಿತ್ತು ಇತರ ರಚನಾತ್ಮಕ ಕಾರ್ಯದಲ್ಲಿ ಪೂರ್ಣ ತ್ಯಾಗಬೇಕೆಂದು ವಿರೋಧಿ ಪಕ್ಷಗಳೂ ಒಕ್ಕೊರಲಿನಿಂದ ಕರೆಯನ್ನಿತ್ತಿರುವ ಅಧಿಕಾರ ಲಾಲಸೆಯ ಹುಚ್ಚು ಆಸೆಗೆ ಬಲಿ ಬೀಳದ ಪಂಡಿತ ನೆಹರೂರವರು ಅಂತಹ ಪಕ್ಷೇಯರಿಗೆ ಕೊಟ್ಟ ಮರ್ಮಿಕವಾದ ಉತ್ತರದಿಂದ ಅವರ ಅಂತರಂಗವನ್ನು ನಾವು ಸೂರ್ಯನಷ್ಟು ಸ್ಪಷ್ಟವಾಗಿ ತಿಳಿಯಬಹುದು. ಅನಿವಾರ್ಯತೆ ರಾಜೀನಾಮೆ ಕೊಡಲಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ.

ಡಾ। ಲೋಹಿಯಾ ಮತ್ತು ಕೃಪಲಾನಿಯವರು ಇತ್ತೀಚೆಗೆ ಕಾಂಗ್ರೆಸ್ಸು ಹಲವು ಕಡೆ ಸೋಲು ಪಡೆದುದರಿಂದಲೂ, ಜೈನೀ ಆಕ್ರಮಣದ ಬಗ್ಗೆ ಸೂಕ್ತ ಕಾರ್ಯಕ್ರಮ ಜಾರಿಗೆ ತರುವುದರಲ್ಲಿ ಅಸಮರ್ಥರಾದುದರಿಂದಲೂ, ದೇಶದ ಒಳಗೂ ಅಶಾಂತಿ—ಅಭದ್ರತೆ ಹೆಚ್ಚಾಗಿರುವುದರಿಂದಲೂ, ಅದಕ್ಕೆಲ್ಲಾ ಕಾರಣೀಭೂತರಾದ ನೆಹರೂರವರು ರಾಜೀನಾಮೆ ಕೊಡಬೇಕೆಂದು ಹೇಳಿದ್ದಾರೆ. ಹಲವು ವರ್ಷಗಳ ಹಿಂದೆ ಜಯಪ್ರಕಾಶರು ಕೂಡಾ ನೆಹರೂರವರು ಅಧಿಕಾರ ಪಟ್ಟವನ್ನು ತ್ಯಜಿಸಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಅನ.ಭಗ ಮಾಡಬೇಕೆಂದಿದ್ದಾರೆ. ಇದರಿಂದ "ನೆಹರೂರ ನಂತರ ಯಾರು"? ಎಂಬ ಪ್ರಶ್ನೆಯುಳಿದು ಹೋಗಿ ಅವರೇ ಯೋಗ್ಯರನ್ನು ಮುಂದಿನ ಆಡಳಿತಕ್ಕಾಗಿ ಸಿದ್ಧಗೊಳಿಸಿದಂತಾಗುತ್ತದೆ ಎಂದಿದ್ದಾರೆ,ಹಿಂದೆಮಹಾತ್ಮಾ ಗಾಂಧಿಜಿಯವರೂ ಯಾವ ಹುದ್ದೆಯಲ್ಲಿಲ್ಲದೆ ಮಹತ್ತರ ಪಾತ್ರ ವಹಿಸಿ ಮಹಾತ್ಮರಾಗಿ ನ್ಯಾರೆ. ಇದರಿಂದ ನೆಹರೂರವರೂ ತುಂಬಾ ವಿರಾಮ ಪಡೆಯುವಂತಾಗುತ್ತದೆ. ವೃಥಾ ತಾನೊಬ್ಬ, ಅನುಭವಿ, ಸಮರ್ಥ, ಯೋಗ್ಯ (ಅನಿವಾರ್ಯವಾಗಿ ಆಗಿದ್ದಾರೆ) ಎಂದು ಅಧಿಕಾರ ಗದ್ದುಗೆಯಲ್ಲಿರುವುದೂ ದೊಡ್ಡ ಜನರಿಗೆ ಭೂಷಣಪ್ರಾಯವಲ್ಲ. ಕೇರ್ತಿಶೇಷ ರಾಜೇಂದ್ರರಂತೆ ಮಾಡುವುದು ಸೂಕ್ತ. ಇದರಿಂದ ಟೀಕೆಗಳೂ ಕಡಿಮೆ ಆಗಿ ಅವರ ಬೆಲೆಯಿನ್ನೂ ಹೆಚ್ಚಾಗುತ್ತದೆ ಎಂಬ ಪ್ರಶ್ನೆಗಳ ಸುರಿಮಳೆ ಇಂದು ಸುರಿಯುತ್ತಿದೆ ಇವೆಲ್ಲ ಪ್ರಶ್ನೆಗಳು ಅನ್ಯಪಾರ್ಯವಲ್ಲವಾದರೂ ಪ್ರಯೋಗ ಮಾಯೇನ ಮಾಡಿದ್ದೇ ಆದರೆ ಅದೊಂದು ಕಂಟಕವಾಗುವುದರಲ್ಲಿ ಸಂಶಯವಿಲ್ಲ. ಆದರೆ ನೆಹರೂರವರು ಭೂತ—ಭವಿಷ್ಯತ್ತು ವರ್ತಮಾನದ ರಾಜಕೀಯವನ್ನು ಎಲ್ಲ ಶಕ್ತಿಯುಳ್ಳ ಪ್ರೌಢ್ಯ ರಾಜಕಾರಣಿ ಹಿರಿದಾಗುವುದರಿಂದ ಈ ಪ್ರಶ್ನೆಗಳಿಗೆ ಬಹು ಸಮರ್ಪಕವಾಗಿ ಉತ್ತರ ಕೊಟ್ಟರು.

"ನೆಹರೂರವರು ಹೇಳಿದರು ನಾನಿಂದು ದೇಶದ ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡುವುದು ಒಂದು ದೊಡ್ಡ ವಿಚಾರವಲ್ಲ. ಯಾಕೆಂದರೆ ಇದಕ್ಕೇ ನನ್ನಷ್ಟೇ ಸಮರ್ಥ ಯೋಗ್ಯ ದಕ್ಷ ಜನರು ಇರಬಹುದು. ನಾನೊಬ್ಬನೇ ಸಮರ್ಥ ಎಂಬ ಭಾವನೆ ನನ್ನಲಿಲ್ಲ. ಭಾರತದ ಸೇವೆಗೆ ನನಗೆ ಈ ಪ್ರಧಾನಿ ಪಟ್ಟದ ಅವಶ್ಯಕತೆಯೂ ಇಲ್ಲ. ಹಾಗೆಂದು ಅದನ್ನು ಬಿಟ್ಟು ಉಪಾಯದಿಂದ ಹೊಣೆಗಾರಿಕೆ ತಪ್ಪಿಸಿಕೊಳ್ಳುವ ಪ್ರವೃತ್ತಿಯವನೂ ನಾನಲ್ಲ. ಯಾಕೆಂದರೆ ಪ್ರಧಾನಿ ಪಟ್ಟವೆಂದರೆ ಸುಖದ ಸುಪ್ಪತ್ತಿಗೆ ಎಂದು ಯಾರೂಭಾವಿಸಬಾರದು, ದಿನವಿಡೀ ತಲೆಬಿಸಿ. ವಿವಿಧ ತೆರನ ಕಾರ್ಯಗಳು. ಜವಾಬ್ದಾರಿಯನ್ನೆರಿತು ಹೆಜ್ಜೆ ಹೆಜ್ಜೆಗೂ ವೂತಾಡಬೇಕಾದ ಸಂದರ್ಭ, ಅದರ ಮೇಲೆ ದೇಶದ ಜನತೆಯ—ಆಶೆ. ಆಕಾಂಕ್ಷೆಗಳು ನೆರವೇರಿದಿದ್ದರೆ ಕೋಪ—ಆರೋಪಗಳು—ಇವನ್ನೆಲ್ಲಾ ಕಾಣುವಾಗ ಈ ಪಟ್ಟ ಬೇಡವೆಂಬುದೂ ಯಾರಿಗೂ ಕಾಣಬಹುದು. ಹಾಗೆನ್ನುವಾಗ ನೀವೆಲ್ಲಾ" ಪ್ರಧಾನಿಗಳಿದ್ದಷ್ಟು-ಅಧಿಕಾರ-ಬೆಲೆ ಮತ್ತಾರಿಗಿದೆ ಎನ್ನಬಹುದು. ಹೌದು, ಅದಿದ್ದರೂ ಆದೆಲ್ಲ ಬರಿಯ ಆಡಂಬರ ಎಂಬುದನ್ನು ಮರೆಯಬಾರದು. ಹಾಗಾದರೆ ತಾವ್ಯಾಕೆ ಇಂಥ ಕಂಟಕತ ಶಯ್ಯೆಯಲ್ಲಿ ಇನ್ನು ಸ್ವಲಪಸಬಯಸುತ್ತೀರೆಂದು ಕೇಳಬಹುದು? ಪ್ರಶ್ನೆ ಸಹಜವಾಗಿದ್ದರೂ ನಾನು ಎಂದೂ ಅಲಸ್ಯ ಪ್ರಿಯನಲ್ಲ. ಆಲಸ್ಯವೆಂಬುದನ್ನು ನಾನಾರಿಯೆ. "ಆಲಸ್ಯದವನಿಗೆ ಅವ್ಯಾತವೂ ವಿಷವಂತೆ." ಇಂದು ಭಾರತದ ಜನತೆಯು ನೈಯಕ್ತಿಕ ಮಹಾ ಸಮಸ್ಯೆಯಾದ ಈ "ಆಲಸ್ಯ" ಭಾರತದ ಅಭ್ಯುದಯಕ್ಕೆ ಬಹು ದೊಡ್ಡ ಕಂಟಕವಾಗಿ ಬಿಟ್ಟಿದೆ. ನಾನು ಕ್ರಿಯಾಶಾಲಿ, ಯಾವುದೇ ಕೆಲಸವೂ ಉದ್ಯಮದಿಂದಲೇ ಸಿದ್ಧಿಸುವುದು ಜೊರತು, ಗಾಳಿಗೋಪುರಕಟ್ಟುವುದರಿಂದಲ್ಲ. ನನ್ನ ಮನಸ್ಸು ಸದಾ ಭಾರತದ ಭವ್ಯ ಭವಿಷ್ಯತ್ತಿನ ಬಗ್ಗೆ ಚಿಂತಿಸುತ್ತಾ ಇರುತ್ತದೆ; ಯೋಜಿಸುತ್ತಾ ಇರುತ್ತದೆ. ಭಾರತದ ಸ್ಥಿತಿಯೊಂದು ಸಮಸ್ಯೆಯೂ ನನಗೆ ನನ್ನದೇ ಆದ ವೈಯಕ್ತಿಕ ಸಮಸ್ಯೆಯಂತೆ ಕಾಣುತ್ತದೆ. ನನಗೆ ನನ್ನದು—ಭಾರತದ್ದು; ನನ್ನ ಕಾರ್ಯ—ಭಾರತದ ಕಾರ್ಯ ಎಂಬ ಇಬ್ಬಗೆಯ ದೃಷ್ಟಿಕೋಣವಿಲ್ಲ, ನನಗೆ ನನ್ನ ಸ್ವಂತದ ಸಂಸಾರದ ತಾಪತ್ರಯದ ಹೊಣೆಗಾರಿಕೆಯೂ ಇಲ್ಲ. ಹೌದು ಭಾರತದ ಪ್ರಜೆಗಳೇ ನನ್ನ ಸಂಸಾರ. ಅವರ ಸಮಸ್ಯೆಗಳೇ ನನ್ನ ಸಮಸ್ಯೆ. ಅವರ ಪರಿಹಾರೋಪಾಯವೇ ನನ್ನ ದೊಡ್ಡ ಹೊಣೆಗಾರಿಕೆ.

"ಹೀಗಿರುವಾಗ ನಾನು ನನ್ನ ಹೊಣೆಗಾರಿಕೆಯನ್ನು ಬಿಟ್ಟುಬಿಟ್ಟರೆ ನನಗೇ ಬಹು ಬೇಸರವಾಗುತ್ತದೆ, ಆದರೆ ಅದಕ್ಕೆ ಪ್ರಧಾನಿ ಪಟ್ಟ ಬೇಕೇ? ಎಂದು ಕೇಳಬಹುದು. ಇದಕ್ಕೆ ನನ್ನ ಉತ್ತರದ ಮರ್ಮ ತಾವರಿತುಕೊಳ್ಳಬಹುದು. ವಾಸ್ತವವಾಗಿ ಅಧಿಕಾರ ನನಗೆ ಬೇಡವಾದರೂ ಭಾರತದ ನನ್ನ ಪ್ರಜೆಗಳ—ಜನತೆಯು ಸೇವೆ ಕೆಲಸ ಮಾಡಲು ಈ ಪ್ರಧಾನಿ ಪಟ್ಟದಿಂದ ಮಾತ್ರವೇ ಸಾಧ್ಯವಿದೆ—ಹೆಚ್ಚಿನ ಅನುಕೂಲ ದೊರಕುವುದರಿಂದ ಪ್ರಧಾನಿ ಪಟ್ಟದಲ್ಲಿದ್ದೇನೆ ಹೊರತು ನನ್ನ ಸ್ವಂತದ ಯಾ ಸ್ವಾರ್ಥದ ಉದ್ದೇಶದ ಪೂರೈಕೆಗಲ್ಲ ಎಂಬುದನ್ನು ಜನತೆ ಅರಿತುಕೊಂಡಿದೆಯೆಂಬುದನ್ನು ನಾನು ಅವರು ನನಗೆ ಹೋದಲ್ಲೆಲ್ಲಾ ಕೊಟ್ಟ ಅತ್ಮೀಯವಾದ ಸ್ವಾಗತದಿಂದ ನಂಬಿದ್ದೇನೆ. ಇಂದು ನಾನು ರಾಜೀನಾಮೆ ಕೊಡಬೇಕೆಂದು ಪ್ರಸವಾ, ಸ್ವತಂತ್ರ, ಜನಸಂಘ, ಕಮ್ಯೂನಿಸ್ಟ್ ಪಕ್ಷಗಳ ಮುಖಂಡರು ಹೇಳುತ್ತಿದ್ದಾರೆ. ಇದಕ್ಕೆ ಅವರು ಕೊಟ್ಟ ಕಾರಣವನ್ನು ಆಲಿಸಿದ್ದೇನೆ. ಆದರೆ ಸ್ವಜಾಪ್ರಭುತ್ವದಲ್ಲಿ ಪ್ರಜಾಭಿಪ್ರಾಯವು ಬೆಲೆಯಿಲ್ಲದೆ ವಿರೋಧಿ ಪಕ್ಷಗಳ ಮುಖಂಡರ ಮಾತಿಗಲ್ಲ. ಅವರು ಒಬ್ಬೊಬ್ಬರೂ (ಹೆಚ್ಚಾಗಿ) ತಮ್ಮ ಉದ್ದೇಶ ಸಾಧನೆಗಾಗಿ ಹೀಗೆ ಒಟ್ಟಾಗಿ ಹೇಳುವುದೂ ಇದೆ. ನಾನು ಪ್ರಧಾನಿತ್ವ ಬಿಟ್ಟರೆ ತಮ್ಮ ಆಟ ಇನ್ನೂ ಚೆನ್ನಾಗಿ ಮುಂದೆ ನಡೆಯಬಹುದೆಂದು ಅವರ ಆಕಾಂಕ್ಷೆಯೂ ಇರಬಹುದು. ಆದರೆ ವಿಕಪಕ್ಷೀಯವಾದ ಈ ತೆರನ ಮಾತುಗಳಿಗೆ ನಾನು ಬೆಲೆ ಕೊಟ್ಟರೆ ಕಣ್ಣಿದ್ದ ಕುರುಡನಂತೆ ನಾಮು ಮಾಡಿ ವಿಶ್ವನ ಮಾತು ಕೇಳಿ ಸೀತೆಯನ್ನು ವನಕ್ಕಟ್ಟಿದಂತೆ ಆಗಬಹುದೆಂದು ನಾನು ಭಾವಿಸುತ್ತೇನೆ.

"ನಾನು ರಾಜೀನಾಮೆ ಕೊಡಬೇಕೆಂದು ನಿರ್ಧರಿಸಬೇಕಾದುದು ಜನತೆ. ಮತ್ತು ಬೇಕಿದ್ದರೆ ಆಳುವ ಪಕ್ಷ. ಇಂದು ನಿಜಸ್ಥಿತಿ ಹೇಳುವುದೇ ಆದರೆ ನಾನು ಅಧಿಕಾರಕ್ಕೆ ತಿಲಾಂಜಲಿ ಇತ್ತು ಹೊರಗೆ ನಡೆಯುತ್ತೇನೆ ಎಂದರೆ ದೊಡ್ಡ ಕೋಲಾಹಲನೇ ಆಗುತ್ತದೆ. ಎಲ್ಲ ಕಡೆಯಿಂದ ಕೂಡದು—ಸಾಧ್ಯವಿಲ್ಲ ಎಂಬ ಒಕ್ಕೊರಲಿದ ಧ್ವನಿ ಬರುತ್ತದೆ. ನಾನೆಂದು ಕಾಂಗ್ರೆಸಿನ ಅಧ್ಯಕ್ಷಪಟ್ಟಬಿಟ್ಟಾಗಲೇ ಇಂಥ ಧ್ವನಿ ಸಾಕಷ್ಟು ಕೇಳಿ ಬಂದಿದೂ ನಾನು ನನ್ನ ಕಾರ್ಯಬಾಹುಳ್ಯದಿಂದ ಅದನ್ನು ಬಿಡಬೇಕಾಯಿತು. ಅದುದರಿಂದ ನಾನು ರಾಜೀನಾಮೆ ಕೊಡಬೇಕೆ? ಬೇಡವೋ? ಎಂದು ನಿರ್ಧರಿಸುವುದು ನನ್ನ ಮತ್ತು ಜನತೆಯ ಪಾಲಿನ ಕರ್ತವ್ಯ ಹೊರತು ಕೆಲವು ಪಕ್ಷಗಳ ನಾಯಕರ ಭಾಷಣಗಳಲ್ಲಿ ಅವರ ಹೇಳಿಕೆಗಳಲ್ಲಿ ದುರುದ್ದೇಶವೂ ಆಡಗಿದೆಯೆಂದು ನನ್ನ ಅಭಿಮತ. ಅದುದರಿಂದನಾನು ಅದಕ್ಕೆ ಬೆಲೆಕೊಡಲಾರೆ. ನನ್ನ ದೇಶದ ಜನತೆಗೆ ನಾನು ಎಷ್ಟು ದಿನ ಬೇಕಾಗಿದ್ದೇನೆಯೋ ಅಷ್ಟು ದಿನ ಅವರ ಸೇವೆ ನನ್ನಿಂದ ಸಾಧ್ಯವಿದ್ದಷ್ಟು ಮಾಡಲು ವರ್ಷ ಪೂರ್ಣಕವಾಗಿ ಸಂಕಲ್ಪಿಸಿದ್ದೇನೆ."

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ಸ್ಥಿರಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00

ಅಸ್ಥಿರಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1 50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಬೆಲೆಯನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ನವಯುಗದ ಖಾತೆಗೆ ಜಮೆ ಮಾಡುವ ವ್ಯವಸ್ಥೆಯಿರುವುದು.

ಸುಲಭದಲ್ಲಿ ಉಳಿತಾಯ.....

ಕೊರ್ಪೊರೇಶನ್ ಬ್ಯಾಂಕ್

ಜನತಾ ಡಿಪೊಜಿಟ್ ಯೋಜನೆಯು

ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ

ವಿವರಗಳಿಗಾಗಿ ಇಂದೇ ವಿಚಾರಿಸಿರಿ:

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಸಾರ್ಜಂಟ್ ಕೊರಡ್ಕಲ್ ಮೆಂಕಟ್ರಾವ್ ಎಲ್.ಐ.ಎಮ್
ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪೨	ಉಡುಪಿ ೧೮-೭-೧೯೬೩	ವಾರ ೪೫

ವಿಫಲ ಮಾತುಕತೆಯೆ?

ಮೋಸ್ಕೋವಿನಲ್ಲಿ ನಡೆಯುತ್ತಿರುವ ಸೈದ್ಧಾಂತಿಕ ಮತಭೇದ ನಿವಾರಣಾ ಮಾತುಕತೆಗಳು ಚೀನಾ–ರಶ್ಯಗಳ ಸಂಬಂಧವನ್ನು ವ್ಯಕ್ತಪಡಿಸುವಲ್ಲಿ ಸಹಕಾರಿಯಾಗುವುದೆಂದು ತಿಳಿದು ಜ-ಗತಿಕ ರಾಜಕಾರಣಿಗಳು ಅದರ ಫಲಶ್ರುತಿಯ ಬಗೆಗೆ ತೀವ್ರಾಸಕ್ತಿ ತಳೆದಿರುವುದು ಸ್ವಾಭಾವಿಕ. ಕಳೆದ ಹನ್ನೆರಡು ದಿನಗಳಂದಲೂ ಈ ವಿಚಾರ ವಿನಿಮಯವು ರಹಸ್ಯವಾಗಿಯೇ ನಡೆಯುತಿತ್ತು. ಉಭಯ ರಾಷ್ಟ್ರಗಳ ಪ್ರತಿನಿಧಿಗಳು ತಮ್ಮ ತಮ್ಮ ತತ್ತ್ವಗಳನ್ನು ಮುಂದೆ ಇಡುತ್ತಿದ್ದರೆಂದು ಅಧಿಕೃತ ಮೂಲಗಳಿಂದ ತಿಳಿದು ಬಂದಿದೆ. ಆದರೆ ಈ ಮಾತುಕತೆಗಳು ವಿಫಲವೆಂದು ಸಾರುವ ದಿನಗಳು ದೂರವಿಲ್ಲವೆಂದು ನಿರೀಕ್ಷಕರ ಅಭಿಪ್ರಾಯ. ಪರಸ್ಪರ ಟೀಕೆಗಳನ್ನು ಎರಡು ಕಡೆಯವರೂ ಮಾಡಿಕೊಂಡಿರುವುದು ಈಗ ಹಳೆಯ ವಿಷಯವಾಗಿತು. ತೊಡಗುವ ಮಾತುಕತೆಗಳಿಗೆ ಜೂನ್ ೧೫ರಂದು ತಾನೆ. ಜರೆದ ಪತ್ರದಲ್ಲಿ ಉಲ್ಲೇಖಿತವಾದ ವಿಚಾರಗಳೇ ತಳಕುಹಾಕಿಯಾಗಬೇಕೆಂದು ಚೀನಾ ವಾದಿಸಿದೆ. ಈ ಪತ್ರದಲ್ಲಿ ರಶ್ಯವನ್ನು, ಅದರ ಕಮ್ಯುನಿಸ್ಟ್ ನೀತಿಯನ್ನು ಟೀಕಿಸಿ, ಜಾಗತಿಕ ಕಮ್ಯುನಿಜಂನ್ನು ರಶ್ಯವೆ ಕುಲಗೆಡಿಸುತ್ತಿದೆ ಎಂಬ ಆರೋಪನ್ನು ಹೊರಿಸುವುದಕ್ಕೆ ವಿಶೇಷ ಮಹತ್ವವನ್ನು ಕೊಡಲಾಗಿತ್ತು. ಇಂದು ರಶ್ಯವು ಈ ಆರೋಪಗಳಿಗೆ ಸೂಕ್ತವಾದ ಉತ್ತರವನ್ನು ಕೊಟ್ಟುದರಿಂದ ಮತ್ತು ಚೀನಾಲಂ ವಾದವನ್ನು ತಿಲಾಂಶವೂ ಒಪ್ಪುವುದಕ್ಕೆ ಸಿದ್ಧವಿಲ್ಲವೆಂಬುದನ್ನು ವ್ಯಕ್ತಪಡಿಸಿರುವುದರಿಂದ ಉಭಯ ಪಕ್ಷಗಳ ನಡುವಣ ತೀವ್ರ ಭಿನ್ನಾಭಿಪ್ರಾಯವನ್ನು ಬಹಿರಂಗ ಮಾತುಕತೆಗಳು ಚೀನಾವು ಒಡ್ಡಿದ ಆಹ್ವಾನವನ್ನು ರಶ್ಯವು ಪ್ರತ್ಯಕ್ಷವಾಗಿ ಸ್ವೀಕರಿಸಿದಂತಾಗಿದೆ

"ಚೀನಾವು ಮಾಡಿದ ಆರೋಪಗಳು ಅದರ ಸಂಕುಚಿತ ಮತ್ತು ಸಾಮ್ರಾಜ್ಯವಾದಿ ನೀತಿಯಿಂದ ಪ್ರೇರಿತವಾಗಿವೆ ರಶ್ಯವು ಅನುಸರಿಸುತ್ತಿರುವ ಶಾಂತಿಯುತ ಸಹಜೀವನದ ಧೋರಣೆಯನ್ನು ಚೀನಾವು ಒಪ್ಪುವುದಿಲ್ಲ; ಮೋಸ್ಕೋ ಮಾತುಕತೆಗಳು ಸಫಲವಾಗುವುದು ಅದಕ್ಕೆ ಬೇಕಾಗಿಲ್ಲ" ಎಂದು ಉಲ್ಲೇಖಿಸಿದ ರಶ್ಯದ ಉತ್ತರವು ಈ ಮಾತುಕತೆಗಳು ಮುರಿದು ಹೋಗುವ ಭೀತಿಯನ್ನು ಎತ್ತಿ ತೋರಿಸುತ್ತದೆ. ಲೆನಿನ್ ವಾದಿ ರಶ್ಯ ಮತ್ತು ಸ್ಟಾಲಿನ್ ವಾದಿ ಚೀನಾಗಳೆರಡೂ ಮಾರ್ಕ್ಸ್‌ವಾದವನ್ನೇ ಆಧಾರವಾಗಿ ಮುನ್ನಡೆಯುತ್ತಿರುವುದು ನಿಜವಾದರೂ ಇವರಿಬ್ಬರ ಮತ ಭೇದವು ದೂರವಾಗುವ ಸಲ್ಲಕ್ಷಣಗಳು ಗೋಚರಿಸುವುದಿಲ್ಲ. ಧರಸ್ಪರ ಸಂಬಂಧವು ತಿಳುವಳಿಕೆ ಹೆಚ್ಚುವುದರಿಂದ ಆಗುತ್ತದೆಯೇ ಹೊರತು ದೋಷಾರೋಪಣೆ—ಪ್ರತ್ಯಾರೋಪಣೆಯಿಂದಲ್ಲ. ಪರಿಸ್ಥಿತಿಯು ತೀವ್ರ ಪದಗಟ್ಟೆದೆಯೆಂಬುದಕ್ಕೆ ಹಲವು ಬಾರಿ ಮಾತುಕತೆಗಳು ಸ್ಥಗಿತಗೊಂಡುದೇ ನಿದರ್ಶನ. ಚೀನಾವು ತನ್ನ ಸಾಮ್ರಾಜ್ಯವಾದವನ್ನು ಸಮರ್ಥಿಸಿಕೊಂಡು, ಯುದ್ಧ ನೀತಿಗೆ ಬೆಂಬಲ ನೀಡುವ ಉಗ್ರಗಾಮಿಯೆನಿಸಿದರೆ, ರಶ್ಯವು ಶಾಂತಿಯನ್ನೇ ಬಯಸುತ್ತದೆ; ಅದಕ್ಕೆ ಯುದ್ಧಬೇಕಾಗಿಲ್ಲ. ಮಾನಹಾನಿಯು ಅತಿಯಬೇಕು ಎಂದು ಅದು ಸಾರುತ್ತದೆ. ಜಗತ್ತಿನ ಕೆಲವೆಡೆಯ ಕಮ್ಯುನಿಸ್ಟ್ ಪಕ್ಷವನ್ನು ವಕ್ರವಾರ್ಗದಲ್ಲಿ ತುಳಿದೆಸುವ ಮನಸ್ಸಾಹಸವನ್ನು ಚೀನಾವು ಅಂತರಾಷ್ಟ್ರೀಯ ಕಮ್ಯುನಿಜಂಗೆ ದ್ರೋಹ ಬಗೆದಿದೆಯೆಂದು ರಶ್ಯವು ಬಲವತ್ತರ ಆರೋಪವನ್ನು ಹೇರುತ್ತದೆ. ರಶ್ಯ ಕಮ್ಯುನಿಸ್ಟ್ ಪಕ್ಷವು ಚೀನೀ ಕಮ್ಯುನಿಸ್ಟ್ ಪಕ್ಷದ ವಿರೋಧಿ ಧೋರಣೆಯನ್ನು ಬತ್ತುವಲ್ಲಿ ಕಾರ್ಯಪ್ರವೃತ್ತವಾಗಿನಿಯಂಬುದು ಚೀನಾದ ದೋಷಾರೋಪಣೆ ಹೀಗೆ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ನೇರವಾದ ಮಾತುಕತೆಯು ಭಿನ್ನಾಭಿಪ್ರಾಯದಲ್ಲೇ ಪರ್ಯವಸಾನಗೊಳ್ಳುವ ಬಲವಾದ ಸೂಚನೆಗಳು ತೋರುತ್ತಿವೆ. ಇದರಿಂದ ಭಾರತವು ತನ್ನ ನೀತಿಯನ್ನು ರೂಪಿಸಲು ಹೆಚ್ಚಿನ ವಿಚಾರವಾಹತೆ ಕಾಗುವುದು.

ಚೀನಾವು ಹೇಳಿ ಕೇಳಿ ಭಾರತದ ಮೇಲೆ ಆಕ್ರಮಣ ನಡಾಡಿದ ಮಿತ್ರ ದ್ರೋಹಿ ರಾಷ್ಟ್ರ. ಅದು ಏಕಪಕ್ಷೀಯವಾಗಿ ಕದನವಿರಾಮವನ್ನು ಘೋಷಿಸಿದಾಗಲೇ ಇದರ ಹಿಂದೆ ದೊಡ್ಡದೊಂದು ಕಥೆಯಿರ ಬೇಕೆಂದು ಊಹಿಸಲಾಗಿತ್ತು. ತನ್ನ ಮಿತ್ರ ರಾಷ್ಟ್ರವೊಂದರ ಮೇಲೆ ತನ್ನ ಪಂಗಡದ ಚೀನಾವು ಆಕ್ರಮಣ ನಡಾಡುವುದು ರಶ್ಯಕ್ಕೆ ಬೇಡವಾಗಿತ್ತು; ಅದುದರಿಂದ ಸೇನೆಯ ಮುನ್ನಡೆಗೆ ಬೇಕಾದ ಪೆಟ್ರೋಲ್ ಮೊದಲಾದ ಸಾಮಗ್ರಿಗಳನ್ನು ತಾನು ಪೂರೈಸಲಾರೆನೆಂಬ 'ಬೆದರಿಕೆ'ಯನ್ನೂ ಹಾಕಿತು. ಅದೇ ಸಮಯದಲ್ಲಿ ತನಗೆ ರಶ್ಯದೊಡನೆಯೂ ಸೀಮಾ ವಿವಾದವಿದೆಯೆಂಬುದನ್ನು ಚೀನಾ ಜಾಹೀರು ಮಾಡತೊಡಗಿತು. ಮುಂದೆ, ಸೈದ್ಧಾಂತಿಕ ಮತ ಭೇದಗಳ ತುರುಸಿದ ವಿವಾದ ನಡೆಯಿತು. ಮತ್ತೀಗ ಅದು ಹೀಗೆಯೇ ಮುಂದುವರಿಯುವ ಸೂಚನೆಗಳು ಕಂಡುಬರುತ್ತಿವೆ. ರಶ್ಯವಾದೂ ಚೀನೀಯ ಆಕ್ರಮಣದ ಮೇಲೆ ಭಾರತದೊಡನೆ ಹೆಚ್ಚಿನ ಸಂಪರ್ಕವನ್ನಿರಿಸಿಕೊಂಡಿಲ್ಲ. ಅದೂ ಶಾಂತಿಯುತವೇ ಪರಿಹಾರವಾಗಿ ಕೆಲವು ಸದಿಚ್ಛೆಯನ್ನೆನು ವ್ಯಕ್ತಪಡಿಸಿತ್ತು. ಭಾರತಕ್ಕೆ ಬಿಗ್ ವಿವಾದಗಳನ್ನು ಪೂರೈಸುವಲ್ಲಿ ಮತ್ತು ಬಿಗ್ ವಿವಾದ ಕಾರಣನೆಯನ್ನು ಕಟ್ಟಲು ನೆರವು ನೀಡುವಲ್ಲಿ ಕ್ರುಶ್ಚೇವರು ಕಾಂಚಿ ಪಡಿದಿದ್ದಾರೆ ಕಾಗಿರುವಾಗ, ಭಾರತದ ಮೇಲೆ ತನ್ನ ಸಾಮ್ರಾಜ್ಯ ನೀತಿಯನ್ನು ಹೇರಲಂದ ಚೀನಾದ ದುರ್ನೀತಿ ರಶ್ಯಕ್ಕೆ ಕೊನೆಗಾಣದಿರುವುದು ವಿಸ್ಮಯವಲ್ಲ. ಭಾರತವೆ ರೂಪದಾದರೂ ಒಂದೇ ಪಂಗಡಕ್ಕೆ ಸೇರಿಕೊಂಡಿದ್ದರೆ, ಅದಕ್ಕೆ ಇಂದಿನ ಸಂಧಿಗ್ಧ ಪರಿಸ್ಥಿತಿಯನ್ನು ಎದುರಿಸುವುದು ಅಸಾಧ್ಯವೆನಿಸುತಿತ್ತು. ನಿರ್ದಿಷ್ಟ ಯೋಜನೆಯನ್ನು ತೋರುತ್ತಿರುವುದರಿಂದ ಪಾಶ್ಚಾತ್ಯ ದೇಶಗಳ ನೆರವಿನೊಂದಿಗೆ ರಶ್ಯವು ಸಹಾಯ ಕಾಡ ಲಭಿಸುವಂತಾಗಿದೆ. ತಾಟಸ್ಥ್ಯ ನೀತಿಯು ವಿಫಲವಾಗಿದೆಯೆನ್ನುವವರಿಗಿದೊಂದು ಸೂಕ್ತ ಉತ್ತರ ಚೀನಾದ ದುರಾಕ್ರಮಣಗಳು ರಶ್ಯವನ್ನೇ ಅಪ್ಪಿಯಗೊಳಿಸಿರುವಾಗ, ಉಳಿದವರ ಪಾಡೇನು? ಅದುದರಿಂದ, ರಶ್ಯ—ಚೀನಾ ವಿವಾದವು ಮತ ಭೇದವಷ್ಟಿದೆಯೇ ಕೊನೆಗೊಂಡರೆ, ಮತ್ತೆ ಅವು ನಿಕಟ ಭವಿಷ್ಯದಲ್ಲಿ ಒಂದಾಗುವ ಆಶೆಯಿಲ್ಲ. ಕೆಂಪು ಚೀನಾ ಬೆಳೆದು ಬಂದು ದೇ ಅರಿತಿಯಲ್ಲಿ. ಅದೇ ಅದರ ಅಧಃಪತನಕ್ಕೆ ಸ್ಕಂಧ ಯೋಗೋ ಯೋಕೋ ಬೇಕಾಗಿ ಅಧವಾ ಬೇಡವಾಗಿ ಮಾತುಕತೆ ಕೆಲವು ಸಮಯದ ವರೆಗೆ ಮುಂದುವರಿದರೂ, ಪ್ರತ್ಯಕ್ಷವಾಗಿ ಇದು ಮುರಿದಂತೆಯೇ ಎಂಬುದು ಸ್ಪಷ್ಟ ಸಿದ್ಧ. ಇದಕ್ಕೆ ಜವಹರ್ ನೇ ಸಾಕ್ಷಿ ನುಡಿಯ ಬೇಕು.

ಐದ್ಹಾಯ ಉಳಿತಾಯ

ಜುಲೈ ಮೊದಲನೆ ತಾರೀಕಿನಿಂದ ಕೇಂದ್ರಾಯ ಉಳಿತಾಯ ಯೋಜನೆಯನ್ನು ಅಂತಿಕವಾಗಿ ವ್ಯವಸ್ಥಿತಗೊಳಿಸಲಾಗಿದೆ. ವಾರ್ಷಿಕ ರೂ. ೧೫೦೦೦ಕ್ಕಿಂತ ಹೆಚ್ಚು ಆದಾಯವಿರುವವರು ಪ್ರತಿ ಸಾರಿ ರೂಪಾಯಿಗಳಿಗೆ ಮೂರು ರೂಪಾಯಿಯಂತೆ ಉಳಿತಾಯವನ್ನು ಮಾಡಲೇಬೇಕಾಗಿದೆ. ಈ ಯೋಜನೆಯು ಪ್ರಾರಂಭದಲ್ಲಿಯೇ ನಾನಾ ವಿಧದ ಟೀಕೆ-ವಿಪ್ಪಣಿಗಳಿಗೆ ಗುರಿಯಾಗಿತ್ತು. ಇದರ ಸಂಬಂಧ ನ ಕ್ರಮಬದ್ಧತೆಯನ್ನೂ ಪ್ರಶ್ನಿಸಿದವರಿದ್ದಾರೆ. ಕಾನೆಗೆ ಆಡಿಟರ್ ಜನರಲ್ಲರೇ ಬಂದು ಸಂಪತ್ತಿನ ವಿಶೋಧಿಯಲ್ಲವೆಂದು ರಾಜಕಾರಣವನ್ನು ಸಮಾಧಾನಪಡಿಸಬೇಕಾಯಿತು ಆ ಮೇಲೆ ಈ ಯೋಜನೆಗೆ ಕಳ್ಳಪಟ್ಟ ವಿರೋಧ ಗೋಚರಾಗತೊಡಗಿತು. ಈ ಸಂಬಂಧವಲ್ಲಿ ಮತಪ್ರದರ್ಶನ— ಚಳುವಳಿಗಳೂ ಸಂಯೋಜಿತವಾಗುತ್ತಿವೆ. ದೇಶ ಹಿತೈಷಿಗಳಾದವರು ಚಳುವಳಿ ಮಾತಾರರು ಎಂದು ಗೃಹಮಂತ್ರಿ ಶಾಸ್ತ್ರಿಯವರು ಕರೆ ಕೊಡುತ್ತಿರುವಂತೆಯೇ ಚಳುವಳಿಯ ಗಾಳಿ ಬೇಗವಾಗಿ ಬೀಸುತ್ತ ಬರುತ್ತಿದೆ. ನವದೆಹಲಿಯಲ್ಲಿ ನೇರವಿ ಶ್ರಪ್ತೀಯ ಭಾರತೀಯ ಕೂಲಿಗಾರ ಪರಿಷತ್ತಿನಲ್ಲಿ ಹೀಗೆ ರಾಷ್ಟ್ರೀಯ ಮಜದೂರ ಪಕ್ಷವನ್ನು ಬಿಟ್ಟು ಬಳಿದವರು ಕಡ್ಡಾಯ ಉಳಿತಾಯವನ್ನು ವಿರೋಧಿಸಿದವರು ಇದೇ ವಾದವಿಯ ಮಿತ್ರ ಕ್ರಿಯೆ ಹೆಚ್ಚಿನೆಡೆಗಳಲ್ಲಿ ಇವೆ. ಕಾರ್ಮಿಕ ಮತ್ತು ಉದ್ಯೋಗ ಮಂತ್ರಿ ನಂಬಿಯರ ರು ಎನ್ನು ಕೇಳಿಕೊಂತರೂ ಪಾಂಗೆ ಮತ್ತು ವಾಸವಾತಿಯಾರವರು. ಅವನ್ನು ಒಡಂಬಡಿಲ್ಲ ಆಕಾರ ಫಾರ್ಮಗಳ ಬೆಲೆಗಳು ವಿಪರೀತ ಏರುತ್ತ ಜೀವನದ ವೆಚ್ಚವು ದಿನದಿನವೆ ಏನೆಲ್ಲ ಬಿಬ್ಬಾಸವೈಯನ್ನು ಮುಟ್ಟುತ್ತ ಬರುತ್ತಿರುವ ಈ ಸಮಯದಲ್ಲಿ ಪರಿಮಿತ ಆದಾಯವನ್ನು ಪಡೆಯುವವರು ಉಳಿತಾಯವನ್ನು ಮಾಡುವುದಾದರೂ ಹೇಗೆ? ಎಲ್ಲಿಂದ? ತಿಂಗಳಿಗೆ ನೂರಿಪ್ಪತ್ತೈದು ರೂಪಾಯಿ ಸಂಪಾದಿಸುವವನು ನಾಲ್ಕು ರೂಪಾಯಿ ಉಳಿಸುವುದು ಕಷ್ಟವೆನ್ನುವಂತಿಲ್ಲ; ಆದರೆ, ಆಯ—ವ್ಯಯಗಳ ಬಾಯಿ ಗೂಡಿರುವುದೇ ಅಸಾಧ್ಯವಾಗಿರುವವರು ಉಳಿಸುವುದಾದರೂ ಏನನ್ನು? ಇದು ನಿಜಕ್ಕೂ ಕಳೆ ತೆಗೆವವರಿಗೆ ಸಂಬಳ ಕೊಡುವಂತೆ. ಆದರೆ ಒಂದು ಮಾತನ್ನು ನಾವು ಮರೆಯುವಂತಿಲ್ಲ. ನಾವಿಂದು ಉಪವಾಸ ಬಿದ್ದಾದರೂ ಉಳಿಸುವ ಸಂಪತ್ತು ರಾಷ್ಟ್ರದ ಭವ್ಯತೆಗಾಗಿ ಇದನ್ನು ಹೇಳಿಬೇಕಾದರೆ, ಮಾತೃಭೂಮಿಯ ರಕ್ಷಣೆಗಾಗಿ ನಮ್ಮಲ್ಲಾಯಿಯದು ಪರವಾಗಿ ನಾವು ಇಷ್ಟಾದರೂ ಉಳಿಸಿಕೊಡಬೇಡವೆ? ಮಕ್ಕಳ ಕರ್ತವ್ಯಪಾಲನೆಯಲಿ ನಾವೂ ಭಾಗಿಗಳಾಗಬೇಡವೆ? ಯೋಜನೆಯು ತುಸು ಜಗ್ಗುವೆಂತೆ ತೋರಿದರೂ ಇಮಂತಿನಿಯಾಗಿದ್ದು ಅತ್ಯಾವಶ್ಯಕವಾದುದು. ಅದುದರಿಂದ ತಂತಿ ಸಮಸ್ಯೆಗಳಿಗಿಂತಲೂ ದೇಶಕ್ಕೋಸ್ಕರ ತ್ಯಾಗವೂಡಿ, ಮಿತ್ತಾಯ ಉಳಿತಾಯ ಯೋಜನೆಯನ್ನು ಯಶಸ್ವಿಗೊಳಿಸಲು ಪ್ರತಿಯೊಬ್ಬರೂ ಮುಂದೆ ಬರಬೇಕು; ನಮ್ಮ ಮಾತೃ ರಕ್ಷಣೆಯಷ್ಟಿ ತ್ರಿಕರಣ ಪೂರ್ವಕವಾಗಿ ಭಾಗವಹಿಸಬೇಕು.

ಚೇತನ ಮತ್ತು ಪಶು ವಿಜ್ಞಾನದ ಅಧ್ಯಯನಕ್ಕಾಗಿ ವ್ಯಾಸಂಗ ವೇತನಗಳು

ಚೇತನ ಮತ್ತು ಪಶು ವಿಜ್ಞಾನದ ಅಧ್ಯಯನಕ್ಕಾಗಿ ಅರ್ಹರಾದ ಹಾಗೂ ಬಡತನದಲ್ಲಿರುವ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದಕ್ಕಾಗಿ, 251 ವ್ಯಾಸಂಗ ವೇತನಗಳನ್ನು ಕೊಡಲು ಭಾರತ ಸರಕಾರ ನಿರ್ಧರಿಸಿದೆ. ತಿಸ್ಸಾಡಾದ್ದರಿಂದ ಜಾರಿಗೆ ಬರಲಿರುವ ಈ ಕಾರ್ಯ ಯೋಜನೆಯ ಮೊದಲ ವರ್ಷ 1963—64ರ ಶಿಕ್ಷಣ ವರ್ಷವನ್ನು ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನಗಳನ್ನು ಕೊಡಲಾಗುವುದು.

ಚೇತನಾ ಮತ್ತು ಪಶು ವಿಜ್ಞಾನದ ಪ್ರತಿ ಸವಿಗಳಿಗೆ ಒಂದರ ವಿದ್ಯಾರ್ಥಿಗಳಿಗೆ ಮಾತ್ರ ಈ ವ್ಯಾಸಂಗ ವೇತನಗಳನ್ನು ಕೊಡಲಾಗುವುದು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಶೇ. 60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಚೇತನ್ನಿನ ಪಶು ವಿಜ್ಞಾನದ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು ಮತ್ತು ಮನ್ನಣೆ ಪಡೆದ ಚೇತನಾ ಕಾಲೇಜಿನ ವಿದ್ಯಾರ್ಥಿಗಳಿಗೆ ಈ ವ್ಯಾಸಂಗ ವೇತನವನ್ನು ಕೊಡಲಾಗುವುದು. ಈ ಕಾರ್ಯ ಯೋಜನೆಯ ಪ್ರಕಾರ ಅರಿವಿದ ವಿದ್ಯಾರ್ಥಿಗಳಿಗೆ ತಿಂಗಳಿಗೆ 75 ರೂಪಾಯಿಗಳನ್ನು ಕೊಡಲಾಗುವುದು.

ಈ ಕಾರ್ಯ ಯೋಜನೆಯ ಮೇಲಿನ ವ್ಯಾಸಂಗ ವೇತನಗಳಿಗಾಗಿ ಮೈಸೂರು ರಾಜ್ಯದಲ್ಲಿನ, ಪೆದ್ದಾಕ್ ಮತ್ತು ಧಾರವಾಡ ಗಳಲ್ಲಿನ ಅಗ್ರಿಕಲ್ಚರಲ್ ಕಾಲೇಜುಗಳಿಗೆ ಮನ್ನಣೆ ನೀಡಿಲಾಗಿದೆ.

ಡಾ| ಕೊಸ್ಟಿಕರರ ನಿಧನ—ಮುಂಬಯಿ ಕರ್ನಾಟಕ ಮೆಡಿಕಲ್ ಕಾಲೇಜಿನ ಸಮಾಜ ಔಷಧ ಪ್ರಾಧ್ಯಾಪಕ ಡಾ| ಬಿ. ಆರ್. ಕೊಸ್ಟಿಕರು ಇದೇ ತಾ 10 ರಂದು ಹೃದಯ ಸ್ತಂಭನದಿಂದ ಸ್ವರ್ಗಸ್ಥರಾದ ಸುದ್ದಿ ತಿಳಿದು ಬಂದಿದೆ.

ಚೀನಾ ದಾಳಿಯಿಂದ

ಭಾರತೀಯರಲ್ಲಿ ಹೊಸ ಹುರುಪು

ಯೋಜನೆಗಳನ್ನು ಕೈಬಿಡುವಂತೆ ಭಾರತದ ಮೇಲೆ ಒತ್ತಾಯ ತರುವ ಚೀನೀಯರ ಕುತಂತ್ರವು ಸಂಪೂರ್ಣ ವಿಫಲವಾಗಿನೆಯೆಂಬುದು, ಆಕ್ರಮಣ ನಡೆದ ಏಳು ತಿಂಗಳ ನಂತರ ಇನ್ನೂ ಹೆಚ್ಚು ಸ್ಪಷ್ಟವಾಗಿದೆ.

ದೇಶದ ರಕ್ಷಣೆ ಅಥವಾ ಯೋಜನೆಗಳು ಇವುಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕೆಂಬ ಬಗ್ಗೆ ಭಾರತದ ಜನತೆಯಲ್ಲಿ ವಿಚಾರ ಗೊಂದಲವನ್ನುಂಟು ಮಾಡುವುದೇ ಚೀನೀ ಪ್ರಭುಗಳ ಉದ್ದೇಶವಾಗಿತ್ತು. ಆಕ್ರಮಣ ನಡೆದರೆ ಭಾರತವು ತೃತೀಯ ಯೋಜನೆಯನ್ನು ಕೈಬಿಡುವುದೆಂದು ಅವರು ಎಣಿಸಿದ್ದರು. ಆದರೆ ಈ ಲೆಕ್ಕಾಚಾರವು ಎಷ್ಟೊಂದು ಭ್ರಾಂತಿಯುತವಾದುದು ಎಂದು ತಿಳಿದುಕೊಳ್ಳಲು ಅವರಿಗೆ ಒಮಕಾಲ ಹಿಡಿಯಲಿಲ್ಲ.

ಕಳೆದ ಏಳು ತಿಂಗಳಲ್ಲಾದ ಅನುಭವ ಭಾರತವು ಚೀನೀಯರ ಬಲಗೆ ಬೀಳದೆ, "ರಕ್ಷಣೆಯ ಮತ್ತು ಅಭಿವೃದ್ಧಿಯ" ವಿರಳ ಜಯ ಸೋಸಬೊಂದಿಗೆನ್ನನ್ನೆ ಜೀವಿಸಿ ಮೆಯಿಂಬುದನ್ನು ತೋರಿಸಿಕೊಟ್ಟಿದೆ

ಯೋಜನೆಗಳನ್ನು ಬಿಟ್ಟುಕೊಡುವಂತೆ ಭಾರತದ ಮೇಲೆ ಒತ್ತಾಯ ತರುವುದರ ಮೂಲಕ ಚೀನೀಯರು ಮುಖ್ಯವಾಗಿ ಎರಡುಉದ್ದೇಶಗಳನ್ನು ಸಾಧಿಸಬಯಸುತ್ತಿದ್ದರು ಪ್ರಜಾಸ್ವಾತಂತ್ರ್ಯದಡಾಕಟ್ಟಿನಲ್ಲಿ ತ್ವರಿತ ಗತಿಯಿಂದ ಆರ್ಥಿಕ ಅಭಿವೃದ್ಧಿ ಸಾಧಿಸುತ್ತಿರುವ ಭಾರತದ ಭವ್ಯ ಚಿತ್ರವನ್ನು ನಾಶಮಾಡಬಹುದೆಂದೂ ತನ್ಮೂಲಕ ಏಷ್ಯೋ-ಏಷ್ಯನ್ ರಾಷ್ಟ್ರಗಳ ಮೇಲೆ ಪ್ರಭಾವ ಬೀರಲು ಸಾಧ್ಯವೆಂದೂ ಪ್ರಥಮತಃ ಆಲೋಚಿಸಿದರು. ಎರಡನೆಯದಾಗಿ ಭಾರತದ ಕಾರ್ಮಿಕವರ್ಗದ ನಿಷ್ಠೆಯು ಬಗೆಗೆ ತಮಗೆ ಸ್ಪಿಯವಾದ ವಿಚಾರಗಳನ್ನು ಮೆಲುಕು ಹಾಕಿ, ಯೋಜನೆಗಳನ್ನು ಬಿಟ್ಟುಕೊಡುವಂತೆ ಭಾರತದ ಮೇಲೆ ಒತ್ತಾಯ ತಂದರೆ ಭಾರತದಲ್ಲಿ ಆಂತರಿಕ ಶಾಂತಿಯು ತಾನಾಗಿಯೇ ತಲೆದೋರುವುದೆಂದು ಅವರು ಬಗೆದರು.

ಚೀನೀಯರು ಈ ಉದ್ದೇಶಗಳನ್ನು ಸಾಧಿಸುವಲ್ಲಿ ವಿಫಲರಾದರು. ಇಷ್ಟೇ ಅಲ್ಲ. ಭಾರತವು ಪೊದಲಿಗಿಂತಲೂ ಈಗ ಹೆಚ್ಚು ತ್ವರಿತವಾಗಿ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿಯೆಡೆಗೆ ಮುನ್ನಡೆಯುತ್ತಿದೆಯೆಂಬುದೂ ಅವರಿಗೆ ಈಗ ಚೆನ್ನಾಗಿ ಮನವರಿಕೆಯಾಗಿದೆ.

ಭಾರತವುಯೋಜನೆಯನ್ನು ರಾಷ್ಟ್ರದ ರಕ್ಷಣಾ ವ್ಯವಸ್ಥೆಯುಅವಿಭಾಜ್ಯವೆಂದು ಪರಿಗಣಿಸಿದೆ. ಚೀನೀಯರು ನಮ್ಮ ರಾಷ್ಟ್ರದ ಮೇಲೆ ಭಾರೀ ಪ್ರಮಾಣದ ಆಕ್ರಮಣ ಮಾಡಿದ ಎರಡು ದಿನಗಳ ನಂತರ ಪ್ರಧಾನ ಮಂತ್ರಿ ಶ್ರೀ ನೆಹರೂ ಅವರು ರಾಷ್ಟ್ರದ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸುವಲ್ಲಿ ಯೋಜನೆಯ ಮಹತ್ವವನ್ನು ಒತ್ತಿಹೇಳಿದರು. ಅವರು ಮುಂಬಯಿನಲ್ಲಿ, "ಯೋಜನೆಯನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಅಥವಾ ಅದರ ಮುಖ್ಯಾಂಶಗಳನ್ನು ಕಡಿಮೆ ಮಾಡುವ ಪ್ರಸಂಗವೂ ಉದ್ಭವಿಸದು. ಯೋಜನೆಯ ಬೃಹತ್ತರ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತರುವುದು ಇಷ್ಟೇ ಅಲ್ಲ ವಾರ್ಯವಾಗಿದೆ.ಹಾಗೆ ಮಾಡದಿರುವುದರಿಂದ ಪ್ರಸ್ತುತ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಹಾಗೂಮುಂಬರುವ ವರ್ಷಗಳಲ್ಲಿಯೂ ನಮ್ಮ ರಾಷ್ಟ್ರದ ಬಲಕುಂದಿದಂತೆ ಮಾಡಲು ಸಾಧ್ಯವಾಗುವುದು" ಎಂದು ಹೇಳಿದರು.

ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ೧೯೬೨ ನವೆಂಬರ್ ತಿಂಗಳಲ್ಲಿ ನವದೆಹಲಿಯಲ್ಲಿ ಸಮಾವೇಶಗೊಂಡು ಪ್ರಧಾನ ಮಂತ್ರಿ ಶ್ರೀ ನೆಹರೂರವರ ಅಭಿಪ್ರಾಯಕ್ಕೆ ಬೆಂಬಲ ವ್ಯಕ್ತಪಡಿಸಿ ಗೊತ್ತುವಳಿಯೊಂದನ್ನು ಸ್ವೀಕರಿಸಿತು. ರಣರಂಗದಲ್ಲಿ ಹೋರಾಡುವ ನಮ್ಮ ವೀರ ಯೋಧರಿಗೆ ಜಮಾನುಗಳಲ್ಲಿ, ಕಾರ್ಖಾನೆಗಳಲ್ಲಿ ಉತ್ಪಾದನೆ ಹೆಚ್ಚಿಸುವುದರ ಮೂಲಕ ಬೆಂಬಲ ನೀಡಬೇಕು. ಈ ದೃಷ್ಟಿಯಿಂದ ರಾಷ್ಟ್ರದ ಅಭಿವೃದ್ಧಿ ಯೋಜನೆಗಳು, ರಾಷ್ಟ್ರೀಯ ರಕ್ಷಣಾ ವ್ಯವಸ್ಥೆಯ ಅವಿಭಾಜ್ಯಅಂಗವೆಂದು ಪರಿಷತ್ತಿನ ಅಭಿಪ್ರಾಯವಾಗಿದೆ"ಯೆಂದು ಗೊತ್ತುವಳಿಯಲ್ಲಿ ಹೇಳಲಾಗಿದೆ.

ಅಂದಿನಿಂದ ಇದುವರೆಗೆ ರಾಷ್ಟ್ರದ ಬೇಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಅವಿರತವಾಗಿ ಶ್ರಮಿಸಲಾಗುತ್ತಿದೆ. ರಾಷ್ಟ್ರದ ಸಮಗ್ರ ಆರ್ಥಿಕ ವ್ಯವಸ್ಥೆಯನ್ನು ಯುದ್ಧೋನ್ಮುಖವಾಗಿಯೂ ಸಜ್ಜುಗೊಳಿಸಲಾಗಿದೆ.

ಭಾರೀ ಕೈಗಾರಿಕೆಗಳ ಕ್ಷೇತ್ರದಲ್ಲಿ ಉಕ್ಕಿನ ಉದ್ಯಮವನ್ನು ರಕ್ಷಣೆಗೆ ಅಗತ್ಯವಾದ ಸಾಮಗ್ರಿಗಳ ತಯಾರಿಕೆಗೆ ಅನುಗುಣವಾಗುವ ರೀತಿಯಲ್ಲಿ ಸಜ್ಜುಗೊಳಿಸಲಾಗಿದ್ದು, ಈ ಕಾರ್ಖಾನೆಗಳಲ್ಲಿ ಉತ್ಪಾದನೆ ಹೆಚ್ಚಿದೆ. ಯಂತ್ರ ಸಾಮಗ್ರಿಗಳ ತಯಾರಿಕೆಯಲ್ಲಿಯೂ ಗಣನೀಯ ಹೆಚ್ಚಳವಾಗಿದೆ. ರಾಷ್ಟ್ರದ ಎಂಜಿನಿಯರಿಂಗ್ ಮತ್ತು ಕೈಗಾರಿಕಾ ಸಾಮರ್ಥ್ಯದ ಪೂರ್ಣ ಪ್ರಯೋಜನ ಪಡೆಯುವಂತೆ ಕಾರ್ಯ ಯೋಜನೆಗಳನ್ನೂ ಸಿದ್ಧಗೊಳಿಸಲಾಗಿದ್ದು, ಭಾರೀ ಕೈಗಾರಿಕೆಗಳಿಗೆ ಹೆಚ್ಚು ಕಚ್ಚಾ ಸರಕುಗಳ ಮತ್ತು ವಿಶೇಷಗಳ ಪೂರೈಕೆ ವ್ಯವಸ್ಥೆಯನ್ನು ಬಲಗೊಳಿಸಲಾಗಿದೆ. ಸಾಧ್ಯವಿದ್ದಷ್ಟೂ ಮಟ್ಟಿಗೆ ವಿದ್ಯುಚ್ಛಕ್ತಿ ಕಾರ್ಯ ಯೋಜನೆಗಳನ್ನು ನಿರ್ದಿಷ್ಟ ಅವಧಿಗಿಂತ ಮೊದಲೇ ಅನುಷ್ಠಾನದಲ್ಲಿ ತರಲು ಆಲೋಚಿಸಲಾಗುತ್ತಿದೆ. ವಿಶೇಷತಿನ ಪರಿಸ್ಥಿತಿಯಲ್ಲಿ ರಾಷ್ಟ್ರಕ್ಕೆ ಉಪಯೋಗವಾಗಲೆಂಬ ದೃಷ್ಟಿಯಿಂದ ವಿದ್ಯುಚ್ಛಕ್ತಿ ಉತ್ಪಾದನಾ ಯಂತ್ರಗಳನ್ನೂ ಸಂಗ್ರಹ ಮಾಡಲಾಗುತ್ತಿದೆ.

ಬೇಸಾಯ ಕ್ಷೇತ್ರದಲ್ಲಿ ಯೋಜಿತ ಗುರಿ ಸಾಧನೆಗಾಗಿಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಚಿಕ್ಕ ಪ್ರಮಾಣದ ನೀರಾವರಿ ಕಾರ್ಯ ಯೋಜನೆಗಳು, ಮಣ್ಣಿನ ಸಾರರಕ್ಷಣೆ, ಋಷ್ಟಿ ಬೇಸಾಯ ಇವೇ ಮೊದಲಾದ ಕಾರ್ಯಕ್ರಮಗಳನ್ನು ಕ್ಷಿಪ್ರ ಗತಿಯಿಂದ ಅನುಷ್ಠಾನದಲ್ಲಿ ತರಲಾಗುತ್ತಿದೆ. ಹತ್ತಿ, ಎಣ್ಣೆ, ಕಾಳುಗಳು, ಆಕ್ಕಿ ಮತ್ತು ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳ ಉತ್ಪಾದನೆಯು ಶ್ರಮ ಪ್ರಧಾನ ವ್ಯವಸಾಯ ಕಾರ್ಯಯೋಜನೆಯ ಕಕ್ಷೆಗೆ ಒಳಪಟ್ಟಿವೆ. ಸಮುದಾಯ ಅಭಿವೃದ್ಧಿ ಯೋಜನೆಗಳಲ್ಲಿ ಬೇಸಾಯಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದ್ದು, ಮಧ್ಯಮ ಮತ್ತು ಬೃಹತ್ ಪ್ರಮಾಣದ ನೀರಾವರಿ ಕಾರ್ಯಯೋಜನೆಗಳ ಸಂಪೂರ್ಣ ಪ್ರಯೋಜನವಾಗುವಂತೆ ನೋಡಿಕೊಳ್ಳಲಾಗುತ್ತಿದೆ.

ಚೀನೀ ಆಕ್ರಮಣವು ನಮ್ಮ ಯೋಜನೆಯನ್ನು ಮೊಟಕು ಮಾಡದೇ ಆದಕ್ಕೆ ಇನ್ನೂ ಹೆಚ್ಚು ಉತ್ತೇಜನ ನೀಡಿದೆ. ೧೯೬೨-೬೩ರಲ್ಲಿ ಹಲವು ಪ್ರಮುಖ ಕೈಗಾರಿಕೆಗಳ ಉತ್ಪಾದನೆಯಲ್ಲಾದ ಹೆಚ್ಚಳವೇ ಇದನ್ನು ಇನ್ನೂ ಹೆಚ್ಚು ಸ್ಪಷ್ಟಗೊಳಿಸುತ್ತದೆ. ೧೯೬೩ರಲ್ಲಿ, ಕೈಗಾರಿಕಾ ಉತ್ಪಾದನೆಯು ಅದರ ಹಿಂದಿನ ವರ್ಷಕ್ಕೆಂತಲೂಶೇ. ಅರಷ್ಟು ಹೆಚ್ಚಿದೆ.

ಉಕ್ಕು, ಅಲ್ಯೂವಿನಿಯಂ,ಎಂಜಿನಿಯರಿಂಗ್ ಕೈಗಾರಿಕೆಗಳು, ಖನಿಜ ತೈಲಗಳು, ಯಂತ್ರೋಪಕರಣಗಳ ಉತ್ಪಾದನೆಯು ಹಿಂದಿನ ವರ್ಷಕ್ಕಿಂತಲೂ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ.

ಕಲ್ಲಿದ್ದಲಿನ ಉತ್ಪಾದನೆಯು ನಮ್ಮ ಸರ್ವತೋಮುಖ ಪ್ರಗತಿಯ ಮತ್ತೊಂದು ನಿದರ್ಶನ. ೧೯೬೩-೬೪ರಲ್ಲಿ ಕಲ್ಲಿದ್ದಲಿನ ಉತ್ಪಾದನೆಯು ೭೨೦ ಲಕ್ಷ ಟನ್ನುಗಳನ್ನು ಮೀರಬಹುದೆಂದು ಅಂದಾಜು ಮಾಡಲಾಗಿದೆ.

ಚೀನೀ ಆಕ್ರಮಣದ ಪ್ರಸಂಗದಲ್ಲಿ ಸಾರಿಗೆ ಮತ್ತು ವಿದ್ಯುಚ್ಛಕ್ತಿಯ ವ್ಯವಸ್ಥೆಯಲ್ಲಿ ಗಮನಾರ್ಹವಾದ ಪ್ರಗತಿಯೂದುದೂ ನಮ್ಮ ಆರ್ಥಿಕ ಅಭಿವೃದ್ಧಿಯ ಮತ್ತೊಂದು ಮುಖ್ಯಾಂಶವಾಗಿದೆ.

ಆಕ್ರಮಣ ಮಾಡುವುದರಿಂದ ಭಾರತದಲ್ಲಿ ಹಣದುಬ್ಬರ ಆಗಬಹುದೆಂಬ ಚೀನೀಯರ ಮತ್ತೊಂದು ಉದ್ದೇಶವೂ ವಿಫಲವಾಗಿದೆ.

ಚೀನೀ ಆಕ್ರಮಣದ ಪ್ರಸಂಗದಲ್ಲಿ ಸಾರ್ವಜನಿಕರು ವ್ಯಕ್ತಪಡಿಸಿದ ಅಸದೃಶವಾದ ಪ್ರತಿಕ್ರಿಯೆ ಹಾಗೂ ಸರಕಾರವು ಕೈಗೊಂಡ ಬೆಲೆ ನಿಯಂತ್ರಣ ಕ್ರಮಗಳಿಂದಾಗಿ ಚೀನೀಯರ ದುರುದ್ದೇಶ ಈಡೇರಲಿಲ್ಲ

ಯೋಜನೆಯ ೧೯೬೩—೬೪ನೆಯ ವರ್ಷಕ್ಕಾಗಿ ೧೨೬೫ ಕೋಟಿ ರೂ ಗಳನ್ನು ಒದಗಿಸಲಾಗಿದೆ. ಇದು ಕಳೆದ ವರ್ಷಕ್ಕಿಂತ ೧೨೬ ಕೋಟಿ ರೂ.ಗಳಷ್ಟು ಹೆಚ್ಚಾಗಿದ್ದು, ಚೀನೀಯರು ಯೋಜನೆಯ ಅಸ್ತಿತ್ವಕ್ಕೆ ಹಾಕಿದ ಸವಾಲಿಗೆ ಸುಸ್ಪಷ್ಟವಾದ ಉತ್ತರವಾಗಿದೆ ಭಾರತೀಯರು ಚೀನೀಯರ ಸವಾಲಿಗೆ ಸೂಕ್ತ ಜವಾಬನ್ನು ನೀಡುವ ದೃಢ ನಿರ್ಧಾರ ಮಾಡಿದ್ದಾರೆ. ಇದರಿಂದ ಆಕ್ರಮಣಕಾರರು ಬೆಕ್ಕಸ ಬೆರಗಾಗಿದ್ದಾರೆ.

—ಶ್ರೀ ಆರ್. ಎಂ. ವಿವೇಕ್.

ನೋಸೋ ನೂತುಕತೆ ಸಫಲವಾದೀತೆ?

(ಚೀನೀ ಪತ್ರಿಕೆಯಿಂದ)

ನಿಂದೆಗಳು ಮಾಡಿಕೆಯಲ್ಲಿ ಅರ್ಥವಿದ್ದವುಗಳೇ ಮಾರನೆಯವರ ಕಣ್ಣಿಗೆ ಬೀಳದ ರೀತಿಯಲ್ಲಿ ತನ್ನ ಜಗಳ ಬಚ್ಚಿಟ್ಟುಕೊಳ್ಳುವುದು ಅತಾಶ್ಯವಾದ ಮೇಲೆಯೇ ಅವು ಈ ರೀತಿ ಒಬ್ಬರಂಗವಾಗಿ ಅನೋಸ—ಪ್ರತ್ಯಾರೋಪ ಮಾಡಿಕೊಳ್ಳುತ್ತಿವೆ. ನೋಸ್ಕೋವ್ಸ್ಕಿಯಿಂದ ಚೀನೀ ರಾಯಭಾರಿ ಕಛೇರಿಯ ಮೂಲಕ ಕ್ರುಶ್ಚೇವರ ವಿರುದ್ಧ ನಡೆಸಿದ ಅಸಹ್ಯಾಚಾರಗಳಿಗೆ ಪ್ರತೀಕಾರವಾಗಿ ರಷ್ಯಾದಿಂದ ಅರ್ಥಾಂಬ್ರ ಪ್ರಯೋಗವಾದುದು ಕೂಡಾ ನಟನೆಯಾಗಿ ಬಹುಜನರೇ? ನೋಸ್ಕೋವ್ಸ್ಕಿ ತನ್ನ ಛಲೇರಿಯ ಪ್ರಚಾರ ಪ್ರದರ್ಶನವೊಂದನ್ನು ಪ್ರಸ್ತಾಪಿಸಿದ್ದೆಂದೂ, ಎಂದು "ನೋಸೆಶಿಂಲಿಸ್ಟ್ ರಾಷ್ಟ್ರದಲ್ಲೇ ಹೀಗಾದುದು ವಿಲಕ್ಷಣವೆಂದೂ ಟೀಕೆಂಗ್ ರೇಡಿಯೋ ಘೋಷಿಸಿರುವಂಥ ಘಟನೆಗಳೂ ಮಾರನೆಯವರನ್ನು ಬಂಕಗೊಸಲು ಉಪಯೋಗಿಸಿದ ಕೀನ್? ವಿದ್ಯಮಾನಗಳು ಹೀಗಿರುವಾಗ ರಷ್ಯಾ—ಚೀನಾ ನಡುವಿನ ಕಲಹವು ಮಾರನೆಯವರನ್ನು ವಂಚಿಸುವಷ್ಟಾದರೂ ಗಾಢ ಜಗಳವಾಗಿರುವುದು ಸಾಧ್ಯವೇ ಇಲ್ಲ. ನೋಸೆಶ್ಚೇ ನೂತುಕತೆ ಪರಾಭವಗೊಳ್ಳಲಿರುವುದೂ ಅಸಂಭವ. ಆದರೂ ಅಂಥಾ ಮಹತ್ವಾಕಾಂಕ್ಷಾ ಸಾಮಾರಂಭಕ್ಕೆ ಅವರು ಕೊಡುವ ರೂಪ-ರೇಖೆಯು ಯಾವ ತಿರನದ್ದೆಂಬುದನ್ನು ಕಾದು- ಆಕ್ತಿಯಿಂದ ನಿರೀಕ್ಷಿಸಬೇಕಾಗಿದೆ.

—"ಶ್ರೀರಾಮತನಯಾ."

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction Madras.

ಮಂತ್ರಿಮಂಡಲದ ಭ್ರಷ್ಟಾಚಾರ

ಕಾಂಗ್ರೆಸ್ ಎದುರಿಸುತ್ತಿರುವ ಮಹಾಪಶ್ನೆ

ಒರಿಸ್ಸಾದ ಹಿಂದಿನ ಮುಖ್ಯ ಮಂತ್ರಿಯಾಗಿದ್ದ ಡಾ| ಹರಿಕೃಷ್ಣ ಮೆಹತಾಬ ಮತ್ತು ಇಂದಿನ ಮುಖ್ಯ ಸಚಿವ ಶ್ರೀ ವಿಜಯಾನಂದ ಪಟ್ನಾಯಕರು ಬಹಿರಂಗವಾಗಿ ಆರೋಪ ಪ್ರತ್ಯಾರೋಪಗಳನ್ನು ಹೇರುವುದಕ್ಕೆ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಡಿ. ಸಂಜೀವಯ್ಯನವರು ಆಜ್ಞೆ ಬಂದರು. ಈ ನಾಯಕರಿಬ್ಬರು ಅಧ್ಯಕ್ಷರ ಆದೇಶಗಳನ್ನು ಪಾಲಿಸಲಿ, ಬಿಡಲಿ, ಇಬ್ಬರೊಳಗೆ ಈಗಾಗಲೇ ನಡೆದಿರುವ ವಾಗ್ವಾದವು ಶ್ರೀ ಕೆ. ಡಿ. ಮೂಲವೀಯರಿಗೆ ಸಂಬಂಧಿಸಿದ ವಿಷಯದಲ್ಲಿದ್ದು, ಅದು ನ್ಯಾಯಮೂರ್ತಿ ಎಸ್. ಕೆ. ಡಾಕರು ಕಂಡುಹಿಡಿದ ಮೂಲ ಘಟನೆಗಳಿಗೆ ಪರಿಪೋಷಕವಾಗಿಯೇ ತೋರುತ್ತದೆ.

ಕಾಶ್ಮೀರದಲ್ಲಿ ವಿಶ್ರಾಂತಿಪಡೆಯುತ್ತಿದ್ದ ಪ್ರಧಾನಿ ನೆಹರುರವರನ್ನು ಭೆಟ್ಟಿಮಾಡಿ ಮರಳಿ ಬಂದೊಡನೆಯೇ ಪಟ್ನಾಯಕರು ಸಿರಾಜುದ್ದೀನ್—ಮೂಲವೀಯ- ಮೆಹತಾಬ-ಮಿಶ್ರರ ವಿಚಾರವಾಗಿ ಮೂಕಾಡುವ ಎದೆಗಾರಿಕೆಯನ್ನು ಪ್ರದರ್ಶಿಸಿದುದು ತೀವ್ರಾಸಕ್ತಿ ಕೆರಳಿಸುವಂತಹದ್ದಾಗಿದೆ. ಮಂತ್ರಿಮಂಡಳಕ್ಕೆ ಸಂಬಂಧಿಸಿದ ಯಾವ ವಿಚಾರವನ್ನೂ ತಾನು ಪ್ರಧಾನಿಯವರಲ್ಲಿ ಎತ್ತಿಲ್ಲವೆಂದಿದ್ದಾರೆ. ಪಟ್ನಾಯಕರು ಆದರೆ, ಒರಿಸ್ಸಾದ ಉಸ್ತುವಾರಿ ಪ್ರಧಾನಿ ಬಿರೇನ್ ಮಿತ್ರರು ಈ ಸಂಗತಿಯ ಬಗ್ಗೆ ದೀರ್ಘಕಾಲ ಮೂಕಾಡಿದ್ದಾರೆಂಬುದನ್ನೂ ಊಹೆ ಮಾತ್ರ. ಸಿರಾಜುದ್ದೀನರಿಂದ ತಾನು ಪಡೆದಿದ್ದ ದೊಡ್ಡ ದೊತ್ತವನ್ನು ಹೇಗೆ ವಿನಿಯೋಗಿಸಿದ್ದೇನೆಂಬುದರ ಕುರಿತು ಶ್ರೀ ಮಿಶ್ರರು ಪ್ರಧಾನಿಯವರಿಗೆ ಸುದೀರ್ಘವಾದ ವಿವರಣೆ ನೀಡಿದ್ದಾರೆಂದು ತಿಳಿಯುತ್ತದೆ. ೧೯೫೭ರ ಸಾರ್ವತ್ರಿಕ ಚುನಾವಣೆಗಳ ನಂತರ ಸಂಧಿಗ್ಧ ಬಹುಮತವನ್ನು ಪಡೆದಿದ್ದ ಕಾಂಗ್ರೆಸ್ಸನ್ನು ಬೆಂಬಲಿಸುವಂತೆ ನಾಲ್ಕೈದು ಕಾಂಗ್ರೇಸೇತರ ಎಂ. ಎಲ್. ಎ ಗಳನ್ನು ಏನನ್ನೆಲಿಸಿಕೊಳ್ಳಲು ಈ ಹಣದ ಬಹು ಭಾಗ ವ್ಯಯವಾಗಿದೆಯೆಂದು ಗೊತ್ತಾಗುತ್ತದೆ.

೧೯೫೭ರ ಚುನಾವಣಾ ನಂತರ ಒರಿಸ್ಸಾದಲ್ಲಿ ಗಣತಂತ್ರ ಪರಿಷತ್ತು, ಪ್ರಜಾ ಮತ್ತಿತರ ಸ್ವತಂತ್ರ ಎಂ. ಎಲ್. ಎ.ಗಳ ಒಟ್ಟು ಸಂಖ್ಯೆ ಕಾಂಗ್ರೆಸ್ ಎಂ ಎಲ್.ಎ. ಗಳಷ್ಟೇ ಇತ್ತು. ಕಾಂಗ್ರೆಸ್ಸು 'ಲಂಚವಿತ್ತು' ಕೆಲವು ಎಂ. ಎಲ್. ಎ.ಗಳ ಮನವೊಲಿಸಿ ಅಧಿಕಾರವನ್ನು ನಡೆಸಿತು. ಆದರೆ, ಈ ವಿಧದ ಲಂಚದಿಂದ ವಶೀಲಿಯು ಅನಾಥ್ಯನೆಂಬ ಪರಿಸ್ಥಿತಿಯು ಬಂದಾಗ, ಆಗಿನ ಮುಖ್ಯ ಮಂತ್ರಿ ಡಾ| ಮೆಹತಾಬರು ಗಣತಂತ್ರ ಪರಿಷತ್ತಿನ ಸಖ್ಯ ನೂಡಲು ಬಯಸಿದರು. ಆದರೆ, ಮೆಹತಾಬರ ಇಚ್ಛೆಗೆ ವಿರೋಧವಾಗಿ ಈ ಮೈತ್ರಿಯನ್ನು ಮಧ್ಯಾವಧಿ ಚುನಾವಣೆಗಳ ವೇಳೆ ಪಟ್ನಾಯಕರು ಮುರಿದೇ ಬಿಟ್ಟರು. ಆಗ ಶ್ರೀ ಮಿತ್ರರು ಡಾ| ಮೆಹತಾಬರ ಪ್ರಮುಖ ವೈಯಂಡಿದ್ದರು. ಇಂದು ಪಟ್ನಾಯಕರು ಕೂಡ ಅವರನ್ನು ಬಿಟ್ಟರಬಯಸುವುದಿಲ್ಲ. ಈ ಸಂಗತಿಯನ್ನು ಅವರು ಕಾಶ್ಮೀರದಲ್ಲಿ ಪ್ರಧಾನಿ ನೆಹರುಗಳಿಗೆ ತಿಳಿಸಿದ್ದರೂ ಇರಬಹುದು.

ಕೇಂದ್ರದಲ್ಲಿ ಗೌರವಾದರವನ್ನು ಪಡೆಯಲಾರದ ಮತ್ತು ಕಟಕಿನಲ್ಲಿ ಆದಕ್ಕೆ ಎರವಾದ ಮೆಹತಾಬರು ಸಿರಾಜುದ್ದೀನ್ ಪ್ರಕರಣದಲ್ಲಿ ಮಿತ್ರರು ವಹಿಸಿದ ಪಾತ್ರದ ಲಾಭಗಳಿಸಿ, ಒರಿಸ್ಸಾದಲ್ಲಿ ಪಟ್ನಾಯಕರ ನಾಯಕತ್ವನನ್ನು ಕೊನೆಗಾಣಿಸುವ ಹಂಬಲದಲ್ಲಿರುವಂತೆ ಭಾಸವಾಗುತ್ತದೆ. ಇದನ್ನು ಸಿಳದ ಪಟ್ನಾಯಕರು ರೊಚ್ಚಿಗೇಳುವುದು ಸಹಜ. ಆದುದರಿಂದಲೇ ಅವರು ಈ ಪ್ರಕರಣದ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದರು. ಆವರೆಗ್ಗೆಂತೆ ಸಿರಾಜುದ್ದೀನರಿಗೆ ಕ್ರೋಮ್ ಗನಿಗಳನ್ನು ಗೇಣಿಗೆ ಕೊಡುವುದಕ್ಕೆ ಖ್ಯಾರಂಭದಲ್ಲಿ ಕೇಂದ್ರ ಸರಕಾರವು ಒಪ್ಪಿದೆ ಹೋಗಿದ್ದರೂ ಡಾ| ಮೆಹತಾಬರ ಆಗ್ರಹದ ಮೇರೆಗೆನೇ ೧೯೫೮ರಲ್ಲಿ ಕೊಡಲಾಯಿತು. ಈ ಸತ್ಯ ಸಂಗತಿಯನ್ನು ಸ್ವಯಂ ಮೆಹತಾಬರೇ ಒಪ್ಪಿಕೊಂಡಿರುವುದರಿಂದ, ಇವರೇ ಮೂಲವೀಯರವರು ಸಿರಾಜುದ್ದೀನರಿಗೆ ದುರ್ನೀತಿಯು ಉಪಕಾರ ಮಾಡಿದ್ದಾರೆಂಬ ಆರೋಪವು ಸಿರಾಧಾರವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಡಾ| ಮೆಹತಾಬರು ಸಿರಾಜುದ್ದೀನರಿಂದ ಮೂತ್ರವಲ್ಲದೆ ಬೇರೆ ಬೇರೆ ಸಂಸ್ಥೆಗಳಿಂದ ಹೇರಳ ಧನವನ್ನು ಕಂಪಾದಿಸಿದ್ದಾರೆ. ಸಿರಾಜುದ್ದೀನರಿಗೆ ಗೇಣಿಗೆ ನೀಡಿರುವುದೇ ಮೂಲವೀಯರ ಮೇಲಿನ ಅವಾಪತನೆಯೊದರೆ, ಅವೆಂದಿಗೂ ಅವಾಪತನೆಯೂ ಆಗಲಾರದು; ಇನ್ನು, ಮೂಲವೀಯರು ಲಂಚ ಸ್ವೀಕರಿಸಿದ್ದಾರೆಂದರೆ, ತೈಲ ಸೀತಿಯಲ್ಲಿ ಚಿಕ್ಕ ಪರಿವರ್ತನೆ ಮಾಡಿದುದರಿಂದ ಅವರು ೧೦ ಸಾವಿರ ರೂಪಾಯಿಗಳಷ್ಟೇ ಲಾಭ ಪಡೆಯುತ್ತಿರಲಿಲ್ಲ; ಬದಲಿಗೆ ಹತ್ತು ಕೋಟಿ ರೂಪಾಯಿ ಸಂಪಾದಿಸುತ್ತಿದ್ದರು.

ಕ್ರೋಮ್ ಗನಿಗಳನ್ನು ಗೇಣಿಗೆ ಕೊಟ್ಟುದಕ್ಕಾಗಿಯೇ ಮೂಲವೀಯ ಮಂತ್ರಿಪದವಿಯಿಂದ ನಿವೃತ್ತರಾಗಬೇಕಾಗಿ ಬಂತೆಂದು ನಂಬಲಾಗದೆ. ಈಗ ಪಟ್ನಾಯಕರು ಅವರ ಅಕೃತ್ಯವು ತಮಗೆ ಲಾಭ ಸ್ವಕ್ತಿಗತ ಹಿತಾಸಕ್ತಿಗಳನ್ನು ಅಪಾಯಕ್ಕೆಸೆದುದರಿಂದ ನಡೆದಿದೆಯೆಂದು ಆಕಾರದಲ್ಲಿ ತೂಗಿ ಬಿಡುತ್ತಿದ್ದಾರೆ. ಇದಕ್ಕಿಂತಲೂ ಮುಖ್ಯವಾಗಿ ಡಾ| ಮೆಹತಾಬರಿನ್ನು ಅವರು ಈ ಪ್ರಕರಣಕ್ಕೆ ಎಳೆದು ಶಂದಿಸ್ತಾರೆ ಸಿರಾಜುದ್ದೀನರಿಗೆ ಗೇಣಿಗೆ ಕೊಡುವ ಸಂಬಂಧದಲ್ಲಿ ಮೆಹತಾಬರು ಹಲವು ಬಾರಿ ಪತ್ರಾಯ ಹೇರಿ ಬರೆದಿದ್ದಾರೆಂಬುದು ಸುವಿದಿತವಿದೆ.

ಈಯೆಲ್ಲ ಪ್ರಸಂಗಗಳು ಮೂಲವೀಯ ಪ್ರಕರಣಕ್ಕೆ ಹೊಸ ರೂಪವನ್ನಿತ್ತಿವೆ ಈ ಪ್ರಕರಣಕ್ಕೆ ಕಾಂಗ್ರೆಸ್ ಪೈಕಮಾಂಡಿನ ತೀವ್ರ ಪರೀಕ್ಷಣೆಗೆ ಆರ್ಹವಾಗಿದುದು ಎಂದು ನಿಷ್ಕಾನಂಕ ಕಾಂಗ್ರೆಸಿಗರ ಅಭಿಪ್ರಾಯ. ಸಿರಾಜುದ್ದೀನ ಪ್ರಕರಣದಲ್ಲಿ ಕೈ ಹಾಕಿದ್ದವರೆಲ್ಲರನ್ನೂ ಮೆರೆತು ಮೂಲವೀಯರನ್ನು ಯಜ್ಞಪಶುವನ್ನಾಗಿ ಮಾಡಿ ಸರಕಾರವು ವಿಚಾರಣಾಧಿಕಾರವೆಸಗಿದೆಯೆಂಬುದಿವರ ಅಭಿಪ್ರಾಯ.

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳನ್ನು ತನಗೆ ಒಪ್ಪಿಸಬೇಕೆಂದು ಕೇಂದ್ರ ಸೆಕ್ರೆಟೇರಿಯಟ್ ಒರಿಸ್ಸಾ ಸರಕಾರವನ್ನು ಕೇಳಿಕೊಂಡಿದೆಯೆಂದು ತಿಳಿಯುತ್ತದೆ. ಇದರಿಂದ ಯಾವ ಪ್ರಯೋಜನವಿದೆಯೆಂದು ಈಗಲೇ ಹೇಳುವಂತಿಲ್ಲ. ಒರಿಸ್ಸಾದ ನಾಯಕದ್ವಯರ ನಡುವಣ ತೀವ್ರ ಭಿನ್ನಾಭಿಪ್ರಾಯಕ್ಕೆ ಕಾರಣವಾದ ಈ ಪ್ರಸಂಗದ ಸಂಪೂರ್ಣ ಸತ್ಯಾಂಶವನ್ನು ಜನತೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತಿಳಿಸುವುದು ಅವಶ್ಯವೆಂಬ ಅಭಿಪ್ರಾಯವೂ ಕೇಳಿಬಂದಿದೆ. ಮೂಲವೀಯರು ಕೇಂದ್ರ ಸಚಿವ ಸಂಪುಟದಿಂದ ಹೊರಗೆ ಹೋದ ನೇಲಾದ ರೂ ಸಿರಾಜುದ್ದೀನ ಪ್ರಕರಣವು ಜೀವಂತವಾಗಿಯೇ ಉಳಿದಿದೆ.

ಇದು ಮೂತ್ರವಲ್ಲದೆ ಇನ್ನೊಂದು ಪ್ರಕರಣವೂ ಈಗ ಬೆಳಕಿಗೆ ಬಂದಿದೆ. ಅದು ಕಲಕತ್ತೆಯ ಬರ್ಡ್ ಎಂಡ್ ಕೋ.ವಿಗೆ ಸಂಬಂಧಿಸಿದ್ದು. ಈ ಪ್ರಕರಣದ ಸಂಗತಿಗಳನ್ನು ಅಡಗಿಸುವ ಪ್ರಯತ್ನ ನಡೆಯುತ್ತಿರುವಂತೆ ಭಾಸವಾಗುತ್ತಿದೆ. ಹಿರಿಯ ಕ್ಯಾಬಿನೆಟ್ ಮಂತ್ರಿಯೊಬ್ಬರ ಮಗನೂ ಈ ಪ್ರಕರಣದಲ್ಲಿ ಭಾಗಿಯಾಗುವ ಪದವಿಯಿದೆ. ಕಸ್ಟಮ್ಸ್ ಇಲಾಖೆಯ ಪಪಾಸಣೆಯ ವೇಳೆಯಲ್ಲಿ ವಶಪಡಿಸಿಕೊಳ್ಳಲಾದ ಕಂಪೆನಿಯು ಒಂದು ಪತ್ರದಲ್ಲಿ ಈ ಮಿಲಿಯಾಧೀಶ ಸುಪುತ್ರನ ಹೆಸರಿನಲ್ಲಿ ಸ್ಪಿಸ್ಕಿ ಬೇಕೊಂದರಲ್ಲಿ ೧೫೫ ಸಾವಿರ ಪೌಂಡು ರೇವಣಿಯನ್ನು ಆತನ ಅಪೇಕ್ಷೆಯಂತೆ ಇಡಲಾಗುವುದೆಂದು ತಿಳಿಯುತ್ತದೆ. ಬರ್ಡ್ ಮತ್ತು ಕಂಪೆನಿಯು ದೇಶದ ದೊಡ್ಡ ಕಬ್ಬಿಣದ ಅದುರುಗಳ ಗಣಿಗಳಾದ ಬುಲಾ ಅದುರುಗಳ ನಿಯಂತ್ರಣವನ್ನು ಪಡೆದಿದೆ. ಈ ಗನಿಯನ್ನು ಸರಕಾರವು ತೆಗೆದುಕೊಳ್ಳಬೇಕಾಗಿದ್ದರೂ, ಭಾರತ ಸರಕಾರವು ಈ ವಿದೇಶಿ ಕಂಪೆನಿಯೊಡನೆ ವಾಲುದಾರಿಕೆಯನ್ನು ತೊಡಗಿದೆ. ಇದರಲ್ಲಿ ಕಡಿಮೆ ಪಕ್ಷ ನೂರಕ್ಕೂಗ್ಗಾಸ್ಪುವಾಲು ಭಾರತ ಸರಕಾರದ್ದಿರಬೇಕಿತ್ತು. ಆದರೆ, ಈ ನಿರ್ದಿಷ್ಟ ಮಂತ್ರಿಯು ಒಂದು ತಂತ್ರವನ್ನು ಹೂಡಿ, ಈ ಬರ್ಡ್ ಮತ್ತು ಕಂಪೆನಿಯು ೨೫೦ ಸೇರಡಾ ವಾಲನ್ನು ನಡೆಮಾಡಿಕೊಳ್ಳುವಂತೆ ಮಾಡಿ, ಸರಕಾರಕ್ಕೆ ಆ೦ಗ ನೇಕವಾನ್ನು ದೊರೆಯುವಂತೆಸಗಿದ್ದರು.

ಯಾರು ಏನನ್ನು ಬೇಕಾದರೂ ಹೇಳಲಿ, ಬಿಡಲಿ, ಸರಕಾರವು ಈ ಸಂಗತಿಯ ಪರಿಶೀಲನೆ ಮಾಡಬೇಕು. ರಾಜಕೀಯ ಮಟ್ಟದಲ್ಲಿ ಮಂತ್ರಿಗಳ ಭ್ರಷ್ಟಾಚಾರದ ಸಬ್ಜೆಕ್ಟು ಕುರಿತು ಕಾಂಗ್ರೆಸ್ ಪೈಕಮಾಂಡು ತೀವ್ರವಾಗಿ ಪರಿಶೀಲನೆ ನಡೆಸುವ ಅಗತ್ಯವೀಗ ಅತ್ಯಧಿಕವಾಗಿದೆ. ಬರ್ಡ್ ಮತ್ತು ಕಂಪೆನಿಯ ವ್ಯವಹಾರದಲ್ಲಿ ನ್ಯಾಯಾಂಗನ ಉನ್ನತಾಧಿಕಾರಿಗಳವ್ವಯೂ ಒಬ್ಬಿಬ್ಬರ ಕೈವಾಡವಿದೆಯೆಂಬ ಕೆಂವದಂತಿಯೂ ಹರಡಿದೆ. ಆದುದರಿಂದ ಈ ಬೆಳ್ಳ ವಿಚಾರವನ್ನು ಸೂಕ್ತ ವಿಚಾರಣೆಗೆ ಒಳಪಡಿಸುವುದು ಇಂದು ಅನಿವಾರ್ಯವೆನಿಸುತ್ತದೆ.

ಪ್ರಧಾನಿ ನೆಹರುರವರು ಈ ತಿಂಗಳ ಮೊದಲಲ್ಲಿ ಕಲಕತ್ತೆಯನ್ನು ಸಂದರ್ಶಿಸಿದ ಸಂದರ್ಭದಲ್ಲಿ ಅಲ್ಲಿ ನಡೆದ ಚಟ್ಟೆವಟಿಕೆಗಳು ಇಂತಹ ವಿಚಾರಣೆ ನಡೆಯುವುದಕ್ಕೆ ಪ್ರೇರಕವಾಗ ವ ನಿರೀಕ್ಷೆಯಿದೆ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. 14 CT ಚಿನ್ನದ ಆಭರಣಗಳಲ್ಲಿ ೫೮½% ಶುದ್ಧ ಪುತ್ತಳಿ ಚಿನ್ನ ಇರುತ್ತದೆ. ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ರೇಟಿಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸು ಸಿಕ್ಕಿರುತ್ತದೆ.

ಮುಮುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪತ್ರ ಕೊಂಡು ಪಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66

• ಕುಮಾರಿ ಬಿಲ್ಲೆಗಳು •

(ರಿಜಿಸ್ಟರ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗಾವ ಶಾಶ್ವತ ನಿವಾರಣೆಗೆ ಸಮಯೋಚಿತವಾದ ಅಮೂಲ್ಯ ಔಷಧಿ ಸುಶ್ರೂಷೆ!

ಟ್ರಯಲ್ 1ರ ಸಾವಾಸ್ಯ ರೂ. 4/-. ಮಧ್ಯಮ ರೂ. 6/-. ಉತ್ತಮ ರೂ.9/-

P. Devee & Co. (N. J.) Calcutta—40

ರಿಲೆಗಳಿಗೆ ಬೇಕಾಗುವ

ಯಾವತ್ತೂ ಧಾನ್ಯಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಸಂಯುಕ್ತ ಸಂಸ್ಥಾನಗಳ

ಸ್ವಾತಂತ್ರ್ಯದ ತೊಟ್ಟಿಲು — ಫಿಲಡೆಲ್ಫಿಯಾ

ಅಮೆರಿಕದ ನಾಲ್ಕನೆಯ ಬ್ಯುಸನ್ನಗರವಾದ ಫಿಲಡೆಲ್ಫಿಯಾನಲ್ಲಿ, ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಪ್ರಥಮ ಘಟನೆಗಳು ಸಂಭವಿಸಿದವು. ಚಾರಿತ್ರಿಕವಾಗಿ ಈ ಅನೇಕರಿಂದ ಪ್ರಥಮ ಸರ್ಕಾರ ನಗರವೆನ್ನಲೀಕು. ಯಾಕೆಂದರೆ ಅಮೆರಿಕ ಹುಟ್ಟಿದ ಸ್ಥಳವೇ ಫಿಲಡೆಲ್ಫಿಯ.

೧೭೮೨ರಲ್ಲಿ ಲೆಫ್ಟೆನೆಂಟ್ ಗವರ್ನರ್ ಮತ್ತು ಕಾನೂನಿಕಾರ್ಯಗಳನ್ನೆಲ್ಲಿ ಕ್ರಾಂತಿಯ ಪ್ರಭುತ್ವ ಹೋರಾಟ ನಡೆದ ನಂತರ ರಾಷ್ಟ್ರೀಯ ಸರ್ಕಾರ ಇಲ್ಲೇ ಇತ್ತು. ೧೭೮೫ರಲ್ಲಿ ಬ್ರಿಟಿಷರು ಇವನ್ನು ಆಕ್ರಮಿಸಿಕೊಂಡರು. ಸ್ಯಾಮ್ಯುಯಿಲ್ ಪೆನ್ಸಿಲ್ವೇನಿಯದ ರಾಜ್ಯಭವನವನ್ನಾಗಿ ರಚಿಸಲಾಯಿತು.

ಅಮೆರಿಕದ ಸಂಯುಕ್ತ ಸಂಸ್ಥಾನಗಳ ಅವಿಭಾವನೆಗೆ ಕಾರಣವಾದ ಎಲ್ಲ ಪ್ರಮುಖ ನಿರ್ಧಾರಗಳನ್ನೂ ಈ ಸ್ವಾತಂತ್ರ್ಯಭವನದಲ್ಲೇ ಕೈಗೊಳ್ಳಲಾಯಿತು. ಕಾಂಟಿನೆಂಟಲ್ ಸೈನ್ಯದ ನೇತೃತ್ವವನ್ನು ಅಧಿಕೃತವಾಗಿ ಜಾರ್ಜ್ ವಾಷಿಂಗ್ಟನ್ ಸ್ವೀಕರಿಸಿದ್ದು ಅಲ್ಲಿಯೇ. ಸ್ವಾತಂತ್ರ್ಯ ಘೋಷಣೆ ಅಂಗೀಕೃತವಾದುದ್ದು, ಕಾನ್ಫೆಡರೇಷನ್ನಿನ ನಿಬಂಧನೆಗಳ ಸ್ಥಿರೀಕರಣವಾದದ್ದು, ಅಮೆರಿಕದ ಸಂವಿಧಾನ ರಚಿತವಾದದ್ದು ಇಲ್ಲಿಯೇ...ರಾಜ್ಯಭವನದ ಆವರಣದಲ್ಲಿ ಸೇರಿದ್ದ ಜಯ ಜಯಕಾರ ಮಾಡುತ್ತಿದ್ದ ಜನಗಳಿಗೆ ಸ್ವಾತಂತ್ರ್ಯ ಘೋಷಣೆಯನ್ನು ಓದಿ ಹೇಳುತ್ತಿದ್ದಾಗ ಮೇಲುಗಡೆ, ಗೋಪುರದಲ್ಲಿ ಸ್ವಾತಂತ್ರ್ಯದ ಘಂಟೆ ಬಾರಿಸಿತು. ಅದು ಘೋಷಿಸಿದ್ದು ಹೊಸ ರಾಷ್ಟ್ರವೊಂದರ ಉದಯವನ್ನಲ್ಲ —ವರ್ಷಾಂತರಗಳ ದೃಢ ಹೋರಾಟದ ಕ್ಕಾಗಿ ಇನ್ನೂ ಕಾದಿತ್ತು—ಸಂಯುಕ್ತ ಜನತೆಯ ಏಕಮೇವ ಧ್ಯೇಯವನ್ನು ಆ ಗಂಟೆ ಘೋಷಿಸಿತ್ತು.

ಅಮೆರಿಕದ ಕ್ರಾಂತಿಗೆ ಸಹಾಯ ಮಾಡಿದ ಫ್ರೆಂಚ್ ವೀರ ಲಫಾಯೆಟ್ಟಿನ ಸ್ವಾಗತಕ್ಕಾಗಿ ಮತ್ತೊಮ್ಮೆ ಆ ಗಂಟೆ ಗಲತಲರಲ್ಲಿ ಬಾರಿಸಿತು. ಅಮೆರಿಕದ ಮುಖ್ಯ ನ್ಯಾಯಾಧೀಶ ಜಾನ್ ಮಾರ್ಷಲ್ ನಿಧನರಾದಾಗ ಗಲಿಸುರಲ್ಲಿ ಆ ಗಂಟೆ ಮತ್ತೆ ಬಾರಿಸಿತು. ಆಗ ಅದು ಸೀಳುಬಿಟ್ಟಿತು. ಈ ಸೀಳಿರುವ ಗಂಟೆ ದೇಶದ ಪೂಜ್ಯ ಅವಶೇಷಗಳಲ್ಲೊಂದು. ಅದರ ಮೇಲ್ಭಾಗದ ಮತ್ತು ಸುತ್ತ ಬೈಬಲ್ಲಿನ ಲೆವಿಟಿಕಸ್ ನ ೨೫ನೇ ಅಧ್ಯಾಯದ ಹತ್ತನೇ ಪದ್ಯ "ದೇಶಾದ್ಯಂತ ಮತ್ತು ದೇಶದ ನಿವಾಸಿಗಳೆಗೆಲ್ಲ ಸ್ವಾತಂತ್ರ್ಯವನ್ನು ಘೋಷಿಸಿ" ಎಂಬುದನ್ನು ಬರೆಯಲಾಗಿದೆ.

ಸ್ವಾತಂತ್ರ್ಯ ಭವನದ ಸವಿಾಪದಲ್ಲಿರುವ ಇನ್ನೊಂದು ಚಾರಿತ್ರಿಕಭವನ ಕಾಂಗ್ರೆಸ್ ಹಾಲ್. ಫಿಲಡೆಲ್ಫಿಯ ಕೌಂಟಿಯ ನ್ಯಾಯಾಸ್ಥಾನದ ಕಟ್ಟಡವನ್ನಾಗಿ ಉಪಯೋಗಿಸಲು ೧೭೯೯ರಲ್ಲಿ ಇದನ್ನು ನಿರ್ಮಿಸಲಾಯಿತು. ೧೭೯೦ರ ಡಿಸೆಂಬರ ೬ ರಿಂದ ೧೮೦೦ರ ಮೇ ೪ರ ನಡುವಿನ ಅವಧಿಯಲ್ಲಿ ಕಾಂಗ್ರೆಸ್ ಸಭೆಯು ಅಧಿವೇಶನಗಳನ್ನು ಇಲ್ಲಿ ನಡೆಸಲಾಯಿತು. ಈ ದಶಕದಲ್ಲಿ ಈ ಭವನದಲ್ಲಿ ಅನೇಕ ಮಹತ್ವಪೂರ್ಣ ಘಟನೆಗಳು ನಡೆದವು. ಜಾರ್ಜ್ ವಾಷಿಂಗ್ಟನ್ ತಮ್ಮ ಎರಡನೇ ಉದ್ಘಾಟನಾ ಭಾಷಣವನ್ನು ಮಾಡಿದರು; ಜಾನ್ ಆಡಮ್ಸ್ ಅಮೆರಿಕದ ಎರಡನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು; ವಾಷಿಂಗ್ಟನ್ ಅಮೆರಿಕದ ಜನತೆಗೆ ತಮ್ಮ ಬೀಳ್ಕೊಡುವ ಭಾಷಣವನ್ನು ಮಾಡಿದರು.

ಸವಿಾಪದಲ್ಲೇ ಫಿಲಡೆಲ್ಫಿಯ ದೇಶದ ರಾಜಧಾನಿಯಾಗಿದ್ದಾಗ ಅಮೆರಿಕದ ಸುಪ್ರೀಂ ಕೋರ್ಟ್ ಸೇರುತ್ತಿದ್ದ ೧೭೯೧ರಲ್ಲಿ ಕಟ್ಟಲಾದ ಹಳೆಯ ನಗರ ಭವನವಿದೆ.

ಅಸಕ್ತಿ ಕೆರಳಿಸುವಂತಹ ಇನ್ನೊಂದು ಕಟ್ಟಡವೆಂದರೆ ಅಮೆರಿಕದ ದಾರ್ಶನಿಕ ಸಂಘದ ಕಟ್ಟಡ. ಅನೇಕ ವಸ್ತುಗಳನ್ನು ಕಂಡುಹಿಡಿದ ಮತ್ತು ರಾಜನೀತಿ ನಿಪುಣನಾಗಿದ್ದ ಬೆಂಜಮಿನ್ ಫ್ರ್ಯಾಂಕ್ಲಿನ್ ಮತ್ತು ಆತನ ಸಹಯೋಗಿಗಳು ಎತ್ತಿದ ನಿಧಿಯಿಂದ ಇದನ್ನು ೧೭೮೫ರಲ್ಲಿ ಕಟ್ಟಿದರು. ಇದು ಅಮೆರಿಕದ ಸಂಘಗಳಲ್ಲಿ ತುಂಬಾ ಹಳೆಯ ಬಾದದ್ದು ಮತ್ತು ವಿಶಿಷ್ಟವಾದದ್ದು. ೧೭೫೨ರಲ್ಲಿ ತಾನು ಪ್ರಾರಂಭಿಸಿದ್ದ "ಜಂಟ್ ಕ್ಲಬ್"ನ ಬೆಳವಣಿಗೆಯಾಗಿ ಇದನ್ನು ೧೭೫೩ ಬೆಂಜಮಿನ್ ಫ್ರ್ಯಾಂಕ್ಲಿನ್ ಸ್ಥಾಪಿಸಿದನು. ೧೭೬೯ರಲ್ಲಿ ಇದೇ ರೀತಿಯ ಉದ್ದೇಶಗಳನ್ನು ಹೊಂದಿದ್ದ ಅಮೆರಿಕನ್ ಸೊಸೈಟಿಯೊಡನೆ ಇದು ವಿಲೀನವಾಗಿ ಅಮೆರಿಕನ್ ದಾರ್ಶನಿಕಸಂಘವೆಂಬ ಹೆಸರುಪಡೆಯಿತು. ಇದರಉದ್ದೇಶ"ಉಪಯೋಗಕಾರಕ ಜ್ಞಾನವನ್ನು ಅಭಿವೃದ್ಧಿಪಡಿಸುವುದು"ಎಂದಿತ್ತು. ಈ ಸಂಘದಸದಸ್ಯರಪಟ್ಟಿಯಲ್ಲಿ ಅಮೆರಿಕದ ೧೩ ಜನ ಅಧ್ಯಕ್ಷರು ಹೆಸರಿದೆ. ಸ್ವಾತಂತ್ರ್ಯ ಘೋಷಣೆಗೆ ಸಹಿಮಾಡಿದವರಲ್ಲಿ ೧೪ ಜನರ ಹೆಸರಿದೆ. ಫೆಡರಲ್ ರಾಜ್ಯಾಂಗಕ್ಕೆ ಸಹಿ ಹಾಕಿದವರಲ್ಲಿ ೧೮ ಜನರು ಇದರ ಸದಸ್ಯರಾಗಿದ್ದರು. ೧೭ ಜನ ಸುಪ್ರೀಂ ಕೋರ್ಟು ನ್ಯಾಯಾಧೀಶರು, ೧೧ ಜನ ನೊಬೆಲ್ ಬಹುಮಾನಿತರು ಮತ್ತು ಇತರ ಪ್ರಮುಖ ವ್ಯಕ್ತಿಗಳು ಇದರ ಸದಸ್ಯರಾಗಿದ್ದಾರೆ. ಲಕ್ಷಾಂತರ ಡಾಲರುಗಳ ಬೆಲೆಬಾಳುವುದೆಂದು ಬೆಲೆಕಟ್ಟಲಾದ ಈ ಸಂಘದ ಸಂಗ್ರಹಗಳಲ್ಲಿ ವೈಜ್ಞಾನಿಕ ಪುಸ್ತಕಗಳು, ನಿಬಂಧಗಳು, ಅಪೂರ್ವ ಹಸ್ತಪ್ರತಿಗಳೂ, ತೈಲಚಿತ್ರಗಳೂ, ಇತರ ಚಾರಿತ್ರಿಕ ವಸ್ತುಗಳೂ ಇವೆ.

ಮಿತ್ರರಾಷ್ಟ್ರಗಳ ಮೈತ್ರಿ ಪತ್ರ

(ನಂತರ ಮುಂದಿನ)

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನದ ಪ್ರಕಾರ ಅಧ್ಯಕ್ಷರಾಗಿ ಆಯ್ಕೆಯಾಗಲು ಅಭ್ಯರ್ಥಿಯು ಕನಿಷ್ಠ ೩೫ ವರ್ಷ ವಯಸ್ಸಿನವನಾಗಿರಬೇಕು. ಅಮೆರಿಕದಲ್ಲಿ ಜನಿಸಿರಬೇಕು. ಅಮೆರಿಕದಲ್ಲಿ ಕನಿಷ್ಠ ೧೪ ವರ್ಷಗಳಾದರೂ ವಾಸಿಸಿರಬೇಕು. ಅಧ್ಯಕ್ಷರ ಅಧಿಕಾರಾವಧಿ ೪ ವರ್ಷಗಳು. ಅಧ್ಯಕ್ಷರಾಗಿ ಆಯ್ಕೆಯಾಗಲು ಒಬ್ಬ ವ್ಯಕ್ತಿ ಎಷ್ಟು ಬಾರಿ ಬೇಕಾದರೂ ಸ್ಪರ್ಧಿಸಬಹುದು. ಆದರೆ ಇಲ್ಲಿಯವರೆಗೆ ಯಾರೂ ಎರಡು ಬಾರಿಗಿಂತ ಹೆಚ್ಚು ಸಲ ಅಧ್ಯಕ್ಷರಾಗಿ ಆಯ್ಕೆಯಾಗಿಲ್ಲ. ಅಧ್ಯಕ್ಷರ ಸಂಬಳ ವರ್ಷಕ್ಕೆ ೧೦೦,೦೦೦ ಡಾಲರ್. ಅಧ್ಯಕ್ಷರ ಅಧಿಕಾರಾವಧಿ ಮುಗಿದ ಮೇಲೆ ಅವರಿಗೆ ಪಿಂಚಣಿ ಸಿಗುತ್ತದೆ. ಅಧ್ಯಕ್ಷರ ಅಧಿಕಾರಾವಧಿ ಮುಗಿದ ಮೇಲೆ ಅವರಿಗೆ ಪಿಂಚಣಿ ಸಿಗುತ್ತದೆ.

ಅಮೆರಿಕದ ಸಂವಿಧಾನ ರಚಿತವಾಗಿ ಸುಮಾರು ೧೭೫ ವರ್ಷಗಳಾಗಿವೆ. ಈ ಅವಧಿಯಲ್ಲಿ ಅಮೆರಿಕದ ಸಂವಿಧಾನ ಅನೇಕ ಬಾರಿ ತಿದ್ದುಪಡಿಗೊಳಗಾಗಿದೆ. ಆದರೆ ಅದರ ಮೂಲ ಆಶಯಗಳು ಮಾತ್ರ ಬದಲಾಗಿಲ್ಲ. ಅಮೆರಿಕದ ಸಂವಿಧಾನ ಜಗತ್ತಿನ ಅತ್ಯಂತ ಪ್ರಗತಿಪರ ಸಂವಿಧಾನಗಳಲ್ಲಿ ಒಂದು ಎಂಬುದರಲ್ಲಿ ಸಂದೇಹವಿಲ್ಲ.

ಅಮೆರಿಕದ ಸಂವಿಧಾನದ ಪ್ರಕಾರ ಅಮೆರಿಕದ ಸಂಸತ್ತಿಗೆ ಎರಡು ಸದನಗಳಿವೆ. ಒಂದು ಪ್ರತಿನಿಧಿ ಸಭೆ, ಇನ್ನೊಂದು ಸೆನೆಟ್. ಪ್ರತಿನಿಧಿ ಸಭೆಯ ಸದಸ್ಯರನ್ನು ಜನರು ನೇರವಾಗಿ ಆಯ್ಕೆ ಮಾಡುತ್ತಾರೆ. ಸೆನೆಟ್ ಸದಸ್ಯರನ್ನು ಆಯಾ ರಾಜ್ಯಗಳ ಶಾಸನಸಭೆಗಳು ಆಯ್ಕೆ ಮಾಡುತ್ತವೆ. ಪ್ರತಿನಿಧಿ ಸಭೆಯ ಸದಸ್ಯರ ಅಧಿಕಾರಾವಧಿ ೨ ವರ್ಷಗಳು. ಸೆನೆಟ್ ಸದಸ್ಯರ ಅಧಿಕಾರಾವಧಿ ೬ ವರ್ಷಗಳು. ಪ್ರತಿನಿಧಿ ಸಭೆಯ ಸದಸ್ಯರ ಸಂಖ್ಯೆ ೪೩೫. ಸೆನೆಟ್ ಸದಸ್ಯರ ಸಂಖ್ಯೆ ೧೦೦. ಪ್ರತಿನಿಧಿ ಸಭೆಯ ಸದಸ್ಯರ ಸಂಬಳ ವರ್ಷಕ್ಕೆ ೨೨,೫೦೦ ಡಾಲರ್. ಸೆನೆಟ್ ಸದಸ್ಯರ ಸಂಬಳ ವರ್ಷಕ್ಕೆ ೩೫,೦೦೦ ಡಾಲರ್.

ಅಮೆರಿಕದ ಸಂವಿಧಾನ ಪ್ರಕಾರ ಅಮೆರಿಕದ ಸಂಸತ್ತಿಗೆ ಶಾಸನ ರಚನೆಯ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಯುದ್ಧ ಘೋಷಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಸಾಲ ಮಾಡುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ತೆರಿಗೆ ವಿಧಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಹಣ ಮುದ್ರಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಂಚೆ ಕಛೇರಿಗಳನ್ನು ಸ್ಥಾಪಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಸೈನ್ಯವನ್ನು ಬೆಳೆಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಸಂವಿಧಾನಕ್ಕೆ ತಿದ್ದುಪಡಿ ತರುವ ಅಧಿಕಾರವಿದೆ.

ಅಮೆರಿಕದ ಸಂವಿಧಾನ ಪ್ರಕಾರ ಅಮೆರಿಕದ ಸಂಸತ್ತಿಗೆ ಅಧಿಕಾರವಿರುವ ಕೆಲವು ವಿಷಯಗಳು ಹೀಗಿವೆ: ಅಮೆರಿಕದ ಸಂಸತ್ತಿಗೆ ಅಮೆರಿಕದ ಸಂವಿಧಾನಕ್ಕೆ ವಿರುದ್ಧವಾಗಿರುವ ಕಾನೂನುಗಳನ್ನು ರದ್ದುಪಡಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಆಯ್ಕೆ ಮಾಡುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಅಧ್ಯಕ್ಷರನ್ನು ಪದಚ್ಯುತಿಗೊಳಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಅಧ್ಯಕ್ಷರ ಕೆಲವು ನೇಮಕಾತಿಗಳನ್ನು ಅನುಮೋದಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಅಧ್ಯಕ್ಷರ ಕೆಲವು ಒಪ್ಪಂದಗಳನ್ನು ಅನುಮೋದಿಸುವ ಅಧಿಕಾರವಿದೆ.

ಅಮೆರಿಕದ ಸಂವಿಧಾನ ಪ್ರಕಾರ ಅಮೆರಿಕದ ಸಂಸತ್ತಿಗೆ ಅಧಿಕಾರವಿರುವ ಕೆಲವು ವಿಷಯಗಳು ಹೀಗಿವೆ: ಅಮೆರಿಕದ ಸಂಸತ್ತಿಗೆ ಅಮೆರಿಕದ ಸಂವಿಧಾನಕ್ಕೆ ವಿರುದ್ಧವಾಗಿರುವ ಕಾನೂನುಗಳನ್ನು ರದ್ದುಪಡಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಆಯ್ಕೆ ಮಾಡುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಅಧ್ಯಕ್ಷರನ್ನು ಪದಚ್ಯುತಿಗೊಳಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಅಧ್ಯಕ್ಷರ ಕೆಲವು ನೇಮಕಾತಿಗಳನ್ನು ಅನುಮೋದಿಸುವ ಅಧಿಕಾರವಿದೆ. ಅಮೆರಿಕದ ಸಂಸತ್ತಿಗೆ ಅಮೆರಿಕದ ಅಧ್ಯಕ್ಷರ ಕೆಲವು ಒಪ್ಪಂದಗಳನ್ನು ಅನುಮೋದಿಸುವ ಅಧಿಕಾರವಿದೆ.

ಮೊದಲ ಹೆಜ್ಜೆ

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಲು ನೀವಿಡುವ ಮೊದಲ ಹೆಜ್ಜೆ—ನಿಮ್ಮ ಪ್ರಥಮ ಪ್ರಯತ್ನ ಅತ್ಯಂತ ಪ್ರಾಮುಖ್ಯವಾದುದು. ಯಾಕೆಂದರೆ ಅದು ನಿಮಗೆ ಆರ್ಥಿಕ ಸುಸ್ಥಿರತೆ, ಸಾಮಾಜಿಕ ಯಶಸ್ಸುಗಳಿಗೆ ಹೊಸ ಅವಕಾಶವನ್ನು ಒದಗಿಸಿಕೊಟ್ಟು ಭವಿಷ್ಯತ್ತಿನ ಸುಖದತ್ತ ನಿಮ್ಮನ್ನು ಮುನ್ನಡೆಸುವುದು.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಬ್ಯಾಂಕಿಂಗ್ & ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ. (ಸೌತ್ ಕೆನರಾ ಜಿಲ್ಲೆ)

ಸ್ಥಾಪನೆ: ೧೯೨೫

ಮುಖವನ್ನು ಅತಿಸರೇಕು. ಅದರೊಂದಿಗೇ ಕಷ್ಟಕ್ಕೆ ಸಿದ್ಧನಾಗಿರಬೇಕು. ಅದೇ ಉತ್ತಮ ಜೀವನದ ದಾರಿ.

• ೦ ೦ ೦

ಮನೆಕಟ್ಟುವದು ಅದರೊಳಗೆ ಜೀವಿಸಲು ವಿನಹ ನೋಡಿಕೊಂಡಿರಲು ಅಲ್ಲ. ಆದ್ದರಿಂದ ಮನೆಕಟ್ಟುವಾಗ ನೋಟಕ್ಕಿಂತಾ ಅಹುಕೂಲತೆಗೆ ಪ್ರಾಧಾನ್ಯತೆಬೇಕು.

• ೦ ೦ ೦

ನಿಜವಾಗಿಯೂ ದೊಡ್ಡವರಿಸಿದವರು ಬಂತವಾಳವೆಂದರೆ ಅವರಲ್ಲಿ ಹೊಸಸುವ ನಮ್ರತೆ.

Edited, Printed & Published by K. H.Shetty. at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ
Regd. No. B.G 176
Vol. 42 No. 46

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 25—7—1963 ಗುರುವಾರ

13 ನ ಪೈಸೆ
ನಾ. ಚಂದಾ ರೂ. ೯–75
ಸಂಪುಟ ೪೨ ಸಂಚಿಕೆ ೪೬

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿ:
ಉ ವಾ
ಸಹಾಯ
ಸಲ್ಲಿಸಿ

ಕಾಂಗ್ರೆಸ್ಸಿಗೊಂದು ಪಂಥಾಹ್ವಾನ

ಉತ್ತರ ಪ್ರದೇಶದ ತೀವ್ರ ಬಿಕ್ಕಟ್ಟು

ರಾಷ್ಟ್ರದ ಇಂದಿನ ಗಂಡಾಂತರ ಪರಿಸ್ಥಿತಿಯಲ್ಲಿ ಬಾಹ್ಯ ಶತ್ರುವನ್ನು ಪೂರ್ಣ ದಮನ ಮಾಡಲು ಶಕ್ತರಾಗಬೇಕಾದ ನಾವಿಂದು ಆಂತರಿಕವಾಗಿ ಶಕ್ತಿಹೀನರಾಗುತ್ತಿರುವಂತಹ ಘಟನೆಗಳು ನಿಜಕ್ಕೂ ಖೇದಪ್ರದವಾಗಿವೆ. ನಮ್ಮ ಧುರೀಣರು ಇಂದು ರಾಜಕೀಯದಲ್ಲಿ ಮುಳುಗಿ ದೇಶದ ಸಾರ್ವತ್ರಿಕ ಹಿತವನ್ನು ನೋಡುವುದಕ್ಕಿಂತ ನಮ್ಮ ಸ್ಥಾನಮಾನಗಳತ್ತ ಪ್ರಥಮ ಲಕ್ಷ್ಯ ಕೊಡುವುದನ್ನು ಕಾಣುತ್ತಿದ್ದೇವೆ. ಒಂದು ರಾಷ್ಟ್ರದಲ್ಲಿ, ಒಂದು ಸಂಸ್ಥೆಯಲ್ಲಿ ಯಾವುದೇ ಒಬ್ಬ ಧುರೀಣನು ಸರ್ವಾಧಿಕಾರಿಯಾಗಿ, ಸ್ವಾರ್ಥಿಯಾಗಿ ಕೆಲಸ ಮಾಡಬಯಸಿದಾಗ ಅಲ್ಲಿ ಅವನು ರಾಷ್ಟ್ರಹಿತವನ್ನು ಕಡೆಗಣಿಸಿ ಸ್ವಹಿತವನ್ನು ಬಯಸುವುದು ಸ್ವಾಭಾವಿಕವೆಂದು ಹೇಳಿದರೆ ತಪ್ಪಲ್ಲ. ಯಾಕೆಂದರೆ ಇಂದು ಪ್ರಾವೀಣರಾಗಿ— ಶ್ರದ್ಧೆಯಿಂದ - ಸೇವೆ ಮಾಡುವ ಮನೋಪ್ರವೃತ್ತಿಯ ಬದಲು ತಾನು—ತನ್ನದು—ತನ್ನವರು ಎಂಬ "ಅಹಂ" ಬಂದು ಅದರಿಂದ ಅಪೇಕ್ಷಣೀಯವಿಲ್ಲದ ಪರಿಸ್ಥಿತಿ ಉಂಟಾಗುತ್ತಿದೆ. ಇಂದು ಆಂತರಿಕ ಶತ್ರುಗಳನ್ನು ಜಯಿಸಿ ಬಾಹ್ಯ ಶತ್ರುಗಳನ್ನು ಹೊಡೆದೋಡಿಸಲು ಬದ್ಧಕಂಕಣರಾಗಬೇಕಾಗಿರುವ ನಾವೇ ನಮ್ಮೊಳಗೆ ಭಿನ್ನಾಭಿಪ್ರಾಯಗೊಂಡು ಸಹನೆ ತಪ್ಪಿ, ಪಕ್ಷ-ಸಂಘಗಳಿಗಾಗಿ ಜಗಳಾಡುವುದು ಸರಿಯಲ್ಲ. ಆದರೆ ದುರ್ದೈವ್ಯದಿಂದ ಇಂದು ನಮ್ಮಲ್ಲಿ ಇಂಥ ಹಲವು ಘಟನೆಗಳು ನಡೆಯುತ್ತಿವೆ. ಕಾಂಗ್ರೆಸ್ಸಿನ ಶತ್ರು-ಧ್ಯೇಯಗಳನ್ನು ಮೂಲೆವಾಲು ಮಾಡಿ ತಮ್ಮ ಪ್ರತಿಷ್ಠೆ ಸ್ವಾರ್ಥತ್ತೆಗಳನ್ನು ಮೆರೆ.. ಬಯಸುವಂಥ ನಾಯಕ ಮಣಿಗಳು ಪ್ರತಿ ರಾಜ್ಯ ಸರಕಾರದಲ್ಲಿ ಇಂದು ತಾಂಡವವಾಡುತ್ತಿರುವುದರಿಂದ ಕಾಂಗ್ರೆಸ್ಸು ಇಂದು ಆಂತರಿಕವಾಗಿಯೂ ಬಹಿರಂಗವಾಗಿಯೂ ತುಂಬಾ ಶಕ್ತಿಗುಂದುತ್ತಾ ಬರುತ್ತಿದೆ. ದೇಶದ ಯಾವುದೇ ರಾಜ್ಯದಲ್ಲಿ ಇಂದು ವಿವಾದವಿಲ್ಲದ-ಭಿನ್ನಾಭಿಪ್ರಾಯವಿಲ್ಲದ ಕಾಂಗ್ರೆಸ್ ಸರಕಾರವಿಲ್ಲ ಕಾಂಗ್ರೆಸ್ಸೊಳಗಣ ಪುಂಡು ಮನೋವೃತ್ತಿ, ವಿವಿಧ ಪಕ್ಷಗಳು ಇಂದು ಪ್ರತಿ ರಾಜ್ಯ ಸರಕಾರದಲ್ಲಿ ತಲೆಯೆತ್ತಿವೆ. ನಮ್ಮ ದೇಶದ ಹದಿನಾಲ್ಕು ಪ್ರಾಂತ್ಯಗಳಲ್ಲಿ ನೂರಾರು ತರತರದ ಸಮಸ್ಯೆಗಳು ತಾಂಡವವಾಡುತ್ತಿವೆ ಮೈಸೂರಿನಲ್ಲಿ ಮಂತ್ರಿ ಮಂಡಲಕ್ಕೂ ಪಾರ್ಲಿಮೆಂಟರಿ ಸದಸ್ಯರಿಗೂ ಬದ್ಧ ದ್ವೇಷವಿದ್ದರೆ, ರಾಜಸ್ಥಾನದಲ್ಲಿ ಮಂತ್ರಿ ಮಂಡಲ ಉರುಳಿಸುವ ಹುಂಚಿಕೆಯಾಗುತ್ತಿದೆ. ಆಂಧ್ರದಲ್ಲಿ ಮುಖ್ಯ ಮಂತ್ರಿ ಶ್ರೀ ರೆಡ್ಡಿಯವರು ಇನ್ನು ಶ್ರೀ ಸಂಜೀವಯ್ಯನವರು ಆಂಧ್ರ ರಾಜಕೀಯಕ್ಕೆ ಬಾರದಿದ್ದರೆ ಸಾಕೆಂದು ಹೊರಕೆ ಹೇಳಿದ್ದರೆ ಬಿಹಾರ್‌ನಲ್ಲಿ ಮುಖ್ಯ ಮಂತ್ರಿಗಳೇ ಲಂಚ ಕೋರರೆಂದು ಜನತೆ ಹೇಳುತ್ತಿದೆ. ಕೇರಳ ದಲ್ಲಿ ಮಂತ್ರಿ ಮಂಡಲದ ಮೇಲೆ ಲಂಚ ಸ್ವೀಕರಿಸಿದುದಕ್ಕಾಗಿ ಆರೋಪವಾಗಿದ್ದರೆ ಪಶ್ಚಿಮ ಬಂಗಾಲದಲ್ಲಿ ಈಗಾಗಲೇ ಮಂತ್ರಿ ಮಂಡಲವುರುಳಿಸಲು ಅವಿಶ್ವಾಸ ಠರಾವು ಮುಂಡಿಸಲು ಅನುಮತಿ ಕೊಡಲಾಗಿದೆ. ಆದರೆ ಇಂದು ಎಲ್ಲಾ ರಾಜ್ಯಗಳಿಗಿಂತಲೂ ತುಂಬಾ ವಿಷಮ ಪರಿಸ್ಥಿತಿಗೇರಿರುವ ಮತ್ತು ತುಂಬಾ ಕುತೂಹಲಕಾರಿ ಪರಿಸ್ಥಿತಿ ಉಂಟು ಮಾಡಿರುವ ಘಟನೆಯೆಂದರೆ ಉತ್ತರ ಪ್ರದೇಶದ ಮಂತ್ರಿ ಮಂಡಲ ದಲ್ಲಾದ ಬಿಕ್ಕಟ್ಟು. ಇದು ಒಂದೇ ಮನೆಯವರು ಮಾಡಿಕೊಂಡಿರುವ ಆಂತರಿಕ ಜಗಳ. ಇದರಿಂದ ಇತ್ತಂಡದವರಿಗೂ ಸುಖವಿಲ್ಲ ಶಾಂತಿಯಿಲ್ಲವೆಂಬುದು ಖಂಡಿತ.

ಸರ್ವಾಧಿಕಾರಿ ಮನೋವೃತ್ತಿ

ಇಂದು ಉತ್ತರ ಪ್ರದೇಶದಲ್ಲಿನ ಈ ಘಟನೆಗೆ ಪ್ರಮುಖ ಕಾರಣವೆಂದರೆ ಅಲ್ಲಿನ ಮುಖ್ಯ ಮಂತ್ರಿ ಶ್ರೀ ಚಂದ್ರಭಾನು ಗುಪ್ತರ ಸರ್ವಾಧಿಕಾರಿ ಮನೋವೃತ್ತಿ. ತನಗಾಗದವ ರಾಜ್ಯದ್ರೋಹಿ — ನೀಚ ಎಂದು ಅವರು ಬಗೆದು ಇಂಥ ಕಾರ್ಯ ಮಾಡುತ್ತಿದ್ದಾರೆ. ತನ್ನ ಮಂಡಲದಲದವರೇ ತನಗಾಗದವರೆಂದು ಅವರು ತಿಳಿದು ಅವನನ್ನು ತನ್ನಮಂಡಲದಿಂದ ತನ್ನ ಇಚ್ಛೆಗನುಗುಣವಾಗಿ ಶ್ರೀ ಅಲಗುರಾಯ ಶಾಸ್ತ್ರಿಯವರನ್ನು ಕಿತ್ತೆಸೆಯುಲು ಪಣತೊಟ್ಟಿದ್ದಾರೆ. ಒಂದು ಪಕ್ಷದ ನಾಯಕನಾಗಿರುವವರು ಈ ತೆರನ ರಾಜಕೀಯ ಗತ್ತು, ಗಾರಿಕೆ ಪ್ರದರ್ಶನಮಾಡಿ ಅಬ್ಬರಮಾಡಿ ತನಗಾಗದ ವ್ಯಕ್ತಿಯನ್ನು ರಾಜ್ಯಸರಕಾರದಿಂದ ಕಿತ್ತೆಸೆಯುವುದು ಪ್ರಜಾಪ್ರಭುತ್ವವಾದಿ ದೇಶಕ್ಕೆ ಭೂಷಣವಿಪ್ಪ್ರಾಯವಾಗುವದಿಲ್ಲ. ತನಗಾಗದವನು ತನ್ನ ಮನೋವೃತ್ತಿಗೆ ವಿರುದ್ಧವಿರುವವರು ಎಂದಿದ್ದರೆ ಅವನ್ನು ತನ್ನ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳುವ ಪೂರ್ವದಲ್ಲೇ ಜೆನ್ನಾಗಿ ವಿಮರ್ಶಿಸಬೇಕಿತ್ತು ಹೊರತು ಮಂಡಲದ ಅರ್ಧದಲ್ಲಿ ಹೊಂದಾಡುವ ಯತ್ನಮಾಡುವುದು ಯುಕ್ತವಲ್ಲ. ಇಂದು ಅಲಗುರಾಯ ಶಾಸ್ತ್ರಿಯವರ ತಪ್ಪಿದ್ದರೆ ಅದನ್ನು ಇವರು ಸಹಿಸಿತಾಳ್ಮೆಯಿಂದ ಮುನ್ನಡೆಯ ಬೇಕಾಗಿರುವಾಗ, ಇವರೇ ಅವರ ಮೇಲೆ ತಪ್ಪುಗಳ ಹೊರೆಯಿಸ್ಸುಆರೋಪಿಸಿ ಆಂಧವರನ್ನು ಮಂತ್ರಿಮಂಡಲದಿಂದ ಹೊರದೂಡಲು ತನಗೆ ಅಧಿಕಾರ ಕೊಡಬೇಕೆಂದು ಅವರು ಒತ್ತಾಯ ಮಾಡುವುದು ಹರಿಹಿಡಿಯುವುದು ಸರಿಯೇ. ಆದಕ್ಕಾಗಿ ಚಟನೆಯೇ ತನಗಾಧಾರವೆಂದು ಸಾರಿ ಕಾಂಗ್ರೆಸ್ಸಿನ ಹೈಕಮಾಂಡಿನೊಡನೆ ಅವರನ್ನು ಕೆತ್ತೆಸೆಯಲು ಆಗ್ರಹಪಡಿಸುವುದು ಬರೇ ಸರ್ವಾಧಿಕಾರೀ ಮನೋವೃತ್ತಿಯ ಪ್ರಬಲ ಹಾಗೂ ಜ್ವಲಂತ ಉದಾಹರಣೆಯಾಗದೆ. ಶ್ರೀ ಅಲಗುರಾಯ ಶಾಸ್ತ್ರಿಯವರು ತಾವಾಗಿ ರಾಜೀನಾಮೆ ಕೊಟ್ಟು ಹೊರ ನಡೆಯುವಂತಿದ್ದರೆ ಅದೊಂದು ವಿಚಾರ ಬೇರೆ, ಆದರೆ ಇಂಥ ಉತ್ತರ ಪ್ರದೇಶದ ಮಂತ್ರಿಮಂಡಲದಲ್ಲಿ ಎರಡು ಗುಂಪುಗಳಾಗಿ ಒಂದು ಗುಂಪಿನವರು ಶ್ರೀ ಗುಪ್ತರ ಕಡೆಗೆ ವಾಲಿ, ಇನ್ನೊಂದು ಗುಂಪಿನವರು ಶ್ರೀ ಶಾಸ್ತ್ರಿಯವರು ರಾಜೀನಾಮೆ ಕೊಡಕೂಡದೆಂದು ಹರವಾಡಿ ತೀವ್ರವಾಗಿ ಘರ್ಷಣೆ ಮಾಡುತ್ತಲಿರುವಾಗ ಹೈಕಮಾಂಡಿನ ಆದೇಶವಿಂದ ಇದು ಶಾಂತವಾದರೂ ಆಯಿತು.

ಇದೂ ಕಾರಣವೇ?

ಇನ್ನೊಂದು ಹೀನ ಸ್ಥಿತಿಗೆ ಹೋಗಿರುವ ಈ ಘಟನೆಗೆ ಕಾರಣವಾದರೂ ಏನೆಂಬುದು ನೋಡಬೇಕಾದ ವಿಚಾರ ತಾನೇ? ಉತ್ತರ ಪ್ರದೇಶದಲ್ಲಿ ಈ ತೆರನ ಬಿಕ್ಕಟ್ಟು ಗುಪ್ತರಿಗಿಂತ ಹಿಂದಿನ ಮುಖ್ಯಮಂತ್ರಿ ಶ್ರೀ ಡಾ। ಸಂಪೂರ್ಣಾನಂದರ ಕಾಲದಿಂದಲೇ ತೊಡಗಿತ್ತು. ಅವಕ್ಕೂ ಕಾರಣೀಭೂತರಾದವರೆಂದರೆ ಶ್ರೀ ಚಂದ್ರಭಾನು ಗುಪ್ತರೇ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗಲೇ ಅವರಿಗೂ ಡಾ। ಸಂಪೂರ್ಣಾನಂದರಿಗೂ ಭಿನ್ನಾಭಿಪ್ರಾಯಗಳು ಬಂದು ಜಟಾಪಟಿಗಾರಂಭವಾದರೂ ಸಂಪೂರ್ಣಾನಂದರು ಮುಂದೆ ಇವರು ಬೇಳೆ ಕಾಳನ್ನೆ ಬೇಯಲಿಲ್ಲ. ಆದರೆ ವಿಧಾನ ಸಭೆ ಇಬ್ಭಾಗವಾಯಿತು. ಜಗಳ ವರ್ಧಿಸುತ್ತಾ ಹೋಯಿತು. ದುರದೃಷ್ಟವಶಾತ್ ಮುಂ

ಭಾರತಕ್ಕೆ ಅಮೆರಿಕದ ನೂತನ ರಾಯಭಾರಿ
ಮಿ। ಚೆಸ್ಟರ್ ಬೌಲ್ಸ್

ದಿನ ಸಾರ್ವತ್ರಿಕ ಚುನಾವಣೆಯಲ್ಲಿ ನೋತುಹೋದ ಶ್ರೀ ಗುಪ್ತಾರವರೆ ರಕ್ಷದ ನಾಯಕತ್ವ ಪಡೆದು ಮುಖ್ಯ ಮಂತ್ರಿ ಸ್ಥಾನ ಕ್ಕೇರುವ ಪ್ರಯತ್ನ ಮಾಡುವುದು ಕೈಗೆಟಕದ ದ್ರಾಕ್ಷೆ ಹಣ್ಣಿನಂತಾಯಿತು. ಆದರೆ ಮುಂದಿನ ಬಾರಿ ಅವರು ಆಯ್ಕೆಯಾದಾಗ ಅವರ ವೈರಿ ಶ್ರೀ ಸಂಪೂರ್ಣಾ ನಂದರು ತಾವಾಗಿ ರಾಜೀನಾಮೆಯಿತ್ತು ಹೊರ ಬಂದರು ಆಗ ಇವರ ವಿಜಯೆನೆಟ್ಟಿಗಾಗಿ ನುಡೆದೆ ಇನ್ನೂ ಅಗಲವಾಯಿತು. ವೀರ್ಯ ಅಬ್ಬರಗಳಿಂದ ಗುಡುಗಿ ಮುಖ್ಯ ಮಂತ್ರಿ ಪದವಿ ಸ್ವೀಕರಿಸಿದರು. ಆದರೆ ಶ್ರೀ ಲಜಿತ ಪ್ರಸಾದ ಜೈನರು ಪದೇ ಪದೇ ಕಾಂಗ್ರೆಸ್ಸಿನ ಅಧ್ಯಕ್ಷರಾಗುದುದಂದ ಹೆಚ್ಚು ಹಾರುವುದು ಸಾಧ್ಯವಾಗದೆ ಪರಿಸ್ಥಿತಿ ಸಂತೋಷ ನವಾಗಿಯೇ ಇದ್ದರೂ ಮುಂದೆ ಶ್ರೀ ಚತುರ್ಭುಜ ಶರ್ಮರು ಅಧ್ಯಕ್ಷರಾಗಾಗ ಗುಪ್ತರ ಕಡೆಯವರಿಗೂ ಅವರಿಗೂ ಭಿನ್ನಾಭಿಪ್ರಾಯವುಂಟಾಗಿ ಅವು ನೈಪಥ್ಯ ಕ್ಕೇರಿತು. ಆಗಲೇ ಶ್ರೀ ಗುಪ್ತರ ಗುಂಪಿನ ಕೆಲವರ ಮೇಲೆ ಲಂಚ ಸ್ವೀಕಾರದ ಆರೋಪ ಮಾಡಲಾಗಿ ಅದು ಸತ್ಯವೆಂದು ಬಯಲಾಗಿ ಅವರು ಸ್ಥಾನಚ್ಯುತರಾದುದು ಅವರಿಗೊಂದು ದೊಡ್ಡ ಅವಮಾನವಾದಂತಾಗಿ ಸೇಡು ತೀರಿಸಲು ಘಟಿ ಘರ್ಷಣೆಗೆ ಹೊಂಚು ಹಾಕ ತೊಡಗಿದರು. ಈ ತೆರನ ಮನೋವೃತ್ತಿಯನ್ನು ಅರಿತ ಕೇಂದ್ರ ಮಂತ್ರಿ ಶ್ರೀ ಶಾಸ್ತ್ರಿಯವರೇ ಮೊದಲಾದವರು ಅವಾಂತರಕ್ಕೆ ಸಾಂದರ್ಭಿಯಾಗದಂತೆ ಸೂಕ್ತ ಸಲಹೆಯಿತ್ತರೂ ಎಲ್ಲಾ ಅರಣ್ಯರೋದನವಾಯಿತು. ಗುಪ್ತಾರವರು ವಿಧಾನ ಸಭೆಯ ಸದಸ್ಯರನ್ನು ತನ್ನ ಕಡೆಗೆ ವಾಲಿಸಿ ತನಗಾಗದವರನ್ನು ಪಕ್ಷದ್ರೋಹಿಗಳೆಂಬ ನೆಪದಿಂ, ಹೊರದಬ್ಬಲು ಹವಣಿಸಿದರು.

ಶ್ರೀ ಅಲಗುರಾಯ ತಪ್ಪುಗಾರರೆ?

ಹೀಗಿರುವಾಗ ಅವರ ತುತ್ತಿಗೆ ಮೊದಲು ಸಿಕ್ಕಿಬಿದ್ದವರೆ ತನ್ನದೇ ಮಂತ್ರಿಮಂಡಲ

(ಮುಂದೇ ಪುಟ ನೋಡಿರಿ)

ಕಮ್ಯುನಿಸ್ಟ್ ಕಾರಾಗೃಹದಲ್ಲಿ

ಭಾರತೀಯ ಯುದ್ಧ ಕೈದಿಗಳು

ನಾವು ಯಾವ ದೇಶದ ಮೇಲೂ ಆಕ್ರಮಣ ನಡೆಸುವದೇ ಇಲ್ಲವೆಂದು ಕಮ್ಯುನಿಸ್ಟ್ ಚೈನಾ ಘೋಷಿಸುತ್ತಿದ್ದಂತೆಯೇ, ಒಂದು ಸಮೂಹವಾದಿ ರಾಷ್ಟ್ರ ಇನ್ನೊಂದು ಸಮಾಜವಾದಿ ರಾಷ್ಟ್ರದ ಮೇಲೆ ಆಕ್ರಮಣ ನಡೆಸುವದೇ ಇಲ್ಲವೆಂದು ಭಾರತೀಯ ಲಡಖ್‌ನಲ್ಲಿ ಸಾರುತ್ತಿದ್ದಂತೆಯೇ 'ರಾಷ್ಟ್ರಪ್ರೇಮೋತ್ಸವ' ಎನ್ನುವ ರಾಷ್ಟ್ರೀಯ ವೀರರು ಕಮ್ಯೂನಿಸ್ಟರ ಕುತಂತ್ರವನ್ನು ಬಯಲಿಗೆಳೆಯುತ್ತ, ಆಕ್ರಮಣದ ಕುರಿತು ಅಂಕೆ-ಸಂಖ್ಯೆ ಸಹಿತ ಮುನ್ನೆಚ್ಚರಿಕೆ ಕೊಡುತ್ತಿದ್ದಂತೆಯೇ ಚೈನಿಕಮ್ಯುನಿಸ್ಟರು ತೇಜಪುರದ ವರೆಗೂ ಬಂದರು; ದಿಲ್ಲಿಗೆ ಬರಲು ಕೇವಲ ಕೆಲ ತಾಸುಗಳೇ ಸಾಕಾಗುವಷ್ಟರ ವರೆಗೂ ಪತ್ತಿರಕ್ಕೆ ಬಂದುಬಿಟ್ಟರು. ಆರಂಭದಲ್ಲಿ ಅವರು ನುಂಗೊತ್ತಿ ಬರುತ್ತಿದ್ದಂತೆ ಸೇನಾಧಿಕಾರಿಯು ವರೊಬ್ಬರು ಎಲ್ಲರ್ನಾರೆಂಬುದೂ ತಿಳಿಯದ ನಂತರ ಅವರುರಜಿಯ ಮೇಲೆಯೋಗಿ ಬಿಟ್ಟರು. ಸ್ವತಃ ಶ್ರೀ ಕೃಷ್ಣ ಮೆನನರೇ-ಆಗಿನ ರಕ್ಷಣಾ ಮಂತ್ರಿ—ದಿಲ್ಲಿಯಲ್ಲಿದ್ದು ಕೊಂಡು ಆಜ್ಞೆಗಳನ್ನು ಕಳುಹಿಸುತ್ತಿದ್ದರು—ಸೇನಾ ಹತೋಟಿ ಅವರ ಹಸ್ತದಲ್ಲೇ ಇತ್ತು. ಅಂತಹ ಗೊಂದಲಮಯ ಪರಿಸ್ಥಿತಿಯಲ್ಲಿ ಭಾರತೀಯ ಸೈನಿಕರನ್ನು ಸಾವಿರ ಸಂಖ್ಯೆಯಲ್ಲಿ ಸೆರೆ ಹಿಡಿಯುತ್ತ ತೇಜಪುರದ ತೇಜೋವಧೆಗೆ ಅವರು ಪ್ರಯತ್ನಿಸಿರುವದೆಲ್ಲಿ ಬಂದಿದ್ದರು. ಹೀಗೆ ಒಂದಿವರ ಸಂಖ್ಯೆಯಲ್ಲಿ ಸೈನಿಕರು ಸೆರೆಯಾಳುಗಳಾಗಲು ನಿಶ್ಚಿತ ಕಾರಣಗಳೇನು? ಭಾರತೀಯ ಸೈನಿಕರಷ್ಟು ಶೂರರು ಯಾರೂ ಇಲ್ಲವೆಂಬುದನ್ನು [ಭಾರತೀಯ ಸೈನಿಕರೆಂದರೆ ಘೂರ್ಖಾರೂ ಸೇರಿ] ಸ್ವತಃ ಅಧಿಕಾರ ಮದದಿಂದ ಮೆರೆಯುತ್ತಿದ್ದ ಬ್ರಿಟಿಷರೂ, ಪೂರ್ಣ ಅಹೊರಾತ್ರದಿಂದ ಮೆರೆಯುತ್ತಿದ್ದ ಅಮೇರಿಕನ್ನರೂ ಒಪ್ಪಿರುವ ವಿಷಯವಿದೆ. ಹಾಗಿರುವಾಗ ಕೋಜೆನೇಯ ದುಸ್ಥಿತಿ ಬಂದೊದಗಲು ಕಾರಣವೇನು? ಶೂರಭಾರತೀಯ ಸೈನಿಕಪಂಜರಿಯು ಧನಳಕೀತರಿಗೆ ಕಳಂಕ ಬರಲು ಕಾರಣವೇನು? ಕೇವಲ ಕುರಿಗಳಂತೆ ಸಹಸ್ರಾರು ಸೈನಿಕರು ಕೈಮೇಲೆತ್ತಲು, ಜಡ್ಡಿಜೀಳಲು ಕಾರಣವೇನು? ಇತ್ಯಾದಿ ಪ್ರಶ್ನೆಗಳು ಸಾಧಾರಣ ಪ್ರಜೆಯ ಮನಸ್ಸಿನಲ್ಲಿ ಬರುವದು ಸ್ವಾಭಾವಿಕವೇ ಇದೆ. ನಮ್ಮ ಸೈನಿಕರ ಬಳಿ ಅಧುನಿಕ ಶಸ್ತ್ರಾಸ್ತ್ರಗಳಿರಲಿಲ್ಲಿ- ಹೆಚ್ಚಿಗೆ ಆ ಹಿಮಾಂತರ್ಯದಲ್ಲಿ ಒಡಾಡಲು ಕಾಲಿನಲ್ಲಿ ಸಾಧಾರಣ ಒಟ್ಟುಗಳಾಗಲೀ ಹೊದ್ದುಕೊಳ್ಳಲು ಕಂಬಳಿಗಳಾಗಲೀ, ರಕ್ಷಣೆಗೆ ಕೋವಿಗಳಾಗಲೀ ಇರಲಿಲ್ಲವೆಂಬಂತಹ ಅಪವಾದನೆಗಳು ಕೇಳಿ ಬಂದಿವೆ. ಅಲ್ಲದೆ ಸೈನ್ಯದಲ್ಲಿ ಸರಿಯಾಗಿ ಚೈನಾಪರರ ಪತ್ರಿಕೆ-ಸಾಹಿತ್ಯ ಹಂಚಲಾಗುತ್ತಿತ್ತು, ಮತ್ತು ಶ್ರೀ ಕೃಷ್ಣ ಮೆನನರೇ ಕಮ್ಯೂನಿಸ್ಟ್ ಪ್ರೇಯರೆಂಬ ನೂತು ಕೇಳಿ ಬರುತ್ತಿವೆ. ಇಂತಹ ಕೆಲ ವಿಷಯಗಳ ಮೆಲೆ ವಿಚಾರಣೆ ನಡೆಯುತ್ತಿರುವದರಿಂದ ಈಗಲೇ ಕಾರಣ ಇದು ಎನ್ನುವದು ಸರಿಯಲ್ಲ. ಸೆರೆಹೋದ -ಸಿಕ್ಕಿದ ಸೈನಿಕರ ಸ್ಥಿತಿ ಅದೇನಾಯಿತೆಂಬುದನ್ನು ನೋಡೋಣ.

ಸಾವಿರ ಸಂಖ್ಯೆಯಲ್ಲಿ ಸೆರೆಯಾಳುಗಳನ್ನು ಅವರು ಒಯ್ದಿದ್ದು ಮಾತ್ರವಲ್ಲ, ತೀವ್ರ ಗಾಯಗಳನ್ನು ಅಲ್ಲಲ್ಲೇ ದೊಡ್ಡ ಕಂದಕಗಳನ್ನು ತೋಡಿ ಹುಗಿದು ಬಿಡಲಾಗಿರುತ್ತದೆ. ಕಂದಗಳಲ್ಲಿ ಸತ್ತವರನ್ನು, ಸೃತಿ ಕಪ್ಪಿದವರನ್ನು ಮಾತ್ರವಲ್ಲದೆ ಗಾಯಾಳುಗಳನ್ನು ಹುಗಿಯಲಾಗಿರುತ್ತದೆ. ಹೀಗೆ ನಡೆಸಲ್ಪಟ್ಟದೆನ್ನಲಾದ ಕೆಲ ದೇಹಗಳನ್ನು ....ಇತ್ತೀಚಿಗೆ ಭಾರತ ಸರಕಾರಕ್ಕೆ ಒಪ್ಪಿಸಲಾಗಿರುತ್ತದೆ.ಹೂಳುವವರ ಕುರಿತುಚೈನಿಕಮ್ಯೂನಿಸ್ಟರು ನಡೆದು ಕೊಂಡಿರುವ ರೀತಿಯು ಕುರಿತು ಪ್ರಕಟವಾಗಿರುವ ಒಂದು ಕಥೆಯೇ ಇದೆ. [ಅದನ್ನು, ನವಯುಗ' ವಾಚಕ ಬಂಧುಗಳಿಗಾಗಿ ಕೊಡಲಾಗಿರುತ್ತದೆ] ಸೆರೆ ಸಿಕ್ಕಿದ ಸೆರೆಯಾಳುಗಳಿಗೆ ಮೊದಲು ಔಷಧೋಪಚಾರ ಏನು ನಡೆದಿರುವದಿಲ್ಲ. ಜಾಸ್ತಿ ಗಾಯಗೊಂಡವರನ್ನು ಪ್ರಥಮ ದಳದಲ್ಲೇ ಹಿಂದಕ್ಕೆ ಕಳುಹಿಸಲಾಗಿರುತ್ತದೆ. ಅವರಿಗೆ ಔಷಧಿ ವೈದ್ಯರಿ ದೊಂತದ್ದು ಮರಳಿ ದಿಲ್ಲಿಗೆ ಬಂದ ನಂತರವೇ! ಉಳಿದ ಖೈದಿಗಳನ್ನು ಉಪಾಯವಾಗಿ ಬೇರ್ಪಡಿಸಿದರು. ಶುದ್ಧೀಕರಣಕ್ಕಾಗಿ ಪ್ರಯತ್ನಿಸಿರುವುದರ ಕುರಿತು ಶ್ರೀ ಇಂದ್ರಜಿತ್ ವಿವರಿಸಿರುವದನ್ನು 'ಹಿಂದೂಸ್ಥಾನ ಸ್ಟೆಂಡಾರ್ಡ್' ಪ್ರಕಟಿಸಿರುತ್ತದೆ. ಅದರ ಮುಖ್ಯ ವಿಷಯಗಳನ್ನು ವಾಚಕ ಬಂಧುಗಳು ಇಲ್ಲಿ ಕಾಣಬಹುದು:

ಚೈನಾದಿಂದ ಮರಳಿ ಮಾತೃ ಭೂಮಿಗೆ ಬಂದಿರುವ ಭಾರತೀಯ ಯುದ್ಧ ಖೈದಿಗಳ ಪ್ರಶ್ನಾವಳಿ—ಉತ್ತರ ವರದಿಯು ಒಂದೇ ಒಂದು ನಿರ್ಣಯಕ್ಕೆ ಒಯ್ಯುತ್ತದೆ: ಕಳೆದ ಆಕ್ಟೋಬರ ಇಪ್ಪತ್ತರ ನಿರ್ಣಯಿಸಿದ ದಿನದಿಂದಕೆಲತಿಂಗಳುಗಳ ಹಿಂದೆ ಅಲ್ಲ, ಕೆಲ ವರ್ಷಗಳಹಿಂದೆಯೇಪೆಕಿಂಗ್ ಉದ್ದೇಶಪೂರ್ವಕವಾಗಿ ಆಕ್ರಮಣಕ್ಕೆ ಖಂಡಿತವಾಗಿ ಹೋಗು ಹಾಕುತ್ತಿತ್ತು. ಅವರ ಮುಂದುವರಿಯುವಿಕೆಗೆ ಹಾಗೂ ನಂಬಲಸಾಧ್ಯವಾಗಿರುವ ರೀತಿಯಲ್ಲಿ ಭಾರತೀಯ ಯುದ್ಧ ಖೈದಿಗಳ ರಾಜಕೀಯ ಹಾಗೂ ಸಾಮಾಜಿಕ ಮೆದುಳು ಶುದ್ಧೀಕ್ಷರಣಕ್ಕಾಗಿ ಮಾಡಿರುವ ಪೂರ್ಣ ಯೋಜನೆಗಳಿಗೆ ಯಾವ ವಿವರಣೆಯೂ ಬೇಕಾಗಿರುವದಿಲ್ಲ.

ಭಾರತೀಯ ಯುದ್ಧ ಖೈದಿಗಳನ್ನು ಜಾಗರೂಕತೆಯಿಂದ ಮೂರು ಭಿನ್ನ ಭಿನ್ನ ವಿಭಾಗಗಳನ್ನಾಗಿ ಬೇರ್ಪಡಿಸಲಾಗಿತ್ತು- ಇದೆಲ್ಲವೂ ನಡೆದದ್ದು ಸ್ವವಿಶ್ವಸದಲ್ಲಿರುವಾಗಲೇ ಈ ವಿಭಜನೆಗೆ ಅಡಿಪಾಯವಾಗಿದ್ದದ್ದು ಖೈದಿಗಳ ಪ್ರಾದೇಶಿಕ ಹಾಗೂ ಭಾಷಾ ಭಿನ್ನತೆ. ಪರ್ವತ ಪ್ರದೇಶಗಳ ಸೈನಿಕ ಅಧಿಕಾರಿ ಹಾಗೂ ಸೈನಿಕರನ್ನು ಅಂದರೆ ಡೋಗ್ರಾ, ಕುಮಾವೊನ್ ಮತ್ತು ಘೆರವಾಲಿಗಳನ್ನು—ಒಂದು ವಿಭಾಗವನ್ನಾಗಿ ಬೇರ್ಪಡಿಸಲಾಗಿತ್ತು ಘೂರ್ಖಾ ಗಳನ್ನು ಇನ್ನೊಂದು ಶಿಬಿರದಲ್ಲಿಡಲಾಗಿತ್ತು. ಉಳಿದವರನ್ನು ಅದರಲ್ಲೂ ಪಂಜಾಬಿಗಳನ್ನೂ, ರಜಪೂತರನ್ನು ಹಾಗೂ ಜಾಟರನ್ನು ಮೂರನೆಯ ಡೇರೆಯಲ್ಲಿ ಪ್ರತ್ಯೇಕಿಸಲಾಗಿತ್ತು.

ಈ ಮೂರು ತಂಡಗಳಲ್ಲೂ ಬೇರೆ ಬೇರೆ ವಿಧದಲ್ಲಿ ಮೆದುಳು ಶುದ್ಧೀಕರಣ ಕಾರ್ಯ ಭರದಿಂದ ನಡೆದಿತ್ತು. ಶುದ್ಧೀಕರಣಕ್ಕಾಗಿ ದೈನಂದಿನ ಭಾಷಣದ ಕಾರ್ಯಕ್ರಮವಿತ್ತು. ಭಾಷಣವನ್ನು ಚೈನಿ ಅಧಿಕಾರಿಗಳೇ ಕೊಡುತ್ತಿದ್ದರು. ಅವರು ಪ್ರವಾಹೀ ಹಿಂದಿಯಲ್ಲಿ ಮಾತ್ರ ಭಾಷಣ ವೀಯುತ್ತಿದ್ದರಲ್ಲದೆ ಯುದ್ಧ ಖೈದಿಗಳ ವಸ್ಥಿ ಭಾಷೆಗಳಲ್ಲೂ ಭಾಷಣಗಳನ್ನೀಯುತ್ತಿದ್ದರು. ಸಿಖ್ಖರ ಬಳಿ ಚೈನಿ ಅಧಿಕಾರಿಗಳು ಉತ್ತಮ ಪಂಜಾಬಿಯಲ್ಲಿ ಮಾತಾಡುತ್ತಿದ್ದರು. ಘೂರ್ಖಾರ ಬಳಿ ಗ್ಯಾಮ್ಯ ಘೂರ್ಖಾಲಿಯಲ್ಲೇ ಮಾತನಾಡುತ್ತಿದ್ದರೆಂದರೆ ನಂಬಲಿಕ್ಕೆ ಕಷ್ಟವಾದರೂ ಅದು ನಿಜವೇ ಇದೆ.

ಪ್ರತಿಯೊಂದು ತಂಡಕ್ಕೂ ಅದರದ್ದೇ ಆದ ಭಿನ್ನ ಭಿನ್ನ ರೀತಿಯ ''ಮೆದುಳು-ಶುದ್ಧೀಕರಣ'' ಕಾರ್ಯ ನಡೆದಿತ್ತು. ಉದಾಹರಣೆಗೆ—ಘೂರ್ಖಾರಿಗಳ ಬಳಿ ಚೈನಿ-ನೇಪಾಲಿ ಸಂಬಂಧದ ಕುರಿತು ಭಾಷಣವೀಯಲಾಗುತ್ತಿತ್ತಲ್ಲದೆ 'ಸಾಮ್ರಾಜ್ಯಶಾಹಿ' ಭಾರತೀಯ 'ಸ್ವಾರ್ಥಿ'ಗಳಿಗಾಗಿ ಹೋರಾಡಕೂಡದೆಂದೂ ತೀಳಲಾಗುತ್ತಿತ್ತು. ಸಿಖ್ಖರಜಪೂತ ಮತ್ತು ಜಾಟರ ಬಳಿ ತಮಗೂ ಅವರಿಗೂ ಬಹಳ ಸಮೀಪದ ಸಂಬಂಧ-ಸಂಪರ್ಕವಿದೆಯೆಂದು ಹೇಳಲಾಗುತ್ತಿತ್ತು. ಮುಸ್ಲೀಮರ ಬಳಿ ತಮಗೆ ಅವರ ಬಳಿ ಇದ್ದಾವ ರೀತಿಯ ದ್ವೇಷವೂ ಇಲ್ಲವೆಂದು ಅಶ್ವಾಸನೆ ಕೊಡಲಾಗುತ್ತಿತ್ತಲ್ಲದೆ, ಅವರ ನಡೆನುಡಿ, ಆಚಾರ ವಿಚಾರಗಳ ಮೇಲೆ ತಮಗೆ ಶ್ರದ್ಧೆ ಗೌರವಗಳನೆಯೆಸ್ಸಲಾಗುತ್ತಿತ್ತಲ್ಲದೆ, ಹಿಮೂಲಯದ ಇಕ್ಕೆಲಗಳಲ್ಲಿ ಶಾಂತ ಸಹಜೀವನಕ್ಕೆ ತಾವು ಸದಾ ಸಿದ್ಧರಿರುವದಾಗಿ ತಿಳಿಸಲಾಗುತ್ತಿತ್ತು.

ಇದು ಸಾಧಾರಣ ರೀತಿಯ 'ಮೆದುಳು ಶುದ್ಧೀಕರಣ'ದ ರೀತಿಯಾಗಿತ್ತು. ಇದರಲ್ಲಿ ಚೈನಾ-ಭಾರತ ಗಡಿ ವಿವಾದ, ಚೈನಾಕ್ಕೆ ಪಂಚಶೀಲದ ಮೇಲಿರುವ ನಂಬಿಕೆ, ಶಾಂತಿಪೂರ್ಣ ಸಹ-ಅಸ್ತಿತ್ವಕ್ಕೆ ಕಮಿಗಿರುವ ಇಚ್ಛೆ ಬಂಡವಾಳಷಾಹಿಯ ವಿರುದ್ಧ ಸಮತಾವಾದ ಹಾಗೂ ಚೈನೀಯರ ಜೀವನ ಪದ್ಧತಿಗಳ ಕ್ರಿತು ಭಾಷಣ ಕಾರ್ಯಕ್ರಮವೂ ಸಾಮಾನ್ಯವಾಗಿತ್ತು. ಅದರಲ್ಲಿ ಕೊನೆಯ ವಿಷಯದ ಮೇಲೆ ಬಣ್ಣಬಣ್ಣದ ಚಿತ್ರಗಳನ್ನು ವಿಂಡಿಡಲಾಗುತ್ತಿತ್ತು. ಜನತಾ ಚೈನಾದ ಸೈನ್ಯದ ಕುರಿತು ರಂಗುರಂಗಿನ ಭಾಷಣ ಕೊಡಲಾಗುತ್ತಿತ್ತು. ಸೇನೆಯಲ್ಲಿ ವರ್ತಿಸುತ್ತಿದ್ದ ರೆನ್ನಲಾಗುತ್ತಿರುವ ಸಮತೆಯ ಮೇಲೆ ವರ್ಣ ಪರ್ಣದ ನುಣ್ಣನೆಯ ಮಾತುಗಳನ್ನಾಡಲಾಗುತ್ತಿತ್ತು. ಅಧಿಕಾರಿ ಹಾಗೂ ಸಾಮಾನ್ಯ ಸೈನಿಕರ ನಡುವೆ ಭಿನ್ನತೆಯೇ ಇಲ್ಲವೆಂದು ಅವರು ಹೇಳುತ್ತಿದ್ದರು.

ಇದೆಲ್ಲಾ ಕೇವಲ ಮಾತು ಮಾತ್ರವಲ್ಲ ಭಾರತೀಯ ಯುದ್ಧ ಖೈದಿಗಳೆದುರು ಅವರು ಹಾಗೆಯೇ ನಡೆದುಕೊಳ್ಳುತ್ತಿದ್ದರು; ತಾವು ಮನೆಯಲ್ಲಿರುವಂತೆಯೇ ಅವರು

(ಇನ್ನೂ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಂದ್ರ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚೆಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEADFILLED)

Crown RUBBER STAMP CO.

BALMATTA ROAD, MANGALORE

25,000

ಪ್ರತಿಗಳಿಗೂ ಮಿಕ್ಕಿ

ಈ ವರೆಗೆ ಕರ್ನಾಟಕದಲ್ಲೆಲ್ಲ ವಿಕ್ರಿತವಾಗಿರುವ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ

ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.

360 ಪುಟಗಳಿಗೂ ಮಿಕ್ಕಿದ

ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ಅಂಚೆ ವೆಚ್ಚ ರೂ. ೦-೫೦

ರಿಯಾಯಿತಿ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ಎಲ್ಲರೂ ಬಯಸುವ

ಹಸೆಮಣೆಯ ಆಕರ್ಷಣೆ

ದೇಶವು ಸ್ವತಂತ್ರಗೊಂಡು ಕೈಗೆ ಅಧಿಕಾರ ಸೂತ್ರವು ಬಂದ ಬಳಿಕ ಕಾಂಗ್ರೆಸ್ ಕಾರ್ಯಕರ್ತರ ಗಮನ ಬೇರೆಡೆಗೆ ಹರಿದಿದೆ; ಹರಿಯುತ್ತಲೇ ಇದೆ. ಸೇನೆಯಲ್ಲಿಯೇ ಸ್ವರ್ಗ ಕಾಣುತ್ತಿದ್ದ ಕಾಂಗ್ರೆಸಿಗರಿಂದು ಅಧಿಕಾರ ಪದವಿಗಳಿಗೇರಿ ಸ್ವರ್ಗ ಪದವಿಯುವುದರಲ್ಲಿಯೇ ಸುಖ ಕಾಣುತ್ತಿರಬೇಕು. ಇದರಿಂದಲೇ ಇರಬೇಕು. ಇಂದು ದೇಶದಲ್ಲಿ ಕಾಂಗ್ರೆಸ್ಸಿನ ಬಗ್ಗೆ ಸದಭಿಪ್ರಾಯ ದೂರವಾಗುತ್ತ ಬರುತ್ತಿದೆ ಇದೇ ದಾರಿಯಲ್ಲಿ ಕಾಂಗ್ರೆಸ್ಸು ಮುಂದುವರಿದರೆ, ಅದೊಂದು ಮಹಾ ದುರಂತಕ್ಕೆ ಕಾರಣವಾಗುವುದು ಖಂಡಿತ. ಇದಕ್ಕಾಗಿಯೇ ಹಲವಾರು ಜನ ಹಿರಿಯ ಕಾಂಗ್ರೆಸಿಗರು, ಇವರಲ್ಲಿ ಪ್ರಧಾನಿ ನೆಹರು ಕೂಡಾ ಸೇರಿದ್ದಾರೆ, ಕಾಂಗ್ರೆಸಿಗರು ಜನತೆಯ ಸೇವಕರಂತಿರಬೇಕು; ಇವರು ಅಧಿಕಾರ ಪದವಿಗಳಿಗೆ ಅಂಟಿಕೊಂಡಿರುವ ದುರಭ್ಯಾಸಕ್ಕೆ ಬಲಿಯಾಗಬಾರದು' ಎಂದು ಪೇಳುತ್ತ ಬಂದಿದ್ದಾರೆ. ಆದರೆ, ಈ ಕಡೆಗೆ ಗಮನವಿತ್ತ ಕಾಂಗ್ರೆಸಿಗರ ಸಂಖ್ಯೆಯೆಷ್ಟು?

ರೇಶನ್ ಕೃಮವನ್ನು ಹಿಂದೆ ಸರಕಾರ ಪ್ರಾರಂಭಿಸಿದಾಗ, ಜಾತೀಯವಾರು ಕೆಲಸಕ್ಕೆ ಜನ ಮೇಲೆ ಬಿದ್ದು ಬಂದರು. ಬಸ್ಸು ಮಾರ್ಗಗಳು ರಾಷ್ಟ್ರೀಕರಣವಾಗುತ್ತಿವೆ ಎಂದು ತಿಳಿದಾಗ ವ್ಯಾಧುನಿಕ ಶಾಲಾ ಅಧ್ಯಾಪಕರಲ್ಲಿ ಬಹಳ ಕಂಡಕ್ಟರ್ ಲೈಸನ್ಸು ಪಡೆಯುವ ಅಲೆ ಮೂಡಿ ವಿಷಯವಾಯಿತು. ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ಬಳಿಕ ಎಲ್ಲರೂ ಪದವಿಯನ್ನು, ಅಧಿಕಾರವನ್ನು ಬಯಸುವವರೇ ಇದೀಕೆ ಹೇಗೆ? ಅಧಿಕಾರದಲ್ಲಿ ಆದಾವ ಆಮಿಶವಿದೆ? ಅಧಿಕಾರಕ್ಕೆ ಮೂರು ಹೋಗದೆ, ಜನತೆಯಲ್ಲಿ ಕಾಂಗ್ರೆಸ್ ತತ್ವಗಳ ಬಗೆಗೆ ತಿಳುವಳಿಕೆಯುಂಟು ಮಾಡಿರೆಂದು ಪೇಳುವವರೇ ಮಂತ್ರಿಯಾಗುವ ಆಸೆಯಿಂದ ಕಾರ್ಯಪ್ರವೃತ್ತರಾಗುವುದಾದರೆ, ಮತ್ತೆ ಸಾಮಾನ್ಯ ಸದಸ್ಯರ ಪಾಡೆಲ್ಲಿ ಉಳಿಯಿತು?

ಪ್ರಸಿದ್ಧ ಕವಿಯೊಬ್ಬರು ಹಾಡಿ: 'ಎಲ್ಲರೂ ಹಸೆ ಮಣೆಯಲ್ಲಿ ಕುಳಿತರೆ ಅರತಿ ಬೆಳಗಲು ಜನವೆಲ್ಲಿ?" ಎಂದು ಪ್ರಶ್ನಿಸಿದ್ದಾರೆ. ಇಂದು ನವ್ಯ ಕಾಂಗ್ರೆಸ್ಸಿನ ಚಪ್ಪರ ವಾದರೂ ಈ ಮದುವೆಯ ಚಪ್ಪರಕ್ಕಿಂತ ಭಿನ್ನವಾಗಿದೆಯೆ? ಇದೇಕೆ ಹೀಗಾಗುತ್ತಿದೆ? ಎಂದು ಸಾಮಾನ್ಯ ನಿಷ್ಠಾವಂತ ಕಾಂಗ್ರೆಸಿಗನು ಕೇಳುವ ಪ್ರಶ್ನೆಗೆ, ಬರಿಸ್ಸಾ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ಪಂಜಾಬ ಮತ್ತು ಕೇರಳದ ಮಂತ್ರಿಗಳ ಮೇಲೆ ಕೇಳಿ ಬರುವ ಲಂಚದ ಆರೋಪವು ಉತ್ತರ ಪೇಳುತ್ತದೆ. ಶಂಕರ ತಿಯಲ್ಲಿ ಹೋಲುಹೋದ ಸಾರ್ವಜನಿಕ ಸಂಪತ್ತಿನಲ್ಲಿ ನಿಜಲಿಂಗಪ್ಪನವರೂ ಖಾಲುದಾರರಾಗಿದ್ದಾರಾದರೆ ಆ ಗಾಂ ಮೈಸೂರಿಗೂ ಅಂಟಿದಂತಾಯಿತು. ಇಂತಹ ಲಾಭ ಬಡಕತನ, ಜನತೆಯನ್ನು ವಂಚಿಸಿ, ತಾನು ದೊಡ್ಡವನಾಗುವ ಸ್ವಾರ್ಥ ಭಾವನೆಯೇ ಕಾಂಗ್ರೆಸಿಗರನ್ನು ಸಾಮಾನ್ಯ ಜನತೆಯಿಂದ ಬೇರ್ಪಡಿಸಿ ಅರಿಗೆ ಜನತಾ ಸಂಪರ್ಕವನ್ನು ತಪ್ಪಿಸಿದೆಯೆಂಬ ತಿ ಆಶ್ಚರ್ಯವೇನಿದೆ?

ನೀರಿದ್ದಲ್ಲಿ ಕೆಸರಿರುವುದು ಸ್ವಾಭಾವಿಕ. ಆದರೆ, ಇಂದು ಕೆಸರಿನ ಸ್ವರೂಪವೇ ಬದಲಾಯಿಸಿರುವಂತೆ ಭಾಸವಾಗುತ್ತಿದೆ. ನೀರಿನ ಪರಿಮಾಣವನ್ನು ಹೆಚ್ಚಿಸಲು ಮಳೆಯೊದರೂ ಸಾಕಷ್ಟು ಪ್ರಮಾಣದಲ್ಲಿ ಸುರಿಯುತ್ತಿಲ್ಲ. ಕಾಂಗ್ರೆಸ್ಸು ಇಂದು ಕಲಂಕಿತವಾದೆ; ಅದರಲ್ಲಿ ನಿಷ್ಠಾವಂತರಿಗೆ ಯಾವ ಸ್ಥಾನವೂ ಇರುವುದಿಲ್ಲ. ಅವರು ನಂಬಿ ಬಂದ ಕಾಂಗ್ರೆಸ್ ಆದರ್ಶ ಮತ್ತು ತತ್ವಗಳು ಗಾಳಿಗೆ ತೂರಲ್ಪಡುತ್ತಿರುವುದನ್ನು ಕಂಡೂ ಬಾಯಿ ಮುಚ್ಚಿಕೊಂಡಿರಬೇಕಾಗುತ್ತದೆ. ಮೇಲೆ ನೋಡಿ ಉಗುಳಿದರೆ ಬೀಳುವುದು ತಮ್ಮ ಮುಖಕ್ಕೇನೇ ಅಲ್ಲವೆ? ಇದಿಗ ಸತ್ತ ಮುತ್ತ ಹುಡಿರುವ ಭ್ರಷ್ಟಾಚಾರದ ಸುದ್ದಿಯಿಂದ ಅವರ ಮತ್ತಷ್ಟು ನೊಂದಿದ್ದಾರೆ. ಇದಕ್ಕಾಗಿಯೇ ತಾವು ಸ್ವಾತಂತ್ರ್ಯ ಹೋರಾಟದಲ್ಲಿ ತತ್ವಗಳ ಬೆಂಬಿಡದು ಜೀವ ತೇದೆವೆ? ಎಂಬ ಆರ್ತಧ್ವನಿ ಅವರ ಹೃದಯಾಂತರಾಳದಿಂದ ಸಿಟ್ಟುಸಿರಿಕೊಡನೆ ಜೊರ ಬಂದು ಅನಂತಾಕಾಶದ ಗಾಳಿಯಲ್ಲಿ ಲೀನವಾಗುತ್ತಿದೆ!

ಇತ್ತೀಚೆಗೆ ನಡೆದ ಉಪ ಚುನಾವಣೆಗಳಲ್ಲಿಯೂ ಕಾಂಗ್ರೆಸ್ ಸೋಲುಣ್ಣಬೇಕಾಯಿತು. ಅದೂ ಗಣನೀಯ ಪ್ರಮಾಣದಲ್ಲಿ. ಇದರ ಕಾರಣವನ್ನು ನಂದಾ ಸಮಿತಿಯು ವಿಶ್ಲೇಷಿಸಬಹುದು. ಆದರೆ, ಒಬ್ಬ ಸಾಮಾನ್ಯ ಭಾರತೀಯನೊಡನೆ ಈ ಪರಿಣಾಮದ ಕಾರಣ ಕೇಳಿದರೆ, ಆತ ಹೇಳುತ್ತಾನೆ: 'ಕಾಂಗ್ರೆಸಿನ ಮೇಲ ಜನರಿಗೆ ವಿಶ್ವಾಸ ಕಡಿಮೆಯಾಗುತ್ತಿದೆ' ಅದೇಕೆ ಕಡಿಮೆಯಾಗುತ್ತಿದೆ? ಇದರ ಉತ್ತರವನ್ನು ಪ್ರತಿ ಕಾಂಗ್ರೆಸ್ಸಿಗನೂ ಆತ್ಮ ಸಾಕ್ಷಿಯಾಗಿ, ಊಹಿಸಬಲ್ಲ; ಆದರೆ, ಹೇಳಲೊಲ್ಲ.

ಅಧಿಕಾರದ ಹಮ್ಮನ್ನು ಜೊತೆಯವು ದೆಂಬಾಗ ಸೇವೆಯ ಬರವೆಯೆ? ಯಾರಿಗೆ ಬೇಕು? ಅದಕ್ಕೆಂತೇ ಕಾಂಗ್ರೆಸಿಗೆ ಜನತಾ ಸಂಪರ್ಕ ಕಡಿಮೆಯಾಗುತ್ತಿದೆ; ಜನತೆಯ ವಿಶ್ವಾಸಕ್ಕೆದ್ದು ಎರವಾಗುತ್ತಿದೆ. ಮಳೆಗಾಲದ ನಾಲ್ಕು ತಿಂಗಳು ಎಲ್ಲೆಂದರಲ್ಲಿ ಅಣಬೆಗಳು ತಲೆಯೆತ್ತುವಂತೆ ಕಾಂಗ್ರೆಸಿಗರು ಚುನಾವಣೆಯ ಕಾಲದಲ್ಲಿ ಮಾತ್ರ ಜನತೆನ್ನು ನೆನಪು ಮಾಡಿಕೊಳ್ಳುವವರು ಎಂಬ ಅಪವಾದವಿಂದು ಸರ್ವಸಾಮಾನ್ಯವಾಗಿದೆ. ಜನತೆಗೆ ಪಕ್ಷದ ತತ್ವಗಳನ್ನು ತಿಳಿಸಲು, ಅದರ ನೀತಿಯನ್ನು ಮುಂದಿಟ್ಟು ನೋಡಲು ರಾಜ್ಯಕ್ಕೊಂದು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯಿದೆ. ಜಿಲ್ಲೆ, ತಾಲೂಕುಗಳಿಗೂ ಒಂದೊಂದು ಸಮಿತಿಯಿದೆ. ಇದು ಸಾಕಾಗಿದೆ. ಮಂಡಲ ಕಾಂಗ್ರೆಸ್‌ಗಳು ಬೇರೆಯೇ ಇವೆ. ಆದರೆ ಇತ್ತಗಳು ಜೀವಂತವಾಗಿವೆಯೆ? ಜೀವನ್ಮೃತವಾಗಿವೆಯೇ ಎಂದು ಯಾರಾದರೂ ಗಂಭೀರವಿಚಾರಿಸಿದವರುಂಟೆ?ಯೆ? ಜನತೆಯನ್ನು ಆಗಾಗ ಕೂಡಿಸಿ, ಪಕ್ಷದ ನೀತಿಯನ್ನು, ಸರಕಾರದಲ್ಲಿ ಇದು ರೂಪಿಸಿದ ಧೋರಣೆಯನ್ನು ಸಾಧಿಸಿರ ಪ್ರಗತಿಯನ್ನು ತಿಳಿಸಿ ಹೇಳುವ ವರಿದ್ದಾರೆಯೆ? ಹೆಚ್ಚೆನೆಡೆಗಳಲ್ಲಿ ಸಮಿತಿಯೊಂದಿದೆಯೆಂಬುದು ಅದರ ಸದಸ್ಯರಿಗೆ ತಿಳಿವಿರುವುದಿಲ್ಲ.

ಈ ದುಸ್ಥಿತಿ ದೂರವಾಗಬೇಕು. ಕಾಂಗ್ರೆಸ್ ಹಿಂದಿನಂತೆಯೇ ಪ್ರಭಾವಿಯಾಗಬೇಕು. ಜನತೆ ಕಾಂಗ್ರೆಸ್ಸನ್ನು ಪರೀಕ್ಷಿಲ್ಲ ಒಳ್ಳೆಯದಕ್ಕಾಗಲೀ ಕೆಟ್ಟದಕ್ಕಾಗಲೀ ಪ್ರತಿ ದಿನವೂ ಅದು ಕಾಂಗ್ರೆಸ್ಸಿನ ನೆನಪು ಮಾಡಿಕೊಳ್ಳುತ್ತಿದೆ. ಆದರೆ, ಕಾಂಗ್ರೆಸ್ಸೇ ಇಂದು ಜನತೆಯಿಂದ ದೂರ ನಿಂತು ಅನುಮೇಲೆ ಅಧಿಕಾರವನ್ನು ಜಪಾಯಿಸುತ್ತಿದೆ. ಇದು ಸಲ್ಲಕ್ಷಣವಲ್ಲ; ಇದರಿಂದ ಕಾಂಗ್ರೆಸ್ಸಿಗೂ ಒಳಿತಾಗದು, ದೇಶಕ್ಕೂ ನೆನ್ಮನಿಯಿಲ್ಲ. ಎನೂ ತಿಳಿಯದ ಜನತೆಯ ಗಮನ ಮಾತ್ರ ವಕ್ರವಾಗಿ ಆದು ದುರಂತದಲ್ಲಿ ಪರ್ಯವಸಾನಗೊಳ್ಳುತ್ತದೆ. ಈ ಭಯಾನಕತೆಯನ್ನು ದೂರ ಮಾಡುವ ಹೊಣೆಗಾರಿಕೆ ಉಳಿದವರಿಗಿಂತ ಮಿಗಿಲಾಗಿ ಇಂದ. ಕಾಂಗ್ರೆಸಿಗರ ತಲೆಯ ಮೇಲಿದೆ. ಅದಕ್ಕಾಗಿ, ದೇಶದ ಉಳಿವಿಗಾಗಿ, ಸುಖಕ್ಕಾಗಿ ಕಾಂಗ್ರೆಸ್ಸು ಪುನರ್ನೇತನಪೊಡನೆ ಸೇವಾ ತತ್ವರವಂಗಬೇಕು.

ಕಾಂಗ್ರೆಸ್ ಸಂಘಟನೆಯು ಒಲಯಂವ ಧ್ಯನಿ ಮತ್ತು ಸರಕಾರದ ಯೋಜನೆಗಳ ಪ್ರಚಾರದ ಬಗ್ಗೆ ಅಲ್ಲಲ್ಲಿ ವಿಚಾರ ಸಂಕಿರಣ ಮತ್ತು ತರಬೇತಿ ತಿಬಿರಗಳನ್ನೇರ್ಪಡಿಸಿ, ಆ ಮೂಲಕ ಕಾಂಗ್ರೆಸ್ ಧುರೀಣರು ಮತ್ತು ಕಾರ್ಯಕರ್ತರಿಗೆ ಹೆಚ್ಚಿನ ತಿಳುವಳಿಕೆ ನೀಡಬೇಕಿ; ಕೈಗೊಳ್ಳಬೇಕಾದ ಕಾರ್ಯಗಳ ಬಗೆಗೆ ಆದೇಶಕೊಡಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದಾಲಿಯವರು ಜಿಲ್ಲಾ ಕಾಂಗ್ರೆಸ್‌ಗಳಿಗೆ ಸಲಹೆ ನೀಡಿದ್ದಾರೆ. ಇಂತಹ ಪರಿಹತ್ತುಗಳಲ್ಲಿ ಬಿತ್ತಿತ ಮತ್ತು ಅನುಭವಿಕ ಕಾಂಗ್ರೆಸ್ ಕಾರ್ಯಕರ್ತರ ವ್ಯಾಖ್ಯಾನಗಳನ್ನು ಏರ್ಪಡಿಸಬೇಕು; ಅವರ ಸೂಚನೆ ಎನ್ನಯ ಸಂಘಟನೆಯು ಬಲಯುತವಾಗುವಂತೆ ಕೈನು ಕೈಗೊಳ್ಳಬೇಕೆನ್ನುತ್ತಾರೆ ಅವರು. ಇದನ್ನು ಕಾಂಗ್ರೆಸ್ ಸಮಿತಿಗಳು ಮಾಡಿಯಾವೆ? ಇದು ವರೆಗಿನ ಅನುಭವ ಇದರಿಂದ ಬಹುದೂರ ಹರಿದಿವೆ.

ಸರಕಾರಿ ಅಧಿಕಾರಿಗಳ ದರ್ಪಯುತ ವರ್ತನೆ, ಲಂಚ ಬಡಕತನ ಮೊದಲಾದ ಆಡಳಿತ ಲೋಪದೋಷಗಳಿಂದ ಸಾರ್ವಜನಿಕರಿಗೆ ಅನ್ಯಾಯವಾಗಿತ್ತಿದ್ದ ಪಕ್ಷದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅದನ್ನು ಸಕ್ರಿಯವಾಗಿ ಪ್ರತಿಭಟಿಸಿ ದೋಷ ನಿವಾರಣೆಯಾಗುವಂತೆ ಮಾಡಬೇಕು; ಆದರೆ, ಸರಕಾರಿ ಅಧಿಕಾರಿಗಳು ಯಾವ ಹಿಡೆಮುರಿತಕ್ಕುಗಳಿಗೊಳಗಾಗದೆ ನಿರ್ಭಯವಾಗಿ ತಮ್ಮ ಕೆಲಸ ನಾಗಸಿಕೊಂಡು ಹೋಗಲು ಕಾಂಗ್ರೆಸ್ ಕಾರ್ಯಕರ್ತರು ಯಾವಾಗಲೂ ಬೆಂಬಲ ನಿಲ್ಲಕಾರ ನೀತಿ ಬೇಕೆಂಬುದವರ ಮತ್ತೊಂದು ಸಲಹೆ. ತಮ್ಮ ಹಿತಾಸಕ್ತಿಗಳನ್ನು ರಕ್ಷಿಸುವ ಫ್ರೋದ್ದೇಶವಿಟ್ಟುಕೊಂಡಿರುವವರು ಇತರರ ಬಗ್ಗೆ ಅದಿಷ್ಟು ಕಾಳಜಿ ವಹಿಸಬಲ್ಲರು? ಸರಕಾರಿ ಅಧಿಕಾರಿಗಳೇ ಯೋಗ್ಯ ರೀತಿಯಲ್ಲಿ ವರ್ತಿಸುವಂತೆ, ತಪ್ಪಿದರೆ ಉಗ್ರ ದಂಡನೆಗೆ ಗುರಿಯಾಗುವಂತೆ ಮಾಡುವುದೇ ಉಚಿತವಲ್ಲವೆ?

ಕಾಂಗ್ರೆಸ್ ಸಮಿತಿಯು ಕಳಿಸಿದ ಪರಿಪತ್ರಗಳಿಗೆ ಕಾಂಗ್ರೆಸ್ ಎಂ. ಎಲ್. ಎ. ಎಂಪಿಗಳೆಲ್ಲರಿಂದ ಬರೆಯುವುದಿಲ್ಲವೆಂಬ ಸತ್ಯವನ್ನು ಮಹಮ್ಮದಾಲಿಯವರು ಹೊರಗೆಡಹಿದರು. ಪರಸ್ಪರ ಗೌರವ ಭಾವನೆಯಿರಬೇಕೆಂದು ಉಪದೇಶಿಸಿದರು. ಗೌರವವನ್ನು ಪಡೆಯುವುದೇ 'ಅಧಿಕಾರ ಪದ" ದ ಗರಿಮೆಯೆಂದು ತಿಳಿದವರು ಅದನ್ನು ಕೊಡುವುದೆ, ಸಾಧ್ಯವಿಲ್ಲ. ಕಾಂಗ್ರೆಸ್ ಪದಾಧಿಕಾರಿಗಳನ್ನೇ ಗೌರವಿಸದ ಕಾರಣ ಲಕ್ಷಾದವರು ಸಾಮಾನ್ಯ ಜನತೆಯ ಮೇಲೆ ಕೈಪೆ ಮಾಡಿಯಾರೆಂಬುದು ಊಹೆಗೂ ದೂರವಾದ ಮಾತು. ಇದರಿಂದಲೇ ಕಾಂಗ್ರೆಸ್ ಜನಪ್ರಿಯತೆ ವಾಗುತ್ತಿದೆ. ವಿರೋಧಿ ಪಕ್ಷಗಳ ಅಪಪ್ರಚಾರಕ್ಕಿಂತಲೂ ಕಾಂಗ್ರೆಸ್ ತುಂಡು ನಾಯಕರ ಅಕರ್ಮಣ್ಯತೆ ಮತ್ತು ತಿರಸ್ಕಾರ ಪ್ರವೃತ್ತಿಗಳಿಂದಾಗಿ ಕಾಂಗ್ರೆಸ್ ಅಡೆತನವಾಗುತ್ತ ಬರುತ್ತಿದೆ. ಆದುದರಿಂದ ರಿಗ್ಣ ರಚ್ಚೆಯಲ್ಲಿ ಪಡೆದಿರುವ ಕಾಂಗ್ರೆಸ್ಸಿನ ಚಿಕಿತ್ಸೆ ತೀವ್ರಗತಿಯಲ್ಲಾಗಬೇಕೆಂದು ಪರಿಸ್ಥಿರ ಅಶಯ ತೀವ್ರಗಲ್ಲಿಯೇ ಕಾರ್ಯರೂಪಕ್ಕೆಳಿಯಬೇಕು. ಪೆಚ್ಚಿದ ಬೆಂಕಿಯನ್ನು ಬಲವಾಗಿ ಉರಿಯು ಬಿಟ್ಟರೆ, ಮತ್ತೆ ನಂದಿಸುವುದು ಬಲುಕಷ್ಟ. ಮಹಮ್ಮದಾಲಿಯವರು ಎಐಸಿಸಿಯ ಸೂಕ್ತ ವಾರ್ಗದರ್ಶನ ಪಡೆದು ಈ ದಿಸೆಯಲ್ಲಿ ಕೂಡಲೇ ಮುಂದುವರಿಯಬೇಕು.

— ಗೋರಾ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ನೀವು ಆಚರಿಸುವ

ನಾಗರಪಂಚಮಿಯ ಪೂರ್ವೋತ್ತರ

ನಾಗಗಳನ್ನು ಪೂಜಿಸುವ ಸಂಪ್ರದಾಯವು ಭಾರತದಲ್ಲಿ ಹಿಂದಿನಿಂದಲೂ ಬೆಳೆದು ಬಂದಿದೆ ಚರಿತ್ರೆಯ ಅದಿಕಾಲದಿಂದಲೂ ಹಿಂದುಗಳು ನಾಗನನ್ನು ಪೂಜಿಸುತ್ತಿದ್ದರು. ಆರ್ಯ ದ್ರಾವಿಡರು ನಾಗನ ಪೂಜೆ ಮಾಡುತ್ತಿದ್ದರೆಂಯ ನಾವು ಚರಿತ್ರೆಯಂದ ತಿಳಿಯಬಹುದಾಗಿದೆ. ನಮ್ಮ ಸುಂಕಾಣಗಳಲ್ಲಿ ಹಾಗೂ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟ ನಾಗಗಳಿಗೆ ಹಿಂದೂ ಶಾಸ್ತ್ರದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ.

ನಾಗಗಳ ಪೂಜೆಯನ್ನು ಮಾಡುವ ದಿನಕ್ಕೆ ಕೊಡ ಸ್ಥಾನವಿದೆ. "ನಾಗರ ಪಂಚಮಿ" ಎಂದು ಕರೆಯಲ್ಪಡುವ ಈ ದಿನವನ್ನು ಭಾರತದಾದ್ಯಂತ ಆಚರಿಸಲ್ಪಡುತ್ತಿದ್ದರೆ; ಆದರೆ ಆಚರಿಸುವ ರೀತಿಯಲ್ಲಿ ತುಂಬಾ ಅಂತರಗಳಿವೆ. ಒಂದು ಊರಿನವರು ಆಚರಿಸುವ ಪದ್ಧತಿ ಇನ್ನೊಂದು ಊರಿನಲ್ಲಿನ ಪದ್ಧತಿಯನ್ನು ಹೋಲುತ್ತಿಲ್ಲ. ಶ್ರಾವಣ ಮಾಸದಲ್ಲಿ ಸಾಧಾರಣ ಶುಕ್ಲ್ಯ ಪಂಗಳಲ್ಲಿ ಈ ನಾಗರ ಪಂಚಮಿ ಬರುತ್ತದೆ. ಅಂದು ಪ್ರತಿಯೊಬ್ಬ ಹಿಂದೂ ಸುಹಿಳೆಯು ಪ್ರಾತಃಕಾಲ ಎದ್ದು ಸ್ನಾನ ಮುಗಿಸಿ ಹೂ, ಗಂಧ ಅರಿಶಿಣ ಕುಂಕುಮಗಳಿಂದ ನಾಗನ ಮೂರ್ತಿಯನ್ನು ಪೂಜಿಸುವಳು. ದೀಸವನ್ನು ಹೆಚ್ಚಾಗಲು ರುತ್ತು ಪಾಲು ಮತ್ತು ತೆನೆಯನ್ನೆ ಇಟ್ಟು ಬರುವರು. ಸರ್ಪ ಬಂದು ಆ ಹಾಲನ್ನು ಕುಡಿಯಲೆಂದೇ ಹೀಗೆ ಮಾಡುವರು. ಹತ್ತಿಸಿದ ದೀಪವನ್ನು ರಾತ್ರಿಯಾ ನಡೆಗೆ ಉರಿಯುವರೆತೆ ನೋಡಿಕೊಳ್ಳುವರು.

ನಾಗರ ಪಂಚಮಿಯನ್ನು ಒಂದೊಂದು ಕಡೆ ಒಂದೊಂದು ರೀತಿ ಆಚರಿಸುವರು ಉತ್ತರ ಕರ್ನಾಟಕದಲ್ಲಿ ನಾಗರ ದ್ಮೆಹಿಮಿಯನ್ನ ಅಡಾಢೆ ಮಾಸದಲ್ಲಿ ಆಚರಿಸುವರು. ನಾಗಗಳ ಮೂತೆಯು ಮಳೆಗಾಲದ ಕೊಂಪೆಯಿಂದ ಜನರನ್ನು ಈ ಸಮಯದಲ್ಲಿ ರಕ್ಷಿಸುತ್ತಿಳೆ ಎಂದು ಅಲ್ಲಿಯ ಜನರ ನಂಬುಗೆಯಾಗಿದೆ.

ಪಂಜಾಬಿನಲ್ಲಿ ನಾಗಗಳನ್ನು ದೇವಿ ಪೂಜೆಯೊಂದಿಗೆ ಮಾಡುತ್ತಾರೆ. ದೇವಿ ಪೂಜೆಯು ಸಂದರ್ಭದಲ್ಲಿ ನಾಗಪೂಜೆಯೂ ನಡೆಯುತ್ತದೆ. ಸರ್ಪಗಳು ಮನೆಯ ಜನರನ್ನು ರಕ್ಷಿಸುತ್ತವೆ ಮತ್ತು ಅವುಗಳ ಕಡಿತದಿಂದ ಮೃತ್ಯುವು ಬಾರದಂತೆ ನೋಡುತ್ತವೆ ಎಂದು ನಂಬಿ ಉತ್ತರ ಪ್ರದೇಶದ ಜನರು ಬಾಗಿಲಿನ ಮೇಲೆ ಚಿತ್ರಗಳನ್ನು ಬಿಡಿಸಿ ಪೂಜಿಸುತ್ತಾರೆ. ಈ ನಾಗ ಪೂಜೆಯ ಸಂದರ್ಭದಲ್ಲಿ ಬ್ರಾಹ್ಮಣರಿಗೆ ದಾನ ಮಾಡುವ ಕ್ರಮವು ಅಲ್ಲಿ ಈಗಲೂ ಇದೆ.

ಮಧ್ಯ ಪ್ರದೇಶದಲ್ಲಿ ನಾಗ ಪಂಚಮಿಯ ದಿನ ಹಾವಾಡಿಗನು ನಾಗನನ್ನು ಕುಣಿಸಿ ಊರೂರು ಅಲೆದು ಹಣ ಸಂಪಾದಿಸುವನು. ಜನರು ಹಾಲನ್ನು ಎರೆಯುವರು. ತನ್ಮೂಲಕ ಪೂಜೆ ಸಲ್ಲಿಸುವರು.

ನಾಗನನ್ನು ಬಣ್ಣದಿಂದ ಚಿತ್ರಿಸಿ ಗೋಡೆ ಅಥವಾ ಬಾಗಿಲ ಮೇಲೆ ಇರಿಸಿ ನಾಗಪೂಜೆ ಸಲ್ಲಿಸುವ ಕ್ರಮ ಗುಜರಾಥಿನಲ್ಲಿ ಈಗಲೂ ಇದೆ. ಪೂಜಾಂತ್ಯದಲ್ಲಿ ಬೆಣ್ಣೆ ಹಾಲು ಹೊದುಗಾದುವನ್ನು ಆ ಚಿತ್ರದಲ್ಲಿರುವ ಇಟ್ಟು ನಾಗನಿಗೆ ಅರ್ಪಿಸುವರು. ಹಾಲಿನಿಂದ ತುಂಬಿದ ಪಾತ್ರೆಯನ್ನು ಮನೆಯ ಒಂದು ಮೂಲೆಯಲ್ಲಿ ಇಡುವರು. ಮತ್ತು ಆ ದಿನ ನಾಗನು ಬಂದು ಹಾಲನ್ನು ಕುಡಿದ ಆ ದೃಶ್ಯವನ್ನು ಯಾರಾದರೂ ಕಂಡರೆ ಅವರು ಭಾಗ್ಯಶಾಲಿಗಳೆಂದು ಅವರ ನಂಬಿಕೆಯಾಗಿದೆ.

ಹಾವಾಡಿಗರು ನಾಗರ ಪಂಚಮಿಯಂದು ಮಹಾರಾಷ್ಟ್ರದಲ್ಲಿ ಎಲ್ಲೆಲ್ಲೂ ಕಾಣಸಿಗುತ್ತಾರೆ. ಅವರು ಮನೆ ಮನೆ ಅಲೆದು, ನಾಗನನ್ನು ಕುಣಿಸುವರು. ಜನರು ಹಣ ಮತ್ತು ಹಾಲನ್ನು ಕೊಡುವರು ದಕ್ಷಿಣದಲ್ಲೂ ಶೃಂಗಸಿದ ನಾಗನನ್ನು ಹಾವಾಡಿಗರು ಊರಲ್ಲೆಲ್ಲಾ ಮನೆ ಮನೆಗೆ ಹೋಗಿ ಕುಣಿಸುವುದನ್ನು ನಾವು ನೋಡಬಹುದು

ಈ ನಾಗರ ಪಂಚಮಿಯನ್ನು ಯಾಕೆ ಆಚರಿಸುವರು? ಈ ಹಬ್ಬದ ಮೂಲವೆನ್ನೆ? ಎಂದು ಶೋಧಿಸಿದರೆ, ಪುರಾಣವೇ ಇದನ್ನು ತಿಳಿಸುತ್ತದೆ.

ಶಂಕಾಸುರನೆಂಬ ಕ್ರೂರ ರಾಕ್ಷಸನು ಒಮ್ಮೆ ಭೂಮಿಯನ್ನು ವಿತಾಳಕ್ಕೆ ಒಯ್ಯಲು ದೇವತೆಗಳೆಲ್ಲಾ ಬೆದರಿದರು. ಭೂಮಿಯನ್ನು ರಕ್ಷಿಸಲಿಕ್ಕಾಗಿ ದೇವತೆಗಳೆಲ್ಲಾ ಒಟ್ಟಾಗಿ ಮೇರು ಪರ್ವತವನ್ನು ಕಿತ್ತು ಸಮುದ್ರಕ್ಕೆ ಹಾಕಿ ಮಥನ ಮಾಡಿದರು. ಹೀಗ್ಗಾಗಿ ಸರ್ಪಗಳ ರಾಜನಾದ ವಾಸುಕಿಯನ್ನು ಉಪಯೋಗಿಸಿದರು ಸಮುದ್ರ ಮಥನಮಾಡಿ. ಭೂಮಿಯನ್ನು ದಡಕ್ಕೆ ತಂದರು. ವಾಸುಕಿಯೆಂಬ ಸರ್ಪಗಳ ರಾಜನು ಸಮುದ್ರ ಮಥನ ಕಾಲದಲ್ಲಿ ವಿಷ್ಣುವಿಗೆ ಹಗ್ಗವಾಗಿ ಸಹಾಯ ಮಾಡಿದ ಕಾರಣದಿಂದಾಗಿ ನಾಗಗಳನ್ನು ಪೂಜಿಸುವ ದಿನವನ್ನು ಹಿಂದುಗಳು ಇಂದಿಗೂ ಆಚರಿಸುತ್ತಾರೆ.

ಇನ್ನೊಂದು ಕಥೆಯಿಂದಾಗಿ ನಾಗರ ಪಂಚಮಿಯ ಮಹತ್ವವ ಅರಿವನ್ನು ಮಾಡಿಕೊಳ್ಳಬಹುದಾಗಿದೆ. ಮಣಿಪುರದ ಒಬ್ಬ ರೈತನು ಗದ್ದೆಯನ್ನು ಉಳುವಾಗ ನೇಗಿಲಿಗೆ ಒಂದು ಸರ್ಪದ ಮರಿ ಸಿಕ್ಕಿಕೊಂಡು ಸತ್ತು ಹೋಯಿತು. ಇದನ್ನು ಕಂಡ ಅದರ ತಾಯಿಯು ಸೇಡನ್ನು ತೀರಿಸಲೋಸುಗ ಆ ರೈತನ ಮನೆಯವರೆಲ್ಲರನ್ನೂ ಕಚ್ಚಿ ಕೊಂದಿತು.

ರೈತನ ಒಬ್ಬಳೇ ಒಬ್ಬಳು ಹತ್ತಿರದ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಎಲ್ಲರನ್ನು ಕೊಂದಾದ ಮೇಲೆ ಈ ತಾಯಿ ಸರ್ಪವು ಆ ಗ್ರಾಮಕ್ಕೆ ಆಕೆಯನ್ನು ಕಚ್ಚಲು ಹೊರಟಿತು. ಆದರೆ ಆ ರೈತಳ ಕಾವರಿ ಒಂದು ನಾಗನ ಮೂರ್ತಿ ಇಟ್ಟು ಪೂಜಿಸುತ್ತಿದ್ದಳು. ಇದನ್ನು ಕಂಡ ತಾಯಿ ಸರ್ಪವು ಎಲ್ಲವನ್ನು ಮರೆತು ನಡೆದ ಕಥೆಯನ್ನು ಅರುಹಿತು. ಬೇದಗೊಂಡ ರೈತನ ಮಗಳು ಸತ್ತುಬೋದ ತನ್ನ ತಂದೆ ಮತ್ತು ಸಹೋದರನನ್ನು ಬದುಕಿಸುವಬಗೆ ಹೇಗೆಂದು ಕೇಳಿದಾಗ ಕನಿಕರಪಟ್ಟು ತಾಯಿಯು ಅಮೃತದ ಪಾತ್ರೆಯೊಂದನ್ನು ಆ ರೈತನ ಮಗಳೊಡನೆ ಕೊಟ್ಟಳು. ಮತ್ತು ೨ ದಿನವು ಸತ್ತವರ ಮೇಲೆ ಪ್ರೋಕ್ಷಿಸುವಂತೆ ಹೇಳಿತು.

ಈ ಘಟನೆಯು ನಡೆದುದು ಶನೇ ತಾರೀಕು ಶ್ರವಣ ಮಾಸ. ಆದ.ದರಿಂದಲೇ ಈ ದಿನವನ್ನು ಇಂದಿಗೂ ದೇಶದಾದ್ಯಂತ ನಾಗರ ಪಂಚಮಿ ಎಂಬ ಹೆಸರಲ್ಲಿ ಹಿಂದುಗಳು ಆಚರಿಸುತ್ತಾರೆ.

(ಆಧಾರದಿಂದ)

—ನಿ. ರೋಹಿದಾಸ ಶಾಮಂತ್

ಕುಂದಾಪುರ ಡಿ ಮು. ಕೋರ್ಟಿನಲ್ಲಿ
R. E. P. 251/1962 S.C. 244/1960

ಪಾದಿ—ವೆಂಕಟ್ರಮಣ ಪುರಾಣಿಕ

ಪ್ರತಿವಾದಿ—ಕುಯ್ಯಾಡಿ ಭಟ್ಟ ಅವರಲ್ಲಿ ಕೆಲಸ ಭಟ್ಟನು ಅಗಿ ಕೆಲಸಮಾಡ್ತಿರುವನು.

ಸದ್ರಿ ಪ್ರತಿವಾದಿಗೆ ತಿಳುಪಡಿಸುವುದೇನೆಂದ್ರೆ—

ನೋಟಿಸ್ ಆಮಲ್ದಾರಿಯಲ್ಲಿ ಪ್ರತಿವಾದಿಯ ಬಾಬ್ತು ಸ್ಥಿರಾಸ್ತಿಗಳನ್ನು ಜಪ್ತಿಮಾಲಿಗೆ ಅಪೇಕ್ಷಿಸಿಯಿದೆ. ಸದ್ರಿ ಯೇಲಂ ಮಿ.ಸ್ತಾರಿನ ಕರ್ತವ್ಯ ನಿರ್ವಹಿಸುವರೆ ತಾ ೨೬—೭—೬೩ ಕ್ಕೆ ಕಮ್ಮಿಗೆಯಿಟ್ಟಿದೆ. ಆ ಕಾರಣ ನಿಮ್ಮಜ್ಜೀ ನಾವೂ ಆಕ್ಷೇಪಣಿಯಿದ್ದರೆ ಆ ದಿವಸ ಹಗಲು 11 ಘಂಟೆಗೆ ನೀವಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೀಸಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

(By order of the court)

Y. Tejappa Shetty
Advocate for plaintiff.

Coondapoor, 16—7—1963.

ಮತ್ತೊಂದು ಆಕರ್ಷಣೀಯ
ಉಳಿತಾಯ ಯೋಜನೆ

ರೆಕರಿಂಗ್
ಡಿಪಾಜಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯಾನ ರೂ. 5/ ರಿಂದ ರೂ. -500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು — 12, 24, 36, 46 ಮತ್ತು 60 ತಿಂಗಳುಗಳು
- ಸಾವಕಾಶವಾಗಿ ಕಟ್ಟುವ ಕಂತುಗಳಿಗೆ ದಂಡವೇನೂ ಕೊಡಬೇಕಾಗಿಲ್ಲ
- ವರ್ಷಕ್ಕೆ ಚಕ್ರಬಡ್ಡಿ 4%

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್ : ಮಂಗಳೂರು ಆಡಳಿತ ಕಛೇರಿ : ಬೆಂಗಳೂರು

ವರ್ಕಿಂಗ್ ಫಂಡ್ಸ್ ರೂ. 55 ಕೋಟಿಗೂ ಮೀರಿದೆ

ಅಮೃತ ಬಿಂದು

ಪ್ರೇಮಕ್ಕೆ ಆಳ ಅಂತರಗಳಿಲ್ಲ.

೦ ೦ ೦ ೦

ನೆರೆಯವನನ್ನು "ರಜಾಕಾಲ ಹೇಗೆ ಕಳೆದೆ" ಎಂದು ಕೇಳಬೇಡಿ. ಆತ ನಿಮಗೆ ಅದನ್ನು ವಿವರಿಸುತ್ತಾ ಒಂದು ಸಂಜೆಯನ್ನೆಲ್ಲಾ ವ್ಯರ್ಥಮಾಡಿ ಬಿಡಬಹುದು.

೦ ೦ ೦ ೦

ಇನ್ನೊಬ್ಬರ ತಪ್ಪುಗಳಿಂದ ಕಲಿ. ನೀನೇ ಆ ತಪ್ಪುಗಳನ್ನು ಮಾಡಿ ಬುದ್ಧಿ ಕಲಿಯಲು ಅವಕಾಶವಿಲ್ಲ; ಅಲ್ಲದೆ ಅದಕ್ಕೆ ಖರ್ಚೂ ಹೆಚ್ಚು.

೦ ೦ ೦ ೦

ಜಾಗರೂಕನಾದ ಡ್ರೈವರ್ ಕಾರು ತೆಗೆದು ಎಂಬುದನ್ನು ಗಮನದಲ್ಲಿಟ್ಟುಕೊಂಡು ನಡೆಯುತ್ತಾನೆ—ರಸ್ತೆ ತನ್ನದು ಎಂದಲ್ಲ.

೦ ೦ ೦ ೦

ಬುದ್ಧಿಪ್ಯಾರ ಜೂಟ್ ಇದ್ದ ಹಾಗೆ; ಓಡಿಸಿದಾಗ ಮಾತ್ರ ಅದು ಕೆಲಸ ಮಾಡುತ್ತದೆ.

೦ ೦ ೦ ೦

ಆದರ್ಶ ಗಂಡನನ್ನು ಪಡೆದ ಹೆಂಗಸು ಆದರ್ಶ ಹೆಂಡತಿಯೂ ಆಗಬಲ್ಲಳು.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪೨	ಉಡುಪಿ ೨೫-೭-೧೯೬೩	ವಾರ ೪೬

ವಿಮಾನ ತರಬೇತಿ

ಚೀನೀಯರ ದುರಾಕ್ರಮಣದ ನಂತರ ಭಾರತವು ತನ್ನ ಸಂರಕ್ಷಣಾ ಪಡೆಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಲು ಮತ್ತು ಅವನ್ನು ಬಲಾಢ್ಯಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಂಡಿರುವುದು. ಸಂಧಾನದ ಹೆಸರಿನಲ್ಲಿ ಸಂಗ್ರಾಮಕ್ಕಾಗಿ ಕಾಲು ಕೆದರುತ್ತಿರುವ ಚೀನೀಯರು ಯಾವಾಗ ಯಾವ ರೀತಿಯಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಆಕ್ರಮಣ ನಡೆಸುವರು ಎಂದು ನಿಗದಿಯಾಗಿ ಹೇಳಬರುವುದಿಲ್ಲ. ದಿನದಿಂದ ದಿನಕ್ಕೆ ಚೀನೀಯರು ತಮ್ಮ ಕೆಟ್ಟು ಹೋದ ಭಾರತದೊಡನಿರುವ ಸಂಪರ್ಕವನ್ನು ಮತ್ತಷ್ಟು ಕೆಡಿಸಲು ಯಾವ ರೀತಿಯಿಂದ ಸಾಧ್ಯವಿದೆಯೋ ಅನೆಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ. ಭಾರತದ ಪ್ರಧಾನಿ ನೆಹರುರವರನ್ನು ಶತ್ರು ಸಂಖ್ಯೆ ೧ ಎಂದು ಕರೆದ ಕೆಂಪು ಚೀನೀಯರು ಸಂಧಾನದ ವಾರ್ಗ ಶುಲಯುವುದು ಆಶ್ಚರ್ಯಲ್ಲೇ ಇದೆ. ಹಾಗಾಗಿ ನಮ್ಮ ಸೀಮಾ ವಿವಾದವು ಪಕ್ಕನೆ ಬಗೆಹರಿಯುವುದೂ ಸಾಧ್ಯವಿಲ್ಲ. ಇವುಂದೆ, ನಾವು ನಮ್ಮ ರಕ್ಷಣೆಗೋಸುಗ ನಮ್ಮ ಸಾರ್ವಭೌಮತೆಗೆ, ಸ್ವಾತಂತ್ರ್ಯಕ್ಕೆ ಬಂದಿರುವ ಸಾಮ್ರಾಜ್ಯವಾದಿ ಚೀನೆಯರ ಸಂಘಾತವನ್ನು ಸ್ವೀಕರಿಸಲೇ ಬೇಕಾಗಿದೆ; ಆದಕ್ಕಾಗಿ ಸರ್ವಸಿದ್ಧತೆಗಳನ್ನು ಮಾಡಿಕೊಳ್ಳಲೇ ಬೇಕಾಗಿದೆ.

ಇಂತಹ ಸಿದ್ಧತೆಗಳಲ್ಲಿ ಅಮೆರಿಕೆ ಮತ್ತು ಬ್ರಿಟನ್ನುಗಳೊಡನೆಕೂಡಿಕೊಂಡು ನಡೆಸುವ ವಿಮಾನ ಪಡೆಗಳ ಸಂಯುಕ್ತ ತರಬೇತಿಯೂ ಒಂದು. ಸಾಶ್ಚಾತ್ಯರು ಮುಂದಿಟ್ಟ ಈ ಸಾಲಿನೆಗೆ ಭಾರತ ಸರಕಾರವೀಗ ತನ್ನ ಅನುಮತಿಯನ್ನಿತ್ತಿದೆ, ಅದನ್ನು ಸ್ವೀಕರಿಸಿದೆ.ಈ ಒಡಂಬಡಿಕೆಯಂತೆ, ಅಮೆರಿಕೆ ಮತ್ತು ಬ್ರಿಟನ್ನುಗಳು ಭಾರತೀಯ ವಿಮಾನ ಪಡೆಗೆ ಅವಶ್ಯಕ ತರಬೇತಿಯನ್ನು ನೀಡುವುವು. ಪಾಶ್ಚಾತ್ಯ ಸೈನಿಕ ತಂತ್ರಜ್ಞರು ಭಾರತೀಯ ಸೈನಿಕರನ್ನು ವಿಧಾನಧಾಳಿಯಿಂದ ರಕ್ಷಿಸಿಕೊಳ್ಳುವಂತೆ ತರಬೇತುಗೊಳಿಸುವರು. ಚೀನವು ಧಾಳಿಯನ್ನು ನಡೆಸಿದರೆ, ಅದರಿಂದ ನಮ್ಮ ನಗರಗಳು, ಔದ್ಯಮಿಕ ಕೇಂದ್ರಗಳು ಹಾಗೂ ವಿಶೇಷ ಮಹತ್ವದ ಸಂರಕ್ಷಣಾ ಕೇಂದ್ರಗಳಿಗೆ ಸಂರಕ್ಷಣೆ ನೀಡುವುದೇ ಈ ತರಬೇತಿ ಪಡೆಯುವುದರ ಮುಖ್ಯೋದ್ದೇಶ. ಇದಕ್ಕಾಗಿ ಭಾರತವು ತನ್ನ ಮಿತ್ರ ರಾಷ್ಟ್ರಗಳಾದ ಅಮೆರಿಕೆ, ಕಾಮನ್‌ವೆಲ್ತ್ ಮತ್ತು ರಶ್ಯಗಳನ್ನು ಯಾಚಿಸಿತ್ತು. ಇದರಂತೆ ಅಮೆರಿಕೆ ಮತ್ತು ಕಾಮನ್‌ವೆಲ್ತ್‌ಗಳ ಸಂಯುಕ್ತ ಪರಿಶೀಲನಾ ಮಂಡಳಿಯೊಂದು ಭಾರತಕ್ಕೆ ಆಗಮಿಸಿ, ಪ್ರಸಂಗವನ್ನು ಪರಿಶೀಲಿಸಿತು. ಈ ಪರಿಶೀಲನೆಯ ಪರಿಣಾಮವಾಗಿ ಸದ್ಯದ ಸೂಚನೆಯು ಮುಂದೆ ಬಂದಿತು. ಈ ಸೂಚನೆಯಂತೆ, ಚೀನಾ ಭಾರತ ಸೀಮೆಯಲ್ಲಿ ಯುದ್ಧಕ್ಕೂ ಸ್ಥಾಪಿಸುವುದಕ್ಕಾಗಿ ಅಮೆರಿಕೆಯು ಭಾರತಕ್ಕೆ ರಾಡಾರ್ ಯಂತ್ರಗಳನ್ನೂ ಅವಶ್ಯಕ ಆಧುನಿಕೋಪಕರಣಗಳನ್ನೂ ಒದಗಿಸುತ್ತದು. ಬ್ರಿಟನ್ನಿನ ಭಾರತದ ವಾಯು ರಕ್ಷಣೆಗೆ ಸಹಾಯಕವಾಗುವ ಇಲೆಕ್ಟ್ರೋನಿಕ್ ಹಾಗೂ ಸಂಪರ್ಕೋಪಯೋಗಿ ಸಲಕರಣೆಗಳನ್ನು ಪೂರೈಸುವುದು. ಈ ತರಬೇತಿಯು ಕೆಲವು ವಾರಗಳ ವರೆಗೆ ನಡೆಯಲಿದೆ. ಶಾಶ್ವತವಾದ ರಾಡಾರ್ ಕೇಂದ್ರಗಳನ್ನು ಸ್ಥಾಪಿಸಲು ಕೆಲವು ಕಾಲ ಬೇಕಾಗುವುದರಿಂದ ಸದ್ಯ ತಾತ್ಕಾಲಿಕವಾದ ಕೇಂದ್ರಗಳನ್ನು ನಿರ್ಮಿಸಲಾಗುವುದು. ಅಮೆರಿಕೆಯು ತಾನು ಈಗ ನೀಡುವ ಈ ಸೌಲಭ್ಯಗಳನ್ನು ಶಾಶ್ವತ ರಾಡಾರ್ ಘಟಕಗಳು ನಿರ್ಮಾಣಗೊಂಡ ಬಳಿಕ ಮರಳಿ ಪಡೆಯುತ್ತದು. ಅಮೆರಿಕೆಯು ಪೂರೈಸುವ ರಾಡಾರ್ ಯಂತ್ರಗಳು ಅತ್ಯಾಧುನಿಕ ವಾಗಿರುವುವು. ಇವುಗಳನ್ನು ಉಪಹಾರವಾಗಿ ನೀಡುವುದಕ್ಕೆ ಮತ್ತು ಕಾವಾಡಿಕೊಳ್ಳುವುದಕ್ಕೆ ಭಾರತೀಯ ವಿಮಾನ ಪಡೆಗೆ ಸಾಕಷ್ಟು ತರಬೇತಿ ಬೇಕು. ಅಮೆರಿಕೆಯು ನೀಡುವುದು ಕೇವಲ ಸಹಾಯ ಮತ್ತು ತರಬೇತಿಯನ್ನು ಮಾತ್ರ; ಅವನ್ನು ಬೇಕಾದಂತೆ ಉಪಯೋಗಿಸುವ ಸ್ವತಂತ್ರತೆ ಭಾರತಕ್ಕೇನೇ ಸೇರಿದೆ. ಅಮೆರಿಕೆ ಮತ್ತು ಬ್ರಿಟಿಷ ಸರಕಾರಗಳು ತಮ್ಮ ವಿಮಾನ ಪಡೆಯು ಯುದ್ಧ ವಿಮಾನಗಳು ಭಾರತಕ್ಕೆ ತಾತ್ಪರ್ತಿಕವಾಗಿ ಭೇಟ್ಟಿನೀಡಿ, ಸಯುಕ್ತ ಕಾರ್ಯಾಚರಣೆಯಲ್ಲಿ ಭಾಗ ವಹಿಸಲು ಒಪ್ಪಿವೆ. ಇದರಿಂದ, ಭಾರತೀಯ ವಿಮಾನ ಪಡೆಯ ಸಿಬ್ಬಂದಿಗಳು ಅವುಗಳನ್ನು ಉಪಯೋಗಿಸುವುದು ಹೇಗೆಂಬುದನ್ನು ಕಲಿತುಕೊಳ್ಳಲು ಸಹಾಯವಾಗುವುದ; ಅವುಗಳೊಂದಿಗೆ ಜಭ್ಯಾಸ ನಡೆಸಿ, ವಾಯು ರಕ್ಷಣೆಯ ಅತ್ಯಾಧುನಿಕ ತಂತ್ರಗಳನ್ನು ಅಂಕುಡೊಂಕುಗಳು ಅವಕಾಶ ದೊರೆಯುವುದು. ಈ ತರಬೇತಿ ಪಡೆಯಲು ಬ್ರಿಟನ್ ಮತ್ತು ಅಮೆರಿಕೆಗಳು ಒಂದೊಂದು ಸ್ಕ್ವಾಡ್ರನ್ನಿನೆಷ್ಟು ರಣ ವಿಮಾನಗಳನ್ನು ಭಾರತಕ್ಕೆ ಕಳಿಸುವುವು

ಪ್ರಚಲಿತ ಪರಿಸ್ಥಿತಿಯಲ್ಲಿ ಭಾರತಕ್ಕೆ ನಾವು ಪಡೆಯು ಬಲ ಸಂವರ್ಧನೆ ಮತ್ತು ಅದಕ್ಕಾಗಿ ಸೂಕ್ತ ತರಬೇತಿಗಳು ಅತ್ಯಾವಶ್ಯಕ. ಅದಕ್ಕಿ, ಇದಕ್ಕಾಗಿ ಅದು ಪಾಶ್ಚಾತ್ಯರ ನೆರವನ್ನು ಈ ರೀತಿಯಲ್ಲಿ ಸ್ವಾಗತಿಸಿ, ಅಂಗೀಕಾರದ ಮುದ್ರೆಯೊತ್ತುವುದು ಅವರ ತಾಟಸ್ಥ್ಯ ನೀತಿಗೆ ಭಂಗ ತರುವುದಿಲ್ಲವೆ? ಅಮೆರಿಕೆ ಮತ್ತು ಬ್ರಿಟನ್ನುಗಳಿಂದ ಪಡೆಯುವ ಈ ಸಹಾಯವು ಭಾರತವನ್ನು ಪಾಶ್ಚಾತ್ಯರ ಬಣಕ್ಕೆ ಸೇರಿಸುವುದಿಲ್ಲವೆ? ಎಂಬ ಸಂದೇಹವೇಳುವುದು ಸ್ವಾಭಾವಿಕ. ಕೂಲಂಕಷವಾಗಿ ವಿಚಾರ ಮಾಡಿದರೆ, ಇಂತಹ ಸಂಶೆಹಗಳಿಗೆ ಅಸ್ಪದವಿಲ್ಲವೆಂಬುದು ಮನನಂಗೆಯಾಗುವುದು. ನಾವಿಂದು ಪಡೆಯುತ್ತಿರುವುದು; ನಾವು ನನ್ನು ನಿರ್ಮರ್ತವಾಗಿ ಒದಗುವ ಸರ್ವ ಪ್ರಕಾರದ ಸಹಾಯವನ್ನು ನಾವು ಹಿಂದಿನಿಂದಲೂ ಸ್ವಾಗತಿಸುತ್ತ ಬಂದಿದ್ದೇವೆ. ಅಮೆರಿಕೆ ಮತ್ತು ಬ್ರಿಟನ್ನುಗಳು ಭಾರತದ ಗಂಡಾಂತರಮಯ ಪರಿಸ್ಥಿತಿಯ ಅಳವನ್ನು ಮನಗಂಡು, ನೈಪೂಸಿಕ ತರಬೇತಿಯನ್ನು ನಿರ್ಶರ್ತವಾಗಿ ನೀಡಲು ಮುಂದೆ ಬಂದಿವೆಯೆಂಬುದನ್ನು ನಾವು ಮರೆಯುವಂತಿಲ್ಲ. ಅಮೆರಿಕೆಯು ನೀಡುವ ರಾಡಾರ್ ಯಂತ್ರಗಳನ್ನು ನಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಲು ನಾವು ಸ್ವತಂತ್ರರಿದ್ದೇವೆ.ಹಾಗಿರುವಾಗ, ಇಲ್ಲಿ ಪಾಶ್ಚಾತ್ಯರ ಬಣಕ್ಕೆ ಸೇರಿಕೊಂಡಂತಾಗದೇ ಎಂಬ ಸಂಶಯಕ್ಕೇನೇ ಆಸ್ಪದವಿರುವುದಿಲ್ಲ. ಅಂತೆಯೇ ನಾವು ರಶ್ಯವಿಂದ ಕೂಡ ಮಿಗ್ ಮಾದರಿಯ ವಿಮಾನ ನಿರ್ಮಾಣ ಕಾರಕಾನೆಗೆ ಸಹಾಯವನ್ನು ನಿರೀಕ್ಷಿಸುತ್ತಿದ್ದೇವೆ; ಅದೂ ಶೀಘ್ರದಲ್ಲೇ ದೊರೆಯಬಹುದೆಂದು ಹೇಳಬಹುದು. ಶತ್ರುಗಳ ಆಕ್ರಮಣವನ್ನು ಪ್ರಬಲವಾಗಿ ಎದಿರಿಸಿ, ಅವರನ್ನು ಹಿಮ್ಮೆಟ್ಟಿಸಿ, ನಮ್ಮ ಸಾರ್ವಭೌಮತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಈ ತರಬೇತಿಯ ಒಡಂಬಡಿಕೆಯು ನಿಜಕ್ಕೂ ಸ್ವಾಗತಾರ್ಹ. ಭಾರತದ ನೀತಿಗೆ, ಧೋರಣೆಗೆ ವ್ಯತ್ಯಯತಾರದಂತೆಯೇ ನೆರವನ್ನೀಯಲು ಮುಂದೆ ಬಂದ ಅಮೆರಿಕೆ ಮತ್ತು ಬ್ರಿಟನ್ನುಗಳಿಗೆ ಸಮಸ್ತ ಭಾರತೀಯರೂ ಕೃತಜ್ಞರು. ವಿದೇಶೀ ನೆರವಿನಿಂದಲೇ ನಾವು ಅರಿದಮನ ಮಾಡುತ್ತೇವೆಯೆಂಬುದು ಮೂರ್ಖತನ. ಆದುದರಿಂದ ದೇಶದ ಆಂತರಿಕ ಸಂರಕ್ಷಣಾ ಕ್ರಮಗಳೂ ಬಲಯುತವಾಗಿ, ಚೀನೀಯ ನಿಗ್ರಹಮಾಡಲು ಬದ್ಧಕಂಕಣರಾಗುವುದು ಭಾರತೀಯರ ಪರಮ ಕರ್ತವ್ಯ.

ಬೆಲೆಯೇರಿಕೆ

ಆಹಾರ ಧಾನ್ಯಗಳು ಮತ್ತು ಜೀವನೋಪಯೋಗಿ ವಸ್ತುಗಳ ಬೆಲೆಯಲ್ಲಿ ಏರಿಕೆಯಾಗುತ್ತಿರುವುದರ ವಿರುದ್ಧ ಮಂತ್ರಿವರ್ಯರು ಆಕ್ರೋಶ ಹೊಡಿಸುತ್ತಿದ್ದಾರೆ; ವ್ಯಾಪಾರಿಗಳನ್ನು ಅವರು ಪದೇ ಪದೇ ಎಚ್ಚರಿಸುತ್ತ ಇದ್ದಾರೆ. ಜನಸಾಮಾನ್ಯರು ಬೆಲೆಯೇರಿಕೆಯ ಬಗ್ಗೆ ದೂರು ಹೇಳುವಾಗ, ಮಂತ್ರಿವರ್ಯರು ಈ ರೀತಿಯಾಗಿ ಗರ್ಜಿಸುವುದು ತಪ್ಪಲ್ಲ. ಆದರೆ, ಕೇವಲ ಅರ್ಥಬೆಯಿಂದ ಬೆಲೆಯೇರಿಕೆಯು ಕಡಿಯುಲಾರದು ಎಂಬುದನ್ನು ನಾವು ಮರೆಯುವಂತಿಲ್ಲ. ದಿನೇ ದಿನೇ ಪ್ರತಿಯೊಂದು ವಸ್ತುವಿನ ಬೆಲೆಯೂ ಏರುತ್ತ ಬರುತ್ತಿರುವಾಗ, ಆಹಾರ ಧಾನ್ಯಗಳ ಬೆಲೆ ಮಾತ್ರ ಇಳಿವುಖವಾಗ ಬೇಕೆಂದು ಬಯಸುವುದು ಸಾಧ್ಯವಿಲ್ಲ. ಅವುಗಳ ಬೆಲೆಯೇರಿಕೆಯು ತುಸು ಕುಂಠಿತವೆತ್ತ ನಡೆಯ ಬಹುದು; ಆಷ್ಟೆ. ಸರಕಾರವು ಹೇರಿದ ನಾನಾ ಪ್ರಕಾರದ ಕರಭಾರವು ಬಳಸುವ ಪದಾರ್ಥಗಳ ಬೆಲೆಯು ವೇಲೆ ಸ್ಥಿರವಾಗಿರಲು ಬೇರೆದಿರುವುದು ಸಾಧ್ಯವಿಲ್ಲ ಬಟ್ಟೆಬರೆಯೇ ಮೊದಲಾದ ದೈತರ ಜೀವನೋಪಯೋಗಿ ವಸ್ತುಗಳ ಬೆಲೆಯು ಏರುತ್ತ ಹೋಗುವಾಗ ಅವರು ಉತ್ಪಾದಿಸುವ ದವಸಧಾನ್ಯಗಳ ದರದಲ್ಲಿಯೂ ಅನಿವಾರ್ಯವಾಗಿ ಏರಿಕೆಯಾಗಲೇ ಬೇಕು ಸರಕಾರವು ಅದೆಷ್ಟು ಪ್ರಯತ್ನನಡೆಸಿದರೂ ಇವನ್ನು ತಡೆಗಟ್ಟುವುದು ಸಾಧ್ಯವಿಲ್ಲ. ಇನ್ನು ಬಲವಂತದಿಂದ ಅರೀತಿ ಮಾಡಿತೆಂದರೆ, ಆಗ ಅಭಾವಸ್ಥಿತಿಯೇ ಕಾಣಿಸಿಕೊಂಡು, ಪ್ರಸಂಗವು ಮತ್ತಷ್ಟು ವಿಕೋಪಕ್ಕೆ ಹೋಗ ಬಹುದು. ಬೇಡಿಕೆಯು ಅಧಿಕವಾಗಿ, ಜನರಲ್ಲಿ ಕೊಳ್ಳುವ ಶಕ್ತಿಯು ಹೆಚ್ಚಾಗಿ, ಉತ್ಪಾದನೆಯು ಕಡಿಮೆಯಿರುವಾಗಲೇ ದಾರಣೆಗಳು ಏರುವುವು. ಕೆಲ ಪೊಮ್ಮೆ ಸರಕಾರವು ಹೇರುವ ನಿಯಂತ್ರಣದಿಂದಾಗಿ ಕೃತಕ ಅಭಾವವುಂಟಾಗಿಯೂ ಅವು ಹೆಚ್ಚುವುವು. ಈ ನಿಯಂತ್ರಣವೇ ಕಾಳ ಮಾರುಕಟ್ಟೆಗೆ ನಾಂದಿಗೂಗುವುದು. ಆದುದರಿಂದ ಸರಕಾರವು ಆಹಾರ ಧಾನ್ಯಗಳ ಬೆಲೆಯಲ್ಲಿ ಇಳಿಮುಖವಾಗುವುದರ ಕಡೆಗೆ ಮಾತ್ರ ಗಮನವಿತ್ತರೆ, ದೇಶದ ಪರಿಸ್ಥಿತಿ ಸುಧಾರಿಸುವಂತಲ್ಲ; ಎಲ್ಲ ವಸ್ತುಗಳ ಧಾರಣೆಯೂ ಮಿತಿಮೀರದಂತೆ, ಜನತೆಯು ಕೊಳ್ಳುವ ಶಕ್ತಿಗದ್ದಾಗಿ ಉಳಿಯುವಂತೆ ನೋಡಿಕೊಳ್ಳುವ ಅವಶ್ಯಕತೆ ಇಂದು ಎಂದಿಗಿಂತಲೂ ಅಧಿಕವಾಗಿದೆ. ಸರಕಾರ ಇದಕ್ಕೆ ಶಪ್ತಿದರೆ, ಜನತೆಯಲ್ಲಿ ಅಸಮಾಧಾನವು ಹೆಚ್ಚುತ್ತದು ಮತ್ತು ಇದರಿಂದ ಅತೃಪ್ತಿಯು ಹುಟ್ಟಿ, ದೇಶದ ಆಂತರಿಕ ಶಾಂತಿ—ಸುವ್ಯವಸ್ಥೆಗಳಿಗೆ ಭಂಗ ಬರುವುದು.

ಕುಂದಾಪುರದಲ್ಲಿ ಕಾಲೇಜಿನ ಉದ್ಘಾಟನೆ—

ಇದೇ ತಾ. 18ರಂದು ಕುಂದಾಪುರದಲ್ಲಿ ಭಂಡಾರಕಾರ್ಸ್ ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜಿನ ಉದ್ಘಾಟನಾ ಸಮಾರಂಭವು ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್ ಗಂಗೊಳ್ಳಿ ಇವರಿಂದ, ದಿಪ್ಪ್ರಜ್ವಲ ಮುಸ್ಸಿಫ್ ಶ್ರೀ ಎಸ್. ನಾರಾಯಣ ಪೂರ್ತಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಗುಂಡ್ಮಿ ಜಂದ್ರಶೇಖರ ಅಡಿಗರ ನಿವೇದನೆಯ ನಂತರ ಮದ್ರಾಸ ವಿಧಾನ ಸಭೆಯ ಸದಸ್ಯರಾದ ಡಾ. ವಾಧವ ಶೈಗಳು ಸ್ವಾಗತಿಸಿದರು. ಉದ್ಘಾಟನಾ ಭಾಷಣ ಮಾಡುತ್ತ ಶ್ರೀ ಎಚ್. ಎಲ್. ಕಾಮತ್‌ರವರು ಡಾ. ಮಾಧವ ಶೈಗಳ ಈ ಸಾಧನೆ ಕಾರ್ಯಕ್ಕೆ ಧನ್ಯವಾದ ಸಲ್ಲಿಸಿ, ಕಾಲೇಜಿಗೆ ಶುಭಕೋರಿದರು. ವಕೀಲ ಶ್ರೀ ಕೆ. ರಘುನಾಥ ಶೆಣೈಯವರು ಮೂತಾಡುತ್ತ, ಕಾಲೇಜಿಗೆ ಶುಭಕೋರಿ ಕಾಲೇಜಿನಿಂದ ಉತ್ತೀರ್ಣರಾಗುವ ಶ್ರೇಷ್ಠ ವಿದ್ಯಾರ್ಥಿಗೆ, ರೂ. ೨೦೦ ಬಹುಮಾನವನ್ನು ವಿಶ್ವವಿದ್ಯಾಲಯಕ್ಕೆ ಪ್ರಥಮಸಾಗುವ ವಿದ್ಯಾರ್ಥಿಗೆ ರೂ. 100 ಬಹುಮಾನವನ್ನೂ ಮತ್ತು ಉತ್ತಮ ಪ್ರಾಧ್ಯಾಪಕರಿಗೆ ರೂ. ೨೦೦ ಬಹುಮಾನವನ್ನೂ ಕೊಡುವುದಾಗಿ ಸಾರಿದರು. ಬಳಿಕ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಗೋವಿಂದರಾಜು, ಶ್ರೀ ಎಸ್. ಎಸ್. ಕೊಲೈಬೈಲು ಎಂ. ಎಲ್. ಎ. ಶ್ರೀ ಎಂ. ಎಂ. ಹೆಗ್ಡೆ ಮತ್ತು ಡಾಕ್ಟರ್ ಎಚ್. ವೆಂಕಟ್ರಮಣಯ್ಯ ಇವರು ಭಾಷಣ ಮಾಡುತ್ತಾ ಕಾಲೇಜಿಗೆ ಯಶಕೋರಿದರು. ಅಧ್ಯಕ್ಷರ ಭಾಷಣವಾದ ನಂತರ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೆ. ಜಿ. ಶೆಣೈಯವರು ಧನ್ಯವಾದ ಸಮರ್ಪಿಸಿದರು.

ಕನ್ನಡ ಚಿತ್ರಪ್ರೇಮಿಗಳ ಸಂಘ—

ಬೆಂಗಳೂರಿನ ಈ ಸಂಘವು ಳಳೆದ ಎರಡು ವರ್ಷಗಳಲ್ಲಿ ಅಡಿಯಿಟ್ಟಿದಂತೆ ಈ ವರ್ಷವೂ ಗಣನೀಯ ಕನ್ನಡ ಚಿತ್ರಕಲಾಸಕ್ತರಿಗೆ ಬಹುವಿಧ ವಿನೋದಾವಕಾಶವನ್ನು ನಗರದ ಸುರಭಿನಮಂದಿರದಲ್ಲಿ ಇದೇ ತಿಂಗಳು ತಾ. ೨೮ರಂದು ಸಂಜೆ ೬ ಗಂಟೆಗೆ ಮುಖ್ಯ ಗೃಹ ಮಂತ್ರಿಗಳಾದ ಶ್ರೀ ಆರ್. ಎ ಉಟೇರ್ ರವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಸಾಲ್ಸಸ್ಥೆಯ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್‌ರವರು ಬಹುಮಾನ ವಿತರಣೆಗಳನ್ನು ನಡೆಸಿಕೊಡಲಿರುವರು ಆಂತೆಯೇ ಮನರಂಜನಾ ಕಾರ್ಯಕ್ರಮಗಳೂ ಇರುವವು.

ಅಲ್ಲಲ್ಲಿಯ ಸುದ್ದಿಸಾರ

ಶಾಲಾ ಪಾರ್ಲಿಮೆಂಟಿನ ಉದ್ಘಾಟನಾ ಸಮಾರಂಭ— ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಪಾರ್ಲಿಮೆಂಟಿನ ಉದ್ಘಾಟನಾ ಸಮಾರಂಭವು ತಾ. 16 ರಂದು ಶಾಲಾ ಪರೀಕ್ಷಾಧಿಕಾರಿಗಳಾದ ಎ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ವಿ. ಗುರುರಾಜ ಭಟ್ಟರು ಸ್ವಾಗತಿಸಿದರು. ಶಾಲಾ ಸರಕಾರವ ಅಧ್ಯಕ್ಷರಾದ ಶ್ರೀ ಚೇತನ್ ಡಿಸೋಜರ ಸಮ್ಮುಖದಲ್ಲಿ ಸರಕಾರದ ಮಂತ್ರಿ ಮಂಡಲವು ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿತು. ಅಧಿಪೇಶನವನ್ನು ಉದ್ಘಾಟಿಸಿ ಸರಕಾರದ ಅಧ್ಯಕ್ಷರು ಭಾಷಣಮಾಡಿದರು. ಬಳಿಕ ಮಂತ್ರಿಗಳು ಪಾರ್ಲಿಮೆಂಟನ್ನುದ್ದೇಶಿಸಿ ಭಾಷಣಮಾಡಿದರು. ನಂತರ ಅಧ್ಯಕ್ಷರಿಂದ ಅಭಿನಂದಿಸಬೇಕೆಂಬ ಠರಾವು ಮುಂಡಿಸಲ್ಪಟ್ಟು ಸರ್ವಾನು ಮತದಿಂದ ಅಂಗೀಕರಿಸಲ್ಪಟ್ಟಿತು.

ಅತಿಥಿಗಳಾಗಿ ಆಗಮಿಸಿದ್ದ ಕಮಲಾಬಾಯಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಆನಂತಯ್ಯ ಪಾಂಡೆಯರು ಮಕ್ಕಳನ್ನುದ್ದೇಶಿಸಿ ಮಾತನಾಡಿದರು. ಬಳಿಕ ಅಧ್ಯಕ್ಷರು ತಮ್ಮ ಭಾಷಣವನ್ನು ಮುಂದುತ್ತಾ ಪ್ರಜಾಪ್ರಭುತ್ವವಂದೇನೆಂಬುದನ್ನು ತಿಳಿಸಿಕೊಳ್ಳುವ ದೃಷ್ಟಿಯಿಂದ ಶಾಲೆಗಳಲ್ಲಿ ಇಂತಹ ಪಾರ್ಲಿಮೆಂಟುಗಳನ್ನು ಏರ್ಪಡಿಸುವುದು ಅನಿವಾರ್ಯವೆಂದು ಹೇಳಿ ಸರಕಾರಕ್ಕೆ ಯಶಸ್ಸನ್ನು ಕೋರಿದರು. ಕೊನೆಯಲ್ಲಿ ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಶಾಲಾ ಸರಕಾರದ ಚುನಾವಣೆ- ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಮಕ್ಕಳ ಕೂಟದ ವಾರ್ಷಿಕ ಚುನಾವಣೆಯು ಇದೇ ತಾ. 6ರಂದು ನಡೆದು ಹದಿನಾಲ್ಕರ ಶಿಶ್ಯೆಯು ಶಾಲಾ ಮುಖಂಡನಾಗಿಯೂ, ವಿನೋದ ಗಜಾನನನು ಉಪ ಮುಖಂಡನಾಗಿಯೂ ಆಯ್ಕೆ ಕಿರೀಟರ ಕಾಮತರು ಕಾರ್ಯದರ್ಶಿಯಾಗಿಯೂ, ಪಿ. ಗಂಗಾಧರಪ್ಪನು ಉಪಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟರು. ಗುಪ್ತ ಮತದಾನದ ಮೂಲಕ ಚುನಾವಣೆಯನ್ನು ಏರ್ಪಡಿಸಲಾಗಿತ್ತು.

ಬಂಟರ ಯಾನೆ ನಾಡವರ ಸಂಘ ಮುಂಬಯಿ—೩೦ನೇ ವಾರ್ಷಿಕ ಮಹಾಸಭೆಯು ತಾ. 7-೭-೬೩ರಲ್ಲಿ ಸಂಘದ ಅಧೀನದ ಕಾರ್ಯದರ್ಶಿ, ಅಧ್ಯಕ್ಷರಾದ ಶ್ರೀ ಕೆ. ವಿಠಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಿಗಿತು. ಹೊಸ ಏಳರ್ದ ಆಡಳಿತ ಸಮಿತಿಗೆ 26 ಮತ್ತು ಈ ಕೆಳಗಿನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು.

ಪಿ. ಜಿ. ಶಾಲಕ್ಕನ್ ಶೆಟ್ಟಿ-ಅಧ್ಯಕ್ಷರು, ಕೆ. ಸುಂದರ ಶೆಟ್ಟಿ-ಉಪಾಧ್ಯಕ್ಷರು, ಯು. ಗೋಪಾಲ ಶೆಟ್ಟಿ, ಬಿ. ಎ. ಬಿ. ಎಲ್., ಯು. ಜಿ—ಗೌ. ಪ್ರ. ಕಾರ್ಯದರ್ಶಿಗಳು, ಕೆ. ಕರುಣಾಕರ ಶೆಟ್ಟಿ, ಬಿ. ಎಸ್. ಸಿ., ಜಂಟಿ ಕಾರ್ಯದರ್ಶಿಗಳು, ಕೆ. ಕೃಷ್ಣ ಶೆಟ್ಟಿ, ಗೌ. ಕೋಶಾಧಿಕಾರಿ, ಯು. ಸುಂದರ ಶೆಟ್ಟಿ, ಬಿ. ಎ. ಬಿ. ಟಿ. ಎಲ್. ಜಿ. ಎ. ಜಿ. ಟಿ. ಎಂ. ಕೋಶಾಧಿಕಾರಿ, ಶಾ ಮಣಿಯ ಶೆಟ್ಟಿ, ಶಾಲಾ ಟ್ರಸ್ಟಿಗಳು, ಸಂಜೀವ ಕೆ ಶೆಟ್ಟಿ, ಬಿ. ಎ. ಬಿಕಾಂ., ಗೌ. ಶಾಲಾ ಕಾರ್ಯದರ್ಶಿ, ಸುಂದರ ಬಿ ಶೆಟ್ಟಿ ಗೌ. ಶಾಲಾ ಕೋಶಾಧಿಕಾರಿ

ಮುದ್ದಣ್ಣ ಮುಕ್ಕುಡ ಕೆ ಶೆಟ್ಟಿ, ಮಾಣಿ ಜಿ ಶೆಟ್ಟಿ, ಕೆ ಶೆಟ್ಟಿ, ನಿಟ್ಟೆ ರಾಮಣ್ಣ ಶೆಟ್ಟಿ, ಕೆ. ರಘುರಾಜ ಶೆಟ್ಟಿ, ಮಾಜಿ ಕೃಷ್ಣ ಶೆಟ್ಟಿ, ಮಲ್ಲಿಕ್ ಬಿಲ್ಡಿಂಗ್ ಶೆಟ್ಟಿ, ಬಾಳಾಜಿ ಬಿ. ಶೆಟ್ಟಿ, ಎಕ್ಕೂರು ಶೆಟ್ಟಿ ಮತ್ತು ಸಂಘದ ಆಡಳಿತದಲ್ಲಿನ ಬಂಧದ ಹಿರಿಯ ಶೆಟ್ಟಿ ಸ್ನೇಹಿತ ಬಂಧುಗಳ ಆತ್ಮೀಯತೆಗೂ ಭಾಗವತರು ಧನ್ಯವಾದವನ್ನರ್ಪಿಸಿದರೆಂದು ತಿಳಿಸಲಾಯಿತು.

ಸಭಿಕರ, ಅಧ್ಯಕ್ಷರ ಭಾಷಣ ಮತ್ತು ಕಾರ್ಯದರ್ಶಿಯ ಉಪಕಾರ ಸ್ಮರಣೆಯೊಂದಿಗೆ ಅಂದಿನ ಸಭೆಯು ಮುಕ್ತಾಯವಾಯಿತು.

ದ ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ, ಉಡುಪಿ— ಸಂಘದ ಆಡಳಿತ ಮಂಡಳಿಯು ಸಭೆಯು ತಾ. 18-7-63ರಲ್ಲಿ ಉದ್ಘಿ ಮುಕುಂದ ನಿವಾಸದಲ್ಲಿ ಉಪಾಧ್ಯಕ್ಷ ಶ್ರೀ ಎಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಿಗಿತು. ಮುಂದಿನ ಆಡಳಿತ ಮಂಡಳಿಗೆ ಶ್ರೀಗಳಾದ ಪಳಕಳ ರಾಜೀವ ಕೊಟ್ಟಿನ್, ಕಾರಾವರ ಸಂಜೀವ ಶೆಟ್ಟರನ್ನೂ, ಕೆನ್ಯಾಣ್ಣ ರೈ, ಸುಬೆರ್ ಪಯಲಿನ್ ಎ. ಸಿ ಯವರನ್ನೂ ಹೊಸತಾಗಿ ಆರಿಸಲಾಯ್ತು.

ಇಂದಿನ ಆಡಳ್ತೆ ಮಂಡಲಿಯು ಸಭೆಯಲ್ಲಿ ಶ್ರೀ ಟಿ. ಎ. ಪೈಯವರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ರೆ. ಫಾದರ್ ಬಿ. ಯಸ್. ಡಿಸೋಜರನ್ನು ಉಪಾಧ್ಯಕ್ಷರನ್ನಾಗಿಯೂ, ಕಾರುಕಾಲು ಗಣಪಯ್ಯ ಶೆಟ್ಟರನ್ನು ಕಾರ್ಯದರ್ಶಿಯರನ್ನಾಗಿಯೂ, ಪಳಕಳ ರಾಜೀವ ಕೋಟ್ಟಿನ್ನರನ್ನು ಸಹಾಯಕ ಕಾರ್ಯದರ್ಶಿಯರನ್ನಾಗಿಯೂ ಸರ್ವಸಮ್ಮತಿಯಿಂದ ಆರಿಸಲಾಯ್ತು. ಸಂಘದ ವಾರ್ಷಿಕ ನಂತಿಗೆಯ ಪರಿಸಲಿಯ ಬಗ್ಗೆ ಸಂಬಂಧಪಟ್ಟ ಎಲ್ಲಾ ಮೆನೇಜರರಿಗೆ ಪತ್ರಗಳನ್ನು ಕಳುಹಿಸಬೇಕಾಗಿ ನಿರ್ಣಯಿಸಿದ್ದಲ್ಲದೆ ಈ ಕೆಳಗಿನ ಪ್ರಾಮುಖ್ಯ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯ್ತು.

ದ. ಕ. ಜಿಲ್ಲಾ ಬಾಸಗಿ ಶಾಲೆಗಳ ಮೈಂಟಿನೆನ್ಸ್ ಗ್ರಾಂಟಿನಲ್ಲಿ ಮಾಡಿದ ಕಡಿತವನ್ನು ಹೋಗಲಾಡಿಸಿ ಮಿಷ್ಕಾಸು ಕೃಮವಂತೆ ಸಂಪೂರ್ಣ ಮೆಂಟಿನೆನ್ಸ್ ಗ್ರಾಂಟು ಕೊಡಿಸಬೇಕಾಗಿ ವಿದ್ಯಾಮಂತ್ರಿಗಳಿಗೆ, ಶಿಕ್ಷಣಾಧಿಕಾರಿಗಳಿಗೆ ಬಳಿಗೆ ಹಲವು ಸಲ ನಿಯೋಗ ಹೋಗಿ ಮನವಿ ಮಾಡಿಕೊಳ್ಳಲು, ಮಾನ್ಯ ಮಂತ್ರಿಗಳು ಸಹಾನುಭೂತಿಯಿಂದ ಒಪ್ಪಿ, ಆ ಬಗ್ಗೆ ಹಲವು ಸಲ ಅಶ್ವಾಸನೆ ಕೊಟ್ಟಿದ್ದಾದರೂ, ಈ ವರೆಗೆ ಯಾವ ಪರಿಣಾಮವೂ, ಕಂಡು ಬಾರದ ಕಾರಣ ಈ ಕುರಿತು ಅಗತ್ಯವಿರುವ ಪ್ರಯತ್ನ ಮಾಡುವಲ್ಲಿ ಸ್ಥಳೀಯ M. L. A. ಮತ್ತು M. L. C. ಗಳನ್ನು ಪುನಃ ಕೇಳಿಕೊಳ್ಳುವುದಕ್ಕಾಗಿ ನಿರ್ಣಯಿಸಿ ಸಭೆಯು ಮುಕ್ತಾಯವಾಯ್ತು.

ಉಡುಪಿ ರೋಟರಿ ಕ್ಲಬ್ಬಿನಲ್ಲಿ ಕು. ಶಿ.—ಕಳೆದ ತಾ. 16ರಂದು ಉಡುಪಿ ರೋಟರಿ ಕ್ಲಬ್ಬಿನಲ್ಲಿ ಎಂ. ಜಿ. ಎಂ. ಕಾಲೇಜಿನ ಅರ್ಥ ಶಾಸ್ತ್ರ ಪ್ರಾಧ್ಯಾಪಕರೂ, ಪೈಸ್ ಫೆಲ್ಲಿಷಾಲರೂ ಆದ ಪ್ರೊ| ಕು. ಶಿ. ಹರಿದಾಸ್ ಭಟ್ಟರು ಇಟೆಲಿಯಲ್ಲಿ ತನ್ನ ಆರು ತಿಂಗಳ ವಾಸ್ತವ್ಯದ ಅನುಭವಗಳನ್ನು ವಿವರಿಸಿದರು. ತಾವು ಕೇವಲ 6 ತಿಂಗಳು ಮಾತ್ರ ಅಲ್ಲಿದ್ದ ಕಾರಣ ಅಲ್ಲಿನ ಸಂಪೂರ್ಣ ಪರಿಚಯ ತನಗಿಲ್ಲ. ಆದರೆ, ಭಾರತದಲ್ಲಿ ಕಾಣಬರುವಂತಹ ಆರ್ಥಿಕ ಭಿನ್ನತೆ ಮತ್ತು ಸಾಂಸ್ಕೃತಿಕ ಬದಲಾವಣೆಗಳ ಹೊರತು ಇಟೆಲಿಯಲ್ಲಿ ಕಂಡು ಬರುತ್ತಿದೆ. ಅಲ್ಲಿ ಆಮೇರಿಕಾಕ್ಕಿಂತಲೂ ಹೆಚ್ಚಿಗೆ ಸ್ವತಂತ್ರ ಉದ್ಯೋಗಗಳಿವೆ. ಇಟೆಲಿ ಇತರ ಕಮ್ಯೂನಿಸ್ಟ್ ರಾಜ್ಯಗಳೊಡನೆ ಅತ್ಯಮ ರೀತಿಯ ಸಂಪರ್ಕವಿರಿಸಿಕೊಂಡಿದೆ ಎಂದು ಮುಂತಾಗಿ ಹೇಳಿದರು

ಆರಂಭದಲ್ಲಿ ಮಾಜಿ ಅಧ್ಯಕ್ಷ ಶ್ರೀ ಟಿ. ಎಂ ಎ. ಪೈಗಳು ಸ್ವಾಗತಿಸಿ ಪ್ರೊ| ಭಟ್ಟರ ಪರಿಚಯ ಮಾಡಿಕೊಟ್ಟರು. ಉಪಾಧ್ಯಕ್ಷ ಕೆ. ಕೆ. ಪೈಗಳು ಂದಿನ ಅಧ್ಯಕ್ಷತೆ ವಹಿಸಿದ್ದು, ಅಂತ್ಯದಲ್ಲಿ ಧನ್ಯವಾದ ಸಮರ್ಪಿಸಿದರು.

ಸಂಬಂಧ ಪಟ್ಟವರು ಗಮನಿಸುವರೆ?—ಉಡುಪಿಯ ಕೇಂದ್ರದಲ್ಲಿರುವ ಮೈನಾ ಶಾಲೆಯ ಎದುರುಗಡೆಯ ಮೈದಾನದಲ್ಲಿ ಮಕ್ಕಳ ತಿರುವಿಹಾರ (Children's Corner)ನಲ್ಲಿ ಇಳಿಜಾರು ಬಂಡೆಯೊಂದಿದೆ. ಆದರೆ ನೈರ್ವಸ್ಯವು ಮಾತ್ರ ಬಹಳ ಅಪಾಯಕಾರಿಯೂಗಿದೆ. ಆದರ ಕೆಳಗಡೆ ಒಂದು ತಂಡು ಹಲಸಿ ಕಾಣಿಯಾಗಿದೆ. ಮಕ್ಕಳು ಮೇಲಿಂದ ಜಾರುತ್ತಾ ಕೆಳಗಡೆ ಬರುವಾಗ ಕಾಲು ಅತೊತಾಸೊಳಗೆ ಸಿಕ್ಕಿ ಮಕ್ಕಳು ತಲೆಕೆಳಗಾಗಿ ಗಾಯಿ ಬೀಳುವ ಸಂಭವವಿದೆಯಲ್ಲದೆ ಕಾಲು ತುಂಡಾಗುವ ಸಂಭವವೂ ಬರಬಹುದು. ತುಂಬಾ ಹುಡುಗರ ಹುಡುಗಿಯರು ಆಡುವ ಈ ಕೇಂದ್ರ ಸ್ಥಳವಲ್ಲಿರುವ ಈ ಅವ್ಯವಸ್ಥೆ ಸಂಬಂಧಪಟ್ಟವರಿಗೆ ಕಂಡು ಬಂದಿಲ್ಲವೆಂದರೆ ನಿಜವಾಗಿ ಆಶ್ಚರ್ಯದ ಸಂಗತಿ ಇನ್ನಾದರೂ ಸಂಬಂಧಪಟ್ಟ ಉಡುಪಿ ಮುನಿಸಿಪಾಲಿಟಿಯವರು ಈ ವಿಷಯದ ಕಡೆಗೆ ಗಮನಕೊಟ್ಟು ಇದನ್ನು ಸರಿಪಡಿಸುವರೆಂದು ಸಾರ್ವಜನಿಕರ ಪರವಾಗಿ ಹಾರೈಸುತ್ತೇನೆ ಎಂದು ಶ್ರೀ ಬಿ. ಪಿ. ಆಡಿಗರು ಬರೆಯುತ್ತಾರೆ.

ಭಜನೆ ಸಪ್ತಾಹ ಮಹೋತ್ಸವ- ಉಡುಪಿ ಶ್ರೀ ವೆಂಕಟೇಶ ದೇವಸ್ಥಾನದಲ್ಲಿ ತಾ. 26-7-63ರಿಂದ ತಾ. 2-8-63ರ ತನಕ ವಾಡಿಕೆಯಂತೆ ಭಜನೆ ಸಪ್ತಾಹಮಹೋತ್ಸವ ಪೂಜೆ ಜರಗುವುದೆಂದೂ, ಸರ್ವರೂ ಬಂದು ಸಹಕರಿಸಬೇಕೆಂದೂ ಆಡಳಿತ ಮೊಕ್ತೇಸರ್ ಡಾ ಪಿ. ರಾಘವೇಂದ್ರ ನಾಯಕರು ಅಪೇಕ್ಷಿಸುತ್ತಾರೆ.

ಸ್ವಾಮಿ ಶಿವಾನಂದರಿಗೆ ಶ್ರದ್ಧಾಂಜಲಿ— ತಾ. 14-7-1963ರಂದು ಪರಮಾತ್ಮನ ಸನ್ನಿಧಿಯನ್ನು ಸೇರಿದ ಸ್ವಾಮಿ ಶಿವಾನಂದರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ಕುರಿತಾದ್ಯ ಲೋಕ ಸೇವಾ ಹೈಸ್ಕೂಲು ಮತ್ತು ಹಾಯರ್ ಎಲಿಮೆಂಟರಿ ಶಾಲೆಯ ಜಂಟಿ ಸಭೆಯೊಂದನ್ನು ತಾ. 18-7-63ರಂದು ಶ್ರೀ ನುಡಿಯೂಲ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಶ್ರೀಗಳಾದ ಕೆ. ಯಸ್. ಕೃಷ್ಣ ಭಟ್, ಯು. ಗಂಗಾಧರ ಭಟ್, ಬಿ. ನಾರಾಯಣ ರಾವ್, ಹಳೆಹಿತ್ಲು ಶಂಕರನಾರಾಯಣ ಭಟ್, ಕುಮೂರ ಕಮ್ಮಜೆ ಸುಬ್ರಾಯ ಭಟ್ಟ ಮತ್ತು ಶ್ರೀಮತಿ ಪಡಿಯೂಲ ಗೌರಮ್ಮನವರು ಸ್ವಾಮಿ ಶಿವಾನಂದರ ಗುಣಗಾನ ಮಾಡಿದರು. ಅಧ್ಯಕ್ಷರು, ಸ್ವಾಮಿಜಿಯವರ ಅಧ್ಯಾತ್ಮಿಕ ಜೀವನವನ್ನೂ ಅವರ ಆತ್ಮಜ್ಞಾನ ತತ್ವಗಳನ್ನು ವರ್ಣಿಸಿದ ಬಳಿಕ ಶಾಲಾ ವಿದ್ಯಾರ್ಥಿ ಮುಖಂಡ ಕುಮೂರ ಪದ್ಮರಾಜ ಭಟ್ಟರಿಂದ ಧನ್ಯವಾದ ಸಮರ್ಪಣೆಯೊಯಿತು.

ರೋಟರಿ ಕ್ಲಬ್ಬಿನಲ್ಲಿ ಶ್ರೀ. ವಿ. ಎಸ್. ಕುಡ್ವರು— ಮಂಗಳೂರಿನ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಇತ್ತೀಚೆಗೆ ಜಪಾನು ಪ್ರವಾಸ ಮಾಡಿಬಂದ ಶ್ರೀ ವಿ. ಎಸ್. ಕುಡ್ವರು 'ಜಪಾನಿನ ಪುನರ್ಜನ್ಮ' ಎಂಬ ಕುರಿತು ಮಾತನಾಡುತ್ತಾ ಜಪಾನು ಯುದ್ಧಾನಂತರ ಸಾಧಿಸಿದ ಪ್ರಗತಿಯನ್ನು ವಿವರಿಸಿ ಅವರನ್ನು ಮನಃಪೂರ್ವಕವಾಗಿ ಶ್ಲಾಘಿಸಿದರು ವಿದೇಶಿ ಸಹಾಯಧನಕ್ಕಿತ್ತ ಬಗ್ಗೆ ಜಪಾನು ತೋರಿಸಿದ್ದೇ ಪ್ರಗತಿಯನ್ನು ನಾವೂ ತೋರಿಸಿದ್ದರೆ, ಭಾರತದ ಔದ್ಯೋಗಿಕ ಮಟ್ಟ ಮೇಲೇರಿ ಬರುವಿತ್ತು ಎಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದರು. ಶೈಕ್ಷಣಿಕ ರಂಗದಲ್ಲಿ ಹಾಗೂ ವ್ಯವಸಾಯ ರಂಗದಲ್ಲಿ ಅದು ಸಾಧಿಸಿದ ಪ್ರಗತಿಯನ್ನು ವಿವರಿಸಿ ಅದು ಇಡೀ ಜಗತ್ತಿಗೇ ಅದರ್ಶಪ್ರಾಯವಾಗಿದೆಯೆಂದು ತಿಳಿಸಿದರು.

ಮಂಗಳೂರಿನ ಕೇತಿಮಹಾಲಿನಲ್ಲಿ ತಾ 20 ರಂದು ಏರ್ಪಡಿಸಲಾದ ಸತ್ಕಾರ ಕೂಟದಲ್ಲಿಯೂ ಶ್ರೀ ಕುಡ್ವರು ಜಪಾನು ಪ್ರವಾಸಾನುಭವಗಳನ್ನು ವಿವರಿಸಿ ಭಾಷಣಗೈದರು.

ಶ್ರೀ ಮಧ್ವರಾಜರು ವಿದೇಶಕ್ಕೆ- ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರೂ ಮೈಸೂರು ಶಾಸನ ಸಭಾ ಸದಸ್ಯರೂ ತರು ಜೋತ್ಸಾಹಿ ಕಾರ್ಯಕರ್ತರೂ ಆದ ಶ್ರೀ ಎಂ. ಮಧ್ವರಾಜ ಎಂ. ಎಲ್. ಎ. ಅವರು ಇದೇ ತಿಂಗಳಾಂತ್ಯದಲ್ಲಿ ಅಮೇರಿಕಾಕ್ಕೆ ತೆರಳಲಿರುವರು.

ಶಂಕುಸ್ಥಾಪನೆ ಮತ್ತು ಉದ್ಘಾಟನೆ—ಕೆರ್ವಾಶೆ ಹೈಸ್ಕೂಲಿನ ನೂತನ ಕಟ್ಟಡದ ಉದ್ಘಾಟನೆ ಮತ್ತು ವಿಸ್ತರಣಾ ಕಟ್ಟಡದ ತಂಕುಸ್ಥಾಪನೆಯು ತಾ. 21ರಂದು ಡಾ. ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ಪ್ರಾರ್ಥನೆ, ಪ್ರಸಾದ ಸ್ವೀಕಾರವಾಗಿ ಮೆರವಣಿಗೆಯಲ್ಲಿ ಆತಿಥಿಗಳು ಶಾಲಾ ಸ್ಥಳಕ್ಕೆ ಆಗಮಿಸಿದರು. ರಾಸ್ತ್ರೋತ್ಥಿತ್ವಾಗಿ ತಂಕುಸ್ಥಾಪನೆಯು ಶಿವಳೊಗ್ಗದ ಶ್ರೀ ಪಿ. ಕೆ. ಜನಾರ್ಧನ ನೆರ್ವೆಯವರಿಂದ ನೆರವೇರಿಸಲ್ಪಟ್ಟಿತು. ಹೆಬ್ರಿ ಭುಜಂಗ ಬಲ್ಲಾಳರು ನೂತನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು.

ಡಾ. ಎಂ. ಆರ್. ಹೆಗ್ಡೆಯವರು ಸ್ವಾಗತ ಮತ್ತು ಪರಿಚಯ ಭಾಷಣಗೈದರು. ವೇದಮೂರ್ತಿ ರಾಮಕೃಷ್ಣ ತಂತ್ರಿಗಳು ಆಶೀರ್ವಚನ ಅನುಗ್ರಹಿಸಿದರು. ಶ್ರೀ ನಿಲ್ಲಿಯವರು ಮತ್ತು ಭಾ

ವಾರ್ತಾನೇದಿಕೆ

ಜನಾಭಿಪ್ರಾಯ

ದೇಶದ ಹೊರ ಸಂಬಂಧದ ಬಗ್ಗೆ ವಿಶೇಷ ಗಮನವು ಹರಿಸಬೇಕಾದ ಅವಶ್ಯಕತೆಯಿಂದು ಪ್ರಧಾನ ಮಂತ್ರಿ ನೆಹರುಗಳಿಗಿದೆ. ಆದರೆ, ಅವರು ತಮ್ಮ ಗಮನವನ್ನು ದೇಶದ ಆಂತರಿಕ ವ್ಯವಹಾರಗಳಲ್ಲಿಯೇ ಅಧಿಕಾಧಿಕವಾಗಿ ತೊಡಗಿಸುವಂತಹ ಹಲವಾರು ಭವಿಷ್ಯಾಚಾರದ ಪ್ರಶ್ನೆಗಳೆಂದು ನಮ್ಮಲ್ಲಿ ನಡೆದಿವೆ ಪ್ರತಿ ರಾಜ್ಯದಲ್ಲೂ ಮಂತ್ರಿಗಳ ಮೇಲೆ ಒಂದಲ್ಲ ಒಂದು ರೀತಿಯ ಆರೋಪವಿಂದು ಎಲ್ಲೆಲ್ಲೂ ಪ್ರತಿಧ್ವನಿಸುತ್ತಿದೆ. ಇದಕ್ಕೆಲ್ಲ ಕಿವಿಗೊಡಬೇಕಾದವರು ಯಾರು? ಪ್ರತಿ ಮುಖ್ಯ ಮಂತ್ರಿಯೂ ನೆಹರುರವರಿಗೆ ಹತ್ತಿರದವರೇ ಆವರ ಮೇಲೆ ತನಗಿರುವ ಅಭಿಪ್ರಾಯವನ್ನು ನೆಹರು ಪಕ್ಷನೆ ಬದಲಿಸುವಂತಿಲ್ಲ. ತನ್ನ ನಾಲ್ಕೂನಿಟ್ಟಿನಿಂದ ಕವಿದಿರುವ ಲಂಚಗುಳಿತನದ ಆರೋಪ ಹೊತ್ತ ಮುಖ್ಯ ಮಂತ್ರಿಗಳ ಬಗ್ಗೆ ಅವರು ಯಾವ ಧೋರಣೆ ತಳೆಯುವರು ಎಂದು ಭಾರತೀಯರು ಎದುರು ನೋಡುತಿದ್ದಾರೆ.

ರಾಧಾಕೃಷ್ಣನ್

ಭಾರತದ ಉಪರಾಷ್ಟ್ರಾಧಿಕಾರಿಯೂದ ಡಾ| ರಾಧಾಕೃಷ್ಣನ್ನರೆನ್ನು ಕಾಮನ್‌ವೆಲ್ತಿನ ರಾಣಿ ಬ್ರಿಟಿನ್ನದ ಸಾಮ್ರಾಜ್ಞಿಯು ಎಂ. ಓ. ಬಿರುದಿತ್ತು ಗೌರವಿಸಿಳು. ಇದು ಭಾರತೀಯ ಸಂವಿಧಾನಕ್ಕೆ ವಿರೋಧವೇ ಎಂಬ ಜಿಜ್ಞಾಸೆ ಹೊರಡುತ್ತಿದೆ. ಹೊರ ದೇಶಗಳಿಂದ ರಾಷ್ಟ್ರಪತಿಯವರು ಇಂತಹ ಬಿರುದುಗಳನ್ನು ಸ್ವೀಕರಿಸಲು ಸಂವಿಧಾನ ಅಡ್ಡಿ ಬರುವುದಾದರೂ ಕಾಮಲ್ವೆಲ್ತ್ ರಾಷ್ಟ್ರಗಳೆಲ್ಲಪ್ಪೂ ಸ್ವರಾಷ್ಟ್ರದವೆಂದೇ ಗಣಿಸಲ್ಪಡಬೇಕು ಎಂಬ ಒಂದು ಅಭಿಜ್ಞೆಯು ಇವರ ಅವಲಂಬಕ್ಕಿದೆ. ತಮ್ಮ ಇತ್ತೀಚೆಗಿನ ಸಂಚಾರದಿಂದ, ಸಾರ್ವಭೌತ್ವ ರಾಷ್ಟ್ರಗಳೆಲ್ಲ ಭಾರತದ ಗೌರವ ಪ್ರತಿಷ್ಠೆಗಳನ್ನು ಬೆಳೆಸಿ ಬಂದ ರಾಧಾಕೃಷ್ಣನ್ ಪದವಿಗೆ ಪದವಿಗೆ ನಿಜಕ್ಕೂ ಅರ್ಹರು.

ಚೆಂಗಲರಾಯ ರೆಡ್ಡಿ

ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅನಿರೀಕ್ಷಿತವಾಗಿಯೇ ರಾಜಿನಾಮೆ ಯಿತ್ತರು. ಮಂತ್ರಿ ಮಂಡಲಿಯು ಪುನರ್ಘಟನೆಯೊಗುವುದೆಂದೂ ಆಗ ರೆಡ್ಡಿಯವರು ಪಶ್ಚಿಮ ಬಂಗಾಲದ ರಾಜ್ಯಪಾಲರಾಗಿ ಹೋಗುವರೆಂದೂ ವದಂತಿಯಿತ್ತು ಆದರೆ, ಪಟಿವ ಪಂಪುಟದಲ್ಲಿ ಯಾವ ಪರಿವರ್ತನೆಯೂ ಸದ್ಯಕ್ಕೆ ನಡೆಯಂತಿಲ್ಲ, ರೆಡ್ಡಿಯವರು ಮಾತ್ರ ರಾಜಿನಾಮೆಯಿತ್ತರು. ಇದಕ್ಕವರು ಅನಾರೋಗ್ಯದ ಕಾರಣವನ್ನು ಮುಂದೆ ತಂದಿದ್ದಾರಾದರೂ ಅವರು ಸದ್ಯದಲ್ಲೇ ಗವರ್ನರಾಂಗುವರೆಂಬ ಊಹಾಪೋಹೆಯನ್ನು ಸಂಪೂರ್ಣ ಅಲ್ಲಗಳೆಯುಲು ಸಾಧ್ಯವಿಲ್ಲ.

ಜಂಗ ಬಲ್ಲಾಳರು ತಾವು ಸಮಾರಂಭದಲ್ಲಿ ಭಾಗಿಯಾದುದಕ್ಕೆ ಸಂತೋಷ ವ್ಯಕ್ತಪಡಿಸಿ ಸಂಸ್ಥೆಗೆ ಅಭ್ಯುದಯವನ್ನು ಕೋರಿದರು. ಡಾ. ಪೈಯವರು ಸಂಸ್ಥೆಯ ಮುಂದಿನ ಬೆಳವಣಿಗೆಯ ಯೋಜನೆಯನ್ನು ವಿವರಿಸಿದರು. ಶಾಲಾ ಆಡಳಿತವಾರ ಶ್ರೀ ಕೆ. ಕೆ. ಪೈಯವರು ಧನ್ಯವಾದ ಸಮರ್ಪಿಸಿದರು.

ತಾರಾಪುರದಲ್ಲಿ

ಪ್ರಥಮ ಅಣುವಿಕ ವಿದ್ಯುದಾಗಾರ

ಬೊಂಬಾಯಿ ನಗರದಿಂದ ೬೨ ಮೈಲು ದೂರದಲ್ಲಿರುವ ಪಟ್ಟಣ ತಾರಾಪುರ. ಇಲ್ಲೊಂದು ಅಣುಶಕ್ತಿಯಿಂದ ವಿದ್ಯುತ್ ತಯಾರಿಸುವ ಕಾರಖಾನೆಯನ್ನು ನಿರ್ಮಿಸಲು ಭಾರತ ಸರಕಾರವು ಉದ್ದೇಶಿಸಿತ್ತು. ಭಾರತದಲ್ಲಿ ಅಣುಶಕ್ತಿ ವಿದ್ಯುದಾಗಾರವು ಮೊತ್ತಮೊದಲ ಬಾರಿಗೆ ಈಗ ನಿರ್ಮಿತವಾಗಲಿದೆ. ಇದಕ್ಕೆ ತಗಲುವ ಹೆಚ್ಚುವು ಬಹು ದೊಡ್ಡದಾಗಿರುವುದು ಮಾತ್ರವಲ್ಲದೆ ಇದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವಿದೇಶೀ ವಿನಿಮಯವೂ ಬೇಕಾಗುವುದು. ಅಮೇರಿಕೆಯು ಇದಕ್ಕಾಗಿ ೯॥ ಕೋಟಿ ಡಾಲರ್ (ಅಂದರೆ ೪೫ ಕೋಟಿ ರೂಪಾಯಿಗಳ) ಗಳಷ್ಟು ನೆರವನ್ನು ನೀಡಲು ಮುಂದೆ ಬಂದಿದೆ. ಭಾರತದಲ್ಲಿ ಅಮೆರಿಕೆಯ ರಾಯಭಾರಿ ಜಾನ್ ಕೆನ್ನೆಥ್‌ಗಾಲ್ ಬ್ರೈಥರು ತಮ್ಮ ಹುದ್ದೆಯಿಂದ ನಿವೃತ್ತರಾಗಿ ಸ್ವದೇಶಾಭಿಮುಖಿ ಪ್ರಯಾಣವನ್ನು ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಘೋಷಿಸಲ್ಪಟ್ಟ ಈ ಸಹಾಯದಿಂದ ರೂಪುಗೊಳ್ಳುವ ತಾರಾಪುರ ಅಣು ವಿದ್ಯುದಾಗಾರವು ಭಾರತೀಯರಿಗೆ ಅವರ ನೆನಪು ಚಿರಕಾಲ ಉಳಿಯುವಂತೆ ಮಾಡಲಿದೆ.

ಅಮೇರಿಕೆಯು ನೀಡುವ ಸಹಾಯವು ಡಾಲರ್‌ಗಳ ರೂಪದಲ್ಲಿರುವುದರಿಂದ ವಿದೇಶೀ ವಿನಿಮಯದ ಸಮಸ್ಯೆಯು ಸಂಪೂರ್ಣ ಬಗೆಹರಿದಂತಾಯಿತು. ಈ ಮೊತ್ತವು ಎರಡು ಉದ್ದೇಶಗಳಿಗಾಗಿ ನೀಡಲ್ಪಡುವುದು. ಒಟ್ಟು ೯॥ ಕೋಟಿ ಡಾಲರ್‌ಗಳಲ್ಲಿ ಅಣುವಿಕ ವಿದ್ಯುದಾಗಾರ ನಿರ್ಮಾಣಕ್ಕೆ ೮ ಕೋಟಿ ಡಾಲರ್ ಮತ್ತು ೧॥ ಕೋಟಿ ಡಾಲರ್‌ಗಳು ಪ್ರಾರಂಭ ಕಾಲದಲ್ಲಿ ಯುರೇನಿಯಮ್‌ನ್ನು ಕೊಂಡುಕೊಳ್ಳಲು ವ್ಯವಹಾರಗುವುವು. ಈ ಯುರೇನಿಯಮಿನಿಂದ ತಾರಾಪುರ ವಿದ್ಯುದಾಗಾರದ ಇಂಧನದ ಆವಶ್ಯಕತೆಗಳು ೨೦ ವರ್ಷಗಳ ಕಾಲ ಪೂರೈಕೆಯಾಗುವುವು. ಪ್ರಸ್ತಾವಿತ ಇಂಧನದ ಸಂಬಂಧಿ ವ್ಯಯವನ್ನು ಳಿದು ವಿದ್ಯುದಾಗಾರದ ನಿರ್ಮಾಣಕ್ಕಾಗಿ ಅಮೆರಿಕನ್ ಸಹಾಯವು ಒಟ್ಟು ವೆಚ್ಚದ ಮೂರರಲ್ಲಿ ಎರಡು ಭಾಗದಷ್ಟಾಗುವುದು. (ಅಂದರೆ, ರೂ. ೫೪ ಕೋಟಿ)

ತಾರಾಪುರದ ನಿದ್ಯುದಾಗಾರವು ೫೪೦,೦೦೦ ಕಿಲೋವಾಟ್ ವಿದ್ಯುತ್ ಉದ್ಪಾದಿಸುವ ಸಾಮರ್ಥ್ಯವನ್ನು ಪಡೆಯುವುದು. ೧೯೬೭ರ ಸುಮಾರಿಗೆ ಸಂಪೂರ್ಣವಾಗುವ ಈ ಆಗಾರವು ಈ ನ ಮೂನೆಯ ಕಾರ್ಯಾನೆಗಳಲ್ಲಿ ಪ್ರಪಂಚದಲ್ಲಿ ಎರಡನೆಯದಾಗುವುದು. ವಿಶ್ವದಲ್ಲಿ ಇದುವೇ ಬ್ರಹತ್ತೆನಿಸುವುದು. ಇಲ್ಲಿ ಉತ್ಪಾದಿತವಾಗುವ ವಿದ್ಯುಚ್ಛಕ್ತಿ ಮಹಾರಾಷ್ಟ್ರ ಮತ್ತು ಗುಜರಾಥ ರಾಜ್ಯಗಳಿಗೆ ಪೂರೈಕೆಯಾಗುವುದರಿಂದ, ಆ ರಾಜ್ಯಗಳಲ್ಲಿ ಶಕ್ತಿಯ ಅಭಾವವು ಇಲ್ಲವಾಗುವುದು. ಹೆಚ್ಚಿನ ಪ್ರಮಾಣದ ಶಕ್ತಿಯು ಬೊಂಬಾಯಿ ಮತ್ತು ಅಮೆಮ್ಮಡಾಬಾದಗಳಲ್ಲಿನ ಗಿರಣಿಗಳ ಬೇಡಿಕೆಯನ್ನು ಸಲ್ಲಿಸಲು ಉಪಯೋಗವಾಗುವುದು.

ಕೆಲವು ದಿನಗಳಿಗೆ ಮೊದಲು, ರಾಯಭಾರಿ ಗಾಲ್‌ಬ್ರೈಥರು ತಾರಾಪುರ ವಿದ್ಯುದಾಗಾರಕ್ಕೆ ಅಮೆರಿಕೆಯು ನೀಡುವ ಸಹಾಯವನ್ನು ನವದೆಹಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಸಮಕ್ಷಮದಲ್ಲಿ ಘೋಷಿಸಿದರು. ಅಣುಶಕ್ತಿಯನ್ನು ಶಾಂತಿಕಾರ್ಯಗಳಿಗೆ ಬಳಸಿಕೊಳ್ಳಬೇಕೆಂಬ ಆದರ್ಶತತ್ವದ ಮೇಲೆ ಅಮೆರಿಕೆಗೆ ವಿಶ್ವಾಸವಿದ್ದು ಆನಂತರ ಅದು ಭಾರತದೊಡನೆ ಒಪ್ಪಂದ ಮಾಡಿಕೊಂಡಿತೆಂದು ಅವರು ಹೇಳಿದ ಈ ಮಹತ್ವಪೂರ್ಣ ಪದಾರ್ಪಣೆಯು ಇತರ ದೇಶಗಳಿಗೂ ಮಾದರಿಯೆನಿಸುವುದೆಂಬ ವಿಶ್ವಾಸವನ್ನು ಪ್ರಕಟಿಸಿದರು. ಭಾರತದ ವಿವಿಧ ಯೋಜನೆಗಳಿಗೆ ಅಮೆರಿಕೆಯು ಹಿಂದಿನಿಂದಲೂ ಸಹಾಯ ನೀಡುತ್ತ ಬಂದಿದೆ. ಇದರ, ಒಂದು ನಿರ್ದಿಷ್ಟ ಯೋಜನೆಗೆ ಇಷ್ಟು ದೊಡ್ಡ ಮೊತ್ತವು ಗಾಲ್‌ಬ್ರೈಥರ ರಾಯಭಾರಿತನದ ಅವಧಿಯಲ್ಲಿ ದೊರೆತದ್ದಿಲ್ಲ.

ಅಮೇರಿಕೆಯು ಸದ್ಯ ಭಾರತಕ್ಕೆ ನೀಡಿದ ಈ ಸಹಾಯವು ಆತ ಉದಾರ ಶರತ್ತುಗಳ ಮೇಲೆ ಲಭಿಸಿದೆ. ಇದರ ಮೇಲೆ ಬಡ್ಡಿಯು ಆಕರಿಸಲ್ಪಡುವುದಿಲ್ಲ. ಸೇವಾಶುಲ್ಕವನ್ನು ಸೇ. ೫ರಂತೆ ಮಾತ್ರ ಹೊರಿಸಲಾಗುವುದು. ಈ ಸಹಾಯದ ಹೊತ್ತವನ್ನು ದೀರ್ಘ ಕಾಲದ ಸುಲಭ ಕಂತುಗಳಲ್ಲಿ ಮರಳಿಸಬಹುದು ಮರಳಿಸಲಿರುವ ಅವಧಿಯು ೪೦ ವರ್ಷಗಳದ್ದಿದ್ದು, ಪ್ರಥಮದ ಹತ್ತು ವರ್ಷಗಳಲ್ಲಿ ಏನನ್ನೂ ಕೂಡ ಬೇಕಾಗಿರುವುದಿಲ್ಲ.

ಎರಡು ವರ್ಷಗಳಿಗೆ ಮೊದಲು ಭಾರತಕ್ಕೆ ಬರುವವರೆದ್ದ ಗಾಲ್‌ಬ್ರೈಥರ ಕಿವಿಗಳಿಗೆ ತಾರಾಪುರ ಅಣುವಿಕ ವಿದ್ಯುದಾಗಾರದ ಸುದ್ದಿ ಬಿತ್ತು. ಈ ವಿಷಯಕಾರ್ಯೋಜನೆಯ ಸಂಬಂಧದ ಅಂತಿಮ ನಿರ್ಧಾರವು ಅವರ ಕಾಲವಲ್ಲಿಯೇ ಹೊರಬೀಳುವಂತಾದುದು ಅವರಿಗೂ ಒಂದು ಗೌರವ.

ಬೇರೆ ಬೇರೆ ದೇಶಗಳ ಕಂಟ್ರಾಕ್ಟುಗಳ ಶರ್ತಗಳನ್ನು ಅಧ್ಯಯನ ಮಾಡಿ, ತುಲನೆಗಳಲ್ಲಿ ಅವೆಲ್ಲಕ್ಕೆ ಯು 'ಇಂಟರ್ ನೇಶನಲ್ ಇಲೆಕ್ಟ್ರಿಕ್'ನ್ನು ಸ್ವೀಕರಿಸಿ ೧೫೬೭ ಪುಟಗಳುಳ್ಳ ಈ ಕಾರಖಾನೆಯ ನಿರ್ಮಾಣದ ಜವಾಬ್ದಾರಿಯನ್ನು ಒಪ್ಪಿಸಿ ಕೊಡಲಾಯಿತು. ಕಾರ್ಖಾನೆಯು ಸಂಪೂರ್ಣ ನಿರ್ಮಾಣವಾಗುವ ವೇಳೆಗೆ, ಭಾರತೀಯ ವಿಶೇಷಜ್ಞರೂ ಮೇಸ್ತ್ರಿಗಳೂ ಇದರ ಕಾರ್ಯವನ್ನು ಯಶಸ್ವಿಯಾಗಿ ನಡೆಸುವಲ್ಲಿ ಸಮರ್ಥರಾಗುವರು. ಭಾರತೀಯ ಅಣುಶಜ್ಞರಿಗೂ ಇದೊಂದು ಗೌರವಪ್ರದ ಸಂಗತಿ.

೫೪೦,೦೦೦ ಕಿಲೋವಾಟ್ ಶಕ್ತಿ ಉತ್ಪಾದಿಸುವ ಕಾರ್ಖಾನೆಯಲ್ಲಿ ೧೯೦,೦೦೦ ಕಿಲೋವಾಟ್ ಉತ್ಪಾದನಾ ಸಾಮರ್ಥ್ಯ ವಿರುವ ಎರಡು ಭಟ್ಟಿಗಳನ್ನು ಇಡಲಾಗುವುದು. ಇವುಗಳಲ್ಲಿ ನೀರನ್ನು ಕುದಿಸಿ ಉಗಿ ಶಕ್ತಿಯನ್ನು ನಿರ್ಮಿಸಿದರಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುವುದು. ಪ್ರಸಕ್ತ ಚವಲ್ಲಿ ಈ ರೀತಿಯಲ್ಲಿ ಅಣುವಿದ್ಯುತ್ ತಯಾರಿಸುವ ವಿಧಾನವು ಹೊಸದೆಯೆಂದೆಯಾದರೂ ತಾರಾಪುರದ ಕಾರ್ಖಾನೆಯಲ್ಲಿ ಅತ್ಯಾಧುನಿಕ ಕ್ರಮವನ್ನೇ ಬಳಸಿಕೊಳ್ಳಲಾಗುವುದು.

ಭಾರತದಲ್ಲಿ ಇಂತಹ ಕಾರ್ಖಾನೆಯೊಂದು ರಚಿತವಾಗುತ್ತಿರುವುದು, ಅದು ಏಶ್ಯಾದಲ್ಲಿ ಅಣುಶಕ್ತಿ ವಿಕಾಸದಲ್ಲಿ ಎಷ್ಟು ಮುಂದುವರಿದಿದೆ ಮತ್ತು ಆದೆಷ್ಟು ಗೌರವಪೂರ್ಣ ಕಾರ್ಯವೆಸಗುತ್ತಿದೆಯೆಂಬು ಕೈನಿದರ್ಶನ. ಭಾರತವು ಅಣುಶಕ್ತಿ ನಿರೋಗದ ಮೂಲಕ ಅಣುವಿಕ ಅನುಸಂಧಾನ ಮತ್ತು ವಿಕಾಸ ದೃಷ್ಟಿಯಿಂದ ಪೂರಿದ ಪ್ರಗತಿಯಿಂದ ವಿಶ್ವಾಸ ತಳೆದೇ ಅಮೇರಿಕೆಯು ಇಂತಹ ಬೃಹತ್ ಯೋಜನೆಗೆ ಬ್ರಹ್ಹೆಚ್ಚುಪೂರಣದಲ್ಲಿ ಸಹಾಯ ನೀಡುವ ಸ್ಪರ್ಧಾತ್ಮಕ್ಕೆ ಬಂದಿದೆ

ತಾರಾಪುರದ ಈ ಹೊಸ ವಿದ್ಯುದಾಗಾರವು ಸ್ವಗತಿಪಥಗಾಮಿಯಾದ ಆಧುನಿಕ ಭಾರತದ ಸ್ವಗತಿ ಮಾರ್ಗದಲ್ಲಿ ಮಹತ್ವದ ಸೈಲುಗಲ್ಲಾಗುವುದು. ಇದಕ್ಕಾಗಿ ಅಮೆರಿಕನ್ ಸರಕಾರಕ್ಕೆ ಭಾರತೀಯರು ಸಹಾಕೃತಜ್ಞರು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪಿತಾಳೆ, ಎಂ.ಡಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವಲ್ಲಿ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಬಿ
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Sohools as per proceedings Roc. No. 466 N/50 dated 2-12-1950 of the Director of Public Instruction Madras.

THE KARNATAKA BANK LIMTED, UDIPI.
(Registered Office— Dongarakery, Mangalore-3)

NOTICE.

Auction Sale of Electrical Goods.

The following items of Electrical Goods pledged to the Bank will be sold by Public Auction on Saturday, the 3rd. August, 1963 at 2 P. M. or on any other subsequent date which may be convenient to the Bank, in the office premises of the Bank at Udipi, where inspection of the goods will be allowed between 10 A. M. to 2 P. M. to intending bidders. For conditions of sale please refer to the undersigned. Notice has been issued to the pledger separately.

Particulars of the goods.

Loan No, 6/61 — Four "RCA 15268" Speaker Units.
Loan No 4/62 — Five 16" Oscillating "Omega" Table Fans.

****

Udipi, 20th July, 1963.

K. B. Rama Rao, Agent.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಡಳ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆರೇ ಆರು ಜನರು

೬೦ ಕೋಟಿ ಜನರ ಭವಿಷ್ಯ ನಿರ್ಮಿಸುವರು

ರಾಷ್ಟ್ರದ ಉತ್ತರಾರ್ಧದಲ್ಲಿ ಚೀನಾದ ತೃತೀಯ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್ (ಚೀನೀಯರ ಪಾರ್ಲಿಮೆಂಟ್) ಚುನಾವಣೆಗಳು ನಡೆಯಲಿವೆ ಆದಕ್ಕೆ ಪೂರ್ವಭಾವಿಯಾಗಿ ಅಲ್ಲಿ ಈಗ ಕೆಳಮಟ್ಟದ ಪೀಪಲ್ಸ್ ಕಾಂಗ್ರೆಸ್ ಚುನಾವಣೆಗಳು ಆರಂಭವಾಗಿವೆ ಸರ್ಕಾರದ ಬಿಗಿಯೂ ನಿಯಂತ್ರಣ ಹಾಗೂ ಒಂದೇ ಬಗೆಯ ತಾತ್ವಿಕ ಶಿಕ್ಷಣದಿಂದಾಗಿ ಚೀನಾದಲ್ಲಿ ಚುನಾವಣೆಗಳು ಪ್ರಜಾಪ್ರಭುತ್ವಾಯ ಪ್ರತಿಬಿಂಬಿಸುವ ಸಂದರ್ಭಗಳಾಗದೆ, ಪ್ರತಿನಿಧಿಗಳನ್ನು ನೇಮಿಸುವ ಸಮಾರಂಭಗಳಾಗಿ ಪರಿಣಮಿಸಿವೆ.

ಚೀನಾದಲ್ಲಿ ಈಗ ಜಿಲ್ಲಾ ಮಟ್ಟದ ಪೀಪಲ್ಸ್ ಕಾಂಗ್ರೆಸ್‌ಗೆ ಚುನಾವಣೆಗಳು ಆರಂಭವಾಗಿವೆ. ಚೀನೀ ಪ್ರಜೆಗಳು ಇದೊಂದೇ ಮಟ್ಟದಲ್ಲಿ ಮಾತ್ರ ತಮ್ಮ ಪ್ರತಿನಿಧಿಗಳನ್ನು ನೇರವಾಗಿ ಆರಿಸಬಲ್ಲರು

ಹೊಸ ರಾಷ್ಟ್ರೀಯ ಪಾರ್ಲಿಮೆಂಟ್ (ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್) ರಚನೆ ನಡೆಯುವ ಮೂರು ಹಂತದ ಚುನಾವಣೆಗಳಲ್ಲಿ ಜಿಲ್ಲಾ ಮಟ್ಟದ ಚುನಾವಣೆಯೇ ಮೊದಲನೆಯದು. ಜಿಲ್ಲಾ ಮಟ್ಟದ ಚುನಾವಣೆಗಳು ಮುಗಿದ ನಂತರ ಪ್ರಾಂತೀಯ ಪೀಪಲ್ಸ್ ಕಾಂಗ್ರೆಸ್ ಚುನಾವಣೆಗಳೂ ಬಳಿಕ ಈ ವರ್ಷದ ಉತ್ತರಾರ್ಧದಲ್ಲಿ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್ ಚುನಾವಣೆಗಳೂ ನಡೆಯುತ್ತವೆ.

ಚೀನಾದ ಸಂವಿಧಾನದ ಮೇರೆಗೆ ಕಳೆದ ವರ್ಷವೇ ಹೊಸ ಪಾರ್ಲಿಮೆಂಟ್ ಚುನಾವಣೆ ನಡೆಯಬೇಕಾಗಿತ್ತು ಆದರೆ ಪೀಕಿಂಗ್‌ನ ಆಡಳಿತಗಾರರು ಅದನ್ನು ಒಂದು ವರ್ಷ ಮುಂದೂಡಿದರು.

ಮತದಾನದ ಹಕ್ಕು

ಚೀನಾದಲ್ಲಿ ೧೮ ವರ್ಷಕ್ಕೆ ನೀಲ್ಪಟ್ಟ ಎಲ್ಲ ವಯಸ್ಕರಿಗೂ ಮತದಾನದ ಹಕ್ಕಿದೆ ಧರ್ಮಗುರುಗಳು, ಪ್ರತಿಗಾಮಿಗಳು, ಹುಚ್ಚರು ಹಾಗೂ ಅಪರಾಧಿಗಳು ಈ ಹಕ್ಕಿನಿಂದ ವಂಚಿತರಾಗಿದ್ದಾರೆ.

ಅದರೆ ಪ್ರತಿಗಾಮಿಗಳೆಂದರೆ ಯಾರು? ರಾಷ್ಟ್ರದ ದೃಷ್ಟಿಯಿಂದ ಕೆಟ್ಟವರೇ?

ಜೆನ್ ಮಿಂಜಿಯವರು ಚೀನಾದ 'ನವಚೀನಾ ದೈಲಿ' ಪತ್ರಿಕೆಯಲ್ಲಿ ೧೯೫೨ರ ಜೂಲೈ ೭ರಂದು ಬರೆದ ಲೇಖನದಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಕೊಡಿಯುತ್ತದೆ. ಆ ಪತ್ರಿಕೆಯ ಲೇಖನದಲ್ಲಿ ಪ್ರತಿಗಾಮಿಗಳ ಬಗ್ಗೆ ವ್ಯಾಖ್ಯೆ ಹೀಗಿತ್ತು "ಕಳ್ಳರ ಮತ್ತು ಸರಕಾರದ ವಿರುದ್ಧ, ಜನರುಜವಾದ ಮತ್ತು ರಾಜ್ಯದ ಮೂಲಭೂತ ತತ್ವಗಳ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುವವರು ಪ್ರತಿಗಾಮಿಗಳೆಂದೂ ರಾಷ್ಟ್ರ ದ್ರೋಹಿಗಳೆಂದೂ" ಅಭಿಪ್ರಾಯಪಟ್ಟಿದ್ದಾರೆ.

ಅವರು ಮುಂದುವರಿದು, "ಚೀನಾದ ಹಕ್ಕು, ಸರಕಾರ ಹಾಗೂ ಸಮಾಜವಾದದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುವವರನ್ನು ನಿರ್ದಯವಾಗಿ ಹತ್ತಿಕ್ಕಬೇಕೆಂದು" ಹೇಳಿದ್ದಾರೆ

"ಪ್ರತಿಗಾಮಿಗಳಿಗೆ ವಾಕ್ ಸ್ವಾತಂತ್ರ್ಯ ನೀಡಕೂಡದು ಅವರು ಗುಂ ಸಾಧನೆಗೆ ಅನುಕೂಲವಾಗುವಂತಹ ಅಭಿಪ್ರಾಯಗಳನ್ನು ದಮನಮಾಡಬೇಕು" ಎಂದೂ ಅದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

'ಪೀಪಲ್ಸ್ ದೈಲಿ' ಪತ್ರಿಕೆಯು ೧೯೫೨ರ ಏಪ್ರಿಲ್ ೧೫ರಂದು ಬರೆದ ಸಂಪಾದಕೀಯದಲ್ಲಿ, "ಮತದಾರರ ಅರ್ಹತೆಗಳ ಪರಿಶೀಲನೆ ಒಂದು ಮಹತ್ತರ ಕಾರ್ಯ. ಮತದಾರರ ಅರ್ಹತೆಗಳನ್ನು ಪರಿಶೀಲಿಸುವುದರ ಮೂಲಕ ನಮ್ಮವರಾರು ಮತ್ತು ಶತ್ರುಗಳಾರು ಎಂಬುದನ್ನು ಕಂಡು ಹಿಡಿಯಲು, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಮತ್ತು ಪ್ರಜಾಸತ್ತಾತ್ಮಕ ಸರ್ವಾಧಿಕಾರವನ್ನು ಬಲಗೊಳಿಸಲು ನಾವ್ಯವಾಗುತ್ತದೆ ಎಂದು ಮತದಾರರ ಅರ್ಹತೆಗಳ ಬಗ್ಗೆ ಸಂಶಯ ವ್ಯಕ್ತಪಡಿಸಿದೆ

ಇದಕ್ಕೆ ಮೊದಲು ಚೀನಾದ ಇನ್ನೊಂದು "ಪೊಲಿಟಿಕಲ್ ಸ್ಟಡಿ" ಪತ್ರಿಕೆಯು ೧೯೫೨ರ ಅಕ್ಟೋಬರ್ ೧೫ರ ಸಂಚಿಕೆಯಲ್ಲಿ ಬರೆದ ಲೇಖನವೊಂದರಲ್ಲಿ "ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರುವ ಸಮೂಹೀಕರಣದ ಚಳವಳಿಗಳು, ಗ್ರಾಮಗಳಲ್ಲಿನ ರಾಜಕೀಯ ಹಾಗೂ ತಾತ್ವಿಕ ರಂಗಗಳಲ್ಲಿ ಕ್ರಾಂತಿ ನಡೆಯುತ್ತಿರುವುದರ ಪ್ರತೀಕವಾಗಿವೆ. ಸಾಮಾನ್ಯವಾಗಿ ಸ್ಥಿತಿಯಲ್ಲಿರುವ ಮಧ್ಯಮ ವರ್ಗದ ಬೇಸಾಯಗಾರರ ಭಿನ್ನಾಭಿಪ್ರಾಯಗಳು ಆಲೋಚನೆಗಳೂ ಇದು ಬಹು ಮಟ್ಟಿಗೆ ಕಾರಣವಾಗಿದೆ" ಎಂದು ಅಭಿಪ್ರಾಯಪಟ್ಟಿದೆ. ಚೀನೀ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಟೆಂಗ್—ಸಿಯಾವೊ—ಪಿಂಗ್ ಅವರು ೧೯೫೨ರ ಅಕ್ಟೋಬರ್ ತಿಂಗಳಲ್ಲಿ ಚೀನಾದ ಗ್ರಾಮಾಂತರ ಪ್ರದೇಶಗಳಲ್ಲಿ ನಡೆದಿರುವ ವೈಚಾರಿಕ ಜಾಗೃತಿಯನ್ನು ಕುರಿತು ಪ್ರಸ್ತಾಪಿಸುತ್ತಾ "ಈ ಚರ್ಚೆಗಳಲ್ಲಿ ನಾವು ಗೆಲ್ಲದೇ ಹೋದರೆ ನಾವು ಮುಂದೆ ವರಿಯುವುದೇ ಕಠಿಣವಾಗುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಚೀನಾದ ಗ್ರಾಮಾಂತರ ಪ್ರದೇಶಗಳಲ್ಲಿ "ಬೃಹತ್ ಪ್ರಮಾಣದ ವಿಚಾರಗೋಷ್ಠಿ"ಗಳು ನಡೆದ ಕಾಲದಲ್ಲಿ ಕೆಲವರು ಮತದಾನದ ಹಕ್ಕುಗಳನ್ನೂ ಕಸಿದುಕೊಂಡು ಚೀನಾದಲ್ಲಿ ಚುನಾವಣೆಗಳಿಗೆ ಮೊದಲೇ ಪ್ರತಿನಿಧಿಗಳನ್ನು ನೇಮಕ ಮಾಡುವ ನೀತಿಯನ್ನು ಅನುಸರಿಸಲಾಗುತ್ತಿದೆಯೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಚೀನಾ ಸರಕಾರದ ಈ ಕ್ರಮಕ್ಕೆ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸುವವರು ತಮ್ಮ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ

ಚೀನಾದಲ್ಲಿ ತೋರಿಕೆಗೆ ಮಾತ್ರ ಚುನಾವಣೆಗಳು ನಡೆಯುತ್ತವೆ. ಉದ್ದೇಶವು ವಾರರ ಸಂಖ್ಯೆಯು ಚುನಾವಣೆ ಸ್ಥಳಗಳಲ್ಲೇ ಇದ್ದುದರಿಂದ ಸ್ಥಳೀಯ ಸಂಘಸಂಸ್ಥೆಗಳು, ರಾಜಕೀಯ ಪಕ್ಷಗಳು ಮತ್ತು ಜನತಾ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ ಪ್ರತಿನಿಧಿಗಳ ನೇಮಕ ಮಾಡಲಾಯಿತೆಂದು ಪತ್ರಿಕೆಯಲ್ಲಿ ಒಪ್ಪಿಕೊಳ್ಳಲಾಗಿದೆ.

ಸಾರ್ವಜನಿಕ ಮತದಾನ

ಸ್ವತಂತ್ರ ಹಾಗೂ ನಿರ್ಬಂಧ ಮತದಾನ ವ್ಯವಸ್ಥೆಯು ಮೂಲಭೂತ ಅಗತ್ಯವೆನಿಸಿದ ಗೋಸ್ಕ್ಯ ಮತದಾನವು ಜನತಾ ಚೀನಾ ಗಣರಾಜ್ಯದಲ್ಲಿ ರೂಢಿಯಲ್ಲಿಲ್ಲ. ಚೀನೀ ಕಮ್ಯೂನಿಸ್ಟ್ ಪಕ್ಷದ ಮುಖಪತ್ರಿಕೆಯಾದ 'ಪೀಪಲ್ಸ್ ದೈಲಿ" ಮತದಾನ ವ್ಯವಸ್ಥೆಯ ಸಂಬಂಧವಾಗಿ ಬರೆದ ದೀರ್ಘ ಲೇಖನವೊಂದರಲ್ಲಿ ಕೆಳ ಮಟ್ಟದ ಚುನಾವಣೆಗಳಲ್ಲಿ, ಕೈ ಎತ್ತುವುದರ ಮೂಲಕ ಪ್ರತಿನಿಧಿಗಳನ್ನು ಆರಿಸುವ ಕ್ರಮವನ್ನು ಅನುಸರಿಸಲಾಗುತ್ತಿದೆಯೆಂದು ಪ್ರಕಟಪಡಿಸಿದೆ.

೧೯೫೩ - ಜಿಲ್ಲೆಯಲ್ಲಿ ಮತದಾನ ಸಂಬಂಧವಾದ ವ್ಯವಸ್ಥೆಯಲ್ಲಿ ವಿಶೇಷ ತರಬೇತಿ ಪಡೆದ ಸುಮಾರು ೨೫,೭೦,೦೦ ಜನರು ಮತದಾರರಿಗೆ ಮತದಾನಕ್ಕಾಗಿ ಅನುಸರಿಸಬೇಕಾದ ಕ್ರಮವನ್ನು ಕುರಿತು ತಿಳಿಯುವಲ್ಲಿ ಮೂಡಿಕೊಟ್ಟರೆಂದೂ ಅದರಂತೆ ೨,೭೨೦ ಲಕ್ಷ ಜನ ಮತದಾನ ಮಾಡಿದರೆಂದು ತಿಳಿದಿದೆ.

ಚುನಾವಣೆಗಳಿಗೆ ಸಂಬಂಧಪಟ್ಟಂತೆ ಚೀನಾದ ಪತ್ರಿಕೆಗಳಲ್ಲಿ ಪ್ರಕಟವಾದ ಟೀಕೆ—ಟಪ್ಪಣಿಗಳಿಂದ ಚುನಾವಣೆಗಳು ನೇವಲ ಪ್ರತಿನಿಧಿಗಳ ನೇಮಕ ಸಮಾರಂಭವಾಗಿದ್ದ ಗೋಸ್ಕ್ಯ ಜೊರಬಿದ್ದಿದೆ. ಉದಾಹರಣೆಗಾಗಿ, "ಕೆನ್ಯಾಂಗ್ ದೈಲಿ" ಪತ್ರಿಕೆಯು ೧೯೫೨ರ ಜುಲೈ ೧೫ರಂದು ಪ್ರಕಟಿಸಿದ ಲೇಖನವೊಂದರಲ್ಲಿ "ಚೀನಾದಲ್ಲಿ ಪ್ರಜಾ ಪ್ರತಿನಿಧಿಗಳ ಚುನಾವಣೆ ಪ್ರಜಾಸತ್ತಾತ್ಮಕವಾಗಿಲ್ಲವಾದ್ದರಿಂದ, ಅವುಗಳು ಪ್ರತಿನಿಧಿಗಳ ನೇಮಕ ಸಮಾರಂಭಗಳಾಗಿವೆಯೆಂದು ವ್ಯಕ್ತಪಡಿಸಲಾಗಿದೆ.

ಈಗಿನ ಚುನಾವಣೆಗಳು

'ಪೀಪಲ್ಸ್ ದೈಲಿ' ಪತ್ರಿಕೆಯು ೧೯೫೩ರ ಏಪ್ರಿಲ್ ೧೫ರಂದು ಬರೆದ ಸಂಪಾದಕೀಯವೊಂದರಲ್ಲಿ ಚುನಾವಣೆಗಳನ್ನು ಸಂಬಂಧವಾಗಿ ಬರೆಯುತ್ತಾ "೧೯೫೩ ಚೀನಾದ ಕೃತೀಯ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷವಾಗಿದ್ದು, ಚೀನಾಯ ಪ್ರಜಾಪ್ರತಿನಿಧಿಯ ಆರ್ಥಿಕ ಮತ್ತು ಕೈಗಾರಿಕಾ ವ್ಯವಸ್ಥೆಗಳ ತಳಹದಿಯೆಂಬ ನೀತಿಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಕಮ್ಯೂನ್‌ಗಳ ಸಂಘಟನೆ ಹಾಗೂ ಬೇಸಾಯ ಅಭಿವೃದ್ಧಿಗಳು ದೃಷ್ಟಿಯಿಂದ ೧೯೫೩ ಮಹತ್ವಪೂರ್ಣ ವರ್ಷವಾಗಿದೆ" ಎಂದು ತಿಳಿಸಿದೆ.

"ಇಂತಹ ಪರಿಸ್ಥಿತಿಯಲ್ಲಿ ಚುನಾವಣೆ ನಡೆಯುವುದರಿಂದ ಜನರಿಗೆ ಸಮಾಜವಾದ, ದೇಶಾಭಿಮಾನ ಹಾಗೂ ಸಾಮೂಹಿಕ ಶ್ರಮ ವಿಷಯವಾಗಿ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ" ಎಂದೂ ಪತ್ರಿಕೆಯು ಅಭಿಪ್ರಾಯಪಟ್ಟಿದೆ.

ಉಪ ಸಂಹಾರ

ಚುನಾವಣೆಗಳ ಮೊದಲು ನಡೆಯುವ ಆಂದೋಲನಗಳು ಹಾಗೂ ಸಮಗ್ರವಾಗಿ ಕಮ್ಯೂನಿಸ್ಟ್ ಪಕ್ಷ ಕೈ ಇರುವ ಹತೋಟಿ ಇನ್ನೆಲ್ಲವನ್ನೂ ಗಮನಿಸಿದರೆ, ಚೀನಾದಲ್ಲಿ ಈಗ ನಡೆಯುವ ಅಥವಾ ಮುಂದೆ ನಡೆಯಲಿರುವ ಚುನಾವಣೆಗಳು, ಈ ಮೊದಲು ನಡೆದ ಚುನಾವಣೆಗಳಿಗಿಂತ ಯಾವ ವಿಧದಲ್ಲಿಯೂ ಉತ್ತಮವೆಂದು ಕಾಣುವುದಿಲ್ಲ. ಚೀನಾದಲ್ಲಿ ಈ ಹಿಂದೆ ನಡೆದ ಚುನಾವಣೆಗಳ ಬಗೆಗೆ ಬಲವಾದ ಆಕ್ಷೇಪಣೆಗಳೆನ್ನೆತ್ತಲಾಯಿತು. ವೈಯಕ್ತಿಕಾಲೀಗಳಾದವರು ಬಲಪಕ್ಷೀಯರ ಕೈಕೆಯನ್ನು ಖಂಡಿಸಿದರು. ಎಲ್ಲಾ ಅಧಿಕಾರಗಳೂ ಚೀನಾದ ರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷದ ಕೇಂದ್ರದ ಕೈಯಲ್ಲಿವೆ. ಚೀನಾದ ಬಹುಮುಖ್ಯವಾದ ಎಲ್ಲಾ ಸಮಸ್ಯೆಗಳನ್ನೂ ಪಕ್ಷದ ಅಧ್ಯಕ್ಷ ಮಾವೊ-ತ್ಸೆ-ತುಂಗ್, ಅಧ್ಯಕ್ಷ ಲಿಯು-ಷಾವೊ ಚಿ, ಪ್ರಧಾನಿ ಚೌ-ಎನ್-ಲೈ, ಪಕ್ಷದ ಕೇಂದ್ರದಲ್ಲಿ ಪ್ರಧಾನ ಕಾರ್ಯದರ್ಶಿ ದರ್ಜೆಗಿಂತ ಹೆಚ್ಚಿನ ದರ್ಜೆಯಲ್ಲಿರುವ ಮೂವರು—ಹೀಗೆ ಅರು ವ್ಯಕ್ತಿಗಳು ನಿರ್ಣಯಿಸುತ್ತಾರೆ, ಚೀನಾದ ಕಮ್ಯೂನಿಸ್ಟ್ ಪಕ್ಷ ಕೇವಲ ಒಂದು ವ್ಯಕ್ತಿಯ ಗೊಂಬೆಯೆಂದು ಅವರು ಟೀಕಿಸಿದ್ದಾರೆ. ಚೀನಾದ ೬೦ ಕೋಟಿ ಜನರ ಭವಿಷ್ಯತ್ತು ಈಗ ಕೇವಲ ಅರು ಜನರ ಕೈಯಲ್ಲಿದೆಯೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ

'NAVAYUGA' WEEKLY is in the list of periodicals and Newspapers approved for use in Secondary 2ohools as per proceedings R—c No· 466 N/5ೌ0dated cof12—1950 of the Director M Public Instruction Sadras.

ಸುಲಭದಲ್ಲಿ ಉಳಿತಾಯ.....

ಕೊರ್ಪೊರೇಶನ್ ಬೇಂಕ್

ಜನತಾ ಡಿಪೊಜಿಟ್ ಯೋಜನೆಯು

ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ

ವಿವರಗಳಿಗಾಗಿ ಇಂದೇ ವಿಚಾರಿಸಿ:

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಭಾರತೀಯ ಯುದ್ಧ ಖೈದಿಗಳು

(೨ನೇ ಪುಟದಿಂದ)

ನಡೆಯುತ್ತಿದ್ದರು. ೬ ಅಧಿಕಾರಿಗಳೂ ೩೨೦೦ ಸೈನ್ಯ ಸೈನಿಕರು ಒಂದೇ ಮೇಜಿನ ಬಳಿ ಕುಳಿತು ಊಟ ಮಾಡುತ್ತಿದ್ದರು. ತಿನ್ನುತ್ತಿದ್ದರು, ಕುಡಿಯುತ್ತಿದ್ದರು ಭಾರತೀಯ ಯುದ್ಧ ಖೈದಿಗಳೆದುರು ತಮ್ಮ ಸ್ಥಾನಮಾನದ ಕುರಿತು ಯಾರೂ ಸಂಕೋಚಪಡುವಂತಿರಲಿಲ್ಲ. ಅಗತ್ಯ ಬಿದ್ದಾಗ ಆವಶ್ಯಕತೆ ಇದ್ದವರಿಗೆ ಒಡನೆ ಸಹಾಯ ಮಾಡಲಾಗುತಿತ್ತು. ಅವರ ಪ್ರತೀಯೊಂದು ಕಾರ್ಯದ ಅರ್ಥವೂ ನಾನೆಲ್ಲರೂ "ಸಮಾನರು" ಎಂಬುದನ್ನು ಸ್ಪಷ್ಟ ಬಿಂಬಿಸುವಂತಾಗಿತ್ತು.

ಬೀಗೆ ಪಳಗಿಸಿದ ಯುದ್ಧ ಖೈದಿಗಳನ್ನು ನಂತರ ಇತರರನ್ನು ಪಳಗಿಸಲಿಕ್ಕಾಗಿ ಉಪಯೋಗಿಸಿಕೊಳ್ಳಲಾಗುತಿತ್ತು. ಅನಂತರ ಆಗಮಿಸಿದ ಯುದ್ಧ ಖೈದಿಗಳಿಗೆ ಅವರು ಇದೇ ರೀತಿ ಜೈನಾಪರ ಭಾಷಣ ಕೊಡಬೇಕಾಗುತ್ತಿತ್ತು. ಅದಕ್ಕೆ ಒಪ್ಪದಿದ್ದವರಿಗೆ ಚಿತ್ರಹಿಂಸೆ ಕೊಡಲಾಗುತಿತ್ತು. ಬೆತ್ತದಿಂದ ಬಾರಿಸಿದಾಗಲೂ ಬಗ್ಗದಿದ್ದವರಿಗೆ ನಂತರ ಭೀಕರ ಕ್ರೂರಹಿಂಸೆ ಕಾದು ಕೊಂಡಿರುತ್ತಿತ್ತು. ಅವರನ್ನು ನೈಸರ್ಗಿಕ ಹಿಮ ನದಿಯಲ್ಲಿ ನಿಲ್ಲಿಸಲಾಗುತ್ತಿತ್ತು; ಬರೆ ಎಳೆಯಲಾಗುತ್ತಿತ್ತು, ಬೆದರಿಸಲಾಗುತ್ತಿತ್ತು...ಮತ್ತೂ ಒಪ್ಪದಿದ್ದಲ್ಲಿ, "ನಾಳೆ ಮುನಃ ಇಲ್ಲಿಗೆ ಕರೆದುಕೊಂಡು ಬರುತ್ತೇವೆ, ನಂತರ ತೀರಿದಂತೆಯೇ ಸರಿ. ನಿನ್ನ ಕಥೆ ಮುಗಿಯುತ್ತದೆ. ನೀನು ಹಿಂತಿರುಗಲಾರದವನಾಗಿಬಿಡುತ್ತೀ..." ಎಂದು ಬೆದರಿಸಲಾಗುತ್ತಿತ್ತು.

ಮೂರೂ ಶಿಬಿರಗಳನ್ನು ನೋಡಿಕೊಳ್ಳಲು ಬೆನ್‌ಹಾಷರನ್ನು ನೇಮಿಸಲಾಗಿತ್ತು. ಜೈನ ಆಕ್ರಮಣ ನಡೆಯುವ ಹಿಂದೆ ಅವರು ಜೈನಿದೂತ ನಿವಾಸದಲ್ಲಿ ಸೈನಿಕ ವಿಭಾಗದ ಅಧಿಕಾರಿಗಳಾಗಿದ್ದರು. ಅವರು ಡೆಲ್ಲಿಯಲ್ಲಿದ್ದಾಗ ಸಮಯವನ್ನು ವ್ಯರ್ಥ ಹಾಳುಮಾಡಿರಲಿಲ್ಲ. [ದೃಶ್ಯ ನೋಡುವದರಲ್ಲಿ, ನೃತ್ಯನಾಡುವದರಲ್ಲಿ, ಸಭೆಯಲ್ಲಿ ಭಾಗವಹಿಸುವದರಲ್ಲಿ, ಕರತಾಡನ ಮೊದಿಸುವದರಲ್ಲಿ, ಕುಡಿಯುವದರಲ್ಲಿ, ಭಾವಚಿತ್ರ— ಹಸ್ತಾಕ್ಷರಗಳನ್ನೀಯುವದರಲ್ಲಿ ಹಾಳು ಮಾಡಿರಲಿಲ್ಲ] ನಮ್ಮ ರಕ್ಷಣಾ ವಿಭಾಗದ ಮಾಹಿತಿಯನ್ನು, ಒಳಗುಟ್ಟುಗಳನ್ನು ಸಂಗ್ರಹಿಸುವದರಲ್ಲಿ ಅವರು ಕಾರ್ಯಮಗ್ನರಾಗಿದ್ದರು. [ಅವರ ಅದ್ಭುತ್ಪೈ ಸರಿಯಾಗಿ ನಮ್ಮ ಸೈನಿಕ ವಿಭಾಗದಲ್ಲಿ ಕಮ್ಯುನಿಸ್ಟರ ವ್ಯಕ್ತಿಗಳಿದ್ದರೆಂಬುದೂ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಮಾಜಿ ರಕ್ಷಣಾ ಮಂತ್ರಿ ವೆ.ನನರೆ ಪೇಲೂ ಅದೇ ಆರೋಪವಿತ್ತು. ಆಗ ಸೈನ್ಯದಲ್ಲಿ ಸರಿಯಾಗವಾಗಿ ಕಮ್ಯುನಿಸ್ಟರ ಪತ್ರಿಕೆಗಳನ್ನು [ಬ್ಲಿಟ್ಜ್, ನ್ಯೂಏಜ್, ಲಿಂಕ್‌ಇತ್ಯಾದಿಗಳಲ್ಲದೆ ಜೈನಾದ ಪತ್ರಿಕೆಗಳನ್ನು ಹಂಚಲಾಗುತ್ತಿತ್ತೆಂದೂ ಹೇಳಲಾಗಿತ್ತು. ಅಂದರೆ ಕಮ್ಯುನಿಸ್ಟ್ ತತ್ವಗಳನ್ನು ಮೆಲ್ಲನೆ ಹೆಡೆಮರಿಲು ಪ್ರಯತ್ನಿಸಲಾಗಿತ್ತು.] ಈ ಅನುಭವದಿಂದ ಅವರು ಯುದ್ಧ ಖೈದಿಗಳ ಬಳಿ ಬಹಳ ಉಪಾಯದಿಂದ ನಡೆದುಕೊಳ್ಳುತ್ತಿದ್ದರು. ಅಧಿಕಾರಿಗಳ ಬಳಿ ಹೇಗಾದರೂ ಮಾಡಿ ಸೈನಿಕರ ಬಳಿ ಹೇಗಿರಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು.

(ಮುಂದುವರಿಯುವುದು)

—ತಿನರಂಕರ, ಮದ್ರಾಸು.

ಅಭಿಪ್ರಾಯ

ತೆರಿಗೆಯಿಲ್ಲದ ರಾಜ್ಯ ಬೇಕು

ಆಂಗ್ಲರನ್ನು ಓಡಿಸಿ ನಾವು ರಾಮರಾಜ್ಯವನ್ನು ಕಟ್ಟುತ್ತೇವೆಂದು ಭಾವಿಸಿದರೂ ದೇಶದ ಬಡಜನತೆ ಇಂದು ಬಹು ಕಷ್ಟದಿಂದ ತನ್ನ ಜೀವಿತವನ್ನು ಸವೆಯಿಸುತ್ತಿದೆ ಎಂದರೆ ಅತಿಶಯೋಕ್ತಿಯೂ ಆಗಲಾರದೆಂದು ಕಾಣುತ್ತದೆ. ಒಂದು ದೇಶ ಸುಖಿಯೆಂದು ಹೇಳಬೇಕಾದರೆ ಅಲ್ಲಿ ತೆರಿಗೆ ಜಾಸ್ತಿಯಿರಬಾರದೆಂದು ಪ್ರಾಜ್ಞರು ಸಾಧಿಸಿದ್ದಾರೆ. ರಾಮರಾಜ್ಯದಲ್ಲಿ ತೆರಿಗೆ ಎಂಬುದೇ ಇರಲಿಲ್ಲ. ಆದರೆ ಇಂದು? ಬೌದ್ಧ ಪರಿಸ್ಥಿತಿ ಬದಲಾಗಿದೆ. ಪ್ರಜಾನ್ಯಾಯ ವಹಿವಾಟುಗಳೂ ಬದಲಾಗಿವೆ. ಸರಕಾರವು ವುದು ಜನತೆಯು ಉದ್ಧಾರಕ್ಕೆ ಹೊರತು ಅದನ್ನು ಶೋಷಿಸಲಿಕ್ಕಲ್ಲ. ಬಡ ಜನತೆಯು ಕಷ್ಟ ನಿವಾರಣೆಗೇ ನಮ್ಮ ಸರ್ಕಾರದ ಮೊದಲನೆಯು ಪೆಜ್ಜೆಯಾಗಿರುವುದಾದರೂ ಇಂದು ಪರಿಸ್ಥಿತಿ ತದ್ವಿರುದ್ಧವಾಗಿದೆ. ಇಂದು ಜನತೆಗೆ ಬೇಕಾದುದನ್ನು ತಳೆದು ಮಾದವ ಜೈತನ್ಯ ನಮ್ಮ ಸರಕಾರಕ್ಕಿಲ್ಲವೆಂದು ತೋರುತ್ತದೆ. ಇಂದಿನ ನಮ್ಮ ಪ್ರಗತಿ — ಯಶಸ್ಸು ಬರಿಯ ರಿಕಾರ್ಡುಗಳ ಮೂಲಕದ್ದು, ಜೊಂತು ಯಥಾರ್ಥವಾದುದಲ್ಲ. ಜನತೆಯ ಹಿತಾಸಕ್ತಿಯ ಸೂರ್ಯಕಿರಣ ಗ್ರಹಣ ಹಿಡಿದಿದೆ. ಇಂದ ದೇಶದ ಜನತೆಯನ್ನು ಪ್ರಭವ, ಮಧ್ಯಮ, ನಿಮ್ನ ವರ್ಗಗಳಲ್ಲಿ (ಆರ್ಥಿಕ ಆಧಾರದ ಮೇಲೆ) ವಿಂಗಡಿಸಿದರೆ ಮಧ್ಯಮ ಮತ್ತು ನಿಮ್ನ ವರ್ಗಗಳ ಸ್ಥಿತಿ ಶೋಚನೀಯ. ಆದರಲ್ಲೂ ಮಧ್ಯಮ ವರ್ಗದವರ ಬಗ್ಗೆ ಎಲ್ಲೆಲ್ಲೂ ಏನೇನೂ ಪ್ರೋತ್ಸಾಹವಿಲ್ಲ. ಇಂದು ಸಮಗ್ರ ದೇಶದಲ್ಲಿ ಆಚಳತೆಯಲ್ಲಿರುವ ಬೋಸ— ದೋಷಗಳ ಬಗ್ಗೆ ಒಂದು ತೀವ್ರ ಧ್ವನಿ ಕೇಳಿಬರುತ್ತಾ ಇದೆ. ಜೀವನಾಧಾರವಾದ ಯಾವುದೇ ವಸ್ತುವಿಗೂ ಬೆಲೆ ಬಹು ಏರಿದೆ. ಸುಲಭವಿಲ್ಲದೆ ಜೀವನ ನಡೆಸುವ ಜನತೆಯನ್ನು ನಾವಿಂದು ಕಾಣುವುದು ಸಾಧ್ಯವಿಲ್ಲ. ಸರಕಾರದ ಈ ದಿಸೆಯ ಎಲ್ಲಾ ಕಾರ್ಯಗಳೂ ನೀರ ಮೇಲಣ ಹೋಮದಂತೆಯೇ ಸರಿ. ಇಂದು ತ್ರೀವಂತರಿಗೇನು ಸುಖಕ್ಕೇ ಕಡಿಮೆ ಬಂದಿದೆ? ಅಧಿಕಾರವರ್ಗದವರು ಅವಂತಿಸುವುದಿಂದ ಇದ್ದಾರೆ ಆತಃಸಾಮಾನ್ಯ ಜನತೆಗೆ ತಲುಪದ ಯಾವುದೇ ಸುಧಾರಣೆಯಿಂದ ದೇಶದ ಉದ್ಧಾರವಾಗ ಬಲ್ಲುದೇ?

ಬೆಲೆಯೇರಿಕೆ

ಜನರ ದೊಡ್ಡ ಕಷ್ಟವೆನಂದೆ ಜೀವನಾಧಾರವಾದ ಆಹಾರ. ವಸ್ತುಗಳ ಬೆಲೆಯೇರಿ ಪಡೆಕೊಳ್ಳಲು ಅಸಾಧ್ಯವಾದುದಾಗಿದೆ. ದಿನದಿಂದ ದಿನಕ್ಕೆ ವಸ್ತುಗಳ ಬೆಲೆ ಏರಿದರೆ ಬದುಕುವುದು ಹೇಗೆ? ದಿಡಿಸೆಯೂ ಪಡಕೊಳ್ಳಲು ಸಾಲದಾದರೆ ಜೀವನ ಬರೇ ಕಷ್ಟ. ಆದರಲ್ಲಿ ರಸ ಹೇಗೆ ಬರಬೇಕು? ಸಕ್ಕೆ ಕಂಟ್ರೋಲು ಮಾಡಿ ಕಳ್ಳ ಸಂತೆಗೆ ನಾಂದಿ ಹಾಡಿತು. ಈ ಸಾಮಾನಿನ ಬೆಲೆಯೇರಿಕೆಗೆ ಕಾರಣವು ಯಾರು? ವ್ಯಾಪಾರಸ್ಥರೇ? ಸರಕಾರವೇ? ಸರಕಾರದ ಕುದುರಿಕೆಯಿದ್ದರೆ ಬೆಲೆ ಹೇಗೆ ಜಾಸ್ತಿಯಾಗುತ್ತದೆ? ಅದು ಸಾಧ್ಯವಿಲ್ಲ. ಇದರ ಉಪಟಳ ತಡೆಯಲಾರದೆ ಜನತೆ ಇದನ್ನು ಸಾಮೂಹಿಕವಾಗಿ ವಿರೋಧಿಸುವ ಚಳವಳಿ ಮಾಡುತ್ತಿದೆ. ಕಮ್ಯುನಿಸ್ಟ್, ಜನಸಂಘ ಮೊದಲಾದ ಪಕ್ಷಗಳು ಇದನ್ನು ವಿರೋಧಿಸಿ ಚಳವಳಿ ಏಚ್ಚಿಸುವಂತೆ ಪ್ರೇರೇಪಿಸುತ್ತಿವೆ ಆದರೆ ದೇಶ ಸ್ವೇಮಿಗಳು ಈ ತುರ್ತು ಪರಿಸ್ಥಿತಿಯಲ್ಲಿ ಚಳವಳಿ ಮಾಡಕೂಡದೆಂದು ಉಸ್ಯ ಮಂತ್ರಿ ಶ್ರೀ ಶಾಸ್ತ್ರಿಯವರು ಕರೆಯಿತ್ತಿದ್ದಾರೆ. ಏರಿದ ಸಾಮಾನುಗಳ ಬೆಲೆ ಕಡಿಮೆ ಆಗದೆ. ಗತ್ಯಂತರವಿಲ್ಲ. ಇಂದು ಬೆ., ಸಕ್ಕೆ, ಎಟ್ಟು ಸಾಂಬಾರ ಜೀನಸುಗಳ ಬೆಲೆಯೇರಿ ಸಾಮಾನ್ಯ ಜನರು ಜೀವನ ಮಾಡದಂತೆ ಆಗಿದೆ. ಹಾಗಿದ್ದರೆ ನಮ್ಮ ಸರ್ಕಾರ ಏನು ಸಾಧಿಸಬಂತಾಗುತ್ತದೆ?

ಮಂತ್ರಿಗಳ ಹೇಳಿಕೆ

ಇತ್ತೀಚೆಗಿನ ವಿದ್ಯಮಾನಗಳನ್ನು ಅವಲೋಕಿಸುವಾಗ ಸರಕಾರ ಈ ಬಗ್ಗೆ ಕಾರ್ಯ ಕೈಕೊಳ್ಳುವುದರಲ್ಲಿ ತುಂಬಾ ವಿವಶವಾಗಿದೆ. ಏನು ಮಾಡುವುದೆಂದು ಅದಕ್ಕೆ ತೋಚುತ್ತಿಲ್ಲ. ನನ್ನು ಯೋಜನಾ ಮಂತ್ರಿ ಶ್ರೀ ನಂದಾರವರು ಕಳೆದ ವಾರ ವ್ಯಾಪಾರಸ್ಥರಿಗೆ ಬೆಲೆಯೇರಿಸುವುದರ ಬಗ್ಗೆ ಬೆದರಿಕೆಯಿತ್ತಿದ್ದಾರೆ. ಇನ್ನು ಮುಂದೆ ಬೆಲೆಯೇರಿಸಿದರೆ ಸರಕಾರ ಸೂಕ್ತ ಕ್ರಮ ಕೈಗೊಳ್ಳುವುದೆಂದೂ ಎಚ್ಚರಿಸಿದ್ದಾರೆ ಆದರೆ ಮಂತ್ರಿ ಮಹೋದಯರ ಮಾತಿಗೆ ಬೆಲೆ ಬಂತೋ ಇಲ್ಲವೋ ಗೊತ್ತಿಲ್ಲ. ಅವರ ಹೇಳಿಕೆಯ ನಂತರವೇ ಕೆಲವು ಸಾಮಾನುಗಳ ದರ ಏಚ್ಚಾಯಿತು. ಉತ್ತರ ಭಾರತದ ಒಂದು ನಗರದಲ್ಲಿ ಸಾಚಾರ ಮಾಡುತ್ತಿರುವಾಗ ಸಾಮಾನಿನ ದರ ಏರಿಕೆಯಿಂದ ಬೆಂದು ಬಳಲುವ ಜನರ ಕಷ್ಟ ಕಂಡು, ನಮ್ಮಲ್ಲ ಮರುಗಿದ ಶ್ರೀ ಶಾಸ್ತ್ರಿಯವರು ಸಿಟ್ಟಿಗೆದ್ದು ತೀವ್ರವಾಗಿ ಸೂಕ್ಷ್ಮ ಆಡಿ ಈ ಬಗ್ಗೆ ಸಭ್ಯನೇ ಆಗತ್ಯವಾದ ಕ್ರಮ ಕೈಕೊಳ್ಳುವುದೆಂದು ಹೇಳಿದ್ದಾರೆ! ಅಂತೂ ಕೇಂದ್ರದ ಮಂತ್ರಿ ಸಂಪುಟವೇ ಬೆಲೆಯೇರಿಕೆಗಾಗಿ ವಿರೋಧ ಸೂಚಿಸುತ್ತಿದೆಯೂದರೂ ಈ ವರೆಗೂ ಸಾಮಾನುಗಳ ಬೆಲೆ ಜೂಕೆ ಶಕ್ತಿಲಿಲ್ಲ? ಆದವರಿಂದ ಆಸಾಧ್ಯವೇ ಬಲೆಯೇರಿದುದನ್ನು ತದಿದರೆ ಸಾಲದು ಕಡಿಮೆ ಮಾಡುವುದೂ ಅತ್ಯಗತ್ಯವಾಗಿದೆ.

ಕರಭಾರವೇಕೆ?

ಭೂಮೂಲಕರ ಮೇಲೆ ಇಂದು ಎರಡನೆ ಬಾರಿ ಸರ್ ಜಾರ್ಜ್ ಶಾಕೆ ಕರಕಾರ ತುಂಬಾ ಅನ್ಯಾಯ ಮಾಡಿದೆ ಎಂದರೆ ತಪ್ಪಲ್ಲ. ಈ ತೆರನ ಶೈತೆಗೆಯಿಂದ ಜನತೆಗೆ ಉಸಿರಿತ್ತಂತೆ. ಇದರಿಂದ ತೆರಿಗೆಯು ಎರಡು ಪಾಲಷ್ಟು ಹೆಚ್ಚಿಸಿದಂತೆ ಆಯಿತು. ವರ್ಷ ವರ್ಷವೂ ಇಷ್ಟು ತೆರಿಗೆ ಕೊಡುವುದೆಂದರೆ ನಿಜಕ್ಕೂ ತುಂಬಾ ಬೇಸರದ ಸಂಗತಿ. ಇದು ಜನತೆಯ ಜೀವನ ವಿಚ್ಛಿದ ಮೇಲೆ ಒಂದು ದೊಡ್ಡ ಆಘಾತ ಮಾಡಿದೆ. ಹೊದರೇ ಬೆಳೆಯ ಫಲ ಅಲ್ಪ. ಪ್ರಕೃತಿಯೊಡನೆ ಸೆಣಸಾಡಿ, ಒಕ್ಕಲಿಗರನಿಂದಂಗಿ ಟ್ಟಸಿಕೊಂಡಾಗಲೇ ಇದ್ದ ಆಯ ಮಾಯವಾಗುತ್ತದೆ. ಅದರಲ್ಲೂ ತಗಿನ ಕಾನೂನಿನಲ್ಲಿ ಒಕ್ಕಗಲಿಗರೊಡನೆ ಮಾತಾಡುವಂತಿಲ್ಲ. ಗೇಣಿ ಕೊಡದೆ ವರ್ಷಗಳುರಿಳಿದರೂ ಅವನನ್ನೆಬ್ಬಿಸುವುದು ಕಷ್ಟ, ಸಾಧ್ಯವಿಲ್ಲ. ಹೀಗಿರುವಾಗ ತೆರಿಗೆ ಮನ್ನು ಸಾಲ ಮಾಡಿಯೇ ಇಂದು ಕಟ್ಟುತ್ತಿರುವುದರಿಂದ ಸರಕಾರ್ಯದೂ ಏನು ಪ್ರಯೋಜನ? ಇದರಿಂದ ಜನರಿಗೂ ಸರಕಾರದ ಬಗ್ಗೆ ತಾತ್ಸಾರ ಬೇಸರ ಬಂದು ಅವರು ಅದನ್ನು ಟೀಕಿಸಲು ಪ್ರಾರಂಭಿಸುತ್ತಾರೆ. ಇಂದು ಈ ಸರ್ ಜಾರ್ಜನ್ನು ಬಲತ್ಕಾರವಾಗಿ ವಸೂಲು ಮಾಡುತ್ತಿದ್ದಾರೆ. ಈ ಎರಡನೇ ತೆರಿಗೆಯನ್ನು ಕೊಡುವುದಿಲ್ಲವೆಂದವರ ನೇತ್ರ ಕಾನೂನು ಜ್ಯಾರಿಗೆ ಮಾಡಿ ಆಸ್ತಿ ಏಲಂಮಾಡಿ ತೆರಿಗೆ ವಸೂಲು ಮಾಡಿದ್ದಾರೆ. ಸರಕಾರ ತೆರಿಗೆ ವಸೂಲು ಮಾಡುವುದು ಕೂಡದೆಂದು ಹೇಳುವುದು ಸಂಗತವಲ್ಲ. ಆದರೆ ಕರಭಾರ ಮೊಕ್ಕ ಸರಿಯಲ್ಲ ಸರಕಾರ ಕಂ

(೮ನೆಯ ಪುಟ ನೋಡಿ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58½% ಶುದ್ಧ ಪುತ್ತಳಿ ಚಿನ್ನ ಇರುತ್ತದೆ
ಬೀಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಬಳಿ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸು ಸಿಕ್ಕಿರುತ್ತದೆ.
ಮಾಮೂಲಿ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.
ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ
ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/
ಉತ್ತಮ ರೂ.9/-
P. Devee & Co. (N. J.) Calcutta —40-

REGD. No. B. G. 176
LICENCE No. 31
Licensed to Post without Prepayment

ದಾಯವನ್ನು ಹೇರುವಾಗ ಯಾ ಹೊರಿಸುವಾಗ ಜನತೆಯ ಸಂಕಷ್ಟಗಳನ್ನೂ ಜೆನ್ನಾಗಿ ಪರಿಶೀಲಿಸಬೇಕು. ಜನತೆ ಅದನ್ನು ಸ್ವೀಕರಿಸಿ ಕೊಡಬಲ್ಲುದೇ ಎಂಬುದನ್ನು ನೋಡಿ ಆ ನೆಲೆಲೆ ನಿರ್ಧರಿಸಬೇಕು. ಇದೇ ನಿಲ್ಲದೆ ಕಾನೂನು ಮಾಡಿ ಜಾರಿಗೆ ತಂದರೆ ದೇಶದ ಪ್ರಗತಿಗೂ ತುಂಬಾ ಕಂಟಕ ಎಂಬುದು ನಿತ್ಯ ಸತ್ಯ. ಇದಕ್ಕೆ ಇತಿಹಾಸದ ಉದಾಹರಣೆಗಳನ್ನು ನಾವು ಇತಿಹಾಸದ ಉದಾಹರಣೆಗಳಿಂದ ತಿಳಿಯ ಬಹುದು ನಮ್ಮ ಆರ್ಥಿಕ ಮಂತ್ರಿ ಶ್ರೀ ಮುರಾರ್ಜಿ ಯವರಿಗೆ "ಬಟ್ಟರೆ ತಮ್ಮ ಯೋಜನೆಗಳನ್ನು ಪೂರೈಸಲು ಹಣಬೇಕಾಗಿದೆ. ಅದಕ್ಕೆ ಆ ತೆರಿಗೆ ಈ ತೆರಿಗೆ ಎಂದು ಹೆಚ್ಚಿಸುತ್ತಿದ್ದಾರೆ. ಪರದೇಶದ ಸಾಲದ ಹೊರೆ ಇನ್ನೂ ವೃದ್ಧಿಸುತ್ತಾ ಇದೆ. ನನ್ನ ಸ್ಥಿತಿ ಈ ರೀತಿ ಕ್ಷೀಣಿಸುತ್ತಾ ಇರುವುದು ಪ್ರಜಾ ಸ್ವಭುತ್ವವ ಲಕ್ಷಣವೇ? ವರ್ಷದಿಂದ ವರ್ಷಕ್ಕೆ ಈ ರೀತಿ ತೆರಿಗೆ ಹೆಚ್ಚುತ್ತ ಹೋಗುತ್ತ ದೇರದ ಬಡ ಜನತೆಯ ಸ್ಥಿತಿ ನಿಜಕ್ಕೂ ಕೊನೆಗೆ ಚಿಂತಾಜನಕವಾಗುವುದರಲ್ಲಿ ಏನೇನೂ ಸಂಶಯವಿಲ್ಲ. ಈ ಬಗ್ಗೆ ಇವಾಬ್ದಾರಿ ಹೊತ್ತ ನಮ್ಮ ಸರಕಾರಿ ಅಧಿಕಾರಿಗಳು ಮಂತ್ರಿ ಮಹೋದಯರು ತೀವ್ರವಾಗಿ ಆಲೋಚಿಸಿ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕಾಗಿ ಇಂದು ಜನತೆ ಆಡಿಕೊಳ್ಳುತ್ತಿದೆ.

ಜನತಾ ಸಂಪರ್ಕ

ಎಂತಿದ್ದರೂ ಎಂದಿನ ತನಕ ನಮ್ಮ ಸರಕಾರದ ಅಧಿಕಾರಿ ಒಂಥಗಳು ನಾನಾ ಮೂಲೆಕಡಾ ಜನತೆಯೊಡನೆ ಯೋಗ್ಯ ಸಂಬಂಧವನ್ನಿರಿಸಿಕೊಳ್ಳಲಿದಿದ್ದಿಲ್ಲೋ ಅಂದಿನ ತನಕ ಈ ಪ್ರಜಾಸ್ವಭುತ್ವದಿಂದ ಯಥಾರ್ಥವಾಗಿ ನೈದ್ಧಾಂತಿಕವಾಗಿ ಅದು ಒಳ್ಳೆಯದೇ ಅದೂ ದೇಶದಲ್ಲಿ ಆಂತರಿಕ ಶಾಂತಿ—ಸಮೃದ್ಧಿ ನೆಲಸುವುದು ಸಾಧ್ಯವಿಲ್ಲದ ವಿಚಾರವಾಗಿದೆ. ಇಂದು ನಾವೂನು ಗಳ ದರ ಏರಿಕೆ—ಕರಭಾರ ಅಧಿಕಾರಿಗಳ ಸ್ವೇಚ್ಛಾಚಾರ ಇದರಿಂದ ದೇಶದಲ್ಲಾಗುತ್ತಿರುವ ಘೋರ್ಮಟು ಬಡ ಜನತೆ ಅನುಸರಿಸುತ್ತಿರುವ ಕಷ್ಟ ಸಹನಾತೀತವಾಗಿದೆ. ಯಾವುದಕ್ಕೂ ಒಂದು ಇತಿಮಿತಿಯಿರಬೇಕು. ಅತಿಯಲ್ಲವಾದರೆ ಬಹು ಕಷ್ಟವೇ ಸರಿ. ಹೌದು ಇಂದು ತುರ್ತುಪರಿಸ್ಥಿತಿ ಎಂದು ತೆರಿಗೆ ಹೆಚ್ಚಿಸಿ, ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣ ಕೂಡಿಸಿ—ನಾವೂನುಗಳ ದರ ಏರಿಸಿ, ಜನತೆಗೊದಗಿಸುವ ಸೌಲತ್ತುಗಳಲ್ಲಿ ಕಡಿದು ಬಿಟ್ಟರೆ ಜನತೆ ಸಾಯುವ ರೀತಿಯದರೂ ಬದುಕ ಬೇಡವೇ? ಇಂದು ರಾಷ್ಟ್ರಕಾಗಿ ಬಂದಿರುವ ಸಂಧಿಗ್ಧ ಪರಿಸ್ಥಿತಿಯಲ್ಲಿ ಎಲ್ಲರೂ ಸರ್ವತೆರದ ತ್ಯಾಗಕ್ಕೆ ಸಿದ್ಧರಾಗಬೇಕಾಗಿರುವುದು ಅತ್ಯಗತ್ಯ ವಾದರೂ ಅದರ ನೆಪಹಿಡಿದು ಸರಕಾರ—ಸರಕಾರದ ಜವಾಬ್ದಾರಿ ಹೊತ್ತ ಮಂತ್ರಿಗಳು ಜನರನ್ನು ಸದಬಡಿಯುವುದು ಕರವಲ್ಲ. ಏನಾದರೊಂದು ಯೋಜನೆ ಸಿದ್ಧಗೊಳಿಸಿ ಹಣದ ಪೂರೈಕೆಗಾಗಿ ಜನತೆಯ ಮೇಲೆ ತೆರಿಗೆ ಹೊರಿಸುವಂತಹ ಇಂದಿನ ಅಸಹನೀಯಮನೋವೃತ್ತಿ ಬದಲಾಗಿ ಜನತೆಯ ಜೀವನ ಮಟ್ಟ—ಆರ್ಥಿಕಸ್ಥಿತಿ ಇವುಗಳನ್ನು ನೋಡಿ ತೆರಿಗೆ ಯಾಕುವಂಥದ್ದು ಪ್ರಯೋಗಕ್ಕೆ ಬರಬೇಕು. ಅಂತಾದರೆ ಮಾತ್ರ ಜನತೆ ಸುಖ ಭಾಯೆಯಲ್ಲಿ ಶಾಂತಿ ತುಸು ಮಟ್ಟಿಗಾದರೂ ಅನುಭವಿಸೀತು. ಆದುದರಿಂದ ಡಾ। ಮಾಧವ ಪೈ ಗಳು ಹೇಳಿದಂತೆ ತೆರಿಗೆಯಿಲ್ಲದ ಅಧಿಕ ನೌಕರ್ಯ ಸವಲತ್ತುಗಳಿರುವ ಸರಕಾರ ರಾಜ್ಯವನ್ನಿಂದು ನಾವು ನಿರೀಕ್ಷಿಸಿದರೆ ಅದು ಸರ್ವಥಾ ಸರಿ.

—ಶ್ರೀ ರಾಮತನಯ

ಉತ್ತರ ಪ್ರದೇಶದ ತೀವ್ರ ಬಿಕ್ಕಟ್ಟು

(ನಿನ್ನೆ ಮುಟ್ಟಿದಿಂದ)

ಲದ ಸದಸ್ಯರಾದ ಶ್ರೀ ಅಲಗುರಾಯಿ ಶಾಸ್ತ್ರಿಗಳು. ಶ್ರೀ ಶಾಸ್ತ್ರಿಗಳು ಹಿಂದಿನ ಮುಖ್ಯ ಮಂತ್ರಿಗಳಾದ ಡಾ। ಸಂಪೂರ್ಣಾನಂದರ ಮಂತ್ರಿಮಂಡಲದವರೆದ್ದು ಕಾರಣಾಂತರಶಾತ್ ಇವರ ಮಂತ್ರಿಮಂಡಲಕ್ಕೂ ಸೇರಿದರೆ. ಗುಪ್ತರೊಡನೆ ಇವರ ಭಿನ್ನಾಭಿಪ್ರಾಯವಿದ್ದರೂ ಎಂದೂ ಇವರ ಮೂತಿಗೆ ಬೆಲೆ ಕೊಡದಿರಲಿಲ್ಲ. ಆದರೆ ಯಾವಾಗ ಮಾಡು ಬೀಳಲಿಲ್ಲ, ಗೋಡೆ ಹತ್ತಲಿಲ್ಲ ಎಂದು ಕಾಯುತ್ತಿದ್ದ ಅಡಿನಂತೆ ಹೆವಣಿಸುತ್ತಿದ್ದ ಶ್ರೀ ಗುಪ್ತರು ತನ್ನ ಸೋಲಿಗೆ ಶ್ರೀ ಶಾಸ್ತ್ರಿಯವರು ಮುಖ್ಯ ಕಾರಣರೆಂದು ತಿಳಿದು ಅವರ ಮೇಲೆ ತನ್ನ ಇತರ ಸದುದ್ಯೋಗಿಗಳಗೊಡಗೂಡಿ ಸತ್ಯನ್ವೇಷಣೆ—ಸುಳ್ಳೋ ದೇವರೇ ಬಲ್ಲ—ಆರೋಪಣ ಮಾಡತೊಡಗಿದರು. ಅವರು ತಮ್ಮ ಕೆಲಸ ಮಾಡುತ್ತಿಲ್ಲವೆಂದೂ ಮಂತ್ರಿ ಮಂಡಲದಲ್ಲೇ ಬಿರುಕು ಉಂಟು ಮಾಡುತ್ತಿರುವರೆಂದೂ ಆರೋಪಗಳ ಮೂಲೆ ಮಾಡಿದರು. ಆದನ್ನು ಸಾಧಿಸಲು ವಿಧಾನ ಸಭೆಯ ಬಹುಮತ ಗಳಿಸಿದರು. ಘಟನೆಯ ಕಲಮೊಂದನ್ನು ಆದರ್ಶವಾಗಿಟ್ಟುಕೊಂಡರು. ಮುಂದೆ ಕಾಂಗ್ರೆಸ್ಸಿನ ಹೈಕಮಾಂಡಿನೊಡನೆ ತಿಪ್ಪರಲಾಗ ಮಾಡಲು ಹೇಳಿದರು. ಆದರೆ ಆಗ ಮೂತ್ರ ಅವರ ಆಟ ನಾಗಲಿಲ್ಲ.

ಹೈಕಮಾಂಡಿನ ತೀರ್ಪು

ಈ ವಿಚಾರವನ್ನು ಜೆನ್ನಾಗಿ ಪರಿಶೀಲಿಸಲೆಂದು ಕಾಂಗ್ರೆಸ್ಸು ಹೈಕಮಾಂಡು ಶ್ರೀ ಯು ಎನ್. ಧೇಬರ್‌ರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ಕಳುಹಿಸಿದಾಗ ಅವರೂ ಶ್ರೀ ಗುಪ್ತರ ಮೊಂಡುತನದ ವಾದಕ್ಕೆ ಮೊರುಜೋಗದಾದರು. ಶ್ರೀ ಶಾಸ್ತ್ರಿಯವರೂ ಈ ಮಧ್ಯದಲ್ಲಿ ಹೈಕಮಾಂಡಿಗೆ ದೂರಿತ್ತು ನ್ಯಾಯದೊರಕಿಸಿಕೊಡ ಬೇಕೆಂದಾಗ ಅದು ಕರ್ತವ್ಯವೆಯೆಡೆಗಿಸಿಕ್ಕಂತಾಗಿ ರಾಜಿನಾಮೆಕೊಡುವುದು ಬೇಡ ಎಂದೇ ಹೇಳತು. ಇದರಿಂದಬೆಸ್ತಾದ ಶ್ರೀ ಗುಪ್ತಾರವರು ಪುನಃ ರಾಜ್ಯಪಾಲರೊಡನೆ—ಹೈಕಮಾಂಡಿನೊಡನೆ ಮಾತುಕತೆಯೊಡಿ ರಾಜಿನಾಮೆಕೊಡುವಂತೆ ಶ್ರೀ ಶಾಸ್ತ್ರಿಯವರನ್ನು ಒತ್ತಾಯಿಸಿದರೂ ಅವರು ಒಪ್ಪಲಿಲ್ಲ. ಇದನ್ನು ಕಂಡ ಹೈಕಮಾಂಡು ಶ್ರೀ ಶಾಸ್ತ್ರಿಯವರು ರಾಜಿನಾಮೆಕೊಡುವಂತೆ ಅವರನ್ನು ಕೇಳಿಕೊಳ್ಳಬಾರದು ಎಂದು ತೀರ್ಮಾನಿಸಿತ್ತಾಗ ಶ್ರೀ ಗುಪ್ತಾರವರು ಕಿಡಿಕಿಡಿಯಾದರೂ ಬಂದ ಕೋಪವನ್ನು ಆತ್ಮ ಗೌರವ ವುಳಿಸಿಕೊಳ್ಳರಿಸಿಕೊಳ್ಳಲು ನುಂಗಿಕೊಂಡರು.

ಪರಿಹಾರವೇನು ?

ಏಗಿದ್ದರೂ ಮಂತ್ರಿಮಂಡಲದಲ್ಲಿ ಉಂಟಾದ ಈ ತೆರನ ದಯೂವಾದೀ—ಕಲಹ ಯಾರಾದರೊಬ್ಬರ ಬಿಡುಗಡೆಯಿಂದ ಹೊರತು ಪರಿಹಾರ ವಾಗುವುದು ಕಠಿಣವೆಂದು ರಾಜಕೀಯ ವರ್ತುಲಗಳು ಅಭಿಪ್ರಾಯಪಟ್ಟಿವೆ. ಶ್ರೀ ಗುಪ್ತರ ಹಟಕ್ಕೆ ತಕ್ಕಂತೆ ಶ್ರೀ ಶಾಸ್ತ್ರಿಯವರೂ ಹಠತೊಟ್ಟಿದ್ದಾರೆ. ಆದುದರಿಂದ ಪರಿಸ್ಥಿತಿ ಏನೆಂದು ಹೇಳಲು ಸಾಧ್ಯವಿಲ್ಲ. ಆದರೆ ವಿಧಾನ ಸಭೆಯ ಬಹುಮತ ಶ್ರೀ ಶಾಸ್ತ್ರಿಯವರ ನಿರ್ಗಮನವಾಗ ಬೇಕೆಂದು ಹೇಳಿದರೆ, ರಾಜ್ಯದ ಹಿತದೃಷ್ಟಿಯಿಂದ ಅವರು ರಾಜಿನಾಮೆಕೊಡುವುದು ವಿಹಿತವೆಂದು ಹೇಳಬಹುದು ಅನ್ಯಥಾ ಕಾಂಗ್ರೆಸ್ ಹೈಕಮಾಂಡಿನ ಮುಂದಿನ ತೀರ್ಮಾನಕ್ಕೆ ತಕ್ಕಂತೆ ಮಾಡುವುದೇ ಇದಕ್ಕೆ ತಕ್ಕ ಪರಿಹಾರವೆಂದು ತಾಳಬಹುದು. ಮಾತುಕತೆಗಳು ಭರದಿಂದ ನಡೆಗುತ್ತಿವೆ. ಫಲಶ್ರುತಿ ಏನೆಂದು ನಾವೆಲ್ಲ ಕುತೂಹಲದಿಂದ ಕಾದು ನೋಡಬೇಕಾಗಿದೆ.

—ಶ್ರೀರಾಮತನಯ."

ಪ್ರತ್ತೂರು ಡಿ. ಮುನ್ಸೀಫರ ಕೋರ್ಟಿನಲ್ಲಿ
S. E. P. 110/1963
S. C. 195/1959.
ಸಲ್ಲಿಸಿದ ರಾಜಿ ಪಟ್ಟಿಯಲ್ಲಿ
—ಅರ್ಜಿದಾರ D. H
ಆರಾಯ ನಾಡ —ಎದ್ರಿ J. D

ಎದ್ರಿ ಆರಾಯ ನಾಡ, ತಿಪ್ಪಣ ನಾಡರ ಮಗ ಹೆಬ್ಬಗಿಗ ತಾಲೂಕು ನಿಟ್ಟೆ ಗ್ರಾಮದ ಪಡಕರ ಬಾಲ ಎಂಬಲ್ಲಿ ಇವರಿಗೆ

ಮೇಲ್ಕಂಡ ತಿಕ್ಕೆ ಅಮಲ್ದಾರಿಯಲ್ಲಿ ಬಂದ ಮೂಲ್ಕಿ ತಾರಂಬಳ್ಳಿ ಹಿಡುವಳಿಯಲ್ಲಿ ಜೆಲಿಗೆ ರಿಪಾಸಿಸ ಬೇಕೆಂದು ಮಾಡಿದ ಮೇಲಿನ ಅರ್ಜಿಯು ತಾ. 25-7-1963ಕ್ಕೆ ವ್ಯಾದೆಯು ನಿತ್ತಿದೆ. ಸದ್ರಿ ಅಮಲ್ದಾರಿಯು ಸಮ್ಮನ್ಸನ್ನು ತಾರಂಬಳ್ಳಿ ಹಿಡುವಳಿಯಲ್ಲಿ ಜೆಲಿಗೆ ರವಾನಿಸಲಾಗಿದೆಂದು ಮೇಲ್ಕಂಡ ವ್ಯಾದೆಗೆ ಸದ್ರಿ ಕೋರ್ಟಿಗೆ ಮುಂದೆ ಬೆಳಿಗೆ ಗಂಟೆ 11ಕ್ಕೆ ಹಾಜರ್ಯಾಗಿ, ನ್ಯಾಯವಾದ ಸಬಬು ತೋರಿಸದಿದ್ದಲ್ಲಿ ಏಕಮ್ಮನ್ಸು ತಿಸ್ಮಾ ಮಾಡಿ ಮುಂದ ರಿಸಲಾಗುವುದೆಂದು ಕೋರ್ಟಿನ ಹುಕುಂ ಕ್ರಮ ನಮಗೆ ಈ ಮೂಲ್ಕ ತಿಳಿಸೋಣಾಗ್ಯದೆ.

N. Subramanyam
Advocate for Petr.

ಪೆರ್ಯಾಂ ಪ್ರತ್ತೂರು, ತಾ. 8-7-1963

ಅತ್ಯುತ್ತಮ ಸೇವೆಗಾಗಿ ಸಮಾವೇಶ.....

ಕನ್ನಿಕಾ ಪರಮೇಶ್ವರಿ ಬ್ಯಾಂಕ್ ☆ ಸಿಂಡಿಕೇಟ್ ಬ್ಯಾಂಕ್

ದಿ ಕೊಯಮುತ್ತೂರು ಕನ್ನಿಕಾ ಪರಮೇಶ್ವರಿ ಬ್ಯಾಂಕ್, ಲಿಮಿಟೆಡ್, ಅವರ ಬ್ಯಾಂಕಿಂಗ್ ವ್ಯವಹಾರವನ್ನು ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇವರು ತೀರ್ಥದಲ್ಲಿಯೇ ವಹಿಸಿಕೊಳ್ಳುವರು. ಸಿಂಡಿಕೇಟ್ ಬ್ಯಾಂಕಿನೊಡನೆ ಈ ವರೆಗೆ ಸೇರ್ಪಡೆಗೊಂಡ ಬ್ಯಾಂಕುಗಳಲ್ಲಿ ಇದು ಹದಿನೈದನೆಯದು. ನಮ್ಮ ಸುಭದ್ರ, ಸಮರ್ಥ ಹಾಗೂ ಸೌಜನ್ಯ ಶೀಲ ಸೇವೆಯನ್ನು ಕನ್ನಿಕಾ ಪರಮೇಶ್ವರಿ ಬ್ಯಾಂಕಿನ ಗಿರಾಕಿಗಳೂ ಪಡೆಯುವರೆಂಬ ಸದಾಶಯ ನಮಗಿದೆ.

ಡಾ। ಬಿ. ಎಂ. ಎ. ಪೈ
ಚೇರ್‌ಮ್ಯಾನ್

ಟಿ. ಎ. ಪೈ
ಮ್ಯಾನೇಜಿಂಗ್ ಡೈರೆಕ್ಟರ್

ಸಿಂಡಿಕೇಟ್ ಬ್ಯಾಂಕ್

ದಿ ಕೆನೆರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಒಟ್ಟು ಶಾಖೆಗಳು: 184. ಚಲಾವಣಾ ನಿಧಿ 40 ಕೋಟಿಗೂ ಮಿಕ್ಕಿದೆ

ಸಮಾನ ಸೇವೆ - . - - ಸರಿಯಾದ ಭದ್ರತೆ

ಹೊಸ ಪುಸ್ತಕ—

ನಚಿಕೇತರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಜಯಂಬಿಕಾ,

ನವಯುಗ ಪ್ರೆಸ್, ಉಡುಪಿ.

Edited, Printed & Published by K. H.Shetty, at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನೆ ಪೈಸೆ

Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6—75

Vol. 42 No. 47 | ಉಡುಪಿ, 1—8—1963 ಗುರುವಾರ | ಸಂಪುಟ ೪೨ ಸಂಚಿಕೆ ೪೭

ಸಮ್ಮ
ರಾಷ್ಟ್ರೀಯ
ರಕ್ಷಣಾನಿಧಿ
ಉ ದಾ
ಸ ಹಾ ಯ
ಸಲ್ಲಿಸಿ

ಪ್ರಾಪಂಚಿಕ ಬಿಕ್ಕಟ್ಟಿನ ವೇಳೆ

ಅಣ್ವಸ್ತ್ರ ನಿಷೇಧ ಒಡಂಬಡಿಕೆ

ಇತ್ತೀಚಿಗೆ ನೋಸ್ಕೋದಲ್ಲಾದ ಅಮೇರಿಕ, ಬ್ರಿಟನು, ಸೋವಿಯಟ್ ರಶ್ಯಗಳ ನಡುವೆ ಅಣ್ವಸ್ತ್ರ ನಿಷೇಧದ ಸಂಬಂಧದಲ್ಲಿ ಆದ ಅಶಿಂಕ ಒಪ್ಪಂದವು ನಿಜಕ್ಕೂ ಆತ್ಯಮೂಲ್ಯವಂದುದು. ವಾತಾವರಣ, ಬಾಹ್ಯಾಂತರಿಕ್ಷ ಮತ್ತು ಸಮುದ್ರದಲ್ಲಿ ಅಣು ಆಯುಧಗಳ ಪರೀಕ್ಷಾರ್ಥ ಪ್ರಯೋಗ ನಡೆಸುವುದನ್ನು ಬಿಡಬೇಕೆಂದು ಇದೀಗ ಜಗತ್ತಿನ ಮೂರು ಮಹಾ ರಾಷ್ಟ್ರಗಳಲ್ಲಿ ಒಮ್ಮತವಾಗಿದೆ. ನೆಲದ ಡಿಯ ಸ್ಫೋಟಗಳು ಮಾತ್ರ ಈ ಒಡಂಬಡಿಕೆಯಲ್ಲಿ ಬಂದಿಲ್ಲ. ಅಣುಜೊಂಬು ಸ್ಫೋಟಗಳ ಕುರಿತು ಈ ಹಿಂದೆಯೇ ಜಾಗತಿಕ ಜನಮತವು ಅತೀವ ಕಳವಳವನ್ನು ವ್ಯಕ್ತ ಪಡಿಸಿದ್ದರೂ ಪ್ರಮುಖ ರಾಷ್ಟ್ರಗಳು ಈ ಮಾದರಿಯ ಒಂದು ಒಡಂಬಡಿಕೆಗೆ ಬಂದುದು ಇದೇ ಮೊದಲಬಾರಿ. ನೋಸ್ಕೋ ಅಣ್ವಸ್ತ್ರ ನಿಷೇಧರಂಬಂಧಿ ಮಾತುಕತೆಗಳ ಫಲಸ್ವರೂಪವಾಗಿ ಇಂಥ ಒಂದು ಒಡಂಬಡಿಕೆ ಆಗ ಬಹುದೆಂದು ಮೊದಲೇ ನಿರೀಕ್ಷಿಸಲಾಗಿತ್ತು. ಆದರೆ ಎರಡು ವಾಳಯಗಳ ನಡುವಿನ ವಿವಾದಗಳ ಕುರಿತು ನೀಕ್ಷಿಸಿದ ಎಷ್ಟೋ ವಿಷಯಗಳು ಸಂದರ್ಭ ಬಂದಾಗ ಹುಸಿಯಾದ ನಿದರ್ಶನಗಳಿವೆ. ಆದರೆ ಈ ಬಾರಿ ಹಾಗಾಗಲಿಲ್ಲವೆಂಬುದು ನಿಜಕ್ಕೂ ಒಂದು ಸಮಾಧಾನ ಪಡುವ ವಿಷಯವಾಗಿದೆ. ಈ ಮೂಲಕ ಅಣುಬಾಂಬು ಸ್ಫೋಟಗಳು ನಿಲ್ಲುವುದರಿಂದಾಗುವ ವಾಸ್ತವಿಕ ಪ್ರಯೋಜನಕ್ಕಿಂತಲೂ ಎರಡು ವಾಳಯಗಳ ಪ್ರಮುಖ ರಾಷ್ಟ್ರಗಳೊಳಗೆ ಈ ತೆರನ ಒಮ್ಮತವಾಗುವುದೆಂದು ಕಂಡುಬಂದದ್ದು ನಿಜಕ್ಕೂ ಒಂದು ದೊಡ್ಡ ಪ್ರತಿಫಲನೆನ್ನಬೇಕು. ನೋಸ್ಕೋ ಚರ್ಚೆಯ ವೇಳೆ ಸಂಬಂಧಪಟ್ಟ ರಾಷ್ಟ್ರಗಳು ತೋರಿಸಿದ ಔದಾರ್ಯ ಮತ್ತು ಅಸಕ್ತಿಯು ನಿಜಕ್ಕೂ ಶ್ಲಾಘ್ಯವಾಗಿವೆ. ಇದರಲ್ಲಿ ನಿದರ್ಶನಕ್ಕಾಗಿ ನಾವು ರಶ್ಯ "ನೇಟೊ ಮತ್ತು ವಾರ್ಸಾ" ಕೂಟಗಳ ನಡುವೆ ಅನಾಕ್ರಮಣ ಒಪ್ಪಂದವನ್ನು ಈ ಅಣ್ವಸ್ತ್ರ ನಿಷೇಧ ದೊಂದಿಗೇನೇ ಮಾಡಬೇಕೆಂದು ಸೂಚಿಸಿದ್ದರೂ, ಆ ಬಗ್ಗೆ ಅದು ಅವಸರಾಗ್ರಹ ಪಡದಿದ್ದುದನ್ನು ಗಮನಿಸುವಾಗ ಜಗತ್ತಿನಲ್ಲಿ ಶಾಂತಿಯನ್ನು ನೆಲೆಗೊಳಿಸಲು ಮಹತ್ತರವಾದ ವ್ಯಾಪಾರಿಕ ಪ್ರಮಾದ ಆಗಾಗದಿರಲಾರದು. ವಿಶ್ವದ ಶಾಂತಿ-ಭದ್ರತೆಗೆ ಒಂದು ಪುಷ್ಟತ್ತರ ಆವಕಾಶವನ್ನು ಒದಗಿಸಿದ ಈ ಮೂತುಕತೆ ನಿಜಕ್ಕೂ ಶಾಂತಿ ಸನ್ನಾಹದ ಒಂದು ಆನೋಘ ಸೀರಿಕೆಯಾಗಿದ್ದು "ಆತಿಮುಖ್ಯ ಕೆಲಸ ವೊಂದು ಈಗ ಕೊನೆಗೊಂಡಂತಾಗಿದೆ ಎಂದರೆ ಹೆಚ್ಚಾಗಲಾರದು.

ಶೀತ ಸಮರಕ್ಕೆ ಪರಿಹಾರ

ಜಾಗತಿಕ ಯುದ್ಧದ ಬಳಿಕ ಅಸ್ಥೀರ ಲಯದ ವಾತಾವರಣದಲ್ಲಿ ಶಾಂತಿ ಒಪ್ಪಂದವನ್ನು ಬಿಟ್ಟರೆ ಪೂರ್ವ ಪಶ್ಚಿಮಗಳೊಳಗೆ ಆಗುತ್ತಿರುವ ಒಪ್ಪಂದಗಳಲ್ಲಿ ಇದೇ ಪ್ರಥಮ ಪ್ರಧಾನ ಒಪ್ಪಂದವಾಗಿದೆ. ಈ ತೆರನ ಒಂದು ಒಪ್ಪಂದಕ್ಕೆ ಜಗತ್ತಿನ ಎಲ್ಲಾ ರಾಷ್ಟ್ರಗಳು ಮುಕ್ತ ಕಂಠದಿಂದ ತಮ್ಮ ಬೆಂಬಲವನ್ನು ಹಾರ್ದಿಕ ಸ್ವಾಗತವನ್ನು ಬಯಸಿವೆ. ಇಂದಿನ ಮುಂದಿನ ಜನತಾಗಂದ ಮೇಲೆ ಭೀಕರ ಪರಿಣಾಮ ಉಂಟು ಮಾಡುವ, ವಾತಾವರಣವನ್ನು ಕಲುಷಿತಗೊಳಿಸುವ ಈ ಅಣ್ವಸ್ತ್ರ ಪ್ರಯೋಗವನ್ನು ನಿಷೇಧಿಸಬೇಕೆಂದು ಸರ್ವ ಪ್ರಥಮವಾಗಿ ಕರೆಯಿತ್ತವರು ಭಾರತದ ಪ್ರಧಾನಿ ಪಂಡಿತ ನೆಹರೂರವರು. ಗಣ್ಯರಿಂದ ಸೋವಿಯತ್ ರಷ್ಯಾವು ವಿಶ್ವ ಸಂಸ್ಥೆಯಲ್ಲಿ ಅಣ್ವಸ್ತ್ರವನ್ನು ನಿಷೇಧಿಸಬೇಕೆಂದು ಪ್ರಯತ್ನಿಸುತ್ತಾ ಬಂದಿದೆ. ಆದರೆ ಗಣಂರಲ್ಲಿ ರಹಸ್ಯದ ಬಳಿ ಅಣ್ವಸ್ತ್ರಗಳಲಿಲ್ಲ. ಇದರಿಂದ ತಮಗೂ ಪ್ರಯೋಜನವಿದೆಯೆಂದು ವಾಶ್ಚಾತ್ಯರು ಬಗೆದಿದ್ದರು.

ಭಾರತದ ಸಾಧನೆ

ಅಣು-ವಿಕೀರ್ಣ ಭಸ್ಮವಾತದಿಂದ ಹಾನಿಕರ ಪ್ರಯೋಗ ಆಗುವುದೆಂಬುದನ್ನು ಮಾಸ್ಕಾದಲ್ಲಿ ಅಣ್ವಸ್ತ್ರ ಪೆಚ್ಚಾದಲ್ಲಿ—ರಾಷ್ಟ್ರಸ್ತ್ರ ಸಂಗ್ರಹ ಪೆಚ್ಚಾದಲ್ಲಿ ಜಗತ್ತಿಗೇ ಅಪಾಯವಿದೆ ಎಂದು ಭಾರತವು ವಾದಿಸಿ ಗಣ್ಯರಲ್ಲಿ ವಿಶ್ವ ಸಂಸ್ಥೆಯಲ್ಲಿ ಒಂದು ರೆಸಾವನ್ನು ಮಂಡಿಸಿತ್ತು. ಭಾರತದ ಈ ರೆಸಾವು ಒಂದುತಿದ್ದುಪಡಿಯೊಂದಿಗೆ ಮೊತ್ತಮೊದಲು ವಿಶ್ವಸಂಸ್ಥೆಯಲ್ಲಿ ಏಂಜಸರಾಗಿ ದಾಖಲಾಯಿತು. ಅಣ್ವಸ್ತ್ರಗಳ ಪ್ರಾಯೋಗಿಕ ಸ್ಫೋಟಗಳನ್ನು ಆವಾಸತುಗಳಿಗಷ್ಟಬೇಕೆಂದೂ, ಅಣ್ವಸ್ತ್ರ ಪ್ರಯೋಗಗಳನ್ನು ನಿಷೇಧಿಸಬೇಕೆಂದೂ ಭಾರತವು ಪ್ರಮುಖ ಅಣ್ವಸ್ತ್ರ ರಾಷ್ಟ್ರಗಳನ್ನು ಒತ್ತಾಯಿಸುವುದರಲ್ಲಿ ವಿಶ್ವಸಂಸ್ಥೆಯಲ್ಲಿ ಅಗ್ರ ಪಾತ್ರ ವಹಿಸಿತ್ತು. ಜಗತ್ತಿನ ಶಾಂತಿ ಭದ್ರತೆಗಳಿಗೆ ಈ ಅಣ್ವಸ್ತ್ರಗಳಿಂದ ಬಲವಾದ ಪೆಟ್ಟಿದೆಯೆಂದರಿತ ಬಳಿಕವೇ ಭಾರತ ಈ ರೀತಿಯ ನಿಲುವನ್ನು ತಾಳಿತ್ತು.

ಗಾಡಿ ತಪ್ಪಿತು

ಭಾರತದ ಈ ನಿಲುವಿಗೆ ಅಮೇರಿಕ-ಬ್ರಿಟನ್—ರಷ್ಯಾಗಳು ಪ್ರಬಲ ಪ್ರತಿಮತಿಯನ್ನಿತ್ತಿದ್ದರೂ, ಈ ಬಗ್ಗೆ ಅವುಗಳೊಳಗೆ ಎಂದೂ ಸಫಲನಾದ ಮಾತುಕತೆಯೂಗಲಿಲ್ಲ. ಜಿನೇವ ನಿಶ್ಶಸ್ತ್ರೀಕರಣ ಮಾತುಕತೆಯ ವೇಳೆ ಈ ಬಗ್ಗೆ ಯೂವುದೇ ಒಂದು ಪ್ರಗತಿ ಆಗದಿದ್ದುದು ಹೆಚ್ಚಿನ ರಾಷ್ಟ್ರಗಳಿಗೆ ತುಂಬಾ ನಿರಾಶೆಯನ್ನುಂಟು ಮಾಡಿತ್ತು. ಕೆಲವು ವಾರಗಳ ಹಿಂದೆ ಯುಕ್ತ ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿ ಶ್ರೀ ಧಾಂಟರು ತನ್ನೊಂದು ಹೇಳಿಕೆಯಲ್ಲಿ "ಗಾಡಿ ತಪ್ಪಿತು" ಎಂದು ಅಭಿಪ್ರಾಯ ಪಟ್ಟಾಗ ಆ ನಿರಾಶೆಯು ಪುನಃ ಪ್ರತಿಬಿಂಬಿಸಲ್ಪಟ್ಟಿತು ಆದರೆ ಇತ್ತೀಚೆಗೆ ಅಧ್ಯಕ್ಷ ಕೆನೆಡಿಯವರು ಕೊಲಂಬಿಯದಲ್ಲಿ ಮಾಡಿದ ಭಾಷಣದಿಂದ, ಕ್ರುಶ್ಚೇವರು ಎರಿಗನೆಸಲ್ಲಿ ಹೇಳಿದ ವಿಚಾರದಿಂದ ಆಶೆಯು ಗತ ಅನುಭವನ್ನು ನೆನೆದು ಒಯ್ಯನೆ ತಲೆಎತ್ತಿತ.

ಅಮೆರಿಕಾ-ರಶ್ಯಾ ಮೈತ್ರಿ

ಈ ಅಣ್ವಸ್ತ್ರಗಳ ಭೀತಿಗಿಂತಲೂ ಜಗತ್ತಿನ ಪ್ರಧಾನ ಶಕ್ತಿ ಘಟಕಗಳಾದ ರಶ್ಯ ಅಮೆರಿಕಗಳ ಸಂಬಂಧ ಅನ್ಯರಾಷ್ಟ್ರಗಳ ಪ್ರಾಬೇಧದಿಂದ ಹಾಳಾದರೆ ಪರಿಸ್ಥಿತಿ ವಿಕೋಪಕ್ಕೆಡೆಗೆದುವುದೇದು ಜಗತ್ತೇ ಭೀತಿ ಪಟ್ಟಿತ್ತು. ಆದುದರಿಂದ ಇಂದಾದುಂಥ ಒಪ್ಪಂದ ಒಂದನ್ನು ಆದಷ್ಟು ಬೇಗನೆ ಮಾಡಿಕೊಳ್ಳ ಬೇಕೆಂಬ ಆಸಕ್ತಿ ಅವುಗಳಲ್ಲಿತ್ತು. ಆದರೆ ಈ ಎರಡು ಮಹಾರಾಷ್ಟ್ರಗಳ ಮೈತ್ರಿ—ವೈಪರೀತ್ಯಗಳು ಸದಾ ಉಳಿಯಲಾರವು- ತಮ್ಮು ಬಣ್ಣಗಳೊಳಗೇ ಇರುವ ಅವುಗಳ ರಾಷ್ಟ್ರಗಳೇ ಅವುಗಳ ಮೇಲೆ ಕೈಯೂಡಲು ಪ್ರಮುಖವಾಗಬಹುದು ಎಂಬುದು ರಶ್ಯಾ—ಚೀನಾ ಹಾಗೂ ಅಮೆರಿಕಾ—ಪಶ್ಚಿಮ ಯೂರೋಪ್ ರಾಷ್ಟ್ರಗಳಿಗೆ ಇನ್ನಿಲ್ಲದ ಭಿಪ್ರಾಯ ಗಳಿಂದ ವೇದ್ಯವಾಗಿದೆ. ಅಲ್ಲದೆ ಈಚೆಗೆ ನಡೆದ ಕ್ಯೂಬ ಬಿಕ್ಕಟ್ಟು ಈ ಎರಡು ಶಕ್ತಿ ಘಟಕಗಳು ಯೂವಾಗ ಪರಸ್ಪರ ಘರ್ಷಿಸಿಕೊಳ್ಳಬಹುದು ಎಂಬುದನ್ನು ಸ್ಪಷ್ಟಪಡಿಸಿದೆ. ಆದುದರಿಂದ ಅವುಗಳು ತಮ್ಮ ಈಗಿನ ಸ್ಥಾನಮಾನಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಈ ತರದ ಒಂದು ಒಪ್ಪಂದವನ್ನು ಮಾಡಿಕೊಳ್ಳುವುದು ಅತ್ಯಗತ್ಯ ಎಂದು ಮನಗಂಡಿವೆ. ಆಬಿಲಮಾನವಕೋಟಿಯ ಹಿತ ಸಾಧನೆಯ ದೃಷ್ಟಿಯಿಂದ ಆಗರುವ ಈ ತರದ ಒಪ್ಪಂದವೊಂದಕ್ಕೆ ಈ ವರ್ಷಾರಂಭದ ಹಿಂಪೆಸಿಸುವುದಿಲ್ಲವೆಂಬ ಭಾವನೆ ಕೆಲವೆಡೆಗಳಲ್ಲಿ ಕಂಡು ಬಂದಿರುವುದು ವಾಸ್ತವಿಕ ಸತ್ಯವೆಂಬುದನ್ನು ಯಾರೂನಿರಾಕರಿಸಲಾರರು. ಯಾಕೆಂದರೆ ಈ ಒಪ್ಪಂದದಿಂದ ಅಣ್ವಸ್ತ್ರ ಪ್ರಯೋಗ ಸಮೂಲವಾಗಿ ಕೊನೆಗೊಳ್ಳುವುದೆಂದು ಹೇಳುವುದು ಸಾಧ್ಯವಿಲ್ಲ. ಅವರಲ್ಲಿ ಫ್ರಾನ್ಸು ಈ ಮಾತುಕತೆಯಲ್ಲಿ ಭಾಗವಹಿಸಲು ಪೂರ್ಣವಾಗಿ ನಿರಾಕರಿಸಿದೆ. ವಿಶ್ವಸಂಸ್ಥೆಯಿಂದ ಹೊರಗಿರುವ ಚೀನವು 'ಅಣ್ವಸ್ತ್ರ ನಿಷೇಧ ಮಾತುಕತೆಗಳಿಂದರೆ ಅಣ್ವಸ್ತ್ರಗಳ ವಿಶ್ವ ಸಾಮ್ಯವನ್ನು ನಿರಿಸಿಕೊಳ್ಳಲು ಸಾಮ್ರಾಜ್ಯಶಾಹಿಗಳು ನಡೆಸಿರುವ ಒಂದು ಪ್ರಯತ್ನ" ಎಂದು ಖಂಡಿಸಿದೆ. ಇದರಿಂದ ಚೀನಾ ಇನ್ನು ಹಲವು ವರ್ಷಗಳ ತನಕ ರಕ್ಷಾದಿಂದ ಅಣ್ವಸ್ತ್ರಸಹಾಯಪಡೆಯುವುದು ಸಾಧ್ಯವಿಲ್ಲ.

ಮಹತ್ಸಾಧನೆಗಳ ಬುನಾದಿ

ಪ್ರಾಪಂಚಿಕ ರಾಷ್ಟ್ರಗಳೊಳಗಣ ಆಂಶಿಕ ಅಣ್ವಸ್ತ್ರನಿಷೇಧ ಒಪ್ಪಂದಕ್ಕೆ ಪ್ರಮುಖ ಸ್ಥಾನವಿದೆಯೆಂಬುದು ಸಂಶಯಾತೀತ. ಆದರೆ ನೆಚ್ಚಿನ ಜಾಗತಿಕ ಅಭಿವೃದ್ಧಿಗಳಿಗೆ ಇದು ಬುನಾದಿಯಾಗಿರುವುದೆಂಬ ದೃಷ್ಟಿಕೋನದಿಂದ ಇದಕ್ಕೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ವಿದೆಯೆಂದು ಬ್ರಿಟನ್ ಪ್ರಧಾನಿ ಮೆಕ್ಮಿಲನರು ಹೇಳಿದ್ದಾರೆ. ಪೂರ್ವ ಪಶ್ಚಿಮಗಳೊಳಗೆ ಕಳವಾರು ವರ್ಷಗಳಿಂದ ಸಾಧಿಸಲ್ಪಡದಂತಹ ಒಂದು ಸಾಧನೆ ಇಂದು ಸಾಧಿಸಲ್ಪಟ್ಟು ಜಗತ್ತಿಗೆ ಹಿಂದಕ್ಕಿಂತಾ ಕ್ಷೇಮಭದ್ರಂಟಾಗಿದೆ ಎಂದು ವಾಶ್ಯಾತ್ಯ ವಲಯಗಳು ಹೇಳಿವೆ. ಇದರಿಂದ ಶಾಂತಿ ಸಾಧನಾ ಕಾರ್ಯದ ಸುಗಮತೆಯು ಹಾರೈಕೆಯು ದೃಢೀಕರಣಗೊಂಡಿದೆ. ಎಂದು ಇಟೆಲಿಯ ವಿದೇಶ ಖಚಿವರು ಹೇಳಿದ್ದಾರೆ. ಹಿಂತೂ ಪ್ರಾಪಂಚಿಕ ರಾಷ್ಟ್ರಗಳು ಸಹಿಇತ್ತಿರುವ ಈ ಆಂಶಿಕ ಅಣ್ವಸ್ತ್ರ ಒಪ್ಪಂದವು ಒಂದು ಮಹತ್ವಪೂರ್ಣ ಪ್ರಗತಿಯು ಹೆಜ್ಜೆಯಾಗಿದೆ ಎಂಬುದು ನಿರ್ವಿವಾದ.

ಉಪ ಸಂಹಾರ

"ಸದ್ಯ ದೊರೆತಿರುವ ಈ ಯಶಸ್ಸನ್ನು ಅತಿಶಯಿಸಿ ವೀಕ್ಷಿಸುವುದರ ಮೂಲಕ ನಮ್ಮ ಶಕ್ತಿಯನ್ನು ಕುಗ್ಗಿಸಿಕೊಳ್ಳುವುದು ಯೋಗ್ಯವಲ್ಲ. ಈ ಒಪ್ಪಂದವು ಪ್ರಸ್ತುತ ದಾವೆಯನ್ನು ಪೂರ್ಣವಾಗಿ ಕೊನೆಗೊಳಿಸಿತೆಂದು ಹೇಳುವಂತಿಲ್ಲ. ಆತೆಯೇ ಯುದ್ಧ ಭೀತಿಯು ತಪ್ಪಿದಲ್ಲ"

(೭ನೇ ಪುಟ ನೋಡಿ)

ಕಮ್ಯುನಿಸ್ಟ್ ಕಾರಾಗೃಹದಲ್ಲಿ

ಭಾರತೀಯ ಯುದ್ಧ ಕೈದಿಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕಮ್ಯೂನಿಸ್ಟರ ಮೂತಿಗೂ ಕೃತಿಗೂ ಇರುವ ನಿಕಟ ಸಂಬಂಧ ಕುರಿತು ಶ್ರೀ ಇಂದ್ರಜಿತ್ ತಿಳಿಸಿರುವುದನ್ನು ನೋಡಿದೆ ವಾ. ಇತ್ತೀಚೆಗೆ ಭಾರತದ ವಾರ್ತಾ ಇಲಾಖೆಯು ಬಯಲಿಗೆಳೆದಿರುವ ಕೆಲ ವಿಷಯಗಳನ್ನು ನೋಡೋಣ.

ಭಾರತೀಯ ಯುದ್ಧ ಕೈದಿಗಳನ್ನು ಭಾಷಾವಾರು ಗುಂಪುಗಳನ್ನಾಗಿ ವಿಂಗಡಿಸಿರುವ ವಿಷಯವನ್ನು ಹಿಂದೆಯೇ ತಿಳಿದುಕೊಂಡಿರುವೆವು. ಯುದ್ಧ ಖೈದಿಗಳನ್ನು ಕಾಣುವ ಕ್ರಮದ ಕುರಿತು ಜಿನೇವಾ ಸಮ್ಮೇಳನವು ಕೆಲ ನಿಯಮಗಳನ್ನು ತಿಳಿಸಿರುತ್ತದೆ ಅದರ ನಿಯಮದ ಪ್ರಕಾರ ಸಾಮಾನ್ಯವಾಗಿ ಯುದ್ಧ ಖೈದಿಯು ತನ್ನ ಕ್ರಮಾಂಕ, ಹೆಸರು ಮತ್ತು ತರಗತಿಗಳನ್ನು ಪ್ರಶ್ನಿಸಿದಾಗ ತಿಳಿಸಬಹುದು. ಒಂದು ವೇಳೆ ತಿಳಿಸಲು ಒಪ್ಪದಿದ್ದಲ್ಲಿ ಆವರನ್ನು ಬೆದರಿಸುವ, ಶಿಕ್ಷಿಸುವ ಅಧಿಕಾರ ಶತ್ರು ಸೈನ್ಯಕ್ಕಿರುವುದಿಲ್ಲ. ಖೈದಿ ಕಮ್ಯೂನಿಸ್ಟರು ಹಾಗೆ ಮಾಡದೆ ಚಿತ್ರಹಿಂಸೆ ಕೊಟ್ಟು ಅನೂನುಪ ರೀತಿಯಲ್ಲಿ ಎಲ್ಲಾ ವಿವರಗಳನ್ನು ಪಡೆದುಕೊಂಡಿರುವರು. ಅವರ ಹೆತ್ತವರ ಹೆಸರು, ವಿಳಾಸ, ಮತ್ತ ವಿದ್ಯಾರ್ಹತೆ, ರಾಜಕೀಯ ಒಲವು, ಹಿಂದೆ ಇದ್ದ ಉದ್ಯೋಗ ಮುಂತಾದ ಸಂಗತಿಗಳನ್ನು ಅವರು ತಿಳಿಸಲೇಬೇಕಾಗಿತ್ತು. ಈ ವಿವರಣೆಗಳನ್ನು ಭಾರತೀಯ ಸರಕಾರ ಕೇಳಿದೆಂಬುದಾಗಿ ಸುಳ್ಳು ಬೇಳೆ ವಿವರಣೆಗಳನ್ನು ಚೈನಿ ಕಮ್ಯೂನಿಸ್ಟರು ಪಡೆದುಕೊಂಡಿರುವರು. ಈ ಎಲ್ಲಾ ಆಧಾರಗಳ ಮೇಲೆ ಅವರನ್ನು ಮೂರು ತಂಡಗಳನ್ನಾಗಿ ಬೇರ್ಪಡಿಸಿದರು. ಅವರಿಗೆ ತಮ್ಮ ಶಿಬಿರ-ಪ್ರತಿನಿಧಿಗಳನ್ನು ಆರಿಸುವ ಹಕ್ಕು ಇರಲಿಲ್ಲ. ಹಿಂದೆಯೇ ತಿಳಿಸಿರುವಂತೆ ಮೂರೂ ಶಿಬಿರಗಳ ಮೇಲ್ವಿಚಾರಣೆಗೆ ಬೆನ್ ಹಾಸರನ್ನು ನೇಮಿಸಲಾಗಿತ್ತು. ಬೆನ್ ಹಾಸರು ತನ್ನ ಹಿಂದಿನ ಅನುಭವ ಹಾಗೂ ಯುದ್ಧ ಖೈದಿಗಳಿತ್ತಿರುವ ವಿವರಗಳ ಸಹಾಯದಿಂದ ಶಿಬಿರ-ಪ್ರತಿನಿಧಿಗಳನ್ನು ನೇಮಿಸಿಕೊಂಡಿದ್ದರು.

ಯುದ್ಧ ಬಂಧಿಗಳ ಆಮೆಯು ಶಿಥಿಲೀಕರಣಕ್ಕಾಗಿ ಸಮತಾವಾದದ ಭಾಷಣ ಕೊಡಲಾಗುತ್ತಿತ್ತೆನ್ನುವ ವಿಷಯ ಹಿಂದೆಯೇ ತಿಳಿಸಲಾಗಿರುತ್ತದೆ, ಅಷ್ಟು ಮಾತ್ರವಲ್ಲ ದಿನನಿತ್ಯದ ವಿಶೇಷ ಸಮಯದಲ್ಲಿ ಎರಡು ಘಂಟೆಗಳ ಕಾಲ ಕಮ್ಯೂನಿಸ್ಟ್ ಪಡಕಿತ ಯಂತ್ರವಿದಗಿಸಿದ್ದ ಕಮ್ಯೂನಿಸ್ಟ ಪ್ರಚಾರ ಸಾಹಿತ್ಯಗಳನ್ನು ಓದಲೇ ಬೇಕಾಗಿತ್ತು ಅದನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಿಸಲಾಗಿತ್ತು. ಯುದ್ಧ ಖೈದಿಗಳಿಗೆ ಕಡ್ಡಾಯ ಚೈನಾಪರ ಭಾಷಣ ಕೊಡಲಾಗುತ್ತಿತ್ತಲ್ಲದೆ ಭೂಪಟಗಳನ್ನೂ ಕೊಡಲಾಗುತ್ತಿತ್ತು.ಅದರ ಪ್ರಕಾರ ಭಾರತವೇ ಆಕ್ರಮಣ ನಡೆಸಿದ್ದೆಂದು ಅವರಿಗೆ ವಿವರಿಸಿ ಹೇಳಲಾಗುತ್ತಿತ್ತು. ಹಾಗಿದ್ದರೂ ತಾವು ಬಹಳ ದಯೆಯಿಂದ ಧಯಣಿಯಿಂದ ಖೈದಿಗಳನ್ನು ಕಾಣುತ್ತಿರುವುದಾಗಿ ಹೇಳಲಾಗುತ್ತಿತ್ತು. ಪುಸ್ತಕದ ಬದನೆಕಾಯಿಗಳಲ್ಲೇ ಅದು ಮುಗಿಯುತ್ತಿದ್ದಿಲ್ಲ. ಆವರಿಗೆ ಚೈನಾಪರ ಕಮ್ಯುನಿಸಂ ಪ್ರಚಾರದ ಚಲಚಿತ್ರಗಳನ್ನು ತೋರಿಸಲಾಗುತ್ತಿತ್ತು. ಇವೆಲ್ಲಾ ಕಡ್ಡಾಯವಾಗಿತ್ತು. ಅಲ್ಲಿ ದರ್ಜೆಗೆ ಚೈನಿಕ ಕಮ್ಯೂನಿಸ್ಟ್ ಸೇನಾಧಿಕಾರಿಗಳು ಹಿಂದಿನಿತೂ ಗೌರವ ಲಕ್ಷ್ಯ ಕೊಡುತ್ತಿರಲಿಲ್ಲ. ನಿಯಮಗಳೂ ಎಲ್ಲರಿಗೂ ಒಂದೇ ರೀತಿಯಾಗಿದ್ದುವು.

ಬಂಧಿಗಳ ಮನೋಗತವನ್ನರಿತುಕೊಳ್ಳುವ ಸಲುವಾಗಿ ಚರ್ಚಾ ಕಾರ್ಯಕ್ರಮಗಳನ್ನಿಡಲಾಗುತ್ತಿತ್ತು. ಆಗ ಯಾರಾದರೂ ಕಮ್ಯೂನಿಸ್ಟರನ್ನು ವಿರೋಧಿಸಿ ಒಂದಕ್ಷರ ವಾಡಿದರೂ ಸರಿ; ಅವರನ್ನು ಕೇಂದ್ರ ಠಾಣೆಗೆ ಕರೆದೊಯ್ಯಲಾಗುತ್ತಿತ್ತು. ಅಲ್ಲಿ ಅವರಿಗೆ ಕ್ರೂರ ಹಿಂಸೆ ಕೊಡಲಾಗುತ್ತಿತ್ತು. ಅಷ್ಟಕ್ಕು ಜಗ್ಗದಿದ್ದವರನ್ನು, ಹಿಂದೆಯೇ ತಿಳಿಸಿರುವಂತೆ, ಕಡು ಶೀತಲ ಜಲದಲ್ಲಿ ನಿಲ್ಲಿಸಿ ವಿಚಿತ್ರ ಹಿಂಸೆ ಕೊಡಲಾಗುತ್ತಿತ್ತು. ಮುಳುಗಿಸಿಡಲಾಗುತ್ತಿತ್ತು. ಖೈದಿ ಎದೆ ಸ್ವಲ್ಪ ಮುಂದೆ ಮಾಡಿ ನಡೆದರೆ ನಾಕು. ಎಲ್ಲರ ಎದುರಿನಲ್ಲಿ ಅವನ ಹೆಸರನ್ನು ಓದಿ ಹೇಳಲಾಗುತ್ತಿತ್ತು. ಎಲ್ಲರೂ ಅವನನ್ನು ಹಿಂಸಿಸುವಂತಾಗಬೇಕೆಂದು, ಅವನಿದ್ದ ಶಿಬಿರಕ್ಕೆನೇ ತೀರ್ಥರಗತಿಯ ಆಹಾರವನ್ನು ಕೊಡಲಾಗುತ್ತಿತ್ತು.

ಹಿಂದೆಯೆ ತಿಳಿಸಿರುವಂತೆ, ಭಾಷಾವಾರಿಗಿ ಬೇರ್ಪಡಿಸಿದ್ದ ಖೈದಿಗಳ ಶಿಬಿರದಲ್ಲಿ ಯಾವಾಗಲೂ ಆಯಾಯಾ ಭಾಷೆಯಲ್ಲು ಚೈನೀ ಕಮ್ಯೂನಿಸ್ಟರು ಸ್ನೇಹಿತರ ವೇಷದಲ್ಲಿ ತಿರುಗಾಡುತ್ತಿದ್ದರು. ಅವರ ಬಳಿ ಭಾರತಕ್ಕು ಚೈನಾಕ್ಕು ನಿಜವಾಗಿ ಯಾವ ವಿಧದ ದ್ವೇಷ ಇಲ್ಲವೆಂದೂ, ಬೇಕೆಂದೇ ಸಾಮ್ರಾಜ್ಯಷಾಹಿ ಅಮೇರಿಕನರು ಭಾರತೀಯರನ್ನು ಪ್ರೋತ್ಸಾಹಿಸಿ ಆಕ್ರಮಣ ಕ್ಕೆ ಕಳುಹಿಸುತ್ತಿದ್ದಾರೆಂದೂ ಹೇಳಲಾಗುತ್ತಿತ್ತು. ಭಾರತೀಯ ಸರಕಾರವು ಅಮೇರಿಕದ ಕೈಗೊಂಬೆಯೆಂದಾ ಅವರಿಗೆ ಪದೇ ಪದೇ ಹೇಳಲಾಗುತ್ತಿತ್ತು.

ಅವರೀಯುತ್ತಿದ್ದ ರಾಕ್ಷಸೀಯ ಚಿತ್ರ ಹಿಂಸೆಗೆ ಒಂದು ಉತ್ತಮ ಉದಾಹರಣೆ ಇಲ್ಲಿದೆ: ಭಾರತೀಯ ಯುದ್ಧ ಖೈದಿಯೂ ಗಿದ್ದ ಹಿರಿಯಧಿಕಾರಿ ಬ್ರಿಗೇಡಿಯರ್ ಜೆ. ಪಿ. ಧಾಲ್ವಿಯವರನ್ನು ಐದು ತಿಂಗಳ ಕಾಲ ಏಕಾಂತ, ಭೀಕರ ಶೀತಲ ಕೊಠಡಿಯಲ್ಲಿಡಲಾಗಿತ್ತು. ಪೆಕಿಂಕ್ ಆಕಾಶವಾಣಿ ಪಸಂರಿಸುತ್ತಿದ್ದ ಸುದ್ದಿಗಳನ್ನು ಅವರು ಕೇಳಲೇ ಬೇಕಾಗಿತ್ತು; ಕಮ್ಯೂನಿಸಂ ಶ್ರಚಾರ ಪುಸ್ತಕಗಳನ್ನು ಓದ ಬೇಕಾಗಿತ್ತು.

ಚೈನಾದ ಆಹಾರ ಪರಿಸ್ಥಿತಿಯ ಕುರಿತು 'ಕೆಂಪು ಪರದೆಯೊಳಗೆ' ಲೇಖನದಲ್ಲಿ ನೋಡಿರುತ್ತೀನೆ. ಪರಿಸ್ಥಿತಿ ಹಾಗೆ ಹದೆಗೆಟ್ಟಿದ್ದಾಗ 'ಶತ್ರು ದೇಶ'ದ ಯುದ್ಧ ಖೈದಿಗಳಿಗೆ ಆಹಾರ ದೊರಕುವದಾದರೂ ಎಲ್ಲಿಂದ? ಆವರಿಗೆ ಮುಖ್ಯವಾಗಿ ಸಿಗುತ್ತಿದ್ದದ್ದು ಅನ್ನ ಮತ್ತು ಉಪ್ಪು ಮಾತ್ರ ಕೊಳೆತು ಹೋಗಿದ್ದ ತರಕಾರಿಗಳನ್ನು ಆಗಾಗ ಒದಗಿಸಲಾಗುತ್ತಿತ್ತು. ಆರು ತಿಂಗಳ ಕಾಲದಲ್ಲಿ ಎರಡೇ ಎರಡು ಸಲ ಮಾಂಸವನ್ನು ಹಂಚಲಾಗಿತ್ತು. ಅಡುಗೆ ಎಣ್ಣೆಯ ತಾಪತ್ರಯ ಹೇಳಿ ತೀರದು. ಸಕ್ಕರೆ, ಹಾಲು, ಮೊಟ್ಟೆಗಳಂತಹ ಪದಾರ್ಥಗಳು ಅವರಿಗೆ ಕನಸಿನ ಮಂದಿಗೆಗಳೇ ಆಗಿದ್ದುವು.

ಹಸಿದ ಹೊಟ್ಟೆಗೆ ಹಿಡಿ ಅನ್ನವನ್ನಾಗಲೀ, ನಾರುತ್ತಿದ್ದ ಗಾಯಕ್ಕೆ ಒಂದಿಷ್ಟು ಔಷಧಿಯನ್ನಾಗಲೀ ಒದಗಿಸದೇ ಇದ್ದ ಕ್ರೂರ ಕಮ್ಯೂನಿಸ್ಟರು ಅವರ ಮನಸ್ಸಿನಲ್ಲೂ ದೊಡ್ಡ ಗಾಯಗಳನ್ನುಂಟುಮಾಡುತ್ತಿದ್ದರು. ಗಾಯಗಳಿಗಳನ್ನು ಕಾಣಲು ಬೇರೆಯವರನ್ನು ಬಿಡುತ್ತಿರಲಿಲ್ಲ; ಅದರಲ್ಲೂ ಅಧಿಕಾರಿಗಳಿಗಂತೂ ಅನುಮತಿಯೇ ದೊರಕುತ್ತಿರಲಿಲ್ಲ. ಕಮ್ಯೂನಿಸ್ಟ್ ಪ್ರಚಾರಕರು ಗಾಯಗಳುಗಳ ಬಳಿ ಹೋಗಿ ಅಧಿಕಾರಿಗಳ ವಿರುದ್ಧ ಕಟ್ಟುಕಥೆಗಳನ್ನು ಹೇಳಿ, ಅಧಿಕಾರಿಗಳು ಅಹಂಕಾರದಿಂದ ಗಾಯಗಳಿಗಳನ್ನು ಕಾಣಲು ಬರುವುದಿಲ್ಲವೆಂದು ಅಪಪ್ರಚಾರ ಮಾಡಿ ದ್ವೇಷ ಮನೋಭಾವನೆಯ ವಿಷ ಬೀಜವನ್ನು ಬಿತ್ತುತ್ತಿದ್ದರು. ಅಷ್ಟು ಮಾತ್ರವಲ್ಲ, ಒಂದು ಶಿಬಿರದಲ್ಲಿ ಹೋಗಿ ಇನ್ನೊಂದು ಶಿಬಿರದ [ಭಾಷೆ ಹಾಗೂ ಪ್ರಾಂತ್ಯದವರ] ಕುರಿತು ತಿರಸ್ಕಾರದ ಮಾತುಗಳನ್ನಾಡುತ್ತಿದ್ದರಲ್ಲದೆ, ಆ ಶಿಬಿರದವರು ಇತರರ ಕುರಿತು ಹೀನಾಯವಾಗಿ ಹೇಳುತ್ತಿದ್ದಾರೆಂದೂ ಹೇಳಿ ಅವರಲ್ಲಿ ದ್ವೇಷ ಭಾವನೆಯನ್ನುಂಟುಮಾಡಿ ಎತ್ತಿ ಕಟ್ಟುತ್ತಿದ್ದರು. ಈ ಚಿತ್ರ ನಮ್ಮ ಕಣ್ಮುಂದೆಯೇ ನಡೆಯುತ್ತಿದೆ ಇಲ್ಲಿಯ ಕಮ್ಯೂನಿಸ್ಟರು ಅದಕ್ಕೆ ಸಾಕ್ಷಿಗಳಂತಿದ್ದಾರೆ. ಒಂದು ಪ್ರಾಂತ್ಯದವರಿಗೂ ಇನ್ನೊಂದು ಪ್ರಾಂತ್ಯದವರಿಗೂ ಭಾಷಾ ಭಿನ್ನತೆ ಅಥವಾ ಜಾತೀಯ ಭಿನ್ನತೆಯು ಕುರಿತು ವಿಚಿತ್ರ ರೀತಿಗಳುಂಟಾಗುವಂತೆ ಹಾಗೂ ಬಡಿದಾಟ ಉಂಟಾಗುವಂತೆ ಮುಳಲುತ್ತು. ಮೂಡುವದನ್ನು ದೈನಂದಿನ ಜೀವನದಲ್ಲಿ ಕಾಣ ಬಹುದು, ಆ ನ್ಪಾವಿನಲ್ಲಿ ಅದು ಭಾಷಾ ವಿದ್ವೇಷದ ಕಳ್ಳರು ಪಬ್ಬುವಂತೆ ಮೂಡಿದಲ್ಲಿ ಇನ್ನೊಂದೆಡೆ ಮತೀಯ ಮೂರಾ ಮೂರಿಗೆ ಅವರು ಕಾರಣರಾಗುತ್ತಾರೆ. ಒಂದೆಡೆ ಗೋವು ಪವಿತ್ರವೆಂದು ಅವರು ಹೇಳಿದ ಬಾಯಿಯಲ್ಲೇ ಇನ್ನೊಂದೆಡೆ ನಾವು ಆರಿಸಿ ಬಂದಲ್ಲಿ ಗೋವಧಾ ನಿಷೇಧ ಕಾನೂನನ್ನು ಹಿಂತೆಗೆದ ಕೊಳ್ಳುವದಾಗಿ ಶ್ರಚಾರ ನಡೆಸಿರುವದು ಬೆಳಕಿಗೆ ಬಂದಿರುವ ಸತ್ಯ ಸಂಗತಿಯೇ ಇದೆ. ಒಂದೆಡೆ ದೇವಸ್ಥಾನಗಳು ಪವಿತ್ರಸ್ಥಾನವೆಂದು ಹೇಳಿದ ಬಾಯಿಯಲ್ಲೇ ಇನ್ನೊಂದೆಡೆ ಅವು ಗೊಡ್ಡು ಸಂಪ್ರದಾಯಗಳ ಅಂಧ ಶ್ರದ್ಧೆಯ ಆಧಾರವೆಂದು ಹೇಳಿರುವದೂ ಜನತೆಗೆ ನೆನಪಿರುತ್ತದೆ. ಅಲ್ಲಿಯ ಕಮ್ಯೂನಿಸ್ಟರೂ ಅದೇ ರೀತಿಯಲ್ಲಿ ನಡೆದುಕೊಂಡಿರುವದರಲ್ಲಿ ಆಶ್ಚರ್ಯವಾದರೂ ಏನು?

ನಾಸ್ತಿಕ ಚೈನಾದಲ್ಲಿ ಧಾರ್ಮಿಕ ಚಿಹ್ನೆಗಳು ಅಷ್ಟಾಗಿ ಕಂಡು ಬರುವುದಿಲ್ಲ. ಅಲ್ಲಿ ಭಾರತೀಯ ಯುದ್ಧ ಖೈದಿಗಳಿಗೆ ಧಾರ್ಮಿಕ ಆಚರಣೆಗೆ ಅನುಮತಿಯಾದರೂ ಹೇಗೆ ದೊರಕೀತು? ಆದರೆ ತಮಾಷೆಯ ವಿಷಯವೆಂದರೆ, ಭಾರತೀಯ ಯುದ್ಧ ಖೈದಿಗಳು ಪ್ರಾರ್ಥನೆ ಮಾಡುವ ರೀತಿ ಚಿತ್ರಗಳನ್ನು ತೆಗೆದು ಪ್ರಕಟಿಸಿ ತಮ್ಮ ಸಲುಗೆ—ತಾಳ್ಮೆಯ ಕುರಿತು ಅವರು ಢಂಗುರ ಬಡಿಯುತ್ತಿದ್ದರು.

ಸಲುಗೆಯು ಹೆಸರಿನಲ್ಲಿತಮ್ಮ ಬೆಪ್ಪನ್ನು ತಾವೇ ತಟ್ಟಿಕೊಳ್ಳುತ್ತಿರುವವರು ಸೆರೆಯಾಳುಗಳನ್ನು, ಅದರಲ್ಲೂ ಗಾಯಾಳುಗಳನ್ನು ಗುಂಡಿಕ್ಕಿ ಕೊಂದು ಅವರ ಬಳಿ ಇದ್ದ ಗಡಿಯಾರ, ಉಂಗುರಾದಿಗಳನ್ನು ದೋಚಿಕೊಂಡು ಹೋಗಿ ಸೈನಿಕ ವೃತ್ತಿಗೆ ನಾಚಿಕೆ ತರುವಂತಹ ಪೈಶಾಚಿಕ ರೀತಿಯಲ್ಲಿ ನಡೆದುಕೊಂಡಿರುತ್ತಾರೆ.

ದುಃಖದಾಯಕ ವಿಷಯವೆಂದರೆ ನಮ್ಮ ಸೇನೆಯಿಂದ ಸ್ಪಷ್ಟವಾಗಿ ಅಡಿಷ್ಟು ಸೈನಿಕರು ಕಾಣೆಯಾಗಿದ್ದಾರೆಂಬ ಸಂಖ್ಯೆಯನ್ನು ಇನ್ನೂ ಪ್ರಕಟಿಸಲಾಗಿರುವುದಿಲ್ಲ. ಸಾಧಾರಣ ಐದು ಸಾವಿರ ಸೈನಿಕರು ಕಾಣೆಯಾಗಿದ್ದಾರೆಂದೂ, ಅದರಲ್ಲಿ ಸಾಧಾರಣ ನಾಲ್ಕು ಸಾವಿರ ಸೈನಿಕರ ದೇಹ (ನಿರ್ಜೀವ ಅಥವಾ ಸಜೀವ) ಹಿಂದಕ್ಕೆ ಬಂ

(ಇನ್ನೂ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಅಮೆರಿಕ್ ಸಾಹಿತ್ಯದಲ್ಲಿ

ಹಿಂದೂ ಸಂಸ್ಕೃತಿಯ ಕಲಿಗಹನ ಪ್ರಭಾವ

ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ಭಾರತೀಯ ಸಂಸ್ಕೃತಿಯು ತನ್ನ ಪ್ರಭಾವವನ್ನು ಬೀರಿರುವಂತೆಯೇ ಕೆಲವು ದೇಶಗಳ ಸಾಹಿತ್ಯರಂಗದ ಮೇಲೆಯೂ ಭಾರತೀಯ ಛಾಯೆಯು ಬಿದ್ದಿದೆ. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಅಮೆರಿಕೆಯ ನ್ಯೂ ಇಂಗ್ಲೆಂಡಿನ ರಾಲ್ಫ್ ವಾಲ್ಡೊ ಎಮರ್ಸನ್ ಮತ್ತು ಹೆನ್ರಿಡೇವಿಡ್ ಥೋರೊ ಇವರು ಪ್ರಾಚ್ಯ ವಿಚಾರಗಳ ಪ್ರಭಾವಕ್ಕೆ ಒಳಗಾಗಿದ್ದರು. ಇದರಲ್ಲೂ ಈ ಲೇಖಕದ್ವಯರು ಭಾರತೀಯ ಪ್ರಾಚೀನ ಸಾಹಿತ್ಯ ಕೃತಿಗಳ ಕಡಗೆ ಒಲಿದಿದ್ದಾರೆಂಬುದು ಕಂಡು ಬರುವುದು.

ಹೊಸತಾಗಿ ತರಬೇತಿ ಪಡೆದ ಕೆಚ್ಚೆದೆಯ ಸೈನಿಕರ ತಂಡವೊಂದು ರಾಷ್ಟ್ರಧ್ವಜ ಹಿಡಿದು ಪ್ರತಿಜ್ಞೆ ಸ್ವೀಕರಿಸುವ ನೋಟ.

ಅಮೆರಿಕೆಯ ಈ ಸಾಹಿತಿಗಳಿಗೆ ಭಾರತದ ಜನಜೀವನದ ಬಗ್ಗೆ ಗಹನವಾದ, ನಿರ್ವಿವಾದವಾದ ಅಸಕ್ತಿ, ಮೂಡುವುದಕ್ಕೆ ಮೂಲಕಾರಣವಾವುದು? ಅನರು ಬೆಳೆಸಿದ್ದು ಭಾರತಕ್ಕೆ ಬಹುದೂರದಲ್ಲಿ, ಸ್ವೀಮಂತಿಕೆಯ ಸುಪ್ಪತ್ತಿಕೆಯಲ್ಲಿ ಅರಿದಾಡುವ ದೇಶದಲ್ಲಿ. ಅಂತಹರು ಮೇಲೆ ಭಾರತವು ತನ್ನ ಮೂಯಾಜಾಲವನ್ನು ಹರಸಬೇಕಾದರೆ, ಇದರ ಪ್ರೇರಕ ಶಕ್ತಿ ಯಾವುದು? ಅಮೆರಿಕೆಯ ರಾಯಭಾರಿ ಕಛೇರಿಯ ಸಾಂಸ್ಕೃತಿಕ ಸಂಪರ್ಕಾಧಿಕಾರಿ ಶ್ರೀ ಜಾನ್ ಟಿ ರೀಡ್ ರವರು ಇದಕ್ಕೆ ಇರುವ ಕಾರಣಗಳನ್ನು ಸ್ಥೂಲವಾಗಿ ವಿವೇಚಿಸಿದ್ದಾರೆ.

ಎಮರ್ಸನ್ ಥೋರೋರವರು ಅತೀಂದ್ರಿಯವಾದಿಗಳು. ಇವರಂತೆಯೇ ಇನ್ನೂ ಕೆಲವರಿದ್ದಾರೆ ಪಾಶ್ಚಾತ್ಯ ಚಿಂತನೆಯಲ್ಲಿ ಮಹತ್ತರ ಕ್ರಾಂತಿಯನ್ನುಂಟುಮಾಡಿದ 'ರೋಮಾಂಟಿಸಿಸಂ'ದ ಅಮೆರಿಕನ್ ಅಭಿವ್ಯಕ್ತಿ—ಅದರಲ್ಲಿಯೂ ವಿಶೇಷವಾಗಿ ಕೋಲ್ರಿಡ್ಜ್ ಮತ್ತು ಜರ್ಮನ್ ರೊಮಾಂಟಿಕ್ ತಾತ್ವಿಕರ ಪ್ರತಿತತ್ವಗಳಲ್ಲಿ ಕಂಡುಬರುವ ಸ್ವರೂಪದ ಅಭಿವ್ಯಕ್ತಿಯು ನವ್ಯವೂ ವಿದೇಶೀಯವೂ ಆದ ವಸ್ತುಗಳನ್ನೂ ಭಾವನೆಗಳನ್ನೂ ಬಿಡಗೊಡಲಿಲ್ಲ. ಆದುದರಿಂದ ಲೇ ಅವರು ದೂರದೂರದ ಮೂಲೆಮೂಲೆಯಲ್ಲಿಯೂ ಈ ಬಗೆಯ "ಅಭಿವ್ಯಕ್ತಿ" ಯನ್ನು ಅರಸತೊಡಗಿದರು. ಈ ಸಮಯದಲ್ಲಿ ಅವರಿಗೆ ವಿಶ್ವವೂ ಆದರದೇ ಆದ ಪ್ರಾಚೀನ ಸಾಹಿತ್ಯವೂ ಕಂಡುಬಂದುದು ಆಶ್ಚರ್ಯವನ್ನುಂಟುಮಾಡುವಂತಿಲ್ಲ ಶೋಧಶೀಲರಲ್ಲಿ ರುವ ತಾತ್ವಿಕ ವರ್ತನೆ ಸರಳ ಸಹಜವಾಗಿದುದು.

ಭಾರತ ಮತ್ತು ಅಮೆರಿಕೆಗಳ ನಡುವಣ ಸಂಪರ್ಕವು ಇಂದು ನಿನ್ನೆಯದಲ್ಲ. ಅಮೆರಿಕೆಯು ಸ್ವಾತಂತ್ರ್ಯಗೊಂಡ ಬಳಿಕ ೧೭೮೭ರಿಂದ ೧೮೫೦ರ ನರೆಗೆ ಸೇಲಂ ಮತ್ತು ಬೋಸ್ಟನ್‌ಗಳ ನಡುವೆ ವ್ಯಾಪಾರಿ ಹಡಗುಗಳು ಸಂಚರಿಸುತ್ತಿದ್ದುವು. ಕಲ್ಕತ್ತದೊಡನೆಯೂ ಅಮೆರಿಕನ್ ವ್ಯಾಪಾರಿಗಳ ಸಂಬಂಧವಿತ್ತು. ಸುವ್ಯವಸ್ಥಿತವಾಗಿ ನಡೆಯುತ್ತಿದ್ದ ಈ ವ್ಯಾಪಾರಕ್ಕೆ ಭಾರತದಿಂದ ಸಾಂಬಾರ ಜೀನಸುಗಳನ್ನು ಸೀಲಿಹಾಗೂ ಉತ್ತಮ ಬಟ್ಟೆಗಳನ್ನು ಪೂರ್ತ ಅಮೆರಿಕೆಗೆ ಒಯ್ಯುತ್ತಿರಲಿಲ್ಲ. ಅವು ತಾತ್ವಿಕ ಬಾವನೆಗಳನ್ನೂ ಭಾರತೀಯ ಪ್ರಾಚ್ಯ ಸಾಹಿತ್ಯದ ಪ್ರತಿಗಳನ್ನೂ ತಲ್ಲಿಗೆಕೊಂಡು ಹೋಗಿದ ಬೇಕು ಭಾರತೀಯ ಧರ್ಮಸಿದ್ಧಾಂತಕಾರರಾದ ರಾಮಮೋಹನ ರಾಯರು ನ್ಯೂ ಇಂಗ್ಲೆಂಡಿನ ವಿಚಾರಶೀಲರ ಮೇಲೆ ಸ್ವಭಾವವನ್ನೂ ಬೀರಿರುವುದು ಇದಕ್ಕೆ ಮೆರಗೀಯುತ್ತಿದೆ ಕ್ರೈಸ್ತಯನ್ ಧರ್ಮದ ಗುಣಾಂಶಗಳನ್ನು ರಾಮ್ ಮೆಚ್ಚಿದ್ದರು ಮತ್ತು ಹಿಂದೂ-ಕ್ರೈಸ್ತಯನ್ ಧರ್ಮಗಳೆಡರ ಮೂಲತತ್ವಗಳಲ್ಲಿಯೂ ಅವರು ಆಸಕ್ತಿ ಹೊಂದಿದ್ದರು. ರಾಯರು ಹಿಂದೂ ತತ್ವಗಳ ಕುರಿತು ಮಾಡಿದ ವ್ಯಾಖ್ಯಾನಗಳು ಕಳೆದ ಶತಮಾನದ ಆರಂಭದ ವರ್ಷಗಳಲ್ಲಿ ನ್ಯೂ ಇಂಗ್ಲೆಂಡ್ ತಂಡ ಬಹಳವಾಗಿ ಪ್ರಚಾರದಲ್ಲಿದ್ದುವು.

ರಾಮಮೋಹನ ರಾಯ್‌ಯಿವರ ಬರಹಗಳಿಗೂ ಎಮರ್ಸನ್–ಥೋರೋರವರು ಪ್ರಾಚೀನ ಭಾರತೀಯ ಚಿಂತನೆಗಳಲ್ಲಿ ಕಳೆದ ಆಸಕ್ತಿಗೂ ಸಂಕಲ್ಪಿಸುವುದು ಕಷ್ಟ. ಅವರು ಹಾಗೂ ಅವರ ವರ್ಗದವರಿಗೆ ಮೂಸನನ ಅತ್ಯ ವಿಚಾರದಲ್ಲಿ ಹಿಂದಿನವರಿಗಿಂತ ಅಧಿಕ ಆಸಕ್ತಿ ಬೆಳದಿತ್ತೆಂಬುದು ನಿಜ. ಇವಕ್ಕೆ ಬೇರೇಗಾಕ ಶಕ್ತಿಯು ಬೇರೆ ಬೇರೆಯಾಗಿದೆ. ಹಾಗಾಗಿ ಎಮರ್ಸನ್—ಥೋರೋಗಳಲ್ಲಿ ಆಂತರಿಕ ಬೋಧ ಸ್ವರೂಪದ, ರಹಸ್ಯಮಯವಾದ, ಆದರ್ಶ ಆನುಕರಣೀಯವೂ ಪೌರ್ವಾತ್ಯ ತತ್ವಗಳು ಹೃತ್ಪೂರ್ವಕ ಸ್ವಾಗತಾರ್ಹವೆಂಬ ಭಾವನೆ ಜನಿಸಿತು!

ಹಿಂದೂ ಪವಿತ್ರಗ್ರಂಥಗಳನ್ನು ಓದಿ, ಆಧ್ಯಾತ್ಮಾಡಿಕೊಂತ ಪಶ್ಚಿಮದ ಮಹಾನ್ ಗ್ರಂಥಕಾರರಲ್ಲಿ ಎಮರ್ಸನ್ ಮೊಕ್ಕಲೊದಲಿಗರು. ಇವರ ಅನೇಕ ಕೃತಿಗಳಲ್ಲಿ ಪೂರ್ವದ ಪ್ರಭಾವವು ಕಂಡು ಬರುತ್ತದೆ. 'ಬ್ರಹ್ಮ' ಎಂಬ ಕಾವ್ಯನಲ್ಲಿ ಕರೋಪನಿಷತ್ ಹಾಗೂ ಗೀತೆಯ ಪ್ರಭಾವವಿರುವುದನ್ನು ನಾವು ನೋಡುತ್ತೇವೆ. 'ಪರೂತ್ರೇಯ' ಎಂಬ ಗ್ರಂಥವು ಹಲವಾರು ಹಿಂದೂ ಭಾವನೆಗಳಿಂದ ಕೂಡಿದೆ. 'ದಿ ಓವರ್ ಸೋಲ್' ಮತ್ತು 'ಇಲ್ಯೂಷನ್ಸ್'ಗಳು ಭಾರತೀಯ ಚಿಂತನೆಗೆ ವಿದೇಷ ಋಣಿಯಾಗಿವೆ. ಇನ್ನು ಎಮರ್ಸನರ ನಿತ್ಯ ಬರವಣಿಗೆಯ ಮೇಲೆ ಒಂದಲ್ಲ ಒಂದು ಬಗೆಯಿಂದ ಭಾರತೀಯ ಸಾಹಿತ್ಯದ ಪ್ರಭಾವವು ಅಚ್ಚಳಿಯದೆ ಬೀಳುತಿತ್ತು; ಅನೇಕ 'ಉದ್ಧರಣೆ'ಗಳೂ ಅದರಲ್ಲಿ ಸೇರಿಕೊಳ್ಳುತಿದ್ದುವು.

ವೈವಿಧ್ಯಮಯವಾದ ಎಮರ್ಸನರೇ ಬರಹಗಳಲ್ಲಿ ಪ್ರಾಚ್ಯ ಚಿಂತನೆಗಳ ಪ್ರಭಾವವನ್ನು ಗುರುತಿಸುವುದು ಕಷ್ಟ. ಆದರೂ ಈ ಪ್ರಭಾವವು ಅವುಗಳಲ್ಲಿರುವುದು ನಿಜ. ಅವರ ತತ್ವದರ್ಶನ ವ್ಯವಸ್ಥಿತವಾದುದೆನ್ನಲು ಅವರು ನಾನಾ ಕಡೆಗಳಿಂದ ಭಾವನೆಗಳನ್ನು ಸಂಗ್ರಹಿಸಿದರು. 'ಭಾರತದ ಧಾರ್ಮಿಕ ಭಾವನೆಗಳನ್ನವರು ನಿರಾತಂಕವಾಗಿ ಅನುಕರಿಸಿದರು' ಎಂದರೆ ತಪ್ಪಾಗುವುದು. ಅವರೆಬ್ಬ ಲೌಕಿಕರು; ಅಮೆರಿಕೆಯ ಸಂಪ್ರದಾಯದಲ್ಲಿ ಆಳವಾಗಿ ಬೇರೂರಿದವರು; ಆದುದರಿಂದ ಪೌರ್ವಾತ್ಯ ಜೀವನ ವಿಧಾನಗಳಿಗೆ ಮನಸೋತರೆಂದು ಹೇಳುವುದು ಸರಿಯಲ್ಲ.

ಹಿಂದೂ ಗ್ರಂಥಗಳ ಓದು ಥೋರೋರವರ ಮನಜೀವನಗಳಲ್ಲಿ ತಂಬಿಹೋಗಿ ಶ್ರೇಂದರದು ಅತಿಶಯೋಕ್ತಿಯೆಲ್ಲ. ಇದಕ್ಕವರ ಕೃತಿಗಳಲ್ಲಿಪ್ಪನ್ನ ಸಾಕ್ಷಿ ದೊರೆಯುತ್ತದೆ. ಅವಂ ಗ್ರಂಥಗಳಿಗೆ ಭಾರತೀಯ ಸಾಹಿತ್ಯದಿಂದ ಮೆರಗು ಬಂದಿತೆ? ಅಥವಾ ತತ್ವ ಮತ್ತು ಜೀವನ ವಿಧಾನಗಳ

(ಇನ್ನೂ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ .....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1–1–1963ರಿಂದ ವೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ವೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ

ಹೆಚ್ಚಿನ ವಿವರಗಳಿಗೆ ನಿಮ್ಮ ಸವಿಾಪದ ನವ್ಯಾಯವೆಯಲ್ಲಿ ವಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನಮ್ಮಲ್ಲಿ 14 ಕೆರೆಟ್ ಬಿನ್ನದ ಬಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಬಿನ್ನದ ಆಭರಣಗಳಲ್ಲಿ ಶೇ೫೭½ ಶುದ್ಧ ಪುತ್ಥಳಿ ಬಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ ಕಮ್ಮಿಂಟ್ಲಿ ಯಾವಾಗಲೂ ಬಜಾರು ರೇಟಿಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಹಳೆ ಬಿನ್ನದ ಆಭರಣ ಯಾ ಬಿನ್ನದ ಗಟ್ಟಿಗಳನ್ನು ಪಡಕೊಳ್ಳುವರಿಗೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮುಂದೆ ಉಪನಯನದ ಸಮಯ ಬೇಕಾದ 14 CT ಬಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ಕೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ಭುಟ್ಟೋರವರ ಸಿಂಹಗರ್ಜನೆ

ಬರಸಿಡಿಲು - ಮಳೆಹನಿಯಿಲ್ಲ

ವ್ಯಾರಂಭದಿಂದಲೂ ಭಾರತ ವಿರೋಧಿ ನೀತಿಯನ್ನೇ ಅವಲಂಬಿಸಿಕೊಂಡು ಬಂದಿರುವ ಪಾಕಿಸ್ತಾನದ ನಾಯಕರು ಯಾವುದೇ ಬಗೆಯ ಮುತ್ಸದ್ದಿತನವೂ ಇಲ್ಲವೆ ಮುತ್ಸದ್ದಿಗಳೆನಿಸುತ್ತ ಬಂದಿದ್ದಾರೆ. ಇವರಿಂದ ಪಾಕಿಸ್ತಾನದ ರಾಜಕೀಯ ದಿಗ್ದರ್ಶನವು ದಿನದಿಂದ ದಿನಕ್ಕೆ ನ್ಯಕ್ತವಾಗಿ ವ್ಯಕ್ತವಾಗುತ್ತಿದೆ. ಇದಕ್ಕೆ ಪಾಕ್ ನಿರ್ಗಮನ ಮುಂತ್ರಿ ಶ್ರೀ ಝುಲ್ಫಿ. ಎ. ಭುಟ್ಟೋರವರು ಪಾಕ್ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವೊಂದು ಜ್ವಲಂತ ನಿದರ್ಶನ. ತನ್ನ ಸುದೀರ್ಘವಾದ ಭಾಷಣದಲ್ಲಿ ಅವರು ಮುಕ್ಯವಾಗಿ ಮೂರು ವಿಷಯಗಳನ್ನು ಭಾರತದ ಮೇಲೆ ಉರಿ ಕಾರುತ್ತ ಪ್ರೇಕ್ಷಾವರ್ಧ ಸುರಿಸುವುದಕ್ಕೇನೇ ವಿನಿಯೋಗಿಸಿಟ್ಟಿನು ಆಲ್ಲಿನ ಶ್ರೋತೃಗಳಿಗೇನೇ ಬೇಸರವನ್ನುಂಟು ಮಾಡಿದೆಯೆನ್ನುವಾಗ, ಉಳಿದವರ ಪಾಡೇನು?

ಪಾಕಿಸ್ತಾನವು ರಾಜಕೀಯವಾಗಿ ದಿವಾಳಿಯಾಗುತ್ತಿದೆ; ಅದು ತನ್ನ ಉನ್ನತಿಯನ್ನು ಮೂಡಿಕೊಳ್ಳಲು ಅಸಮರ್ಥವಾಗಿ ಹಿಂದಿನಿಂದಲೂ ಪರರ ಅಭಿವೃದ್ಧಿಯ ಬಗ್ಗೆ ಕರಬಿಕೊಳ್ಳುವುದನ್ನೇ ತನ್ನ ನಿತ್ಯಕ್ರಮವನ್ನಾಗಿ ಮಾಡಿಕೊಂಡಿದೆ. ಇಂದು ಭಾರತವು ಸರ್ವರೀತ್ಯಾ ಅಭ್ಯುತ್ಥಾನಪಥ ಭ್ರಮಣಗೆಯ್ಯುತ್ತಿರುವುದರಿಂದ ಅದರ ಉದರಶೂಲೆ ಮತ್ತಷ್ಟು ಹೆಚ್ಚುತ್ತಿದೆ. ಆದುದರಿಂದಲೇ ಭಾರತದ ಮೇಲೆ ಚೀನೀಯರು ಆಕ್ರಮಣವಿಸಿದ ಮೇಲೆ, ಅದರ ಆಕ್ರೋಶ ಮತ್ತಷ್ಟು ಅಧಿಕವಾಗ ತೊಡಗಿದೆ. ಪಾಶ್ಚಾತ್ಯ ದೇಶಗಳು ಭಾರತಕ್ಕೆ ಸಂಕಟಮಯ ಪರಿಸ್ಥಿತಿಯಲ್ಲಿ ನೀಡುತ್ತಿರುವ ಸೈನಿಕ ಸಹಾಯದಿಂದ ಅದರ ಕಣ್ಣು ಕುಕ್ಕುತ್ತಿದೆ; ಇವನ್ನು, ಕಾಣಲಾರದೆ, ತಾನು ಹೊಟ್ಟೆ ಯುರಿಯಿಂದ 'ಕಾಶ್ಮೀರ'ವನ್ನು ಮುಂದಿಟ್ಟುಕೊಂಡು ತನ್ನ ಭೀಕರ ಬಾಣಗಳನ್ನು ಹೊಡೆಮಿ ಜಗತ್ತನ್ನೇ ಕಲಿಕೆಳಗು ಮಾಡಲು ಮುಂದಾಗಿರುವಂತೆ ಪಾಕ್ ತೋರಿಸಿದೆ.

ಕಿಮ್ಯೂನಿಸ್ಟ್ ಚೀನೀಯರು ದಮ್ಮ ಗಡಿಯನ್ನು ಹೊರಿಸಿ ಒಂದು ಇಲ್ಲಿ ಉಸದ್ದಾಟಗಳನ್ನು ನಡೆಸುತ್ತ ಒಂದಿರುವಾಗ 'ಅಣಣ್ಣಾದ ಗಡಿ ತಂಟೆಯನ್ನು ತೊಡ್ಡಾಸಿ ಭಾರತವು ಜಗತ್ತನ್ನು ತನ್ನೆಡೆಗೆ ಸೆಳೆಯುವ ದುಸ್ಸಾಹಸವನ್ನು ಮಾಡುತ್ತಿದೆ' ಎಂದಪರು ಶ್ರೀ ಭುಟ್ಟೋ. ದೇಶದಲ್ಲಿ ಆಕ್ರಮಣದ ಕಾರಣದಿಂದ ಅನಾಹುತಗಳೂ, ಕಷ್ಟನಷ್ಟಗಳೂ ಉಂಟಾಗಿರುವುದನ್ನು ಲೋಕಕ್ಕೆ ಲೋಕವೇ ಒಪ್ಪಿರುವುದು ಪತ್ರವಲ್ಲ, ಕೆಲವು ದೇಶಗಳ ಪ್ರತಿನಿಧಿಗಳು ಕೂಡಾ ಪ್ರತ್ಯಕ್ಷವಾಗಿ ಕಂಡಿರುವುದು ಶ್ರೀ ಭುಟ್ಟೋರವರಿಗೆ ತಿಳಿಯದೆ ಹೋದುದು ಅವರು ಧಾಷ್ಟ್ಯಕ್ಕೆಂದು ತೊಟ್ಟ ಕಂಪು ಕನ್ನಡಕದ ದೋಷವನ್ನೆಲೇಕು. ದೇಶದ ಸ್ವಾತಂತ್ರ್ಯಕ್ಕೆ, ಸಾರ್ವಭೌಮತೆಗೆ ಬಂದಿರುವ ಪಂಥಾಹ್ವಾನವನ್ನು ನಾವು ಸ್ವೀಕರಿಸಿ, ಅವುಗಳ ರಕ್ಷಣೆಯ ಪ್ರಯತ್ನಗಳನ್ನು ಮಾಡುತ್ತಿದ್ದರೆ, ಭುಟ್ಟೋ ಕಣ್ಣೀರಿಡುವುದಾದರೂ ಏಕೆ? ಇದಕ್ಕೆ ಅವರ ಉತ್ತರ ಸಿದ್ಧವಾಗಿಯೇ ಇದೆ. ಭಾರತವು ಚೀನಾದ ಮೇಲೆ ಆಕ್ರಮಣ ನಡೆಸುವುದೆಂಬ ಬರಿಯ ಸ್ವಕಪೋಲಕಲ್ಪಿತ ಕಾರಣವನ್ನವರು ಮುಂದಿಡುತ್ತಾರೆ.

ಪಾಕಿಸ್ತಾನದ ಮೇಲೆ ಭಾರತವು ಏರಿ ಹೋಗುವುದೆಂಬ ಭ್ರಮೆ! ಈ ಭ್ರಮೆಯು ಪಾಕ್ ನಾಯಕರ ಹೃದಯದಿಂದ ಬಂದುದಲ್ಲ; ಒಂದೋ ಅವರ ಪೊಳ್ಳು ಮಂಡೆಯೊಳಗೆ ಕೆಂಪು ಚೀನೀಯರು ಆದನ್ನು ತುಂಬಿರಬೇಕು; ಇಲ್ಲವೇ ತಮ್ಮ ಕಪೋಲಗಳಲ್ಲಿಯೇ ಅದರು ಊಹಿಸಿಕೊಂಡರು. ಕನಸಿನಲ್ಲಿ ಮನೆ ಕಟ್ಟುವುದರಲ್ಲಿ ಅತೀವ ನಿಸ್ಸೀಮರಾದ ಪಾಕ್ ನಾಯಕರು ಈ ರೀತಿಯ ಆರೋಪಗಳನ್ನು ಹೊರಿಸಿಯಾದರೂ ಭಾರತದ ಪ್ರಗತಿಗೆ ಮುಟ್ಟುಗೋಲು ಹಾಕುವ ಇರಾದೆಯಿಂದಿದ್ದರು. ಆದರೆ, ಒಂದು ವಿಷಯ ಸ್ಪಷ್ಟ. ಪಾಕಿಸ್ತಾನವು ಭಾರತದಿಂದ ಆಕ್ರಮಣವನ್ನು ನಿರೀಕ್ಷಿಸಬೇಕಾಗಿಲ್ಲ. ಏಕೆಂದರೆ, ಯಾವುದೇ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದರೂ ಭಾರತವು ಪಾಕ್ ನಾಯಕರ ಭೃಮನಿರಸನಕ್ಕಾಗಿ 'ಯುದ್ಧ ನಿಲ್ಲಿ' ಘೋಷಣೆಗೆ ಸಹಿ ಹಾಕುವ ಸಲಹೆಯನ್ನು ಮಾಡಿತ್ತು ಏನೇನೋ ಕಾರಣಗಳನ್ನು ಮುಂದಿಟ್ಟು ಪಾಕಿಸ್ತಾನವು ಈ ಕೇಳಿಕೆಯನ್ನು ಅಲ್ಲಗಳೆದಿದೆ. ಭಾರತ ಮತ್ತು ಪಾಕಿಸ್ತಾನಗಳೆರಡೂ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳಾಗಿರುವುದರಿಂದ, ಅದರ ಆಶ್ರಯದಲ್ಲಿಯೇ ತಮ್ಮ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಬಹುದು; ಹಾಗಿರುವಾಗ, ಇಂತಹ ಒದಂಬಡಿಕೆ ಆನಗತ್ಯವೆನ್ನುತ್ತಾರೆ ಭುಟ್ಟೋ.

ಶ್ರೀ ಭುಟ್ಟೋರವರಿಗೂ ಅವರ ಸಹಾಯಕರಿಗೂ ಸಂ. ರಾ. ಸಂಘದ ಮೇಲೆ ಅದರ ಸದಸ್ಯರಾಷ್ಟ್ರಗಳ ಮೇಲೆ ಅಭಿಮಾನ, ಗೌರವ ಮತ್ತು ವಿಶ್ವಾಸಗಳಿರುವುದೂ ನಿಜವಾದರೆ, ಅವರು ಭಾರತದಿಂದ ಆಕ್ರಮಣ ಭೀತಿಯಿದೆ ಎಂದು ಯಾರನ್ನಾದರೂ ಹೆದರಿಸುವುದು ಯಾವ ಪುರುಷಾರ್ಥಕ್ಕೆ? ಅವರಿಂದ ಅವರಿಗಾಗಲಾಭವೂ ದೊರೆಯ ಬಹುದು? ಅಲ್ಲದೇ ಭಾರತವಿರೋಧಿಯೂದ, ಸಂ. ರಾ. ಸಂಘದ ಸದಸ್ಯನಲ್ಲದ ಕಮ್ಯುನಿಸ್ಟ್ ಚೀನ ದೊಡನೆ ಸಖ್ಯವನ್ನು ಬೆಳೆಸಲು ಮುಂದೆ ಬಂದು ನಾಪ್ರಜ್ಞಶಾಹಿಯ ಬೇಟೆಗೆ ಹೋಗಬೇಕಾದರೂ ಯಾಕೆ? ಭಾರತವು ತನ್ನ ಮೇಲೆ ಆಕ್ರಮಣವನ್ನು ನಡೆಸಿದರೆ, ಚೀನಾದ ಸಹಾಯ ಯಾಚಿಸುತ್ತಿರುವುದಾದರೂ ಯಾಕೆ? ಕಾಶ್ಮೀರದ ತಂಟೆಯನ್ನು ಬೇಗನೇ ಪರಿಹರಿಸಿಕೊಳ್ಳಲು ಉಗ್ರ ಕ್ರಮವನ್ನಾದರೂ ಏಕೆ ಕೈಗೊಳ್ಳಬೇಕು? ನ್ಯಾಯೋಚಿತ ರೀತಿಯಲ್ಲಿ ಸಮಸ್ಯೆಯು ಪರಿಹಾರಗೊಳ್ಳುವುದಾದರೆ, ಭಾರತವು ಆದಕ್ಕೆ ಸದಾ ಸಿದ್ಧ. ಆದರೆ, ಪಾಕ್ ನಾಯಕರು ಅನ್ಯಾಯವನ್ನೇ ನ್ಯಾಯವೆಂದು ಸಾಧಿಸಲು ಮುಂದೆ ಬರುವಾಗ, ಭಾರತ ಮೂಡಬಲ್ಲುದಾದರೂ ಏನನ್ನು?

ಕಾಶ್ಮೀರದ ಬಗ್ಗೆ ಅವರಾಡಿದ ಇಬ್ಬಗೆಯ ಮೊತುಗಳು ಭುಟ್ಟೋ ಮಹಾಶಯರ ನೀತಿರಹಿತ ಧೋರಣೆಯನ್ನೇ ಎತ್ತಿ ತೋರಿಸುತ್ತಿವೆ. ಒಂದೊನ್ನೆ ಈ ಸಮಸ್ಯೆಯು ಅತಿ ಜಟಿಲವಾಗಿದೆಯೆಂದೂ ಇದಕ್ಕೆ ತಮ್ಮ ಹಿಂದಿನ ಆಡಳಿತವಾರರೇ ಕಾರಣರೆಂದೂ ಗುಡುಗುತ್ತಾರೆ. ಕಾಶ್ಮೀರವು ತನಗೆ ಸೇರಿದುದು ಎಂಬ ವಾದವನ್ನು ಬಿಟ್ಟರೆ, ಪಾಕಿಸ್ತಾನವು ಈ ವಿಷಯಕ್ಕೆ ಸಂಬಂಧಿಸಿದಂತೆ ಅನುಸರಿಸಿದ ನೀತಿ ಯಾವುದೆಂಬುದು ಭುಟ್ಟೋರವರಿಗೂ ಗೊತ್ತಿಲ್ಲದಿರುವಾಗ ಇವರ ಗರ್ಜನೆ ಬಲೆಯೊಳಗಿನ ಸಿಂಹರವ ಮಾತ್ರ, ಮಳೆ ಸುರಿಸದ ಮೋಡದ ಗುಡುಗದು.

ಭುಟ್ಟೋ ಮಹಾಶಯರು ತಮ್ಮ ದುರಂತ ರಾಜಕಾರಣದ ಎಡೆಯಲ್ಲೂ ಒಂದು ಭವಿಷ್ಯ ನುಡಿದಿದ್ದಾರೆ 'ಭಾರತದ ಆಡಳಿತೆಯಿಂದ ಕಾಶ್ಮೀರದ ಜನತೆ ರೋಸಿ ಹೋಗಿದ್ದಾರೆ; ಸದ್ಯದಲ್ಲಿಯೇ ಅಲ್ಲಿ ಜನತೆ ಕ್ರಾಂತಿಯೇಳುತ್ತದೆ, ಆಗ ಕಾಶ್ಮೀರಿಗಳು ನಮ್ಮ ಸಹಾಯವನ್ನು ಯಾಚಿಸಲು ಮುಂದೆ ಬರುತ್ತಾರೆ.' ಭಾರತದ ಸುವ್ಯವಸ್ಥಿತ ಆಡಳಿತೆಯಿಂದ ಕಾಶ್ಮೀರಿಗಳು ಆದೆಷ್ಟು ಹಾಯಾಗಿದ್ದಾರೆ ಎಂಬುದನ್ನು ಪ್ರಾಯಃ ಭುಟ್ಟೋರವರು ತಿಳಿದಿಲ್ಲ; ಅಥವಾ ಸಂತುಷ್ಟಿ-ಅಸಂತುಷ್ಟಿಗಳ ಮರ್ಮವೂ ಅವರಿಗೆ ಗೊತ್ತಿಲ್ಲ ಭಾರತದ ಬಗ್ಗೆ ಖಂಡನಾ ನೀತಿಯನ್ನು ಪ್ರದರ್ಶಿಸುವುದಷ್ಟೇ ಉದ್ದೇಶವಿರುವ ಈ ಭುಟ್ಟೊ ಬಾಯ್ಗೆ ಬಂದಂತೆ ಗಳಹಿಕೊಂಡರೆ, ಕಾಶ್ಮೀರದ ಸ್ಥಿತಿ ಕೆಡಲಾರದು. ಕಾಶ್ಮೀರಿ ಜನತೆಯು ಭಾರತದೊಡನೆ ಸ್ವರ್ಗಸುಖವನ್ನನುಭವಿಸುತಿದ್ದಾರೆ ಎಂಬುದನ್ನು ಭುಟ್ಟೊ ಅರಿತುಕೊಳ್ಳಬೇಕು. ಸ್ವಯಂ ತಮ್ಮ ಸರಕಾರಿ ಆಡಳಿತೆಯಿಂದ ಪಾಕಿಸ್ತಾನಿಗಳಲ್ಲ ಅಸಂತುಷ್ಟಿಯೆದ್ದಿರುವುದನ್ನು ಅವರು ಮೊತ್ತ ಮೊದಲು ಕಂಡುಕೊಳ್ಳಬೇಕು.

ಪಾಕಿಸ್ತಾನಕ್ಕೆ ಹೇಳಿ ಕೇಳಿ ನಿರ್ದಿಷ್ಟ ವಿದೇಶೀ ನೀತಿಯಿಲ್ಲ. ಸಮಯ ಬಂದಂತೆ ತೂರಿಕೊಳ್ಳುವುದಷ್ಟೇ ಅದರ ಜೀವಾಳ. ಮುಖ್ಯವಾಗಿ ಭಾರತವು ಬಡವಾಗ ಬೇಕು (ತನ್ನ ಗೌರವಗಳಿಗದು ಬಾಧಕವಾದುದರಿಂದ) ಆದಕ್ಕಾಗಿ ಯಾವ ಪರಿಯಲ್ಲಾದರೂ ಆದನ್ನು ಬಗ್ಗು ಬಡಿಯಬೇಕು. ಇದೇ ಅದರ ತಳಹದಿ. ಇಂತಹ ದುರುದ್ದೇಶತನದ ನೀತಿಯಿಂದಾಗಿಯೇ ಪಾಕ್ ಅಭಿವೃದ್ಧಿಪತನದಲ್ಲಿ ಸರಿಯುತ್ತಿದೆ; ಜಗದ್ವಂಚಕರನ್ನೂ ನಂಬಿಕೊಂಡು ಭಾರತಕ್ಕೆ ಕೇಡು ಬಗೆಯುವ ಪಾಕ್ ಕುತಂತ್ರವು ಯಶಸ್ವಿಯಾಗುವುದಿಲ್ಲ; ತಾತ್ಕಾಲಿಕವಾಗಿ ಯಶಸ್ಸು ಗಳಿಸಿದಂತೆ ಕಂಡರೂ ಮುಂಬೆ ತನ್ನನ್ನೇ ಅವರು ಮೋಸಗೊಳಿಸುವರೆಂಬುದನ್ನು ಅದು ಅರಿತುಕೊಳ್ಳಬೇಕು.

ಕುಮ್ಮಸುಮ್ಮಗೆ ಅಪಲಾಪವೆಬ್ಬಿಸುತ್ತ ವೈದಾಡುವುದರಿಂದ ಕ್ಷೇಮವಿಲ್ಲ; ಮನಸ್ತಾಪ ಬೆಳೆಯುವುದು ಸಾಶ್ವತ. ಇದರಿಂದ ಯಾರಿಗೆ ಕ್ಷೇಮ? ದೇಶದ ಗಡಿಯಲ್ಲಿ ಚೀನೀ ರಾಕ್ಷಸರ ನೈಸಿಕ ಚಟುವಟಿಕೆಗಳು ಹೆಚ್ಚುತ್ತಿರುವ ಈ ಸಮಯದಲ್ಲಿ ಪಾಕ್ ಗರ್ಜನೆಯು ಚೀನೀಯರಿಗೊಂದು ಆಮಂತ್ರಣವೆನ್ನಬಹುದು. ಆದರೆ, ದೇಶದ ಮುಂದೆ ಬಂದು ನಿಂತಿರುವ ಈ ಪಂಥಾಹ್ವಾನವನ್ನು ಭಾರತೀಯರು ಒಂದಾಗಿ ಏಕಮನದಿಂದ ಮತ್ತು ಸಂತೋಷದಿಂದ ಸ್ವೀಕರಿಸಿದ್ದಾರೆ. ಇದರಲ್ಲಿ ಪಾಕಿಸ್ತಾನವೂ ಕೂಡಿಕೊಳ್ಳುವುದು ಭಾರತಕ್ಕೆ ಬೇಡವಾದರೂ, ಕೂಡಿ ಬಾದರೆ, ಅದೇ ನನ್ನು ತಾನೇ ಮಾಡಬಲ್ಲುದು? ಚೀನೀಯರನ್ನು ಸೇರಿ ಪಾಕಿಸ್ತಾನವು ಕಾಶ್ಮೀರಾಕ್ರಮಣಕ್ಕೆ ಮುಂದುವರಿಯಲಾರದೆಂದು ನಂಬಬಹುದಾಗಿದೆ; ಅದುದರಿಂದ, ನಾವು ಪಡೆದಿರುವ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನಕ್ಕೆ ವಿರುದ್ಧವಾಗಿ ಬಳಸಿಕೊಳ್ಳಲಿರುವ ಅಡೆತಡೆಗಳನ್ನು ಸರಳಗೊಳಿಸುವುದು ಅವಶ್ಯವೆನಿಸುವುದಿಲ್ಲವೆ?

—ಗೋರಾ.

ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.

—ಸಂ. ನ.

ಸುಲಭದಲ್ಲಿ ಉಳಿತಾಯ.....

ಕೊರ್ಪೊರೇಶನ್ ಬೇಂಕ್

ಜನತಾ ಡಿವೊಜಿಟ್ ಯೋಜನೆಯು

ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ

ವಿವರಗಳಿಗಾಗಿ ಇಂದೇ ವಿಚಾರಿಸಿರಿ:

ದಿಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೧-೮-೧೯೬೩	೪೭

ಮರಳಿ ಧಾಳಿಯೆ?

ನಮ್ಮ ದೇಶದ ಉತ್ತರದ ಗಡಿಯಲ್ಲಿ ಚೀನೀಯರು ದೊಡ್ಡ ಪ್ರಮಾಣದಲ್ಲಿ ಸೈನ್ಯವನ್ನು ಕೂಡ ಹಾಕುತಿದ್ದಾರೆ ಎಂಬ ವಾರ್ತೆಯೊಂದು ಪರಿಮಸ್ಪಗೊಂಡಿದೆ. ಏಕಪಕ್ಷೀಯ ಸಮರ ವಿರಾಮ ಘೋಷಣೆ, ಅನ್ಯಾಯವಾಗಿ ಆಕ್ರಮಿಸಿದ ಭಾರತೀಯ ಭೂಭಾಗಗಳಲ್ಲಿ ಕೆಲವನ್ನು ಬಿಡುಗಡೆಗೊಳಿಸುವಿಕೆ, ಕಂಧಾನದ ಶಾಂತಿ ಮಾರ್ಗಗಳಲ್ಲಿ ವಿಶ್ವಾಸ ಪ್ರದರ್ಶನ—ಇವುಗಳನ್ನು ಚೀನಾ ವೈಗೊಂಡುದರ ರಹಸ್ಯವೀಗ ಸ್ಪೋಟಗೊಳ್ಳುವ ಸಮಯ ಸಮೀಪಗತವಾಗುತ್ತಿದೆ. ಚೀನೀಯರು ಯುದ್ಧವನ್ನು ನಿಲ್ಲಿಸಿರುವುದರಿಂದ, ಕಂಧಾನವನ್ನು ಬಯಸುತ್ತಿರುವುದರಿಂದ ಒನ್ಮೆ ಆಡಿದ್ದ ಆಕ್ರಮಣಕಾರಿತ್ವ ದೂರವಾಯಿತೆಂದು ಕೆಲವರು ನಂಬಿದ್ದರು; ಆದರೆ, ಆದೆಲ್ಲ 'ಸೊಳ್ಳೆ' ಎಂಬುದನ್ನು ಈಗ ಚೀನೀಯರು ತಮ್ಮ ಸೇನಾ ಜಮಾವಣೆಯಿಂದ ತೋರಿಸಿ ಕೊಟ್ಟಿದ್ದಾರೆ. ಆಕ್ರಮಣದ ಕಡೆಗೆ ಅನಾಸಕ್ತಿ ತಳೆದ ಭಾರತೀಯರೂ ಕೆಲವರಿದ್ದಾರೆ; ಅಂತಹವರಿಗೆ ಮರಳಿ ಬಂದಿದೆ ಆಘಾತವನ್ನು. ಚೀನೀಯರ ಕುತಂತ್ರ, ಮೋಸದ ಮಹಾಜಾಲ ಅರುಣೋದ್ಯಮ ಜಗಜ್ಜಾಹೀರಾಗುವ ಸನ್ನಿವೇಶವೀಗ ತಾನೇ ನಿರ್ಮಾಣವಾಗುತ್ತಿದೆ. ಕಡಿಗೇಡಿ ಪಾಕಿಸ್ತಾನಿಗಳೂ ಭಾರತದ ಗಡಿಯ ತಮ್ಮ ಸೇನೆಯನ್ನು ಬಲಪಡಿಸುತಿದ್ದಾರೆಂಬ ವಾರ್ತೆಯೂ ಈಗ ಬಲವಾಗಿ ಬಂದಿದ್ದು, ಅವರ ಕುಹಕತನವನ್ನೂ ಈ ಕೈಕ್ಯ ಸಮರ್ಥಿಸುತ್ತಿದೆ

ಪಂಚಶೀಲದ ಮುಸುಕು ಹಾಕಿ ಅವನ್ನು ಮೂಲೆಗೆ ತಳ್ಳಿದ ಚೀನೀಯರ ತಂತ್ರಜಾಲವನ್ನು ಭಾರತೀಯರು ಅರಿಯದಿರಲಿಲ್ಲ. ಆದುದಂದಲೇ ಅವರು ಸಮರ ವಿರಾಮವನ್ನು ಘೋಷಿಸಿದ್ದರೂ ನಾವು ನಮ್ಮ ಸೇನಾ ಪಡೆಗಳನ್ನು ಬಲಾಢ್ಯಗೊಳಿಸುವ ಸರ್ವಪ್ರಯತ್ನಗಳನ್ನೂ ನಡೆಸುತ್ತ ಬಂದಿದ್ದೇವೆ. ಚೀನೀಯರು ನಮ್ಮ ಸ್ವಾತಂತ್ರ್ಯಕ್ಕೆ, ಸಾರ್ವಭೌಮತೆಗೆ ನೀಡಿರುವ ಪಂಥಾಹ್ವಾನವನ್ನು ನಾವು ಈ ಹಿಂದೆಯೇ ಸ್ವೀಕರಿಸಿದ್ದೇವೆ. ಜಿಕ್ಕ ಮಣಕ್ಕೆ ತಲೆವಾಗುವವರು ನಾವಲ್ಲವೆಂಬುದನ್ನು ಈ ಮೊದಲೇ ಹೊರಗೆಡಹಿದ್ದೇವೆ. ಅಲ್ಲದೆ ಇಂದು ನಮ್ಮ ಸಂರಕ್ಷಣಾ ಪಡೆಗಳು ಹಿಂದಿಗಿಂತಬಲಾಢ್ಯವಾಗಿವೆ. ನಮ್ಮ ಮಿತ್ರಂಷ್ಟ್ರಗಳ ಸಹಾಯದಿಂದ ಅವನ್ನು ನಾವು ಬಲಾಢ್ಯಗೊಳಿಸಿಕೊಳ್ಳುತಿದ್ದೇವೆ. ಶತ್ರುಗಳು ಯಾವಗಳಿಗೆಯಲ್ಲಿ ಮರಳಿ ದೇಶದೊಳಗೆ ನುಗ್ಗಿ ಬಹುದೆಂದು ಈಗಲೇ ಹೇಳುವಂತಿಲ್ಲ; ಆದರೆ, ನಾವು ಮಾತ್ರ ಆ ಧಾಳಿಯನ್ನು ಪೂರ್ಣರೂಪದಲ್ಲಿ ಎದುರಿಸಲು, ಅವರನ್ನು ಹಿಮ್ಮೆಟ್ಟಿಸಲು ತ್ರಿಕರಣ ಪೂರ್ವಕವಾಗಿ ಹೋರಾಡಬೇಕು. ಮೋಸಗಾರ ಚೀನೀಯರು ಗಡಿಗಂಟ ತಮ್ಮ ಸೇನಾ ಚಲನವಲನಗಳನ್ನು ನಡೆಸಿ, ನಮ್ಮನ್ನು ಬೆದರಿಸುವ ಇಚ್ಛೆಯಿಂದಿರಬಹುದು; ಆದರೆ ಅಂತಹ ಬೆದರಿಕೆಗಳಿಗೆ ಬಗ್ಗುವವರು ನಾವಲ್ಲ; ನಾವಾಗಿ ಬಾರದು ಮಾತೃಭೂಮಿಯ ಸಂರಕ್ಷಣಾ ಕಾರ್ಯದಲ್ಲಿ ಪ್ರತ್ಯೇಕ ನಾಗರಿಕನೂ ಮಾಡಬೇಕಾದಕರ್ತವ್ಯಗಳಿವೆ. ನಾಗರಿಕನು ತನ್ನ ಕರ್ತವ್ಯಗಳನ್ನು ನಿರಂತರವಾಗಿ ನಿಸ್ಪೃಂಕೋಚವಾಗಿ ನಿರ್ವಹಿಸಿದನೆಂದರೆ, ದೇಶದ ಬಲವು ಇಮ್ಮಡಿಸಿದಂತೆ. ಆದು ಹೊರತು, ಕರ್ತವ್ಯಭ್ರಷ್ಟನಾದನೆಂದರೆ, ದೇಶವಾದರೂ ಪತಿತವಾದಂತೆ ದೇಶದ್ರೋಹಿಯಾದರೆ, ಉಳಿವವರು ಇಲ್ಲ; ದೇಶವುಳಿದರೆ, ಉಳಿವವರಿಲ್ಲ. ಆದುದರಿಂದ, ದೇಶದ್ರೋಹೀ ಕೃತ್ಯಗಳಿಂದ ನಾಗರಿಕರು ದೂರವಾಗಬೇಕು; ದೇಶ ಹಿತದ ಮುಂದೆ ಸರ್ವಸ್ವವನ್ನೂ ತ್ಯಾಗ ಮಾಡಬೇಕು. ನಮ್ಮ ಪ್ರಧಾನ ಮಂತ್ರಿ ಜವಾಹರಲಾಲರು ಇದೇ ಕರೆಯನ್ನು ಜನತೆಗೆ ಇತ್ತಿದ್ದಾರೆ; ಸಂರಕ್ಷಣಾ ಮಂತ್ರಿ ಯಶವಂತರಾವ್ ಬಲವಂತರಾವ್ ಜವನರಾದರೂ ಇದನ್ನೇ ಕೇಳಿಕೊಂಡಿದ್ದಾರೆ. ದೇಶವಿಂದು ನಮ್ಮಿಂದ ಬಯಸುವುದಾದರೂ ಕರ್ತವ್ಯ ಪಾಲನೆಯನ್ನಲ್ಲದೆ ಮತ್ತೇನನ್ನೂ ಅಲ್ಲ.

ಅಮೆರಿಕೆ ಮತ್ತು ಬ್ರಿಟನ್ನುಗಳ ಸಹಾಯದಿಂದ ನಾವು ನಮ್ಮ ವಿಮಾನ ಪಡೆಗಳಿಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮುಕ್ಕೆ ಪೊಡಗುವವರಿದ್ದೇವೆ. ಈ ನಡುವೆಯೇ ನಮಗೆ ಅವಶ್ಯಕವಾದ ಶಸ್ತ್ರಾಸ್ತ್ರಗಳನ್ನು ನಮ್ಮ ಮಿತ್ರ ದೇಶಗಳು ಪೂರೈಸಿವೆ. ದೇಶದಲ್ಲಿ ಕೂಡ ಇವೆಗಳ ತಯಾರಿಕೆಗೆ ನಾವು ಅಗ್ರ ಪ್ರಾಶಸ್ತ್ಯವಿತ್ತು, ಆದಿಸೆಯಲ್ಲಿ ಮುಂದುವರಿಯುತಿದ್ದೇವೆ. ನಮ್ಮ ಸಂರಕ್ಷಣಾ ಪಡೆಗಳಂದು ಸುಸಜ್ಜಿತವಾಗಿವೆ; ಶತ್ರುವಿನ ದಾಳಿಯನ್ನು ಎದುರಿಸಲು ಸರ್ವ ಧರ್ಮವಾಗಿವೆ; ನಮ್ಮ ಜವಾನರು ನಮಗಾಗಿ ತಮ್ಮ ಕರ್ತವ್ಯಗಳನ್ನು ತ್ರಿಕರಣ ಪೂರ್ವಕವಾಗಿ ಪಾಲಿಸುತ್ತಿರುವಾಗ ನಾವು ಮಾತ್ರ ಕರ್ತವ್ಯ ಚ್ಯುತರಾಗುವುದು ನ್ಯಾಯಬಾಹಿರವಾಪತೆಗೆ ಬಗೆದ ದ್ರೋಹ. ಪ್ರಧಾನಿಗಳವರು ಹೇಳುವಂತೆ ಶತ್ರುವನ್ನು ಎದುರಿಸಲು ಸೈನಿಕ ಶಕ್ತಿಯೊಂದೇ ಸಾಲದು; ಮಾನಸಿಕ ಧೈರ್ಯವೂ ಬೇಕು; ದೇಶದ ಆಂತರಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು; ವ್ಯವಸಾಯ, ಉದ್ಯಮ ಮೊದಲಾದ ರಂಗಗಳಲ್ಲಿಯೂ ನಾವೂ ತೀವ್ರವಾಗಿ ಪ್ರಯತ್ನಿಸಬೇಕು. ಹೀಗೆ ದ್ವಿಮುಖವಾಗಿ ಕಾರ್ಯ ಮುಂದುವರಿದರೆ ಮಾತ್ರ ಶತ್ರುವನ್ನು ನಾವು ಯಶಸ್ವಿಯಾಗಿ ಗೆಲ್ಲಬಲ್ಲೆವೆ.

ಇದಕ್ಕಾಗಿ ನಾವೇನು ಮಾಡಬೇಕು? ಸರಕಾರದೊಡನೆ ಸರ್ವ ರೀತಿಯಿಂದಲೂ ಸಹಕರಿಸುವುದು ಅತ್ಯಗತ್ಯ. ಇಂತಹ ಸಹಕಾರವನ್ನು ನಾವು ಹೇಗೆ ನೀಡಬಹುದು? ಮೊತ್ತಮೊದಲನೆಯದಾಗಿ ತಾನು ಮಾಡುತ್ತಿರುವ ಯಾವುದೇ ಕೆಲಸವನ್ನು ನಿರ್ವಂಚನೆಯಿಂದ, ಪೂರ್ಣ ಮನಸ್ಸಿನಿಂದ ನಿರ್ವಹಿಸುವುದು. ಸರಕಾರವು ವಿಧಿಸಿದ ಮತ್ತು ವಿಧಿಸುವ ಕಾನೂನು-ಕಾಯಿದೆಗಳನ್ನು ವಿಧೇಯರಾಗಿ ಪರಿಪಾಲಿಸುವುದು. ಆವಶ್ಯಕ ಪದಾರ್ಥಗಳ ಬೆಲೆಗೆ ರದಂತೆ ತಡೆಹಿಡಿಯುವುದು; ಸಾಧ್ಯವಾದಷ್ಟು ಮಟ್ಟಗೆ ಮಿತವ್ಯಯವನ್ನು ಸಾಧಿಸುವುದು. ನಸ್ಮೃಷ್ಟಿಸುಸ್ಪತ್ತಾಗಿರುವ ರಾಷ್ಟ್ರಭಕ್ತಿ ಯು ಸದಾ ಜಾಗ್ರತವಿರುವಂತೆ ನೋಡಿಕೊಳ್ಳುವುದು—ಇನ್ನೇ ಮೊದಲಾದುವುಗಳು ನಾಗರಿಕರ ಆದ್ಯ ಕರ್ತವ್ಯಗಳು. ಇವುಗಳನ್ನು ಪರಿಪಾಲಿಸುವುದರಿಂದ, ದೇಶದ ನಾಡಿನಾಡಿಗಳಲ್ಲಿ ಹೊಸ ರಕ್ತ ಹರಿಯುತ್ತದೆ; ನವ ಚೈತನ್ಯದಿಂದ ಎಡತಾಕಿದ ಘೋಷಕಾರದ ಶತ್ರುವನ್ನಾದರೂ ನೆಲಸಮ ಮಾಡುವುದು ಸಾಧ್ಯವಾಗುತ್ತದೆ. ಭಾರತೀಯರು ಈ ಬಗ್ಗೆ ದೃಢ ಪ್ರತಿಜ್ಞೆ ಗೈಯ್ಯಲಾರರೆ?

ಬಂದರದ ಅಭಿವೃದ್ಧಿ

ಕರಾವಳಿಯ ಬಂದರುಗಳಿಂದ ಕರ್ನಾಟಕ ರಾಜ್ಯದ ವ್ಯಾಪಾರವು ಹೆಚ್ಚಿದೆಯೆಂಬ ವಾರ್ತೆಯು ಕೆಲದಿನಗಳಿಗೆ ಮೊದಲು ಬಂದಾಗ, ಮಂಗಳೂರು ಬಂದರದ ಅಭಿವೃದ್ಧಿ ಕಾರ್ಯವು ಕುಂಠಿತವಾಗುತ್ತಿದೆಯೆಂಬ ದೂರಿಗೆ ವ್ಯಾಶಸ್ತ್ಯ ಕಡಿಮೆಯಾಯಿತು. ಸರಕಾರವು ವ್ಯಾಪಾರಾಭಿವೃದ್ಧಿ ಹೇತುವಾದ ಬಂದರಾಭಿವೃದ್ಧಿಯ ಕಾರ್ಯವನ್ನು ಬಿಟ್ಟುಕೊಡದೆ ತನಗೂ ಬುದ್ಧಿಯಿದೆ ಯೆಂಬುದನ್ನು ತೋರಿಸುತ್ತಿದೆ, ನಿಜಕ್ಕೂ ಇದು ಶ್ಲಾಘನೀಯ. ಮಂಗಳೂರು ಬಂದರದ ಯೋಜನೆಯು ಸುಮಾರು ೧೫ಕೋಟಿ ರೂಪಾಯಿಗಳದ್ದಾಗಿದೆ. ರಾಜ್ಯ ಸರಕಾರದ ವಕ್ತಾರರು ದೇಳುವಂತೆ, ಬಂದರದ ನಿರ್ಮಾಣಕ್ಕೆ ತೊಡಗುವುದರ ಪೂರ್ವಭಾವೀ ಕಾರ್ಯಗಳನ್ನು ನಡೆಸಲು ಸೂಕ್ತ ವ್ಯವಸ್ಥೆಯು ಈಗಾಗಲೇ ನಡೆದಿದೆ. ಮುಂಗಾರು ಪ್ರಾರಂಭದೊಳಗಾಗಿ ಅವಶ್ಯಕ ಭೂಮಿಯನ್ನು ಸ್ವಾಧೀನ ಪಡಿಸಲು ರೂ. ೫೫ ಲಕ್ಷವನ್ನು ಜಿಲ್ಲಾಧಿಕಾರಿಗಳ ವಶದಲ್ಲಿ ಕೊಟ್ಟು ಈ ಭೂಮಾಯನ್ನು ಬಂದರಾಧಿಕಾರಿಯು ವೈಗೊಪ್ಪಿಸಬೇಕೆಂದು ಆಜ್ಞೆ ಮಾಡಿದೆ; ಇದಕ್ಕಾಗಿಯೇ ವಿಶೇಷ ಜಿಲ್ಲಾಧಿಕಾರಿಯೊಬ್ಬನನ್ನೂ ನೇಮಿಸಿದೆ. ಈ ವಿಶೇಷಾಧಿಕಾರಿಯು ಇಷ್ಟರಲ್ಲಿಯೇ ಅಧಿಕಾರ ಸ್ವೀಕರಿಸಲಿರುವರು. ಭೂ ಸ್ವಾಧೀನತೆಯೆಂದಾಗಿ ನಿರಾಶ್ರಿತರಾಗುವ ಸುಮಾರು ೧೫೦ ಕುಟುಂಬಗಳಿಗೆ, ಅವಶ್ಯಕ ಪರಿಹಾರವನ್ನೂ ಸಾಲ ಸವಾಯಿಗಳನ್ನೂ ನೀಡಲು ಸೂಕ್ತ ವ್ಯವಸ್ಥೆಯನ್ನು ಸರಕಾರ ಮಾಡುತ್ತಿದೆ. ಬಂದರದ ಕಾರ್ಯಕ್ಕಾಗಿ ಭೂಸ್ವಾಧೀನ ಪಡಿಸಲು ನೇಮಿತರಾದ ವಿಶೇಷ ಅಧಿಕಾರಿಯು ಹಾಸನ-ಮಂಗಳೂರು ರೇಲ್ವೆ ರಚನೆಗಾಗಿಯೂ ಭೂಮಿಯನ್ನು ವಶಪಡಿಸುವ ಕೆಲಸವನ್ನೂ ನಿರ್ವಹಿಸುವನೆಂದು ಗೊತ್ತಾಗಿದೆ—ಹೀಗೆ ರಾಜ್ಯ ಸರಕಾರವು ಈ ಎರಡೂ ಕಾರ್ಯಗಳಲ್ಲಿ ಏನಾನ್ನೆ ಪಹಿಸುತ್ತಿದೆಯೆಂಬ ಆರೋಪಗಳಿಗೆ ವಕ್ತಾರನಿಗೆ ಉತ್ತರ ಹೇಳಿದ್ದಾನೆ. ಆದಕ್ಕೆ ಅವನಿಗೆ 'ಕೆಲವು ನಿರ್ಧಾರಗಳನ್ನು ಪರಿಷ್ಕರಿಸಲಾಗುವುದು ಅಥವಾ ವಿಲಂಬಗೊಳಿಸಲಾಗುವುದು' ಎಂಬುದರ ಬಗ್ಗೆ ವಿನೂ ತಿಳಿದಿಲ್ಲ. ಆದುದರಿಂದಲೇ ಈ ಯೋಜನೆಗಳಿನ್ನೂ ಅಂತಿಮ ರೂಪಕ್ಕೆ ಬಂದಿಲ್ಲವೇ ಎಂಬ ಸಂಶೇಹವೇಳುವುದು ಸ್ವಾಭಾವಿಕ. ವಿಕೆಂದರೆ, ಅನಿರೀಕ್ಷಿತ ವಿಘ್ನೆಗಳು ಮುಂದೆ ಬಂದರೆ ಮಾತ್ರ ಯಾವುದೇ ಯೋಜನೆಯು ತಡೆಹಿಡಿಯಲ್ಪಡಬಹುದ; ವಿಳಂಬಿಸಲ್ಪಡಬಹುದು ಜೀವನದ ಆಕ್ರಮಣ ನಡೆದರೂ ಸಹ ನಿರೀಕ್ಷಿತವೇ ಇರುವುದರಿಂದ, ಇನ್ನಿತರ ಅಲ್ಪ ಕಾರಣಗಳಿಗಾಗಿ ವ್ಯಾಪಾರಾಭಿವೃದ್ಧಿಗೆ ಸವಾಡ ಪುರುಷನಂತಿರುವ ಬಂದರ ಹಾಗೂ ರೈಲು ಮಾರ್ಗಗಳ ಕಾರ್ಯಗಳನ್ನು ನಿಲ್ಲಿಸದೆ, ನಡೆಯುದೆ ಶೀಘ್ರದಲ್ಲಿ ಯೇ ತೊಡಗಬೇಕು; ಪೂರ್ಣಗೊಳಿಸಬೇಕು.

ಸೂಚನೆ

ತಾ. 15—8—63ರ ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯ ಕೆಲಸ ನಿಮಿತ್ತ, ಬರುವ ವಾರದ ಅಂದರೆ ತಾ. 8—8—63ರ 'ನವಯುಗ' ಸಂಚಿಕೆಯನ್ನು ನಿಲ್ಲಿಸಲಾಗಿದೆ. ವಾಚಕರು ಗಮನಿಸಬೇಕಾಗಿ ವಿನಂತಿ.

—ಮೆನೇಜರ್.

ಎಲ್. ಐ. ಸಿ. ಯ ಆದ್ವಿತೀಯ ಸಾಧ್ಯ

ಮುಂಬಯಿಯಲ್ಲಿ ಝೋನಲ್ ಮತ್ತು ಮ್ಯಾನೇಜರರ ಸಮ್ಮೇಲನ

"ಕಾರ್ಪೋರೇಷನ್‌ನ ಮೂಲಕಾರ್ಯಕ್ರಮ-ವೇನಾಗಿದೆಯೆಂದರೆ, ಜನತೆಗೆ ಪ್ರಯೋಜನವಾಗುವ ವಿಧದಲ್ಲಿ ಜೀವ ವಿಮಾ ವ್ಯವಹಾರವನ್ನು ಅಭಿವೃದ್ಧಿಗಳಿಸಲೋಸ್ಕರ ತನ್ನ ಅಧಿಕಾರಗಳನ್ನು ಉಪಯೋಗಿಸುವುದು.

'ಜೀವ ವಿಮಾ ಉದ್ಯಮಗಳನ್ನು ಯಶಸ್ವಿಯಾಗಿ ನಡಿಸಲು ಎಕ್ಚುಟೇರಿಯಲ್ ತತ್ವಗಳ ಮತ್ತು ಆಜರಣೆಯ ಅನುಭವದ ಮೂಲಕ ಕಂಡು ಬಂದಿರುವ ಜಗತ್ತಿನ ಶ್ರೇಷ್ಠ ವಿಮಾ ಸಂಪ್ರದಾಯಗಳನ್ನು ಎಲ್. ಐ. ಸಿ. ಯು. ಅನುಸರಿಸಿ ತನ್ನ ಮುಂದಿರುವ ಗುರಿಯನ್ನು ಸಾಧಿಸಲೋಸ್ಕರ ಸಂಯೋದ ಪಥದಲ್ಲಿ ಸಾಗುತ್ತಿದೆ."

ಇದು ಕಾರ್ಪೋರೇಷನ್‌ನ ಚೇರ್‌ಮನ್, ಶ್ರೀ ಬಿ. ಕೆ. ಕೌಲ್, ಐ. ಸಿ. ಎಸ್., ನಾಲ್ಕನೆಯ ಆಲ್-ಇಂಡಿಯಾ ಡಿವಿಜನಲ್ ಮ್ಯಾನೇಜರ್ಸ್ ಸಮ್ಮೇಲನದಲ್ಲಿ ಮಾಡಿರುವ ಹೇಳಿಕೆಯೊಗರಿಂತ್ತದೆ. ಮುಂಬೈಯಲ್ಲಿ ನಡೆದ ಈ ಸಮ್ಮೇಲನದಲ್ಲಿ ಮಾಡಿರುವ ಚೇರ್‌ಮನ್‌ನವರ ಹೇಳಿಕೆ ಪಾಲಿಸಿದಾರರಿಗೆ ಉತ್ತಮ ಸೇವೆಯನ್ನು ಒದಗಿಸಲೋಸ್ಕರ ಕಾರ್ಪೋರೇಷನ್ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆಯೆಂಬುದನ್ನು ದೃಢೀಕರಿಸುತ್ತದೆ.

ವ್ಯವಹಾರವನ್ನು ತೀವ್ರವಾಗಿ ಅಭಿವೃದ್ಧಿಗೊಳಿಸುತ್ತಾ ಹೋದಂತೆ ಆ ವ್ಯವಹಾರವು ಶ್ರೀಘ್ರತರಗತಿಯದ್ದಾಗಿರುವಂತೆ ಮಾಡಲು ಕೈಗೊಂಡಿರುವ ಕ್ರಮಗಳನ್ನೂ ಸಮ್ಮೇಲನದಲ್ಲಿ ವಿಮರ್ಶಿಸಲಾಯಿತು. ಪ್ರಧಾನ ಪ್ರೀಮಿಯಮ್ ಇಂತನ್ನು ಪ್ರೋತ್ಸಾಹಕ ಗಳೊಡನೆ ತೆಗೆದುಕೊಳ್ಳುವ ಪದ್ಧತಿ, ಮ

ತ್ತು ವ್ಯವಹಾರ ಪುಸ್ತಕಗಳನ್ನು ನರ್ಸರಿ ಕೊನೆಯೊದ ಕೂಡಲೇ ಮುಚ್ಚುವ ಕ್ರಮ ಕಾರ್ಪೋರೇಶನ್ ವ್ಯವಹಾರವು ಶ್ರೀ ಸ್ವತಂತ್ರವಾಗಿರುವಂತಹ ಪರಿಣಾಮವನ್ನು ಉಂಟುಮಾಡಿರುತ್ತದೆ.

ಹೊಸ ವ್ಯವಹಾರ

ಕಾರ್ಪೋರೇಷನ್‌ನ 1962—63ರ ವ್ಯವಹಾರವನ್ನು ವಿಸರ್ಜಿಸಲಾಯಿತು. 1962—63ರ ಹೊಸ ವ್ಯವಹಾರ (15 ನೂತನಗಳಿಗೆ) 1961—62ರ ಹೊಸ ವ್ಯವಹಾರಕ್ಕಿಂತ (15 ನೂತನಗಳಿಗೆ) ಸುಮಾರು ರೂ. 100 ಕೋಟಿಗಳಷ್ಟು ಹೆಚ್ಚಾಗಿರುತ್ತದೆ. ಕಾರ್ಪೋರೇಷನ್‌ನ 1961—62ರ ಹೊಸ ವ್ಯವಹಾರ ರೂ. 647 ಕೋಟಿಗಳ ಮೊತ್ತದ 15·6 ಲಕ್ಷ ಪಾಲಿಸಿಗಳಾಗಿದ್ದರೆ. ಈ ವ್ಯವಹಾರ 1962—63ನೇ ಸಾಲಿನಲ್ಲಿ ರೂ. 745 ಕೋಟಿಗಳ ಮೊತ್ತದ 17·6 ಲಕ್ಷ ಪಾಲಿಸಿಗಳಾಗಿರುತ್ತದೆ.

ಕಾರ್ಪೋರೇಷನ್‌ನ ಕಳೆದ ವರ್ಷದ ಹೊಸ ವ್ಯವಹಾರದಲ್ಲಿ ಸೇಕಡಾ 38.5 ರಷ್ಟು ಪಾಲಿಸಿಗಳು ಮತ್ತು ಸೇಕಡಾ 31.9ರಷ್ಟು ವಿಮಾ ಹಣ ಗ್ರಾಮೀಣ ಪ್ರದೇಶಗಳಿಂದ ಬಂದ ವ್ಯವಹಾರವಾರವಾಗಿರುತ್ತದೆ. ಗ್ರಾಮೀಣ ವ್ಯವಹಾರವನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ಪ್ರಧಾನಗಳನ್ನು ಪರಿಶೀಲಿಸಲಾಯಿತು.

ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯ ವೈಯಕ್ತಿಕ, ಮತ್ತು ಕುಟುಂಬದ ಜೀವನದಲ್ಲಿ ಎಲ್. ಐ. ಸಿ. ಯ ಪಾತ್ರವನ್ನು ಚೇರ್‌ಮೆನ್ನರವರು ಮುಕ್ತಾಯ ಭಾಷಣದಲ್ಲಿ ವಿವರಿಸಲಾಯಿತು. ಕಾರ್ಪೋರೇಷನ್ ಸಂಗ್ರಹಿಸುತ್ತಿರುವ ಪ್ರೀಮಿಯಂಗಳ ನಿಧಿಗಳನ್ನು ರಾಷ್ಟ್ರದ ಅಭಿವೃದ್ಧಿಯ ಕಾರ್ಯದಲ್ಲಿ ಒದಗಿಸುವ ವಿಷಯವನ್ನೂ ಸೂಚಿಸಲಾಯಿತು. ಉದಾಹರಣೆಗಾಗಿ, ಕಾರ್ಪೋರೇಷನ್ ರೂ. 83 ಕೋಟಿಗಳನ್ನು ಕೇಂದ್ರ ಸರಕಾರದ 1973—74%— ಸಾಲದಲ್ಲಿ ಮತ್ತು ರೂ. 1·5 ಕೋಟಿ ನಿಧಿಯನ್ನು ಕರ್ನಾಟಕ ಮೂಲಕ ನಿಧಿಗಳ ಮೂಲಕ ಸಾಮಾನ್ಯ ಗೃಹನಿರ್ಮಾಣ ಕಾರ್ಯಗಳಿಗಾಗಿ ಹೀಗೆ ಮಾತ್ರ ಕಾರ್ಪೋರೇಷನ್ 41 ಕೋಟಿಗಳನ್ನು ನಿಧಿಯನ್ನಾಗಿ ಹೂಡಿರುತ್ತದೆ.

ಇತ್ತೀಚೆಗೆ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಈ ಸಂಸ್ಥೆಗೆ ಒಂದು ಪ್ರಾಮುಖ್ಯ ಸ್ಥಾನವಿದೆಯೆಂದು ತಿಳಿಯಬಹುದು.

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

S. E. P. 79/63 S. C. 485/62

ಅಪ್ಪಮ್ಮ — ಅರ್ಜಿದಾರಳು

ಇಬ್ರಾಹಿಂ ವಾಜಾತ್ ಬ್ಯಾರಿ- ಟೀನಸ್ಸು ಇಬ್ರಿ ಬ್ಯಾರಿಯ ಮಗ, ತಕ್ಕಾರು ಗ್ರಾಮದ ಟೀನಸ್ಸು — ಎದ್ರಿ

—ಎದ್ರಿಗೆ ತಿಳಿಯಪಡಿಸುವುದೇನೆಂದರೆ:

ನಿಮ್ಮನ್ನು ಕಾರಣಾಂತರದಿಂದ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕೆಂತ ದಾಕಲು ಮಾಡಿದ ಈ ಅಮಲ್ಜಾರಿಯು ತಾ. 19—8—63ಕ್ಕೆ ಇರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ಅರ್ಜಿದಾರಳ ವಕೀಲ.

ಪುತ್ತೂರು, ತಾ. 19—7—63.

ಅಲ್ಲಲ್ಲಿಯ ಸುದ್ದಿಸಾರ

ವಿದಾಯ ಕೂಟ— ಉಡುಪಿ ಕರ್ನಾಟಕ ಬೇಂಕಿನ ಶ್ರೀ ಎ. ಶಂಕರನಾರಾಯಣ ಹೆಬ್ಬಾರರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯಿತ್ತು ಮೇಲ ವೃತ್ತಿ ಪ್ರವೇಶಿಸುವ ಮುನ್ನ ಶ್ರೀಯುತರ ಮಿತ್ರ ವೃಂದವು ಏರ್ಪಡಿಸಿದ್ದ ವಿದಾಯ ಸಮಾರಂಭವು ತಾರೀಕು 21—7—63ರಲ್ಲಿ ಕೋಳಿದ ಪೇಟೆಯಲ್ಲಿ ಶ್ರೀ ಸಿ. ಸುಬಾಬಲ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು.

ಮಿತ್ರವೃಂದದ ಪರವಾಗಿ ಶ್ರೀಗಳಾದ ಬೈಕಾಡಿ ಶ್ರೀನಿವಾಸರಾವ್, ಯು. ರಾಮದಾಸ ಆಚಾರ್ಯ, ಐ. ಡಿ. ರಾಘವೇಂದ್ರ ರಾವ್, ಪಿ. ಪರಮೇಶ್ವರ ಆಚಾರ್ಯ ಮೊದಲಾದವರು ಆತಿಥಿಗಳ ಗುಣಗಾನ ಮಾಡಿದರು. ನೆಲೆಯರು ನೀಡಿದ ಉಡುಗೊರೆಯನ್ನು ಶ್ರೀ ಡಿ. ಎ. ಗೋವಿಂದರಾವ್‌ರವರು ಶ್ರೀಯುತ ಹೆಬ್ಬಾರರಿಗೆ ಸಮರ್ಪಿಸಿದರು. ಮುಖ್ಯ ಅತಿಥಿ ಶ್ರೀ ಹೆಬ್ಬಾರರು ಮೂಕನಾಡಿ ಕೃತಜ್ಞತೆ ಅರ್ಪಿಸಿದರು. ಆಧ್ಯಕ್ಷರ ಭಾಷಣದ ನಂತರ ಶ್ರೀ ಸಂಜೀವ ಶೆಟ್ಟಿಯವರು ಆಭಾರಗಳನ್ನು ಸಲ್ಲಿಸಿದರು.

ಶಿಕ್ಷಕರ ಮತ್ತು ಪಾಲಕರ ದಿನಾಚರಣೆ— ಉಡುಪಿಯ ಸೈಂಟ್ ಸಿಸಿಲಿಸ್ ಹೈಸ್ಕೂಲಿನಲ್ಲಿ ಶಿಕ್ಷಕರ ಮತ್ತು ಪಾಲಕರ ದಿನಾಚರಣೆಯನ್ನು ಜುಲಾಯಿ 25ರಂದು ಶ್ರೀ ಯಂ. ಭವಾನಿಶಂಕರ್ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಮೊದಲು ಈ ವರ್ಷದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನು ಆರಿಸಲಾಯಿತು. ಶ್ರೀ ಶಂಕರರಾಯರು ಅಧ್ಯಕ್ಷರಾಯೂ, ಶ್ರೀಮತಿ ಕಮಲಾ ನಾಯಕ್ ಉಪಾಧ್ಯಕ್ಷರಾಗಿಯೂ, ಡಾ. ಪಿಂಟೋ ಕಾರ್ಯದರ್ಶಿಯಾಗಿಯೂ, ಶ್ರೀ ಶಿವರಾಯರು ಕೋಶಾಧ್ಯಕ್ಷರಾಗಿಯೂ ರೆವರೆಂಡ್ ಸುದರ್ ಜೋಸ್ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಬಡ ಮಕ್ಕಳಿಗೆ ಪುಸ್ತಕ ವಿತರಣೆ

ಬೈಲೂರು ಯಂ. ಯಂ. ಕಿರಿಯ ಬುನಾದಿ ಶಾಲೆಯಲ್ಲಿ ಬೈಲೂರು ಪಂಚಾಯತ್ ಬೋರ್ಡಿನ ಪತಿಯಿಂದ ಒದಗಿಸಲಾದ ಪುಸ್ತಕಗಳ ವಿತರಣೆಯು ತಾ. 22—7—63ರಂದು ಶ್ರೀ ಗೋಪಾಲ ರೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಗ್ಲೆನ್ಡಿನ್ ಜತ್ತನ್ನರು ಸ್ವಾಗತ ಭಾಷಣ ಮಾಡಿದರು. ಧರ್ಮಕ್ಷರು ಶಾಲೆಗೆ ತಪ್ಪದೆ ಬರುವ ಅಗತ್ಯದ ಕುರಿತು ಮಾತನಾಡಿದ ಬಳಿಕ ಧನ್ಯವಾದ ಸಮರ್ಪಣೆ ಯೊಂದಿಗೆ ಸಭೆ ಕೊನೆಗೊಂಡಿತು.

ತೋಕ ಸೇವಾ ಹೈಸ್ಕೂಲಿನಲ್ಲಿ ಶ್ರೀಮೂರ್ ಶಂಕರಾಳ್ವರು— ತೋಕಿಯ 22—7—63ರಂದು ತೋಕಸೇವಾ ಸದಸ್ಯರಾದ ಶ್ರೀ ಎ ಶಂಕರಾಳ್ವರು, ಪೈಸಾರಿ ವಿದ್ಯಾಸಂಸ್ಥೆಯ ಪರಿಚಿತರು ಮಾಜಿ ಸದಸ್ಯ ನಿಡ್ಡಕೇಟು ಶ್ರೀ ಕೆ. ಬಾಲಕೃಷ್ಣ ರಾಯರೊಂದಿಗೆ ತೋಕಸೇವಾ ಹೈಸ್ಕೂಲು ಮತ್ತು ಪಾ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿದರು. ಹೈಸ್ಕೂಲು ಮತ್ತು ಪಾ. ಎಲಿಮೆಂಟರಿ ಶಾಲೆಗಳ ಜತೆ ಸಭೆಯನ್ನು ಉದ್ದೇಶಿಸಿ ಶ್ರೀ ರಂಕರಾಳ್ವರು ಮಾತನಾಡುತ್ತಾ ತೋಕಸೇವಾ ವೃಂದದ ಯೋಜನೆಗಳನ್ನು ಶ್ಲಾಘಿಸಿ ಈ ವಿದ್ಯಾಸಂಸ್ಥೆಯು ಉನ್ನತಮಾನಿ ಬೆಳೆದು ಕೀರ್ತಿ ತರಲೆಂದರು.

ಶ್ರೀ ಕೆ. ಬಾಲಕೃಷ್ಣ ರಾಯರು ಮೂತನಾಡುತ್ತಾ ಈ ಹಳ್ಳಿಯನ್ನು ನೋಡುವಾಗ ಇದೊಂದು ಹೈಸ್ಕೂಲು ಮೊತ್ತವಲ್ಲಿ, ಕಾಲೇಜು ಸ್ಥಾಪಿಸಲೂ ಕೂಡಾ ಯೋಗ್ಯವೆಂದರು. ಶ್ರೀ ರಂಭಪಲ್ಲಿ ಸಂಸ್ಥೆಯ ಅಧ್ಯಕ್ಷರು ಆತಿಥಿಗಳನ್ನು ಸ್ವಾಗತಿಸಿ ಪರಿಚಯ ಭಾಷಣ ಮಾಡಿದರು. ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ವಿದ್ಯಾರ್ಥಿ ವೇತನ— ಕರ್ನಾಟಕ ಶ್ರೀ ನೈಟ್ ಹೈಸ್ಕೂಲಿನ ಸಂಚಾಲಕರಾದ ಮುಂಬಯಿಯ ಬಂಟರ ಯಾನೆ ನಾಡವರ ಸಂಘದವರು ಇಲ್ಲಿಯ ಕಾಲೇಜುಗಳಲ್ಲಿ ಕಲಿಯುವ ಯೊ ಳಿಯಲಿಬ್ಬಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿ ವೇತನ ರೂಪದಿಂದ ಸಾಲ ಕೊಡುವುದರಿಂದ ಧನ ಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಆಗೋಸ್ತು ತಿಂಗಳ 5ರೊಳಗೆ ಅರ್ಜಿ ಮಾಡಬೇಕಾಗಿ ಆಪೇಕ್ಷಿಸಲಾಗಿದೆ.

Hon. Gen. Secretary, Bunt Alias Nadava Sangha 4/34 Navayug Nivas, Opp. Minerva Cinema Lamington Road, Bombay—7.

ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘದ ಸಭೆ— ಈ ಸಂಘದ ಆದಿತ ಸಮಿತಿಯ ಸಭೆಯು ಜುಲೈ 21ರಂದು ಮಂಗಳೂರಲ್ಲಿ ಶ್ರೀ ಕೆ. ಪದ್ಮನಾಭ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವೆಂಕಟರಾಯರು ಸಂಘದ ಚಟುವಟಿಕೆಗಳನ್ನು ವಿವರಿಸಿದರು. ಆನಂತರ ಪರಿಷ್ಕೃತ ಹುಟ್ಟು ಭತ್ತೆಯನ್ನು ಶಿಕ್ಷಕರಿಗೆ ಕೊಡಬೇಕೆನ್ನುವ, ಪಂಚಾಯತ್ ರಾಲಾ ಶಿಕ್ಷಕರಿಗೆ ಬಾಕಿಯಾದ ಗ್ರಾಂಟನ್ನು ಕೂಡಲೇ ಮಂಜೂರು ಮಾಡಬೇಕೆನ್ನುವ ಪ್ರೋವಿಡೆಂಟ್ ಫಂಡ್‌ನ್ನು ಒಡನೆ ಒದಗಿಸಬೇಕೆನ್ನುವ, ಮೊದಲಾದ ನಿರ್ಣಯಗಳಾದುವ ಸರಿಸುಮಾರು ಚಟುವಟಿಕೆಗಳ ಪ್ರಚಾರಾರ್ಥಕ ಪತ್ರಿಕೆಯೊಂದನ್ನು ಹೊರಡಿಸುವ ಕಾರ್ಯವು ನಡೆದು ಮೂಡಲು ಸಮಿತಿಯೊಂದನ್ನು ರಚಿಸಲಾಯಿತು. ರಾಜ್ಯ ಪ್ರಶಸ್ತಿಯನ್ನು ಗಳಿಸಿರುವ ಪೆಜ್ಜಾಡಿ ಹಾ. ಎ. ಶಾಲೆಯ ಹೆಡ್‌ಮಾಸ್ಟರ್ ಶ್ರೀ ಪಿ. ನುಡಲಿಂಗ ಶೆಟ್ಟಿರನ್ನು ಅಭಿನಂದಿಸಲಾಯ್ತು.

ಮಣಿಪಾಲಕ್ಕೆ ತಜ್ಞ ವೈದ್ಯಾಧಿಕಾರಿಗಳ ಆಗಮನ— ಉಡುಪಿಯವರಾಗಿದ್ದು ವಿದೇಶೀಯ ತಜ್ಞ ಅನುಭವಗಳೊಂದಿಗೆ ದೇಶದ ಪ್ರಖ್ಯಾತ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಸದ್ಯ ನೆಲ್ಲೂರಿನ ಜನರಲ್ ಆಸ್ಪತ್ರೆಯಲ್ಲಿ 'ಯುರೋಲಜಿ' ವಿಭಾಗದ ಮುಖ್ಯಸ್ಥರಾಗಿರುವ ಡಾ! ಎಚ್. ಶಶಿಧರ ಭಟ್ ಎಂ. S. ರವರು ಕಳೆದ ತಾ. 27ರಂದ ಒಂದು ತಿಂಗಳ ಕಾಲ ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ತಮ್ಮ ಬಿಡುವಿನ ಸಮಯವನ್ನು ಸಾರ್ವಜನಿಕರು ಪರಿಣತರಿದ್ದು ಅವರ ತಜ್ಞ ಅನುಭವದ ಸೌಲಭ್ಯವನ್ನು ಸಾರ್ವಜನಿಕರು ಪಡೆಯುವರೆ ವಿನಂತಿಸಿದ್ದು ಮಾಡಲಾಗಿದೆ. ಆ ಬಗ್ಗೆ ಆಸ್ಪತ್ರೆಯಲ್ಲಿ ಮುಂದಾಗಿ ತಿಳಿಸಿ ಪರೀಕ್ಷಾ ಸಮಯವು ನಿಶ್ಚಯಿಸಿಕೊಳ್ಳಬಹುದೆಂದು ಆಸ್ಪತ್ರೆಯ ಆಡಳಿತ ವರ್ಗ ತಿಳಿಸಲು ಆಪೇಕ್ಷಿಸುತ್ತಾರೆ.

ಜಡ್ಡರಾಗಿ ಶ್ರೀ ಕೆ. ನಾರಾಯಣ ರೈಯವರ ಆಯ್ಕೆ— ಮಂಗಳೂರಿನ ಪ್ರಸಿದ್ಧ ವಕೀಲ ಶ್ರೀ ಕೊಡೂರು ನಾರಾಯಣ ರೈಯವರು ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿದ್ದಾರೆ.

ಉಡುಪಿ ಶ್ರೀ ವೆಂಕಟೇರ ದೇವ ಸ್ಥಾನದಲ್ಲಿ— ಕಳೆದ ತಾ. 15ರಿಂದ 25ರ ತನಕ ಹರಿದಾಸ ಭೂಷಣ ಮೂಡಬಿದ್ರೆ ಹರಿದಾಸರಿಂದ ಹರಿಕಥಾ ಕಾಲಕ್ಷೇಪವು ಜರಗಿತು. ಮಂಗಳೋತ್ಸವದಂದು ಹರಿದಾಸರಿಗೆ ಪಾರಿತೋಷಕವನ್ನಿತ್ತು ಶ್ರೀ ರಾಘುವೇಂದ್ರ ಕೃಷ್ಣ ಭಟ್ಟರು ಧನ್ಯವಾದ ಸಮರ್ಪಿಸಿದರು.

ಕಿದಿಯೂರು— ಕಿರಿಯ ಬುನಾದಿ ಉನ್ನತ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಶ್ರೀ ಎಚ್. ವೆಂಕಟಗಿರಿ ಮತ್ತು ಶ್ರೀ ಕೆ. ಎಲ್. ಕೆದ್ಲಾಯರನ್ನು ಬೀಳ್ಕೊಡುವ ಸಮಾರಂಭವು ಜುಲಾಯಿ 20 ರಂದು ಶ್ರೀ ಎ. ಜೆ. ಅಲ್ಬುಯರರ ಹಿರಿತನದಲ್ಲಿ ನಡೆಯಿತು. ಸಭೆಕರೆದ ಶ್ರೀಗಳಾದ ಪಿ ಶ್ರೀನಿವಾಸರಾವ್, ಶ್ರೀ ಕೆ. ಕೆ. ತಂತ್ರಿ, ಶ್ರೀ ಎ. ನಾರಾಯಣ ತಂತ್ರಿ ಇವರು ಆಗಲಿರುವ ಅಧ್ಯಾಪಕರ ಗುಣಗಾನ ಗೈದು ಶುಭ ಕೋರಿದರು. ಆತಿಥಿಗಳಾಗಿ ಬಂದ ಉಪ ವಿದ್ಯಾಧಿಕಾರಿಗಳೂ, ಪರೀಕ್ಷಾಧಿಕಾರಿಗಳೂ ಶುಭಕೋರಿ ಹಿತನುಡಿಗಳನ್ನಾಡಿದರು. ಉಪಾ ಉಪಹಾರದೊಂದಿಗೆ ಸಭೆಯು ಚದರಿತು.

ಸಮಾರೂರು—ಸ್ಥಳೀಯ ಸಂಚಾಯತ್ ಅಧ್ಯಕ್ಷ ಶ್ರೀ ಎಸ್. ಪಂಕಪ್ಪ ರೈಗಳ ಹುಟ್ಟು ಹಬ್ಬ ಜಯಂತಿಯು ತಾ. 27—7—63ರಂದು ಸುತ್ತಮುತ್ತಲಿನ ಶಾಲಾ ಮಕ್ಕಳಿಗೆ ಮತ್ತು ಅಧ್ಯಾಪಕರಿಗೆ ಹಾಗೂ ಊರ ಬಡ ಮಕ್ಕಳಿಗೆ ಅನ್ನದಾನಾದಿ ಕಾರ್ಯಕ್ರಮಗಳಿಂದ ನೆರವೇರಿತು. ವಿಷ್ಣುಮೂರ್ತಿ ದೇವಾಲಯದಲ್ಲಿ ವಿಶೇಷ ಪೂಜೆಯೂ ಜರಗಿತು. 60 ವರ್ಷ ತುಂಬುವ ಶ್ರೀ ರೈಗಳಿಗೆ ಆಯುಷ್ಯಾರೋಗ್ಯ ಸಂದತ್ತನ್ನು ಕೋರಲಾಯಿತು.

ರಾಧಾಕೃಷ್ಣನ್

ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಭಾರತದ ಸಂಸ್ಕೃತಿ ಮತ್ತು ಉದ್ದೇಶಗಳ ಪೂರ್ಣಪ್ರತೀಕ ಚೀನ ಮತ್ತು ಪಾಕ್ ಸ್ನಾನಗಳೊಂದಿಗೆ ನಮಗಿರುವ ಮತಭೇದಗಳು ನಿವಾರಣೆಯಾಗದೆ ಇರುವುದಾದರೂ ಅವು ಗೌರವಯುತವಾಗಿ ಪರಿಹಾರಗೊಂಡಾಪೆಂಬ ಆಶಯ ಅವರದ್ದು. ಮತಭೇದಗಳನ್ನು ಶಾಂತಿ ಮತ್ತು ಸದಿಚ್ಛೆಗಳ ವಾತಾವರಣದಲ್ಲಿ ಪರಿಶೀಲಿಸಿ ಬೇಕಲ್ಲದೆ ಬೆದರಿಕೆಗಳಿಂದಲ್ಲವೆಂಬ ದೃಢ ನಿರ್ಧಾರ ಅವರದ್ದು. ಈ ಅಸಾಮಾನ್ಯ ಜಗತ್ತಿನಲ್ಲಿ ನಾವು ನಮ್ಮ ಸ್ವಾತಂತ್ರ್ಯವನ್ನು ರಕ್ಷಣೆಗೆ, ನಮಗೆ ಮನಸ್ಸಿಲ್ಲವಾದರೂ ಸಂರಕ್ಷಣಾ ಪಡೆಗಳನ್ನು ಬಲಪಡಿಸ ಬೇಕಾಗಿದೆ ಎಂದವರು ನಮ್ಮ ಸೇನಾ ಬಡಾವಣೆಯ ಬಗ್ಗೆ ಕಳವಳ ಪಡುವವರಿಗೆ ತಿಳಿಹೇಳಿದ್ದಾರೆ ತೂಕದ ಆರ್ಥವತ್ತಾದ ಮಾತುಗಳಿಗೆ ಸೇರಿದಾದ ರಾಧಾಕೃಷ್ಣನ್ ನಮ್ಮ ಶತ್ರುಗಳಿಗೆ ಸೂಕ್ತ ಉತ್ತರವೀಯಲು ಸವ.ರ್ಥರಾಗಿದ್ದಾರೆ.

ನಿರೀಕ್ಷಿಸಿರಿ!

ಯಿ

ಎಂದಿನಂತೆ ತಾ. **15-8-63** ರಂದು

ಸ್ವಾತಂತ್ರ್ಯ ದಿನೋತ್ಸವ

ವಿಶೇಷ ಸಂಚಿಕೆ

ವಿಶಿಷ್ಟ ತರದಲ್ಲಿ ಪ್ರಕಟವಾಗುವುದು

ಜಾಹೀರಾತು ದಾರರು ತಮ್ಮ ಜಾಹೀರಾತುಗಳನ್ನು ತ್ವರೆಯಾಗಿ ಕಳುಹಿಸಿ ಸಹಕರಿಸಬೇಕಾಗಿ ಕೋರಲಾಗಿದೆ.

ಮೆನೇಜರ್, ನವಯುಗ, ಉಡುಪಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 31/63

ಬಂಟ್ವಾಳ ಶ್ರೀ ಮಹಾಮಾಯಿ ದೇವರ ಭಂಡಾರ — ವಾದಿ

ಕೊಳ್ಳೆರೆ ಶ್ರೀ ನರಸಿಂಹ ದೇವರ ಭಂಡಾರ ಕೂಡಾ —ಪ್ರತಿವಾದಿರು

ನೀನೇ ಪ್ರತಿವಾದಿ ಉಜೇಂದ್ರ ಪ್ರಭು. ನಾಮನ ಪ್ರಭುಗಳ ಮಗ ಬಂಟ್ವಾಳ ತಾಲೂಕು ಗೊಳ್ಳ ಮಜಲುಗ್ರಾಮ

ಇವರಿಗೆ ತಿಳಿಸುವುದೇನೆಂದರೆ

ದಕ್ಷಿಣ ಕನ್ನಡ ಸಬ ಕೋರ್ಟು O. S. 78/1914 ಮತ್ತು O. S 16/1928ನೆ ಡಿಕ್ರಿಗಳ ಪ್ರಕಾರ ಬರಬೇಕಾದ ಅನ್ಯತಪಡಿ ವಸೂಲು ಬಗ್ಗೆ ವಾದಿಯು ದಾಕಲು ಮಾಡಿದ ಈ ದಾವೆಯು ತಾ. 6—9—63ಕ್ಕೆ ಇರುವದರಿಂದ ನೀವಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್
ವಾದಿಯ ವಕೀಲ

ಪುತ್ತೂರು, ತಾ. 15—7—63

ಶಾಲೆಗಳಿಗೆ ಬೇಕಾಗುವ

ಯೂನಿಫಾರ್ಮುಗಳೂ ಫಾರ್ಮುಗಳೂ

ಹಾಜರಿ ವಿಜಿಪ್ತಿಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

ಸೋವಿಯತ್ ಸ್ನೇಹವರ್ಧನೆಗೆ

ಭಾರತೀಯ ವಸ್ತು ಪ್ರದರ್ಶನ

ಭಾರತ—ರಷ್ಯ ಮೈತ್ರಿಯ ಸಂಕೇತವಾಗಿ ದಿನಾಂಕ ೨೪ ಜುಲೈಯಂದು ಮೋಸ್ಕೋದಲ್ಲಿ ಪ್ರಾರಂಭವಾದ ಭಾರತ ರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿ ಭಾರತೀಯತೆಯು ಅವಿರ್ಭಾವವಾಗಿದೆ. ಸುತ್ತಲೂ ಗಾಜಿನಿಂದ ಆವೃತವಾದ ಅವರಣದಲ್ಲಿ ರಷ್ಯನ್ ವಿನ್ಯಾಸಕರ ಮತ್ತು ಕಲಾವಿದರ ನೆರವಿನೊಡನೆ ಭಾರತದ ಸಂಸ್ಕೃತಿ ಕಲೆ ವತ್ತು ಕೈಗಾರಿಕೆಗಳನ್ನು ಬೇರೆ ಬೇರೆ ವಿಭಾಗದಲ್ಲಿ ಕಲಾತ್ಮಿಕತೆಯಿಂದ ಪ್ರದರ್ಶಿಸಿರುವುದು. ಈ ಪ್ರದರ್ಶನದಲ್ಲಿ ಭಾಗವಹಿಸಿದ ಭಾರತೀಯರ ಮೇಲೂ ಪ್ರಚಂಡ ಪರಿಣಾಮವನ್ನುಂಟು ಮಾಡಿದೆ.

ಸಾಧಾರಣವಾಗಿ ವಸ್ತು ಪ್ರದರ್ಶನಗಳಲ್ಲಿ ಅನುಸರಿಸುವ ಪದ್ಧತಿಯಂತೆ ವಿವಿಧ ವಿಭಾಗಗಳ ಪ್ರದರ್ಶಕರಿಗೂ, ಪ್ರತ್ಯೇಕ ಮಳಿಗೆಗಳನ್ನು ನಿಯಾಮಿಸದೆ ಒಂದು ವಿನೂತನ ಕ್ರಮ ಪ್ರಾರಂಭವುಂಟುಮಾಡಿದೆ. ಭಾರತದ ಪ್ರಾಚೀನ ವತ್ತು ಅರ್ವಾಚೀನ ಮಿಶ್ರಿತ ಐತ್ಯ ಚಿತ್ರ ಪ್ರದರ್ಶನ ಅದ್ವಿತೀಯ ಪರಿಣಾಮವುಂಟುಮಾಡಿದೆ.

—ಫ್ಲಾಸ್ಟರ್ ಆಫ್ ಪೇರಿಸಿನಿಂದ ಅಲಂಕೃತವಾದ ಎರಡು ಗಂಭೀರ ಶ್ವೇತ ಗಜಗಳ ಪಾರ್ಶ್ವ ರಕ್ಷಣೆ ಗೈಯುತ್ತಿರುವ ಸುವರ್ಣ ಕೇಸರಿ ಪ್ರತಿಮೆಯಿಂದ ಏರುಗುವ ಎಂಟು ಅಶೋಕಸ್ತಂಭಗಳ ಸಾಲಿನ ಮೂಲಕ ಪ್ರವೇಶಿಸಿದಾಗ ಸಂಪೂರ್ಣ ಭಾರತೀಯ ವಾತಾವರಣ ಗೋಚರವಾಗುತ್ತದೆ ಗಾಂಧೀಜಿ ಅವರ ಪ್ರತಿಮೆಯನ್ನು ಸಂಸ್ಥಾಪಿಸಿರುವ ಈ ಅವರಣದ ನಾಟಕ ಶಾಲೆಯ ಹಿಂಬದಿಯಲ್ಲಿ ಹಸಿರು ಬಿಳಿಗಳಾಗಿ ಪರಸ್ಪರ ಕೈಕುಲಾಕುವನ್ನಾಡುತ್ತಿರುವ ಪ್ರಧಾನಿದ್ವಯರಂದ ಶ್ರೀ ನೆಹರೂ—ಕ್ರುಶ್ಚೇವರ ಭಾವ ಚಿತ್ರವನ್ನು ಇರಿಸಲಾಗಿದೆ.

ಮಧುರೆ ಮೀನಾಕ್ಷಿ ದೇಗುಲ, ಕುತುಬ್ ಮಿನಾರ್ ಮತ್ತು ತಾಜಮಹಲಗಳ ಎಲಾ ವೈಭವದ ರಮಣೀಯದ ದೃಶ್ಯ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಕಣ್ಣುಗಳು ಕಣಯುತ್ತಿವೆ ಶತಮಾನಗಳ ಹಿಂದಿನ ವಿಲ್ಲಿ ಚಿತ್ರಗಳು, ಭಾರತದ ಶಿಲ್ಪಿಗಳು ಮತ್ತು ಕಲಾವಿದರ ಅಸಾಧಾರಣ ಕಲಾಕೌಶಲ್ಯವನ್ನು ನಾವು ಹೇಳ ತ್ತಿವೆ ವಿಭಿನ್ನ ಉಡುಪುಗಳಲ್ಲಿ ಅಲಂಕೃತವಾದ ಬೊಂಬೆಗಳು ಭಾರತೀಯರ ವಿವಿಧ ಮುಖಗಳನ್ನು ಎಂಬಿಸುವ ಈ ದೃಶ್ಯ ನಿಜಕ್ಕೂ ಅತ್ಯಂತ ಚೇತೋಹಾರಕವಾಗಿ ರಮಣೀಯವಾಗಿದೆ

ಸನ್ ೧೯೪೭ರಲ್ಲಿ ದೆಹಲಿಯ ಐತಿಹಾಸಿಕ ಕೆಂಪು ಕೋಟೆಯಿಂದ ಪ್ರಥಮ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಂಡ ಜನಸ್ತೋಮವನ್ನುದ್ದೇಶಿಸಿ ಸೆಹರೂರವರು ಭಾಷಣ ಮಾಡುತ್ತಿರುವ ಸ್ವತಂತ್ರ ಭಾರತದ ಭವ್ಯ ಚಿತ್ರವು ಕಂಗೊಳಿಸುತ್ತಿದೆ ಸಮಾರಂಭದ ವಿಶಿಷ್ಟವೈಭವ ಮತ್ತು ಐತಿಹ್ಯಗಳ ದ್ಯೋತಕದಂತಿರುವ ಈ ಸುಂದರ ಪ್ರದರ್ಶನಾಲಯ ಅತ್ಯಂತ ಪ್ರೇಕ್ಷಣೀಯವಾಗಿತೆಂದು ರಷ್ಯದ ಎಲ್ಲಾ ಪ್ರಮುಖ ಪತ್ರಿಕೆಗಳು ಹೇಳಿವೆ

ಹಿಂದೀ ಮತ್ತು ರಷ್ಯನ್ ಭಾಷೆಗಳಲ್ಲಿ ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬರೆದಿರುವ ಭಾರತದ ಭೂಪಟವನ್ನು ಈ ಚಿತ್ರದ ಪಕ್ಕದಲ್ಲೇ ಅಳವಡಿಸಿಕೊಳ್ಳಲಾಗಿತ್ತು. ಭಾರತದ ನೇಯಿ ಹಸ್ತ ಕೌಶಲ, ಉಣ್ಣೆ ಮತ್ತು ಕೃಷಿ ವಸ್ತುಗಳು ಆಕರ್ಷಕ ದರ್ಶನವನ್ನು ನೀಡಲೋಸುಗ ಸಾರ್ವಜನಿಕ ಮತ್ತು ಬಿ ಸಗೀ ಕ್ಷೇತ್ರಗಳನ್ನು ಕಲ ವಂತಿಕೆಯಿಂದ ಒಂದು ಗೂಡಿಸಿರುವುದು ಈ ವಸ್ತು ಪ್ರದರ್ಶನದ ವಿಶಿಷ್ಟತೆಗೆ ಆರೂರ್ವ ಮೆರಗನ್ನಿತ್ತಿದೆ.

ಕಾಶ್ಮೀರದ ಕುಶಲ ಕರ್ಮಿಗಳ ಕಲಾಧೀಮಂತಿಕೆಯಿಂದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನೊಳಗೊಂಡ ಐ.ಎನ್.ಎ. ಸೈನಿಕರ ಚಿತ್ರಗಳು ಕಣ್ಣಿಗೆ ಕಟ್ಟಿದಂತಿವೆ. ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಅಜಂತಾ ಗುಹೆಗಳ ಚಿತ್ರಗಳು ಮತ್ತು ಅಲ್ಲಿನ ಕಲಾಕೃತಿಗಳ ಪ್ರತಿಕೃತಿಗಳು ಪ್ರದರ್ಶನಕ್ಕೆ ಮೆರಗನ್ನು ತಂದಿವೆ.

ಭಾರತದ ಸಹಕಾರದೊಂದಿಗೆ ಭಾರತ ರಷ್ಯದ ಸಹಕಾರವನ್ನು ಸೂಚಿಸುವ ಚಿತ್ರಗಳು ಮತ್ತು ಭಾರತದ ಕೈಗಾರಿಕೆಗಳಿಗೆ ರಷ್ಯ ನೀಡಿರುವ ಸಹಾಯವನ್ನು ಸೂಚಿಸುವ ಚಿತ್ರಗಳು ಪ್ರದರ್ಶನದ ಮೆರಗನ್ನು ಹೆಚ್ಚಿಸಿವೆ.



ರಾಷ್ಟ್ರಪತಿ ಭವನದ ಮೊತ್ತಿರುವ ಗುಂಭವಿದೆ. ಬಿರುಗಾಳಿಯೇ ಮೊದಲಾದ ಪ್ರಕೃತಿಪ್ರಕೋಪಗಳನ್ನು ಎದುರಿಸುವ ಶಕ್ತಿಯಿದಕ್ಕಿದೆ

ಭಾರತದ ವೈಲು ಪದ್ಧತಿ—ಸಂಶೋಧನಾಲಯಗಳು ಪ್ರದರ್ಶಿತವಾಗಿರುವುದು ಕೈಗಾರಿಕಾಯುಗದಲ್ಲಿ ಭಾರತವು ಸಾಧಿಸಿರುವ ಪ್ರಗತಿಗೆ ಇದೊಂದು ಅಪೂರ್ವ ಸಂಕೇತವಾಗಿದೆ ಈ ಪ್ರದರ್ಶನದೊಂದಿಗೆ ಭಾರತದ ಚಲನ ಚಿತ್ರೋತ್ಸವವನ್ನೂ ನಡೆಸಲಾಗಿದ್ದು ಕಣ್ಣ ಸಣ್ಣ ತಂಡಗಳಂತೆ ನೃತ್ಯ ಪ್ರದರ್ಶನ ಮತ್ತು ಆಧುನಿಕ ಭಾರತದ ಚಿತ್ರಕಲಾವಿದರಿಂದ ರಚಿಸಲ್ಪಟ್ಟ ವರ್ಣಚಿತ್ರ—ಇವುಗಳನ್ನೂ ಪ್ರದರ್ಶಿಸಲಾಗಿದೆ

ಪ್ರತಿ ದಿನವೂ ಐವತ್ತು ಸಹಸ್ರಕ್ಕಿಂತಲೂ ಹೆಚ್ಚು ಮೋಸ್ಕೋ ನಿವಾಸಿಗಳು ಈ ಪ್ರದರ್ಶನವನ್ನು ನಿರೀಕ್ಷಿಸಿ ಆನಂದಾಬಾಧಿಯಲ್ಲಿ ಈಜಾಡುತ್ತಿದ್ದಾರೆನ್ನುವುದು ಅಲ್ಲಿನ ಪತ್ರಿಕೆಗಳು ಈ ವಸ್ತು ಪ್ರದರ್ಶನಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯಿಂದ ಸ್ಪಷ್ಟವಾಗುತ್ತದೆ.

ಮೋಸ್ಕೋದಲ್ಲಾದ ಈ ಜನಮನರಂಜಕ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದ್ದರ್ಯದ ನಾಯಕ ಶ್ರೀ ಕ್ರುಶ್ಚೇವರು "ಇಷ್ಟರ ವರೆಗೆ ಮೋಸ್ಕೋದಲ್ಲಿ ಜರಗಿದ ವಸ್ತು ಪ್ರದರ್ಶನಗಳಲ್ಲೆಲ್ಲಾ ಇದು ಅತೀ ಉತ್ತಮವಾದುದೆಂದು ಹೇಳಿದ್ದಾರೆ ಈ ಸಮಾರಂಭದಲ್ಲಿ ಭಾರತದ ವ್ಯಾಪಾರ ವಂತ್ರಿ ಶ್ರೀ ಮನುಭಾಯಿ ಶಹಾರೂಪಾಂಗ ವಹಿಸಿದ್ದರು ಇದರಿಂದ ಭಾರತ-ರಷ್ಯಾ ಸಂಬಂಧ — ವೃತ್ತಿಗಳು ಬಲಗೊಂಡು ವಿದೇಶ ವ್ಯಾಪಾರವು ಶೀಘ್ರ ಗತಿಯಲ್ಲಿ ಪ್ರಗತಿ ಸಾಧಿಸಬಹುದೆಂದು ನಾನು ನಂಬುತ್ತೇನೆಂದು ಶ್ರೀ ಶಹಾರು ಆಂದಿದ್ದಾರೆ ಹಲವು ಲಕ್ಷ ಮಂದಿ ಸಂದರ್ಶಿಸಿ ಮನವಾರೆ—ವೆಚ್ಚ—ಆನಂದಿಸಿದ ಈ ವಸ್ತು ಪ್ರದರ್ಶನದ ಬಗ್ಗೆ ಭಾರತೀಯರೂ ನಿಜಕ್ಕೂ ಅಭಿಮಾನಪಡಬೇಕಾಗಿದೆ.

ಅಣ್ವಿಸ್ತ್ರ ನಿಷೇಧ ಒಡಂಬಡಿಕೆ

(೧ನೇ ಪುಟದಿಂದ)

ಎಂದು ಕ್ರುಶ್ಚೇವರು ಹೇಳಿದುದು ಸತ್ಯ ಎಂತಿದ್ದರೂ ಈ ಮಾತ ಕೆತೆಯು ಜಾಗತಿಕ ಇತಿಹಾಸದಲ್ಲೇ ಒಂದು ಮಹತ್ವಪೂರ್ಣ ಅಧ್ಯಾಯವನ್ನು ತೆರೆದಿದೆ ಎಂದರೆ ಅತಿಶಯೋಕ್ತಿಯಲ್ಲ. ಈ ಮಾತುಕತೆಯಲ್ಲಿ ಭಾಗವಹಿಸಿದ ಬ್ರಿಟಿಷ್ ಪ್ರತಿನಿಧಿ ಶ್ರೀ ಲೋರ್ಡ್ ಮೈಟ್‌ರವರು ಹೇಳಿದಂತೆ "ಹೊಲವಾರು ವಿಷಯಗಳಿಗೆ ಉತ್ತಮ ಆರಂಭ", ಅಮೇರಿಕದ ಪ್ರತಿನಿಧಿ ಮಿ| ಹಾರೀಮನ್ ಹೇಳಿದಂತೆ "ಅತಿ ಮುಖ್ಯ ಕೆಲಸವೊಂದು ಸೈಗೂಡಿದಂತೆ" ಸೋವಿಯತ್ ಪ್ರತಿನಿಧಿ ಮಿ| ಗ್ರೋಮಿಕೊರವರು ಹೇಳಿದಂತೆ "ಈ ಒಂದಿನ ಹೆಜ್ಜೆಗಳಿಗೆ ಇದು ಮೂಲ ಎಂದು ಭಾವಿಸಿಕೊಳ್ಳಬೇಕಾಗಿದೆ.

—"ಶ್ರೀ ರಾಮಾತನಯ".

ಹಿಂದೂ ಸಂಸ್ಕೃತಿಯ ಗಹನ ಪ್ರಭಾವ

(೫ನೇ ಪುಟದಿಂದ)

ನ್ನು ಭಾರತೀಯ ಸಾಹಿತ್ಯ ಪ್ರಭಾವ ಪರಿವರ್ತಿಸಿತೆ?— ಈ ಪ್ರಶ್ನೆಗಳಿಗೆ ಸುಲಭದಲ್ಲಿ ಉತ್ತರಿಸುವುದು ಸಾಧ್ಯವಿಲ್ಲ. ಥೋರೋ ಸ್ವತಂತ್ರ ವಿಚಾರಿ ನಿಜ; ಆದರೂ ತನ್ನ ಬರಹಗಳಿಗಾಗಿ ಅವರು ಹಲವು ಕಡೆಗಳಿಂದ ಪ್ರೇರಣೆಗಳನ್ನೆ ಪಡೆದರು, ಇದೂ ಸತ್ಯ ಸಾಹಿತ್ಯವೂ ಥೋರೋ ಸಾಹಿತ್ಯದಲ್ಲಿ ಹೊಸ ಗ್ರಂಥ ಸೃಷ್ಟಿಯನ್ನು ಸುಲಭದಲ್ಲಿ ಗುರುತಿಸಬಹುದು.

ಎಮರ್ಸನ್ ಮತ್ತು ಭಾರತೀಯ ನಿಚಾರಧಾರೆ ನವಚಿಂತನೆ ಸಂಬಂಧವು ಎಮರ್ಸನ್-ಥೋರೋರವರು ಭಾರತೀಯತೆಯೊಡನಿಟ್ಟುಕೊಂಡುದಕ್ಕಿಂತ ತೀರ ಭಿನ್ನವಾಗಿ ವಿಚಿತ್ರವೂ ನಾನ ಸಮ್ಮೋಹಕವೂ ಆಗ ಅವರ ಸನ್ಮಗಳು ಓದುಗರಿಗೆ ಪ್ರಪಂಚ ದರ್ಶನ ಮತ್ತ ಭಾರತೀಯ ವೇದಾಂತದ ಘನತೆಗಳಿಗೆ ಸಾಮ್ಯವನ್ನು ಕಲ್ಪಿಸುತ್ತವೆ. ಅವರ ಶ್ರೇಷ್ಠ ಕೃತಿ "ಲೀವ್ಸ್ ಆಫ್ ಗ್ರಾಸ್" ಎಂಬುದು ಗೀತೆ ಮತ್ತು ನ್ಯೂಯಾರ್ಕ್ ಹೆರಾಲ್ಡ್‌ಗಳ ಮೀಮಾಂಸೆ ಬುದಾಗಿ ಎಮರ್ಸನ್ ಹೇಳಿದರೆ, "ಪೌರ್ವಾತ್ಯರ ಕೃತಿಗಳಷ್ಟೇ ಸ್ವಾವಶ್ಯಕರವಾಗಿದೆ" ಎಂದು ಥೋರೋ ನುಡಿಯುತ್ತಾರೆ. ಆದರೆ ವಿಟ್ಮನ್‌ರಿಗೂ ಭಾರತೀಯ ತತ್ವಶಾಸ್ತ್ರದ ಪರಿಚಯವಾದುದು ಹೇಗೆ? ಈ ಪ್ರಶ್ನೆಗೆ ನೇರವಾದ ಉತ್ತರವಿನ್ನೂ ಲಭಿಸಿಲ್ಲ.

ವಾಲ್ಟ್ ವಿಟ್ಮನ್‌ರ ಸಮಕಾಲೀನರೂ "ಮೊಬಿಡಿಕ್" ಕಾದಂಬರಿಯ ಕರ್ತರೂ ಆದ ಹರ್ಮನ್ ಮೆಲ್ವಿಲ್ ಪ್ರಭಾವನಾಗಿ ಪೌರ್ವಾತ್ಯ ಸಮಾಜ ಜೀವನದಲ್ಲಿ ಆಸಕ್ತಿಯನ್ನು ಪಡೆದಿದ್ದರು. ಅವರು ಹಿಂದೂ ಪುರಾಣಗಳಿಂದ ಮತ್ತಾನ್ವತಾರದ ಪ್ರಸಂಗವೊಂದನ್ನು ಆಯ್ದು ಕೊಂಡಿದ್ದಾರೆ.

ಮರ್ಸನ್ ಪ್ರಭೃತಿಗಳು ಹಿಂದೂ ವಿಚಾರಗಳ ಆಳವಾದ ಪ್ರಭಾವಕ್ಕೆ ಒಳಗಾಗಿದ್ದಾರೆಂದು ಖಂಡಿತವಾಗಿ ಹೇಳುವುದಿಲ್ಲ ಆದರೆ ಅವರು ಸ್ಪಷ್ಟವಾಗಿ ಭಾರತಕ್ಕೆ ಒಂದಿಷ್ಟಾದರೂ ಕೊಡುಗೆ ಅವರಿಗೆ ಹಿಂದೂ ಸಂಪ್ರದಾಯ, ಧರ್ಮ ಕರ್ಮ ಮತ್ತು ಪದ್ಧತಿಗಳು ಆಕರ್ಷಕವೆನಿಸಿದುವು. ಹಿಂದೂ ದೈವ ಶಾಸ್ತ್ರವು ಜಟಿಲವಾದುದೆಂದೂ ಆದುದರಿಂದ ಅದನ್ನು ಅರ್ಥಮಾಡಿಕೊಳ್ಳುವುದು ತಮಗೆ ಕಷ್ಟವೆಂದೂ ಅವರು ಹೇಳಿದರು. ಆದರೂ ಅವು ಸತ್ಯ ಸಾಧಕವೆಂದು ತಮಗೆ ಸಹಜವಾಗಿ ಮನವರಿಕೆಯಾಯಿತೆಂದು ಅವರು ಅಂದಿದ್ದಾರೆ.

ಅಮೆರಿಕೆಯ ಆಧುನಿಕ ಸಾಹಿತಿಗಳ ಮೇಲೆ ಭಾರತವು ಭೀರಿದ ಪ್ರಭಾವವನ್ನು ಕೂಲಂಕಷವಾಗಿ ಆರಿತು ಕೊಳ್ಳ ಬೇಕಾದರೆ, ಮಪತ್ತರ ಸಂಶೋಧನೆಯು ಆಗತ್ಯ. ಆದರೆ, ಅಮೆರಿಕೆಯಲ್ಲಿ ಜನಿಸಿ, ಮುಂದೆ ಬ್ರಿಟಿಷ್ ಪ್ರಜೆಯೂ ಆದ ಟಿ. ಎಸ್. ಈಲಿಯಟ್‌ರವರು ಆಧ್ಯಾತ್ಮಿಕ ಸಂಬಂಧವನ್ನು ಕ್ರೈಸ್ತಧರ್ಮ ಸಂಪ್ರದಾಯವನ್ನು ಅನುಸರಿಸಿದರೂ 'ದಿ ವೇಸ್ಟ್ ಲ್ಯಾಂಡ್' ಮತ್ತು 'ಫೋರ್ ಕ್ವಾರ್ಟೆಟ್ಸ್' ಎಂಬೆರಡು ಉದ್ದಾಮ ಕೃತಿಗಳಲ್ಲಿ ತವರ ಮೊನಲ ವ್ಯಾಖ್ಯಾಧ್ಯಯನದ ಪ್ರಭಾವ ಎದ್ದು ತೋರುತ್ತದೆ.

ಹೀಗೆ ಭಾರತೀಯ ಇಡಿಯ ಜಗತ್ತಿನ ಮೇಲೆ ತಮ್ಮ ವಿಜಯ ಪತಾಕೆಯನ್ನು ಹಾರಿಬಿಟ್ಟಿದ್ದಾರೆ. ಭಾರತದಲ್ಲಿ ಎಲ್ಲವೂ ಇದ ಎಂತಲೇ ಅದರ ಮೇಲೆಯೇ ಎಲ್ಲರ ಕಣ್ಣು!

ಅಮೃತ ಬಿಂದು

ಚಿಂತಿಸುತ್ತಾ ಕೂತು ಅಳುವುದು ಮರಣ. ಚಿಂತಿಸದೆ ನಗುತ್ತಾ ಮುಂದೆ ಸಾಗುವುದು ಜೀವನ.

೦ ೦ ೦ ೦

ನದಿಯು ಸಮುದ್ರದಾಳದಲ್ಲಿ ತನ್ನ ಪರಿಪೂರ್ಣತೆಯನ್ನು ಪಡೆಯುವಂತೆ ದುಡಿತವು ವಿಶ್ರಾಂತಿಯ ಒಡಲಲ್ಲಿ ಕೃತಕೃತ್ಯಗೊಳ್ಳುವುದು.

೦ ೦ ೦ ೦

ಹಣವನ್ನು ಸಾಲವಾಗಿ ಕೊಡುವವನು ಒಂದೋ ಹಣವನ್ನೂ ಕಳಕೊಳ್ಳುತ್ತಾನೆ; ಇಲ್ಲವೇ ಶತ್ರುವನ್ನು ಸಂಪಾದಿಸುತ್ತಾನೆ.

೦ ೦ ೦ ೦

ತಮ್ಮ ಗೌರವವನ್ನು ಮುಚ್ಚಿಡುವ ಸುಳ್ಳನ್ನು ಹೆಂಗಸು ಮೆಚ್ಚಿದರೂ, ತನ್ನನ್ನು ಹೊಗಳದ ನೈಜ ಸತ್ಯವನ್ನು ಮೆಚ್ಚಿಲಾರಳು.

೦ ೦ ೦ ೦

ಮೊಗಕಾಲೂರಿ ಬಂಡತನದಿಂದ ಬದುಕಲೆಳಸುವದಕ್ಕಿಂಥಾ ನೆಟ್ಟಗೆ ನಿಂತು ಬಡತನವನ್ನೆಪ್ಪಿ ಮರಣವನ್ನಪ್ಪಿ ಮರಣವನ್ನೆದಿರಿಸುವುದು ಹಿತಕರ.

೦ ೦ ೦ ೦

ಕಣ್ಣಿಗೆ ಬೆಳಕು ಹೇಗೋ, ಜೀವನಕ್ಕೆ ಗಾಳಿ ಹೇಗೋ ಹೃದಯಕ್ಕೆ ಪ್ರೇಮ ಹೇಗೋ ಹಾಗೆ ಮನುಷ್ಯನಿಗೆ ಸ್ವಾತಂತ್ರ್ಯ ಆತ್ಯವಶ್ಯ.

೦ ೦ ೦ ೦

ಸ್ವಾತಂತ್ರ್ಯವಿಲ್ಲದಿದ್ದರೆ ಮೆದುಳು ಸೆರೆಮನೆಯಂತೆ, ಹೃದಯ ಕಾರ್ಗತ್ತಲ ಗುಹೆಯಂತೆ, ಮನುಷ್ಯನು ಗುಲಾಮನಂತೆ!

೦ ೦ ೦ ೦

ಸತ್ಯವು ತನ್ನ ಕಾಲಿಗೆ ಬಾದರಕ್ಷೆ, ಹಾಕಿಕೊಳ್ಳುವದರೊಳಗೆ ಮಿಥ್ಯವು ತನ್ನ ಜಗತ್ಪರ್ಯಟನ ಮುಗಿಸಿರುತ್ತದೆ

೦ ೦ ೦ ೦

ವಯಸ್ಸು ಹೆಚ್ಚಾದಂತೆಯೇ ಹೆಚ್ಚು ಪ್ರತಿಫಲ ಕೊಡುತ್ತಾ ಹೋಗುವ ವಸ್ತು ವೆಂದರೆ ಜ್ಞಾನ.

೦ ೦ ೦ ೦

ಬೆಳಕಿನ ಹಿನ್ನೆಲೆಯಲ್ಲೇ ನೆರಳಿರುತ್ತದೆ. ಬದುಕಿನ ಶ್ರೇಷ್ಠತೆಯಲ್ಲೇ ಕಷ್ಟವಿರುತ್ತದೆ.

೦ ೦ ೦ ೦

ಕತ್ತಲೆಯು ಬಾಧೆ ತಪ್ಪದೇಕಾದರೆ ಬೆಳಕಿರುವಾಗಲೇ ಜಾಗೃತೆ ವಹಿಸಬೇಕು. ಜೀವನದ ಗುರಿ ತಲಪಬೇಕಾದರೆ ಯೌವನವಿರುವಾಗಲೇ ಎಚ್ಚರವಿರಬೇಕು.

೦ ೦ ೦ ೦

ಬೆವರು ಸುರಿಯುವದೆಂದು ಹೆದರುವವನಿಗೆ ಭವಿಷ್ಯವಿಲ್ಲ. ತಿಳಿದುಕೊಳ್ಳುವ ಬಯಕೆ ಇಲ್ಲದವನಿಗೆ ಜೀವನಕ್ಕೆ ಇಲ್ಲ.

೦ ೦ ೦ ೦

ಒಂದು ದೇಶ ತನ್ನ ಕೋಟ್ಯಾಧೀಶರು ಹಾಗೂ ಒಂಡವಳದಾರರಿಲ್ಲದೆ ಬದುಕ ಬಹುದು. ಆದರೆ ತನ್ನ ಶ್ರಮವರ್ಗದವರಿಲ್ಲದೆ ಬದುಕದು.

● ಕುಮಾರಿ ಬಿಲ್ಲೆಗಳು ●

(ರಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಸಿದ್ಧಿ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ. 9/-

P. Devee & Co. (N. J.) Calcutta—40-

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಿಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆರ್ಡರು ಪುಸ್ತಕದ ನಿಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0-25 NP ಸೇರಿಸಿ ಮನಿಯರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬುಕ್‌ಸ್ಟಾಲ್, ಸ್ಟೂಡೆಂಟ್ ಬುಕ್ ಕೊ, ಕೆನರಾ ಕೊಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಎಜನ್ಸೀಸ್ ಇವರ ಬಳ್ಳಿಯೂ, ಪುತ್ತೂರಲ್ಲಿ ಹೊಸ್ಮಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಪುತ್ತೂರು ಡಿ ಮುನ್ಸೀಫ್ ಕೋರ್ಟಿನ
O. S. 156/58. R. E. P. 96/63
ಅಸ್ಟ್ ಬಕ್ಕರ್ ಸಾಹೇಬ್ .. ಅರ್ಜಿದಾರ
ಮತ್ತು
ಅತ್ತಪ್ಪ ಶೆಟ್ಟಿ ಕೂಡಾ .... ಎದ್ರಿರು

ದಿನೇ ಎದ್ರಿ ವಿಂಸಪ್ಪ ಶೆಟ್ಟಿ ಸಾಂತಮ್ಮ ಶೆಟ್ಟಿಯವರ ಮಗ, ಪುತ್ತೂರು ತಾಲ್ಲೂ ಕಡಬ ಕ್ಷಜ ಗ್ರಾಮದವ್ದಲ್ಲಿ, ಹೋಬ್ಳಿ ಕಡಬ. (ದ ಕ.)

ಆರ್ಜಿದಾರನು ಬೆಳಿಕರಿ ಬಗ್ಗೆ ಮಾಡಿದ ಮೇಲಿನ ಅಮಲ್ಜಾರಿಯು ನಿಮ್ಮ ಹಾಜರಾತಿ ಬಗ್ಗೆ ತಾ. 16-8-63 ಕ್ಕೆ ಇಟ್ಟಿರುತ್ತದೆ. ಆ ದಿನ ನೀವು ಮುದ್ದು ಯಾ ವಕೀಲರ ಮುಖಾಂತರ ಉದಾಸೀನರಿಕತ್ತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟ್‌ನವರಿಗೆಯುಕ್ತ ಕಂದಂತೆ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣವಾಗಿಯದೆ

"By order of the Court"
A. P. Gowri Shankar.
Advocate for Petitioner.
Puttur, 22—7—63.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಐತಾಳ್, ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವಲ್ಲುಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಬಿ

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



ಇತಿಹಾಸ ಸಾರುತ್ತದೆ

ಗೆದ್ದರೆ ಸ್ವಾತಂತ್ರ್ಯ; ಸತ್ತರೆ ಸ್ವರ್ಗ

ಹಿಂದೆ ಬುಂದೇಲ ಖಂಡವನ್ನು ಪರಮೂಳನೆಂಬ ರಾಜನು ಆಳುತ್ತಿದ್ದನು. ಆವನ ರಾಜಧಾನಿ ಮಹೋಬಾದಲ್ಲಿತ್ತು. ಆವನ ಆಸ್ಥಾನದಲ್ಲಿ ಯಶಂರಾಜಸಿಂಹನೆಂಬ ಹೆಸರಿನ ಬಹು ಪರಾಕ್ರಮಿ ಮಲ್ಲನಿದ್ದನು. ಯುದ್ಧ ಮಾಡಿ ಸೈನಿಕರನ್ನು ಸದೆ ಬಡಿಯುವುದೆಂದರೆ ಈ ಮಲ್ಲನಿಗೆ ಒಂದು ಮೋಜಾಗಿತ್ತು. ಪರಮೂಳನ ಸಾಮ್ರಾಜ್ಯ ವಿಸ್ತರಣಾ ಕಾರ್ಯಕ್ಕೆ ನೆರವಾಪ ಮಲ್ಲ ನೆಂದರೆ ಯಶಂರಾಜಸಿಂಹ. ಆದರೆ ದುರ ದೃಷ್ಟವಶಾತ್ ಒಂದು ಭಾರೀ ಯುದ್ಧದಲ್ಲಿ ವೀರ ಯಶಂರಾಜಸಿಂಹನು ಮೃತ್ಯು ವಿಗೀಡಾಗ ಬೇಕಾಯಿತು.

ಯಶರಾಜಸಿಂಹನ ಗುಣಕ್ಕೆ, ವೀರತ್ವಕ್ಕೆ ತಕ್ಕವಳಾದ ಒಬ್ಬಳು ಪತ್ನಿ ಇದ್ದಳು. ಆವಳ ಹೆಸರೇ ದೇವಲ್ ದೇವಿ. ದೇವಲ್ ದೇವಿಗಾದರೋ ಇಬ್ಬರು ಮಕ್ಕಳಿದ್ದರು. ಅಲ್ಲಾ ಮತ್ತು ಊದಲ್, ತಂದೆ ಸಾಯುವಾಗ ಈ ಮಕ್ಕಳು ಇನ್ನೂ ಏನೂ ತಿಳಿಯದ ಹಸುಗೂಸಾಗಿದ್ದರು ದೇವಲ್ ದೇವಿಯೇ ಈ ಮಕ್ಕಳನ್ನು ಬಹು ಜತನದಿಂದ ಸಾಕುತ್ತಿದ್ದಳು. ರಾಜನಿಗೆ ಈ ಮಕ್ಕಳನ್ನು ಕಂಡರೆ ಅವಾರ ಸಂತೋಷವಾಗುತ್ತಿತ್ತು. ಅವರನ್ನು ತನ್ನ ಆಸ್ಥಾನದಲ್ಲೇ ಇರಗೊಡಿಸುತ್ತಿದ್ದನು. ಆವರಿಗೆ ಯಾವ ತರದ ತೊಂದರೆಯೂಗದಂತೆ ನೋಡಿ ಕೊಳ್ಳುತ್ತಿದ್ದನು.

ಮಕ್ಕಳು ಬೆಳೆದಂತೆಲ್ಲಾ ತಾಯಿಯು ಅವರಿಗೆ ಬಿಲ್ಲು ವಿದ್ಯೆಯನ್ನು ಕಲಿಸಿದಳು ಯುದ್ಧ ವಿದ್ಯೆಯಲ್ಲಿ ಪ್ರವೀಣರಾದ ಮಕ್ಕಳು ತಂದೆ ತಾಯಿಯೇ ರೂಪಾಂತರಿಗಿದ್ದರು. ತಮ್ಮ ತಂದೆಯ ವಿರೋಧಿಗಳನ್ನೆಲ್ಲಾ ಸೋಲಿಸುತ್ತಾ ಪರಮೂಳನ ಮೆಚ್ಚುಗೆಗೆ ಪಾತ್ರರಾದರು. ಆಲ್ಲಾ ಊದಲರ ಅಪರಿಮಿತ ಪರಾಕ್ರಮವನ್ನು ಪರಮೂಳನು ಮೆಚ್ಚಿದನು. ತಾಯಿ ದೇವಲ್ ದೇವಿಯೊಂದಿಗೆ ಬೆಳೆದ ಈ ಬಾಲಕರು ದಿನೇ ದಿನೇ ಪರಮೂಳ ರಾಜನ ವಿರಿಷ್ಟಕ್ಕೆ ಪಾತ್ರರಾದರು. ಆದರೆ ಪ್ರಜಾಜನರು ಇವರ ಮೇಲೆ ಆಸೆಯಲ್ಲದ ದೋಷಾರೋಪಣೆ ಮಾಡುತ್ತಿದ್ದರು ಬಾಲಕರನ್ನು ರಾಜ್ಯದಿಂದ ಓಡಿಸವ ಪ್ರಯತ್ನದಲ್ಲಿ ಈ ಪ್ರಜೆಗಳು ಆಸಕ್ತರಾದರು. ಇದಕ್ಕಾಗಿ ರಾಜನ ಮನಸ್ಸು ನಲ್ಲಿ ವಿಷನ ಬೀಜವನ್ನು ಬಿತ್ತಲು ಪ್ರಯತ್ನಪಟ್ಟರು.

ಪ್ರಜಾ ಸಂದೇಹವನ್ನು ಶೃಸ್ತಿಪಡಿಸುವುದೇ ರಾಜನ ಧರ್ಮ. ಇತ್ತ ಪ್ರಜೆಗಳು ಈ ಬಾಲಕರ ಮೇಲೆ ದೋಷದ ಹೊರೆಯನ್ನು ಹೊರಿಸಿದ್ದರು. ರಾಜನಾದರೋ ಏನು ಮಾಡಬಲ್ಲನು? ಕೊನೆಗಂತೂ ವಿಧಿಯಿಲ್ಲದೆ ಆ ಬಾಲಕರೊಡನಿದ್ದ ಐನೂ ಅಶ್ವಗಳನ್ನು ಯಾಚಿಸಿದನು. ಆವರು ಆ ಅಶ್ವವನ್ನೇ ನಂಬಿಕೊಂಡಿದ್ದರು. ವೀರನೂತೆ ದೇವಲ್‌ದೇವಿ ಆ ಅಶ್ವವನ್ನು ರಾಜನಿಗೆ ಕೊಡಬಾರದೆಂದು ಬಾಲಕರಿಗೆ ಆಜ್ಞಾಪಿಸಿದಳು, ರಾಜನು ಅಶ್ವವನ್ನು ಯಾಚಿಸಿದನು. ಆದರೆ ಆ ಬಾಲಕರು ಆಶ್ವಕೊಡಲು ತಿರಸ್ಕರಿಸಿದರು ಇದೇ ಒಂದು ಕಾರಣದಿಂದಲೇ ರಾಜನು ಬಾಲಕರನ್ನು ತಾಯಿ ಸಹಿತ ತನ್ನ ರಾಜ್ಯದಿಂದ ಆಟ್ಟಿದನು. ಆದರೆ ವೀರ ನಾರಿಯಾದ ದೇವಲ್‌ದೇವಿ ಸೆದರಿದಳೇ? ಆ ಬಾಲಕರನ್ನು ಕರೆದು ಕೊಂಡು ಆ ರಾಜ್ಯವನ್ನು ತೊರೆದಳು.

ಇತ್ತ ಇವರು ರಾಜ್ಯವನ್ನು ತೊರೆದ ಸುದ್ದಿ ಕನೋಜದ ರಾಜನಾದ ಜಯಚಂದನಿಗೆ ತಲುಪಿತು. ಅವರ ಬರವನ್ನು ಕೇಳುತ್ತಲೇ ಅವರಿಗೆ ಆದರದ ಸ್ವಾಗತವನ್ನು ಕೊಟ್ಟು ತನ್ನ ಆಸ್ಥಾನದಲ್ಲೇ ಸ್ಥಳಕೊಟ್ಟು ಸಲಹಿದನು. ಈ ವೀರರು ಕನೋಜಕ್ಕೆ ಬಂದ ಕೆಲವೇ ಸಮಯದಲ್ಲಿ ಆತ್ತ ಮಹೋಬಾದಲ್ಲಿ ಭಾರೀ ದೊಡ್ಡ ಲಂಗೆಯೆದ್ದಿತು ದಿಲ್ಲಿಯ ಪೃಥ್ವಿರಾಜನು ಪರಮಳನ ಮೇಲೆ ಆಕ್ರಮಣ ಮಾಡಿದನು ಪರಮೂಳನು ತನ್ನ ಸೈನ್ಯ ಸಮೇತ ಯುದ್ಧಕ್ಕೆ ತೆರಳಿದನು ಯುದ್ಧದಲ್ಲಿ ಪೃಥ್ವಿರಾಜ ಸೈನಿಕನ ಬಹು ಪರಾಕ್ರಮದಿಂದ ಕಾದಾಡಿದನು. ಆದರೆ ಸೂಮರ್ತುದೇನು? ಅಷ್ಟು ದೊಡ್ಡ ಸೈನ್ಯ ಸಮೂಹದ ಮುಂದೆ ಪರಮೂಳನ ಸೈನ್ಯವರಣಾಗತವಾಗ ಬೇಕಾಯಿತು. ಹಿಂದೊಮ್ಮೆ ಆತಿ ದೊಡ್ಡ ಸಾಮ್ರಾಟನೆಂದು ಮೆರೆದು ಕೊಂಡ ಪರಮೂಳ ಇಂದು ಬಾಲ ಸುಟ್ಟುಡಿದ ನರಿಯಂತೆ ಪೃಥ್ವಿರಾಜನನುಂದೆ ನಿಲ್ಲಬೇಕಾಯಿತು

ಕಾಲ ಮಿಂಚಿ ಹೋಗಿತ್ತು, ತಾನು ಆ ವೀರ ಬಾಲಕರನ್ನು ರಾಜ್ಯದಿಂದ ಆಟ್ಟದೆ ಹೋಗಿದ್ದರೆ ಇಂದು ಸಾಮ್ರಾಟನಾಗಿ ಮೆರೆಯಬಹುದಿತ್ತು ಅವರ ಪರಾಕ್ರಮದ ಬಲದಿಂದಲೇ ಆತನು ಸಾಮ್ರಾಜ್ಯವನ್ನು ವಿಸ್ತರಿಸಿದನು. ಆದರೆ ಇಂದು ಈ ಕಷ್ಟಕ್ಕೆ ಗುರಿಯಾಗಿ ಪರಮೂಳನು ಕಿಸ್ಸೆ ತಪ್ಪಿಗಾಗಿ ನುಮ್ಮಲು ಮರುಗಿದನು.

ಮಹೋಬಾ ರಾಜ್ಯದ ಭವಿಷ್ಯನೇ ಆ ವೀರ ಬಾಲಕರನ್ನು ಹೊಂದಿಕೊಂಡಿತ್ತು. ಅವರ ಶೂರತ್ವವೇ ಆ ರಾಜ್ಯದ ರಕ್ಷಣಾ ಕೋಟೆಯಾಗಿತ್ತು. ಆದರೆ ಇಂದು ಅದು ಕುಸಿದು ಹೋಗಿದೆ. ಅದಕ್ಕಾಗಿ ಪುನಃ ಬಾಲಕರನ್ನು ಕರಸಬೇಕಾಗಿದೆ. ಯುದ್ಧಸಿದ್ಧತೆ ಮಾಡಬೇಕು, ಎಂಬಿತ್ಯಾದಿ ಆಲೋಚನೆಗಳನ್ನ ಮಾಡಿ ಕನೋಜದತ್ತ ದೂತರನ್ನು ಕಳುಹಿಸಿದ. ಆವರನ್ನು ಬರಿಕೈಯಿಸುವಂತೆ ಕೇಳಿಕೊಂಡನು. ಆದರೆ ಈ ವೀರ ಬಾಲಕರು ಆದರಲ್ಲೂ ಅಭಿಮಾನಧನರು ದೂತನ ಮಾತಿಗೆ ಎಲ್ಲಿ ಬೆಲೆಕೊಡುವರು! ತವ್ಕನ್ನು ಒಮ್ಮೆ ಊರಿನಿಂದ ಆಟ್ಟಿದ ಮೇಲೆ ಶತಮಾನ ಆರಜ್ಯಕ್ಕೆ ಕಾಲಿಡುವುದಿಲ್ಲ ಎಂದು ಪ್ರತಿಜ್ಞೆಗೈದರು. ದೂತನು ಬಾರಿ ಬಾರಿ ಬೇಡಿಕೊಂಡರೂ ನಿಸ್ಫಲವಾಯಿತು.

ರಾಜದೂತ ವತ್ತು ಬಾಲಕರ ನಡುವೆ ಆದ ಸಂಭಾಷಣೆಯನ್ನು ಕೇಳುತ್ತಲೇ ಇದ್ದ ದೇವಲ್ ದೇವಿಗೆ ಒಟ್ಟಿನಲ್ಲಿ ಗರಿತು. ದೇವಲ್ ದೇವಿ ಊರನೂರೂ ಸಾಮಾನ್ಯದ ನಾರಿಯಂತಲ್ಲ. ರಾಷ್ಟ್ರಭಕ್ತಿ ಅವಳ ಕಣಕಣದಲ್ಲೂ ತುಂಬಿತ್ತು. ದೇಶಾಭಿಮಾನವು ಶೌರ್ಯದಿಂದ ಕೂಡಿಕೊಂಡು ಅದಕ್ಕೊಂದು ಪುಟ ಕೊಡುವಂತಿತ್ತು. ಅಲ್ಲಾ—ಊದಲರು ಗೈದ ಪ್ರತಿಜ್ಞೆಯನ್ನು ಕೇಳುತ್ತಲೇ ದೇವಲ್ ದೇವಿಯು "ಮಕ್ಕಳೇ! ನನ್ನ ತಾಯ್ನಾಡಾದ ಮಹೋಬಾವು ಈಗ ವೈರಿಗಳಿಂದ ಆಕ್ರಮಿತವಾಗಿದೆ ಆದನ್ನು ರಕ್ಷಿಸುವುದು ನಿನ್ನ ಧರ್ಮ. ನಮ್ಮ ಕೊನೆಯುಸಿರು ಇರುವವರೆಗೂ ತಾಯ್ನಾಡಿನ ರಕ್ಷಣೆಗಾಗಿ ಕಾದಾಡಬೇಕು" ಎಂದು ಬೋಧಿಸಿದಳು ಆದಕ್ಕೆ ಬಾಲಕರು "ಅಂದು ನಮ್ಮನ್ನು ರಾಜ್ಯದಿಂದ ಹೊರ ಆಟ್ಟಿದ ನೆನಪು ನಿನಗೆ ಮಾಸಿ ಹೋಗಿದೆಯೇನು?" ಎಂದು ಕೇಳಿದರು. ಆದಕ್ಕೆ ತಾಯಿ ಕೊಟ್ಟ ಉತ್ತರವಾದರೂ ಉದಾತ್ತವಾಗಿತ್ತು. "ಅಂದಿನ ಆ ದಿನವನ್ನು ಮರೆಯಿರಿ. ತಾಯ್ನಾಡಿನ ರಕ್ಷಣೆ ಮಾಡುವ ಭಾರ ನಿನ್ನ ಮೇಲಿದೆ. ತಾಯ್ನಾಡು ಇಂದು ಸಂಕಟಕ್ಕೊಳಗಾಗಿದೆ. ಮಹೋಬಾವನ್ನು ರಕ್ಷಿಸದೆ ಹೋದರೆ ಮಾತೆಗೆ ದ್ರೋಹ ಬಗೆದಂತೆ. ಆದ್ದರಿಂದ ಹೊರಡಿರಿ! ಇಂದೇ ಮಹೋಬಾಕ್ಕೆ ಹೊರಡುವ. ಯುದ್ಧದಲ್ಲಿ ಕಾದಿ ಮಡಿದರೆ ವೀರ ಸ್ವರ್ಗವೇ ಸಿಗುವುದು. ಬಿಂದಿನ ದಿನವನ್ನು ನುರೆಯಿರಿ" ಎಂದು ಪುನಃ ನೀತಿ ಬೋಧೆ ಮಾಡಿದಳು. ಮಾತೆಯ ಆಜ್ಞೆಯನ್ನು ಆ ಬಾಲಕರು ಶಿರಸಾವಹಿಸಿದರು.

ಇತ್ತ ಅಲ್ಲಾ-ಊದಲರು ಮಹೋಬಾವಕ್ಕೆ ಹೊರಡುವ ಸುದ್ದಿ ಕೇಳಿದ ಪ್ರಜೆಗಳ ವರ್ತನೆಯಲ್ಲಿ ಸಂತಸದ ನಗೆ ಹೊರಯಿಮ್ಮಿತು. ಪ್ರಜೆಗಳ ಹುಮ್ಮನಸ್ಸು ಹೇಳತೀರದು. ಅಲ್ಲ ಊದಲರ ಆಗಮನದಿಂದಲೇ ಇಡೀ ಸೇನೆಯಲ್ಲೇ ಉತ್ಸಾಹತೆ ತುಂಬಿತು.

ಪೃಥ್ವಿರಾಜನ ಸೈನ್ಯಕ್ಕೂ ಪರಮೂಳನ ಸೈನ್ಯಕ್ಕೂ ಘೋರ ಕದನವಾಯಿತು. ಅಲ್ಲಲ್ಲಾ ಊದಲರು ವೀರಾವೇಶದಿಂದ ಕಾದಾಡತೊಡಗಿದರು. ವೀರ ಅಭಿಮನ್ಯುವಿನಂತೆ ಸಿಕ್ಕ ಸಿಕ್ಕ ಸೈನಿಕರನ್ನು ಸದೆ ಬಡಿಯುತ್ತಾ ಹೋದರು. ಪೃಥ್ವಿರಾಜನ ಅಸಂಖ್ಯಾತ ಸೈನಿಕರನ್ನು ಸದೆ ಬಡಿಯುತ್ತಾ ಕೊನೆಯುಳ್ಳಿ ತಾವು ವೀರಸ್ವರ್ಗವನ್ನು ಪಡೆದರು.

ಇಂದಿಗೂ ಅಲ್ಲಾ ಊದಲರಿಬ್ಬರ ಕಾರ್ಯವು ಉತ್ತರ ಹಿಂದೂಸ್ಥಾನದ ಜನರ ಮನೆ ಮಾತಾಗಿದೆ.

ಇಂಥ ಕಾರ್ಯ ಯಾರಿಂದ ಬಂತು? ವೀರನಾರಿಯಾದ ದೇವಲ್ ದೇವಿಯಿಂದ. ದೇವಲ್ ದೇವಿಯಂಥ ರಾಷ್ಟ್ರಭಕ್ತೆ ಇನ್ನು ಪಡೆದ ಮಹೋಬಾಧಿಪತ್ಯ ರಾಜ್ಯದಿಂದ ಹೊರ ಆಟ್ಟಲ್ಪಟ್ಟರೂ ರಾಜ್ಯದ ರಕ್ಷಣೆಯ ಪ್ರಶ್ನೆ ಬಂದಾಗ ಎಲ್ಲ ನನ್ನು ಮರೆತು ಹಿಂದಿನ ದ್ವೇಷವನ್ನು ತೊರೆದು ರಾಜ್ಯ ರಕ್ಷಣೆಗೆ ಕಂಕಣ ಬದ್ಧರಾದ ಅಲ್ಲಾ—ಊದಲರ ವೀರ್ಯ ಮತ್ತು ದೇವಲ್ ದೇವಿಯ ಉಜ್ವಲ ರಾಷ್ಟ್ರಭಕ್ತಿ ನುಹೋಬಾದ ಗೌರವನ್ನು ರಕ್ಷಿಸಿತು.

—ಶ್ರೀ ನೀ. ರೋಹಿದಾಸ ಕಾಮತ್.

ಭಾರತೀಯ ಯುದ್ಧ ಕೈದಿಗಳು

(ಎನೇ ಪುಟದಿಂದ)

ದಿದೆಯೆಂದೂ ಸರಕಾರೀ ವಕ್ತಾರರು ತಿಳಿಸಿರುವರು. ಅಂದರೆ ಸಾಧಾರಣ ಸಾವಿರ ಸೈನಿಕರ ಸಕ್ತಿಯೇ ಇರುವದಿಲ್ಲ. ಸಲುಗೆ-ತಾಳ್ಮೆಗಳ ಬಡಾಯಿ ಕೊಚ್ಚಿಕೊಳ್ಳುವ ಜೈನಿ ಕಮ್ಯೂನಿಸ್ಟ್ ಆಡಳಿತ ಯಂತ್ರ ಇದಕ್ಕೇನೂ ಉತ್ತರ ಕೊಡುವದಿಲ್ಲ--ಆದರೆ, ಗಡಿಯನ್ನು ನವೀನ ಸುಸಜ್ಜಿತ ಸೈನ್ಯದಿಂದ ಮುತ್ತಿರುವರು. ಇಲ್ಲಿಯ ಕಮ್ಯೂನಿಸ್ಟರೂ, ಜೈನಿ ಕಮ್ಯೂನಿಸ್ಟ್ ದಮನ ಚಕ್ರವೂ (ಜನತೆಗೆ ಅಲ್ಲಿ ಸ್ವರವೇ ಇಲ್ಲ) ಕಿಂತ ರೀತಿಯಲ್ಲಿ ಗಡಿ ತಕರಾರನ್ನು ನಿವಾರಿಸಲು ಸಾಧ್ಯವೆಂದು ದಿನಾಪ್ರತಿ ಗಿಳಿಯಂತೆ ಘೋಷಿಸುತ್ತಿದ್ದಾರೆ—ಗಂಡಸರು ಮಾತ್ರ ಮಹಿಳೆಯರು ಕೂಡಾ, ಭಾರತದೊಳಗೆ ಹಾಗೂ ಚೈನಾದಲ್ಲಿ ಮಾತ್ರವಲ್ಲ ಅವರ ಸ್ವರ್ಗ ಮೋಸ ಕೋವಿನಲ್ಲೂ ಅಬ್ಬಾ! ಇಲ್ಲಿಯ ಕಮ್ಯೂನಿಸ್ಟರಿಗೆ ಚೈನಿ ಕಮ್ಯೂನಿಸ್ಟರ ಮೇಲೆ ಅದೆಂತಹ ವಿಶ್ವಾಸ, ನಂಬಿಕೆ ಮತ್ತು ಭಾರತೀಯ ಸ್ವದೇಶಾಭಿಮಾನಿ ಶೂರ ಸೇನಾನಿಗಳ ಮೇಲೆ ಅಪೆಂತಹ ಅವಿಶ್ವಾಸ, ಆಪನಂಬಿಕೆ! ಮಾಜಿ ಸೇನಾಧಿಕಾರಿ ಕಾರ್ಯಪ್ಪ, ತಿಮ್ಮಯ್ಯನವರ ಮೇಲೆ ಅವರು ವಿಷ ಕಾರುತ್ತಿದ್ದಾರೆ.

ಸಾವಿರ ಸೈನಿಕರ ಗತಿ ಏನು?

—ವಿನಾಯಕರ.



REGD No. B. G. 176
LICENCE No. 31
Licensed to Post without Prepayment

ಡಾ। ರಾಧಾಕೃಷ್ಣನ್ ಬೇಳುವಂತೆ

ಭಾರತೀಯ ತತ್ವಶಾಸ್ತ್ರ ಸ್ವರೂಪ

ಒಮ್ಮೆ ಉದಯಿಸಿರುವ ಪಿ ಇ ಎನ್. ಸಂಸ್ಥಿತ್ತಿನಲ್ಲಿ ಡಾ॥ರಾಧಾಕೃಷ್ಣನ್ನರು 'ಸಾಹಿತ್ಯದಲ್ಲಿ ನೈತಿಕ ಮೌಲ್ಯ' ಎಂಬ ವಿಷಯದ ಮೇಲೆ ವ್ಯಾಖ್ಯಾನ ಮಾಡಿದ್ದರು. "ಸಾಹಿತ್ಯವು ಜೀವನವನ್ನು ಸ್ವಜನಾತ್ಮಕ ಜೀವನವನ್ನಾಗಿ ಆಧ್ಯಾತ್ಮಿಕ ಜೀವನವನ್ನಾಗಿಸಿ ಎಂದು ಹೇಳಿದ್ದಾರೆ ವಿಶಾಲವಾಗಿ ಯಾವ ಸಾಹಿತ್ಯದ ನಿರ್ಮಾಣವಾಗಿದೆಯೋ ಅದೇ ವಾಸ್ತವಿಕವಾದ ಸಾಹಿತ್ಯವಾಗಿದೆ. ನಮ್ಮ ಆತ್ಮನೇ ನಮ್ಮ ನೈಜ್ಞೆತ್ವವಾಗಿದೆ. ಸಾಹಿತಿಯು ಒತ್ತಾಯವಂತನಾದಾಗ ಅವನು ಸಾಹಿತ್ಯವನ್ನು ವಿನ್ಯಾಸಿಸುವವನಷ್ಟೇ ಆಗಿರುತ್ತಾನೆ ಇಂದು ಸಾಹಿತ್ಯದಲ್ಲಿ ಯಾಂತ್ರೀಕರಣದ ಭಯವು ಸರ್ವವ್ಯಾಪಿಯಾಗುತ್ತ ಬರುತ್ತಿದೆ ಹೀಗಿರುವಾಗ ಸಾಹಿತಿಯು ಇದನ್ನು ತನ್ನ ಪೂರ್ಣ ರಕ್ತಿಯೊಂದಿಗೆ ವಿರೋಧಿಸುವುದು ಅತ್ಯಗತ್ಯವಾಗಿದೆ ಈ ಆಧುನಿಕತ್ವಯವನ್ನು ಡಾ॥ ರಾಧಾಕೃಷ್ಣನ್ನರು ತಮ್ಮ 'ಇಂದಿನ ಭಾರತೀಯ ಸಾಹಿತ್ಯ' ಎಂಬ ಗ್ರಂಥದ ಭೂಮಿಕೆಯಲ್ಲಿ ಒದಿದ್ದಾರೆ ಮುಂದ ವರಿದ ಅವರು" "ಸಾಹಿತ್ಯವು ಜೀವನವಾಚಿಯಾಗಿದೆ ಇದರ ಮೂಲಕ ಸಾಹಿತಿಯು ತಾನು ಮಾಡಿಕೊಡನೆ - ಮಾಡುತ್ತಿರುವನೆ, ಮತ್ತು ಶ್ರೇಷ್ಠಿಗೊಡನೆ ಸಂಪರ್ಕ ಮಾಡಬಹುದು ಇದರಿಂದಾಗಿ ಪ್ರಪಂಚದ ವಿಶ್ವ ಒಂದುತ್ವದ ಸ್ಪೂರ್ತಿಯನ್ನು ಸಾಹಿತ್ಯವು ಒಂದು ಸಂಪೂರ್ಣತೆಯ ಅನುಭವವನ್ನು ಕೊಡಬಲ್ಲದಾಗಿದೆ" ಎಂದು ಅವರು ತಮ್ಮ ಸಾಹಿತ್ಯದ ಅತ್ಯುದರ್ಶನವನ್ನು ವಾಕ್ಯಸಂಕ್ಷೇಪ ಮಾಡಿದ್ದಾರೆ. ಒಟ್ಟಿ ಕಥೆ ಸಿದ್ಧಿಯಾಗಿದೆ ಎಂಬ ಮಾತ್ರ ಸಾಹಿತ್ಯವೆಂದು ಹೇಳಲಾಗುವುದಿಲ್ಲ ಎಂದು ಹೇಳಿದ್ದಾರೆ.

ವಿಶಾಲವಾದ ವಿಶ್ವನಾಥೀ ವಿಷಯ ಸಮುದಾಯಗಳನ್ನು ಸ್ಪೃಷ್ಟಿಸಿರುವ ಮಾರ್ಕ್ಸ್ ಟೀಕಾರರಿಂದ ಪ್ರತಿಪೆತ್ತಿಯ ಸಾಹಿತ್ಯವನ್ನು ಬಿಡಿಸಿ ಮತ್ತು ಅಂತರ್ಜಗತ್ತಿನ ಸೃಷ್ಟಿಯಿಂದಲೂ ಅದನ್ನು ಸ್ವತಂತ್ರವಾಗಿ ಸಾಹಿತ್ಯ ಭಾವನೆಯಿಂದ ತಿರುಗಿಸಿ ವರ್ತಮಾನ ಕಾಲದ ಸೃಷ್ಟಿಯಲ್ಲಿ ಭವಿಷ್ಯತ್ತಿನ ನಿರ್ಮಾಣ ಶಕ್ತಿಯನ್ನು ಗಳಿಸಿಕೊಂಡಿದೆ. ಪಾಂಡಿತ್ಯ ಪರಿಣಾಮದ ತೇಜಾಂಶವು ರಚನೆಗಳಲ್ಲಿ ಡಾ॥ ಭಕ್ತಿತೆ ಆಡಂಬರಗಳಿಗಾಗಿ ಯತ್ನಿಸಿದಂತೆ ತನ್ನ ಕಾರಣವಿಲ್ಲ.

ಅವರ ಓದಿಸ್ಸೀ ಪಕ್ಕೃತ್ವದಲ್ಲಿ ಪ್ರತಿ ಭಾಶಾಲೀ ಕೃತಿಗಳಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ಸ್ವತಂತ್ರೆಯ ಮಂಗಳಕಾರಕ ಭಾವನೆಯಿದೆ. ಅವರ ಎಲ್ಲಾ ಕೃತಿಗಳಲ್ಲೂ ನಿಪಿಲ ಮಾನವಕೋಟಿಯ ವಿವೇಕ ಶೀಲ, ಮತ್ತು ಸಭ್ಯತಾ ಶೀಲಂಗಳಿ, ಶಾಂತಿ ಸುವ್ಯವಸ್ಥೆಗಳಿಂದ ಸದ್ಭಾವನೆಗಳ ಪ್ರೇಮವಿನ್ಯಾಸಗಳಿಂದ, ಸೌಂದರ್ಯದಿಂದ ದ ಶೃಕ್ತಿಗಳ ಪ್ರತಿ ಭೇತ್ಯಾರ-ತಿರಸ್ಕಾರ ಬೀರುವ ಭಾವನೆಗಳು ಮಿಲಗಿದ್ದಾವನ್ನೂ ಎ ಚ್ಚರಿಸಿ ಜೇಳುವ ಪ್ರಯತ್ನ ಸ್ಪುಟವಾಗಿದೆ. ಅವರ ವಿಶ್ವ ಪ್ರಸಿದ್ಧವಾದ ಗ್ರಂಥಗಳ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುವ ಯತ್ನ ಮಾಡಲಾಗಿದೆ.

ಶ್ರೀ ರಾಧಾಕೃಷ್ಣ ಅಮೃತಕ್ಕರದೀ ವಿಚಾರಗಳಿಂದ ಪರಿಸ್ಪುತವಾದ ಸಂಪೂರ್ಣ ರಾಮಾಂ ಪುಟಗಳಿಂದ ಕೂಡಿದ ಒಂದು ಬೃಹದ್ಗ್ರಂಥ ಇಂದು ವಿಶ್ವ ಸಾಹಿತ್ಯದಲ್ಲಿ ನೇದೀಸ್ಯವಾಗಿ, ಶೋಭಾಯಮಾನವಾಗಿ ರಾಜಿಸುತ್ತಿದೆ ಭಾರತೀಯ ತತ್ವಜ್ಞಾನದ ಮುಕುಟ ಮಣಿಯೂದ ಈ ಗ್ರಂಥವು ಎರಡು ಖಂಡಗಳಿಂದೊಡಗೂಡಿದ್ದು, ಭಾರತೀಯ ಆಧ್ಯಾತ್ಮಿಕತೆ ಸಂಸ್ಕೃತಿಯ ಮಹತ್ವಪೂರ್ಣವಾದ ಅನರ್ಘ್ಯವಾದ ವಿಚಾರಗಳಿಂದೊಡಗೂಡಿದ ಗ್ರಂಥ ರತ್ನಾಕರವಾಗಿದೆ ಈ ಗ್ರಂಥದಲ್ಲಿ ಡಾ॥ ರಾಧಾಕೃಷ್ಣನ್ನರು ಬಾರತದ ವಿಭಿನ್ನ ಪ್ರಣಾಲಿಗಳ ಪರಿಚಯ ಮಾಡಿಸುತ್ತಾ ಅವುಗಳ ದೃಷ್ಟಿ ನಿಸ್ಪತೆಯ ಮೂರ್ಮಿಕ ವಾಖ್ಯೆಯನ್ನು ಅವರು ಮಾಡಿದ್ದಾರೆ ಈ ಗ್ರಂಥದಲ್ಲಿ ಬಾರತೀಯ ದರ್ಶನದ ನಿಕ ಸೂತ್ರತೆಯು ಸವ್ಯಕ್ ವಿವೇಚನೆಯನ್ನು ಮಾಡಿದ್ದಾರೆ- ಪ್ರಥಮವಾಗಿ ಇದರಲ್ಲಿ ವೈದಿಕ ಕಾಲದ ವಿಚಾರ ಪ್ರಸ್ತಾಪಿಸಲಾಗಿದೆ. ಭೂಮಿ, ಚಂದ್ರ, ಸೂರ್ಯ, ವರುಣ, ಹೋಮ, ಇಂದ್ರ ಮೊದಲಾದ ವೈದಿಕ ದೇವತೆಗಳ ಸ್ವರೂಪ ವೈಭವ ಚಿತ್ರಣವನ್ನು ನಾವಿಲ್ಲಿ ಕಾಣಬಹುದು

ಋಗ್ವೇದದ ವಿಚಾರವನ್ನು ಪ್ರಸ್ತಾಪಿಸಿದ ನಂತರ ಯಜರ್ವೇದ, ಅಥರ್ವ ವೇದಗಳ ವಿಚಾರ ಮಾಡಿದ್ದಾರೆ. ಉಳಿದ ಅಧ್ಯಾಯಗಳಲ್ಲಿ ಉಪನಿಷತ್ತಿನಿಂದ ಹುಟ್ಟಿದ ತತ್ವಜ್ಞಾನದ ವಿಸ್ತೃತ ವಾಖ್ಯೆ ನೀಡಿದ್ದಾರೆ. ಬ್ರಹ್ಮ, ಆತ್ಮ, ಜಗತ್, ಪ್ರಕೃತಿ, ಪುರುಷ "ಅಹಂ ಬ್ರಹ್ಮಾಸ್ಮಿ" "ತತ್ವಮಸಿ" ಮೊದಲಾದುವುಗಳ ಪಾರಸ್ಪರಿಕ ವ್ಯಾಖ್ಯೆ ಮಾಡಿದ್ದಾರೆ ಕೆಲವು ಅಧ್ಯಾಯಗಳು ಪೌರಾಣಿಕ ತತ್ವಜ್ಞಾನದ ಪರಿಪೂರ್ಣ ವಿಮರ್ಶೆ ಮಾಡುತ್ತಾ ಈ ಕಾಲಾವಧಿಗೆ ಪೂರ್ವ ೬೦೦ರಿಂದ ಕ್ರಿ ಶ. ೬೦೦ ರ ನಡುವೆ) ಯ ಪ್ರಕಟೀಭೂತವಾದ ದರ್ಶನ ಪ್ರಣಾಲಿ. ಚಾರ್ವಾಕ ಮತ ಜಡತಾವಾದಗಳ ಯಥಾಯೋಗ್ಯವಾದ ಸಮಾಲೋಚನೆಗೆ ವಿದ್ವತ್ಪೂರ್ಣವಾಗಿ ಮಾಡಿದ್ದಾರೆ.

ಬೌದ್ಧ-ಜೈನ ಸಿದ್ಧಾಂತಗಳ ಪ್ರದೀರ್ಘವಾದ ವ್ಯಾಖ್ಯೆ ಮಾಡಿದ್ದಾರೆ. ಎಂಟನೆಯ ಅಧ್ಯಾಯದಲ್ಲಿ ರಾಮಾಯಣ ಮಹಾಭಾರತದ ದಾರ್ಶನಿಕ ತತ್ವಗಳ ವಿಮರ್ಶೆ ಮಾಡಿದ್ದಾರೆ ಇದರ ನಂತರ ಮಹಾಭಾರತ ಕಾಲೀನ ಪಂಚಂಜ ದರ್ಶನ, ವೈಶ್ಣವ ಮಾರ್ಗ ಸಾಂಖ್ಯಮತಗಳ ತಿವಿಷ್ಯಾರ ನಿರೀಕ್ಷಣೆ ಮಾಡಿದ್ದಾರೆ ಭಕ್ತಿ ಮಾರ್ಗ ಕರ್ಮ-ಜ್ಞಾನಗಳ ಮೇಲೆ ಟೀಕೆ ಬರೆದ ನೀಲೆ ೧೦ನೇ ಅಧ್ಯಾಯದಲ್ಲಿ ಶ್ರೀ ಮದ್ಭಾಗವತದ ತತ್ವಜ್ಞಾನದ ಮೇಲೆ ವಿಚಾರ ಮಂಥನ ನಡೆಸಿದ್ದಾರೆ. ಇದರೊಂದಿಗೆ ಅವರು ವಿಜ್ಞಾನವಾದ ಅಲಯ ವಿಜ್ಞಾನ ಶೂನ್ಯವಾದ ನಿರ್ವಾಣ ಮೊದಲಾದುವುಗಳ ಸಾಂಗೋಪಾಂಗವಾಗಿ ಸಮಾಲೋಚನೆ ಮಾಡಿದ್ದಾರೆ

ಇಂಡಿಯನ್ ಫಿಲಾಸಫಿ—೨

ಇದರಲ್ಲಿ ನ್ಯಾಯ ವೈಶೇಷಿಕ, ಸಾಂಖ್ಯ ಯೋಗ ಮೀಮಾಂಸ ಮತ್ತು ವೇದಾಂತ ಈ ಷಡ್ದರ್ಶನಗಳ ಮೇಲೆ ತಮ್ಮ ವಿಜಪೂರ್ಣವಾದ ವೈಲಿಯ ವಿಮರ್ಶೆ ಮಾಡಿದ್ದಾರೆ ವೇದ ಮತ್ತು ಮೇಲಿನ ದರ್ಶನಗಳ ಮೇಲೆ ಇರುವ ಪಾರಸ್ಪರಿಕ ಸಂಬಂಧದ ಸ್ಪಷ್ಟೀಕರಣಗೆಯ್ದಿದ್ದಾರೆ. ಇದರ ಒಳಕ ಸೂತ್ರ ವಾಖ್ಯಾಯದ ವಿಸ್ತೃತ ಚರ್ಚೆಯನ್ನು ಮಾಡಿದ್ದಾರೆ ನ್ಯಾಯ ಶಾಸ್ತ್ರದ ಆವಶ್ಯಕತೆ ಮತ್ತು ವಿಕಾಸ ಹೊದಲಾದುವುಗಳ ವಿವೇಚನೆ ಮಾಡುತ್ತ ನ್ಯಾಯ—ವೈಶೇಷಿಕಗಳ ಮೇಲೆ ತುಲನಾತ್ಮಕ ವಿಚಾರ ಮಾಡಿ ನ್ಯಾಯವೇರಿಸ್ತ್ರ ಎಂದು ಜನಿಸಿತು ಎಂಬುದಕ್ಕೆ ಉತ್ತರ ಕೊಟ್ಟಿದ್ದಾರೆ. ನ್ಯಾಯ ಶಾಸ್ತ್ರಾಂತರ್ಗತವಾದ ಸಪ್ತ ವಿಷಯಗಳ ಮೇಲೆ ಜೆನ್ನಾಗಿ ವಿಚಾರ ಮಾಡಿದ್ದಾರೆ ಇದರೊಂದಿಗೇನೇ ಈಶ್ವರನ ಅಸ್ತಿತ್ವ ಸಂಬಂಧಿ ಸಮಸ್ಯೆಗಳನ್ನು ಉತ್ತರಿಸುತ್ತಾ ಮೂರನೆಯ ಅಧ್ಯಾಯದಲ್ಲಿ ವೈಶೇಷಿಕ ದರ್ಶನದ ಮೇಲೆ ವ್ಯಾಖ್ಯೆ ಮಾಡಿದ್ದಾರೆ 'ಜ್ಞಾನೋಪಲಬ್ಧಿ' ವಿಧಿಯ ನಿರೂಪಣೆಯಾಡಿ ವೈಶೇಷಿಕ ಪದಾರ್ಥದ ಮೇಲೆ ವ್ಯಾಖ್ಯೆ ಮಾಡಿದ್ದಾರೆ 'ದ್ರವ್ಯ' ತತ್ವದ ವಿವೇಚನೆ ಮಾಡಿದ ನಂತರ ಪ್ರಸಿದ್ಧವಾದ ಅಣುವಾದದ ಮೇಲೆ ಸವಿಸ್ತಾರವಾದ ವ್ಯಾಖ್ಯೆ ಮಾಡಿದ್ದಾರೆ

ನಾಲ್ಕನೇ ಅಧ್ಯಾಯದಲ್ಲಿ ಸಾಂಖ್ಯ—ವಿವೇಚನೆಯು ಬಳಿಕ ಜನೇ ಅಧ್ಯಾಯದಲ್ಲಿ ಪತಂಜಲಿ ಕೃತಯೋಗ ಶಾಸ್ತ್ರ ಮತ್ತು ಸಾಂಖ್ಯಿಗಳ ಪರಸ್ಪರ ತುಲನಾತ್ಮಕ ವಿಮರ್ಶೆಯಿದೆ. ಮನಸ್ಸನ್ನು ನಿಗ್ರಹಿಸಲು ಪ್ರಾಣಾಯಾಮ, ಇಂದ್ರಿಯ ನಿಗ್ರಹ, ಧಾರಣೆ-ಧ್ಯಾನ ಸಮಾಧಿ ಮತ್ತು ಅಷ್ಟಾಂಗ ಯೋಗದ ಅನುಷ್ಠಾನ ಹಾಗೂ ಕ್ರಮ ಬದ್ಧ ವಿಸ್ತೃತ ವ್ಯಾಖ್ಯೆಯಿರುವುದು.

ಏಳನೆಯ ಅಧ್ಯಾಯದಲ್ಲಿ ಬಾದರಾಯಣರ ವೇದಾಂತ ಸೂತ್ರದ ವಿಚಾರ ಮಾಡಲಾಗಿದೆ. ಅಸ್ಪವೇದಯದಲ್ಲಿ ಶ್ರೀ ಮದಾದ್ಯಶಂಕರ ಆಚಾರ್ಯರ ವೇದಾಂತದ ಸಮಗ್ರರೋಹ ಪೂರ್ವಕವಾದ ವಿಸ್ತಾರವಾದ ವಿಮರ್ಶೆ ಮಾಡಿದ್ದಾರೆ ನಂತರದ ಶ್ರೀ ಮದ್ರಾಮಾನುಜಾಚಾರ್ಯರ ವಿಶಿಷ್ಟಾದ್ವೈತಮತದ ವಿಸ್ತೃತ ವಿಮರ್ಶೆ ಇದೆ

ಹತ್ತನೆಯ ಅಧ್ಯಾಯದಲ್ಲಿ ಶ್ರೀಮನ್ ಮಧ್ವಾಚಾರ್ಯರ ದ್ವೈತ, ವೇದಾಂತದ ಬಗ್ಗೆ ವಿಚಾರಮಾಡಿ, ಶಾಕಗಾಣಪತ್ಯ ಹಾಗೂ ಶೈವ ಸಿದ್ಧಾಂತಗಳ ಬಗ್ಗೆ ಅಳವಾಗಿ ವಾಖ್ಯೆಮಾಡಿದ್ದಾರೆ ಇದರಲ್ಲೇ ಚೈತನ್ಯ ಭಕ್ತಿ ಸಂಪ್ರದಾಯದ ಬಗ್ಗೆ ವಿವೇಚನೆಯೂ ಇದೆ

ಗ್ರಂಥದ ಕೊನೆಯಲ್ಲಿ ಭಿನ್ನ ಭಿನ್ನವಾದ ದರ್ಶನ ಪ್ರಣಾಲಿಗಳ ಮೇಲೆ ವಿವೇಚನೆಮಾಡುತ್ತಾ ಜೀವನದ ಆನ್ಯೋನ್ಯಾಶ್ರಿತ ಸಂಬಂಧಗಳ ದರ್ಶನದ ನಿರ್ದೇತೆಯನ್ನು ನಾಧಿಸುತ್ತಾ ಗ್ರಂಥದ ಪರಿಸಮಾಪ್ತಿಯನ್ನು ಮಾಡಿದ್ದಾರೆ.

ಮತ್ತೊಂದು ಶಾಖೆ . . . . .

ಮಹಿಳೆಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಿ, ಅವರಲ್ಲಿ "ಬ್ಯಾಂಕಿಂಗ್ ಮನೋವೃತ್ತಿ" ಯನ್ನು ಹೆಚ್ಚಿಸುವುದಕ್ಕಾಗಿ

ಸಿಂಡಿಕೇಟ್ ಬ್ಯಾಂಕಿನ

"ಮಹಿಳೆಯರಿಂದಲೇ ನಡೆಸಲ್ಪಡುವ" ಶಾಖೆಯೊಂದು ಹೈದರಾಬಾದಿನ "ಚಿಕ್ಕಡಪಳ್ಳಿ"ಯಲ್ಲಿ ಇದೇ ತಿಂಗಳ 29 ರಂದು ತೆರೆಯಲ್ಪಡುವುದು.

ಸಿಂಡಿಕೇಟ್ ಬ್ಯಾಂಕ್

ಟಿ. ಎ ಪೈ, B. Com (Bom) A I I B, ಮ್ಯಾನೇಜಿಂಗ್ ಡೈರೆಕ್ಟರ್

P. ವತ್ಸಲಾ ರಾವ್, B. A LL B, ಮ್ಯಾನೇಜರ್.

ಈಗಾಗಲೇ ತೆರೆದ ಎರಡು ಮಹಿಳಾ ಶಾಖೆಗಳು... ಶೇಷಾದ್ರಿಪುರಂ ಬೆಂಗಳೂರು ಮತ್ತು ತಿರುವನಂತಪುರ

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ. 1925 ಶಾಖೆಗಳು: 184

Edited, Printed & Published by K. H.Shetty. at the Navayuga Press, Udipi, S. India.

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೬೩

NAVAYUGA INDEPENDENCE DAY SPECIAL 1963



೨೫ ನ. ಪೈಸೆ

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: ಕೋಟ್ಟಕಲ್ ಫೋನ್ ನಂ. 44 (ತಿರೂರು Exchange)

ಶಾಖೆಗಳು :

1.	ಕೋಯಿಕೋಡ್	(ಫೋನ್ ನಂ. 2155)	ಕಲ್ಲಾಯಿ ರೋಡ್
2.	ತಿರೂರು	(ಫೋನ್ ನಂ. 31)	ಸ್ಟೇಷನ್ ರೋಡ್
3.	ಪಾಲಕ್ಕಾಟ್	(ಫೋನ್ ನಂ. 104)	ವಡಕ್ಕಂತರ
4.	,, ಸೇಲ್ಸ್ ಡಿಪೊ		ಜಿ. ಬಿ. ರೋಡ್
5.	ಎರ್ನಾಕುಳಂ	(ಫೋನ್ ನಂ. 2026)	ಮಹಾತ್ಮಾ ಗಾಂಧೀ ರೋಡ್
	,, ವೈನ್ಯರ ನಿವಾಸ	(ಫೋನ್ 674)	
6.	ತ್ರಿವೆಂಡ್ರಮ್	(ಫೋನ್ ನಂ. 3924)	ಸ್ಟೇಚು ರೋಡ್
7.	ಈರೋಡು	(ಫೋನ್ ನಂ. 172)	45 ಕಾವೇರಿ ರೋಡ್
8.	ಆಳ್ವಾಯಿ	ಸೇಲ್ಸ್ ಡಿಪೊ	ಪೆಲೇಸ್ ರೋಡ್

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಖಾತ್ರಿಯಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಲ್ಸು, ನವರಕಿಲ್ಸು ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಮ್ಮ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋವಮ್

ಇಲ್ಲಿ ನಡೆಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ದಯಮಾಡಿ ಬರೆಯಿರಿ:

ಮೆನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕಲ್.

"ಕೆನರಾ" ಬ್ರೇಕ್ ಡ್ರಮ್ ಗಳನ್ನು

ಉಪಯೋಗಿಸಿದರೆ ನಿಮ್ಮ ಭವಿಷ್ಯವು ಭದ್ರವಾಗಿರುವುದು.

(ಡಾಜ್, ಫೋರ್ಡ್, ಫಾರ್ಗೊ, ಬೆಡ್‌ಫೋರ್ಡ್ ಇತ್ಯಾದಿ)

"ಕೆನರಾ" ಡ್ರಮ್ಮುಗಳ ಬಾಳಿಕೆಯ ಕಾರಣವನ್ನು ಎಷ್ಟು ಹುಡುಕಿದರೂ ಸಿಗುವ ಕಾರಣ ಒಂದೇ!
ಅದು ಅವುಗಳ ಉತ್ತಮ ತಯಾರಿಕೆಯ ಶ್ರೇಷ್ಠತೆ.

Your future is safe when you are using

"CANARA" BRAKE DRUMS

(DODGE, FORD, FARGO, BEDFORD ETC.)

There is Only One Clue

It is no use searching, for you will find Only One reason for the success of

"CANARA" BRAKE DRUMS.

It is their high quality.

THE CANARA WORKSHOPS LTD.

ದಿ ಕೆನರಾ ವರ್ಕ್‌ಶಾಪ್ಸ್ ಲಿಮಿಟೆಡ್

MANGALORE-3 ಮಂಗಳೂರು-3

Estd. 1921 ಸ್ಥಾಪನೆ

ನವಯುಗ
NAVAYUGA

ವಾರಪತ್ರಿಕೆ, ಉಡುಪಿ
WEEKLY, UDIPI

ಸಂಚಾಲಕ – ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

ಸಂಪುಟ ೪೨ Vol. 42
ಸಂಚಿಕೆ ೪೮ No. 48

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ—೧೯೬೩

Independence Day Special-1963

ನಮೋ ಸ್ವಾತಂತ್ರ್ಯ ಭಾಸ್ಕರಾಯ

ಭಾರತದ ಸ್ವಾತಂತ್ರ್ಯ ಭಾಸ್ಕರನಿಂದು ಸೋದರ ವರ್ಷ ಪರಿಪೂರ್ಣನಾದನು. ಸ್ವಾತಂತ್ರ್ಯ ಪಡೆಯುವ ಹುಮ್ಮನಸ್ಸಿನಲ್ಲಿದ್ದ ಭಾರತೀಯುವಂದು ದೇಶವನ್ನು ಹೋದಶ ವರ್ಷಗಳಲ್ಲಿ ಹೋದಶ ಕಲಾವಂತವಾಗಿ ಕಟ್ಟುವ ಹೆಸ್ಸರಿಯನ್ನಿಟ್ಟುಕೊಂಡಿದ್ದನು. ಈ ಉದ್ದೇಶವು ಸಫಲವಾಗಿದೆಯೆಂಬಷ್ಟು ಧೈರ್ಯವಾಗಿ ಹೇಳುವಂತಿಲ್ಲ; ಆದರೂ ಉದ್ದೇಶ ಸಾಧನಾ ಪಥವಲ್ಲಾತ ಬಹು ದೂರ ಕ್ರಮಿಸಿದ್ದಾನೆಂದು ಮತ್ರ ವಿಶ್ವಾಸದಿಂದ ಶೇಳಬಹುದು. ದೇಶದ ನಾಗರಿಕರ ಶುದ್ಧಮೂಲ್ಯ ತೆಗಳಾದ ಅಶನ, ವಸನ, ವಸತಿ, ಮತ್ತಿತ್ತರಗಳಿಗೆ ಕಲಶವಿಟ್ಟಂತೆ ಶಿಕ್ಷಣಗಳನ್ನು ಒದಗಿಸುವುದು ಪ್ರಜಾಪ್ರಭುತ್ವ ಸರಕಾರದ ಅದ್ಯ ಕರ್ತವ್ಯ. ನಾವೀ ದಿಸೆಯಲ್ಲಿ ಗಣನೀಯವಾದ ಪ್ರಗತಿ ಗಳಸಿದ್ದೇವೆ; ಪ್ರಗತಿ ಮಾರ್ಗದಲ್ಲಿ ಮುಂದಡಿಯಿಡುತಿದ್ದೇವೆ. ಸಮಾಜವಾದದ ನೂದರಿಯಲ್ಲಿ ಕಲ್ಯಾಣರಾಷ್ಟ್ರವನ್ನು ಕಟ್ಟುವ ನಮ್ಮ ಧ್ಯೇಯೋದ್ದೇಶ ಸರ್ವ ಪ್ರಕಾರದಲ್ಲೂ ಕೈಗೂಡುವ ವರೆಗೆ ನಮಗೆ ವಿಶ್ರಾಂತಿಯಿಲ್ಲ; ಆರಾಮವು ಹರಾಮುಗಿರಿಗೆ ಅವಕಾಶ ಮಾಡಿಕೊಡುತ್ತದೆ; ಎಂತಲೇ ನಾವಿಂದು ಈ ಧ್ಯೇಯ ಸಿದ್ಧಿಗಾಗಿ ಪ್ರತಿ ಕ್ಷಣವನ್ನೂ ಸದುಪಯೋಗಪಡಿಸಿಕೊಳ್ಳಬೇಕು.

ಸ್ವಾತಂತ್ರ್ಯ ಪ್ರಾಪ್ತಿಯ ಪ್ರಾರಂಭದ ವರ್ಷಗಳು ನಮಗೆ ಕಂಟಕಾಕೀರ್ಣವಾಗಿದ್ದುವು; ನೊದಲ ಗಟ್ಟದಲ್ಲಿ ಪಾಕಿಸ್ತಾನದಿಂದ ಬಂದ ನಿರಾಶ್ರಿತರು, ಬ್ರಿಟಿಷರು ಬಿಟ್ಟುಹೋದ ದೇಶೀಯ ಸಂಸ್ಥಾನಗಳು, ದೇಶದ ಆರ್ಥಿಕ ದುಸ್ಥಿತಿ-ಇವುಗಳಿಂದ ನಾವು ಕಂಗೆಡಬೇಕಾಯಿತು; ಉಗ್ರವಿಸಿದ ನಿತ್ಯ ನೂತನ ಸವಾಲ್ಗೆಗಳನ್ನು ಕೆಚ್ಚೆದೆಯಿಂದ ಎದುರಿಸಿ, ಅವನ್ನು ಪರಿಹರಿಸಿ, ದೇಶಾಭಿವೃದ್ಧಿ ಯೋಜನೆಗಳತ್ತ ನಾವು ಮನಸ್ಸು ಹರಿಸಿದೆವು; ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದಿಂದ, ಅವುಗಳನ್ನು ಕಾರ್ಯಗತ ಮಾಡುವುದರಿಂದ ದೇಶದ ಆರ್ಥಿಕಸ್ಥರವು ಎತ್ತರವಾಗಿ, ಪ್ರಜೆಗಳಲ್ಲಿ ಕೊಂಡುಕೊಳ್ಳುವ ಮತ್ತು ಅನುಭೋಗಿಸುವ ಶಕ್ತಿಗಳು ಹೆಚ್ಚುತ್ತ ಬರುತ್ತಿವೆ ಎಂಬುದು ಅನುಭವದ ಸಂಗತಿ. ಹತ್ತು ವರ್ಷಗಳಿಗೆ ನೊದಲು ನಾವು ಜೀವಿಸುತ್ತಿರುವಾಗ ಪಡೆಯುತಿದ್ದ ಸಾಲಭ್ಯ ಮತ್ತು ಹೊಂದುತಿದ್ದ ಸುಖವು ಇಂದಿಗಿಂತ ಆದೆಷ್ಟೋ ಪಾಲು ಕಡಿಮೆಯಾಗಿತ್ತು. ಜನಜೀವನ ಮಟ್ಟ ಏರುವುದೇ ದೇಶದ ಅಭಿವೃದ್ಧಿಯ ಮಾನದಂಡ.

ಹೀಗೆಂದ ಮಾತ್ರಕ್ಕೆ ನಾವಿನ್ನು ಸೈಸ್ಥಿತಿಯಿಂದಿರಬಹುದೆಂದರ್ಥವಲ್ಲ. ಹೆಳಿಕೇಳಿ ಬಡವರ ನಾಡು. ಭಾರತದಲ್ಲಿ ಸಂಪಿಸಿರುವುದಕ್ಕಿಂತ ಆದೆಷ್ಟೋ ಪಾಲು ಹೆಚ್ಚಾಗಿ ಸಾಧಿಸುವುದಕ್ಕಿದೆ. ಸ್ವಾವಲಂಬನದ ಗುತ್ರವನ್ನು ಪರಿಪೂರ್ಣ ಆಳವಡಿಸಿಕೊಳ್ಳಬೇಕು. ನಾವು, ನಮ್ಮ ಯೋಜನೆಗಳಿಗಾಗಿ ಹೆರವರ ಮುಂದೆ ಕೈಯೊಡ್ಡಬಾರದು ನಾವು; ಅಂತರಿಕ ಸಾಧನ ಸಂಪತ್ತಿಯನ್ನ ಕ್ರೋಢೀಕರಿಸಿಕೊಂಡೇ ದೇಶ ಪುನಾರಜನೆಯ ಕಾರ್ಯಕ್ಕೆ ತೊಡಗಬೇಕು ನಾವು. ಆಂತರಿಕ ಉನ್ನತ ಪಟ್ಟಕ್ಕೆ ಒಂದಾಗಲೇ ನಾವು ಗಳಸಿದ ಸ್ವಾತಂತ್ರ್ಯ ಕ್ಕೆಂದೂ ಅರ್ಥ ಬರುವುದು. ರಾಜಕೀಯ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳೂಡನೆ ಸಾಮಾಜಿಕ ಸ್ವಾತಂತ್ರ್ಯವನ್ನೂ ನಾವು ಗಳಸಬೇಕು; ನಮ್ಮ ನಮ್ಮೊಳಗೆ ಕಾದುಗಿರುವ ನೂರಾರು ದುಷ್ಟ ಶಕ್ತಿ-ಸಂಪ್ರದಾಯಗಳನ್ನು ನಿರ್ಮೂಲನ ಗೆಯ್ದು, 'ನಾವೆಲ್ಲ ಒಂದೇ; ಭಾರತ ಮಾತೆಯ ಮಕ್ಕಳು' ಎಂಬ ಉಚ್ಚ ಭಾವನೆ ನಮ್ಮುದಾಗಬೇಕು; ಒಂದಾಗಿ ಬದುಕುವ ಬಂಧನಾಗಿ ಸಾಯುವ ಉಚ್ಚ ಗುರಿಯು ನಮ್ಮದಾಗಬೇಕು.

ಹದಿನೈದು ವರ್ಷಗಳ ವರೆಗೆ ನಾವು ಸೈನ್ಯ ಶಕ್ತಿಯ ಕಡೆಗೆ ಹೆಚ್ಚಿನ ಗಮನ ಹರಿಸಿಲ್ಲ; ಇದ್ದ ನಮ್ಮ ಸೇನೆಯೂದರೂ ಶಾಂತಿ ಸೇನೆ. ಆದರೆ, ಹದಿನಾರನೆಯ ವರ್ಷದಲ್ಲಿ ನಾವು ಸೈನಿಕ ಶಕ್ತಿಯನ್ನೂ ಬೆಳ್ಚಿಸುವುದು ಅನಿವಾರ್ಯವಾಯಿತು. ನಮ್ಮ ಶತ್ರುಕ ಸ್ನೇಹಿತ ಕೆಂಪು ಶ್ರೀ ಚೀನೀಯರು 'ದೇಶವು ಸರ್ವಾಂಗೀಣ ಪ್ರಗತಿ ಹೊಂದಿದರ ಮಾತ್ರ ಸಾಲದು; ಆತ್ಮರಕ್ಷಣೆಗಾಗಿ ಸೈನಿಕ ರಂಗದಲ್ಲಿಯೂ ಪ್ರಗತಿಯೂಗಬೇಕು' ಎಂಬುದನ್ನು ಕೋರಿಸಿಕೊಟ್ಟರು ಭಾರತದ ಪವಿತ್ರ ಭೂಮಿಯಲ್ಲಿ ಕತ್ತಿಗಳನ್ನು ಚಮಚಿಸಿ, ಗುಂಡಿನ ಹೊಗೆಯುಗುಳಿ, ಆದನ್ನು ಅಪವಿತ್ರಗೊಳಿಸಿದ ದಾನವ ಚೀನೀಯರು ಇಂದಿಗೂ ನಮ್ಮ ಮೇಲೆ ಆಕ್ರಮಣದ, ಅಧಪ್ರತೆಯ ಭಾವನೆಯನ್ನು ಹೆಚ್ಚಿಸುತಿದ್ದಾರೆ ನೆರೆಯ ಪಾಕಿಸ್ತಾನವು ಕೂಡ ಆ ಕ್ರೂರ ರಾಕ್ಷಸರಿಗೆ ಅಂತ್ಯ ಹೇಡುತ್ತ ಭಾರತವನ್ನು ಕೆಣಕುವ ಇಂಗಿತವನ್ನು ವ್ಯಕ್ತಪಡಿಸಿದೆ. ನಮ್ಮ ಮಿತ್ರದೇಶಗಳ ಹೃತ್ಪೂರ್ವಕ ಆನುಕಂಪ ಮತ್ತು ಸಹಾಯಗಳಿಂದ ನಾವು ನಮ್ಮ ಸೇನೆಯನ್ನು ಪುನಾ ರಚಿಸುವ ಆವಶ್ಯಕ ಕರ್ತವ್ಯದಲ್ಲಿ ನಿರತರಾಗಿದ್ದೇವೆ.

ಕಾಂತಿಸ್ಥಿಯ ಭಾರತವು ಸೇನೆಯ ಪುನಾರಜನೆ ಮಾಡುತ್ತಿರುವುದೇಕೆ? ನಮಗೆ ಯಾರೊಂದಿಗೂ ದ್ವೇಷವಿಲ್ಲ; ನಾವು ಯಾರ ವೈರಿಗಳೂ ಏರಿಹೋಗುವುದಿಲ್ಲ ಜಿಜ್ಞಾಸುಗಳಾಗಿಗಳು ನಾವು. ಆದರೆ, ನಮ್ಮ ಮೇಲೆ ಯಾರಾದರೂ ದ್ವೇಷಕಟ್ಟಿಕೊಂಡು ಏರಿಬಂದರೆ, ಆಕ್ರಮಣಕ್ಕೆ ತಲೆಬಾಗುವಷ್ಟು ಅಂಜುಬುರುಕರು, ಹೇಡಿಗಳು ನಾವಲ್ಲ. ಹಿಮಾಲಯದ ಕೆಂಪುಗಳ ಆಚೆ ಬದಿಯಲ್ಲಿ ಲಕ್ಷಗಟ್ಟಲೆ ಚೀನೀಯರು ಆಕ್ರಮಣಕಾರರು ಕತ್ತಿ ವರಸೆಗಳನ್ನು ಪ್ರದರ್ಶಿಸಲು ಸನ್ನದ್ಧರಾಗಿರುವಾಗ ನಾವು ಭಯಭೀತರಾಗುವುದೆ? ಸಲ್ಲದು. ಎಂದೆಂದಿಗೂ ಸಲ್ಲದು, ನಮ್ಮ ಸ್ವಾತಂತ್ರ್ಯಕ್ಕೆ, ನಮ್ಮ ಸಾರ್ವಭೌಮತೆಗೆ, ನಮ್ಮ ಪರಿಶುದ್ಧ ಅಹಿಂಸಾ ಜೀವನಕ್ಕೆ ಕೊಟ್ಟ ಚೀನೀಯರ ಆಶ್ವಾಸನೆಯನ್ನು ನಾವು ಸ್ವೀಕರಿಸಿದ್ದೇನೆ; ಜನ ಜನವೂ ಸೈನಿಕನಾಗುವ, ದೇಶರಕ್ಷಣೆಗಾಗಿ ವೀರಾವೇಶದಿಂದ ಹೋರಾಡುವ ಧೀರ ಪ್ರತಿಜ್ಞೆಯನ್ನು ನಾವು ಮಾಡಿದ್ದೇನೆ; 'ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು' ಎಂದು ಏಪತ್ತು ವರ್ಷಗಳಿಗೆ ಮೊದಲು ಲೋಕಮಾನ್ಯ ತಿಲಕರು ಮಾಡಿದ ಘೋಷಣೆ ಇಂದಿಗೂ ನಮ್ಮ ಕಿವಿದೆರೆಗೆ ಬಡಿಯುತ್ತಿದೆ; ನಮ್ಮ ನರನಾಡಿಗಳಲ್ಲಿ ವೀರ್ಯದ ಕೆಚ್ಚು ಹರಿದಾಡುತ್ತಿದೆ; ಈ ಕೆಚ್ಚನ್ನು ನಂಬಿ ನಾವಿಂದು ಸಮರಸನ್ನಾಹದಲ್ಲಿ ತೊಡಗಿದ್ದೇವೆ. ಇನ್ನು ಎಂದೆಂದಿಗೂ ಆರಿದಿರಲಿ ಅದರ ಬಲದಿಂದ ದೇಶರಕ್ಷಣೆಯು ಆದ್ಯಕರ್ತವ್ಯದಲ್ಲಿ ನಾವು ಜಯಶೀಲರಾಗೋಣ. ಸಂಘ ಶಕ್ತಿಯೇ ಸಂಗ್ರಾಮವಿಜಯ-ಇದನ್ನೂ ಅನ್ವಿತವಿದೆ; ಏನೇ ಬರಲಿ, ದೇಶರಕ್ಷಣೆಯ ಉದ್ದೇಶವು ತಪ್ಪದೆ ಕೈಗೂಡಲಿ—ಇದಕ್ಕಾಗಿ ನಮ್ಮ ಜೀವನೂನವನ್ನೇ ಮುಡಿಪಿಸುವ ಸಾಹಸ ನಮ್ಮಲ್ಲುದಿಸಿ ಬರಲಿ ಈ ಪ್ರಾರ್ಥನೆಯೊಂದಿಗೆ ಸ್ವಾತಂತ್ರ್ಯ ಭಾಸ್ಕರನನ್ನು ನಾವಿಂದು ನಮಸ್ಕರಿಸೋಣ.

ಸೇವಾ ಋಣ

ಸ್ವಾತಂತ್ರ್ಯೋತ್ಸವದ ಈ ಶುಭಸಂಚಿಕೆಯ ತಯಾರಿಯಲ್ಲಿ ನೆರವಾದ ಬರಹಗಾರ ಬಂಧುಭಗಿನಿಯರು ಮತ್ತು ಜಾಹೀರಾತುದಾರರು ನಮ್ಮ ಹಾರ್ದಿಕ ಕೃತಜ್ಞತೆಗೆ ಪಾತ್ರರು. ಬಂದಿರುವ ಹಲವು ಲೇಖನಗಳನ್ನು ಸ್ಥಳಾವಕಾಶವಿಲ್ಲದ ಕಾರಣ ಪ್ರಕಟಿಸಲು ಆಸಮರ್ಥರಾದ ನಾವು ಕ್ಷಮಾರ್ಥರು. ಮುದ್ರಣಕಾರ್ಯದಲ್ಲಿ ನೆರವಾದ ನೌಕರರಿಗೆ ನಾವು ಸದಾ ಋಣಿಗಳು.

ನೈಪಿಷ್ಟ್ಯಗಳ ಆಗರ–ಟಿ.ಎ.ಪೈ

ಬ್ಯಾಂಕಿಂಗ್ ಉದ್ದಿಮೆಯಲ್ಲಿ ಚಿರಪರಿಚಿತವಾದುದು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರ ಹೆಸರು. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಅವರು ಕಾಂಗ್ರೆಸ್‌ನ ಶಕ್ತಿಸಂವರ್ಧನೆಗಾಗಿ ದುಡಿದರು. ಇತ್ತೀಚೆಗೆ ಅವರು ಎ.ಐ.ಸಿ.ಸಿ.ಗೂ ಸದಸ್ಯರಾಗಿ ಆಯ್ಕೆಗೊಂಡುದರಿಂದು, ಅವರ ಸೇವಾಕಾರ್ಯಕ್ಕೆ ವಿಸ್ತೃತ ಅವಕಾಶ ಲಭಿಸಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿಯೂದರೂ ಸಿಂಡಿಕೇಟ್ ಬ್ಯಾಂಕ್ ಅನಿತರ ಸಾಧಾರಣ ಕ್ರಾಂತಿಯನ್ನೇ ಎಬ್ಬಿಸಿದೆ. ಚಿಕ್ಕಪುಟ್ಟ ಬ್ಯಾಂಕ್‌ಗಳನ್ನು ತನ್ನಲ್ಲಿ ಅನ್ಯಧಿಕ ಸಂಖ್ಯೆಯಲ್ಲಿ ವಿಲೀನಮಾಡಿಕೊಂಡು, ತನ್ನ ಕಾರ್ಯಕ್ಷೇತ್ರವನ್ನು ಮಾತ್ರ ವಿಸ್ತರಿಸಿರುವುದಲ್ಲದೆ, ಜನತೆಗೆ ವ್ಯಾವಹಾರಿಕ ಮತ್ತು ಬಹುಮುಖ ಸೇವೆಯನ್ನೂ ಸಲ್ಲಿಸುತ್ತಿದೆ. ಕೇವಲ ಮಹಿಳೆಯರಿಂದಲೇ ನಡೆಸಲ್ಪಡುವ ಶಾಖೆಗಳನ್ನು ತೆರೆವುದು ಸಿಂಡಿಕೇಟಿನ ವೈಶಿಷ್ಟ್ಯ. ಈಗಾಗಲೇ ಬೆಂಗಳೂರು, ತಿರುವನಂತಪುರ ಮತ್ತು ಹೈದರಾಬಾದಿಗಳಲ್ಲಿ ಇಂತಹ ಶಾಖೆಗಳು ಪ್ರಾರಂಭವಾಗಿವೆ; ಕಲ್ಪಿಂತಕಾರಿಯೆನಿಸಿವೆ. ಇತ್ತೀಚೆಗೆ ವಿದೇಶೀ ವ್ಯವಹಾರವನ್ನೂ ಪ್ರಾರಂಭಿಸಲಾಗಿದೆ. ಬ್ಯಾಂಕಿನ ಪ್ರಗತಿಗೆ ಕಾರಣಪುರುಷರಾದ ಶ್ರೀ ಪೈಯುವರ ಉತ್ಸಾಹ ಮತ್ತು ಸೇವಾ ಬುದ್ಧಿಗಳು ದಿನದಿಂದ ದಿನಕ್ಕೆ ಬೆಳೆದು ಬರಲಿ; ತನ್ಮೂಲಕ ಜನಹಿತ ಸಾಧನೆಯೂಗಲಿಯೆಂದು ಎಲ್ಲರೂ ಬಯಸುವುದು ಸ್ವಾಭಾವಿಕ. ಪರಿಮಳಯುಕ್ತ ಹೂಗಳನ್ನೆ ಎಲ್ಲರೂ ಆರಿಸುವುದರಲ್ಲಿ ತಪ್ಪೇನು?

ಸ್ವಾತಂತ್ರ್ಯ ದಿನದ ಶುಭಾಶಯಗಳು.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.

(ಶೆಡ್ಯೂಲ್ಡ್ ಬ್ಯಾಂಕ್)

- ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ. ಬಡ್ಡಿ:
  ರೂ. 8=70 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ
  ರೂ. 10=00 ಒದಗಿಸುವುದು.
- ಕರೆ, ಚೆಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು ಬಡ್ಡಿ:
- ಸೇವಿಂಗ್ಸ್ ಖಾತೆಗಳ ಮೇಲೆ ಬಡ್ಡಿ:

ಸೇಕಡಾ 5 ರಂತೆ
ಸೇಕಡಾ 5½ರ ವರೆಗೆ
ಸೇಕಡಾ 3 ರಂತೆ

THE PANGAL NAYAK BANK LTD.,

(SCHEDULED BANK)

REGD. OFFICE: UDIPI. S. KANARA. ESTD: 1920

GRAMS: **ANANDATYPE, HUBLI**

ದಕ್ಷಿಣ ಕನ್ನಡ ಜಿಲ್ಲೆಯ ಜನತ್ರೀಗೆ ಸ್ವಾತಂತ್ರ್ಯೋತ್ಸವದ ಅಭಿನಂದನೆಗಳು.

ಶ್ರೀ ಆನಂದ ಟಾಯಿಪ ಫೌಂಡ್ರಿ

ಸಂಯುಕ್ತ ಕರ್ನಾಟಕ ಕಂಪೌಂಡ, ಹುಬ್ಬಳ್ಳಿ.

ದಕ್ಷಿಣ ಕನ್ನಡ ಜಿಲ್ಲೆಯ ಮುದ್ರಣಾಲಯಗಳಲ್ಲಿ ವಿಜ್ಞಾಪನೆ:

ಇದುವರೆಗೆ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿಯ ಮುದ್ರಣಾಲಯಗಳ ಆವಶ್ಯಕತೆಯನ್ನು ಪೂರೈಸುತಿದ್ದ ನಾವು ಈಗ ದಕ್ಷಿಣ ಕರ್ನಾಟಕಕ್ಕೂ ನಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿದ್ದೇವೆಂದು ತಿಳಿಸಲು ಸಂತೋಷವಾಗುತ್ತದೆ. ಸುದೀರ್ಘ ಅನುಭವ ಹಾಗೂ ಸತತ ಪ್ರಯೋಗಗಳಿಂದ ನಾವು ಸಿದ್ಧಪಡಿಸಿರುವ ಅನೇಕ ನವೀನ ಕನ್ನಡ ಮುದ್ರಣಾಕ್ಷರಗಳನ್ನು ದೊಡ್ಡ ಪ್ರಮಾಣದಲ್ಲಿ ಪೂರೈಸಲು ನಾವೀಗ ಸಮರ್ಥರಾಗಿದ್ದೇವೆ ಅತ್ಯಾಧುನಿಕವಾದ ವಿದೇಶೀ ಯಂತ್ರೋಪಕರಣಗಳನ್ನು ದೊರಕಿಸುವ ನಮ್ಮ ಪ್ರಯತ್ನ ಸಫಲವಾಗಿರುವದರಿಂದ, ಅತ್ಯಂತ ನಿಖರವಾಗಿಯೂ ಸಕಾಲದಲ್ಲಿಯೂ ಮುದ್ರಣಾಕ್ಷರಗಳನ್ನು ತಯಾರಿಸುವುದು ನಮಗೀಗ ಸಾಧ್ಯವೆನಿಸಿದೆ ತತ್ಪರಿಣಾಮವಾಗಿ, ನಾವು ಎಲ್ಲಾ ಮುದ್ರಣಾಲಯಗಳಗೆ— ಅವು ಎಷ್ಟೇ ದೊಡ್ಡವಾಗಿರಲಿ ಅಥವಾ ಸಣ್ಣವಾಗಿರಲಿ—ಬೇಡಿಕೆಗಳನ್ನು ಕರಾರುವಾಕ್ಕಾಗಿ ಈಗ ಪೂರ್ಣಗೊಳಿಸಬಲ್ಲೆವೆಂದು ಖಂಡಿತವಾಗಿಯೂ ಹೇಳುತ್ತೇವೆ. ಇವಲ್ಲದೆ ಇಂಗ್ಲಿಷ್ ಮುದ್ರಣಾಕ್ಷರಗಳನ್ನೂ ಇತರ ಎಲ್ಲಾ ರೀತಿಯ ಮುದ್ರಣ ಸಾಧನಗಳನ್ನೂ ನಾವು ಸಕಾಲದಲ್ಲಿ ಒದಗಿಸುವ ವ್ಯವಸ್ಥೆ ಮಾಡಿದ್ದೇವೆ

ಕೇವಲ ಲಾಭ ನಮ್ಮ ಗುರಿಯಲ್ಲ, ಕನ್ನಡ ನಾಡಿನ ಸೇವೆಯೂ ನಮಗೆ ಅಷ್ಟೇ ಮುಖ್ಯ.

ಇತಿ,

ತಮ್ಮ

ಎನ್. ಎ. ವಿ. ನಾಯಿಡು,

ಪ್ರೊಪ್ರೈಟರ್.

ಕಾಸರಗೋಡಿಗೆ ಬಿಡುಗಡೆ ಇಲ್ಲಿ ಕನ್ನಡ ನಾಯುತ್ತ ಇದೆ!

ಕನ್ನಡ ರಾಜ್ಯದ ಅವಿಭಾಜ್ಯ ಅಂಗವಾದ ಕಾಸರಗೋಡು ಆದಂದಿ ಪ್ರತ್ಯೇಕತವಾದ ವಿಳೆಯ ವರ್ಷ ಗತಿಸುತ್ತಿದೆ. ಆದ್ದಿನ ಕೇರಳ ಸರಕಾರವು ಕನ್ನಡದ ಕಗ್ಗೊಲೆ ನಡೆಸುವ ದೃಢ ಪ್ರತಿಜ್ಞೆಯನ್ನೇ ಮಾಡಿದಂತಿದೆ. ವೈಕ್ಷ ಭ್ಯೆಷತೆ ಕಾಸರಗೋಡಾದರೂ ಅದಿನ್ನೂ ಉಚ್ಚಿನ್ನವಾಗಿಲ್ಲ. ಎಲ್ಲರೂ ಇರು, ಎಂತಾದರು ಇರು, ಎಲ್ಲಿದ್ದರು ನೀ ಕನ್ನಡವಾಗಿರು' ಎಂಬ ಕನ್ನಡಮ್ಮನ ಪರಕೆಯೇ ಅಲ್ಲಿನವರಿಂದು ಅದೆಯಷ್ಟು, ಭದ್ರಕಾಪ್ಪಿಕನಚ

ಲೇಖಕರು

ಲೇಖಕರು: ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಮುತ್ತೈದೆ ಪೂಂಗಲ್ಯವನ್ನು ಉಳಿಸಿ ಕೊಳ್ಳುವಂತೆ, ತಾಯಿ ತೆಶವನ್ನು ಸಂರಕ್ಷಿಸುವಂತೆ, ನಾಲಿಗೆ ರುಚಿಯನ್ನು ಕಾಪಾಡಿಕೊಳ್ಳುವಂತೆ—ಕಾಸರಗೋಡಿನ ಕನ್ನಡಜನ ಬಹುಕಾಲದ ಶ್ರದ್ಧಾಭಕ್ತಿಶಕ್ತಿಗಳಿಂದ ಇಲ್ಲಿ ಕನ್ನಡವನ್ನು ಬೆಳೆಸಿ ಪಾಲಿಸುತ್ತಾ ಬಂದಿತು. ಈ ದೀರ್ಘಕಾಲದ ತಪಸ್ಸಿನ ಫಲವಾಗಿ ಕಾಸರಗೋಡು ಕನ್ನಡ ನಾಹಿತ್ಯಕ್ಕೆ ತನ್ನ ನಾಲಿನ ಅನುಪಮವಾದ ಕಾಣಿಕೆಯನ್ನೂ ಸಲ್ಲಿಸಿತು; ಪಾರ್ತಿಸುಬ್ಬ, ಗೋವಿಂದ ಪೈ, ಕಾರ್ಯಡ್ಕ ಬಿ-ಒಬ್ಬರಲ್ಲ, ಇಬ್ಬರಲ್ಲ, ನಾಹಿತ್ಯ ಕೀಮಾ ಪುರುಷರು, ಕನ್ನಡದ ಆಚಾರ್ಯರು, ನಾಹಿತ್ಯ ಸಂಶೊಧಕರು, ಕವಿವರ್ಯರು, ಕತೆಗಾರರು, ವಾಗ್ಮಿಗಳು, ಗಮಕಿಗಳು—ಇಂತು ಕನ್ನಡ ಭಾಷೆಯ ನಾನಾ ಕ್ಷೇತ್ರಗಳಲ್ಲಿ ಹೆಸರಂತ ಮಹನೀಯರನ್ನೇಕರು ಇಲ್ಲಿ ಹುಟ್ಟಿಬಂದು ಕನ್ನಡ ತಾಯಿಗೆ ತಮ್ಮ ಪಾಲಿನ ಸೇವೆ ನಲ್ಲಿಸಿದರು.

ಆದರೆ, ೧೯೫೬ರ ನವಂಬರ್‌ಕ್ಕೆ ಕಾಸರಗೋಡಿನ ಚರಿತ್ರೆಯಲ್ಲಿ ಒಂದು ಕರಾಳ ಅಧ್ಯಾಯವೇ ಪ್ರಾರಂಭವಾಯಿತು. ಸರ್ದಾರ್ ಪಣಿಕ್ಕರ್ ಪ್ರಭೃತಿಗಳ ಏರ್ಪಯ ಕಾಪ್ರಾ ಫಾತಕ್ಕೆ ಗುರಿಯಾಗಿ ದಕ್ಷಿಣ ಕನ್ನಡದಿಂದ ಈ ಭಾಗ ಬೇರ್ಪಡಿಸಲ್ಪಟ್ಟಾಗ—ಅಂದು ಮೊಡಲೆದ್ದಿಂಡು ಕನ್ನಡದ ಕಗ್ಗೊಲೆ ಇಲ್ಲಿ ಪ್ರಾರಂಭವಾಗಿದ್ದು ಅದು ಇಂದಿಗೂ ಅವ್ಯಾಹತವಾಗಿ ನಾಗುತ್ತಾ ಬಂದಿದೆ. ಕನ್ನಡಿಗರನ್ನು ಕೆಳ ಪಾತಾಳಕ್ಕೆ ಒತ್ತಿ ತಳ್ಳಲಾಗುತ್ತಿದೆ; ಇಂತು ಕನ್ನಡವನ್ನು ಕ್ರಮ ಪ್ರಕಾರ ನಾಯಿಸುವ ವಿಷ ಪ್ರಯೋಗ ನಾಗುತ್ತಾ ಇದೆ; ಕಾಸರಗೋಡಿನಲ್ಲಿ ಕನ್ನಡವಿಂದು ನಾಯುತ್ತಾ ಇದೆ!

ಹೀಗಿರುವಾಗಲೇ, ಇಷ್ಟಕ್ಕೆಲ್ಲಾ ಮೂಲ ಕಾರಣರೆಂದು ಹೇಳಲಾದ ಪಾರ್ಲಿಮೆಂಟಿನಲ್ಲಿ ಕೂಡಾ ಆ ಆರೋಪಕ್ಕೊಳಗಾದ ಸರ್ದಾರ್ ಪಣಿಕ್ಕರರು ಇಂದು ಕನ್ನಡದ ರಾಜಧಾನಿಯಲ್ಲಿ—ಮೈಸೂರಿನಲ್ಲಿ—ವಿಶ್ವವಿದ್ಯಾನಿಲಯ ಪೌಂದರ ಉಪಕುಲಪತಿಗಳಾಗಿ ಉನ್ನತ ಸ್ಥಾನವನ್ನೇರಿ ವಿರಾಜಮಾನರಾಗಿದ್ದಾರೆ!

ಸರ್ದಾರ್ ಪಣಿಕ್ಕರ್ ಕನ್ನಡನಾಡಿನಲ್ಲಿ ಉನ್ನತ ಸ್ಥಾನ ಪಡೆದು ಮೆರೆಯುತ್ತಿದ್ದಾರೆ!

ಕಾಸರಗೋಡಿನ ಕನ್ನಡಜನ ನರಕ ಕೂಪಕ್ಕೆ ಇಳಿಯುತ್ತಾ ಹೋಗುತ್ತಾರೆ!

ಂ ಂ ಂ ಂ

ಪ್ರಾಂತ ವಿಭಜನಾನಂತರ ಇದು ನರೆಗೂ ಕಾಸರಗೋಡಿನ ಕನ್ನಡಿಗರದ್ದು ಯಾವಾಗಲೂ ಬಂದೇ ಗೋಳು! ಕನ್ನಡದ ಪರ್ಯ ಪುಸ್ತಕಗಳಿಲ್ಲ; ಕನ್ನಡ ಅಧ್ಯಾಪಕರಿಲ್ಲ! ಮಲೆಯಾಳೀ ವಿದ್ಯಾರ್ಥಿಗಳಿಗೆ ಸರಕಾರದಲ್ಲಿ ಶಾಲಾರಂಭ ಕಾಲದಲ್ಲಿಯೇ ಎಲ್ಲಾ ಪುಸ್ತಕಗಳೂ ಸಿಗುತ್ತವೆ; ಮಲೆಯಾಳ ಕಲಿಸುವ ಅಧ್ಯಾಪಕರು ಬೇಕೆಂದಷ್ಟು ನೇಮಕವಾಗುತ್ತಾರೆ ಮಲೆಯಾಳೀ ವಿದ್ಯಾರ್ಥಿಗಳು ಪುಸ್ತಕ ದೊರತು ಯೋಗ್ಯ ಅಧ್ಯಾಪಕರಿಂದ ವಿದ್ಯಾಭ್ಯಾಸ ಪಡೆಯುತ್ತಿರುವಾಗ, ಕನ್ನಡ ವಿದ್ಯಾರ್ಥಿಗಳು ಅಧ್ಯಾಪಕರಿಲ್ಲದೆ ಬೀದಿ ಪಾಲಾಗಬೇಕು! ಇದರ ಪರಿಣಾಮವಾಗಿ, ಮುಂದೆ, ಮಲೆಯಾಳಿಗಳು ಬುದ್ಧಿವಂತರಾಗಿ ಐ. ಎ. ಯಸ್. ಡಾಕ್ಟರ್, ಇಂಜಿನಿಯರ್—ಉಪಕುಲಪತಿಗಳೂ ಆಗಿ ನೆರೆವಾಗ ಕನ್ನಡಿಗರು ನಾಪಾಡಿಗಳಾಗಿ ಊರೂರು ಅಲೆಯಬೇಕಾದೀತು!

ಪ್ರತಿ ವರ್ಷವೂ ಕನ್ನಡ ವಿದ್ಯಾರ್ಥಿಗಳಿಗೆ ಮೂರು ನಾಲ್ಕು ತಿಂಗಳ ವರೆಗೆ ಪರ್ಯಪುಸ್ತಕದ ಸುದ್ದಿ ಸುಳಿವೇ ಸಿಗುವುದಿಲ್ಲ; ಅಧ್ಯಾಪಕರು ದೊರಕುವುದು ಅಸಾಧ್ಯವೇ ಆಗಿದೆ; ಆ ಮೇಲೆ, ಊರಿಡೀ ಗೊಂದಲ ಪೆದ್ದ ನಂತರ, ಸಿಧಾನವಾಗಿ ಹಿಂದೆ ಮದ್ರಾಸಿನಲ್ಲಿ ಇದ್ದುದೋ-ಇಂದು ಮೈಸೂರಲ್ಲಿ ಇರುವುದೋ—ಯಾ ಪ್ರದೇಶ ಪುಸ್ತಕವನ್ನು ಪರ್ಯವಾಗಿ ಗೊತ್ತು ಮಾಡಿದ ಆಜ್ಞೆ ಹೊರಡುತ್ತದೆ. ಅಷ್ಟು ವಿಳಂಬವಾದ ಮೇಲೆಯಾಲೆ ಪ್ರಾರಂಭವಾಗಿ ತಿಂಗಳು ಗಟ್ಟಲೆ ದಾಟಿದ ಬಳಿಕ ಅಲ್ಲಿಯೂದರೂ ಹಾಗೆ ಗೊತ್ತು ಮಾಡಿದ ಆ ಪುಸ್ತಕಗಳ ನಾಕಷ್ಟು ಪ್ರತಿಗಳು ದೊರಕುವುದು ದುರ್ಲಭವೇ; ಅಧ್ಯಾಪಕರಂತೂ ಎಂತೂ ಸಿಗುವುದೇ ಇಲ್ಲವಷ್ಟೆ! ನೆರೆಯ ಮೈಸೂರಲ್ಲಿ ಅಧ್ಯಾಪಕರ ಸಂಬಳ ಆಕರ್ಷಣೀಯವಿದ್ದು, ಕೇರಳದಲ್ಲಿ ಹಿಂದೆ ಮದ್ರಾಸಿನಲ್ಲಿದ್ದುದಕ್ಕಿಂತಲೂ ಕಡಿಮೆ ಸಂಬಳ ಕೊಡುತ್ತಿರುವುದರಿಂದ ಯಾವ ಹೆಡ್ಡ ನಾದರೂ ಇಲ್ಲಿಗೆ ಅಧ್ಯಾಪಕನಾಗಿ ಬರುವುದು ಅಸಂಭವವಾಗಿದೆ. ಬಡಲು, ಇಲ್ಲಿ ಉದ್ಯೋಗದಲ್ಲಿದ್ದ ಅಧ್ಯಾಪಕರು ಕೂಡಾ ಒಬ್ಬೊಬ್ಬರೇ ರಾಜೀನಾಮೆಯಿತ್ತು ಮೈಸೂರಲ್ಲಿ ಕೆಲಸಕ್ಕೆ ಸೇರುತ್ತಿದ್ದಾರೆ. ಪರಿಸ್ಥಿತಿ ಹೀಗಿದ್ದರೂ—ಡೆಪ್ಯುಟೇಶನ್ ಆಥವಾ ಫೋರಿನ್ ಸರ್ವೀಸ್ ವ್ಯವಸ್ಥೆ ಮೂಡಿ ಮೈಸೂರಿಂದ ಮನಸಿದ್ದರೆ ಇಲ್ಲಿಗೆ ಅಧ್ಯಾಪಕರನ್ನು ತರಲು ಸಾಧ್ಯವಿದ್ದಾರೂ, ಇದುವರೆಗೆ ಸರಕಾರ ಈ ವ್ಯವಸ್ಥೆ ಮಾಡಿಸ್ಸಿ; ಮಾಡುವಂತೆ ತೋರುವುದೂ ಇಲ್ಲ ಇಲ್ಲಿ ಕನ್ನಡವನ್ನು ಉಳಿಸಬೇಕೆಂಬ ಆರಯ ಸರಕಾರಕ್ಕೆ ಇದ್ದಂತೆ ತೋರುವ ಯಾವ ಸ್ಪಷ್ಟ ಸೂಚನೆಯೂ ನಮಗೆ ಕಾಣುವುದಿಲ್ಲ. ಹಾಗಾಗಿ ಕನ್ನಡನಾಡಿನಲ್ಲಿ ಕ್ರಮವಂತೆ ಸಾಯುತ್ತಾ ಬರುತ್ತಿದೆ!

ಕನ್ನಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಕೊಡಿಸಲು ಯೋಗ್ಯರಾದ ಕನ್ನಡ ಅಧ್ಯಾಪಕರ ವ್ಯವಸ್ಥೆ ಏನೂ ಮೂಡದೆ; ಆಸ್ಥಾನಕ್ಕೆ ಮಲೆಯಾಳ ಮಾತ್ರ ಬಲ್ಲವರು ಬಂದು ಖಾರವೂಡುವ ವಿಚಾರಣೆ ನಡೆದಿದೆ. ಇದರಿಂದ ಕನ್ನಡ ವಿದ್ಯಾರ್ಥಿಗಳಿಗೆ ಏನೂ ಪ್ರಯೋಜನ ಆಗದಿದ್ದರೂ, ಕೆಲವು ಮಲೆಯಾಳೀ ಅಧ್ಯಾಪಕರಿಗೆ ಉದ್ಯೋಗ ದೊರಕಿಸಿದ ಪುಣ್ಯ ಸರಕಾರಕ್ಕೆ ಸಿಗುತ್ತದೆ. ಆಂತಹ ಕೆಲವರು ಅಧ್ಯಾಪಕರು, ಶಾಲೆ ಬಿಟ್ಟು ಮನೆಗೆ ಊರ್ವರಿವ ಕನ್ನಡ ಮತ್ತು ಮಲೆಯಾಳ ಉಭಯ ಭಾಷೆಗಳನ್ನು ಬಲ್ಲವರಿಂದ ಕನ್ನಡ ಅಕ್ಷರವನ್ನು ಹಾಗೂ ಭಾಷೆಯನ್ನು ಮಲೆಯಾಳ ಅಕ್ಷರ ಹಾಗೂ ಭಾಷೆಯ ಮೂಲಕ ಕಲಿತು, ಅವರು ಕಲಿತುದನ್ನು ಆಗಲೇ ಶಾಲೆಗೆ ಬಂದು ವಿದ್ಯಾರ್ಥಿಗಳಿಗೆ ಕನ್ನಡ ಸೀಳಿ ಕೊಡುತ್ತಾರೆ. ಆ ಮೇಲೆ ಮಲೆಯಾಳಿಗಳ ಕನ್ನಡ ಉಚ್ಚಾರವಂತೂ ಅಸಹ್ಯಕರವಾಗಿರುವುದು ಇವರಿಂದ ಕನ್ನಡ ನಾಡಿಯ ಕಗ್ಗೊಲೆಯೇ ನಡೆಯುತ್ತದೆ.

ಒಂದು ಉದಾಹರಣೆ ಇಲ್ಲಿ ಕೊಡಬಹುದು. "ವಿದ್ಯಾರ್ಥಿಗಳು ಮತ್ಸರಿಸದೇ ಕು" ಎಂಬ ಮಾತಿಗೆ ಮಲೆಯಾಳದಲ್ಲಿ ಸ್ಪರ್ಧಿಸುವುದು ಎಂಬರ್ಥವಾದರೆ ನವ್ಮಲ್ಲಿ ಹೊಟ್ಟೆಕಿಚ್ಚು ಪಡುವುದೆಂದಾಗುವುದು. ಮಲೆಯಾಳದಲ್ಲಿ ಈ ಪೊರು ಸಾಹಸ ಪ್ರೇರಕ ಸದ್ಭೋಧನೆಯೊದರೆ, ಕನ್ನಡದಲ್ಲಿ ದುರ್ಬುದ್ಧಿಯನ್ನು ಪ್ರಜೋದಿಸುವ ದುರ್ಬೋಧನೆಯೊಗುವುದು. ಇಂತಹುದೇ ಭಾಷೆಯನ್ನು ಇಂದು ಕನ್ನಡ ವಿದ್ಯಾರ್ಥಿಗಳಿಗೆ ಇಲ್ಲಿ ಕಲಿಸಲಾಗುತ್ತಿದೆ. ಸರಕಾರ ಪ್ರಕಟಿಸಿದ ಪೈಕ್ಯುಲು ತರಗತಿಯ ಕನ್ನಡ ಸಾಮಾಜಿಕ ಅಧ್ಯಯನ ಪುಸ್ತಕ ಪೊಂದರಲ್ಲಿ ನೆೇರೇಡಿಯನ್ ಅಥವಾ ಲಾಜಿಟ್ಯೂಡ್ ಎಂಬ ಮಧ್ಯಾಹ್ನ ರೇಖೆಗೆ ಉಚ್ಚೆ ರೇಖೆಯೆಂದು ಭಾಷಾಂತರವಿದೆ; ಮಲೆಯಾಳ ಭಾಷೆಯಲ್ಲಿ ಉಚ್ಚೆ ಎಂ

With Best Wishes
from
SRINIVAS BROTHERS
Distributors for Mysore State for
Seshasayee Paper & Boards Ltd.,
Pallipalayam
CAR STREET MANGALORE 1.
Phone: 449 Grams: ACTIVE.

ದರೆ ಮಧ್ಯಾಹ್ನ; ಇದು ಕನ್ನಡದಲ್ಲಿಲ್ಲ. ಮೂರ್ತವಲ್ಲ ಕನ್ನಡದ ಉಚ್ಚು ಎಂಬ ಗ್ರಾಮ್ಯ ಶಬ್ದ ಅವಾರ್ಥವನ್ನು ಕೂಡಾ ಕೊಡುತ್ತದೆ. ಇಂತಹ ಪ್ರಯೋಗಗಳಿಂದ ಕನ್ನಡ ಬದುಕೀತೇ? ಸತ್ತೀತೇಎಂದು ವಿಚಾರವಂತರು ಚಿನ್ನಾಗಿ ವಿಚೇಚಿಸಬೇಕಾಗಿರುವುದು.

ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಗಿ ಸರಕಾರ ಗೊತ್ತು ಮಾಡಿದ ಐದನೇಯ ತರಗತಿಯ ವಿಜ್ಞಾನ ಪುಸ್ತಕವೊಂದರಲ್ಲಿ ಈ ಕೆಳಗಿನ ವಿಚಿತ್ರ ಭಾಷೆಯಿದೆ:

"ಸೆಗಲು ಮೊತ್ತಿನಲ್ಲಿ ಕಣ್ಣಿನ ಮ್ಯೂಸಿಲ್ ಒಳ್ಗೆ ಒಂದು ಸಪೂರವಾದ ಸ್ಲಿಟ್ ಆಗಿದೆ, ಕನ್ನಡಿಯು ಮುಂಬರಿದಂತೆ ಆ ಮ್ಯೂಸಿಲ್ ಮೂಲಕ ಸ್ಲಿಟ್ ಉರುಟಾಗುವುದು....ಗವಸಿಯು ಹಿಂಭಾಗದಲ್ಲಿರುವ ಗ್ಲಾಸ್ಯಾಂಡಿಂಗ್ ಟೇತ್‌ಗಳಿಗೆ ಹರಿತವಾದ ಮೊನಚಾದ ಬದಿಗಳಿವೆ ಕೋಟಿನ್, ಕೋಟಿನ್ ಸಿಲ್ಕ್ ಸಸ್ಯಗಳನ್ನು ನೀವು ಕಂಡಿರಬಹುದು. ಕೋಟಿನ್ ಬೀಜಕ್ಕೆ ತಗಲಿಕೊಂಡಿರುವ ನಾರು ಸಾಕಷ್ಟು ಉದ್ದವಾಗಿರುವುದರಿಂದ ಅದನ್ನು ಬಟ್ಟೆ ಮಾಡುವುದಕ್ಕೆ ಉಪಯೋಗಿಸುತ್ತಾರೆ"—ಸ್ಲಾ ಪುಡುಗರಿಗೆ ಪಕ್ಷಿಯೆಬ ಸಾಮಾನ್ಯ ಶಬ್ದವನ್ನು ಕೋಟಿನ್ ಎಂದೇ ಮರಳಿ ಮರಳಿ ಬರೆಯುವುದೂ, ಸ್ಲಿಟ್, ಮ್ಯೂಸಿಲ್, ಗ್ಲ್ಯಾಂಡಿಂಗ್ ಟೀತ್ ಇತ್ಯಾದಿ ಇಂಗ್ಲಿಷ್ ಶಬ್ದಗಳನ್ನೇ ಕೊಡುವುದೂ ಇವಲ್ಲಾ ವಿಷ ಪ್ರಯೋಗ ಕನ್ನಡವನ್ನು ಸಾಯಿಸುವುದಕ್ಕಲ್ಲದೆ ಬೇರೇನ?

ಕನ್ನಡ ಭಾಷೆಯಲ್ಲಿ ಅಡಿಗ, ಅಡಿಗಳು ಎಂಬ ಶಬ್ದ ಸುಪ್ರಸಿದ್ಧವಾದುದು; ಅಡಿಗ—ಎಂಬ ಖ್ಯಾತ ಕವಿಗಳು ಒಬ್ಬರಿದ್ದಾರೆ; ಖ್ಯಾತ ವಕೀಲರೂ ಇದ್ದಾರೆ; ದೇವರನ್ನು ಹೊರುವ ರೇಗುಲದ ಅರ್ಚಕರನ್ನು ಅಡಿಗಳು ಎಂಬ ದೇ ಎಲ್ಲರಿಗೂ ಗೊತ್ತು; ಆ ಶಬ್ದವನ್ನ 'ಅಡಿಗಳು' ಎಂದು ಬರೆದಿಟ್ಟರೆ ಯಾವ ಅರ್ಥವಿಲ್ಲಿ ಬರೆಯಬೇಕೋ ಭಗವಂತನೇ!. ಇಂತಹ ಗೌಂವಕರ ಶ್ಲಘನನ್ನು ಹಾಸ್ಯಾಸ್ಪದ, ಅಪಮಾನಕರ, ಅಸಂಬದ್ಧ ರೀತಿಯಲ್ಲಿ ಪ್ರಯೋಗಿಸಿ ಪ್ರಕಟಿಸಿದ್ದು ಕೇರಳ ಕನ್ನಡ ಪಾಠಮಾಲೆಯಲ್ಲಿ! ಇದಕ್ಕೆ 'ಕೇರಳ ಕನ್ನಡ' ವೆಂಬ ಹೆಸರೇನೋ ಅನ್ವರ್ಥವಾದೀತು; 'ಕಾದ್ರೋಳಿ ಹಿಂದುಸ್ಥಾನಿ' ಎಂದು ಹೇಳುವಂತೆ! ಆದರೆ ಇದು ನಿಜವಾದ ಕನ್ನಡವಲ್ಲವೇ ಅಲ್ಲ! ನನ್ನ ಕನ್ನಡ ವಿದ್ಯಾರ್ಥಿಗಳು ಈ ಪಾಠಗಳಿಂದ ಮೂಲಕ ಕನ್ನಡ ಭಾಷೆ ಕಲಿಯಬಲ್ಲರೆ? ಅಯ್ಯಸ್ಸು ಕಳಿಯಬಲ್ಲರೆ?

ಕಾಸರಗೋಡಿನ ಕನ್ನಡ ಅಧ್ಯಾಪಕರು ತಾಗೂ ವಿದ್ಯಾರ್ಥಿಗಳು, ಈ ಭಾಗ ಹಿಂದಿ ದಕ್ಷಿಣ ಕನ್ನಡದಲ್ಲದ್ದಾಗ, ಶ್ರೀಗಳವನ ಪಂಜೆ, ಕಾಮತ್ ಮುಕುಂದರಾವ್, ಕಾರಂತರಂತಹವರಿಂದ ಬರೆಯಲ್ಪಟ್ಟ, ಮಂಗಳೂರಿನ ಬಾನೆಲ್ ಮಿರರ್, ಶಾರದಾ ಪ್ರೆಸ್‌ಗಳಂತಹ ಪ್ರಸಿದ್ಧ ಆಚ್ಚು ಕೂಟಗಳಲ್ಲಿ ದ್ವಿವರ್ಣ, ತ್ರಿವರ್ಣ, ಸೈಸರ್ಗಿಕ ವರ್ಣಗಳಿಂದ ರಂಜಿತವಾದ ಚಿತ್ರಗಳಿಂದಲೂ, ತರಗತಿಗಳಿಗೆ ಅನುಗುಣವಾದ ಅಕಾರದ ಲಿಪಿಗಳಿಂದಲೂ ಕೂಡಾ ಮುದ್ರಣಗೊಂಡ ಸತ್ಯ ಪುಸ್ತಕಗಳನ್ನು ಕಲಿಸಿ ಬಿಟ್ಟಿ ಪಳಗಿಸವರ; ಇಂದು ಈ ತೆರನ ಕೇರಳ ಕನ್ನಡ ಪಾಠಮಾಲೆಗಳನ್ನು ಕಲಿಸುವ ಓದುವ ಪೌರ್ಭಾಗ್ಯ ಪದೆದುದು ದುರದೃಷ್ಟವೇ ಸರಿ; ಪಾಲನ್ನ ಉಂಡು ಅಭ್ಯಾಸವಾದ ಗಂಟಲಿಗೆ ತಂಗಳನ್ನವನ್ನುಂದು ತುರುಕಿದಂತೆ ಆಗಿದೆ! ಈ ಕೇರಳ ಕನ್ನಡ ಪಾಠಮಾಲೆಯಲ್ಲಿ ಒಂದೇ ಒಂದು ವರ್ಣರಂಜಿತ ಚಿತ್ರವಾಗಲಿ, ತರಗತಿಗನುಸಾರವಾದ ಲಿಪಿಯ ಆಯ್ಕೆಯಾಗಲಿ ಇಲ್ಲ; ಆಟ್ಟಿನ ಆನಸ್ಸೆಯೇ ಪೇಳತೀರದು! ಹಸಿ ಮಣ್ಣಿನ ಗೋಡೆಗೆ ಸೆಗಣಿನೀರಲ್ಲಿ ಶಬರಿಕೆಯನ್ನು ಅದ್ದಿ ಹೊಡೆದಂತೆ ಇದೆ! ಕೆಲ ಪುಸ್ತಕಗಳಲ್ಲಿನ ಶೈತ್ಯೇಕ ಅಕ್ಷರವಾಗಲಿ, ಶಬ್ದವಾಗಲಿ ಓದಲು ಸಾಧ್ಯವಿಲ್ಲದಷ್ಟು ಚಿಪ್ಪಿಪ್ಪವಿದೆ! ನನ್ನ ಒಬ್ಬ ಹುಡುಗ—ಹೊಸ ಪುಸ್ತಕ ಬೇಕೆಂದು ಹರ ಹಿಡಿದವನು, ಈ ಹೊಸ ಪುಸ್ತಕವನ್ನು ನೋಡಿ ಅಳತೊಡಗಿದ! ಸರ್ವಥಾ ಇದು ಹೊಸ ಪುಸ್ತಕವೇ ಅಲ್ಲವೆಂದು ಮರಳಿಯೂ ಅತನ ಹರ! ಏಕೆಂದರೆ ಅವನ ವಶ ಇದ್ದ ನವೋದಯ ಪಾಠಮಾಲೆ ಮತ್ತು ನೈಸೂರು ಸರಕಾರ ಪ್ರಕಟಿಸಿದ ಪಾಠಮಾಲೆ ಕೂಡಾ ಇದಕ್ಕಿಂತ ಎಷ್ಟೋ ಆಕರ್ಷಣೀಯವೂ ನವೀನವೂ ಆಗಿತ್ತು! ಪಾಗಾಗಿ ಈಗಿನ ಈ ಹೊಸ ಪುಸ್ತಕವನ್ನು ಅತನ ಹೊಸ ಪಠ್ಯವೆಂದು ನಂಬಿಸುವುದು ಇನ್ನೂ ನನಗೆ ಕಷ್ಟಕರವೇ ಆಗಿದ!

ಈ ಪಾಠಮಾಲೆಯ ಸ್ಯೂಫನ್ನು ತಿದ್ದಿದಂತೆಯೇ ತೋರುವುದಿಲ್ಲ. ಹಳೆಗನ್ನಡ ಹಸ್ತಪ್ರತಿಗಳಂತೂ ಪ್ರತಿಪದ್ಯದಲ್ಲಿ ಎಂಬಂತೆ ಹತ್ತಿಪ್ಪತ್ತರಂತೆ ತಪ್ಪುಗಳಿವೆ. ಮೂಲ ಪುಸ್ತಕ ನೋಡದೆ ಪಾಠವೊದವುದು ಅಸಾಧ್ಯವಾಗಿದೆ. ಪೌರ್ಭಾಗ್ಯಕ್ಕೆ ಈಗ ಹೆಲವು ಪಠಗಳನ್ನಡ ಪುಸ್ತಕಗಳು ದೊರಕುವುದೂಂಟಲ್ಲ. 'ಐಸ್ಯಗಾನ', ಎಂಬುದು 'ಪಿತ್ರಾಗ ನ, ಆಗಿದೆ. 'ಕಳಿದ, ಎಂಬುದು 'ಕಳುದ, ಎಂದೂ, ಬಳಿಕ ಎಂಬುದು 'ಬಳುಕ, ಎಂದೂ ಇಂತಹ ಸಾವಿರಾರು ಪ್ರಮಾದಗಳವೆ; ಇವೆಲ್ಲಿಂದು ನಿರ್ಲಕ್ಷಿತ ಯಿಂದ ಕೇರಳ ಸರಕಾರ ಈ ಪಾಠ ಪುಸ್ತಕಗಳನ್ನು ತಯಾರುಮಾಡಿ ಕಾಸರಗೋಡಿನ ಕನ್ನಡ ವಿದ್ಯಾರ್ಥಿಗಳಿಗೆ ಉಪಕಾರ ಮಾಡುತ್ತಿದೆಯೇ? ಅಪಕಾರ ಮಾಡುತ್ತಿದೆಯೇ—ನನ್ನ ಕನ್ನಡ ಇದರಿಂದ ಉಳಿಯುತ್ತದೆಯೇ — ಅಳಿಯುತ್ತದೆಯೇ ಎಂದು ವಿಚಾರವಂತರು ಯೋಚಿಸಬೇಕಾಗಿದೆ; ಯೋಚಿಸಿ ಪರಿಹಾರ ಇದ್ದರೆ ಕಂಡು ಹುಡುಕತಕ್ಕದಿದೆ.

೦ ೦ ೦ ೦

ಕಾಸರಗೋಡಿನಲ್ಲಿ ಖ್ಯಾತ ಲೇಖಕರು ಪಠ್ಯ ಪುಸ್ತಕಗಳನ್ನು ಸಂಪಾದಿಸಲು ಸಮರ್ಥರಾದವರು ಇನ್ನೂ ಅನೇಕರಿದ್ದಾರೆ; ಇಂತಹ ವಿಷಯಗಳಲ್ಲಿ ಯಶಸ್ಸು ಗಳಿಸಿದವರೂ ಇರುವರು. ಹೀಗಿದ್ದರೂ ಕೇರಳ ಸರಕಾರ ಈ ವಿಚಾರವನ್ನು ಲಕ್ಷಿಸದೆ ಈ ಪಠ್ಯ ಪುಸ್ತಕಗಳನ್ನು ಹೊರಗಿನವರಿಂದ ಬರೆಸಿ ತಯಾರಿಸಿದೆ. ಈ ಪುಸ್ತಕಗಳನ್ನು ತಯಾರು ಮಾಡಿದವರ ಕುರಿತು ನಾವು ಸರ್ವಥಾ ದೂರುವುದಿಲ್ಲ. ಏಕೆಂದರೆ ಅವರಿಗಿತ್ತ ಅವಧಿಯಲ್ಲಿ ಅವರ ವಾತಾವರಣದಲ್ಲಿ ಅವರಿಗಿರುವ ಅವಕಾಶದಲ್ಲಿ ಇದಕ್ಕಿಂತ ಉತ್ತಮವಾಗಿ ತಯಾರು ಮಾಡುವುದು ಸಾಧ್ಯವೂ ಇರಲಿಲ್ಲ. ಆದರೆ ಸರಕಾರ ಮಾತ್ರ ಇಂತಹ ಜವಾಬ್ದಾರೀ ಕೆಲಸವನ್ನು ಇಷ್ಟು ಜೇವಾಬ್ದಾರಿಯಿಂದ ಬಂತೆ ಶಿವಹಿಸಬಾರದಿತ್ತು! ಉದಾಹರಣೆಗೆ—ಎಂಟನೇ ತರಗತಿಯ ಗಣಿತ ಪುಸ್ತಕದಲ್ಲ 'ಜೂನ್ ಮೂಹತ್ತೊಂಬತ್ತೈ' ಎಂಬ ವಾಕ್ಯವಿದೆ; ಜೂನ್ ತಿಂಗಳಲ್ಲಿ ಮೂವತ್ತೊಂಬ ದಿನ ಪ್ರಪಂಚದಲ್ಲಿ

(ಬಾಕೀ ಪುಟ ನೋಡಿರಿ)

ಉಡುಪಿ ಸಬ್‌ಕೋರ್ಟಿನಲ್ಲಿ
ಜಪ್ತಿಯ ಕೋರ್ಟಿನಲ್ಲಿ
O. S. No 115/1960
R. L. P No 14/1963

ಪಿ ಕೆಂದಾ ಪಾಸ್ಕ್ರೆಯಲ್ ಎಂಡ್ ಮಾಲೀಕರ್ ಬಿ ಕೆಳ್ಳೂರಿ, ಉಡುಪಿ
—ಅರ್ಜಿದಾರರು.

ಪರ್ಸ್ಸು

1ನೇ ಏಡ್ರಿ ನಾಸಿರೆನಬ್ಯಡಿಕಾರಿ-ಅಧಿಕಾರಿ ರಾಮಚಂದ್ರಪ್ಪನವರ ಮಗ—ಉದ್ದಿ ತಾಲೂಕು ಸುಬ್ರಿ ಗ್ರಾಮ.—

ಸದರಿ 1ನೇ ಎದ್ರಿಗೆ ಸ್ವತಂತ್ರ ಪ್ರಜ್ಞೆಯ ರ್ 2000 ರೂಪಾಯಿ ವರೆಗಿನ ಎದ್ರಿ ರಕ್ಷಣೆಯನ್ನು ಸಿಜಾ-ಅವರಿಗೆ ಮೇರೆ ಪೇಳಿಕೊಂಡಾದ ವ್ಯಾಜ್ಯದಲ್ಲಿ ಡಿಕ್ರಿಪೊಂದಿದವನಾದ ಅರ್ಜಿದಾರನು ಪ್ರಿಲಿಮಿನೆರಿ ಡಿಕ್ರಿಯಿಂದ ಕಾಣುವ ಸ್ಥಿರಾಸ್ತಿಗಳ ವಿಕ್ರಯವ ಯಿಸ್ಪಿಹಾರನ ಶರತ್ತುಗಳನ್ನು ನಿರ್ಣಯಿಸಲಿಕ್ಕೆ 1963ನೇ ಇಸ್ವಿ ಆಗೋಸ್ತು ತಿಂಗಳ 26ನೇ ತಾರೀಕು ಬೆಳಗ್ಗೆ ಸೂದಾನಿಯವೆಜಂತ ನಿಮಗೆ ಇದರೊಂದಿಗೆ ತಿಳಿಸೋಣವಾಗುತ್ತದೆ.

(By order of the Court)
M. Damodar Kamath,
Advocate for Petitioner
ಉಡುಪಿ, 2—8—1963

INDEPENDENCE DAY PLEDGE

ON THE SIXTEENTH YEAR OF
OUR COUNTRY'S INDEPENDENCE
LET US
PLEDGE AND REDEDICATE OURSELVES
FOR COUNTRY'S CAUSE.
NO SACRIFICE IS TOO GREAT FOR
PRESERVING THE HARD WON FREEDOM.
LET US ALL UNITE
AND
PRAY THAT THE COUNTRY WILL BE
SOON RID OFF THE THREAT OF
CHINESE AGRESSION.

WITH HOPE AND CONFIDENCE IN FUTURE
WE ASSURE YOU TO SERVE YOU BETTER.

CHANDARANA BROTHERS

WHOLESALE DEPARTMENT — RETAIL DEPARTMENT
MISSION STREET — HAMPANKATTA
MANGALORE.

ನಮ್ಮ ಯೋಜನೆ ಮತ್ತು ಸಾಧನೆ

ನಮ್ಮ ಅಧಿಕೃತ ಪುನಾರಚನೆಯ ಯೋಜನೆಗಳು ಒಂದರ ಹಿಂದೊಂದೆಂಬಂತೆ ನಡೆಯುತ್ತಲಿವೆ. ಇವುಗಳ ಹಿನ್ನೆಲೆಯಲ್ಲಿ ಆತ್ಮಪೋಷಣ ಸಾಧನೆಯೂ ಗಮನೀಯ ಬೇಕಿತ್ತು; ಆದರೆ, ಇವು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ; ಎಂತಲೇ ಸಾಧನೆಯ ಫಲ ಸಾಮಾನ್ಯ ಜನತೆಗೆ ಲಭಿಸಿಲ್ಲ. ಆದುದರಿಂದ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಏನಾದರೂ ತಪ್ಪುದೆಯೇ ಎಂದು ಪರಿಶೀಲಿಸಬೇಡವೆ?

ಲೇಖಕರು: ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮ, ಸಿರಸಿ

ವ್ಯಕ್ತಿ ಜೀವನದಲ್ಲೇ ಆಗಲಿ, ರಾಷ್ಟ್ರ ಜೀವನದಲ್ಲೇ ಆಗಲಿ, ಯೋಜನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಹೆಚ್ಚಿನ ಶಕ್ತಿ ಇದೆ. ಸರಿಯಾದ ಯೋಜನೆಗಳಿಂದ ಪ್ರಗತಿಯು ಮೆಟ್ಟಿಲುಗಳು ಸುಗಮವಾಗಿ ನಿರ್ಮಾಣವಾಗುತ್ತವೆಂಬುದನ್ನು ತಿಳಿಯಬೇಕು. ದೇಶದ, ವ್ಯಕ್ತಿಯ ಭವಿಷ್ಯತ್ತು ರೂಪಿಸುವಲ್ಲಿ ಯೋಜನೆಗಳು ದಾರಿ ದೀಪಗಳಂತೆ ಮಾರ್ಗದರ್ಶನ ಮಾಡುತ್ತವೆಂಬುದನ್ನು ಯಾರೂ ಅಲ್ಲಗಳೆಯಲಾರರು.

ದೇಶದ ಪ್ರಗತಿಯ ಹಿನ್ನೆಲೆಯಲ್ಲಿ, ಇತಿಹಾಸಗಳನ್ನು ಅವಲೋಕಿಸಿದರೆ ಸುಸಂಬದ್ಧವಾದ ಯೋಜನೆಗಳ ಅವಲಂಬನದಿಂದಲೇ ಅವು ಮುಂದುವರಿದ ದಾಖಲೆ ಕಂಡು ಬರುತ್ತದೆ. ಹೀಗಾಗಿ ದೇಶದ ಸಂಪತ್ಸಮೃದ್ಧಿಯ ಸಾಧನೆಯಲ್ಲಿ ಯೋಜನೆಯ ಪಾತ್ರ ಅತ್ಯಂತ ಹಿರಿದಾದುದು. ಸ್ಥೂಲವಾಗಿಯೂ— ಸವಗ್ರಹವಾಗಿಯೂ ಈ ಯೋಜನೆಗಳನ್ನು ನಿರ್ಮಿಸುವ ಯೋಜನಾ ಶಿಲ್ಪಿಗಳ ಕೌಶಲದ ಮೇಲೆಯೇ ದೇಶದ ಮೌಲ್ಯ ಬೆಳೆಯುತ್ತದೆ. ಅದರ ಸಾಧನೆಯಲ್ಲಿ ನಮ್ಮ ಸಂಪತ್ತು ಅಡಗಿರುತ್ತದೆ.

ಈ ದಿಸೆಯಲ್ಲಿ ನಮ್ಮ ಯೋಜನೆಗಳು, ಸಾಧನೆಗಳು ಎಂತಹವು ಎಂಬುದನ್ನು ವಿಚಾರಿಸಬೇಕು. ನಾವೀಗ ಎರಡು ಪಂಚವಾರ್ಷಿಕ ಯೋಜನೆಗಳನ್ನು ಕಳೆದು ಮೂರನೆಯ ಯೋಜನೆಯಲ್ಲಿದ್ದೇವೆ. ಈ ಅವಧಿಯಲ್ಲಿ ಯೋಜನೆಯ ಅನುಭವ ನಮಗೆ ಸಾಕಷ್ಟು ಆಗಿದೆ. ಯಾಕಾಗಿ ಈ ಯೋಜನೆಯ ಸಾಧನೆಯಲ್ಲಿ ಬರುವಂಥ ಅಡೆ-ತಡೆಗಳನ್ನು– ಲೋಪದೋಷಗಳನ್ನು ತಿದ್ದುವ, ಸುಧಾರಿಸುವ ಪ್ರಯತ್ನ ನಡೆಸಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿರುವ ದೇಶದ ಸ್ಥಿತಿಯನ್ನೂ– ಸ್ವಾತಂತ್ರ್ಯೋತ್ತರದ ಗತಿಯನ್ನೂ—ಗಮನಿಸಿದಾಗ ಹೆಲವು ಮಟ್ಟಿಗೆ ದೇಶದ ಪ್ರಗತಿ ಕಂಡು ಬರುತ್ತಿದ್ದರೂ ಯೋಜನೆಯು ಲಾಭ ಸರಿಯಾಗಿ ನಿರೀಕ್ಷೆ ಮಾಡಿದಷ್ಟು ಜನಸಾಮಾನ್ಯರ ವರೆಗೂ ತಲುಪದಿದ್ದದ್ದು ಗಮನಿಸಬೇಕಾದ ಮುಖ್ಯ ಸಂಗತಿಯಾಗಿದೆ ವ್ಯಹಿದ್ರೂಪದಲ್ಲಿ ನಮ್ಮ ನಾಡನ್ನು ಮುನ್ನಡಿಯಿಡಿಸುವುದಕ್ಕೆ ಯೋಜನೆಗಳು ಸಿದ್ಧವಾಗುತ್ತಿದ್ದರೂ ನಮ್ಮ ಸಾಧನೆಯಲ್ಲಿಯು ಕೆಲವೊಂದು ದೋಷಗಳ ಕಾರಣದಿಂದಾಗಿ ಅವು ಫಲಕಾರಿಯಾಗುತ್ತಿಲ್ಲವೆಂದೇ ಹೇಳಬೇಕಾಗಿದೆ.

ಹಾಗಾಗಿ ಈ ಲೋಪ-ದೋಷಗಳೆಲ್ಲಿವೆ? ಅವು ಎಲ್ಲಿ ಹುಟ್ಟಿಕೊಳ್ಳುತ್ತವೆ? ಹೇಗೆ ಬೆಳೆಯುತ್ತವೆ? ಇತ್ಯಾದಿ ಅವನ್ನು ಪರಿಪಡಿಸುವುದಕ್ಕೆ ಬೇಕಾದ ವಿಧಾನಗಳನ್ನು ಕಂಡು ಹಿಡಿಯುವುದು ಇಂದು ಅತ್ಯಾವಶ್ಯಕವಾಗಿದೆ. ರೋಗಿಯೊಬ್ಬನಿಗೆ ಔಷಧೋಪಚಾರ ನಡೆಯುವಾಗ ಅವನ ರೋಗದ ನಿಧಾನಗಳನ್ನು ತಿಳಿದುಕೊಂಡು ತಜ್ಞ ವೈದ್ಯರು ಅದಕ್ಕೆ ಬೇಕಾದ ಔಷಧೋಪಚಾರಗಳಿಂದ ನಿವಾರಿಸುವ ಹಾಗೆಯೇ ನಮ್ಮ ಯೋಜನೆಯ ಸಾಧನಾತಂತ್ರದಲ್ಲಿರುವ ಸೂಕ್ಷ್ಮ ಪ್ರತಿಕೂಲ ವಿಚಾರಗಳನ್ನು ತಿಳಿಯದಿದ್ದರೆ ನಿರೀಕ್ಷಿಸಿದಷ್ಟು ಯೋಜನೆಯು ಲಾಭ ದೇಶಕ್ಕಾಗುವ ದಿಲ್ಲ. ಇಷ್ಟೇ ಅಲ್ಲದೇ ನಮ್ಮ ಪ್ರತೀಕ್ಷೆಯು-ನಿರೀಕ್ಷೆಯ ವಿರುದ್ಧ ಪರಿಣಾಮಗಳೂ ಆಗಲು ಸಾಧ್ಯವಾಗಬಹುದು.

ದುರ್ಬಲ ವ್ಯಕ್ತಿಗಳನ್ನು ಸಬಲಗೊಳಿಸಬೇಕಾದರೆ ಅವನಿಗೆ ಅವಶ್ಯ ವಿರುವಂಥ ಪೌಷ್ಟಿಕ ರಸಪಾಕಗಳನ್ನು ಕೊಡಬೇಕಾಗುತ್ತದೆ. ಆ ರಸಪಾಕಗಳನ್ನು ತಯಾರಿಸುವದು ಅತಿ ಮಹತ್ವದ್ದು. ಅದರ ಪಾಕ ವಿಧಾನಗಳನ್ನು ತಿಳಿದವರೇ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪಾಕವು ಹದಗೆಟ್ಟು ಅದನ್ನೆ ಸೇವಿಸಿದ ವ್ಯಕ್ತಿಯ ಆರೋಗ್ಯವನ್ನು ಹದಗೆಡಿಸುವದು.

ಹಾಗೆಯೇ ಇಂದು ದೇಶವನ್ನು ಬಲಗೊಳಿಸುವುದಕ್ಕೂ ಯೋಜನೆಯು ರಸಪಾಕಗಳನ್ನು ಕೊಡುತ್ತಿದ್ದೇನೆ. ಆದರೂ ದೇಶದ ಅಭಿವೃದ್ಧಿ ಸುಗಮವಾಗುತ್ತಿಲ್ಲವೆಂದಾಗ ಈ ರಸಪಾಕ ತಯಾರಿಕೆಯಲ್ಲೋ —ಅಥವಾ ಅದರ ಉಪಯೋಗದಲ್ಲೋ ವ್ಯತ್ಯಾಸವಾಗಿರಬೇಕೆಂದೆನಿಸುತ್ತದೆ. ಯೋಜನೆಯ ಭಟ್ಟಿಯಲ್ಲಿ ರಸಗೆಟ್ಟು ಹೋಗುತ್ತದೆಯೆಂಬುದು ಸುಸ್ಪಷ್ಟವಾದಂತಾಗಿದೆ.

ಹಾಗಾಗಿ ಯಾವ-ಯಾವ ಹಂತಗಳಲ್ಲಿ ಜನತೆಯ ಜೀವನ ಮಟ್ಟವನ್ನು ಎತ್ತರಿಸಬೇಕೆಂಬ ಆಶೆಯೆಯಿದ್ದಿತೋ ಅದು ಸಾಧ್ಯವಾಗದೇ ಉಳಿದಿದೆ. ಕೇವಲ ಕೆಲವೊಂದು ವರ್ಗಗಳಲ್ಲಿ ಅತಿಶಯ ಇದರ ಲಾಭ ದೊರಕಿದ್ದೂ ಇದೆ. ಹಾಗಾಗಿ ಈ ರೀತಿ ಅಪಯಶಸ್ಸಿಗೆ ಗುರಿಯಾದ ಯೋಜನೆಗಳನ್ನೇ ತಿರಸ್ಕರಿಸಬೇಕೆಂದು ಕೆಲವರು ಹೇಳುತ್ತಿದ್ದಾರೆ. ಇದರಿಂದ ನಮ್ಮ ರಾಷ್ಟ್ರಕ್ಕೆ ಅಪಾರ ನಷ್ಟ—ನಷ್ಟಗಳು ಆಗುತ್ತಿವೆಯೆಂದೂ—ಆ ನಷ್ಟ ತೀರಿಸುವಷ್ಟು ಮುಂದೆ ಉತ್ಪಾದನೆಯಾಗಲಾರದೆಂದೂ ಅವರ ಅಭಿಪ್ರಾಯ. ಆದರೆ ಯೋಜನೆಯ ಸಾಧನೆಯಲ್ಲಿ ಆಗುತ್ತಿರುವ ತೊಂದರೆಯನ್ನು ಗಮನಕ್ಕೆ ತಂದುಕೊಂಡು ಅದನ್ನು ಸರಿಪಡಿಸುವ ವಿಚಾರ ನಡೆಸಬೇಕೇ ಹೊರತು ಯೋಜನೆಯನ್ನೇ ತಳ್ಳಿ ಹಾಕುವುದು ಶ್ರೇಯಸ್ಕರವಲ್ಲ. ಕೆಲವು ಸಂದರ್ಭ ಯೋಜನೆಯನ್ನು ರೂಪಿಸುವ ಕೃತಿಯಲ್ಲಿಯಾಗಲಿ ಸಾಧನೆಯಲ್ಲಿಯಾಗಲಿ ತೊಂದರೆಯನ್ನು ನಿವಾರಿಸದೆ—ನಿರ್ದಿಷ್ಟ ಅವಧಿಯಲ್ಲಿ ದೊರೆಯಬೇಕಾದ ಫಲ ದೇಶಕ್ಕೆ ಒದಗುವುದಿಲ್ಲ.

ದೊಡ್ಡ ದೊಡ್ಡ ಪ್ರೊಜೆಕ್ಟ್‌ಗಳಲ್ಲಿ ಹಾಗೂ ಅವಾದಾಗಿ ಉಪಯೋಗವಾಗುತ್ತಿದೆಯೆಂದು ಕೇಳಲಾಗುತ್ತಿದೆ. ಲಕ್ಷಾಂತರ ರೂಗಳನ್ನು ಅಲಕ್ಷ್ಯವಾಗಿ ಕಾಣಲಾಗುತ್ತಿದೆಯೆಂದು ದೂರಿಕೊಳ್ಳುತ್ತಾರೆ. ಇಂಥವುಗಳನ್ನು ಸರಿಪಡಿಸಲು ಸರಕಾರ ತೀವ್ರ ಗಮನ ಕೊಡಬೇಕು. ಅವಾವಿತರನ್ನು ಉಗ್ರವಾಗಿಯೂ ಶಿಕ್ಷಿಸಬೇಕು. ಇಲ್ಲದಿದ್ದರೆ ಯೋಜನೆಯು ಹೆಸರಿನಲ್ಲಿ ದೇಶದ ಸಂಪತ್ತು ಕೆಲವರದೇ ಸೊತ್ತಾಗಿ ಹೋಗುತ್ತದೆ.

ದೇಶದ ಅಭಿವೃದ್ಧಿಗಾಗಿ ಸರಕಾರವು ಅನೇಕ ಯೋಜನೆಗಳನ್ನು ತಯ್ಯಾರಿಸಿದೆ. ಆದರೆ ಈ ಯೋಜನೆಗಳೆ ಲಾಭದ ಪೂರ್ತಿ ರಲಿ, ಅವುಗಳ ಸಮಗ್ರ ಪರಿಚಯವೂ ಜನಕ್ಕೆ ಆಗದೇ ಇದ್ದದ್ದು ವಿಷಾದಕರ. ಯೋಜನೆಗಳನ್ನು ಸರಿ ಯೋಜಿಸುವುದಕ್ಕೆ ಅನೇಕ ಅಧಿಕಾರಿಗಳಿದ್ದಾರೆ. ಯೋಜನೆಗೆ ವಿನಿಯೋಗ ಕೆಲವು ಭಾಗದ ಹಾಗೂ ಅವರ ವೇತನಕ್ಕೇ ಮೀಸಲಾಗುತ್ತದೆ. ಆದರೂ ಆಯಾ ಯೋಜನೆಗಳ ಸ್ವರೂಪ ಪೇನು? ಸಾಧ್ಯತೆಯೇನು? ಇವುಗಳ ಸರಿ ಚಾಯವನ್ನೂ ಜನಕ್ಕೆ ಒದಗಿಸದಿದ್ದುದು ಯೋಜನೆಯು ಕಾರ್ಯವೇ ಕುಂಠಿತವಾಗುತ್ತಿರುವುದಕ್ಕೆ ಕಾರಣವಾಗಿದೆ, ಯೋನೆ ಸಿದ್ಧವಾದೊಡನೆ ಅವಕ್ಕೆ ಸಿಯೋಜಿಸಿ

(ಸೀನೇ ಪು.೫ ನೋಡಿರಿ)



ಮಕ್ಕಳ ಮಮತೆಯ
"ಬಿಕ್ಕೊ"ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು– ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿನೆ.

ಪಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಛಪಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ:

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್

ಕಾಪು, ದ. ಕ.

ಮಂಗಳೂರು ಬಂದರ ಮತ್ತು ಮೈಸೂರಿನ ರಾಜಕೀಯ

ಸಲವು ವರ್ಷಗಳು ಜೋಕಾಲಿಯಾಡಿದ ಬಳಿಕ 'ಮಂಗಳೂರು ಸರ್ವಋತು ಬಂದರ'ದ ಯೋಜನೆ ಪ್ರಸವಸನ್ನಿವೇಶವೊಂದು ಆಧಿಕೃತ ವಾರ್ತೆಗೆ, ಪ್ರತಿಯೊಂದು ಅದು ವಿಲಂಬವಾಗುತ್ತಿದೆಯೆಂದು ಹುಟ್ಟಿದ ಗಾಳಿ ಸುದ್ದಿಗೆ ಕಾರಣವೇನಿರಬಹುದು? ರಾಜ್ಯದ ರಾಜಕೀಯವೇ ಕಾರಣವೆನ್ನೋಣವೆ? ಅಥವಾ....

ಲೇಖಕರು: ಶ್ರೀ ಕು. ಶಿ. ಹರಿದಾಸ ಭಟ್ಟ.

ಲೇಖಕರು.

‡ ‡ ‡

ಮಂಗಳೂರು ಎಂದರವನ್ನು ಈ ಮೂರನೆಯ ಯೋಜನೆಯ ಮೂರನೆಯ ವರ್ಷದ ನಡುವಿನಲ್ಲಿ ಬಿಟ್ಟುಕೊಡಲಾದೀತೆಂಬ ಗಾಳಿ ಸುದ್ದಿ ಹೇಗೋ ದಿಲ್ಲಿಯಿಂದ ಮೈಸೂರಿಗೆ ಸಕಾಲದಲ್ಲಿ ತಲಪಿತು.

ಇದರಿಂದ ಆಸಕ್ತ ವಲಯ'ಗಳಲ್ಲಿ ಕಳವಳ ಉಂಟಾಗುತ್ತಿದ್ದಾಗಲೇ ಸಾರಿಗೆ ಸಂಸ್ಥಿ ಸ್ವರ್ಣ ಸಿಂಗರು ನಮ್ಮ ರಾಜ್ಯದ ಗಡಿಯೊಳಗೆನೆ ಪ್ರವಾಸದಲ್ಲಿದ್ದುದರಿಂದ ಅವರನ್ನೇ ನೇರವಾಗಿ ಕೇಳುವ ಸುವರ್ಣಾವಕಾಶ ರಾಜಕೀಯಸ್ತರಿಗೆ ದೊರೆಯಿತು.

ರೈಲ್ವೆ ಸಚಿವರು ಈ ಹಸಿ-ಬಿಸಿ ಸುದ್ದಿಯನ್ನು ಹುಸಿ ಎಂದು ಅಲ್ಲಗಳೆದು ತಮ್ಮ ಗೌರವವನ್ನು ಕಾಪಾಡಿಕೊಂಡು ದಿಲ್ಲಿಗೆ ಮರಳಿದರು.

ದಿಲ್ಲಿಯಿಂದ ಬೇರೆ ಅಧಿಕೃತ ಸುದ್ದಿಯೂ ಗಾಳಿ ಸುದ್ದಿಯ ಪಥ್ಯವನ್ನು ನಿಂತಕವಿತು

ಮಂಗಳೂರಿನ ಬಂದರಿನ ಬಗ್ಗೆ ಈ ಹದಿನೇಳು ವರ್ಷ ಕಾಲವೂ ದುಡಿದು ಪಣ್ಣಾದ ಪ್ರಜಾಪ್ರತಿನಿಧಿ ಸಂಸತ್ ಸದಸ್ಯ ಶ್ರೀನಿವಾಸ ಮಲ್ಯರು ಮಂಗಳೂರಿನ ವರೆಗೆ ಬಂದು ಯಾವ ಆಸ್ಥೆಯೂ ತಡೆದಿಲ್ಲ ವೆಂಬುದನ್ನು ಒಹಿರಂಗವಾಗಿ ಸಾರಿದರು.

ಕುರ್ಕ ಪರಿಸ್ಥಿತಿಯಲ್ಲಿ ಯಾವ ಯೋಜನೆಯನ್ನು ಎಂದು ಬೇಕಾದರೂ ಕೈಬಿಡುವ ಸ್ವಾತಂತ್ರ್ಯ, ಕೈಬಿಡಲೇ ಬೇಕಾದ ಅನಿವಾರ್ಯತೆ—ಕೇಂದ್ರ ಸರಕಾರದ ಸರ್ವಸ್ವಾನ್ಯತ್ಯಕ್ಕೆ ಒಳಪಟ್ಟ ವಿಚಾರವೆಂಬುದನ್ನು ಒಸ್ಪೋಣ.

ಆದರೆ ಮೈಸೂರಿನ ಭವಿತವ್ಯಕ್ಕೆ ಆಶಾದಾಯಕವಾದ ಈ ಬಂದರ ನಿರ್ಮಾಣವು ಈ ಧೋರಣೆಗೆ ಸರ್ವ ಪ್ರಥಮ ಬಲಿಯಾಗ ಬೇಕು ಏತಕ್ಕೆ?

ಗಾಳಿಯಿಂದ ಮಂಗಳೂರು ಬಂದರದ ಪ್ರಶ್ನೆ ಜೋಕಾಲಿಯಾಡುತ್ತಿದೆ.

ಸ್ವಲ್ಪದ ಆಯ್ಕೆಯ ಪ್ರಶ್ನೆ ಬಂದಾಗ ಎಲ್ಲ ತರದ ನೈಸರ್ಗಿಕ ಅನುಕೂಲತೆಗಳೂ ಉಳ್ಳ ಮ.ಪ್ಪೆಯನ್ನು ಬದಿಗೊತ್ತಿ ಮಂಗಳೂರನ್ನು ಆರಿಸಿದ ಮಹಾನುಭಾವರು ರಾಜ್ಯಕ್ಕೆ—ರಾಷ್ಟ್ರಕ್ಕೆ ಎಷ್ಟು ಉಪಕಾರ ಮಾಡಿದ್ದಾರೆಂಬುದನ್ನು ಬಂದರು ಮುಗಿಯುವ ಹೊತ್ತಿಗೆ ಬಂದರು ನಿರ್ಮಾಣದ ಲೆಕ್ಕಪತ್ರಗಳು ಹೇಳಿಯಾವು.

ಈಗಿನ ಪಟ್ಟಿ ೧೩ . ೫೫ ಕೋಟಿ. ನಿಜವಾದ ವೆಚ್ಚವೆಷ್ಟೋ? ಶರಾವತಿಯ ಕಥೆ ಕೇಳಿಲ್ಲವೆ?

ಆಗಲಿ ಮಂಗಳೂರೇ ಆಗಲಿ ಪಣಂಬೂರೇ ಆಗಲಿ ಮೈಸೂರು ರಾಜ್ಯಕ್ಕೆ ಒಂದು ಸರ್ವಋತು ಬಂದರು ಒದಗಲಿ ಎಂಬುದು ಎಲ್ಲರ ಹಾರೈಕೆ, ನಿಜ. ಆದರೆ ಹರಾತ್ತಾನೆ ದಿಲ್ಲಿಯಿಂದ ಸುಳ್ಳು ಸುದ್ದಿ ಹುಟ್ಟಲು ಬಂದರಿನ ವೈಜ್ಞಾನಿಕ ನಿರೀಕ್ಷಣೆಯೇ ಕಂಡು, ಪರೀಕ್ಷಿಸಿ ನಿರಾಕರಿಸಿದ್ದು ಕಾರಣವಿರಬಹುದೆ?

ಬಂದರನ್ನು ಮಂಗಳೂರಲ್ಲಿ ಕಟ್ಟಬೇಕೆನ್ನುವ ನಿರ್ಣಯವು ಸ್ವೀಕೃತವಾಗಿ ಎರಡೂವರೆ ವರ್ಷಗಳಲ್ಲಿ ನಡೆದ ಕೆಲಸ ಏನು ಎಷ್ಟು ಎಂಬುದರ ಏನರದ ಬಗ್ಗೆ ಜನತೆಗೂ ಆಸಕ್ತಿ ಇದೆ ನಿರ್ಮಾಣಕಾರ್ಯ ತತ್ವವಾಗುತ್ತಿರುವುದರಲ್ಲಿ ಮೈಸೂರಿನ ಆಡಳಿತದ ಲೋಪ ದೋಷಗಳು ಕಾರಣವೇ ಕೇಂದ್ರದ ಆಲಸ್ಯ ಕಾರಣವೇ -- ಯಾರ ಜವಾಬುದಾರಿ ಎಷ್ಟು ತಿಳಿಯಬೇಕಾಗಿದೆ. ಇಷ್ಟು ವೇಗದಲ್ಲಿ ನಿರ್ಮಾಣಕಾರ್ಯ ಮುಂದುವರಿದರೆ ಬಂದರು ನಿಜವಾಗಿಯೂ ಆರೈಗತವಾಗಲು ಎಷ್ಟು ವರ್ಷ ತಗಲಬಹುದೋ?

ಮೈಸೂರಿನ ಸಂಬಂಧಪಟ್ಟ ಸಚಿವರು ಇದೇ ತಿಂಗಳ ೩ನೇ ದಿನಾಂಕ ದಿಲ್ಲಿಯಿಂದ ಮತ್ತೆ ಹಲವು ಜನರ ಆಶ್ವಾಸನೆಗಳ ಪೊರೆಯನ್ನು ಹೊತ್ತು ಬಂದಿದ್ದಾರೆ—ಯೋಜನಾ ಆಯೋಗದ ಶ್ರೀ ಟಿ ಎನ್. ಕಿಂಗರು ಒಬ್ಬರು, ಇತ್ತೀಚೆಗೆ ನೀರಾವರಿ ಖಾತೆಯ ಸಚಿವ ಪದಕ್ಕೇರಿದ ಡಾ| ರಾಯರು ಒಬ್ಬರು—ಈ ರೀತಿ ಇಬ್ಬರು ನೇರವಾಗಿ ಸಂಬಂಧವಿಲ್ಲದ ಜನರ ಹತ್ತಿರ ನಮ್ಮ ಮೈಸೂರು ಸಚಿವರು ಯಾತಕ್ಕಾಗಿ ಆಶ್ವಾಸನೆ ಬೇಡಿದರು?

'ನೇರವಾಗಿ ಸಂಬಂಧವಿಲ್ಲದ' ಎಂಬುದನ್ನು ನಾನು ಉದ್ದೇಶಪೂರ್ವಕ ಉಪಯೋಗಿಸಿದ್ದೇನೆ.

(೨೩ನೇ ಪುಟ ನೋಡಿರಿ)

Telegrams "Buvanendra" Phone: Office 86
Mg. Director 136

'ತದೇನ ಯುಕ್ತಂ ಭೈಷಜಂ ಯದಾರೋಗ್ಯಾಯ ಕಲ್ಪತೇ'
'ಸ ಏವ ಬಿಷಜಾಂ ಶ್ರೇಷ್ಠಃ ರೋಗೇಭ್ಯಃ ಯಃ ಪ್ರಮೋಚಯೇತ್'

ರೋಗನಿವಾರಣಾ ದ್ವಾರಾ ಆರೋಗ್ಯ ಉಂಟುಮಾಡುವುದೇ ಯೋಗ್ಯ ಔಷಧಿ.....
ರೋಗದ ಸಮ್ಯಕ್ ಪರಿಜ್ಞಾನದ್ವಾರಾ ಸಿದ್ಧೌಷಧಿಗಳಿಂದ ರೋಗವನ್ನು
ಗುಣಪಡಿಸುವವನೇ ಶ್ರೇಷ್ಠ ವೈದ್ಯ.....

"ಭುವನೇಂದ್ರ"

ಆಯುರ್ವೇದ ಸಿದ್ಧೌಷಧಿಗಳು—
ಕುಶಲ ವೈದ್ಯರಿಗೆ ವಿಶ್ವಸನೀಯ ಆಧಾರ.

ದಕ್ಷಿಣಾಪಥದಲ್ಲೇ ಅದ್ವಿತೀಯವೆನಿಸಿದ ಶಾಸ್ತ್ರೋಕ್ತ
ಆಯುರ್ವೇದ ಔಷಧಿಗಳ ಬೃಹನ್ನಿರ್ಮಾಣ ಕೇಂದ್ರ.

BHUVANENDRA PRODUCTS PRIVATE LIMITED

Registered Office: KATAPADI, S. Kanara.

ಸ್ವತಂತ್ರ ಭಾರತದಲ್ಲಿ ಸ್ತ್ರೀ

ಪ್ರಪಂಚದ ಇತರ ಯಾವ ದೇಶದಲ್ಲಿಯೂ ಅಲಭ್ಯವೆನಿಸುವ ಸೌಲಭ್ಯಗಳನ್ನು ಭಾರತೀಯ ಮಹಿಳೆ ಪಡೆಯುತ್ತಾಳೆ. ಸೌಕರ್ಯಾಧಿಕ್ಯದೊಡನೆ ತಾನು ನಿರ್ವಹಿಸಬೇಕಾದ ಕರ್ತವ್ಯಗಳೂ ಅಧಿಕವಾಗುತ್ತಿವೆಯೆಂಬುದನ್ನು ಮರೆಯದೆ ಕಾರ್ಯಾನುಷ್ಠೆಯಾಗಿದೇಕು ನಮ್ಮ ನಾರಿ.

ಲೇಖಕಿಯರು: ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ, ಬೇಲೂರು.

ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ಸಾಧಿಸಿದ ಮೊದಲ ಕಾರ್ಯವೆಂದರೆ ಹೊಸ ರಾಜ್ಯಾಂಗ ವ್ಯವಸ್ಥೆಯ ನಿರ್ಮಾಣ. ಭಾರತ ಜನತೆಯ ಅಶೋತ್ತರಗಳು, ಸಾಮಾಜಿಕ ಪ್ರಜ್ಞೆಯ ದ್ಯೋತಕವಾಗಿ ರಾಜ್ಯಾಂಗವು ರೂಪುಗೊಂಡಿದೆ.

ಒಂದು ದೇಶದ ಪ್ರಗತಿಯ ಅಳತೆಗೋಲು ಅಲ್ಲಿನ ಮಹಿಳಾ ಜೀವನ–ಎನ್ನುತ್ತಾರೆ. ಸ್ತ್ರೀಯರ ಹಿತರಕ್ಷಣೆ ಸ್ವತಂತ್ರ ಭಾರತದ ಧ್ಯೇಯವಾಗಿದೆ. ಸ್ತ್ರೀ ಜೀವನವನ್ನು ಸಹ್ಯ ಮಾಡುವಂತೆ, ಸ್ತ್ರೀಯರ ಸರ್ವತೋಮುಖವಾದ ಏಳಿಗೆಗೆ ಸಹಾಯಕವಾಗುವಂತೆ ಸ್ವತಂತ್ರ ಭಾರತದಲ್ಲಿ ಅನೇಕ ಶಾಸನಗಳನ್ನು ಜಾರಿಗೆ ತಂದಿದ್ದಾರೆ.

ಭಾರತ ಸ್ವತಂತ್ರವಾಗುವ ಮುನ್ನ, ಜನಜೀವನವನ್ನು ರೂಪಿಸುತ್ತಿದ್ದ ಭಾವನೆ—ಸೇವ್ಯ-ಸೇವಕ ಸಂಬಂಧಕ್ಕೆ ಪುರಸ್ಕಾರ ಕೊಡುತ್ತಿದ್ದ ದಾಸ್ಯ ಭಾವನೆ. ಜನಜೀವನದ ಕೈಗನ್ನಡಿಯಾದ ಸ್ತ್ರೀ ಜೀವನದಲ್ಲೂ ಈ ಭಾವನೆ ಪ್ರತಿಬಿಂಬಿಸಿದ್ದಿತು.

ಭಾವನೆಯೇ ಜೀವನವನ್ನು ರೂಪಿಸುವ ಮಹಾಶಕ್ತಿ. ಸೇವ್ಯ-ಸೇವಕ ಭಾವನೆಗೆ ಪ್ರಾಧಾನ್ಯತೆ ಇದ್ದಾಗ ಸಾಮಾಜಿಕ ರೀತಿನೀತಿಗಳು ಆ ಭಾವನೆಗೆ ತಕ್ಕಂತೆ ರೂಪುಗೊಂಡವು. ಕುಟುಂಬ, ಗ್ರಾಮ, ರಾಜ್ಯಗಳು ಒರ್ವ ಯಜಮಾನನ ಆಡಳಿತಕ್ಕೆ ಒಳಪಟ್ಟಿದ್ದವು. ಯಜಮಾನನ ಮಾತಿಗೆ ಎದುರಾಡದಿರುವುದೇ ಮುಖ್ಯ ಗುಣವಾಗಿದ್ದಿತು. ಭಗವಂತ ಹೇಗೆ ಭಕ್ತ ಪರಾಧೀನನೋ ಹಾಗೆಯೇ ಯಜಮಾನಿಕೆಯನ್ನು ವಹಿಸಿಕೊಂಡವರೂ ಆಶ್ರಿತ ರಕ್ಷಣೆ ತನ್ಮ ಪ್ರಥಮ ಕರ್ತವ್ಯ ಎಂದು ತಿಳಿಯಬೇಕಾಗಿದ್ದಿತು. ಸರ್ವರ ಹಿತ ಸಾಧಿರಲು ತನಗೆ ಈ ಉನ್ನತ ಸ್ಥಾನ ದೊರಕಿದೆಯೆಂಬ ಪ್ರಜ್ಞೆ ಯಜಮಾನನಲ್ಲಿ ಜಾಗ್ರತವಿರುವ ವರೆಗೂ ಈ ಪದ್ಧತಿ ಯಶಸ್ವಿಯಾಗಿದ್ದಿತು.

ಆದರೆ ಕ್ರಮೇಣ ಈ ಪದ್ಧತಿ ಶಿಥಿಲವಾಯಿತು. ರಾಜನಿಗಾಗಿ ಪ್ರಜೆಗಳು, ಯಜಮಾನನಿಗಾಗಿ ಕುಟುಂಬ –ಎಂಬ ಸ್ವಾರ್ಥ ಭಾವನೆ ತೊಳೆದು ಹೆತ್ತಾರು ಮಂದಿಯ ಮಡಿಲೆಯು ಫಲವತಿ ಏರ್ವನ ಭೋಗಕ್ಕಾಗಿ ವಿನಿಯೋಗವಾಗುವ ಅಸಮಾನತೆ ಬೆಳೆಯಿತು. ಯಜಮಾನಿಕೆ ವಹಿಸಿಕೊಂಡವರ ಹಕ್ಕುಗಳು ಹಾಗೂ ಸೇವಕರ ಕರ್ತವ್ಯಗಳು (ಬಾಧ್ಯತೆಗಳು) ಮಾತ್ರ ಒತ್ತಿ ಹೇಳಲ್ಪಟ್ಟವು. ಸೇವಕರ ಹಿತ ಗೌಣವಾಗಿ, ಯಜಮಾನ್ಯ ವಹಿಸಿಕೊಂಡವರ ದರ್ಪಪ್ರತಿಷ್ಠೆಗಳು ಬೆಳೆದವು.

ವಿಶ್ವದಾದ್ಯಂತ ಸೇವ್ಯ-ಸೇವಕ ಭಾವನೆ ಪ್ರಭುತ್ವ ನಡೆಸಿದ್ದನ್ನೂ ಹಾಗೂ ದುರಾಡಳಿತದಿಂದ ಆ ಭಾವನೆ ಶಿಥಿಲಗೊಂಡುದನ್ನೂ ನಾವು ಕಾಣುತ್ತೇವೆ.

ಜನತೆಯ ಸಾಮಾಜಿಕ ಪ್ರಜ್ಞೆ ವಿಕಾಸವಾದಂತೆ, ಎಲ್ಲರೂ ಸಮಸಮಾನರೆಂಬ ಭಾವನೆ ಗರಿಗೆದರಿತು ಫ್ರಾನ್ಸಿನ ಮಹಾಕ್ರಾಂತಿಯು ಮೂಲಸ್ಫೂರ್ತಿಯಾದ ಈ ಸಮಸಮಾನತೆಯ ಭಾವನೆ ದುರಾಡಳಿತ ದಬ್ಬಾಳಿಕೆಯಿಂದ ನೊಂದ ಜನತೆಗೆ ದಿವ್ಯ ಮಂತ್ರವಾಯಿತು. ಅಂದು ಪ್ರಗತಿಪರ ರಾಷ್ಟ್ರಗಳ ರೂಪುರೇಷ್ಟೆಗಳನ್ನು ನಿರ್ಧರಿಸುತ್ತಿದೆ—ಈ ಭಾವನೆ. ಕೌಟುಂಬಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಜೀವನದಲ್ಲಿ ಮಹಾ ವಿಪ್ಲವವನ್ನೆಬ್ಬಿಸುತ್ತಿದೆ—ಈ ಭಾವನೆ

ಈ ಒಂದು ಹಿನ್ನಲೆಯನ್ನು ಮರೆಯದೆ, ಸ್ತ್ರೀ ಜೀವನದಲ್ಲಿ ಅಲ್ಲಿನ ಜನ ಜೀವನವನ್ನು ರೂಪಿಸುತ್ತಿರುವ ಭಾವನೆ ಪ್ರತಿಬಿಂಬಿಸುವುದೆಂಬುದನ್ನು ನೆನಪಿನಲ್ಲಿಟ್ಟುಕೊಂಡರೆ, ಸ್ವತಂತ್ರ ಭಾರತದಲ್ಲಿ ಸ್ತ್ರೀಯ ಸ್ಥಾನಮಾನಗಳ ಬಗ್ಗೆ ಸ್ಪಷ್ಟ ಕಲ್ಪನೆ ಮೂಡುತ್ತದೆ.

ಸರಿಸಮಾನತೆಯ ತತ್ವದ ಮೇಲೆ ರೂಪುಗೊಂಡಿದ ನವ್ಯ ರಾಜ್ಯಾಂಗ ಸ್ತ್ರೀಯರ ಹಿತರಕ್ಷಣೆಗಾಗಿ, ಅವರ ಸರ್ವತೋಮುಖವಾದ ಅಭಿವೃದ್ಧಿಗಾಗಿ ಅನೇಕ ಶಾಸನಗಳನ್ನು ಸರ್ಕಾರವು ರಚಿಸಿದೆ.

ವಿದ್ಯಾಭ್ಯಾಸ, ನೌಕರಿ ವಿಷಯಗಳಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನಾವಕಾಶ ನೀಡಲಾಗಿದೆ. ಸ್ತ್ರೀಗೆ ಸಂಪೂರ್ಣ ಪಾರಿಕಕ್ಕುಗಳಿವೆ. (ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಸಹ ಸ್ತ್ರೀಗೆ ಪೌರತ್ವದ ಹಕ್ಕು ಇನ್ನೂ ಸಿಕ್ಕಿಲ್ಲ.)

ಅರ್ಹತೆಯಿದ್ದ ಸ್ತ್ರೀ ಇಂದು ಯಾವ ಉನ್ನತ ಸ್ಥಾನವನ್ನಾದರೂ ಆಕ್ರಮಿಸಬಹುದು. ಪುರುಷರಿಗೇ ವಿಷಯಲು ಎಂದು ಭಾವಿಸಿದ್ದ ಎಂಜಿನಿಯರಿಂಗ್ ಹಾಗೂ ಪೋಲೀಸ್ ಖಾತೆಗಳಲ್ಲಿ ಸಹ ಇಂದು ಸ್ತ್ರೀಯರಿದ್ದಾರೆ. ಸ್ತ್ರೀಯರ ಕೈಕೆಳಗೆ ಕೆಲಸ ಮಾಡುವುದು ಮರ್ಯಾದೆಗೆ ಕಡಿವೆ ಯೆಂಬ ಭಾವನೆಯೂ ಇಂದು ಮಾಯವಾಗಿದೆ. (ಕಮರ್ಥಳಾದ ರಿಸಿಗೂ ಬೇಗಂ ಸಹ ಈ ಅಂಧಭಾವನೆಗೆ ಬಲಿಯಾಗ ಬೇಕಾಯಿತಷ್ಟೇ.) ವಿದೇಶಾಂಗ ಖಾಟೆಯು ಜವಾಬ್ದಾರಿ ಸ್ಥಾನಗಳಲ್ಲಿ ಸಹ ಇಂದು ಕೆಲವು ಮಹಿಳೆಯರಿದ್ದಾರೆ.

ಸ್ತ್ರೀಯರ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ಕಾಲ್ತೊಡರಾಗಿದ್ದ ಅನೇಕ ಅಂಧ ಸಂಪ್ರದಾಯಗಳಿಂದ ಸ್ತ್ರೀಗೆ ಮುಕ್ತಿದೊರಕಿದೆ. ಈ ರಂಗಗಳಲ್ಲಿಯೂ ಸ್ತ್ರೀ ಪುರುಷರ ಸಮಾನತೆಯನ್ನು ಸಾರುವ ಶಾಸನಗಳು ರಚಿತವಾಗಿವೆ.

ಹೆಣ್ಣಿನ ಜೀವನದ ಅತಿ ಮುಖ್ಯ ಘಟ್ಟ ವಿವಾಹ—ಕೇಂದ್ರ ಬಿಂದುವೇ ಎನ್ನಬಹುದಾದ-ವಿವಾಹದ ವಿಷಯದಲ್ಲಿ ಹಿಂದೆ ಹೆಣ್ಣಿನ ಅಭಿಪ್ರಾಯಕ್ಕೆ ಮಾನ್ಯತೆ ಇರಲಿಲ್ಲ. (ಹೆಣ್ಣಿಗೆ ಅಭಿಪ್ರಾಯವಿರುವುದು ಸಾಧ್ಯ ಎಂಬುದನ್ನೂ ಕೆಲವರು ಒಪ್ಪುತ್ತಿರಲಿಲ್ಲ!) ಈಗ ವಿವಾಹವಾಗಲು ಹೆಣ್ಣಿನ ಕನಿಷ್ಠ ವಯೋಮಿತಿ ಹದಿನೈದು ಎಂದು ವಿಧಿಸಿರುವುದರಿಂದ ಆ ವೇಳೆಗೆ ಸ್ವಲ್ಪ ಮಟ್ಟಿಗಾದರೂ ವಿವಾಹದ ಅರ್ಥ, ವೈವಾಹಿಕ ಹೊಣೆಗಾರಿಕೆಗಳು ಅಧುವಿಗೆ ತಿಳಿದಿರುವುದೆಂದು ನಂಬಬಹುದು. ನರದಕ್ಷಿಣೆಯು ಶಾಸನಬಾಹಿರವೆಂದು ಘೋಷಿಸಿರುವುದಕ್ಕೆ ಮುಖ್ಯ ಕಾರಣ ಹೆಣ್ಣು ಮಕ್ಕಳ ಹಿತಾಕಾಂಕ್ಷೆಯೇ. ಸ್ತ್ರೀಯರು ವೈವಾಹಿಕ ಜೀವನ ಸುಗಮವಾಗಿರಬೇಕೆಂದು ವಿಚ್ಛೇದನವನ್ನು ಕಷ್ಟಸಾಧ್ಯವನ್ನಾಗಿ ಮಾಡುವ ಶಾಸನ ಮಾಡಿದ್ದಾರೆ. ಹಿಂದೆ ಅಲ್ಪ ಸ್ವಲ್ಪ ಕಾರಣಕ್ಕಾಗಿಯೂ ಅಥವಾ ಹಣೆಸೆಣಕಿದ್ದರೆ ಕಾರಣವಿಲ್ಲದೆಯೂ ಪತ್ನಿಯ ದ್ವಂತೆಯೇ ಬೇರೊಬ್ಬಳನ್ನೂ ಗಂಡರು ಲಗ್ನವಾಗಬಹುದಾಗಿದ್ದಿತು [ವಿಚ ಪತ್ನೀತ್ವದ ಕಾನೂನು ಹಿಂದೂಗಳಿಗೆ ಮಾತ್ರ ಅನ್ವಯಿಸುತ್ತದೆ. ಜಾತಿ ಮತಗಳ ಭೇದವಿಲ್ಲದೆ ಎಲ್ಲ ಭಾರತೀಯ ಪೌರರಿಗೂ ಅನ್ವಯಿಸುವಂತೆ ಸಾಮಾಜಿಕ ಶಾಸನವನ್ನು ರಚಿಸಿದ್ದರೆ ಇನ್ನೂ ಉತ್ತಮವಾಗುತ್ತಿದ್ದಿತು. ಆದಂತಿರಲಿ.) ಪತ್ನಿ ಜೀವಂತವಾಗಿರುವಾಗ ಮತ್ತೊಬ್ಬಳನ್ನು ಲಗ್ನವಾಗುವುದು, ಶಿಕ್ಷಾರ್ಹ ಅಪರಾಧವಾಗಿದೆ, ಹಾಗೂ ಆ 'ಎರಡನೇ ಮದುವೆ' ಕಾನೂನಿನ ರೀತ್ಯಾ ಮದುವೆಯೇ ಅಲ್ಲ. ಎರಡನೆಯ ಹೆಂಡತಿಯಾಗಿರಬಹುದೇ ಹೊರತು ಧರ್ಮಪತ್ನಿಯೊಗಲಾರಳು. ಮಕ್ಕಳಾಗಲಿಲ್ಲವೆಂಬ ಕಾರಣದಿಂದಾಗಲೀ, ಅಥವಾ ಗಂಡು ಸಂತಾನವಾಗಲಿಲ್ಲವೆಂಬ ಕಾರಣಕ್ಕಾಗಿಯಾಗಲೀ ಗಂಡರು ಮತ್ತೆ ಲಗ್ನವಾಗುವಂತಿಲ್ಲ. (ಮಕ್ಕಳಾಗದಿರಲು ವೈದ್ಯ ಪರೀಕ್ಷೆಯಿಲ್ಲದೆ ಸ್ತ್ರೀಯರೇ ಹೊಣೆಗಾರಿಕೆಯೆಂದು ಹೇಳಲು ಸಾಧ್ಯವಿಲ್ಲ. ಆ ದಕ್ಕಸ್ಸು ಹೆಚ್ಚಾಗಿ ಜನ ಸಂಖ್ಯೆಯು ಆ ನೈಸರ್ಗಿಕ ಸ್ಥಿತಿಯನ್ನು ಮುಟ್ಟಿರುವ ಈ ಕಾಲದಲ್ಲಿ ಅದೊಂದು ಕಾರಣಕ್ಕಾಗಿಯೇ ವಿವಾಹವನ್ನು ಭಗ್ನಗೊಳಿಸುವುದು ಸಾಧುವಲ್ಲವೆಂದು ರಾಷ್ಟ್ರಕರ ಅಭಿಪ್ರಾಯ.) ನೈತಿಕ ಜೀವನದಲ್ಲಿ ಸಾಮರಸ್ಯ ಸ್ಥಾಪನೆ ಅನಾಧ್ಯವಾದಾಗ, ಆಗ ವಿವಾಹ ವಿಚ್ಛೇದನೆಗೆ ಅವಕಾಶ ಕಲ್ಪಿಸಲಾಗಿದೆ. ವಿಚ್ಛೇದನೆ ಅತಿ ಸುಲಭವಾಗಿಲ್ಲ—ಕಾರಣ, ಅಲ್ಪ ಸ್ವಲ್ಪ ನೈಮನಸ್ಯವನ್ನೇ ಪರ್ವತಾಕಾರ ಮಾಡಿಕೊಂಡು ವಿಚ್ಛೇದನೆಗೆ ಯತ್ನಿಸದಿರಲಿ ಎಂದು. ಒಂದು ವಿಷಯದಲ್ಲಿ ವಿಚ್ಛೇದನೆಗಾಗಿ ಪತಿ-ಪತ್ನಿಯರಿಬ್ಬರೂ ಒಪ್ಪಬಹುದು. ಆದರೆ ಸರ್ಕಾರ ಒಪ್ಪಿಗೆಯಿದ್ದಾರೆ ವಿವಾಹವಾಗಬಹುದೇ ಹೊರತು ವಿಚ್ಛೇದನೆಯಾಗಲು ಸಾಧ್ಯವಿಲ್ಲ! ಪರಸ್ಪರ ಸ್ವಾಭಾವಗಳನ್ನು ತಿಳಿದುಕೊಳ್ಳಲು ವರ್ಷಗಳ ಕಾಲ ಗೃಹಕಲಹಗಳು ಸಾಮಾನ್ಯ ಆದ ಕಾರಣ ಮದುವೆಯಾದ ಮೂರು ವರ್ಷಗಳ ನಂತರವೇ ವಿಚ್ಛೇದ

(ಉಳಿದ ಪುಟ ನೋಡಿರಿ)

ಪತ್ನಿಗೆ ನಿಷ್ಠುರಾಯ ಶ್ರೀನಿವಾಸ ಭಟ್ಟರ

ಮತ್ತು ಮಕ್ಕಳ ನೇತೃತ್ವದಲ್ಲಿ, ಸುವ್ಯವಸ್ಥೆಯಿಂದೊಡ
ಗೂಡಿದ ಪಲವು ಹತ್ತು ವರ್ಷಗಳ
ಅನುಭವದಿಂದ ನಡೆಸಲ್ಪಡುವ

"ಸುಖನಿವಾಸ"

ತಾಲೂಕು ಕಚೇರಿಯ ಬಳಿ,
ಕೋರ್ಟ್ ರೋಡ್, ಉಡುಪಿ.

"ಶ್ರೀ ಕೃಷ್ಣವಿಲಾಸ"

ಹನುಮಾನ್ ಗೇರೆಜಿನ ಎದುರು,
ಸಂತೆಕಟ್ಟೆ, ಉಡುಪಿ.

ಊಟ, ಉಪಹಾರಗಳಿಗೆ, ವಸತಿ ವ್ಯವಸ್ಥೆಗಳಿಗೆ
ಶುಚಿ ಮತ್ತು ರುಚಿಗಳಿಗೆ
ಹೆಸರಾದ ಆದರ್ಶ ಗೃಹಗಳು ನಿಮ್ಮ ಸೇವೆಯಲ್ಲಿ.

ದಾಕ್ಷಿಣ್ಯ ರೋಗ

ಗಾಳಿಯಲ್ಲಿ ತೂರಿ ಬಿಟ್ಟ ಕಸ್ತೂರಿಯಂತೆ ಸರ್ವಾಂತರ್ಯಾಮಿಯೂ ಆದ ದಾಕ್ಷಿಣ್ಯ ರೋಗ ಪ್ರಜಾಪ್ರಭುತ್ವದ ಪಂಚಾಂಗವನ್ನೇ ಆಲುಗಾಡಿಸುತ್ತಿದೆ. ಇದಕ್ಕೆ ಉಚಿತ ಔಷಧಿ ಕೊಡುವ ಡಾಕ್ಟರರು ಯಾವ ಮೆಡಿಕಲ್ ಕಾಲೇಜಿನಿಂದ ಹೊರ ಬರುತ್ತಾರೆ?

ಲೇಖಕರು: "ಸಾರ್ಥಸಾರಥಿ"

ನಮ್ಮ ನಾಡು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದಂದಿನಿಂದ ರೋಗ ಗುಜನಗಳ ನಿರ್ಮೂಲನಕ್ಕಾಗಿ ನಾನಕಸ್ಸು ಪ್ರಯತ್ನ ನಡೆದಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಹಲವಾರು ಕಾಯಿಲೆಗಳ ಕಾಟ ಈಗ ಬಹುಮಟ್ಟಿಗೆ ಕಡಿಮೆಯಾಗಿದೆಯಂತೆ; ನಮ್ಮವರ ಸರಾಸರಿ ಆಯುಷ್ಯ ಏರಿಕೆಯಲ್ಲಿದೆಯಂತೆ—ಅದೂ ನಿಜ. ಆದರೆ ಡಾಕ್ಟರುಗಳು ಹೆಚ್ಚಾದ ಹಾಗೆ, ಮದ್ದುಗಳು ಸವನವೀನವಾಗಿ ಬಂದ ಹಾಗೆ, ಹೊಸ ಹೊಸ ಕಾಯಿಲೆಗಳೂ ಕಂಡು ಬರುತ್ತಿವೆಯೆಂದು ಗೊಣಗುವವರುಂಟು. ಅದೂ ನಿಜವಿರಬಹುದು ಏಕೆಂದರೆ ದಾಕ್ಷಿಣ್ಯ ರೋಗವೆಂಬುದು ಈಗ ಎಲ್ಲೆಲ್ಲಿಯೂ ಕಂಡು ಬರುತ್ತಿದೆ. ಅದು ಅವಾಯಕರವಲ್ಲವೆಂಬ ಭಾವನೆಯಿಂದಲೋ ಏನೋ ಅದಕ್ಕೆ ಮದ್ದೇ ನೆಂದು ಕೂದ ಯಾರೂ ಜಪ್ಪೊಂದು ವಿಚಾರ ಮಾಡಿದ ಹಾಗೆ ಕಾಣೆ.

ಭಾರತ ಸ್ವತಂತ್ರವಾಗುವ ಮೊದಲು ಈ ದಾಕ್ಷಿಣ್ಯ ರೋಗ ಇರಲಿಲ್ಲವೆನ್ನವಲ್ಲ. ಆಗಲೂ ಇತ್ತು. ಆದರೆ ಈಗ ಅದು ಸರ್ವವ್ಯಾಪಿಯಾಗಿದೆ. Quit India ಎಂದು ನಿರ್ದಾಕ್ಷಿಣ್ಯವಾಗಿ ಕೂಗಿ ಬ್ರಿಟಿಷರನ್ನು ಓಡಿಸಿದ ಮೇಲೆ ಈಗ ಯಾರೋ ಪ್ರತಿಯೊಂದರಲ್ಲಿಯೂ ದಾಕ್ಷಿಣ್ಯ ನಮಗೆ

ಯಾವುದರಲ್ಲೇ ಆದರೂ ಕೆಡುಕಿದೆಯೆಂದು ಮನಸ್ಸು ಹೇಳಿದರೂ ಅದನ್ನು ಕೆಡುಕೆಂದು ಒಪ್ಪಿ ತಕ್ಕ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಈ ದಾಕ್ಷಿಣ್ಯ ಆಡ್ಡಿಯಾಗುತ್ತಿದೆ.

ಕರ ಹೇರುವ ವಿಷಯದಲ್ಲಿಂತೂ ಸರಕಾರಕ್ಕೆ ದಾಕ್ಷಿಣ್ಯವಿಲ್ಲವೆಂದು ಪ್ರಜೆಗಳು ಗೊಣಗಬಹುದು. ದಾಕ್ಷಿಣ್ಯ ಬೇಡ, ದಯೆ ಕೂಡ ಇಲ್ಲವೆಂದು ಮಂತ್ರಾಜ್ಞೆಯವರನ್ನು ಶಪಿಸಬಹುದು. ಆದರೆ ಸಂಕಾರ ಆಸ್ಪತ್ರೆಯಂದು ದಾಕ್ಷಿಣ್ಯ ಬಟ್ಟೆಯೆಂದು ಹೇಳುವುದು ಸಾಧ್ಯವಿಲ್ಲ. ಹಾಗಿದ್ದರೇ ನೋ ಚೆನ್ನಾಗಿತ್ತು.

ಇಂದು ನಮ್ಮನ್ನೆಡರಿಸಿರುವ ದೊಡ್ಡ ಗಂಡಾಂತರವನ್ನೇ ತೆಗೆದುಕೊಳ್ಳಿ. ಆದಕ್ಕೆ ನಮ್ಮ ದಾಕ್ಷಿಣ್ಯರೋಗವೇ ಮೂಲ. ಪಟೇಲರಂಥ ಚೇತಾವನಿದ್ದ ನಮ್ಮ ರಾಷ್ಟ್ರಭಾಷೆಯಾಗಿದ್ದರಲ್ಲಿ. ಆಗಲೇ ಟಿಬೆಟ್ಟಿನ ಕುರಿತು ನಾವು ತೋರಿಸುತ್ತಿದ್ದ ಅಸಕ್ತ ಚೀನೀಯರ ಅಸಹನೆಯನ್ನು ತೆರಲಸಬೇಡಗಿತೆಂತೆ. ಆದರೆ ದಾಕ್ಷಿಣ್ಯದಿಂದ ನಾವು ಜಡವನ್ನು ಕಂಡೂ ಕಾಣದವರಂತೆ 'ಇಂಡಿಯ ಭಾಯಿ' ಎಂದು ಜಪಿಸಿದೆವು. ನಮ್ಮ ದಾಕ್ಷಿಣ್ಯ ರೋಗ ಎಷ್ಟೊಂದು ಉಲ್ಬಣಾವಸ್ಥೆಗೆ ಬಂದಿತ್ತೆಂದರೆ ನಮ್ಮ ಗಡಿ ತನಕ ಸೂಜೋನ ಮಂದಿ ಹೆದ್ದಾರಿ ರಚಿಸುತ್ತಾ ಬಂದರೂ ಆ ಕುರಿತು ಸಕಾಲದಲ್ಲಿ ಪ್ರತಿಭಟಿಸುವ ಶಕ್ತಿಯನ್ನು ಕಳೆದುಕೊಂಡಿದ್ದೆವು. ಗಡಿದಾಟಿ ಅವರು ಒಳಗಿ ನುಗ್ಗಿದ ಮೇಲೆಯೇ ನಾವು ಇಂಡಿಯಾ ಚೈನಾ ಚುಚ್ಚಿಸಿಕೊಳ್ಳ ತೊಡಗಿದ್ದೇವೆ. ನಿರೋಧ ಶಕ್ತಿ ಬೆಳಸಿಕೊಳ್ಳುತ್ತಿದ್ದೇವೆ. ಇನ್ನೆನ್ನಮ್ಮೆ ದಾಕ್ಷಿಣ್ಯ ರೋಗ ಬಾಧಿಸದಂತೆ! ಆದರೆ ಇದುವರೆಗಿನದನ್ನು ಅನುಭವಿಸಿಯೇ ತೀರಬೇಕು.

ಇನ್ನು ಈ ಮುಂದ್ರಾ ಪ್ರಕರಣ, ಸಿರಾಜುದ್ದಿನ್ ಹಗರಣ ಇವು ಕೂಡ ದಾಕ್ಷಿಣ್ಯ ರೋಗಕ್ಕೆ ಸಿಲುಕಿಯೇ ಉದ್ಭವಿಸಿದ್ದು. ದೊಡ್ಡ ದೊಡ್ಡ ಸ್ಥಾನದಲ್ಲಿರುವವರಿಗೆ ಈ ಕಾಯಿಲೆ ಬಂದರೆ ಹೀಗೆಲ್ಲ ಆಗುತ್ತದೆ. ನಮ್ಮ ದೇಶದಲ್ಲಿ ಮಾತ್ರವಲ್ಲ, ಇಂಗ್ಲೆಂಡಿನಲ್ಲಿ ಕೂಡ ಹಾಗೆಯೇ. ಪ್ರೊಫ್ಯೂಮೋ ಮನವೂತಾಗಿದ್ದಾರಲ್ಲ ಜಗತ್ಪ್ರಸಿದ್ಧ. ಕೇಲರಾಯಣ ಎಡೆಬಿಡದೆ ಬರುತ್ತಿದಲ್ಲ ಪತ್ರಿಕೆಗಳಲ್ಲಿ. ಇದಕ್ಕೆಲ್ಲ ಕಾರಣ ಪ್ರೊಫ್ಯೂಮೋ ಒಂದು ಬಗೆಯ ದಾಕ್ಷಿಣ್ಯ ರೋಗಕ್ಕೆ ಸಿಲುಕಿದ್ದು ಮಾತ್ರವಲ್ಲ ಪ್ರಧಾನಿ ಮ್ಯಾಕ್‌ಮಿಲನ್ ಕೂಡ ಇನ್ನೊಂದು ಬಗೆಯ ದಾಕ್ಷಿಣ್ಯದಿಂದ ಸಕಾಲದಲ್ಲಿ ಎಚ್ಚರಿಕೆ ವಹಿಸದಿದ್ದುದು.

ಇಂಗ್ಲೆಂಡಿನಲ್ಲೀನ, ಅಮೇರಿಕದಲ್ಲೂ ದಾಕ್ಷಿಣ್ಯ ರೋಗಕ್ಕೆ ಬಲಿಯಾದ ದೊಡ್ಡ ಮನುಷ್ಯರಿದ್ದಾರೆ ಒಂದೆರಡು ವರ್ಷಗಳ ಹಿಂದೆ ಬೆಲ್ಲಿಸಾಲ್ ಎಂಬನನ್ನೊಬ್ಬ ಅಲ್ಲಿನ ವೃವಸಾಯ ಇಲಾಖೆಯ ಕಂಪ್ಯೂಟರ್ಗಳನ್ನು ವಹಿಸಿಕೊಂಡು ವಂಚನೆ ಮಾಡಿ ಅಲ್ಲಿ ಕೂಡ ಉನ್ನತ ಸ್ಥಾನಗಳಲ್ಲಿ ದಾಕ್ಷಿಣ್ಯ ರೋಗ ಎಷ್ಟೊಂದು ಪ್ರಬಲವಾಗಿದೆಯೆಂಬುದನ್ನು ತೋರಿಸಿಕೊಟ್ಟ. ಅತ್ಯುನ್ನತ ಸ್ಥಾನದಲ್ಲಿದ್ದ ಅಧಿಕಾರಿಯೊಬ್ಬರು ಕೂಡ ಈ ಧೂರ್ತನಿಂದ ಬಟ್ಟೆಯ ಉಡುಗೊರೆ ಪಡೆದಿದ್ದನಂತೆ. ಬೆಲ್ಲಿಸಾಲ್ ನಂಥ ಪ್ರಮುಖ ವ್ಯಕ್ತಿ ಬಟ್ಟೆ ಕೊಡಿಸಲು ಮುಂದೆ ಬಂದಾಗ ಬೇಡವೆನ್ನುವುದು ಹೇಗೆ ಎಂಬ ದಾಕ್ಷಿಣ್ಯದಿಂದ ತೆಗೆದು ಕೊಂಡನಂತೆ, ಪಾಪ!

ನಮ್ಮಲ್ಲಿ ಇಂಥ ದಾಕ್ಷಿಣ್ಯವಂತರು ಹೆಜ್ಜೆ ಹೆಜ್ಜೆಗೂ ಸಿಗುತ್ತಾರೆ. ಅವರ ಕೈತ್ಯಗಳು ಅಗೊಮ್ಮೆ ಈಗೊಮ್ಮೆ ಬೆಳಕಿಗೆ ಬಂದರೆ ನೂತ್ರ ಗದ್ದಲವೇ ಗದ್ದಲ! ಉದರೆ ಹೆಚ್ಚಾಗಿ ಅವು ಸದ್ದಿಲ್ಲದೆ, ಬೆಳಕಿಗೆ ಬಾರದೆ ನಡೆಯುತ್ತಲೇ ಇರುತ್ತವೆ.

ಈ ದಾಕ್ಷಿಣ್ಯ ರೋಗ ಪ್ರಬಲಿಸಿದಂತೆ ಅಳಿದು ಹೋಗುವ ಒಂದು ಅಂಶವೆಂದರೆ ನ್ಯಾಯ ಬುದ್ಧಿ. ಕಾನೂನು, ನ್ಯಾಯ ನಿಷ್ಠೆಗಳನ್ನು ಹೆತ್ತಿಕ್ಕಲು ದಾಕ್ಷಿಣ್ಯ ಒಂದು ಒಳ್ಳೆಯ ನೆಪ ಆಥವಾ ಸಾಧನ.

ದೊಡ್ಡವರನ್ನು ಮೆಚ್ಚಿಸಲು ಅಧಿಕಾರಿಗಳು ಕಾನೂನಿನ ಗೆರೆಯನ್ನು ದಾಟುವುದು ದಾಕ್ಷಿಣ್ಯದಿಂದ. 'ಅಂಥವರು' ಖುದ್ದಾಗಿ ಬಂದು ಕೇಳುವಾಗ ಅಲ್ಲವೆನ್ನಲಾಗುತ್ತದೆಯೇ ಎಂಬ ಈ ದಾಕ್ಷಿಣ್ಯದ ಹಿನ್ನೆಲೆಯಲ್ಲಿರುವುದು ಸ್ವಪ್ರಯೋಜನವೆಂಬ ಮಾತು ಬೇರೆ.

ಈ ದಾಕ್ಷಿಣ್ಯ ಪುಂಡರು ಪೋಕರಿಗಳಿಗೆ ಕಾನೂನನ್ನು ಉಲ್ಲಂಘಿಸಲು ಬಿಡುತ್ತದೆ. ದುಷ್ಕೃತ್ಯಗಳನ್ನು ಕಂಡೂ ಕಾಣದಂತೆ ಇರುತ್ತದೆ.

ಅಕ್ರಮ ಸ್ವತಿ ಫಲ ಪಡೆಯಲು ಎಡೆ ಮಾಡಿಕೊಡುತ್ತದೆ. ಕಾಳ ಸಂತೆ, ಲಾಭಬಡಕತನ, ಕಾರ್ಯದಲ್ಲಿ ಶ್ರದ್ಧೆ ಹೀಗೆ ಹತ್ತು ಹಲವು ವಂಚನೆಗಳು ದಾಕ್ಷಿಣ್ಯವಂತರಿಂದಲೇ ಬಲಿಯುತ್ತದೆ. "ಹಾಳಾಗಿ ಹೋಗಲಿ, ಸತ್ತುಕೊಂಡು ಹೋಗಲಿ" ಎಂಬ ಔದಾರ್ಯದ ಶಾಪಗಳಿಂದ ತೃಪ್ತನಾಗಿ ದಾಕ್ಷಿಣ್ಯವಂತ ಜನಪ್ರಿಯನೆನ್ನಿಸಿಕೊಳ್ಳುತ್ತಾನೆ. ಕೆಲವು ಕಾಯಿಲೆಗಳಿಗೆ ಜಲದಾಹವಾದರೆ ಈ ದಾಕ್ಷಿಣ್ಯ ರೋಗಕ್ಕೆ ಮೆಚ್ಚುಗೆಯ ದಾಹ. ನ್ಯಾಯ ನಿಷ್ಠೆ ಅಷ್ಟು ಮುಖ್ಯವಲ್ಲ. 'Popular' ಎನಿಸಿಕೊಳ್ಳಬೇಕೆಂಬ ಚಪಲ.

ಜನ ಮೆಚ್ಚುವುದು ಉಂಥವರನ್ನೇ. ಸ್ವಕಾರ್ಯ ಸಿದ್ಧಿಯಾಗ ಬೇಕಾದರೆ ಎಷ್ಟೋ ಸಲ, ನಾವೇ ನಿರ್ಮಿಸಿದ ನಿಯಮ ನಿಬಂಧನೆಗಳನ್ನು ಮೀರಿ ಸಹಕರಿಸಬಲ್ಲ ದಾಕ್ಷಿಣ್ಯವಂತರೇ ನಮಗೆ ಬೇಕು. ನ್ಯಾಯ ನಿಷ್ಠುರತೆಯಿಂದ ನಮ್ಮ ಕೆಲಸವಾಗದೆ ಹೋಗಬಹುದು. ಆದ್ದರಿಂದ ನಿರ್ದಾಕ್ಷಿಣ್ಯ ಪುರ್ವತ್ತಿ ನ್ಯಾಯ ನಿಷ್ಠುರತೆ ನಮಗೆ ಒಂಟಿಸಿಸಲೂ ಬಹುದು. ಆದುದರಿಂದಲೇ ಕಾನೂನಿನ ಗೆರೆಯನ್ನು ವಿಜೃಂಭಿಸುವವನು ಹಲವರಿಗೆ ಮುಳ್ಳಾಗಿ ಕಂಡು ಬರುತ್ತಾನೆ. 'unpopular' ಎನಿಸುತ್ತಾನೆ ನಮಗೆ ಬೇಕು 'Popular' ಇಸಮಗಳು. ಹೇಗೆ ಬೇಕೋ ಹಾಗೆ ಗಾಳಿ ಬಂದಂತೆ ತೂರಿಕೊಳ್ಳುವವರು, ಎಂದರೆ ದಾಕ್ಷಿಣ್ಯವಂತರು.

ಕೆಲವರು ದೊಡ್ಡ ಮನುಷ್ಯರಿರುತ್ತಾರೆ. ವಿಷಯ ತಿಳಿದಿರಲಿ, ಇಲ್ಲದಿರಲಿ ಉಪನ್ಯಾಸ ಕೊಡಲು ಒಪ್ಪಿಕೊಳ್ಳುತ್ತಾರೆ. ಯಾವುದೆ ಸಭೆಗೆ ಅಧ್ಯಕ್ಷರಾಗಲು ಒಪ್ಪುತ್ತಾರೆ ಏಕೆ ದಾಕ್ಷಿಣ್ಯದಿಂದ ಹೊರಗಂತ ಅವರೇ ಹೇಳಿಬಿಡುತ್ತಾರೆ. ಪ್ರಾರಂಭದಲ್ಲೇ 'ನಾನು ಈ ವಿಷಯದಲ್ಲಿ ಮೂರನಾಡಲು ಅರ್ಹತೆಯುಳ್ಳವನಲ್ಲ, ಅಧವಾ ಇಂದಿನ ಸಭೆಯ ಅಧ್ಯಕ್ಷ ಪೀಠವನ್ನಲಂಕರಿಸಲು ತಕ್ಕವನಲ್ಲ. ಆದರೂ ಕಾರ್ಯದರ್ಶಿಯ ಒತ್ತಾಯಕ್ಕೆ ಒಪ್ಪಿದೆ" ಎಂದು ಮುಂತಾಗಿ ಹೇಳಿ ಅನಂತರ ತಿಳಿಯದ ವಿಷಯದ ಕುರಿತು ತಿಳಿದವರಂತೆ ಆಡ ತೊಡಗುತ್ತಾರೆ. ಸಂಗೀತ, ಸಾಹಿತ್ಯ, ಕಲೆ ಪತ್ರಿಕೋದ್ಯೋಗ, ಕೋಳಿ ಸಾಕಣೆ—ಹೀಗೆ ಯಾವುದೇ ವಿಷಯದ ಕುರಿತು ಆ ದೊಡ್ಡ ಮನುಷ್ಯರು ಘನವಾದ ಮಾತುಗಳನ್ನಾಡುವಾಗ ಸಭಿಕರಲ್ಲಿ ಕೆಲವರಿಗಾದರೂ ಅವಿಲ್ಲ ಅಸಂಬದ್ಧವೆಂದು ತಿಳಿದಿರುತ್ತದೆ. ಆದರೂ ಅವರು ತಾಳಿಕೊಳ್ಳುತ್ತಾರೆ ಏಕೆ? ದಾಕ್ಷಿಣ್ಯದಿಂದ ಪೆಚ್ಚಿನ ಮಂದಿ ದೊಡ್ಡ ಮನುಷ್ಯರು ಆಡಿಸ್ಟೆಲ್ಲ ಸತ್ಯವೆಂದೇ ನಂಬಿರುವವರಾದುದರಿಂದ ಅಂಥ ಸಭೆಗಳನ್ನು ಮತ್ತೆ ಮತ್ತೆ ಏರ್ಪಡಿಸಿ ಜಜ್ಞಾನ ವೃಕ್ಷವನ್ನು ಬೆಳೆಸಲು ದಾಕ್ಷಿಣ್ಯ ಪಡುವುದಿಲ್ಲ, ಸಂಬಂಧಪಟ್ಟವರು. ದಾಕ್ಷಿಣ್ಯದಿಂದ ನಾವು ಏನೇನೆಲ್ಲ ತಾಳಿಕೊಳ್ಳುವೆವಂತೆ, ಅಜ್ಞಾನವನ್ನೇಕೆ ತಾಳಿಕೊಳ್ಳಬಾರದು?

ನಮ್ಮ ದೇಶದಲ್ಲಿ ಮಾತ್ರವಲ್ಲ ಪ್ರಜಾಪ್ರಭುತ್ವವಿರುವೆಡೆಯಲ್ಲೆಲ್ಲ ದಾಕ್ಷಿಣ್ಯ ಬಹಳ. ಹೆಸರನ್ನು ತುಳಿದು ಮೇಲೇರಲು, ತಮಗೆ ಸಲ್ಲತಕ್ಕದ್ದಲ್ಲವನ್ನು ಬಾಚಿ ಬಗರಿ ಬಗಲಿಗೆ ಹಾಕಿಕೊಳ್ಳಲು ದಾಕ್ಷಿಣ್ಯವಿಲ್ಲದಿದ್ದರೂ, ಕರ್ತವ್ಯ ಪಾಲನೆಗೆ, ನ್ಯಾಯಾನ್ಯಾಯವಲಂಬನೆಗೆ ಈ ದಾಕ್ಷಿಣ್ಯರೋಗದಿಂದ ವ್ಯಕ್ತಿಗಾಗಲೀ, ಸವಾಜಕ್ಕಾಗಲೀ ಸರಕಾರಕ್ಕಾಗಲೀ ಬಲು ಅಪಾಯಕರ. ಪ್ರಜಾಪ್ರಭುತ್ವ ಪದ್ಧತಿಗಂತೂ ಕೊಡಲಿಯೇಟೇ ಸರಿ ಎಂಬುದನ್ನು ನಾವು ತಿಳಿದಿರಬೇಕು.

Telephone: 140

With best compliments from:

HOTEL KALPANA

UP-TO-DATE BOARDING, LODGING & RESTAURANT,

UPENDRA BAUG, UDIPI, S. K.

Catering for Big Parties Is Our Speciality.

Hotel Kalpana



ಭಾರತೀಯ ಚಿತ್ರಕಲೆಯ ನೂರು ವರ್ಷಗಳ ಒಲವು

ಸಾಂಪ್ರದಾಯಿಕ ಮತ್ತು ನವ್ಯ ಚಿತ್ರಕಲಾ ಪರಂಪರೆಗಳ ಸಂಧಿಕಾಲದಲ್ಲಿ ಭಾರತದ ಚಿತ್ರಕಲೆಯು ನೂರು ವರ್ಷಗಳಲ್ಲಿ ಪೂರೈಸಿದ ಪಥವನ್ನು ಸಿಂಹಾವಲೋಕಿಸಿದರೆ ಅಸಮಂಜಸವಲ್ಲ. ಸ್ವತಂತ್ರ ಭಾರತದ ಚಿತ್ರಕಲೆಗೆ ಅದು ಸೂಕ್ತ ಮಾರ್ಗದರ್ಶನ ಮಾಡಬಲ್ಲದು.

ಲೇಖಕರು: ಶ್ರೀ ಕೃಷ್ಣಾನಂದ ಹೆಗ್ಡೆ, ಹೊಸದಿಲ್ಲಿ.

ಆಧುನಿಕ ಭಾರತೀಯ ಚಿತ್ರಕಲೆಯ ಸ್ವರೂಪವೇನು, ಅದರ ವೈಶಿಷ್ಟ್ಯಗಳೇನು ಎಂದು ತಿಳಿಯುವ ಕುತೂಹಲವಿದ್ದವರು ದಿಲ್ಲಿಯಲ್ಲಿರುವ ಆಧುನಿಕ ಚಿತ್ರಕಲೆಯ ರಾಷ್ಟ್ರೀಯ ಗ್ಯಾಲರಿಗೆ ಒಮ್ಮೆ ಭೇಟ್ಟಿ ಕೊಡಬೇಕು. ೧೯೫೪ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯಲ್ಲಿ ಈಗ ೩೦೫೬ಕ್ಕೂ ಮಿಕ್ಕಿ ಚಿತ್ರ ಸಂಗ್ರಹವಿದೆ. ಕಳೆದ ನೂರು ವರ್ಷಗಳ ಭಾರತೀಯ ಚಿತ್ರಕಲೆಯ ಬೆಳವಣಿಗೆಯನ್ನು ಪ್ರಾತಿನಿಧಿಕವಾಗಿ ತೋರಿಸುವ ಸಂಗ್ರಹವಿದು.

ಅನ್ಮತಾ ಶೆರ್ ಗಿಲ್ಲರಿಂದ ಹಿಡಿದು ರವೀಂದ್ರನಾಥ ಠಾಕೂರ್, ನಂದಲಾಲ ಬೋಸ್, ಅವನೀಂದ್ರನಾಥ ಠಾಕೂರ್, ಜಾಮಿನಿ ರಾಯ್, ಡಿ. ಪಿ. ರಾಯ್ ಚೌಧುರಿ, ಸುಧೀರ್ ಖಸ್ತಗೀರ್ ಮೊದಲಾದ ಎರಡು ಕೃತಿಗಳು ಇಲ್ಲಿವೆ.

ಹೆಬ್ಬಾರ್, ಮೈಸೂರಿನ, ಕುಲಕರ್ಣಿ, ಆರಾ, ಗೂಜ್ರಾಲ್, ಜೇಂದ್ರೆ, ಅವಿನಾಶ ಚಂದ್ರ, ರಾಮಕುಮಾರ್ ಇತ್ಯಾದಿ ಭಾರತದ ಅಗ್ರಗಣ್ಯ ಕಲಾಕಾರರು ತಮ್ಮ ನವ್ಯ ಕೃತಿಗಳಲ್ಲಿ ಸ್ಪಷ್ಟವಾಗಿರುವ ಭಾವಗಳಿಗೆ ಪ್ರೇರಣೆ ಎಲ್ಲಿಂದ ಬರುತ್ತದೆ? ಈ ಪ್ರೇರಣೆ ಭಾರತೀಯವಾದುದೇ? ವಿದೇಶೀಯವಾದುದೇ? ಇವರ ಕೃತಿಗಳಲ್ಲಿ ಭಾರತೀಯತನ ಎಷ್ಟರ ಮಟ್ಟಿಗಿದೆ?

ಇವೆಲ್ಲ ಪ್ರಶ್ನೆಗಳನ್ನು ಜಿಜ್ಞಾಸಿಸಲು ಇಲ್ಲಿ ಅವಕಾಶ ಸಾಲದು. ಆಧುನಿಕ ಚಿತ್ರಕಲೆಯ ಬೆಳವಣಿಗೆಯ ಏಣಿಮುಖ್ಯ ಘಟ್ಟಗಳೇನು ಎನ್ನುವುದನ್ನು ಮಾತ್ರ ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಆಧುನಿಕ ಭಾರತೀಯ ಚಿತ್ರಕಲೆಯ ವಿಕಾಸವನ್ನು ತಿಳಿಯಲಿಕ್ಕಾಗಿ ನಾವು ಎರಡು ಶತಮಾನಗಳಷ್ಟು ಹಿಂದೆ ಹೋಗುವುದು ಉತ್ತಮ.

ಹದಿನೆಂಟನೆಯ ಶತಮಾನದಲ್ಲಿ ಮೊಗಲರ ಆಸ್ಥಾನದಲ್ಲೂ, ರಜಪೂತ ಸಂಸ್ಥಾನಗಳಲ್ಲೂ ಚಿತ್ರಕಲೆಗೆ ಪ್ರೋತ್ಸಾಹ ದೊರಕುತ್ತಿದ್ದುದರಿಂದಾಗಿ, ರಜಪೂತ ಚಿತ್ರಕಲಾ ಪದ್ಧತಿ ಎಂಬ ಪ್ರತ್ಯೇಕವಾದ ಪದ್ಧತಿ ಬೆಳೆದು ಬಂದಿತು. ಇದೊಂದು ಹೊಸ ಪದ್ಧತಿಯೇನೂ ಆಗಿರಲಿಲ್ಲ. ಅದರ ಇದು ಆಗ ಪಶ್ಚಿಮ ಭಾಗದಲ್ಲಿ ಪ್ರಚಲಿತವಾಗಿದ್ದ ಜೈನ ಪದ್ಧತಿ ಹಾಗೂ ಮೊಗಲರಿಂದಾಗಿ ಬಳಕೆಗೆ ಬಂದ ಪರ್ಷಿಯನ್ (ಸುಫಾವಿದ್) ಪದ್ಧತಿಗಳನ್ನು ಹೊಂದಿಸಿಕೊಂಡು ರೂಢುವಳೆಸಿದ ಪದ್ಧತಿಯೇ ಆಗಿತ್ತು. ರಸಿಕ ಪ್ರಿಯ, ರಸ ಮಂಜರಿ, ರಾಗ ಮಾಲ ಮೊದಲಾದ ಕೃತಿಗಳಿಗೆ ಚಿತ್ರಗಳನ್ನು ಬರೆಯುವುದರಲ್ಲಿ ಈ ಪದ್ಧತಿಗೆ ಸೇರಿದ ಕಲಾಕಾರರು ಹೆಚ್ಚಿನ ಆಸಕ್ತಿ ವಹಿಸಿದ್ದರು. ರಾಧೆ ಮತ್ತು ಕೃಷ್ಣನ ಪ್ರೇಮ ಸನ್ನಿವೇಶವನ್ನು ಅಂದಿನ ಚಿತ್ರಕಾರರು ನಮನೀಯವಾಗಿ, ನಾಜೂಕಾಗಿ ರೂಪಿಸುತ್ತಿದ್ದರು. ವಿಷಯಕ್ಕೆ ತಕ್ಕಂತೆ (ಉದಾ: ಕಾಳಿಯ ಮರ್ದನ, ರಾಸ ಲೀಲೆ) ರಸವತ್ತಾಗಿ ಬಣ್ಣಗಳನ್ನು ಉಪಯೋಗಿಸುವುದು ಇವರ ವೈಶಿಷ್ಟ್ಯವಾಗಿತ್ತು. ಆ ಕೃತಿಗಳು ಗುಂಡು ಗುಂಡಾಗಿದ್ದುವು. ಭಾವುಕತೆ ಹಾಗೂ ವರ್ಣ ಸಂಯೋಜನೆ ಅಂದಿನ ಕೃತಿಗಳಲ್ಲಿ ಎದ್ದು ಕಾಣುತ್ತಿತ್ತು. (ಉದಾ: ರಾಮದೇವ, ಗರುಡನ ಮೇಲೆ ಕೂತ ವಿಷ್ಣು. ಕುದಿಯುತ್ತಿರುವ ರಾಜ ಕುಟುಂಬ).

ಆದರೆ ಔರಂಗಜೇಬ ಪಟ್ಟಕ್ಕೆ ಬಂದೊಡನೆ ರಜಪೂತ ಚಿತ್ರಕಲಾ ಪದ್ಧತಿ ನಶಿಸತೊಡಗಿತು. ಅವರಂಗಜೇಬ ಕಲಾಕಾರರಿಗೆ ಹಾಗೂ ಸಂಸ್ಕೃತಿಯ ಪೂಜಾರಿಗಳಿಗೆ ಯಾವ ಆಶ್ರಯವನ್ನೂ ಕೊಡಲಿಲ್ಲ. (ತುಂಬ ಜಿಗುಟಾಗಿದ್ದ ಆತ್ಮಬುದ್ಧಿನಿನ ಪ್ರತಿಗಳನ್ನು ಶಾನೇನಕಲು ತೆಗೆದು, ಸೂರಿಟ ಮಾಡಿ ಹಣ ಕೂಡಿಡುತ್ತಿದ್ದ.) ಹೀಗಾಗಿ ಚಿತ್ರಕಾರರು ಪಂಜಾಬಿನ ಗುಡ್ಡ ಪ್ರದೇಶಗಳ ಸಂಸ್ಥಾನಗಳಲ್ಲಿ ಮರೆಹೊಕ್ಕರು. ಪಂಜಾಬಿನ ಬಸೋಲಿಯಲ್ಲಿ ೧೬೭೫ರ ಸುಮಾರಿನಲ್ಲಿ ನಡುವೆ ರಾಜಾ ಕೃಪಾಲ ಪಾಲನ ಆಶ್ರಯದಲ್ಲಿ ಚಿತ್ರಕಾರರು ಹಲವಾರು ಉತ್ತಮ ಕೃತಿಗಳನ್ನು ರಚಿಸಿದರು. ಇವರ ಕೃತಿಗಳಿಂದಾಗಿ ಹೊಸತೊಂದು ಚಿತ್ರಶೈಲಿ ಬೆಳೆಯಿತು. ಅದೇ ಕಾಂಗ್ರಾ ಚಿತ್ರಕಲಾ ಪದ್ಧತಿ.

ಕಾಂಗ್ರಾ ಶೈಲಿಯಲ್ಲಿ ರಜಪೂತ ಮತ್ತು ಮೊಗಲ್ ಪದ್ಧತಿಗಳ ಸಂಯೋಜನೆಯಿದೆ. ರಜಪೂತ ಶೈಲಿಗೆ ಸೇರಿದ ಭಾವುಕ ಚಿತ್ರಣ ಕಾಂಗ್ರಾ ಶೈಲಿಯಲ್ಲೂ ಮುಂದುವರಿದುದನ್ನು ನಾವು ಕಾಣುತ್ತೇವೆ. ಪಂಜಾಬಿನಲ್ಲಿರುತ್ತಿದ್ದ ಗುಲೇರ್, ಭರ್ಮಾಲ, ಚಂಬಾ, ಜಮ್ಮೂ-ನೂರ್ಪುರ, ಬಿಲಾಸಪುರ, ಮತ್ತು ಕಾಂಗ್ರಾ ಪ್ರದೇಶಗಳಲ್ಲಿಈ ಪದ್ಧತಿ ಜನಪ್ರಿಯವಾಗಿ ಬಳಕೆಗೆ ಬಂದಿತು. ಚಿತ್ರಕಾರರು ರಸಿಕಪ್ರಿಯ, ರಸಮಂಜರಿ, ರಾಗಮಾಲ ಮೊದಲಾದ ಕೃತಿಗಳಿಗೆಚಿತ್ರಾಲಂಕಾರವೆಂಬ ಪುಟಗಳಲ್ಲಿ ನಿರತರಾಗಿದ್ದರು. ಗ್ಯಾಲರಿಯಲ್ಲಿ ಈ ಶೈಲಿಗೆ ಸೇರಿದ ವಿವಿಧ ರಾಗ ಮಾಲಿಕೆಗಳ ಚಿತ್ರಗಳಿವೆ. ಮಾಲಕಂಸ, ತೋಡಿ, ಇತ್ಯಾದಿ ರಾಗ ಮಾಲಿಕೆಗಳಿಗೆ ಮೂರ್ತ ರೂಪ ಕೊಟ್ಟು ವರ್ಣಾಲಂಕಾರದಿಂದ ಸಜ್ಜುಗೊಳಿಸಿದ ಕಾಂಗ್ರಾ ಚಿತ್ರಗಳು ಭಾರತೀಯ ಚಿತ್ರಕಲೆಯಲ್ಲಿ ಒಂದು ಘಟ್ಟವನ್ನು ಸೂಚಿಸುತ್ತವೆ.

ರಾಜಕೀಯ ಕಾರಣಗಳಿಂದಾಗಿ ಕಾಂಗ್ರಾ ಶೈಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಅಸ್ತಿಕ್ಕೆತವಾಗಿ ಅಂತ್ಯ ಕಂಡಿತು.

ದಕ್ಷಿಣ ಭಾರತದಲ್ಲಿ ಚಿತ್ರಕಲೆಗೆ ವಾಸ್ತವಿಕತೆಯ ರೂಪಕೊಟ್ಟು ರವಿವರ್ಮ ಈ ಕಾಲದಲ್ಲಿ ಬೆಳಕಿಗೆ ಬಂದನು. ಈತನ ಪರಂಪರೆ ಕುಂಬಾ ಜನಪ್ರಿಯವೂ ಆಯಿತು.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಬಂಗಾಳ ಕಲೆಯ ಪುನರುತ್ಥಾನದ ಕ್ಷೇತ್ರವಾಗಿ ಮೂಡಿಬರುತ್ತದೆ. ಆಧುನಿಕ ನವೋತ್ಥಾನ ಕ್ರಾಂತಿ ಇಲ್ಲಿ ಆರಂಭವಾದಂತೆ ಚಿತ್ರ ಕಲೆಯ ಕ್ರಾಂತಿಯೂ ಇಲ್ಲೇ ನೆಲೆಯಾಯಿತು ಇಂದು ಬಂಗಾಳೀ ಚಿತ್ರ ಶೈಲಿ ಎಂದ. ಕರೆಯಲ್ಪಡುವ ಈ ಪದ್ಧತಿಯು ಸ್ವರೂಪವೇನು?

ಬಂಗಾಳದ ಜನತೆಯಲ್ಲಿ ಬೌದ್ಧಿಕ ಕ್ರಾಂತಿ ನಡೆಯುತ್ತಿದ್ದ ಕಾಲವದು. ಜೀವನದ ಹಳೆಯ ಮೌಲ್ಯಗಳೆಲ್ಲ ಜಡಲಾಗಿ ಬಾಳಿನ ವಿವಿಧ ಚಟುವಟಿಕೆಗಳಿಗೆ ಹೊಸ ಅರ್ಥ ಕಲ್ಪಿಸಬಯಸುತ್ತಿದ್ದ ಕಾಲವದು. ಇಂಥ ಹೊತ್ತಿಗೆ ಅವನೀಂದ್ರನಾಥ ಠಾಕೂರ್, ನಂದಲಾಲ ಬಸು, ಕಾರಿಯಾಚರಣ ಶುಕೆಲ್, ಡಿ. ಪಿ. ರಾಯ ಚೌಧುರಿ ಮೊದಲಾದವರು ಬಂಗಾಳೀ ಕಲಾ ಪದ್ಧತಿಯ ಪ್ರತಿಪಾದಕರಾದರು.

ಭಾರತದ ಪ್ರಾಚೀನ ಕಲಾ ಪರಂಪರೆಯನ್ನು (ಅಜಂತಾದಿಂದ ಹಿಡಿದು ಕಾಂಗ್ರಾ ಚಿತ್ರಗಳ ವರೆಗೆ) ಪುನರುಜ್ಜೀವನಗೊಳಿಸಬೇಕೆಂದು ಈ ಕ್ರಾಂತಿಯ ಉದ್ದೇಶ. ಆದಕ್ಕೆ ಸಾಧ್ಯವಿದ್ದಲ್ಲಿ ಹೊಸ ಚೈತನ್ಯ ಕೊಟ್ಟು ಬೆಳಗಿಸ ಬೇಕೆಂಬು ಇನ್ನೊಂದು ಉದ್ದೇಶ.

ಚಿತ್ರಗಳಲ್ಲಿ ಪಾರಂಪರ್ಯಿಕ ಭಾವಗಳನ್ನು ಬಿಂಬಿಸಲುಸಹಾಯವಾಗುವಂತೆ ಅಂದಿನ ಬಂಗಾಳೀ ಚಿತ್ರಗಾರರು: ವಾರ್ ಕಲರ್ ತಂತ್ರವನ್ನು ಉಪಯೋಗಿಸತೊಡಗಿದರು ಈ ತಂತ್ರದೊಂದಿಗೆ ಬಿಳಿ ಬಣ್ಣವನ್ನು ಧಾರಾಳವಾಗಿಬಳಸಿಕೊಂಡಾಗ ಉದಾ: ದುಃಖ ಸೂಚಿಸಬೇಕಾದಲ್ಲಿ ಮಬ್ಬುಗತ್ತಲು, ಮುಸುಕು.) ಚಿತ್ರದ ಪರಿಣಾಮ ಗಂಭೀರವಾಗುತ್ತದೆ. ರವೀಂದ್ರನಾಥ ಠಾಕೂರರೂ ತಮ್ಮ ಕೊನೆಯ ದಿನಗಳಲ್ಲಿ ಚಿತ್ರ ರಚನೆಯಲ್ಲಿ ಕೈಯಾಡಿಸಿದರು ಆದರೆ ಇವರು ಯಶಸ್ವಿಯಾಗಲಿಲ್ಲ. ಚಿತ್ರದ ದೃಶ್ಯ ಪರಿಣಾಮಕ್ಕೆಂಥಲೂ ಭಾವ ಪರಿಣಾಮ ಮುಖ್ಯ ಎನ್ನುವುದು ಇವರ ಮನಸ್ಸಿನಲ್ಲಿದ್ದಿರಬೇಕು.

ಬಂಗಾಳೀ ಸಾಂಪ್ರದಾಯಿಕತೆಯಿಂದ ಇವತ್ತಿಗೆ ಪಾರ್ಶ್ವಾತ್ಯ ಪ್ರೇರಿತ ಅಮೂರ್ತವಾದ, ರಮ್ಯವಾದ, ಭಾವಪೂರ್ಣವಾದ, ವಾಸ್ತವವಾದ, ಪ್ರಧಾನವಾದಗಳೆತೆಗೆ ಆಧುನಿಕ ಭಾರತೀಯ ಚಿತ್ರಕಾರರ ಒಲವು ಹುಟ್ಟಿದೆ.

ಭಾರತದ ಆಧುನಿಕ ಚಿತ್ರ ಕಲೆಗೆ ನಾಂದಿ ಹಾಕಿ ಕೊಟ್ಟವರು ಒಬ್ಬರಿಬ್ಬರೆ ಮಂಜಿಳಿ. ಅಮೃತಾ ಶೆರ್‌ಗಿಲ್ ಅಕೆಯ ಹೆಸರು. ಪಾರ್ಶ್ವಾತ್ಯ ಚಿತ್ರಕಲಾ ಪದ್ಧತಿಗಳನ್ನು ಅ

(ಎಂಟನೇ ಪುಟ ನೋಡಿ)

MODERN GARAGE
UDIPI
(ESTD: 1950)
Offers
The Car owners, the service of a well equipped
SERVICE STATION
Supervision by
Technically Qualified Staff
Phone: 65.

ಅಮರ ಸರ್ದಾರ ಭಗತ ಸಿಂಘ

ಸ್ವಾತಂತ್ರ್ಯ ಭವನ ನಿರ್ಮಾಣದ ಶಿಲ್ಪಿಗಳಲ್ಲಿ ಸರ್ದಾರ ಭಗತ ಸಿಂಘರ ಸ್ಥಾನ ಅಚ್ಚಳಿತವಾದುದು. ಅವರ ಪುಣ್ಯತಿಥಿಯನ್ನು ಇಂದಿನ ದಿನ ಸ್ಮರಿಸುವುದೆಂದಿಗೂ ಅನುಚಿತವೆನಿಸದು.

ಲೇಖಕರು: ಶ್ರೀ ಶಿವಶಂಕರ, ಮದ್ರಾಸು.

ಭಗತ ಸಿಂಘ ಹಾಗೂ ಅವರ ಜೊತೆಗಾರ ಬಿ. ಕೆ. ದತ್ತರ ವಿಚಾರಣೆಯ ೧೯೨೯ರ ಮೇ ಏಳರಂದು ದಿಲ್ಲಿಯ ಸಹ ಜಿಲ್ಲಾ ನ್ಯಾಯಾಧೀಶ ಬಿ. ಎಸ್. ಪೂಲಿಯವರ ನ್ಯಾಯಾಲಯದಲ್ಲಿ ಆರಂಭವಾಯಿತು. ಆ ಸಮಯದಲ್ಲಿ ತಾತ್ಕಾಲಿಕೆ ಸಿಡಿಗುಂಡು ಬಿಸಾಡುವ ಕಾರ್ಯಕ್ಕೆ ಮುಂದಾದೆನೆಂಬುದರ ಕುರಿತು ಸ್ಪಷ್ಟ ಹೇಳಿಕೆ ಇತ್ತಿದ್ದಾರೆ. ಅವರ ಹೇಳಿಕೆಯ ಪ್ರಕಾರ, ಅವರು ಸಿಡಿಗುಂಡು ಬಿಸಾಡಿದ್ದು ಕೊಲೆ ಉದ್ದೇಶದಿಂದ ಅಲ್ಲವೇ ಅಲ್ಲ; ಆದರೆ ಬೇಜವಾಬ್ದಾರಿಯುತ ಹಾಗೂ ಸರ್ವಾಧಿಕಾರೀ ದರ್ಪದ ಆಕ್ರಮಣಕಾರರಿಂದ ಪೀಡಿಸಲ್ಪಟ್ಟಿರುವ ಭಾರತವತ್ತ ಜಗತ್ತಿನ ಗಮನವನ್ನು ಸೆಳೆಯಲಿಕ್ಕಾಗಿ ಇರುತ್ತದೆ. ನೈಜ ಘಟನೆಯೆಂದರೆ ಗುಂಡು ಸಿಕ್ಕಿರದಿದ್ದ ವಿಧಾನ ಸಭೆಯೊಳಗೆ ಬೇಂಬ್ಯಿಗೂ ಪೆಟ್ಟಾಗಿರುವದಿಲ್ಲ. ಇದರಿಂದ ಪ್ರಾಣಹಾನಿ ತಪ್ಪಿಸಲು ಪ್ರಯತ್ನಿಸಿರುವದು ಸ್ಪಷ್ಟವಾಗಿರುತ್ತದೆ. ಆದಕ್ಕಾಗಿಯೇ ವಿಧಾನ ಸಭೆಯನ್ನು ಆರಿಸಿಕೊಳ್ಳಲಾಗಿತ್ತೆಂದು ಅವರು ತಿಳಿಸಿದರು. ಯಾಕೆಂದರೆ ಅಲ್ಲಿಂದ ಲೇ ಭಾರತ ವಿರೋಧ ಕಾನೂನುಗಳು ಹೊರ ಬರುತ್ತವೆ. ಆದುವೆ 'ಭಾರತದ ಅಪಮಾನ ಹಾಗೂ ಅಸಹಾಯಕತೆಯ ಸ್ಪಷ್ಟ ಚಿಹ್ನೆಯೂ ಆಗಿದೆ.'

೧೯೩೪ ಜೂನ್ ಹದಿನೈದರಂದು ಅವರಿಬ್ಬರಿಗೂ ಆಜೀವ ಪರ್ಯಂತ ಕರಿನೀರಿನ ಶಿಕ್ಷೆ ವಿಧಿಸಲಾಯಿತು. ಆದರೆ, ಭಗತ್‌ಸಿಂಘ ಶಿಕ್ಷೆಗಾಗಿ ಇರಲಿಲ್ಲ. ಅದಕ್ಕೆಂತ ಮುಂಚೆಯೇ ಅವರ ಮೇಲೆ ತೀರ್ಪು ತಯಾರಾಗಿತ್ತು. ಐ ಏ ಸಾಂಡರ್ಸ್‌ನನ್ನು ಬ್ರಿಟಿಷ್ ಪೋಲಿಸ್ ಅಧಿಕಾರಿಯನ್ನು ಕೊಲೆ ಮಾಡಿರುವ ಆರೋಪ ಅವರ ಮೇಲೆ ಇತ್ತು. ಅದು ಲಾಹೋರ್ ಸ್ಪಕರಣವೆಂದು ಪ್ರಸಿದ್ಧವಿದೆ. ಆ 'ತಪ್ಪಿ'ಗಾಗಿ ಅವರಿಗೆ, ಇಬ್ಬರು ಜೊತೆಗಾರರೊಂದಿಗೆ, ಲಾಹೋರ್ ಕಾರಾಗೃಹದಲ್ಲಿ ೧೯೩೧ ಅಕ್ಟೋಬರ್ ಏಳರಂದು ವಿಶೇಷ ನ್ಯಾಯಾಲಯವು ಗಲ್ಲಿನ ಶಿಕ್ಷೆಯನ್ನು ವಿಧಿಸಿತು.

ಜೋಗೇಶ್ಚಂದ್ರ ಚಟರ್ಜಿಯವರ ನೇತೃತ್ವದಲ್ಲಿ ಭಗತ್ ಸಿಂಘರು ಬಂದು ನೇರಿದಾಗ ಅವರಿಗೆ ಕೇವಲ ಹದಿನೇಳು ವರ್ಷ ಪ್ರಾಯ. ಇದು ನಡೆದದ್ದು ೧೯೨೫ರಲ್ಲಿ. ಭಗತ್ ಸಿಂಘರು ರಹಸ್ಯ ಕ್ರಾಂತಿಯನ್ನಾರಂಭಿಸಲು ಆಗ ಪಾನಪುರಕ್ಕೆ ಬಂದಿದ್ದರು. ಲಾಹೋರಿನ ರಾಷ್ಟ್ರೀಯ ವಿದ್ಯಾಲಯದ ಪ್ರಾಧ್ಯಾಪಕ ಜಯಚಂದ್ರ ವಿದ್ಯಾಲಂಕಾರ ಉತ್ತಮ ಯೋಗ್ಯ ವಿದ್ಯಾರ್ಥಿಗಳನ್ನಾರಿಸಿ ಹಿಂದೂಸ್ಥಾನ ಪ್ರಜಾಪ್ರಭುತ್ವವಾದಿ ಸಂಘದ ಸದಸ್ಯರನ್ನಾಗಿ ಸೇರಿಸುತ್ತಿದ್ದರು. ಕುಟುಂಬದ ಒತ್ತಡದಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಅವರು ಪಾನಪುರದಲ್ಲಿ ಸಂಸ್ಥೆಯ ನೇತೃತ್ವವನ್ನು ವಹಿಸಿಕೊಳ್ಳಲು ಒಪ್ಪಿಕೊಂಡು ಚಟರ್ಜಿಯವರಿದ್ದಲ್ಲಿಗೆ ಬಂದಿದ್ದರು. ಬಂಗಾಲಿ ಭೋಜನ ಗೃಹದಲ್ಲಿ ಸಿಖ್ಖ್ ತರುಣನನ್ನು ಗುಪ್ತ ಪೋಲಿಸರು ಸುಲಭವಾಗಿ ಕಂಡುಹಿಡಿಯಲು ಸಾಧ್ಯವಿತ್ತು. ಅದುವೆ ಜೊತೆಗಾರರಿಗೊಂದು ಸಮಸ್ಯೆಯಾಗಿತ್ತು. ಅದನ್ನು ಪರಿಹರಿಸಲು ಒಂದು ಉಪಾಯವನ್ನು ಕಂಡುಹಿಡಿಯಲಾಯಿತು. ಪ್ರಮುಖ ಧುರೀಣ ಯಾಗೂ ಶಕ್ತಿಕೋವ್ಯವಿಯಾಗಿದ್ದ ಗಣೇಶ ಶಂಕರ ವಿದ್ಯಾರ್ಥಿ

(೧೯ನೇ ಪುಟ ನೋಡಿರಿ)

ಬೆಕ್ರವ್ಯೂಹವ ನಿಸನು ಶ್ರೀಕೃಷ್ಣ ವಿವರಿಸುತ್ತಿದ್ದಾಗ ತಾಯಿಯ ಗರ್ಭದಿಂದಲೇ ಅಭಿಮನ್ಯು 'ತೂ'ಗುಡುತ್ತಿದ್ದನಂತೆ, ಇಂದು ಭಾರತ ಪುನಃ ಚಕ್ರವ್ಯೂಹದಲ್ಲ ಸಿಲುಕಿಕೊಂಡಿದೆ. ಒಂದೆಡೆಯಿಂದ ಚೈನಿ ಕಮ್ಯೂನಿಸ್ಟರು, ಇನ್ನೊಂದೆಡೆಯಿಂದ ಪಾಕಿಸ್ತಾನಿಗಳು, ಒಳಗೆ ಬಂದು ಸೇರಿಕೊಂಡಿರುವ ಅನ್ಯ ಮತ ಪ್ರಸಾರಕರು, ಇಲ್ಲಿರುವ ಕಮ್ಯೂನಿಸ್ಟರು, ಪಾಕಿಸ್ತಾನೀ ಮನೋಭಾವನೆಯ ಮತಾಂಧರು, ನಾಡಿನಲ್ಲಿ ಭಾಷಾ-ಪ್ರದೇಶ ದುರಭಿಮಾನಿಗಳು ಮತ್ತೆ ಬಣಪ್ರಿಯರು ಸೂಕ್ಷ್ಮಮುಖ್ತಾ ವ್ಯೂಹ ರಚಿಸಿರುವರು. ನಮ್ಮ ಕರ್ತವ್ಯವೇನು? ನಮ್ಮ ಅಭಿಮನ್ಯುಗಳಿಗೆ [ಗರ್ಭದಲ್ಲೇ ಇರುವ] ಈ ವ್ಯೂಹ ರಚನೆಯ ಕುರಿತು ತಿಳಿಸಿ ತಯಾರಿ ನಡೆಸಲು ಇದು ಸಮಯವಿರುವದಿಲ್ಲ;

ಶೇರ ಶಿವಾಜಿಗೆ ಬಾಲ್ಯದಲ್ಲೇ ತಾಯಿಯು ವೀರ ಪುರುಷರ ಧೀರ ಕಥೆಗಳನ್ನು ಹೇಳುತ್ತಿದ್ದರಂತೆ. ತನ್ನ ಮಗನೂ, ಭಾರತಾಂಬೆಯು ಮಹಾ ಪುರುಷನಾಗುವದಕ್ಕೆಂತೂ ಭಾರತಕ್ಕೆ ಬಂದೊದಗಿರುವ ಕಾತ್ತು ಪರಿಹಾರವಾಗಬೇಕೆಂದುದೇ ಆ ತಾಯಿಕರುಳಿನ ಮಕದಾಸೆ. ಆಂತೆಯೇ ಆಯಿತು;

ನಾವಾವರೂ ಇದೇ ಅಭಿಮನ್ಯು, ಶಿವಾಜಿ..... ಪರಂಪರೆಯವರಲ್ಲವೇನೆ? ನಾವೂ ಭಾರತದ ಸ್ವಾತಂತ್ರ್ಯಕ್ಕೆ ಬಂದೊದಗಿರುವ ಆಪತ್ತನ್ನು ಬುಡ ಸಹಿತ ಕಿತ್ತೆಸೆಯಲಾರೆವೇ?

ಅದಕ್ಕಾಗಿ ನಾ ಸುಖ-ದುಃಖ ಮಿಶ್ರ ಪರ್ವ ಕಾಲದಲ್ಲಿ ನಾವೂ ವೀರ ಮಹಾ ಪುರುಷರನ್ನು ಜ್ಞಾಪಿಸಿಕೊಳ್ಳುವದೊಳ್ಳೆಯದು. ಅದರಲ್ಲೂ ಆ ಕಾರ್ಯದಲ್ಲಿ ತನುಮನ ಭಾಗವಹಿಸುವ ಸುಸಂದರ್ಭ ದೊರೆತಿರುವ ಕ್ರಾಂತಿಕಾರರು ಬರೆದಿರುವ ಘಟನೆಯನ್ನು ಜ್ಞಾಪಿಸಿಕೊಂಡಷ್ಟೆ ಸರಾಕ್ರನು ತಾನಾಗಿಯೇ ಮುಂದಕ್ಕೆ ಬಂದೀತು ಆದಕ್ಕಾಗಿ ಇಲ್ಲಿ ಕ್ರಾಂತಿಕಾರರ ಪೀಳಿಗೆಯಲ್ಲಿ ಬಾದಿರುವ ಶ್ರೀ ಜೋಗೇಶ್ಚಂದ್ರ ಚಟರ್ಜಿಯವರು ಬರೆದಿರುವ ಲೇಖನವನ್ನಿಲ್ಲಿ ಕೊಡಲಾಗುತ್ತದೆ.

ಭಾರತದ ಸ್ವಾತಂತ್ರ್ಯ ಸಮರದಲ್ಲಿ ರಾಷ್ಟ್ರೀಯ ಯೋಧನೆಂಬ ಜಚ್ಚಳಿಯದ ಗುರುತನ್ನು ಸರ್ದಾರ ಭಗತ್ ಸಿಂಘರವರು ಮೂಡಿಸಿ ಹೋಗಿರುವರು. ಅವರು ತಮ್ಮ ಮೂವ ಶೂರ ಸ್ವ(ಸರ್ದಾರ ಅಜಿತ ಸಿಂಘರವರ ಹೆಜ್ಜೆಗಳನ್ನೇ ಹಿಂಬಾಲಿಸಿದವರು. ಸರ್ದಾರ ಅಜಿತ ಸಿಂಘರವರು ಭಾರತದ ಖ್ಯಾತ ರಾಷ್ಟ್ರೀಯ ಮುಂದಾಳಾಗಿದ್ದರು. ಲಾಲಾ ಲಜಪತರಾಯ್ ರೊಂದಿಗೆ ಸರ್ದಾರ ಅಜಿತ ಸಿಂಘರನ್ನು ಬರ್ಮಾದ ಮಾಂಡಲೆ ಕಾರಾಗೃಹಕ್ಕೆ ಬ್ರಿಟಿಷರು ಕಳಿಸಿದ್ದರು.

೧೯೨೦ ಎಪ್ರಿಲ್ ಎಂಟರಂದು ಸರ್ದಾರ ಭಗತ ಸಿಂಘರು ಸ್ನೇಹಿತ ಭಟುಕೇಶ್ವರ ದತ್ತರೊಂದಿಗೆ ಕೇಂದ್ರೀಯ ವಿಧಾನ ಸಭೆಯ (ಈಗಿನ ಲೋಕ ಸಭೆ) ಒಳಗೆ ಹೋಗಿ ಸಿಡಿಗುಂಡು ಹಾರಿಸಿ, ಕ್ರಾಂತಿಕಾರಕ ಸಾಹಿತ್ಯಗಳನ್ನು ಹಂಚಿದಾಗ ಜನತೆಯ ಗಮನವೆಲ್ಲ ಅವರು ಗುರಿಯಾದರು. ಲೋಕ ಸಭೆಯ ಕಾರ್ಯಾಲಯವು ೧೯೨೯ ಜೂನಿನಲ್ಲಿ "ಸಿಡಿಗುಂಡು ಪ್ರಕರಣ" ಪುಸ್ತಕವನ್ನು ಪ್ರಕಟಿಸಿರುತ್ತದೆ. ಅದರಲ್ಲಿ ಅಂದು ಏನೇನು ನಡೆದಿತ್ತು, ಹಾಗೂ ಘಟನೆಯ ಹಲವಾರು ವಿವರಣೆಗಳೂ ಇವೆ.

ಸಿಡಿಗುಂಡನ್ನೆಸೆದು, ಕೈಕೋವಿಯಿಂದ ಗೋಲಿ ಹಾರಿಸಿದ ನಂತರ ಹಿಂದೂಸ್ಥಾನ ಸಮಾಜವಾದಿ ಪ್ರಜಾಪ್ರಭುತ್ವ ಸಂಘದ ಪ್ರಚಾರ ಸಾಹಿತ್ಯಗಳನ್ನು ಹಂಚಲಾಯಿತು. ಆ ಪ್ರಚಾರ ಸಾಹಿತ್ಯದಲ್ಲಿ ಸೈಮನ್ ಸಮಿತಿಯ ಪರಿಶ್ಯರಣಕ್ಕೆದ ಕುರಿತು ಪ್ರಕಟಿಸಲಾಗಿತ್ತು. ಆಗ ಕೇಂದ್ರ ವಿಧಾನ ಸಭೆಯಲ್ಲಿ ಸಾರ್ವಜನಿಕ ಸುರಕ್ಷಣಾ ಕಾನೂನು ಮತ್ತು ಔದ್ಯೋಗಿಕ ವಿವಾದ ಕಾನೂನುಗಳು ಚರ್ಚೆಗೆ ಬಂದಿದ್ದುವು. ಆ ಪ್ರಕಟಣೆಗಳಲ್ಲಿ ಅವುಗಳನ್ನು ತೀಕ್ಷ್ಣವಾಗಿತ್ತಲ್ಲದೆ ಲಾಲಾ ಲಜಪತರಾಯರ ಕೊಲೆಯು ಖಂಡನೆ ಮಾಡಲಾಗಿತ್ತು, ಮತ್ತು ವ್ಯಕ್ತಿಗಳನ್ನು ಕೊಲ್ಲಲು ಮೂಕ್ಯವೇ ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ಸೂಚಿಸಲಾಗಿತ್ತು. ಮಹಾನ್ ಸಾಮ್ರಾಜ್ಯಗಳು ನಾಶಗೊಳಿಸಲ್ಪಟ್ಟಿನೆಯೂದರೂ ತತ್ವಗಳು ಅಂತೆಯೇ ಉಳಿದಿವೆ. ಕ್ರಾಂತಿಕಾರರು ಜಯಘೋಷ ಹಾಕುತ್ತ ಮುಂದರಿದಂತೆ ರೂಢಿಪಾಹ ಆಳಿಯಿತು. ಮಾನವನಿಂದ ಮಾನವನ ದುರ್ಲಾಭ ಪಡೆಯುವಿಕೆ ನಡೆಯುವಂತಿಲ್ಲ. ಕ್ರಾಂತಿ ಕುಂಡದಲ್ಲಿ ಕೆಲ ವ್ಯಕ್ತಿಗಳ ಬಲಿದಾನವು ಎಲ್ಲರಿಗೂ ಸ್ವಾತಂತ್ರ್ಯವನ್ನು ತರಬಲ್ಲುದು." ಈ ರೀತಿ ಅವರು ಘೋಷಿಸಿದ್ದರು.

"ದೇಶಕ್ಕೆ ಕರ್ತವ್ಯವನ್ನು ನಾನು ಸಲ್ಲಿಸಿದ್ದೇನೆ"ಂದು ಅವರನ್ನು ಬಂಧಿಸಲು ಪೋಲಿಸರು ಹತ್ತಿರ ಬಂದಾಗ ಸರ್ದಾರ ಭಗತ ಸಿಂಘರು ಭವಿಷ್ಯತ್ತ್ ಸೂಚಕ ಮಾತುಗಳನ್ನಾಡಿದರು. ನಿಜವಾಗಿ ಭಗತ್ ಸಿಂಘರು ತನ್ನ ಕರ್ತವ್ಯವನ್ನೆಂದು ಮಾಡಿದ್ದರು. ಆನಂತರ ಉಳಿದದ್ದು ಬಿರುಗಾಳಿಯಂತಹ ಎಂಡೇ ಎರಡು ವರ್ಷಗಳ ಕಾರಾಗೃಹ ವಾಸ--- ದಿಲ್ಲಿಯ ವಿಧಾನ ಸಭಾ ಸಿಡಿಗುಂಡು ಪ್ರಕರಣಾ ವಿಚಾರಣೆ, ಲಾಹೋರ್ ಸಂಚಿನ ವಿಚಾರಣೆ, ಕಾರಾಗೃಹದಲ್ಲಿ ಅಧಿಕಾರಿಗಳೊಂದಿಗೆ ಚಕಾಮಕಿ, ಉಪವಾಸ ಸಂಧು. ಉಪವಾಸದಿಂದ ಒಡನಾಡಿ ಜತಿನದಾಸರ ಮರಣ, ಅದಾದ ಮೇಲೆ ರಾಜಗುರು ಮತ್ತು ಸುಖದೇವರೊಂದಿಗೆ ಗಲ್ಲುಕಂಭದ ನೇಣಿಗೆ ಕೊನೆಯ ಅರ್ಪಣೆ ಮತ್ತು ಚಿತ್ರ ಹಿಂಸೆಗೊಳಪಡಿಸಿರುವ ಅವರ ಕಳೇಬರವನ್ನು ಸಟ್ಲೇಜಿನ ದಡದಲ್ಲಿ ನಡುರಾತ್ರಿಯಲ್ಲಿ ಸಂಸ್ಕಾರಗೊಳಿಸಿರುವದು.

With the best Compliments of the Season -

Jyothi Talkies,
MANGALORE

Coming Shortly—

Sathi Shakthi (Kannada)
Kalitharoo Henne (Kannada)
Santha Thukaram (Kannada)

ಆರ್ಥಿಕ ಅಭಿವೃದ್ಧಿ ಮತ್ತು ಅಸಮಾನತೆ

ಆದಾಯ ಅಂತರಗಳನ್ನು ಕಡಿಮೆಗೊಳಿಸುವುದು ಪಂಚವಾರ್ಷಿಕ ಯೋಜನೆಯ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ಆದು ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಸಾಧನಗಳಲ್ಲೊಂದಾಗಿದೆ. ಈ ಉದ್ದೇಶವು ನೆರವೇರಿದೆಯೇ? ಆದಾಯ ಹಾಗೂ ಸಾಂಪತ್ತಿಕ ಅಂತರಗಳು ಕ್ರಮಶಃ ಕಡಿಮೆಯಾಗುತ್ತಿವೆಯೇ? ಎಂಬ ಪ್ರಶ್ನೆಗಳು ಸಹಜ.

ಈ ಬಗ್ಗೆ ಎರಡು ಅಭಿಪ್ರಾಯಗಳಿವೆ. ಒಂದು ವರ್ಗದವರು ಆರ್ಥಿಕ ಅಂತರಗಳು ಕಡಿಮೆಯಾಗಿಲ್ಲವೆಂದೂ ಇನ್ನೊಂದು ವರ್ಗದವರು ಅಂತರಗಳು ಹೆಚ್ಚುತ್ತಿವೆಯೆಂದೂ, ಶ್ರೀಮಂತ ಹಾಗೂ ಬಡವರೊಳಗಿನ ವ್ಯತ್ಯಾಸಗಳು ಅಧಿಕವಾಗುತ್ತಿವೆಯೆಂದೂ ಅಭಿಪ್ರಾಯಿಸಿರುವರು. ಇದಕ್ಕಿಂತ ಮುಖ್ಯವಾದ ಇನ್ನೊಂದು ಅಭಿಪ್ರಾಯವಿದೆ. ಆದಾಯ ಅಂತರಗಳು, ಸಾಂಪತ್ತಿಕ ಏರುಪೇರುಗಳು, ಆರ್ಥಿಕ ಪ್ರಗತಿಯ ಪ್ರೇರಕ ಶಕ್ತಿಯೂ ಹೌದು, ಇದನ್ನು ಬದಲು ಮಾಡುವುದು ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುವ ಮಾರ್ಗವಾಗಿದೆ ಎಂಬುದು ಅವರ ವಾದವಾಗಿದೆ.

ಮೊದಲಿನ ಎರಡು ಅಭಿಪ್ರಾಯಗಳನ್ನು ಒಡಿಗರಿಸಿ, ಮೂರನೆಯ ವಿಚಾರವನ್ನು ತಿಳಿಯುವುದು ಜಗತ್ಯ. ಆದಾಯ ಆಸ್ತಿಪಾಸ್ತಿಗಳ ಅಂತರ ಆರ್ಥಿಕ ಬೆಳವಣಿಗೆಯ ಉತ್ತೇಜಕ ರಕ್ತ ಎಂಬ ಭಾವನೆ ಬಲವಾಗಿ ಬೆಳೆದು ಬಂದಿರುವ ವಿಚಾರವಾಗಿದೆ. ಸಾಂಪ್ರದಾಯಿಕ ಆರ್ಥಿಕ ವಿಚಾರ ಅದನ್ನು ಪ್ರತಿಪಾದಿಸುತ್ತಾ ಬಂದಿರುತ್ತದೆ. ಈ ಪಂಥದ ಅರ್ಥಶಾಸ್ತ್ರಜ್ಞರು ಸಮಾನತೆಯನ್ನು ಈ ಕಾರಣದಿಂದಲೇ ವಿರೋಧಿಸಿದ್ದರು. ಅವರ ದೃಷ್ಟಿಯಲ್ಲಿ ಆರ್ಥಿಕ ಸಮಾನತೆಯ ಧೋರಣೆಯು ಆರ್ಥಿಕ ಅಭಿವೃದ್ಧಿಯ ಪ್ರೇರಕ ಶಕ್ತಿಗಳನ್ನು ಕುಂದಿಸುವುದು. ಆರ್ಥಿಕ ವಿಸ್ತರಣೆಯನ್ನು ಉತ್ತೇಜನಗೊಳಿಸಲು ಅಸಮಾನತೆ ಅಗತ್ಯವೆಂದು ಅವರು ಅಭಿಪ್ರಾಯ ಪಟ್ಟಿದ್ದರು. ಅವರ ದೃಷ್ಟಿಕೋನದಲ್ಲಿ ಅಸಮಾನತೆಯು ಆರ್ಥಿಕ ಬೆಳವಣಿಗೆಯ ಅನಿವಾರ್ಯ ಅಂಗವಾಗಿದೆ. (An Interpretation of Economic Backwardness-H Mynit-)

ಭಾರತದಲ್ಲಿಯೂ ಯೋಜನಾ ಬದ್ಧ ಆರ್ಥಿಕ ಬೆಳವಣಿಗೆಯನ್ನು ವಿರೋಧಿಸುವವರು ಇದೇ ಅಭಿಪ್ರಾಯದವರಾಗಿದ್ದಾರೆ. ಅವರ ಅಭಿಪ್ರಾಯದಲ್ಲಿ ಸಾಂಪ್ರದಾಯಿಕ ಆರ್ಥಿಕ ವ್ಯವಸ್ಥೆಯಲ್ಲಿ ಮೂಲ ಭೂತ ಬದಲಾವಣೆಯನ್ನು ಮಾಡುವುದು ಅವ್ಯವಸ್ಥೆಗೆ ಆಹ್ವಾನವಾಗಿದೆ; ಅಪಾಯಕ್ಕೆ ನಾಂದಿಯಾಗಿದೆ. ಅನೇಕರಲ್ಲಿ ಆರ್ಥಿಕ ಸಮಾನತೆಯು ಅತ್ಯಂತ ಅಪಾಯಕಾರಿ ನೀತಿಯಾಗಿದೆ. ಅವರ ಆರ್ಥಿಕ ನೀತಿಯಂತೆ, ಆರ್ಥಿಕ ವಿಷಮತೆಗಳು, ವಿವಿಧಗಳಲ್ಲಿ ಅವುಗಳು ಉತ್ಪಾದಕಯಂತ್ರದ ಉಪಯುಕ್ತ ಕೀಲುಗಳು. ಅಂತಹ ಸ್ಥೈರ್ಯವನ್ನು ಕೊನೆಗೊಳಿಸುವ ಆದರ್ಶ, ಅಲಂಗಾರವೆ ತತ್ವಿಯನ್ನಿಡುವ ಬಾತುಕೋಳಿಯನ್ನು ಕೊಂದಂತಾಗುವುದು." ಅಲು ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಅನುಕೂಲವಾದ ಅನುಕಾಶವನ್ನೊದಗಿಸುವುದಿಲ್ಲ. ಆದು ಸಂಪತ್ತಿನ ಮೂಲಗಳನ್ನು ಕ್ಷಯಗೊಳಿಸುವುದು. ಭಂಡವಾಳ ಸಂಚಯನವನ್ನು ಕ್ಷೀಣಗೊಳಿಸುವುದು, ಆದು ಆರ್ಥಿಕ ಸಂಘಟನೆಯನ್ನು ಅವ್ಯವಸ್ಥೆಗೊಳಿಸುವುದು, ಆದಲ್ಲದೆ ಬಹಳವಾಗಿ ಹಿಂದುಳಿದಿರುವ ಭಾರತದಂತಹ ದೇಶದಲ್ಲಿ, ಆದು ಅವಾಸ್ತವಿಕವಾದ ಧೋರಣೆಯಾಗಿದೆ. ಸಂಪತ್ತು ಕಡಿಮೆಯಾಗಿರುವುದು ನಮ್ಮ ಸಮಸ್ಯೆ, ಆದನ್ನು ಹೆಚ್ಚಿಸುವುದೇ ನಮ್ಮ ಆದರ್ಶ. ಆದುದರಿಂದ ಸಂಪತ್ತಿನ ಅಂತರಗಳನ್ನು ನಿರ್ಮೂಲಗೊಳಿಸುವ ನೀತಿಯು ಅಸಮಂಜಸವೂ ಅನರ್ಥಕ್ಕೆಯೂ ಆಗಿರುತ್ತದೆ.

ಆದರೆ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳು ಅನಭಿಪ್ರಾಯ ಹಿಂದುಳಿದ ರಾಷ್ಟ್ರಗಳ ಆರ್ಥಿಕ ನೀತಿಗೆ ಸರಿಹೊಂದುವುದಿಲ್ಲ. ಇತ್ತೀಚೆಗೆ ಸ್ವತಂತ್ರವಾಗಿರುವ ಆಫ್ರಿಕಾ ಹಾಗೂ ಆಸ್ಯಾದ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿಗಾಗಿ ತಮ್ಮದಾದ ಆರ್ಥಿಕ ಧೋರಣೆಗಳನ್ನು ಅನುಸರಿಸಬೇಕಾಗಿದೆ. ಇಲ್ಲಿ ಬಹಳ ಮುಂದುಳಿದ ಪಾಶ್ಚಾತ್ಯದೇಶಗಳ ಪಡಿಯಚ್ಚು ಪದ್ಧತಿಗಳು ಸಹಾಯಕವಾಗಲಾರವು. ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಈ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುತ್ತಾರೆ. ಗುನ್ನಾರ್ ಮಿರ್ಡಾಲ್ ತನ್ನ International Economy ಯಲ್ಲಿ ಈ ವಿಚಾರಕ್ಕೆ ಅತಿ ಹೆಚ್ಚು ಗಮನಕೊಟ್ಟಿದ್ದಾರೆ. ಡ್ಯೂಸೆನ್‌ಬೆರಿಯವರು ಸಾಂಪ್ರದಾಯಿಕ ಸಿದ್ಧಾಂತದ ತಳಪಾಯವನ್ನೇ ಶಕ್ತಗೊಳಿಸಿದ್ದಾರೆ. ಉಳಿತಾಯ, ಬಂಡವಾಳ ಸಂಚಯನವು ಶ್ರೀಮಂತ ವರ್ಗಗಳ ತ್ಯಾಗದ ಫಲವಾಗಿದೆ. ಉಳಿತಾಯ ಪ್ರವೃತ್ತಿ ಪ್ರತಿಫಲವಲ್ಲ. ಈ ತತ್ವದ ತಳಪಾಯದಲ್ಲಿ ಬೆಳೆದಿರುವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಅಲ್ಲಗಳೆದಿದ್ದಾರೆ (Duessenberry: Income Saving and The Theory of Consumer Behaviour) ಒಂದು ಸಮಾಜದಲ್ಲಿ ಉಂಟಾಗಿರುವ ಸಂಪತ್ತುಗಳ ಅಂತರ ಮಾತ್ರವಲ್ಲ, ದೇಶದೇಶಗಳಲ್ಲಿ ಉತ್ಪನ್ನವಾಗಿರುವ ಸಂಪತ್ತು-ಆದಾಯಗಳ ಅಂತರಗಳನ್ನು ಕಡಿಮೆಮಾಡುವ ಧೋರಣೆಯು ಇಂದು ಅಂತರ್ ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯ ಆದರ್ಶವಾಗಿದೆ. ಹಿಂದುಳಿದ ದೇಶಗಳ ಆರ್ಥಿಕ ಬೆಳವಣಿಗೆಯ ನೀತಿಯನ್ನು ರೂಪಿಸುವ ರಾಗ್ನರ್ ನರ್ಸ್ಕೆರಂತಹ ಅರ್ಥಶಾಸ್ತ್ರಜ್ಞರು ಇಂತಹ ಧೋರಣೆಯನ್ನು ಪ್ರತಿಪಾದಿಸಿರುವರು. ಹಿಂದುಳಿದ ದೇಶಗಳಲ್ಲಿ ಮುಖ್ಯವಾಗಿ—ಆರ್ಥಿಕ ಅಸಮಾನತೆಗಳು ಅಭಿವೃದ್ಧಿಗೆ ಅಗತ್ಯ. ಅನಿವಾರ್ಯವೆನ್ನುವುದು ಸಮಂಜಸವಲ್ಲ. ಆರ್ಥಿಕ ಪ್ರಗತಿ ಮತ್ತು ಆದಾಯ ಸಮಾನತೆಗಳು ಒಟ್ಟೊಟ್ಟಿಗೆ ಸರಿಹೋಗುವಂತಿಲ್ಲ. ಸಮಾನತೆಯನ್ನು ಸಾಧಿಸಲು ಹೋಟೆರಿ, ದೇರದ ಪ್ರಗತಿಯು ಸಾಧ್ಯವಾಗದು. ಆರ್ಥಿಕ ಬೆಳವಣಿಗೆಯನ್ನು ಮಾಡುವ ಮುಖ್ಯ ಉದ್ದೇಶವನ್ನು ಸಾಧಿಸಲು, ಸಾಂಪತ್ತಿಕ ಸಮಾನತೆಯ ಆದರ್ಶಗಳನ್ನು ತ್ಯಜಿಸಬೇಕು. ಸಾಂಪತ್ತಿಕ ಸಮಾನತೆಯ ಆದರ್ಶಗಳನ್ನೂ ಸಾಧಿಸುವ ಆದರ್ಶ ಕೇವಲ ಭ್ರಮೆ, ಮೆಚ್ಚುವ ಬೆಳವಣಿಗೆಯ ಹೊಣೆಗಾರಿಕೆಯನ್ನು ವಹಿಸಿದೆ. ವಾರ್ಷಿಕ ಯೋಜನೆಯ ರಾಷ್ಟ್ರಗಳಲ್ಲಿ ಆದಾಯ ಅಂತರಗಳು ಭಂಡವಾಳ ಸಂಚಯನಕ್ಕೆ ಕಾರಣವಾದುವು. ಹಾಗೂ ಮೂಲ ಕೈಗಾರಿಕೆಗಳಿಗೆ ಧನವನ್ನೊದಗಿಸಿದುವು ಎಂಬ ಕಾರಣದಿಂದ ಹಿಂದುಳಿದ ರಾಷ್ಟ್ರಗಳಲ್ಲಿರುವ ಸಂಪತ್ತಿನ ಅಂತರಗಳನ್ನ ಹೆಚ್ಚಿಸಬೇಕು ಆಥವಾ ಉಳಿಸಬೇಕು ಎಂಬುದು ಅಸಾಯಕಾರಿ ಅಭಿಸ್ರಾಯವಾಗಿದೆ. ಇಂತಹ ಬಡತನ ಸರಪಳಿ ಸಾದೃಶ್ಯ ಹೇಳಿಕೆ ಅಪಾಯಕಾರಿಯೂಗಿದೆ. (Kuznets: Economic Growth and Income Inequality)

ಭಾರತದಂತಹ ರಾಷ್ಟ್ರವು ಸಮಾಜದಲ್ಲಿ ಉಂಟಾಗಿರುವ ಅಂತರಗಳನ್ನು ನಿಧಾನವಾಗಿ ನಿರ್ಮೂಲ ಮಾಡುವ ಉದ್ದೇಶವನ್ನಿಟ್ಟುಕೊಂಡಿದೆ. ಆದರ ರಾಜ್ಯಾಂಗ ಘಟನೆಯು ನಿರ್ದೇಶಕ ತತ್ವಗಳೂ, ಪಂಚವಾರ್ಷಿಕ ಯೋಜನೆಗಳ ಮೂಲ ಆದರ್ಶಗಳೂ ಈ ತತ್ವವನ್ನು ಸ್ಪಷ್ಟಪಡಿಸಿವೆ. ಇದು ಎಷ್ಟರ ಮಟ್ಟಿಗೆ ಜಯಪ್ರದವಾದೀತು? ಬಹುಮಂದಿ ಕೈಗಾರಿಕೆಗಳಲ್ಲಿ ಸ್ಥಿರತಾಗದೆ ನಾಡಿನ ಆರ್ಥಿಕ ನೀತಿಯಲ್ಲಿ ಇಂತಹ ಧೋರಣೆಯು ಸಾಧ್ಯವೇ ಎಂಬ ಸಂಶಯ ಸಹಜ. ಆದು ಕೂಡಾ ಪುರಾಸತ್ಯಾತ್ಮಿಕ ತತ್ವಗಳನ್ನು ಅಂಗೀಕರಿಸುವ ಸಮಾನ ಅವಕಾಶಗಳನ್ನೀಯುವ ಸಮಾಜವ್ಯವಸ್ಥೆಯಲ್ಲಿ ಇದೆಷ್ಟು ವ್ಯವಹಾರಿಕವಾದೀತು ಎಂಬ ಸಂಶಯವು ಸಹಜವೇ ಸರಿ (Kurihara: Kujaesian Theory of Economic Development)

ಭಾರತದಂತಹ ಹಿಂದುಳಿದ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಗೆ ಸಾಂಪತ್ತಿಕ

(ಉಳಿದ ಪುಟ ನೋಡಿರಿ)

ಮತ್ತೊಮ್ಮೆ ಬಂದಿದೆ, ಆಗೋಸ್ತು 15—
ಭಾರತದ ಸ್ವಾತಂತ್ರ್ಯ ದಿನ!

ಸ್ವಾತಂತ್ರ್ಯವಿಲ್ಲದೊಡೆ
ಅರಮನೆಯೇನು?
ಸೆರೆಮನೆಯೇನು??

ಗಡಿಯಲ್ಲಿನ ಗಂಡಾಂತರವನ್ನು ಎದುರಿಸಿ ದೇಶದ ಸ್ವಾತಂತ್ರ್ಯ ರಕ್ಷಣೆಯ ಪವಿತ್ರ ಕಾರ್ಯದಲ್ಲಿ ತೊಡಗಿರುವ ನಿಮ್ಮ ಸರಕಾರಕ್ಕೆ ತನು-ಮನ-ಧನಗಳಿಂದ ಸಹಾಯ ಸಲ್ಲಿಸಿರಿ! ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಿರಿ!!

-ಕೊಪ್ಪೋರೇಶನ್ ಬೇಂಕ್-

ದಿ ಕೆನರಾ ಬೇಂಕಿಂಗ್ ಕೊಪ್ಪೋರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು — ಮಂಗಳೂರು

ವಿದ್ಯಾರಣ್ಯರು ಮತ್ತು ಅವರ ಸಾಹಿತ್ಯ ಸೇವೆ

ಕರ್ನಾಟಕ ರಾಜ್ಯ ಪ್ರತಿಷ್ಠಾಪನಾಚಾರ್ಯರೆನಿಸಿದ ವಿದ್ಯಾರಣ್ಯರದು ಅನೂನಾನತ ವ್ಯಕ್ತಿತ್ವ. ತುಂಗಭದ್ರೆಯ ತೀರದಲ್ಲಿ ವಿಜಯನಗರವನ್ನು ಕಟ್ಟಿ ರಾಜಕೀಯದಲ್ಲಿ ಹಿಂದೂಗಳ ಸಾರ್ವಭೌಮತ್ವವನ್ನು ಜಗಜ್ಜಾಹೀರುಗೊಳಿಸಿ ಹಿಂದೂ ಸಂಸ್ಕೃತಿಯ ಕೆಚ್ಚನ್ನು ಬಹಿರಂಗಪಡಿಸಿದವರು ಅವರು. ಹಾಗೆಯೇ ಸಾಹಿತ್ಯ ರಂಗದಲ್ಲಿಯೂ ಅತ್ಯದ್ಭುತ ರೀತಿಯ ಕೃಷಿಯನ್ನು ಮಾಡಿ, ಮಾಡಿಸಿ ಅಮರರಾದವರು ಅವರು.

ಲೇಖಕರು: ಶ್ರೀ ಯು. ಸಾ. ಉಡುಪ, ವಿದ್ವಾನ್.

"ವೇದಗಳು ಅಸ್ತಮಿಸಿದುವು; ನೀತಿಯು ನಶಿಸಿತು; ಧರ್ಮಕರ್ಮಗಳು ಮುಗಿದುಳ್ದು; ಶೀಲವು ಬಿನ್ನಿತು; ಪುಣ್ಯವು ಹೋಯಿತು; ಸತ್ಪುರುಷರು ಇಲ್ಲದಾಯಿತು. ಇನ್ನೇನಿನಿ? ಕಲಿಯುಗವನೊಬ್ಬನೇ ಧನ್ಯನು ಎಲ್ಲಿ ಧೀರನೆ, ವಾಸಿಸಿರತಕನೂ ತ್ರಿಲೋಕ ಕಂಟಕನೂ ಆದ ತಾರುಣ್ಯದೊಗೆಯನ್ನು ಬೇಗನೆ ಧ್ವಂಸಮಾಡಿ ರಾಮ ಸೇತುವಿನಲ್ಲಿ ನಾವಿರ ಜಯಸ್ತಂಭಗಳನ್ನು ನಿಲ್ಲಿಸುವಂತಕನಾಗು' ಇದು ಕರ್ನಾಟಕ ಮಾತೆಯ ಹೃದಯವಿದಾರಕವಾದ ಪ್ರಾರ್ಥನೆಯೂ ಹೌದು; ಮನೋನೇಧಕವಾದ ಅಪ್ಪಣೆಯೂ ಹೌದು. ಬುಕ್ಕರಾಯನ ಎರಡನೆಯ ಮಗನಾದ ಎರಡನೆಯ ಕಂಪನು ಕೊಂದ ಮಂಡಲದ ರಾಜನಾದ ಚಂಪರಾಯನನ್ನು ದ್ವಂದ್ವ ಯುದ್ಧದಲ್ಲಿ ಗೆದ್ದು ಮದುವೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಕರ್ನಾಟಕ ಮಾತೆಯು ಪ್ರತ್ಯಕ್ಷಳಾಗಿ ಮುಸಲ್ಮಾನರಿಂದ ನೇರಕ್ಕೆ ಒದಗುತ್ತಿದ್ದ ಹಾನಿಯನ್ನು ಬಣ್ಣಿಸಿ ಹೇಳಿ, ಅವನನ್ನು ಯುದ್ಧಕ್ಕೆ ಹುರಿದುಂಬಿಸಿ ಯವನ ಸಂತಾನಧ್ವಂಸಿಗಿ ಅತನಿಗೊಂದು ದಿವ್ಯ ಖಡ್ಗವನ್ನಿತ್ತಳೆಂತೆ ಇದು ಬುಕ್ಕ ರಾಜನ ರಾಜ್ಯಭಾರದ ಕಾಲದ ದಕ್ಷಿಣ ದೇಶದ ಕಂಪು ಬುಕ್ಕ ರಾಜನ ಸೊಸೆಯೂ ರಂಗನಾಥನಿಯು ಬಿಡಿದ ಮಧುರಾ ವಿಜಯಂ ಅಥವಾ ವೀರ ಕಂಪಣರಾಯ ಚರಿತಪ್ರಬಂಧವೂ ಇದನ್ನು ಚಿತ್ರಿಸಿದೆ! ಇದಕ್ಕಿಂತಲೂ ಕರ್ಣ ಶತಸೂನವ ನೊಡಲು —ವಿದ್ಯಾರಣ್ಯರ ಜನ್ಮ ಕಾಲದಲ್ಲಿ ಸಮಗ್ರ ದಕ್ಷಿಣ ದೇಶದ ಪರಿಸ್ಥಿತಿಯು ಹೇಗಿದ್ದಿರಬಹುದು? ಆ ಕಾಲದ ಮುಸ್ಲಿಮರಿಗೆ ಹಿಂದೂ ದೇವಾಲಯಗಳನ್ನು ನೆಲಸಮ ಮಾಡಿ ಮಸೀದಿಗಳನ್ನು ಕಟ್ಟುವುದೇ ಜನ್ಮಾದ್ದೇವ; ಹಿಂದೂ ಜನರ ಸಹಿಕ್ರ ದೇವತಾ ಮೂರ್ತಿಗಳಿಗೆ ರಕ್ತ ಮಾಂಸಗಳನ್ನು ಒಳಿಮ ಬ್ರಹ್ಮಗೊಳಿಸುವುದೇ ಪವಿತ್ರಕಾರ್ಯ; ಗೋಹತ್ಯೆಯನ್ನು ಕಂಡ ಕಂಡಲ್ಲಿ ಕಂಠರಿಸಿ ಕೊಯ್ದು ಜೆಲ್ಲುವುದೇ ಅಲ್ಲಾನ ಪೂಜೆ ಪವಿತ್ರತೆಯಿಂದ ಮಾಡಬೇಕಾದ ಕರ್ತವ್ಯವೆಂದು ಮುಸ್ಲಿಮರು ಭಾವಿಸಿದ್ದ ಕಾಲವದು. ಇದೆಲ್ಲಾ ಕಾರಣ ಮುಸ್ಲಿಮರ ಸತ್ಕೃತ್ಯಗಳಿಂದಾಗಿ ಅವರ ಆಳ್ವಿಕೆಯ ಕೆಳಗಿದ್ದ ಈ ದಾಕ್ಷಿಣಾತ್ಯ ಕರ್ನಾಟಕ ನಾಡೆಯು ನೆಲಸಿಹಿನ. ಬಿಜಿಬಿಲೆ ಬಿಜ್ಜಾಹಿತ್ತಿದ್ದ ಗ. ಲಿಂದ ಪಟ್ಟಣ ಅಲ್ಲಿಂದಾ ಹಕ್ಕರು ಜೂರಾಗಿ ಸಾಕ ಧನ್ಯರೂ ಬಿಸ್ಸಿರು. ಕನ್ನಡಿಗರ ಮಟ್ಟಿಗೆ ಧರ್ಮವೂ ಸ್ವಾತಂತ್ರ್ಯವೂ ಜೊತೆಯಲ್ಲಿ' ಮಾಯ್ಕಳನಂತಿರುವ ದಾರ್ಢ್ಯತ್ವ. ಆ ಸಂದರ್ಭಕಾಲದಲ್ಲಿ ಕರ್ನಾಟಕದಲ್ಲಿ ಒಂದು ಮಾಯಕ್ಕೆಯಾ ಜನ್ಮವಾಗಿದ್ದರೆ ಕರ್ನಾಟಕ—ಕನ್ನಡಿಗ—ಎಂಬ ಪದವೇ ಇತಿಹಾಸದಿಂದ ಅದೃಶ್ಯವಾಗಿ ಹೋಗುತ್ತಿತ್ತು. ಇದು ದೈವ ಸಂಕಲ್ಪಕ್ಕೆ ಶ್ರುತಿಕೂಲವಾಗಿತ್ತು. ಆ ವಿಪತ್ತಿನಲ್ಲಿದ್ದ ಕರ್ನಾಟಕವನ್ನು ಎತ್ತಿ ಹಿಡಿದು, ಸಪ್ಪೆ ಬಿದ್ದ ಕನ್ನಡಿಗರ ಧಮನಿಯಲ್ಲಿ ಬಿಸಿ ರಕ್ತ ತುಂಬಿದವರು ವಿದ್ಯಾರಣ್ಯರು; ಸಮಗ್ರ ಭಾರತಕ್ಕೆ ಉಚ್ಚ ಸಂದೇಶವನ್ನು ಸಾರಿದವರು ಮಾಧವಾಚಾರ್ಯರು; ಕರ್ನಾಟಕ ವಿಕೇಂದ್ರೀಕರಣ ಮಂತ್ರದ ಪ್ರಭಾವವನ್ನು ಕನ್ನಡಿಗರಿಗೆ ಉಪದೇಶಿಸಿದವರು ವಿದ್ಯಾರಣ್ಯರು; ವೇದಧಾನ್ಯವನ್ನು ಬರೆದು ಭಾರತದ ಸಂಸ್ಕೃತಿಯನ್ನು ಜೀರ್ಣೋದ್ಧಾರಗೊಳಿಸಿದವರು ಮಾಧವಾಚಾರ್ಯರು; ಬಡತನದಿಂದ ನರಳುತ್ತಿದ್ದ ಕನ್ನಡಿಗರ ಮನೆಯ ಮುಂದೆ ಬಂಗಾರದ ಮಳೆಯನ್ನು ಸುರಿಸಿದವರು ವಿದ್ಯಾರಣ್ಯರು. ಇದರಿಂದ ಕನ್ನಡಿಗರು ಒಮ್ಮೆಯೇ ಪುಟಿನೆಗೆದ ಜೊಂಡಿನಂತೆ ಹಿಗ್ಗಿ ಹಾರಿದುಷ್ಟುಳುವನರ ರುಂಡ ಮುಂದಗಳನ್ನು ಪ್ರತ್ಯೇಕಿಸಿ ಅವನ್ನು ದಕ್ಷಿಣ ಹಿಂದೂದೇಶದಿಂದಲೇ ಹೊರಗೆಜ್ಜೆಲ್ಲಿದರು ಭಯವಿಪ್ಪೆಲರಾಗಿದ್ದ ಕನ್ನಡಿಗರು ಒಮ್ಮೆಯೇ ವೀರ ಶಿರೋಮಣಿಗಳಾದರು. 'ದೀನ್ ದೀನ್' ಎಂದು ಹರಿಹಾಯುವ ಮುಸ್ಲಿಮರ ಪಿಶಾಚ ಕೇಕೆಯನ್ನು ಕುಗ್ಗಿಸಿ, ಕನ್ನಡಿಗರ 'ಹರಹರ ಮಹಾದೇವ'ಎಂಬ ಹರಿಕಾರ ವೀರ ಘೋಷಯು ಕೃಷ್ಣಾನದಿಯನ್ನು ದಾಟಿ, ಗೋದಾವರಿಯ ಆಚೆ ದಡಕ್ಕೆ ಜಿಗಿದು ವಿಂಧ್ಯಾ ಪರ್ವತಕ್ಕೆ ಸಿಡಿಲಿನಂತೆ ಹೋಗಿ ಅಪ್ಪಳಿಸಿ ಮುಸ್ಲಿಮರ ಹೈಯದಲ್ಲಿ ನಡುಕವನ್ನು ಹುಟ್ಟಿಸಿತು. ಜಯಕರ್ನಾಟಕ! ಜಯವಿದ್ಯಾರಣ್ಯ! ಕನ್ನಡಿಗರು ಕೊನೆಗಾದರೂ ಶಾಂತರಾಗಿ ಶಿಷ್ಟ ಸೋಜ್ಞಾವಸ ನಡೆಯಬಲ್ಲವರಾದರು.

ಶ್ರೀ ವಿದ್ಯಾರಣ್ಯರು ತುಂಗ ಭದ್ರೆಯ ದಡದ ಕಿಷ್ಕಿಂದೆಯ ಅಥವಾ ಪಂಪಾಕ್ಷೇತ್ರದ ಸವಿಾಪದಲ್ಲಿರುವ ಆನೆಗೊಂದಿಯಲ್ಲಿ ತೈತ್ತಿರೀಯ ಶಾಖೆಯ ಬಡಬ್ರಾಹ್ಮಣನ ಕುಲದೊಂದರಲ್ಲಿ ಸು. ೧೩ನೆಯ ಶತಮಾನದ ಉತ್ತರಾರ್ಧದಲ್ಲಿ ಜನಿಸಿದರು. ಇವರ ತಂದೆ ಪುಣ್ಯಾತ್ಮರಾದ ಮಾಯಣರು; ತಾಯಿಯು ಪುಣ್ಯವತಿಯಾದ ಶ್ರೀಮತಿ. ಇವರಿಗೆ ಮಾಧವರಲ್ಲದೆ ಸಾಯಣ ಮತ್ತು ಭೋಗನಾಥರೆಂಬ ಪ್ರತಿಭಾಪೂರ್ಣರಾದ ಇನ್ನಿಬ್ಬರು ಮಕ್ಕಳಿದ್ದರು. ಈ ಮೂವರು ಮಕ್ಕಳೂ ತ್ರಿಗುಣ ಸ್ವರೂಪರು. ಮಕ್ಕಳಿಲ್ಲಾ ವಿದ್ವಾಂಸರಾದುದರಿಂದ ಅವರ ಮನೆಯೊಂದು ಧರ್ಮಗುರುಗಳನ್ನೂ, ಕರ್ಮವೀರರನ್ನೂ ಸಿದ್ಧಗೊಳಿಸುವ ವಿದ್ಯೆಯ ಕಾರ್ಖಾನೆಯೊಯಿತು.

ವಿದ್ಯಾರಣ್ಯರೂ ಅವರ ಸೋದರರೂ ಬೇರೆ ಬೇರೆ ಗುರುಗಳಲ್ಲಿ ಅಭ್ಯಾಸ ಮಾಡಿದುದನ್ನು ಅವರು ಬರೆದ ಗ್ರಂಥಗಳೇ ಸೂಚಿಸುತ್ತಿವೆ ವೈದಿಕ ಗ್ರಂಥಗಳಲ್ಲಿ ಅವರು ಬಹುತರವಾಗಿ ವಿದ್ಯಾತೀರ್ಥರಿಗುರುಗಳಿಗೆ ವಂದಿಸಿದ್ದಾರೆ. ಅವರ ಪ್ರಸಿದ್ಧ ವೇದಾಂತ ಗ್ರಂಥವಾದ ಪಂಚದಶಿಯಲ್ಲಿ ತಮ್ಮ ಪ್ರಸಿದ್ಧ ವೇದಾಂತ ಗುರುಗಳಾದ ವಿದ್ಯಾರಣ್ಯರಿಂದ ಯತಿಗಳಿಗೆ ನಮಸ್ಕರಿಸಿದ್ದಾರೆ. ಜೈಮಿನಿಯ ನ್ಯಾಯ ಮೂಲಾ ವಿಸ್ತರದಲ್ಲಿ ತಮ್ಮ ಮುಖ್ಯ ಗುರುಗಳಾದ ವಿದ್ಯಾತೀರ್ಥರಿಗೆ ನಮಸ್ಕರಿಸಿ, ವೈಯಾಸಿಕ ನ್ಯಾಯಮಾಲಾ ಪ್ರಣೇತೃಗಳಾದ ಭಾರತೀತೀರ್ಥರ ಕೃತಿಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದ್ದಾರೆ.

ಮಾಧವಾಚಾರ್ಯರು ಜನ್ಮತಃ ಕುಶಾಗ್ರಮತಿಗಳು. ಆದರಲ್ಲೂ ಶ್ರೀ ಭಾರತೀತೀರ್ಥ, ಶ್ರೀ ವಂಶರಾನಂದ, ಶ್ರೀ ವಿದ್ಯಾತೀರ್ಥರಂತಹ ಬ್ರಹ್ಮ, ವಿಷ್ಣು ಮಹೇಶ್ವರ ಸಮಾನರಾದ ಗುರುಗಳ ವರ ಪ್ರಸಾದವು ದೊರೆತ ಮೇಲೆ ಅವಾರ ಪಾಂಡಿತ್ಯ, ಮಹಾತಪಸ್ಸಕ್ತಿ ಅತಿರಿಯು ಸಾಹಿತ್ಯ ಸೇವೆಯಲ್ಲಿ ಅಸೂರಕ್ತಿಯುಂಟಾದುದರಲ್ಲಿ ಆಶ್ಚರ್ಯವೇನು?

ಮಾಧವಾಚಾರ್ಯರೂ ವಿದ್ಯಾರಣ್ಯರೂ ಬೇರೆ ಬೇರೆಯವರೆಂಬ ನಂಬಿಕೆಯು ಇಂದೂ ಕೆಲವರಿಗಿದೆ. ಈ ತಂಡದಲ್ಲಿ ಕನ್ನಡ ಕವಿಚರಿತ್ರಕಾರರಾದ ಶ್ರೀ ಆರ್. ನರಸಿಂಹಾಚಾರ್ಯರೂ ಮೈಸೂರು ಶಾಸನ ಇಲಾಖೆಯಲ್ಲಿದ್ದ ಶ್ರೀ ಆರ್. ರಾಮರಾವ್ ಬಿ ಎ ಯವರೂ, ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರರೂ, ಘಾ ಹಿರಾಸ ಮೊದಲಾದವರೂ ಪ್ರಮುಖರಾಗಿದ್ದರು. ಇಬ್ಬರೂ ಒಂದೇ ವ್ಯಕ್ತಿಯೆಂದು ಶ್ರೀ ಡಿ. ವಿ. ಗುಂಡಪ್ಪನವರೂ, ಶ್ರೀ ನೂ ಕಂಡೇಯಶರ್ಮರೂ, ಹಾ| ಎಸ್. ಶ್ರೀಕಂಠ ಶಾಸ್ತ್ರಿಗಳೂ ಸಾರಿ ಮಾಧವ ವಿದ್ಯಾರಣ್ಯರ ಏಕ್ಯತೆಯನ್ನು ಸ್ಥಾಪಿಸಿ ಭಿನ್ನತಾವಾದವು ನಿರಾಧಾರವಾದುದೆಂದೂ ಹೇಳಿದ್ದಾರೆ. ಹೇಗೂ ಇರಲಿ. ರೂಢಿಯಲ್ಲಿ ಮಾಧವಾಚಾರ್ಯರೇ ಸನ್ಯಾಸ ಸ್ವೀಕಾರವಾಡಿದ ಮೇಲೆ ವಿದ್ಯಾರಣ್ಯರಾದರೆಂದಿರುವುದರಿಂದ ಅದನ್ನೇ ಇಲ್ಲಿ ಸ್ವೀಕರಿಸಿದ್ದೇನೆ.

ಸಮಾ ಪರೋಪಕಾರ ನಿರತರಾದ ಮತ್ತು ಭೂತದಯೆಯ ಸಾಕಾಸ್ಪನ್ನಾರ್ತಿಗಳಾದ ವಿದ್ಯಾರಣ್ಯರ ಹೃದಯವು ಅಗಿನ ಮುಸ್ಲಿಮರ ಅನಸ್ಥಿತ ಕೃತ್ಯಗಳಿಂದ ಕಂದಿಕುಂದಿ ಬೆಂದಿತು. ತನ್ಮೂಸ್ತುತಿನಿಂದ ಜನತೆಯು ಆಜ್ಞಾನದಲ್ಲೂ ಅಘಾತಿಯಲ್ಲೂ ಆಕ್ರಾತಂತ್ರ್ಯದಲ್ಲೂ ಮುಳುಗಿರುವಾಗ ತಾವು ಮೂಕ್ರ ಮೋಕ್ಷಾಭಿಲಾಷೆಯಿಂದ ಮೂಗು ಮುಚ್ಚಿ ಕುಳ್ಳಿರಲು ಅವರಿಗೆ ಮನಸ್ಸಾಗದೆ ಸದ್ಯ ಸ್ವರಾಜ್ಯ ಸ್ಥಾಪನೆಯೇ ತಮ್ಮ ಜೀವಿತೋದ್ದೇಶವೆಂದು ವೇದಾಂತಗ್ರಂಥಗಳೆ ಮನಸನನ್ನೂ ಆವುಗಳ ಪ್ರಚಾರವನ್ನೂ ಬದಿಗಿಟ್ಟು, ಹನ್ನೆರಡು ವರ್ಷಗಳ ವರೆಗೆ ಗಾಯತ್ರೀ ಪುರಶ್ಚರಣವನ್ನು ಕೈಗೊಂಡು ತಪಶಕ್ತಿಯನ್ನು ನೈತುಂಬಿಸಿಕೊಂಡು, ಜವರಿ ಹೋದ ಹಿಂದೂ ಅರಸರಲ್ಲಿ ಒಕ್ಕಟ್ಟನ್ನುಂಟುಮಾಡಿ ಸಂಗಮಮಂಟಪದ ಹರಿಹರರಾಯನನ್ನೇ ಕರ್ನಾಟಕ ಸಾಮ್ರಾಜ್ಯದ ರಮಾರಮಣನನ್ನಾಗಿ ಮಾಡಿದರು. ಇವರಿಂದ ಸ್ಥಾಪಿತವಾದ ಹೊಸ ಪಟ್ಟಣಕ್ಕೆ ವಿಜಯನಗರ — ವಿದ್ಯಾನಗರವೆಂದು ಹೆಸರನ್ನಿಟ್ಟು, ಅದರ ರಾಜಸತ್ತೆಯು ಕೃಷ್ಣಾ ನದಿಯಿಂದ ದಕ್ಷಿಣಕ್ಕೆ ಕನ್ಯಾ ಕುಮಾರಿಯ ವರೆಗೂ, ಉತ್ತರ ಪೂರ್ವ ದಂಡೆಯು ಗುಂಟ ಬಂಗಾಲದ ವರೆಗೂ ಹಬ್ಬುವಂತೆ ಮಾಡಿದರು ಕನ್ನಡಿಗರ ರಾಜ್ಯವು ಅವರ ತಪಃಪ್ರಭಾವದಿಂದ ಹನುಮನ ಬಾಲದಂತೆ ಬಳೆಯಿತು. ಕನ್ನಡಿಗರು ಹಿಗ್ಗಿ ಹಿಗ್ಗಿದರು.

ವಿದ್ಯಾರಣ್ಯರು ರಾಜ್ಯವನ್ನು ಮಾತ್ರ ಸ್ಥಾಪಿಸಿ ತಮ್ಮ ಕಾರ್ಯವಾಯಿತೆಂದು ಕುಳಿತುಕೊಳ್ಳಲಿಲ್ಲ. ಸನಾತನ ಧರ್ಮವೂ ಅಗ ಜೀರ್ಣೋದ್ಧಾರವಾಗಬೇಕೆತ್ತು. ಅದಕ್ಕಾಗಿ ಜ್ಯೋತಿಷ, ವೈದ್ಯಕ, ಧರ್ಮಶಾಸ್ತ್ರ, ವ್ಯಾಕರಣ, ದರ್ಶನಗಳೇ ಮೊದಲಾದ ಅನೇಕ ಗ್ರಂಥಗಳನ್ನು ಬರೆದು ಸಂಸ್ಕೃತ ವಾಙ್ಮಯ ಭಂಡಾರವನ್ನು ತುಂಬಿದರು. ಹಲವು ಪ್ರಾಚೀನ ಗ್ರಂಥಗಳಿಗೆ ವ್ಯಾಖ್ಯಾನವನ್ನು ಬರೆದರು. ಹನ್ನೊಂದನೆಯ ಶತಮಾನದ ಭೋಜದೇವ, ಹನ್ನೆರಡನೆಯ ಶತಮಾನದ ಭಾಸ್ಕರಾಚಾರ್ಯ, ಪಂಡಿತ ಮಾರಸಿಯ ಶತಶತಮಾನದ ಮೇಧಾಸ್ರಿ ಮತ್ತು ಬೋಪ

(೧೬ನೇ ಪುಟ ನೋಡಿ)

ALWAYS
REMEMBER!!!

"A STITCH
IN TIME
SAVES **NINE**"

FOR ALL YOUR
INK PROBLEMS.....

CONSULT

GANGES

THE LARGEST PRINTING INK MANUFACTURERS IN INDIA

GANGES PRINTING INK FACTORY LIMITED

CALCUTTA • BOMBAY • MADRAS • DELHI

ನಮ್ಮದು ಶ್ರೀಮಂತ ರಾಷ್ಟ್ರವೆ?

ಅವಶ್ಯಕ ಪದಾರ್ಥಗಳ ಬೆಲೆಯೇರಿದೆ. ನಾವು ಬಡವರು, ನಮ್ಮದು ಬಡರಾಷ್ಟ್ರವೆಂಬ ಅಳ್ಳರ ಕಾಳ ಹಾಕುತ್ತೇವೆ ನಾವು. ನಿಜವಾಗಿ ಯೋಚಿಸಿದರೆ, ಇದು ಎಷ್ಟರಮಟ್ಟಿಗೆ ಸರಿಯೆಂಬುದು ತಿಳಿಯುತ್ತದೆ. ನಾವಿಂದು ಬದುಕುವ ಬಡ ಜೀವನಕ್ಕೆ ಹೊಣೆ ಯಾರು? 'ಉದ್ಧರೇತ್ ಆತ್ಮನಾತ್ಮಾನಂ' ಎಂದ ಗೀತೋಕ್ತಿಯೇ ನಮ್ಮನ್ನುದ್ಧರಿಸಬೇಕು.

ಲೇಖಕರು: ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯ.

ನಮ್ಮದು ಶ್ರೀಮಂತ ರಾಷ್ಟ್ರವೆ? ಹಾಗಾದರೆ, ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ವಾರ್ಷಿಕ ಆದಾಯವೆಷ್ಟು? ವೆಚ್ಚವೆಷ್ಟು? ಒಂದು ಕುಟುಂಬದ ವಾರ್ಷಿಕ ಆದಾಯವೆಷ್ಟು—ವೆಚ್ಚವೆಷ್ಟು? — ಉಳಿತಾಯವೇನು?

ನಮ್ಮ ಜೀವನದ ಬೆಲೆ ಏರಿದ ಪ್ರಮಾಣದಲ್ಲಿ ನಮ್ಮ ಉತ್ಪತ್ತಿ ಹೆಚ್ಚಿದೆಯೆ? ನಮ್ಮ ಅರ್ಥಶಾಸ್ತ್ರಜ್ಞರು ಏನೆನ್ನುತ್ತಾರೋ—ಗೊತ್ತಿಲ್ಲ.

ನಮ್ಮ ಅವಶ್ಯಕ ವಸ್ತುಗಳ ಬೆಲೆ ಏರಿದೆ, ನಿಜ. ಈ ಪ್ರಮಾಣದಲ್ಲಿ ನಮ್ಮ ಉತ್ಪತ್ತಿ ಹೆಚ್ಚಾಗಲಿಲ್ಲ. ಇದೂ ಸರಿ.

ಒಂದು ಗಜ ಬಟ್ಟೆಯ ಬೆಲೆ ಕನಿಷ್ಠ ಎರಡು ರೂಪಾಯಿ—ಬೇಕೆಂತಾಳು, ಎಣ್ಣೆ, ಬೆಲ್ಲ—ಪ್ರತಿಯೊಂದರ ಬೆಲೆಯೂ ಏರಿದೆ. ಇವು ಅವಶ್ಯಕ ವಸ್ತುಗಳಾಯಿತು. ಕೊಳ್ಳದೆ ವಿಧಿ ಇಲ್ಲ.

ಬೀಡಿ, ಸಿಗರೇಟ್, ಕಾಫಿ, ಚಹಾ, ಬೆಡಗಿನ ವಸ್ತುಗಳು, ಮೋಟರ್ ಕಾರ್, ಟ್ರಾನ್ಸಿಸ್ಟರ್—ಇವುಗಳ ಬೆಲೆ? ಸ್ವಾಭಾವಿಕವಾಗಿ ಏನಿದ್ದಲ್ಲಿಯೇ ಇರಬೇಕು.

ಇರಲಿ. ಬೆಲೆ ಏರಿದೆ ಎಂದರೆ ಆಯಿತೆ? ಬೆಲೆ ಕಡಿಮೆ ಮಾಡಿ ಎಂದು ಚಳವಳಿ ಹೂಡಿದರೆ ನಮ್ಮ ಕೆಲಸ ಮುಗಿಯಿತೆ?

ಒಂದು ರಾಜ್ಯ ಸರಕಾರದಂತೆ—ಒಂದು ಪಂಚಾಯತ್ ಸಂಸ್ಥೆಯಂತೆ—ಒಂದು ವ್ಯಾಪಾರಿ ಸಂಸ್ಥೆಯ ಹಾಗೆ ಪ್ರತಿಯೋರ್ವ ವ್ಯಕ್ತಿ ಇಂದು ತನ್ನ ವಾರ್ಷಿಕ ಬಜೆಟ್ ಒಂದನ್ನು ತಯಾರಿಸಿಕೊಳ್ಳಬೇಡವೆ?

ತನ್ನವೆಚ್ಚ ಹೆಚ್ಚಾಯಿತು, ವರಮಾನ? ಕಡಿಮೆ ಆಯಿತು—ಆಗ ಬೋಚಿನೆ ವರಮಾನ ಹೆಚ್ಚಿಸಲು ಏನು ಮಾರ್ಗ? ವೆಚ್ಚ ಕಡಿಮೆ ಮಾಡುವುದು ಕೇಗೆ?

ಪರಮಾನ ಹೆಚ್ಚಿಸಬೇಕು, ಅದು ನಮ್ಮ ಹೊಣೆಯಲ್ಲ. ಅದು ಸರಕಾರದ—ರಾಷ್ಟ್ರದ ಜವಾಬ್ದಾರಿಕೆ ಕಾರ್ಯವನ್ನು ಹೊರಹಿಕೊಂಡಿದೆ. ಭಾರತದ ಲಕ್ಷಾಂತರ ನಾಲ್ಕು ಕೋಟಿ ಪ್ರಜೆಗಳಿಗೂ ಉದ್ಯೋಗ ಪೊರಕುವಂತೆ ನಮ್ಮ ರಾಷ್ಟ್ರದ ಜೋಜನಾ ಶಾಸ್ತ್ರಜ್ಞರು ಜೋಜನೆ ಸಿದ್ಧಪಡಿಸಿದರೆ ಆಗ ಆದು ಸರಿ ಹೋದೀತು. ಈ ಸಂಗತಿ ರಾಜಕಾರಣಿಗಳ—ಶಾಸಕರ—ಕಂತ್ರಜ್ಞರ—ಕೈಯಲ್ಲಿದೆ. ಅವರು ನಮ್ಮ ಜಾಳನ್ನು ಎಷ್ಟು ಅರ್ಥಮಾಡಿಕೊಳ್ಳುತ್ತಾರೋ— ಮಾಡಿಕೊಂಡಿದ್ದಾರೋ?

ಸದ್ಯ ನಮ್ಮ ಜಾಣೆ ಇದ್ದಷ್ಟಾದರೂ ನಾವು ಕಾಲು ಚಾಚಿಕೊಳ್ಳಬಹುದಲ್ಲ! ಚಾವೆ ಇದ್ದಷ್ಟೇ ಕಾಲು ಚಾಚಿಕೊಳ್ಳಬೇಕು ಅಂದರೆ ನಮ್ಮ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಳ್ಳಬೇಕು — ಮೂಗು ದಾರ ಬಿಗಿ ಮಾಡಿಕೊಳ್ಳ ಬೇಕು.

ಇದನ್ನು ನೋಡಿದವರು ಯಾರೂ ಬಡರಾಷ್ಟ್ರ ಎನ್ನಲಾರರು! ನಮ್ಮ ನೇಸ, ಭೂಪಣ, ಬೆಡಗು ಬಿನ್ನಾಣ ಎಲ್ಲದರ!

ನಮ್ಮ ಬಡರಾಷ್ಟ್ರದಲ್ಲಿ ಕೇವಲ ಪ್ಲಾಸ್ಟಿಕ್‌ನಂತಹ ಟೆಡಗಿನ ಸಾಮಾನುಗಳು ಎಷ್ಟು ಖರ್ಚಾಗುತ್ತಿಲ್ಲ! ನಮ್ಮ ಮಹಿಳಾ ಸಮಾಜಗಳಲ್ಲಿ ಹೆಣ್ಣು ಮಕ್ಕಳು ಕಲಿಯುವುದೂ ಆದನ್ನೇ. ಪ್ಲಾಸ್ಟಿಕ್ ಬುಟ್ಟಿ ಹೆಣೆಯಲು ಒಂದು ಬುಟ್ಟಿಯ ಬೆಲೆ ಹದಿನೆರಡು ರೂಪಾಯಿ—ಪ್ಲಾಸ್ಟಿಕ್ ಮಣಿ—ಮನಿ ಪರ್ಸ್ ತಯಾರಿಸುವುದು ಹೀಗೆ ಪ್ಲಾಸ್ಟಿಕ್ ನಮ್ಮ ಜೀವನದ ಹಾಸು ಹೊಕ್ಕಾಗಿದೆ- ಆಗಬಹುದು. ಆದೂ ಒಂದು ಕೈಗಾರಿಕೆಯಲ್ಲವೆ?

ಆದರೆ, ಈ ಸಾಮಾನುಗಳನ್ನು ನಾವು ಕೊಳ್ಳುವುದರಿಂದ— ಈ ಕೈಗಾರಿಕೆಯನ್ನು ಪ್ರೋತ್ಸಾಹಿಸುವುದರಿಂದ-ನಾವು ಯಾರನ್ನು ಶ್ರೀಮಂತರನ್ನಾಗಿ ಮಾಡುತ್ತಿದ್ದೇವೆ? ನಾವು ಎಷ್ಟು ಪಟ್ಟು ಬಡವರಾಗುತ್ತಿದ್ದೇವೆ— ಲೆಕ್ಕ ಹಾಕಿ ನೋಡಿ.

ನಮ್ಮ ದೇಶದ ಸಾಮಾನ್ಯ ಪ್ರಜೆ ಇಲ್ಲಿನ ಹವಾಗುಣಕ್ಕನುಗುಣವಾಗಿ ಎಷ್ಟು ಬಟ್ಟೆ ಧರಿಸಬೇಕು? ಭಾರತದ ಪ್ರಜೆಗೆ ಸರಾಸರಿ ವರ್ಷಕ್ಕೆ ಎಷ್ಟು ರೂಪಾಯಿಯ ಬಟ್ಟೆ ಬೇಕು? ಯಾವ ತರಹ ಬಟ್ಟೆ ಬೇಕು? ಎಲ್ಲರೂ ಟೆರಿಲಿನ್, ಮಫ್ಲರ್‌ಲಾಲ್, ಸೇನ್‌ಫರೈಸ್ಡ್, ಉಣ್ಣೆ, ಸಿಲ್ಕ್ ಮುಂತಾದ ಬಹು ಬೆಲೆಯ ಬಟ್ಟೆ ಧರಿಸಲು ಸಾಧ್ಯವೆ!

ಶ್ರೀಮಂತರು ಧರಿಸಲಿ.

ಬಡರಾಷ್ಟ್ರಗಳಿಗೆ ಏಕೆ ಈ ದರ್ಬಾರು ಈ ಬಹು ಬೆಲೆಯ ವಿಲಾಸ ಬಟ್ಟೆಗಳ ಉಪಯೋಗ, ಬಳಕೆ ನಾವು ಹೆಚ್ಚಿಸಿದೆವು- ನಾವು ಬಡವರಾದೆವು. ಮಿಲ್ ಮಾಲಿಕರನ್ನು ಶ್ರೀಮಂತರನ್ನಾಗಿ ಮಾಡಿದೆವು ಇಷ್ಟೇ ವಿಶೇಷ ನಮ್ಮ ಜನಕ್ಕೆ ಬೇಡವೆ? ಇದನ್ನೇ ಗಾಂಧೀಜಿ ಹೇಳಿದ್ದು-ಇದೇ ಅವರ ಖಾದಿ ಅರ್ಥಶಾಸ್ತ್ರ. ನಮ್ಮ ಸ್ವಾತಂತ್ರ್ಯ ಚಳವಳಿಯ ಮೂಲವೆಲ್ಲ ಇಲ್ಲಿದೆ—ನಮ್ಮ ದೇಶ ಬಡವಾಗಿ ಮೆಂಚೆಸ್ಟರ್ ಲಂಕಷಯರ್ ದೊಡ್ಡವಾಗಬೇಕೆಲ್ಲ ಎಂದಿದ್ದರು ಗಾಂಧೀಜಿ – ಆದರೆ ಇಂದು ಗಾಂಧೀಜಿ ಇಲ್ಲ. ಅವರ ಮಾತನ್ನು ಯಾರು ನಡಸಬೇಕು? —ಕಾಂಗ್ರೆಸ್ ನಡೆಸಬೇಕು—ಕಾಂಗ್ರೆಸ್ ಬಂಡವಳಿಗರ ಸಂಸ್ಥೆಯಾದರೆ? — ಬೇಲಿ ಹೊಲ ಮೆಂದಂತಾಯ್ತು.

ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಖಾದಿಗಿದ್ದ ಪ್ರೋತ್ಸಾಹ ಈಗಿಲ್ಲ. ನಮ್ಮ ಖಾದಿ ಬೋರ್ಡ್‌ನ ಆಶ್ರಯದಲ್ಲಿರುವ ಖಾದಿ ಭವನವನ್ನು ಸಂದರ್ಶಿಸಿದರೇ ಅಲ್ಲಾ ಶ್ರೀಮಂತರಿಗೆ, ಪಾದೇಶದವರ ಕಣ್ಣಿಗೆ ಮಣ್ಣು ಹಾಕುವ ಖಾದಿ ಇವೆ ಸಾಮಾನ್ಯ ವ್ಯಕ್ತಿಗೆ ಉಪಯೋಗವಾಗುವ ಖಾದಿ ಅಲ್ಲಾ ಇಲ್ಲ—ಒಂದು ಗಜ ಖಾದಿಯ ಬೆಲೆ ಎರಡರಿಂದ ಆರು ರೂಪಾಯಿ' ಒಂದು ಪಂಚೆಯ ಬೆಲೆ ಹತ್ತು ರೂ.ಗೆ ಕಡಿಮೆ ಇಲ್ಲ—ಸೀರೆಯ ಮಾತೇ ಬೇಡ.

ನಿತ್ಯೆಯಿಂದ ಖಾದಿ ಧರಿಸುತ್ತ ಬಂದಿರುವ ಮನ ಖಾಡು ಹೇಳಿ ತೀರದು.

ನಮ್ಮ ಹೆಣ್ಣು ಮಕ್ಕಳಿಗೇ ವಿಶಾಲ ಕಾಲದಲ್ಲಿ ಉದ್ಯೋಗ ಕಲಿಸುವ ತರಗತಿಗಳು ಮಹಿಳಾ ಸಮಾಜದ ಆಶ್ರಯದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಇವೆ—ಅಲ್ಲಾ ನಮ್ಮ ಗೌರವ್ಯ, ನಮ್ಮ ವೆಂಕಮ್ಮ, ಇವರ ಮಕ್ಕಳು ಕಲಿಯುವುದು ಏನು? ಹಿಂದಿಯೇ ಹೇಳಿಲೆ—ಮನಿಪರ್ಸ್ ಹೊಲಿಗೆ,-ಇಂಗ್ಲೆಂಡ್ ಮೊಡಲ್ ಫ್ಯಾಕ್—ಕಾಶ್ಮೀರ್ ಮೊಡಲ್ ಬ್ಲೌಸ್—ಟೇಬಲ್ ಕ್ಲಾತ್,—ಇತ್ಯಾದಿ ಡಿಸೈನುಗಳು. ನಮ್ಮ ಜೋರೇ ಗೌಡನ ಸಂಸಾರಕ್ಕೆ ಬೇಕಾದ ಬಟ್ಟೆ ಹೊಲಿಯಲು ಇವರಿಗೂ ಗೊತ್ತಿಲ್ಲ.

ನಮ್ಮ ಹಳ್ಳಿಯ ಮನೆಗಳಿಗೆ, ಸಂಸಾರಕ್ಕೆ ಇದರಿಂದೇನು ಉಪಯೋಗ? ಇವನ್ನೆಲ್ಲಿ ಕಲಿತ ನಮ್ಮ ಹೆಣ್ಣು ಮಗಳು ಏನು ಮಾಡಿದಾಳು? ಏನಾದರೂ ಮಾಡಿದಾಳು ಅನ್ನೋಣ. ಆ ಮಾಡಿಮೆ, ಯಾರನ್ನು ಬಡವರನ್ನಾಗಿ ಮಾಡಿತು?ಯಾರು ಶ್ರೀಮಂತರಾದರು?

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಅಂದರೆ ಕೇವಲ ಹತ್ತಿಪ್ಪತ್ತು ವರ್ಷಗಳ ಹಿಂದೆ ನಮ್ಮ ಪ್ರಾಥಮಿಕ ಶಾಲೆಯಲ್ಲಿ ಗರಿಗಳಿಂದ ತಯಾರಿಸಿದ ಅಂದವಾದ ನಾನಾ ನಮೂನೆಯ ಕೊಡೆಗಳನ್ನು ಸಾಲು ಸಾಲಾಗಿ ನೋಡಿದ್ದೇನೆ. ನಾನೂ ಐದನೆಯ ತರಗತಿಯ ತನಕ ಮಳೆ ಬಿಸಿಲುಗಳಿಂದ ರಕ್ಷಣೆ ಪಡೆದದ್ದು ಅದರಲ್ಲೇ—ನಮ್ಮ ಹಿರಿಯ ಕಾಂಗ್ರೆಸ್ ಧುರೀಣರು, ಪಾಂಗಾಳ ಲಕ್ಷ್ಮಿನಾರಾಯಣ ನಾಯ್ಕರು, ಶಾಂತ್ಯಾರು ಭಟ್ಟರು, ಧಾರಾಳ್ಗುಗುರವಾಗಿ ಬೀದಿಯಲ್ಲಿ ಓಲಿ ಕೊಡೆ ಹಿಡಿದು ತಿರುಗಿದ್ದು ನೋಡಿದ್ದೇನೆ. ಭಟ್ಟರಿಗೆ, ನಾಯ್ಕರಿಗೆ ಏನು ಶ್ರೀಮಂತಿಕೆಗೆ ಕಡಿಮೆಯೆ?-ಆದರೆ ಗಾಂಧೀಜಿ ಕರೆಗೆ ದನಿ ಕೂಡಿಸಿದವರು ಇವರು. ಭಾರತದ ಸಾಮಾನ್ಯ ಪ್ರಜೆಗೆ ಒದಗುವ

ಸಮಾಜವಾದದಲ್ಲಿ ಅಚಲ ವಿಶ್ವಾಸ ಅಗತ್ಯ

—"ಇಂದು ನಮಗಿರುವ ಅತ್ಯಂತ ದೊಡ್ಡ ಅಪಾಯವೆಂದರೆ ಚೀನೀ ಆಕ್ರಮಣ. ಈ ಆಕ್ರಮಣವನ್ನು ಕೇವಲ ಗುಂಡಿನಿಂದ ಎದುರಿಸಲು ಸಾಧ್ಯವಿಲ್ಲ. ನಮ್ಮ ಸಿದ್ಧಾಂತದಲ್ಲಿ ಪೂರ್ಣ ವಿಶ್ವಾಸ ಹೊಂದಿ ಅದರಿಂದಲೇ ಆ ಅಪಾಯವನ್ನೆದುರಿಸಬೇಕು. ನಮ್ಮ ಸಿದ್ಧಾಂತ ವೇನು, ನಮ್ಮ ಗುರಿಯೇನು, ಜನತೆಗೂ ಅದಕ್ಕೂ ಏನೂ ಸಂಬಂಧ ಎಂಬಿವೇ ವಿಷಯಗಳಲ್ಲಿ ನಮಗೆ ಸ್ಪಷ್ಟ ಭಾವವಿರಬೇಕು.

ಈ ಸಿದ್ಧಾಂತ, ಮತ್ತು ಗುರಿಯು ಸ್ಪಷ್ಟವಿರದಿದ್ದಲ್ಲಿ ಭಾರತ ಜನತಾ ಶಕ್ತಿಯು ಕಾಂಗ್ರೆಸಿನ ಹಿಡಿತ ಬಿಟ್ಟು ಹೋಗಬಹುದು. ಈ ಅರಿವು ನಿಮಗಿಲ್ಲದಿದ್ದಲ್ಲಿ ಭಾರತ ಜನತೆಯ ಮಹಾಶಕ್ತಿಯು ನಿಮ್ಮ ಕೈತಪ್ಪಬಹುದು. ಮುಂದೆ ಅದು ಯಾರ ಕೈಗೆ ಹೋಗುವುದೋ ಯಾರೂ ಹೇಳಲು ಸಾಧ್ಯವಿಲ್ಲ.

ಸ್ವಾತಂತ್ರ್ಯಾನಂತರ ಭಾರತ ಪ್ರಗತಿ ಸಾಧಿಸಿದೆ. ಆದರೆ ಅದು ಎಷ್ಟು ವೇಗವಾಗಿ ಸಾಧನೆಯಾಗಬೇಕಾಗಿತ್ತೊ ಆ ವೇಗದಲ್ಲಿ ನಡೆಯುತ್ತಿಲ್ಲ. ಚೀನೀ ಆಕ್ರಮಣದ ಈ ಸಮಯದಲ್ಲಿ ಭಾರತದ ಯುವಕ ಜನಾಂಗಕ್ಕೆ ಒಂದು ಸದವಕಾಶ ದೊರೆತಿದೆ. ಬ್ರಿಟಿಷ್ ಸಾಮ್ರಾಜ್ಯವಾದಿತ್ವವನ್ನೆದುರಿಸುವಾಗ ನಮಗಿದ್ದ ಅವಕಾಶವೇ ಈಗ ನಿಮಗೆ ಒದಗಿದೆ."

—ನೆಹರೂ.

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ

ಎಲ್ಲ ಪಾತ್ರೆಗಳಿಗೆ

ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್
ಎಲ್ಲ ಪಾತ್ರೆಗಳಿಗೆ— ನಮ್ಮಲ್ಲಿಗೆ ಬನ್ನಿ.

ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿಗಳು

ರಥಬೀದಿ - - - ಉಡುಪಿ

ಬಲತ್ಕಾರ—ದರ್ಪಗಳಿಗೆ ನಾವೆಂದಿಗೂ ಮಣಿಯೆವು

—"ಭಾರತ--ಚೀನ ಗಡಿ ವಿವಾದವನ್ನು ಶಾಂತಿಯುತವಾಗಿ ಇತ್ಯರ್ಥ ಮಾಡಿಕೊಳ್ಳಬೇಕೆಂಬುದು ಭಾರತದ ಇಚ್ಛೆಯಾದರೂ ನೈತ್ಯ ಶಕ್ತಿಯಿಂದ ಪ್ರೇರಿತವಾದ ದರ್ಪಯುಕ್ತ ಧೋರಣೆಗೆ ಆದೆಂದಿಗೂ ತಲೆಬಾಗಿಸುವುದಿಲ್ಲ

ಯಾವ ದೇಶದೊಡನೆ ನಾವು ಅಷ್ಟೊಂದು ಸ್ನೇಹ ವಾತ್ಸಲ್ಯಗಳಿಂದ ನಡೆದುಕೊಂಡೆವೋ, ಯಾರ ಪರವಾಗಿ ನಾವು ಅಂತರ ರಾಷ್ಟ್ರೀಯ ಸಂಸ್ಥೆಗಳಲ್ಲಿ ಮಾದ ಮಾಡಿದೆವೋ ಅಂಥ ದೇಶ ನಮಗೆ ಬಗೆದ ಈ ದ್ರೋಹ ಸಿಡಿಲಿನಂತೆ ಬಂದೆರಗಿತು

ನಮ್ಮದು ಶಾಂತಿ ಸಂಧಾನಕ್ಕೆ ಹೆಸರಾದ ದೇಶ ಯಾವುದೇ ವಿವಾದವನ್ನಾಗಲಿ ಶಾಂತಿಯಿಂದ ಬಗೆಹರಿಸಲು ನಾವು ಪ್ರಯತ್ನಿಸುವುದು ಸಹಜ. ಆದರೆ ಇದು ನಮ್ಮ ಗೌರವ ಮತ್ತು ಸ್ವಾತಂತ್ರ್ಯಕ್ಕೆ ಒಪ್ಪುವಂತಿದ್ದರೆ ಮಾತ್ರ ಸಾಧ್ಯ.

ಈ ಸಂದರ್ಭದಲ್ಲಿ ಆಕ್ರಮಣವನ್ನೆದುರಿಸುವುದು ರಾಷ್ಟ್ರದ ಪ್ರಥಮ ಕರ್ತವ್ಯ. ಚೀನೀ ಪೀಡೆಯಿಂದ ದೇಶವನ್ನು ರಕ್ಷಿಸಿ ಅದರ ರಕ್ಷಣೆ ಹಾಗೂ ಸಂಪತ್ಸಾಧನೆಗಳನ್ನು ಬಲಪಡಿಸುವುದು ನಮ್ಮ ಧರ್ಮ."

—ಡಾ॥ ರಾಧಾಕೃಷ್ಣನ್.

ದನ್ನೇ ನಾವೂ ಉಪಯೋಗಿಸಬೇಕು—ಇದು ಇವರ ಆದರ್ಶ.

ಆದರೆ ಇಂದು ನಮ್ಮ ಮಕ್ಕಳಿಗೆ ಅರಿವೆ ಕೊಡೆಯೇ ಆಗಬೇಕು-ಹರಿಜನರಿಂದ ಗಿರಿಜನರ ತನಕ—ಪಂಡಿತರಿಂದ ಪಾಮರರ ತನಕ—ಹಣವಿದ್ದೋ ಇಲ್ಲದೆಯೋ-ಎಲ್ಲರೂ ಮಿಷನ್ ಕೊಡೆಗಳನ್ನೇ ಹಿಡಿವವರು—

ನಮ್ಮ ಗರಿ ಓಲೆ ಕೊಡೆಗಳನ್ನು ತಯಾರಿಸುವ ನಮ್ಮ ಗ್ರಾಮಜೀವಿ, ಪಾಣಾರ--ನಿರುದ್ಯೋಗಿಯೊಡ--ಬೊಂಬಾಯಿ ಸೇರಿದ. ಅವನ ಜೀವನ ಏನ ಯ್ತೊ?

ನಾವು ಮಾತ್ರ ಸೇಟ್ ನಾಗಜೀ, ಇಬ್ರಾಹಿಂ ಕಂ-ಕಂನವಿಗಳನ್ನು ದೊಡ್ಡದು ಮಾಡಿದೆವು ಬಂಡವಳಿಗರನ್ನು ಪ್ರೋತ್ಸಾಹಿಸಿ ನಾವು ದರಿದ್ರರಾದೆವು.

ಅರಿವೆ ಕೊಡೆ ಹಿಡಿಯು ಬೇಡಿ—ಓಲೆ ಗರಿ ಕೊಡೆ ಹಿಡಿಯಿರಿ. ಫೌಂಟನ್ ಪೆನ್ ಉಪಯೋಗ ಕಡಿಮೆ ಮಾಡಿ ವಿದ್ಯಾರ್ಥಿಗಳು ಲೇಖನಿ ಹಿಡಿಯಿರಿ—ಇದಕ್ಕೆಲ್ಲ ಸರಕಾರ ಶಾಸನ ಮಾಡಬೇಕೆ?

ನಾವು ಶಾಸನಗಳಿಂದ ಆಳಲ್ಪಡುವವರು! ನಮ್ಮ ಬುದ್ಧಿ ಅಷ್ಟೂ ಬಡವಾಯಿತೆ!

ನಮ್ಮ ಶಾಲೆಗಳನ್ನು ಸಂದರ್ಶಿಸಬೇಕು ಯಾಮ್ಯಾವ ನಮೂನೆಯ ಪೆನ್ನುಗಳು ಬೇಕು? ಬೆಂಗಳೂರು ಮದ್ರಾಸ್ ನಗರಗಳ ಕಾಲುವಾರಿಯಲ್ಲಿ ತಿರುಗುವಂತಿಲ್ಲ. ಆರಾಣೆಯ ಪೆನ್ನನ್ನು ಹತ್ತು ರೂಪಾಯಿ ಹೇಳಿ ನಾಲ್ಕಾಣೆಗೆ ಕೊಡುತ್ತಾರೆ ಪೆನ್ನಿನ ನಮೂನೆಗಳಷ್ಟೇ ನಮ್ಮ ಮಕ್ಕಳ ಬಾಹುವೂ ಇದೆ. ಪುಸ್ತಕಗಳ ಸಂಖ್ಯೆಗೆ ಮಿತಿಯೇ ಇಲ್ಲ—ನಮ್ಮ ವಿದ್ಯಾರ್ಥಿಯ ಅಭ್ಯಾಸ ಇಂದು ಪುಸ್ತಕ ಮತ್ತು ಅಧ್ಯಾಪಕರು ಇವರನ್ನೇ ಹೊಂದಿಕೊಂಡಿದೆ—ಇವೆರಡೂ ಇಲ್ಲವೆಂದರೆ ಅವನನ್ನು ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟಂತೆ. ಈತನ ಬುದ್ಧಿ ಪ್ರಜ್ಞೋದನೆಗೆ ಏನೂ ಅವಕಾಶವಿಲ್ಲ. ಕ್ರಿಕೆಟ್‌ಗಿಂತ ಕಡಿಮೆ ಆಟ ನಮ್ಮ ಮಕ್ಕಳಿಗೆ ಗೊತ್ತೇ ಇಲ್ಲ. ಆ ಆಟದ ಮೌಲ್ಯ ಆಡಿದವರಿಗೇ ಗೊತ್ತು. ಹಾಗೆಂದು ನಮ್ಮ ಎಲ್ಲ ಮಕ್ಕಳೂ ಅಂತಾರಾಷ್ಟ್ರೀಯ ಪಂದ್ಯಾಟಕ್ಕೇ ಹೋಗುವುದಿಲ್ಲ. ಒಂದು ಶಾಲೆಯ ವರ್ಷದ ಗೇಮ್ಸ್ ಫೀಸ್ ಎಷ್ಟು ಎಂದು ಲೆಕ್ಕ ಹಾಕಿದರೆ ವಿದ್ಯಾರ್ಥಿಗಳು ತೆರುವ ತೆರಿಗೆಯ ಲೆಕ್ಕ ಸುಲಭವಾಗಿ ಸಿಗುತ್ತದೆ. ಇಷ್ಟು ಬೆಲೆಯ ಈ ಕ್ರಿಕೆಟ್, ಹಾಕಿ, ಇನ್ನಿತರ ಹಲವು ಆಟಗಳನ್ನೇ ನಮ್ಮ ಭಾರತದ ಎಲ್ಲ ಮಕ್ಕಳೂ ಆಡಬಲ್ಲರೆ? ಅವರ ಮನಸ್ಸು ಇದಕ್ಕೆಂತ ಅಗ್ಗದ ಆಟಗಳಲ್ಲಿ ಪ್ರಸನ್ನವಾಗದೆ?

ಒಂದೊಂದು ಗ್ರಾಮದಲ್ಲೂ ಖರ್ಚಾಗುವ ಬೀಡಿ ಸಿಗರೇಟು, ಚಹಾ, ಕಾಫಿ ಇವುಗಳ ಮೌಲ್ಯ ಎಣಿಸಿದರೆ ನಮ್ಮದು ಶ್ರೀಮಂತಿಕೆಯ ಜೀವನವೆ? ಬಡಪಾಯಿ ಜೀವನವೆ? ತಿಳಿದೀತು. ಆದರೆ ಇದೂ ಉದ್ಯೋಗ ಒದಗಿಸುವ ಕೈಗಾರಿಕೆ, ಲಾಭ ತರುವ ಕೈಗಾರಿಕೆಯೂ ಹೌದು.

ಹೀಗೆ ನಮ್ಮ ಜೀವನದಲ್ಲಿ ಅನೇಕ ಮಾರ್ಪಾಟುಗಳನ್ನೂ ನಾನೇ ಮಾಡಿಕೊಂಡಿದ್ದೇನೆ. ಸರಳ ಜೀವನವನ್ನು ಶ್ರೀಮಂತಿಕೆಯ ಜೀವನ ನಡೆಸಲು ನಾನೇ ಆರಂಭಿಸಿದ್ದೇನೆ. ನಮ್ಮ ಆಶ್ಯಾಸಗಳನ್ನು ಬದಲಿಸಿಕೊಂಡಿದ್ದೇವೆ. ನಮ್ಮ ಆವಶ್ಯಕತೆಗಳನ್ನೂ ಅಷ್ಟೇ ಹೆಚ್ಚಿಸಿಕೊಂಡಿದ್ದೇನೆ.— ಆದರೆ ನಾವು ನಾವೇ ಬಡವರಾಗಿ ಯಾರನ್ನು ದೊಡ್ಡದು ಮಾಡಲು ಹೊರಟಿದ್ದೇವೆ ಎಂಬುದನ್ನು ಅರಿತಿಲ್ಲ. ಇಲ್ಲಿ ನಾವು ಎಂಬುದು ಬಹುಸ್ಥರದ ನಾವು--ಭಾರತದ ಸಾಮಾನ್ಯ ಪ್ರಜೆಗಳಾಗಿ ನಾವು—ಆಡಳಿತದ ಅಧಿಕಾರಿಗಳಾಗಿ ನಾವು—ಆಳುವ ಕಾಂಗ್ರೆಸಿಗರಾಗಿ ನಾವು ಇನ್ನಿತರ ರಾಜಕಾರಣಿಗಳಾಗಿ ನಾವು—

ಈ ಕತೆ ಇಷ್ಟಗೇ ಮುಗಿಯುವುದಿಲ್ಲ. ನಮ್ಮ ಬಡತನದ ಕತೆ ಇನ್ನೂ ಮುಂದೆ ಸಾಗುತ್ತದೆ. ಬೆರಳೆಣಿಕೆಯಷ್ಟು ವರುಷಗಳಲ್ಲಿ ನಾವು ನಮ್ಮ ಗೊಲ್ಲ ಗೋಪಾಲ ಕೃಷ್ಣನ ದೇಶದವರು,—ನಮ್ಮ ವಸುಧೈವ ಕುಟುಂಬದ ದನಕರುಗಳನ್ನು ಪುರಿಕಾ ಬಿಡುತ್ತೇವೆ.—ಪುಡಿ ಹಾಲನ್ನು ಸರಾಗವಾಗಿ ಉಪಯೋಗಿಸುತ್ತೇವೆ. ಡಬ್ಬಿ ತುಪ್ಪ ಮನೆ ಬಾಗಿಲಿಗೇ ಬರುತ್ತದೆ. ನಮ್ಮ ಮಕ್ಕಳಿಗೆ ಇದರ ರುಚಿ ಚೆನ್ನಾಗಿ ತಗಲುತ್ತಿದೆ.

ಹಿಂದುಳಿದ ರಾಷ್ಟ್ರ ಭಾರತ!!! (ಬುದ್ಧಿಯಿಲ್ಲ)—ಅಮೇರಿಕದ ಕೇರ್ ಸಂಸ್ಥೆ ನಮ್ಮ ಬಡ ಹಳ್ಳಿಗರ ಮಕ್ಕಳಿಗಾಗಿ ಹಾಲು ಪುಡಿ, ತುಪ್ಪ ಇತ್ಯಾದಿ ದಾನ ಮಾಡುತ್ತಿದೆ.—ಮುಂದೆ ಇದೇ ಅಭ್ಯಾಸ—

ಕೊನೆಗೂ ನಾವು ಹಿಂದುಳಿಯುವವರು—ಹಾಲು ಪುಡಿ ಕಾರ್ಖಾನೆಯವರು, ತುಪ್ಪದ ಕಾರ್ಖಾನೆಯವರು— ಮುಂದುಳಿಯುವವರು.

ನಮ್ಮ ದನಕರುಗಳನ್ನು, ಕೋಣಗಳನ್ನು ಮರೆತ ಮೇಲೆ ನಮಗೆ ಗೊಬ್ಬರವೆಲ್ಲಿಂದ? ನಮ್ಮ ಗದ್ದೆ ಉಳುವವರು ಯಾರು?—ಭಯವಿಲ್ಲ. ಹಣ ಮಾತ್ರ ನಾವು ತೆತ್ತರಾಯಿತು. ರಾಸಾಯನಿಕ ಗೊಬ್ಬರ, ಟ್ರಾಕ್ಟರ್‌ಗಳು ದೊರೆಯುತ್ತವೆ ನಮ್ಮ ಜೋಡೆತ್ತುಗಳಿಗೆ ಐದು ವರ್ಷಕ್ಕೊಮ್ಮೆ ಜೀವದಾನ ಮಾಡಿದರೆ ಸಾಕು.

ನಮ್ಮ ಕಂಚುಗಾರ, ಕರ್ಮಾರ, ಬಡಗಿ, ಕುಂಬಾರ, ಗಾಣಿಗ,—ಸಮಗಾರ—ನೇಕಾರ, ಇವರೆಲ್ಲ ನಮಗೆ ಅಗ್ಗದ ಮೂಲಸ್ತು ಒದಗಿಸುತ್ತಿದ್ದರು. ಅವರಿಗೂ ಉದ್ಯೋಗ, ನಮಗೆ ಅಗ್ಗದ ಮೂಲು. ನಮ್ಮ ಆಕ್ಕಿ ಧಾನ್ಯ ಅವರಿಗೆ,—ಹೀಗಿತ್ತು, ನಮ್ಮ ಜೀವನ ಈಗ ನಾವು ಅವರನ್ನು ನಗರಕ್ಕೆ—ಕಾರ್ಖಾನೆಗೆ ಕಳಿಸಿದ್ದೇವೆ. ಎಲ್ಲರನ್ನೆಲ್ಲ—ಕೆಲವರನ್ನು. ಉಳಿದವರು, ನಿರ್ಗತಿಕರು. ಆದ್ದರಿಂದ ನಮ್ಮದು ಹಿಂದುಳಿದ ರಾಷ್ಟ್ರ—

ಸ್ಟೀಲ್ ಪಾತ್ರೆ, ಟಾಟಾ ಚಪ್ಪಲಿ, ಮಿಲ್ ಬಟ್ಟೆ, ಮಿಲ್ ಎಣ್ಣೆ, ಗೋದ್ರೆಜ್ ಕಪಾಟು ಇವು ನಮ್ಮ ಕಣ್ಣನ್ನು ಆರಳಿಸಿವೆ, ಕಿಸೆ ಬರಿದೂ ಮಾಡಿವೆ.

ಆದ್ದರಿಂದಲೇ ದೇಶದಲ್ಲಿ ಶ್ರೀಮಂತ ವರ್ಗ! ಮಧ್ಯಮ ವರ್ಗ! ಬಡಜನ ವರ್ಗ! ಆದರೂ ನಮ್ಮದು ಸಮತಾವಾದದ ಕಲ್ಯಾಣ ರಾಷ್ಟ್ರ. ಹೀಗೆ ವರ್ಗಭೇದವಿದ್ದರೆನೇ ಒಂದು ವರ್ಗ ಇನ್ನೊಂದರ ಮೇಲೆ ಸವಾರಿ ಮಾಡಲು ಶಕ್ಯ. ರಾಷ್ಟ್ರೀಯತೆಯನ್ನು ತುಳಿಯಲು ಹೊರಟ ನಾವು ಈ ವರ್ಗಭೇದವನ್ನು ಹೆತ್ತಿಕ್ಕಲು ಸಮರ್ಥರಾಗಿಲ್ಲ. ಈಗ ಹೇಳಿ—ನಮ್ಮದು ಶ್ರೀಮಂತ ರಾಷ್ಟ್ರವೆ? ಅಲ್ಲ, ಶ್ರೀಮಂತರ ರಾಷ್ಟ್ರವೆ? ಅಥವಾ ಹಿಂದುಳಿದ ರಾಷ್ಟ್ರವೆ?

ಈಗತಾನೆ ತೆರೆಯಲ್ಪಟ್ಟಿದೆ! ನಗರದ ಹೊಸ—ಸ್ಟೆಯಿನ್‌ಲೆಸ್ ಸ್ಟೀಲ್ ಪಾತ್ರೆಗಳ ಸಂಸ್ಥೆ

ಅಶೋಕ ಸ್ಟೆಯಿನ್‌ಲೆಸ್ ಸ್ಟೀಲ್ ಸೆಂಟರ್

ಕಾರ್ನಾಡ್ ಸದಾಶಿವರಾವ್ ರಸ್ತೆ, ಹಂಪನಕಟ್ಟೆ, ಮಂಗಳೂರು.

ನಮ್ಮ ನಗರದ ಹಾಗೂ ಜಿಲ್ಲೆಯ ಅತ್ಯಾಕರ್ಷಕ ಅಂಗಡಿ

ಗೃಹೋಪಯೋಗದ, ಉಡುಗೊರೆಗಳ, ಅಲಂಕಾರದ, ಉಪಯುಕ್ತ ಸ್ಟೆಯಿನ್‌ಲೆಸ್ ಸ್ಟೀಲ್ ಪಾತ್ರೆಗಳು, ಸ್ಟೀಲ್ ಸೋಫಾ ಸೆಟ್ಟುಗಳು ಮತ್ತು ಇತರ ಹಲವು ವಸ್ತುಗಳು— ಈಗತಾನೆ ಹೊಸದಾಗಿ, ನವನವೀನ ಡಿಸೈನ್‌ಗಳಲ್ಲಿ!

ಇಂದೇ ಬಂದು ಸಂದರ್ಶಿಸಿ, ನಿಮಗೆ ಬೇಕಾದುದನ್ನು ಆರಿಸಿಕೊಳ್ಳಿರಿ!

14 ಕೆರೆಟ್ ಬಂಗಾರದ ಅತ್ಯಾಧುನಿಕ ಆಭರಣಗಳಿಗೆ ಸಂದರ್ಶಿಸಿರಿ:—
ಎಸ್. ಎಲ್. ಶೇಟ್. ಡೈಮಂಡ್ ಹೌಸ್
ಕೆ. ಎಸ್. ಆರ್. ರೋಡ್, ಹಂಪನಕಟ್ಟೆ, ಮಂಗಳೂರು—1.
Phone. 131

ಎಲ್ಲ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ ಸಂದರ್ಶಿಸಿರಿ:—
ಐಡೀಯಲ್ ಫೋಟೋ ಹೌಸ್
ಕೆ. ಎಸ್. ಆರ್. ರೋಡ್, ಹಂಪನಕಟ್ಟೆ, ಮಂಗಳೂರು—1.
ಪ್ರೊಪ್ರೈಟರ್: ಎಸ್. ಎಲ್. ಶೇಟ್. Tele: 'GOLDKING'

ಠೇವಣಾತಿಯ ಭದ್ರತೆಗಾಗಿ ಮತ್ತು ಆಕರ್ಷಕರವಾದ
ಬಡ್ಡಿಗಾಗಿ ನಿಮ್ಮ ಧನವನ್ನು

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಒಪರೇಟಿವ್ ಬೇಂಕ್ ಲಿಮಿಟೆಡ್

ಕೊಡಿಯಾಲ್‌ಬೈಲ್ ಮಂಗಳೂರು.

(ಸರಕಾರದ ಸಾಲು ಭಂಡವಾಳ ಇರುವ ಜಿಲ್ಲೆಯ
ಕೇಂದ್ರ ಸಹಕಾರಿ ಸಂಸ್ಥೆ)

ಪಾಲು ಬಂಡವಾಳ	ರೂ	11,13,000
ಕ್ಷೇಮ ನಿಧಿ ಮತ್ತು ಇತರ ಕಾದಿಟ್ಟ ನಿಧಿಗಳು	ರೂ.	6 64,000
ಠೇವಣಾತಿಗಳು ಮತ್ತು ಪಡೆದ ಸಾಲ	ರೂ	1,07,50,000
ಕೊಟ್ಟ ಸಾಲಗಳು	ರೂ.	91,86,000

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿದೆ

ಬಿ. ಪ್ರಭಾಕರ ರಾವ್,
ಎಂ.ಎ.,ಬಿ.ಎಲ್.,
ಅಧ್ಯಕ್ಷ.

ಎ. ನಾರಾಯಣ ನಾಯಕ್,
ಉಪಾಧ್ಯಕ್ಷ.

ಎಸ್. ಆರ್. ನಾಯ್ಕ್,
ಬಿ.ಕಾಂ.,ಎಲ್.ಎಲ್.ಬಿ.,
ಕಾರ್ಯದರ್ಶಿ.

ಬಿ. ವಿ. ಶೆಣಾಯಿ,
ಬಿ.ಕಾಂ.,ಎಚ್.ಡಿ.ಸಿ.,
ಉಪಕಾರ್ಯದರ್ಶಿ.

॥ ಸ್ವಾತಂತ್ರ್ಯವೆಮ್ಮುಸಿರು ॥

ಸ್ವಾತಂತ್ರ್ಯದಿನದ ಶುಭಾಶಯಗಳು

ಕಲ್ಪನಾ

ಏರ್ ಕಂಡೀಶನ್ಡ್ ಕೋಣೆಗಳಿಂದ ಸುಸಜ್ಜಿತವಾದ
ಅತ್ಯಾಧುನಿಕ ಊಟ, ಉಪಹಾರ ಮತ್ತು
ವಸತಿ ಗೃಹ.

"ಉಪೇಂದ್ರ ಬಾಗ್",
ಉಡುಪಿ.

Phone 66

SRI KRISHNA JEWELLERY MART

Ready Made Jewellery Dept.

Commission Agents

TENKAPET, UDIPI, S. KANARA.



Propr
U. Raghavendra Krishna Bhat

ಭಾರತ ಸ್ವಾತಂತ್ರ್ಯದಿನದ
ಹಾರ್ದಿಕ ಶುಭಾಶಯಗಳು!

ಆಧುನಿಕ ಸೌಕರ್ಯಗಳಿಂದ
ಪ್ರಶಾಂತ ವಾತಾವರಣದಿಂದ
ಗ್ರಾಹಕರ ಸೇವಾತುರದಿಂದ ಕೂಡಿರುವ

ಪ್ರವಾಸಿಗರ ಪ್ರಥಮ ಶ್ರೇಣಿಯ

ಪ್ರಸಿದ್ಧ ಭೋಜನ ಮತ್ತು ವಸತಿ ಗೃಹ

ರೋಯಲ್ ಮಹಾಲ್

ಉಡುಪಿ

ರುಚಿ-ಶುಚಿಗಳಿಗೆ, ಸಯವಿನಯ
ಮೇಲ್ವಿಚಾರಕ್ಕೆ ಹೆಸರಾದುದು.

ಕೆ. ವೆಂಕಟ್ರಮಣ ಭಟ್,
ಮ್ಯಾನೇಜರು.

ವಿದ್ಯಾರಣ್ಯರು ಮತ್ತು ಅವರ ಸಾಹಿತ್ಯ ಸೇವೆ

(೧೩ನೇ ಪುಟದಿಂದ)

ದೇವ–ಇವರ ಸಾಹಿತ್ಯ ಸೇವೆಯು ಕೇವಲ ದುಂಡುಭಿಯು ಅಗ ಕರ್ನಾಟಕದಲ್ಲಿಲ್ಲಾ ಪ್ರತಿಧ್ವನಿಸುತ್ತಿತ್ತು. ಆಗ ತಾನೇ ಜ್ಞಾನೇಶ್ವರರು ತಮ್ಮ ಜ್ಞಾನೇಶ್ವರಿಯನ್ನು ಕ್ರಿ. ಶ. ೧೨೯೦ರಲ್ಲಿ ದೇವಗಿರಿಯಲ್ಲಿ ಪೂರ್ಣಗೊಂಡು, ಮುಂದೆ ಅರು ವರ್ಷಗಳು ಮಾತ್ರ ಬದುಕಿದ್ದು ತಮ್ಮ ಅವತಾರವನ್ನು ಮುಗಿಸಿದ್ದರು. ಇವೆಲ್ಲಾ ವಿದ್ಯಾರಣ್ಯರ ಗಮನಕ್ಕೆ ಬಾರದೆ ಇರಲಿಲ್ಲ. ಅವರು ಸ್ವರಾಜ್ಯವನ್ನು ಸನಾತನ ಧರ್ಮದ ತಳಹದಿಯ ಮೇಲೆಯೇ ಭದ್ರಗೊಳಿಸಬೇಕೆಂದು ಲೇಖನಿಯನ್ನು ಕೈಗೆತ್ತಿಕೊಂಡರು.

ಶ್ರೀ ಶಂಕರಾಚಾರ್ಯರ ಕಾಲಕ್ಕಿಂತ ಶ್ರೀ ವಿದ್ಯಾರಣ್ಯರ ಕಾಲಕ್ಕೂ ಪರಸ್ಪರ ಸಾಮ್ಯ ವಿದೆ. ಶಂಕರಾಚಾರ್ಯರೂ ಧರ್ಮವನ್ನು ಜೀರ್ಣೋದ್ಧಾರಗೊಳಿಸಲು ಸಾಂಖ್ಯ, ವೈಶೇಷಿಕ, ಪಾತಂಜಲಿ, ಆರ್ಹತ, ಚಾರ್ವಾಕ ಮೊದಲಾದ ಮತಗಳನ್ನು ಖಂಡಿಸಬೇಕಾಯಿತು. ಆಚಾರ್ಯರು ಬ್ರಹ್ಮ ಸೂತ್ರದ ಮೇಲಿನ ಭಾಷ್ಯದಲ್ಲಿ ಈ ಮತಗಳ ವಿಚಾರ ನಡೆಸಿದ್ದಾರೆ. ವಿದ್ಯಾಸ್ವಾಮಿಗಳೂ ಅಧಿಕರಣ ರತ್ನ ಮಾಲೆಯ ಆಧಾರದಿಂದ ಈ ಮತಗಳ ವಿಚಾರ ನಡೆಸಿದ್ದಾರೆ. ಆಗ ಕರ್ನಾಟಕದಲ್ಲಿ ಧಾರಾ ಪೊಕ್ಕಾಗಿ ವಿಶಿಷ್ಟಾದ್ವೈತ ಮತ್ತು ದ್ವೈತ ಮತಗಳು ತಲೆ ಎತ್ತಿ ಪ್ರಬಲವಾಗಿದ್ದುವು. ಆದರೆ ಸ್ವಾಮಿಗಳು ಅದ್ವೈತಪಕ್ಷಪಾತಿಗಳಾಗಿದ್ದರು. ಅವರ ಎಲ್ಲಾ ಗ್ರಂಥಗಳೂ ಅದ್ವೈತ ಮತವೆ ಪುನರುಜ್ಜೀವನಕ್ಕಾಗಿಯೇ ವಿನಿಯೋಗವಾದುವು.

ವಿದ್ಯಾರಣ್ಯರ ಸಾಹಿತ್ಯ ಸೇವೆಗೆ ಅನುಕೂಲವಾದ ಸಮಯವು ಒದಗಿತು. ಸ್ವರಾಜ್ಯ ಸ್ಥಾಪನೆಯಾಗಿ ದೇಶದಲ್ಲಿ ನೆಮ್ಮದಿ ನೆಲಸಿತು. ಅವರು ಅನೇಕ ಉದಾತ್ತ ಗ್ರಂಥಗಳನ್ನು ರಚಿಸಿ, ವೇದಗಳಿಗೆ ಭಾಷ್ಯವನ್ನೂ, ಪಡ್ದರ್ಶನಗಳಿಗೆ ಟೀಕೆಗಳನ್ನೂ ಬರೆದರು. ಇವರಂತೆ ಜಗತ್ತಿನಲ್ಲಿ ಹಲವು ವಿಷಯಗಳಲ್ಲಿ ಪಾಂಡಿತ್ಯವುಳ್ಳವನು ಅರಿ ಸ್ಪಾಲನೊಬ್ಬನೆಂದೇ ತೋರುತ್ತದೆ. ವಿದ್ಯಾರಣ್ಯರು ಕವಿತಾಶಕ್ತಿಯುಳ್ಳ ಕಾಲಿದಾಸನ ಸಮಾನರೆಂದು ಅವರಿಂದ ರಚಿತವಾದ ಶಂಕರವಿಜಯದಿಂದ ಗೊತ್ತಾಗುತ್ತದೆ. ಇವರು ಕಾಲಿದಾಸನಂತೆ ತಮ್ಮ ಕಾವ್ಯದಲ್ಲಿ ವಿನಯದ ಭಾರದಿಂದ ಬಾಗಿದ್ದಾರೆ. ಶಂಕರ ಸದ್ಗುರುವಿನ ಸುಚರಿತ್ರವೆಲ್ಲಿ! ಅಲ್ಪಜ್ಞನಾದ ನಾನೆಲ್ಲಿ? ಹೀಗಿದ್ದು ಆ ಗುರುವಿನ ವರ್ಣನೆಯಂತಹ ಶಿಕಟ್ಟುವ ಕೆಲಸದಲ್ಲಿ ನನ್ನನ್ನೇಕೆ ತೊಡಗಿಸುತ್ತಿ? ಇಂದಿನವರೆಗೆ ನಾನು ಗಳಿಸಿದ ಯಶಸ್ಸೆಲ್ಲಾ ಇದರಿಂದ ಕಳೆದು ಹೋಗಬಹುದು. ಹೀಗೆಂದು ಸರಸ್ವತಿಯು ಮಾಧವಾಚಾರ್ಯರಿಗೆ ಹೇಳಿ ಓಡಿ ಹೋಗಿದ್ದಳಂತೆ! ಆದರೆ ಕವಿಗಳೆಲ್ಲಾ ಆಕೆಯನ್ನು ಸ್ವಾಧೀನಿಸಿ ಗುರುಸ್ತುತಿಯಲ್ಲಿ ವ್ಯೇರಿಸಿದರು. ಇವರು ಒರೆದ ಸರ್ವದರ್ಶನ ಸಂಗ್ರಹದಂತೆ ಇವರಲ್ಲೂ ೧೬ ಪ್ರಕರಣಗಳಿವೆ. ಶ್ರೀ ಶಂಕರಾಚಾರ್ಯರು ಮತ್ತು ಮಂಡನ ಮಿಶ್ರರ ವಾದವು ಇವರಲ್ಲಿ ಚಮತ್ಕಾರವಾಗಿದೆ. ಇದರ ನುಗ್ಗಳ ಶ್ಲೋಕವು ಜೈಮಿನಿ ನ್ಯಾಯಮಾಲೆಯಲ್ಲಿನ ಮಂಗಲ ಶ್ಲೋಕದಂತೆಯೇ ಇದೆ.

ಗ್ರಂಥಗಳ ಸಂಖ್ಯೆಯು ಮೂಸದಿಂದ ನೋಡಿದರೂ ಶಂಕರಾಚಾರ್ಯರ ಗ್ರಂಥಗಳಿಗಿಂತ ವಿದ್ಯಾರಣ್ಯ ಸ್ವಾಮಿಗಳ ಗ್ರಂಥಗಳೇ ಅಧಿಕವಾಗಿವೆ. ಅಲ್ಲದೆ ವಿಷಯ ವೈಚಿತ್ರ್ಯವು ವಿದ್ಯಾರಣ್ಯರ ಗ್ರಂಥಗಳ ಇನ್ನೊಂದು ಹೆಚ್ಚಿನ ಗುಣ. ಇವರ ಗ್ರಂಥರಾಶಿಯೊಳಗಿನ ಬಹುಭಾಗವು ವ್ಯಾಖ್ಯಾನ ರೂಪವಾಗಿಯೂ, ವಿವರಣ ರೂಪವಾಗಿಯೂ ಇರುವುದರಿಂದ ಗದ್ಯಾತ್ಮಕವಾಗಿದೆ. ವೇದಾಂತ ಪಂಚದಶಿಯು ಅನುಷ್ಟುಪ್ ಕಂದಸ್ಸಿನಲ್ಲಿದ್ದು ಪದ್ಯಾತ್ಮಕವಾಗಿದೆ. ಶಾಸ್ತ್ರಾಧ್ಯಯನವು ಮುಗಿದೊಡನೆ ಶ್ರೀವಿದ್ಯಾರಣ್ಯರು ಪ್ರಥಮವಾಗಿ ಶಂಕರ ವಿಜಯ ಕಾವ್ಯವನ್ನು ಬರೆದು ತಮ್ಮ ಸಾಹಿತ್ಯ ಸೇವೆಯ ಗಣಪತಿ ಪೂಜೆಯನ್ನು ಮೂಡಿದರೆಂದು ತೋರುತ್ತದೆ. ಈ ಕಾವ್ಯದಲ್ಲಿ ತರುಣ ಕವಿಯ ಕವಿತಾ ಶಕ್ತಿ ಮತ್ತು ಪಾಂಡಿತ್ಯದ ಪ್ರವಾಹವಿದೆ. ಇವರ ಸರ್ವದರ್ಶನ ಸಂಗ್ರಹದಲ್ಲಿ ಜಾರ್ವಾಕ ಮತವನ್ನು ಮೊದಲ್ಗೊಂಡು, ಶಂಕರ ದರ್ಶನದ ವರೆಗೆ ವ್ಯಾಖ್ಯಾನವು ಬರಿದಿದ್ದಾರೆ. ಇದರಲ್ಲಿ ಆಯಾ ಮತವಾದಿಗಳ ಗ್ರಂಥಗಳ ಅವತರಣಗಳೂ ವಿವೇಚನೆಗಳೂ ಕೂಡಿರುವುದರಿಂದ ಇದು ಗದ್ಯ ಪದ್ಯಾತ್ಮಕವಾಗಿದೆ. ಈ ಗ್ರಂಥವೊಂದರಿಂದಲೇ ಅವರ ಪಾಂಡಿತ್ಯವು ದಶದಿಕ್ಕುಗಳಗೂ ಹರಡಿತು ಇವರ ವ್ಯವಹಾರ ಪ್ರಧಾನ ಗ್ರಂಥಗಳಲ್ಲಿ ಪರಾಶರಸ್ಮೃತಿ ವ್ಯಾಖ್ಯಾನ, ಮನುಸ್ಮೃತಿ ವ್ಯಾಖ್ಯಾನ, ನಾಲ್ಕೂ ವೇದಗಳ ಭಾಷ್ಯಗಳು, ಬ್ರಾಹ್ಮಣ ಭಾಷ್ಯಗಳು, ಜೈಮಿನೀಯ ನ್ಯಾಯ ಮಾಲಾ ವಿಸ್ತರ, ವೈಯಾಸಿಕ ನ್ಯಾಯ ಮಾಲಾ, ಕಾಲಮಾಧವ, ವ್ಯವಹಾರ ಮಾಧವ, ಮಾಧವೀಯ ಧಾತುವೃತ್ತಿ, ವಿವರಣ ಪ್ರಮೇಯ,ಬ್ರಹ್ಮವಿದಾಭರಣ ವರ್ಣಾದ ಪದ್ಧತಿ, ಸೂತಸಂಹಿತೆ ಮತ್ತು ಬ್ರಹ್ಮ ಗೀತೆಗಳು ಸಮಾವೇಶವಾಗುತ್ತವೆ. ವೈರಾಗ್ಯ ಪ್ರಧಾನ ಗ್ರಂಥಗಳಲ್ಲಿ ವೇದಾಂತ ಪಂಚದಶಿ, ಜೀವನ್ಮುಕ್ತ ವಿವೇಕ, ಅನುಭೂತಿ ಪ್ರಕಾಶ, ದಶೋಪನಿಷದ್ದೀಪಿಕಾ, ಆಪರೋಕ್ಷಾನುಭೂತಿ ಮತ್ತು ಕೆಲವು ಸ್ತೋತ್ರಗಳೂ ಸೇರುತ್ತವೆ.

ಪರಾಶರ ಮಾಧವೀಯವು ಧರ್ಮ ಶಾಸ್ತ್ರ ವಿಷಯಕ ಗ್ರಂಥ. ಇದರಲ್ಲಿ ವಿದ್ಯಾರಣ್ಯರು ತಮ್ಮ ವೃತ್ತಾಂತವನ್ನು ಸ್ವಲ್ಪ ಮಟ್ಟಿಗೆ ಬೀಳಿದ್ದಾರೆ. ನಾಲ್ಕು ವೇದಗಳ ಭಾಷ್ಯವನ್ನು ಇವರು ಬುಕ್ಕರಾಯನ ಕಾಲದಲ್ಲಿ ಆರಂಭಿಸಿ, ಇನ್ನುಡಿ ಹರಿಹರನ ಕಾಲದಲ್ಲಿ ಮುಗಿಸಿರಬೇಕು. ಈ ನಾಲ್ಕು ವೇದಗಳೂ ಒಂದಕ್ಕೊಂದು ಸಮನಾಗಿಲ್ಲ. ಋಗ್ವೇದದಲ್ಲಿ ಸಂಹಿತಾ ಭಾಗ ಹೆಚ್ಚು.ಯಜುರ್ವೇದದಲ್ಲಿ ಬ್ರಾಹ್ಮಣ ಭಾಗ ಹೆಚ್ಚು. ಸಾಮವೇದದಲ್ಲಿ ಗೀತೆಗಳು ಹೆಚ್ಚು. ಇವುಗಳಿಗೆಲ್ಲಾ ಸ್ವತಂತ್ರವಾಗಿ ಅರ್ಥ ಹೊಳಲಾಗುವುದಿಲ್ಲ. ಇವುಗಳ ಅರ್ಥಕ್ಕೆ ಶಿಕ್ಷೆ, ವ್ಯಾಕರಣ ಸೊದೆಲಾದ ವೇದಾಂಗಗಳೂ, ವಿಮರ್ಶಾಂಸ ಮೊದಲಾದ ವೇದನ ಉಪಾಂಗಗಳೂ ಅಗತ್ಯವಾಗಿವೆ. ಈ ವೇದ ಭಾಷ್ಯದ ಮಹಾ ಕಾರ್ಯಕ್ಕೆ ಮಾಧವ ಸಾಯಣರು ಪಂಚಾಗ್ನಿ ಮಾಧವ, ನರಹರಿ ಭಟ್ಟ, ನಾರಾಯಣ ವಾಜಪೇಯಿ, ಸುಂದರ ದೀಕ್ಷಿತ, ಪ್ರಾಗಾಭರಣ ಭಟ್ಟ, ವಾಮನ ಪಂಡಿತ ಮೊದಲಾದ ಮಹಾ ವಿದ್ವಾಂಸರ ಸಹಕಾರವನ್ನು ಪಡೆದಿರಬೇಕೆಂದು ತೋರುತ್ತದೆ. ಇವರೇ ಆ ಯುಗದ ಮಹಾ ವಿದ್ವಾಂಸರು. ಮಾಧವ ಸಾಯಣರು ಮೊದಲು ತಮ್ಮ ಸ್ವಕೀಯ ಶಾಖೆಯ ಅಭಿವೃದ್ಧಿಗೆ ಪ್ರೋತ್ಸಾಹಕರಾಗಿಯೇ ಇದ್ದರು. ಆಗ ಒಂದನೆಯ ಹರಿಹರನ ಆಳಿಕೆಯಲ್ಲಿ ಮುಗುಳಿಯು ಪುರಾಧಿಪನಾದ ಒಂದನೆಯ ಮಂಗರಸನು ಖಗೇಂದ್ರ ಮಣಿದರ್ಪಣವನ್ನು ಬರೆದನು ಧರ್ಮನಾಥ ಪುರಾಣವನ್ನು ಬರೆದ ಮಧುರನು ಎರಡನೆಯ ಹರಿಹರನ ಆಸ್ಥಾನ ಕವಿಯಾಗಿದ್ದನು ಒಂದನೆಯ ಬುಕ್ಕರಾಜರ ನೊಮ್ಮನಾದ ದೇವರಾಯನು ಕೊಬಿಗೆನ ಸೋಸಲೆ ಮತ್ತು ಅಮರುಕ ಗ್ರಂಥವನ್ನು ಬರೆದಿದ್ದಾನೆ. ಈ ಕನ್ನಡ ಸಾಹಿತ್ಯ ಪ್ರೋಸಪೆಯು ಕುಚ್ಚು ಮುಂದೆ ಕನ್ನಡಿಗರಲ್ಲಿ ಅತಿಶಯವಾಗಿ ಕುತೂಹಲವನ್ನು ಹುಟ್ಟಿಸಿದ ಹಾಗೆಯೇ

ಆರ್ಥಿಕ ಅಭಿವೃದ್ಧಿ ಮತ್ತು ಸಮಾನತೆ

(ಗಾನೇ ಪುಟದಿಂದ)

ಆಂತರಗಳ ನಿರ್ಮೂಲನ ಹಾಗೂ ಆದಾಯಗಳ ಆಂತರಗಳನ್ನು ಕಡಿಮೆಗೊಳಿಸುವ ಆದರ್ಶ ಅವರ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯ. ಬಡವರೇ ಬಹು ಸಂಖ್ಯಾತರಾಗಿರುವ ಭಾರತದಲ್ಲಿ ಆರ್ಥಿಕ ಬದಲಾವಣೆಗೆ ಸಮಾನ ಅವಕಾಶ ಹಾಗೂ ಸಾಮಾಜಿಕ ಸಮಾನತೆಯು ಪ್ರೇರಕ ಶಕ್ತಿ ಅವಶ್ಯವಾಗಿದೆ. ಗಾಲ್‌ಬ್ರೈತ್ ತನ್ನ "ಶ್ರೀಮಂತಿಕೆಯ ಸಮಾಜ"ದಲ್ಲಿ ಬರೆದಿರುವಂತೆ "ಆದಾಯಗಳ ವಿತರಣೆಯಲ್ಲಿ ಬಡವನ ಪಾಲಿಗೆ ಇವೆ.....ಮುಂದುವರಿದ ಆರ್ಥಿಕ ವ್ಯವಸ್ಥೆಗಳಲ್ಲಿ ಅಧಿಕ ಉತ್ಪಾದನೆಯು ಆರ್ಥಿಕ ವಿತರಣೆಗೆ ಪ್ರತಿ ವ್ಯವಸ್ಥೆಯಾಗಿದೆ.....ಹಿಂದುಳಿದ ದೇಶಗಳಲ್ಲಿ ಈ ಬಗ್ಗೆ ಸುಧಾರಣೆಯನ್ನು ಮಾಡುವುದು ಮುಖ್ಯ ಸಮಸ್ಯೆಯಾಗಿದೆ. ("Galbraith: Affluent Society) ಆದಾಯಗಳ ಆಂತರಗಳನ್ನು ಕಡಿಮೆಗೊಳಿಸುವ ಕಾರ್ಯವು ಸಾಮಾಜಿಕ ನ್ಯಾಯದ ಪ್ರಶ್ನೆ. ಹಾಗೂ ಆರ್ಥಿಕ ಬೆಳವಣಿಗೆಗೆ ನಿಜವಾಗಿ ಮುಖ್ಯವಾಗಿದೆ. ಇದನ್ನು ಅಮುಖ್ಯವೆಂದು ಅಲ್ಲಗಳೆಯುವಂತಿಲ್ಲ. ಆರ್ಥಿಕ ಅಭಿವೃದ್ಧಿಗೆ—ಸ್ಥಿರ ಸರಕಾರ, ಶಿಕ್ಷಣಗಳು ಅವಶ್ಯವಾಗಿರುವಂತೆಯೇ ಸಾಮಾಜಿಕ ನ್ಯಾಯವು ಅತ್ಯಂತ ಅಗತ್ಯವಾಗಿದೆ ಎಂದಿದ್ದಾರೆ ಗಾಲ್‌ಬ್ರೈತ್ (Economic Development in Perspective) ಆದುದರಿಂದ ಹಜ್ರೊಂಭತ್ತನೆಯ ಶತಮಾನದ ಆರ್ಥಿಕ ದೃಷ್ಟಿಕೋನದಿಂದ ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ಪುನರ್ ರೂಪಿಸುವುದು ಸರಿಯಲ್ಲ. ಸಮಾಜ ನ್ಯಾಯವನ್ನು ಕಡೆಗಣಿಸುವ ಆರ್ಥಿಕ ನೀತಿಯು ಬೆಳವಣಿಗೆಯನ್ನು ಸಾಧಿಸಲು ಸಮರ್ಥವಾಗಲಾರದು. ಈ ಸಾಮಾಜಿಕ ನ್ಯಾಯ ದೃಷ್ಟಿಯು ಭಾರತದ ಆರ್ಥಿಕ ಧೋರಣೆಯನ್ನು ರೂಪಿಸಿದೆ. ಈ ಆರ್ಥಿಕ ಧೋರಣೆಯು—ದೇಶದ ರಾಜಕೀಯ ಆದರ್ಶಗಳಿಗೂ ಸಾಮಾಜಿಕ ನ್ಯಾಯ ತತ್ವಗಳಿಗೂ ಸರಿಯಾಗಿದೆ.

ಆದಾಯಗಳ ಆಂತರಗಳು ಆರ್ಥಿಕ ಬೆಳವಣಿಗೆಗೆ ಅಗತ್ಯವೆಂಬ ಆರ್ಥಿಕ ಅಭಿವೃದ್ಧಿಗೆ ಆರ್ಥಿಕ ಅರ್ಥಶಾಸ್ತ್ರಜ್ಞರು ಸಾಮ್ರಾಜ್ಯಗಳನ್ನೇ ನಿರ್ಮಿಸಿದ್ದಾರೆ. ಆದರೆ ಇಂದಿನ ಅಂತಹ ಸಿದ್ಧಾಂತವು ಆರ್ಥಿಕ ಅರ್ಥಶಾಸ್ತ್ರ ಸಿದ್ಧಾಂತ ಚರ್ಚೆಯಲ್ಲಿ ಅನಂಗತವೆಂದೂ ಅಭಿಪ್ರಾಯ ಪಡುತ್ತಾರೆ. ಹಿಂದುಳಿದ ರಾಷ್ಟ್ರಗಳ ಬೆಳವಣಿಗೆಯಲ್ಲಿ ಆದಾಯ ಹಾಗೂ ಸಂಪತ್ತುಗಳಲ್ಲಿ ಕಂಡು ಬರುವ ಅಗಾಧ ಆಂತರಗಳನ್ನು ಕ್ರಮೇಣತೆಯಾಗಿ ಕಡಿಮೆ ಮಾಡುವುದು ಅವಶ್ಯವಾದ ಕಾರ್ಯಕ್ರಮವೆಂಬುದನ್ನು ಅರ್ಥಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಆದಾಯಗಳ ಹಾಗೂ ಅಧಿಕಾರದ ವಿತರಣೆಯಲ್ಲಿ ಸಾಮಾಜಿಕ ಕ್ರಾಂತಿಯು ಬದಲಾವಣೆಯನ್ನು ಮಾಡದ ವಿನಃ ಹೆಚ್ಚಿನ ಆರ್ಥಿಕ ಪ್ರಗತಿಯು ಅಸಾಧ್ಯ. ಇಂದು ಹೆಚ್ಚಿನ ಹಿಂದುಳಿದ ಅನಭಿವೃದ್ಧಿಯ ರಾಜ್ಯಗಳಲ್ಲಿ ಆರ್ಥಿಕ ಹಾಗೂ ರಾಜಕೀಯ ಅಧಿಕಾರ ಕೇವಲ ಸಣ್ಣ ವರ್ಗಗಳ ಕೈಗಳಲ್ಲಿ ಕೇಂದ್ರೀಕೃತವಾಗಿದೆ. ಅಂತಹ ವರ್ಗದವರ ಮುಖ್ಯ ಉದ್ದೇಶ ಹಣ ಹಾಗೂ ಅಧಿಕಾರವನ್ನು ತಮ್ಮ ಸಂಪತ್ತು ಹಾಗೂ ಪ್ರಬಲತ್ವಗಳನ್ನು ಉಳಿಸುವುದಾಗಿದೆ....ಇದು ಆತ್ಯಂತ ಅನ್ಯಾಯವನ್ನು ಸ್ವಾಗತಗೊಳಿಸುವ ಭೂ ವ್ಯವಸ್ಥೆಯ ಹಾಗೂ ವ್ಯವಸಾಯಿಕ ಪದ್ಧತಿಗಳ ಮೂಲಕ ಸಂಪತ್ತು ಹಾಗೂ ಆದಾಯಗಳಲ್ಲಿ ಅತಿರೇಕವಾದ ಆಂತರಗಳನ್ನುಂಟು ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುತ್ತದೆ ಎಂದು ಸಂಯುಕ್ತ ರಾಷ್ಟ್ರ ಸಂಘದ ಸಮಿತಿಯೊಂದು ವರದಿ ಮಾಡಿರುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆಯು ಅನೇಕ ಲಕ್ಷಣಗಳು ಇಲ್ಲಿ ವಿವರಿಸಿರುವಂತೆಯೇ ಇವೆ. ಉದಾಹರಣೆಗಾಗಿ, ಭಾರತದ ಒಂದು ವ್ಯಾಪಕ ಜಾತಿ—ಪೂರ್ವಾಗ್ರಹಗಳು—ಭಾರತದ ಹೆಚ್ಚಿನ ಆಹಾರ ಧಾನ್ಯಗಳ ವ್ಯಾಪಾರವನ್ನು ನಿಯಂತ್ರಿಸುತ್ತಾರೆ ಕೇವಲ ಎಂಟು ಕುಟುಂಬಗಳು ಜಟ್ಟಾ ಪ್ಲೈರೆಕ್ಟರ್‌ಶಿಪ್‌ಗಳನ್ನು ತಮ್ಮ ಕೈವಶ ಮಾಡಿಕೊಂಡಿರುತ್ತಾರೆ. ಸಂಪತ್ತಿನ ಕೇಂದ್ರೀಕರಣಕ್ಕೆ ಬೇರೆ ಉದಾಹರಣೆ ಬೇಕೇ?

ಇಂತಹ ಸಾಮಾಜಿಕ ನೆಲೆಯಿಲ್ಲದ ನೀತಿಯು ವ್ಯರ್ಥ. ಸಮಾಜದಲ್ಲಿ ರೂಢಿಯಲ್ಲಿ ಬಂದಿರುವ ಅಸಮತೆಗಳು ಕ್ರಮೇಣ ಬಹು ಸಂಖ್ಯಾತರಿಂದ ಸಮಾಜದ ಅನಿವಾರ್ಯ ವ್ಯವಸ್ಥೆಯೆಂದು ಅಂಗೀಕರಿಸಲ್ಪಡುತ್ತವೆ. ಆದರೆ ಆದರಿಂದ ಸಮಾಜದ ಬೆಳವಣಿಗೆ ಸ್ಥಗಿತಗೊಳ್ಳುತ್ತದೆ. ವ್ಯಕ್ತಿಗಳು ಅನ್ಯಾಯಕ್ಕೊಳಗಾಗುತ್ತಾರೆ. ಸಮಾಜದ ಸಾಮಾಮೂಹಿಕ ಪ್ರಯತ್ನಗಳು ಸಮಾಜಾಭಿವೃದ್ಧಿಕಾರ್ಯಗಳು ನಷ್ಟ ಹೊಂದುತ್ತವೆ. ಸಾಮಾಜಿಕ ನೀತಿ ಆರ್ಥಿಕ ಅಂತರಗಳ ನಿರ್ಮೂಲನ, ಸಂಪತ್ತಿನ ಸ್ವಾಮಿತ್ವದ ಬಲ್ಲಂಟಾಗುವ ವ್ಯತ್ಯಾಸಗಳನ್ನು ಕಡಿಮೆಗೊಳಿಸುವ ಆದರ್ಶ ಆರ್ಥಿಕ ಬೆಳವಣಿಗೆಯ ಅವಿಭಾಜ್ಯ ಅಂಗವಾಗತಕ್ಕದ್ದು. ಇಲ್ಲದಿದ್ದರೆ ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ಸರಿಯೆಂದು ಒಪ್ಪುವುದಾದರೆ, ಮತ್ತು ಆರ್ಥಿಕ ಅಭಿವೃದ್ಧಿಯ ಬೃಹತ್ ಕಾರ್ಯಕ್ರಮವನ್ನು ಆ ಆಯಕಟ್ಟಿನಲ್ಲಿ ಕಾರ್ಯರೂಪಕ್ಕೆ ತರುವುದಾದರೆ, ಯಾವ ಯಾವ ವರ್ಗಗಳಿಂದ ಸಮಾಜದ ಅಭಿವೃದ್ಧಿ ತಡೆಯಲ್ಪಟ್ಟಿದೆಯೋ ಅವರಿಗೇನೇ ಆದರ ಪ್ರಯೋಜನ ದೊರಕಿದಂತಾಗುವುದು. ಉದಾಹರಣೆಗಾಗಿ ಭಾರತ ಸರಕಾರವು ಕೈಗೊಂಡ ಹೆಚ್ಚಿನ ಪೀರಾವರಿ ಕಾರ್ಯಕ್ರಮಗಳೂ, ಗ್ರಾಮೀಣ ಪ್ರದೇಶಗಳ ಪುನರ್ ವ್ಯವಸ್ಥೆ ಹಾಗೂ ಸಮಾಜಾಭಿವೃದ್ಧಿ ಯೋಜನೆಗಳ ಕಥೆಯೂ ಸೋಲಿನ ಕಥೆಯಾಗಿದೆ ಎಂದು ಅನೇಕ ಸಮಿತಿಗಳು ವರದಿ ಮಾಡಿವೆ. ಕೃಷಿ ಅರ್ಥಶಾಸ್ತ್ರ ಹಾಗೂ ಸಮಾಜ ಶಾಸ್ತ್ರಗಳ ತಜ್ಞರಾದ ನೂಬೆ, ದೇಸಾಯಿ ಮತ್ತು ತಾಲೋರ್ ಸಿಂಘೆರವರು ಮಾಡಿದ ಅಧ್ಯಯನಗಳನ್ನು ಗುನ್ನರ್ ವಿಸುರ್ಶಿಸುತ್ತಾ ಪ್ರೊಫೆಸರ್ ಲೂಸಿಯೊ ನ್ಯೂನೆಜ್‌ರವರು ಮಾಡಿದ ಅಭಿಪ್ರಾಯಗಳು ಗಮನಾರ್ಹವಾಗಿವೆ. "ಆರ್ಥಿಕ ಅಧಿಕಾರಗಳನ್ನು ಪಡೆದಿರುವ ಮೇಲು ವರ್ಗಗಳು, ಶ್ರಮಿಕ ವರ್ಗಗಳನ್ನು ರಕ್ಷಿಸಲು ಸರಕಾರವು ಮಾಡಿರುವ ರಕ್ಷಣಾ ಶಾಸನಗಳನ್ನು ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುವುವು ಅಥವಾ ತಮ್ಮ ಸ್ವಂತ ಲಾಭಕ್ಕಾಗಿ ತಿರುಗಿಸಿಕೊಳ್ಳುವುತ್ತವೆ." (Rural Sociology in India: A R. Desai)

ಇದರ ಅರ್ಥವಿಷ್ಟೆ. ಆರ್ಥಿಕ ಬದಲಾವಣೆಯೇ ಮುಖ್ಯ ಪ್ರಶ್ನೆಯಲ್ಲ. ಆದರೊಂದಿಗೆ ಸಾಮಾಜಿಕ ನೀತಿಯೂ ಅಗತ್ಯ. ಸಾಮಾಜಿಕ ಅಂತರಗಳನ್ನು ಕಡಿಮೆಮಾಡುವ ಆದರ್ಶ, ಆರ್ಥಿಕ ಬೆಳವಣಿಗೆಯ ಆದರ್ಶದೊಂದಿಗೆ ಅಳವಡಿಸಿಕೊಳ್ಳಬೇಕಾಗಿದೆ. ವರ್ಗ ವರ್ಗಗಳೊಳಗಿನ ಆರ್ಥಿಕ ಸಮತೆಯ ಅವಶ್ಯಕತೆಗಳು ಸಾಮಾಜಿಕವಾಗಿ ಅನ್ಯಾಯವನ್ನೂ, ಆರ್ಥಿಕವಾಗಿ ಅವ್ಯವಸ್ಥೆಯನ್ನೂ ಉಂಟುಮಾಡುತ್ತವೆ. ಆದುದರಿಂದ ಸಮಾನತೆಯ ಆದರ್ಶ ಆರ್ಥಿಕ ಬೆಳವಣಿಗೆಗೆ ಅನಗತ್ಯ. ಯೋಜನಾಬದ್ಧ ಬೆಳವಣಿಗೆಗೆ ಅನಾವಶ್ಯಕವೆಂಬ ವಾದ ಅಸಂಬದ್ಧವೂ ಅಸಂಗತವೂ ಆಗಿದೆ. ಅಂತರಗಳು ಇದ್ದಂತೆಯೇ ಇವೆ. ಬಹಳ ನಿಧಾನವಾಗಿ ನತಿಸಿ ಹೋಗುತ್ತಿವೆ ಎಂಬುದಕ್ಕೆ ಸಾಕಷ್ಟು ಸಾಕ್ಷಿಗಳಿವೆ. ಆದರೆ ಇಂದಿರುವ ಅಂತರಗಳು ಜಿಚ್ಚಟ್ಟಿತ್ತಿವೆ ಎಂದು ಡಾ. ಗ್ಯಾನ್‌ಚಂದ್ ಮತ್ತು ಡಾ| ಗಾಡ್ಗಿಲ್ ಅಭಿಪ್ರಾಯಪಡುತ್ತಾರೆ. ಹೊಸ ಅಂತರಗಳು ಉಂಟಾಗುತ್ತಿವೆ ಎಂಬ ಇನ್ನೊಂದು ಆರೋಪವು ತಲೆಯೆತ್ತುತ್ತಿದೆ. ಆದರೆ ಈ ಮೂರು ಅಭಿಪ್ರಾಯಗಳಲ್ಲಿಯೂ ಆರ್ಥಿಕ ಅಂತರಗಳು ಅಭಿವೃದ್ಧಿಯನ್ನು ತಡೆಯುತ್ತವೆ, ಎಂಬ ಒಮ್ಮತವಿದೆ.

ಆದುದರಿಂದ ಆರ್ಥಿಕ ಅಸಮಾನತೆಗಳನ್ನು ಪ್ರತಿಬಂಧಿಸುವ ಕಾರ್ಯಕ್ರಮದೊಂದಿಗೆ ಆರ್ಥಿಕ ಅಭ್ಯುದಯವನ್ನು ಸಾಧಿಸುವ ಭಾರತ ಸ್ವಜಾಪ್ರಭುತ್ವದ ನಾಹಸೀ ಪ್ರಯೋಗದ ಪರೀಕ್ಷೆ ಪರೀಕ್ಷೆ—ನಮ್ಮೆಲ್ಲರ ಗಮನ ನೆಲೆಯಬೇಕು. ಅದು ಭಾರತದ ಸ್ವಾತಂತ್ರ್ಯವನ್ನು ಸತತ ಉಳಿಸಲು ಸಾಧ್ಯವಲ್ಲವೇ? ಅಂತಹ ಆದರ್ಶವನ್ನು ಆಚರಣೆಯಲ್ಲಿ ತರುವಂತಹ ಕಾರ್ಯವೇ ನಮ್ಮ ಸ್ವಾತಂತ್ರ್ಯವನ್ನು ನಿತ್ಯ ಕಾಯುವ ಅಸ್ತ್ರವಾಗಿದೆಯಲ್ಲವೇ? ಸ್ವಾತಂತ್ರ್ಯಕ್ಕೆ ಆರ್ಥಿಕ ದೇವತೆ; ಆರ್ಥಿಕ ಬೆಳವಣಿಗೆಗೆ ರಾಜಕೀಯ ಆತ್ಮವಿದೆ! ಒಂದನ್ನು ಉಳಿದು ಮತ್ತೊಂದು ಬದುಕಲಾರದು.

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿಕರ್ನಾಟಕಸಂಘದ ನೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಅಧುನಿಕ ಪ್ರಪಂಚದ ಸುಸತ್ತರವಾಪ ಅಂದೋಲನಗಳು, ಪ್ರಪಂಚದಲ್ಲಿ ಆಲುಗಾಡಿಸಿತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಸಾಮಾನ್ಯ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮೆಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಪಿತಾಳೆ, ಎಂ. ಬಿ. ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಆತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಲೆಕ್ಕಿಲ ಕೃಷ್ಣ ಭಟ್ಟ, ಎಲ್.ಎಲ್.ಬಿ

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತಗಳನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸರ್ವಾಂಗ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩೦೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಾನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ಸರ್ವಭಾರತ ಪುಸ್ತಕ ಭಂಡಾರ, ಉಡುಪಿ.

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦

ರಿಯಾಯಿತಿ ಪ್ರತಿಗಳ ದರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ, ದ. ಕ.

ಅಮರ ಸರ್ದಾರ ಭಗತ ಸಿಂಘ

(೧೦ನೇ ಪುಟದಿಂದ)

ಜೀಯವರು ಅವರನ್ನು 'ತಮ್ಮ ಪ್ರತಾಪ' ಕಾರ್ಯಾಲಯದಲ್ಲಿ ಪತ್ರಿಕೋದ್ಯಮದ ಶಿಕ್ಷಾರ್ಥಿಯನ್ನಾಗಿ ಇರಿಸಿಕೊಂಡರು. ಭಗತ್ ಸಿಂಘರ ಶಿಕ್ಷಣವು ನಂತರ ಭೀಕರ ಮಹತ್ವದ ಮೊಡವೊರಿಯಲ್ಲಿ ಅವರು ಹುತಾತ್ಮರಾದರು. ಲಾಹೂರದಲ್ಲಿ ಅವರಿಗೆ ಶ್ರೀ ಬಿ. ಕೆ. ದತ್ತ ಮತ್ತು ವಿಜಯ ಕುಮಾರ ಸಿಂಹರನರೊಂದಿಗೆ ಸಂಪರ್ಕ ಬೆಳೆಯಿತು. ಇವರಿಬ್ಬರೂ ಲಾಹೋರ್ ಸಂಚಿಕೆಯ ಪ್ರಕರಣದಲ್ಲಿ ಭಗತ್ ಸಿಂಘರ ಜೊತೆಗಾರರಾಗಿದ್ದರು

ಲಕ್ಷ್ಮಣ ಪುರಿಯ (ಲಯ್ನೋದ) ರೋಶನುದ್ದೌಲ ಕಛೇರಿಯಲ್ಲಿ ಕಾಕೋರಿ ಸಂಚಿನ ವಿಚಾರಣೆಯ ಸಮಯ ಅವರು ಬಂದಾಗ ಕಾಕೆ ಚಡ್ಡಿ, ಮೇಲಂಗಿ ಮತ್ತು ಕೂತಿ ಬಿಡಿಸಿದ್ದ ಮುಂದಾಸು ಧರಿಸಿಕೊಂಡಿದ್ದರು. ವಿಚಾರಣೆಗಾಗಿ ವಿಶೇಷ ನ್ಯಾಯಾಧೀಶರಿದ್ದರು. ಅವರು ಜೋಗೇಶ್ಚಂದ್ರ ಮುಂತಾದ 'ಸಾಂವಿಧಾನಿಕರೊಂದಿಗೆ ಮೊದಲ ಸಾಲಿನಲ್ಲೇ ಕುಳಿತಿದ್ದರು. ನ್ಯಾಯಾಲಯದ ಸುತ್ತ ಮುತ್ತಲೂ ಇತ್ತ ಗುಪ್ತಚಾರರತ್ತ (ಸಿ. ಐ. ಡಿ.) ಅವರು ಒಂದಿನಿತೂ ಗಮನ ಕೀಯದೆ, ನಿರ್ಲಕ್ಷ್ಯ ಮನೋಭಾವದಿಂದಿದ್ದರು.

ವಿಧಾನ ಸಭಾ ಸಿಡಿಗುಂಡು ಪ್ರಕರಣವು ಮುಂಚೆಯೇ ಯೋಚಿಸಿದ್ದ ಒಂದು ದೊಡ್ಡ ಪ್ರಯೋಗವಿತ್ತು- ಆದಕ್ಕಿಂತ ಮುಂಚಿನ ಸೊಂಡರ್ಸನ ಕೊಲೆ ಕಾರ್ಯಾಚರಣೆಯ ಅವಶ್ಯಕತೆಯೊಗಿತ್ತು. ಸೈಮನ್ ಸಮಿತಿಯ ಮೇಲಣ ಅಸಮ್ಮತಿಯನ್ನು ವ್ಯಕ್ತಪಡಿಸಲು ಕಪ್ಪು ಬಟ್ಟೆ ಹಾರಿಸುತ್ತ ಸಾವಿರಾರು ಜನರು ಲಾಹೋರ್ ನಿಲ್ದಾಣದ ಬಳಿ ಸೇರಿದ್ದರು ಅಂತರ್ರಾಷ್ಟ್ರೀಯ ಖ್ಯಾತಿಯ ರಾಷ್ಟ್ರೀಯ ಧುರೀಣ ಲಾಲಾ ಲಜಪತರಾಯ್‌ರವರು ಅದಕ್ಕೆ ಮುಂದಾಳಾಗಿದ್ದರು. ತದರ ಮೇಲೆ ಬ್ರಿಟಿಷ್ ಪೋಲಿಸ್ ಅಧಿಕಾರಿಗಳು ಅಮಾನುಷವಾಗಿ ರೀತಿಯಲ್ಲಿ ವರ್ತಿಸಿದ್ದರು. ಜನತೆಯಿಂದರೋ ಒಕ್ಕೊರಲಿನಿಂದ ಬಹು ಶಾಂತವಾಗಿ 'ಸೈಮನ್ ಹೋಗ ಹಿಂದಕ್ಕೆ" ಘೋಷಣೆ ಹಾಕುತ್ತಿದ್ದರು; ಪೊಲೀಸ್ ಬ್ರಿಟಿಷ್ ಪೋಲಿಸ್ ಅಧಿಕಾರಿಗಳಿಗೆ ಅದನ್ನು ಸಹಿಸಿಕೊಳ್ಳಲಕ್ಕಾಗಲಿಲ್ಲ. ಅವರು ಪೈಶಾಚಿಕ ರೀತಿಯಲ್ಲಿ ನಡೆದುಕೊಂಡರು ಪಾಪ ವೃದ್ಧರೆಂಬುದಾಗಿ ಲಾಲಾಜೀಯವರು ಇಹಲೋಕವನ್ನು ತ್ಯಜಿಸಬೇಕಾಯಿತು. ದೇಶಕ್ಕೆ ದೇಶವೇ ದುಃಖಪ್ತವಾಯಿತು, ಮಮ್ಮಲ ಮರುಗಿತು. ಮುಂಬಿಡನನ್ನು ಕಳೆದುಕೊಂಡ ದುಃಖ ಮ್ಲಾನತೆ ದೇಶದಲ್ಲಿ ಕವಿಯಿತು. ಅಹಿಂಸಾ ವಿರುದ್ಧ ಸ್ವರ ಎದ್ದಿತು ಈ ಹದ ಗೆಟ್ಟ ಪರಿಸ್ಥಿತಿಯಲ್ಲಿ ಹಿಂದೂಸ್ಥಾನ ಸಮಾಜವಾದಿ ಪ್ರಜಾತಾಂತ್ರಿಕ ಸಂಘದವರು ಹಟ್ಟಿ-ತಗಲಿನಲ್ಲೇ ಕೊಲೆಯ ಸೇದನ್ನು ತೀರಿಸಿಕೊಂಡರೆ. ಸೋಂಡರ್ಸನ್‌ನನ್ನು ಕೊಲೆ ಮಾಡಲಾಯಿತು.

ವಿಧಾನ ಸಭಾ ಸಿಡಿಗುಂಡು ಪ್ರಕರಣದಿಂದ ಭಗತ್ ಸಿಂಘರಿಗೆ ಅಪಾರವಾದ ಖ್ಯಾತಿ ಬಂದಿತ್ತು.ಮತ್ತೆ ಸೋಂಡರ್ಸನ ಕೊಲೆಯಲ್ಲಿ ಅವರ ಕೈವಾಡವೂ ಇತ್ತೆಂಬ ಸಂಗತಿ ಲಾಹೋರ್ ಪ್ರಕರಣದಿಂದ ಬೆಳಕಿಗೆ ಬಂದಂಗ ದೇಶವಿಡೀ ಅವರನ್ನು ರಾಷ್ಟ್ರೀಯ ನಾಯಕನೆಂದು ಗೌರವಿಸಿತು. ಪರ ದೇಶಗಳಲ್ಲಿದ್ದ ಭಾರತೀಯರಿಗೂ ವೀರ ಭಗತ್ ಸಿಂಘರ ನಾಮೋಚ್ಚಾರ ಮಾತ್ರ ದಿಂದಲೇ ನೈಸರ್ಗಿಕ ಸ್ಫೂರ್ತಿಗಳುಂಟಾಯಿತು. ಹೃದಯ ತುಂಬಿ ಬರುವಂತಾಯಿತು, ಭಾರತ ಮಾತೆಯ ಶೂರ ಪುತ್ರನೆಂದು ಅವರನ್ನು ಹೊಗಳಿದರು 'ಕ್ರಾಂತಿ ಚಿರಾಯಲಿ' 'ಸರ್ದಾರ ಭಗತ್ ಸಿಂಘ ಅಮರರಾಗಲಿ" ಘೋಷಣೆಗಳು ಮನೆಯಿಂದ ಮನೆಗೆ ಪ್ರಜ್ವರವಾದುವು.

ಸೋಂಡರ್ಸನ ಕೊಲೆಯೊಡನೆ ಭಗತ್ ಸಿಂಘರು ಸುಶೀಲಾ ದೀದಿ [ಶ್ರೀಮತಿ ಸುಶೀಲಾ ಮೋಹನ] ಇದ್ದಲ್ಲಿಗೆ—ಕಲ್ಕತ್ತಕ್ಕೆ—ತಲೆಕಪ್ಪಿಸಿಕೊಂಡು ಹೋದರು. [ಕಳೆದ ಜನವರಿಯಲ್ಲಿ ಸುಶೀಲಾ ದೀದಿ ಸ್ವರ್ಗಸ್ಥರಾದರು. ಅವರು ದಿಲ್ಲಿ ನಗರ ಸಭೆಯಲ್ಲಿ ನಗರ ಪಿತಾಮಹರಾಗಿದ್ದರು] ಅಲ್ಲಿ ಭಗತ್ ಸಿಂಘರು ರಹಸ್ಯ ಸಂಘಟನೆ ಅನುಶೀಲನ ಸಮಿತಿಯ ಅತ್ಯಂತ ಪ್ರಬಲ ಪ್ರಮುಖ ಸ್ಥಾಪ್ರಮುಖ ಜತೀಂದ್ರ ದಂಗೂಲಿಯವರೊಂದಿಗೆ ವಿಧಾನ ಸಭಾ ಸಿಡಿಗುಂಡು ಯೋಜನೆಯ ಕುರಿತು ಮಾತುಕತೆ ನಡೆಸಿದರು. ಗಂಗೂಲಿಯವರು ಯೋಜನೆಗೆ ಪೂರ್ಣ ಸಮ್ಮತಿ ಸೂಚಿಸಿದ್ದರಲ್ಲದೆ ಭಗತ್ ಸಿಂಘರಿಗೆ ಅನೇಕ ಬಾರಿನ ಕೈಕೋವಿಗಳನ್ನು ಕೊಟ್ಟರು. ಸಿಡಿಗುಂಡು ಪ್ರಕರಣದ ಸಮಯ ಅವು ಅವರ ಬಳಿಯೇ ಇತ್ತು. ಸಿಡಿಗುಂಡುಗಳನ್ನು ಸಹಾ ಕಲ್ಕತ್ತದಿಂದಲೇ ತರಲಾಗಿತ್ತು. ಈಗ ಕಾಣಿಸಿಗುವ ಲೆಟ್ಟೆಯ ದಪ್ಪ ಟೊಪ್ಪಿ ಧರಿಸಿರುವ ಭಗತ್ ಸಿಂಘರ ಭಾವ ಚಿತ್ರಕ್ಕೆ ಅವರು ಆ ಯೋಜನೆಯನ್ನು ಕಾರ್ಯಕತಗೊಳಿಸಲು ಹೊರಟಾಗ ತೆಗೆದ ಚಿತ್ರವಿದೆ.

ಭಗತ್ ಸಿಂಘರ ಒಡನಾಡಿ ರಾಜಗುರುವು ಪೂನಾದಿಂದ ಒಂದನರು. ಅವರ ಕ್ರಾಂತಿಕಾರಿ ಚಟುವಟಿಕೆಗಳಿಗೆ ಕಾರ್ಯರಂಗವಾಗಿದ್ದದ್ದು ಪುಣೆಯರ. ಅವರಿಟ್ಟಗುರಿ ಎಂದೂ ತಪ್ಪುತ್ತಿರಲಿಲ್ಲ. ಅವರ ಗುರಿಯೇ ಮೊದಲ. ಸೋಂಡರ್ಸನಿಗೆ ಕಲಿಸಿದ್ದು ಸರ್ದಾರ ಭಗತ್ ಸಿಂಘರು ಹಾಗೆ ಸುಖದೇವ ಕೂಡಾ ಲಾಹೋರಿನ ರಾಷ್ಟ್ರೀಯ ವಿದ್ಯಾಲಯದಿಂದ ಬಂದವರು ಅವರು ಕೂಡಾ ಆ ಕಾಲಿ ಪ್ರಕರಣದಲ್ಲಿ ಭಾಗವಹಿಸಿದ್ದರು ಸುಖದೇವರ ಒಂದು ಪತ್ರವನ್ನು ಭಾರತ ಸರಕಾರ ಪ್ರಕಟಿಸಿರುತ್ತದೆ. ಆ ಪತ್ರವನ್ನೆತ್ತಿದವರಿಗೆ ಸುಖದೇವರ ವಿದುಳಿನ ಶಕ್ತಿಯ ಅರಿವಾಗದಿರದು.

ಪರಕೀಯ ನೊಗದಿಂದ ರಾಷ್ಟ್ರೀಯ ಕತ್ತನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಹೋರಾಡಿ ಜೀವ ತೆತ್ತಿರುವ ಈ ತ್ರಿಮೂರ್ತಿಗಳ ಸ್ಮರಣೆಯನ್ನು ಇಂದಿನ ಈ ವಿಜಿತ್ರ ಪರ್ವ ಕಾಲದಲ್ಲಿ ಮಾಡಿಕೊಳ್ಳುವದು ಉತ್ತಮ. ಅದೂ ಜೈನೀ ಕಮ್ಯೂನಿಸ್ಟರು ಆಕ್ರಮಣ ನಡೆಸಿ ಮುಂದಕ್ಕೆ ಬರುತ್ತಿರುವಾಗ. ಅವರ ಅವಶ್ಯಕತೆ ಆಯಿತು. ನಮ್ಮ ಪಾಲಿನ ಕರ್ತವ್ಯ ಅದೇನು?

Take my advice my boy. open an account and let Vijaya Bank look after your money You ll find as I did when I started my career that they have a real understanding of the financial problems facing a young man like you in his first job Go round and see them It s simple to open an account at Vijaya Bank and it gives you a wonderful sense of security And another thing — once you have an account you ll find it easier to save — I know I did

VIJAYA BANK LTD.
Registered Office :
"VIJAYA BANK BUILDING",
Light House Hill Road,
MANGALORE-3.

ಮನೋವಿಜ್ಞಾನದಲ್ಲಿ ಒಂದು ನಿಯಮವಿದೆ; ಯಾವುದೊಂದು ವಿಷಯದಲ್ಲಿ ಮರ-ಮರಳಿ ಪೂತಾಡುತ್ತಲೇ ಇರುವವರು, ಆ ವಿಷಯದ ಕೊರತೆಯಿಂದ ನರಳುತ್ತಿರುವವರಾಗಿದ್ದಾದೆ, ಎಂಬುದೇ ಆ ನಿಯಮ. ತನ್ನ ಕೆಚ್ಚಿದೆಯ ಕತೆಗಳನ್ನೇ ಪೇಳುತ್ತಿರುವವನು ಬಹುಶಃ ಅಳ್ಳೆನೆಯವನಾಗಿರುತ್ತಾನೆ. ತನ್ನ ಬುದ್ಧಿವಂತಿಕೆಯ ಜಂಬವನ್ನೇ ಯಾವಾಗಲೂ ಕೊಚ್ಚುತ್ತಿರುವವನು ಬಹುಶಃ ತೀಕ್ಷ್ಣಬುದ್ಧಿಯವನಾಗಿರುತ್ತಾನೆ. ತನ್ನ ಸಾಧುತ್ವವನ್ನೇ ಹೊಗಳಿಕೊಳ್ಳುವವನು ಬಹುಶಃ ಕ್ರೂರ ಸ್ವಾರ್ಥಿಯೂ ಆಗಿರಬಹುದು.

ಹಾಗೆಯೆ ಸಮಯೂಸಮಯಗಳಲ್ಲಿ ಸ್ವಾತಂತ್ರ್ಯಗ ರಂಬಾಳೆ ಮಾಡುತ್ತಿರುವವರು ಬಹುಶಃ ಎಲ್ಲವರಲ್ಲಿಯೂ ಪರಾಧೀನರಾಗಿರ ತ್ತಾರೆ. ಭಾರತದ ಬಗ್ಗೆ ಹೇಳುವುದಾದರೆ ಆ ಸ್ವಾತಂತ್ರ್ಯದ ಆರ್ಭಟಕ್ಕೆ ಆಗಸ್ಟ್ ೧೫ರಂದು ಮಹಾಪೂರ ಬರುತ್ತದೆ! ಎಲ್ಲೆಲ್ಲಿಯೂ ರಾಷ್ಟ್ರಧ್ವಜದ ಆರೋಹಣ ನಡೆಯುತ್ತದೆ. ಮಂತ್ರಿಗಳ ಆಕಾರವಾಣಿ ಭಾಷಣಗಳು ಗರ್ಜಿಸುತ್ತದೆ. ವರ್ಷಕ್ಕೊಮ್ಮೆ—ಗುಂಡುಗಳ ಆರ್ಭಟ ಕೇಳುತ್ತದೆ! ಆನಂತರ ಆ ಸಮಾರಂಭದಲ್ಲಿ ಪಾಲುಗೊಳ್ಳುವವರಲ್ಲಿ ಸ್ವಾತಂತ್ರ್ಯದ ಕಳೆ ಬೆಳಗುತ್ತಿರುವುದೇ? ಜನರು ಕ್ಷಣಿಕವಾಗಿಯಾದರೂ ತೋರುವ ಹುರುಪು ಎದೆಯೊಳಗಿಂದ ಉಕ್ಕಿ ಬಂದ ರಾಷ್ಟ್ರಾಭಿಮಾನದ ಪರಿಣಾಮವೇ! ಆ ಸಮಾರಂಭದ ಗುಂಪು-ಗುಂಪುಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮ, ರಾಷ್ಟ್ರರಕ್ಷಣೆ, ದೇಶಾಭ್ಯುದಯದ ಹಂಬೆಗಳೇನಾದರೆಯುತ್ತಿರುವವೇ!

ಮೇಲಿನ ಪ್ರಶ್ನೆಗಳಿಗೆಲ್ಲ ದುರ್ದೈವದಿಂದ 'ಇಲ್ಲ! ಇಲ್ಲ!!' ಎಂದು ಉತ್ತರಿಸಬೇಕಾಗಿದೆಯಲ್ಲವೇ! ಹೊರಗೆ ಉತ್ಸವದ ಆವೇಶ; ಒಳಗೆ ನಿಸ್ಪಹತೆಯ ಕ್ಲೇಶ! ಬಾಯಿಯಲ್ಲಿ ರಾಷ್ಟ್ರಪ್ರೇಮವಿಹೆ; ಮನಸ್ಸಿನಲ್ಲಿ ಮುಂಬರುವಯೂಪೋಗಂಡಾಂತರದ ನೆರಳು! ಕೈ ಕಾಲುಗಳು ರಾಷ್ಟ್ರಗೀತೆಯ ವಾದ್ಯಗಳಿಗೆ ತಾಳ ಹಾಕುತ್ತಿವೆ ಹೃದಯ ಶೂನ್ಯತೆ, ಆತ್ಮಸ್ಥೈರ್ಯ ಅಸ್ತಿವಜೀವನಗಳ ಕೋಕ ಸ್ವರವನ್ನು ಕೂಗುತ್ತಿದೆ! ಆ ದಿನ, ರಾಷ್ಟ್ರವು ಸ್ವತಂತ್ರವಾಯಿತೆಂದು ಸಂತೋಷವಲ್ಲಿ ಒಂದು ದಿನ ವಿಂಗಡಿಸಿಕ್ಕಿತೆಂದು ಸಂತೋಷ!

'ಮನೆ ಬಿಟ್ಟ ಮನುಷ್ಯಾಣಂ ಕಾರಣಾಂ ಬಂಧನೋಕ್ಕಯೋಃ' ಎಂದರೆ ಮನುಷ್ಯನ ನಿಜವಾದ ಸ್ವಾತಂತ್ರ್ಯ, ಪಾರತಂತ್ರ್ಯಗಳು ಅವನ ಮನಸ್ಸಿನಲ್ಲಿಯೇ ಇರುತ್ತವೆ. ಮನಸ್ಸಿಗೆ ಸ್ವತ್ವದ ಅರಿವಿದ್ದರೆ, ಸ್ವ-ಯೋಜನೆಗಳಿದ್ದರೆ, ಆಪತ್ತನ್ನು ನೂರು ಅಡ್ಡಗಳು ಆತುರದೂರ ಪಾರಗಾಣಿಸಬಲ್ಲೆನೆಂಬ ಹುಮ್ಮಸ್ಸಿದ್ದರೆ, ಆ ಮನಸ್ಸಿನ ಒಡೆಯನು ಸೆರೆವಾಸದಲ್ಲಿದ್ದರೂ ಸ್ವತಂತ್ರನಾಗಿರ್ದಂತೆ ತಬ್ಬಿರುದ್ಧವಾಗಿ ಮೈಯು ಅನಿರ್ಬಂಧವಾಗಿದ್ದರೂ ಆಚಾರ, ವಿಚಾರಗಳ ಬಗೆಗೆ ಸ್ವೇಚ್ಛಾ ಪೂರ್ತಿಯು ಸಾಕಷ್ಟಿರುವಿದ್ದರೂ ತನ್ನ ಜೀವನವನ್ನು, ತನ್ನವರ ಭವಿಷ್ಯವನ್ನು, ತನ್ನ ನಾಡಿನ ಆಗು— ಹೋಗುಗಳನ್ನು ಚಿಂತಿಸುವ ವೃತ್ತಿ—ಬಲ—ಛಲಗಳು ಮನಸ್ಸಿನಲ್ಲಿಲ್ಲದಿದ್ದರೆ ಆ ಮನದ ಒಡೆಯರು ಬಯಲಲ್ಲಿದ್ದರೂ ಬಂಧನದಲ್ಲದ್ದಂತೆ.

ಸ್ವಾತಂತ್ರ್ಯದ ಲಕ್ಷಣಗಳೆಲ್ಲಿ?

ಸ್ವಾತಂತ್ರ್ಯ ಇಂದು ವರ್ಷಗಳು ಉರುಳಿದವು; ಆದರೆ, ಸ್ವತಂತ್ರ ಸ್ವಪ್ನಿಯರ್ಲರೇಕಾದ ಸಲ್ಲಕ್ಷಣಗಳು ನಮ್ಮವರ್ಲನ್ನೂ ಗೋಚರವಾಗುತ್ತಿಲ್ಲ. ಆವಶ್ಯಕತೆಯೇ ನೇರವನ್ನು ಸುಸ್ಥವಸ್ಥೆಯತ್ತ ಮುನ್ನಡೆಸುವ ಧೀರರನ್ನು ಸ್ವಾತಂತ್ರ್ಯದ ದಿನ ಅರಸಿ ಮುಂದೆಳೆಯಬೇಕು.

ಲೇಖಕರು: ಜಾ| ಎಂ. ಗೋಪಾಲಕೃಷ್ಣ ರಾವ್,
(ಬೆಂಗಳೂರು ಆಯುರ್ವೇದಿಕ್ ಕಾಲೇಜಿನ ಸ್ನಾತಕರು).

ಸೆರೆಮನೆಯಲ್ಲಿದ್ದ ಅರವಿಂದರು ಈಶ್ವರ ಸಾಕ್ಷಾತ್ಕಾರ ಮಾಡಿಕೊಂಡು ಜೀವನ್ಮುಕ್ತರಾದರು; ಲೋಕಮಾನ್ಯರು ಗೀತಾರಹಸ್ಯವನ್ನು ಕಂಡು ಘೋಷಿಸಿದರು; ಮಹಾತ್ಮರು ಅನಾಸಕ್ತಿಯೋಗವನ್ನು ಅರಿಕಿಸಿದರು. ಹಾಗೆ ಈ ಆಗಸ್ಟ್ ೧೫ರಲ್ಲಿ ಸ್ವಾತಂತ್ರ್ಯ ಘೋಷಣೆಗಳನ್ನು ಕೇಸರಿ ಹುಬ್ಬಂತೆ ಕೆರುಚುವ ನಾವು ನಿಜವಾಗಿ ಸ್ವತಂತ್ರರಾಗಿದ್ದೇವೆಯೇ? ಆಗಿದ್ದರೆ ಆ ಸ್ವಾತಂತ್ರ್ಯಭಾವದ ಕುರುಹುಗಳೆಲ್ಲಿವೆ? ಆದರ ಅಂತಃಸ್ಫೂರ್ತವಾದ ಹುರುಪು, ಹುಮ್ಮಸ್ಸುಗಳೆಲ್ಲಿ? ಅದನ್ಯಮಾವದ ಕರ್ತವ್ಯ ಪ್ರವೃತ್ತಿಗಳೆಲ್ಲಿ? ರಾಷ್ಟ್ರವೆಲ್ಲ ಒಂದು; ರಾಷ್ಟ್ರೀಯರೆಲ್ಲ ಒಂದು ಎಂಬ ಐಕ್ಯ ಭಾವವೆಲ್ಲಿ? ಆ ಉತ್ಸಾಹ, ಪ್ರವೃತ್ತಿ, ಭಾವಗಳೆಲ್ಲ ಉತ್ತರೋತ್ತರವಾಗಿ ಬೆಳೆಯದಿದ್ದರೂ ಬೇಸರವಿಲ್ಲ; ಅವಿನ್ನೂ ಆಳಆಯುತ್ತ ಕಣ್ಮರೆಯಾಗುವ ಲಕ್ಷಣಗಳು ತೋರುತ್ತಿವೆಯಲ್ಲ! ಸ್ವತಂತ್ರ ರಾಷ್ಟ್ರದ ಭೌತಿಕ [ಸಂಪತ್ ಸಮೃದ್ಧಿ, ಮೂಸಿಕ ನೆಮ್ಮದಿಗಳನ್ನೂ ಒದಗದಿದ್ದರೂ ಚಿಂತೆಯಿಲ್ಲ. ಆದರೆ ರಾಷ್ಟ್ರವು ಸ್ವಾತಂತ್ರ್ಯ ಪಡೆದು ಹದಿನಾರು ವರ್ಷಗಳಾದರೂ ಆ ಸ್ವಾತಂತ್ರ್ಯದ ಬಗ್ಗೆ ಹೃತ್ಪೂರ್ವಕವಾದ ಅಭಿಮಾನ ಕೂಡ ಎನಿಸಬಾರದೇ! ಸ್ವಾತಂತ್ರ್ಯ ಸಮಾರಂಭಗಳಲ್ಲಾದರೂ ಆ ಉತ್ಸಾಹ ಸಂತೋಷದ ಜೆಳಕು ಕಾಣಬಾರದೇ!

ಇದೇಕೆ ಹೀಗೆ? ಇನ್ನೆಷ್ಟು ದಿನ ಈ ನಿರ್ಜೀವತನವೆ? ಇದಕ್ಕೆ ಉಪಾಯವೇನು? ಎಂಬ ಪ್ರಶ್ನೆಗಳು ಈ ಸ್ವಾತಂತ್ರ್ಯೋತ್ಸವದ ದಿನದಲ್ಲಾದರೂ ನಮ್ಮ ಲಕ್ಷ್ಯವನ್ನು ನೆಲೆಯಜೇಕಲ್ಲವೇ 'ಸಾಲ ತಂದು ಹಬ್ಬ ಮಾಡುವ' ಮನೋವೃತ್ತಿಯ ಪಂಚವಾರ್ಷಿಕ ಯೋಜನೆಗಳಲ್ಲಿ, ಸ್ವಾತಂತ್ರ್ಯ ಭಾವದ ಪುಷ್ಟಿಗಾಗಿ ಏನೇನು ವರ್ಷಾಡಿಸಿ, ಎಂಬುದನ್ನು ಯಾರಾದರೂ ಜೇಳ ಬಲ್ಲರಂ?

ಎರಡು ಪಂಚವಾರ್ಷಿಕ ಯೋಜನೆಗಳು ಕೊನೆಗೊಂಡು ಮೂರನೆಯ ಅವಧಿಯೂ ಅರ್ಧದಾಟಿದರೂ ಇನ್ನೂ ಜನತೆಯಲ್ಲಿ ಸ್ವಾತಂತ್ರ್ಯಭಾವದ ಉದಯವಾಗಿಲ್ಲ; ರಾಷ್ಟ್ರೀಯ ಏಕ್ಯಭಾವದ ಉಗಮವಾಗಿಲ್ಲವೆಂದ ಬಳಿಕ ಆ ಯೋಜನೆಗಳು ಈ ಸ್ವಾತಂತ್ರ್ಯ ಭಾವಪೂರಣಕ್ಕೆ ಅಸಮರ್ಥವಾಗಿವೆಯೆಂದಾದರೂ ಒಪ್ಪಬೇಕು; ಇಲ್ಲವೇ ಪಂಚವಾರ್ಷಿಕ ಯೋಜನೆಗಳಿಗೆ ಲಂಚ—ವಾರ್ಷಿಕ ಹುಳಗಳು ಸಿಡುಗು ಅಂಟಿವೆ ಎಂದಾದರೂ ಒಪ್ಪಬೇಕು.

ಹೀಗೆ ಅಸಮರ್ಥವಾದ ಯೋಜನೆಗಳು ಒಂದರಿಬೆನ್ನ ಹಿಂದೊಂದರಂತೆ ಮೂಡಿ ಮರೆಯಾಗುತ್ತಿದ್ದರೂ ಅವಾವವೂ ಬಾಳಿನ ನಿಟ್ಟುಸಿರೊಂದನ್ನು ಸಹ ನಿವಾರಿಸಲು ಶಕ್ತವಾಗದಿದ್ದರೂ ಜನತೆ ಏಕಿನ್ನೂ ಎಚ್ಚೆತ್ತಿಲ್ಲ? ಈ ಸ್ವಾತಂತ್ರ್ಯ ಸಮಾರಂಭದ ದಿನದಲ್ಲಾದರೂ ಆತ್ಮ ಪರೀಕ್ಷೆ ಮಾಡಿಕೊಂಡು ನವಯೋಜನೆಗಳನ್ನು ರೂಪಿಸುವ ಹಂಬಲ ಏಕೆ ಕೆರಳುತ್ತಿಲ್ಲ? ಸೋಲನ್ನೇ ಗೆಲವೆಂದು ಗೋಳಿಡುವ ಧೂರ್ತಣರ ಭಾಷಣಗಳಿಗೇ ಜನತೆ ಏಕೆ ಮರುಳಾಗುತ್ತದೆ?

ಧರ್ಮಾಲಯಗಳ ಬೊಕ್ಕಳದ ಬೀಗದ ಕೈ ಪ್ರಭುತ್ವದವರ ವಶವಾಯಿತು! ಶಿಕ್ಷಣಾಲಯಗಳಿಂದ ಶಿವನು ಪಲಾಯನ ಮಾಡಿ ಜಾತಿಭೂತವು ತಲೆಯೂರಿತು! ರಾಜ್ಯಾಲಯದಲ್ಲಿ ಈ ನಾನು ಮಾಡುವ ಕಾರಬಾನೆಯೂಯಿತು! ಕಚೇರಿಗಳು ಬಡ ಜನತೆಯ ಅರ್ಜಿಗಳನ್ನು ಭಕ್ಷಿಸುವ ಹೆಗ್ಗಣಗಳ ಹಾಳು ಮನೆಗಳಾಗಿವೆ! ಎಲ್ಲಿ ಕಾಲ ಕಂಡು ಮುಚ್ಚಿದೆ! ಕರ್ತವ್ಯತ್ಯಂತ ಕಾಸಿಗೆ ಮಹತ್ವ ಹೆಜ್ಜಾಡಿಗಿದೆ! ವಿಷಯದ ತೂಕಕ್ಕಿಂತ ಲಂಚದ ತೂಕವೇರುತ್ತಿದೆ! ಅಳುವವರ ಮೂರ್ಖಾಂಗವನ್ನು ಮರು ಮೂತಾಡಿದೆ ಮೂಢ ಜನತೆ ಸಹಿಸುತ್ತಿದೆ. ಇವಕ್ಕೇ ಸ್ವಾತಂತ್ರ್ಯದ ಲಕ್ಷಣಗಳೆನ್ನಬೇಕೇ?

ಅಧಿಕಾರ, ಸ್ಥಾನ-ಮಾನ, ಧನಗಳನ್ನು ಧಾರಾಳವಾಗಿ ಮೇಯುತ್ತಿರುವ ಮುಂದಾಳು (?)ಗಳು ಮುಂದಿಡುವ ತಳುವನ್ನು ಕೇಳುವ ಬೌದ್ಧಿಕ ಸ್ವಾತಂತ್ರ್ಯವೂ ಬಾಗಿಲ್ಲು; ಈ ಕಂಗೆಡಿಸುವ ಜನಪ್ರಿಯಂಪ ಜನತೆಯನ್ನು ಹೊರಗೊಯ್ಯುವ ಮನಸ್ಸೇ ಅವರಿಗಿರುವಂತೆ ತೋರುತ್ತಿಲ್ಲ. ಆದ್ದರಿಂದಲೇ ಸ್ವಾತಂತ್ರ್ಯ ದಿನದ ಸಮೂಹ ರಂಭಗಳು 'ಹಾಡಿದ್ದನ್ನೆ ಹಾಡುವ ಕಿಸಿ ಬಾಯಿಗಳ' ಜೋಳು ಜೊಬ್ಬೆಯೆನಿಸುತ್ತಿವೆ.

ಆದ್ದರಿಂದ ನಾಡನ್ನು ಈ ದುರವಸ್ಥೆಯಿಂದ ಬಿಡುಗಡೆ ಮಾಡಲು ಅಧಿಕಾರ, ಸ್ಥಾನ-ಮಾನ, ಧನಗಳ ಹಸಿವಿಲ್ಲದ ನಿಸ್ಪಲ್ಯಪ, ನಿಸ್ಪೃಹ ಬಾಳಿನ ಪದಕವುಳ್ಳ ಆಯುಷ್ಮತ ಮೇಧಾವಿತ್ವ ಅದಮ್ಯ ಸಾಹಸ ವೃತ್ತಿಯುಳ್ಳ ಶರಣರು, ದಾಸರು, ಸಾಧಕರು ಈಗ ಮುಂದೆ ಬರಬೇಕು. ಅಂತಹ ಪರನ್ನು ಹುಡುಕಿ ಮುಂದೆಳೆಯುವುದೇ ಸ್ವಾತಂತ್ರ್ಯ ದಿನದ ಸಮರೂಂಭದ ಪೆಗ್ಗುರುತಾಗಲಿ.

ಭಾರತೀಯ ಚಿತ್ರಕಲೆಯ ನೂರು ವರ್ಷಗಳ ಒಲವು

(ಕಸೇ ಹುಟದಿಂದ)

ಭ್ಯಾಸ ಮಾಡಿಕೊಂಡು ಬಂದ ಈ ಹೆಣ್ಣು ಚಿತ್ರ ಕಲೆಯಲ್ಲಿ ನವೀನ ಕ್ರಾಂತಿ ಸಾಧಿಸಿದಳು. ವರ್ಣ ಸಂಯೋಜನೆಯಲ್ಲಿ ಆಕೆ ಅನುಸರಿಸಿದ ಮಾರ್ಗವು ಪಾಶ್ಚಾತ್ಯ ಕಲಾಕ್ಷೇತ್ರದಲ್ಲಿ ಪ್ರಸ್ಥಾವನಾದಕ್ಕೆ ಒಲಿಯುತ್ತದೆ. ಪಸ್ತು ವಿನ್ಯಾಸದಲ್ಲಿ ಆಕೆ ಹಿಡಿದ ಹಾದಿಯು ಸ್ವಭಾವವಾದದ ಕಡೆಗೆ ಒಲಿಯುತ್ತದೆ.

ಇಂದಿನ ಭಾರತೀಯ ನವ್ಯ ಚಿತ್ರಕಲೆಯಲ್ಲಿ ಭಾರತೀಯತನವನ್ನು ಹುಡುಕಲು ಹೋಗುವುದು ಸಂಕುಚಿತವಾದ ಕಲ್ಪನೆಯಾಗಬಹುದು. ಏಕೆಂದರೆ ಕಲೆ ಪ್ರಪಂಚ ವ್ಯಾಪಿ, ಕಲಾ ಸ್ಫೂರ್ತಿಗೆ ಭೌಗೋಳಿಕ ಬೇಕೊನೆ. ಕಲೆಯು ಭಾವನೆಗೆ ಜಗತ್ತೇ ಶರಣು.

ಹೀಗಾಗಿ ಒಬ್ಬ ಹುಸ್ಪೇನ್, ಒಬ್ಬ ಗುಜ್ರಾಲ್, ಒಬ್ಬ ಹೆಬ್ಬಾರ್ ಕೆನ್ವಾಸಿನ ಮೇಲೆ ಬಣ್ಣ ಬಣ್ಣದ ಮುದ್ದೆ ತುಂಬಿ, "ಕಾಂಸೊಸಿರನ್" (ಸಂಮಿಶ್ರಣ) ಎಂದು ಅದನ್ನು ಕರೆದರೆ, ಆ ಚಿತ್ರ ನೋಡುವವರ ಕಣ್ಣಿಗೆ ಹಿತವಾಗಿ, ಅರ್ಥವತ್ತಾಗಿ ಕಾಣದಿರಬಹುದು. ಆದರೆ ಅದು ಸಂಮಿಶ್ರಣವೆನ್ನುವದು ನಿಜ—ಬಣ್ಣಗಳ ಸಂಮಿಶ್ರಣ.

ನವ್ಯ ಚಿತ್ರಕಲೆ ಹಾಗೂ ಸಾಂಪ್ರದಾಯಕ ಚಿತ್ರಕಲೆಗಳ ನಡುವಣ ತಿಕ್ಕಾಟ ಇನ್ನೆಷ್ಟು ವರ್ಷಗಳ ಕಾಲ ಇದಬಹುದು ಎಂದು ನನ್ನ ಅಭಿವ್ಯಾಯ. ಒಂದು ಚಿತ್ರವನ್ನು ನೋಡಿದಾಕ್ಷಣ ಅರ್ಥವಾಗುವಂತಿದ್ದರೆ ಅದು ಸಾಂಪ್ರದಾಯಿಕ ಚಿತ್ರ; ಪತ್ತು ಬಾರಿ ನೋಡಿದರೂ ಅರ್ಥವಾಗದಿದ್ದರೆ ಅದು ನವ್ಯ ಚಿತ್ರ, ಎನ್ನುವ ಭಾವನೆ ಕೆಲವು ನವ್ಯ ಚಿತ್ರ ಕೃತಿಗಳನ್ನು ಕಂಡಾಗ ಹೊಳೆಯುತ್ತದೆ. ಆದರೆ ನವ್ಯವೆಂದು ಕರೆದಾಕ್ಷಣ ಚಿತ್ರ ನವ್ಯವಾಗುವುದಿಲ್ಲ ಎನ್ನುವುದು ಖಂಡಿತ, ಏಕೆಂದರೆ ಭಾರತದ ನವ್ಯ ಚಿತ್ರಕಾರರಲ್ಲಿ ನೂರರಲ್ಲಿ ತೊಂಬತ್ತೊಂಬತ್ತು ಪಾಲು ಟೊಳ್ಳು, ಒಂದು ಪಾಲು ಎತ್ತರ ಗಟ್ಟಿ, ಎಂದು ಪ್ರಸಿದ್ಧ ಕಲಾ ವಿಮರ್ಶಕರೊಬ್ಬರು ಹೇಳಿದರು.

ಎಲ್ಲಾ ತರದ ಫೋಟೋ
ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ
ನಾಯಕ್ ಸ್ಟುಡಿಯೋ,
ಲೈಟ್ ಹೌಸ್ ಹಿಲ್ ರೋಡು,
ಪಂಪನಕಟ್ಟೆ ಮಂಗಳೂರು-1.

ಸತ್ಯಾಗ್ರಹ

ಕವಿ: ಶ್ರೀ ಯಸ್. ವೆಂಕಟರಾಜ

—ಕಾಂಗ್ರೆಸ್ಸಿಗರು ಬ್ರಿಟಿಷರ ಕಾಲದಿಂದಲೂ ಅಸಹಕಾರಗಳಾಗಿಯೇ ಕಾದಿರುವುದರಿಂದ ಅವರಲ್ಲಿ ಈಗಲೂ ಆದೇ ಮನೋವೈಶಿಷ್ಟ್ಯ ಹದ್ದಿರುವುದು ವಿಚಿತ್ರವಲ್ಲ.

—ಶ್ರೀ ಸಂಜೀವ ರೆಡ್ಡಿ
(ಬೆಂಗಳೂರಿನ ಭಾಷಣ)

— ೧ —

ಧರಣಿ ಮುಷ್ಕರ ಪೂಡಿ ಕುಳಿತನು
ಧರ್ಮರಾಯನ ಮರಿಮಗ
ಮರಣ ತನಕವು ಕದಲದಿಹ ಹಟ
ಹಿಡಿದಹಿಂಸಾ ಕಾಳಗ
ತನ್ನ ನೂರಿನ ಚರಕವನು ತಿರು-
ಗಿಸುತ ಕುಳಿತನು ಜಗಜಗ
ವನ್ನಿದರ್ಧವು — ಆ ದಿವಂಗತ
ಧರ್ಮರಾಯನ ಮುಮ್ಮಗ!

— ೨ —

ಅಲ್ಲಿ ಹಾತಿದ ಹಲಿಗೆಯಲಿ — ಏ
ನೇನು ಮೂಡಿದು ಬರೆದಿದೆ?
ನಮ್ಮ ರಾಜ್ಯದ ಈ ಸ್ವರಾಜ್ಯದ
ರಾಜ್ಯ ಭಾರವ ದೂರದೆ!
ಏನು ಇವನಂದೊಮ್ಮೆ ಜೈಲಿಗೆ
ಹೋದ ಕೂಡಲೆ ಬಂದಿತೆ?
ಎಲ್ಲ ತಪ್ಪನು ತಿದ್ದಲೆಂದೇ
ಹೊರಟ ಜೀವನದರ್ಹತೆ!

— ೩ —

ಇವನಿಗಿಲ್ಲದ ಸ್ವಾರ್ಥ ನಮಗಿರೆ
ಲೇಳೆ ಬಾರದು ಬಾರದು?
ಇವನ ಕಾಲವು ಕಳೆದು ಹೋಗಿದೆ
ಇಂದಿನಾ ದಿನ ನಮ್ಮದು!
ನಾವು ಗೆದ್ದಿಹ ಸೀಟಿಗಂಟುವ
ಬುದ್ಧಿಯೇನಿದು ಕೆಟ್ಟದೆ?
ನಮ್ಮ ಧುಡ್ಡಿಗೆ ಬಡ್ಡಿ ಬರುವುದು
ಎಲ್ಲಿಯೂದರು ಬಿಟ್ಟುದೆ?

— ೪ —

ಲಂಚ ಪಂಚಾಮೃತದ ಪಾಪನ
ಮೂರ್ತಿಯೇ ಪರಮೇಶ್ವರ
ಅವನ ದಾಸರು ನಾವು! ಅದಬಿಡ
ಲೆಂಕು ಬರುವುದು ಹೇಳಿರಾ!
ನಾವು ಮಾಡಿಯೆ ಹೇಳ ಬೇಕೆಂ
ದಾವ ಶಾಸ್ತ್ರದ ನಿಯಮವು?
ನಾವು ಹೇಳುವ ನೀವು ಕೇಳುವ
ಯಾರು ಮಾಡದ ಧರ್ಮವು!

— ೫ —

ನಾವು ನಿಮ್ಮನು ಪೆಟ್ಟೆ ಮುಂದಕೆ
ಹೋಗುವುದು ನಿಮಗಾಗಿಯೆ
ನಿಮ್ಮ ಕೈಯೊಳಗೇನು ಗಂಟಿದೆ
ನಿಮ್ಮ ಹಿಂದಿನ ಸೇವೆಯೆ?
ಆ ಪುರಾಣವ ನಾಕು—ಓಟನು
ಹಿಡಿದ ನಾಧನೆ ನಮ್ಮದು
ಅದಕಾರಣ ಕೊನೆಯ ತನಕವು
ಮಂತ್ರಿಪಟ್ಟವು ನಮ್ಮದ!

— ೬ —

ಬೆಕ್ಕು ಜೆಣ್ಣೆಯ ತಿಂದಿತೆಂದರೆ
ನಾಕು ಸ್ವಲ್ಪ ಸುವ್ಯನಿರಿ
ಏಕೆ ನೀವ್ ಕಣ್ತೆರೆದು ನೋಡಲು
ಬೇಕು? ಕಣ್ಣನೆ ಮುಚ್ಚಿರಿ!
ಬಳಿಕ ನಾನೇ ರಾಮರಾಜ್ಯವ
ಕಟ್ಟಿ ಆಳುವ ಬೆಂದವ
ನೋಡಿ! ನಾಕೇ ಧರಣೀ ಮುಷ್ಕರ
ನಮ್ಮವರು ನೀವಲ್ಲವೆ?

— ೭ —

ಗಾಂಧಿ ಹೇಳಿದ ಮಾತು ಒತ್ತ
ಟ್ಟಿರಲಿ—ಅಂದಿನ ಚಳವಳ
ಸಂದುಹೋಯಿತು.ಬಂತು ಕಳಯುಗ
ಓಟುಗಿಟ್ಟುವ ಕಳವಳ!
ನಾವು ಕೂಡಾ ಗಾಂಧಿ ಹೆಸರಿನೆ
ಹೇಳಿ ಬದುಕುವ ವೀರರು
ರಾಜ ಘಾಟಿಗೆ ಹೋಗಿ ಮುದ್ದಾಂ
ಮಾಲೆ ಸಲಿಸುವ ಧೀ ಧ ರು!

— ೮ —

ಎಂದ ಮಾತನು ಕೇಳಿ ಜನಮೇ
ಜಯನ ಗರ್ವವು ಹೋಯಿತು
ಪಾಪಿ ಜೋರ್ಡಿನ ಬ್ರಹ್ಮ ಪಟ್ಟಕೆ
ಅವನ ನೇಮಕ ವಾಯಿತು!
ಮತ್ತೆ ಮರುದಿನ ನೆತರು ಗಗ್ಗದ
ವಾಣಿ ಶುಂಬಿದ ಭಾಷಣ
ಹೊತ್ತ ಬಾನಾಲಿ ಬಂದೆ ಬಂದಿತು—
ಅಲ್ಲಿಗದು ಕೃಷ್ಣಾರ್ಪಣ!

ಸ್ವತಂತ್ರ ಭಾರತದಲ್ಲಿ ಸ್ತ್ರೀ

(ಒನೇ ಸುಟದಿಂದ)

ನೆಗೆ ಯತ್ನಿಸಲು ಸಾಧ್ಯವಾಗಲೂ ಸಹ ಕೆಲವು ನಿರ್ದಿಷ್ಟ ಕಾರಣಗಳಿಗಾಗಿ ಮಾತ್ರ ವಿಚ್ಛೇದನೆ ದೊರಕುತ್ತದೆ. ವಿಚ್ಛೇದಿತ ಸ್ತ್ರೀ, ಪುರುಷನಂತೆ, ಮತ್ತೆ ಲಗ್ನವಾಗಲು ಯಾವ ಅಡ್ಡಿಯೂ ಇಲ್ಲ ಜಾತಿ, ಮತ, ಪಂಥಗಳ ಸಂಕುಚಿತ ವೃತ್ತದಲ್ಲೇ ತಮ್ಮ ಜೊತೆಗಾರರನ್ನು ಆಯ್ದುಕೊಳ್ಳಬೇಕೆಂಬ ಕಡ್ಡಾಯವೇನಿಲ್ಲ—ಜಾತಿ, ಕುಲ, ಜನಾಂಗಗಳಿಂದ ಭಿನ್ನರಾದವರೂ ಸಹ ಪರಸ್ಪರ ಅನುರಾಗವುಳ್ಳವರಾದರೆ ಅವರು ವಿವಾಹವಾಗಲು ಸಾಧ್ಯವಾಗುವಂತೆ ಶಾಸನವನ್ನು ರಚಿಸಿದ್ದಾರೆ.

ಅರ್ಥಿಕವಾಗಿ, ಸ್ತ್ರೀಗೆ ಹಿಂದೆ ಇದ್ದ ಅನರ್ಹತೆಗಳನ್ನು ತೆಗೆದು ಹಾಕಿದ್ದಾರೆ. ಹಿಂದೂ ಸ್ತ್ರೀಗೆ ಆಸ್ತಿಯಲ್ಲಿ ಯಾವ ಹಕ್ಕೂ ಇರಲಿಲ್ಲ. ಈಗ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀಗೂ ಹಕ್ಕು ದೊರಕಿದೆ.

ಸ್ತ್ರೀಯರಿಗೆ ವಿಶೇಷ ಸೌಲಭ್ಯಗಳನ್ನೂ ಒದಗಿಸಲಾಗಿದೆ. ಕಾರ್ಮಿಕ ಮಹಿಳೆಯರಿಗೆ ಹೆಂಗೆಯ ರಜ, ಹಾಗೂ ಎಳೇ ಮಕ್ಕಳ ತಾಯಿಯರಾಗಿರುವಾಗ ಮಧ್ಯೆ ಮಧ್ಯೆ ಬಿಡುವು ಕೊಡಬೇಕೆಂದು ನಿಯಮ ಮಾಡಿದ್ದಾರೆ.

ಸ್ವತಂತ್ರ ಭಾರತದಲ್ಲಿ ಸ್ತ್ರೀಗೆ ಹಿಂದೆಂದೂ ಇಲ್ಲದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಈ ಸೌಲಭ್ಯಗಳನ್ನೂ ಸರಿಹೊಗಿ ಉಪಯೋಗಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ಪೂರ್ಣ ವಿಕಾಸಗೊಳಿಸಿಕೊಂಡು ನಾಡಿಗೂ ತಮಗೂ ಕೀರ್ತಿ ತಂದುಕೊಂಡು ತನ್ಮ ಬಾಳನ್ನು ಸಾರ್ಥಕಗೊಳಿಸಿಕೊಳ್ಳುವುದು ಸ್ತ್ರೀಯರ ಕರ್ತವ್ಯ.

ಇನ್ನೊಂದು ಪರ್ವಕಾಲ. ಹಳೆಯ ಭಾವನೆ—ಹೊಸ ಭಾವನೆಗಳ ನೆಲೆತಗಳಿಗೆ ಸಿಲುಕಿ, ಮಾನವ ಜೀತನ ಹಣ್ಣಾಗುತ್ತಿರುವ ಕಾಲ. ಈ ಘರ್ಷಣೆ ಜನ ಜೀವನವ ಎಲ್ಲಮುಖಗಳಲ್ಲೂ ನಡೆಯುತ್ತಿದೆ ಸ್ತ್ರೀ ಜೀವನವೂ ಇದಕ್ಕೆ ಹೊರತಲ್ಲ. ಹಳೆ ಹೊಸ ಭಾವನೆಗಳ ಮಧುರ ಸಂಗಮದಿಂದ ಸಮನ್ವಯಗೊಂಡ ಹೊಸ ಆದರ್ಶವು ಇಂದು ಮೂಡಬೇಕಾಗಿದೆ.

ಹಳೆಯ ಧರ್ಮ ದಬ್ಬಾಳಿಕೆಯ ಮನೋಭಾವನೆ ತಳಿದ, ಸಮಸಮಾನತೆಯ ಸಹಕಾರ ತತ್ವ ನಡೆನುಡಿಯನ್ನು ರೂಪಿಸಬೇಕು. ಆಗ ಮಾತ್ರ ಘರ್ಷಣೆ ತಪ್ಪುತ್ತದೆ. ಸರಿಸಮಾನತೆಯ ತತ್ವವನ್ನು ಉಪನಿಷತ್ತುಗಳು ಎಂದೋ ಘೋಷಿಸಿವೆ. ಆಧ್ಯೆತ ಸಿದ್ಧಾಂತವು ಕರ್ಮರೂ ಸರಿಸಮಾನರೆಂದು ಒಪ್ಪಿಕೊಂಡಿದೆ ನಮ್ಮ ರಾಜ್ಯಾಂಗವು ಈ ತತ್ವವನ್ನೂ ಆಚರಣೆ ತರಲು ಎಲ್ಲ ಕ್ರಮಗಳನ್ನೂ ಕೈಗೊಂಡಿದೆ. ಆದರೆ ಈ ತತ್ವ ರಾಷ್ಟ್ರ ಜೀವನ, ಗ್ರಾಮ ಜೀವನ ಎಂಬಿವುಗಳಲ್ಲಿ ಬೇರೂರ ಬೇಕಾಗಿದೆ. ವ್ಯಕ್ತಿ ವ್ಯಕ್ತಿಯ ಮನೋ ಭೂಮಿಕೆಯಲ್ಲಿಯೂ ಈ ವಿಶಾಲ ಭಾವನೆ ಪ್ರಭುತ್ವ ನಡೆಸಬೇಕಾಗಿದೆ.

ಸ್ತ್ರೀಗೆ ಪ್ರಧಾನ ವಿಷಯವಾಗಿರುವ ಕೌಟುಂಬಿಕ ಜೀವನದಲ್ಲಿಯೂ ಈ ಸಮಾನತೆಯ ತತ್ವ ಬೇರೂರ ಬೇಕಾಗಿದೆ. ಸ್ತ್ರೀಯ ಒಗ್ಗೆ ಬೇರೂರಿ ಬಂದಿರುವ ಹಲವು ಲಕ್ಷ ಭಾವನೆಗಳು ನಿರ್ಮೂಲವಾಗ ಬೇಕಾಗಿದೆ ಸ್ತ್ರೀಯರೆ ಮೇಲೂ ಗುರುತರ ಹೊಣೆಗಾರಿಕೆಯಿದೆ. ಸ್ವಾತಂತ್ರ್ಯವೆಂದರೆ ಸ್ವಚ್ಛಂದವೆಂದು ಭಾವಿಸದೆ, ಕುಟುಂಬ ಗೌರವ ಜೀಳಯುವಂತೆ, ಕುಟುಂಬ ಜೀವನ ಅಸ್ತ ವ್ಯಸ್ತವಾಗದಂತೆ ನೋಡಿಕೊಳ್ಳುವ ಹೊಣೆ ಅವಂಗೆ ಸೇರಿದೆ. ಹಕ್ಕುಗಳನ್ನು ಒತ್ತಿ ಕೇಳುವಾಗ, ಜಾಗೃತೆಗಳನ್ನು ಮರೆಯಲಾಗದು.

ಕೌಟುಂಬಿಕ ಸಾಮರಸ್ಯ ಸ್ಥಾಪನೆಯಲ್ಲಿ ಪುರುಷರ ಶ್ರೇಷ್ಠತೆಯಬಗ್ಗೆ ಶತಮಾನಗಳಿಂದ ಬಂದಿರುವ ಮೂಢನಂಬಿಕೆಗಳನ್ನು ಅವರು ಬಿಡಬೇಕು. (ರಾಜ ಮಹಾರಾಜರು ಬಿಟ್ಟರುವಂತೆ!) ಪರ್ಷ ದಬ್ಬಾಳಿಕೆಯ ರೀತಿನೀತಿಯನ್ನು ತೊರೆದು ಸ್ನೇಹ ಸಹಕಾರಗಳನ್ನು ಅನುಸರಿಸಬೇಕು. ಪತಿ ಪತ್ನಿಯರನ್ನು ಬಂಧಿಸುವುದು 'ಸಮ್ಮಿಭಾವನೆ' ಎಂಬುದನ್ನು ನೆನಪಿನಲ್ಲಿಡಬೇಕು. (ಹಿಂದಿನ 'ದಾಸ್ಯಭಾವನೆಯಲ್ಲ.)

ಸ್ತ್ರೀ ಹಿಂದಿನಂತೆ ತನ್ನೆಲ್ಲ ಕಷ್ಟಗಳಿಗೂ ಗಂಡನೇ ಗುರಿಯೆಂದು ಹೆಳಿಮುವಂತಿಲ್ಲ. ತನಗೆ ದೊರಕಿರುವ ಸಾಲಭ್ಯಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳಲು, ತನ್ನ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಲು ಅವಳು ಅರ್ಹತೆಗಳಿಸಬೇಕು. ಏಕೆಂದರೆ ಸ್ವಾತಂತ್ರ್ಯ ಕರ್ತವ್ಯೋನ್ಮುಖವಾದ ಅಭಿವೃದ್ಧಿಗೆ ಹೆದ್ದಾರಿಯಾದರೂ, ಅಷ್ಟೊಂದು ಗುರುತರ ಹೊಣೆಗಾರಿಕೆ. ಸ್ವಾತಂತ್ರ್ಯದ ಪೂರ್ಣ ಪ್ರಯೋಜನ ಪಡೆಯಲು, ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಸತತ ಸಿದ್ಧತೆ ತತ್ಕಾಲಕ್ಕೆ. ಸತತ ಸಿದ್ಧತೆಯೇ ಸ್ವಾತಂತ್ರ್ಯದ ರಕ್ಷಾ ಕವಚ ಈ ಮಾತು ನಾರೀ ವೃಂದಕ್ಕೆ ಮಾತ್ರವಲ್ಲ—ನಾಡಿನುಂದಿಗೆಲ್ಲಾ ಅನ್ವಯಿಸುವುದು.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 dated 2—12—1950 of the Director of Public Instruction Madras.

ಡಯಾನಾ ಕೋಲ್ಡ್ ಡ್ರಿಂಕ್ಸ್ ಎಂಡ್ ಮಿಲ್ಕ್ ಬಾರ್
ಕನರಾ ಮ್ಯೂಚುವಲ್ ಬಿಲ್ಡಿಂಗ್ಸ್. ಉಡುಪಿ.
ತರತರದ ಥಂಡಾ ಪಾನೀಯಗಳಿಗೆ, ಬಗೆಬಗೆಯ ಐಸ್‌ಕ್ರೀಮು, ಫ್ರುಟ್ ಸಲಾಡ್‌ಗಳಿಗೆ ಡಯಾನಾ ಸಂದರ್ಶಿಸಿರಿ.
ಬಿಸಿಪಾಲು ನಮ್ಮ ವೈಶಿಷ್ಟ್ಯ.

ನೀವು ಪುಕ್ಕರಾದರೂ ಪರವಾಯಿಲ್ಲ

ಸುತ್ತಮುತ್ತ ಕಣಿದಿರುವ ಭೂತಾಕಾರದ ಭಯದಿಂದ ನೀವು ಪುಕ್ಕರಾಗಿದ್ದೀರಿ; ಇದಕ್ಕಾಗಿ ಅಂಜಬೇಡಿ, ಪುಕ್ಕತನವನ್ನೂ ಗೌರವಿಸುವುದಾದರೆ ಅದೇ ಗೌರವ ರಕ್ಷಣೆಯೂಗುವುದು. ಪುಕ್ಕರೆಲ್ಲರೂ ತಲೆಯೆತ್ತಿ ಮುಂದೆ ಬನ್ನಿ.

ಲೇಖಕರು: ಶ್ರೀ ಎಂ. ರಂಗರಾವ್, ಮದ್ರಾಸು.

ಪುಕ್ಕರೇ ಎಲ್ಲಾ

ಪುಕ್ಕ, ಅಂಜುಕುಳಿ, ಹೇಡಿ, ಭಯಶೀಲ ಅಂದರೆಲ್ಲ ಒಂದೇ ಹೀಗನ್ನಿಸಿಕೊಳ್ಳಲು ಯಾರಿಗೂ ಇಷ್ಟವಿಲ್ಲ. ಬಹಳ ಅವಮಾನಕರ ಶಬ್ದವದು.

ನಿಜಕ್ಕೂ ಪುಕ್ಕನಾದವನೊಬ್ಬ ತಾನೊಬ್ಬ ಪುಕ್ಕ ಅಂತ ಬಾಯಿಬಿಟ್ಟು ಎಂದೂ ಹೇಳಿಕೊಳ್ಳುವುದಿಲ್ಲ. ಮೂತ್ರನಲ್ಲ, ಮನಸ್ಸಿನೊಳಗೂ ಒಪ್ಪಿಕೊಂಡಿರಲಾರ. ತಾನು ಇನ್ನೊಬ್ಬರಿಗಿಂತಲೂ ಹೆಚ್ಚಿನ ಧೈರ್ಯಶಾಲಿ ಎಂತಲೇ ನಂಬಿಕೊಂಡು, ಅದಕ್ಕೆ ತಕ್ಕ ಹಾಗೆ ನಟನೆ ಮಾಡಿಕೊಂಡೂ ಇರುತ್ತಾನೆ. ಇಂಥವರು ಬಹಳ ಮಂದಿ ಇರ್ತಾರೆ. ಆದರೆ ಒಂದು; ಇದಿರಾಳಿಗಳ ಬಲ ಇವರಿಗಿಂತ ಕಡಿಮೆಯಾಗಿದ್ದರೆ ಮಾತ್ರ ಇವರು ಗೆದ್ದಾರು. ಇಲ್ಲದಿದ್ದರೆ ಇವರ ಪುಕ್ಕತನ ಒಂದೋ, ಬಯಲಾಗಿ ನಗೆಗೀಡಾಗುತ್ತಾರೆ; ಇಲ್ಲವೇ ಜೀರೋನೋ ಒಂದು ಜಂಬದ ಮಾತು ಹೇಳಿಕೊಂಡು, ಕಪ್ಪೇ ಹಾಗೇ ಅ ಪರಿಸ್ಥಿತಿಯಿಂದ ಪಾರಾಗಿ, ಸ್ವಲ್ಪ ಕಾಲ ಮರ್ಯಾದೆ ಉಳಿಸಿಕೊಂಡಿರುತ್ತಾರೆ. ಅಂದರೆ ಏನಾದ ಹಾಗಾಯಿತು?

ಒಬ್ಬನು ಪುಕ್ಕನೋ ಧೈರ್ಯಶಾಲಿಯೇ ಎಂಬುದು ಇದಿರಾಳಿಯ ಬಲಾಬಲಗಳನ್ನು ಹೊಂದಿಕೊಂಡಿದೆ, ಅಷ್ಟೆ. ಹೀಗೆ ನೋಡುತ್ತಾ ಹೋದರೆ ಪುಕ್ಕರೆಲ್ಲ ದವರಾರೂ ಇಲ್ಲವೆಂದೇ ಕಂಡೀತು; ಖುದಿತಾ ಕಾಣುತ್ತದೆ. ಆದ್ದರಿಂದ ಪುಕ್ಕತನವನ್ನು ಕುಂದೇಕಾಗಿಲ್ಲ; ತಲೆತಗ್ಗಿಸಬೇಕಾಗಿಲ್ಲ. ಹಾಗೆಯೇ ನಾನೂ ತಲೆಯೆತ್ತಿಕೊಂಡೇ ಇದ್ದೇನನ್ನಿ.

ಪುಕ್ಕನೊಬ್ಬ ದೊಡ್ಡಣ್ಣ

ಬೇಕಾದರೆ ಪುರಾಣಗಳನ್ನು ನೋಡಿ. ಹೆಚ್ಚಿನ ಕತೆಗಳೆಲ್ಲಾ ಅಭಯದಾನ, ಭಯ ನಿವಾರಣೆಗಳ ಆಧಾರದ ಮೇಲೆಯೇ ಎದ್ದಿರುತ್ತವೆ. ಭಯ? ಎಲ್ಲ ನೋಡಿದರೂ ಭಯ. ಪ್ರಾಣಿಕೋಟಿಗಳೊಂದಿಗೇ ಭಯವೂ ಹುಟ್ಟಿದೆ. ಪ್ರಾಣಿಗಳ ಅಭಿವೃದ್ಧಿ, ಅವನತಿಗಳೆರಡಕ್ಕೂ ಭಯವೇ ಮೂಲ ಕಾರಣ ಎಂದು ಗಂಟೆ ಹೊಡೆದು ಹೇಳಬಹುದು. ಮಾನವರ ನಾಗರಿಕತೆಗೂ ಏರುಪೇರುಗಳಿಗೂ ಭಯವೇ ದೋಷದ. ಅಸಲು, ಮರ್ಯಾದೆಯ ಮೂಲ ರೂಪವಾದ ಕೈಮುಗಿ ಮಾಡಿ ತೋರಿಸುವುದು, ಕೈಯೆತ್ತಿ ಆಡಿಸುವುದು, ಕೈಜೋಡಿಸುವುದು ಇವುಗಳ ಅರ್ಥವೇ "ನನಗಾಗಿ ಹೆದರ ಬೇಡಿ, ಕೈಯಲ್ಲೇನೂ ಆಯುಧವಿಲ್ಲ" ಎಂಬ ಅಭಯ ಸೂಚನೆಯ ದ್ಯೋತಕವಾಗಿಯೇ ಪ್ರಾರಂಭವಾಯಿತೆಂದು ಬುದ್ಧಿವಂತರು ಕಂಡು ಹಿಡಿದು ಹೇಳುವುದನ್ನು ನೀವೆಲ್ಲಾ ಕೇಳಿರಬಹುದು.

ಆದ್ದರಿಂದ ನಾನು ಗಂಭೀರವಾಗಿ ಹೇಳುವುದೇನೆಂದರೆ, ಇನ್ನೊಬ್ಬನ ಭಯಕ್ಕೆ ಗೌರವ ಕೊಡಬೇಕು; ದುರಾಸೆಪಡಬಾರದು; ತನ್ನ ಬಂದೋಬಸ್ತಿನ ವಿಷಯದಲ್ಲಿ ಹೆದರಿಕೊಂಡಿರಲೂಬೇಕು. ಇಂಥ ಭಯಶೀಲತೆಯ ಪುಕ್ಕತನವನ್ನೇ ಧೈರ್ಯವೆಂದು ಗೌರವದಿಂದ ಕರೆಯುತ್ತಾರೆ. ಇಂಥ ವಿಚಾರ ಹೇಯವಾದ ಧೈರ್ಯ ಬರಬೇಕಾದರೆ ಪುಕ್ಕತನವೂ, ತಕ್ಕ ಬಂದೋಬಸ್ತೂ ಕ್ರಮವಾಗಿ ನಡೆದಿರಲೇ ಬೇಕಾಗುತ್ತದೆ. ಅಂದರೆ ಪುಕ್ಕತನವು ನೊಡಲು ಹುಟ್ಟಿದ ದೊಡ್ಡಣ್ಣ; ಧರ್ಮರಾಯನ ಹಾಗೆ ಮತ್ತೆ ಹುಟ್ಟಿದ ಧೈರ್ಯ ಅವನ ತಮ್ಮ ಭೀಮಾರ್ಜುನರ ಹಾಗೆ. ಪಾಪ ಭಯವೂ ಧೈರ್ಯವೂ ಅಚ್ಚು ಮೆಚ್ಚಿನ ಸಹೋದರರೆಂದು ಸ್ವಲ್ಪ ಒಡೆದು ನೋಡಿದರೆ ಹೇಗೆ ಗೊತ್ತಾಗುತ್ತದೆ!

ಪುಕ್ಕ--ಶಿಖಾಮಣಿಗಳು

ಪುಕ್ಕತನನೇ ಇಲ್ಲದ ಬರೀ ಧೈರ್ಯಕ್ಕೆ "ಸೊಂಡು ಧೈರ್ಯ" ಅನ್ನುತ್ತಾರೆ. ಇದಕ್ಕೆ ಬುದ್ಧಿಯು ಯೋಚನೆಯೆಂದುಂಟಾಗುವ ಬಂದೋಬಸ್ತುಗಳಲ್ಲ. ಬುದ್ಧಿಯನ್ನೂ, ಯೋಚನೆ, ತಂತ್ರ, ಉಪಾಯ ಮೊದಲಾದುವುಗಳನ್ನೂ ಹೇಡಿತನವೆಂದು ಹೀಯಾಳಿಸುವಂಥ ಮೂರ್ಖತೆಯನ್ನೇ ಆದು ತೋರಿಸುತ್ತದೆ. ಇಂಥ ಮೂರ್ಖ ಧೈರ್ಯದಿಂದ ಮುನ್ನುಗ್ಗಿ ಸತ್ತ ವೀರಾಧಿವೀರರ ಉದಾಹರಣೆಗಳು ಚರಿತ್ರೆಯಲ್ಲಿ ಬೇಕಾದಷ್ಟಿವೆ.

ಆದರೆ ಪುರಾಣಗಳಲ್ಲಿ ಮಾತ್ರ ಹಾಗಿಲ್ಲ; ಬುದ್ಧಿವಂತಿಕೆಯಿಂದ ಪುಕ್ಕತನವನ್ನಾಧರಿಸಿಕೊಂಡ ವೀರಾಧಿವೀರರ ಕಥೆಗಳೇ ಪುರಾಣಗಳಲ್ಲಿ ತುಂಬಿವೆ.

ನಿಜಕ್ಕೂ ಮನುಷ್ಯನು ಬುದ್ಧಿ ತಿಳಿದಂದಿನಿಂದಲೂ ಪುಕ್ಕತನದ ಆಧಾರದಿಂದಲೇ ಬೆಳೆದುಕೊಂಡು ಬರುತ್ತಾನೆ. ಮೃಗಗಳಾದರೂ ಅಷ್ಟೇ, ಬುದ್ಧಿತಿಳಿದ ಮರಿಗಳಿಗೆ ಮೊದಲು ಬರುವ ಬುದ್ಧಿ ಶತ್ರುವಿನಿಂದ ತಪ್ಪಿಸಿಕೊಳ್ಳುವಂಥ ಭಯವೇ.

ಭಯವಿಲ್ಲದೆ ಬರೀ ಧೈರ್ಯದ ಮುದ್ದೆಯೇ ಆಗಿದ್ದಾತ ಈ ಪ್ರಪಂಚದಲ್ಲಿ ಪೂರ್ಣಾಯುಸ್ಸಿನಿಂದ ಬದುಕಲು ಸಾಧ್ಯನೇ ಇಲ್ಲ. ಅವನಿಗಿಂತ ಹೆಚ್ಚಿನ ಬಲಶಾಲಿಗಳ ಭಯ ಅವನಿಗಿದ್ದೇ ಇರುತ್ತದೆ. ಒಂದು ವೇಳೆ ಅವನು ನಿರ್ಭೀತನಾಗಿದ್ದಾನೆಂದರೆ, ಅವನಿಗಿರುವ ಭೀಮನಂಥ ದೇಹಬಲವೋ ಇತರ ಬಂದೋಬಸ್ತುಗಳೋ ನಾಶವಾಗಿವೆ ಎಂದೇ ಅರ್ಥ. ಅತ್ಯಬಲಗಳಿಂದ ಒಬ್ಬ ನಿದ್ದಾನೆಂದರೆ ಅನನೊಬ್ಬ ದೊಡ್ಡ ಪುಕ್ಕ ಶಿಖಾಮಣಿ ಎಂದೇ ಆಯಿತಲ್ಲ! ಇಂಥ ಶಿಖಾಮಣಿಗಳು, ಬಿಡಿ ಮಾನವರಾಗಿಯೂ, ರಾಷ್ಟರುಗಳಾಗಿಯೂ ಅಲ್ಲಲ್ಲಿದ್ದಾರೆ ಪ್ರಪಂಚದಲ್ಲಿ.

ಪುಕ್ಕಲು ಪ್ರಪಂಚ

ಹಾದು. ಪ್ರಪಂಚವೇ ಭಯಪೂರ್ಣವಾದದ್ದು. ಪ್ರಕೃತಿಯೇ ಬಿಸಿಲು, ಮಳೆ, ಗಾಳಿ, ಸಿಡಿಲು ಭೂಕಂಪಾದಿಗಳಿಂದಲೂ ರೋಗರುಜಿನಗಳಿಂದಲೂ ಪ್ರಾಣಿಗಳನ್ನು ಭಯಪಡಿಸಿಕೊಂಡೇ ಇದೆ. ಇಚ್ಛಾನುಸಾರವಾಗಿ ನಡೆಯಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಮಕ್ಕಳಿಗೆ ಹೆತ್ತವರ ಆಥವಾ ಗುರುಹಿರಿಯರ ಭಯ; ದೊಡ್ಡವರಿಗೆ ಸಮಾಜದ ಭಯ; ಮಾನಮರ್ಯಾದೆಯ ಭಯ, ಶ್ರೀಮಂತರಿಗೆ ಬಡವರ ಭಯ; ಕಳ್ಳರ ಭಯ, ಕಳ್ಳರಿಗೆ ಸರಕಾರದ ಭಯ; ಬಡವರಿಗೆ ಇಂದಿಗಾದರೆ ನಾಳೆ ಹೇಗೋ ಎಂಬ ಪ್ರಶ್ನಾರ್ಥಕ ಚಿಕ್ಕೆಯ ಭಯ; ಗಂಡಂದಿರಿಗೆ ಹೆಂಡಂದಿರ ಭಯ, ಹೆಂಡಂದಿರಿಗೆ ಗಂಡಂದಿರ ಭಯ, ನ್ಯಾಯ ಭಯ; ಮತಧರ್ಮಗಳ ಭಯ, ಭೂತಗಳ ಭಯ, ಗ್ರಹಗಳ ಭಯ; ದೇವರ ಭಯ;—ಇಷ್ಟು ಮಾತ್ರ ಸಾಲದ್ದಕ್ಕೆ ವರ್ಷವರ್ಷವೂ ತಪ್ಪದೆ ಬರುತ್ತಾ ಇರುವ ಹೊಸ ಹೊಸ ತೆರಿಗೆಗಳ ಭಯ. ಹೀಗೆ ಹೇಳಿದರೆ ಪ್ರಪಂಚವೆಲ್ಲ ಭಯದ ಸಂಕೋಲೆಯಲ್ಲೇ ಹೆಣಿವರಿರುವುದನ್ನು ಕಾಣಬಹುದು. ಇಷ್ಟೆಲ್ಲಾ ಭಯಗಳಾದ ಮೇಲೆ ಮಾನವನಿಗೊಂದು ವಿಶೇಷ ಭಯವೂ ಇದೆ;—ಅದೇ ಸ್ವತಃ ಮಾನವನ ಭಯ.

ಇಷ್ಟೆಲ್ಲಾ ಭಯಗಳ ನಡುವೆ "ನಾನು ನಿರ್ಭೀತ ವ್ಯಕ್ತಿ; ಯಾರ ಭಯವೂ ನನಗಿಲ್ಲ" ಎಂದು ಕಬ್ಬವಾಗುವ ಹಾಗೆ ಎದೆ ತಟ್ಟಿಕೊಂಡರೆ, ಬರೀ ಶಬ್ದ ಮಾತ್ರವೇ ಸವಿ. ಹುರುಳಲ್ಲ, ತಿರುಳಿಲ್ಲ, ಕೇವಲ ಆತ್ಮ ವಂಚನೆ.

"ಧೈರ್ಯಂ ಸರ್ವತ್ರ ಸಾಧನಂ" ನಿಜವಾದರೂ ಆ ಧೈರ್ಯವು ಉಪಬಲಗಳೊಂದಿಗೆ ಕೂಡಿರಬೇಕು. ಅಂಥ ಉಪಬಲ ಬರಬೇಕಾದರೆ ಭಯಶೀಲತೆಯಿಂದಲೇ ನಡೆಯ ಬೇಕಾಗುತ್ತದೆ.

ನಿಜವಾದ ಪುಕ್ಕ

ಆದರೆ ಅವಮಾನಕ್ಕೆ ಭಾಜನನಾಗಬಲ್ಲ ನಿಜವಾದ ಪುಕ್ಕನೊಬ್ಬನಿದ್ದಾನೆ. ಅವನೇ ನೋಡಿರಿ; ಕಾಲದ ಕೊಲೆಗಾರ. ಅವನು ಮುಖಲನಾಗಿ ನಿತ್ಯವೂ ಸಾಯುತ್ತಿರಲೇಬೇಕು. ಅವನು ಪುಕ್ಕತನದಿಂದ ಬುದ್ಧಿಯನ್ನೇ ಮುದುಡಿಸಿಕೊಂಡುಯೋಚನೆ ಹರಿಯಿಸದೆ, ಸಂಕುಚಿತನಾಗಿಯೇ ಬಿದ್ದಿರುತ್ತಾನೆ ಒಂದು ವೇಳೆ ಅವನು ಕಾಲವಿರಿ ಎಚ್ಚರಕ್ಕೆ ಬಂದರೂ ಕಳ್ಳನೋ ಮೋಸಗಾರನೋ ಆಗಿ ಹೀನ ಬಾಳು ಬಾಳಿಯಾನು. ಅಂಥ ನಿಜ ಪುಕ್ಕರ ಕತೆ ನಮಗೆ ಬೇಡ.

ಹಿಂಜರಿಕೆ ಬೇಡ

ನಿಜವಾದ ಭಯವನ್ನೂ, ಪುಕ್ಕತನವನ್ನೂ ನಾವು ಸುಮ್ಮನೆ ಅವಮಾನಿಸುವ ದೃಷ್ಟಿಯಿಂದ ನೋಡಬಾರದು. ಅದನ್ನು ಗೌರವಿಸೋಣ; ಕರ್ತವ್ಯಶೀಲರಾಗೋಣ. ಆಗ ಧೈರ್ಯವೆಂಬುದಾಗಿ ರಕ್ಷೆ ಬಂದೊದಗುತ್ತದೆ. ಸಮಯಕ್ಕೆ ಸಾಹಸವೂ ಒದಿ ಬರುತ್ತದೆ. ಆಗ ಸತ್ತರೂ ಮರ್ಯಾದೆ, ಗೌರವಗಳು ಸಾಯುವು ಅಂತೆಯೇ ಪುಣ್ಯವೆಂಬ ಕೊಳ್ಳಲು ಸ್ವಲ್ಪವೂ ಹಿಂಜರಿಕೆ ಬೇಡ. ಪುಕ್ಕರೆಲ್ಲ ತಲೆ ಎತ್ತಿಕೊಂಡೇ ಮುಂದೆ ಬರಲಿ.

Greetings of the

Independence Day

From

SRI M. MADHVA RAJ,

M. L. A.,

PROPRIETOR:

CORONET

CANNING COMPANY

MALPE

(S. INDIA)

ಮಿತವ್ಯಯ ನುಶ್ತ ಉಳಿತಾಯ ರಕ್ಷಣಾ ತಯಾರಿಗೆ ಸಹಾಯ

ನಮ್ಮ ಯೋಜನೆ ಮತ್ತು ಸಾಧನೆ

(ಹಿನೇ ಪುಟದಿಂದ)

ದ ಅಧಿಕಾರಗಳ ಪಡೆ ನಮ್ಮ ದೇಶದಲ್ಲಿ ಬೆಳೆಯುತ್ತಿದೆಯೇ ಹೊರತು ಯೋಜನೆಯು ಸಂಪತ್ಸಮೃದ್ಧಿ ಅಪ್ಪಾಗಿ ಬೆಳೆಯುತ್ತಿಲ್ಲವೆಂದು ಜೇಳಬೇಕು. ಇಡೀ ದೇಶಕ್ಕೆ ಅನ್ವಯಿಸುವ ಯೋಜನೆಯಿದ್ದರೂ ಅಲ್ಲ ಕ್ಷಿಯ ಪರಿಸ್ಥಿತಿ ಪ್ರಭಾವಕ್ಕನುಸರಿಸಿ ಬದಲಾವಣೆಯಾಗುವುದೂ ಕೆಲವು ಸಂದರ್ಭ ಅವಶ್ಯವೆನಿಸುತ್ತದೆ. ಯೋಜನೆಯು ಪರಿಯೂದ ತಿಳುವಳಿಕೆ ಪೊತ್ತ ಮೊದಲಿಗೆ ಆಗಬೇಕಾದುದು ಅತ್ಯವಶ್ಯ. ಇಲ್ಲದಿದ್ದರೆ ಕಾಗದದಲ್ಲಿರುವ ಯೋಜನೆ ಕೃತಿಯಲ್ಲಿ ಬಾದದೇ ಅವು ಹಾಗೆಯೇ ಕವಂ ಹೋಗುವ ಪ್ರಸಂಗವೂ ಒದಗಬಹುದು.

ಇದೀಗ ನಮ್ಮಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆ ಆರಂಭವಾಗಿದೆ. ಯೋಜನೆಗಳಲ್ಲಿರುವ ಅಂಶಗಳು ಸರಿಯೂಗಿ ಜೀರ್ಣವಾದರೆ ಆಯೂ ಭಾಗದ ಬಹು ಮಟ್ಟನ ಕೊರತೆ ನೀಗುತ್ತದೆ. ಆದರೆ ನಮ್ಮಲ್ಲಿ ಆದದ್ದೇನು? ಎಸ್ಟರ ಮಟ್ಟನ ಕೊರತೆ ನೀಗಿಸಿದೆ? ವಿಸ್ತರಣೆಯಾಯಿತೇ ಹೊರತು ಯೋಜನೆಯು ವಿಸ್ತರಣೆಯು ಕಾರ್ಯನಡೆಯಲಿಲ್ಲ. ಇದಕ್ಕೆ ಮುಖ್ಯ ಕಾರಣ ಯೋಜನೆಯು ಸರಿಯೂದ ಕಲ್ಪನೆ ಆಗದಿದ್ದುದು. ಅದನ್ನು ವ್ಯಾವಹಾರಿಕವಾಗಿ ಕೃತಿಯಲ್ಲಿಳಿಸದಿದ್ದುದು.

ಈ ರೀತಿ ರಾಷ್ಟ್ರೀಯವಾಗಿ ನಡೆಯುತ್ತಿರುವ ವ್ಯವಹಾರ ವ್ಯಕ್ತಿಜೀವನದಲ್ಲೂ ಆರಂಭವಾಗಿದೆ. ಜೀವನವನ್ನು ಸಫಲಗೊಳಿಸುವ ಹಲವಾರು ಯೋಜನೆಗಳು ನಮ್ಮ ನಿಶ್ಚಿಯತೆ—ದ.ವಿನಿಯೋಗಗಳಿಂದ ಜೀವನ ನಟ್ಟವನ್ನೂ ಸುಧಾರಿಸಿಕೊಳ್ಳಿದವರಾಗಿದ್ದೇವೆ. ವ್ಯಕ್ತಿ ಜೀವನದ ಸುಧಾರಣೆಗೆ ಸಹಕಾರೀ ಸಂಘಗಳಲ್ಲಿ ಹಲವಾರು ಬಗೆಯ ಯೋಜನೆಗಳಿವೆ. ಪ್ರಯತ್ನಿಸಿದರೆ ಅವುಗಳಿಂದ ನಮ್ಮ ಲಾಭ ಸಾಧಿಸಿಕೊಳ್ಳಬಹುದು. ಆದರೆ ಸಾಧಿಸಿದ ವರೆಷ್ಟು? ವರುಷ ವರುಷವೂ ಜೆಳೆಯುತ್ತಿರುವ ಸಾಲದಂಶ— ಅಂಕಿಗಳನ್ನು ಅಳೆದರೆ ಬಹಳಷ್ಟು ಜನ ಅವನ್ನು ಸರಿಯೂಗಿ ಉಪಯೋಗಿಸುತ್ತಿಲ್ಲವೆಂದೇ ಹೇಳಬೇಕಾಗಿದೆ. ಯೋಜನೆಗಳನ್ನು ಅವು ಹೇಗೆ ಪಡೆದಿದ್ದೇವೆಯೋ ಆದಕ್ಕೇ ಅವನ್ನು ಉಪಯೋಗಿಸಿದರೆ ನಿಶ್ಚಿತ ಅವಧಿಯಲ್ಲಿ ನಾವು ಅದನ್ನು ಹಿಂದಿರುಗಿಸಲು ಸಮರ್ಥರಾಗುತ್ತೇವೆ. ಇಲ್ಲದಿದ್ದರೆ ಋಣ ಭಾರ ಬೆಳೆದು ಯೋಜನೆಯನ್ನೇ ನಿಂದಿಸುವ ಹವ್ಯಾಸಕ್ಕಿಳಿಯುತ್ತೇವೆ.

ಹೀಗೆ ನಮ್ಮ ದೇಶದ ಯೋಜನೆಗಳಿಗೆ ಅವನು ಸಾಧಿಸುವ ಸಾಧನೆಯಿಂದ—ಜನತೆಯಿಂದ— ಸರಕಾರದಿಂದ ಆದ ಅಪಚಾರಗಳು ಆವರ ಪ್ರಗತಿಯನ್ನು ಕುಗ್ಗಿಸಿವೆ. ತಗ್ಗಿಸಿವೆ. ಈ ಪ್ರವೃಗದಲ್ಲಿಯೂ ಶ್ರೀಕರಣ ಶುದ್ಧಿಯಾಗುವುದು ಇಂದು ಅತ್ಯಾವಶ್ಯಕ. ಇಲ್ಲದಿದ್ದರೆ ನಾವಿರ ಯೋಜನೆಗಳಿದ್ದರೂ ದೇಶದ ಸಂಪತ್ಸಮೃದ್ಧಿ ಸಾಧ್ಯವಾಗಲಾರದು.

ಮಂಗಳೂರು ಬಂದರ ಮತ್ತು ಮೈಸೂರಿನ ರಾಜಕೀಯ

(ಒನೇ ಪುಟದಿಂದ)

ಜೋಜನಾ ಆಯೋಗದ ಆತೀರ್ವಾದ ವಿದ್ದೇ ಹೊರಟ ಬಂಗರಿನ ನಿರ್ಮಾಣ ಕಾರ್ಯಕ್ಕೆ ಪದೇ ಪದೇ ಆ ಆಯೋಗದ ಸದಸ್ಯರ, ಅವರಲ್ಲಿ ಒಬ್ಬರೆ—ಅಧ್ಯಾಪನೆ ಆಗತ್ಯವಿಲ್ಲ. ಇಂಥ ಮಾತುಗಳಿಗೆ ಮೂರು ನಾಲ್ಕು ವರ್ಷಗಳ ಹಿಂದೆ ಜೆಲೆ ಇದ್ದಿರಬಹುದು; ಈಗ ಅವು ಬೇಕಿಲ್ಲ.

ಬಂದರಿನ ಕೆಲಸ ನೀರಾವರಿ ಅಂತೂ ಅಲ್ಲವೆ ಅಲ್ಲ.

ಯೋಜನಾ ಆಯೋಗದ ಸಮ್ಮತಿ ಸಿಕ್ಕ ಮೇಲೆ ಬಂದರಿನ ಕೆಲಸ ದೇಶದ ಪಾರಿಗೆ ಇಲಾಖೆಗೆ ಸಂಬಂಧಿಸಿದ್ದೇ. ಎಲ್ಲ ಸಮಸ್ಯೆಗಳಿಗೂ ಹೊಣೆಗಾರರು ಅವರೇ ಇರುತ್ತಾ. ದಿಲ್ಲಿಯಲ್ಲಿರುವ ಎಲ್ಲರ ಅಭಿಪ್ರಾಯ ಸಂಗ್ರಹವನ್ನು ಮಾಡುವ ಕಾರಣವಾದರೂ ಏನು?

ದಿಲ್ಲಿಯ ಗುಟ್ಟನ್ನು ಬಲ್ಲ ನಮ್ಮ ಸ್ವಂತ ಪ್ರತಿನಿಧಿ ಶ್ರೀ ಶ್ರೀನಿವಾಸ ಮಲ್ಯರಾದರೂ ಇದಕ್ಕೆ ಸಮರ್ಪಕ ಉತ್ತರವನ್ನು ಕೊಡಬಲ್ಲರೆ?

ಪರಿಸ್ಥಿತಿ ನಮ್ಮ ಮುಂದೆ ಇಲ್ಲದಿರುವಾಗಲೂ ಮೇಲೆ ಏನನ್ನಬಹುದು?

(೮) ಮಂಗಳೂರು ಬಂದರಿಗೆ ಪ್ರಶಸ್ತವಾದ ಸ್ಥಳವಲ್ಲವೆಂದು ತೀರ್ಮಾನವಾದ ಬಳಿಕವೂ ವೃಜ್ಞನಿಕರಿಗೆ, ತಂತ್ರಜ್ಞರಿಗೆ ಆ ಸ್ಥಳದ ಬಗ್ಗೆ ಸದಭಿಪ್ರಾಯ ಮೂಡಿಲ್ಲ.

(೮) ಯೋಜನಾ ಆಯೋಗವು ೧೯೬೧ ರ ಮಂಗಳೂರು ಬಂದರಿನ ಅಭಿವೃದ್ಧಿಯ ಕುರಿತು ಶಿಫಾರಸು ಮಾಡಿತ್ತು. ಆದರೆ ಮರ್ಮಗೋವೆಯ ಸೌಕರ್ಯವು ದೊರೆತ ಮೇಲೆ ಮಂಗಳೂರಿನ ತುರ್ತು ಆವಶ್ಯಕತೆ—ಈ ತುರ್ತು ಪರಿಸ್ಥಿತಿಯಲ್ಲಂತೂ ಅವರಿಗೆ ಕಂಡು ಬರಲಾರದು.

(೩) ಆದುದರಿಂದ ಈಗ ಯಾವುದಾದರೊಂದು ನೆಪ ಹೇಳಿ ಬಂದರಿನ ಕೆಲಸವನ್ನು ಹಿಂದೂಡಲು ಉಚ್ಚ ವರ್ಗಗಳಲ್ಲಿ ಪ್ರೇರಣೆ ಒದಗಿರ ಬೇಕು.

(೪) ವಸ್ತುಸ್ಥಿತಿಯನ್ನೂ ವರ್ತಮಾನ ಭಾರತೀಯ ಪರಿಸ್ಥಿತಿಯನ್ನೂ ಅವಲೋಕಿಸಿದರೆ ಇಂಥ ತೀರ್ಮಾನವು ತಪ್ಪು ಎನ್ನಿಸುತ್ತಿಲ್ಲವೆ? ಅಥವಾ ಒಂದು ಹಿಂದುಳಿದ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಮುಖ್ಯ ಸ್ಫೂರ್ತಿ ಎನಿಸಬಹುದಾದ ಈ ಬಂದರನ್ನೆ ಬಗ್ಗೆ ಜನಾಪತ್ತ ಘೋರಣೆಯನ್ನು ವಹಿಸುವುದು ರಾಷ್ಟ್ರಾಭಿವೃದ್ಧಿಯ ದೃಷ್ಟಿಯಿಂದ ವಿಘಾತಕವೆನ್ನೋಣವೆ? ಅಥವಾ ಮೈಸೂರಿನ ರಾಜಕೀಯ ಬಲಯಗಳಿಗೆ ದಿಲ್ಲಿಯಲ್ಲಿ ಬೊರೆಯುವ "ಗಾರವ ಜ್ಞ ಸಂಕೇತ ಎನ್ನೋಣವೆ? ಅಥವಾ ಮೈಸೂರು ರಾಜಕೀಯದ ಅಸ್ತಿರ ಚಿತ್ತದ ದೆಸೆಯಿಂದ ಮಂಗಳೂರು ಬಂದರು ಬಲಿಯಾಗುತ್ತಿದೆ ಎನ್ನೋಣವೆ?

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 178/63.

ಸರಸ್ವತಿ ಎಲ್. ಭಂಡಾರಿ —ವಾದಿಳು.

ಮತ್ತು

ರಾಮಣ್ಣ ಸೆಟ್ಟಿ ಬಿರ್ತಿ ಮನೆ ಸುಹಾಬಲ ಸೆಟ್ಟಿ ಪೆಂಡ್ತಿ ವ ಆಕ್ಕಾಲ್ ನವರು ಸೆಟ್ಟಿರ ಮಗಳು—ಉಡ್ಪಿ ತಾಲ್ಲೂ ಹಂವಾಡಿ ಗ್ರಾಮ, P. O. ಬ್ರಹ್ಮಾವರ —ಪ್ರತಿವಾದಿಳು.

ಇವರೊಳಗೆ

ಪ್ರತಿವಾದಿಳಿಗೆ ತಿಳಿಯಪಡಿಸುವುದೇನೆಂದರೆ—

ತಾ. 30—4—63ರಲ್ಲು ವಾದಿಳು ಪ್ರತಿವಾದಿಳಿಗೆ ಬರ್ರಿಕೊಟ್ಟ ಕ್ರಯಚೀಟಿನಲ್ಲಿ ವಳಪಡ್ಡಿದ ಕ್ರಯದ ಪ್ರತಿಫಲವ ವಾದಿನಲ್ಲಿ ಬಹಾ ಆಸಲು ರೂ. 3000/— ಮತ್ತು ಬಡ್ಡಿ ವ್ಯೆರೆ ಬಪಾ ವನೆವಿಗೆ ವಾದಿರು ವಾಕ್ಲು ಮಾಡಿದ ನೋಂದಿ ದಾವೆಯು ತಾ. 16—8—63ಕ್ಕೆ ನಮ್ಮ ಹಾಜರಿ ಬಗ್ಗೆಇಟ್ಟಿರುವುದರಿಂದ ಮೇಲಿನ ದಾವೆಯಲ್ಲಿ ನಿಮ್ಮ ಕಾಧನೆಯಿದ್ದರೆ ಸದ್ರಿ ತಾರೀಕಿಗೆ ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜವಾಬುದಾರಿ ಕೊಳ್ಳತಕ್ಕದ್ದು, ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವಾ ತೀರ್ಪಾನಿಸಲ್ಪಡುತ್ತದೆ.

Y. C. S. Hegde
Advocate for Plaintiff.

ಉಡ್ಪಿ, 2—8—63.

ಉಚಿತ ಉಡುಗೊರೆ ಕೊಡಲು ಯೋಗ್ಯ ಪುಸ್ತಕ

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!



ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೆಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ಸ್ಟೋರ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಹೊಸ ಪುಸ್ತಕ—

ನಚಿಕೇತರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಎಚ್ಚತ್ತೆವೋ ನಾವು ಎಚ್ಚತ್ತೆವು.

[ಭಾರತ ಸರಕಾರದ ವಾರ್ತಾಖಾತೆ ಮತ್ತು ರಾಷ್ಟ್ರೀಯ ಕ್ಷಣಾ ಪ್ರಚಾರ ಸಮಿತಿಗಳ ಆಶ್ರಯದಲ್ಲಿ, 1963 ಫೆಬ್ರುವರಿ 23ರಂದು ಮಂಗಳೂರಿನ ಗರ್ವರ್ಮೆಂಟ್ ಕಾಲೇಜಿನಲ್ಲಿ ಜರಗಿದ ಕವಿಸಮ್ಮೇಲನದಲ್ಲಿ ವಾಚನಗೈದ ಕವಿತೆ]

—ಅ ಗೌ. ಕಿನ್ನಿಗೋಳಿ.

ಎಚ್ಚತ್ತೆವೋ ನಾವು ಎಚ್ಚತ್ತೆವು—
ಹಿಮಗಿರಿಯ ಕುದಿಯಿಂದ ರಾಮೇಶ್ವರದ ತನಕ
ಸ್ವರ್ಣರವಿ ಸುರಿಯುತಿದೆ ಏಕಾಯ ಬೋಗುಣಿಗೆ!
ನಭದ ಕಾಳಿಮೆಯು ತೆರೆ ಸರಿಯೆ, ಹಕ್ಕಿಯ ಬಳಗ
ಹಾಡುತಿದೆ ಹುಮ್ಮನಿಸಿ ಉದಯ ರಾಗ.
ಎಚ್ಚರಾದುದು ನಾಜ; ಕಣ್ಬೆಟ್ಟಿನೋ?
ಮುಂಜಾವದ ಮುಂಗುರುಹು ಬೆಳ್ಳಯೋ ಕೊಳ್ಳಯೋ?
ದೇಶದೆದೆಗುಂಡಿಗೆಯು ಡಿಲ್ಲಿಯೋ ಹಳ್ಳಿಯೋ?
ತಿಳಿಸುವಣ್ಣ! ಪೂರ್ಣ ಕಣ್ಬೆಡದ ಮುನ್ನ.
ಒಂದುವರೆ ಶತಮಾನದೀ ನಿದ್ದೆ; ತಿಳಿವಾಗ
ಹಿಂದು-ಇಂದುಗಳ ಸಂಬಂಧ ತಿರುಪಿ,
ಒಂದೆ ಬಾಳಿನ ಆದಿಯಂತಗಳ ಮಧ್ಯನೇ
ಮುರಿದಂತೆ ಭಾಸಿಸಿತು ಗೋಣಿನು ತಪ್ಪಿ.
ನುಂಪೆ ಕಾದಿದೆಯಂತೆ ಮಷಾ ನೋಡಿಸಿ!
ಕೇಳು ಮನಮುಟ್ಟಿ—
ಶತಮಾನ ನೆಳೆದಿಟ್ಟು ತಳಗಟ್ಟಿ ಕಟ್ಟಿ,
ಐದೈದು ವರುಷಗಳ ಇಟ್ಟಿಗೆಯನೊಟ್ಟಿ,
ಸರ್ವೋದಯದ ಸೌಧ ನಭಕೆ ತಲೆಯೆತ್ತಿ
ನಿಶ್ಚಿಸುವ ಸಿದ್ಧತೆಯು ಸ್ಪಷ್ಟವಿರ್ಪ—
ಕೇಳುತಿದೆ ಕೇಕೆ, ಜಗಜಂಗುಳಿಯ ನುಡಿಬಳಕೆ!

ಸಂದೇಹವೇಕೆ?

ಎಚ್ಚರಾದದ್ದು ನಿಜ;
ಕಣ್ಬೆಟ್ಟಿದೂ ಸಹಜ—
ಎಚ್ಚತ್ತೆವೋ ನಾವು ಎಚ್ಚತ್ತೆವು.

— ೨ —

ಕೆಂಪುಕೋಟೆಯು ಬವಲು ಹಚ್ಚಹಸುರಿನ ಕೋಟೆ,
ಗದಾಪರ್ವವ ತೊರೆದು 'ಉದ್ಯೋಗಪರ್ವ'
ನಗರಸಿಂಗರ ಬೆಟ್ಟು ಕಾಗ್ರಾಮ ಕೆರುನೇಟಿ—
ಕೈಕಸವೇನಿದೆ? ಸುಸಜ್ಜಿತವೂರಣ ಸರ್ವ—
ನಡೆಯುತಿರೆ ನಾಡಿನುದ್ದಗಲ ನವ್ಯೋದಯಕೆ,
ನಿಜವ ಹೇಳಾ ಮನಸೆ,
ಇದು ನಿನಗೆ ಕನಸೆ?
ಸ್ವಪ್ನಲೋಕವೆ ವಿಸ್ಮಯಗಳ ವಾಸ್ತವ ಜಗದಿ
ಕಾಣುತಿರೆ ಹೀಗೊಮ್ಮೆ ಸಂದೇಹ ಮೂಡಿಬಂತು!
ಜಾಗೃತಿಯ ತೂರ್ಯರವ ಧ್ರುವ ಧ್ವನಿಸುತಿರೆ ನಿಜದಿ
ಕನಸಲ್ಲ ನನಸೆಂಬ ಧೈರ್ಯವೂ ಕೂಡಿಬಂತು.
ಆದರೂ—ಪೆಚ್ಚಲ್ಲವೆಂಬುದೆಂತು?
ಹರಿವ ಹೊಳೆಯನ್ನು ಹಿಡಿದು ನಿಶ್ಚಿಸಿಹರಲ್ಲಿ,
ಜಲಮಥನದಿಂ ಮಿಂಚ ತೆಗೆವರಲ್ಲಿ!
ಯಂತ್ರನಾನವ ದಣಿವರಿದೆ ದುಡಿವನೊಂದು ದೆಸೆ—
ಅವನ ಖ್ಯಾತಿಯೆ ನಮ್ಮ ಆಂಕೆಯಲ್ಲಿ!
ಪೆಚ್ಚಲ್ಲವಣ್ಣ—ಕೆಚ್ಚರಳಿತಿಲ್ಲಿ.
ಎಚ್ಚತ್ತೆವೋ ನಾವು ಎಚ್ಚತ್ತೆವು.

— ೩ —

ಶಂತನುವಿನ ವಂಚಿಸಿದ ಗಂಗೆ ನಮಗಾಗಿಲ್ಲಿ
ಕರೆದಾಗ ಕಾದಿಹಳು ನಲ್ಲಯಲ್ಲಿ.
ಮುನಿ ಅಗಸ್ತ್ಯನ ತೊರೆದ ತಾಯಿ—ಲೋಪಾಮುದ್ರೆ
ನೂರ್ ನಾಲೆಗಳ ಸುಧಾಸ್ತನ್ಯ ಉಣಿಸಲ್ಕೆ
ಪಣತೊಟ್ಟ ಭಗೀರಥ!
ಕಾರ್ತವೀರ್ಯಾರ್ಜುನನ ಕೊಂದ ಕೊಡಲಿಯ ಬೋಗ
ನಾಗಾರ್ಜುನ ಸಾಗರದಿ ನೈತಿಹಳೆಯಲಿ.
ಭಗೀರಥಿಯ ಬಂಟ ಭಾಕ್ರಾದಲಿ ಬೆಳಗಾಗಿ
ಬಿಲ್ಲೆಯಲಿ ಜೀತರಸಿ ಮೈ ತಿಳಿಯಲಿ.
ಭೂತ ಸೃಷ್ಟಿಯ ಶೂನ್ಯಗರ್ಜ್ಜರದ ಪರಮಾಣು
ದೈತ್ಯನನ್ನೂ ಹಿಡಿದು ರುಡಿಯಿಸದೆ ಬಿಡೆವು.
ಇಹವೇನು ಪರವೇನು? ಸಕಲ ಸಾಧನೆ ಸಿದ್ಧಿ
ಅಧ್ಯಾತ್ಮ ಶೂತ್ರದಲಿ ಕೋವಿದರು ನಾವು.
ಧನ್ವಂತರಿಯ ನಾರು ಬೇರು ಎತರ? ಸಿಂಪ್ರ
ಪಡೆದಿಲ್ಲವೇ ಪೆನ್ಸಿಲಿನು ಕಾರ್ಮಾನೆ?
ಧನಪತಿಯ ಭಂಡಾರ ಬೀಗ ಮುದ್ರೆಯನೊಡೆಯೆ
ನಡೆಯುತಿದೆ ಭೂಗರ್ಭ ಸಂಶೋಧನೆ.
ಬ್ರಹ್ಮನೂ ತನ್ನಿಚ್ಛೆಯಂತೆ ನಡೆಯುವುದೆಂತು?
ನಮ್ಮನೇಕ್ಷೆಗೆ ತಕ್ಕ ಸಂತಾನ ಸೃಷ್ಟಿ!
ನೈತ್ಯನಿನ ಮೂತಿರಲಿ; ಹುಟ್ಟಿದನರಿಗೆ ಉಂಟು
ಗಾಳಿ ಬೆಳಕುಗಳೀವ ಪುಕ್ಕಟೆಯ ಪುಷ್ಟಿ.
ಗುಡಿಯು ದೇವರಿಗಿನ್ನು ಶುಪ್ಪದಾರತಿ ಬೇಡ
ವಿಂಚಿನುಂಡೆಯೆ ಬೇಕು ಬೆಳಕು.
ಪೂಡಿಯ ಪೂಜಾರಿಗೂ ಉದುಪ್ಪದಕ್ಕನುಕೂಲ
ಕೃತಕ ರೇಶ್ಮೆಯು ಸಹಜಕಿಂತ ಥಳಕು.
ಕಲ್ಲನುಗುರುತಿಗೇಕೆ ಚಿನ್ನಬೆಳ್ಳಿಯ ದೃಷ್ಟಿ?
ನಮಗಿನ್ನು ಪ್ಲಾಸ್ಟಿಕ್ಕು ಪ್ರತಿಮಗಳೆ ಸಾಕು.

— ೪ —

ಕೆರಳದಿರಿ ಕ್ಷಾತ್ರ—
ಕೇಳು ಭಾರತ ಪುತ್ರ!
ನೀರನ್ನೆ ಉರಿನೇವು, ಬೆಂಕಿಯನೆ ಕುಡಿದೇವು,
ತಸ್ತ ಲಾವಾರಸವ ಮಿಂದೇವು ನಾವು!
ಗಾಳಿಯನು ಕಟ್ಟೇವು, ಅಗಸವ ಸುಟ್ಟೇವು
ಸುಪ್ತ ಚೇತನ ಕೆರಳೆ ಬಿಟ್ಟೇವೆ ನಾವು?
ಸೂರ್ಯರಶ್ಮಿಯ ತಂಪು ಶಶಿಯ ಕಿರಣದ ಬಿಸುಪು
—ಗಳ ತೆಗೆದು ಬಳಸೇವು ಉಪಯೋಗಕೆ.
ಹಾಲಾಹಲವ ಸುಟ್ಟು ಸೊದೆಹೊಸಲು ಹಂಸೇವು
ನಕ್ಷತ್ರಗಳ ಹಿಂದಿ ಬೆಳಕಿನ ಪ್ರವಾಹ!
ಆಹಾ!.....ಬಲ್ಸೊಗಸು ಕಲ್ಪನೆ!.....
ಆಹುದು: ಕಲ್ಪನೆ ತನ್ನ ಪರಿಮಿತಿಯ ಮಿತಿಯಲ್ಲಿ ಸತ್ಯ.
ಶುಭ್ರ ನೀಕ್ಷೆಯ ಶುಭ್ರದರ್ಶನದ ಶಿಶುವದುವೆ.

— ೫ —

ನೋಡಲ್ಲಿ, ಓ ಅಲ್ಲಿ—ಆ ಮಹೋನ್ನತಿಯಲ್ಲಿ,
ಯುದ್ಧಿ ಸಂಸಿದ್ಧಿ ಸಂತೃಪ್ತಿಗಳ ಶೃಂಗದಲ್ಲಿ,
ಸತ್ಯ ಶಿವಗಳನು ಸೌಂದರ್ಯ ಬೆಸೆವಲ್ಲಿ,
ನಿಸ್ಪೃಹತೆ ಸೈರ್ಯಲ್ಯ ನಿಜದರಿವ ಹೊಸೆನಲ್ಲಿ,
ತಡೆಯಿರದ ವಿಸ್ತಾರದಲ್ಲಿ—
ಗಡಿಯಿರದ ಸಂಕ್ಲೇಪದಲ್ಲಿ—
ಇದೇ ಕ್ಷೀತಿಯಲ್ಲಿ,
ಪೂರ್ಣವ್ಯ ಮಹತಿಯ ಸುಸಿರ್ಮಿತಿಗೆ ಮಿತಿಯೆಲ್ಲಿ?
ಅಲ್ಲಿ—
ಕಾಣದೇ ನಾಫಲ್ಯ ಸ್ವರ್ಣಸೌಧ?
ಹಿಂದೆ—
ಅಲ್ಲಿ ಹುಟ್ಟಿದ್ದಂತೆ ನಾಲ್ಕು ವೇದ!
ಜೊತೆಗೆ—
ಅಲ್ಲೆ ಕೇಳತ್ತಂತೆ ಪ್ರಣವನಾದ!
ಶಿಲ್ಪ ಕಲ್ಪಿಗಳಲ್ಲ ನನ್ನ ನಿನ್ನಂಥವರೆ
ಆ ಸೌಧ ನಮಿದಿದ್ದರಂತೆ ನೋದರನ!
ಪರುಷಮಣಿ ಹಾಲ್ಗಲ್ಲ ಹಂಗಿರದೆ, ಭಾವೈಕ್ಯ
ಭರದಲ್ಲೆ ಕಟ್ಟಿದ್ದರಂತೆ ಕೇಳಾ ಸಖನೆ!
ಅದು ಕಳೆದ ಕಾಲ..... ...
ಮುಂದೇನು ಹೇಳ!
ಮುಂದೆ ಬೆಳೆಯಿಸಬೇಕು—ಮನುಜತೆಯ ಮಧುವನ
ಒಲವಿನಾ ವೃಂದಾವನ.
ಮಮತೆಯ ಮಂದಾರ, ಸಮತೆಯ ಸಹಕಾರ
ಇಲ್ಲೆ ಬೆಳೆಯಲಿ ಜ್ಞಾನಮಿತ್ರ!
ವಾತ್ಸಲ್ಯವಲ್ಲರಿಯ ಕನಿಕರದ ಕಳಿಕೆಗಳು
ಇಲ್ಲೆ ಅರಳಲಿ ಕರುಣನೇತ್ರ.
ರಸಿಕತೆಯು ದಾರದಲಿ ಕೂಕ್ತಿ ಮುಕ್ತಕಗಳನು
ಇಲ್ಲೆ ಪೋಣಿಸಿಕೊಳುವ ಗೆಳೆಯ.
ಇಲ್ಲೆ ಚಿಮ್ಮಲಿ ನಮ್ಮ ಎದೆಯೊಲವನೆರೆಯರುಗಳು
ಎಲ್ಲ ಹಸಿರೊಡೆದಿರಲಿ ತಿಳಿಯ.!
ತುಂಬು ತಿಳಿವಿನ ಶಾಲೆ ಒಳಿತುಗಳ ಪ್ರಸ್ಫುಟಿಸಿ
ಕಂಪು ಬೀರಲು ಬೇಕು ಇಲ್ಲೇ.
ಮೋಹನ ಮಯೂರ ನರ್ತಿಸನಿಲ್ಲೆ ನಡೆಯುತ್ತ
ಕೇಳಿಸಲಿ ಕಲೆಯೆಂಬ ಸೊಲ್ಲೇ.
ಅಗಲೇ—
ಎಚ್ಚತ್ತೆವೋ ನಾವು ಎಚ್ಚತ್ತೆವು.

(ಆಲ್ ಇಂಡಿಯಾ ರೇಡಿಯೋ ಕೃಪೆಯಿಂದ.)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೊಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆಸವರ: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಚಾರದ.

ಬೆಲೆ: ಯೂ. ೧—೮—೦ (1 = 50)

ರೂ. 1 = 75 ಮುನಿಯೂರ್ದರು ನೂಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ಜೊತೆಯ ಸ್ಥಳ.

ನವಯುಗ ಎಂಟರ್‌ಪ್ರೈಸಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕಾಪರಗೋಡಿಗೆ ಬಿಡುಗಡೆ

ಇಲ್ಲಿ ಕನ್ನಡ ಸಾಯುತ್ತ ಇದೆ!

(ಅನೇ ಪುಟದಿಂದ)

ಎಲ್ಲಿಯೂ ಬರುವುದಿಲ್ಲ; ಕೇರಳದ ನರಕ ಕೂಪದಲ್ಲಿ ಕೊಳೆಯುವ ಕಾಸರಗೋಡಿನ ಕನ್ನಡಿಗ ವಿದ್ಯಾರ್ಥಿಗಳಿಗೆ ಮಾತ್ರ ಈ ದುರ್ದಿನ ಬರುತ್ತದ! ಇನ್ನೊಂದು ಸ್ವಾರಸ್ಯದ ಉದಾಹರಣೆ ಕೊಡಬಹುದು.: ಕುಂಬಳೆ ಜಾತ್ರೆಯು ಕುರಿತು ಇದರಲ್ಲಿ ಒಂದು ವಾರವಿದೆ. ಗುಂಬಳೆ ದೇವಾಲಯು ಇಲ್ಲಿನ ಜನತೆಗೆ ಚಾರಿತ್ರಿಕ ವ್ಯಾಮುಖ್ಯವಾದುದು. ಇದು ಸೀಮೆ ದೇವಸ್ಥಾನ ಎಂಬುದರಿಂದ ಮಾತ್ರವಲ್ಲ,ಸಾರ್ವತ್ರಿಕವಾಗಿ ಪ್ರಸಿದ್ಧ ಕವಿಯ ಹೆಸರಿನಿಂದಲೂ ಇದು ಖ್ಯಾತವಾಗಿದೆ. ಈ ದೇವಾಲಯದ ಉತ್ಸವದ ಕುರಿತಾಗಿ ಬರೆದಿರುವ ಪಾಠದ ವಿವರಣೆಯಲ್ಲಿ ತೆ ಪ್ಪೋತ್ಸವ ಎಂಬುದು ಇಲ್ಲಿ ಇದೆ ಎಂದು ಕೊಡಲಾಗಿದೆ. ಈ ದೇವಾಲಯದಲ್ಲಿ 'ತೆ ಪ್ಪೋತ್ಸವ' ನಡೆಯುವುದೇ ಇಲ್ಲ. ದೇವರನ್ನು ಹೊತ್ತುಕೊಂಡಿರುವ ಚಿತ್ರವೊಂದೂ ಉಂಟು. ಅದು ಯಾವುದೋ ಭೂತ ಪಿಶಾಚಿಯ ಚಿತ್ರದಂತೆ ತೋರುತ್ತದೆ. ಇದೇ ಪಾಠದಲ್ಲಿ ಅಡಿಗಳು—'ಅಡಿ'—ಗಳು ಆಗಿದ್ದಾರೆ! ದೇವರ ಕುರಿತು, ದೇವಾಲಯದ ಕುರಿತು, ಅರ್ಚಕರ ಕುರಿತು, ಧರ್ಮದ ಕುರಿತು ಇಂತು ಅಪಾರವಾಸ್ಯಕರ ಹಾಗೂ ಅಪಸೂಸಕರವಾದ ರೀತಿ ಅವಹೇಳನ ಮಾಡುವ ಪಾಠವನ್ನು ಪಠ್ಯದಿಂದ ತೆಗೆದು ಹಾಕದೆ ಇದ್ದರೆ ಕಾಸರಗೋಡಿನ ಕನ್ನಡ ಜನತೆ ಕೇರಳ ಸರಕಾರಕ್ಕೆ ಒಂದು ಪಾಠ ಕಲಿಸಬೇಕಾಗುವುದು!

ಇಂತಹ ವ್ಯಸನದ ಸಹಸ್ರಗಳನ್ನು ಪಟ್ಟಿ ಮಾಡಿದಲ್ಲಿ ಹನುಮಂತನ ಬಾಲದಂತೆ ಬೆಳೆದೀತು! ಸಾರಾಂಶವೆಂದರೆ ಇಂದು ಕನ್ನಡ ಭಾಷೆಯು ಕಗ್ಗೊಲೆ ಕಾಸರಗೋಡಿನಲ್ಲಿ ನಡೆಯುತ್ತಾ ಇದೆ; ಕೃತ್ರಿಮವಾಗಿ ಸಾಗುತ್ತಾ ಇದೆ; ಕನ್ನಡನುಡಿ ಇಲ್ಲಿ ಸಾಯುತ್ತಿದೆ

೦ ೦ ೦ ೦

ಹೀಗಿದ್ದರೂ—

ಈ ಅನ್ಯಾಯಗಳಿಗೆಲ್ಲಾ ಮೂಲಕಾರಣರೆಂದು ಆರೋಪಿಸಲಾದ ಸರ್ದಾರ್ ಪಣಿಕ್ಕರ್ ಕನ್ನಡ ರಾಷ್ಟ್ರಧಾನಿಯಲ್ಲಿ ಮೈಸೂರಿನ—ಉನ್ನತ ಪಟ್ಟದಲ್ಲಿ ವಿರಾಜಮಾನರಾಗಿ ಮೆರೆಯುತ್ತಿದ್ದಾರೆ.

'ವಿಸವಿಕ್ಕಿದಾತನಿಗೆ ಅಮೃತ
ವೆರೆವೆಬೆ.ನು?
ಇದು ನರನ ದೇವತ್ವ ಕೊಯ್ದು
ಕಾರಣವು!"

ಎಂಬೀ ಪದ್ಯದ ಸಾಲುಗಳನ್ನು ಗಳಂ ನಾಲಿಗೆ ನಾನು ಬರೆದೆ,— ಅಂದು ಗಾಂಧೀಜಿಯು ಕಶ್ಚನ್ಯಭಾವಕ್ಕೊಳಗಾಗಿ! ನವ್ಯರಾಷ್ಟ್ರಪಿತ ಗಾಂಧೀಜಿ. ಇಂದು. ಹೆಸರಿಗಾದರೂ ನಾವು ಗಾಂಧೀ ಜನ; ಮೈಸೂರು ಸರಕಾರದ ಉಗ್ರಮೂನ್ಯ ನೇತಾ ಶ್ರೀ ನಿಜಲಿಂಗಪ್ಪನವರು ಗಾಂಧೀ ಗರಡಿಯಲ್ಲಿ ಪಳಗಿದವರು; ಗಾಂಧೀ ಶಿಷ್ಯರು! ವಿಸನಿಕ್ಕಿದಾತನಿಗೆ ಅಮೃತವೆರೆಯುವುದೆ'—ಗಾಂಧೀ ಹೇಳಿದ ಹಾದಿ. ಗೆಳೆತನದಿಂದಲೇ ಕೊಲೆಗಡುಕನದೂ ಹೃದಯ ಸುನರ್ಕನೆ ಮಾಡಬೇಕೆಂಬುದೇ ಇದರ ಸಾರ. ಕಾಸರಗೋಡಿನ ಲಕ್ಷಾಂತರ ಕನ್ನಡ ಜನತೆಗೆ—ಸಾವಿರಾರು ವಿದ್ಯಾರ್ಥಿಗಳಿಗೆ ಈ ಎಳೆ ಪಸುಳೆಗಳಿಗೆ—ಇಂತು ಮೋಹ ಬಗೆದ ದ್ರೋಹ ಮುಂದಾದರೂ ಎಂದಾದರೂ, ಪರಿವರ್ತನೆ ಹೊಂದುವವೆ?

ಅಥವಾ—

'ಹಾವಿಗೆ ಹಾಲೆರೆದಂತೆ' ಮಾತ್ರ ಆದೀತೆ?

ಭಾರತಕ್ಕೆ ಚೀನಾ ಕಲಿಸಿದ ಪಾಠ ಇದೇ; ಹಾವಿಗೆ ಹಾಲೆರೆದದ್ದೇ!

ಎಂತಿದ್ದರೂ, ಸಂಕಷ್ಟ ಸಾವಿರಗಳು ಬಂದರೂ, ನಾವು ಕಾಸರಗೋಡಿನ ಕನ್ನಡಿಗರು ಆಶಾವಾದಿಗಳು. ಇಂದು ಇಲ್ಲಿ ಕನ್ನಡವನ್ನು ಸಾಯಿಸುತ್ತಾ ಇದ್ದರೂ ನಾವು ಉಸಿರಿರುವ ತನಕ ನಮ್ಮ ತಾಯಿ ಸೇವೆಗೆಯ್ಯುತ್ತಾ ಇಲ್ಲಿಯೇ ಬದುಕ ಬಯಸುವರು!

'ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇರಮಂ'

ಎಂದು ತನ್ನ ತಾಯ್ನಾಡಿನ ಮೇಲಿನ ಉನ್ನತವಾದ ಅಭಿಮಾನವನ್ನು ಕನ್ನಡ ಅದಿಕವಿ ಪಂಪ ಸಾರಿದನು. ಅದೇ ಪರಂಪರೆಯಲ್ಲಿ ನಾವೂ ಅಂತೆಯೇ ಹೇಳುತ್ತೇವೆ:

"ಕೊನೆಯುಸಿರ ತನಕ ತಾಯ್ನೆಲದ ಸೇವೆ ಸಲ್ಲಿಸುತ್ತೇನೆ" ಇಂದು ಸ್ವತಂತ್ರೋತ್ಸವದ ದಿನ; ಕಾಸರಗೋಡನ್ನು ಹಿಂದೆ ಕೇರಳ ಅತಿಕ್ರಮಿಸಿದಂತೆ ಇಂದು ಭಾರತವನ್ನು ಚೀನಾ ಅತಿಕ್ರಮಿಸುತ್ತಿದೆ. ಎಲ್ಲ ಕಾಲದಲ್ಲಿಯೂ ಈ ಮಂತ್ರವೇ ನಮ್ಮ ತಾರಕ ಸುಂತ್ರವಾಗಲಿ; ಕಾಸರಗೋಡಿನ ಕನ್ನಡಿಗರಿಗೆ ಇದೇ ಗಾಯತ್ರಿ.

'ಜನನೀ ಜನ್ಮಭೂಮಿ ರ್ಚಸ್ವರ್ಗಾದಪಿ
ಗರೀಯಸೀ'

ಕನ್ನಡವನ್ನು ಸಾಯಿಸುವವರೂ ಒಂದು ದಿನ ಸಾಯುತ್ತಾರೆ.

ಆದರೆ—

ನಮ್ಮ ತಾಯ್ನೆಲ ಕಾಸರಗೋಡು ಮಾತ್ರ ಶಾಶ್ವತವಾಗಿ ಉಳಿದೇ ಉಳಿಯುತ್ತದೆ!

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಶೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಸುರುವಾನತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಕವ್ರಕಾರದ ಸಾಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

(ಶೆಡ್ಯೂಲ್ಡ್ ಬ್ಯಾಂಕ್)

ಸ್ಥಾಪನೆ: 1930. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಶೇಷಗೊಂಡಾಗ ಉಂಟಾಗುವ ಕಾವರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಬಾಟ್ಲಿ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/ ಉತ್ತಮ ರೂ.9/-

P. Devee & Co. (N. J.) Calcutta—16.

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

A S No. 50/1963

ಕರಿಯಮ್ಮ ಕೂಡಾ — ವಿಪರೆಂಟರು.

ಮತ್ತು

ಲೇಪ ಕೂಡಾ — ರೆಸ್ಪಾಂಡೆಂಟರು

10ನೇ ರೆಸ್ಪಾಂಡೆಂಟ್ ನಾರಾಯಣರಿಗೆ, ಶಿವಮ್ಮ ಹೆಂಗ್ಸಿನ ಮಗ, ಕುಂದಾಪುರ ತಾಲೂಕು ಆಲೂರು ಗ್ರಾಮದಲ್ಲಿರುವವರು.

11ನೇ ರೆಸ್ಪಾಂಡೆಂಟ್ ನಾಗಪ್ಪರಿಗೆ, ಶಿವಮ್ಮ ಹೆಂಗ್ಸಿನ ಮಗ, ಕುಂದಾಪುರ ತಾಲೂಕು ತಗ್ಗರ್ಸೆ ಗ್ರಾಮದಲ್ಲಿರುವವರು.

ವಿಪರೆಂಟರು ಕುಂದಾಪುರ ಡಿ. ಮು. ಕೋರ್ಟಿನ O. S. No 252 1960ರ ಮೇಲೆ ದಾಖ್ಲು ಮಾಡಿರುವ ಅಸಿಲು ನಿಮ್ಮ ಮಾಹಿತಿಗಾಗಿ ತಾರೀಕು 20-8-1963ಕ್ಕೆ ಇಟ್ಟಿದೆ ಆ ದಿನ್ನ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಲು ತಪ್ಪಿದಲ್ಲಿ ಸದ್ರಿ ಅಸಿಲು ನಿಮ್ಮ ಗೈರು ಹಾಜರಾತಿಯಲ್ಲಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

(ಸಹಿ) ಬಿ. ಯೋಗೀಶ್ವರ ಹೊಳ್ಳ,
B. A. LL. B.
ಎಪರೆಂಟರ ಕಡೆ ವಕೀಲರು.

ಉಡುಪಿ, ತಾ. 30-7-1963

ಉಡುಪಿ ಡಿ. ಮು ಕೋರ್ಟಿನಲ್ಲಿ

RIA 618/63 (in O. S. 142/63).

P. N. ಕೃಷ್ಣಮ ರಾವ್ — ವಾದಿ.

ಮತ್ತು

ಟೊನ್ಸೆ ಪೂಜಾರ್ತಿ ಕೊಮ — ಪ್ರತಿವಾದಿರು ಇವರೆದುರಿಗೆ

ಉಡ್ಪಿ ತಾಲ್ಲೂ ಶಿವಳ್ಳಿ ಗ್ರಾಮದ ಸೆರೆಂಪಳ್ಳಿಯಲ್ಲಿರುವ 2ನೇ ಪ್ರತಿವಾದಿ ಕೊರತಿ ಪೂಜಾರ್ತಿ ಮಗ ದೇಜು ಪೂಜಾರಿಗೆ ತಿಳಿಯಪಡಿಸುವುದೇನೆಂದ್ರೆ—

ಕಟ್ಟೋಣ ವಸ್ತೆರೆ ಸ್ವಾಧೀನತೆ, ನೀಡಿ ಬಾಕಿ, ನಷ್ಟ ಮತ್ತು ಹುಟ್ಟುವಳಿ ವಸ್ತೆರೆ ಕೇಳಿ ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು 20-8-1963ನೇ ತಾರೀಕಿಗೆ ನಿಮ್ಮ ಹಾಜರಾತಿಯ ಬಗ್ಗೆ ಇಟ್ಟಿದೆ. ಈ ಕಾರಣ ನಿಮ್ಮ ನ್ಹೇನಾದರೂ ಅಕ್ಷೇಪಣೆ ಇದ್ದಲ್ಲಿ ಸದ್ರಿ ದಿನ ಸ 11 ಗಂಟೆಗೆ ಈ ಕೋರ್ಟಿಗೆ ಮುಂದೆ ಹಾಜರಾಗಿ ಉದಪಡಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ದಾವೆಯು ತೀರ್ಮಾನಿಸಲ್ಪಡುವುದು.

(By order of Court)

P. N. Krishnamoorthy Rao,
Advocate for Plaintiff.

ಉಡ್ಪಿ, 29-7-63.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. L. P. 168/1963 O.S. 457/1961

ಅರ್ಜಿದಾರ — ಬಿ. ಸಣ್ಣಿನ ಶೆಟ್ಟಿ

ವಿರುದ್ಧ — ಗಿರಿಜಮ್ಮ ಶೆಟ್ತಿ ಕೂಡಾ

2ನೇ ವಿರುದ್ಧ ರುದ್ರಮ್ಮ ಶೆಟ್ತಿ, ಸೋಜಿ ನಾಗಮ್ಮ ಶೆಟ್ತಿ ಮಗಳು ಕುಂದಾಪುರ ತಾಲ್ಲೂ ಕೊರ್ಗಿ ಗ್ರಾಮದ ಸೂಡಿಯಲ್ಲಿರುವವಳು ಸ್ವತಃ ಮತ್ತು ಇವಳ ಮೈನರ್ ಮಕ್ಕಳು ದೇವಕಿ, ಯಶೋದೆ, ವಿಶೋಧೆ, ವಿಶ್ವನಾಥ, ಸಮು, ಉದಾವತಿ ಕೂಡಾ 6 ಜನರ ಗಾರ್ಡಿಯನ್ ಆಗಿ ಸಹಾ ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ-

ನೀವು ಕೂಡಾ ಇತರ ವಿರುದ್ಧರ ಮೇಲೆ ಅರ್ಜಿದಾರನು ನಿಮ್ಮ ಬಾಬ್ತು ಇಸ್ತಿಹಾರಿನಲ್ಲಿ ಕಾಣುವ ಸ್ತಿರಾಸ್ತಿ ವಿಲಂಗೆ ಅರ್ಜಿಕ್ಷಿಸಿ ಮಾಡಿದ ಮೇಲಿನ ಆಮ್ಲಜಾನೆಯಲ್ಲಿ ಏಲಂ ಪರ್ಮಾಣಯಿಸುವ ಬಗ್ಗೆ ತಾ. 24—8—63ಕ್ಕೆ ತನ್ನಗೆ ಇಟ್ಟಿದೆ. ಆ ಬಗ್ಗೆ ನಿಮ್ಮ ಪೇನಾದರೂ ಅಕ್ಷೇಪ ಇದ್ದರೆ ಸದ್ರಿ ದಿನ ಹಗಲು 11ಗಂಟೆಗೆ ಸದ್ರಿ ಕೋರ್ಟಿಗೆ ಬಂದು ಹಾಜ್ರಾಗ ತಕ್ಕದ್ದು ಎಂದು ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಿಡಾಗಿಯಿದೆ.

G. Kushala Hegde
Advocat for the Petr.

ಕುಂದಾಪುರ 7 .. 8—63

ಸ್ವಾತಂತ್ರ್ಯದಿನದ ವೀರಪ್ರತಿಜ್ಞೆ

ಹೆದರಿಕೆಯೇ ಅನ್ಯಾಯಕ್ಕೆ ನಾಂದಿ. ಎಲ್ಲಿ ಸ್ವಚ್ಛಿಗಳು ಹೆದರಿಕೆಯನ್ನು ಬಿಡುತ್ತಾರೆಯೋ ಅಲ್ಲಿ ನ್ಯಾಯಸನ್ಮತವಾಗಿ ಆಡಂಬರತ್ತಾರೆ. ಪ್ರಜಾರಾಜ್ಯದ ಕರ್ತವ್ಯ, ಹೆದರಿಕೆ ಹುಟ್ಟಿಸುವುದನ್ನು, ಆವನ್ನು ಓದಿಸುವುದು. ನಮ್ಮ ಸರಕಾರದ ನೀತಿ ನಡವಳಿಗಳು ಯಾವ ಸ್ವರೂಪದ್ರವಣ ಮಾಡುತ್ತಿವೆ ಎಂಬುದನ್ನರಿತು ಸಮಾಜ ಕೀಟಗಳ ನಾಶಕ್ಕೆಯುವ ನೀರ ಪ್ರತಿಜ್ಞೆ ನಾವು ಮಾಡಬೇಡವೆ?

ಲೇಖಕರು: ಶ್ರೀ ವಿಲಿಯಂ ಹಿಂಟೊ, ಬಿ. ಎ, ಎಲ್ ಎಲ್, ಬಿ.

ಭಾರತ ಮಾತೆ ಬ್ರಿಟಿಷರ ಕೈಯಿಂದ ಬಿಡುಗಡೆ ಪೊಂದಿ ಇಂದಿಗೆ ೧೯ ವರ್ಷಗಳು ಸಂದುವು. "ಸ್ವಾತಂತ್ರ್ಯ" "ಪ್ರಜಾ ಪ್ರಭುತ್ವ" "ಮತ" "ಚುನಾವಣೆ" "ಪಕ್ಷ" ಈ ಶಬ್ದಗಳ ಅರ್ಥ ಭಾರತದ ಪ್ರಜೆಗೆ ಈಗಾಗಲೇ ಅಗಿದೆ. ಈ ಅಮೂಲ್ಯ ವಜ್ರಗಳನ್ನು ಪೈರಿಗಳಿಂದ ಕಾವಾಡುವರೆ ಎಂತ ಹ ತ್ಯಾಗ ಮಾಡ ಬೇಕೆಂಬ ಅನುಭವ ಕೂಡಾ ನಮಗೆ ಈಗಾಗಲೇ ಆಗಿದೆ. 'ನಿದ್ರೆಮಾಡಬೇಡಿ, ಅಮೂಲ್ಯ ವಜ್ರಗಳು ಕಳವಾಗ ಬಹುದು. ಮುನೇ ಅವುಗಳನ್ನು ಹಿಂದೆ ಪಡೆಯುವುದು ಅಸಾಧ್ಯವಾಗಬಹುದು. 'Eternal vigilance is the price of Democracy" ಸದಾ ಜಾಗೃತರಾಗುತ್ತಿದ್ದೇ ನಾವು ಪ್ರಜಾ ಪ್ರಭುತ್ವಕ್ಕೆ ತರಬೇಕಾದ ಬೆಲೆ. ಆ ದುದರಿಂದ ಜಾಗೃತರಾಗಿರಿ ಕಳ್ಳರಿದ್ದಾರೆ ಜಾಗ್ರತೆ!!

ಕಳೆದ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಆರ್ಥಿಕ, ರಾಜಕೀಯ, ಕೈಗಾರಿಕಾ ಪ್ರಗತಿಯಾಗಿದೆ ಎಂದು ಹೇಳಲಾಗುತ್ತಿದೆ. ಅಭಿವೃದ್ಧಿಯಾಗಿದ್ದರೂ ನಾವು ಹಲವು ಕಡೆಗಳಲ್ಲಿ ಜಾರಿ ಬಿದ್ದಿದ್ದೇವೆಂಬುದು ಮಾತ್ರ ಖಚಿತ ಕೆಲವು ಚೀನಾ ನಮ್ಮ ರಾಷ್ಟ್ರದ ಮೇಲೆ ಮಾಡಿದ ಆಕ್ರಮಣ ಮತ್ತು ನಾವು ಅದಕ್ಕೆ ಸೋಲ ಬೇಕಾಗಿ ಬಂದ ಪ್ರಸಂಗ ನಾವು ಎಷ್ಟೆಲ್ಲಾ ಪ್ರಯತ್ನಿಸಿದ್ದೇವೆಂಬುದನ್ನು ಎತ್ತಿ ತೋರಿಸುತ್ತದೆ. ಎರಡನೆ ಪಂಚವಾರ್ಷಿಕ ಯೋಜನೆಯ ಕೊನೆಯ ಒಳಗೆ ಉಂ ವಿ.ಲಿಯ ಟನ್ನಿನಷ್ಟು ಆಹಾರೋತ್ಪಾದನೆಯನ್ನೂಗಬೇಕೆಂಬ ಗುರಿ ಸರಕಾರಕ್ಕಿದ್ದರೂ ೧೯೬೫-೬೬ರಲ್ಲಿ ಆವ ಉತ್ಪತ್ತಿ ೬೮.೬ ವಿ.ಲಿಯ ಟನ್ ಮಾತ್ರ. ಕೈಕೊಂತ ಯೋಜನೆಗಳಲ್ಲಿ ಅವಶ್ಯಯ ಅನಾವಶ್ಯಗಳು ಜಾಸ್ತಿಯಾಗಿ ಆಳ ಹೆಚ್ಚಿನ ಫಲವನ್ನು ನೀತಿ-ತ್ತಿಲ್ಲ ಸರಕಾರದ ಪ್ರೊಹಿಬಿಷನ್ ನೀತಿ ನಗೆ ಪಾಟಲಿಗೆ ಒಳಗಾಗಿದೆ ಚೈನಾ ಆಕ್ರಮಣದಿಂದ ನಮ್ಮ ಲಂಂ ಸೈನಿಕರು ಅಸುನೀಗಿದರು. ಸಮೂಲ ಜಮೀನು ಸಾವಿರ ಫೈಸಿಲರು ಗಾಯಗೊಂಡರು ಮತ್ತು ನಮ್ಮ ಲಕ್ಷಂಂ ಚದರ ಮೈಲು ಭೂಮಿ ಚೀನಾದ ಸ್ವಾಧೀನವಾಯಿತು. ಈ ಸೋಲಿನಿಂದ ನಮ್ಮ ಮುಖಕ್ಕೆ ಮಸಿ ಬಳಿದಂತೆ ಆಗಿದೆ. ನಷ್ಟ ಫನತೆಗೆ ಕುಂದುಬಂದಿದೆ. ಈಗ ನಮಗೆ ಬೇಕಾದುದು ಧೈರ್ಯ ಆತ್ಮ ವಿಶ್ವಾಸ, ತಪ್ಪುಗಳನ್ನು ಹೆಚ್ಚಿ ಕೊಟ್ಟಲ್ಲಿ ಸರಕಾರ ಹುಡುಕಿ ಕೊಟ್ಟವನ ಮೇಲೆ ರೇಗದೆ, ತಪ್ಪುಗಳನ್ನು ತಿದ್ದಿ ಕೊಳ್ಳಲು ಪ್ರಯತ್ನ ಪಡಬೇಕು.

ಈಗ ನಾವು ನಮ್ಮ ಕೆಲವು ಅಂತರಿಕ ಘೋರತೆಗಳ ವಿಚಾರದಲ್ಲಿ ವಿಮರ್ಶಿಸುವ.

ಬುನಾದಿ ಶಿಕ್ಷಣದ ನೀತಿ:— 'ಕೈ ಕಾಲುಗಳಿಗೆ ಶಿಕ್ಷಣ ಕೊಡದೆ ಬರಿ ಕಲಿಗೆ ಕೊಡುವ ಶಿಕ್ಷಣ' ನಮ್ಮ ಕೃಷಿಪ್ರಧಾನ ಭಾರತಕ್ಕೆ ಒಪ್ಪುವಂತದಲ್ಲ ಎಂಬ ವಿಚಾರ ಎಲ್ಲರೂ ಒಪ್ಪಿದರೂ, ಈ ಕೊರತೆಯನ್ನು ತುಂಬಲು ಜ್ಯಾರಿಗೆ ತಂದ 'ಬುನಾದಿ ಶಿಕ್ಷಣದ ನೀತಿ' ತೀರ ವಿಫಲಗೊಂಡಿದೆ. ಇದನ್ನು ಯಶಸ್ವಿಗೊಳಿಸಬೇಕೆಂದು ಲಕ್ಷಗಟ್ಟಲೆ ರೂಪಾಯಿಗಳನ್ನು ವ್ಯರ್ಥ ಖರ್ಚುಮಾಡಿಯೂ ಆಯಿತು. ಆದರೂ ಫಲಬರಲಿಲ್ಲ. ಬುನಾದಿ ಶಿಕ್ಷಣದ ತರಬೇತಿ ಕೊಡುವ ಶಾಲೆಯಲ್ಲಿ ಪ್ರತಿಯೊಬ್ಬನು ಚರಕದಿಂದ ನೂಲನ್ನು ತೆಗೆಯಬೇಕೆಂಬ ಕ್ರಮವಿತ್ತು. ಆದರೆ ನೂಲುವ ಬದಲು ವಿದ್ಯಾರ್ಥಿಗಳು ಖಂಗಡಿಗಳಿಂದ ನೂಲನ್ನು ಕ್ರಯಕ್ಕೆ ಪಡಕೊಂಡು ಅಧಿಕಾರಿಗಳಿಗೆ ತೋರಿಸುತ್ತಿದ್ದರು. ಖಾದಿ ಧರಿಸುವ ಕ್ರಮವಂತು ಗಾಳಿಗೆ ತೂರಿ ಹೋಗಿ 'ನೈಲೋನ್' ಅಂಗಿಗಳನ್ನೆ ಧರಿಸಿದವರನ್ನು ಕಾಣಬಹುದಾಗಿದೆ. ಮಹಾತ್ಮಾಗಾಂಧಿಯವರ ಉದಾತ್ತ ಧ್ಯೇಯ ಕಾರ್ಯಗತವಾಗದೆ ಬುನಾದಿ ಶಿಕ್ಷಣದ ನೀತಿ ವಿದ್ಯಾರ್ಥಿಗಳ ನೈತಿಕ, ದೈಹಿಕ ಮಟ್ಟವನ್ನು ಹೆಚ್ಚಿಸುವಲ್ಲಿ ತಪ್ಪಿ ಬಿದ್ದಿರುವುದು ಶೋಚನೀಯ.

ಪ್ರೊಹಿಬಿಷನ್ ನೀತಿ:— 'ವಾಟೇಸ್' ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದ ಸುರಾರಾಕ್ಷಸನ ಪೃತ್ಯ ಈಗ ಎಲ್ಲೆಲ್ಲೂ ಹೆಚ್ಚಾಗಿದೆ. ಪ್ರೊಹಿಬಿಷನ್ ಕಾನೂನನ್ನು ೧೯೪೪ರಲ್ಲಿ ಅಮೇರಿಕದಲ್ಲಿ ಜ್ಯಾರಿಗೆ ತರಲಾಯ್ತು. ಕೆಲವೇ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಉದ್ಭವಿಸಿದ ಸ್ಥಿತಿಯೇ ಅಲ್ಲಿಯೂ ಉದ್ಭವಿಸಿತು. ಪೋಲೀಸು ಖಾತೆ ಯಾಗೂ ಜನತೆ ಪರಸ್ಪರ ಒಪ್ಪಂದ ಮಾಡಿಕೊಂಡು ಸ್ಥಿತಿ ಭಯಾನಕವಾಯಿತು. ಆದರೂ ನೂರು ವರ್ಷಗಳ ವರೆಗೆ ಇದರ ಪ್ರಯೋಜನ ನೆಡೆದು ಗಾಯಿನೆ ಇಸಿಯಲ್ಲಿ ಈ ಕಾನೂನನ್ನು ಕಿತ್ತೆಸೆದರು. ಕಳೆದ ಶತಮಾನದಲ್ಲಿ ಕೆನಡಾ, ರಷ್ಯಾ, ಫಿನ್‌ಲೆಂಡ್, ಸ್ಕ್ಯಾಂಡಿನೇವಿಯಾ ರಾಷ್ಟ್ರಗಳಲ್ಲಿ ಪ್ರೊಹಿಬಿಷನ್ ಕಾನೂನನ್ನು ಜ್ಯಾರಿಗೆ ತಂದರೂ ಎಲ್ಲ ಕಡೆಗಳಲ್ಲಿಯೂ ಅದು ಯಶಸ್ವಿಯಾಗಲಿಲ್ಲ.

ಉಳಿದ ರಾಷ್ಟ್ರಗಳಲ್ಲಿ ಯಶಸ್ವಿಯಾಗದಿದ್ದರೂ ನಮ್ಮ ರಾಷ್ಟ್ರದಲ್ಲಿ ಖಂಡಿತವಾಗಿಯೂ ಯಶಸ್ವಿಯಾಯಿತೆಂಬ ಧೈರ್ಯದಿಂದ ಈ ಕಾಯದೆಯನ್ನು ಜ್ಯಾರಿಗೆ ತರಲಾಗಿತ್ತು. ಉಳಿದ ಗುಡಿ ಕೈಗಾರಿಕೆಗಳು ಭಾರತದಲ್ಲಿ ಬೆಳೆಯದಿದ್ದರೂ 'ಶೇಂದಿ ತಯಾರಿಯ ಗುಡಿಕೈಗಾರಿಕೆ' ಹುಲುಸಾಗಿ ಬೆಳೆದು ಬಿಟ್ಟಿದೆ.

ಈ ಕಾನೂನಿನಿಂದ ಖಜಾನೆಗೆ ೯೦ ಕೋಟಿ ರೂಪಾಯಿಯ ಉತ್ಪತ್ತಿ ಬಡಿಮೆಯಾಯಿತು ಮಾತ್ರವಲ್ಲ, ನವಸಾಗರ, ಸಲ್ಫೇಟ್, ಬೆಟರಿ ಸೆಲ್ಲು, ಕೋಳಿ ಹಿಪ್ಪೆಯಿಂದ ಸಿದ್ಧಗೊಳಿಸಿದ ಕರಾಬು ಹೆಳ್ಳಿ, ಪಟ್ಟಣಗಳೆಂಬ ಭೇದವಿಲ್ಲದೆ ಮೂರಲ್ಪಟ್ಟು, ಜನರು ಕಾಯಿಲೆಗಳಿಗೆ ಬಲಿಯಾಗುತ್ತಿರುವಂತಾಯಿತು. ಇದಕ್ಕಾರು ಹೊಣೆ? ಕಾನೂನು ನಿರೂಪಕರೆ? ಕಾನೂನು ಭೀಧರರೆ?

ಉಳುವವನೇ ಭೂಮಿಯ ಒಡೆಯ:— ಕರಾಚಿ ಕಾಂಗ್ರೆಸ್ ಅಧಿವೇಶನದಿಂದಲೂ ಒಕ್ಕಲುಗಳ ಹಿತರಕ್ಷಣೆಯ ಕಾನೂನು ಜ್ಯಾರಿಗೆ ತರುತ್ತದೆಂದು ಅಳವ ಸರಕಾರ ಹೇಳಿದರೂ, ಇನ್ನೂ ರೈತ ಹಿತ ಕಾನೂನು ಜ್ಯಾರಿಗೆ ಬರಲಿಲ್ಲ. ಸದ್ಯ ಅಮಲಿನಲ್ಲಿರುವ ಕಾನೂನುಗಳಿಂದ ರೈತನಿಗೂ, ಧನಿಗೂ, ಇಬ್ಬರಿಗೂ ಉಭಯ ಸಂಕಟ, ಇಬ್ಬರೂ ಕೋರ್ಟಿನ ಬಾಗಿಲನ್ನೇ ಕಾಯಬೇಕಾಗಿದೆ. ಭಾರತದ ಹಲ್ಲಿಗಳಲ್ಲಿ ಅನಿಶ್ಚಿತ ಸಂಸ್ಥಿತಿ ಉಳಿಯದಂತೆ, ರೈತರಿಗೆ ರಕ್ಷಣೆ ಒದಗಿಸಿಕೊಡಲು, ಒಕ್ಕಲು ಹಿತಮಸೂದೆ ಆದಷ್ಟು ಬೇಗ ಜ್ಯಾರಿಗೆ ಬರಬೇಕೆಂದು ನಮ್ಮ ಪ್ರಧಾನಿ ನೆಹರೂರವರೇ ರಾಜ್ಯ ಸರಕಾರಗಳಿಗೆ ಇತ್ತೀಚೆಗೆ ಕರೆಯಿತ್ತಿರುವುದು ಗಮನೀಯವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಜನರಲ್ಲಿದ್ದ ಸ್ಫೂರ್ತಿ, ಸಂಘಟಿತರನ್ನಾಗಿ ನಿಲ್ಲಿಸುವ ಶಕ್ತಿಯೂರಕ್ತಿ —ಸಂಘಟಿತರು ಇಂದು ಕಡಿಮೆಯೂದಂತೆ ಕಂಡು ಬರುತ್ತದೆ. ಮಳೆ ಬಂದಂತೆ ಕೊಡೆ ಹಿಡಿಯುವ, ಗೆದ್ದ ಎತ್ತಿನ ಬಾಲ ಹಿಡಿಯುವ ಸಂದರ್ಭ ಸಾಧಕರು ಗುಂಪು ದಿನೇ, ದಿನೇ ಹೆಚ್ಚುತ್ತಿರುವುದು ಸ್ವಾತಂತ್ರ್ಯಕ್ಕೆ ತೀರಾ ಗಂಡಾಂತರಕಾರಿಯಾಗಿದೆ. ಸಮೂಹದ ಪ್ರತಿಯೊಂದು ಮಟ್ಟದಲ್ಲಿ ಲಂಚಗುಳಿತನದ ತಾಂಡವವಾಡುತ್ತಿದ್ದು ನೈತಿಕತೆಯ ಅಧೋಗತಿ ಎದ್ದು ಕಾಣುತ್ತದೆ. ಪ್ರಮಾಣಿಕತೆ ವಿಶ್ವಾಸ ಅಭಾವ ಕಂಡು ಬರುವುದು ಶುಭಸೂಚನೆಯಲ್ಲ. ಸ್ವತಂತ್ರ ರಾಷ್ಟ್ರದ ಪ್ರಜೆಗಳಾದ ನಾವು ಈ ವಿಚಾರಗಳ ಕಡೆಗೆ ತೀವ್ರ ಗಮನಹರಿಸಬೇಕಾದದ್ದು ಅತಿ ಅಗತ್ಯ.

ನಮ್ಮಲ್ಲಿ ಕ್ರಿಯಾತ್ಮಕ ರಕ್ತಿಯು ಕೊರತೆ ಎದ್ದು ಕಾಣುತ್ತಿದೆ. ಸಮಾಜದಲ್ಲಿದ ಸ್ಪೃತ್ಯಗಳನ್ನು ಮಾಡುವವರನ್ನು ನೋಡಿ ಸುಮ್ಮನೆ ಕುಳಿತುಕೊಳ್ಳಬಾರದು. ಗಾಂಧೀಜಿ ಹೇಳುತ್ತಿದ್ದರು 'ಅನ್ಯಾಯದ ಹಾಗೂ ಒಂದು ದುಷ್ಟಶಕ್ತಿಯ ವಿರುದ್ಧ ಅಹಿಂಸಾತ್ಮಕ ಪ್ರತಿಭಟನೆ ಬಹಳ ಒಳ್ಳೆಯದು. ಆದರೆ ಹೇಡಿಯಂತೆ ಆದರ ಎದುರು ಮಣಿಯುವುದಕ್ಕೆ ಬದಲು ಹಿಂಸಾವಾದದ ಪ್ರತಿಭಟನೆಯೇ ಮೇಲು".

ಹೆದರಿಕೆಯೇ ಅನ್ಯಾಯದ ಹಾಗೂ ದುಷ್ಕೃತ್ಯದ ಮೂಲ. ಹೆದರಿಕೆ ಬಿಟ್ಟೆದು ದಿಂದ ನನಗೆ ಸ್ವಾತಂತ್ರ್ಯ ಸಿಕ್ಕಿತು. ಈಗ ಮತ್ತೆ ಹೆದರಿಕೆ ಎಂಬುದು ಹಲವು ಮುಖಗಳಾಗಿ ನಮ್ಮ ಸಮಾಜದ ಜೀವನವನ್ನು ಗ್ರಸಿಸಿರುತ್ತದೆ. ಆದುದರಿಂದ ಅನ್ಯಾಯದ ಸಂದರ್ಭ ಸಾಧಕರು, ಲಂಚಕೋರರು, ಸ್ವಜನ ಪಕ್ಷಪಾತಿಗಳ ವಿರುದ್ಧ ಹೋರಾಡಲು ಜನತೆ ಒಕ್ಕಟ್ಟಾಗ ಬೇಕಾಗಿದೆ. ಸಮಾಜದ ಈ ರೋಗಾಣುಗಳೊಡನೆ ಹೋರಾಡುವುದು ಚೈನಾದೊಡನೆ ಹೋರಾಡಿದಷ್ಟೇ ಪವಿತ್ರವಾದ ರಾಷ್ಟ್ರಪ್ರೇಮದ ಕಾರ್ಯವಾಗಿದೆ. ಈ ವೀರ ಪ್ರತಿಜ್ಞೆಯನ್ನು ನಾವಿಂದು ಮಾಡುವ.

ಮಲೆಯಾಳ ಮಾಂತ್ರಿಕ ವೈದ್ಯಶಾಲಾ

P. B. No. 110

ಮೆಯಿನ್ ರೋಡ್, ಕೊಲ್ಲಂ – ಕೇರಳ ಸ್ಟೇಟ್.

1. **ಜೀವರಕ್ಷಾಮೃತ ಎಂಬ ಆನಂದ ಕುಸುಮೋಕರ ಲೇಹ್ಯ.** ಧಾತು ಪುಷ್ಟಿಗಾಗಿ ಇದುವರೆಗೂ ಕಂಡು ಹಿಡಿಯಲ್ಪಟ್ಟ ಪ್ರಸಿದ್ಧವಾಗಿ ಪ್ರಚಾರದಲ್ಲಿರುವ ಎಲ್ಲಾ ಔಷಧಿಗಳಿಗಿಂತಲೂ ನಮ್ಮ ಲೇಹ್ಯವು ಅತ್ಯುತ್ತಮವಾದುದೆಂದು ಒಂದು ತಡವೆ ಉಪಯೋಗಿಸಿದಲ್ಲಿ ಗೊತ್ತಾಗುವುದು. 40 ದಿನ ಒಂದು ಮಂಡಲ ಸೇವಿಸುವ ಲೇಹಕ್ಕೆ
ಬೆಲೆ Rs. 7—00

2. **ವಾತಗಜಕೇಸರಿ** ಸಂದುಗಳಲ್ಲಿ ನೋವು, ಕೈಕಾಲು ಸ್ತಂಭಿತ, ಪಕ್ಷವಾತ ಮುಂತಾದ 80 ಬಗೆಯ ರೋಗಗಳಿಗೆ ಅತ್ಯುತ್ತಮ. ಸ್ವರ್ಣ ಭಸ್ಮದಿಂದ ತಯಾರಿಸುವ ಇದರ ಗುಣವು ಅತಿ ಶ್ಲಾಘನೀಯವಾದದ್ದು.
ಡಬ್ಬಿ 1ಕ್ಕೆ Rs. 3—50

3. **ಮೇಘಪಿತ್ರಕುಠಾರ** ಮೇಹಕ್ಕೂ, ಮೇಹ ಮೂಲಕವಾಗಿ ರಕ್ತ ಸ್ಪೈಂದ್ರಿಯಗಳಲ್ಲಿ ಸಂಭವಿಸುವ ಹಲವು ಬಗೆಯ ಹುಣ್ಣುಗಳಿಗೂ ಬಿಳಿಪು ಸುರಿಯುವುದು ಮುಂತಾದ ರೋಗಗಳಿಗೂ ಅತ್ಯುತ್ತಮ.
ಬೆಲೆ ಡಬ್ಬಿ 1ಕ್ಕೆ Rs 5—00

ಇವೂ ಅಲ್ಲದೆ ರೋಗ ವಿವರ ಬರೆದು ಕಳುಹಿಸಿದಲ್ಲಿ ಔಷಧಿ ನಿರ್ಣಯ ಮಾಡಿ V. P. ಮೂಲಕ ಕಳುಹಿಸಿ ಕೊಡುವೆವು.

Manager

MALAYALA MAUNTHREEKA VAIDYASALA

POST BOX No. 110

MAIN ROAD, QUILON.

"ಭಾರತ ಸ್ವಾತಂತ್ರ್ಯೋತ್ಸವ"ದ

ಇಂದಿನ ಶುಭದಿನದಲ್ಲಿ

ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ನಮ್ಮ ಅಂಶದಾನವನ್ನು ಸಲ್ಲಿಸುವೆವೆಂಬ ಪ್ರತಿಜ್ಞೆಯ ನವೀಕರಣದಿಂದ, ದೇಶದ ಜನತೆಗೆ ಮುಂದಕ್ಕೂ ಹೆಚ್ಚಿನ ಸೇವೆ ಸಲ್ಲಿಸುವೆವೆಂದು

30 REGD

REGD. TRADE MARK

ಸರ್ವರಿಗೂ ಹೃತ್ಪೂರ್ವಕ ಶುಭಸಂತೋಷವನ್ನು ಬಯಸುವೆವು.

ಭಾರತ ಬೀಡಿ ವರ್ಕ್ಸ್

(ರಿಜಿಸ್ಟರ್ಡ್)

ನಂಬ್ರ **30** ಮಾರ್ಕಿನ ಬೀಡಿಗಳ ತಯಾರಕರು

ಕಾರ್ಕಳ, ದ. ಕ.

ಎಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್

ರಥಬೀದಿ, ಮಂಗಳೂರು.

ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು

ದೇಹಪುಷ್ಟಿ ಲೇಹ (ಸುವರ್ಣ ಸಾಲಾಮಿಶ್ರಿ ಕಲ್ಪದ ಮಿಶ್ರ) ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ತಪ್ತಾವಸ್ಥೆ, ಶರೀರದ ಉಷ್ಣತೆ ಸೊಂಟ ನೋವು, ಕೈ ಕಾಲು ಬಚ್ಚುವುದು, ಮಲಬದ್ಧತೆ, ಬೆಳಜ್ವರ, ಆಶಕ್ತತೆ— ಇವುಗಳೆಲ್ಲ ಹೋಗಲಾಡಿಸಿ, ಆಸವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಆಲ್ಲದೆ ನರೆಗಳ ದೌರ್ಬಲ್ಯಕ್ಕೆ ದಿವ್ಯ. 450ಗ್ರಾಂ ರೂ. 7=00 225ಗ್ರಾಂ. ರೂ. 4=00.

ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರ) ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ ಉಬ್ಬಸ ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು. 450ಗ್ರಾಂ. ರೂ. 6=00 225ಗ್ರಾಂ ರೂ. 3=25.

ಅಶೋಕಾರಿಷ್ಟ ಮತ್ತು ಮಾತ್ರೆ ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ರಕ್ತ ಹೀನತೆ, ಬಳಜ್ವರ, ಸೊಂಟ ನೋವು, ಕೈಕಾಲು ಬಚ್ಚಿ ಬರುವುದು, ಕೈಕಾಲು ಉರಿ, ಮುಂತಾದವುಗಳಿಗೆ ದಿವ್ಯ. ಬಾಟ್ಲಿ 1ರ ರೂ. 4=00.

ಕಸ್ತೂರಿ ಮಿಶ್ರಣ ದಶಮೂಲ ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ರಕ್ತಧಾತುವು ಅಧಿಕವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ ಶಿಶುವಿಗೂ ಧಾರಾಳವಾಗಿ ಹಾಲು ಸಿಗುವಂತೆ ಮಾಡುವುದು. 660 ಮಿ. ಲಿ. ರೂ. 6=00 330 ಮಿ. ಲಿ ರೂ. 3=00. 220 ಮಿ. ಲಿ. ರೂ. 2=25

ಕಸ್ತೂರಿ ಮಿಶ್ರ ದಶಮೂಲಾರಿಷ್ಟ ಅರುಚಿ, ವಾಂತಿ, ಅಜೀರ್ಣ ಅಗ್ನಿಮಂದ್ಯ, ಆಶಕ್ತಿ, ಕಫ, ಕೆಮ್ಮು ದಮ್ಮು, ಕಾಮಲೆ, ವಾತ, ಬಳಜ್ವರ ಮೊದಲಾದವುಗಳನ್ನು ಗುಣಪಡಿಸುವುದು ಇವನ್ನು ಬಾಣಂತಿಯರು ಸಹ ಉಪಯೋಗಿಸಬಹುದು. 660 ಮಿ. ಲಿ. ರೂ. 4=50 440 ಮಿ. ಲಿ. ರೂ. 3=25.

ಗರ್ಭರಕ್ಷಕ ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ವಿಷದೋಷ, ವಾಂತಿ, ಅರುಚಿ, ಆಶಕ್ತತೆ ಮಲಬದ್ಧತೆ, ಪಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ 4=00.

ಔಷಧಿ ಸಿಗುವ ಸ್ಥಳ: 1) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲ. 2) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ದಿಲ್ಶಾಲ್ ರೋಡ್, ಬ್ಯಾಕುಲ್ಲ. 3) ವಿನಾಯಕ ಜನರಲ್ ಸ್ಟೋರ್ಸ್ ಗೋವಂದಿ ರೋಡ್, ಚೆಂಬೂರು 4) ಮಂಗಳೂರು ಸ್ಟೋರ್ಸ್, Near ಕೆರೆದ್ಯಾಸ್, ಸಿಯೆಮ್ಮಾ ಮೂಹಿಮ್. 5) K. D. ಶೆಟ್ಟಿ, Near Mohan Studio. ಕಾರ್ಲಾ ರೋಡ್, ಅಂದೇರಿ. 6) ಸಾಯನ್ ಫಾರ್ಮಸಿ & ಸ್ಟೋರ್ಸ್, 32-A, ಕೈಲಾಸ್ ಕೋಟೆಜ್, ಸಾಯನ್ ವೆಸ್ಟ್, ಸಾಯನ್. 7) ನ್ಯೂ ಕರ್ನಾಟಕ ಜನರಲ್ ಸ್ಟೋರ್ಸ್ ನಟರಾಜ್ ಸಿನೆಮಾ ಬಿಲ್ಡಿಂಗ್, ಚೆಂಬೂರ್. 8) ಶ್ರೀ ಸಮ್ಮರು ಪೆಪ್ಪಿವಿಜನ್ ಸ್ಟೋರ್ಸ್, ಮಾಟುಂಗಾ. 9) ಕೆನರಾ ಸ್ಟೋರ್ಸ್, ಭಂಡಾರ್‌ಕಾರ್ ರೋಡ್, ಮಾಟುಂಗಾ. 10) ವಿಕ್ರಮ ಮೆಡಿಕಲ್ ಸ್ಟೋರ್ಸ್, opp ನ್ಯೂ ಪ್ರಕಾಶ್ ಸಿನೇಮಾ, ದಿಲ್ಶಾಲ್ ರೋಡ್. 11) ಶ್ರೀ ವೆಂಕಟೇಶ ಪ್ರೊವಿಜನ್ & ಜನರಲ್ ಸ್ಟೋರ್ಸ್, ಶೇಷಾದ್ರಿಪುರಂ ಬೆಂಗಳೂರು. 12) ಕೆನರಾ ಸ್ಟೋರ್ಸ್, ಮಡಿಕೇರಿ. 13) ಪ್ರಭು ಫಾರ್ಮಸಿ, ಕಾರ್ಕಳ. 14) ವೆಲ್ಕಾಟ ಸ್ಟೋರ್ಸ್, ಸುಳ್ಯ. 15) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. 16) ಪೈ ಸ್ಟೋರ್ಸ್, ಪುತ್ತೂರು. 17) ಜಯಾ ಫಾರ್ಮಸಿ, ಕುಂದಾಪುರ. 18) ಶ್ರೀಕೃಷ್ಣಾ ಫಾರ್ಮಸಿ, ಪುತ್ತೂರು. 19) H. ಗೋಪಾಲಕೃಷ್ಣ ಗಣಪಯ್ಯ ಕಾಮತ್, ಕುಂದಾಪುರ.

ಪೋಸ್ಟ್ ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸತಕ್ಕದ್ದು.

ಶಕ್ತಿ ಸಂವರ್ಧನೆ ಸಾಗಲಿ

"ಮೆಸ್ಸ್ ಚೀನೀಯರ ದುರಾಕ್ರಮಣದಿಂದಾಗಿ ಇಂದು ನನ್ನ ದೇಶ ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಿದೆ. ಈ ಆಕ್ರಮಣಕಾರರನ್ನು ಎದುರಿಸಿ ಹಿಮ್ಮೆಟ್ಟಿಸುವ ಮಹಾಕಾರ್ಯದಲ್ಲಿ ಸಮಗ್ರ ರಾಷ್ಟ್ರವೇ ಒಂದಾಗಿ, ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧವಾಗಿ ನಿಂತಿದೆ. ನನ್ನ ಜನತೆಯ ಈ ಅಭೂತಪೂರ್ವ ಐಕ್ಯತೆ, ಆತ್ಮಬಲ ತ್ಯಾಗ, ಆತ್ಮೀಯ ಧೈರ್ಯೋತ್ಸಾಹಗಳು ಚೀನೀ ನಾಯಕರನ್ನು ಬೆಚ್ಚಿಗೊಳಿಸಿವೆ. ಜೊತೆಗೆ ಜಗತ್ತಿನಾದ್ಯಂತ ಸುಮಾರು ೬೦ ಸ್ವತಂತ್ರ ರಾಷ್ಟ್ರಗಳು ಚೀನೀಯರ ಈ ದುರಾಕ್ರಮಣವನ್ನು ಖಂಡಿಸಿ, ಭಾರತದ ನರ ತಮ್ಮ ಸಹಾನುಭೂತಿಯನ್ನೂ ಸೂಚಿಸಿವೆ. ಕೆಲವು ಮಿತ್ರ ರಾಷ್ಟ್ರಗಳಂತೂ ನನಗೆ ಎಲ್ಲ ರೀತಿಯ ಸಹಾಯ ಸಹಕಾರಗಳನ್ನು ನೀಡಲು ಮುಂದೆ ಬಂದಿವೆ.

ಭಾರತಕ್ಕೆ ಬಂದಿರುವ ಈ ಗಂಡಾಂತರವನ್ನೆದುರಿಸುವಲ್ಲಿ ನಮ್ಮ ರಾಷ್ಟ್ರದ ಜನರು, ಅದರಲ್ಲೂ ಯುವ ಜನಾಂಗದವರು, ಯುಕ್ತ ರೀತಿಯಲ್ಲಿ ಅಮಿತೋತ್ಸಾಹದಿಂದ ಮುಂದೆ ಬಂದಿರುವರೆಂದೂ, ತಮ್ಮ ತನುಮನ ಧನಗಳೆಲ್ಲವನ್ನೂ ಮಾತೃಭೂಮಿಯ ಪವಿತ್ರ ಕಾರ್ಯಗಳಲ್ಲಿ ಸಮರ್ಪಿಸಲು ಸಿದ್ಧರಿರುವರೆಂದೂ, ದೇಶದ ವಿವಿಧ ಭಾಗಗಳಿಂದ ಈ ಪರಿಗೆ ಬಂದಿರುವ ಸುದ್ದಿಗಳು ತಿಳಿಸುತ್ತವೆ. ಇದು ನಿಜವಾಗಿಯೂ ಬಹು ಸಂತೋಷದ ವಿಷಯ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಎಚ್ಚರಿಕೆಯ ಮಾತನ್ನು ನಿಮ್ಮ ಮುಂದಿಡ ಬಯಸುತ್ತೇನೆ. ನಮ್ಮ ಆರಂಭದ ಈ ಹುರುಪು, ಉತ್ಸಾಹ, ಐಕ್ಯಮತ್ಯ ಅಂತ್ಯದವರೆಗೂ ನಿರಂತರವಾಗಿ ನಿರಾಂತಕವಾಗಿ ಹರಿಯುತ್ತಿರಬೇಕು. ಆದುದರಿಂದ ಈ ರಕ್ತುಗಳ ಬಗ್ಗೆ ನಾವು ಎಂದೆಂದಿಗೂ ಎಚ್ಚರದಿಂದಿರಲೇ ಇರಬೇಕಲ್ಲದೆ, ಎಲ್ಲ ರೀತಿಯಲ್ಲೂ ನಮ್ಮ ರಕ್ಷಣಾ ಹಾಗೂ ಮತ್ತಿತರ ರಕ್ತಿಸಾಮರ್ಥ್ಯಗಳನ್ನು ಏಕಪ್ರಕಾರವಾಗಿ ಹೆಚ್ಚಿಸುತ್ತಲೇ ಹೋಗಬೇಕು.

- ಶ್ರೀಮತಿ ಇಂದಿರಾ ಗಾಂಧಿ.

Whenever You think of reparing
-: Your Auto :-

Make Your Choice The Right One

With best wishes from:

HEGDE AUTO ENGINEERING WORKS,
Shiribeedu, UDIPI, S.K.
Prop.: K. J. HEGDE

ಮೋಟಾರು ಕಾರು, ಸ್ಕೂಟರು, ಮೋಟಾರು ಸೈಕಲ್ಲು, ಬಸ್ಸು, ಲೋರಿ ಇತ್ಯಾದಿ ವಾಹನಗಳನ್ನೆಲ್ಲಾ ಉತ್ತಮ ತಾಂತ್ರಿಕ ಜ್ಞಾನವುಳ್ಳ ತಜ್ಞರಿಂದ ಕ್ಲುಪ್ತಕಾಲದಲ್ಲಿ ತೃಪ್ತಿಕರವಾಗಿ ರಿಪೇರಿ ಮಾಡಿಕೊಡಲಾಗುವುದು.

ಹೆಗ್ಡೆ ಅಟೊ ಇಂಜಿನಿಯರಿಂಗ್ ವರ್ಕ್ಸ್
ಶಿರಿಬೀಡು, ಉಡುಪಿ, ದ. ಕ.
ಪ್ರೊ: ಕೆ. ಜೆ. ಹೆಗ್ಡೆ

Phone: 374 Tele- "BLUEYAGAR"

K. R. K. SHET
DIAMOND MART

HAMPANKATTA, **MANGALORE.**

Prop: **K. K. R. SHET.**

14 Carat ornaments and Fancy Silver ornaments of Filigiri Work are ready for sale.

ಸುಲಭದಲ್ಲಿ ಉಳಿತಾಯ.....

ಕೊಪ್ಪೊರೇಶನ್ ಬೇಂಕ್

ಜನತಾ ರಿಸ್ಪೊಜಿಟ್ ಯೋಜನೆಯು

ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ.

ವಿವರಗಳಿಗಾಗಿ ಇಂದೇ ಬರೆಯಿರಿ:

ದಿ ಕೆನರಾ ಬ್ಯಾಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಸ್ವಾತಂತ್ರ್ಯ ದಿನದ ಶುಭದಿನದಲ್ಲಿ

ಸರ್ವರಿಗೂ ಸುಖ-ಸಂಪದಭಿವೃದ್ಧಿಯಾಗಲೆಂದು

ಹಾರೈಸುತ್ತೇವೆ.

ಗೋವಾ ಸ್ಟೋರ್ಸ್ & ಬೇಕರಿ

ಕೆಥೋಲಿಕ್ ಸೆಂಟರ್,
ಉಡುಪಿ.

ಪುತ್ತೂರು ಡಿ. ಮುನ್ಸಿ. ಕೋರ್ಟಿನಲ್ಲಿ
O. S. 35/63

I. S. ಶಂಕರಭಟ್ಟ —ವಾದಿ

ಕೃಷ್ಣ ಭಟ್ಟ—ಗಣಪತಿ ಭಟ್ಟರ ಮಗ—ಕರಿಕೆಯಾಡಿ ನಿವಾಸಿ —ಪ್ರತಿವಾದಿ

ಸದ್ರು ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ತಾ. 3-12-59ರಲ್ಲಿ ವಾದಿಗೆ ರೂ. ನಾಲ್ಕು ರೂಪಾಯಿ 2000ಕ್ಕೆ ಬರೆಕೊಟ್ಟ ಡಿನೋಂದು ಪ್ರೋಮಿಸರಿ ನೋಟಿನ ಅಸಲು, ಬಡ್ಡಿಗಳನ್ನು ಬರಮಾಡಿಕೊಳ್ಳುವರೇ ನಿಮ್ಮ ಮೇರೆ ನೂಡಿದ ದಾವೆಯನ್ನು ತಾ. 24-8-1963ಕ್ಕೆ ನಮ್ಮ ಕೋರ್ಟಿನ ಬಗ್ಗೆ ಇಟ್ಟುಕೊಂಡಿದೆ ಆಗಿದ್ದರಿಂದ ಈ ಕೋರ್ಟು ಮುಂದೆ ಹಾಜರಾಗಿ ಉದಯರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ತಿರ್ಮಾನ ಮಾಡಿಯುಕ್ತ ಕಂಡಂತೆ ನೀರ್ಮಾನಿಸಲಾದೀತು. ತಿಳಿದಿರಲಿ.

M. Sadashiva Rao
Vakil for plaintiff.

ಪುತ್ತೂರು, ತಾ. 7-8-1963.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗದ"ದ 42ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 43ನೆಯ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾದಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯವಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾದಣವನ್ನು ಹಿಂದಿಕೇಟ್ ಬ್ಯಾಂಕ್"ನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮೂದಬಹುದು. ವಿ ಪಿ. ಮಾಡಿದರೆ 70 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

—ಮೆನೇಜರ್.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ..... ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1-1-1963ರಿಂದ ಶೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಸ್ವಾತಂತ್ರ್ಯಕ್ಕಾಗಿ ದುಡಿಯೋಣ

ಸ್ವಾತಂತ್ರ್ಯದಿಂ ಬದುಕೋಣ

ಶುಭಾಶಯಗಳು

ಜೈ ಭಾರತ್ ಮಿಲ್ಸ್

ಪ್ರೈವೇಟ್ ಲಿಮಿಟೆಡ್

ಉಡುಪಿ

'ಖೀರಾ' ಉಕ್ಕಿನ ಫರ್ನಿಚರುಗಳಿಂದ ನಿಮ್ಮ ಮನೆ-ಆಫೀಸುಗಳು ಸುರಕ್ಷಿತ.

ARROW **Steel** SOFA-CUM-BED
With chromium handle

YOU CAN USE SOFA AS A BED AT NIGHT

ಇಬ್ಬಗೆಯ ಉಪಯೋಗಕ್ಕೆ
ಸೋಫಾ-ಕಂ-ಬೆಡ್



ಸೋಫಾವನ್ನು ರಾತ್ರಿಯಲ್ಲಿ ಬೆಡ್ ಆಗಿ ಉಪಯೋಗಿಸಬಹುದು



ಖೀರಾ ಉಕ್ಕಿನ ಕ್ಯಾಬಿನೆಟ್ಟುಗಳು ಈ ಮೂರು ಸೈಜುಗಳಲ್ಲಿ ದೊರೆಯುತ್ತವೆ:
'ಯುಟಿಲಿಟಿ' — 78" × 36" × 19"
'ಪಾಪ್ಯುಲರ್' — 65" × 33" × 19"
'ಮಿಡೆಟ್' — 50" × 30" × 17"

ಕಟಕ-ಬಾಗಿಲುಗಳು, ಕಂಪೌಂಡ್-ಗೇಟ್‌ಗಳು, ರೋಲಿಂಗ್ ಶಟ್ಟರ್ಸ್, ರೂಫ್ ಟ್ರಸ್ಸ್‌ಗಳ ಮೊದಲಾದ ಸ್ಟೀಲಿನ ಕಟ್ಟಡ ಸಾಹಿತ್ಯ ಸಾಮಗ್ರಿಗಳೂ ದೊರೆಯುತ್ತವೆ.

ARROW STEEL INDUSTRIES

ವೈವಿಧ್ಯತೆಯು ನಮ್ಮ ವೈಶಿಷ್ಟ್ಯ

Phone: 788
Grams: "Shastrico"

ಸಂದರ್ಶಿಸಿರಿ:

ಶಾಸ್ತ್ರಿ ಅಂಡ್ ಕಂಪೆನಿ, ಹಂಪನಕಟ್ಟೆ, ಮಂಗಳೂರು.

Regd. No. B. G. 176
LICENCE NO. 31
Licensed to Post without Prepayment

ದಿನನಿತ್ಯದ ವೆಚ್ಚದಲ್ಲಿ

ಉಳಿತಾಯವೂ . . . . ಒಂದು ಆವಶ್ಯಕತೆಯೆ??

ಆಹಾರ, ವಸತಿ ಮತ್ತು ಬಟ್ಟೆಬರೆ, ನಮ್ಮ ಜೀವನಾವಶ್ಯಕ ವಸ್ತುಗಳಾದಂತೆ ಉಳಿತಾಯವೂ ಅತೀ ಅವಶ್ಯವೆಂದು, ನೀವೆಂದಾದರೂ ಯೋಚಿಸಿದ್ದೀರಾ??

ಭವಿಷ್ಯತ್ತಿನ ಭದ್ರತೆ, ಸಮೃದ್ಧಿ ಮತ್ತು ಮನಸ್ಸಿಗೆ ನೆಮ್ಮದಿ, ನಿಮ್ಮ ಇಂದಿನ ದೂರದೃಷ್ಟಿಯ ಉಳಿತಾಯವನ್ನೇ ಹೊಂದಿಕೊಂಡಿದೆ.

ವಿವಿಧ ಉಳಿತಾಯ ಯೋಜನೆಗಳಿಗೆ.....

ಸಿಂಡಿಕೇಟ್ ಬ್ಯಾಂಕ್ ಸಹಕರಿಸಬಲ್ಲುದು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಟಿ. ಎ. ಪೈ,
ಮ್ಯಾನೇಜಿಂಗ್ ಡೈರೆಕ್ಟರ್.

ಶಾಖೆಗಳು 185

— ಒಟ್ಟು ಚಲಾವಣಾ ಸಂಪತ್ತು **40** ಕೋಟಿಗೂ ಮಿಕ್ಕಿದೆ —

Edited, Printed & Published by K. H Shetty at the Navayuga Press, Udipi, S. India

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 49 | ಉಡುಪಿ, 22—8—1963 ಗುರುವಾರ | ಸಂಪುಟ ೪೨ ಸಂಚಿಕೆ ೪೯

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಕಳಿಸಿರಿ

ಕಾಮರಾಜರಿಂದ

ಕಾಂಗ್ರೆಸ್ಸಿನಲ್ಲಿ ನವೀನೋಧ್ಯಾಯವೆ?

ಭಾರತದಲ್ಲಿ ಅತ್ಯಂತ ಯಶಸ್ವೀ ಮುಖ್ಯ ಮಂತ್ರಿಯೆಂದು ಹೆಸರಾದವರು ಮದ್ರಾಸಿನ ಕಾಮರಾಜರು. ಹೆಸರು ಕಾಮರಾಜರು ನಿಜ. ಆದರೆ, ಅವರು ಕಾಮನ ವಶಕ್ಕೆ ಒಳಗಾಗದ ಬ್ರಹ್ಮಚಾರಿಗಳು. ಕೇವಲ ಎಂಟೇ ಜನ ಮಂತ್ರಿಗಳನ್ನು ಹಿಡಿದುಕೊಂಡು ಯೂರೋಬ್ಬರಿಗೆ ಮಣಿಯದೆ, ಯೂರ ಟೀಕೆಗೂ ಎಡೆಯಿಯಾದೆ ರಾಜ್ಯಭಾರವನ್ನು ನಿರಾತಂಕವಾಗಿ ಪ್ರಶಾಂತ ಸ್ಥಿತಿಯಲ್ಲಿ ಮುಂದುವರಿಸುತ್ತ ಬಂದಿದ್ದಾರೆ. ಭಾರತದ ರಾಜ್ಯಗಳಲ್ಲಿ ಅತ್ಯಂತ ಸಮರ್ಥ ಆಡಳಿತೆಯ ಮತ್ತು ಅತಿ ಶಾಂತವಾದ ರಾಜ್ಯ ಮದರಾಸು ಎಂದು ಹೆಸರು ಪಡೆದಿದೆ; ಇದಕ್ಕೆ ಕಾರಣ ಪುರುಷರೆಂದರೆ, ಕಾಮರಾಜರು.

ದೇಶದಲ್ಲಿ ಅನೇಕಾನೇಕ ಮುಖ್ಯಮಂತ್ರಿಗಳ ಮೇಲೆ ಮತ್ತವರ ಸಹಕಾರಿಗಳ ಮೇಲೆ ಲಂಚದ ಆರೋಪ ಆಥವಾ ಆಡಳಿತ ಶಿಥಿಲತೆಯ ದೋಷಾರೋಪಣೆ ಬಂದಿದೆ; ಮಂತ್ರಿ-ಮಂತ್ರಿಗಳಲ್ಲಿಯೇ ಗುಂಪುಗಾರಿಕೆಯು ತಲೆದೋರಿದೆ. ಕೆಲವೆಡೆಯಂತೂ ಇದು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಉಂಟು ಮಾಡಿರುವುದನ್ನು ನಾವು ಕಂಡಿದ್ದೇವೆ. ಇವೆಲ್ಲವ್ಯಗಳ ಪರಿಣಾಮ ಕಾಂಗ್ರೆಸ್ಸಿನ ಮೇಲೆ ಪ್ರತಿಕೂಲಾಭಿಪ್ರಾಯ ಮೂಡುವಲ್ಲಿ ಪರ್ಯವಸಾನಗೊಳ್ಳುವುದು ಎಂಬುದನ್ನು ಕೆಲವೊಂದು ಜುದ್ದಿಜೀವಿಗಳು ಕಂಡುಕೊಂಡಿದ್ದರೂ, ಅದನ್ನು ವ್ಯಕ್ತಪಡಿಸಲು ಅದೇಕೋ ಹೆದರಿದ್ದರು.

ರೆಡ್ಡಿಯರ ಓಂಕಾರ

ನೀಲಂ ಸಂಜೀವ ರೆಡ್ಡಿಯವರು ಆಂಧ್ರದ ಮುಖ್ಯ ಮಂತ್ರಿತ್ವವನ್ನು ತ್ಯಜಿಸಿ, ಶಾಸ್ತ್ರಿಯವರ ಒತ್ತಾಯದಿಂದ ಇರಬಹುದು, ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಅವರು ಪಕ್ಷವು ಶಿಥಿಲಗೊಳ್ಳುತ್ತಿದ್ದುದನ್ನೂ, ಕಾಂಗ್ರೆಸಿಗರಲ್ಲಿ ಅಧಿಕಾರ ಲಾಲಸೆಯು ಹುದುಗಿದ್ದುದನ್ನೂ, ಇದನ್ನು ಇದೇ ರೀತಿ ಮುಂದುವರಿಯಗೊಟ್ಟರೆ, ಕಾಂಗ್ರೆಸ್ ನಿರ್ವೀರ್ಯವಾಗುವುದೆಂಬುದನ್ನೂ ಮನಗಂಡರು. ಉನ್ನತ ಕಾಂಗ್ರೆಸಿಗರು ಪಕ್ಷ ಸಂಘರ್ಷನೆಗೆಂದು ಸೊಂಟಗಟ್ಟಬೇಳು; ಅಧಿಕಾರದಿಂದ ನಿವೃತ್ತರಾಗಬೇಳು ಎಂದವರೊಮ್ಮೆ ಅಭಿಪ್ರಾಯಪಟ್ಟರು. ಹತ್ತು ವರ್ಷಗಳಾಂತರ ವಿಧಾನ ಸಭೆ, ಸಂಸತ್ತುಗಳಲ್ಲಿ ಸದಸ್ಯರಾಗಿದ್ದವರು ಮೂರನೆಯ ಬಾರಿ ಚುನಾವಣೆಗೆ ನಿಲ್ಲಬಾರದು ಎಂದರವರು. ಆದರೆ, ಈ ನಿಯಮ ಮೀರಿ ಮುಂದೊಂದು ಬಾರಿ ಅವಶ್ಯವಾದ ವಸ್ತುಸ್ಥಿತಿಯನ್ನು ಸೂಚಿಸಬೇಕಾಯಿತು. ನಿಯಮವು ಸ್ವೇಚ್ಛೆಯಲ್ಲಿ ಕೊನೆಗೊಂಡಿತು. ತೃತೀಯ ಸಾರ್ವತ್ರಿಕ ಚುನಾವಣೆಗಳಲ್ಲಿ ಹಲವಾರು ಹೊಸ ಮುಖಗಳು ಮುಂದೆ ಬಂದುವು; ಇದಕ್ಕೆ ರೆಡ್ಡಿಯವರೇ ಪ್ರೇರಕ ಶಕ್ತಿಯೆನ್ನಬಹುದು. ಆದರೆ, ಸಲಹೆ ಮುಂದೆ ನೂಡಿದ ರೆಡ್ಡಿಯವರೇ ಅಧಿಕಾರದ ಮೋಹಕ್ಕೆ ಬಲಿಬಿದ್ದರು; ಚುನಾವಣೆಗೆ ನಿಂತರು; ಗೆದ್ದು ಬಂದರು; ಸಂಜೀವಯ್ಯನವರೊಡನೆ ಜಗಳವಾಡಿಯೇ ಮುಖ್ಯ ಮಂತ್ರಿಪದವನ್ನಲಂಕರಿಸಿದರು; ನೆಹರೂ ಕೃಪಾದೃಷ್ಟಿಯು ಪುಢಾವವೂ ಅವರಿಗೆ ಸಾಕಷ್ಟು ನೆರವಾಯಿತು.

ಕಾಮರಾಜರ ಸಲಹೆ

ರೆಡ್ಡಿಯವರು ಮುಂದೆ ತಂದ ಸೂಚನೆಯನ್ನು ಯಾರೂ ಕಿವಿಗೊಟ್ಟು ಕೇಳಲಿಲ್ಲ. ಪ್ರಾಯಃ ಹೆಚ್ಚಿನವರಿಗದು ಕಿವಿಹೊಕ್ಕ ಕೀಡಿಯಂತೆ ಕಂಡಿರಬೇಕು. ಇಂದು ಅಂತಹುದೇ ಸಲಹೆ ಕಾಮರಾಜರ ಬಾಯಿಂದ ಬರುತ್ತಿದೆ; ಇದು ನೆಹರುಗಳಿಗೂ ಆಪ್ಯಾಯಮಾನವಾಗಿದೆ; ಎಂತಲೇ ಎಲ್ಲೆಲ್ಲೂ ಮಂತ್ರಿಗಳು ತಮ್ಮ ರಾಜಿನಾಮೆ ನೀಡುವಲ್ಲಿ ವಿಪರೀತ ಉತ್ಸಾಹವನ್ನು ತೋರಿಸುತಿದ್ದಾರೆ. ಇದೇಕೆ ಹೀಗೆ? ಎಲ್ಲೆಡೆಯೂ ಅವಹೇಳನಕ್ಕೆ, ಪ್ರಜಾನುರಾಗಕ್ಕೆ ಗುರಿಯಾದ ಮಂತ್ರಿ ಮಂಡಳಗಳ ಒಳಜಗಳ-ಅವುಗಳ ಮೇಲಿನ ಆರೋಪಗಳನ್ನು ನಿವಾರಿಸುವಲ್ಲಿ ಕಾಂಗ್ರೆಸ್ ವರಿಷ್ಠರಿಂದು ಅಸಮರ್ಥರಾಗಿದ್ದಾರೆ. ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಸಿ. ಬಿ. ಗುಪ್ತರು ಅಲಗುರಾಯ್ ಶಾಸ್ತ್ರಿಯವರ ರಾಜೀನಾಮೆಯನ್ನು ಬಲಾತ್ಕಾರದಿಂದ ಲೆಂಬಂತೆ ತೆಗೆದುಕೊಂಡ ಘಟನೆಗಿಂತ ಬಲವಾದ ಸಾಕ್ಷ್ಯವಿದಕ್ಕೆ ಅನಗತ್ಯ. ಇದೇ ಮಾದರಿ ಇತರತ್ರವೂ ನಡೆಯುತ್ತಿದೆ. ದಕ್ಷಿಣದ ರಾಜ್ಯಗಳಿಗಿಂತಲೂ ಉತ್ತರದವುಗಳಲ್ಲಿ ಸಚಿವ ಸಂಘಟನೆಗಳ ವಿಸ್ತಾರವೂ ದೊಡ್ಡದು; ಛಿನ್ನಾಭಿಪ್ರಾಯವೂ ದೊಡ್ಡದು. ಪಕ್ಷದಲ್ಲಿಯೇ ಗುಂಪುಗಳು ಮತ್ತವುಗಳ ನಡುವೆ ನಿತ್ಯ ಜೋರಾಟ; ಆಡಳಿತೆಯಲ್ಲಿ ಹಸ್ತಕ್ಷೇಪ ಮತ್ತು ತತ್ಪರಿಣಾಮವಾಗಿ ಅಸಮರ್ಥ ಬೇಜವಾಬ್ದಾರೀ ಆಡಳಿತೆ! ಇದಕ್ಕಾಗಿ ಪಕ್ಷ ಸಂಘಟನೆಯಲ್ಲಿ ಬಿಗಿ ಅತ್ಯಗತ್ಯ; ಕಾಂಗ್ರೆಸ್ಸಿನೊಳಗಿನ ಗುಂಪುಕಾರಿಗೆ, ಪ್ರತಿಸ್ಪರ್ಧಿ ಮನೋಭಾವ, ಸ್ವಾರ್ಥಾಂಧತೆಗಳನ್ನು ತೊಳೆಯುವುದು ಪ್ರಥಮ ಕರ್ತವ್ಯ. ದೇಶವು ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿ ಇದರ ಅವಶ್ಯಕತೆಯು ಮತ್ತೂ ಅಧಿಕ. ಇದನ್ನು ಮನಗಂಡೇ ಪ್ರಧಾನಿ ನೆಹರೂರವರು ಈ ಕಡೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆಂದು ತಿಳಿದರೆ ತಪ್ಪಾಗಲಾರದು.

ಇದು ನಾಟಕವೆ?

ಕಾಮರಾಜರ ಸಲಹೆ ಹಿರಿಯ ಕಾಂಗ್ರೆಸಿಗರು ಪದವಿಗಳಿಗೆ ರಾಜಿನಾಮೆಯಿತ್ತು ಪಕ್ಷ್ಮಕ್ಕೆ ಟ್ಟು ವುದಕ್ಕೆ ತಮ್ಮ ಪೂರ್ಣಾವಧಿಯನ್ನು ಉಪಯೋಗಿಸ ಬೇಕೆಂದು. ಇದರಂತೆ ಎಲ್ಲ ಮುಖ್ಯ ಮಂತ್ರಿಗಳೂ ತಾವು 'ಹಿರಿಯರು' ಎಂದು ತಿಳಿದು ತಮ್ಮ ರಾಜಿನಾಮೆಯನ್ನರ್ಪಿಸಲು ಮುಂದೆ ಬಂದರು. ಇವರಲ್ಲೂ ಕೆಲವು ಕಳ್ಳರಿದ್ದರು. ಉತ್ತರ ಪ್ರದೇಶದ ಗುಪ್ತರು ಈ ಜಾತಿಗೆ ಸೇರಿದವರು. ಎಲ್ಲರ ಸಮಕ್ಷ ರಾಜಿನಾಮೆ ನೀಡಲು ಸಿದ್ಧರೆಂದವರು ಹಿಂದಿನಿಂದ ಅದಕ್ಕೆ ತನ್ನ ಅನಿಚ್ಛೆಯನ್ನೂ ವ್ಯಕ್ತಪಡಿಸಿದ್ದಾರೆ. ಮುಖ್ಯ ಮಂತ್ರಿಗಳು ರಾಜಿನಾಮೆಯಿತ್ತರೆ, ಮುಂದಿನ ನಾಯಕರ ಚುನಾವಣೆ ಈ ತೀರಗಳ ಅಂತ್ಯದಲ್ಲೇ ಆಗುವುದೆಂದೂ ಯೂರು ಯೂರು ಪಕ್ಷಕಟ್ಟಲು ಉಪಯುಕ್ತರು ಎಂಬುದನ್ನು ಪ್ರಧಾನಿ ನೆಹರುರವರು ಇನ್ನರ್ಲ್ಲೇ ನಿರ್ಧರಿಸುವರೆಂದೂ ತಿಳಿದು ಬರುತ್ತದೆ. ಕಾಂಗ್ರೆಸಿಗರಿಗೆ ಅಧಿಕಾರದ ಮೋಹವಿಲ್ಲ ವೆಂಬುದನ್ನು ಜನತೆಗೆ ತಿಳಿಯಪಡಿಸುವುದಕ್ಕಾಗಿಯೇ ಈ ನಾಟಕವನ್ನು ಆಡಲಾಗುತ್ತಿದೆಯೆಂಬ ಸಿಸು ಮಾತೂ ಅಲ್ಲಲ್ಲಿ ಕೇಳಿ ಬರುತ್ತಿದೆ.

ಸಂಪುಟ ಪುನಾರಚನೆಯೆ?

ದೇಶವಿಂದು ಗಂಡಾಂತರದ ಗಟ್ಟದಲ್ಲಿದೆ. ಶತ್ರುಗಳಾದ ಚೀನೀಯರು ನೆರೆಯ ಪಾಕಿಸ್ತಾನೀ ಉಡುಕೆಗಳೊಡಗೂಡಿ ನಮ್ಮ ಉತ್ತರದ ಪೂರ್ವದ ಗಡಿಯಲ್ಲಿ ಹಗರಣ ಮಾಡುತಿದ್ದಾರೆ. ನಮ್ಮ ಶಕ್ತಿಯನ್ನು, ಸಂಪತ್ತನ್ನು, ಬುದ್ಧಿಯನ್ನು ಕೇಂದ್ರೀಕರಿಸಿ, ಸ್ವಾತಂತ್ರ್ಯರಕ್ಷಣೆ ಮಾಡಿಕೊಳ್ಳುವುದು ನಮ್ಮ ಇಂದಿನ ಪ್ರಾಥಮಿಕ ಕರ್ತವ್ಯ. ಇದಕ್ಕಾಗಿ ದೇಶವನ್ನು ಇಡಿಯೂಗಿ ನುತ್ತು ಬಿಡಿಯೂಗಿ ಒಗ್ಗೂಡಿಸುವ ಮತ್ತು ಒಂದಾಗಿ ಕಟ್ಟುವ ಅಗತ್ಯ ವಿದೆ. ಆಡಳಿತೆಯನ್ನು ಸಮರ್ಥಗೊಳಿಸಿ, ಜನಾನುರಾಗವನ್ನು ಗಳಿಸುವುದು ಕೂಡ ಪ್ರಾಮುಖ್ಯ. ಎಲ್ಲಕ್ಕಿಂತ ಮಿಗಿಲಾಗಿ ದೇಶದ ಸೈನ್ಯರಕ್ತ ಸಂವರ್ಧನೆಗಾಗಿ ಅಧಿಕ ವೆಚ್ಚ ಬರುವುದರಿಂದ, ಜನತೆ ಅಧಿಕ ತೆರಿಗೆಗಳನ್ನು ತೆರಬೇಕಾಗಿ ಬಂದಿದೆ. ಹಾಗಿರುವಾಗ ಕಾಂಗ್ರೆಸ್ಸು ನಿರ್ಮಿಸಿಕೊಂಡ 'ವಿಶಾಲ ತಳಹದಿ'ಯ ಮಂತ್ರಿಮಂಡಳಗಳು ಟೀಕೆಗೆ ವಸ್ತುಗಳಾಗುವುದು ಸ್ವಾಭಾವಿಕ. ಮದ್ರಾಸಿದಲ್ಲಿ, ಒರಿಸ್ಸಾದಲ್ಲಿ ಚೆಕ್ಕ ಪ್ರಮಾಣದ ಮಂತ್ರಿ ಸಂಘಟನೆಗಳು ದಕ್ಷತೆಯಿಂದ ಆಡಳಿತೆ ನಿರ್ವಹಿಸುವಾಗ ಮಧ್ಯ ಪ್ರದೇಶ ಮುಂತಾದ ಕಡೆಗಳಲ್ಲಿ ಮಂತ್ರಿಗಳ ಸಂಖ್ಯೆ ಹೆಚ್ಚಿನ ಮುಖ್ಯರು ಎಂಬ ಕೂಗು ಕೇಳುತ್ತಿದೆ ಜನತೆ. ವಿಶಾಲತೆಗೆ ತಳಪಾಯ ಹಾಕುವಾಗಲೇ ಕಾಂಗ್ರೆಸ್ಸಿನ ಈ ನೀತಿ ಸರ್ವತ್ರ ಟೀಕೆಗೆ ಗುರಿಯಾಗಿತ್ತು. ಆದರೆ ಅದು ಗಾಳಿಯಲ್ಲಿ ತೂರಿ ಹೋಯಿತು. ಇಂದು ಮರಳಿ ಜನತೆ ಕಾಂಗ್ರೆಸ್ಸಿಗೆ ಕರೆಯಾಯುತ್ತಿದೆ—'ಹಿರಿಯ'ರು ರಾಜಿನಾಮೆ ಕೊಟ್ಟ ಮೇಲೆ ಪುನಾರಚಿತ ಮಂತ್ರಿ ಮಂಡಳಗಳು ಅದಷ್ಟು ಚಿಕ್ಕದಾಗಿರಬೇಕು.

ಪಂಚಮಂತ್ರಿಗಳು ಸಾಕು

ಒಂದು ರಾಜ್ಯಕ್ಕೆ ಎಷ್ಟು ಮಂತ್ರಿಗಳು ಬೇಕು? ಎಂಬ ಪ್ರಶ್ನೆಗೆ ಉತ್ತರವರಿಯದವರಿಗೆ ಮೊದಲು ಮಂತ್ರಿಗಳಂದು ಮಾಡುವ ಕೆಲಸಗಳೇನು ಎಂದು ನೋಡ ಬೇಕಾಗುತ್ತದೆ. ರಾಜ್ಯ ಸಂಚಾರವನ್ನು ಬಿಟ್ಟರೆ ಅವರಿಗೆ ಬೇರೆ ಹೇಳ ಬಹುದಾದ ಕಾರ್ಯವಿದ್ದಂತಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಮಿತವ್ಯಯ ಅಗತ್ಯವಾದುದರಿಂದ ಮಂತ್ರಿಗಳ ಸಂಚಾರಕ್ಕೂ ಮಿತಿಬೇಕು. ಸರಕಾರೀ ಅಧಿಕಾರಿಗಳಿಗೆ ಸಂಚಾರ ಭತ್ತೆಗೆ ಮಿತಿ ಹೇರಿದಂತೆ ಇವರಿಗೂ ಏಕೆ ಹಾಕಬಾರದು? ಮಂತ್ರಿಗಳೆಂದರೆ, ಅವರಾಭಿಮಾನ ಗೌರವಗಳು ದೊರೆಯುತ್ತಿದ್ದ ಆ ದಿವ್ಯ ಕಾಲವೊಂದಿತ್ತು. ಇಂದು ಮಂತ್ರಿ ಜನಸೇವಕ; ಎಂತಲೇ ಲಂಚ, ವಶೀಲಿ, ರುಶುವತ್ತುಗಳಿಗೊಳಗಾಗಿ ಅವರ ಸೇವೆಯನ್ನು ಹೃದಯ ತೆರೆದು ಮಾಡುತ್ತಾನೆ! ಆಡಳಿತೆಯಲ್ಲಿ ಪಕ್ಷದ ಧ್ಯೇಯಗಳನ್ನು ಅಳವಡಿಸಲು ವಿಭಿನ್ನ ಶಾಖೆಗಳಿಗೆ ಮಾರ್ಗದರ್ಶನ ನೀಡುವುದಷ್ಟೇ ಮಂತ್ರಿಯ ಕಾರ್ಯ. ಅವನ್ನು ಕಾರ್ಯಗತಗೊಳಿಸಲು ಸರಕಾರದ ನೌಕರ ವರ್ಗವಿದೆ. ಹಾಗಿರುವಾಗ ಯಾವ ರಾಜ್ಯಕ್ಕಾದರೂ ಮುಖ್ಯ ಮಂತ್ರಿ ಸೇರಿ ೫ ಮಂತ್ರಿಗಳಿಗಿಂತ ಹೆಚ್ಚು ಇಂದಿನ ತುರ್ತುಸನ್ನಿವೇಶದಲ್ಲಿ, ಮಿತವ್ಯಯದ, ಆತ್ಮಧಿಕ ಕಠಾರಕರಣೆಯ ವಿಪ್ಲವಬದ್ಧ ವಾತಾವರಣದಲ್ಲಿ ಅನಗತ್ಯ.

ಉಪಸಂಹಾರ

ಕಾಮರಾಜರು ನೀಡಿದ ಸಲಹೆಯು ರಾಜ್ಯಗಳ ಮತ್ತು ಕೇಂದ್ರದ ಸಚಿವರ ಸಂಖ್ಯೆಯಲ್ಲಿ ಕಡಿತ ಮಾಡಲು ಮತ್ತು ತನ್ಮೂಲಕ ಗುಂಪುಗಾರಿಕೆಯನ್ನು ತೊಡೆಯಲು, ಆಡಳಿತವನ್ನು ಬಿಗಿಗೊಳಿಸಲು ನೆರವಾಗುವುದೆಂದು ಜನತೆ ಆಶಿಯಿಟ್ಟಿದೆ. ಪಕ್ಷದ ಸಂಘಟನೆಯೊಯಿತೆಂದರೆ, ಗುಂಪುಗಾರಿಕೆಯು ತಾನಾಗಿಯೇ ದೂರವಾಗುವುದು. ಅಂತಹ ಮಹಾ ಕಾರ್ಯಕ್ಕೆ ಮುಂದಾಗುವ ಅಧ್ವರ್ಯುಗಳು ಯಾರು ಎಂದು ಮುಂದೆ ನೋಡುತ್ತಿದೆ ಭಾರತೀಯ ಜನತೆ. ಕಾಂಗ್ರೆಸಿನ ಇತಿಹಾಸದಲ್ಲಿ ನವೀನೋಧ್ಯಾಯವೊಂದನ್ನು ತೆರೆಯಲೆತ್ನಿಸಿದ ಕಾಮರಾಜರು ತನ್ನ ಉದ್ಯಮದಲ್ಲಿ ಯಶಸ್ವಿಯಾಗಲಿ, ವಿನಾಶದಿಂದ ಭಾರತವನ್ನು ಉಳಿಸಲಿ. —ರಾಜಂ

ಅಮೇರಿಕನ್ನರ ಭ್ರಾತೃಭಾವನೆ

ಜಗತ್ತಿನಲ್ಲಿ ಭ್ರಾತೃಭಾವವು ಬೆಳೆಯಬೇಕೆಂದು ಬಯಸುವ ಭರತನ ಭೂಮಿಯಲ್ಲಿ ಪ್ರಾಸವಾಗುತ್ತಿರುವ ಭ್ರಾತೃ ಭಾವನೆಯು ನುರಳಿ ಬೆಳೆದು ಬರಬೇಡವೆ? ಇಲವು ನಿಜಾರಗಳಲ್ಲಿ ಜಗತ್ತಿಗೆ ಮಾರ್ಗದರ್ಶನ ಮಾಡಿದ ಅಮೆರಿಕಯು ಭ್ರಾತೃಭಾವದ ಪಾಠವನ್ನೂ ಇತರರಿಗೆ ನೀಡುತ್ತಿದೆ.

ಅನುವಾದಕರು: ಶ್ರೀ ಸಂಜೀವ ಲಕ್ಷ್ಮೀಶ್ವರ, ಬಿ. ಎ.

ಅದು ಡಿಸೆಂಬರ ೧೯೪೬. ಹೆರಾಲ್ಡ ಪತ್ರಿಕೆಯ ರವಿವಾರದ ಸೊದಲ ಆವೃತ್ತಿಯ ಎಲ್ಲ ಪೇಪರುಗಳೂ ಸಂಪೂರ್ಣವಾಗಿ ಮುದ್ರಣ ವಿಭಾಗಕ್ಕೆ ಹೋಗಿತ್ತು. ಸ್ಥಾನಿಕ ಸುದ್ದಿಗಳ ಸಂಗ್ರಹಕ್ಕಾಗಿ ಅಂದು ನಾನು ಕುಳಿತಿದ್ದೆ. ಆಕ್ಷರಲ್ಲಿ ನನ್ನ ಟೇಬಲ್ಲಿನ ಮೇಲಿನ ಫೋನಿನ ಗಂಟೆ ಬಾರಿಸಿತು. ನನ್ನೊಬನೆ ಒಬ್ಬ ಹೆಣ್ಣು ಮಗಳು ಮೂತಾಡ ಹತ್ತಿದಳು. ಆವಳ ಧ್ವನಿಯು ಬಹಳೇ ಜದವಾಗಿತ್ತು. 'ನನ್ನ ಪತಿಯು ಮೃತ್ಯು ಶಯ್ಯೆಯು ಮೇಲೆ ಇರುವನು. ನೀವು ನನಗೇನಾದರೂ ಸಹಾಯ ಮಾಡಬಲ್ಲಿರಾ?" ಎಂದು ಹೇಳಿದಳು. ಆವಳ ಪತಿಗೆ ಅಗಿರುವವಾದರು ಏನು ಎಂದು ಕೇಳಲಾಗಿ ಆವಳು,"ಅವರು ಬಿಸರಾಯನ ಆಸ್ಪತ್ರೆಯಲ್ಲಿ ಇರುವರು. ಆವರಿಗೆ ಸರಿಯಾದ ರಕ್ತ ದೊರೆಯದ್ದರಿಂದ, ಅವರು ಒಹಳವಾದರೆ ನಾಳೆ ಬೆಳಿಗಿನ ಸರೆಗೆ ಒದುಕಬಹುದೆಂದು ಡಾಕ್ಟರರ ಅಳವತ್ರಾಯವಿದೆ."

ಕೂಡಲೆ ನಾನು ಆವಳ ಪತಿಯ ಹೆಸರು, ವಿಳಾಸ ಪಗೈರೆ ಮೂಹಿತಿ ಕೇಳಲಾಗಿ ಆವಳ ಪತಿಯ ಹೆಸರು ಕುಡಿಕೊವ್ವೆರಿನ್ ಎಂದಿದ್ದು ರಕೆಯ ಮೇಲೆ ಇಲ್ಲಿಗೆ ಬಂದಿದ್ದು, ಬಂದಾಗಿನಿಂದ ಬೇನೆ ಬೆದ್ದಿರುವ ದಾಗಿ ತಿಳಿಯಿತು ಹಾಗು ಡಾ। ಮೆಡೋಜ ಎಂಬವರು ಆವರ ಉಪಚಾರ ಮಾಡುತ್ತಿರುವ ಮೂಹಿತಿ ದೊರೆಯಿತು.

ನಾನು ನಂತರ ಡಾ। ಮೆಡೋಜ ಆವರಿಗೆ ಫೋನ್ ಮಾಡಲಾಗಿ ಆವರು "ಮಿ। ಕುಡಿ ಆವರ ಪ್ರಕೃತಿ ಗಂಭೀರವಾಗಿದ್ದು, ಆವರಿಗೆ ರಕ್ತದ ಅವಶ್ಯಕತೆ ಬಹಳಿದೆ. AB-R-H Negative ಜಾತಿಯ ರಕ್ತವನ್ನು ಆವರಿಗೆ ಕೊಡಬೇಕಾಗಿದೆ. ಆ ಮೂದರಿಯ ರಕ್ತ ನನ್ನ ಆಸ್ಪತ್ರೆಯಲ್ಲಿಲ್ಲ. ಬೇರಾವ ಉಪಾಯದಿಂದ ಆವರನ್ನು ಬದುಕಿಸುವದು ಶಕ್ಯವಿಲ್ಲ — ಬಹಳೆಂದರೆ ಆವರು ನಾಳೆ ಬೆಳಗಿನ ವರೆಗೆ ಬದುಕಬಹುದು" ಎಂದು ತಿಳಿಸಿದರು.

ಪತ್ರಿಕೆಯ ಸಂಪಾದಕನ ಜೀವನದಲ್ಲಿ ಇದೊಂದು ಅತ್ಯಂತ ವಿಲಕ್ಷಣ ಪ್ರಾಗು ಮಹತ್ವದ ಕ್ಷಣವಾಗಿತ್ತು.

ಆಗ ರಾತ್ರಿ ೮-೫೫ ಆಗಿತ್ತು. ನಾನು ಕೂಡಲೆ Radio News Studioಕ್ಕೆ ಫೋನ್ ಮಾಡಿದಾಗ ಮೋರ್ನಿಂಗ್ ಬ್ರಾಡ್ ಕಾಸ್ಟಿಂಗ್ ಕಂಪನಿಯ ಸ್ಟಾಫ್ ಆಸಿಸ್ಟಂಟ್ ಜಾಲ ಎಂಬವರು ಮಾತನಾಡುತ್ತಿದ್ದರು. ನಾನು ಮೃತ್ಯುಶಯ್ಯೆಯ ಮೇಲಿದ್ದ ಕುಡಿ ಆವರ ವಿಷಯವನ್ನು ಹೇಳಿದೆ ಹಾಗು ರಕ್ತದಾನದ ಆವಶ್ಯಕತೆಯನ್ನು ಬಿಂಬಿಸಿ ಹೇಳಿದೆ. ಆವರು ಈ ವಿಷಯವನ್ನು ರಾತ್ರಿ ೯೨೦ ಸುದ್ದಿಯಲ್ಲಿ ಈ ರೀತಿಯಾಗಿ ಬಿತ್ತರಿಸಿದರು. ವಿಚಿಗೆನ್ನದಲ್ಲಿರುವ ಮಿ. ಕುಡಿಕೋವ್ವೆರಿನ್ ಎಂಬವರು ಇಲ್ಲಿಗೆ ಬಂದಿದ್ದು ಜೇನೆಯಿಂದ ಬಳಲುತ್ತಿದ್ದಾರೆ. ವರಿಗೆ A B – R – H Negative ರಕ್ತದ ಅವಶ್ಯಕತೆ ಇದೆ. Blood Bank ದಲ್ಲಿ ಯಾರಾದರು ರಕ್ತ ಕೊಡುವವರಿದ್ದಲ್ಲಿ, ಡಾ. ಮಿಡೋಜ ಬಿಸರಾಯನ ಹೊಸ್ಪಟಲ ಇವರನ್ನು ಭೆಟ್ಟಿ ಆಗಬೇಕು. ಈ ಸುದ್ದಿಯ ಹೆರಾಲ್ಡ ಪತ್ರಿಕೆಯ ಮೂಲಕ ಪ್ರಸಾರವಾಗುತ್ತಿದೆ"

ಈ ಸುದ್ದಿಗೆ ದೊರಕಿದ್ದ ಪುರಸ್ಕಾರವೆಂಥದು? ಇಡೀ ಅಮೇರಿಕೆಯ ದೇಶವೇ ಈ ಕರೆಗೆ ಓಕೊಟ್ಟಿತು. ಪೆಟ್ರಾಯಿಟ, ಚಿಕಾಗೊ, ನ್ಯಾನ್ ಫ್ರಾನ್ಸಿಸ್ಕೊಗಳಿಂದ ಪುರ ಸ್ಕಾರ ದೊರೆಯಿತು. ಸ್ಯಾವನ್ನಾಹ ಹಾಗೂ ಜಾರ್ಜಿಯಾದಿಂದ ಇಬ್ಬರಂತು ರಕ್ತದಾನ ಕ್ಕಾಗಿ ವಿಮಾನದಲ್ಲಿ ಪ್ರಯಾಣ ಕೈಕೊಂಡರು. ಆಟಲಾಂಟಾದಿಂದ ಹೊರಡುವ ವಿಮಾನದಲ್ಲಿ ಬೇರೆ ನಾಲ್ಕು ಜನರು ರಕ್ತದಾನಕ್ಕಾಗಿ ಪ್ರಯಾಣ ಬೆಳೆಸಿದರು. ಮತ್ತೆ ಬೇರೆ ಮೂವರು ನ್ಯೂಯಾರ್ಕದಿಂದ ದಹೊರಟರು. Eastern Airline company ಯಂತು ರಕ್ತದಾನ ಮಾಡಲು ಹೊರಡುವ ಎಲ್ಲರನ್ನು ಕರೆದುಕೊಂಡೇ ವಿಮಾನ ಹೊರಡುವದೆಂದು ಜಾಹೀರ ಮಾಡಿದರು.

ರಾತ್ರಿ ಹತ್ತು ಗಂಟೆಯೊಗುವಷ್ಟರಲ್ಲಿ ಸುಮಾರು ೨೦೦—೩೦೦ ರಕ್ತದಾನಿಗಳ ಫೋನ್ ಕರೆಗಳು ಬಂದಿದ್ದವು. ಅದರಲ್ಲಿ ನುಕ್ಯಾಲು ಪಾಲು ದೂರ ದೇಶದಿಂದ ಬಂದ ಟ್ರಂಕ್‌ಕಾಲುಗಳಿದ್ದವು. ಆಸ್ಪತ್ರೆಯ ಆವಾರದಲ್ಲಿ ರಕ್ತದಾನಿಗಳ ಗದ್ದಲ ಪೋ ಗದ್ದಲವಾಯಿತು. ಆವರ ಉತ್ಸಾಹವನ್ನು ಲೆಕ್ಕಿಸಿ ಪೋಲೀಸರ ಸಹಾಯದಿಂದ ತಳ್ಳ ವ್ಯವಸ್ಥೆ ಮಾಡಲಾಯಿತು.

ರಾತ್ರಿ ಹತ್ತು ಗಂಟೆಗೆ American Broad casting Company ಯು ಈ ಸುದ್ದಿಯನ್ನು ಪ್ರಸಾರ ಮಾಡಿತು. "ಭ್ರಾತೃಭಾವನೆಯ ಅವಿಸ್ಮರಣೆಯ ಪ್ರದರ್ಶನದ ಅನುಭವವು ಇಂದು ಅಮೇರಿಕನ್ನರಿಂದ ದೊರೆಯಿತು. ಒಬ್ಬ ಅಪರಿಚಿತ ವ್ಯಕ್ತಿಗೆ ರಕ್ತದಾನ ಮಾಡಲು ಸೈಜೋಟ ನಡೆಯಿತು. ರಕ್ತ ಬೇಕಾದ ವನ್ನು ಜ್ಯುನೋ, ಪ್ರೊಟೆಸ್ಟಂಟನೋ ಕ್ಯಾಥೊಲಿಕನೋ, ನಾಸ್ತಿಕನೋ, ಆಸ್ತಿಕನೋ ಇವಾವುದರ ವಿಚಾರ ಮಾಡದೆ, ನನ್ನ ರಕ್ತ ತೆಗೆದುಕೊಳ್ಳಿ, ನನ್ನ ರಕ್ತ ರಕ್ತ ತೆಗೆದುಕೊಳ್ಳಿ ಎಂದು ಜನ ಮುನ್ನುಗ್ಗುತ್ತಿದ್ದರೆ".

ಲಕ್ಷಾವಧಿ ಜನರು ಈ ಸುದ್ದಿ ಕೇಳಿ ಸಂತೋಷಗೊಂಡರೂ ಶ್ರೀಮತಿ ಕುಡಿ ಕೋವ್ವೆರಿನ್ನರು ಇದನ್ನು ಕೇಳಿರಲಿಲ್ಲ. ಆವರು ತಮ್ಮ ಪತಿಯ ಬಳಿ ದುಃಖಿಸುತ್ತ ಕುಳಿತಿದ್ದರು. ಆವರ ಪತಿಯು ಸುಧಾರಣೆಯ ಮಾರ್ಗದಲ್ಲಿದ್ದರು. ಸುದ್ದಿಯ ಮೇಲೆ ಬಂದಿದ್ದರು. ಆವರ ಬಳಿ ಇನ್ನೊಬ್ಬ ವ್ಯಕ್ತಿ ಕುಳಿತಿದ್ದರು. ಆವರೇ ನಾಥನವಾಸ ಎಂಬವರು. ಇವರು ದೇಶ ಪರ್ಯಟನ ಕೈಕೊಂಡಿದ್ದರು. ಬಿಸರಾಯನ ಆಸ್ಪತ್ರೆಯು ಹತ್ತಿರದಲ್ಲಿ ಹೋಗುತ್ತಿರುವಾಗ ರಕ್ತದಾನದ ಬಗ್ಗೆ ಆಕಾಶವಾಣಿಯಲ್ಲಿ ಬಿತ್ತರಿಸಿದ ಸುದ್ದಿಯನ್ನು ತಮ್ಮ ಮೋಟಾರದಲ್ಲಿದ್ದ ರೇಡಿಯೋದಲ್ಲಿ ಕೇಳಿದರು. ಕೂಡಲೆ ಮೋಟಾರ ನಿಲ್ಲಿಸಿ, ತಮ್ಮ ನಾಯಿ ಕೊರಳಲ್ಲಿದ್ದ ಪಟ್ಟಿಯನ್ನು ಕೈಗೆ ಬಿಗಿದುಕೊಂಡು ತಮ್ಮ ರಕ್ತವನ್ನು ಪರೀಕ್ಷಿಸಿಕೊಂಡರು, ಮಿ॥ತುಡಿ ಕೊವ್ವೆರಿನ್ನರಿಗೆ ಬೇಕಾದ ರಕ್ತತಮ್ಮಲ್ಲಿದೆ ಎಂದುತಿಳಿದ ಕೂಡಲೆ ಅನೆಂದಿತರಾಗಿ ರೋಗಿಯನ್ನು ಹುಡುಕಿಕೊಂಡು ಹೋಗಿ ರಕ್ತದಾನ ಮಾಡಿದರು.

ಸರಿಯಾದ ವೇಳೆಗೆ ಬೇಕಾದ ರಕ್ತದೊರೆತಿದ್ದರಿಂದ ರೋಗಿಯ ಪ್ರಕೃತಿಯು ಸುಧಾರಿಸುತ್ತಿದೆ ಎಂದು ಆಕಾಶವಾಣಿ ಬಿತ್ತರಿಸಿದ ಕೂಡಲೆ, ಆಸ್ಪತ್ರೆಯ ಆವಾರ ದಲ್ಲಿ ನೆರೆದ ಜನರು ಚಪ್ಪಾಳೆ ಬಟ್ಟಿತ ಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಬ್ಲಡ್ ಬ್ಯಾಂಕಿಗೆ ತಮ್ಮ ರಕ್ತವನ್ನೂ ದಾನ ಮಾಡಿ ಹೊರಟು ಹೋದರು.

ಮುಂದೆ ಕೆಲ ದಿನಗಳ ನಂತರ Herald ಪತ್ರಿಕೆಯು ಕಾರ್ಯಾಲಯಕ್ಕೆ ಒಂದು ನನಗೆ "ನೀವು ನನಗೆ ಪುನರ್ಜನ್ಮ ತಂದು ಕೊಟ್ಟಿರಿ. ನಿನ್ನು ಉಪಕಾರವನ್ನು ನಾನು ಮರೆಯಲಾರೆ." ಎಂದು ನನ್ನ ಕೈ ಅಲುಕಿದರು. ಆವರೇ ಮಿ ಕುಡಿಕೊವ್ವೆರಿನ್ನರೆಂದು ಬೇರೆ ಹೇಳಬೇಕಿಲ್ಲ.

(ಆಧಾರಿತ)

(ವಿಶೇಷಾಂಕಕ್ಕೆ ಬಂದುದು)

25,000

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸನ್ನೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಅಂಚೆ ವೆಚ್ಚ ರೂ. ೦-೫೦
ರಿಯಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಸ್ಟೋರ್ಸ್, ಉಡುಪಿ, ದ. ಕ.

ಆಕರ್ಷಣೀಯ ಬಡ್ಡಿ ದರಗಳು
1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಬೆಳ್ಳ ವ್ಯಾದಿ, ನಿರಿಖು ಶೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3
(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)
ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.
ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸನುಯೋಚಿತವಾದ ಆಯುರ್ವೇದೀಯ ವಿಶ್ರಾಂತಿ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/
ಉತ್ತಮ ರೂ. 9/-
P. Devee & Co. (N. J.) Calcutta—40.

'NAVAYUGA' WEEKLY
is in the list of periodicals and Newspapers approved for use in Secondary Schools as per proceedings Roc. No. 466 N/50 dated 2—12—1950 of the Director of Public Instruction Madras.

೨೦ ವರ್ಷಗಳ ಖಡ್ಡಾಯ ನಿಬಡ್ಡಿ ತೇವಣಿ ಯೋಜನೆ

ಭಾರತದ ಬೈಂಕಿಂಗ್ ಉದ್ದಿಮೆಯಲ್ಲಿ ಪಳಗಿದ ಡಾ| ಪೈಯವರು ಸೂಚಿಸಿದ ೨೦ ವರ್ಷಗಳ ಖಡ್ಡಾಯ ನಿಬಡ್ಡಿ ತೇವಣಿ ಯೋಜನೆಯು ಅನ್ಯವಹಾರ್ಯವಲ್ಲ; ಇಂದಿನ ೫ ವರ್ಷಗಳ ಖಡ್ಡಾಯ ತೇವಣಿ ಯೋಜನೆಯು ನೀತಿ-ಸಂಘರ್ಷಣೆಯನ್ನು ನಿಶ್ಶೇಷಗೊಳಿಸಲು ಸಾಧ್ಯವಿಲ್ಲವೆ ಪ್ರಯತ್ನವೆ?

ಲೇಖಕರು: ಶ್ರೀ ಎಸ್. ಗೋಪೀಚಂದ ರಾವ್.

ತೆರಿಗೆಗಳಿಂದ ಕಂಗೆಟ್ಟ ಭಾರತವನ್ನು ತೆರಿಗೆಯಿಲ್ಲದ ಪ್ರಜಾರಾಜ್ಯವಾಗಿ ಕಟ್ಟುವುದು ಸಾಧ್ಯವೆಂಬುದನ್ನು ತಮ್ಮ ಸುವಿಸ್ತೃತರೂಪದ ಯೋಜನೆಯೊಂದರಲ್ಲಿ ವಿವರಿಸಿ ಜನತೆಯ ಮುಂದೆ ಇಟ್ಟಿದ್ದಾರೆ ಡಾ| ಟಿ.ಮೊಧನ ಪೈಯವರು. ಈ ಯೋಜನೆಯನ್ನು ಕಂಡೊಡನೆಯೇ 'ಇದೆಲ್ಲಿ ಸಾಧ್ಯ?' ಎಂಬ ನಗೆ ನಾಟಕವಾಡುವವರೂ ಕೆಲವರಿದ್ದಾರೆ. ಆದರೆ, ಅದು ಸಾಧ್ಯ ಮತ್ತು ಸರಕಾರವಾದರೂ ಇಂದು ಈ ದಿಸೆಯಲ್ಲಿ ಮುಂದುವರಿಯುತ್ತಿದೆ ಎಂದು ತಿಳಿದಾಗ ಆಂತಹರು ವಿಸ್ಮಯಗೊಳ್ಳಬಹುದು.

ಡಾ| ಪೈಯವರ ಯೋಜನೆಯನ್ನು ಹೀಗೆ ಸಂಗ್ರಹಿಸಬಹುದು: 'ಸರಕಾರವೈಂದು ವರ್ಷಕ್ಕೆ ೨,೬೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇದರಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸಾಲ ರೂಪದಲ್ಲಿಯೂ ಉಳಿದದ್ದನ್ನು ತೆರಿಗೆಗಳ ರೂಪದಲ್ಲಿಯೂ ಆಯ ಸಂಗ್ರಹಿಸುತ್ತವೆ. ಸರಕಾರವು ಇದಕ್ಕೆ ಬದಲು, ರಾಷ್ಟ್ರೀಯ ಆದಾಯದ ಸೇ. ೨೫ರಷ್ಟು ನಿಬಡ್ಡಿ ತೇವಣಿಯೆಂದು ಜನತೆಯಿಂದ ಸಂಗ್ರಹಿಸಿ, (ರೂ. ೫೫೦೦ ಕೋಟಿ) ಆ ದರಲ್ಲಿ ರೂ. ೨,೦೦೦ ಕೋಟಿಯನ್ನು ಆವರ್ತ ವೆಚ್ಚಗಳಿಗೆ ವಿನಿಯೋಗಿಸಿ, ಉಳಿದ ರೂ. ೧೫೫೦ ಕೋಟಿಯನ್ನು ಆನಾವರ್ತ ವೆಚ್ಚ (ಬಂಡವಳ)ಗಳಲ್ಲಿ ತೊಡಗಿಸಬೇಕು. ಈ ಅನಾವರ್ತ ವೆಚ್ಚವು ಸೇ. ೪೦ ರಷ್ಟಾದಾಗ ಖಡ್ಡಾಯ ನಿಬಡ್ಡಿಯಲ್ಲಿ ೨೦ ವರ್ಷಗಳಲ್ಲಿ ರೂ. ೩೫೦೦ ಆಗುವುದರಿಂದ, (ಸರಕಾರವಿಂದು ತಾನು ಪಡೆಯುತ್ತಿರುವ ಸಾಲಗಳ ಮೇಲೆ ಇಷ್ಟು ಬಡ್ಡಿಯನ್ನು ತೆರುತ್ತದೆ. ಅವಧಿಯೂದ ಬಳಿಕ ತೇವಣಿಯನ್ನು ಮರಳಿಸುವುದು ಸಾಧ್ಯವಾಗುವುದು ಸರಕಾರದ ವೆಚ್ಚಕ್ಕೆಂದು ಪ್ರತಿವರ್ಷ ರೂ. ೨,೦೦೦ ಕೋಟಿಯನ್ನು ಜನತೆ ತನಗರಿವಿಲ್ಲದಂತೆಯೇ ಒದಗಿಸಿ ಕೊಟ್ಟಂತಾಗುವುದು."

ಖಡ್ಡಾಯ ಉಳಿತಾಯ ಯೋಜನೆಯು ಇದನ್ನೇ ಅನುಸರಿಸುವುದಿಲ್ಲವೆ? ಈ ಯೋಜನೆಯು ಎಲ್ಲರಿಗೂ ಅನ್ವಯವಾಗದಿರಬಹುದು, ಕೆಲವರಿಗೆ ವಿನಾಯಿತಿ ದೊರೆಯಬಹುದು, ಅನಧಿಯು ಐದು ವರ್ಷಗಳಕ್ಕಿರದಿರಬಹುದು ಮತ್ತು ಬಡ್ಡಿಯನ್ನೂ ಹೊಂದಿರಬಹುದು. ಈ ಯೋಜನೆಯನ್ನೇ ತುಸು ಪರಿವರ್ತಿಸಿಕೊಂಡರೆ, ಅದು ತೆರಿಗೆಯಿಲ್ಲದ ರಾಷ್ಟ್ರ ನಿರ್ಮಾಣಕ್ಕೆ ನಾಂದಿಯನಿಸಲಾರದೆ?

ಖಡ್ಡಾಯ ಉಳಿತಾಯ ಯೋಜನೆಯು ಸೇ. ೪೦ರಷ್ಟು ಮಾತ್ರವಿದೆ. ಕ್ಷೇಮ ನಿಧಿ, ವಿಮಾವಾಲಿಸಿ, ಅಂಚೆ ಕಛೇರಿಯಿ ೧೦ ಯಾ ೧೫ ವರ್ಷಗಳ ನಿಯತಕಾಲಿಕ ಸಂಚಯ ತೇವಣಾತಿಗಳಲ್ಲಿ ಆದಾಯದ ಸೇ. ೧೦ರಷ್ಟನ್ನು ಉಳಿಸುವವನು ಇದರಿಂದ ವಿನಾಯಿತಿ ಹೊಂದಬಲ್ಲನು. ವಾರ್ಷಿಕ ರೂ. ೧೫೦೦ಕ್ಕಿಂತ ಕಡಿಮೆ ಆದಾಯವಿರುವವನಿಗೆ ಇದು ಅನ್ವಯವಾಗುವುದಿಲ್ಲ. ಕಾನೂನಿನ ಕಣ್ಣಿನಿಂದ ತಪ್ಪಿಸುವುದನ್ನೇ ಚಿಂತಿಸುತ್ತಿರುವ ಜನತೆಯು ತನ್ನ ಆದಾಯದ ನಿಜ ಪರಿಣಾಮವನ್ನು ಆವಶ್ಯ ಬಚ್ಚಿಡುತ್ತದೆ. ದಿನನಿತ್ಯ ರೂ. ೫-೬ ಸಂಪಾದನೆ ಮಾಡುವ ಕೂಲಿಗಾರ, ತನ್ನ ಮಕ್ಕಳನ್ನು ಶಾಲೆಗೆ ಸೇರಿಸುವಾಗ, ಹೇಳುವ ಮಿತ ಆದಾಯದಲ್ಲಿ ಆತ ತನ್ನ ೫—೬ ಸದಸ್ಯರ ಕುಟುಂಬವನ್ನು ಹೇಗೆ ಸಂರಕ್ಷಿಸುತ್ತಾನೆ, ಮಕ್ಕಳಿಗೆ ಶಿಕ್ಷಣ ಹೇಗೆ ನೀಡುತ್ತಾನೆ ಎಂಬುದನ್ನು ಯಾರೂ ಯೋಚಿಸುವುದಿಲ್ಲ. ಯೋಚಿಸುತ್ತಾರಾದರೂ ಆತನ ವರಮಾನವನ್ನು ತೂಗಲು ನಿಯಮಿತ ಮಾನದಂಡವಾದರೂ ಎಲ್ಲಿದೆ? ಆದ ದರಿಂದ ಈ ಯೋಜನೆಯು ಸಂಪೂರ್ಣ ವ್ಯವಹೃತವಾದಾಗಲೂ ಸ್ಥಿಮಿತ ಆದಾಯ ವರ್ಗಕ್ಕೆ ಸೇರಿದವರು ಮಾತ್ರ ಇದಕ್ಕೆ ಒಳಗಾಗುವರು.

ಇದು ನ್ಯಾಯವೇ; ಸರಕಾರವು ಆದಾಯ ಶ್ರುತ್ಪನ್ನ ಮೂಡಿದರೂ ತಪ್ಪಿಸಿಕೊಳ್ಳುವವರನ್ನು ಹಿಡಿಯುವುದು ಸಾಧ್ಯವಿಲ್ಲ. ಕಳ್ಳರನ್ನು ಹಿಡಿಯುವವರೂ ಕಳ್ಳರೇ ಆಗಿರುವಾಗ, ಯಾರಿಂದರೂ ನಿನ್ನು ಮಾಡಬೇಕು? ಎಲ್ಲರಿಗೂ ಸಮಾನ ರೀತಿಯಲ್ಲಿ ಅನ್ವಯವಾಗುವಂತೆ ಖಡ್ಡಾಯ ನಿಬಡ್ಡಿ ತೇವಣಿ ಯೋಜನೆಯನ್ನು ಸರಕಾರ ರೂಪಿಸಿ ಇದರ ಅವಧಿಯನ್ನು ಇಪ್ಪತ್ತು ವರ್ಷಗಳಷ್ಟಿರಬೇಕು. ಆದಾಯ ಪ್ರಮಾಣಕ್ಕನುಗುಣವಾಗಿ ಸೇ. ೫ರಿಂದ ೪೫ರ ವರೆಗೆ ತೇವಣಿಯಿಡುವಂತೆ ವಿಧಿಸಬೇಕು. ಆದಾಯ ತೆರಿಗೆ ವಿಧಿಸುವಲ್ಲಿನ ಅಂತರವೂ ತೆಯೇ ಆದಾಯವನ್ನು ಗವನಿಸಿ ತೇವಣಿಯ ಪ್ರಮಾಣವನ್ನು ಗೊತ್ತುಮಾಡಬೇಕು.

ಕೂಲಿಕಾರ ನೌಕರರ ವಿಷಯದಲ್ಲಿಯೂ ಇದರಿಂದ ತೊಂದರೆ ಉದ್ಭವಿಸುವುದಿಲ್ಲ. ಪ್ರತಿ ನೌಕರರೂ ಪರವಾನಿಗೆ ಪಡೆದುಕೊಳ್ಳಲೇ ಬೇಕು ಅವರ ಮಾಲಿಕನು ಅವರ ಆದಾಯದ ಮೇಲೆ ಸಲ್ಲತಕ್ಕ ತೇವಣಿಯನ್ನು ಮುಂಗಡ ಇಟ್ಟುಕೊಂಡು ಕಟ್ಟಬೇಕು. ಅಥವಾ ಅವನ ನೈಸರ್ಗಿಕ ಕೂಲಿಯನ್ನೂ ವರ್ಷದಲ್ಲಿ ಕೆಲವು ದೊರೆಯುವ ಬಹುದಾದ ದಿನಗಳನ್ನೂ ಹಿಂದಿನ ವರ್ಷಗಳ ಅನುಭವದಿಂದ ಅನುಮಾನಿಸಿ ನಿರ್ಧರಿಸಿ ಅದನ್ನೇ ಈ ವರ್ಷದ ಆದಾಯವೆಂದು ಗಣಿಸಬಹುದು. ಇಂದು ಸರಕಾರದ ಬೇರೆ ಬೇರೆ ವಿಧಾಗಗಳಲ್ಲಿ ಕೊಳೆತು ನಾರುತ್ತಿರುವ ನೌಕರ ವರ್ಗ ಮುಂದೆ ಇಂತಹ ಈ ಕೆಲಸವನ್ನು ಮಾಡಬಹುದು. ವ್ಯಾಪಾರಿಗಳು-ವರ್ತಕರು ಮೊದಲಾದವರಿಂದು ಲೆಕ್ಕ ಆಡಗಿಸಿಡುತ್ತಾರೆ. ತಮ್ಮ ದುಡಿತನ ಒಂದು ಪಾಲು ಸರಕಾರಕ್ಕೆ ಹೋಗುತ್ತದೆಂದು. ಆದರೆ, ಅಂತಹವರೇ ಇನ್ಕಂ ಟ್ಯಾಕ್ಸಿನಿಂದ ರಿಬೇಟು ಪಡೆಯಲು ಲಕ್ಷಗಟ್ಟಲೆ ಜೀವವಿಮೆ ಮಾಡುವುದನ್ನು ನಾವು ಆಗ್ಗಾಗಲೆಯಲಾಗುವುದಿಲ್ಲ. ಏತಕ್ಕೆ? ವಿಮೆಯ ಮೊತ್ತ ಇಂದಲ್ಲ ನಾಳೆಯಾದರೂ ಮರಳಿ ದೊರೆಯುತ್ತದೆ ಎಂಬ ಪ್ರಲೋಭನೆಯಿಂದಾಗಿ. ಆದುದರಿಂದ 'ನಿಬಡ್ಡಿ ಖಡ್ಡಾಯತೇವಣಾತಿ'ಯಿಂದ ಇವರು ಹಿಂದೆಸರಿಯಲಾರರು. ಹೀಗೆ ಎಲ್ಲ ವರ್ಗದವರ ಮೇಲೂ ಇದನ್ನು ಅನ್ವಯಿಸುವುದು ಮತ್ತು ಅವರೆಲ್ಲರಿಗೂ ಇದರ ಗುಣವನ್ನು ತಿಳಿಸಿ ಅವರ ಸಹಕಾರ ಪಡೆಯುವುದು ಪ್ರಯಾಸವೆನಿಸುವುದಿಲ್ಲ. ಈ ಯೋಜನೆಯ ನಿಯಮೋಲ್ಲಂಘನೆ ಮಾಡುವವರಿಗೆ ಮಾತ್ರ ಕಠಿಸದಲ್ಲಿ ಕಠಿನವಾದ ದಂಡವಿಧಿಸಲ್ಪಡಬೇಕು. ಅವಶ್ಯವೆನಿಸಿದರೆ, ಸಂವಿಧಾನವನ್ನೇ ತಿದ್ದುಪಡಿ ಮಾಡಿಕೊಂಡು, ತೆರಿಗೆಯಿಲ್ಲದ ರಾಜ್ಯ ಸ್ಥಾಪನೆಗೆ ಮಾರ್ಗಶುದ್ಧ ಮಾಡಿಕೊಳ್ಳಬೇಕು.

ಒಂದೇ ಸಲ ಈ ಹೊಸ ಯೋಜನೆಯನ್ನು ಸರಕಾರವು ಜಾರಿಗೆ ತರಲು ಹಿದರಬಹುದು. ಸಂಕೋಚ ಪಡಬಹುದು. ಅಂಶ ಅಂಶವಾಗಿಯಾದರೂ ತರುವ ಪ್ರಯತ್ನವನ್ನು ಪ್ರಾಯೋಗಿಕವಾಗಿ ಮಾಡಬಾರದೇಕೆ? ಈಗಾಗಲೇ ಸರಕಾರ ವಿಧಿಸಿರುವ ತೆರಿಗೆಗಳು ಅತ್ಯಧಿಕವಿರುವುದರಿಂದ ಇನ್ನು ಮುಂದಕ್ಕಾದರೂ ಹೆಚ್ಚಿನ ಕರಭಾರವನ್ನು ಹೇರುವ ಸಾಹಸವನ್ನದು ಮಾಡಬಾರದು. ಈ ಯೋಜನೆಯನ್ನು ಹಂತ ಹಂತವಾಗಿ ಆರಂಭಿಸಿ, ಒಂದೊಂದೇ ತೆರಿಗೆಗಳನ್ನು ತಗ್ಗಿಸುವುದು, ಕಿತ್ತು ಹಾಕುವುದು ಈ ಉದ್ಯಮಗಳಗದು ತೊಡಗಬಹುದು. ಆಗ ಕೆಲವು ವರ್ಷಗಳಲ್ಲಾದರೂ ಸರಕಾರವು ಈ ನೀತಿಯನ್ನು ಸಂಪೂರ್ಣ ಕಾರ್ಯಕೃತವಾಡುವುದು ಸಾಧ್ಯವಾಗಬಹುದು.

ಹಾಗಾದರೆ, ಈ ಯೋಜನೆಯನ್ನು ಎಲ್ಲಿಂದ ಆರಂಭಿಸಬೇಕು? ಶ್ರೀಮಂತರು ಬಂಡವಳದಾಹಿಗಳು ಸರಕಾರವನ್ನು ವಂಚಿಸುತಿದ್ದಾರೆಂಬುದನ್ನು ಒಪ್ಪಬೇಕಾದರೂ ಅವರು ಸರಕಾರಕ್ಕೆ ತೆರುವ ತೆರಿಗೆಗಳೂ ತುಂಬ ಇವೆ; ಮಧ್ಯಮ ವರ್ಗದವರು ಕಾನೂನಿನ ಮುಸ್ಸಿಗೆ ಬೇಗನೇ ಸಿಕ್ಕಿ ಬಿದುತ್ತಾರೆ. ಅವರಿಗೆ ಅನಿಯತ ವೇತನದ ಕೂಲಿ—ನೌಕರರ ಮೇಲೆ ಈ ಕಾನೂನನ್ನು ಮೊತ್ತಮೊದಲು ಅನ್ವಯಿಸಬಾರದೆ? ಅವರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಬೆಳೆಸುವುದಕ್ಕೆ ಕೂಡ ಇದು ಅನುಕೂಲವಾಗುವುದು. ನಾಳಿನ ಚಿಂತೆಯಿರುವ ಪ್ರತಿನೂಸವನೂ ತಾನು ಒಟ್ಟಿದ ಹಣವು ತನಗೆ ಮರಳಿ ದೊರೆಯುವುದು, ನಡುವೆ ಸತ್ತರೆ, ಕುಟುಂಬಕ್ಕೆ ಸಿಗುವುದೆಂಬ ಆಲೆಯಿಂದ ಜೀವವಿಮೆಯನ್ನು ಪ್ರೀತಿಸುವಂತೆಯೇ ಸುಖ ಜೀವನಕ್ಕೆ ಕಾರಣವಾದ ಈ ತೆರಿಗೆ ರಹಿತ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಹೇತುವಾದ ೨೦ ವರ್ಷಗಳ ಖಡ್ಡಾಯ ನಿಬಡ್ಡಿ ತೇವಣಿ ಯೋಜನೆಯನ್ನು ಸ್ವಾಗತಿಸುವುದು ಖಂಡಿತ.

ಸರಕಾರದ ಹಲವಾರು ವಿಭಾಗಗಳ ಕೆಲಪೊಂದು ಈ ಯೋಜನೆಯು ವ್ಯವಹೃತಾವಾ ಬಳಿಕ ವ್ಯರ್ಥವಾಗುತ್ತವೆ. ಅವುಗಳಲ್ಲಿನ ನೌಕರರನ್ನೇ ಉಳಿತಾಯ ಸಂಗ್ರಹ ಕಾರ್ಯ ಮತ್ತಿತರ ಮೇಲ್ವಿಚಾರಣೆಯ ಕಾರ್ಯಗಳಲ್ಲಿ ತೊಡಗಿಸಬಹುದು. ಹಳ್ಳಿ ಹಳ್ಳಿಯಲ್ಲಿಯೂ ಅಂಚೆ ಕಚೇರಿಗಳಿದ್ದು, ಎಲ್ಲವಕ್ಕೂ ಈ ಉಳಿತಾಯ ನಿಧಿಯನ್ನು ಸಂಗ್ರಹಿಸುವ ಅಧಿಕಾರವನ್ನೂ ನೌಕರರನ್ನೂ ಕೊಡಬಹುದು. ಬೈಂಕುಗಳ ಸಹಕಾರವನ್ನೂ ಪಡೆದುಕೊಳ್ಳಬಹುದು. ಆದರೆ ಒಂದು ವಿಷಯ ಅವಶ್ಯ ಗಮನಿಸಬೇಕು. ಕಾನೂನಿನ ಅವಜ್ಞೆಗೆ ತೀವ್ರಾತೀವ್ರ ದಂಡನೆಯಾಗಲೇ ಬೇಕು. ಇಲ್ಲವಾದರೆ, ಈಗಿನಂತೆಯೇ ಸುಳ್ಳು ಲೆಕ್ಕ ಪತ್ರಗಳ ದಾಖಲೆಯೆಂಡಾಗಿ, ಸರಕಾರವು ಗುರುತು ಹಾಕುವ ರಾಷ್ಟ್ರೀಯ ಆದಾಯ ಮತ್ತು ಜನತೆಯಿಂದ ಬಂದ ಕಂತೆ ಸಂಖ್ಯೆಗಳನ್ನು ಕಲೆ ಹಾಕಿ ಗೊತ್ತು ಮಾಡುವ ರಾಷ್ಟ್ರೀಯ ಆದಾಯಗಳ ನಡುವೆ ಅಕಾಶ ಪಾತಾಳಗಳ ಅಂತರ ಕಾಣಬಹುದು!

ನಮ್ಮ ಕೇಂದ್ರ ಸರಕಾರ ಧೈರ್ಯದಿಂದ ಈ ಯೋಜನೆಯನ್ನು ಅಧ್ಯಯನ ಮಾಡಬೇಕು; ಅರ್ಥಶಾಸ್ತ್ರಜ್ಞರ ಯೋಜನಾಪಟುಗಳ ಬುದ್ಧಿಗೆ ತುಸ ಚಾಲನೆ ಕೊಡಬೇಕು.

(ವಿಶೇಷಾಂಕಕ್ಕೆ ಬಂದುದು)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ತೇವಣಾತಿಗಳ ಮೇಲೆ ಪೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ತೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸವಿಾಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—೧.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
R. E. P. 834/1962 O. S. 34/61.
ಗೋಪಾಲಕೃಷ್ಣ ಉಪಾಧ್ಯ—ಅರ್ಜಿದಾರ.
ಮತ್ತು
1. ಪದ್ಮಾವತಿ ಸೆಟ್ತಿ, ಪಟೇಲ ನಾಗಪ್ಪ ಶೆಟ್ಟಿ ಪೆಂಡತಿ. —ಎದ್ರಿದು.
2 ಸೀತಾರಾಮ ಶೆಟ್ಟಿ. 3. ಲಕ್ಷ್ಮಿ ಸೆಟ್ತಿ.
4. ಕಸ್ತೂರಿ ಸೆಟ್ತಿ—1ನೇ ಎದ್ರಿಲ ಮಕ್ಕಳು.
ಕುಂದಾಪುರ ತಾಲ್ಲೂ ಬಳ್ಕೂರು ಗ್ರಾಮದಲ್ಲಿರುವವರು.
ಇವರಿಗೆ ತಿಳಿಯಪಡಿಸುವುದೇನೆಂದರೆ,
ಅರ್ಜಿದಾರನು ನಿಮ್ಮ ಮೇಲೆ ಪದವ ಈನಿನ ದಿಕ್ಕಿಯಲ್ಲಿ ಕಾಣುವ ನಿವ ಆಸ್ತಿಗಳನ್ನು ಮೇಲಿನ ಅಮ್ಮಜ್ಯಾರಿಯಲ್ಲಿ ಏಲಂನ್ಯಾಗೆ ಅಪೇಕ್ಷಿಸಿ, ಏಲಂನಿನ ಕರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 26.8.1963ಕ್ಕೆ ಇಡೋಣಾಗಿಯಿದೆ. ಆ ಕಾರಣ ನಿಮ್ಮ ಆಕ್ಷೇಪಣೆಗೆ ಕೇಸಾದರೂ ಇದ್ದಲ್ಲಿ ಸದ್ರಿ ದಿನದ ಈ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪಿಸಿಕೊಳ್ಳಬಹುದು ಎಂತ ತಿಳಿಯಪಡಿಸಿಯಿದೆ.
(ಕೋರ್ಟಿನ ಹುಕುಂ ಪ್ರಕಾರ)
(Sd) A. V. N. Hebbar.
Vakil for petitioner.
Coondapoor, Date 9—8—1963

ಕಮ್ಯುನಿಸ್ಟ್ ಕತ್ತರಿಯಲ್ಲಿ ಇಸ್ಲಾಂ

ಬಂಗಾಲ, ಅಸ್ಸಾಂ, ತ್ರಿಪುರ, ಮಣಿಪುರ ಮುಂತಾದ ಗಡಿ ಪ್ರಾಂತ್ಯಗಳೊಳಗೆ ಪಾಕಿಸ್ತಾನಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದು ಸಮಸ್ಯೆಗಳನ್ನೇ ತಂದೊಡ್ಡಿರುವದು ದೈನಂದಿನ ಸಮಾಚಾರವಾಗಿ ಬಿಟ್ಟಿರುತ್ತದೆ. ಹಾಗಿದ್ದರೂ ಪಾಕಿಸ್ತಾನದ ಸರ್ವಾಧಿಕಾರಿ ಅಯೂಬಖಾನರು ಭಾರತದೇ ಇಲ್ಲಿರುವ ಇಸ್ಲಾಂ ಮತಾನುಯಾಯಿಗಳನ್ನು ಬಲಾತ್ಕಾರದಿಂದ ಪಾಕಿಸ್ತಾನಕ್ಕೆ ಓಡಿಸುತ್ತಿದೆಂದು ಅಪಪ್ರಚಾರ ಮಾಡುತ್ತಿದ್ದಾರೆ. ಅವರಿಗೆ ಪಕ್ಕಬಲವಾಗಿ ಈಗ ಚೈನಿ ಕಮ್ಯೂನಿಸ್ಟರು ಆ ವಾದಕ್ಕೆ ಒಗ್ಗರಣೆ ಕೊಡುತ್ತಿದ್ದಾರೆ. ಪಾಶ್ಚಾತ್ಯ ರಾಷ್ಟ್ರದಲ್ಲಿ ಕ್ರಿಶ್ಚಿಯನ್ ಕೇಲರಳೊಂದಿಗೆ ಜಲ ಕ್ರೀಡೆಯಾಡಿರುವ ಅಯೂಬ ಪೌರ್ವಾತ್ಯ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಸೈದ್ಧಾಂತಿಕ ಸ್ಪ್ರೀಯೊಡನೆ ಸರಸ ಸಲ್ಲಾಪವಾಡಿರುವರು. ಇದರಲ್ಲಿ ಜಯ ಯಾರಿಗೆ? ಮೂವತ್ತಿಗೋ-ಅಯೂಬಗೋ? ಅಯೂಬಖಾನರು ಅವಸರ ಅವಸರವಾಗಿ ಚೈನಿ ಕಮ್ಯೂನಿಸ್ಟರೊಂದಿಗೆ ಅನೇಕ ತರದ ಒಪ್ಪಂದಗಳನ್ನು ಮಾಡಿತೊಂಡಿದ್ದು ಅಮೇರಿಕವ ಆಂತರಾಳವನ್ನೇ ಅಲುಗಾಡಿಸಿ ಬಿಟ್ಟಿದ್ದಾರೆ. ಅಧಿಕವಾಗಿ ಅವರೀಗ ಚೈನಾದೊಂದಿಗೆ ಜೆಲ್ಲಾಟವಾಡುತ್ತಿರುವದು ಅಮೇರಿಕಕ್ಕೆ ತಲೆ ನೋವಾಗಿರುತ್ತದೆ. ಚೈನಾವು ಒಂದೆಡೆಯಿಂದ ಭಾರತೀಯರ ಕುತ್ತಿಗೆಗೆ ಕುಡುಗೋಲನ್ನಿಡುವಂತೆ ಇನ್ನೊಂದೆಡೆಯಿಂದ ಪಾಕಿಸ್ತಾನವು ಅರ್ಧ ಚಂದ್ರ ಪ್ರಯೋಗ ಮಾಡಲು ಅಸ್ಸಾಮಿನಲ್ಲಿ ಆಸಂಖ್ಯವರಿರ್ದ್ದದ್ದು ತಪ್ಪಿ ಹೋಯ್ತು. ಭಾರತದ ಭೂಸ್ಪರ್ಶವನ್ನು ಚೈನಾಕ್ಕತ್ತು ಅಯೂಬ ಕಮ್ಯೂನಿಸ್ಟ್ ಸೈದ್ಧಾಂತಿಕ ಸ್ಪ್ರೀಯೊಡನೆ ಸರಸ ಸಲ್ಲಾಪವನ್ನಾಡಿರುವರು. ಇತ್ತ ಭಾರತದ ಮೇಲೆ ಸುಮ್ಮಸುಮ್ಮನೆ ಆರೋಪಗಳನ್ನು ಹೊರಿಸುತ್ತಿದ್ದಾರೆ.

ಮಹಮ್ಮದೀಯರಿಸಮಿಗೂ ಕಮ್ಯೂನಿಸಮಿಗೂ ತಾತ್ವಿಕ ಸಮಾನತೆ ಇದ್ದರೂ ಕಮ್ಯೂನಿಸ್ಟರಿಗೆ ಮತ್ತ, ನೇವಂಲ್ಲಿ ನಂಬಿಕೆ ಇರುವದಿಲ್ಲ. ಹೀಗಿರುವಾಗ ಪಾಕಿಸ್ತಾನ-ಚೈನಾಗಳ ನಡುವಣ ಮೈತ್ರಿ ಬಹಳ ಕಾಲ ಬಾಳೀತೇ? ಅದನ್ನು ನಿಶ್ಚಯಿಸಬೇಕಾದಲ್ಲಿ ಚೈನಾದಲ್ಲಿಂದು ಮುಸಲ್ಮಾನರು ಹೇಗೆ ಜೀನ ಹಿಡಿದುಕೊಂಡಿದ್ದಾರೆ, ದಿನಗಳೆಯುತ್ತಿದ್ದಾರೆನ್ನುವದನ್ನು ನೋಡಬೇಕು. ಅದಕ್ಕಾಗಿ ಇಲ್ಲಿ ಶ್ರೀ ರಾಜದಾನರವರು ಚೈನಾದ ಪತ್ರಿಕೆಗಳಿಂದಲೇ ಸಂಗ್ರಹಿಸಿರುವ ಕೆಲ ವಿಷಯಗಳನ್ನು ಕೊಡಲಾಗಿರುತ್ತದೆ.

ಕಮ್ಯೂನಿಸ್ಟರು ಚೈನಾದ ಅಧಿಕಾರ ಗದ್ದುಗೆಯನ್ನು ವಶಪಡಿಸಿಕೊಂಡೆಂದಿನಿಂದ ಅವರು 'ಮತಭೇಧ ರಹಿತ ರಾಷ್ಟ್ರದ ಹೆಸರಿನಲ್ಲಿ ಮತಗಳ ನಿರ್ಮೂಲನದ ಕಾರ್ಯದಲ್ಲಿ ಮುಂದಾಗಿದ್ದಾರೆ—ಆ ಕಾರ್ಯ ಕ್ರಮಶಃ ಫಲಿಯುತ್ತಿದೆ. ಆದರೆ ಚೈನಾದ ಧೋರಣೆ ಎಂದೂ ನೇರವಾಗಿರುವದಿಲ್ಲ. ಅದು ಮಾತಿನಲ್ಲಾಡುವದನ್ನು ಕಾರ್ಯದಲ್ಲಿ ನಡೆಸುವದಿಲ್ಲ, ಹಾಗೆಯೇ ಮಾಡಬೇಕಾಗಿರುವದನ್ನು ಬಾಯಿಯಲ್ಲಿ ಹೇಳುವದೂ ಇಲ್ಲ. ಪ್ರಜೆಯು ಇಷ್ಟಬಂದ ಮತವನ್ನು ಅನುಸರಿಸಬಹುದೆಂದು ಕಮ್ಯೂನಿಸ್ಟ್ ಸರಕಾರ ಹೇಳಿಕೊಂಡು ಬರುತ್ತಿದೆ. ಮತಾಚರಣೆಗೆ ಪೂರ್ಣ ಸ್ವಾತಂತ್ರ್ಯವಿದೆಯೆಂದು ಅನರಾಡುತ್ತಿದ್ದಾರೆ. ಆದರೆ ವಾಸ್ತವಿಕವಾಗಿ ನಡೆಯುವದಾದರೂ ಏನು? ಯಾರಾದರೂ ಒಬ್ಬನು ಉತ್ತಮ ಮತಾಭಿಮಾನಿ ಇದ್ದಾನೆಂದಾದಲ್ಲಿ ಒಡನೆ ಅವನ ಹೆಸರು ಸರಕಾರದ ಗಮನಕ್ಕೆ ಬರುತ್ತದೆ. ಕ್ರಮಕ್ರಃ ಅವನ ಸಲುಗೆಗಳಿಗೆ ಸುತ್ತಿಗೆಯ ಪೆಟ್ಟು ಬೀಳುತ್ತದೆ—ಧನುನ ಚಕ್ರ ಅವನ ಮೇಲೆ ಧಾವಿಸುತ್ತದೆ. ಆಗಲೂ ಅವನು ಕಮ್ಯೂನಿಸ್ಟ್ ದಾರಿಗೆ ಬರದೆ ಇದ್ದಲ್ಲಿ ತೀವ್ರ ಕ್ರಮ ಕೈಗೊಳ್ಳಲಾಗುತ್ತದೆ. ಮತಾಭಿಮಾನಿಗಳನ್ನು ಪ್ರತಿಗಾಮಿಗಳೆಂದು, ಮುಂದಗಾಮಿಗಳೆಂದು ತೆರೆಯ ಹಿಂದುಗಡೆ ತಳ್ಳಿ ಬಿಡಲಾಗುತ್ತದೆ.

ಚೈನಾದಲ್ಲಿ ದೇವರ ಮೇಲಿರುವ ಅಥವಾ ಮತದ ಮೇಲಿರುವ ನಂಬಿಕೆಗೆ ನಯ ನುಡಿಯಲ್ಲಿ ಸ್ಥಳೀಯ ರಾಷ್ಟ್ರೀಯ ದಂಗೆ ಎನ್ನಲಾಗುತ್ತದೆ. ಸ್ಪಷ್ಟವಾಗಿ ಹೇಳುವದಿದ್ದಲ್ಲಿ ಮತದ ಮೇಲೆ ಯಾರಿಗಾದರೂ ಒಂದಿಷ್ಟು ಅಭಿಮಾನವಿದ್ದಲ್ಲಿ ಅವನನ್ನು ದೇಶದ ಶತ್ರುವೆಂದು ಪರಿಗಣಿಸಲಾಗುತ್ತದೆ. ಕಾಂಸುವಿನ ಗವರ್ನರನು ಮತದ ಮೇಲೆ ಮಮತೆ ಇರುವವರನ್ನು ದೇಶ ದ್ರೋಹಿಗಳೆಂದು ಕರೆದಿರುವನು.

ಚೈನಾದಲ್ಲಿ ಕಮ್ಯೂನಿಸ್ಟ್ ಆಡಳಿತ ಆರಂಭವಾದಂದಿನಿಂದ ಇಂದಿನ ವರೆಗೂ ಒಂದೇ ಒಂದು ಮಸೀದಿ ಕಟ್ಟಲು ಅನುಮತಿ ಸಿಕ್ಕಿರುವದಿಲ್ಲ. ಇಸ್ಲಾಂ ಮತೀಯ ವಿದ್ಯಾಭ್ಯಾಸ ಸಂಸ್ಥೆಗೆ ಇದ್ದ ಅಸ್ತಿಪಾಸ್ತಿಗಳನ್ನು ಕೃಷಿಯ ಹೆಸರಿನಲ್ಲಿ ಕಮ್ಯೂನಿಸ್ಟ್ ಸರಕಾರವು ಮುಟ್ಟುಗೋಲು ಹಾಕಿರುತ್ತದೆ. ದೂರ ಪೂರ್ವ ವಿಮರ್ಶೆ (ಫಾರ್ ಈಸ್ಟರ್ನ್ ರಿವ್ಯೂ) ಪತ್ರಿಕೆಯು ೧೯೪-೬೧ರ ಸಂಚಿಕೆಯಲ್ಲಿ ಈ ರೀತಿ ಪ್ರಕಟಿಸಿರುತ್ತದೆ:—

"ಚೈನಾದಲ್ಲಿ ಸರಕಾರವು ಇಸ್ಲಾಮಿನ ಮೇಲೆ ಹೊಸ ರೀತಿಯ 'ಜೆಹಾದ್' ಆರಂಭಿಸಿರುತ್ತದೆ. ಆಡಳಿತ ಯಂತ್ರವು ಮಸೀದಿಯ ಚರಾಚರ ಸೊತ್ತುಗಳನ್ನು ಸೆಳೆದುಕೊಂಡಿರುತ್ತದೆ. 'ರೋಜಾ' ಉಪವಾಸ ಮತೀಯ ಉಸವಾಸವನ್ನು ಉತ್ಪಾದನೆಯ ಹೆಸರಿನಲ್ಲಿ ಕಡಿಯಲಾಗಿರುತ್ತದೆ. ರಮ್‌ಜಾನ್ ನಂತರ ಮುಸಲ್ಮಾನರು ಕೊಡುವ ಪ್ರಾಣಿಬಲಿಯನ್ನು ನಿಷೇಧಿಸಲಾಗಿರುತ್ತದೆ, ಮತ್ತು ಹಂದಿ ಮಾಂಸವನ್ನು ತಿನ್ನಲವರನ್ನು ಬಲಾತ್ಕರಿಸಲಾಗುತ್ತದೆ. ಮುಸ್ಲಿಂ ವಿದ್ಯಾರ್ಥಿಗಳು ಅರೇಬಿಕ್ ಕಲಿಯುವದನ್ನು ನಿಷ್ಕಲಗಿರುತ್ತದೆ."

ಈ ರೀತಿಯ ದನುನ ಕಾರ್ಯವು ಅಲ್ಲಿಯ ಮುಸಲ್ಮಾನರಲ್ಲಿ ತೀವ್ರ ಅಸಮಾಧಾನವನ್ನುಂಟು ಮಾಡಿರುತ್ತದೆ. ತಮ್ಮ ಬಾಲ ಬಿಚ್ಚಲು ಅವರು ಅನೇಕ ಬಾರಿ ಪ್ರಯತ್ನಿಸಿರುವರಾದರೂ ಅಷ್ಟು ಬಾರಿಯೂ ಅವರ ಬಾಲವನ್ನು ಬುಡಸಹಿತ ಕಮ್ಯೂನಿಸ್ಟರು ಕಡಿದೊಗೆದಿರುವರು."

'ಚೆ ಯಾಂಗ್' ದೈನಿಕ'ವು ತನ್ನ ೧೭-೧೦-೫೫ರ ಸಂಚಿಕೆಯಲ್ಲಿ ಈ ರೀತಿ ಪ್ರಕಟಿಸಿರುತ್ತದೆ: ಕೇವಲ ಮತೀಯ ಆಚರಣೆಯಲ್ಲಿ ನಡೆಸಿದ್ದಕ್ಕಾಗಿ ಪ್ರತಿಗಾಮಿ ಕಾರ್ಯಚರಣೆಯ ಹೆಸರಿನಲ್ಲಿ ಯಾಂಗ್ ಪಾ-ಜೊಂಗ್ ಎಂಬ ಮುಸಲ್ಮಾನನಿಗೆ ದಂಡನೆ ಕೊಡಲಾಗಿರುತ್ತದೆ. ಕಟ್ಲೆಯ ಕಥೆ ಸ್ವಾರಸ್ಯಕರವಾಗಿದೆ! ಅವನು ದೊಡ್ಡ ಸೇನೆಯನ್ನು ಸಿದ್ಧಗೊಳಿಸಿ ಪ್ರಬಲಿತ ಸರಕಾರವನ್ನು ಬೀಳಿಸಲು ಪ್ರಯತ್ನಿಸಿದನು! ಒಡನೆ ಚಿಯೂಂಗ್‌ನಲ್ಲಿದ್ದ ಮಹಮ್ಮದೀಯ ಮುಂದಾಳುಗಳನ್ನು ಹಿಡಿದು ಶಿಕ್ಷಿಸಲಾರಂಭವಾಯಿತು. ಚಿಯೂಂಗಿನ ಕೇಂದ್ರ ಮಸೀದಿಯನ್ನು ಅಪವಿತ್ರಗೊಳಿಸಲಾಯಿತು, ಮತ್ತು ಅಲ್ಲಿ ಮುಸ್ಲಿಂ ವಿರೋಧಿ ವ್ಯಂಗ್ಯಚಿತ್ರಗಳನ್ನು ತೂಗುಹಾಕಲಾಯಿತು. ಪ್ರತಿಗಾಮಿಗಳನ್ನು ಅಂದರೆ ಇಸ್ಲಾಮಿನ ಮೇಲೆ ನಂಬಿಕೆ ಇರುವವರನ್ನು ಸದೆ ಬಡಿಯಿರೆಂಬ ವಿನಂತಿಗಳನ್ನು ಅಲ್ಲಿ ಹೆಚ್ಚಲಾಯಿತು."

ಅದೇ ಪತ್ರಿಕೆಯು ೧೪—೧೧—೫೫ರ ಸಂಚಿಕೆಯಲ್ಲಿ ಈ ರೀತಿ ಪ್ರಕಟಿಸಿತು: ಚಿಯೂಂಗಿನ ಕೇಂದ್ರ ಮಸೀದಿಯಲ್ಲಿ ೩೦,೦೦೦ ಪ್ರಕಟಣಾ ಪತ್ರಿಕೆಗಳ ಪ್ರತಿಗಳನ್ನು ತಾಗಿಸಲಾಗಿದುತ್ತದೆ.

ಇದರಿಂದ ಕಮ್ಯೂನಿಸ್ಟರು ಇಸ್ಲಾಮಿನ ಬುಡಸಹಿತ ನಾಶಮಾಡಲು ಹೇಗೆ ಕಾರ್ಯ ಪ್ರವೃತ್ತರಾಗಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಸಿಂಕಿಯೂಂಗಿನಲ್ಲಿ ಶೇಕಡಾ ೯೫ ಜನರು ಮುಸಲ್ಮಾನರಿದ್ದರು. ಆ ಪ್ರದೇಶದ ಮುಸಲ್ಮಾನರು ಸ್ಥಳೀಯ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿರುವರೆಂದೂ, ಅವರು ತೀವ್ರ ಆರೋಪಗಳನ್ನೆದುರಿಸಬೇಕಾಗುತ್ತದೆಂದೂ ಚೈನಾದ 'ದೈನಿಕ ಜನತಾ' ವು (ಪೀಪಲ್ಸ್ ಡೆಯಿಲಿ) ತನ್ನ ೨೭—೬—೫೫ರ ಸಂಚಿಕೆಯಲ್ಲಿ ಸೂಚಿಸಿತು. ಅವರಿಗೆ ಕರಿಣ ಶಿಕ್ಷೆ ಕೊಡಲಾಗುತ್ತದೆಂದೂ ಆ ಪತ್ರಿಕೆ ಮುನ್ಸೆಚ್ಚರಿಕೆ ಇಟ್ಟಿದೆ.

ಇಂದಿನ ಚೈನಿ ಕಮ್ಯೂನಿಸ್ಟ್ ಧುರೀಣರ ಧೃಡಯೋಜನೆಯೂದರೋ ಕ್ರಮಶಃ ಅಲ್ಪ ಸಂಖ್ಯಾಕ ಮುಸಲ್ಮಾನ ಜಾತಿಯ ನಿರ್ಮೂಲನ ಗೊಳಿಸುವದಿದೆ. ಅಲ್ಲಿ ಕಮ್ಯೂನಿಸ್ಟ್ ಚೈನಿ ಜನತೆಯಲ್ಲದೆ ಪ್ರತ್ಯೇಕ ಮುಸಲ್ಮಾನರಿರ ಕೂಡದೆಂಬುದೇ ಅವರ ಆಲೋಚನೆ. ಅದನ್ನೇ ಅಲ್ಲಿಯ ಸಾಂಸ್ಕೃತಿಕ ಸಂಘದ ಉಪ-ಅಧ್ಯಕ್ಷ ಸಂಗ್ ಟಂಗ್ ಸ್ಪಷ್ಟವಾಗಿ ಸೂಚಿಸಿರುವನು. ತನ್ನ ಸಾಂಸ್ಕೃತಿಕ ಸಂಘದ ಉದ್ದೇಶವಾದರೋ ಮುಸ್ಲಿಂ ಸಂಸ್ಕೃತಿಯನ್ನು ಜೀರ್ಣಿಸಿಕೊಂಡು ಬಿಟ್ಟು, ಪ್ರತ್ಯೇಕ ಇಸ್ಲಾಂ ಸಂಸ್ಕೃತಿಯ ಸಮೂಲ ನಾಶಗೈದು, ಚೈನಿ ಕಮ್ಯೂನಿಸ್ಟ್ 'ನಾಗರೀಕತೆ'ಯನ್ನು ಹಬ್ಬಿಸುವದೇ ಇದೆ. ಹೀಗೆ ಕ್ರಮಶಃ ಮುಸ್ಲಿಂ ಕಲಾಚಾರ ಅಲ್ಲಿ ಮೂಲ ಸಹಿತ ನಾಶವಾಗುತ್ತಿದೆ.

ಇದು ಶ್ರೀ ರಾಜದಾನರು ಸಂಗ್ರಹಿಸಿರುವ ವಿಷಯವಿದೆ. ಆದರೆ ಅಷ್ಟರಿಂದಲೇ ಅಯೂಬ ಅಧೈರ್ಯ ಪಡುವವರಲ್ಲ. ಅವರಿಗೆ ಇತ್ತೀಚೆಗೆ ನಡೆದಿರುವ ಒಂದು ಘಟನೆ ಪ್ರೋತ್ಸಾಹ ಕೊಡುತ್ತಿರಬಹುದು. ಆ ಘಟನೆ ನಡೆದದ್ದು ಕಮ್ಯೂನಿಸ್ಟರ 'ಸ್ವರ್ಗ' ರಷ್ಯಾದಲ್ಲಿ.

ಭಾರತ ಮತ್ತು ಆಫಘಾನಿಸ್ತಾನ ಗಡಿಗಳ ಸಮೀಪ ತಾಜ್ಕಿ ಸ್ತಾನ ಇದೆ. ಇದು ರಷ್ಯಾದ ಒಂದು 'ಪ್ರಾಂತ್ಯ' ಇದೆ. ಅಲ್ಲಿಯ 'ತರುಣ ಕಮ್ಯೂನಿಸ್ಟ್ ಲೀಗಿನ ಸದಸ್ಯನೊಬ್ಬನ ಹೆಂಡತಿಯ ಆರೋಗ್ಯ ಕೆಟ್ಟಿತ್ತು. ಅವನು ಭಾರತದ ಕಮ್ಯೂನಿಸ್ಟರಂತೆ ಹೆಂಡತಿಯನ್ನು ಔಷಧಿಗಾಗಿ ಹಾಗೂ ಶುಶ್ರೂಷೆಗಾಗಿ ಮೋಸ್ಕೋವಿಗೆ ಕೊಂಡು ಹೋಗಲಿಲ್ಲ. ಆಕೆಗೆ ಪಿಶಾಚಿ ಹಿಡಿದಿದೆ ಎಂದು ಅಲ್ಲಿಯವರು ಹೇಳಲಾರಂಭಿಸಿದರು. ಕಮ್ಯೂನಿಸ್ಟರಿಗೆ ಇತರ ಪಿಶಾಚಿಗಳಲ್ಲಿ ನಂಬಿಕೆ ಇರುವದಿಲ್ಲವಾದರೂ ಆ ಸದಸ್ಯನು ಅದು ಹೇಗೂ ನಂಬಲೇಬೇಕಾಯಿತು. ಅವನು ತಾನೇ ಆನುಭವಿಸಿದವನು! ಅವನು ರಹಸ್ಯವಾಗಿ ಓರ್ವ ಮುಸ್ಲಿಂ ಮುಲ್ಲಾನಲ್ಲಿ ತನ್ನ ಕಷ್ಟವನ್ನು ಹೇಳಿಕೊಂಡನು. ಬಹುಶಃ ಅವನಿಗೆ ಮದ್ರಾಸ್ ಕಮ್ಯೂನಿಸ್ಟರ ಗಾಳಿ ತಾಗಿರಬಹುದು. ಮದರಾಸು ಕಮ್ಯೂನಿಸ್ಟ್ ಗಂಡಸರು ಹೊರಗೆ ಗಡಬಡಿಸುತ್ತಿರುವಾಗಲೇ ಮನೆಯೊಳಕೆ ಸೌಖ್ಯವಿಲ್ಲದ ಮಕ್ಕಳನ್ನು ಕಳೆದುಕೊಂಡು, ಒಂದಿಷ್ಟು ಕಹಿಬೇವಿನೆಲೆಯನ್ನು ತೆಗೆದುಕೊಂಡು, ಮಸೀದಿಯ ಮುಂದುಗಡೆ ತಾಲಿನಲ್ಲಿ ನಿಂತಿರುತ್ತಾಳೆ. ಪ್ರಾರ್ಥನೆ ಮುಗಿದ ಮೇಲೆ ಮುಲ್ಲಾ ಹೊರಗೆ ಬಂದು ಮಕ್ಕಳ ಮೇಲೆ ಉಗುಳುತ್ತ ಕಹಿಬೇವಿನೆಲೆಯಿಂದ ಹೊಡೆಯುತ್ತಾನೆ..ಆ ತರುಣನು ಇಲ್ಲಿಂದ ಹೋಗಿ ಅಲ್ಲಿ ನೆಲಸಿರಬಹುದೆನ್ನುವದು ಸರಿಯಲ್ಲ. ಸದಸ್ಯನ ವಿನಂತಿಯ ಮೇರೆಗೆ ರಹಸ್ಯವಾಗಿ ಮುಲ್ಲಾ ಅವನ ಮನೆಗೆ ದಯಮಾಡಿಸಿದನು. ಅವನು ರಹಸ್ಯವಾಗಿಯೇ ಸದಸ್ಯನ ಸ್ತ್ರೀಯೊಡನೆ ಸ್ವಲ್ಪ ಸಮಯ ಏಕಾಂತದಲ್ಲಿ ಕಳೆದನು. ತನ್ನ ಕೆಲಸ ಮುಗಿದ ಮೇಲೆ ಅವನು ಹೊರಗೆ ಬಂದು ಸದಸ್ಯನ ಬಳಿ ತಾನು ಕಂಡುಹಿಡಿದಿರುವ ಉಪಾಯವನ್ನು ಸೂಚಿಸಿದನು. ಆಳೆಯನ್ನು ಪಿಶಾಚಿ ಬಿಡಬೇಕಾದರೆ ಅವರು ವಿವಾಹವಿಚ್ಛೇದನ ಮಾಡಿಕೊಳ್ಳಬೇಕೆಂದು ಸುಲಭವಾಗಿ ಸೂಚಿಸಿದನು. ಪಿ

(ಇನ್ನೇ ಪುಟ ನೋಡಿರಿ.)

ಸುಲಭದಲ್ಲಿ ಉಳಿತಾಯ.....

ಕೊರ್ಪೊರೇಶನ್ ಬೇಂಕ್

ಜನತಾ ಡಿಪೊಜಿಟ್ ಯೋಜನೆಯು

ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ.

ವಿವರಗಳಿಗಾಗಿ ಇಂದೇ ವಿಚಾರಿಸಿರಿ:

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಪ್ರಜಾರಾಜ್ಯದಲ್ಲಿ ಪ್ರತಿನಿಧಿಪ್ರಭುತ್ವ

ಪ್ರಜಾಪ್ರಭುತ್ವ

ನಾನು ದಾಸನಾಗಿರಲು ಯಾವ ರೀತಿ ಒಪ್ಪಲಾರೆನೋ, ಹಾಗೆಯೇ ಪ್ರಭುವಾಗಿರಲೂ ಒಪ್ಪಲಾರೆ—ಇದೇ ನಿಜವಾದ ಪ್ರಜಾಪ್ರಭುತ್ವವೆಂದು ನನ್ನ ಅಭಿಪ್ರಾಯ.

—ಅಬ್ರಹಾಂ ಲಿಂಕನ್.

ಅಬ್ರಹಾಂ ಲಿಂಕನನ ಈ ಅಮರ ವಾಣಿಯು ನಿಶ್ಯಸತ್ಯವಾಗಿ, ನೈತಿಕವಾಗಿ ಮತ್ತು ವ್ಯಾವಹಾರಿಕವಾಗಿ ಒಂದು ರಾಷ್ಟ್ರೀಯ ರಾಜಕೀಯ ಧ್ಯೇಯ ಧೋರಣೆಯು ನಡೆದುಕೊಂಡು ಬಂದಲ್ಲಿ ಅದು ಯಶಸ್ವೀ ಪ್ರಜಾಪ್ರಭುತ್ವ ರಾಷ್ಟ್ರವೆಂದು ನಿರ್ಭಿತವಾಗಿ ಹೇಳಬಹುದು.

ಪ್ರಜಾಪ್ರಭುತ್ವದಲ್ಲಿ ಪ್ರಜಾಭಿಮತಕ್ಕೆ ಪ್ರಥಮ ಮನ್ನಣೆಯೂ, ಪ್ರಜಾಭಿಮತದ ಬಹುಮತಕ್ಕನುವರ್ತಿಯಾಗಿಯೇ ಆಡಳಿತ ಸೂತ್ರವೂ ಇರುತ್ತದೆ. ಪ್ರಾಜಾಹಿತಾನುಗುಣ ರೀತಿ ಯಾವುದೇ ಕಾನೂನು ರಾಯಿದೆ, ಧ್ಯೇಯ ಧೋರಣೆಗಳು ಕಾರ್ಯರೂಪಕ್ಕೆ ಬರಬೇಕಾಗುವುದು. ಪ್ರಜಾ ಸತ್ತೆಯಲ್ಲಿ ಆಡಳಿತದ ಅಧಿಕಾರಕ್ಕೆ ಬಂದ ನಾಯಕನೇ ಪ್ರಭುವಾದರೂ ಆತ ಸಾರ್ವಭೌಮಾಧಿಕಾರಿಯಾಗಿರುವುದಿಲ್ಲ! ಇಲ್ಲಿ ಏಕಮತವು ಮಾನ್ಯವಲ್ಲ—ಬಹುಮತಕ್ಕೆ ಮಾನ್ಯತೆ.

ಪ್ರಜಾರಾಜ್ಯದಲ್ಲಿ ಪ್ರತಿನಿಧಿಯೇ ಪ್ರಭುವಾದರೂ ಇಲ್ಲಿ ಆಳುವವ ಮತ್ತು ಆಳಲ್ಪಡುವವರೊಳಗಿನ ಭೇದ ಮತ್ತು ತಾರತಮ್ಯ ತೀರಾ ಅಲ್ಪ. ಆಳುವವ ಮತ್ತು ಆಳಲ್ಪಡುವವರೊಳಗೆ ಮಧುರ ಬಾಂಧವ್ಯ, ನಿಕಟ ಸಂಪರ್ಕ, ಪರಸ್ಪರ ಹೊಂದಾಣಿಕೆ, ಪ್ರೀತಿ ವಿಶ್ವಾಸ ಕೂಡಿಕೊಂಡಿದ್ದರೆನೇ ಪ್ರತಿನಿಧಿ ಪ್ರಭುವಾಗಿ ಇರಬಲ್ಲ. ಇಲ್ಲವಾದರೆ ಇಂದು ಪ್ರಭುವಾಗಿದ್ದವನು ನಾಳೆ ಸಾಮಾನ್ಯ ಪ್ರಜೆಯಾಗಿ ಉಳಿಯಬೇಕಾಗುವುದು! ಇವರೊಳಗೆ ತಾನು ಹೆಚ್ಚು, ಆಪ ಕಡಿಮೆ ಎಂಬ ತಾರತಮ್ಯ, ಮೇಲು ಕೀಳು ಎಂಬ ಭಿನ್ನತೆ ಇರಲೇಬಾರದು—

ಪ್ರಜಾಸತ್ತೆ ಎಂದರೆ 'ನಾನು ನಿನಗೇನು ಕಮ್ಮಿ?' ಎಂಬುದಾಗಿರದೆ, "ನೀನು ನನಗೇನೂ ಕಮ್ಮಿ"?ಎಂಬುದಾಗಿದೆ. ಪಾರ್ಕರ್ ಹೇಳಿದ ಈ ನೀತಿ ವಾಕ್ಯದಂತೆ ಪ್ರಜೆಯೂ ಪ್ರಭುವೂ ಹೊಂದಿ ಒಂದಾಗಿದ್ದರೆ ಮಾತ್ರ ಪ್ರಜಾಪ್ರಭುತ್ವವು ಪರಿಪೂರ್ಣವೆನಿಸುವುದು. ಮತ್ತು ಬಾಳುವುದು ಮತ್ತು ಬೆಳೆಯುತ್ತದೆ.

ಜನತೆಯ ಬೆಂಬಲವನ್ನು ಪಡೆದು ಅಧಿಕಾರೀ ಪಟ್ಟವನ್ನೇರುವ ಪ್ರತಿನಿಧಿಯು ಮುಂದೆ ತಾನು ಸರ್ವಾಧಿಕಾರಿಯಾಗಿ ವರ್ತಿಸಿದರೆ ಪ್ರಜಾಪ್ರಭುತ್ವದ ಮೂಲ ಧ್ಯೇಯಕ್ಕೇ ಕೊಡಲಿ ಏಟು ಹಾಕಿದಂತಾಗುವುದು. ಪ್ರಜಾರಾಜ್ಯದಲ್ಲಿ ಬಡ ಬೋರೇ ಗೌಡನ ಹೇಳಿಕೆ, ಕೇಳಿಕೆಗಳಿಗೂ ಮನ್ನಣೆ ದೊರೆಯುವಂತಾಗಬೇಕು.

ಸರಕಾರವೆಂದರೇನು?

ದೇಶದಲ್ಲಿ ಅನ್ಯಾಯ-ಅತ್ಯಾಚಾರಗಳು ನಡೆಯದಂತೆ ನೋಡಿಕೊಂಡು, ಜನತೆಯ ಹಿತ ಸಾಧನೆ—ಅವರ ರಕ್ಷಣೆ ಮಾಡುವ ಒಂದು ಸುಭದ್ರ ಮತ್ತು ಸಬಲವಾದ ಸಂಸ್ಥೆಯೇ ಸರಕಾರ. ಯಾವ ನೊಬ್ಬ ಪ್ರಜೆಯೇ ಆಗಲಿ ಅವನು ರಾಗ ಭೋಗಾದಿ ಕೃತ್ಯತ್ತಿಯಿಂದಾಗಲೀ, ದ್ವೇಷ, ದುರಾಗ್ರಹ, ದುರ್ವ್ಯವಹಾರ, ದುಃಸ್ವಾಧರ್ಷ ಮತ್ತು ವಿಕಾರಮನೋಭಾವದಿಂದಾಗಲೀ ತಪ್ಪು ಮಾಡಿದರೆ ಅದನ್ನು ತಿದ್ದಿ ತಪ್ಪಿಸ್ಥರಿಗೆ ಸರಿಯಾದ ಶಿಕ್ಷೆಯನ್ನೂ ಅನ್ಯಾಯ ಹೊಂದಿದವರಿಗೆ ರಕ್ಷಣೆಯನ್ನೂ ನೀಡುವುದು ಸರಕಾರದ ಕೆಲಸ. ಪ್ರಜೆಗಳೆಲ್ಲರೂ ಪರಸ್ಪರ ಸೌಹಾರ್ದತೆಯಿಂದ ನಡೆದು ಯಾವ ಯಾವ ಸಮಯದಲ್ಲಿ, ಸಂದರ್ಭದಲ್ಲಿ ಹೇಗೆ ನಡೆಯಬೇಕು, ಹೇಗೆ ವ್ಯವಹರಿಸಬೇಕು? ಎಂಬೊಂದು ಆದರ್ಶವನ್ನು ಹಾಕಿ ಕೊಡುವುದು ಸರಕಾರದ ಕೆಲಸ. ಆ ಆದರ್ಶವನ್ನೇ ಅನುಸರಿಸಿ ನಡೆಯುವುದು ಪ್ರಜೆಗಳ ಕರ್ತವ್ಯ. ಸರಕಾರವೆಂಬುದು ಒಂದು ಘಟಕವಾದರೆ,ಪ್ರಜೆಗಳು ಇನ್ನೊಂದು ಘಟಕ. ಪ್ರಜಾಪ್ರಭುತ್ವದಲ್ಲಿ ಸರಕಾರ ಮತ್ತು ಪ್ರಜೆಗಳೆಂದರೆ ಒಂದೇ ನಾಣ್ಯದ ಎರಡು ಮುಖವಿದ್ದಂತೆ. ಸರಕಾರವೆಂದರೆ ಪ್ರಜೆ ಪ್ರಜೆಗಳೆಂದರೆ ಸರಕಾರ ಹೀಗಿರುವಾಗ, ಇಲ್ಲಿ ಪರ್ಯಾಯವಾಗಿ ಪ್ರಜೆಯೇ ಪ್ರಭುವಾಗಿ ಅಧಿಕಾರ ಸೂತ್ರವಹಿಸುವವನಾಗುವನು!

ಪ್ರಜೆಯೇ ಪ್ರಭು

ಪ್ರತಿಯೊಬ್ಬರೂ ಪಲ್ಲಕ್ಕಿಯಲ್ಲಿ ಕೂಡುವವರಾದರೆ ಪಾಲಕಿ ಹೊರುವವರು ಯಾರು? ಎಂಬಂತೆ ಪ್ರಜಾರಾಜ್ಯದಲ್ಲಿ ಪ್ರಜೆಗಳೆಲ್ಲರೂ ಪ್ರಭುವಾಗುವ ಹಕ್ಕು ಭಾದ್ಯತೆ, ಸಾಧ್ಯತೆ ಇರುವವರಾದರೂ ಎಲ್ಲರೂ ಅಧಿಕಾರ ಪಟ್ಟವೇರಲು ಸಾಧ್ಯವಾಗುವುದಿಲ್ಲ! ಆ ಕಾರಣದಿಂದಲೇ ನಾವು ಮತ ಕೊಟ್ಟು ನಮ್ಮ ಪರವಾಗಿ ಪ್ರತಿನಿಧಿಗಳನ್ನು ಆರಿಸುತ್ತೇವೆ. ರಾಜ್ಯಭಾರದ ಅಧಿಕಾರವನ್ನು ವಹಿಸಲು ಪ್ರಜೆಗಳೇ ತಮ್ಮ ಪ್ರತಿನಿಧಿಯನ್ನು ಆರಿಸಿ ಕಳುಹಿಸುತ್ತಾರೆ; ಎಂದಾಗ ಇಲ್ಲಿ ಪ್ರಜೆಯೇ ಪ್ರಭುವಾಗಿ ಅಧಿಕಾರಕ್ಕೆ ಬಂದಂತಾಗುವುದು.

ನಮ್ಮ ನಮ್ಮ ಕ್ಷೇತ್ರವನ್ನು, ನಮ್ಮ ನಮ್ಮ ಕೆಲಸವನ್ನು ಕರ್ತವ್ಯವನ್ನು ನಾವೇ ಸ್ವತಃ ಮಾಡಿದಾಗ ಆಗುವಷ್ಟು ಒಳಿತು ಇತರರುಮಾಡಿದರೆ ಆಗಲಾರದು; ಹೇಗೋ ಹಾಗೆಯೇ ಪ್ರಜಾಪ್ರಭುತ್ವವಾದೀ ಯಾವುದೇ ರಾಷ್ಟ್ರದಲ್ಲಿ ಪ್ರಜೆಯೇ ಪ್ರಭುವಾಗಿ ಆಡಳಿತ ನಡೆಸುವುದರಿಂದ, ಸಾರ್ವತ್ರಿಕವಾಗಿ ಸರ್ವತೋಮುಖವಾಗಿ ಆದೇಶ ಅಧಿಕವಾಗಿ ಸಾಮೂಹಿಕವಾಗಿ ಅಭಿವೃದ್ಧಿ ಹೊಂದುವುದೆಂಬುದರಲ್ಲಿ ಸಂಶಯವೇ ಇಲ್ಲ. ತನ್ನ ತನ್ನ ಯೋಗಕ್ಷೇಮಕ್ಕೆ, ಒಳಿತು ಕೆಡುಕಿಗೆ ಸಾಧಕ ಬಾಧಕಕ್ಕೆ ತಾನೇ ಬಾಧ್ಯನೆಂದು ತಿಳಿದ ಯಾವನೇ ವ್ಯಕ್ತಿ ಬಹು ಜಾಗರೂಕತೆಯಿಂದ ನಡೆಯುತ್ತಾನೆ. ತನ್ನ ವಿಚಾರ ವ್ಯವಹಾರದಲ್ಲಿ, ನೀತಿ ನಡತೆಯಲ್ಲಿ ಎಚ್ಚರಿಕೆಯಿಂದಿರುತ್ತಾನೆ. ಹಾಗೆ ಇರುವುದು ಅವಶ್ಯ ಕೂಡ. ಯಾಕೆಂದರೆ ತಾನು ತಪ್ಪಿ ನಡೆದಾಗ ಅದರ ಪರಿಣಾಮದಲ್ಲಾಗುವ ಕಷ್ಟ ನಷ್ಟಗಳಿಗೆ ಅತನೇ ಹೊಣೆಗಾರನಾಗಿ ಸುಖದುಃಖವನ್ನು ಅನುಭವಿಸಬೇಕಾಗುವುದು. ಒಂದು ಕುಟುಂಬದ ಪ್ರತಿನಿಧ್ಯವನ್ನು ವಹಿಸಿಕೊಂಡ ಯಜಮಾನನು ತುಂಬಿದ ಉನ್ನತಿ ಅವನತಿಯ ಪೂರ್ಣ ಜವಾಬ್ದಾರಿಯನ್ನು ವಹಿಸಿ ವ್ಯವಹರಿಸುವಂತೆಯೇ ಸ್ವಜಾಪ್ರತಿನಿಧಿಯು ನಾಡಿನ ಜನತೆಯ ಸರ್ವ ವ್ಯಾಪಕವಾದ ಉನ್ನತಿ ಅವನತಿಗೂ ಹೊಣೆಗಾರನಾಗುತ್ತಾನೆ!

ಪ್ರತಿನಿಧಿ ಸರ್ವಾಧಿಕಾರಿಯಲ್ಲ!

ಪ್ರಜಾಸತ್ತೆಯಲ್ಲಿ ಪ್ರಜಾಪ್ರತಿನಿಧಿಗಳೇ ಕೂಡಿ ರಾಜ್ಯಭಾರ ಮಾಡುವುದಾದರೂ, ಪ್ರತಿನಿಧಿಗೆ ಇಚ್ಛಾನುಸಾರ ವರ್ತಿಸುವ ಸರ್ವಾಧಿಕಾರವಿರುವುದಿಲ್ಲ! ಯಾವುದೇ ಕಾಯಿದೆ, ಕಾನೂನು, ಯೋಜನೆ, ಸುಧಾರಣೆ, ಕ್ರಮ, ನಿಯಮಗಳನ್ನು ಜಾರಿಗೊಳಿಸುವಾಗಲೂ ಬಹುಮತದ ಅಭಿಪ್ರಾಯದಂತೆಯೇ ಮಾಡಬೇಕಾಗುವುದು. ತಾನು ಒಪ್ಪಿದನ್ನು, ತಾನು ಮೆಚ್ಚಿದ್ದನ್ನು, ತಾನು ಅಪೇಕ್ಷಿಸಿದ್ದನ್ನು ಕಾರ್ಯಾಚರಣೆಗೆ ತರಲು ಪ್ರತಿನಿಧಿಗೆ ಸರ್ವಾಧಿಕಾರವನ್ನು ಉಪಯೋಗಿಸುವುದು ಸಾಧ್ಯವಲ್ಲದ ಮಾತು! ಪ್ರತಿಯೋರ್ವ ಪ್ರತಿನಿಧಿಯೂ ತನ್ನ ತನ್ನ ಮತದಾರ ಕ್ಷೇತ್ರದ ಹಿತವನ್ನು, ಅಭಿವೃದ್ಧಿಯನ್ನು ಸಾಧಿಸುವ ಜವಾಬ್ದಾರಿಯನ್ನರಿತುಕೊಂಡೇ ವ್ಯವಹರಿಸಬೇಕಾಗುವುದು. ಜನತೆಯು ಹೇಳಿಕೆ-ಕೇಳಿಕೆಗಳೇನು ಎಂಬುದನ್ನು ಅರಿತುಕೊಂಡೇ ಅತ ನಡೆಯಬೇಕಾಗುವುದು. ಒನ್ಮೆ ಜನಮತವನ್ನು ಗಳಿಸಿ ಚುನಾಯಿಸಲ್ಪಟ್ಟ ಮತ್ತೆ ತಾನು ಇಚ್ಛಾವರ್ತಿಯಾಗಿ ಸರ್ವಾಧಿಕಾರಿಯಂತೆ ನಡೆದರೂಗಲೀ ಜನತೆಯ ದೇಕು, ಬೇಡಿಕೆಗಳನ್ನು ನಿರ್ಲಕ್ಷಿಸಿದರಾಗಲೀ, ತನ್ನ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಲ್ಲಿ ತಾನು ಪ್ರತಿನಿಧಿಸದೆ ಇದ್ದರಾಗಲೀ, ಜನತೆ ಆತನನ್ನು ಮುಂದೆ ಅಧಿಕಾರದಲ್ಲಿರಗೊಡುವುದಿಲ್ಲ! ತಾನೇ ಕೊಟ್ಟ ಅಧಿಕಾರವನ್ನು ಕಿತ್ತುಕೊಳ್ಳುವುದು ಜನತೆಗೆ ಕಷ್ಟವೂ ಆಲ್ಲ! ಆದ್ದರಿಂದಲೇ ಪ್ರತಿನಿಧಿಯು ತಾನು ಜನತೆಯ ಸೇವಕನೆಂಬ ಭಾವನೆಯಿಂದ ದುಡಿಯಲು ಸಿದ್ಧನಿರಬೇಕು. ಪ್ರಜಾಹಿತವಾದ ಕೆಲಸವನ್ನು ಪ್ರತಿನಿಧಿಯು ತನ್ನ ಸ್ವಂತ ಕೆಲಸವೆಂದೇ ತಿಳಿದು ವ್ಯಾವೂಣೆಕತೆಯಿಂದ ನಿರ್ವಹಿಸಬೇಕು.

"ಜನಸಮೂಹವು ಯಾವ ದಿಕ್ಕಿನಲ್ಲಿ ಹೋಗುವುದೆಂಬುದನ್ನು ತಿಳಿದುಕೊಂಡು ಯಾವನು ಆದಕ್ಕಿಂತಲೂ ಮುಂದೆ ಮುಂದೆ ಆ ದಾರಿಯಲ್ಲಿ ಸಾಗುವನೋ ಅವನೇ ಯಶಸ್ವಿಯಾದ ರಾಜಕಾರಣಿಯೆಂತಾಗುತ್ತಾನೆ;" ಆದ್ದರಿಂದಲೇ ಪ್ರಜಾಮತಕ್ಕೆ ಹೊಂದಿಕೊಂಡೇ ಪ್ರತಿನಿಧಿ ಕಾರ್ಯ ಪ್ರವರ್ತನಾಗಬೇಕು

ತಮಗೆ ನ್ಯಾಯ ದೊರೆಯಬೇಕೆಂದು ಕೋರ್ಟ್‌ನಲ್ಲಿ ವಾದಿಸುವುದಕ್ಕೆ ತಿಳಿಯದೆ ಅಗಲೀ, ಅಥವಾ ಕೋರ್ಟಿಗೆ ಹೋಗುವುದಕ್ಕೆ ಬರುವುದಕ್ಕೆ ಅನುಕೂಲವಿರುವುದರಿಂದಾಗಲೀ, ವಾದಿ ಪ್ರತಿವಾದಿಗಳು ತಮ್ಮ ಪರವಾಗಿ ಆ ಕೆಲಸ ನಿರ್ವಹಿಸಲು ವಕೀಲರನ್ನು ನೇಮಿಸುತ್ತಾರೆ. ಆ ವಕೀಲರು ವ್ಯವಹರಿಸುವ ಕಾಯಭಾರನೆಲ್ಲ ತಾವು ನಡೆಸಿದಂತೆಯೇ ಆಗುತ್ತದೆ. ಕಾರಣ ಅವರು ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಕೆಲಸ ಮಾಡುತ್ತಾರೆ. ವಕೀಲರೂ ತಾನು ವಹಿಸಿಕೊಂಡ ಕಾರ್ಯವನ್ನು ಶ್ರದ್ಧೆಯಿಂದ ಮಾಡಿ ತನ್ನ ಕಕ್ಷಿಗಾರರಿಗೆ ಜಯ ದೊರಕಿಸಿಕೊಡಲು ಯತ್ನಿಸಬೇಕಾಗುವುದು. ಕೆಲಸ ಇನ್ನೊಬ್ಬರದಾದರೂ ತಾನು ವಹಿಸಿಕೊಂಡ ಮೇಲೆ ಆ ಜವಾಬ್ದಾರಿ ತನ್ನದೇ ಆಗುತ್ತದೆ—ಹಾಗೆಯೇ ಜನತಾ ಪ್ರತಿನಿಧಿಗಳೂ ಪ್ರಜಾಜನರ ಪೂರ್ಣ ಹೊಣೆ ಹೊತ್ತು ಕಾರ್ಯ ಸಾಧಿಸಬೇಕಾಗುವುದು. ತಮ್ಮ ಕಡೆಯ ವಕೀಲ ಏನಾದರೂ ವಂಚನೆಮಾಡಿ, ಅಥವಾ ತಾನು ವಹಿಸಿಕೊಂಡ ಕೆಲಸದಲ್ಲಿ ನಿರ್ಲಕ್ಷ್ಯನಾಗಿ ವರ್ತಿಸಿದನೆಂದರೆ, ಕಕ್ಷಿಗಾರನು ಮುಂದೆ ಬೇರೆ ವಕೀಲರನ್ನು ಹುಡುಕುತ್ತಾನೆ. ಪ್ರಜೆಗಳಿಗೆ ಸಮ್ಮತಿಯಿಲ್ಲದಂತೆ ಪ್ರತಿನಿಧಿ ಯಾವಾಗ ನಡೆದುಕೊಳ್ಳುತ್ತಾನೋ ಆಗ ಪ್ರಜೆಗಳು ಇವರ ಅಧಿಕಾರವನ್ನು ಕಿತ್ತು ಆ ಸ್ಥಾನಕ್ಕೆ ಬೇರೆ ಯೋಗ್ಯರಾದವರನ್ನು ಆರಿಸುತ್ತಾರೆ. ಬೇಕಾದಾಗ ಅಧಿಕಾರವನ್ನು ಕೊಡುವ ಮತ್ತು ಬೇಡಾದಾಗ ಕಿತ್ತುಕೊಳ್ಳುವ ಅನುಕೂಲ ಪ್ರಜಾಸತ್ತೆಯಲ್ಲಿ ಪ್ರಜೆಗಳಿಗೆ ಇದ್ದೇ ಇದೆ. ಹಾಗಿರುವಾಗ ಪ್ರತಿನಿಧಿಯು ಸರ್ವಾಧಿಕಾರಿಯಂತೆ ವರ್ತಿಸುವುದಾಗಲೀ ಸಾಧ್ಯವಿಲ್ಲ.

ಮತದಾರರ ಹೊಣೆ

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಹೇಳಿದೆಯಷ್ಟೆ! ಪ್ರಜಾರಾಜ್ಯವೆಂದರೆ ಪ್ರಜೆಗಳೇ ಆಡಳಿತ ಮಾಡುವುದೆಂದು ಅರ್ಥವಾದರೂ ಪ್ರಜೆಗಳೆಲ್ಲರೂ ಅಧಿಕಾರ ರೂಢರಾಗಿರುವುದಿಲ್ಲ! ಪ್ರತಿಯೊಬ್ಬರಿಗೂ ರಾಜ್ಯಭಾರದ ವಿಷಯದಲ್ಲಿ ತಕ್ಕ ದರಿಜ್ಞಾನ – ವ್ಯಾವಹಾರಿಕ ಆ

(ಉಳಿದ ಪುಟ ನೋಡಿ)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಅತ್ಯಂತ ಪ್ರಯೋಜನಕಾರಿ ಪುಸ್ತಕ—
ಮನೆ-ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ. ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರ್ಷ ೪೫	ಉಡುಪಿ ೨೨-೮-೧೯೬೩	ವಾರ ೪೯

ಅನಿತಿಗೊಂದು ನಿತಿ

ಉತ್ತರದ ನಡಿಯಲ್ಲಿ ಕೆಂಪು ಚೀನಿಯರು ತಮ್ಮ ಸೈನಿಕ ಕವಾಯತುಗಳನ್ನು ಭರದಿಂದ ಮಾಡುತ್ತಿರುವಂತೆಯೇ ಪೂರ್ವದ ಸೀಮೆಯಲ್ಲಿ ಪಾಕಿಸ್ತಾನವು ಅಮೆರಿಕೆಯಿಂದ ತರಿಸಿದ್ದ ಸೈನಿಕೋಪಕರಣಗಳೊಂದಿಗೆ ತನ್ನ ಪಡೆಯನ್ನೂ ನಿಲ್ಲಿಸಿದೆ. ಪೂರ್ವದ ಗಡಿ ನಿರ್ಣಯ ಸಂಬಂಧದಲ್ಲಿ ಭಾರತ ಮತ್ತು ಪಾಕ್ ಪ್ರತಿನಿಧಿಗಳು ಒಮ್ಮತಕ್ಕೆ ಬಂದಿರ.ವರೆಂಬುದನ್ನು ಪ್ರಸಾರ ಮಾಡುತ್ತಿರ.ವಂತೆಯೇ ವಿವಾದಗ್ರಸ್ತ ಲಡಿಖಲ್ಲಾದಲ್ಲಿ ಪಾಕಿಸ್ತಾನವು ಅನ್ಯಾಯವಾಗಿ ತನ್ನ ಧ್ವಜವನ್ನು ಪಾರಿಸಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿತು. ಕಿಮ್ಮನಿಸಿಲ್ಲ ಆಕ್ರಮಣದಿಂದ ಸ್ವರಕ್ಷಣೆಗೆಂದು ಅಮೆರಿಕೆಯು ನೀಡಿದ್ದ ಸೈನಿಕೋಪಕರಣಗಳನ್ನು ಭಾರತದ ವಿರುದ್ಧ ಪ್ರಯೋಗಿಸುವ ದುಸ್ಸಾಹಸವನ್ನೂ ಮಾಡುತ್ತಿದೆ. ಭಾರತದ ಬಗ್ಗೆ ಕೆಲವೊಬ್ಬಿಯನ್ನು ಹಾಕುತ್ತ ತನ್ನಲ್ಲಿ ಮೂತ್ರವಲ್ಲ; ವಿದೇಶಗಳಲ್ಲಿ ಕೂಡ ಭಾರತದ ಬಗೆಗೆ ದುರಭಿಪ್ರಾಯ ಹುಟ್ಟುವ ವೃಥಾಸಾಹಸವನ್ನೂ ಮಾಡುತ್ತಿದೆ. ಚೀನೀಯರು ಭಾರತದ ಗಡಿಯನ್ನು ಉಲ್ಲಂಘಿಸಿರುವುದಿಲ್ಲವೆಂದೂ ಅಲ್ಲಿ ನಡೆದಿರುವುದು ಸಣ್ಣ ಪುಟ್ಟ ಗಡಿ ಪ್ರಶ್ನೆಗಳೆಂದೂ ಇದರಿಂದಾಗಿ ದೇಶದಲ್ಲಿ ಹಾಹಾಕಾರವೇಳುವ ಅಗತ್ಯವಿಲ್ಲವೆಂದೂ ವಿದೇಶೀ ನೆರವನ್ನು ಹೇರಲೆ ಪ್ರಯೋಜನದಲ್ಲಿ ಪಡೆಯುವ ಕುತಂತ್ರ ಹೂಡಿ ಭಾರತವು ಇಲಿಯನ್ನಾ ಹುಲಿಯನ್ನಾಗಿಸುತ್ತಿದೆಯೆಂದೂ ಅದರ ಅಲಾಪನೆ. ನಮ್ಮ ಪಾಶ್ಚಾತ್ಯ ಮಿತ್ರ ರಾಷ್ಟ್ರಗಳು ನಮಗೆ ನೀಡುವ ಸೈನಿಕ ಸಹಾಯವು ತನ್ನ ಭದ್ರತೆಗೆ ಅಪಾಯಕಾರಿಯೆಂದೂ ಕಾಶ್ಮೀರ ಸಮಸ್ಯೆಯಲ್ಲಿ ತನಗೆ ಬೇಕಾದಂತೆ ನಿರ್ಣಯವಾಗದ ವರೆಗೆ ಯಾವ ನೆರವನ್ನಾದರೂ ಭಾರತಕ್ಕೆ ನೀಡಬಾರದು ಎಂದೂ ಅದರ ಆಕ್ರೋಶ.

ಆದರೆ, ಕಾಶ್ಮೀರದ ಸಂಬಂಧದಲ್ಲಿ ಪಾಕ್ ನೀತಿಯು ವ್ಯಾರಂಭದಲ್ಲಿಯೇ ತಪ್ಪಿಹೋಗಿದೆ; ಅದಿಂದೂ ಮತ್ತಷ್ಟು ವಕ್ರಪಥ ಹಿಡಿದಿದೆ. ಅದನ್ನು ಸರಿದಾರಿಗೆ ತರುವುದಕ್ಕೆ ಭಾರತವು ಎಷ್ಟೋ ಪ್ರಯತ್ನವನ್ನು ಮಾಡಿದರೂ ಅದರ ಫಾಲಿಗೆ ಯಶದೊರೆಯಲಿಲ್ಲ. ಮೊದಲಲ್ಲಿ ಭದ್ರತಾ ಸಮಿತಿಯ ಆದೇಶವನ್ನು ಮನ್ನಿಸದೆ ಜಗತ್ತಿಗೇನೇ ಅಪಮಾನ ಮಾಡಿದ ಪಾಕ್ ನಾಯಕರು ಜನಮತಗಣನೆಯೊಗ ಬೇಡೆಂಬ ಪಟ್ಟನ್ನು ಬಿಟ್ಟು ಕೊಡುವುದಿಲ್ಲ. ಕಾಶ್ಮೀರದ ರೂಕ್ಷತೆಯನ್ನು ವಿಭಜನೆಯ ಪೂರ್ವ ಮತ್ತು ತನ್ಮೂಲಕ ತನ್ನ ಸ್ವಾರ್ಥ ಸಾಧನೆ ಮಾಡುವುದು ಅದರ ಉದ್ದೇಶವಿತ್ತು. ಆದರೆ, ಭಾರತವು ಕೆಲವೊಂದು ಪ್ರಾದೇಶಿಕ ಹೊಂದಾಣಿಕೆಗಳನ್ನು ನೂಡಿ ಕೊಳ್ಳುವುದಕ್ಕೂ ಸಿದ್ಧವಾಗಿ ಕೊಡುಗೆಯನ್ನು ಮುಂದಿಟ್ಟಾಗ, ಅದನ್ನು ತಿರಸ್ಕರಿಸಿ ಸಿಂಹಪಾಲು ಬಯಸಿದುದು ಅದರ ದುರುದ್ದೇಶ ಮತ್ತು ಸ್ವಾರ್ಥಾಂಧತೆಯನ್ನು ಪ್ರದರ್ಶಿಸುತ್ತದೆ. ತನ್ನ ಜೀವನ ಮರಣದ ಪ್ರಶ್ನೆಯಿದು ಎಂದು ಉದ್ಘೋಷಿಸುವ ಪಾಕ್ ಅಧೀಶರು ತಮ್ಮೆ ಕುರುಡು ನೀತಿಯನ್ನೇ ಆಧರಿಸಿ ಮುಂದುವರಿಯುತ್ತಿದ್ದಾರೆ. ಇದನ್ನು ಪಾಶ್ಚಾತ್ಯ ಮಿತ್ರರೂ ಅರಿಯದವರಲ್ಲ. ಪಾಕ್ ಕೇಳಿಕೆಗಳು ನ್ಯಾಯಬಾಹಿರವಾದುವುಗಳೆಂದೂ ಅವನ್ನು ಯಾವ ಸ್ವಾಭಿಮಾನಿ ರಾಷ್ಟ್ರವೂ ಮನ್ನಿಸಲಾರದೆಂದೂ ಅವರು ನಿರ್ಧರಿಸಿದ್ದಾರೆ; ಹಾಗೆಂದೇ ಪಾಕ್ ಅಪಲಾಪಕ್ಕೆ ಕಿವಿಯೊಡ್ಡದೆ ಚೀನೀಯರ ಆಕ್ರಮಣದಿಂದ ಸ್ವದೇಶ ರಕ್ಷಣೆಗೆಂದು ಭಾರತಕ್ಕೆ ಸೈನಿಕ ಸಹಾಯ ನೀಡುವಲ್ಲಿ ಅವು ಉತ್ಸಾಹ ತೋರಿಸುತ್ತಿವೆ.

ಪಾಕಿಸ್ತಾನವು ಭಾರತಕ್ಕೆ ಬಗೆದ ದ್ರೋಹ ನೂಡಿದ ಅನ್ಯಾಯ ಒಂದೇ ಎರಡೆ? ದೇಶ-ವಿದೇಶಗಳಲ್ಲಿ ಭಾರತದ ಮೇಲೆ, ಅದರ ಜನನಾಯಕರ ಮೇಲೆ ವ್ಯರ್ಥ ದೋಷಣಾರೋಪಗಳನ್ನು ನಿರಾತಂಕವಾಗಿ ಹೊರಿಸುತ್ತಿದೆ. ಭಾರತದ ಮೇಲೆ ಚೀನಾವು ಮಾಡಿದ ನಗ್ನಾಕ್ರಮಣವು ತನಗೂ ಕುತಾರವ್ಯಾಯವಾಗುವುದೆಂಬ ಕಟು ಸತ್ಯವನ್ನು ತಿಳಿಯದೆ, ಪಾಶ್ಚಾತ್ಯ ಮಿತ್ರರು ತಿಳಿಸಿ ಹೇಳಿದರೂ ಕೇಳದೆ ನಾಗರ ಹಾವಿನೊಡನೆ ಚೆನ್ನಾಟವಾಡುವ ಅವಿವೇಕವನ್ನೆದು ತೋರಿಸುತ್ತಿದೆ. ತನ್ನದಲ್ಲದ ಮತ್ತು ಎಂದೆಂದಿಗೂ ತನ್ನ ದಾಗದ ಕಾಶ್ಮೀರದ ಒಂದು ದೊಡ್ಡ ಭಾಗವನ್ನು ಚೀನೀ-ಪಾಕ್ ಸ್ನೇಹದ ಕಾಣಿಕೆಯಾಗಿ ಒಪ್ಪಿಸಿದೆ; ಭಾರತವು ತನ್ನ ಮೇಲೆ ಏರಿ ಬರುವುದೆಂಬ ಭಯವನ್ನು ಪ್ರದರ್ಶಿಸುವ ಪಾಕಿಸ್ತಾನವು ಭಾರತವು ಮುಂದಿಟ್ಟ ಯುದ್ಧವಿಲ್ಲ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ತಿರಸ್ಕರಿಸಿದೆ; ಆದೀ ಸಮಯದಲ್ಲಿ ಚೀನಾದೊಡನೆ ಇದೇ ಮಾದರಿಯ ಸಂಧಿ ಪತ್ರಕ್ಕೆ ಸಹಿ ಮಾಡಿದೆ. ಕಾಶ್ಮೀರದ ತಂಟೆಯು ತನ್ನ ಮತ್ತು ಭಾರತದ ಸಮ್ಮುಕ್ಕೆ ವಿಘ್ನಕಾರಿಯೆಂದು ಹೇಳುವ ಪಾಕ್ ತನ್ನ ಚಂಡಿತನದಿಂದಲೇ ವಿವಾದವನ್ನು ಬೆಳೆಸುತ್ತಿದೆ; ಕಾಶ್ಮೀರವನ್ನೆಂದಿಗೂ ಬಿಟ್ಟುಕೊಡಲಾರೆವೆಂದು ಉದ್ಗರಿಸುತ್ತ ಆಸೈತಿಕ ಯುದ್ಧವನ್ನೇ ಹೂಡುವ ಸನ್ನಾಹ ಮಾಡುತ್ತಿದೆ. ಚೀನಾ-ಭಾರತಗಳ ನಡುವಣ ವಿವಾದ ಮತ್ತು ವೈಮನಸ್ಯದ ದುರುಪಯೋಗವನ್ನು ಬದು ಮಾಡಿಕೊಳ್ಳುವಲ್ಲಿ ಉತ್ಸಾಹ ವಹಿಸುತ್ತಿದೆ. ಇಂತಹ ತಿಳಿಗೇಡಿ ಪಾಕಿಸ್ತಾನದ ಅವಿವೇಕತನವನ್ನು ಸಾನೋ ಪಾಯದಿಂದ ತಿದ್ದಲು ಮಾಡಿದ ಪ್ರಯತ್ನಗಳೆಲ್ಲವೂ ನೀರಹೋಮವಾಗಿರುವಾಗ ಅದು ಭಾರತದ ಬಗ್ಗೆ ದಮನ ನೀತಿಯನ್ನೇ ಅನುಸರಿಸುತ್ತಿರುವಾಗ, ಭಾರತವಾದರೂ ಉದಾರತೆ-ಆತ್ಮ ಉದಾರತೆಯನ್ನು ತೋರಿಸುವುದು ಶಕ್ಯವಿಲ್ಲ. ಅದಕ್ಕೆಂದೇ ಪ್ರಾದೇಶಿಕಹೊಂದಾಣಿಕೆಯ ಸಂಬಂಧದಲ್ಲಿ ಮೂತುಕತೆಯ ಮೇಲೆ ಭಾರತವಿತ್ತಿದ್ದ ಕೊಡುಗೆಯನ್ನು, ತೋರಿದ ತ್ಯಾಗಬುದ್ಧಿಯನ್ನು ಹಿಂತೆಗೆದುಕೊಂಡಿರುವುದಾಗಿ ಪ್ರಧಾನಿ ನೆಹರೂ ಹೇಳಿದ್ದಾರೆ. ಹಾಗಿದ್ದರೂ ಯುದ್ಧವಿಲ್ಲ ಒಪ್ಪಿಗೆ ಮತ್ತು ಸಂಧಾನಕ್ಕೆ ಶಾಂತಿಪಥಾನಗಳ ಶೋಧಗಳನ್ನು ಬಿಟ್ಟುಕೊಡುವುದಿಲ್ಲವೆಂದೂ ಅವರು ಅಂದಿದ್ದಾರೆ. ಇದು ಅಬ್ಬರತಾಳ ಹಾಕುವ ಆನೀತಿ ವ್ಯವಹಾರ ಕುಶಲಂತಾದ ಪಾರ್ಶ್ವನಾಯಕರಿಗೆ ತುಸುವಾದರೂ ಅಂಕುಶ ಹೇರೀತು.

ಅಮೆರಿಕನ್ ನೆರವು ಪಡೆದು ಭಾರತದ ಮೇಲೆ ಆಕ್ರಮಣ ಮಾಡುವುದು ಅಸಾಧ್ಯ. ಭಾರತವು ತಾನು ಅಮೆರಿಕೆಯಿಂದ ಪಡೆದ ಶಸ್ತ್ರಾಸ್ತ್ರಗಳನ್ನು ತನ್ನ ಮೇಲೆ ಉಪಯೋಗಿಸುವುದೇ ಇಲ್ಲವೇ ಎಂಬುದನ್ನೇ ಕಾಣಲೆಂದೇ ಪಾಕಿಸ್ತಾನವೂ ಪೂರ್ವದಲ್ಲಿ ಸೇನೆಯನ್ನು ಜಮೂಯಿಸುತ್ತಿದೆ. ಚೀನಾಮೊಡನೆ ಸಖ್ಯ ಹೂಡಿದ ಪಾಕ್, ಕೆಂಪು ಚೀನದೊಡನೆ ಭಾರತದ ಸಂಬಂಧದಲ್ಲಿ ಗುಪ್ತ ಒಡಂಬಡಿಕೆ ಮಾಡಿದ್ದರೂ ಇರಬಹುದು. ಆದೇನೇ ಇದ್ದರೂ ಒಂದು ವಿಷಯವನ್ನು ಭಾರತೀಯರು ಮರೆಯಬಾರದು. ಪಾಕ್—ಚೀನಾಗಳ ಸಂಯುಕ್ತ ಕಾರ್ಯಾಚರಣೆಯು ಅಸಂಭವವೆನ್ನುವ ದಿನ ದೂರವಳಿದಿದೆ ಅದುದರಿಂದ ನಾವು ಎಂದೆಂದಿಗೂ ಜಾಗರೂಕರಾಗಿರಬೇಕು; ಸಜ್ಜೇತರಾಗಿರಬೇಕು. ಮದ್ದು ತುಂಬಿಸಿದ ಕೋವಿಯು ಕುದುರೆಯಾವಾಗ ಜಾರುವುದೆಂದು ಹೇಳುವಂತಿಲ್ಲ. ಆದಕ್ಕಾಗಿ ಸಮಗ್ರದೇಶ ಬಾಂಧವರು ತಮ್ಮ ಸ್ವಾತಂತ್ರ್ಯ ರಕ್ಷಣೆಗೆ ಅಡಹಾಯುವ ದುರ್ಧರ ಪ್ರಸಂಗಗಳನ್ನೂ ಎದುರಿಸುವ ಕೆಚ್ಚೆದೆಯನ್ನು ಅವಶ್ಯಕತೆಯೊದಗಿದಾಗ ಪ್ರದರ್ಶಿಸಲೇಬೇಕು. ಅದಕ್ಕಾಗಿ ಈಗಿರಬೇಗಲೇ ಸಿದ್ಧತೆಯನ್ನೂ ಮಾಡಿಕೊಳ್ಳಬೇಕು.

ಯಾವುದಕ್ಕೆ ಅರ್ಹರು?

ಪ್ರಧಾನಿ ನೆಹರು ಬಯಸುವುದಾದರೆ ತಾನು ಮುಖ್ಯಮಂತ್ರಿ ಪದವಿಗೆ ರಾಜಿನಾಮೆಯಿತ್ತು ಪಕ್ಷ ಸಂಘಟನೆಯ ಕಾರ್ಯದಲ್ಲಿ ತೊಡಗುವುದಾಗಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಅಂದಿದ್ದಾರೆ. ಅವರು ಎರಡೂ ಕಡೆಗಳಿಗೂ ಉಪಯುಕ್ತರಾಗುವವರಾದುದರಿಂದ ಅವರ ಸ್ಥಾನವು ಮುಂದೆಯೂ ಭದ್ರವಾಗಿಯೇ ಉಳಿಯುವುದೆಂದೂ ಅಲ್ಲಲ್ಲಿ ಪಿಸುಮಾತು ಕೇಳಿಬರುತ್ತಿದೆ. ನಿಜಲಿಂಗಪ್ಪನವರು ಯಾವುದಕ್ಕೆ ಅರ್ಹರು? ಎಂದು ನೆಹರುರವರು ಅರಿತುಕೊಳ್ಳುವುದಕ್ಕಿಂತ, ತಾನು ಮಾಡಬೇಕಾದ ಕರ್ತವ್ಯಗಳ ಕಡೆಗೆ ನಿಜಲಿಂಗಪ್ಪನವರೇ ಹೆಚ್ಚು ಪ್ರಜ್ಞೋದನೆ ನೀಡಬೇಕೆಂದು ಯಾರಾದರೂ ಹೇಳಬಹುದು. ಶ್ರೀಯುತರು ಹಲವಾರು ವರ್ಷಗಳ ಕಾಲ ಕಾಂಗ್ರೆಸ್ ಸಂಸ್ಥೆಯ ಕಾರ್ಯಕ್ಕಾಗಿ ದುಡಿದವರು. ಪರಿಸ್ಥಿತಿಯ ವಶಕ್ಕೆ ಕಟ್ಟು ಬಿದ್ದು ಅವರು ಮುಖ್ಯಮಂತ್ರಿಯಾಗುವುದಕ್ಕೂ ಮುಂದುನರಿದರು.

ಸರಳ ಸ್ವಭಾವಿಗಳಾದ ನಿಜಲಿಂಗಪ್ಪನವರ ಮೇಲೆ ಯಾವ ಆರೋಪವೂ ಇಲ್ಲ. ಆದರೂ ಯೋಜನೆಗಳ ಹೆಸರಿನಲ್ಲಿ ಆಗುತ್ತಿರುವ ದುರ್ವ್ಯಯಗಳನ್ನು ಅವರು ತಿಳಿದಿದ್ದಾರೆ. ಶರಾವತಿಯಲ್ಲಿ ನೋಲು ಹೋದ ಸಿಮೆಂಟು ಗೋಣಿಗಳು ಇವರ ಮೇಲೆ ಅಪವಾದ ಹೋರಿಸುತ್ತಿವೆ. ಲಕ್ಷಾಂತರ ರೂಪಾಯಿಗಳ ಅಪಚಾರ ಅಲ್ಲಿ ನಡೆದಿದೆಯೆನ್ನುವಾಗ, ಈ ಯೋಜನೆಯು ವಿದೇಶೀ ನೆರವಿನಿಂದ ನಡೆಯುವುದರಿಂದ ಅದರ ಉಗ್ರತೆ ತೀವ್ರವಾಯಿತು. ಹಾಗಾಗಿ ಈ ಘಟನೆಯ ಆಮೂಲಾಗ್ರ ಪರಿಶೀಲನೆಯನ್ನು ಜನತೆ ಬಯಸುತ್ತಿದೆ. ಕೇಂದ್ರ ಮಂತ್ರಿಯಾಗಿದ್ದ ಶ್ರೀ ಕೆ. ಡಿ. ಮಾಳವೀಯರವರು ತನ್ನ ಮೇಲೆ ಆರೋಪ ಬಂದಾಗ, ನಿರ್ದೋಷಿಯಾಗಿದ್ದರೂ ಸಚ್ಚಿನಸ್ಯದಾಯದಂತೆ ರಾಜಿನಾಮೆಯಿತ್ತರು. ಶ್ರೀ ನಿಜಲಿಂಗಪ್ಪನವರು ಆಡಳತೆಗಿಂತ ಪಕ್ಷೀಯ ಸಂಘಟನೆಯನ್ನೇ ತಮ್ಮ ಗುರಿಯೊಗಿಟ್ಟು ಕೊಂಡರೆ, ಅವರು ಮತ್ತಷ್ಟು ದೊಡ್ಡವರಾಗಲಾರರೆ? ಅಖಿಲ ಭಾರತ ವ್ಯಕ್ತಿಯೊಗಿ ಕರ್ನಾಟಕಕ್ಕೆ ಕೀರ್ತಿಸ್ಯಾಯರಾಗಲಾರರೆ? ಅವರಲ್ಲಿ ಆ ಸುಸ್ವಭಾವವಿದೆ, ಚತುರತೆಯಿದೆ, ವಿಶಾಲ ಭಾವನೆಯಿದೆ; ಶಕ್ತಿಯಿದೆ. ಇವುಗಳ ಉಪಯೋಗ ವಾಗ ವಾರದೇಕೆ?

ಉಡುಪಿಯಲ್ಲಿ ಸ್ವಾತಂತ್ರ್ಯೋತ್ಸವವು

—ನಗರಸಭೆ ಮತ್ತು ಸಾರ್ವಜನಿಕ ಪತಿಯಿಂದ ಬೆಳಿಗ್ಗೆ ಅಜ್ಜರಕಾಡಿನಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ಧ್ವಜಾರೋಹಣ ದೊಂದಿಗೆ ಆರಂಭವಾಯಿತು. ಪರ್ಯಾಯ ಮಠದ ಕಡೆಯಿಂದ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಸಂಜೆ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ, ಶ್ರೀ ಕೆ. ಕೆ ಪೈಗಳ ಅಧ್ಯಕ್ಷತೆಯಲ್ಲಿ, ಸಭೆ ಜರಿಗಿದಾಗ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದರು. ಪ್ರೊ। ಕು. ಶಿ. ಹರಿದಾಸ ಭಟ್ಟರು ಮಾತಾಡುತ್ತಾ ನಮ್ಮ ಜನರು ಮಾತು ಕಮ್ಮಿ ಮಾಡಿ ಕೆಲಸ ಹೆಚ್ಚಿಸಬೇಕೆಂದು ಹೇಳಿದರು. ಶ್ರೀ ಪದ್ಮನಾಭ ಶೆಟ್ಟಿಗಾರರು ದೇಶಕ್ಕಾಗಿ ನಾವೆಲ್ಲರೂ ದುಡಿಯಬೇಕೆಂದರು. ಅಧ್ಯಕ್ಷರು ಮಕ್ಕಳಲ್ಲಿ ದೇಶಭಕ್ತಿ ಹುಟ್ಟಿಸುವಂತೆ ಪಾಠಗಳು ಅವರಿಗೆ ದೊರಕುವಂತಾಗಬೇಕೆಂದೂ ಇಂಥ ಸಮಾರಂಭಗಳಲ್ಲಿ ಎಲ್ಲರೂ ಭಾಗವಹಿಸಬೇಕೆಂದೂ ಹೇಳಿದರು. ಒಳ್ಳೆಯ ನಡತೆಗಾಗಿ ನಗರಸಭೆಯಿಂದ ಎರಡು ಬಹುಮಾನಗಳನ್ನು ಕೊಡಲಾಯಿತು. ವಿವಿಧ ಮನೋರಂಜನೆಗಳೊಡನೆ ಸಭಾಂತ್ಯವಾಯಿತು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕೃಮ ನಂ. 131/1963

ಅಲ್ಲಿಸ್ ಕೋಡ್ರಿ ಬಾಯಿ—ವಾದಿಳು

1. ವಿಲಿಯಂ ಲುಯಿಸ್ 2. ಜೋಡೆಫಾ ಲುಯಿಸ್ 3. ಮೋಸೆಸ್ ಲುಯಿಸ್ 4. ವಿಲ್ಸರ್ಡ್ ಲುಯಿಸ್ ಅಲೆಕ್ಸಾಂಡರ್ ಪೀಟರ್ ಲುಯಿಸರ ಮಗದರು ಮಾಡುತೋನ್ಸೆ ಗ್ರಾಮದ ನಡಂಪಳ್ಳಿ—ಪ್ರತಿವಾದಿರು.

ವಾದಿಗೆ ಪ್ರತಿವಾದಿರ ತಂದೆಯು ತಾ. 18—11—1957ರ ರಜಿಸ್ಟ್ರಿ ನಿತಿಂ ಬರೆಕೊಟ್ಟ ಯಿಡು ವಸ್ತವೇಜಿನಲ್ಲಿಯ ರೂ. 800 ಬಡ್ಡಿ ರೂ 212-50 ರಜಿಸ್ಟ್ರಿ ನೋಟ್ಟಿನ ಖರ್ಚು ರೂ. 6-75 ಕೂಡಾ ರೂ. 1019-25ಕ್ಕೆ ಮಾಡಿದ ಸದ್ರಿ ವ್ಯಾಜ್ಯವನ್ನು 2-8-64ನೆ ಪ್ರತಿವಾದಿಗೆ ನೋಟೀಸು ಮಾಡಿಸುವ ಬಗ್ಗೆ ತಾ.26-8-1963ಕ್ಕೆ ಯಿಟ್ಟಿದೆ. ಅವರಿಗೆ ಅಕ್ಕೇಪಣೆಯಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟು ಮುಂದೆ ಕರದ್ದಾಗ್ಗೆ ಹಾಜ್ರಾಗಿ ಜ್ಞಾಪಿಸಿರು ಮತ್ತಾಕೊಳ್ಳಬೇಕೆಂದು ಸೂಂಗ್ತಿ ಯನ್ನೂ ಅಳ ತಿಳಿಸಿಯಲಿದೆ.

K. Laxminarayana Aithal
Vakil for Plaintiff.

ತಾರೀಕು 16—8—1963
ಉಡ್ಪಿ

ಅಲ್ಲಲ್ಲಿಯ ಸುದ್ದಿಸಾರ

ಶ್ರೀ, ಮಂಜುನಾಥಯ್ಯನವರಿಗೆ ಸನ್ಮಾನ—

ತಾ. 11_8_63ರಂದು ಉಡುಪಿಯ ಪ್ರಸಿದ್ಧ ಪಿಟೀಲುವಾದಕರಾದ ಶ್ರೀ. ಕೆ. ಮಂಜುನಾಥಯ್ಯನವರನ್ನು, ಅವರಿಗೆ 75ನೇ ವಯಸ್ಸಿನಲ್ಲಿ ಸನ್ಮಾನಿಸಿ, ಅವರಿಗೆ ನಧಿಯರ್ಪಿಸುವ ಸಮಾರಂಭವು 'ಪೂರ್ಣಪ್ರಜ್ಞ ಕಾಲೇಜಿ'ನಲ್ಲಿ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಹಲವಾರು ಸಂಘಗಳ ಪರವಾಗಿ ಅತಿಥಿಗಳಿಗೆ ಹೂಮಾಲೆಯರ್ಪಿತವಾಯಿತು. ಸಂಗೀತ ಸಭೆಯ ಕೋಶಾಧಿಕಾರಿ ಶ್ರೀ ಮಾಸೋಹರ ಪ್ರಭುಗಳು ಸಂದೇಶಗಳನ್ನು ಹಿಡಿದರು. ನಗರ ಸಭೆಯ ಪರವಾಗಿ ಶ್ರೀ ಟಿ. ರಂಗನಾಥ ಶೆಟ್ಟಿಯವರೂ ಉಡುಪಿ ಕರ್ನಾಟಕ ಸಂಘದ ಪರವಾಗಿ ಡಾ. ಕೆ. ಎಲ್. ಪೈತಾಳರೂ, ಕಲಾವೃಂದದ ವತಿಯಿಂದ ಶ್ರೀ ಸಬ್ರಮಣ್ಯ ಉಪಾಧ್ಯಾಯರೂ, ಸಂಗೀತ ಸಭೆಯ ಕಡೆಯಿಂದ ಶ್ರೀ ಕೆ. ಕೆ. ಪೈಗಳೂ ಮಾನಪತ್ರಗಳನ್ನು ಅರ್ಪಿಸಿದರು. ತೆರುವಾಯ ಶ್ರೀ ಕೆ. ಕೆ. ಪೈಗಳು ಸ್ವಾಗತಿಸುತ್ತಾ, ಶ್ರೀ. ಮಂಜುನಾಥಯ್ಯನವರ ಕಲಾಪ್ರತಿಭೆಯನ್ನು ಯನ್ನು ಶ್ಲಾಘಿಸಿ, ಸಂಗೀತ ಸಭೆಯವರು ಸಂಗ್ರಹಿಸಿದ ನಧಿಯನ್ನು ಅವರಿಗೆ ಅರ್ಪಿಸಿದರು.

ಶ್ರೀಗಳಾದ ಎಚ್. ಶ್ರೀನಿವಾಸ ಉಡುಪ, ಎಸ್. ವೆಂಕಟರಾಜ, ಬೈಕಾಡಿ ವೆಂಕಟಕೃಷ್ಣ ರಾವ್ ಮತ್ತು ಯು. ಎಂ. ಮಧ್ವಸ್ಥರು ಸಭಾ ಕರ ಪರವಾಗಿ ಮಾತಾಡಿದರು. ಶ್ರೀ ಕೆ. ಮಂಜುನಾಥಯ್ಯನವರು ಮಾತಾಡುತ್ತಾ, ಜನರ ಅಭಿಮಾನಕ್ಕೆ ತಾವು ಋಣಿಯೆಂದು ತಿಳಿಸಿದರು. ಅಧ್ಯಕ್ಷ ಶ್ರೀ ಇನಾಂದಾರರು ಮಾತಾಡುತ್ತಾ, ಲಲಿತ ಕಲೆಗಾರರ ಇಂದಿನ ಸಂಕಷ್ಟ, ಕಲೆಗಳ ನೈತಿಕ್ಷೀಣತೆಗಳನ್ನು ವಿವರಿಸಿ, ಶಾಸ್ತ್ರೀಯ ಸಂಗೀತದ ಬಗ್ಗೆ ಜನಾನುರಾಗ ಕಡಿಮೆಯಾಗುತ್ತಿರುವುದು ದುಃಖಕರವೆಂದರು. ಶ್ರೀ. ಎಸ್ ಎಲ್. ನಾರಾಯಣ ಭಟ್ಟರು ಧನ್ಯವಾದ ಸಮರ್ಪಿಸಿದ ಬಳಿಕ ಸಂಗೀತ ಕಚೇರಿ ನಡೆಯಿತು.

'ವೀರ ಭೂಮಿ' ಉದ್ಘಾಟನಾ ಸಮಾರಂಭ—

ಇಂದೇ ತಾ. 14ರಂದು, ವೀರ ಭೂಮಿ ಮೂಸಾ ಪತ್ರಿಕೆಯ ಉದ್ಘಾಟನಾ ಸಮಾರಂಭವು ಸಿಂಡಿಕೇಟ್ ಬ್ಯಾಂಕ್ ಸಿಬಂದಿ ತರೆಬೇತಿ ಕಾಲೇಜ್ ಕಟ್ಟಡದಲ್ಲಿ ಶ್ರೀ ಎ.ಎಸ್. ಉಡ್ಡರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಂದ ನೆರವೇರಿಸಲ್ಪಟ್ಟಿತು.

ಆರಂಭದಲ್ಲಿ ಸಂಸಾದಕ ಶ್ರೀ ವೆಂಕಟರಾಜರು ಸ್ವಾಗತಿಸುತ್ತಾ, ಶ್ರೀಕೃಷ್ಣ ದೆಜೆಯ ಪತ್ರಿಕೆಯೊಂದನ್ನು ಹೊರಡಿಸಲು ತನ್ನ ಗೆಳೆಯರು ತನ್ನನ್ನು ಉತ್ತೇಜಿಸಿದುದರಿಂದ ತಾನು ವೀರ ಭೂಮಿಯನ್ನು ಆರಂಭಿಸಿದೆನೆಂದು ತಿಳಿಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಉದ್ಘಾಟನಾ ಭಾಷಣ ಮಾಡುತ್ತಾ ಇಂದು ವಿದ್ಯಾವಂತರ ಸಂಖ್ಯೆ ಹೆಚ್ಚಿದೆ. ಆದಕ್ಕಾಗಿ ವೈವಿಧ್ಯ ಪೂರ್ಣ ಪತ್ರಿಕೆಗಳ ಸಂಖ್ಯೆಯೂ ಹೆಚ್ಚಬೇಕು ಎಂದು ತಿಳಿಸಿ, ಪತ್ರಿಕೆಗೆ ಶುಭಕೋರಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪತ್ರಿಕೆಯಲ್ಲಿ ಎಂದೂ ಉದ್ರೇಕಾರಿ ಸುದ್ದಿಗಳನ್ನು ಪ್ರಕಟಿಸ ಬಾರದೆಂದೂ ಆದರಿಂದ ಜನರ ಮೇಲೆ ವಿಪರೀತ ಪರಿಣಾಮವಾಗುವುದರಿಂದ ಜನರ ನೈತಿಕ ಮಟ್ಟವು ಕೆಳಗಿಳಿಯಬಹುದೆಂದೂ ತಿಳಿಸಿದರು ಪತ್ರಿಕೆಯ ಪೂರ್ವವಲ್ಲದೇ ಪರದೊಸತೆಯನ್ನು ಸಂಸೂರ್ಣ ನಿರೋಧಿಸಬೇಕೆಂದೂ ತಿಳಿಸಿದರು.

ಆರಂಭದಲ್ಲಿ ಶ್ರೀ ಎಂ. ಗೋಪಾಲಚಾರ್ಯರಿ ಪ್ರಾರ್ಥನೆಯೂದ ಬಳಿಕ ಶ್ರೀ ಎಸ್. ಪದ್ಮನಾಭ ನಾಯಕರು ಸಂದೇಶಗಳನ್ನೋದಿದರು. ಶ್ರೀಗಳಾದ ಕಾಲಾ ಶೇಷಾಚಾರ್ಯ ಮತ್ತು ಬೈಕಾಡಿ ವೆಂಕಟಕೃಷ್ಣ ರಾಯರು ಸಭಾ ಕರ ಪರವಾಗಿ ಮಾತಾಡಿದರು. ಅಂತ್ಯದಲ್ಲಿ ಶ್ರೀ ಎಸ್. ವೆಂಕಟರಾಜರು ಧನ್ಯವಾದ ಸಮರ್ಪಿಸಿದರು.

ತಿಲಕ ಪುಣ್ಯತಿಥಿ ಸಮಾರೋಹ—

ಮುಂಬೈಯ ಕರ್ನಾಟಕ ಧರ್ಮಾರ್ಥ ರಾಜ್ಯ ಔಷಧಶಾಲಾ ಸಿರಿಗನ್ನಡ ಕೂಟವು ಆಗಸ್ಟ್ ತಿಂಗಳ ಮೊದಲ ತೇದಿಯಂದು ಶ್ರೀ ಅಡಾರ್ ರಾಮಚಂದ್ರ ಜೋಶಿ, ಕುಂದರಿಗಿ ಅವರ ಅಧ್ಯಕ್ಷತೆಯಲ್ಲಿ "ಸ್ವಾತಂತ್ರ್ಯನೇ ನನ್ನ ಜನ್ಮಸಿದ್ಧ ಹಕ್ಕು" ಎಂದು ಸಿಂಹ ಗರ್ಜನೆ ಗೈದು ಭಾರತದಲ್ಲಿ ಕ್ರಾಂತಿಯ ಕಹಳೆಯೂದಿದ ಶ್ರೀ ಲೋಕಮಾನ್ಯ ಬಾಲಗಂಗಾಧರ ತಿಲಕರ 43ನೇ ಪುಣ್ಯತಿಥಿಯನ್ನಾಚರಿಸಿತು. ಆರಂಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನವಾದ ಸಮಸ್ತ ಹುತಾತ್ಮರನ್ನು ನೆನೆದು ಮೌನಪ್ರಾರ್ಥನೆ ಗೈಯ್ಯಲಾಯಿತು. ಅನಂತರ ಶಾಲಾವಿದ್ಯಾರ್ಥಿ ಶ್ರೀ ಶಂಭುಭಂಡಾರಿ ಅವರು ಸ್ವಾಗತ ಭಾಷಣ ಗೈದರು. ಆ ಬಳಿಕ ಸಿರಿಗನ್ನಡ ಕೂಟವು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ತಿಲಕ ನಿಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಗೈಯ್ಯಲಾಯಿತು. ಅನಂತರ ಶ್ರೀಗಳಾದ ಕೇಶವ, ಇಡ್ಯ, ಸುಂದರ ಎಚ್. ದೇವಾಡಿಗ ಕಳವಾರು ಶ್ಯಾಮಶೆಟ್ಟಿ ಶ್ರೀಮುಂಜೆ ಪರಾರಿ ಲೋ. ಮೂರ ಕುರಿತು ಭಾಷಣವಿತ್ತರು. ಅಧ್ಯಕ್ಷರು ಲೋಕಮಾನ್ಯರು ಕರ್ಮಯೋಗಿ ಎಂದೇ ಭಗವದ್ಗೀತೆಯು ಕರ್ಮಯೋಗ ಪ್ರಂಥವನ್ನು ಅರಿಸಿ, ಅದನ್ನೇ ಆಧಾರವಾಗಿಟ್ಟು ಗೀತಾ ರಹಸ್ಯದಂತಹ ಉತ್ಕೃಂಥ ಬರೆಯುವ ಸಾಹಸ ಅವು ಕೂಡಾ ಜೀವಿತವ್ಯದಾಗಲೇ ಆರಂಭಿಸಿದರು ಎನ್ನುತ್ತಾ ಲೋಕಮಾನ್ಯರ ಬಹುಮುಖ ಪ್ರತಿಭೆ ಪಾಂಡಿತ್ಯಗಳನ್ನು ವಿವರಿಸಿದರು. ಆನಂತರ ಶಾಲೆಯ ಎಳೆಯ ವಿದ್ಯಾರ್ಥಿಯೊಬ್ಬನೂ ಶ್ರೀ ಕೋಡು ಭೋಜ ಶೆಟ್ಟರೂ ಪದ್ಯಗಳನ್ನು ಹಾಡಿ ಮನೋರಂಜನೆ ಗೈದರು.

ಸ್ವಾತಂತ್ರ್ಯ ದಿನಾಚರಣೆ- ಉಡುಪಿ ಮೋರ್ನರ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಳಿಗ್ಗೆ ಶಾಲಾಮುಖ್ಯೋಪಾಧ್ಯಾಯರು ಧ್ವಜ ಆರೋಹಿಸಿದರು. ಮುಂದೆ, ಸಭೆಯು ಅಧ್ಯಾಪಕ ಶ್ರೀ ರಾಜಶೇಖರ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ, ಮಕ್ಕಳಿಂದ ಭಾಷಣ, ವಿವಿಧ ವಿನೋದಾವಳಿಗಳಾದುವು. ಶ್ರೀ ಸತೀಶ ಶೆಣೈಯರು ಧನ್ಯವಾದ ಸಮರ್ಪಿಸಿದರು.

ಉಡುಪಿ ಮಹಿಳಾ ಸಮಾಜದಲ್ಲಿ ಸ್ವಾತಂತ್ರ್ಯೋತ್ಸವ ಸಮಾರಂಭವು ಶ್ರೀಮತಿ ಬಿ. ಸುನಂದಾ ಚಾಳಿಗಾರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಅಧ್ಯಕ್ಷೆ ಶ್ರೀಮತಿ ಜಲಜಾಕ್ಷಮ್ಮನವರು ಸ್ವಾಗತಿಸಿದ ಬಳಿಕ ಶ್ರೀಮತಿ ಇನಾಂದಾರ್‌ರವರು ಗಾಂಧೀಜಿ ನಿವೇದನೆ ಎನ್ನುವ ಕುರಿತು ಮಾತಾಡಿದರು. ವಿವಿಧ ಮನರಂಜನೆಗಳಾದ ಬಳಿಕ ಶ್ರೀಮತಿ ಅನುಸೂಯ ಬಿ. ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಉಡುಪಿ ಆಯುರ್ವೇದ ಕಾಲೇಜಿನಲ್ಲಿ—

ಪ್ರಿನ್ಸಿಪಾಲ ಡಾ। ಜಿ. ಬಿ. ಸತ್ಯನಾರಾಯಣರವರು ರಾಷ್ಟ್ರಧ್ವಜವನ್ನಾರೋಹಿಸಿದ ನಂತರ ಅವ ' ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಡಾ। ವಿಜಯೇಂದ್ರ ಮೂರ್ತಿ, ಡಾ। ಜಾರ್, ಡಾ। ರಾಮಕೃಷ್ಣ ಭಾಗವತ್, ಡಾ। ಗುರು ರಾಜ ಆಚಾರ್, ಡಾ। ಕುಸುಮಾ ದೇಶಪಾಂಡೆ ಸೀತಾರಾಮ ಭಟ್ಟ ಮತ್ತು ವಿದ್ಯಾರ್ಥಿಗಳು ನೂತನವಾಗಿದರು. ಕೊನೆಗೆ ಶ್ರೀ ರಜಾಕರ ವರು ಧನ್ಯವಾದ ಸಮರ್ಪಣೆ ಗೈದರು.

ಕುರುಕಾಲು—

ಶ್ರೀ ಕುಂಜಾರು ಗಿರಿಜಾ ಜೂ. ಎ. ಶಾಲೆಯಲ್ಲಿ ತಾ. 15ರಲ್ಲು ಸ್ವರಾಜ್ಯ ದಿನಾಚರಣೆ ಜರಗಿತು. ಮಲ್ಪೆಯ ವೆಂಕಟೇಶ್ವ ಬಲ್ಲಾಳರು ಧ್ವಜಾರೋಹಣ ಗೈದು ಸಭಾಧ್ಯಕ್ಷತೆಯನ್ನು ಅಲಂಕರಿಸಿದ್ದರು. ಮುಖ್ಯೋಪಾಧ್ಯಾಯ ಶ್ರೀ ಕೆ. ನಾಸು ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದ ಈ ದಿನಾಚರಣೆಯ ಮಹತ್ವಿಕೆಯನ್ನು ವಿವರಿಸಿದರು. ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ಅಧ್ಯಕ್ಷರ ಮತ್ತು ಇಲ್ಲಿಯ ರೂರಲ್ ಡಿಸ್ಪೆನ್ಸರಿಯ ಡಾಕ್ಟರ್ ಕೃಷ್ಣಮೂರ್ತಿ ಬಲ್ಲಾಳರ ಕಾರ್ಯ ಸಫಲತಾ ಯೋಗ್ಯತೆಯ ಕುರಿತು ಮಾತ್ಮಕ ವಿಚಾರದಲ್ಲಿಯೂ, ಶ್ರೀಗಳಾದ ಡಾಕ್ಟರ್ ಕೃಷ್ಣಮೂರ್ತಿ ಬಲ್ಲಾಳ್, ಕೆ. ಭುಜಂಗ ಶೆಟ್ಟರು ಸ್ವರಾಜ್ಯ ದಿನಾಚರಣೆಯ ಪ್ರಾಮುಖ್ಯತೆಯ ಕುರಿತಾಗಿಯೂ ಭಾಷಣಗಳನ್ನಿತ್ತ ಬಳಿಕ ಅಧ್ಯಕ್ಷರು ಸ್ವಾತಂತ್ರ್ಯ ಜೊರಕಿದ ಬಳಿಕ ನಮ್ಮ ದೇಶದ ಅಭ್ಯುದಯ ಕಾರ್ಯಕ್ರಮಗಳ ಸಿಂಹಾವಲೋಕನವನ್ನು ಮಾಡಿ ಸುರಸವಾದ ಭಾಷಣವನ್ನಿತ್ತರು. ತರುವಾಯ ರಾಷ್ಟ್ರಗೀತೆಯೊಂದಿಗೆ ಸಿಹಿತಿಂಡಿ ಹಂಚಲ್ಪಟ್ಟು ಸಭೆಯು ಮುಕ್ತಾಯವಾಯ್ತು.

ಕಟ್ಟಪಾಡಿ—

ಎಸ್. ವಿ. ಎಸ್. ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ, ಶ್ರೀ ಕೆ ವಾಸುದೇವ ಕಿಣಿಯವರು ದಾನವಾಗಿ ಕೊಟ್ಟ ವಿದ್ಯುದ್ದೀಪಗಳನ್ನು ಬೆಳಗಿಸುವ ಸಮಾರಂಭವು ಎಳೆಡಿಮಿಯ ರೀಸರ್ಚ್ ಆರ್ ಡಾ. ಟಿ ಎಸ್. ಎ. ಪೈಯವರಿಂದ ಎಸ್. ವಿ. ಎಸ್. ಹೈಸ್ಕೂಲಿನ ಸಭಾ ಭವನದಲ್ಲಿ ಇದೇ ತಾ. 15ನೇ ಸಂಜೆ ನೆರವೇರಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ಶ್ರೀ ಕೆ.ವಾಸುದೇವ ಕಿಣಿಯವರ ಭಾವಚಿತ್ರದ ಅನಾವರಣವನ್ನು ಉಡುಪಿ ಕೋಟ ಲ್ಲಿನ ಅಧ್ಯಕ್ಷ ಶ್ರೀ ಟಿ.ರಮೇಶ ಪೈಯವರು ನೆರವೇರಿಸಿದರು. ಸಭಾಧ್ಯಕ್ಷತೆಯನ್ನು ಉಡುಪಿಯ ಸರ್ ಜಡ್ಜ್ ಶ್ರೀ ಜಿ. ಆರ್. ವೇಸಾಯಿಯವರು ವಹಿಸಿದ್ದರು. ರಾತ್ರಿ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದವು. ಶ್ರೀ ಕೆ. ವಾಸುದೇವ ಕಿಣಿಯವರು ಭೋಜನ ಸತ್ಕಾರ ಕೂಟವನ್ನೂ ಏರ್ಪಡಿಸಿದ್ದರು.

ಆಲೂರು—

ಸ್ಥಳೀಯ ಸರಸ್ವತಿ ವಿದ್ಯಾಲಯದ ಡೆಜ್ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ ಹಾಲಾಡಿ ಭುಜಂಗ ಶೆಟ್ಟ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಮಾಧವರಾಯರು ಧ್ವಜವನ್ನು ಆರೋಹಿಸಿದರು. ಶ್ರೀ ಜಿ. ದೇವಪ್ಪ ಇವರು ಭಾಷಣ ಮಾಡಿದರು. ಮಕ್ಕಳಿಗೆ ಸಿಹಿ ತಿಂಡಿ ವಿತರಣೆಯಾಯಿತು. ರಾತ್ರಿ ಯಕ್ಷಗಾನ ತಾಳಮದ್ದಲೆ ಜರಗಿತು. ಮುಖ್ಯೋಪಾಧ್ಯಾಯ ಜೆ. ಎಸ್. ಉಪ್ಪೂರು ಧನ್ಯವಾದ ಸಮರ್ಪಿಸಿದರು.

ಉಚಿತ ಹಿಂದೀ ತರಗತಿ—

ಉಡುಪಿಯ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ವಯಸ್ಕರಿಗಾಗಿ ಧರ್ಮಾರ್ಥ ಹಿಂದಿ ತರಗತಿಗಳು ಪ್ರಾರಂಭವಾಗಿವೆಯೆಂದೂ ಸೇರಲಿಚ್ಛಿಸುವವರು ವಿಶೇಷ ಮಾಹಿತಿಯನ್ನು ಸಮಿತಿಯ ಅಧ್ಯಕ್ಷರಿಂದ ಪಡೆಯಬಹುದೆಂದೂ ಸಾರ್ವಜನಿಕರು ತಿಳಿಸುತ್ತಾರೆ.

ಶ್ರೀ ಗಣೇಶ ಜೋಗುಳ ಹಾಡು

೦ — ೦ — ೦

ವಿಘ್ನವಿನಾಶ ಗಣೇಶಗೆ ಜೋ ಜೋ |
ಉಮಾಮಹೇಶ ಕುಮಾರಗೆ
ಜೋ ಜೋ || ಜೋ....ಜೋ ||

ಕುಂಜರ ವದನದಿ ಮೆರೆದಗೆ ಜೋ ಜೋ|
ಕೋರೆ ದಾಡೆಗಳುಳ್ಳವನಿಗೆ
ಜೋ ಜೋ || ಜೋ...ಜೋ ||

ಪಾಶಾ ಅಂಕುಶಧಾರಿಗೆ ಜೋ ಜೋ |
ಮೋದಕ ಹಸ್ತದಿ ಸಿಡಿದಗೆ
ಜೋ ಜೋ || ಜೋ....ಜೋ ||

ಬಲಗೈಯೊಳು ದಾಡೆ ಧರಿಸಿಹೆ
ಜೋ ಜೋ |
ಬಾಲಚಂದ್ರಗೆ ಶಾಪ ಕೊಟ್ಟಿಹೆ
ಜೋ ಜೋ || ಜೋ....ಜೋ ||

ಸದ್ಯೋಜಾತನ ಸುತನಿಗೆ ಜೋ ಜೋ |
ಸರ್ವ ಮಂಗಳ ಗೌರಿ ತನಯಗೆ
ಜೋ ಜೋ || ಜೋ....ಜೋ ||

ಷಣ್ಮುಖ ವೀರಭದ್ರಾನುಜ ಜೋ ಜೋ|
ಸರ್ವ ಗುಣಾಧಿಗಳಧಿಪತಿ :
ಜೋ ಜೋ || ಜೋ... ||

ತ್ರಿಸುಂದರಿ ಶಂಕರ ಕುವರಗೆ
ಜೋ ಜೋ |
ತ್ರಿಜಗ ವಂದಿತೆ ಅಂಬಿಕಾ ತನಯ
ಜೋ ಜೋ || ಜೋ....ಜೋ ||

ಪಂಚಾಕ್ಷರಿಯ ಪರಿಸಿದಗೆ ಜೋ ಜೋ |
ಪಂಚ ತತ್ವಾರ್ಥವ ಅರಿತಗೆ
ಜೋ ಜೋ || ಜೋ....ಜೋ ||

ಕಾಮಿತ ಫಲಗಳ ಕೊಡುವಗೆ
ಜೋ ಜೋ |
ಪ್ರೇಮದಿ ಭಕ್ತರ ಪೊರೆವಗೆ
ಜೋ ಜೋ || ಜೋ....ಜೋ ||

—ಶಾ. ಶೈ. ಭಾಸ್ಕರಾಚಾರ್ಯ

ವಾರ್ತಾವೇದಿಕೆ

ಆಚಾರ್ಯ ಕೃಪಲಾನಿ

ಜನನಾಯಕ ನೆಹರುರವರ ಸರಕಾರದಲ್ಲಿ ಅವಿಶ್ವಾಸವನ್ನು ಸೂಚಿಸುವ ಗೊತ್ತುವಳಿಯೊಂದು ಕೃಪಲಾನಿಯವರ ನಾಯಕತ್ವದಲ್ಲಿ ರೂಪುಗೊಂಡು ಸಂಸತ್ತಿನ ಮುಂದೆ ಬಂದಿದೆ. ಭಾರತೀಯ ಇತಿಹಾಸದಲ್ಲಿಯೇ ಇಂತಹ ಘಟನೆ ನಡೆದುದಿಲ್ಲ. ದೇಶ ಗಂಡಾಂತರಮಯ ಪರಿಸ್ಥಿತಿಯಲ್ಲಿರುವಾಗ ನೆಹರು ನಾಯಕತ್ವವು ಬೇಕಾದರೂ ಸರಕಾರದ ನೀತಿ-ನಡಾವಳಿಗಳಿಗೆ ವಿರೋಧವೆಂದೀ ಗೊತ್ತುವಳಿಯನ್ನು ಮಂಡಿಸಲಾಗಿದೆಯಂತೆ. ಸಂಸತ್ತಿನಲ್ಲಿ ಕಾಂಗ್ರೆಸಿಗೆ ತುಂಬು ಬಹುಮತವಿರುವುದರಿಂದ ತನ್ನ ಪ್ರಯತ್ನ ವಿಫಲವೆಂದು ತಿಳಿದಿದ್ದರೂ ಕೇವಲ 'ನಾಂಕೇತಿಕ ಪ್ರತಿಬಟನೆ'ಯ ಪ್ರತೀಕವೆನ್ನುವ ಕೃಪಲಾನಿಯವರು ಉಚಿತವಾದುದನ್ನೇ ಮಾಡಿದ್ದಾರೆಯೆ?

ಜನಾಹರಲಾಲ

ಕೇಂದ್ರದ ಮಾಜಿ ಇಂಧನ ಮಂತ್ರಿ ಮೂಳವೀಯರವರು ಲಂಚ ಸ್ವೀಕರಿಸಿದ ರೆಂಬ ಸಿರಾಜುದ್ದೀನ ಪ್ರಕರಣದ ಬಗ್ಗೆ 'ದಾಸ ವರದಿ'ಯ ಅಧ್ಯಯನ ನಡೆದಿದೆ. ಸಂಸತ್ತು ಈ ವರದಿಯನ್ನು ತನ್ನ ಮುಂದಿಡಬೇಕೆಂದು ಆಂಶಿಕವಾಗಿ ಬಗುಸುತ್ತಿದೆ. ಮೂಳವೀಯರವರು ನಿರಪರಾಧಿಗಳೆಂದು ಜೇಳಿ ಅವರ ಸೇವಾ ಶಕ್ತಿರತೆಯನ್ನು ಪ್ರಶಂಸಿಸುವ ನೆಹರು ದಾಸ ವರದಿಯನ್ನು ಪ್ರಕಟಿಸಲು ಇಚ್ಛಿಸುವುದಿಲ್ಲ. ನ್ಯಾಯ ಮೂರ್ತಿಯವರು ಅವನ್ನು ಬಹಿರಂಗ ಪಡಿಸಬಾರದೆಂದೂ ಅನಸ್ಯ ಬಿಚ್ಚಿರೆ. ಇಲ್ಲಿನ ಮುಖ್ಯಾಂಶಗಳನ್ನು ಮಾತ್ರ ತಿಳಿಸಬಹುದೆಂದೂ ದಾಸರು ಆಂಜೋಣವಂತೆ. ಸ್ವಧಾನಿಗಳ ಹೇಳಿಕೆಯಿಂದಲೇ ತೃಪ್ತಿಪಟ್ಟುಕೊಳ್ಳುವುದು ಸಾಧ್ಯವಾದೀತೆ?

ಕೆ. ಕೆ. ಶಹ

ವಿದೇಶ ಸಂಚಾರವನ್ನು ಮುಗಿಸಿಕೊಂಡು ಬಂದ ಕಾಂಗ್ರೆಸ್ ಕಾರ್ಯದರ್ಶಿ ಕೆ. ಕೆ. ಶಾರವರು ಅಲ್ಲಿನ ಪಾರ್ಲಿಮೆಂಟ್ ಅಧ್ಯಯನವನ್ನೂ ಮಾಡಿಬಂದರು. ಯಾವುದೇ ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳಿಗೆ ಕಾಣಿಕೆ ನೀಡುವುದಾದರೆ, ಅವುಗಳ ಹೆಸರನ್ನು ಬಹಿರಂಗಪಡಿಸಬೇಕು ಎಂಬ ಭಾರತದ ನಿಯಮದ ಕುರಿತವರು ಪುನರಾಲೋಚನೆ ನಾಡುವುತಿದೆ. ಅವರು ಸಂಚರಿಸಿದ ಹೆಚ್ಚಿನ ದೇಶಗಳಲ್ಲಿ ದಾನಿಗಳ ಹೆಸರನ್ನು ಬಹಿರಂಗ ಪಡಿಸುವ ಪರಾಶವಿಲ್ಲ. ರಾಜಕೀಯ ಪಕ್ಷಗಳ ಪ್ರಯೋಜನಕ್ಕಾಗಿ ಕೆಲವೊಂದು ಹಣವನ್ನು ತೆಗೆದಿಟ್ಟು ಕೇಂದ್ರ ಸರಕಾರವು ಅವನ್ನು ಘೋಷಿಸಬೇಕು ಎಂಬ ವಿಷಯದಲ್ಲಿ ಇಟೆಲಿಯು ಸುಸಕ್ತು ಕೂಡ ಒಂದು ಗೊತ್ತುವಳಿ ಸ್ವೀಕರಿಸಲಿದೆ. ಆದೇ ರೀತಿಯಲ್ಲಿ ನಮ್ಮ ದೇಶದಲ್ಲೂ ಏಕೆ ಆಗಬಾರದು ಎಂಬತ್ತೆ ಹರಡಿದೆ ಶಹರ ಮನಸ್ಸು.

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಸ್ಟೋರ್ಸ್ ಉಡುಪಿ.

ಸಂಗೀತ ಕಲಾತಪಸ್ವಿ

ಶ್ರೀ ಮಂಜುನಾಥಯ್ಯನವರು

ಉಡುಪಿಯನ್ನು ಸಂಗೀತ ಕಲಾಕೇಂದ್ರವನ್ನಾಗಿ ನೋಡಿದ ಶ್ರೀ ಫಿಡ್ಲೆ ಮಂಜುನಾಥಯ್ಯನವರನ್ನರಿಯದ ಕಲಾ ಪ್ರೇಮಿಗಳು ವಿರಳ. ಹೂವುಮೊಂದು ಸದ್ದು ಗದ್ದಲವಿಲ್ಲದೆ ತಮ್ಮಷ್ಟಕ್ಕೇ-ತಮ್ಮ ಆತ್ಮ ತೃಪ್ತಿಗೆ ಸಂಗೀತ ಪ್ರಚಾರ ನೋಡುವ ಆ ವರ ವೈಖರಿ ನಿಜಕ್ಕೂ ಪ್ರಶಂಸನೀಯ ಜೊತೆಗೂ ಉಲ್ಲೇಖನೀಯ. ಮಂಜುನಾಥಯ್ಯನವರು ಉಡುಪಿಗೆ ಬಂದು ಇಂದಿಗೆ ಸುಮಾರು ೪೦ ವರ್ಷಗಳು ಮಿಕ್ಕಿದುವು. ಉಡುಪಿಯ ಸಂಗೀತ ಸಭೆಯು ಈ ಹಿರಿಯ ಸಂಗೀತ ಕಲಾ ತಪಸ್ವಿಯನ್ನು ತನ್ನ ಶಕ್ತಿಗನುಗುಣವಾಗಿ, ಸನ್ಮಾನಿಸುವ ಸಮಾರಂಭವನ್ನು ಏರ್ಪಡಿಸಿ ಶ್ರೀಯುತರ ಅಪಾರವಾದ ಋಣ ಸಮುದ್ರದಿಂದ ಸ್ವಲ್ಪ ಮಟ್ಟಿಗಾದರೂ ವಿಮೋಚನೆಗೊಂಡಿದೆ. ಪ್ರಸಕ್ತ ಲೇಖನದಲ್ಲಿ ತನ್ನ ಎಸ್ಸೆತ್ತೈಳರ ಹೆರವೆಯಲ್ಲೂ ಇಪ್ಪತ್ತೈಳರ ಯುವಕರಂತೆ ಹುಮ್ಮನಸ್ಸಿನಿಂದ ಸಂಗೀತ ಸರಸ್ವತಿಯ ಆರಾಧನೆಗೆ ನೂತ್ತಿರುವ ಈ ನಾದಯೋಗಿಯ ಬಾಳುವೆಯ ಒಂದು ಸರಳ ಚಿತ್ರಣವನ್ನು ಮಾಡಲಾಗಿದೆ.

ಜನನ ಮತ್ತು ಪ್ರಾರಂಭಿಕ ಜೀವನ

ಉಡುಪಿಗೆ ಸನಿಹವಿರುವ ಕಲ್ಯಾಣಪುರದ ಒಂದು ಪ್ರತಿಷ್ಠಿತ ವೈದಿಕ ಕುಟುಂಬದಲ್ಲಿ ಆದರ್ಶ ದಂಪತಿಗಳಾಗಿದ್ದ ಶ್ರೀ ಗಣಪಾದರ ಶ್ರೀನಿವಾಸಯ್ಯ—ಕೃಷ್ಣಮ್ಮ ದಂಪತಿಯ ರತ್ನಗರ್ಭಸಂಭೂತರಾದ ಮಂಜುನಾಥಯ್ಯನವರು ಜನಿಸಿದರು. ಮಂಜುಳ ಶರೀರದವರಾದ ಶ್ರೀಮಂಜುನಾಥಯ್ಯನವರು ಯಕ್ಷಗಾನ ಪ್ರಪಂಚದಲ್ಲಿ ಧ್ರುವತಾರೆಯಂತೆ ಬೆಳಗಿದ ಶ್ರೀ ರಾಮಚಂದ್ರಯ್ಯನವರ ಒಡನಾಟದಲ್ಲಿದ್ದು ಹಾಡುವುದನ್ನೂ ಮೃದಂಗವನ್ನೂ ಕಲಿತರು. ಆಗಲೇ ಇವರ ಕಂಠಶ್ರೀಗೆ ಮಾರುಳಾದ ಕೆಲವರು ಇವರನ್ನು ನಾಟ್ಯ ಕೂಟದಲ್ಲಿ ಸೇರಿಸಿದರು.

ಹೆಂಗಸರನ್ನು ನಾಚಿಸುವ ಮಂಜುನಾಥಯ್ಯನವರ ನೀಳವಾದ ಕೇಶವಾಶ್ಮ, ಮಧುರಕಂಠ, ಮದಗವಿನವ ಶ್ರೀ ಭೂಮಿಕೆಯನ್ನು ನಾಟಕದಲ್ಲಿ ಕಂಡ ಭಾಗ್ಯವಂತರು ಹಲವರಿದ್ದಾರೆ. ಆದರೆ ಆಗಲೇ ಅವರ ಅಂತರಂಗದಲ್ಲಿ ಸುಪ್ತವಾಗಿದ್ದ ಸಂಗೀತಾಧ್ಯಯನವು ಈಗ ಅವರನ್ನು ಅವರ ಅಧ್ಯಯನಕ್ಕೆಂದು ವೈಸೂರಿಗೆ ಹೋಗುವಂತೆ ಮಾಡಿತು. ಆದರೆ ಆಗಿನ ಕಾಲದಲ್ಲಿ ಈಗಿನಂತೆ ಸಂಗೀತ ಕಲಿಯಲು ಶಾಲೆಗಳಾಗಲೀ, ಸಂಗೀತ ಶಾಲೆಗಳಾಗಲೀ ಇರಲಿಲ್ಲ. ಗುರುಕುಲ ವಾಸವೇ ಆಗ ಗತಿಯಾಗಿತ್ತು. ಆಗ ವೈಸೂರಿನಲ್ಲಿ ಬಹು ಖ್ಯಾತಿ ಪಡೆದ ವೈದಿಕ ಶಿಖಾಮಣಿ|| ವೀಣೆ ಶೇಷಣ್ಣನವರು, ಗಾನ ವಿಶಾರದ ವಿ. ಬಿಡಾರ ಕೃಷ್ಣಪ್ಪನವರು ಸಂಗೀತದಲ್ಲಿ ತುಂಬಾ ಕೃಷಿ ಮಾಡಿದವರಾಗಿದ್ದರು. ಮಂಜುನಾಥಯ್ಯನವರು ಬಿಡಾರಂ ಕೃಷ್ಣಪ್ಪನವರ ಶಿಷ್ಯರಾಗಿ ಸಂಗೀತ ಕಲೆಯ ವ್ಯಾಸಂಗಕ್ಕೆ ತೊಡಗಿದ್ದರು. ಸ್ವಲ್ಪವೇ ಸಮಯದಲ್ಲಿ ತಮ್ಮ ಗುರುಗಳ ಅಚಲವಾದ ಪ್ರೇಮವು — ಅನುಂಗಾಗಳನ್ನು ಇವರು ಸಂಪಾದಿಸಿಕೊಂಡರು. ಆಗ ಇಂದು ಫಿಡ್ಲಿನಲ್ಲಿ ಅತ್ಯಂತ ನಿಷ್ಣಾತರೆಂದು ಸುಪ್ರಸಿದ್ಧರಾದ ಶ್ರೀ ಜಾಡಯ್ಯನವರೂ ಶ್ರೀ ಮಂಜುನಾಥಯ್ಯನವರ ಜೊತೆಗೆ ಸಂಗೀತ ಕಲಿಯುತ್ತಿದ್ದರು. ಜಾಡಯ್ಯನವರ ಅಪಾರ ವಿದ್ವತ್ವವನ್ನು ಕಂಡ ಮಂಜುನಾಥಯ್ಯನವರಿಗೆ ಅವರಲ್ಲಿ ಗಾಢ ಮೈತ್ರಿಯಿತ್ತು.

ಉಡುಪಿಯಲ್ಲಿ ವಾಸ್ತವ್ಯ

ಕಾರಣಾಂತರಗಳಿಂದ ಉಡುಪಿಗೆ ಮರಳಿದ ಮಂಜುನಾಥಯ್ಯನವರಿಗೆ ಮುಂದೆ ತಮ್ಮ ಸಂಗೀತ ಕಲಾಭ್ಯಾಸವನ್ನು ಮುಂದುವರಿಸಲಾಗದೆ ಉಡುಪಿಯಲ್ಲೇ ನೆಲೆನಿಂತರು. ಇದರಿಂದ ಇಲ್ಲಿನ ಯುವಕವೃಂದಕ್ಕೆ ಹೊಸ ಚೈತನ್ಯ ಮೂಡಿ ಉಡುಪಿ ಒಂದು ಕಲಾಕೇಂದ್ರವಾಯಿತು. ಸ್ವಭಾವತಃ ಉದಾರರಾದ ಇವರಲ್ಲಿಗೆ ಬಂದು ಹೋಗುವವರಿಗೆ ಕಡಿಮೆಯಿಲ್ಲ. ಫಲತಃ ಇವರು ಸಂಪಾದಿಸಿದ್ದು ಅವರ ಖರ್ಚಿಗೇ ಸಾಲದೆಂಬಂತೆ ಆಯಿತು. ಸಾಮಾನ್ಯವಾಗಿ ಇವರಿಗೆ ಎಲ್ಲಾ ವಾದ್ಯಗಳಲ್ಲಿ ಸಾಧಕಸ್ಯ ಪರಿಶ್ರಮವಿದ್ದರೂ, ಪಿಟೀಲಿನಲ್ಲಿಯೂ ಹಾಡುಗಾರಿಕೆಯಲ್ಲಿಯೂ ಪಾಂಡಿತ್ಯ ಅಗಾಧವಾದುದು. ಊರಿಗೆ ಬಂದ ಮಗನಿಗೆ ಮದುವೆ ಮಾಡಿತನ್ನ ಭಾರ ಇಳಿಸಿಕೊಳ್ಳಬೇಕೆಂದು ತಾಯಿ ಮಾಡಿದ ಪ್ರಯತ್ನ ವಿಫಲವಾಗಿ ಮಂಜುನಾಥಯ್ಯನವರು ಆಜನ್ಮ ಬ್ರಹ್ಮಚಾರಿಯಾಗಿಯೇ ಉಳಿದು ಉಡುಪಿಯ ಜಡಗೋಲು ಕೃಷ್ಣನ ಕೈವಾ ಪಾತ್ರರಾದರು.

ಅಂದಿನಿಂದ ಉಡುಪಿಯಲ್ಲಿ ಮಂಜುನಾಥಯ್ಯನವರ ಮನೆ ಉಡುಪಿಯ ಒಂದು ಶ್ರೇಷ್ಠ ಕಲಾಕೇಂದ್ರವಾಯಿತು. ಶಿಷ್ಯರ ಸಂಖ್ಯೆ ಹೆಚ್ಚಾದಂತೆ ಮಂಜುನಾಥಯ್ಯನವರ ಉತ್ಸಾಹವೂ ವರ್ಧಿಸಿ ಸಂಗೀತ ಸರಸ್ವತಿಯ ರಸಗ್ರಾಹಕ ಉಡುಪಿಯಲ್ಲಿ ಧಾರಾಕಾರವಾಗಿ ಪ್ರವಹಿಸಿತು. ಉಡುಪಿಯು ಜನತೆಗೆ ಇವರ ಜೋಗ್ಯತೆಯನ್ನರಿಯಬೇಕಾದರೆ ಇವರು ಒಂದು ದೊಡ್ಡ ಶಿಷ್ಯ ಮಂಡಳಿಯನ್ನೇ ನಿರ್ಮಿಸಬೇಕಾಯಿತು. ಕಳೆದ ನಾಲ್ಕು ದಶಕಗಳಲ್ಲಿ ಮಂಜುನಾಥಯ್ಯನವರಿಂದ ಸಂಗೀತ ಕಲಿತು ವಿದ್ಯಾಂಸರಾಗಿ ಖ್ಯಾತಿ ಪಡೆದವರು ಅಸಂಖ್ಯ ಮಂದಿಯಿದ್ದಾರೆ. ಇಂಥ ಶಿಷ್ಯ ಸಮೂಹವೇ ಇವರ ಅಮೂಲ್ಯ ಸಂಪತ್ತು ಎನಿಸಿದೆ.

ಕಲಿಯುವ ಕೃಷ್ಣಯ್ಯುಳ್ಳ ಯಾವುದೇ ಒಬ್ಬ ಜ್ಞಾನಿಯುಮುಳ್ಳವು ಹಿಂತೆರಳ ಬೇಕಾಗಿಲ್ಲ. ಅಂಥವರಿಗೆ ನಿರ್ವಂಚನೆಯಿಂದ ಕಲಿಸುವ ಹಿರಿಯ ಗುಣ ಇವರದು. ಸಾಮಾನ್ಯವಾಗಿ ಸಂಗೀತವು ಒಂದು ಲಲಿತ ಕಲೆಯಾದರೂ, ಮಂಜುನಾಥಯ್ಯನವರಿಗೆ ಅದೇ ಒಂದು ಪರಮ ಪುರುಷಾರ್ಥ. ಸಂಗೀತವನ್ನು ಮಂಜುನಾಥಯ್ಯನವರಂತೆ ಪರಿಣಾಮಕಾರಿಯಾಗಿ ಬೋಧಿಸುವ ಗುರುಗಳು ಇಂದು ಬಹು ಕಡಿಮೆ ಎಂದರೆ ಅತಿಶಯೋಕ್ತಿಯೆನಿಸಲಾರದು.

ಮಂಜುನಾಥಯ್ಯನವರ ಶಿಷ್ಯ ಪ್ರೇಮವು ನಿಜಕ್ಕೂ ಪ್ರಶಂಸನೀಯವಾದುದು. ಸಂಗೀತದ ಗಂಧಗಾಳಿಯೇ ಇಲ್ಲದವರನ್ನು ಸಂಗೀತ ಶಿಖಾಮಣಿಗಳನ್ನಾಗಿ ಮಾಡಿದ ಮಂಜುನಾಥಯ್ಯನವರು ತುಂಬಾ ಪಳಗಿದ ಕೈಯಾಗಿದ್ದಾರೆ. ವಿದ್ಯಾರ್ಥಿ ಎಂತವನೇ ಇರಲಿ ಮುಚ್ಚುಮರೆಯಿಲ್ಲದೆ ಹೇಳಿಕೊಡುವ ಅಭ್ಯಾಸ ಇವರದು. ಅವನಿಗೆ ಕಲಿಸುವ ಈ ತೆರನ ಪುತ್ರ ನಿರ್ವಿಶೇಷವಾದ ವಾತ್ಸಲ್ಯವನ್ನು ಆ ಸರಳತನವನ್ನು ಮೆಚ್ಚದವರಾರು? ವಿದ್ಯಾರ್ಥಿ ಅವರ ಮನ ನೋಯಿಸಿದರೂ, ಸುಳ್ಳು ಹೇಳಿ ಮೋಸ ಮಾಡಿದರೂ ಅವನು ತನ್ನ ವಿದ್ಯಾರ್ಥಿ ಎಂಬ ಆತ್ಮೀಯತೆ ತಳೆಯುವ ಮನೋವೃತ್ತಿ ಇವರದು. ಆಧುನಿಕ ಕಾಲದಲ್ಲಿ ಮಂಜುನಾಥಯ್ಯನವರಂಥ ಆದರ್ಶ ಗುರುಗಳು ನಿಜಕ್ಕೂ ದೊರಕಿಕೆಯಷ್ಟೂ ಇಲ್ಲ.

ಸಚ್ಚಸೌಜನ್ಯದ ಈ ಸರಳ ವ್ಯಕ್ತಿಯ ವ್ಯಕ್ತಿತ್ವ ಬಹು ಘನವಾದುದು. ಇಂದು ಅವರು ತಮ್ಮ ಒಟ್ಟನೇ ವಂಶವನ್ನು ಮುಗಿಸಿ ಇಪ್ಪತ್ತೈಳರ ಯುವಕನಂತೆ ಸಂಗೀತ ಕಲಾರಾಧನೆ ನೂಡುತ್ತಿರುವರು. ಸುಖವನ್ನೇ ಕಾಣದ ಅವರ ಮುಖದಲ್ಲಿ ರಸಿಕತೆ, ಸದಭಿರುಚಿ, ಪ್ರಸನ್ನತೆ ಎದ್ದು ಕಾಣುತ್ತಿದೆ. ಇಂದೂ ಅವರಿಗೆ ಪಾಠ ಹೇಳುವ ಪ್ರವೃತ್ತಿ ನಿನೇನೂ ಕಡಿಮೆಯಿಲ್ಲ. ಪೂಜಾ-ಪಾರಾಯಣಾದಿ ನಿಯಮಗಳಿಂದ ಸಂಪ್ರದಾಯ ಬದ್ಧರಾದ ಇವರಿಗೆ ದೇವರಲ್ಲಿಯೂ ಧರ್ಮದಲ್ಲಿಯೂ ಅಗಾಧವಾದ ಭಕ್ತಿ—ಶ್ರದ್ಧೆಗಳವೆ. ಶ್ರದ್ಧಾವಂತರೂ, ವಿನೀತರೂ ಆದ ಇವರಿಗೆ ಸಮೂಜದ ನೆರವು ಸ್ಮಿತಿಸ್ಥೈಗಳಿಗೆ ಕೈ ನೀಡುವ ಇಚ್ಛೆಯಿಲ್ಲ.

ದಾಸರ ಹಾಡುಗಳನ್ನು ಮೊದಲಾಗಿ ಕಛೇರಿಗಳಲ್ಲಿ ಬಳಸಿದ ಕೀರ್ತಿ ಇವರ ಗುರುಗಳದ್ದಾದರೆ ಅದನ್ನು ಅದೇ ನಾಡಿನಲ್ಲಿ ಮುಂದುವರಿಸಿ ಪ್ರಚಾರ ಮಾಡಿದ ಶ್ರೇಯಸ್ಸು ಮಂಜುನಾಥಯ್ಯನವರದು. ದಾಸ ಸಾಹಿತ್ಯವನ್ನು ಹಾಡುವ ಇವರ ವೈಖರಿ ತುಂಬಾ ಆಕರ್ಷಣೀಯವಾಗಿದೆ. ಈ ಘನ ಪಂಡಿತರ ಸನ್ಮಾನ ಜನತಾ ಸರಕಾರದಿಂದಲೂ ಆಗಬೇಕು.

—ಬಿ ಎನ್. ಜೋಗಿತ್ತಾಯ

ಪ್ರಜಾರಾಜ್ಯದಲ್ಲಿ ಪ್ರತಿನಿಧಿ ಪ್ರಭುತ್ವ

(ಗತೇ ಪುಟದಿಂದ)

ನುಭವ, ಇರುವುದಿಲ್ಲ. ಸರ್ಕಾರೂ ಅಧಿಕಾರಿಗಳಾದರೆ ಯಾವುದೇ ಕೆಲಸವನ್ನು ಮಾಡುವಾಗ, ಯಾರು ಯಾರನ್ನು ಕೇಳಬೇಕು? ಯಾರ ಅಭಿಮತದಂತೆ ನಡೆಯಬೇಕು? ಎಂಬ ನಿರ್ಧಾರವಿಲ್ಲದೆ, ದೇಶದಲ್ಲಿ ಅರಾಜಕತೆ, ನೈತಿಕತೆಯುಂಟಾಗುವುದು. ನವ ಗೆ ಸಾಧ್ಯವಲ್ಲದ ಕೆಲಸವನ್ನು ಮಾಡಲು ನಾವು ಇನ್ನೊಬ್ಬರ ಸಹಾಯ ಪಡೆದು ಅವರೇ ಮಾಡಿಕೊಡಲು ನಾವು ಜವಾಬ್ದಾರಿ ಕೊಡುವಂತೆಯೇ, ರಾಜ್ಯಭಾರಕ್ಕೆ ನಾವು ಯೋಗ್ಯ ಪ್ರತಿನಿಧಿಗಳನ್ನಾರಿಸಬೇಕು. ನಮ್ಮ ಸ್ವಂತ ಕೆಲಸವನ್ನು ಇನ್ನೊಬ್ಬರಲ್ಲಿ ಹೇಳ ಮಾಡಿಸುವಾಗ ಯೋಗ್ಯರಾದನರನ್ನು, ವಿಶ್ವಾಸಿಗಳನ್ನು, ಕಾರ್ಯಚತುರರನ್ನು ಆರಿಸಿಕೊಳ್ಳುವಂತೆಯೇ, ನಮ್ಮ ಪ್ರತಿನಿಧಿಗಳನ್ನಾರಿಸುವಲ್ಲಿಯೂ ಮತದಾರರು ಬಹು ಎಚ್ಚರಿಕೆಯಿಂದಿರಬೇಕಾಗುವುದು. ಇಲ್ಲವಾದರೆ ಪ್ರತಿನಿಧಿ ಮಾಡುವ ಯಾವುದೇ ತಪ್ಪು, ದೋಷಗಳನ್ನು ಸರ್ಯಾಯವಾಗಿ ಪ್ರಜೆಗಳೇ ಮಾಡಿದಂತಾಗುವುದು. ಚುನಾವಣೆಯ ಕಾಲ ಮತದಾರರು ಕ್ಷಣಿಕವಾದ ಯಾವುದೇ ಆಸೆ ಆಮಿಷಗಳಿಗೆ, ಒತ್ತಾಯದಾಕ್ಷಿಣ್ಯಕ್ಕೆ ಬಲಾತ್ಕಾರ ಬೆದರಿಕೆಗಳಿಗೆ, ಬಲಿಬಿದ್ದು ತಮ್ಮ ಪ್ರತಿನಿಧಿಯನ್ನು ಆರಿಸುವಲ್ಲಿ ಹೆಚ್ಚೆ ತಪ್ಪಿದರೆಂದರೆ ಮತ್ತೆ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡಂತೆ! ಮುಂದಿನ ತಮ್ಮ ಕಷ್ಟನಷ್ಟಕ್ಕೆ ತಾವೇ ಕಾರಣರಾದಂತೆ! ಆದ್ದರಿಂದಲೇ ಪ್ರಜೆಗಳು ತಮ್ಮ ಪ್ರತಿನಿಧಿಯ ಆಯ್ಕೆ ಮಾಡುವಾಗ ತುಂಬಾ ಮುಂಜಾಗ್ರತೆ ವಹಿಸಬೇಕಾಗಿದೆ.

ಪ್ರತಿನಿಧಿಯ ಹೊಣೆಗಾರಿಕೆ

ಪ್ರಜೆಗಳಿಂದ ಅಧಿಕಾರವನ್ನು ಪಡೆದು ರಾಜ್ಯಭಾರ ನಡೆಸುವ ಪ್ರತಿನಿಧಿಯು ಪ್ರಭುವಾಗಿ ಮೆರೆಯನೆನಿಸುತ್ತಾನೆ. ಆತ ತನ್ನ ಹೊಣೆಗಾರಿಕೆಯನ್ನೆಂದೂ ಕಡೆಗಣಿಸಿರಬಾರದು. ಮತದಾರರ ಬೇಕು, ಬೇಡಿಕೆಗಳನ್ನು ಕೈಲಾದ ಮಟ್ಟಿಗೆ ಕಾರ್ಯಗತಗೊಳಿಸುವಂತೆ ಯತ್ನಿಸಬೇಕು. ತನ್ನ ಕ್ಷೇತ್ರದ ಆವಶ್ಯಕತೆಗಳನ್ನು ಪ್ರತಿನಿಧಿಸಿ ಅವನ್ನು ಸಾಧಿಸಲು ಯಾವ ರೂಪದಲ್ಲಾದರೂ ಯತ್ನಿಸಬೇಕು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಲ್ಲಿಯ ಶಾಸನ ಸಭಾ ಪ್ರತಿನಿಧಿಗಳಿಗೆ ಅವರ ಮತದಾರರಿಂದ ದಿನಂಪ್ರತಿ ಹಲವಾರು ಪತ್ರಗಳು ಬರುತ್ತಿವೆಯಂತೆ! ಆ ಪತ್ರಗಳಲ್ಲಿರುವ ಜನತೆಯ ಕೇಳಿಕೆ, ಹೇಳಿಕೆಗಳಿಗೆ ಸದಸ್ಯರು ಸಮರ್ಪಾಧಾನಕರವಾದ ಉತ್ತರವನ್ನೀಯುವರಲ್ಲದೆ, ಅವುಗಳನ್ನು ಸರಕಾರದ ಗಮನಕ್ಕೆ ತಂದು ಅವು ಕಾರ್ಯಗತವಾಗುವಂತೆಯೂ ಪ್ರಯತ್ನಿಸುತ್ತಾರಂತೆ! ಅಂತೆಯೇ ನಮ್ಮ ಪ್ರತಿನಿಧಿಗಳೂ ತಮ್ಮ ತಮ್ಮ ಮತದಾರ ಕ್ಷೇತ್ರಕ್ಕೆ ಎರಡು-ಮೂರು ತಿಂಗಳಿಗೊಂದಾವರ್ತಿಯಾದರೂ ಭೇಟಿಯಿತ್ತು ಅಲ್ಲಿ ಜನತೆಯ ಬೇಡಿಕೆಗಳೇನು? ಆವಶ್ಯಕತೆಗಳೇನು? ಎಂಬುದನ್ನು ಕೇಳಿಕೊಂಡು ಮತದಾರರಿಗೆ ತೃಪ್ತಿ ತರುವ ರೀತಿಯಲ್ಲಿ, ಸರಕಾರದ ಗೊತ್ತುವಳಿಗಳನ್ನು, ಧೋರಣೆಗಳನ್ನು ಜನತೆಯ ಹಿತಕ್ಕಾಗಿ ಸರಕಾರವು ಕೈಗೊಂಡ ಯೋಜನೆ ಸಾಧನೆಗಳನ್ನು ಸವಿವರವಾಗಿ ತಿಳಿಸಬೇಕು. ಆಗಲೇ ಜನತೆಗೆ ತಮ್ಮ ಪ್ರತಿನಿಧಿಗಳ ನೇರ, ಸರಕಾರದ ಆಡಳಿತದ ನೀತಿಯ ಮೇಲೆ ಪೂರ್ಣ ವಿಶ್ವಾಸ—ಮತ್ತು ತೃಪ್ತಿ ಉಂಟಾಗುವುದು! ಪ್ರಜೆಗಳೂ ಪ್ರತಿನಿಧಿಗಳೂ ಹೀಗೆ ಐಕ್ಯದಿಂದ ಸೌಹಾರ್ದತೆಯಿಂದ, ಪರಸ್ಪರ ವಿಶ್ವಾಸದಿಂದ ಇದ್ದರೆ ಮಾತ್ರ ಪ್ರಜಾಸತ್ತೆಯಲ್ಲಿ ಪ್ರತಿನಿಧಿ ಪ್ರಭುತ್ವವು ಪರಿಪೂರ್ಣ ಫಲಕಾರಿಯಾಗುವುದು!-ರಾಜಕಾರಣಿಗಳು ಶುದ್ಧವಾದರೆ ರಾಜಕೀಯ ಶುದ್ಧವೆಂಬ ಮಾತು ಎಂದೆಂದಿಗೂ ಸತ್ಯ!

—ಶ್ರೀ ಕೆ. ಜಿ. ತಿಪ್ಪ, ಕಡಂದಲೆ.

ದೇವದಾಸಿ

(ಮುಂಬಯಿಯ "ಕಸಬು" ಮಾರ್ಗದಲ್ಲಿ ಒಮ್ಮೆ ಹೋಗಬೇಕಾದ ಸಂದರ್ಭ ಬಂದಾಗ ಅಲ್ಲಿ ನೋಡಸಿಕ್ಕಿದ ಕರುಣಾಪೂರಿತ ದೃಶ್ಯದ ಪರಿಣಾಮವೇ ಈ ಪದ್ಯ)

ಎನಲ್ಲಿ ನಿಂತಿಹುದು ಬಾಗಿಲಿನ ಬಳಿಯಲ್ಲಿ,
ಥಳ-ಥಳಗಿ, ಮಿನು-ಮಿನುಗಿ
ಹೊಳೆಯುತಿಹುದೇನು?
ದೇವಲೋಕದ ಜೀವ ಭೂಮಿಗಿಳಿದಿದೆ
ಏನು,
ಇಲ್ಲದಿರೆ ಈ ಹೊಳಪ ಪರಿಯು ಏನು?
॥ ೧ ॥

ಚೆಂದುಟಿಯು ತೆರೆದಿಹುದು,
ಕಣ್ಣುಬ್ಬು ಏರಿಹುದು,
ಹೊಲಸು ಶೃಂಗಾರವದು ಇನ್ನೂ
ಮೀರಿಹುದು !
ಕೃತಕ ಸೌಂದರ್ಯಕ್ಕೆ ಮರುಳಾದ
ವಿಟರನ್ನು,
ಗಳಿಗೆ ಬಾಡಿಗೆ ಪಡೆದು ಕಳಿಸುತಿಹಳು
॥ ೨ ॥

ಅದುವೆ ಮಹಾಸಾಧನೆಯೆ ನಿನ್ನ
ಬಾಳಿಗೆ ಮಂತ್ರ?
ಎಷ್ಟು ಸೀಮೆಯ ಜನರ ಮಿಲನ ಗೈದೆ?
ಲೆಕ್ಕ ಬರೆದಿಟ್ಟಿಹೆಯಾ ಬಂದು
ಹೋಗುವವರನ್ನು?
ಎಷ್ಟು ಪರಿಜನರನ್ನು ನೋಡಿರುವೆಯಾ?
॥ ೩ ॥

ಸತಿಯಾಗಿ-ಸುತೆಯಾಗಿ ಜಗಕೆ
ಕಂಪನೆ ಕೊಡುವ
ನಿನ್ನ ಬಾಳಲ್ಲಿ ಏನಾಗುತಿಹುದು?
ಅವ ಪತಿ-ತಾತನು ನಿನ್ನ ಕಳ.ಹಿದ
ನಿಲ್ಲಿ,
ಅವ ಧರ್ಮದ ತತ್ವ ಬೋಧಿಸಿತು
ನಿನಗೆ? ॥ ೪ ॥

"ಸ್ತ್ರೀಶಕ್ತಿ" "ಸ್ತ್ರೀ ತಾಯಿ"—ಮಾರ್ದ
ನಿಸುತಿದೆ ನುಡಿಯು,
ಈಗೀಕೆ ಆ ನುಡಿಯು ಕಣ್ಣು
ಮುಚ್ಚಿಹುದು?
ನಿನ್ನ ಮನೆ ಬಾಗಿಲಲಿ ಬಿದ್ದಿರುವ
ವಿಟರುಗಳು,
ಅವರ ವ ನೆ ಬಾಗಿಲನು ತೆರೆದೇ ಇಹರೆ?
॥ ೫ ॥

ನೀ ಸತಿಯು, ನೀ ಸುತೆಯು,
ನೀ ತಾಯಿಯಾಗಿರುವಿ
ಎಷ್ಟು ಜನ ಪುತ್ರರನು
ರಮಿಸಿರುವೆಯಾ!
ನಿನ್ನೊಡನೆ ರಮಿಸುತಿಹ ಆ ಪುತ್ರ
ಲಂಪಟರು,
ಅವೇಕೋ ನೀ ತಾಯಿ-ಎಂದರಿಯರು
॥ ೬ ॥

ಕುಲಗೌರಿ ಎಂದೆಂಬ ಹೆಸರನುಜ್ಜಿಸಿ
ಮತ್ತೆ,
"ದೇವ-ದಾಸಿ"ಯೆಂಬ ಕರೆದವರು
ಯಾರು!
ನೊಂದಿತೇ ಮನ ನಿನ್ನ ಈ ಜನದ
ನಿರ್ದಯಕೆ
ಅಳಬೇಡ-ಅಳಬೇಡ ಇದು ನಿನ್ನ ಕರ್ಮ
॥ ೭ ॥

ಬಂದೇ ಬರುವುದು ಒಂದು ದಿನವು
ನಿನ್ನಿದಿರಲ್ಲಿ,
ಭುವಿಯಂತಾ ಕಣ್ಣಿರೆದು
ನೋಡುವುದು ನಿನ್ನ |
ಮಾಯಶಕ್ತಿಗಳನ್ನು ಕೇಂದ್ರ
ಬಂಧುಗಳೊಳಿರಿಸಿ,
ಎದೆಸೆಟೆದು—ನೈ ಮುರಿದು ಎದ್ದೇಳು
ತಾಯಿ ॥ ೮ ॥

25-9-62 —'ಗಿರಿಬಾಲ'

ಕಮ್ಯೂನಿಸ್ಟ್ ಕಪ್ಪುರಿಯಲ್ಲಿ ಇಸ್ಲಾಂ

(ಎನೇ ಸುಟದಿಂದ)

ಶಾಚಿ ಬಿಟ್ಟುಹೋದರೆ ಸಾಕೆಂದು ಅವನು ಒಪ್ಪಿದನು. ವಿಚ್ಛೇದನದ ನಂತರ ಮುಲ್ಲಾನೇ ಆಕೆಯನ್ನು ನಿಕಾ ಮಾಡಿಕೊಂಡನು ಅವನ ಅಂತಃಪುರ ಖಜಾನೆಗೆ ಸೇರಿದವಳಲ್ಲಿ ಆಕೆ ನೂರನೆಯವಳು.

ರಷ್ಯಾದ ಕಮ್ಯೂನಿಸ್ಟ್ ಮುಖಪತ್ರಿಕೆ 'ಪಾವ್ದಾ'ಕ್ಕೆ ಅದು ತಿಳಿದೊಡನೆ ಮುಲ್ಲಾನನ್ನು ಕಟುವಾಗಿ ರೀಕಿಸಿತು! ಕಮ್ಯೂನಿಸ್ಟರಿಗೆ ಸುಲಭವಾಗಿ ಟೊಪ್ಪಿಹಾಕಬಹುದೆಂದು ಜಯೂಬ ನೆನೆಸಿರಬಹುದು. ಕಾಮಿನಿಯನ್ನಿತ್ತಾದರೂ ಮುಸಲ್ಮಾನರಿಗೆ ಟೊಪ್ಪಿ ಇಡಬಹುದೆಂದು ಕಮ್ಯುನಿಸ್ಟರು ನಂಬಿಕೊಂಡಿರಬಹುದು.

ಅದು ಮಾತ್ರವಲ್ಲ. ಮುಸಲ್ಮಾನರ ಮುಸಲತ್ತೇ ಒಂದು ರೀತಿ. ಭಾರತವನ್ನು ಇಂಡಿಯಾ—ಪಾಕಿಸ್ತಾನವನ್ನಾಗಿ ಮಾಡಿದರು. ಈಗ ತ್ರಿಪುರದಲ್ಲಿ ಬಂದು ತಂಗಲಾರಂಭಿಸಿ, ಅರ್ಧವಾಸಿ ಅಲ್ಲೀಗ ಪಾಕಿಸ್ತಾನಿಗಳೇ ಇದ್ದಾರೆ. ಆಸ್ಸಾಮಿನ ದುಃಸ್ಥಿತಿಯೂ ಬೆಳಕಿಗೆ ಬಂದಿದೆ. ಅಲ್ಲಿಯ ಮೊಜಿ ಆರ್ಥಿಕ ಮಂತ್ರಿ ದೇವೇಂದ್ರ ಶರ್ಮರು ಸರಕಾರದ ಗಮನಕ್ಕದನ್ನು ತರಲು ಪ್ರಯತ್ನಿಸುತ್ತಿದ್ದಾರೆ. ಪಶ್ಚಿಮ ಬಂಗಾಲದ ಪಾಡೂ ಅಷ್ಟೆ. ಈ ಸ್ಥಳಗಳಲ್ಲಿ ಕಮ್ಯೂನಿಸ್ಟರು ಅವರೊಂದಿಗೆ ಸೇರಿಕೊಂಡು ತಮ್ಮ ತಮ್ಮ ಟೀಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆ ಪ್ರದೇಶಗಳನ್ನು ಉಪಾಯದಿಂದ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಲು ಪಾಕಿಸ್ತಾನಿಗಳು ಪಾಡು ಪಡುತ್ತಿದ್ದಾರೆ.

ಸೈಪ್ರಸ್ಸಿನಲ್ಲಿ ಗ್ರೀಕರೂ ಮುಸಲ್ಮಾನರೂ ಇದ್ದಾರೆ. ಆದೂ ಬ್ರಿಟಿಷರ ಬಂಧನದಲ್ಲಿತ್ತು. ವಿಮೋಚನೆಯ ವೇಳೆ ಕಪ್ಪಸ ಟ್ಟವರು ಗ್ರೀಕರು. ಸ್ವಾತಂತ್ರ್ಯ ಪೋರಾಟದಲ್ಲಿ ಅವರು ಜಯಪಡೆದೊಡನೆ ಪಾಲಿಗೆ ಸಿದ್ಧವಾದವರು ಮುಸ್ಲಿಮರು. ಅಲ್ಲೂ ಅವರು ಪಟ್ಟು ಹಿಡಿದದ್ದು ವಿಭಜನೆಗೆ!

ಆ ರೀತಿ ಚೈನಾದಲ್ಲೂ ತಾವು ಬಾಲ ಅಡಿಸಬಹುದೆಂದು ಅವರು ಭಾವಿಸಿಕೊಂಡಿರಬಹುದು. ಆದರೆ ಅದು ಕೇವಲ ಕನಸಾಗಿಳಿಯುವದರಲ್ಲಿ ಸಂದೇಹವಿಲ್ಲ. ಪಾಕಿಸ್ತಾನಕ್ಕಾದರೋ 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬಂತೆ ಅದು ತನ್ನ ವಿನಾಶಕಾಲದಲ್ಲಿ ತಾಯಿನೆಲ ಭಾರತದೊಂದಿಗೆ ಕಾಲುಕೆದರಿ ಜಗಳವಾಡುತ್ತಿದೆ.ಅವರನ್ನು ನಂಬಿ ವಿಸ್ತಾರವಾದಿ ಚೈನಿಕಮ್ಯೂನಿಸ್ಟರು ಇತ್ತ ಬಂದಲ್ಲಿ-ಪಾಪಿಯ ಬೆನ್ನು ಹಿಡಿದುಕೊಂಡು ಹೋದವನೂ ಮುಳುಗಿದಂತೆ ಅವರಿಗೂ ಸರಿಯಾದ ಪಾಠ ಇಲ್ಲಿ ಕಲಿಸಲಾಗುವದು. ಚೈನಾದಲ್ಲಿ ಇಸ್ಲಾಂ ಕಮ್ಯೂನಿಸ್ಟ್ ಕಪ್ಪುರಿಯಲ್ಲಿ ಸಿಕ್ಕಿಕೊಂಡಿರುತ್ತದೆ.

ಚೈನಿ ಕಮ್ಯೂನಿಸ್ಟರೂ, ಪಾಕಿಸ್ತಾನಿಗಳೂ ಸೇರಿ ಸಧ್ಯದಲ್ಲೇ ಭಾರತದ ಮೇಲೆ ಭಾರೀ ಶಸ್ತ್ರೂಣದಲ್ಲಿ ಆಕ್ರಮಣ ನಡೆಸುವರೆಂದು ಪ್ರಜಾಬಿನ ಮುಖ್ಯ ಮಂತ್ರಿ ಪ್ರತಾಸ ಸಿಂಘೆ ಕೈರಾನರು ತಮ್ಮ ಭಯವನ್ನು ಪ್ರದರ್ಶಿಸಿದ್ದಾರೆ. ಗಡಿಯುದ್ದಕ್ಕೂ ಚೈನಿ ಕಮ್ಯೂನಿಸ್ಟ್ ಸೇನೆಯು ದೊಡ್ಡ ಸಂಖ್ಯೆಯಲ್ಲಿ ಬಂದು ಬಾಕಿ ಬಿದ್ದಿದೆಂಬ ವರ್ತಮಾನ ಹಬ್ಬಿದೆ ಅಲ್ಲದೆ ಅವರು ಲಡಾಖ್ ಪ್ರದೇಶದಲ್ಲಿ ಮುಂದರಿಯುತ್ತಿದ್ದಾರೆಂಬ ಸಮಾಚಾರ ಪ್ರಕಟವಾಗಿದೆಯೂದರೂ ಅದಕ್ಕೆ ಸರಕಾರೀ ಸಮರ್ಥನೆ ವಲಯದಿಂದ ಬೇಕಾದಷ್ಟು ಆಧಾರ ಸಿಕ್ಕೆರುವದಿಲ್ಲ ಆದರೂ, ಅಮೇರಿಕದಲ್ಲಿದ್ದ ಸೇನಾಪ್ರಮುಖ ಚೌಧರಿಯವರು ತನ್ನ ಪ್ರವಾಸವನ್ನು ನಿಲ್ಲಿಸಿ ಒಡನೆ ಭಾರತಕ್ಕೆ ಹಿಂತಿರಳಿ ಬರಬೇಕಾದಲ್ಲಿ ಪರಿಸ್ಥಿತಿ ಹದಗೆಟ್ಟಿದೆನ್ನುವದಕ್ಕೆ ಯಾವ ಜ್ಯೋತಿಷ್ಯನೂ ಕಾಣೆ ಹೇಳಬೇಕಾಗಿರುವದಿಲ್ಲ. ಆದೇ ಸಮಯದಲ್ಲಿ ಕಮ್ಯೂನಿಸ್ಟರ ಹಾಗೂ ಪಾಕಿಸ್ತಾನಿಗಳ ಗಡಿವಿವಾದ ಹೇಳತೀರದು.ಅಮೇರಿಕನರ ಸಹಾಯದಿಂದ ಆಕಾಶ ಕೊಡೆಯನ್ನು ರಚಿಸುವ ಮಾತುಬಂದಾಗ ಅದೇ ವಿಷಜಂತುಗಳು ಒಡ್ಡಿ ಬಂದು ಮಾತನ್ನು ಮದ್ಯದಲ್ಲೇ ಬಿಡುವಂತೆ ಮಾಡಿಸಿದವು. ಇದೀಗ ಆಕಾಶವಾಣಿಯ ಸಂದರ್ಭದಲ್ಲಿ ಅದೇ ರೀತಿ ಅವರು ಚಟುವಟಿಕೆಗಳನ್ನು ಮುಂದರಿಸಿರುವರು. ಪಾಕಿಸ್ತಾನವಾದರೋ ಭಾರತ ಆಕ್ರಮಣ ಮಾಡಿದಲ್ಲಿ ಚೈನಾ ಸಹಾಯಕ್ಕೆ ಬರುತ್ತದೆಂದು ಘೋಷಣೆಯಾಗಿ ಸಾರುತ್ತಿದೆ.

ತ್ರಿವಿಷ್ಟಪದಲ್ಲಿ ಹುಟ್ಟಿದ ಮಗುವಿಗೆ ಅದರ ತಾಯಿ—ತಂದೆ ಹೆಸರಿಡುವಂತಿಲ್ಲ. ಚೈನಿ ಕಮ್ಯೂನಿಸ್ಟ್ ಅಧಿಕಾರಿಯು 'ನಾಮಮದಾನ' ಮಾಡಬೇಕಾಗಿರುತ್ತದೆ. ಇದು ಅಲ್ಲಿನ ನಿಯಮ. ಅವರಿಗೆನೇ ಹಾಗಾದಲ್ಲಿ ಇನ್ನು ಮುಸ್ಲಿಮರ ಪಾಡಾದರೂ ಏನು? ಅವರೂ ಅತಿ ಕಪ್ಪಡಬೇಕಾಗಿರುತ್ತದೆಂದು ಬುದರಲ್ಲಿ ಸಂದೇಹವಿಲ್ಲ ಆಯೂಬ ಇವೀಗವಾದರೂ ಮತೀಯ ಮಾತ್ಸರ್ಯವನ್ನು ಜೊರೆದು ಕಣ್ಣುಬಿಟ್ಟು ಬುದ್ಧಿವಂತಿಕೆಯಿಂದ ವರ್ತಿಸಿದಲ್ಲಿ ಕಮ್ಯೂನಿಸ್ಟ್ ಕಪ್ಪುರಿಯಿಂದ ಇಸ್ಲಾಮನ್ನುಳಿಸಬಹುದು.

—ಶಿವಶಂಕರ.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬುಕ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕಾಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಚೆಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗದ"ದ 42ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 43ನೆಯ ಹೊಸ ವರ್ಷಾರಂಭವಾಗುತ್ತಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾತಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ ಚಂದಾತಣವನ್ನು, ಸಿಂಡಿಕೇಟ್ ಬೇಂಕ್"ನ ಯಾವದೇ ಶಾಖೆಯಲ್ಲಿ 'ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಜಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರ್ ಮಾಡಬಹುದು. ವಿ. ಪಿ. ಮಾಡಿದರೆ 70 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸಿ ಕೊಡುವಂತೆ ವಿನ್ಮನಿಸುತ್ತೇನೆ.

—ಮೆನೇಜರ್.

ಹೊಸ ಪುಸ್ತಕ—

ನಚಿಕೇತರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

ವಿಜ್ಞಾನದ ಆಹ್ವಾನ

ಅಗ್ನಿ ದೇವನಿಗೆ ಅಂಜಬೇಡಿರಿ

ಬೆಂಕಿಯು ಮಾನವನ ಅತ್ಯಂತಾವಶ್ಯಕ ವಸ್ತುಗಳಲ್ಲಿ ಒಂದಾಗಿರುವಂತೆಯೇ ಆತನ ಹಳೆಯ ಒಡನಾಡಿಯೂ ಹೌದು. ಇವರಿಂದ ತನ್ನನ್ನು ರಕ್ಷಿಸಿಕೊಳ್ಳುವ ಪ್ರಯತ್ನವನ್ನು ಆತನು ಮಾಡಿಕೊಳ್ಳುತ್ತಲೇ ಬಂದಿದ್ದಾನೆ. ಇಂದು ಈ ಸಂಬಂಧದಲ್ಲಿ ಹಲವಾರು ವೈಜ್ಞಾನಿಕ ಸಂಶೋಧನೆಗಳು ನಡೆಯುತ್ತಿವೆ. ಅಮೆರಿಕೆಯಂತಹ ಸಂಪನ್ನ ರಾಷ್ಟ್ರದಲ್ಲಿ ಅಗ್ನಿಯಿಂದ ಬದುಕು ಳಿಯುವ ಉಪಾಯಗಳಿಗೆ ಸಂಬಂಧಿಸಿದ ಶೋಧನೆ ಮತ್ತು ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರತಿ ವರ್ಷವೂ ೨೦೦ ಲಕ್ಷ ಡಾಲರ್‌ಗಳಷ್ಟನ್ನು ನ್ಯಯಿಸುತ್ತಾರೆ. ಈ ಶತ್ರುವನ್ನು ಅತ್ಯಂತ ಸರಳ ಉಪಾಯಗಳಿಂದ ವರದಲ್ಲಿಟ್ಟುಕೊಳ್ಳುವಲ್ಲಿ ಅಲ್ಲಿನ ಜನರು ಯಶಸ್ವಿಯಾಗಿದ್ದಾರೆ.

ಸರಕಾರಿ ಇಲ್ಲವೇ ಖಾಸಗಿ ಸಂಸ್ಥೆಗಳು ಬೆಂಕಿಯೂರಿಸುವ ಆಧುನಿಕ ವೈಜ್ಞಾನಿಕ ವಿಧಾನಗಳನ್ನು ಜನತೆಯಲ್ಲಿ ಪ್ರಚಾರ ಮಾಡುತ್ತಾರೆ. ಈ ನನ್ನ ರಕ್ಷಾವನ್ನು ನಿಯಂತ್ರಿಸುವ ಮತ್ತು ಆತನನ್ನು ತಡೆಯುವ ತಂತ್ರಗಳು ನಮಗೆ ತಿಳಿದಿರುವುದರಿಂದ. ಬೆಂಕಿಯೆಂದರೆ ಹೆದರಿಕೆಯೊಗುವುದು ಕಡಿಮೆ ಯಾಗುತ್ತ ಬರುತ್ತಿದೆ. ಈ ದಿಸೆಯಲ್ಲಿ ಸಂಶೋಧಿತವಾದ ಸೂತನ ರಾಸಾಯನಿಕ ಮಿಶ್ರಣ, ಸುಧಾರಿಸಿದ ಉಪಕರಣ, ಹೆಲಿಕಾಪ್ಟರ್ ಮತ್ತು ಸಮವಸ್ತ್ರಗಳು ಪ್ರಮುಖ ಪಾತ್ರ ವಹಿಸುತ್ತವೆ.

ಬೆಂಕಿಯಿಂದಲೇನು ಬೇರೆ ಬೇರೆ ರೀತಿಯ ವಸ್ತುಗಳಲ್ಲಿ ಯಾವ ರೀತಿಯಿಂದಿಯು ಹಬ್ಬುತ್ತದೆ ಮತ್ತು ವಿಶೇಷ ಸಂದರ್ಭಗಳಲ್ಲಿ ಯಾವ ಅಧಿಕ ಪ್ರಭಾವಶಾಲಿ ವಿಧಾನದಿಂದ ಅದನ್ನು ನಿಯಂತ್ರಿಸಬಹುದು—ಎಂಬ ಪ್ರಶ್ನೆಗಳ ಕುರಿತಾಗಿ ಇಲ್ಲಿ ವಿವೇಚಿಸಬಹುದು.

ಶತಶತಮಾನಗಳಿಂದಲೂ ಬೆಂಕಿಯನ್ನು ಮಾನವನು ನೀರು, ಪೃಥ್ವಿ ಮತ್ತು ವಾಯುವಿನಂತೆಯೇ ಒಂದು ಪ್ರಾಕೃತಿಕ ತತ್ವವೆಂದು ನಂಬುತ್ತಾ ಬಂದಿದ್ದಾನೆ. ಆದರೀಗ ಆಜ್ಞಾನವೆಂದು ಸಿದ್ಧವಾಗಿದೆ. ಬೆಂಕಿಯು ಮೂಲವಸ್ತುವಲ್ಲ, ಅದು ಇಂಧನ, ಗಾಳಿ ಮತ್ತು ಉಷ್ಣತೆಗಳು ಮುಪ್ಪರಿಗೊಂಡುದರಿಂದ ಉಂಟಾದ ಒಂದು ತತ್ವವೆಂದಾತ ಸಂಶೋಧನೆಗಳಿಂದ ಅರಿತುಕೊಂಡನು. ಬೆಂಕಿಯಿಂದ ಈ ಮೂರು ವಸ್ತುಗಳಲ್ಲಿ ಯಾವದಾದರೊಂದನ್ನು ಪ್ರತ್ಯೇಕಿಸಿದರೆ ಅದು ನಂದಿಹೋಗುವುದು ಎಂಬುದನ್ನು ಆತ ಕಂಡುಕೊಂಡನು.

ಅಗ್ನಿಸಂಬಂಧದಲ್ಲಿ ನಡೆಸಿದಹಲವಾರು ಸಂಶೋಧನೆಗಳು ಬೆಂಕಿಯನ್ನು ಉಂಟು ಮಾಡಬಲ್ಲ ಕೆಲವು ರಾಸಾಯನಿಕ ಪದ್ಧತಿಗಳನೆಯೆಂಬುದನ್ನು ಸಿದ್ಧಪಡಿಸಿ ತೋರಿಸಿವೆ. ವಿಭಿನ್ನ ರೀತಿಯ ಬೆಂಕಿಯನ್ನು ನಂದಿಸಲು ಯಾವಾಗ ಯಾವ ಪದ್ಧತಿಯನ್ನು ಮತ್ತು ಯಾವ ರಸಾಯನಿಕ ವದಾರ್ಥವನ್ನು ಉಪಯೋಗಿಸಬೇಕು ಎಂಬುದನ್ನು ನಿರ್ಧರಿಸಲು ವಿಶೇಷಜ್ಞರು ಅಗ್ನಿಯನ್ನು ಪರೀಕ್ಷಿಸುವುದಕ್ಕೆ ಮಹತ್ವಿ ನೀಡುತ್ತಾರೆ.

ಅಗ್ನಿಯನ್ನು ನಾಲ್ಕು ಮುಖ್ಯ ವರ್ಗಗಳಲ್ಲಿ ವಿಂಗಡಿಸುತ್ತಾರೆ. ೧ ಕಾಗದ ಮತ್ತು ಒಣ ಮರಕ್ಕೆ ತಗಲುವ ಬೆಂಕಿ. ೨. ಆಗ್ನೇಯ ತರಲ ಪದಾರ್ಥ ಮತ್ತು ಗ್ಯಾಸ್‌ಗಳ ಬೆಂಕಿ. ೩. ವಿದ್ಯುತ್ತಿನ ಸರಿಗೆಗ ಕಟ್ಟನ ಬೆಂಕಿ ಮತ್ತು ೪. ತಾಂಬ್ರ, ಮೆಗ್ನೇರಿಯಂನೋಡಿಯಂ ಮೊದಲಾದ ಜಲನಶೀಲ ಧಾತುಗಳಲ್ಲಿರುವ ಬೆಂಕಿ.

ಬೇರೆ ಬೇರೆ ಪ್ರಕಾರದ ಅಗ್ನಿಯನ್ನು ಶಾಂತ ಪಡಿಸಲು ಬೇರೆ ಬೇರೆ ಉಪಾಯಗಳನ್ನು ಕಂಡು ಹಿಡಿದಿದ್ದಾರೆ. ಇದಕ್ಕೆ ತಪ್ಪಿ ಅನ್ಯವರ್ಗವನ್ನೆನುಸರಿಸಿದರೆ, ಪರಿಸ್ಥಿತಿ ಕೆಟ್ಟುಹೋಗಬಹುದು. ವಿದ್ಯುತ್ತಿನ ಬೆಂಕಿಯನ್ನು ನೀರಿರೆದು ತಣ್ಣಗೆ ಮಾಡಬಾರದು. ನೀರು ವಿದ್ಯುತ್‌ವಾಹಕವಾದುದರಿಂದ, ನಂದಿಸುವವನಿಗೆ ಅಪಾಯ ಹೆಚ್ಚು. ಜಲನಶೀಲ ತರಲ ಪದಾರ್ಥಗಳು ಉರಿಯುವ ಬೆಂಕಿಗೆ ನೀರು ಹೂಯ್ದರೆ, ಅದು ನಂದುವ ಬದಲು ಮತ್ತಷ್ಟು ಪಸರಿಸುತ್ತದೆ. ಬೆಂಕಿಯುರಿಯಲು ಆವಶ್ಯಕವಾದ ಆಮ್ಲಜನಕ ವಾಯುವನ್ನು ನಾಶಮಾಡಿ ನಂದಿಸಲು ಉಪಯುಕ್ತವಾದ ರಾಸಾಯನಿಕ ಮಿಶ್ರಣಗಳೀಗ ಸಿದ್ಧವಾಗುತ್ತಿವೆ.

ಜಲನಶೀಲ ತರಲ ಪದಾರ್ಥಗಳಿಂದಾದ ಅಗ್ನಿಯನ್ನು ನಂದಿಸಲು ನೋಟೇಶಿಯಂ ಬೈಕಾರ್ಬನೇಟ್ ಆಧಾರಿತ ಪರ್ಪಲ್-ಕೆ ಎಂಬ ರಾಸಾಯನಿಕ ದ್ರವ್ಯವನ್ನು ಸಂಶೋಧಿಸಿದ್ದಾರೆ ಈ ಒಣ ಪುಡಿಯನ್ನು ವಿಮಾನಗಳು ಡಿಕ್ಕಿ ಹೊಡೆಯುವುದರಿಂದ ಜನಿಸುವ ಜ್ವಾಲೆಯನ್ನು ಶಾಂತಗೊಳಿಸಲು ಶೋಧಿಸಲಾಗಿತ್ತು. ಇಂದಿನ ದಿನಗಳಲ್ಲಿ ಇದಕ್ಕೆ ಕುಂಬ ಬೇಡಿಕೆಯಿದೆ. ಇತ್ತೀಚೆಗೆ ಅಮೆರಿಕೆಯ ಕೇಪ್ ಕೆನೆವೆರಲಿನಲ್ಲಿ ಹರಡಿದ್ದ ೪,೦೦೦ ಚದರ ಅಡಿ ವಿಸ್ತಾರದ ಬೆಂಕಿಯನ್ನು ತಮನಗೊಳಿಸಲು ಈ ಒಣ ಪೌಡರನ್ನು ಬಳಸಿಕೊಂಡಿದ್ದರು.

ವಿನ್ಯೊಸಿನ್‌ನ ಏಮುಲ್ ಕೆಮಿಕಲ್ ಕಂಪೆನಿಯು «ಮೊನೋ ಆಯ್ಸೋನಿಯಂ ಫಾಸ್ಫೇಟ್» ಎಂಬ ದ್ರವ್ಯವನ್ನು ಕಂಡು ಹಿಡಿದಿದೆ ಈ ರಾಸಾಯನಿಕ ಪದಾರ್ಥವು ಅಗ್ನಿಯನ್ನು ನಂದಿಸಿ ಮೇಲೆ ಲೇಪದುಶೆ ಅಂಟಿಕೊಳ್ಳುವುದರಿಂದ ಜ್ವಾಲೆಯು ವಿಸ್ತಾರಕ್ಕೆ ಹರಡುವುದಿಲ್ಲ. ಇದನ್ನು ಮನೆಗಳಲ್ಲಿಯೂ ಪ್ರಯೋಗಿಸಬಹುದು. ನಂದಿಸಲು ಮುಂದುವರಿಯುವವನಿಗೂ ಇದರಿಂದ ಯಾವ ಅಪಾಯವು ತಟ್ಟುವುದಿಲ್ಲ. ಈ ಅಗ್ನಿಶಾಮಕವು ಹಾನಿಕಾರಕ ಕಾರ್ಬನ್ ಟೆಟ್ರಾಕ್ಲೋರೈಡ್‌ನ ಬದಲಿಗೂ ಉಪಯೋಗಿಸಲ್ಪಡುವುದು. ಕಾರ್ಬನ್ ಟೆಟ್ರಾಕ್ಲೋರೈಡಿನಿಂದ ಹುಟ್ಟುವ ಒಂದು ಬಗೆಯ ವಿಷದ ಗ್ಯಾಸ್‌ನ ಹೊಗೆಯಿಂದಾಗಿ ಕೆಲವು ಜನರು ನ್ಯುತ್ಯುನುಖರಾದುದೂ ಇದೆ. ಆದುದರಿಂದಲೇ ಅಮೆರಿಕೆಯ ಕೆಲವು ರಾಜ್ಯಗಳಲ್ಲಿ ಈ ಅಪಾಯಕಾರಕ ರಸಾಯನದ ಬಳಕೆಯನ್ನು ಸಂಪೂರ್ಣವಾಗಿ ಪ್ರತಿಬಂಧಿಸಲಾಗಿದೆ.

ಬೆಂಕಿಯಾರಿಸುವ ಇನ್ನೊಂದು ಸಫಲ ಉಪಾಯವೆಂದರೆ, ರಾಸಾಯನಿಕ ದ್ರವ್ಯಗಳ ಅಲಿಗಳನ್ನು ಉಂಟು ಮಾಡುವುದು. ನೀರಿನ ಫಾಲೆಯೊಡನೆ ತರಲ ಸಾರಜನಕ ಪದಾರ್ಥವು ಗಾಳಿಯಲ್ಲಿ ಅಲೆಗಳನ್ನು ಸೃಷ್ಟಿ ಮಾಡುತ್ತದೆ. ಇದರಿಂದ ಎಣ್ಣೆ, ಗ್ಯಾಸ್ ಮತ್ತಿತರ ಜಲನಶೀಲ ತರಲ ಪದಾರ್ಥಗಳಿಗೆ ತಗಲಿದ ಬೆಂಕಿಯು ನಂದುತ್ತದೆ

ವಿಮಾನಗಳಿಗೆ ತಗಲಿದ ಬೆಂಕಿಯನ್ನಾರಿಸಲು ಈಗ ಒಂದು ಹೊಸ ಉಪಾಯವನ್ನು ಕಂಡು ಹಿಡಿಯಲಾಗಿದ್ದು ಲಾಸ್ ಎಂಜಲ್ಸ್‌ನಲ್ಲಿ ಇದನ್ನು ಪ್ರಾತ್ಯಕ್ಷಿಕೆಗೆ ಬಳಸಿಕೊಳ್ಳಲಾಯಿತು. ಹೆಲಿಕಾಪ್ಟರ್‌ಗಳ ಮೂಲಕ ರಾಸಾಯನಿಕ ದ್ರವ್ಯಗಳ ಮಿಶ್ರಣ ಮಾಡಿದ ನೀರನ್ನು ಚಿಮುಕಿಸುವುದೇ ಈ ಆಧುನಿಕ ವಿಧಾನ.

ಪ್ರಸಂಗವು ಅಗ್ನಿ ಶಾಮಕ ಅಧಿಕಾರಿಗಳಲ್ಲಿ ಅತ್ಯಧಿಕ ವೇತನ ಪಡೆಯುವವರು ಅಮೆರಿಕೆಯ ಅಗ್ನಿವಿಭಾಗದ ಪ್ರಮುಖ ಅಧಿಕಾರಿ ಕೆಪ್ಟ್ ಈ ಕ್ಲೀಂಗರ್. ಇಡಿಯ ಅಮೆರಿಕೆಯಲ್ಲಿ ಹೆಲಿಕಾಪ್ಟರ್ ಮೂಲಕ ಅಗ್ನಿ ಶಮನ ಮಾಡುವ ಜೋಜನೆಯನ್ನು ಅಮೆರಿಕೆಯ ಅಗ್ನಿ ವಿಭಾಗವು ೨೯ ಫ್ರೆಬ್ರವರಿಯೇ ಕಾರ್ಯರೂಪಕ್ಕೆ ತರುವುದು ಎನ್ನುತ್ತಾರೆ ಆ ಸರು. ಹೆಲಿಕಾಪ್ಟರಿನ ಮೂಲಕ ರಾಸಾಯನಿಕ ದ್ರವ್ಯಗಳನ್ನು ಸುರಿಸುವುದು ಭೂಮಿಯ ನೆಲೆ ಸಂಪುಗಳ ಮೂಲಕ ತಳ್ಳುವುದಕ್ಕಿಂತ ಹೆಚ್ಚು ಪರಿಣಾಮಕಾರಿಯೆಂದು ತಿಳಿದು ಬಂದಿದೆ.

ಅಗ್ನಿ ರಕ್ಷಣೆ ಮಾಡುವ ಕರ್ಮಚಾರಿಗಳ ಸಮವಸ್ತ್ರವು ಒಂದು ಬಗೆಯ ರಬ್ಬರಿನಿಂದ ತಯಾರಾಗಿದೆ. ಇದರಿಂದ ಅವರು ಆತ್ಮರಕ್ಷಣೆ ಮಾಡಿಕೊಳ್ಳುವುದು ಮಾತ್ರವಲ್ಲ ಅಲೆಗಳ ಸಂಪರ್ಕದಿಂದ ರಬ್ಬರಿನಲ್ಲಿ ಒಂಬು ಬಗೆಯ ಗ್ಯಾಸು ಉತ್ಪನ್ನವಾಗಿ, ಅದು ಬೆಂಕಿ ನಂದಿಸುವ ಉಪಯುಕ್ತವಾಗಬಲ್ಲದು. ಆದುದರಿಂದ ಈ ವಿಭಾಗದ ಕರ್ಮಚಾರಿಗಳ ಸಮವಸ್ತ್ರವು ಈ ಬಗೆಯ ರಬ್ಬರ್ ಬಟ್ಟೆಗಳಿಂದಲೇ ನಿರ್ಮಿತವಾಗಿದೆ. ಫೌಂಡ್ರಿಯಿಟ್ ಜಾ ಡಿಗ್ರಿ ಶೂನ್ಯಕ್ಕಿಂತ ಕಡಿಮೆಯಲ್ಲಿ ಇಂತಹ ಕೆಲಸವು ನಡೆಯುತ್ತದೆ. ಇದರ ಮೇಲೆ ಉಳಿದ ಯಾವ ರಾಸಾಯನಿಕ ದ್ರವ್ಯಗಳೂ ಪರಿಣಾಮ ಬೀರುವುದಿಲ್ಲ.

ಜ್ವಾಲೆಯನ್ನು ನಂದಿಸುವ ನೇಳೆ, ಅದರ ನಿಯಂತ್ರಣದ ಮುಖ್ಯ ನಿಯಮಗಳನ್ನು ಅವಶ್ಯ ಗಮನಿಸಬೇಕು. ಮನೆಯಲ್ಲಿ ನಿರ್ಮಲತೆ ಮತ್ತು ನೀರಿನ ವ್ಯವಸ್ಥೆ ಮಾಡುವಂತೆಯೇ ಈ ನಿಯಮಗಳು ಸುಳವಾಗಿವೆ. ಮನೆಯಲ್ಲಿ ಬಳಲು ಮತ್ತು ಸಣ್ಣ ಪ್ರಮಾಣದ ಅಗ್ನಿಶಾಮಕಗಳನ್ನು ಇಟ್ಟುಕೊಳ್ಳುವುದು ಅತಿ ಧ್ಯವಲ್ಲ. ಬೆಂಕಿಗೆ ಇನ್ನಾರೂ ಅಂಜಬೇಕಾಗಿಲ್ಲ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O.S. No. 240/1963

1. ಪುಷ್ಪಾವತಿ,
2. ಸುಶೀಲ, 3 ಜಯ, 4. ವೈಶಭ, 5. ಪೀಣಾಕುಮಾರಿ — ಮೈನರರು ಕ್ಷೇಮಚಿಂತಕರು ಕಾಯಿ 1ನೇ ವಾದಿಳು —ವಾದಿಯ ಮತ್ತು

1 ಗುಣಾವತಿ 2 I. ರಾಮಮೂರ್ತಿ ಎಯ್ಕೊ ಕೇಟ (ರಿಸೀವರ) —ಪ್ರತಿವಾದಿ.

1ನೇ ಪ್ರತಿವಾದಿ ಗುಣಾವತಿ ಸೇನಸ್ಮುನ ಮಗಳು. ಬೆಳ್ಳಂಗಡಿ ತಾಲ್ಲ್ಲ ಅಂದಿಂಜೆ ಗ್ರಾಮದ ಹೊಸ ಮನೆಯಲ್ಲಿರುವಳು. ಸದ್ರಿ 1ನೇ ಪ್ರತಿವಾದಿಳಾದ ನಿಮಗೆ ಈ ಮೂಲಕ ತಿಳಿಸುವುದೇನಂದರೆ—

ವಾದಿಯು ನಿಮ್ಮ ಮೇಲೆ ಕೂಡಾ ಕುಟುಂಬದ ಆಸ್ತಿಗಳಿಂದ ತಾ. 15—8—1963 ಕ್ಕೆ ಆಂತ್ಯವಾಗುವ ಗತ 2 ವರುಶಗಳ ಆದಾಯದ ರೂಪ್ಯಾ 677ನ್ನು ಕೇಳಿ ದಾಕ್ಲುಮಾಡಿದ ಸದ್ರಿ ವಾನೆಯು ತಾರೀಕು 27-8-1963 ಕ್ಕೆ ನಿಮ್ಮ ಹಾಜ್ರಿ ಲಗ್ಗೆ ಇಟ್ಟಿದ ಅಕ್ಕೇಪ ಇದ್ರೆ ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ನೇಲ್ಯಂಡ ಕೋರ್ಟಿಗೆ ಮುಂದೆ ನೀವು ಹಾಜ್ರಾಗಿ ಉಪಾಯದೆಣಿ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. V Kamath
Advocate for plaintiff.

Karkal, 11—8—63.



ಕನ್ನಡದ ರಾಜಧಾನಿ
ಬೆಂಗಳೂರು ಮತ್ತು ಕನ್ನಡ

ರಾಜಧಾನಿ ಬೆಂಗಳೂರು ದಿನದಿನ ಬೆಳೆಯುತ್ತಿದೆ; ರಾಜಕೀಯವಾಗಿ ಔದ್ಯಮಿಕವಾಗಿ ಅದು ಪ್ರಸಿದ್ಧಿ ಪಡೆಯುತ್ತಿದೆ. ಜೀಲ್ ಕೇಳಿ ಕನ್ನಡದ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡವೇ ಕೇಳದೆ ಇರುವ ದುರ್ದೈವದಿನವೂ ನಳಟ ಭವಿಷ್ಯದಲ್ಲಿ ಬರಲಿದೆ. ಇದನ್ನು ಎದುರಿಸಲು ಕೈ ಬಾಂಬಾದರೂ ಕನ್ನಡಿಗರ ಜೀವನಲ್ಲಿದೆಯೆ?

ಲೇಖಕರು: ಶ್ರೀ ನಿ. ನಾರಾಯಣ ಬಲ್ಲಾಳ.

ಕನ್ನಡಿಗರ ಮೈಮನಗಳನ್ನು ತುಂಬಿ, ನವೀಳಿಸುವ ಸಜ್ಜಿರ್ತಿಯ ಹೆಸರು–ಬೆಂಗಳೂರು ಬೆಂಗಳೂರು ಕನ್ನಡ ಸಂಸ್ಕೃತಿಯ ಸಜೀವತನ ಶಕ್ತಿ. ಅದರ ಪರಂಪರೆ ಆದಕ್ಕಿರುವ ತನ್ನದೇ ಆದ ಇತಿಹಾಸ ಒಂದು ಚಿರಂತನ ನವೋದಯ ಶಕ್ತಿಯೂ ಆಗಿದೆ.

ಈ ಬೆಂಗಳೂರು ಕನ್ನಡ ಆಳರಸರ ಶೋಷಣೆಯಿಂದ ಬೆಳೆದು ಬಂದಿತು. ಕನ್ನಡದ ಜನ ಈ ಕಲ್ಯಾಣ ನಗರಿಯನ್ನು ತಮ್ಮ ಪ್ರೀತಿಯ ಸಂಕೇತವಾಗಿ ಭಾವಿಸಿ, ರಾಜಧಾನಿಯಾಗಿ ಆರಿಸಿಕೂಂಡಿರುವುದು ಯಥಾಯೋಗ್ಯವೇ ಆಗಿದೆ. ನಮ್ಮ ಅಶ್ರಿತ ರಾಜರ ನೆಲೆವೀಡು ಮೈಸೂರಾಂತಿದ್ದರೂ, ಬೆಂಗಳೂರು ದೊಡ್ಡ ವ್ಯವಹಾರ ಕೇಂದ್ರವಾಗಲು ಆ ಅರಸರೇ ಬೆಳೆಯಗೊಟ್ಟರು. ಬೆಂಗಳೂರಿನ ಸ್ಥಾನವೇ ಅಂತಹುದು. ದಕ್ಷಿಣದ ಟ್ಟಬೇರೆ—ಬೇರೆ ಭಾಗಗಳಿಂದ ಕೂಡಿ ಬರುವ ರಾಜ ರಸ್ತೆಗಳು, ರೈಲ್ವೇ ಪೆದ್ದಾರಿಗಳು, ವಿಮಾನ ದಾರಿಗಳು—ಈ ನಗರದ ವ್ಯಾಮುಖ್ಯತೆಯನ್ನು ಆತಿ ಪೆಟ್ಟಿಸಿವೆ. ಈ ಬೆಂಗಳೂರು ಇಂದು ಕನ್ನಡದ ರಾಜಧಾನಿಯಾಗಿರದೆ ಇಡಿ ಭಾರತದ ಆತಿ ದೊಡ್ಡ ಉದ್ದಿಮೆಯ ಕೇಂದ್ರಗಳಲ್ಲೊಂದೂ ಆಗಿದೆ. ಇಲ್ಲಿನ ಉದ್ದಿಮೆಗಳಿಗೆ, ಕೈಗಾರಿಕೆಗಳು ನಾಡಿನ ರಕ್ಷಣೆಗೆ ಪ್ರಗತಿಗೆ, ಜನಜೀವನದ ಉನ್ನತಿಗೆ ನೇರ ಸಾಧಕಗಳಾಗಿರುವಂತೆ ಇಲ್ಲಿನ ಕುಶಲ ಕಲೆಗಳು, ವೈವಿಸ್ಯ ಉತ್ಪಾದನೆಗಳು ದೇಶ-ವಿದೇಶಗಳಲ್ಲಿ ಬೆಂಗಳೂರಿನ ಹೆಸರನ್ನು ಚಿರಸ್ಥಾಯಿಗೊಳಿಸಲು ಆರ್ಹವಾಗಿವೆ.

ಇಂತಹ ಮಹಾನಗರದಲ್ಲೇ ಕೇಂದ್ರ ಸರಕಾರವು ಹಲವಾರು ಉದ್ದಿಮೆಗಳನ್ನು ಸ್ಥಾಪಿಸಿರುವುದನ್ನು ಗಮನಿಸಬಹುದಾಗಿದೆ. ಈ ಎಲ್ಲಾ ವಿಚಾರಗಳಲ್ಲಿ ಬೆಂಗಳೂರಿನ ಬಗ್ಗೆ ನಾವು ಅಭಿಮಾನ ಪಡಬಹುದಾಗಿದೆ. ಸಕ್ಕರೆಯ, ಅಕ್ಕರೆಯ ಕನ್ನಡದ ಕೇಂದ್ರವೊಂದು ಈ ರೀತಿ ದೇಶದ ಅತಿ ಪ್ರಭಾವೀ ನಗರವಾಗಿರುವುದು ಯಾವ ಕನ್ನಡಿಗನಿಗೆ ತಾನೇ ಅಭಿಮಾನಾಸ್ಪದ ವಿಚಾರವಾಗಿಲ್ಲ?

ಈ ಅಭಿಮಾನದ ಜೊತೆಗೆ ನಾವು ಬೆಂಗಳೂರು ನಗರದ ಪರಿಸ್ಥಿತಿಯನ್ನು ಸ್ವಲ್ಪ ವಿವೇಚಿಸಬೇಕಾಗಿದೆ. ಯಾವಾಗಲೂ ಮನುಷ್ಯ ಸ್ತುತಿಪ್ರಿಯನೆಂ. ಸ್ತುತಿಯನ್ನು ಎಷ್ಟು ಬಾರಿ ಯಾವ ರೀತಿ ಮಾಡಿದರೂ ಅವನ ಮನಸ್ಸು ಪ್ರಫುಲ್ಲಿತವಾಗುತ್ತದೆ. ಹಾಗೆಯೇ ಸ್ವಲ್ಪ ಇದ್ದ ಪರಿಸ್ಥಿತಿಯನ್ನು ಇದ್ದ ಹಾಗೆಯೇ ಹೇಳುವಾಗ ಸ್ವಲ್ಪ ಅಪ್ರಿಯ ಪ್ರಸಂಗವಾಗಬಹುದಾದರೆ—ಅದು ನೈಜವಾಗಿವ್ದರೂ—ಅವನ ಮನಸ್ಸು ಕೆರಳುತ್ತದೆ. ಹೀಗಾಗಿ ಯಾವಾಗಲೂ ಪ್ರಶಂಸೆಯಲ್ಲೇ ಕಾರ್ಯಸಾಧಿಸುವ ಪ್ರಮೇಯದಿಂದಾಗಿ ಎಷ್ಟೋ ಸುಧಾರಣೆಗಳು ಅನಕಾಶವಿಲ್ಲದೆ ಸ್ಥಗಿತಗೊಳ್ಳುತ್ತವೆ. ಇಂದು ಬೆಂಗಳೂರು ನಗರದ ಕತೆಯೂ ಹಾಗಾಗಿದೆ. ನಾವು ಸ್ಕೂಲವಾಗಿ ಅದನ್ನು ಹೊಗಳುವುದರಿಂದ ಬೆಂಗಳೂರು ಯಾವುದೇ ರೀತಿಯಲ್ಲಿ ಕುಂದು-ಕೊರತೆಯಿಲ್ಲದೆ ಯೋಗ್ಯ ರೀತಿಯಲ್ಲಿದೆ ಎಂದು ಭಾಸವಾಗುವುದು ಸಹಜ. ಊರಿದ್ದಲ್ಲಿ ಕೊಲಗೇರಿಯು ಸ್ವಾಭಾವಿಕವಾದರೂ, ಹೊಲಗೇರಿಯ ನಿರ್ಮೂಲನೆಗಾಗಿ ಪ್ರಯತ್ನಿಸುವುದೂ ಆದ್ಯ ಕರ್ತವ್ಯ ತಾನೇ?

ಮೊದಲನೆಯದಾಗಿ–ಬೆಂಗಳೂರು ರಾಜ್ಯದ ರಾಜಧಾನಿ, ಇಲ್ಲಿಗೆ ರಾಜ್ಯದ ಮೂಲೆ-ಮೂಲೆಗಳಿಂದ ಲಕ್ಷೋಪಲಕ್ಷ ಜನರು ಬರುತ್ತಾರೆ. ಇದು ವ್ಯಾವಹಾರಿಕ ಕೇಂದ್ರ; ಕಾರ್ಖಾನೆಗಳ ಆಗರ. ಇಲ್ಲಿನ ಆಸಾಮ್ಯಾತ ಉದ್ದಿಮೆಗಳಿಂದಾಗಿ ಜನರ ಆಕರ್ಷಣೆ ಜಾಸ್ತಿ. ಹಾಗೆಯೇ ಉದ್ದಿಮೆಯನ್ನು ನಂಬಿ ಬಂದ ಜನರಲ್ಲಿ ಕೂಲಿಗಾರರೇ ಲಕ್ಷಗಟ್ಟಲೆ ಸಂಖ್ಯೆಯಲ್ಲಿದ್ದಾರೆ. ಒಮ್ಮೆ ದೃಷ್ಟಿಯಲ್ಲಿ ನೋಡುವುದಾದರೆ ಇವು ಕೂಲಿಗಾರ ನಗರ ಸಂದರೂ ಒಪ್ಪಬಹುದೇನೋ? ಕೇಂದ್ರ ಹಾಗೂ ರಾಜ್ಯ ಸರಕಾರದ ಪ್ರಮುಖ ಕಾಮಗಾರಿ ಕೇಂದ್ರಗಳು, ಮಿಸಗಿ ಕಾರ್ಖಾನೆಗಳು ಹಗಲು—ರಾತ್ರಿ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಮಹಾನಗರವು ಯಾವಾಗಲೂ ಎಚ್ಚರವಾಗಿಯೇ ಉಂಟು. ಆದರೆ ಈ ನಗರವು ಬೆಳೆಯುತ್ತ ಬಂದ ಹಾಗೆ ಆದರ ಶುಚಿತ್ವದ ಬಗ್ಗೆ ಆ ನಾಸ್ಥೆ ಹೆಚ್ಚಿತ್ತಿರುವುದು ಮಾತ್ರ ಖಂಡಿತ. ರಾಜ ರಸ್ತೆಯಲ್ಲಿ ಅಂತಸ್ತುಗಳ ಸೋಲೆ ಅಂತಸ್ತುಗಳಿರುವ ಕಟ್ಟಡಗಳನ್ನು ನೋಡುವೆವಾದರೂ ಒಳಗಡೆ ಇನ್ನೂ ಓಬಿರಾಯನ ಕಾಲದ ಜೀರ್ಣಾವಸ್ಥೆಯ ಕಟ್ಟಡಗಳು, ಕೊಳಕು ಗುಡಿಸಲುಗಳನ್ನು ನೋಡಬಹುದಾಗಿದೆ. ಕೆಂಪೇಗೌಡ ಸರ್ಕಲಿನಂತಹ ಜನನಿಬಿಡ ಕೇಂದ್ರದ ಬಸ್ ಸ್ಟಾಪಿನ ಹಿಂದುಗಡೆಯ ಕಟ್ಟಡ ಹಾಗೂ ಅಲ್ಲಿನ ಅಂಗಡಿ ಸಾಲುಗಳು, ಆ ಗುಡಿಸಲುಗಳು ಒಂದು ನೇರ ನಿದರ್ಶನವಾಗಿದೆ.

ಇಲ್ಲಿನ ಜನ ಬಾಹ್ಯಾಲಂಕಾರ ಪ್ರಿಯರು, ಬಣ್ಣ-ಬಣ್ಣದ ಅಲಂಕಾರಗಳಿಂದ ಶೋಭಾಯಮಾನವಾಗಿ ಕಟ್ಟಡಗಳನ್ನೇ ಎತ್ತರಿಸಿ ಬಿಡುತ್ತಾರೆ. ಇಲ್ಲಿನ ಪ್ರಾದೇಶಿಕ ಪರಿಸ್ಥಿತಿಯ ದೃಷ್ಟಿಯಿಂದ ಕಟ್ಟೋಣಗಳು ಬಹು ಸುಲಭ ವೆಚ್ಚದಲ್ಲಿ ಕಟ್ಟಲ್ಪಡುತ್ತವೆ. ಆದರೆ ಈ ಕಟ್ಟಡಗಳ ಶುಚೀಕರಣದ ಬಗ್ಗೆ ಆಸ್ಥೆಯಿಲ್ಲ.

ಇಂದು ಬೆಂಗಳೂರಿನಲ್ಲಿ ಬಡಾವಣೆಗಳು ಹೆಚ್ಚಿವೆ. ರಾಜಾಜಿ ನಗರ, ಜಯ ನಗರ, ಶಂಕರಪುರ—ಹೀಗೆ ಹಲವು ಉಪ ನಗರಗಳು ಬೆಳೆದಿವೆ. ಆದರೆ ಈ ಉಪನಗರ ಬೆಳವಣಿಗೆಯ ಬಗ್ಗೆ ಸರಕಾರವು ತೋರಿದ ಆಸ್ಥೆಯನ್ನು ಅದರ ಕ್ರಮಬದ್ಧತೆಗೆ, ಅವಶ್ಯಕ ಪೂರೈಕೆಗೆ ಕೊಡಲಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಇಲ್ಲಿನ ಜನ ಅನನುಕೂಲತೆಯ ಮಡಿಲಲ್ಲಿ ಕೊಳಕು ಉಸಿರು ಸೇವಿಸುತ್ತಿದ್ದಾರೆ.

ಈ ಎಲ್ಲ ವಿಚಾರ ವಿವೇಚಿಸಿದ ಮೇಲೆ ಒಂದು ಪ್ರಾಮುಖ್ಯ ಸಂಗತಿ ನಾವು ಹೇಳಲೇಬೇಕಾಗಿದೆ. ಅದು ಈ ಮುಖನಗರದ ಕನ್ನಡತನ. ಬೆಂಗಳೂರಿಗೆ ಕನ್ನಡ ಸಂಸ್ಕೃತಿಯ ಕೇಂದ್ರವೆಂದು ನಾವು ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತೇವೆನೋ ನಿಜ. ಆದರೆ ಈ ನಗರವನ್ನು ತೆಲುಗರು ಆಂಧ್ರಕ್ಕೆ ಸೇರಿಸಬೇಕೆಂದು ರಾಜ್ಯ ಪುನರ್ ವಿಂಗಡನಾ ಕಾಲದಲ್ಲಿ ಹೇಳಿದಾಗ ಅವರಿಗೆ ತಲೆ ಕೆಟ್ಟಿದೆಯೇನೋ ಎಂದು ದೂರದ ಕನ್ನಡಿಗರು ಭಾವಿಸಿದ್ದರು. ಆದರೆ ಬೆಂಗಳೂರಿನಲ್ಲಿ ನಾಲ್ಕು ದಿನ ನಿಂತವನು ಅದು ಆಂಧ್ರದ ರಾಜಧಾನಿಯೇ ಎನ್ನುವಷ್ಟು ತೆಲುಗುಮಯವಾಗಿರುವುದನ್ನೆ ಕಾಣಬಹುದು. ಇಲ್ಲಿ ಕನ್ನಡದ ಮೂಕಿಂಗ್ ತೆಲುಗು, ತಮಿಳು ಲೀಲಾಜಾಲವಾಗಿ ಕೇಳಿಸುವ ದನಿಯೂಗಿದೆ. ಹೋಟೆಲಿನ ಕೆಲಸದವ, ಬಸ್ಸಿನ ಡ್ರೈವರ್, ಒ ಟೋರಿಕ್ಷಾದ ರಿಕ್ಷಾವಾಲಾ ನಮ್ಮನ್ನು ಮೊದಲು ಮಾತಾಡಿಸುವುದು ಕನ್ನಡೇತರ ಭಾಷೆಯಲ್ಲಿ. ಬೀದಿ ಬದಿಯ ಹೂ, ತರಕಾರಿ, ಕಡ್ಲೇಕಾಯಿ ಮಾರುವವರು ತೆಲುಗು, ತಮಿಳಿನ ಮಾತಿನಿಂದ ಸ್ವಾಗತಿಸುವುದರಲ್ಲಿ ವಿಶೇಷವಿಲ್ಲ.

ಈ ರೀತಿ ಕನ್ನಡದ ನಗರಿಯೇ ಇನ್ನೆ ದೇಶದ ಭಾಷಾ ಪ್ರಾಧಾನ್ಯತೆ ಪಡೆದವರ ಬಗ್ಗೆ ನಾವು ಇನ್ನೂ ಕೈಕಟ್ಟಿ ಕೂಳಿತು ಕೊಳ್ಳಬಹುದೇ?

ಇಲ್ಲಿನ ಕನ್ನಡಿಗರಲ್ಲಿ ಸ್ಥೈರ್ಯವಿದೆ; ಸಾಹಸವಿದೆ; ಕನ್ನಡಾಭಿಮಾನವಿದೆ ಎಂದು ನಾವು ಹೇಳಬಹುದು. ಆದರೆ ಅವು ಒಂದು ಯೋಗ್ಯ ಪ್ರವಾಹದೊಂದಿಗೆ ಬೆರೆತು ಜನಶಕ್ತಿಯನ್ನು ಕೆರಳಿಸಿ, ಸಂಘಟಿಸಬೇಕಾಗಿದೆ. ಇಲ್ಲಿನ ಜನರು ಜೀವನಕ್ಕೆ ಕೊಡುವ ಪ್ರಾಧಾನ್ಯತೆ ಆತ್ಮಾಭಿಮಾನಕ್ಕೂ ವಿಚಾರಕ್ಕೂ ಕೊಡಬೇಕು. ಈ ದಿಸೆಯಲ್ಲಿ ನಾವು ವಿಚಾರಿಸುವಾಗ ನಮ್ಮ ಬೆಂಗಳೂರಿನ ಹೊರ ತೋರಿಕೆಯಲ್ಲಿ ಆದಂ ಬರುವ ಪ್ರಚಾರವಿದ್ದರೂ, ನಿಜವಾದ ಕನ್ನಡ ಚಳುವಳಿ ರೂಪುಗೊಳ್ಳಲಿಲ್ಲ. ಚಳುವಳಿ ಎಂದರೆ ತೋರಣದಂತೆ ಗಾಳಿಯಲ್ಲಿ ಅಲಂಕಾರವಾಗಿ ತೂಗುವಂತಹುದಲ್ಲ ತಳಕಟ್ಟಿನಿಂದಲೂ—ಸಂಘಟನೆಯ ಕಟ್ಟಬನ್ನು ಕಟ್ಟಿ ಬರಬೇಕು.

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿದೆ. ಅದು ನಾಡಿನ ಅಭಿಮಾನಿ ಸಂಕೇತವಾಗಿರಬೇಕು. ಆದರೆ ಅದು ರಾಜಕೀಯದಿಂದ ತುಂಬಿದೆ. ಜನರು ಪ್ರಜಾಪ್ರಭುತ್ವ ತತ್ವದಂತೆ ಆದರಲ್ಲಿ ತಮ್ಮ ಶಕ್ತಿ ಸಂಚಯಿಸಬೇಕೇ ಹೊರತು, ತಮಗಾಗದವರು ಅಧಿಕಾರದಲ್ಲಿದ್ದಾರೆಂದು ಅದನ್ನೇ ಹೀನೈಸಿ ಸ್ತ್ರೀಭವಿಸುವುದಲ್ಲ. ತಮ್ಮ ಬೆಂಬಲ ಅಲ್ಲಿ ಹೆಚ್ಚುವಂತಹ ವಿಧಾಯಕ ಪ್ರಯತ್ನ ಮಾಡಬೇಕು. ಆ ತನಕ ಒಟ್ಟಾಗಿ ನಿಂತು ಕನ್ನಡ ಗುರಿಯ ರಕ್ಷಣೆ ಹೊರಬೇಕು. ಬೆಂಗಳೂರು ನಗರದಲ್ಲಿರುವ ತೆಲುಗು, ತಮಿಳರ ಸಂಘಗಳ ಸಂಘಟನಾ ಶಕ್ತಿಯೊಂದಿಗೆ ಕನ್ನಡವ ಸಂಘ ಶಕ್ತಿಯನ್ನು ತುಲನೆಮಾಡಿದಾಗಲೇ ಅಬಲತೆ ಸ್ಪಷ್ಟವಾಗಿ ತೋರಿ ಬರುತ್ತದೆ.

ಇಂದು ಅಲ್ಲಿ ನಡೆಯುತ್ತಿರುವ ಕನ್ನಡ ಚಳುವಳಿ, ಅದಕ್ಕೆ ಪೂರಕವಾಗಿ ಆಗುತ್ತಿರುವ ಸಂಘಟನೆ—ಇವು ಶಾಶ್ವತವಾಗಿ ಒಪ್ಪಬಹುದಾದ ವಿಧಾನವಾದರೂ, ಅದು ಕೆಲವೊಮ್ಮೆ ವೈಯಕ್ತಿಕ ಭಿನ್ನಣಿ, ಅನ್ಯ ಭಾಷಿಯರ ಮೇಲಿನ ದಬ್ಬಾಳಿಕೆಯಲ್ಲಿ ಪರ್ಯವಸಾನಗೊಳ್ಳುವಂತಾಗ ಬಾರದು. ಯಾವುದೇ ಒಂದು ಕಾರ್ಯಕ್ಕೂ ಒಂದು ನಿರೂಪಣೆ ಇದೆ; ಪಥವಿದೆ. ಈ ಪಥ ನಿರ್ದೇಶಕನು ಜೀವನರಂಗದ ಅತಿ ಸಂಕೀರ್ಣನೂ, ಕರ್ತೃತ್ವಶಾಲಿಯೂ ಆಗಿರಬೇಕು. ಕನ್ನಡ ಚಳುವಳಿಯು ಸಂಘಟನೆಯ ಆತ್ಮಬಲದೊಂದಿಗೆ ಜೆಳೆಯಬೇಕು. ಬೆಂಗಳೂರಿನಲ್ಲಿ ಕನ್ನಡತನ ಸೊಯವಾಗುತ್ತಿದೆ. ಅನಕ್ಕೆ ಚಳುವಳಿಗಿಂತಲೂ ಕನ್ನಡದ ಅಭಿಮಾನ ಆತ್ಮಬಲದಲ್ಲಿ ಜಾಗೃತವಾಗುವುದು ಪ್ರಾಮುಖ್ಯವಾಗಿದೆ.

ಈ ದಿಸೆಯಲ್ಲಿ ಕನ್ನಡದ ಹಿರಿ ಧುರೀಣರು ಬೆಂಗಳೂರು ರಾಜಧಾನಿಯಲ್ಲಿ ಎದ್ದೇಳಿ ಆರತೊಡಗಿದ ಕನ್ನಡ ಜ್ಯೋತಿಗೆ ಸಂಘಟನೆ, ಅಭಿಮಾನದ ಎಣ್ಣೆಯ ಹೊಯ್ದು ಪ್ರಜ್ವಲಿಸುವಂತೆಯೂ, ಚಿರಂತನ ಉಳಿಯುವಂತೆಯೂ ಮಾಡುವರೇ?

ಈ ಕಾರ್ಯದಲ್ಲಿ ಸಾಹಿತ್ಯ ಪರಿಷತ್ತು ತುಂಬು ಜವಾಬ್ದಾರಿ ಹೊರಬಲ್ಲುದೇ?

(ವಿಶೇಷಾಂಕಕ್ಕೆ ಬಂದಿದೆ)

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ. 14 CT ಚಿನ್ನದ ಆಭರಣಗಳಲ್ಲಿ 58½% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ. ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಪಡೆದಿರುತ್ತೆವೆ.

ಮನೆಯ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಬಾಕಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 60

REGD. No. B. G. 176
LICENCE No 31
Licensed to Post without Prepayment

'ತ್ರಿವೇಣಿ' ಅವರಿಗೆ ಶ್ರದ್ಧಾಂಜಲಿ....

೩೦-೭ ೬೩ರಂದು ಕನ್ನಡದ ಸುಪ್ರಸಿದ್ಧ ಕಾದಂಬರೀಕಾರಿಯಾದ ಶ್ರೀಮತಿ ತ್ರಿವೇಣಿಯವರ ನಿಧನದ ವಾರ್ತೆ ನನ್ನನ್ನು ಚಕಿತಗೊಳಿಸಿತು. ರಾತ್ರಿ ಎಂಟೂ ಕಾಲು ಗಂಟೆಯ ಸಮಯದಲ್ಲಿ ಯಾವುದೋ ಒಂದು ವಾರಪತ್ರಿಕೆಯನ್ನೋದುತ್ತ ಕುಳಿತಿದ್ದೆ. ಆಗ ಆಕಾಶವಾಣಿ ಬೆಂಗಳೂರು ಕೇಂದ್ರದಿಂದ '...ಈಗ ನಿನ್ನೆ ಬೆಳಗ್ಗೆ ಸುಮಾರು ಹತ್ತು ಗಂಟೆಯ ಸಮಯದಲ್ಲಿ ಸಿದ್ಧಿಸಿದರಾದ ಕನ್ನಡದ ಖ್ಯಾತ ಕಾದಂಬರೀಕಾರ್ತಿ ಶ್ರೀಮತಿ ತ್ರಿವೇಣಿ ಅವರ ಬಗ್ಗೆ ಅನುಪಮ ನಿರಂಜನ ಅವರಿಂದ ಶ್ರದ್ಧಾಂಜಲೀ ಕಾರ್ಯಕ್ರಮ ..." ಎಂಬ ಮಾತು ಕೇಳಿದಾಗ ನಾನು ಗಾಬರಿಗೊಂಡು ರೇಡಿಯೋವಿನ ಧ್ವನಿಯನ್ನು ಹೆಚ್ಚು ಮಾಡಿದೆ.

ನಿಜ, ನಿಜವಾಗಿಯೂ ತ್ರಿವೇಣಿ ಕಣ್ಮರೆಯಾಗಿದ್ದರು!!

ಇದು ಕನ್ನಡ ಸಾಹಿತ್ಯಕ್ಷೇತ್ರಕ್ಕಾದ ಹುಂಬಲಾಗದ ನಷ್ಟ.

ಈಗ್ಗೆ ಹನ್ನೊಂದು ದಿನಗಳ ಹಿಂದೆ ತ್ರಿವೇಣಿಯವರು ಹೆಣ್ಣು ಮಗುವೊಂದಕ್ಕೆ ಜನ್ಮನೀಡಿದ್ದರು. ೨೯—೭—೬೩ರಂದು ಮೈಸೂರಿನ ವಿಜಯ್ ಆಸ್ಪತ್ರೆಯಲ್ಲಿ ಬೆಳಿಗ್ಗೆ ಹತ್ತು ಗಂಟೆಯ ಸಮಯದಲ್ಲಿ, ಹೃದಯ ಕ್ರಿಯೆ ನಿಂತು ನೈವಾಧೀನರಾದರು. ಆಗ್ಗೆ ಇವರ ವಯಸ್ಸು ಕೇವಲ ಮೂವತ್ತೈದು.

ಸುಮಾರು ಒಂದು ದಶಕದಿಂದಲೂ 'ತ್ರಿವೇಣಿ' ಎಂಬ ಹೆಸರಿನಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೀರ್ತಿಗಳಿಸಿದ ಇವರ ಸಿದ್ಧ ನಾಮಧೇಯ 'ಶ್ರೀಮತಿ ಅನಸೂಯ' ಎಂದಿತ್ತು.

ಇವರು ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಸೋದರರಾದ ಬಿ ಎಂ.ಕೃಷ್ಣ ಸ್ವಾಮಿಯವರ ಪುತ್ರಿ.

ಹನ್ನೆರಡು ವರ್ಷಗಳ ಹಿಂದೆ ಇವರು ಮೈಸೂರಿನ ಶಾರದಾ ವಿಲಾಸ್ ಕಾಲೇಜಿನ ಇಂಗ್ಲೀಷ್ ವ್ಯಾಧ್ಯಾಪಕರಾದ ಶ್ರೀ ಎಸ್ ಎನ್ ಶಂಕರ್ ಅವರನ್ನು ವಿವಾಹವಾಗಿದ್ದರು. ಇವರದು ಪ್ರೇಮ ವಿವಾಹವೆಂದರೆ ಯಾರೂ ಆಶ್ಚರ್ಯ ಪಡಬೇಕಾದುದಿಲ್ಲ. ಶ್ರೀ ಶಂಕರರು ಇವರ ಬರಹಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ್ದರು.

ನಮ್ಮಲ್ಲಿ ಮಹಿಳಾ ಬರಹಗಾರರ ಸಂಖ್ಯೆ ಬಹುಕಡಿಮೆ ಕೈಬೆರಳಿನಿಂದ ಅವರನ್ನೆಣಿಸಬಹುದು. ಇರುವ ಈ ಕೆಲವೇ ಮಂದಿಯಲ್ಲಿ ತ್ರಿವೇಣಿಯವರ ಸ್ಥಾನ ಅಗ್ರಗಣ್ಯವಾಗಿತ್ತು.

ಇವರ ಕಾದಂಬರಿ 'ಅವಳ ಮನೆ'ಗೆ ಕಳೆದ ವರ್ಷ ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ದೊರೆತಿತ್ತು. ಅಲ್ಲದೇ ತಾವರೆ ಕೊಳ ಕಾದಂಬರಿಗೆ ಸಾಹಿತ್ಯ ಅಕೆಡಮಿ ಪ್ರಶಸ್ತಿ ಲಭಿಸಿತ್ತು.

ಇವರು ಇದುವರೆಗೆ ಅನೇಕ ಸಣ್ಣ ಕಥೆಗಳನ್ನು ಬರೆದಿರಬಹುದೇನೋ ಸುಮಾರು ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದಾರೆ.

ಇವರು ಬರೆದ ಕಾದಂಬರಿಗಳಲ್ಲಿ ಮೊದಲು ಪ್ರಕಟವಾದುದು 'ಹೂವು ಹಣ್ಣು' ಕಾಲಚಕ್ರದಡಿ ಸಿಲುಕಿದ ಹೆಣ್ಣೊಬ್ಬಳು ತನ್ನ ಮಗಳ ಭವ್ಯ ಭವಿಷ್ಯಕ್ಕಾಗಿ ತನ್ನ ದೇಹವನ್ನೇ ಮೂಸಕೊಂಡ ಹೃದಯಂಗಮ ಚಿತ್ರಣವೇ ಇದರ ಕಥಾವಸ್ತು. ಇದು ಇವರ ಮೊದಲ ಕೃತಿಯಾದರೂ ಅದನ್ನೋದಿದವರಿಗೆ 'ಇದು ಪಳಗಿದ ಕೈ ಎನ್ನಿಸದಿರದು'.

ಮೊಟ್ಟ ಮೊದಲು ಆವರು ತಾವು ಬರೆದ ಕಥೆಗಳನ್ನೆಲ್ಲ ಸಂಗ್ರಹಿಸಿಟ್ಟಾಗ 'ಇದನ್ನು ಪ್ರಕಟಿಸಲು ಯಾರೂ ಮುಂದೆ ಬರುತ್ತಿಲ್ಲ ಮನೆಯಲ್ಲಿ ಮದುವೆಗೆ ಬಂದ ಮಗಳಿಗೆ ವರ ಗೊರಕಹಿದ್ದರೆ ಹೆತ್ತವರ ಮನಸ್ಸಿಗೆ ಹೇಗಿರುತ್ತದೋ ಅಂತೆಯೇ ಆಗಿದೆ ನನ್ನ ಪರಿಸ್ಥಿತಿ' ಎಂದಿದ್ದರಂತೆ

ನಿಜ, ಸಮ್ಮಲ್ಲಿ ಎಷ್ಟು ಜನ ಬರಹಗಾರರಿಗೆ ಇಂತಹ ಪರಿಸ್ಥಿತಿಯೊದಗಿಲ್ಲ! ಆದರೆ ಶ್ರೀಮತಿಯವರು ಹಟವಾದಿಗಳು. ಇವರ ಛಲದ ಫಲವಾಗಿ ಹೂವು ಹಣ್ಣು, ಅಸಫಲ ಸ್ವರ, ಸೋತುಗೆದ್ದವಳು, ಬೆಕ್ಕಿನ ಕಣ್ಣು ಮೊದಲ ಹೆಜ್ಜೆ, ಕೇಲುಗೊಂಬೆ, ಅಪಜಯ, ಕಂಕಣ, ಮುಚ್ಚಿದ ಬಾಗಿಲು, ಬೆಳಕು ನೋಡು, ಮುಕ್ತಿ, ಹೃದಯ ಗೀತ, ಅವಳ ಮನೆ, ತಾವರೆಯ ಕೊಳ, ದೂರದ ಬೆಟ್ಟ, ವಸಂತಗಾನ ಇವೇ ಮೊದಲಾದ ಅನೇಕ ಕಾದಂಬರಿಗಳೂ ಎರಡು ಮನೆ ಸ್ವಪ್ನ, ಹೆಂಡತಿಯ ಹೆಸರು, ಸಮಸ್ಯೆಯು ಮಾಗು — ಮೊದಲಾದ ಕಥಾ ಸಂಗ್ರಹಗಳೂ ಪ್ರಕಟವಾದವು

ಇವುಗಳಲ್ಲಿ ಪತ್ರಿಕೆಗಳ ಹಾಗೂ ವಾಚಕರ ಅತಿ ಮೆಚ್ಚುಗೆಗಳಿಸಿದ ಕೃತಿಯೆಂದರೆ 'ಬೆಕ್ಕಿನ ಕಣ್ಣು' ಮನೋವೈಜ್ಞಾನಿಕ ವಿಷಯದ ಕುರಿತಾದ ಈ ಕಾದಂಬರಿ ರಚನೆಗಾಗಿ ಶ್ರೀಮತಿಯವರು ಆಳವಾದ ಅಭ್ಯಾಸ ನಡೆಸಿದ್ದರು.

ಇವರ 'ತಾವರೆಯ ಕೊಳ' ಹಾಗೂ ಬೆಳ್ಳಿ ಮೋಡ ಕಾದಂಬರಿಗಳು ತೆಲುಗಿನಲ್ಲೂ ಭಾಷಾಂತರವಾಗಿವೆ. ನವನವೀನ ಕಥಾ ವಸ್ತು, ಸರಳವಾದರೂ ಎಲ್ಲೂ ತನ್ನ ಬಿಗಿಯನ್ನು ಕಳೆದುಕೊಳ್ಳದ-ನಿರಾಡಂಬರ ಶೈಲಿ, ಸರಸಮಯ ಸಂಭಾಷಣೆ, ಓದುಗರ ಮನ ಸೆಳೆಯುವ ಕಥನ ಕಲೆ, ಮನಮುಟ್ಟುವ ಪಾತ್ರ ಸೃಷ್ಟಿ ಇವೇ ಇವರ ಪ್ರತಿಭೆಗೆ ಮೂರ್ತವಾಗಿದ್ದವು

ತ್ರಿವೇಣಿಯವರ ಬರಹಗಳನ್ನು ಪ್ರಕಟಿಸದ ಕನ್ನಡ ಪತ್ರಿಕೆಗಳೇ ಇಲ್ಲವೆನ್ನಬಹುದು. ಇತ್ತೀಚೆಗೆ ಪ್ರಾರಂಭವಾದ 'ಗೋಕುಲ' ಸಾಪ್ತಾಹಿಕದಲ್ಲಿ ಕೂಡ ಇವರ 'ಶರ ಪಂಜರ' ಕಾದಂಬರಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ. 'ಸುಸ್ತು ಮನೋಲಹರಿ ಮೂದರಿಯಲ್ಲಿ ರಚಿಸವಾಗಿರುವ ಈ ಕಾದಂಬರಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೊಂದು ನವೀನ ಕಾಣಿಕೆ

ಶ್ರೀಮತಿಯವರ ಕೃತಿಗಳು ಅಳವಾದ ಅಭ್ಯಾಸದಿಂದ ಬರೆಯಲ್ಪಟ್ಟಿದ್ದವು ಅಳಿನ ವಿಷಯದಿಂದ ಅರಸನ ವರೆಗಿನ ಎಲ್ಲ ವಿಷಯಗಳನ್ನು ಕುರಿತು ಇವರ ಕೃತಿ ರಚನೆಯಾಗಿತ್ತು ನಮ್ಮ ಸಮೂಜದ ಪ್ರತಿಯೊಂದು ವಿಷಯದ ಮೇಲೂ 'ತ್ರಿ' ಕರಣ ಬೀರಿದ್ದರು. ಅಂತೆಯೇ ಇವರ ಅನೇಕ ಕೃತಿಗಳು ಎರಡು ಮೂರು ಆವೃತ್ತಿಗಳನ್ನು ಕಂಡಿವೆ

ತ್ರಿವೇಣಿಯವರಿಗೆ ಜೀವನದಲ್ಲಿದ್ದ ಒಂದೇ ಒಂದು ಕೊರತೆಯೆಂದರೆ ಮಕ್ಕಳಿಲ್ಲದುದು. ಇದೇ ವಿಷಯವನ್ನು ಪ್ರಧಾನವಾಗಿಟ್ಟುಕೊಂಡು — ತಮ್ಮ 'ಹೆಂಡತಿಯು ಹೆಸರು' ಕಥಾ ಸಂಗ್ರಹದ 'ಅತಿಥಿ ಬಂದಿಲ್ಲ' ಕಥೆಯಲ್ಲಿ ಹೃದಯಂಗಮವಾಗಿ ವಿವರಿಸಿದ್ದಾರೆ.

ಈಗ ಅತಿಥಿಯೇನೋ ಬಂದಿದ್ದಳು. ಆದರೆ ಆಕೆಯನ್ನೆದುರುಗೊಳ್ಳಲು ತ್ರಿವೇಣಿ ಮಾತ್ರ ಇಲ್ಲ ಅಷ್ಟೆ. ಕೇವಲ ಹನ್ನೊಂದು ದಿನಗಳ ಎಳೆಯ ಅಂದ ಹೆಣ್ಣುಮಗುವೊಂದನ್ನು ಬಿಟ್ಟು ನಮ್ಮಿಂದ ಕಣ್ಮರೆಯಾಗಿದ್ದಾರೆ

ಆವರ ಆತ್ಮಕ್ಕೆ ಪರಮಾತ್ಮನು ಚಿರ ಶಾಂತಿಯನ್ನೀಯಲಿ!

—ಎ ನಿ. ಲಕ್ಷ್ಮೀನಾರಾಯಣ ರಾವ್

ವಿದ್ಯಾರ್ಥಿಗಳಿಗೊಂದು
ಉಳಿತಾಯ ಯೋಜನೆ.....

ವಿದ್ಯಾರ್ಥಿಗಳೆ;

- ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆದು,—
- ವಿದ್ಯಾರ್ಜನೆಯ ಜೊತೆಗೆ ಉಳಿತಾಯ ಮನೋವೃತ್ತಿ ಮತ್ತು ಬ್ಯಾಂಕಿಂಗ್ ಅಭ್ಯಾಸಗಳನ್ನೂ ಅಭಿವೃದ್ಧಿಗೊಳಿಸಿರಿ.
- ಕ್ರಮವಾಗಿ ಕೂಡಿಟ್ಟು ಕ್ರಮವಾಗಿ ವೆಚ್ಚಮಾಡಲು ಬ್ಯಾಂಕಿಂಗ್ ವ್ಯವಹಾರ ತುಂಬಾ ಸಹಕರಿಸಬಲ್ಲುದು.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಿಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸಮಾನ ಸೇವೆ ..... ಸರಿಯಾದ ಭದ್ರತೆ.

ಹಸಿಗತೆ

ನ್ಯಾಯ

ಒಬ್ಬ ದನ ಕಾಯುವ ಹುಡುಗ ಪಂಚಾಯಿತಿಯ ಅಧ್ಯಕ್ಷರ ಹತ್ತಿರ ಹೋಗಿ ಹೇಳಿದ—"ಸ್ವಾಮಿ, ನಿಮ್ಮ ಆಕಳು ನಮ್ಮ ಆಕಳನ್ನು ಕೋಡಿನಿಂದ ತಿವಿದು ಕೊಂದು ಹಾಕಿತು ಇದರ ವಿಚಾರ ಮಾಡಿ ನನಗೆ—

ಅಧ್ಯಕ್ಷ ಹೇಳಿದ — ಇದಕ್ಕೆ ಏನೂ ಮಾಡಲು ಬರುವುದಿಲ್ಲ. ಆಕಳುಗಳು ಎಷ್ಟೆಂದರೂ ಮೂಕ ಪ್ರಾಣಿಗಳು ನಿನ್ನ ಆಕಳನ್ನು ಕೊಂದು ಹಾಕೆಂದು ಯಾರೂ ಅದಕ್ಕೆ ಕಲಿಸಿ ಇಟ್ಟಿರಲಿಲ್ಲ ಮೂಕ ಪ್ರಾಣಿಗಾಗಲೀ ಅದರ ಮೂಲಕನಿಗಾಗಲಿ ದಂಡ ಮಾಡುವ ಕಾಯದೆ ಇಲ್ಲವೆಂದನು.

ದನ ಕಾಯುವ ಹುಡುಗ ತಿರುಗಿ ಹೇಳಿದ "ತಪ್ಪಿದೆ ಸ್ವಾಮೀ, ತಪ್ಪಿದೆ ನಿಮ್ಮ ಆಕಳು ನಮ್ಮ ಆಕಳನ್ನು ಕೊಂದಿಲ್ಲ. ನಮ್ಮ ಆಕಳು ನಿಮ್ಮ ಆಕಳನ್ನು ಕೊಂದಿದೆ" —ಅಧ್ಯಕ್ಷ ಹೌಹಾರಿ ಕೇಳಿದ—ಏನು, ಏನು? ನಿಲ್ಲು ಇಲ್ಲಿ. ಕಾಯಿದೆ ನೋಡಿ ಹೇಳುತ್ತೇನೆ. ತಡಿ ಎನ್ನುತ್ತ ಕಪಾಟಿನ ಮೇಲೆ ಧೂಳು ತಿನ್ನುತ್ತಿದ್ದ ಕಾಯದೆ ಪುಸ್ತಕ ಹುಡಕಿ ಹೆತ್ತಿದ

ದನ ಕಾಯುವ ಹುಡುಗ ಕೇಳಿದ— ಇದೇನು ಸ್ವಾಮೀ. ನನ್ನ ಆಕಳು ಸತ್ತಿತೆಂದಾಗ ಕಾಯದೆ ನೋಡಲಿಲ್ಲ ನಿಮ್ಮ ಆಕಳು ಸತ್ತಿತೆಂದಾಗ ಮೂತ್ರ ಇಷ್ಟೆಳ್ಳ ಪ್ರಯತ್ನಪಟ್ಟು ಕಾಯದೆ ಹುಡುಕುತ್ತಿದ್ದೀರಲ್ಲ! ನ್ಯಾಯಕ್ಕೆ ಎರಡು ಮುಖ ಇವೆಯೇ?" ಎಂದೆನ್ನುತ್ತಾ ಆ ದನ ಕಾಯುವ ಹುಡುಗ ನಡೆದುಬಿಟ್ಟ

(ಯುಗೋಸ್ಲಾವ ಜಾನಪದ ಕತೆ)

Edited, Printed & Published by K. H.Shetty. at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

ನವಯುಗ

Estd. 1991 ಸ್ಥಾಪನೆ
Regd. No. B.G. 176
Vol. 42 No. 50

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 29—8—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. 6–75
ಸಂಪುಟ ೪೨ ಸಂಚಿಕೆ ೫೦

ನಮ್ಮ
ರಾಷ್ಟ್ರೀಯ
ರಕ್ಷಣಾ ನಿಧಿಗೆ
ಉ ದಾ ರ
ಸ ಹಾ ಯ
ಸ ಲ್ಲಿ ಸಿ ರಿ

ಮುಂಬಯಿ ನಗರದಲ್ಲಿ

ನಿಂತು ಹೋದ ಬೃಹತ್ ಸಂಪು

ಮುಂಬಯಿ ನಗರ ಸಭೆಯ ನೌಕರರು, ಅವರಿಗೆ ಸಹಾನುಭೂತಿಯನ್ನು ಪ್ರದರ್ಶಿಸಲು 'ಬೆಸ್ಟ್' ನೌಕರರು, ಟ್ಯಾಕ್ಸೀ ವಾಲಾರು, ಬಂದರ ಮತ್ತು ಧಕ್ಕೆಯ ಕೆಲಸಗಾರರು, ಬ್ಯಾಂಕ್, ಹೋಟೆಲು ಮೊದಲಾದ ಉದ್ದಿಮೆಗಳಲ್ಲಿ ದುಡಿಯುತ್ತಿರುವವರು-ಎಲ್ಲ ಕಾರ್ಮಿಕ ವರ್ಗವೂ ಒಂದಾಗಿ ಸಂಪು ಹೂಡಿ, ನಗರದ ಜನ ಜೀವನವನ್ನು, ಆಡಳಿತೆಯನ್ನು ಅಸ್ತವ್ಯಸ್ತಗೊಳಿಸುವ ಸಾಹಸವನ್ನು ಪ್ರದರ್ಶಿಸಿದರು. ಹಲವಾರು ಮುಖಂಡರು ಸಂಪನ್ನು ಹಿಂತೆಗೆಯುವಂತೆ ಕಳಕಳಿಯಿಂದ ಪ್ರಾರ್ಥಿಸಿದರೂ ಅದನ್ನು ಕೇಳದೆ, ತಮ್ಮ ಛಲವನ್ನೇ ನೆಮ್ಮಿ ಹಿಡಿದ ಕಾರ್ಮಿಕ ಸಂಘಟನೆಯು ಧುರೀಣರು ತಮ್ಮ ಅನುಯಾಯಿಗಳನ್ನು ವಶ್ಯಮಾರ್ಗದಲ್ಲೊಯ್ದು, ತಮ್ಮ ರಾಜಕೀಯ ಸ್ವಾರ್ಥವನ್ನು ಸಾಧಿಸುವುದರಲ್ಲೇ ಮನ ಹಾಕಿದರು. ನಗರಾಡಳಿತ ಮಂಡಳಿಗನ್ನು, ಸರಕಾರವನ್ನು ಮಣಿಯುವಂತೆ ಅವರಿಗೆ ಸೂಕ್ತ ಶಾಸ್ತಿ ಮಾಡುವಂತೆ ಪರಿಸರಿಯಾಗಿ ಒತ್ತಾಯ ಹೇರಿ, ತಮ್ಮ ಲಾಭ ಬಡಕತನವನ್ನು ಮಾತ್ರ ಇವರು ಗಣಿಸಿದರಲ್ಲದೆ, ಸಂಪು ಹೂಡುವ ಸಮಯ- ಸಂದರ್ಭ, ಅವಶ್ಯಕತೆ ಮತ್ತದರ ಸ್ವರೂಪ, ಹಾಗೂ ಪರಿಣಾಮಗಳ ಕಡೆಗೆ ಅವರು ಎಳ್ಳಷ್ಟಾದರೂ ಗಮನ ಹರಿಸದಿದ್ದುದು ಶೋಚನೀಯ.

ಶಾಸ್ತಿ ಮಾಡುವ ದುರಿಚ್ಛೆ

ದೇಶದ ಗಡಿ ಪ್ರದೇಶದಲ್ಲಿ ಶತ್ರು ಸೇನೆಯು ಕಾಲು ಕೆದರಿ ಸಮರಾಹ್ವಾನವನ್ನು ನೀಡುತ್ತಿರುವ, ನಮಗೆ ಯುದ್ಧ ಬೇಡವಾದರೂ ಬಂದಿರುವ ಆಹ್ವಾನವನ್ನು ಸ್ವೀಕರಿಸಲೇ ಬೇಕಾದ, ಅದಕ್ಕಾಗಿ ದೇಶದಲ್ಲಿ ಸಾಂಪತ್ತಿಕ ಮತ್ತು ನೈತಿಕ ಸಂಘಟನೆಯು ಅತ್ಯವಶ್ಯವಿರುವ ಈ ದುರ್ಧರ ಸನ್ನಿವೇಶದಲ್ಲಿ ಉದ್ದಿಮೆಗಳ ಉತ್ಪಾದನೆಯನ್ನು ಕುಗ್ಗಿಸುವ, ನಾಗರಿಕರ ಆರೋಗ್ಯಕ್ಕೆ ಭಂಗತರುವ, ಸಾಂಪತ್ತಿಕ ಸ್ಥಿತಿಯನ್ನು ಕುಂಠಿಸುವ, ಸರ್ವಪ್ರಕಾರದಲ್ಲೂ ದೇಶಕ್ಕೆ ಅಪಾಯಕಾರಿಯಾದ ಮತ್ತು ಜನತೆಗೆ ಬೇಡವಾದ ಮುಷ್ಕರವನ್ನು ಹೂಡಿ, ಪೋರನ ಮೇಲೆ ಹೊರಿ ಹೇರಿದಂತೆ ಸರಕಾರದ ಮೇಲೆ ಕಾರ್ಮಿಕ ನಾಗರವು ತೆರಿಗೆಗಳಿಂದ ಹೊಡೆಯುವ ಅನ್ಯಾಯ ಮಾಡಿತು ಸರಕಾರವು ಮುಷ್ಕರದ ಮುಂದೆ ತಲೆಬಾಗದೆ ಇದ್ದುದೆಂದು, ಸಹಾನುಭೂತಿಪರರೆಂದು 'ಬೊಂಬಾಯಿ ಬಂದ್' ಚಳವಳಿಯನ್ನೂ ಅದು ಸಂಘಟಿಸಿತು. ಎಂದರೆ, ಊರಿನ ಮೇಲೆ ಆಕಾಶವೇ ಕಳಚಿ ಬಿದ್ದರೂ ಬೀಳಲಿ, ತಮ್ಮ ಬೇಡಿಕೆಗಳು ಪೂರೈಸಲ್ಪಡಲೇಬೇಕು ಎಂಬ ಏಕ ಮಂತ್ರವೇ ಇವರ ನಾಯಕರಿಗೆ ಬೇಕಾದುದು. ಕೇವಲ ಮುಂಬಯಿಯ ಕಾರ್ಮಿಕರನ್ನು ಮಾತ್ರ ಎದುರು ಕಟ್ಟಿ ತೃಪ್ತಿಯಾಗದ ಆ ನಾಯಕರು "ಸರಕಾರವು ಮಣಿಯದೆ ಹೋದರೆ, ದೇಶದ ಇತರೆಡೆಯೂ ಇದೇ ಮಾದರಿಯ ಸಂಪನ್ನು ಸಂಘಟಿಸಬೇಕಾಗಬಹುದು." ಎಂಬ ಗಂಭೀರ ಎಚ್ಚರಿಕೆಯನ್ನು ನೀಡುವಷ್ಟೂ ಮುಂದುವರಿದರು—ಎಂದರೆ, ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವು ದಕ್ಕಿಂತಲೂ ಸರಕಾರದ ಮೇಲೆ ಸವಾರಿ ಮಾಡುವುದಕ್ಕೇ ಅವರು ಉದ್ದೇಶಕವಾಗಿತ್ತು ಅದಕ್ಕಾಗಿ ಯಾವ ದಾರಿಯನ್ನಾದರೂ. ಅದು ವಾಮವೇ ಏಕಾಗಿರಬಾರದು?, ಹಿಡಿಯಲು ಅವರು ಸಿದ್ಧರಿದ್ದರು. ಇಂತಹ ಅಗ್ರಹ ಪ್ರಜಾಸತ್ತೆಗೆ ಯೋಗ್ಯವೆ?

ಆದಾಯದ ಹಂಚೋಣವೆ?

ತಮ್ಮ ಶಕ್ತಿಬಳಕೆಯಲ್ಲಿ ನೇರವಾದ ಏರಿಕೆಯಾಗಬೇಕು. ಖಡ್ಡಾಯ ಠೇವಣಿ ಯೋಜನೆಯನ್ನು ತಡೆಹಿಡಿಯಬೇಕು ಮತ್ತು ಬೆಲೆ ಏರಿಕೆಯನ್ನು ಪ್ರತಿಬಂಧಿಸಬೇಕು—ಎಂಬಿವು ಈ ಮುಷ್ಕರಕ್ಕೆ ಕಾರಣವಾದ ಕೇಳಿಕೆಗಳು. ಎಂದರೆ, ತಮ್ಮ ಆದಾಯ ಹೆಚ್ಚಬೇಕು, ತಮ್ಮ ಜೀವನ ವೆಚ್ಚ ಕಡಿಮೆಯಾಗಬೇಕು" ಎಂಬ ಸೂತ್ರದ ಹಿನ್ನೆಲೆಯಿದಕ್ಕೆದೆ. ಬೆಲೆಯೇರಿದರೆ, ಆದಾಯ ತಡೆಯಬೇಕು, ಬೆಲೆಯಿಳಿದರೆ ಕನಿಷ್ಠ ಬೆಲೆ ನಿರ್ಣಯವಾಗಬೇಕು ಎಂಬ ಘೋಷಣೆಗಳನ್ನು ಹೊರಡಿಸುವವರು ನಮ್ಮಲ್ಲಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ದೇಶವೊಂದರಲ್ಲಿ ಬೆಲೆಯೇರಿಕೆ, ಆಂದರೆ, ಆತನ ಕೊಂಡುಕೊಳ್ಳುವ ಶಕ್ತಿಯು ಹೆಚ್ಚುವುದು, ಸ್ವಾಭಾವಿಕ. ಖಡ್ಡಾಯ ಠೇವಣಿಯು ಪರಿಣಾಮವಾದರೂ ಏನೂ ಅಗಲಾರದು ವಿನಾಯಿತಿ ಹೊಂದದಿರುವವನಾವನೂ ಉಳಿತಾಯದ ಪರಿಮಿತಿಯು ನೇ. ೩ ಮಾತ್ರವಿರುವುದನ್ನು ನಾವು ಗಮನಿಸಬೇಕು. ದೇಶ ಪುನರಾಭಿವೃದ್ಧಿಯು, ಶತ್ರುಗಳನ್ನು ಹೊಡೆದಟ್ಟುವ ಈ ಜಟಿಲ ಸಂದರ್ಭದಲ್ಲಿ ಭಾರತೀಯನು ಇಷ್ಟು ಸಣ್ಣ ಮೊತ್ತದ ಉಳಿತಾಯವನ್ನು ಸಾಧಿಸಲಾರನೆಂದರೆ, ಅದು ಆತನಿಗೇ ಆಸ್ಯಾಸ್ಪದ. ತನ್ನ ಹಲವಾರು ರೀತಿಯ ದುರಭ್ಯಾಸ-ಇಲ್ಲನೆ ಅಧುನಿಕ ಶಿಷ್ಟ ಸಂಪ್ರದಾಯಗಳನ್ನು ಎಳ್ಳಷ್ಟು ಮೊಟಕು ಮಾಡಿದರೆ, ಈ ಅಲ್ಪ ಪ್ರಮಾಣದ ಉಳಿತಾಯವನ್ನು ಸಾಧಿಸಬಹುದು, ಮೂತ್ರವಲ್ಲ, ಸಾಧಿಸಲೇಬೇಕು. ಇನ್ನು ಶಿಕ್ಷಣಭತ್ತೆಯ ಏರಿಕೆಯ ಪ್ರಶ್ನೆ. ಒಂದೇ ಸಲ ಸೇ. ೫೦ರ ಹೆಚ್ಚಳವನ್ನು ಮುಂದಿಟ್ಟಿದ್ದಾರೆ, ನೌಕರರು. ನಗರಸಭೆಯ ಅದಾಯವು ಹೆಚ್ಚಾದುದರಿಂದ ಇದನ್ನು ಮನ್ನಿಸಿದರೆ, ಆದಕ್ಕೇನೂ ನಷ್ಟವಾಗುವುದಿಲ್ಲವೆಂದು ತಮ್ಮ ಬೇಡಿಕೆಯನ್ನು ಅವರು ಪುಷ್ಟೀಕರಿಸಿದ್ದಾರೆ, ನಿಜವಾಗಿಯೂ ಒಪ್ಪಬೇಕಾದುದೇ. ಜೀವನಮಟ್ಟವು ಏರಿದಂತೆ, ತನ್ನ ನೌಕರರ ವೇತನವನ್ನು ಹೆಚ್ಚಿಸುವುದು ಅಗತ್ಯ ಮತ್ತು ಅಪೇಕ್ಷಣೀಯ. ಆದರೆ, ಅವರ ಪುಷ್ಟೀಕರಣವೆ ಮಾತ್ರ ತುದಿಮೊದಲಿಲ್ಲದ್ದು. ನಗರಸಭೆಯು ತನ್ನ ಕಾರ್ಮಿಕರ ಹಿತಾಕಾಂಕ್ಷೆಯನ್ನು ಗಮನಿಸುವಂತೆಯೇ ತನಗೆ ಕರೆತರುವ ನಾಗರಿಕರ ಕಡೆಗೂ ಆಸಕ್ತಿ ವಹಿಸಬೇಕು. ಆದಾಯ ಹೆಚ್ಚಿದರೆ, ಅದನ್ನು ನೌಕರರಲ್ಲಿ ಹಂಚುವುದಕ್ಕೆ ನಗರ ಸಭೆಯು ವ್ಯಾಪಾರೀ ಸಂಘವಲ್ಲ; ಅದು ಜನತಾ ಸೇವಾ ಸಂಸ್ಥೆ; ಜನತೆಗೆ ಅಧಿಕಾಧಿಕ ಸಾಲಭ್ಯ ಸೌಕರ್ಯಗಳನ್ನು ಒದಗಿಸುವುದು ಅದರ ಕರ್ತವ್ಯವಲ್ಲವೆ? ಅಥವಾ ಮುಂಬಯಿಯ ನಾಗರಿಕರ ಎಲ್ಲ ಅವಶ್ಯಕತೆಗಳನ್ನು ಪೂರೈಸಿಯೂಗಿದೆಯೇ (ಹಾಗಿದ್ದರೆ, ಸುಖೀ ರಾಜ್ಯ ಸ್ಥಾಪನೆಗನುವೆಂಟಂತೆ, ಕರಗಳ ಪ್ರಮಾಣವನ್ನು ತಗ್ಗಿಸಬೇಕು.) ಎಲ್ಲರೂ ತಿಳಿದಿರುವಂತೆ ಹಾಗಿಲ್ಲ. ಹಾಗಾಗದೆ, ನೌಕರರ ವಾದದಲ್ಲಿ ಹೆಚ್ಚಿನ ಹುರುಳಿಲ್ಲ.

ಜನತೆಯ ಮೇಲೆ ಸವಾರಿ

ಕಾರ್ಮಿಕರ ಮುಂದಾಳುಗಳು ಸ್ವಲ್ಪ ಅವಸರ ಮಾಡಿದಂತೆ ತೋರುತ್ತದೆ. 'ಬೆಳೆಯೇರಿಕೆ-ತುಟ್ಟಿಭತ್ತೆಯೇರಿಕೆ'ಗಳ ನಡುವೆ ತಾಳ ಮೇಳವಿರಬೇಕೆಂದು ಯಾರೂ ಹೇಳಬಲ್ಲರು. ನಗರ ಸಭೆಯು ಅಧಿಕಾರಿಗಳಾದರೂ ಈ ಬೇಡಿಕೆಯನ್ನು ಪರಿಶೀಲಿಸಲು ಸಿದ್ಧರಿದ್ದರು; ಆದರೆ ನೌಕರರು ಸಂಪಿನ ಬೆದರಿಕೆಯನ್ನೂ ಹಾಕಿ ಬಗ್ಗು ಬಡಿಯುವ ಇರಾದೆಯನ್ನೂ ವ್ಯಕ್ತ ಪಡಿಸಿದರು. ಹಾಗಾಗಿ ಅಧಿಕಾರಿಗಳೂ ಶಸು ಕಟು ಧೋರಣೆಯನ್ನೇ ಅನುಸರಿಸಬೇಕಾಯಿತು. ಕೇಂದ್ರ ಸರಕಾರದ ನೌಕರರು ಸಂಪುಹೂಡಿ ಸಾಧಿಸಿದ್ದೇನನ್ನು? ಪ್ರಜೋದ್ಕರು ಅವರಿಗೆ ಮಾಡಿದ ಏಕ ವೇಸನು? ಆದೇ ಮಾದರಿಯಲ್ಲಿ ಬೊಂಬಾಯಿಯ ಮುಷ್ಕರವೂ ಏಕಾಕ್ಯಾಪ್ತವಾಗಿ ಮುಗಿಯಿತು. ಕೇಂದ್ರ ಗೃಹ ಮಂತ್ರಿ ಶಾಸ್ತ್ರಿಗಳು, ಮುಂಬಯಿಯ ಮುಖ್ಯ ಮಂತ್ರಿ ಕನ್ನಮ್ಮಾರ್ ಮತ್ತು ಗೃಹ ಮಂತ್ರಿ ಸಾವಂತರು ಸ್ವಶ್ರದ್ಧತಾವಾಗಿ ಸಂಪನ್ನು ಹಿಂಪಡೆದರೆ ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವ ಕರೆಯೊತ್ತಿದ್ದರು. ಆದರೆ, ಕಾರ್ಮಿಕ ಮುಂದಾಳುಗಳ ಆಸೆ ತಮ್ಮ ಬೇಡಿಕೆಯನ್ನು ಪೂರೈಸುವುದಾಗಿದ್ದಂತೆ ತೋರುವುದಿಲ್ಲ. ಸರಕಾರವನ್ನು ಬಿಕ್ಕಟ್ಟಿನಲ್ಲಿ ಕೆಡವಿ, ಅದನ್ನು ಮಣಿಸುವುದು ಮತ್ತು ತಮ್ಮ ಜಯಭೇರಿಯನ್ನು ಮೊಳಗಿಸುವುದಾಗಿತ್ತು. ಅದರ ಆಂತರ್ಯವನ್ನು ಕಂಡುಕೊಂಡ ಅಧಿಕಾರಿಗಳೂ ನಾಗರಿಕರೂ ಸಂಪನ್ನು ಲಕ್ಷ್ಯಿಸಲಿಲ್ಲ. ಜನಾನುರಾಗ ಪಡೆಯದ ಸಂಪು ಮುಕ್ತಾಯಗೊಳ್ಳದೆ ಮತ್ತೇನಾದೀತು? ಕೇಂದ್ರದ ಸಂರಕ್ಷಣಾ ಸಚಿವ ಜವನರ ಕರೆಯನ್ನು ಮನ್ನಿಸುತ್ತೇವೆಯೆಂದು ಸಂಪು ಮುರಿದರು ಕಾರ್ಮಿಕರು.

ಜನರ ಸಹಾನುಭೂತಿಯಿಲ್ಲ

ಈ ಸಂಪಿನಿಂದ ನೌಕರರು ಏನನ್ನೂ ಸಾಧಿಸಿದಂತಾಗಲಿಲ್ಲ ಅವರಿಗೆ ನ್ಯಾಯ ದೊರಕಿಸುವುದು ತನ್ನ ನೈತಿಕ ಹೊಣೆಗಾರಿಕೆಯೆಂದಿದ್ದಾರಂತೆ ಜವನರು. ಇದ್ದರೂ ಇರಬಹುದು; ಆದರೆ ಅವರಿಗೆ ನ್ಯಾಯ ಬೇಕಾಗಿದ್ದಿದ್ದರೆ, ಸವಿನಯವಾಗಿ ಮನವಿಗಳ ಮೂಲಕವೇ ಅದನ್ನು ಪಡೆಯಬಹುದಿತ್ತು; ಸಂಪಿನ ಆಗತ್ಯವೇ ಇರಲಿಲ್ಲ; ಇನ್ನು ತಪ್ಪು ದಾರಿ ಹಿಡಿದ ಮೇಲಾದರೂ ಅವರು ಸರಿದಾರಿಗೆ ಕೂಡಲೇ ಬರಬಹುದಿತ್ತು. ಹತ್ತು ದಿನಗಳ ವರೆಗೆ ಜನತೆಯನ್ನು ಪೀಡಿಸಬೇಕಾಗಿದ್ದಿಲ್ಲ. ಜವನರ ಮೊತಿನಂತೆ ಅವರಿಗೆ ನ್ಯಾಯ-ದೊರೆಯಿಬಹುದು-ಜವನರಿಗೆ ಆ ಅಧಿಕಾರವಿದೆಯೆ?-ಆದರೆ, ೪೦ ಲಕ್ಷ ಮುಂಬಯಿ ನಾಗರಿಕರ ವಿಶ್ವಾಸಕ್ಕೆ ಎರವಾದ ಈ ಕಾರ್ಮಿಕರಿಗೆ ಅದನ್ನು ಮರಳಿಕೊಡಿಸಲು ಜವನರಿಂದ ಸಾಧ್ಯವೆ? ಕಾರ್ಮಿಕರ ಪರವಿಂದಾಗಿ ಅವರ ಬಗ್ಗೆ ಸಹಾನುಭೂತಿಯ ಭಾವ ಹಾರಿ ಹೋಯಿತು.

ಪ್ರಶಂಸನೀಯ ಚಿತ್ತಸ್ಥೈರ್ಯ

ಮುಂಬಯಿಯಂತಹ ಬೃಹತ್‌ನಗರದ ಬೃಹತ್ ಸಂಪು ಸರ್ವಸಾನೂನ್ಯವಾಗಿ ಶಾಂತರೀತಿಯಲ್ಲೇ ಪರ್ಯವಸಾನಗೊಂಡುದೊಂದು ವೈಶಿಷ್ಟ್ಯ. ತಮ್ಮ ಸಂಪು ಅನ್ಯಾಯದ್ದೆಂದು ಸ್ವಯಂ ಕಾರ್ಮಿಕ ವರ್ಗದವರೂ ಆಂತರ್ಯದಲ್ಲಿ ಅಂದುಕೊಂಡಿದ್ದುದು, ನಾಗರಿಕರು ಮತ್ತು ಆತಳಿತೆಯವರು ಬಾದುದನ್ನು ಕೆಚ್ಚೆದೆಯಿಂದ ಸಹಿಸುವ ದೃಢ ಸಂಕಲ್ಪ ಮಾಡಿದುದು ಇದಕ್ಕೆ ಕಾರಣವೆನ್ನಬಹುದು. ಅಲ್ಲಲ್ಲಿ ಕೆಲವೊಂದು ಕ್ಷುಲ್ಲಕ ದುರ್ಘಟನೆಗಳು ನಡೆದಿದ್ದರೂ ಒಟ್ಟನಲ್ಲಿ ಮುಂಬಾಯಿಯಲ್ಲಿ ಅನಾಪೃತ ನಡೆಯಲಿಲ್ಲ ಇದಕ್ಕಾಗಿ ಎಲ್ಲರೂ ಅಭಿನಂದನೀಯರು. ಮುಂದಾಳುಗಳ ಒತ್ತಾಯದಿಂದಲೇ ಸಂಪಿಗಿಳಿದ ಕಾರ್ಮಿಕರು ನಿರೀಹರು; ಅವರೂ ಆಸಹಾಯಕರೇ.

(ಉಳಿದ ಪುಟ ನೋಡಿ)

ರಾಷ್ಟ್ರಪತಿ ಉವಾಚ

ಪೆಗುರಿಯ ಹೆದ್ದಾರಿಯಲ್ಲಿ ಭ್ರಮಿಸೋಣ

(೧)

"ನಮ್ಮ ದೇಶದಲ್ಲಿ ಇಂದು ಎದ್ದು ಕಾಣುತ್ತಿರುವ ಪರಸ್ಪರ ವಿರೋಧಿ, ವೈಯಕ್ತಿಕ ಹಿತಾಸಕ್ತಿಗಳ ಸಂಘರ್ಷಣೆ, ಅಧಿಕಾರ ವ್ಯಾಮೋಹ ಇವೇ ಮೊದಲಾದ ದೋಷಗಳು ರಾಷ್ಟ್ರದ ಶೀಲಕ್ಕೆ ಕುಂದು ತರುವ ಸ್ಥಿತಿಯಲ್ಲಿವೆ"

ನಮ್ಮ ದೇಶದ ಸ್ವರೂಪವನ್ನೇ ಬದಲಾಯಿಸಿ ಹೊಸ ಜೀವನ ಸೃಷ್ಟಿವನ್ನು ಹಾಗೂ ಹೊಸ ಸಾಮಾಜಿಕ ಮೌಲ್ಯಗಳನ್ನು ರೂಢಿಗೆ ತರಲು ನಾವು ಸ್ವಯುಷ್ಟಿಸಿದ್ದೇವೆ ಆದರೂ ಇಂದಿಗೂ ನಮ್ಮ ದೇಶದಲ್ಲಿ ಹೆಚ್ಚಳ ಊಳಿಗ ಪದ್ಧತಿಯ ಲಕ್ಷಣಗಳು ಇನ್ನೂ ಉಳಿದು ಕೊಂಡಿವೆ ಅನೇಕರು ತಮ್ಮ ಹಿತಾಸಕ್ತಿಗಳನ್ನು ಕೆಲವೇ ಜನರ ಹಿತಾಸಕ್ತಿಗಳಿಗೆ ಅಧೀನಗೊಳಿಸಿಕೊಂಡಿರಬೇಕಾದ ಪರಿಸ್ಥಿತಿ ಇದೆ. ಈ ಸಾಮಾಜಿಕ ಅವನೇಹಗಳನ್ನು ಅಡಿಮೆ ಬೇಗ ತೊಡೆದು ಹಾಕಿ ನಾವೆಲ್ಲ ಒಂದು ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಸತ್ತೆಯನ್ನು ಸ್ಥಾಪಿಸಬೇಕಾಗಿದೆ.

ಜನರ ಪೀಠಿಕ್ಷೆಗೆ ಅನುಗುಣವಾದ ಒಂದು ಕ್ರಾಂತಿ ಯಶಸ್ವಿಯಾಗಿ ಸಾಧ್ಯವಾಗದೆ ದೋಷದರೆ ಅದರಿಂದ ಜನರ ಮನಸ್ಸಿನಲ್ಲಿ ಉಂಟಾಗಬಹುದಾದ ನಿರಾಶೆ, ಆದಾಳ್ಲಂಗ ಹಾಗೂ ಅಕ್ರೋಶ ಇವು ಸಮಾಜದ ಉಸ್ಥಿತಿಗೆ ಪೋಷಕ ಶಕ್ತಿಯೂ ನಲಾರವು. ಸಮಾಜದಲ್ಲಿ ಈ ಮಾನಸಿಕ ವೃತ್ತಿಗಳು ಬೆಳೆಯಲು ಅವಕಾಶ ಕೊಡಬಾರದು. ಜನ ತಮ್ಮ ವೈಯಕ್ತಿಕ ಹಾಗೂ ವರ್ಗ ಸಂಬಂಧವಾದ ಹಿತಾಸಕ್ತಿಗಳನ್ನು ಬದಿಗಿಟ್ಟು ರಾಷ್ಟ್ರದ ನೈತಿಕ ಮಟ್ಟವನ್ನು ಬಲಗೊಳಿಸಲು ಶ್ರಮಿಸುತ್ತಾರೆಂಬ ವಿಶ್ವಾಸ ನನಗಿದೆ.

ಕೇವಲ ಘೋಷಣೆಗಳನ್ನು ಮಾಡುವುದರಿಂದ ಸ್ವಯಂ ಪರಿಪೂರ್ಣತೆ ಸಾಧಿಸುವುದು ಸಾಧ್ಯವಾಗಲಾರದು. ಜನರು ಪ್ರಬಲವಾದ ಪ್ರಯತ್ನದ ಮೂಲಕ ಸೂಕ್ತ ಇದನ್ನು ಸಾಧಿಸಿಕೊಳ್ಳಲು ಸನುದ್ಯರಾಗುತ್ತಾರೆ. ನಮ್ಮ ದೇಶದಲ್ಲಿ ಶೇ. ೭೦ ರಷ್ಟು ಜನ ಬೇಸಾಯ ಹಾಗೂ ತತ್ಸಂಬಂಧವಾದ ಉದ್ಯೋಗಗಳ ಮೂಲಕ ಜೀವನ ನಡೆಸುತ್ತಿದ್ದಾರೆ. ರಫ್ತು ವ್ಯಾಪಾರದ ಸೂಲಕ ಬರುತ್ತಿರುವ ಸಂಪಾದನೆಯಲ್ಲಿ ಶೇ. ೮೦ ರಷ್ಟು ಕೃಷಿ ಉತ್ಪಾದನೆಗಳ ಮೂಲಕವೇ ಬರುತ್ತದೆ. ಆದರೂ ಕೃಷಿ ಉತ್ಪನ್ನ ಅಷ್ಟು ತೀವ್ರಗತಿಯಲ್ಲಿ ಹೆಚ್ಚುವುದು ಸುಲಭಸಾಧ್ಯವಾಗದ ವಿಷಯ. ನಮ್ಮ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಹಲವಾರು ಮಾರ್ಗಗಳನ್ನು ಅನುಸರಿಸಿದ್ದೇವೆ. ಸೃತೀಯ ಯೋಜನೆಯಲ್ಲಿ ಆಹಾರ ಧಾನ್ಯಗಳ ವಿಚಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಸಾಧಿಸುವುದು ನಮ್ಮ ಗುರಿಯಾಗಿದೆ. ದೃಢಪ್ರಯತ್ನ ಇದಕ್ಕೆ ಅವಶ್ಯಕವಾಗುತ್ತದೆ. ರಾಸಾಯನಿಕ ಗೊಬ್ಬರಗಳು, ಉತ್ತಮ ಬಿತ್ತನೆ ಬೀಜಗಳು ಮತ್ತು ಆಧುನಿಕ ಬೇಸಾಯ ಸಲಕರಣೆಗಳನ್ನು ಉಪಯೋಗಿಸುವುದರ ಅಂತೆಯೇ ರಕ್ಷಣಾ ಪ್ರಯತ್ನಕ್ಕೂ ಮಾಡಬೇಕು. ರಕ್ಷಣಾಸವನ್ನೆ ಒಂದು ಶಾಶ್ವತ ಸಮಸ್ಯೆಯೆಂದು ನಾನು ನಂಬುತ್ತೇನೆ.

ಚೀನಾದೊಡನೆ ನಮ್ಮ ಸಂಬಂಧ ಇನ್ನೂ ವಿಷಮಗೊಂಡಿರುವುದು ದುರ್ದೈವದ ಸಂಗತಿ. ಆದರೊಡನೆ ನುತ್ತು ಖಾಕೆ ಸ್ನಾನಪೊಡನೆ ನಮಗಿರುವ ಭಿನ್ನಾಭಿಪ್ರಾಯಗಳನ್ನು ಶಾಂತಿಯುತವಾಗಿ ಸೌಹಾರ್ದಯುತವಾಗಿ ಮತ್ತು ಮೈತ್ರಿಯುತವಾಗಿ ಬಗೆಹರಿಸಿಕೊಳ್ಳುವುದೇ ನಮ್ಮ ತೀವ್ರಾಪೇಕ್ಷೆಯಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ನಮಗೆ ಬಂದೊದಗಿರುವ ಆಪತ್ತಿನ ಭೀತಿ ನಮ್ಮನ್ನು ಶಾಂತಿ ಮಾರ್ಗದಲ್ಲಿ ವಿಮುಖರನ್ನಾಗಿ ಮಾಡಬಾರದು. ಸೈನಿಕ ಶಕ್ತಿಯನ್ನು ಅಗಾಧವಾಗಿ ಬೆಳೆಸಿಕೊಳ್ಳುವುದರ ಮೂಲಕ ಚೀನಾದೊಡನೆ ಪೈಪೋಟಿ ನಡೆಸುವ ಆಸಕ್ತಿಯೇನೂ ನಮಗಿಲ್ಲ ಆದರೆ ಆಕ್ರಮಣವನ್ನು ಎದುರಿಸಿ ನಮ್ಮ ಗಡಿಗಳನ್ನು ನಾವು ರಕ್ಷಿಸಿಕೊಳ್ಳುವ ಶಕ್ತಿಯಷ್ಟೇ ನಮಗಿಂದು ಬೇಕಾಗಿದೆ.

ಇಂದು ಇದಕ್ಕಾಗಿ ನಮ್ಮ ಜನ ಒಗ್ಗಟ್ಟಾಗಿ ನಿಲ್ಲ ಬೇಕು ಮತ್ತು ಒಂದು ಧ್ಯೇಯ ಸಾಧಿಸುವ ಒಂದು ದೃಢ ಸಂಕಲ್ಪ ಮಾಡಿಕೊಳ್ಳ ಬೇಕು.

ಶಾಸನ ಸಭೆಗಳಲ್ಲಿ ಮತ್ತು ಬಹಿರಂಗ ಸಭೆಗಳಲ್ಲಿ ಆಗಿಂದಾಗ್ಗೆ ನಡೆಯುವ ಅಸಹ್ಯ ಪ್ರಸಂಗಗಳು ನಮಗೆ ಒಳ್ಳೆಯ ಹೆಸರು ತರುವ ಪ್ರಸಂಗಗಳಾಗಿರದೆ ಅವು ಮತ್ತೆ ಮತ್ತೆ ನಡೆಯದಂತೆ ನೋಡಿಕೊಳ್ಳಬೇಕಾಗಿದೆ. ಸ್ವಪ್ಪ ಅಭಿಪ್ರಾಯ ಪ್ರಕಟಣೆ ಈ ಒರಟು ರೀತಿಯಲ್ಲೇ ನಡೆಯಬೇಕೆಂಬ ಅನಿವಾರ್ಯತೆಯೇನೂ ಇಲ್ಲ.

ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ವಿವಿಧ ರಾಷ್ಟ್ರಗಳ ಮಧ್ಯೆ ಸ್ನೇಹ ಸಂಬಂಧ ಬೆಳೆಯಲು ಶ್ರಮಿಸುವುದೇ ಭಾರತದ ಧ್ಯೇಯ. ಪ್ರತಿಯೊಂದು ಸ್ವತಂತ್ರ ರಾಷ್ಟ್ರವೂ ಸಾಹಿತ್ಯ, ಕಲೆ, ವಿಜ್ಞಾನ ಮತ್ತು ವಿದ್ವತ್ ಕ್ಷೇತ್ರಗಳಲ್ಲಿ ತನ್ನ ಅತ್ಯುತ್ಕೃಷ್ಟ ಕಾಣಿಕೆ ಸಲ್ಲಿಸುವ ಪೂರ್ಣಾವಕಾಶ ಇರಬೇಕು. ಯಾವೊಂದು ರಾಷ್ಟ್ರವೇ ಆಗಲಿ ಜಗತ್ತಿನಲ್ಲಿ ತನ್ನನ್ನು ಬಿಟ್ಟರೆ ಬೇರೊಂದಿಲ್ಲ ಎಂಬ ಗರ್ವ ಮನೋಭಾವನೆಯನ್ನು ಬಿಡಬೇಕು. "ನಭಾರತ ಸಮಂವೇಶಂ" ಎಂಬ ರೀತಿಯ ಅಹಂಭಾವ ಇಂದಿನ ಜಗತ್ತಿನ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಸಮಂಜಸವಾಗಲಾರದು.

ಮಾನವನ ಇತಿಹಾಸದಲ್ಲಿ ರಾಷ್ಟ್ರಗಳು ಅಂದಿನ ಕೆಲವು ಅವಶ್ಯಕತೆಗಳನ್ನು ಪೂರೈಸಲೆಂದೇ ಹುಟ್ಟಿಕೊಳ್ಳುತ್ತವೆ. ಆದರೆ ಇವು ಚಿರವಾಗಿ ಉಳಿಯುವ ಅವಶ್ಯಕತೆಗಳಾಗಿರುವುದಿಲ್ಲ ಸ್ವತಂತ್ರ ರಾಜ್ಯಗಳನೇಕವು ಹುಟ್ಟಿಕೊಂಡು ಅತ್ಯ ಇತರ ರಾಷ್ಟ್ರಗಳೊಂದಿಗೆ ವೈರಸಾಧಿಕಲು ಹೊರಟರೆ ಅಥವಾ ಹೊರ ಜಗತ್ತಿನ ಬಗ್ಗೆ ಸಂಪೂರ್ಣ ಅಜ್ಞಾನವನ್ನು ಪ್ರಕಟಿಸ ಹೊರಟರೆ ಅಂಥ ಒಂದು ಸ್ಥಿತಿ ಹೊಸ ಜಗತ್ತಿನ ಅವಶ್ಯಕತೆಗಳಿಗೆ ಹೊಂದಿಕೊಳ್ಳದೆ ಹೋಗುತ್ತವೆ. ನಾವು ಒಂದೇ ಮಾನವ ಕುಟುಂಬಕ್ಕೆ ಸೇರಿದ ರಾಷ್ಟ್ರಗಳಾಗಿದ್ದೇವೆ ಎಂಬುದನ್ನು ಅರಿತುಕೊಳ್ಳದೆ ಹೋದಲ್ಲಿ ಅಂತಹ ಅಜ್ಞಾನ ತುಂಬಾ ವಿನಾಶಕಾರಿಯಾಗುತ್ತದೆ. ಎಲ್ಲಾ ರಾಷ್ಟ್ರಗಳನ್ನು ಒಂದುಗೂಡಿ ನಿಲ್ಲಿಸುವ ಎಷ್ಟೋ ವಿಚಾರಗಳು ಇರೆಯೆಂಬುದನ್ನರಿತುಕೊಂಡು ರಾಷ್ಟ್ರೀಯ ಪ್ರತ್ಯೇಕತೆಯ ಸಂಕುಚಿತ ದೃಷ್ಟಿಯನ್ನು ನಾವು ತ್ಯಜಿಸಬೇಕು.

ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರ ರಾಷ್ಟ್ರಗಳ ಮಧ್ಯೆ ಸಖ್ಯ ಸಂಬಂಧವನ್ನು ಸಾಧ್ಯಗೊಳಿಸಲು ಅಣುಪ್ರಯೋಗ ನಿಷೇಧವು ಪ್ರಥಮ ಹೆಜ್ಜೆಯೂಗಿದೆ. ಅಣು ಯುದ್ಧದಲ್ಲಿ ಜಯ ಗಳಿಸುವ ಮಾತು ತುಂಬಾ ಮೂರ್ಖತನದ್ದಾಗಿದೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ಷೇತ್ರಗಳಲ್ಲಿ ಸ್ನೇಹಮಯ ಮಾರ್ಗ ಅನುಸರಿಸುವುದೇ ಯೋಗ್ಯ ಜೀವನ ಕ್ರಮವಾಗಿದೆ. ಮತ್ತು ಇದು ಇಂದಿನ ಯುಗದ ಕಡೆಯೂಗಿವೆ. ಬಾಹ್ಯಾಕಾಶ ಸಂತೋಧನೆಗೆ ಸಂಬಂಧಪಟ್ಟಂತೆ ನೋವಿಯತ್ ರಷ್ಯಾ ಮತ್ತು ಸಂಯುಕ್ತ ಸಂಸ್ಥಾನಗಳ ಮಧ್ಯೆ ಆಗುವ ಒಪ್ಪಂದ ಕೂಡ ಅಂತಹ ಸ್ನೇಹದ ಕಡೆಗೆ ಇನ್ನೊಂದು ನಿದರ್ಶನವಾಗಿದೆ.

ನಮ್ಮನ್ನು ಇಂದು ಎದುರಿಸುತ್ತಿರುವ ಯಾವ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಸಮಸ್ಯೆಗಳೇ ಆಗಲಿ ಅನಿವಾರ್ಯ ಸಮಸ್ಯೆಗಳೇನೂ ಅಲ್ಲ. ಮಾನವ, ಅವನ ನಿಜ ಮಾನವೀಯ ರೂಪದಲ್ಲಿ, ಕೇವಲ ಇತಿಹಾಸದ ಕಾರಣಾಗದೆ ಇತಿಹಾಸದ ನಿರ್ಮಾಪಕನೇ ಆಗುತ್ತಾನೆ. ಇತಿಹಾಸದ ಅಕಸ್ಮಿಕಗಳೆಲ್ಲ ಮಾನವನ ಇಚ್ಛಾಶಕ್ತಿಗೆ ಅನುಗುಣವಾಗಿಯೇ ರೂಪಗೊಂಡಿವೆ. ಜಗತ್ತಿನ ಭವಿಷ್ಯ ಎಂದು ಜನನಾಯಕರ ವಿವೇಕಕ್ಕೆ ಅನುಗುಣವಾಗಿ ರೂಪಗೊಳ್ಳುತ್ತದೆ.

ದೃಢಸಂಕಲ್ಪ ಹಾಗೂ ದೃಢಪ್ರಯತ್ನಗಳ ಮೂಲಕ ಇಂದು ನಮ್ಮ ದೇಶವನ್ನು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯವಿದೆ. ಯಾವ ಒಬ್ಬ ವ್ಯಕ್ತಿಯೇ ಆಗಲಿ ತಾನು ನಿರ್ದೋಷಿ ಎಂದು ಹೇಳಿಕೊಳ್ಳುವಂತಹ ಸರಿಸ್ಥಿತಿ ಇಲ್ಲ. ಸಣ್ಣ ಸಣ್ಣ ವಿಚಾರಗಳನ್ನು ನಾವು ಮರೆತು ನವಭಾರತ ನಿರ್ಮಾಣ ಕಾರ್ಯದ ಹೆಗ್ಗುರಿಯನ್ನು ಸಾಧಿಸಲು ನಮ್ಮ ಶಕ್ತಿ ಮೀರಿ ನಾವೆಲ್ಲ ಪ್ರಯತ್ನಿಸೋಣ. ಇದು ನಮ್ಮ ಮುಂದಿರುವ ಒಂದು ಪವಿತ್ರಕರ್ತವ್ಯವಾಗಿದೆ ಎಂದೇ ಇದನ್ನು ನಿರ್ವಹಿಸುವ ನಮ್ಮ ಪ್ರಯತ್ನಗಳಲ್ಲಿ ನಾವಿಂದು ಮಾ

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇ.ಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಖು ಶೇವಣಾತಿಗಳ ಮೇಲೆ ಸೇ.ಕಡಾ ½ ರತೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇ.ಕಡಾ 3

(ಯಾವತ್ತೂ ನಿರ್ಬಂಧಗಳಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸಾಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ನಸ್ಸೇರರ ಸ್ವರ್ಣ ಸ್ವಪ್ನ

ಸಂಯುಕ್ತ ಅರಬ ಸಂಸ್ಥಾನಗಳು

ಇಂದಿನ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಸಂಯುಕ್ತ ಅರಬ ರಾಷ್ಟ್ರ ಸಂಘದ ಕುರಿತಾಗಿ ಬಹುವೇಳೆ ಚರ್ಚೆಯು ನಡೆಯುತ್ತಿದೆ. ಈ ಕಲ್ಪನೆಯು ನಾಕಾರವಾಯಿತೆಂದರೆ, ವಿಶ್ವರಾಜಕಾರಣದಲ್ಲಿ ಹೊಸತೊಂದು ಅಧ್ಯಾಯವು ಪ್ರಾರಂಭವಾಗುವುದು; ವಿಶ್ವಶಕ್ತಿ ಕೂಟದಲ್ಲಿ ಕೂಡ ಹೊಸ ಪ್ರಭಾವವು ಬೀರುವಂತಾಗುವುದು.

ಸಂಯುಕ್ತ ಅರಬ ರಾಷ್ಟ್ರ ಸಂಘದ ಕನಸನ್ನು ನಾಸಿರರು ಮಾತ್ರ ಕಾಣುತ್ತಿಲ್ಲ ಅಥವಾ ಇಂದಿನವರೇ ಇದನ್ನು ಹೊಸತಾಗಿ ಕಾಣುವುದೂ ಅಲ್ಲ. ಹತ್ತೊಂಬತ್ತು ವರ್ಷಗಳಿಗೆ ಮೊದಲು ಅರಬ ಸಂಘದ ಸ್ವರೂಪದ ಮೇಲೆ ಚರ್ಚಿಸಲು ಏಗುಪ್ತ್ ದ ಅಲೆಗ್ಸಾಂಡ್ರಿಯಾ ನಗರದಲ್ಲಿಂದು ಸಭೆ ಸೇರಿತ್ತು. ಇದರಲ್ಲಿ ಎಂಟು ಅರಬ ರಾಜ್ಯಗಳ ಪ್ರತಿನಿಧಿಗಳು ಭಾಗ ವಹಿಸಿದ್ದರು. ಅರಬ ಲೀಗಿನ ಸ್ಥಾಪನೆಗೆ ಈ ಸಮ್ಮೇಳನವೇ ಕಾರಣವಾಗಿತ್ತು.

ಏಳನೆಯ ಶತಮಾನದಲ್ಲಿ ಮಹಮ್ಮದ ಪೈಗಂಬರರು ಅರಬ ಮರುಭೂಮಿಯಲ್ಲಿ ನವೀನ ಧರ್ಮ ಇಸ್ಲಾಮಿಗೆ ಜನ್ಮವಿತ್ತರು. ಈ ಧರ್ಮ ದೀಕ್ಷಿತರಾದ ಅರಬ ಯೋಧ್ದರು ಫಟಾಟೋಪದಂತೆ ಉತ್ಸಾಹಿಶರಾಗಿ ನಾಲ್ಕೂ ನಿಟ್ಟಿನಲ್ಲಿ ಹರಡಿ ಹೋದರು. ಅವರು ತಮ್ಮ ವಿಜಯ ಪತಾಕೆಯನ್ನು ಉತ್ತರದಲ್ಲಿ ಸ್ಪೈನ್ ಮತ್ತು ಕಸ್ತಂತುನಿಯಾ, ಪೂರ್ವದಲ್ಲಿ ಇರಾನ್, ಅಫಘಾನಿಸ್ತಾನ ಮತ್ತು ಭಾರತ, ಪಶ್ಚಿಮದಲ್ಲಿ ನೊಂಕ್ಯೊ ಮತ್ತು ಅಲ್ಜೀರಿಯಾ ತಾಗಾಗ ದಕ್ಷಿಣದಲ್ಲಿ ಸೂಡಾನ್ ಮತ್ತು ಸಹಂತಗಳ ವರೆಗೆ ಪಾರಿಸಿದರು. ಈ ಇಸ್ಲಾಂ ಸಾಮ್ರಾಜ್ಯವು ಅಲೆಗ್ಸಾಂಡರ ಮತ್ತು ಜೂಲಿಯಸ್ ಸೀಜರರ ಸಾಮ್ರಾಜ್ಯಗಳಿಗಿಂತಲೂ ವಿಶಾಲವಾಗಿತ್ತು. ಬಿರುಗಾಳಿಯ ವೇಗದಲ್ಲಿ ಹರಡಿದ್ದ ಈ ವಿಶಾಲ ಸಾಮ್ರಾಜ್ಯ ಅಲೆ ವೇಗದಲ್ಲಿ ಚಲ್ಲಾಪಿಲ್ಲಿಯಾಯಿತು. ೧೬ನೆಯ ಶತಮಾನದ ವರೆಗೆ ಅರಬದೇಶಗಳು ಒಂದೊಂದಾಗಿ ತುರ್ಕಿ ಸಾಮ್ರಾಜ್ಯದ ವಿಶಾಲೋದರದಲ್ಲಿ ಸಮಾವೇಶಗೊಂಡಿದ್ದುವು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಾದ ಪ್ರಥಮ ಲೋಕಯುದ್ಧವು ನಿದ್ರಿಸುತ್ತಿದ್ದ ಅರಬ ರಾಷ್ಟ್ರೀಯತೆಯನ್ನು ಎಚ್ಚರಿಸಿತು. ತುರ್ಕಿಗೆ ವಿರುದ್ಧವಾಗಿ ಅರಬರು ಪಶ್ಚಿಮ ಏಶ್ಯಾದಲ್ಲಿ ಇಂಗ್ಲಿಷರಿಗೆ ಸಹಕಾರ ನೀಡಿದರು. ತಮಗೆ ಸ್ವಾತಂತ್ರ್ಯ ಸಿಗುವುದೆಂದವರ ಆಶಯವಿತ್ತು. ಆದರೆ ಜನ್ಮಾಂಗಸಂಘವು ಅರಬ ದೇಶಗಳನ್ನು ವಿಶ್ವಸ್ಥ ಸಮಿತಿಯ ರೂಪದಲ್ಲಿ ಬ್ರಿಟನ್ ಮತ್ತು ಫ್ರಾನ್ಸಗಳ ವಶಕ್ಕೊಪ್ಪಿಸಿತು. ಆಗ ಅರಬರು ಅನಂತ ನಿರಾಶರಾದರು

ದ್ವಿತೀಯ ಜಾಗತಿಕ ಸಮರವು ಅವರ ರಾಷ್ಟ್ರೀಯತೆಯನ್ನು ಮರಳಿ ಕೆಣಕಿತು. ಯುದ್ಧಾನಂತರ ಕೆಲವು ದೇಶಗಳಿಗೆ ಸ್ವಾತಂತ್ರ್ಯ ಲಭಿಸಿತು; ಆದರೆ, ಅರಬ ಜನತೆಗೆ ಮಾತ್ರ ಏನೂ ಸಿಗಲಿಲ್ಲ. ಇದಿಯು ಅರಬ ದೇಶಕ್ಕೆ ಸ್ವೇಚ್ಛಾಚಾರಿಗಳಾದ ನವಾಬರು, ಶೇಖರು, ಜಾಗೀರುದಾರರು ಮತ್ತು ನಿರಂಕುಶ ವ್ಯಾಪಾರಿಗಳ ಮುಷ್ಟಿಯಲ್ಲಿ ಸಿಕ್ಕಿ ಬಿತ್ತು. ಇವರೆಲ್ಲರ ಕಡಿವಾಣವು ಬ್ರಿಟನ್ ಇಲ್ಲವೇ ಫ್ರಾನ್ಸ ಸರಕಾರಗಳ ಕೈಯಲ್ಲಿತ್ತು.

ಬ್ರಿಟನ್ನು ಹೊಸತಾಗಿ ಜೋರ್ಡನ್ ಮತ್ತು ಯಹೂದಿಗಳಿಗಾಗಿ ಇಸ್ರಾಯೇಲ್ ರಾಜ್ಯಗಳ ಅವಿಷ್ಕಾರ ಮಾಡಿ ಪಶ್ಚಿಮ ಏಶ್ಯದಲ್ಲಿ ಅರಬ ರಾಷ್ಟ್ರೀಯತೆಯನ್ನು ಮುರಿಯುವ ಕಾರ್ಯ ಮಾಡಿತು. ೧೯೫೬ರಲ್ಲಿ ಇಸ್ರಾಯೇಲ್ ಸೇನೆಗಳು ಅರಬ ದೇಶಗಳ ಸಂಯುಕ್ತ ಸೇನೆಯನ್ನು ಸೋಲಿಸಿ, ಮಾಡಿದ ಸೈನಿಕ ಆತಂಕದಿಂದ ಮತ್ತೆದರ ಪ್ರಭಾವದಿಂದ ಅರಬ ದೇಶವಿಂದೂ ಮುಕ್ತಿ ಹೊಂದಿಲ್ಲ.

ಏಗುಪ್ತ್‌ರಲ್ಲಿ ನಸ್ಸೇರರ ಉತ್ಥಾನವು ಅರಬ ದೇಶಗಳ ಭಾಗ್ಯೋದಯದ ಉಷಃಕಾಲವೆನ್ನಬೇಕು. ನಸ್ಸೇರರು ಸುಯೇಜ ಕಾಲುವೆಯ ರಾಷ್ಟ್ರೀಕರಣದ ವೇಳೆ ಬ್ರಿಟನ್ ಮತ್ತು ಫ್ರಾನ್ಸ್‌ಗಳಿಗೆ ತಕ್ಕ ಉತ್ತರವನ್ನು ಕೊಟ್ಟರು. ಅಮೆರಿಕೆಯ ಒತ್ತಡ ಮತ್ತು ರಶ್ಯದ ಬೆದರಿಕೆಗಳಿಂದಾಗಿಯೇ ಬ್ರಿಟನ್ ಮತ್ತು ಫ್ರಾನ್ಸಗಳು ಮುಂದಿಟ್ಟ ಹೆಜ್ಜೆಯನ್ನು ಹಿಂದಿಟ್ಟವು ನಿಜ; ಆದರೆ, ಅದರಿಂದ ಅರಬ ದೇಶಗಳಲ್ಲಿ ನಸ್ಸೇರ ಪ್ರಭಾವವು ಮಾತ್ರ ಅಚ್ಚಳಿಯದಂತೆ ಬಿತ್ತು. ಅವರು ಮಾಡಿದ ಕಾಲುವೆಯ ಸಾನ್ನಿಧ್ಯಸ್ಥೆಯೂದ ಅರಬ ಜಗತ್ತಿನ ಧಾನ್ಯ ವಿಧಾತ ಸ್ಥಾನಕ್ಕೆ ನಸ್ಸೇರರನ್ನು ಏರಿಸಿತು.

ನಸ್ಸೇರರು ತಾವು ಬದುಕಿರುವಾಗಲೇ ಅರಬ ದೇಶಗಳ ಸಂಯುಕ್ತ ರಾಜ್ಯವನ್ನು ಕಟ್ಟಲು ಬಯಸುತ್ತಾರೆ. ಏಗುಪ್ತ್ ಪ್ರಜಾರಾಜ್ಯದ ನೆಪದಲ್ಲಿ ಇವರ ಪಂಚಾಂಗವನ್ನು ಹಾಕಿದರು. 'ಸಂಯುಕ್ತ ಅರಬ ಸ್ವಜನಾಂತ್ರಜ್ಯ'ವೆಂದು ಇದೇ ಉದ್ದೇಶದಿಂದ ಏಗುಪ್ತನ್ನವರು ಪೆಸರಿಸಿದರು. ಕಾಲ ಕ್ರಮದಲ್ಲಿ ಸಿರಿಯಾ, ಇರಾಕ್, ಅಲ್ಜೀರಿಯಾ, ಯಮನ್, ಜೋರ್ಡಾನ್, ಸೌದೀ ಅರೇಬಿಯಾ, ಕುವೈತ್ ಹಾಗೂ ಲೆಬನಾನಗಳು ಈ ರಾಜ್ಯದಲ್ಲಿ ಸೇರಿಕೊಳ್ಳುವವೆಂಬ ಆಶಯವಿದೆ. ಮೊರಕ್ಕೊ, ಲಿಬಿಯಾ, ಭ್ಯುಸೀಶಿಯಾ, ಮೂರಿಟಾನಿಯಾ (ಆಫ್ರಿಕಾ ಖಂಡ) ಸೂಡಾನ್, ಏಡನ್ ಮತ್ತು ಬಹರೀನ್‌ಗಳು ಕೂಡ ಅರಬ ಜಗತ್ತಿನ ಅಂಗಗಳು ಏಕೀಕೃತ ಅರಬರಾಜ್ಯದ ಸ್ವಪ್ನವು ನನಸಾಗಲಿ ಜೋಕಾದರೆ, ಈ ಎಲ್ಲಾ ರಾಜ್ಯಗಳು ಒಂದಾಗಬೇಕು.

ಅರಬ ರಾಜ್ಯಗಳ ಏಕೀಕರಣದ ಕಲ್ಪನೆಯನ್ನು ಎಲ್ಲರೂ ಸ್ವೀಕರಿಸುತ್ತಾರೆ; ಆದರೆ, ಅದನ್ನು ಕಾರ್ಯಗತಮಾಡುವ ವಿಧಾನದಲ್ಲಿ ಮಾತ್ರ ಮತಭೇದವಿದೆ. ನಸ್ಸೇರರ ನೇತೃತ್ವವು ಎಲ್ಲರಿಗೂ ಒಪ್ಪಿಗೆಯಿಲ್ಲ. ಸಿರಿಯಾ ಮತ್ತು ಇರಾಕಗಳು ನೈಧಾನಿಕ ರೂಪವಾಗಿ ಏಗುಪ್ತ್‌ದೊಡನೆ ಸಮ್ಮಿಲಿತವಾಗಲು ಉತ್ಸುಕತೆಯನ್ನು ತೋರಿಸಿವೆ. ಆದರೂ, ಈ ದೇಶಗಳಲ್ಲಿ ಇತ್ತೀಚೆಗೆ ತಲೆದೋರಿರುವ ಸರಕಾರಗಳು ನಸ್ಸೇರರ ಮತ್ತು ವಿರೋಧಿ ಸರಕಾರಗಳು ರೂಪುಗೊಳ್ಳುತ್ತಿವೆ; ಬಿದ್ದು ಹೋಗುತ್ತಿವೆ.

ನಸ್ಸೇರರು ಈ ದೇಶಗಳ ಸ್ಪಗತಶೀಲ ತತ್ವಗಳನ್ನು ತನ್ನಲ್ಲಿ ತೆಗೆದುಕೊಂಡಿದ್ದಾರೆ. ಆದರೆ, ಅದರ್ಶವಾದದಿಂದಲೇ ಸಮಸ್ಯೆ ಪರಿಹಾರವಾಗುವುದಿಲ್ಲ. ಸಿರಿಯಾದಲ್ಲಿನ ಬಾಥ್ ಪಕ್ಷವು ನಸ್ಸೇರರಿಗಿಂತಲೂ ಪ್ರಗತಿಶೀಲವಾಗಿದೆ. ಇರಾಕದಲ್ಲಿಯೂ ಈ ಪಕ್ಷದ ಪ್ರಭಾವವಿದೆ. ಕುವೈತ್ ಮತ್ತು ಸೌದಿ ಅರೇಬಿಯಾಗಳ ಉಗ್ರ ಪ್ರಗತಿದಳವು ಕೂಡ ಬಾಥ್ ಸಮಾಜವಾದದ ಕಡೆಗೆ ವಾಲಿಕೊಂಡಿದೆ. ಈ ದಳದಲ್ಲಿ ಮಧ್ಯಮ ವರ್ಗದ ಬುದ್ಧಿಜೀವಿಗಳು ಮತ್ತು ಶ್ರಮಿಕ ನೇತೃಗಳು ಬಹುಮತದಲ್ಲಿದ್ದಾರೆ.

ಈ ಆಂತರಿಕ ಮತಭೇದಗಳಿಂದಾಗಿ ಅರಬ ರಾಜ್ಯಗಳ ಬಾಸಿಸುವಿಯು ವೃಥಾ ವಾಗಿಲ್ಲ. ಸಿರಿಯಾ-ಪೊಂದರಲ್ಲಿಯೇ ಕಳೆದ ಹದಿನಾಲ್ಕು ವರ್ಷಗಳಲ್ಲಿ ಎಂಟು ರಾಜ್ಯ ವಿಪ್ಲವಗಳಾದುತ್ತ. ಗಡಿಯೂರವ ಪೆಂಡುಲಂದಂತೆ ಈ ದೇಶಗಳ ಒಲವು ಕೆಲವೊಮ್ಮೆ ಪಾಶ್ಚಾತ್ಯತತ್ವ, ಮತ್ತೊಮ್ಮೆ ರಶ್ಯದತ್ತ ವಾಲಿಕೊಂಡಿರುತ್ತದೆ ಹಾಗಾಗಿ, ನಿಜವಾದ ರಾಷ್ಟ್ರೀಯವಾದಿ ಅರಬರು ಈ ಎರಡೂ ಕೂಟಗಳಿಂದ ದೂರವಿದ್ದು, ಸ್ವತಂತ್ರ ರಾಷ್ಟ್ರೀಯ ಪೂರ್ಣವನ್ನು ನಿರ್ಧರಿಸುವ ಕಾರಿತು ಅಸಕ್ತಿ ವಹಿಸುತ್ತಾರೆ.

೧೯೫೯ರಲ್ಲಿ ಸಿರಿಯಾದ ಸಮಾಜವಾದಿ ಬಾಥ್ ಪಕ್ಷವು ನಸ್ಸೇರರೊಡನೆ ಸೇರಿಕೊಳ್ಳದಿರುತ್ತಿದ್ದರೆ, ದೇಶದ ಕಡಿವಾಣವು ಕಮ್ಯುನಿಸ್ಟರ ಕೈಗಳಿಗೆ ಹೋಗುತ್ತಿತ್ತು. ಸಾಮ್ಯವಾದಿಗಳ ಕೈಗಳಲ್ಲಿ ಸಿಕ್ಕಿ ಬೀಳುವುದಕ್ಕಿಂತ ನಸ್ಸೇರರ ಸಮಾಜವಾದೀ ಏಕತಂತ್ರದ ಆಶ್ರಯ ಪಡೆಯುವುದು ಚಿತವೆಂದು ಸಿರಿಯಾ ನಿರ್ಧರಿಸಿತು. ಆದರೆ ೧೯೬೧ರಲ್ಲಿ ಅದು ಮರಳಿ ಏಗುಪ್ತ್‌ದಿಂದ ಬೇರೆಯಾಯಿತು.

ಇರಾಕದಲ್ಲಿಯೂ ಬಾಥ್ ಪಕ್ಷದ ಪ್ರಭಾವವಿದೆ. ಸಿರಿಯಾ ಮತ್ತು ಇರಾಕಗಳ ಬಾಥ್ ಪಕ್ಷವು ಒಂದೇ ಮರದ ಎರಡು ಶಾಖೆಗಳು. ಇರಾಕದಲ್ಲಿ ಜನರಲ್ ಕಾಸಿಮನು ತಾನಾಶಾಹಿಯಾದಾಗ, ೧೯೬೨ರಲ್ಲಿ ಬಾಥ್ ಪಕ್ಷವು ವಿದ್ರೋಹವೆಸಗಿತು. ಈ ಪಕ್ಷದನನೊಬ್ಬನು ಕಾಸಿಮರ ಕೊಲೆಸೈಯುವ ಪ್ರಯತ್ನವನ್ನೂ ಮಾಡಿದ್ದನು; ಆದರೆ, ವಿಫಲನಾದನು. ಕೊನೆಗೆ ನಸ್ಸೇರರ ನೆರವಿನಿಂದ ಕ್ರಾಂತಿಕಾರಿಗಳು ಕಾಸಿಮರ ಸಿಂಹಾಸನವನ್ನು ಪಿಡುಗಿಸಿದರು. ಕಾಸಿಮ ಮತ್ತವರ ಸುಮಾರು ೧೦೦ ಸಮರ್ಥಕರು ಮೃತ್ಯುವನ್ನಪ್ಪಬೇಕಾಯ್ತು. ಆದರೆ, ಆ ಮೇಲೆ ಬಾಥ್ ಪಕ್ಷವು ಸೇನೆಯಲ್ಲಿದ್ದ ನಸ್ಸೇರ ಪರರನ್ನು ಆಯ್ದು ದೂರ ಮಾಡಿತು. ಪ್ರಶಾಸನ ವಿಭಾಗದಲ್ಲೂ ನಸ್ಸೇರ ಪರರಿಗೆ ಅರ್ಧ ಚಿಂದ್ರುವೇಗತಿಯಾಯ್ತು.

ನಿಜವಾಗಿ ಎಲ್ಲಾ ಅರಬ ರಾಜಕಾರಣ ಪುರುಷರು ಐಕ್ಯವನ್ನು ಬಯಸುತ್ತಾರೆ. ಆದರೆ, ಶಂತಮ್ಯ ಶತಗಳನ್ನು ಹೇರಲೂ ತಿಚ್ಛಿಸುತ್ತಾರೆ ಜೋರ್ಡನಿನ ಅರಬ ಹುಸೇನರೂ ಅರಬ ಸುಳಿದಲ್ಲಿ ಸೇರಲು ಉತ್ಸುಕರಿದ್ದಾರೆ; ಆದರೆ, ತಮ್ಮ ರಾಜ್ಯವನ್ನವರೂ ಬಿಟ್ಟುಕೊಡಲು ಸಿದ್ಧರಿಲ್ಲ.

ನಸ್ಸೇರರು ಅರಬ ರಾಷ್ಟ್ರಗಳ ಸಂಯುಕ್ತ ಸಂಘ ಕಟ್ಟುವ ಗುರಿಯನ್ನು ಇಟ್ಟುಕೊಂಡಿದ್ದಾರೆ. ತಮ್ಮ ಜೀವನ ಕಾಲದಲ್ಲಿ ಈ ಸ್ವಪ್ನವು ಸಾಕಾರವಾಗುವುದೆಂದವರು ವಿಶ್ವಸಿಸುವುದಿಲ್ಲ. ಒಬ್ಬ ಅಮೆರಿಕೆ ಪತ್ರಿಕಾ ಪ್ರತಿನಿಧಿಯೊಡನೆ ಅವರು ಹೇಳಿದ್ದರು....."ವಿದೇಶೀಯ ಆಕ್ರಮಣಕಾರೀ ಅರಬ ರಾಷ್ಟ್ರಗಳ ಏಕೀಕರಣವನ್ನು ಭಂಗಿಸುತ್ತಾರೆ. ವಿದೇಶೀ ಪ್ರಭಾವವನ್ನು ಮುಕ್ತಗೊಳಿಸಿದರೆ, ಆಗ ಕೂಡಲೇ ಏಕೀಕರಣವು ಸಾಧ್ಯವಾಗುತ್ತದೆ. ಅಮೆರಿಕೆಯ ಸಂಯುಕ್ತ ಸ್ಥಾನಗಳು ತೂಪುಗೊಂಡಿರುವ ಮೂದರಿಯಲ್ಲೇ ಅರಬ ಸಂಯುಕ್ತ ರಾಷ್ಟ್ರಗಳೂ ನಿರ್ಮಾಣಗೊಳ್ಳುವುದು" ನಾವು ಸಂಘವನ್ನು ಒಂದೇ ಯೂನಿಯನ್ ಮಾಡುವ ಪ್ರಯತ್ನದಲ್ಲಿ ತಪ್ಪು ಮಾಡಿದೆವು; ಅದರಿಂದಲೇ ನಾವು ವಿಫಲರಾಗಿದ್ದೇವೆ. ಈ ಮರವಿನಿಂದ ಪಾಠ ಕಲಿಯಬೇಕು. ಪೂರ್ಣ ಏಕತೆಯು ಅವ್ಯಾವಹಾರಿಕ; ನಾವು ಈ ದೇಶಗಳ ಪ್ರತಿಕ್ರಿಯಾವಾದಿ

(ಬಂಡೇ ಪುಟ ನೋಡಿ)

ಮತ್ತೆ 70 ವಿದ್ಯಾರ್ಥಿಗಳಿಗೆ
ಸಾಲರೂಪದ ವಿದ್ಯಾರ್ಥಿ ವೇತನ ನೀಡಿಕೆ

1963ರಲ್ಲಿ ಕೆನರಾ ಬ್ಯಾಂಕ್ ದೇಶದ ನಾನಾ ಭಾಗಗಳಲ್ಲಿ ವೈದ್ಯಕೀಯ, ಇಂಜಿನೀಯರಿಂಗ್ ಮತ್ತು ಟೆಕ್ನಾಲಜಿ ಕಲಿಯುವ 70 ವಿದ್ಯಾರ್ಥಿಗಳಿಗೆ ಸಾಲರೂಪದ ವಿದ್ಯಾರ್ಥಿ ವೇತನಗಳನ್ನು ನೀಡಿದೆ.

ಇದುವರೆಗೆ ಈ ರೀತಿ ವಿದ್ಯಾರ್ಥಿ ನೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ 298 ಮತ್ತು ಒಟ್ಟು ಮಂಜೂರಾದ ಹಣ ರೂ. 3,20,000

ಈ ವಿದ್ಯಾರ್ಥಿಗಳನ್ನು ಕೆನರಾ ಬ್ಯಾಂಕ್ ಜೂಬಿಲಿ ಎಜುಕೇಷನ್ ಫಂಡ್‌ನವರು ಆರಿಸಿಸಮಿತಿಯಾಗಿದೆ.

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1906

ರಿಜಿಸ್ಟರ್ಡ್ ಆಫೀಸು: ಮಂಗಳೂರು ಆಡಳಿತ ಕಚೇರಿ: ಬೆಂಗಳೂರು

— ಜನತೆಯ ಸೇವೆಯಲ್ಲಿ —

ವಂಚನೆಯ ಮೈಲುಗಲ್ಲು

ಚೈನಿ-ಝುಕ್ ಜಟಾಪಟಿ

ನಿಶ್ಚಯೇಂನ್ಸ್ ಕಾಂಪಿಸ್ಸಿಯ ಭಾರತದ ನೇಲೆ ವಿಸ್ತಾರವಾದಿ ಕಮ್ಯೂನಿಸ್ಟ್ ಚೈನಾ ಕಾಲು ಕೆದರಿ ಕಾಳಗಕ್ಕೆ ಕರೆಯುತ್ತಿದೆ. ಸುನಃ ಅವಮಾನಕರ ಸೋಲನ್ನು ಪ್ರಮಾಣವಚನ ಸ್ವೀಕಾರ ಸಮಾರಂಭ ಸಿದ್ಧವಾಗುತ್ತಿದೆ. ತನ್ನ ಸಂವಿಧಾನವನ್ನು ಅರ್ಧದಲ್ಲೇ ನಿಲ್ಲಿಸಿ, ಬೆಂಗಳೂರಿನಿಂದಲೇ ರಕ್ಷಣಾ ಮಂತ್ರಿ ದೆಹಲಿಗೆ ಧಾವಿಸಿದರು. ಅಮೇರಿಕದಲ್ಲಿ ಪ್ರಯೋಗಕ್ಕೆಬ್ಬಿಸಿದ್ದ ಪಂಡನಾಯಕ ಜವಾಹರ ಧಿಯನ್ನೂ ಅರ್ಧದಲ್ಲೇ ನಿಲ್ಲಿಸಿ ಅಗಮಿಸಿದರು. ಇದರಿಂದ ಪರಿಸ್ಥಿತಿಯು ಅವಿವೇಕ ಸಾಮಾನ್ಯ ಪ್ರಜೆಗೂ ಅರಿವಾಯಿತು.

ಕಳೆದ ಬಾರಿಯಂತೆ ಚೈನಿ ಕಮ್ಯೂನಿಸ್ಟರು ಮಾತ್ರ ಆಕ್ರಮಣ ನಡೆಸಿರುವುದಲ್ಲ —ಈ ಬಾರಿ ಪಾಕಿಸ್ತಾನಿಗಳು ಕೂಡಾ ಆಕ್ರಮಣ ನಡೆಸಲು ಸಿದ್ಧರಾಗಿದ್ದಾರೆ. ಇದನ್ನು ಆಫ್ರಿಯ ಪರ-ರಾಷ್ಟ್ರ ಸಂಸರ್ಕ ಸಚಿವ ಭುಟ್ಟೋ ಮಾತ್ರ ಹೇಳಿರುವದಲ್ಲದೆ ಇತರ ಸೇನಾ ಅಧಿಕಾರಿಗಳು ಕೂಡಾ ಹೇಳುವಂತಾಗಿ ಬ್ರಿಟನಿನ ಪ್ರಜಾಪ್ರತಿನಿಧಿ ಸಭಾ ಸದಸ್ಯನು (ಯಂ. ಪಿ.) ಪತ್ರಿಕೆಗಳಿಗೆ ತಿಳಿಸಿರುವನು.

ಹಿಂದೆ ಗಗನ-ಭೌತಶಾಸ್ತ್ರಕ್ಕೆ ಅಡ್ಡಿ ಬಂದ ಕಮ್ಯೂನಿಸ್ಟರು ಇಷ್ಟೇಗ ಅಮೇರಿಕದ ಬಲಬಿಟ್ಟಕ್ತ ಅಕಾಶವಾಣಿ ಸಿರ್ಮಾಣಕ್ಕೂ ಅಡ್ಡಿ ಬಂದಿದ್ದು, ಅವನ್ನ ಆರ್ಥದಲ್ಲೇ ಕೈಬಿಡ ಬೇಕಾಗಿರುತ್ತದೆ. ಈಗ ಅಲ್ಲಿನ ಅಮೇರಿಕದಿಂದ ಅಸ್ತ್ರಬಲವನ್ನು ಪಡೆದುಕೊಳ್ಳ ಕೂಡದೆಂದು ಅವರೆ. ಹೇಳುತ್ತ ಬಂದ್ದು ಶಸ್ತ್ರ ಸಜ್ಜಿಕರಿಸಲು ಒಡ್ಡಿ ಬಂದಿರುತ್ತಾರೆ ಎನರ ವಾದಕ್ಕೆ ವಿನೋ ಬಾರವರಿಂದಲೂ ಪ್ರಕಂನೆ ದೊರಕಿರುತ್ತದೆ. ಅವರೂ ಚೈನಿಯರನ್ನು ಜದಂಸಲು ಶಸ್ತ್ರಾಸ್ತ್ರಗಳನ್ನು-ಪಯೋಗಿಸ ಕೂಡದೆಂದೂ, ಬದಲಿಗೆ ಕಾಲಿಗಲ್ಲಿನ ಹುಡುಗರನ್ನು ಆಫ್ಘಿಗೆ ಕಳಿಹಿಸಿ ಚೈನಿಯರಿಗೆ ಛೀಮಾರಿ ಹಾಕಿಸಬೇಕೆಂದು ಸ್ಪಷ್ಟವಾಗಿ ಸೂಚನೆ ಇತ್ತಿರುವರು.

ಭಾರೀ ಪ್ರಮಾಣದಲ್ಲಿ ವಲಸೆ ಬರುತ್ತಿರುವ ಪಾಕಿಸ್ತಾನಿಗಳಲ್ಲಿ ಸ್ವಲ್ಪ ಮುಂದಿಯನ್ನು ಹಿಂದಕ್ಕೆ ಕಳುಹಿಸಿದ ಮಾತ್ರದಿಂದಲೇ ಇಷ್ಟಿಯ ಮುಸಲ್ಮಾನರು ಉರಿದು ಬಿದ್ದಿದ್ದಾರೆ. ಅಲ್ಲಲ್ಲಿ ಅವರು ಸಭೆ ಸೇರಿಸಿ ಸರಕಾರದ ಕ್ರಮವನ್ನು ರೀಕಿಸಿರುವರು. ಅಂದರೆ ಅಯೂಬರ ರಾಗಕ್ಕೆ ತಾಳ ಹಾಕಿರುವರು. ಅನ್ಯಾಯವಾಗಿ ಭಾರತದಿಂದ ಮುಸಲ್ಮಾನರನ್ನು ಹೊಡೆದೋಡಿಸಲಾಗುತ್ತಿದೆಯೆಂದು ಅಯೂಬ ಆರೋಪ ಹೊರಿಸುವದಕ್ಕೆ ಇಷ್ಟಿಯ ಮಹಮ್ಮದೀಯರ ಮೂತುಗಳು ಸಾಕ್ಷ್ಯಗಳಾಗುವದು ವಿಚಿತ್ರವಲ್ಲ. ಅಂತಹ ಪಾಪಕಾರ್ಯದಲ್ಲಿ ಅವರು ಭಾಗಿಗಳಾಗಿರುವರು.

ಕಾಶ್ಮೀರ, ಬಂಗಾಲ, ಅಸ್ಸಾಂ...ಕನಸು ಕಾಣುತ್ತಿರುವ ಅಯೂಬ ಚೈನೀಯರೊಂದಿಗೆ ಚಕ್ಕಂದಕ್ಕೆ ಹೊರಟಿದ್ದಾರೆ. ಅಲ್ಲಿ ಮುಸಲ್ಮಾನರು ನೂರ ರೀತಿ ಉಸಿರು ಹಿಡಿದುಕೊಂಡಿದ್ದಾರೆಂಬುದನ್ನು ನೋಡಿರುವೆವು. ಸ್ವತಃ ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೇನೇ ಚೈನಾ ಹೀಗೆ ನಡೆದುಕೊಳ್ಳುತ್ತಿದೆಯೆಂಬುದನ್ನು 'ಹಿಂದೂ'ನಿನಲ್ಲಿ ಪ್ರಕಟವಾಗಿರುವ ಕೂಲಿನಾರವರ ಲೇಖನದಲ್ಲಿ ಕಾಣಬಹುದು.

ಹೊರ ಪ್ರಪಂಚಕ್ಕೆ ಪಸರಿಸಿರುವ ಸುದ್ದಿಯ ಪ್ರಕಾರ ಕಮ್ಯೂನಿಸ್ಟ್ ಚೈನಿ ಆಡಳಿತ ಯಂತ್ರವು ಸುಮಾರು ೧೬೦೦ ಅಬಾಲ-ವೃದ್ಧ, ಸ್ತ್ರೀ-ಪುರುಷ ಝುಕ್ ಪ್ರಜೆಗಳನ್ನು ತಡೆದು ನಿಲ್ಲಿಸಿರುತ್ತದೆ. ಚೈನಿ ಕಮ್ಯೂನಿಸ್ಟರಿಗೂ ಇತರ ನಾಡುಗಳ ಕಮ್ಯೂನಿಸ್ಟರಿಗೂ ಇರುವ ಸಂಬಂಧ ದಿನಗಳೆದಂತೆ ಕಹಿಯಾಗುತ್ತಿನೆಯೆನ್ನುವ ಸಮಾಚಾರವೂ ಈಗ ಎಲ್ಲೆಡೆಯೂ ಹಬ್ಬಿರುತ್ತದೆ.

೧೬೦೦ ಝೆ.ಕ್ ಜನರನ್ನು ತಡೆದು ನಿಲ್ಲಿಸಿರುವ ಸಂಗತಿ ಇದೀಗ ಬೆಳಕಿಗೆ ಬಂದಿರುತ್ತದೆ. ಆದರಲ್ಲಿ ಯಂತ್ರ ಶಾಸ್ತ್ರ ನಿಪುಣರೂ, ಅವರ ಕುಟುಂಬಗಳೂ ಸೇರಿಕೊಂಡಿದ್ದಾರೆ. ಪ್ರೇಗಿಗೆ ಪೆಕಿಂಗಿನಿಂದ ಆ ವಿಷಯದಲ್ಲಿ ಬಂದಿರುವ ಎಂಟು ಸ್ಪಷ್ಟೀಕರಣ ಟಪ್ಪಣಿಗಳು ಅದನ್ನು ಸ್ಪಷ್ಟಪಡಿಸಿವೆ. ಇದು ಇತ್ತೀಚೆಗೆ ಜನ್ಯ-ರಾಷ್ಟ್ರ ಸಮೂಹಾರ ಸಮಿತಿಗೆ ಗೊತ್ತಾದದ್ದು. ಯಾವಾಗಲೂ ಒಂದು ಕಮ್ಯೂನಿಸ್ಟ್ ರಾಷ್ಟ್ರ ದೊಡನೆ ಇನ್ನೊಂದು ಕಮ್ಯೂನಿಸ್ಟ್ ರಾಷ್ಟ್ರ ನಡೆಸಿದ ಪತ್ರ-ವ್ಯವಹಾರ ಸಮೂಹಾರ ಹೊರ ಪ್ರಪಂಚಕ್ಕೆ ಗೊತ್ತಾಗುವದೆಂಬುದಿಲ್ಲ.

ಹಾಗಾರವಾಗಿ ಇದು ಗೊತ್ತಾದದ್ದಾದರೂ ಹೇಗೆ? ಅದರ ವಿವರಣೆ ಈ ರೀತಿ ಇದೆ:—

ಈ ಭಯಾನಕ ಉಪದ್ರವದ ಚಿಹ್ನೆಗಳು ೧೯೬೨ ನವಂಬರ ಹದಿನೇಳರಂದು ಮೊತ್ತನೊದಲ ಬಾರಿಗೆ ಪ್ರಕಟವಾಯಿತು. ಅಂದು ಕಮ್ಯೂನಿಸ್ಟ್ ಚೈನಾವು ಇದ್ದಕ್ಕಿದಂತೆ ಎಚ್ಚರಿಕೆ ಕೊಡದೆನೇ ಝುಕಸ್ಲೊವೆಕಿಯಾ ಸರಕಾರಕ್ಕೆ ವಿರೋಧವನ್ನು ವ್ಯಕ್ತಪಡಿಸಿತು. ಇದು ನಡೆದದ್ದು ವ್ಯಾಪಾರ ವಿಷಯದ ಮೇಲೆ. ೧೯೬೨ ಜುಲೈಯಲ್ಲಿ ನಡೆದಿರುವ ವಾಣಿಜ್ಯ ಸಂಧಾನದಂತೆ ವ್ಯಾಪಾರವು ಆ ರಾಷ್ಟ್ರಗಳ ನಡುವೆ ನಡೆದೇ ತೀರಬೇಕೆಂದು ಕಮ್ಯೂನಿಸ್ಟ್ ಚೈನಾವು ಕಡು ಪಟ ಹಿಡಿಯಿತು. ಅದರ ಪ್ರಕಾರ ಸಂಧಾನಕ್ಕೆ ೧೯೬೨ ನವಂಬರಿನ ನಂತರವೂ ಜೀವನವಿತ್ತು. ಅದರಂತೆ ವ್ಯಾಪಾರ ನಡೆದೇ ತೀರಬೇಕೆಂದು ಅದು ಸಟ್ಟು ಹಿಡಿಯಿತು, ಅಧಿಕಾರ ದರ್ಪದಿಂದ ಕೇಳಿತು. ಝುಕರ ಸಾಮಾಗ್ರಿ ಬಟವಾಡೆಯ ವಿರಾಮದಿಂದ ಕಮ್ಯೂನಿಸ್ಟ್ ಚೈನೀಯರ ಕೃಷಿಗೆ ಭಾರೀ ವೆ ಟ್ಟಾಗಿದೆಯೆಂದು ತನ್ನ ಪತ್ರದಲ್ಲಿ ಚೈನಾವು ಝುಕಸ್ಲೊವೆಕಿಯಾಕ್ಕೆ ತಿಳಿಸಿತು. ಹತ್ತು ದಿನಗಳ ನಂತರ ಝುಕಸ್ಲೊವೆಕಿಯಾದಿಂದ ಉತ್ತರ ಬಂತು. ಅವರು ಕ್ಷಮೆಯೇನೋ ಕೋರಿದ್ದರು, ಆದರೆ ಅದು ಕೇವಲ ವ್ಯಾಪಾರದ ಕ್ಷಮೆಯಾಗಿತ್ತು. ವ್ಯಾಪಾರ ವಹಿವಾಟಿಗೆ ವಿರಾಮ ಕೊಡುವ ಇಚ್ಛೆತಮಗಿನಿತೂ ಇಲ್ಲವೆಂದೂ, ಕಚ್ಚಾ ಸಾಮಾಗ್ರಿಗಳು ಹೊರಡಡಿರುವುದರಿಂದ ತಾತ್ಕಾಲಿಕವಾಗಿ ವ್ಯಾಪಾರಕ್ಕೆ ಅಲ್ಪವಿರಾಮ ಕೊಡಲಾಗಿದೆಯೆಂದೂ, ಬೇಸರ ಪೂರ್ಣ ಸ್ವರದಿಂದ ಉತ್ತರವನ್ನಿತ್ತಿತು. ಝುಕಸ್ಲೊವೆಕಿಯಾ ಬಹಳ ಮುಖ್ಯ ವಿಷಯವೆಂದರೆ ಝುಕಸ್ಲೊವೆಕಿಯಾಕ್ಕೆ ಕಚ್ಚಾ ವಾಲು ರಹ್ಯಾದಿಂದ ಬರಬೇಕು. ಆ ರೀತಿ ಬೆರಳು ತೋರಿಸಿ ಬಿಟ್ಟು ಕಮ್ಯುನಿಸ್ಟ್ ಚೈನಿಗಳ ಕ್ರೂರ ದೃಷ್ಟಿಯಿಂದ ಪಾರಾಗಲು ಆಡಿದ ಆಟವನೆಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿರುವರು. ಕಚ್ಚಾ ವಾಲುಗಳು ದೊರಕಲಾರಂಭವಾದೊಡನೆಯೇ ವ್ಯಾಪಾರ ಪುನರಾರಂಭವಾಗುತ್ತದೆಂದು ಝುಕಸ್ಲೊವೆಕಿಯಾ ಚೈನೀಯರಿಗೆ ತಿಳಿಸಿರುತ್ತದೆ.

ಅದಾಗ್ಯೂ, ದಶಂಬರ ಐದನೇ ದಿನಾಂಕದಂದು ಅವರು ಬಿನಿ ಬಿನಿ ಹಾಗೂ ಕಾರವಾದ ಕಾಗದವನ್ನು ಚೈನಿ ಕಮ್ಯೂನಿಸ್ಟರಿಗೆ ಕಳುಹಿಸಿದರು. ಅದರಲ್ಲಿ ೧,೭೦೦ ಝುಕ ಪ್ರಜೆಗಳಿಗೆ ಹಾಕಿರುವ ಬಂಧನದ ಕುರಿತು ವಿರುದ್ಧ ಸ್ವರ ಎತ್ತಲಾಗಿತ್ತು. ಅಂದದು ಟಪ್ಪಣಿ ಆಕ್ರಮಣವನ್ನೇ ನಡೆಸಿತು. ಆ ಟಪ್ಪಣಿಯಿಂದಲೇ ಚೈನಾದಲ್ಲಿ ಸಾಧಾರಣ ೧,೬೦೦ ಝುಕರು ಬಂಧನದಲ್ಲಿರುವರೆಂಬುದು ಬೆಳಕಿಗೆ ಬಂದದ್ದು. ೧೯೬೨ರ ಕೊನೆಯೊಳಗೆ ಝುಕರನ್ನು ತಾಯ್ನೆಲಕ್ಕೆ ತೆರಳಲು ಚೈನಿ ಕಮ್ಯೂನಿಸ್ಟರು ಬಿಡದಿದ್ದಲ್ಲಿ ಉಗ್ರಕ್ರಮ ತೆಗೆದುಕೊಳ್ಳಲಾಗುವದೆಂದೂ ಅವರು ಎಚ್ಚರಿಕೆಯನ್ನಿತ್ತರು. ಹಾಗಿದ್ದರೂ, ಇತ್ತೀಚೆಗಿನ ಸುದ್ದಿಯ ಪ್ರಕಾರ ಅವರಿನ್ನೂ ಚೈನಿ ಬಂಧನದಲ್ಲೇ ಇದ್ದಾರೆ. ೧೯೬೨ರ ದಶಂಬರ ಏಳರಂದು ಝುಕರಿಗೆ ಕಮ್ಯೂನಿಸ್ಟ್ ಚೈನಿ ಪ್ರಧಾನಿ ಚೌ ಎನ್—ಲೈಯ ಪತ್ರದ ಪ್ರತಿಯೊಂದು ತಲಪಿತು. ಆದರಲ್ಲಿ ಚೈನಿ-ರಷ್ಯಾ ರಣಗುಲ್ಲಿನ ಮೇಲೆ ಸಮಾಧಾನ ಉಂಟುಮಾಡಲು ಕಮ್ಯೂನಿಸ್ಟ್ ರಾಷ್ಟ್ರಗಳ ಕೂಟ ಕರೆಯಲಾಗುತ್ತದೆಂದು ತಿಳಿಸಲಾಗಿತ್ತು.

೧೯೬೨ರ ದಶಂಬರ ಮಧ್ಯ ಭಾಗದಲ್ಲಿ ಝುಕ್-ಚೈನಾ ಟಪ್ಪಣಿ ವ್ಯವಹಾರದಲ್ಲಿ ಘರ್ಷಣೆ ಕಂಡುಬಂದಿತ್ತು, ಪರಿಸ್ಥಿತಿ ಹದಗೆಟ್ಟಿತು. ದಶಂಬರ ಹದಿನಾರರಂದು ಝುಕ್ ಸರಕಾರಕ್ಕೆ ಚೈನಿ ಕಮ್ಯೂನಿಸ್ಟ್ ಸರಕಾರದಿಂದ ಒಂದು ವ್ಯವಹಾರ ಟಪ್ಪಣಿ ಬಂದಿತು. ಅದರಲ್ಲಿ ಅವೇ ಆರೋಪಗಳನ್ನು ಹೊರಿಸಲಾಗಿತ್ತು. ಚೈನಾದ ಅಧಿಕೃತ ಪರಿಸ್ಥಿತಿಯು ಝುಕರ ವ್ಯವಹಾರ ವಿರಾಮದಿಂದ ವಿನಾಶವಾಗುತ್ತಿದೆಯೆಂದು ಒತ್ತಿ ಹೇಳಲಾಗಿತ್ತು. ಝುಕರು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದುದೆಂದು ಟಪ್ಪಣಿ ತೀಕಿಸಿತ್ತು. ಅದನ್ನೊಪ್ಪಲು ಝುಕರು ಸಿದ್ಧರಾಗಿರಲಿಲ್ಲ. ಮಾರ್ಯಾದೆಯುಳ್ಳವನ್ಯಾರೂ ಅದನ್ನು ನಂಬಲಾರನೆಂದು ಅವರು ತಿಳಿಸಿದರು; ಅದನ್ನೊಪ್ಪಲು ತಿರಸ್ಕರಿಸಿದರು. ಅಲ್ಲದೆ, ಅದರ ಮರುದಿನವೇ ಅವರು ಝುಕೊಸ್ಲೊವೆಕಿಯಾದಲ್ಲಿರುವ ಚೈನಿ ಸಂಪರ್ಕಾಧಿಕಾರಿಗೆ ಸ್ಪಷ್ಟವಾಗಿ ಸೂಚಿಸಿದರು-ಕೃಷಿಗೆ ಸಂಬಂಧಪಟ್ಟ ಯಂತ್ರಗಳನ್ನು ಬಿಟ್ಟು ಮತ್ತೇನನ್ನೂ ಕಮ್ಯೂನಿಸ್ಟ್ ಚೈನಾಕ್ಕೆ ಇನ್ನು ಮುಂದೆ ಕೊಡಲಾಗುವದಿಲ್ಲ; ಇತರ ವಾಣಿಜ್ಯ ಸಂಬಂಧವನ್ನು ಕಡಿದುಕೊಳ್ಳಲಾಗುತ್ತದೆ. ಅದಕ್ಕೆ ಕಾರಣವೆಂದರೆ ಕಮ್ಯೂನಿಸ್ಟ್ ಚೈನಾವು ಝುಕೊಸ್ಲೊವೆಕಿಯಾ ಸಮಾಜವಾದಿ ಗಣರಾಜ್ಯದ ಸಂಬಂಧವನ್ನು ಹಾಳುಮಾಡಿಕೊಂಡಿರುತ್ತದೆ. ಚೈನಾದ ಸಮಾಜವಾದಿ ಸರಕಾರವು ಸಮಾಜವಾದಿ ತತ್ವಕ್ಕೆ ತೀರಾ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ.

ದಶಂಬರ ಅಂತ್ಯದಲ್ಲಿ ಪ್ರೇಗಿನಲ್ಲಿರುವ ಚೈನಿ ಕಮ್ಯೂನಿಸ್ಟ್ ದೂತಸಿವಾಸವು ಒಂದು ದೊಡ್ಡ ಪ್ರತಿಭಟನಾ ಪತ್ರವನ್ನು ಝುಕ್ ಸರಕಾರಕ್ಕೆ ಸಲ್ಲಿಸಿತು. ಅದರಲ್ಲಿ ಚೈನಿ ಪ್ರಜೆಗಳನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿಲ್ಲವೆಂದು ಆರೋಪಿಸಲಾಗಿ

(ನನೇ ಪುಟ ನೋಡಿರಿ)



ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.....
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮಸಮೀಪದ ನಮ್ಮಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ತಾರ ನಿವಾರಣೆಗೆ
ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/
ಉತ್ತಮ ರೂ.9/-

P. Devee & Co. (N. J.) Calcutta—40.

ಪ್ರಚಲಿತ ಪ್ರಸಂಗ

ನೆಹರು ಸರಕಾರ ಅವಿಶ್ವಾಸಾರ್ಹವೆ?

ಸ್ವತಂತ್ರ ಭಾರತದ ಮೊತ್ತಮೊದಲ ಪ್ರಧಾನ ಮಂತ್ರಿಯಾಗಿ ಕಳೆದ ಹದಿನಾರು ವರ್ಷಗಳಿಂದಲೂ ಅದಕ್ಕೆ ಮೊದಲೂ ದೇಶಕ್ಕೆ ತನುಮನಧನಗಳನ್ನರ್ಪಿಸಿ ದುಡಿಯುತ್ತಿರುವ ಜನನಾಯಕ ಜವಾಹರಲಾಲ ನೆಹರುರವರ ಸರಕಾರದ ಮೇಲೆ ಮೊತ್ತಮೊದಲನೆಯ ಬಾರಿಗೆ ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯೊಂದು ಚರ್ಚೆಗೆ ಬಂತು. ಸುಮಾರು ಒಂಭತ್ತು ಮಿಕ್ಕಿದ ಸಂಖ್ಯೆಯಷ್ಟು ಸದಸ್ಯರ ಬೆಂಬಲವಪಡೆದು ಸ್ವತಂತ್ರ ಸದಸ್ಯ ಶ್ರೀ ಆಚಾರ್ಯ ಕೃಪಲಾನಿಯವರು ಈ ಪ್ರಸ್ತಾಪವನ್ನು ಮುಂದಿಟ್ಟಿದ್ದರು. ಕಮ್ಯುನಿಸ್ಟೇತರ ವಿರೋಧಪಕ್ಷಗಳು ಇದನ್ನು ಸಂಪೂರ್ಣ ಬೆಂಬಲಿಸಿದ್ದರು. ಕಮ್ಯುನಿಸ್ಟರು ಇದಕ್ಕೆ ಪ್ರತ್ಯಕ್ಷವಾಗಿ ಬೆಂಬಲ ನೀಡದೆ ಹೋದರೂ ಆಂತರಿಕವಾಗಿ ಅವರ ನೈತಿಕ ಬಲವೂ ಇತ್ತೆಂಬುದನ್ನು ಅವರ ಭಾಷಣಗಳಿಂದಲೇ ತಿಳಿಯಬಹುದು. ಭಾರತೀಯ ಇತಿಹಾಸದಲ್ಲಿ ಅತ್ಯಭೂತಪೂರ್ವವೆನಿಸಿದ ಈ ಗೊತ್ತುವಳಿಯ ಮೇಲೆ ಚರ್ಚೆ ನಡೆದಾಗ, ಸದಸ್ಯರ ಹಾಗೂ ಪ್ರೇಕ್ಷಕರ ಗ್ಯಾಲರಿಗಳು ಕಿಕ್ಕಿರಿದು ತುಂಬಿದ್ದುದು ಆಶ್ಚರ್ಯವೆನ್ನುವಂತಿಲ್ಲ. ಮೊದಲೇ ಊಹಿಸಿದಂತೆ ಈ ಗೊತ್ತುವಳಿಯು ಬಿದ್ದು ಹೋಯಿತು. ಆದರೆ, ಪ್ರಾರಂಭದಲ್ಲಿ ಬೆಂಬಲಿಸಿದವರಲ್ಲಿಯೇ ಕೆಲವರು ನಂತರ ನಡೆದ ಮತದಾನದ ವೇಳೆ ಎದ್ದು ಹೊರಟು ಹೋದುದು ನಮ್ಮ ವಿರೋಧಿ ಪಕ್ಷಗಳ ಇರವಿಗೆ ಕನ್ನಡಿ ಹಿಡಿಯುತ್ತಿದೆ.

ಸರಕಾರವು ದೇಶವನ್ನು ಪ್ರಗತಿಪಥದಲ್ಲಿ ಮುನ್ನಡೆಸಲು ಕೈಗೊಂಡ ಮಾರ್ಗವು ನ್ಯೂನಾತಿರೇಕಯುಕ್ತವಾಗಿದೆ; ಅದರಲ್ಲಿ ಅಡಳಿತೆಯ ನೈಜ ಸಾಮರ್ಥ್ಯವುಳಿದಿಲ್ಲ; ಲಂಚಲಂಗೂಳಿತನ, ಪಕ್ಷಪಾತಗಳು ತುಂಬಿ ಹೋಗಿವೆ; ಕಾಂಗ್ರೆಸ್ಸು ಕಳೆದ ಚುನಾವಣೆಗಳಲ್ಲಿ ಬಹುಮತ ಗಳಿಸಿದ್ದುದು ನಿಜವಾದರೂ ಅದು ಗಳಿಸಿದ ಒಟ್ಟು ಮತಗಳು ಸೇ. ೫೦ಕ್ಕೆ ಕಡಿಮೆಯಿದೆ; ಅದುದರಿಂದ ಜನತೆಯ ವಿಶ್ವಾಸಕ್ಕಿದು, ಎರವಾಗಿದೆ. ಕನ್ನಸಿರಿಪ್ತ ನೀತಿಯನ್ನು ಸಮರ್ಪಕವಾಗಿ ಅದು ಮುಂದುವರಿಸಿಕೊಂಡು ಹೋಗುವಲ್ಲಿ ತಪ್ಪಿದೆ; ಚೀನೀಯ ಆಕ್ರಮಣಕ್ಕೆ ಅದು ವಿದೇಶೀ ನೀತಿಯು ಅಸಫಲಗೊಂಡುದರ ದ್ಯೋತಕ; ಈ ಆಕ್ರಮಣಕ್ಕೆ ಕಾಂಗ್ರೆಸ್ಸೇ ಕಾರಣವಾದುದರಿಂದ ಅದಕ್ಕೆ ಅಧಿಕಾರದಲ್ಲುಳಿಯಲು ಅಧಿಕಾರವೇ ಇಲ್ಲ; ಅದು ಆಸುರಸಂಸುತ್ತಿರುವ ಆರ್ಥಿಕ ಘೋರಣಿಯೇದ ಬಡವರು ಮತ್ತಷ್ಟು ಬಡವರಾಗಿಯೂ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿಯೂ ಹೋಗುವಿದ್ದಾರೆ; ಆಹಾರದಿ ಅವಶ್ಯಕ ಪದಾರ್ಥಗಳ ಬೆಲೆಯೇರಿಕೆಯಿಂದ ಸಾಮಾನ್ಯ ನಾಗರಿಕರ ಸರ್ವನಾಶಕ್ಕೆ ಅದು ಕಾರಣವಾಗಿದೆ-ಇವೇ ಮೊದಲಾದ ಆರೋಪಗಳನ್ನು ಹೊರಿಸಿ, ನೆಹರು ಸರಕಾರದ ರಾಜೀನಾಮೆಯನ್ನು ಬಯಸಿ, ಅದರ ಸ್ಥಾನದಲ್ಲಿ ಎಲ್ಲ ಪಕ್ಷಗಳ ಬಲಾಬಲಗಳ ದಾಮಾಶಯದಂತೆ, ಸಚಿವರನ್ನು ಆಯ್ದುಕೊಂಡು ಹೊಸ ಸರಕಾರವನ್ನು ತಿಂದರೆ, ಸಮ್ಮಿಶ್ರ ಸರಕಾರವನ್ನು ರಚಿಸಬೇಕೆಂದು ಕರೆಯನ್ನು ನೀಡಿದ್ದಾರೆ, ಕೃಪಾಲಾನಿಯವರು.

ಸಮ್ಮಿಶ್ರ ಸರಕಾರದ ರಚನೆಯು ಬೇಡಿಕೆಯು ಇಂದಿನದಲ್ಲ. ಚೀನೀಯ ಆಕ್ರಮಣಕ್ಕೆ ಮೊದಲೇ ಕೆಲವರು ಇದನ್ನು ಮುಂದಿಟ್ಟಿದ್ದರು. ಆ ಆಕ್ರಮಣದ ವೇಳೆಯಲ್ಲಿ ಇದರ ಪ್ರತಿಧ್ವನಿ ಮತ್ತಷ್ಟು ಗಟ್ಟಿಯಾಯಿತು. ದೇಶದ ಸನುತ್ತ ನಾಗರಿಕರ ಒಲವು-ವಿಶ್ವಾಸಗಳನ್ನು ಪಡೆದು ಐಕ್ಯಭಾವವನ್ನು ಮೂಡಿಸಿ, ದೇಶವನ್ನು ರಣಸಿದ್ಧಗೊಳಿಸುವಲ್ಲಿ ಸಮ್ಮಿಶ್ರ ಸರಕಾರವೇ ಉಪಯುಕ್ತವೆಂದು ಕೆಲವು ಹಿರಿಯ ಧುರೀಣರೂ ಅಭಿಪ್ರಾಯಪಟ್ಟಿದ್ದರು. ಆದರೆ, ಇಂತಹ ಸಲಹೆಯು ಕಕ್ಷೀಯ ಪದ್ಧತಿಯ ಅಡಳಿತೆಯನ್ನು ಒಪ್ಪಿಕೊಂಡ ಭಾರತಕ್ಕೆ ಉಚಿತವಲ್ಲ; ಹಾಗಾದರೂ ಅಂತಹ ವಿಷಮ ಸನ್ನಿವೇಶವು ಸಂಭವಿಸದೆ ಇರುವಾಗ ಅದು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಜನತೆಯನ್ನು ಅಂಧಶ್ರದ್ಧೆಯತ್ತ ಒಯ್ಯುವ ಕಾರ್ಯದಲ್ಲಿ ಕಾಂಗ್ರೆಸ್ಸು ತೊಡಗಿದೆಯೆಂದು ಕೆಲವು ಸದಸ್ಯರ ಆರೋಪ ಆದರೆ, ಅವರೇ ಹೇಳುತ್ತಾರೆ: «ಈ ಅವಿಶ್ವಾಸದ ಗೊತ್ತುವಳಿಯು ಜನತೆ ಜಾಗ್ರತವಾಗುತ್ತಿರುವುದರ ದ್ಯೋತಕ» ಎಂದ! ಸೂರ್ವಾಪರವಿರುದ್ಧವಾದ ಇಂತಹ ಹೇಳಿಕೆಗಳು ಉದ್ವೇಗವರದಿಂದಲೇ ಹೊರಟು ಬಂದವಲ್ಲದೆ, ಬುದ್ಧಿ ಪೂರ್ವಕವಾಗಿ ಅಲ್ಲ.

ಸರಕಾರದ ವೇಲೆ ಹೇರಿದ್ದ ಎಲ್ಲ ಆರೋಪಗಳೂ ವಾಸ್ತವಿಕ ವಾಗಿವೆ. ದೇಶಾಭಿವೃದ್ಧಿಯ ಪ್ರಗತಿಮನದಲ್ಲಿ ಸರ್ವ ಸಾಧಾರಣವಾದುವು. ಒಂದು ಘನೋದ್ದೇಶವನ್ನು ಸಾಧಿಸಹೊರಡುವಾಗ, ತಪ್ಪುಗಳಾಗುವುದು ಸಹಜ. ಆದರೆ ಕಡೆತನಕ ತಪ್ಪನ್ನೇ ಸಾಧಿಸಿ ಲೇಸಿಗೆ ತಲೆಯೊಗದ ನಮ್ಮ ವಿರೋಧಿ ಪಕ್ಷಗಳು ದೋಷಪೂರಿತವಾಗಿಲ್ಲವೇ? ಒಂದು ದಿನವಾದರೂ ಸರಕಾರ ನಡೆಸುವ ಶಕ್ತಿಯನ್ನು ಪಡೆಯದ ಇವು ಸರಕಾರವನ್ನು ಟೀಕಿಸುವುದರಲ್ಲಿ ಯೇ ತೃಪ್ತಿತಾಳುತ್ತಿವೆಯಲ್ಲದೆ, ರಚನಾತ್ಮಕ ಸಲಹೆಗಳನ್ನು ನೀಡುವ ಗೊಡವೆಗೆ ಹೋಗುವುದಿಲ್ಲವೇಕೆ? ಇದರಿಂದಾಗಿಯೇ ಮುಂಬಾರ್ಜ ದೇಸಾಯಿಯವರು ಹೇಳಿದರು: «ವಿರೋಧಿ ಪಕ್ಷಗಳು ತನ್ನ ಬಲವನ್ನು ಹೆಚ್ಚಿಸಿಕೊಂಡು, ಸರಕಾರ ನಡೆಸುವ ಸಾಮರ್ಥ್ಯ ಪಡೆಯುವ ವರೆಗೆ ಕಾಂಗ್ರೆಸ್ಸು ಅಧಿಕಾರ ಬಿಟ್ಟುಕೊಡುವುದು ಸಾಧ್ಯವಿಲ್ಲ' ಎಂದು ಇದು ತಟಿ ವಿಂಗಡಿಸಿದಂತೆ ಕಂಡರೂ ಸದ್ಯಕ್ಕೆ ಉಚಿತವೇ ಆದುದು.

ಸ್ವಾತಂತ್ರ್ಯ ಪ್ರಾಪ್ತಿಯ ವೇಳೆ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿದ್ದು ಕಾಂಗ್ರೆಸ್ಸಾದುದರಿಂದ ಅದು ಅಸಿನಾರ್ಯವಾಗಿ ಅಧಿಕಾರ ಸೂತ್ರಗಳನ್ನು ಹಿಡಿಯಬೇಕಾಯಿತು; ಮುಂದೆ ಹಲವಾರು ವಿರೋಧಿ ಪಕ್ಷಗಳು ಹುಟ್ಟಿಕೊಂಡುವು; ಕೆಲವು ಸತ್ತವು. ಆದರೆ, ಕಾಂಗ್ರೆಸ್ಸು ನೊಂದಿಗೆ ಸರಿ ಜೋಡಿಯಾಗಿ ನಿಲ್ಲುವ ರಕ್ತಿ ಮಾತ್ರ ಯಾವುದಕ್ಕೂ ಎಲ್ಲಿ, ಉಳಿದವೆಲ್ಲವುಗಳಿಗೆ ಸಮಷ್ಟಿಯೂ ಗಿಯೂ ಇಲ್ಲ. ಹಾಗಿರುವಾಗ, ತನಗೆ ಬಂದ ಜವಾಬ್ದಾರಿಯಿಂದ ಕಾಂಗ್ರೆಸ್ಸು ಕೈತೊಳೆದುಕೊಳ್ಳುವುದು ಶುಲಭ ಸಾಧ್ಯವೆ? ದೇಶವನ್ನು ಅಧಃಪತನ--ಪರಾಧೀನತೆಯತ್ತ ಒಯ್ಯಲು ಬಿಡುವುದು ಉಚಿತವೆ? ಎಂತಲೇ ಅದು ಶಕ್ತಿಮೀರಿ ತನ್ನ ಕರ್ತವ್ಯ ಪಾಲನೆಗಾಗಿ ದುಡಿಯುತ್ತದೆ. ಪ್ರಾರಂಭದಲ್ಲಿ ಅಡಳಿತೆಯ ಅನುಭವದಿಂದ ತಾಂತ್ರಿಕ-ಯಾಂತ್ರಿಕ ಶಿಜ್ಞರ ಅಭಾವದಿಂದ ಮುಂದೆ ಕೆಲವೊಂದು ವ್ಯಕ್ತಿಗಳ ದುರ್ಬಲತೆ-ಅಶಕ್ತತೆಗಳಿಂದ ಕೆಲವೊಂದು ತಪ್ಪುಗಳಾಗಿವೆ; ನಡೆಯು.ವವರಲ್ಲದೆ ಕಳಿತವರು ಎಡವಿ ಬೀಳುವುದಿಲ್ಲ. ಅಧಿಕಾರವನು ಮಹಿಷಿ, ಅದನ್ನು ಕಾರ್ಯಗತಗೊಳಿಸುವವರು ಕೆಲವೆಡೆ ತಪ್ಪಿ ನಡೆವರೆ, ಅವಕ್ಕೆಲ್ಲ ಇಡಿಯ ಸರಕಾರವನ್ನೇ ಬೇಡಬೆನ್ನುವುದು ನ್ಯಾಯವಲ್ಲ ಕಾಲಿಗೊಂದು ಗಾಯವಾದರೆ, ಕಾಲನ್ನೇ ಕಡಿದೆಸೆಯುವುದು ಶುದ್ಧ ಅವಿವೇಕ. ನಮ್ಮ ವಿರೋಧಿ ಪಕ್ಷಗಳು ಈ ದಿಸೆಯಲ್ಲಿ ಆಸುಸರಿಯುವ ನೀತಿಯನ್ನು ಇದಕ್ಕಿಂತಿ ಬೇರೆಯಿಲ್ಲ. ಇವರನ್ನು ಅಧಿಕಾರ ಚಲಾಯಿಸಲು ಬಿಟ್ಟರೆ, ಇದ್ದುದನ್ನೂ ಭಾರತೀಯರು ಕಳೆದುಕೊಳ್ಳಬೇಕಾಗುತ್ತದೆ.

ಅದಕ್ಕಾಗಿ ನಮ್ಮ ವಿರೋಧಿ ಪಕ್ಷಗಳು ತಮ್ಮ ಧ್ಯೇಯವನ್ನು ಸರ್ವಾಕರವಾಗಿ ನಿರ್ಧರಿಸಿ, ಜನಾನುರಂಗವನ್ನು ಪಡೆಯುವಲ್ಲಿ ತಮ್ಮ ಶಕ್ತಿಯನ್ನು ಉಪಯೋಗಿಸದೆ, ಸರಕಾರದ ನೀತಿಯನ್ನು ತಿದ್ದುವಲ್ಲಿ ಪರಿಣಾಮಕಾರಿ ಸಲಹೆಗಳನ್ನು ನೀಡದೆ ವಿರೋಧಕ್ಕಾಗಿ ವಿರೋಧವನ್ನುಡುತ್ತಿರುವುದು ಲಾಂಛನವಾಪ್ಪದ ಒಂದು ಕಾಲದಲ್ಲಿ ನಿರ್ದಿಷ್ಟ ನೀತಿಯನ್ನು ಪ್ರಪಂಚಿಸಿ ಸೈನಿಕ ಪೆಟ್ಟಿಗೆಗಳನ್ನು ಕಡಿಮೆ ಮಾಡಬೇಕೆಂದು ವಾದಿಸಿದ ಮಹನೀಯರೇ ಸೈನಿಕ ಶಕ್ತಿಯನ್ನೇಕೆ ಹೆಚ್ಚಿಸಿಲ್ಲವೆಂದು ರೇಗಿಕೊಂಡರೆ, ಯಾರದು ತಪ್ಪು? ಚೀನೀಯರ ಆಕ್ರಮಣವನ್ನು ನೀರೀಕ್ಷಿತವಾಗಿರಲಿಲ್ಲ. ನಾವು ಚೀನೀಯರನ್ನು ಮಾನವ ರೆಂದು ನಂಬಿತ್ತಿದ್ದೆವು; ಆ ನಂಬಿಕೆಯನ್ನಿಟ್ಟುದು ಅಂದು ಸರಿಯಾಗಿಯೇ ಇತ್ತು; ಈಗದು ತಪ್ಪೆಂದು ತಿಳಿದಿದೆ; ಆ ಕೃಮಣವನ್ನೆದುರಿಸುವುದಕ್ಕೆ ಆವಶ್ಯಕ ಸೈನ್ಯಬಲವನ್ನೂ ನಾವು ಕೈಗೊಂಡಿದ್ದೇವೆ. ಇನ್ನೂ ಕೈಗೊಳ್ಳುತ್ತೇವೆ. ಯೋಜನೆಗಳನ್ನು ಕಾರ್ಯಗತಗೊಳಿಸುವಾಗಲೂ ಇದೇ ಮಾತು. ಅದ ಪುಖಾದವನ್ನು ನಾವು ತಿದ್ದಿಕೊಳ್ಳುತ್ತೇವೆ; ಮುಂದೆ ಇಂತಹ ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸುತ್ತೇವೆ. ಈ ವಿಷಯದಲ್ಲಿ ಸರಕಾರದ ನೀತಿಯು ಜವಾಬ್ದಾರಿಯಂತೆಯೇ ಅದರ ನಾಕರ ವರ್ಗಕ್ಕೆ ಸೇರಿದ ನಾಗರಿಕರಿಗೂ, ಎಲ್ಲ ಜನತೆಗೂ ಕಿಂಚಿತ್ತಾದರೂ ಮೊಣಗಾಂಕೆಯಿದೆ. ವಿರೋಧಿ ಪಕ್ಷಗಳು ಹಾಗೂ ಜನತೆಗಳು ತಮ್ಮ ಕರ್ತವ್ಯಚ್ಯುತಿಗೂ ಸರಕಾರವನ್ನೇ ಬೊಟ್ಟುಮಾಡುವುದು ಪ್ರಜಾಸ್ವಭುತ್ವಕ್ಕೆ ಕ್ಷೇಮಕರವಲ್ಲ.

ಆವಳಿತ ದೋಷಗಳಿಗೆ ಮತ್ತು ದೇಶದ ಸಂಸ್ಥಿತಿಗೆ ಕಾಂಗ್ರೆಸ್ ಸರಕಾರವೊಂದೇ ಜವಾಬ್ದಾರಿಯಲ್ಲ. ಅವನ್ನು ತೋರಿಸಿಕೊಡುವುದು, ತಿದ್ದಲು ಪ್ರಯತ್ನಿಸುವುದು ವಿರೋಧೀ ಪಕ್ಷಗಳ ಆದ್ಯಕರ್ತವ್ಯ. ಆದರೆ, ನನ್ನು ವಿರೋಧೀದಳಗಳು ತಾಮಸಂನುಲ್ಲೇ ಗೊಣಗಿಕೊಳ್ಳುತ್ತಿರುವುದರಿಂದಾಗಿ, ಕಾಂಗ್ರೆಸ್ಸೇ ಆತ್ಮಶೋಧನೆಯನ್ನು ಮಾಡಿಕೊಳ್ಳ ಬೇಕಾಗುತ್ತದೆ. ಕೆಲವೊಮ್ಮೆ ಅದು ಹಾಗೆ ಮಾಡಿಕೊಳ್ಳುತ್ತಲೂ ಇದೆ. ಕಾಂಗ್ರೆಸ್ ಪಕ್ಷವನ್ನು ಸುಸಂಘಟಿತ ಗೊಳಿಸುವುದರಿಂದಲೇ ಅದು ಸಮರ್ಥ ಅಡಳಿತೆಯನ್ನು ಜನತೆಗೆ ನೀಡಬಲ್ಲುದು; ಅದಕ್ಕಾಗಿಯೇ ಇಂದು ಹೆಚ್ಚಿನ ಮಟ್ಟಿನ ಜೀಯಿಂದ ಕಾರ್ಯನಡೆಯುತ್ತಿದೆ. ಯಾವ ಪಕ್ಷನ್ಯಕ್ಕೂ ನೇರದ ಕೃಪಲಾನಿಯ ನರು ತನ್ನೊಬ್ಬನ ನೀತಿಯನ್ನು ಸೂತ್ರರೂಪಿಸಿಕೊಂಡರೆ, ಸಾಸು; ಆದರೆ, ಕಾಂಗ್ರೆಸ್ ತನ್ನೆಲ್ಲ ಸದಸ್ಯರ ಅಭಿಪ್ರಾಯಗಳನ್ನು ಅಭ್ಯಸಿಸ ಬೇಕಾಗುವುದು.

ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷದ ಕುರಿತು ಒಂದು ಮಾತು ಹೇಳಬೇಕಾಗುತ್ತದೆ ಅವರಿಂದು ದ್ವಿವಿಧಾವೃತ್ತಿಯಲ್ಲಿ ಬಿದ್ದಿದ್ದಾರೆ. ಚೀನೀಯರ ಆಕ್ರಮಣವನ್ನು ನೈತಿಕವಾಗಿ ಬೆಂಬಲಿಸಿ ನೇಫಾ, ಅಸ್ಸಾಂಗಳಲ್ಲಿ ಶತ್ರುಗಳಿಗೆ ಪರವಾಗಿ ಕಾರ್ಯವೆಸಗಿದ ದೇಶದ್ರೋಹಿಗಳು ಅವರು ಎಂಬುದೀಗ ಎಲ್ಲರಿಗೂ ತಿಳಿದಿದೆ. ಅದರ ಮೇಲೆ ಅವರೊಂದು ವಿಚಿತ್ರವಾದವನ್ನು ಮುಂದಿಟ್ಟಿದ್ದಾರೆ ಪ್ರಧಾನಿ ನೆಹರುರವರನ್ನವರು ನಂಬುತ್ತಾರೆ; ಆದರೆ, ಅವರ ಸರಕಾರದ ಮೇಲೆ ಯಾವ ವಿಶ್ವಾಸವಿಲ್ಲ! ಸರಕಾರದ ಸಚಿವರಲ್ಲಿ ಕಣಕಣದಲ್ಲೂ ಕಮ್ಯುನಿಜಂ ವಿರೋಧಿಯಾದ ವಾರ್ಷೆ ದೇಸಾಯಿಯವರಿಗೆ ಅವರಿಗೆ ಚಳಿಜ್ವರ ಬಿದ ವುದಿಲ್ಲ ಚೀನಾವ್ ಮಾಡಿದೆಯೆಂದು ಕಡೆಗವರೂ ಒಪ್ಪುವ ಉದಾರಪ್ರತಿಭೆಯುಳ್ಳ ಕಳೆದ ಅವರು ಘಾರತವ ಆಕ್ರಮಣದಿಂದ ಬಿಡುಗಡೆಯೊಂದಲು ಸೈನಿಕ ಶಕ್ತಿಯನ್ನು ಒಳಸಿಕೊಳ್ಳಬಾರದು ಎನ್ನುತ್ತಾರೆ ಈ ಕೃಷ್ಣಿರು ದೇಶದೊಳಗೆ ಇಲ್ಲದ ಪೀಕಲಾಟವನ್ನು ಎಬ್ಬಿಸುವುದರಲ್ಲಿ ಇವರು ನಿಸ್ಸೀಮರು. ಈ ಬಗೆಯ ಇತ್ತಂಡವಾದ ಕಮ್ಯುನಿಸ್ಟ್ ರು ದೇಶದಲ್ಲಿ ನಿಷ್ಠೆಯಿಡುವುದು ಸಾಧ್ಯ

(ಉಳಿದ ಪುಟ ನೋಡಿರಿ)

ಸುಲಭದಲ್ಲಿ ಉಳಿತಾಯ.....

ಕೊರ್ಪೊರೇಶನ್ ಬ್ಯಾಂಕ್

ಜನತಾ ಡಿವೊಜಿಟ್ಸ್ ಯೋಜನೆಯು

ಜನಸಾಮಾನ್ಯರಿಂದ ಹಿಡಿದು ಎಲ್ಲ ವರ್ಗದ ಜನರಿಗೂ ಸುಲಭದಲ್ಲಿ ಉಳಿತಾಯ ಮಾಡಲು ಸಹಕರಿಸುತ್ತದೆ.

ವಿವರಗಳಿಗಾಗಿ ಇಂದೇ ವಿಚಾರಿಸಿ:

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪ನೆ	ಉಡುಪಿ ೨೯-೮-೧೯೬೩	ವಾರ ೫೦

ಆತ್ಮ ನಿವೇದನ

ಈ ಸಂಚಿಕೆಯೊಡನೆ 'ನವಯುಗ'ವು ತನ್ನ ನಲ್ವತ್ತೆರಡನೆಯ ವರ್ಷವನ್ನು ಮುಗಿಸಿ ನಲ್ವತ್ತಮೂರನೆಯ ವರ್ಷದತ್ತ ಮುಂದಡಿಯಿಡುತ್ತಿದೆ. ಪತ್ರಿಕಾ ಪ್ರಪಂಚದಲ್ಲಿ ಈ ಸುದೀರ್ಘಾವಧಿಯ ವರೆಗೂ ಮುನ್ನಡೆಯುತ್ತ ಬರುವುದು ನಿಜಕ್ಕೂ ಸಾಹಸದ ಮಾತು. ಕನ್ನಡದ ಪತ್ರಿಕಾ ಪ್ರಪಂಚದಲ್ಲಿ ಕರಾವಳಿಯ ತೀರದಿಂದ ಪ್ರಕಟವಾಗುವ ಈ ವಾರಪತ್ರಿಕೆಯು ಬೆಳೆದು ಬರುತ್ತಿರುವುದು ಅದರ ಹಿತೈಷಿಗಳ ಮನಃಪೂರ್ವಕವಾದ ಬೆಂಬಲ ಮತ್ತು ಸಹಕಾರಗಳ ಬಲದಿಂದ. ಪತ್ರಿಕೆಗಳೇ ಇಲ್ಲದ, ಅವುಗಳ ಪರಿಚಯವನ್ನೇ ತಿಳಿಯದ ಆ ಕಾಲದಿಂದ, ಚಿಕ್ಕ ಪತ್ರಿಕೆಗಳು ಬದುಕಿ ಬಾಳಿಯುಳಿಯುವುದೇ ದುಸ್ತರವೆನಿಸಿದ ಈ ಕಾಲದ ವರೆಗೂ 'ನವಯುಗ'ವು ಕ್ರಮೋಗತವಾಗಿ ವಾಚಕರ ಮನೋಭಿಕಾಸಕ್ಕೆ ತನ್ನ ಅಲ್ಪ ಸೇವೆಯನ್ನು ಸಲ್ಲಿಸುತ್ತಿರುವುದು ಈ ಹಿತೈಷಿಗಳ ಹೃದಯ ಪೂರ್ವಕ ಆಸರೆಯಿಂದಾಗಿಯೆಂದು ವರ್ಷದ ಸಂಧ್ಯಾಕಾಲದಲ್ಲಿ, ಹೊಸ ವರ್ಷದ ಆರುಣೋದಯದ ಸಡಗರದಲ್ಲಿ ಇವರೆಲ್ಲರನ್ನೂ ತುಂಬು ಹೃದಯದಿಂದ ಅಭಿನಂದಿಸುವುದು ನಮ್ಮ ಪರಮ ಕರ್ತವ್ಯ. ಇವರೆಲ್ಲರ ಸಹಕಾರವು ವಿ.ಎಂದೆಯೂ ನಮಗೆ ಬೇಕು—ಇದು ನಮ್ಮ ಹೃದಯದ ಆಂತರ್ಯ.

'ನವಯುಗ'ವು ದೇಶದ ಜನತೆಯಲ್ಲಿ ರಾಷ್ಟ್ರೀಯತೆಯ ಭಾವನೆಯು ಜಾಗ್ರತವಾಗುತ್ತಿರುವಾಗ, ಕನ್ನಡಿಗರಲ್ಲೂ ಜಾಗ್ರತಿಯ ದೀಪ ಹಚ್ಚುವ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿತು. ಭಾರತೀಯ ಜನತೆಯು ಸ್ವಾತಂತ್ರ್ಯೋದ್ಯೋಲನದಲ್ಲಿ ಉತ್ಸಾಹದಿಂದ ಕಾರ್ಯಪ್ರವೃತ್ತವಾಗುವಂತೆ, ರಾಷ್ಟ್ರೀಯ ಹಿತದೃಷ್ಟಿಯಿಂದ ಈ ಜಲಪ್ರಳಯದಲ್ಲಿ ತನ್ನ ಸೇವೆಯನ್ನೂ ಸಲ್ಲಿಸಿತು. ಕನ್ನಡಿಗರಲ್ಲಿ ಉತ್ಸಾಹವನ್ನೂ ಕೆಚ್ಚನ್ನೂ ಬಿತ್ತಿ, ಬೆಳೆಸುವಲ್ಲಿ ಸಹಕಾರ ನೀಡಿತು. ಸುಮಾರು ೧೦೦ ವರ್ಷಗಳ ಅವಿರತ ಹೋರಾಟದ ನಂತರ ದೇಶವು ಪರರಾಳಿಕೆಯಿಂದ ಬಿಡುಗಡೆ ಹೊಂದಿದಾಗ, ತಾನೂ ಆನಂದತುಂದಿಲವಾಯಿತು. ದೇಶದ ನಾಯಕರು ರಾಷ್ಟ್ರ ಪುನರ್ನಿರ್ಮಾಣದ ಕಾರ್ಯದಲ್ಲಿ ನಿರತರಾಗಿರುವ ಈ ಕಾಲದಲ್ಲಾದರೂ 'ನವಯುಗ'ವು ತನ್ನ ಹೊಣೆಗಾರಿಕೆಯನ್ನು ಮರೆಯದೆ 'ಯುಗ ವಾಣಿ'ಯ ಕರೆಯನ್ನು ಕನ್ನಡಿಗರ ಮುಂದಿಡುವುದಕ್ಕೆ ಹಿಂಜರಿಯಲಿಲ್ಲ. ರಾಷ್ಟ್ರೀಯವಾದವನ್ನು ಎತ್ತಿ ಹಿಡಿಯುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ವು ಮುಂದೆಯೂ ತನ್ನ ಕರ್ತವ್ಯವನ್ನು ಪೂರೈಸಲು ತಪ್ಪಲಾರದು, ತಪ್ಪಬಾರದು.

ರಾಷ್ಟ್ರದಲ್ಲಿ "ನವಯುಗ"ವು ಉದಯವಾದಾಗಲೇ "ನವಯುಗ"ವೂ ಉದಯವಾಗಿತ್ತು. ಅಂದಿನಿಂದಿನ ವರೆಗೂ ದೇಶದಲ್ಲಿ ಒಂದಾದ ನಂತರ ಮತ್ತೊಂದು 'ಯುಗ'ವು ನವನವವಾಗಿಯೇ ಉದಯಿಸುತ್ತಿದೆ. ಇಂದಾದರೂ ರಾಷ್ಟ್ರ ಪುನರ್ನಿರ್ಮಾಣದ ಜತೆಗೆ ಸ್ವಾತಂತ್ರ್ಯ ಸಂರಕ್ಷಣೆಯ ಯುಗವೂ ಸೇರಿಕೊಂಡಿದೆ. ದೇಶದ ಪೂರ್ವೋತ್ತರ ಸೀಮೆಗಳಲ್ಲಿ ಶತ್ರುಗಳ ಕತ್ತಿಗಳ ಜಣತ್ಕಾರವು ಪ್ರತಿಧ್ವನಿತವಾಗುತ್ತಿರುವ ಈ ವಿಪನ್ನಾವಸ್ಥೆಯಲ್ಲಿ ಆರು ಸಂಹಾರಕಕ್ಕಾಗಿ ಸೈನಿಕ ಶಕ್ತಿಯನ್ನು ಕೂಡಿಸುವುದರೊಡನೆ ದೇಶದ ಸಾಂಪತ್ತಿಕ ಶಕ್ತಿಯನ್ನೂ ಎತ್ತರಿಸುವುದು ಮತ್ತು ಸಾಮಾಜಿಕ, ರೈಲ್ವೆಜಿಕ, ರಾಜನೀತಿಕ ಪ್ರಗತಿಯನ್ನು ಸಾಧಿಸುವುದು ನಮ್ಮ ಮುಂದಿರುವ ಉದ್ದೇಶಗಳು. 'ನವಯುಗ'ದ ಈ ಕರೆಯನ್ನು ಜನಜನಕ್ಕೂ ಮುಟ್ಟಿಸುವುದು ಪತ್ರಿಕಾಧರ್ಮ. ಈ ಧರ್ಮದಿಂದ 'ನವಯುಗ'ವು ಚ್ಯುತವಾಗಿಲ್ಲ; ಮುಂದೆಯೂ ಆಗಲಾರದು; ಆಗಬಾರದು. ಇದಕ್ಕಾಗಿ ನಮ್ಮೊಡನೆ ನಮ್ಮ ಹಿತ ಚಿಂತಕರಿಲ್ಲರೂ ಸಹಕರಿಸಬೇಕು; ದೇಶ ಕಲ್ಯಾಣಕ್ಕಾಗಿ ತನ್ನ ಶಕ್ತಿಯನ್ನು ಸದುಪಯೋಗಗೊಳಿಸಬೇಕು.

ಜನತೆಯ ಅಭಿರುಚಿ ಅಣುಶಕ್ತಿಯ ಯುಗದಲ್ಲಿ ಕ್ಷೀಣಕ್ಷೀಣಕ್ಕೂ ಬದಲಾಯಿಸುತ್ತಿದೆ. ಹೀಗಿರುವಾಗ, ಅದಕ್ಕೆ ಸರಿಯಾಗಿ ಹೊಂದಿಕೊಂಡು ಹೋಗಲಾರದವರು ಇಂದು ಬದುಕುವುದೂ ಸಾಧ್ಯವಿಲ್ಲ. ಕೆಲವರು ಹಳೆಯ ಸಂಪ್ರದಾಯ ಸ್ಥರಿಗೆ ಹೊಸ ಜಗತ್ಪಿನ ಆಗುಹೋಗುಗಳು ಸಂಕಾಣದೆ ಹೋಗಬಹುದು. ಆದರೆ, 'ನವಯುಗ' ಈ ಆಸಹಕಾರ ಮನೋಧರ್ಮವನ್ನು ತಾಳಿಲ್ಲ. ಆದು ಹೊಸಕು—ಹಳಸುಗಳನ್ನು ಸಂಸಮವಾಗಿ ಕಂಡು ವಿಶಿಷ್ಟ ರೀತಿಯಲ್ಲಿ ಮುನ್ನಡೆಯುತ್ತಿದೆ. ನಡಿಗೆಯಲ್ಲಿ ಗಿರಿನದಿಯು ಆಟೋಪವಾಗಲಿ, ಬಯಲ ನದಿಯು ಪ್ರಶಾಂತತೆಯೊಗಲೀ ಕಾಣದಿರಬಹುದು; ಆದರೆ, ಏಕಗತ್ರಾ ಹಿಗೆ ಸುಖೋದಯವಾಗಲಾರದು; ಕ್ರಾಂತಿ ಮತ್ತು ಶಾಂತಿಗಳ, ಅವಳಿಜವಳಿಗಳು, ಅವೆರಡನ್ನೂ ಹೊಂದಾಣಿಸಿ ಹೋಗುವುದೆಂದರೆ ಬಹು ಪ್ರಯಾಸ. ಹಾಗಿದ್ದರೂ, 'ನವಯುಗ'ವು ಈ ಹೊಂದಾಣಿಕೆಯನ್ನು ಸಾಧಿಸುವಲ್ಲಿ ಮುಂದುವರಿಯುತ್ತಿದೆ. ಅದರ ಪರಿಶ್ರಮ ಯಶಸ್ವಿಯಾಗಲಿ ಎಂಬುದೇ ನಮ್ಮ ಕಳಕಳಿಯ ನಮ್ರ ವಿವೇದನೆ.

ಮನರಂಜನೆಯಷ್ಟೇ ಪತ್ರಿಕೆಗಳ ಉದ್ದೇಶವಾಗಿರಬಾರದು. ಆದರಲ್ಲೂ ಸಾಪ್ತಾಹಿಕಗಳಿಗಂತೂ ಈ ಗುರಿ ಎಷ್ಟು ಮಾತ್ರಕ್ಕೂ ಹಿಡಿಸದು. ಓದುಗರಲ್ಲಿ ನಾನಾ ಮನೋವೃತ್ತಿಯ ಜನರಿರುತ್ತಾರೆ. ಅವರೆಲ್ಲರನ್ನೂ ಏಕ ಕಾಲದಲ್ಲಿ ತೃಪ್ತಿಪಡಿಸುವುದು ಸಣ್ಣ ಪತ್ರಿಕೆಗಳಿಗೆ ಕೈಲಾಗದ ತುತ್ತು. ನೆಮ್ಮ ಜನತೆ ರಾಜಕೀಯವನ್ನು 'ಬರಡೆನ್ನೆ'ಯೆಂದು ಕರೆಯುವಷ್ಟು ಮುಂದುವರಿದಿದೆ. ಆದರೆ, ಅದರಲ್ಲೂ ಹಾಲು ಕರೆಯ ಹೋಗುವ ಚಟುವನ್ನು ಮಾತ್ರ ಅದು ಬಿಡಲ್ಲೊದು. ಇದರಿಂದಾಗಿ 'ರಾಜ್ಯಕೀಯ' ವಿಲ್ಲದ ಪತ್ರಿಕೆ ಪತ್ರಿಕೆಯೇ ಅಲ್ಲ ಎಂಬ ಮಾತು ಅಲ್ಲಲ್ಲಿ ಕೇಳ ಬರುತ್ತಿದೆ. ಈ ಬಗ್ಗೆ ನಾವು ಪಾರ್ಶ್ವತ್ಯ ಜನತೆಯಿಂದ ಪಾಠ ಕಲಿತುಕೊಳ್ಳಬೇಕು; ಅಲ್ಲಿನ ವಾರ್ತಾ ಪತ್ರಿಕೆಗಳು ವರ್ಷದ ಮುನ್ನೂರರುವತ್ತೈದು ದಿನವೂ ರಾಜ್ಯಕೀಯವನ್ನು ಆಡಿಕೊಳ್ಳುವುದಿಲ್ಲ. ನವ್ಯ ಜನರೂ ಪತ್ರಿಕೆಗಳೂ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಷಯಗಳನ್ನು ರಾಷ್ಟ್ರೀಯ ದೃಷ್ಟಿಯಿಂದ ನೋಡಬೇಕು. ಜನತೆಯು ಅಭಿರುಚಿಗೆ ಹೊಂದಿಕೊಂಡು ಪತ್ರಿಕೆಗಳಿರಬೇಕೆ? ಅಥವಾ ಅಭಿಗಳನ್ನು ತಿದ್ದಿ ಸರಿದಾರಿಯಲ್ಲಿ ನಡೆಸಿಕೊಂಡು ಪತ್ರಿಕೆಗಳು ಹೋಗಬೇಕೆ? ಎಂಬುದೊಂದು ಗಂಭೀರ ಪ್ರಶ್ನೆ. ಜನತೆಯನ್ನು ತಿದ್ದುವುದು, ಅದನ್ನು ಸರ್ವರೀತಿಯಿಂದಲೂ ಉನ್ನತಗೊಳಿಸುವುದು ಅಗತ್ಯವೆಂದೂ ಅದುವೇ ಪತ್ರಿಕಾ ಧರ್ಮವೆಂದೂ ಹೇಳುತ್ತಾರೆ. 'ನವಯುಗ'ವಾದರೂ ಕೇಳು ಮನರಂಜನೆಗೆ ತೊಡಗಿಲ್ಲ; ಕಬ್ಬಿಣದ ಕಡಲೆಯಸ್ನಾದರೂ ಬಾಯಿಗೆ ಹಾಕಿಕೊಳ್ಳಲು ಹಿಂಜರಿಯಲಿಲ್ಲ.

ದಕ್ಷಿಣ ಕನ್ನಡದ ಪತ್ರಿಕಾ ಪ್ರಪಂಚದಲ್ಲಿ ಹಾಗೂ ಕರ್ನಾಟಕದ ಮಧ್ಯಮ ಮಟ್ಟದ ಪತ್ರಿಕೆಗಳ ಸಾಲಿನಲ್ಲಿ 'ನವಯುಗ'ವು ತನ್ನ ಸ್ಥಾನವನ್ನು ಭದ್ರಗೊಳಿಸಿದೆ. ದಿನಪತ್ರಿಕೆಗಳ ಪುನಾರವು ಅಧಿಕಾಧಿಕ ನಾಗುತ್ತ ಬರುತ್ತಿರುವ ಈ ದಿನಗಳಲ್ಲಿ ವಾರಪತ್ರಿಕೆಗಳ ಭವಿಷ್ಯ ಮಂದವಾಗಿಯೇ ಗೋಚರವಾಗುತ್ತಿದೆ. ಹೀಗಾಗಬಾರದು. ಇದಕ್ಕಾಗಿ ಕನ್ನಡಿಗರೆಲ್ಲರೂ ಈಗಿಂದೀಗಲೇ ತೊಡಗಬೇಕು. ವಾರಪತ್ರಿಕೆಗಳನ್ನು ಕೊಂಡು ಓದಬೇಕು. ಚಂದಾದಾರರ ಸಂಖ್ಯೆ ಹೆಚ್ಚಬೇಕು. ಆವರು ಕ್ರಮೋಗತವಾಗಿ ಚಂದಾ ಪಾವತಿ ಮಾಡಬೇಕು. ಒಂದು ಪತ್ರಿಕೆಯ ನಿಜವಾದ ಆಸ್ತಿಯೆಂದರೆ, ಅದನ್ನು ಕೊಂಡು ಓದುವವರ ಸಂಖ್ಯೆ. 'ನವಯುಗ'ವೂ ನಿಮ್ಮ ಪತ್ರಿಕೆ; ನಿಮ್ಮ ಸಲಹೆ ಸೂಚನೆಗಳಿಗೆ ಇನ್ನಲ್ಲಿ ಯಾವಾಗಲೂ ಸ್ವಾಗತ ವಿದೆ; ಅದಕ್ಕೆ ಸುದೀರ್ಘಾಯುಷ್ಯ ನೀಡುವಲ್ಲಿ ನೀವೂ ಉತ್ತಮ ಪೈಪೈರಾಗಬಲ್ಲಿರಿ. ನಿಮ್ಮ ಬುದ್ಧಿವಂತಿಕೆಯನ್ನು ಏಕೆ ಪ್ರಯೋಗಿಸಬಾರದು?

ಇಂದು ಸರಕಾರದ ನ್ಯೂಸ್ ಪ್ರಿಂಟ್ ಪೂರೈಸುವ ನೀತಿಗಳು ವಾರ ಪತ್ರಿಕೆಗಳಿಗೆ ಪೂರಕೋಷಕವಾಗುವಂತಿಲ್ಲ. ಸರಿಯಾಗಿ ಆವಶ್ಯಕತೆಪತ್ರಿಕಾಕಾಗದವೆಷ್ಟಿಗೆ ತ್ರಿಸ್ಸಿಕ್ಕೆದರೂ ಬಹಳ ಶಟ್ಟಿ. ಹಾಗಾಗಿ ಒಂದು ಪತ್ರಿಕೆ ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗುವುದು ಅತಿಕಷ್ಟ; ಹಾಗಿದ್ದರೂ ಲೇಖಕ ಬಂಧುಗಳು, ಜಾಹೀರಾತುದಾರರು ಚಂದಾದಾರರು ಮತ್ತಿತರ ವಾಚಕರು ಈ ದಿಸೆಯಲ್ಲಿ ನಮ್ಮೊಡನೆ ಸಹಕಾರ ನೀಡುತ್ತಿದ್ದಾರೆ. ಅಂತಹರ ಸಂಖ್ಯೆ ದಿನದಿನ ಬೆಳೆದು ಬರಲಿ; ಮತ್ತು ತನ್ಮೂಲಕ 'ನವಯುಗ'ದ ಸಂಕ್ರಮಣ ಕಾಲವು ದೇಶಕ್ಕೆ, ಜನಕ್ಕೆ ಸುಪ್ರಭಾತವಾಗಲಿ ಎಂದು ಪ್ರಾರ್ಥಿಸುತ್ತೇವೆ.

ಸರದಿ ಯಾವಾಗ?

ಪಕ್ಷ ಸಂಘಟನೆಯ ಸಂಬಂಧದಲ್ಲಿ ಕಾಮರಾಜ ನಾಡಾರರು ನಿರೂಪಿಸಿದ ಸೂತ್ರವು ಈಗ ಯಶಸ್ವಿಯಾಗುತ್ತ ಬರುತ್ತಿದೆ, ಆವರ ಸೂತ್ರವನ್ನು ಎಲ್ಲ ಪದಾಧಿಕಾರಿ ಕಾಂಗ್ರೆಸಿಗರೂ ಆತ್ಮ ಸಂತೋಷದಿಂದ ಸ್ವೀಕರಿಸಿದ್ದಾರೆ; ರಾಜಿನಾಮೆಯಿತ್ತು ಪಕ್ಷದ ಉನ್ನತಿಗಾಗಿ ದುಡಿಯುವ ಉತ್ಸಾಹವನ್ನು ತಳೆದಿದ್ದಾರೆ. ಸದ್ಯ ಪ್ರಧಾನಿ ನೆಹರುರವರು ಕೇವಲ ಹನ್ನೆರಡು ಜನರನ್ನು ಈ ಕಾರ್ಯಕ್ಕೆ ಆಯ್ದುಕೊಂಡಿದ್ದಾರೆ. ಕೇಂದ್ರದ ಮುರಾರ್ಜಿ, ಲಾಲಬ ಹದೂರ ಶಾಸ್ತ್ರಿ, ಎಸ್. ಕೆ. ಪಾಟೀಲ್, ಗೋಖಾಲೆ ರೆಡ್ಡಿ, ಶ್ರೀಮತಿ ಮತ್ತು ಜಗಜ್ಜೀವನರಾಮರು ಮೇಲ್ಪಂಕ್ತಿಯವರಾದರೆ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರ, ಒರಿಸ್ಸಾ ಮತ್ತು ಮದ್ರಾಸಗಳ ಮುಖ್ಯ ಮಂತ್ರಿಗಳು ಕೆಳಪಂಕ್ತಿಗೆ ಸೇರಿದವರು. ಪ್ರಧಾನಿಯವರು ಕೇಂದ್ರದಲ್ಲಿ ತೆರವಾಗುವ ಸ್ಥಾನಗಳನ್ನು ತುಂಬಿಸುವುದಿಲ್ಲವೆಂದೂ ಮುಂದೆ ಅಧಿಕಾರ ಸ್ವೀಕರಿಸುವ ರಾಜ್ಯಗಳ ಮುಖ್ಯ ಮಂತ್ರಿಗಳಾದರೂ ಚಿಕ್ಕ ಸಚಿವ ಸಂಪುಟವನ್ನೇ ರಚಿಸಿಕೊಳ್ಳುವರೆಂದೂ ತಿಳಿಯುತ್ತದೆ. ಪ್ರಧಾನಿಯವರ ಈ ನಿರ್ಧಾರದಿಂದ ಕೆಲವೊಂದು ಸಮಸ್ಯೆಗಳು ದೂರವಾಗುವುದು. ಆದರೆ, ಪಕ್ಷಸಂಘರ್ಷನೆಗೆ ದುಡಿಯಲು ಎಲ್ಲರೂ ಸಿದ್ಧರಾಗಿರುವಾಗ ಇವರನ್ನು ಮಾತ್ರ ಆಯ್ದುಕೊಂಡುದು ಉಳಿದವರು ಅದಕ್ಕೆ ಅಸಮರ್ಥರೆಂದು ಹೇಳಿದಂತಾಗಲಿಲ್ಲವೆ? ಅಥವಾ ಆಯ್ಕೆಗೊಂಡವರಾದರೂ ತಮ್ಮನ್ನು ಮಾತ್ರ ಯಾಕೆ ಆಯ್ದರೆನ್ನಲಾರರೆ? ಇದಕ್ಕೆ ಪ್ರಧಾನಿಗಳೇ ಸಮಾಧಾನ ನೀಡಿಸ್ಸಾರೆ: ಇದು ಸದ್ಯದ ಕ್ರಮ; ಮುಂದೆ ಇತರರನ್ನೂ ಆರಿಸಿಕೊಳ್ಳಬಹುದು ಎಂದು. ಕಾಮರಾಜರಿನ್ನಂತೆ ಸಂಘಟನಾಕಾರ್ಯಕ್ಕೆ ಕಡಿಮೆ ಪಕ್ಷ ೫೦-೬೦ ಜನರಾದರೂ ಬೇಕು. ಹಾಗಿರುವಾಗ, ಈ ಆಯ್ಕೆಯ ದ್ವಿತೀಯ ತೃತೀಯ ಪಟ್ಟಿಗಳೂ ಹೊರಡುವುದು ಆನಂಭವವಲ್ಲ. ಈ ಭರವಸೆಯಿಂದ ನೇವಾಧುರೀಣರು ತಮ್ಮ ಸರದಿಯನ್ನು ಕಾಯುತ್ತ ಕುಳಿತುಕೊಳ್ಳಬಹುದು; ಆಶ್ಚರ್ಯವಿಲ್ಲ ಮೊದಲ ಪಟ್ಟಿಯಿದ ಒಬ್ಬಿಬ್ಬರಾದರೂ ಜಾರಿಕೊಳ್ಳದಿರುವುದು ಅಸಾಧ್ಯವೆನಿಸೀತೆ! ನೋಡೋಣ ಕಾವು, ಮುಂದೇನಾಗುವುದೆಂದು!

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 42ನೆಯ ವರ್ಷವು ಮುಗಿದು ಸಪ್ಟಂಬರ್ ತಿಂಗಳಿಂದ 43ನೆಯ ಹೊಸ ವರ್ಷಾರಂಭವಾಗುವುದು. ಈ ತವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ಶ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿ"ನ ಯಾವುದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಸಾಡಬಹುದು. ವಿ ಪಿ. ಮಾಡಿದರೆ 70 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದಾಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

—ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ಸ್ವಾತಂತ್ರ್ಯ ದಿನಾಚರಣೆಗಳು

ಅಳಿಕೆಯ ಲೋಕ ಸೇವಾ ಮೈಸ್ಕೂಲು ಮತ್ತು ಇತರ ಶಾಲೆಗಳ ವತಿಯಿಂದ ಶ್ರೀಮತಿ ಲೀಲಾವತಿ ಕೆ. ರೈಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜರಗಿ ಶ್ರೀಗಳಾದ ಎಮ್. ನಾರಾಯಣ ಭಟ್ಟ, ಕೆ. ಭೀಮ ಭಟ್ಟ, ಶ್ರೀಮತಿ ಎಂ. ಗೌರಮ್ಮ ಇವರ ಭಾಷಣಗಳಾದುವು.

ಸುರತ್ಕಲಿನ ಮುಕ್ಕ ಮಿತ್ರ ಪಟ್ಟಣ ಸೇವಾ ಮಂದಿರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ನಿದಕರಿ ಹಾ. ಎ. ಶಾಲೆಗಳ ಒಡಗೂಡಿದಿಂದ ಸ್ವಾತಂತ್ರ್ಯ ದಿನಾಚರಣೆಯು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮಲ್ಪೆಯ ಶಿಪ್ಪಿಂಗ್ ಮೆನ್ಸ್ ಸಹಕಾರಿ ಸಂಘದ ಆಶ್ರಯದಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ ಶಂಭು ಶಂಕರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಟಿ. ಆಬ್ದುಲ್ ಖಾದರ್, ಆರ್. ಪಿ ಕರ್ಕೇರ, ಜಿ ಟಿ. ಸಾಲ್ಯಾನ್ ಇವರು ಮಾತನಾಡಿದ ಬಳಿಕ ಅಧ್ಯಕ್ಷರ ಭಾಷಣ, ಕಾರ್ಯದರ್ಶಿಯವರಿಂದ ಧನ್ಯವಾದ ಸಮರ್ಪಣೆ ನಡೆಯಿತು.

ಅಚ್ಚಾಡಿಯ ಮೊಡುಕೆರೆ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಎ ಮಹಾಬಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎ.ಸಂಜೀವ ಹೆಗ್ಡೆ, ಎ ಚಂದ್ರಶೇಖರ ಶೆಟ್ಟ ಇವರ ಭಾಷಣನಾಗಿ ಶ್ರೀ ಬಿ ಭೋಜ ಶೆಟ್ಟರಿಂದ ಧನ್ಯವಾದವಾಯಿತು.

ನಡುಮೊಗರು ಬೋರ್ಡು ಶಾಲೆಯಲ್ಲಿ ಶ್ರೀ ಕೆ.ಎಸ್.ಶಿವರಾಮ ಶೆಟ್ರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ನೆರವೇರಿತು. ಶರಪಾಡಿ ಗ್ರಾಮ ಸ್ವಯಂ ಸೇವಾದಳದ ಶ್ರಮದಾನವೂ ಜರಗಿತು.

ಮೂರ್ಜೆ-ಸರಕಾರಿ ಸ್ಕಾಧಮಿಕ ಶಾಲೆಯಲ್ಲಿ ಶ್ರೀ ಕೆ ಭೋಜ ಹೊಳ್ಳರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಭಾಷಣಾದಿ ಕಾರ್ಯಕ್ರಮಗಳಿಂದ ನೆರವೇರಿತು.

ರಕ್ಷಣಾನಿಧಿ ನೋಡ್ತಿಯ ಅವಧಿ

ರಕ್ಷಣಾನಿಧಿ ಸಹಾಯಾರ್ಥವಾಗಿ ಸೈಸೂರು ಸರಕಾರವು ಏರ್ಪಡಿಸಿದ ಲಾಟರಿ ಟಿಕೇಟು ಮಾರಾಟದ ಕೊನೆಯ ತಾರೀಕು 1-8-63 ಎಂದಿದ್ದುದನ್ನು 31-12-63ರ ವರೆಗೂ, ಸೋತ್ತಿ ತೆಗೆಯುವ ದಿನವನ್ನು ತಾ. 8-8-63 ರಿಂದ 26-1-64ರ ವರೆಗೂ ಮುಂದುವರಿಸಲಾಗಿದೆಯೆಂದು ತಿಳಿದು ಬಂದಿದೆ.

ಉಡುಪಿ ಡಿ ಮು. ಕೋರ್ಟಿನಲ್ಲಿ

S.C. 268/1963.

ದಿ. ಕೆನರಾ ಯಿಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉ್ಸಿ
—ವಾದಿ

ಮತ್ತು

H. ಭುಜಂಗ ಪೈಕ್ಕೆ ಕೊಡಾ—ಪ್ರತಿವಾದಿರು ಯಿವರಿಗೆ

2ನೇ ಪ್ರತಿವಾದಿ H. ಸದಾಶಿವ ಶೆಟ್ಟಿ. H. ಮೋನಪ್ಪ ಶೆಟ್ರ ಮಗ—ಉಡುಪಿ ತಾಲೂಕು ಹಿರ್ಗ ಗ್ರಾಮ—ಯಿವರಿಗೆ

ಪ್ರತಿವಾದಿರು ವಾದಿ ಬ್ಯಾಂಕಿಗೆ ತಾರೀಕು 9—8—1962ಲ್ಲಿ ರೂಪಾಯಿ 275ಕ್ಕೆ ಬರೆ ಕೊಟ್ಟ ಪ್ರೊಮಿಸರಿ ನೋಟಿನ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಾ ಆಸಲು ಬಾಕಿ ಇ ಬಡ್ಡಿ ಕೂಡಾ ರೂಪಾಯಿ 347—56ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮೂಡಿದ ಸದರಿ ದಾವೆಯು ತಾರೀಕು 16—9—1963ಕ್ಕೆ ತಪ್ಪಿ ಬಗ್ಗೆಯಿಟ್ಟಿದೆ. ಆ ದಿವ್ಸ ಸರಿ 2ನೇ ಪ್ರತಿವಾದಿಯು ಸ್ವತಹಾ ಯೂ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಯಂಸದಿ ಯೆದ್ದೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಪಾನಿಸಲ್ಪಡುವುದೆಂದು ಸದರಿ 2ನೇ ಪ್ರತಿವಾದಿಗೆ ಯೂಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath
Advocate for Plff.

ಉಡುಪಿ, ತಾ. 21—8—63

ರೋಟರಿ ಕ್ಲಬ್ಬಿನ ಸಭೆ:—

ಕಳೆದ ತಾ 20ರಂದು ಉಡುಪಿ ರೋಟರಿ ಕ್ಲಬ್ಬಿನ ಸಭೆಯು ಶ್ರೀ ಟಿ.ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು.

ವಿಸಮ ಜ್ವರವನ್ನು ತಡೆಗಟ್ಟುವದಕ್ಕಾಗಿ ನಡೆಸಿದ ಕಾರ್ಯಕ್ರಮದಲ್ಲಿ ಸ್ಥಳೀಯ ಡಾಕ್ಟರುಗಳ ಬಿದಾರ್ಯದಿಂದ ಸುಮಾರು 3,000 ಕ್ಕೂ ಮಿಕ್ಕಿದ ಜನರಿಗೆ ಚುಚ್ಚು ಮದ್ದನ್ನು ಕೊಡಲಾಯಿತೆಂದೂ ಹೆಚ್ಚು ಚುಚ್ಚು ಮದ್ದನ್ನು ಸಾಡಿದ ಕೀರ್ತಿಯು ಡಾ.ಕೆ.ಶೇಷಗಿರಿ ಪೈಗಳಿಗೆ ಸಲ್ಲುವುದೆಂದೂ ಅಧ್ಯಕ್ಷರು ಹೇಳಿದರು.

ಡಾ। ಎ ಕೃಷ್ಣರಾಯರು ಪೆಜ್ಜಕೆಯ ಉಪನ್ಯಾಸಗಳ ಸ್ರಯೋಜನಗಳನ್ನು ವಿವರಿಸಿದ ಬಳಿಕ ಶ್ರೀ ಕೆ.ಕೆ.ಪೈಗಳು ಡಾ ಎಚ್.ಎಸ್. ಭಟ್ಟರನ್ನು ಸಭೆಗೆ ಪರಿಚಯ ಮಾಡಿತ್ತರು. ತರುವಾಯ ಡಾ। ಮೋಹನದಾಸ ಪೈಗಳೂ, ಡಾ। ಎಚ್ ಎಸ್. ಭಟ್ಟರೂ ಡಾಕ್ಟರುಗಳಲ್ಲಿರ ಬೇಕಾದ ಹಲವಾರು ಗುಮ್ಮಿ ಗುಣಗಳತಗಳ ಸಂಪೂರ್ಣ ಪರಿಚಯ ಮಾಡಿತ್ತರು. ಡಾ। ಪಿ ಆರ್. ನಾಯಕರೂ ಈ ಕುರಿತು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು ಡಾ। ಪಿ. ಆರ್. ನಾಯಕ್ ರವರೂ ಡಾ। ಮೋಹನದಾಸ ಪೈಗಳ ಜನ್ಮದಿನ ಆಗಸ್ಟ್ 17 ಎಂದು ಅಧ್ಯಕ್ಷರು ಜ್ಞಾಪಿಸಿ ಅವರಿಗೆ ಶುಭಕೋರಿದ ಬಳಿಕ, ಇಬ್ಬರೂ ತಮ್ಮ ಜೀವನದ ಹಲವು ರಸಸಿಖಿ ಸಗಳನ್ನು ಸಭಿಕರಲಿಗೆ ತಿಳಿಸಿದರು.

ಯೂನಿಯನ್ ಬುನಾವಣೆ—

ತಾ. 10-8-63ರಂದು ಉಡುಪಿ ಆಗುಮೇರ್ದ ಕಾರೇಜಿನಲ್ಲಿ ಪ್ರಿನ್ಸಿಪಾಲ್ ಡಾ. ಜೆ. ಬಿ. ಸ ವಣಂರವರ ನೇತೃತ್ವದಲ್ಲಿ ಯೂನಿಯನ್ ರಿಪ್ರೆಸೆಟೇಟಿವ್ಸ-ಮೀಟಿಂಗು ಜರಗಿ ಯೂನಿಯನ್ ಪ್ರಸಿಡೆಂಟರಾಗಿ—ಶ್ರೀ ಯು. ಕರುಣಾಕರ ಶೆಟ್ಟರೂ, ವ್ಯಾಸ್ ಪ್ರೆಸಿಡೆಂಟರಾಗಿ ಶ್ರೀ ಯನ್. ಬಿ ಮೊಗವೀರರವರೂ ಜನರಲ್ ಸೆಕ್ರೆಟರಿಯಾಗಿ ಶ್ರೀ ಪಿ. ಗೋಪಾಲ ಕೃಷ್ಣ ಭಟ್ಟರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಂ., ರಜಕರು ಜತೆಕಾರ್ಯದರ್ಶಿಗಳಾಗಿಯೂ ಆರಿಸಿ ಬಂದಿರುವರು. ಹೊಸ ಯೂನಿಯನಿನ ಉದ್ಘಾಟನೆಯು ಸದ್ಯದಲ್ಲೇ ಜರಗಲಿರುವುದು

ಕುಂದಾಪುರದಲ್ಲಿ ಕನ್ನಡ ಸಂಘ

ಕನ್ನಡ ಸಂಸ್ಕೃತಿ,ಸಾಹಿತ್ಯ,ಸಂಸ್ಕೃತಿ ಕಲೆಗಳ ಅಭಿವೃದ್ಧಿಗಾಗಿ ಕಾರ್ಯಪ್ರವರ್ತಿಸಲು, ಕನ್ನಡ ಸಂಘವೊಂದನ್ನು ಸ್ಥಾಪಿಸಲು ಸ್ಥಳೀಯ ಬೇಂಕ್ ನೌಕರರ ಪ್ರಯತ್ನದ ಫಲವಾಗಿ ಕುಂದಾಪುರದಲ್ಲಿ ಸ್ಥಾಪಿಸಲಾಯಿತು. ಸಂಘವನ್ನು ಕ್ರಮಬದ್ಧವಾಗಿ ರೂಪಿಸಲು, ಘಟನೆಯೊಂದನ್ನು ತಯಾರಿಸಲು, ಸಾಕಷ್ಟು ಸದಸ್ಯರನ್ನು ಸೇರಿಸಲು, ಮತ್ತು ಅಲ್ಲಿಯ ತನಕ ಸಂಘದ ಸರ್ವ ಚಟುವಟಿಕೆಗಳನ್ನು ನಡೆಯಿಸಲು ಸಂಪೂರ್ಣ ಅಧಿಕಾರ ಹೊಂದಿದ ಕಾರ್ಯಕಾರೀ ಸಮಿತಿಯೊಂದನ್ನು ಈ ಸಭೆ ನೇಮಿಸಿತು. ಈ ಸಮಿತಿಯ ಅಧಿಕಾರಿ ವರ್ಗ ಹೀಗಿದೆ— ಶ್ರೀ ಎ ಕಾಳಿಂಗ ನೆಬ್ಬಾರ್—ಅಧ್ಯಕ್ಷ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ್ ಉಪಾಧ್ಯಕ್ಷ, ಶ್ರೀ ಪಿ ನಾರಾಯಣ ಪೈಳೆ ಕೋಶಾಧಿಕಾರಿ. ಶ್ರೀ ಕೆ. ರಾಮಚಂದ್ರ ಕೊತ್ವಾಲ್—ಮತ್ತು ಶ್ರೀ ಎ ಪಂಕರನಾರಾಯಣ ಹೆಬ್ಬಾರ್—ಜತೆ ಕಾರ್ಯದರ್ಶಿಗಳು. ಹಾಗೂ ಶ್ರೀಗಳಾದ ರತ್ನಾಕರ ಚಿನ್ಸ್ಕಗಾರ್, ಕೆ ರಘುವೀರ ನಾಯರ್, ಸಿ. ಶೇಷಪ್ಪ ಹೊಳ್ಳ ಮತ್ತು ಸ್ಪೆಗರಿ ಲೂವಿಸ್ ಡಿ ಲೀಮ ಸದಸ್ಯರುಗಳು.

ಕನ್ನಡ ಜ್ಞಾತ ಸಾಹಿತಿ ತ್ರಿವೇಣಿಯವರ ನಿಧನದಿಂದ ಕನ್ನಡ ಕಾದಂಬರಿ ಪ್ರಪಂಚಕ್ಕಾದ ನಷ್ಟಕ್ಕಾಗಿ ಸಭೆ ಸಂತಾಪ ಸೂಚಕ ಗೊತ್ತುವಳಿಯೊಂದನ್ನು ಸಭೆ ಸರ್ವಾನುಮತದಿಂದ ಸ್ವೀಕರಿಸಿತು.

ಸ್ಮಾರಕ ನಿಧಿ ಸಮರ್ಪಣೆ—

ಉಡುಪಿಯ ಸುರಿಯ ಪತ್ರಿಕೋದ್ಯಮಿ, ದಿವಂಗತ ಶ್ರೀ ಯು. ಸೀತಾರಾಮ ಭಟ್ಟರ ಸ್ಮಾರಕ ನಿಧಿ ಸಮರ್ಪಣಾ ಸಮಾರಂಭವು ತಾರೀಕು 25—8—63ರಂದು ಪರ್ಯಾಯ ಶ್ರೀ ಶೀರೂರು ಮಠದ ಶ್ರೀಲಕ್ಷ್ಮೀವರತೀರ್ಥರ ಅಧ್ಯಕ್ಷತೆಯಲ್ಲಿ ಸಂಜೆ ಗಂಟೆ ಮಟಲಿನಲ್ಲಿ ನೆರವೇರಿತು.

ಆರಂಭದಲ್ಲಿ ಸಮಿತಿ ಅಧ್ಯಕ್ಷೆ ಶ್ರೀ ಪಿ. ರಂಗನಾಥ ಶೆಟ್ಟಿಯವರು ಸ್ವಾಗತಿಸಿದರು. ಕೋಶಾಧಿಕಾರಿ ಶ್ರೀ ಜಿ. ಎ. ಆಚಾರ್ಯರು ವರದಿಯೊಪ್ಪಿಸುತ್ತಾ ರೂ. 1400ಗಳು ಸಂಗ್ರಹವಾಗಿದೆಯೆಂದು ಹೇಳಿದರು.ಶ್ರೀಮತಿ.ರಾಜೇಶ್ವರಿಯಮ್ಮನವರು ಸಂದೇಶಗಳನ್ನೊಪ್ಪಿಸಿದರು. ಕಂಠೀರವ ಸಂಪಾದಕ ಶ್ರೀ ಪುರುಳಿ ಭಾಸುರಾಯರು ಪತ್ರಿಕೋದ್ಯಮಿಯಲ್ಲಿರ ಬೇಕಾದ ಗುಣಧರ್ಮಗಳನ್ನು ವಿವರಿಸಿ ಇಂತಹ ಗೌರವ ಸಮಾರಂಭಗಳು ಸಾರ್ವಜನಿಕರ, ಕಲಾಭಾಗೂ ಸಾಹಿತ್ಯಿಕಾಭಿರುಚಿಯ ಅಂಸವನ್ನು ಬೆಳಸುತ್ತವೆಂದರು. ಪ್ರೊ| ಕು. ಶಿ ಹರಿದಾಸ ಭಟ್ಟರೂ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಾ ಮಾತಾಡಿ, ಸಮಾರಂಭಕ್ಕೆ ಶುಭ ಕೋರಿದರು.

ಸಭಿಕರ ಪರವಾಗಿ ಶ್ರೀಗಳಾದ ಜೆ ಬಿ. ಸವಣೂರ್ಕರಿ ರಾಮರಾಯ ಶೆಟ್ಟಿ, ಡಾ। ಕೆ. ಕೆ. ಉಪ್ಪೂರ್ಕ ಯು, ಎಂ. ನಿಮ್ಮಸ್ಥ ಮತ್ತು ಸಿ. ರಾಜಶೇಖರಯ್ಯನವರು ಮಾತಾಡಿದರು ಮೃತ್ತಿಗೆ ಒಳದ ಶ್ರೀ ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳವರು ಈ ಸಮಾರಂಭ ನೆರವೇರಿದುದಕ್ಕೆ ತಮ್ಮ ಮೆಚ್ಚುಗೆಯನ್ನು ತಿಳಿಸಿದರು ಅಧ್ಯಕ್ಷರು ಮಾತಾಡುತ್ತಾ ದಿ| ಸೀತಾರಾಮು ಭಟ್ಟರ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿದರು. ದಿ| ಭಟ್ಟರ ಪುತ್ರ ಶ್ರೀ ಜಯರಾಮ ಭಟ್ಟರು ನಿಧಿಯನ್ನು ಸ್ವೀಕರಿಸಿ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು ಅಂತ್ಯದಲ್ಲಿ ಶ್ರೀ ಎಸ್. ಎಲ್. ನಾರಾಯಣ ಭಟ್ಟರು ವಂದನಾರ್ಪಣೆಗೈದರು.

ವಾರ್ತಾವೇದಿಕೆ

ಜವಾಹರಲಾಲ



ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತನಗಿತ್ತ ಜೋಷೆಗಾರಿಕೆಯನ್ನು ಪ್ರಧಾನಿ ನೆಹರುರವರು ಜಯಪ್ರಿಯರಾಗಿಯೇ ನಿರ್ವಹಿಸಿದರು. ಅವರು ಕೈಗೊಂಡ ನಿರ್ಣಯವು ನಿಜಕ್ಕೂ ವಿಸ್ಮಯವನ್ನುಂಟು ಮಾಡಿದೆ; ಪಕ್ಷಕ್ಕಾಗಿ ಅವರು ಮಾಡಿದ ತ್ಯಾಗವನ್ನು ಪ್ರತಿಬಿಂಬಿಸುತ್ತದೆ. ಮುಖ್ಯವಾಗಿ, ಲಾಲಬಹದ್ದೂರ ಶಾಸ್ತ್ರಿ, ಕುಮಾರಿ ಇಂದಿರಾ ಗಾಂಧಿ ಮತ್ತು ಎಸ್.ಕೆ ಪಾಟೀಲರನ್ನು ಬಿಟ್ಟುಕೊಡಲು ಅವರು ನಿರ್ಧರಿಸಿದುದರಿಂದ ಪಂತ್ರಿಮಂಡಳದಲ್ಲಿಯೇ ಅಲ್ಲೋಲ ಕಲ್ಲೋಲವೇಳುವಂತಾಗಿದೆ. ಪ್ರಧಾನಿಯವರಿಗೆ ನಚ್ಚಿನವರಾದ ಈ ತ್ರಿಮೂರ್ತಿಗಳು ಪಕ್ಷ ಸಂಘಟನೆಯಲ್ಲಿಯೂ ಮಹತ್ವದ ಪಾತ್ರ ವಹಿಸಿದ್ದರು. ಸರಿಸ್ಟ ಮಟ್ಟದ ನಾಯಕರೇ ಸ್ವೋರ್ನವಧಿಯಲ್ಲಿ ಪಕ್ಷ ಸಂಘಟನೆಗೆ ಸ್ಪೂರಕ ರಕ್ತೆಯೂಗ ಬೇಕೆಂಬ ಮನೋಭಾವನೆಯು ನೆಹರುಗಳಲ್ಲಿದೆ. ಇವರು ಹೊರಹೋದ ನಂತರವಾದರೂ ಸಚಿವ ಸಂಪುಟವನ್ನು ಪುನಾರಚಿಸಿ, ಅದನ್ನೂ ಸರ್ವಸಮರ್ಥವಾಗಿಸುವಲ್ಲಿ ನೆಹರು ಹಿಂದುಳಿಯಲಾರರು.

ಸುಬ್ರಹ್ಮಣ್ಯಂ

ಪಂಚಾಯಿಯವರು ಪಕ್ಷಕ್ಕೆ ಕಾರ್ಯಗಳಲ್ಲಿ ತೊಡಗುವುದರಿಂದ ಅರ್ಧ ರಾತ್ರೆ ಗೊಬ್ಬು ಉತ್ತಮ ನಾಯಕನ ಆಗತ್ಯವಿದೆ. ಮದ್ರಾಸಿನಲ್ಲಿ ಸಮರ್ಥ ಅರ್ಥಿಕ ವ್ಯವಸ್ಥೆಯನ್ನು ಮಾಡಿ ಸದ್ಯ ಕೇಂದ್ರದಲ್ಲಿ ಫೈನ್ ಉದ್ದಿಮೆಯ ಸಚಿವರುಗಿರುವ ತರುಣ ಸಿ.ಸಿ ಬ್ರಹ್ಮಣ್ಯಂರವರು ಆ ಸ್ಥಾನವನ್ನೆಡರುವ ಸಂಭವ ಹೆಚ್ಚಿದೆ. ಮೊದಲ ಮಂತ್ರಿ ಟಿ.ಟಿ. ಕೆ. ಯವರು ಕೇಂದ್ರದಲ್ಲಿರುವುದು ನಿಜವಾದರೂ ಅವರು ಹೊಂದಾಣಿಕೆಯ ಕಾರ್ಯಕ್ರಮಕ್ಕೆ ಅವಶ್ಯರಾಗಿರುವುದರಿಂದ, ಇವರೊಡನೆ ಸುಬ್ರಹ್ಮಣ್ಯಂ ಹೊಂದಿಕೊಂಡು ಹೋಗುವ ಸಂಭವ ಅಧಿಕವಿರುವುದರಿಂದ, ಮೇಲಿನ ಊಹಾಪೋಹೆಯು ನಿಜಸ್ವರೂಪವನ್ನು ತಳೆದರೆ ಆಶ್ಚರ್ಯವಲ್ಲ.

ಚಂದ್ರಭಾನು ಗುಪ್ತ

ಆರಣ್ಯ ಪಾಪಾ ಮಂತ್ರಿಗಳಾಗಿದ್ದ ಅಲಗುರ್ಯಾ ಶಾಸ್ತ್ರಿಯವರು ರಾಜಿನಾಮೆ ಕೊಡದೆ ಹೋದರೆ, ತಾನೇ ತ್ಯಾಗಪತ್ರ ನೀಡುವುದಾಗಿ ಗದರಿಸಿದ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಚಂದ್ರಭಾನು ಗುಪ್ತರನ್ನು ಪ್ರಧಾನಿ ನೆಹರು ಪಕ್ಷ ಸಂಘಟನೆಗೆ ಅಯುದ್ದುಕೊಂಡುದು ರಾಜಕೀಯ ಮಹತ್ವ ಪಡೆದಿದೆ. ಶಾಸ್ತ್ರಿಯವರ ರಾಜಿನಾಮೆಯೊಡನೆ ಅವರ ಹಲವಾರು ಅನುಯಾಯಿಗಳೂ ಸಂಪುಟದಿಂದ ಹೊರಬೀಳಲು ಬಯಸಿದುದರಿಂದ, ಈಗ, ಗುಪ್ತರ ಪ್ರತಿಗಾಮಿ ಶಕ್ತಿಗಳೇ ಜಿಲ್ಲಾ ಮಂಡಿ ಅಧಿಕಾರಿ ರೂಢರಾದರೂ ಆಗ ಬಹುದು. ಮೇಲಾಗಿ ಅಖಿಲ ವ್ಯಾಪಕೀಯ ಕಾಂಗ್ರೆಸ್ ಅಧ್ಯಕ್ಷ ಆಜಿತ ಪ್ರಸಾದ ಜೈಸರೊಡನೆ ಗುಪ್ತರು ಹೇಗೆ ಹೊಂದಿಕೊಂಡು ನಡೆಯುವರು ಎಂಬುದು ಎಲ್ಲರ ಕುತೂಹಲ ಕೆರಳಿಸಿದೆ. ಅವರಿಬ್ಬರೂ ಒಂದಾದಲ್ಲಿ ಲಾಲಬಹದ್ದೂರರ ನೆರವಿನಿಂದ ಉತ್ತರ ಪ್ರದೇಶ ಮರಳಿ ಕಾಂಗ್ರೆಸ್ಸಿನ ಭದ್ರ ಕೋಟೆಯಾಗಬಹುದು.

ಎಚ್. ಸಿ. ದಾನಪ್ಪ

ಚಿಂಗಲಂಪೇಟ ರೆಡ್ಡಿಯವರ ನಿರ್ಗಮನದಿಂದ ಕೇಂದ್ರ ಸಂಪುಟದಲ್ಲಿ ಕರ್ನಾಟಕವು ಪ್ರಾತಿನಿಧ್ಯವನ್ನು ಕಳೆದುಕೊಂಡುದು ಕನ್ನಡಿಗರಲ್ಲಿ ತೀವ್ರ ಅಸಮಾಧಾನವನ್ನುಂಟು ಮಾಡಿತ್ತು. ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಈ ವಿಷಯವನ್ನು ಪ್ರಧಾನಿಗಳೊಡನೆ ಪ್ರಸ್ತಾಪಿಸಿದ್ದರು. ಸದ್ಯದಲ್ಲೇ ಕೇಂದ್ರ ಸಚಿವ ಸಂಪುಟವು ಪುನಾರಚನೆಗೊಳ್ಳಲಿದ್ದು, ಆಗ ಕನ್ನಡದ ಎಚ್.ಸಿ.ದಾನಪ್ಪನವರನ್ನು ಸೇರಿಸಿಕೊಳ್ಳುವ ಬಗ್ಗೆ ದಟ್ಟವಾದ ಸುದ್ದಿ ಹರಡಿದೆ. ದಾನಪ್ಪನವರು ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯಗಳಿಂದಾಗಿ ಆಗಾಗಲೇ ಸಂಸತ್ತಿನಲ್ಲಿ ಜನಪಿಯರಾಗಿದ್ದಾರೆ. ಪ್ರಾದೇಶಿಕ ಪ್ರಾತಿನಿಧ್ಯವು ಆವಶ್ಯಕ ಕ್ರಮವೆನ್ನುವಂತಿಲ್ಲವಾದರೂ ಅವಾಸ್ತವವಾಗಲಾರದೆಂಬುದನ್ನು ನಾವು ಮರೆಯುಬಾರದು.

ಬರುವ ವಾರದಿಂದ
'ನವಗಿರಿನಂದ'ರ
ಗೆಜಪತಿ ನಂದಿನಿ
ಐತಿಹಾಸಿಕ ನಾಟಕ
ಮತ್ತು
ಎಸ್. ಎಂ. ಶೆಟ್ಟ ಶಿಮುಂಜೆ ಪರ್ಕಳ
ಇವರ
ಆದರ್ಶ ಚರಿತೆಗಳು
ಧಾರಾವಾಹಿಯಾಗಿ
ಪ್ರಕಟವಾಗಲಿವೆ.

ಸಾಹಿತ್ಯಕ್ಕೊಂದು ವಿಷಯ

ಸಾಮುದಾಯಿಕ ಕಲ್ಯಾಣ

—ಡಾ| ರಾಜೇಂದ್ರ ಪ್ರಸಾದ್

ಕಳೆದ ಅನೇಕ ವರ್ಷಗಳಿಂದ ನಮ್ಮ ದೇಶದ ಸಾಹಿತಿಗಳ ಜೀವನವು ಬಹಳ ಕಷ್ಟ ಮತ್ತು ಹೋರಾಟದಿಂದ ಕೂಡಿದ್ದಾಗಿರುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸಹಜವಾಗಿ ಪರದೇಶದವರು ನಮ್ಮ ದೇಶವನ್ನು ಆಳುತ್ತಿದ್ದಷ್ಟು ಕಾಲ ಸಾಹಿತಿಗಳು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗಿತ್ತು. ಸ್ವಾತಂತ್ರ್ಯವು ದೊರಕಿದ ನಂತರ ಅವರ ಪರಿಸ್ಥಿತಿಯಲ್ಲಿ ಸ್ವಲ್ಪ ಪ್ರಗತಿಯಾಗಿದೆ. ಆದರೆ ಇನ್ನೂ ಉಚ್ಚ ಮಟ್ಟದ ಸಾಹಿತ್ಯನಿರ್ಮಾಣಕ್ಕೆ ಬೇಕಾದ ಎಲ್ಲಾ ಅವಕಾಶಗಳನ್ನು ನಮ್ಮ ದೇಶದಲ್ಲಿ ಇರುವುದಿಲ್ಲ. ನಾವು ಕೆಲವು ವರ್ಷಗಳ ನಂತರ ಎಲ್ಲಾ ನಮ್ಮ ಸಾರ್ವಜನಿಕ ಆಡಳಿತೆಯು ಕೆಲಸವನ್ನು ನಮ್ಮ ದೇಶದ ಭಾಷೆಗಳಲ್ಲಿ ನಡೆಸಬೇಕೆಂದು ನಿರ್ಣಯಿಸಿರುತ್ತೇವೆಯಾದರೂ, ನಮ್ಮ ವಿದ್ಯಾಭಿಜ್ಞರಾಗಲಿ, ವಿದ್ಯಾರ್ಥಿಗಳಾಗಲಿ, ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿದ್ದ ಇಂಗ್ಲೀಷು ಭಾಷೆಯ ವ್ಯಾಮೋಹದಿಂದ ತಮ್ಮನ್ನು ಬಿಡಿಸಿಕೊಳ್ಳಲು ಸಮರ್ಥರಾಗಿರುವುದಿಲ್ಲ. ನಮ್ಮ ವಿದ್ಯಾವಂತರಲ್ಲಿ ಹೆಚ್ಚು ಜನರು ನಮ್ಮ ದೇಶೀಯ ಭಾಷೆಗಳಲ್ಲಿ ಇಂಗ್ಲೀಷು ಭಾಷೆಯಲ್ಲಿರುವಷ್ಟು ಉನ್ನತ ಮಟ್ಟದ ಸಾಹಿತ್ಯವು ಇಲ್ಲ ಮತ್ತು ಬಹುಶಃ ಇಂಥಲಿಕ್ಕೆ ಸಾಧ್ಯವಿಲ್ಲವೆಂಬ ಭಾವನೆಗೆ ಒಳಪಟ್ಟಿರುತ್ತಾರೆಂದು ಕಂಡು ಬರುತ್ತಾರೆ. ಆದ್ದರಿಂದ ಅವರಿಗೆ ತಮ್ಮ ಸ್ವಂತ ಭಾಷೆಗಳ ಸಾಹಿತ್ಯದಲ್ಲಿ ಹೆಚ್ಚಿನ ಅಭಿರುಚಿಯಿರುವುದಿಲ್ಲ ನಮ್ಮ ಸಾಹಿತಿಗಳು ಸಹಿಸಬೇಕಾಗಿರುವ ಅಧಿಕ ಕಷ್ಟಗಳಲ್ಲಿ ಹೆಚ್ಚಿನವುಗಳು ಸ್ವಲ್ಪ ಮಟ್ಟಿಗೆ ನಮ್ಮ ಪ್ರಾಜ್ಞ ವರ್ಗದ ಈ ತರದ ಮನೋಭಾವನೆಯಿಂದ ಬಂದಿವೆಯೆಂದು ನಾನು ನಂಬುತ್ತೇನೆ. ಏಕೆಂದರೆ ಅವರ ಕೃತಿಗಳು ಇತರ ದೇಶದ ಸಾಹಿತಿಗಳ ಕೃತಿಗಳು ಪಡೆಯುವಂತೆ ವಿದ್ಯಾವಂತ ವರ್ಗದಲ್ಲಿ ಮೆಚ್ಚಿಕೆಯನ್ನು ಪಡೆಯುವುದಿಲ್ಲ.

ಇದನ್ನು ನಾನು ಹೇಳುವಾಗ, ನಮ್ಮ ಜನರಿಗೆ ಇತರ ಭಾಷೆಗಳ ಸಾಹಿತ್ಯದಲ್ಲಿ ಅಭಿರುಚಿಯಿರಬಾರದೆಂದು ಸ್ಪಲ್ಪವೂ ಅಭಿಪ್ರಾಯವಿಲ್ಲ. ಪಾಶ್ಚಿಮಾತ್ಯ ಇಂಗ್ಲೀಷು ಬಾಷೆಯು ಜ್ಞಾನವು ಜನರಲ್ಲಿ ಅತ್ಯುನ್ನತ ಮಟ್ಟದ ಸಾಹಿತ್ಯವಿರುವುದರಿಂದ ಅತ್ಯಂತ ಆವಶ್ಯಕವಾದುದೆಂದು. ದೃಢವಾಗಿ ನಂಬಿರುತ್ತೇನೆ. ಎಲ್ಲಾ ಕಾಲಗಳ ಮತ್ತು ಬಹುಶೇಕಗಳ ಸಾಹಿತ್ಯವನ್ನು ಒಬ್ಬನು ಜೀರ್ಣಿಸಿಕೊಳ್ಳದಿದ್ದರೆ ಜೀವನು ಯಶಸ್ವಿಯಾದ ಕಾನ್ಯಕಲೆಯ ಉಪಾಸಕನಾಗಲಿಕ್ಕಿಲ್ಲ. ವಸ್ತುತಃ ಹಾಗೆ ಮಾಡದಿದ್ದರೆ ಯಾರೊಬ್ಬನೂ ಸರಿಯಾದ ವಿದ್ಯಾವಂತನೆಂದು ಎಣಿಸಲ್ಪಡಲಾರನು. ಆದರೆ, ಅದೇ ಸಮಯ, ನಾವು ನಮ್ಮ ಸಾಹಿತ್ಯವನ್ನು ಪೋಷಿಸಲಾಗಿ ಕಲಿತು ಅದರಲ್ಲಿ ಅಭಿರುಚಿಯನ್ನು ಫಲಿಸಿಕೊಳ್ಳದಿದ್ದರೆ ಇತರ ಭಾಷೆಯ ಸಾಹಿತ್ಯದಲ್ಲಿ ಸರಿಯಾದ ಮೆಚ್ಚಿಕೆಯು ನಮಗೆ ಹುಟ್ಟಲಾರದೆಂದು ಒತ್ತಿ ಹೇಳಲು ನಾನು ಬಯಸುತ್ತೇನೆ ಹಾಗೆ ಮಾಡುವುದರಿಂದ ನಮ್ಮ ಬರಹಗಾರರನ್ನು ಹೆಚ್ಚಿನ ಮಟ್ಟಿಗೆ ಅವರ ಆರ್ಥಿಕಯೋಜನೆಗಳಿದ ಮುಕ್ತರನ್ನಾಗಿ ಕೂಡ ನಾವು ಮಾಡಬಲ್ಲವೆಂದು ನಾನು ನಿಶ್ಚಯವುಳ್ಳವನಾಗಿರುತ್ತೇನೆ ನಾನು 'ಹೆಚ್ಚಿನ ಮಟ್ಟಿಗೆ' ಎಂಬ ಮಾತನ್ನು ಉದ್ದೇಶಪೂರ್ವಕ ಹೇಳಿರುತ್ತೇನೆ. ಏಕೆಂದರೆ ಅವರ ಆರ್ಥಿಕ ಅಡಚಣೆಗಳು ಯಾವಾಗಲೂ ಪೂರ್ಣ ಹೋಗಲಾರವು. ನಮ್ಮ ಈಗಿನ ಆರ್ಥಿಕ ಸ್ಥಿತಿಯು ಅನೇಕರು ತಮ್ಮ ಅಖಂಡ್ಯವಾಡಚರಿಗೆ ಒದಗಿಸುವ ಶಾಶ್ವತ ಆನಂದ, ಮುಖ್ಯ ಉಲ್ಲಾಸ, ಗುಣೋತ್ಕರ್ಷ ಮತ್ತು ಉಚ್ಚ ಆದರ್ಶಗಳಿಗೆ ಅನುಗುಣವಾದ ಪುರಸ್ಕಾರವನ್ನು ಪಡೆಯುವುದಕ್ಕೆ ಅವರಿಗೆ ಎಡೆಕೊಡುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಸಮೂಹದ ಹಿತಕ್ಕೆ ಕೆಲವೇ ಕಾರ್ಯಗಳು ನಡೆಸಲ್ಪಡುತ್ತವೆ. ಸಹಜವಾಗಿ ನಾವು ವೈಯಕ್ತಿಕ ಕಲ್ಯಾಣವು ಸ್ವಾರ್ಥಾಸಕ್ತಿಯ ಪೀಡಿಕೆಯಲ್ಲಿ ಬಲಿಕೊಡಲ್ಪಡುತ್ತಿರುವ ಸಂಗತಿಯು ಹೆಚ್ಚಾಗಿ ಸಂಭವಿಸುತ್ತದೆ. ಆದ್ದರಿಂದ ನಮ್ಮ ಬರಹಗಾರರು ಮತ್ತು ಕವಿಗಳ ಕೃತಿಗಳಲ್ಲಿ ಎಲ್ಲಾ ಹಕ್ಕುಗಳನ್ನು ಶ್ರಕಟನಕಾರರು ಪಡೆಯುತ್ತಿರುವುದು ಆಶ್ಚರ್ಯವಲ್ಲ. ಆವರ ಭಾವನೆಗಳಲ್ಲಿ ಅತ್ಯುದ್ದಾತವಾದ ರತ್ನಗಳನ್ನು ಅಗ್ಗವಾದ ಬೆಲೆಗೆ ಸ್ವಾಧೀನಪಡಿಸಿಕೊಳ್ಳುತ್ತಾರೆ. ಹೀಗಾಗಿ ಗ್ರಂಥಕಾರರು ಅವಾಯಕರ ಜೀವನವನ್ನು ನಡೆಸುವಾಗ ಪ್ರಕಟನಕಾರರು ಸುಹತ್ತರವಾದ ಲಾಭವನ್ನು ಗಳಿಸುತ್ತಾರೆ

ಮಾನವ ಸಮಾಜದಿಂದ ಅನ್ಯಾಯ ಮತ್ತು ಶೋಷಣೆಯನ್ನು ಪೂರ್ಣವಾಗಿ ನಿರಸನ ಮಾಡಲು ಸಾಮುದಾಯಿಕ ಕಲ್ಯಾಣಕ್ಕಾಗಿ ಸಹಕಾರ ಕ್ರಮ-ಸರ್ವೋದಯ ಮಾರ್ಗ—ವನ್ನು ಸ್ವೀಕರಿಸುವುದೊಂದೇ ಮಾರ್ಗವೆಂದು ನಾನು ನಂಬುತ್ತೇನೆ. ಸಮುದಾಯ ಮತ್ತು ವ್ಯಕ್ತಿಗಳ ಜೀವನಕ್ಕೆ ಸುಖಶಾಂತಿಗಳನ್ನು ತರುವ ಒಂದೇ ಒಂದು ಮಾರ್ಗವು, ಶ್ರತಿಯೊಬ್ಬ ವ್ಯಕ್ತಿಯೂ ಇತರ ಎಲ್ಲಾ ಮಾನವ ವರ್ಗದ ಜೀವನವು ಸಮಿಮಯವಾಗುವಂತೆ ತನ್ನ ನಡತೆಯನ್ನು ರೂಪಿಸಿಕೊಳ್ಳುವುದೇ, ಆಗಿರುತ್ತದೆ ಎಂದು ನಮ್ಮ ದೇಶವು ಬಹು ಪುರಾತನ ಕಾಲದಿಂದಲೇ ಪ್ರತಿಪಾದಿಸಿರುತ್ತದೆ. ಈ ಕಾರಣದಿಂದಲೇ ಅಹಿಂಸಾ ತತ್ವವು ನಮ್ಮ ದೇಶದಲ್ಲಿ ಅಂತಹ ಒಂದು ಹೆಚ್ಚಾದ ಪ್ರಾಮುಖ್ಯವನ್ನೂ ಅರ್ಥವನ್ನೂ ಪಡೆಯುತೆಂದು ನಾನು ನಂಬುತ್ತೇನೆ. ರಾಷ್ಟ್ರಪಿತರಾದ ಮಹಾತ್ಮಾ ಗಾಂಧಿಯವರು ಈ ಆದರ್ಶವನ್ನು ನಮ್ಮ ಮುಂದಿಟ್ಟು ಜನರಲ್ಲಿ ಹೊಸ ಜೀವನ, ಹುರುಪು ಮತ್ತು ರಚನಾತ್ಮಕ ಶಕ್ತಿಯನ್ನು ತುಂಬಲು ಶಕ್ತರಾದರು. ನೀವು ರಚನಾತ್ಮಕ ಕಾರ್ಯ ಮತ್ತು ಸಹಕಾರಕ ಯತ್ನಗಳ ತತ್ವಕ್ಕೆ ನಿಷ್ಠಾವಂತರೂ ಪ್ರಾಮಾಣಿಕರೂ ಆಗಿದ್ದರೆ ಪ.ನಾರಾಚಣಿಯು ಕೆಲಸದಲ್ಲಿ ಹೆಚ್ಚಿನ ಶಕ್ತಿ ಸಂಪನ್ನರಾಗಿ ಜಯಶಾಲಿಗಳಾಗುವಿರಿ ಎಂಬುದು ನನ್ನ ವೈಯಕ್ತಿಕವಾದ ನಂಬಿಕೆಯಾಗಿದೆ. ಸರ್ವಶಕ್ತನಾದ ಸರಮೇಶ್ವರನು ನಿಮಗೆ ಆ ರಚನಾತ್ಮಕ ಆಂತರ್ಜ್ಯೋತಿಯನ್ನು ಕೊಟ್ಟಿರುತ್ತಾನೆ. ಆ ಗುಣದಿಂದ ನೀವು ನಿಮ್ಮ್ಯ ಸಹವಾಸಿ ಪ್ರಾಣಿಗಳ ಸಮಸ್ಯೆಗಳು ಮತ್ತು ಭಾವನೆಗಳನ್ನು ಸ್ಪಷ್ಟವಾದ ಮತ್ತು ಜೀವಂತವಾದ ಮಾತುಗಳಲ್ಲಿ ಪ್ರಕಟಗೊಳಿಸಲು ಶಕ್ತರಾಗಿರುತ್ತೀರಿ. ನೀವು ಅವರನ್ನು ಎದುರಿಸುವ ಸಮಸ್ಯೆಗಳ ಪರಿಹಾರಕ್ಕೆ ನೂಡಬೇಕಾದ ಹೋರಾಟಕ್ಕೆ ಸೇರುವಲ್ಲಿ ದೃಢ ನಿರ್ಧಾರ ಮತ್ತು ಕಾರ್ಯಾಸಕ್ತಿಯನ್ನು ಹುಟ್ಟಿಸಿ ಅವರಲ್ಲಿ ಹುರಿದುಂಬಿಸಬಲ್ಲಿರಿ. ಇವತ್ತು ನಮ್ಮ ದೇಶದ ಮಿಲಿಯಗಂತರ ಜನರು ನಿರಾಶೆ ಮತ್ತು ಕಡು ಬಡತನದಿಂದ ಪೀಡಿತರಾಗಿರುತ್ತಾರೆ. ಅವರ ದುಃಖಿತ ಜೀವನಕ್ಕೆ ಹೊಸ ಆಶೆಯನ್ನು ಹುಟ್ಟಿಸಲು ನಾವು ಅಶಕ್ತರಾದರೆ ನಮ್ಮ ಸ್ವಾತಂತ್ರ್ಯವು ಅರ್ಥವಿಲ್ಲದ್ದಾಗುವುದು. ನಮ್ಮಲ್ಲಿ ರಾಜನೀತಿಜ್ಞರಾದವರು ರಾಜಕೀಯ ಸಾಧನಗಳಿಂದ ಆವರ ಪರಿಸ್ಥಿತಿಯನ್ನು ಸುಧಾರಿಸಲು ಯತ್ನಿಸುತ್ತಿದ್ದಾರೆ. ಜನರ ಮನಸ್ಸಿನಲ್ಲಿ ಭರವಸೆ, ಶಕ್ತಿ ಮತ್ತು ನಿಷ್ಠೆಗಳನ್ನು ಜಾಗೃತಗೊಳಿಸುವುದು ರಾಜನೀತಿಜ್ಞರ ಅಧಿಕಾರ ಇಂಜಿನಿಯರುಗಳ ಶಕ್ತಿಗೆ ಒಳಗಾಗಿರುವುದಿಲ್ಲ ಆದು ಕವಿಗಳು ಮತ್ತು ಬರಹಗಾರರಿಂದಲೇ ಆಗಬೇಕಾಗಿದೆ. ಆದರೆ ಸಾಹಿತ್ಯವು ಪ್ರೇಮಗೀತೆಯೊಗುವ ಬದಲು ರಚನಾತ್ಮಕ ಮಾತ್ಸರ್ಯಾರ್ತಿಯದ್ದಾಗಿರಬೇಕೆಂಬುದು ಅತ್ಯಂತ ಅವಶ್ಯಕವಾಗಿದೆ. ಅದು ಕೇವಲ ಆನಂದಾನುಭವವಾಗಿರುವುದಕ್ಕಿಂತಲೂ ಹೆಚ್ಚಾಗಿ ರಚನಾತ್ಮಕ ಕಾರ್ಯಗಳ ಸಾಧನವಾಗಿರಬೇಕು. ನಮ್ಮ್ಯ ಅನೇಕ ಸಾಹಿತಿಗಳು ಸ್ವಾತಂತ್ರ್ಯದ ಹೋರಾಟಕ್ಕೆ ಮಹತ್ತರವಾದ ಸಹಾಯವನ್ನು ಮಾಡಿರುತ್ತಾರೆ. ಅವರು ತಮ್ಮ್ಯ ಕೃತಿಗಳಿಂದ ಜನರ ಮನಸ್ಸನ್ನು ಅನಿವಾರ್ಯವಾದ ಸ್ವಾತಂತ್ರ್ಯಕಾಂಕ್ಷೆಯಿಂದ ಉರಿಸಿದ್ದಾರೆ.

ಇವತ್ತು ನಮಗೆ ಒಂದು ಬೇರೆ ವಿಧದ ಸಾಹಿತ್ಯವು ಬೇಕಾಗಿದೆ. ಜನರು ಸಾರ್ವಜನಿಕ ಪ್ರಯತ್ನಗಳ ಆವಶ್ಯಕತೆಯನ್ನು ಮನಗಾಣುವಂತೆ ಮಾಡುವ ಸಾಹಿತ್ಯವು ಅಗತ್ಯವಾಗಿದೆ ಈಗ ನಮ್ಮಲ್ಲಿರುವ ಹೆಚ್ಚಿನ ಉದಾಸೀನತೆ ಅಧವಾ ಜಾಡ್ಯವು ನಮ್ಮ ಆಧುನಿಕ ಸಾಹಿತ್ಯವಲ್ಲಿ ಆ ಉಚ್ಚಮ್ಯೆಯದ ಶ್ರತಿಧ್ವನಿಸುವುದನ್ನು ನಾವು ಕೇಳದಿರುವುದರಿಂದಲೇ ಬಂದಿರುತ್ತದೆಯೆಂದು ನಾನು ನಂಬುತ್ತೇನೆ. ಸ್ವಾತಂತ್ರ್ಯವನ್ನು ಪಡೆಯುವುದು, ನಮ್ಮ್ಯ ಈಗಿನ ಕೆಲಸದಂತೆ ಅಷ್ಟು ಕಷ್ಟವಾಗಿರಲಿಲ್ಲವೆಂಬುದು ನನ್ನ ನಂಬಿಕೆಯಾಗಿದೆ. ಆ ಸಮಯದಲ್ಲಿ ಅಲ್ಪ ಸಂಖ್ಯಾಕರಾದ ಪರದೇಶೀಯರ ಕೈಯಿಂದ ರಾಜಕೀಯ ಶಕ್ತಿ ಮತ್ತು ಸಾರ್ವಭೌಮತ್ವವನ್ನು ನಿರ್ಮೂಲಸುವುದು ಮಾತ್ರ ನಮ್ಮ ಸಮ್ಯೆಯಾಗಿತ್ತು. ಇವತ್ತು ರುಪೂರು ಮಿಲಿಯಗಂತರ ಜನರಿಗೆ ಆದಾರ, ಮನೆ ಮತ್ತು ವಿದ್ಯಾಭ್ಯಾಸಗಳನ್ನು ಒದಗಿಸುವ ಅತಿ ದೊಡ್ಡ ಕೆಲಸವು ನಮ್ಮ ಎದುರಿಸಲ್ಲಿರುತ್ತದೆ. ಈ ಉದ್ದೇಶಕ್ಕೆ ನಾವು ನಮ್ಮ್ಯ ಉತ್ಪಾದಕ ಶಕ್ತಿಯನ್ನು ವಿಸ್ತರಿಸಬೇಕಾಗಿದೆ. ಅದು ನಮ್ಮ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ಕಾರ್ಯ ಸರಕಾರವನ್ನು ಹೊಂದುತ್ತಿರುವುದನ್ನು ನಿಲ್ಲಿಸಿದಾಗ ಮಾತ್ರ ಸಾಧ್ಯವಾಗಬಲ್ಲದು. ಪ್ರತಿಯೊಬ್ಬನೂ ತಯಾರಾಗಿ, ಉತ್ಪಾದಕ, ನಿರ್ಮಾಪಕ ಮತ್ತು ವಿಧಾಯಕ ಕಾರ್ಯ ಪ್ರವೃತ್ತಿಗಳಿಗೆ ತನ್ನನ್ನು ಅರ್ಪಿಸಬೇಕು. ಸಾಹಿತ್ಯೋವಾಸಕರು ಈ ಧ್ಯೇಯದ ಪೂರಯಿಕೆಗೆ ಬಹು ಮುಖ್ಯವಾದ ಸಹಾಯವನ್ನು ಮಾಡಬಲ್ಲರು. ಅವರ ಹಾಗೆ ನಿಷ್ಠೆಯವಾಗಿಯೂ ಮಾಡುವರೆಂದು ನಾನು ಆಶಿಸುತ್ತೇನೆ.

ಕೆಲವು ಜನರಿದ್ದಾರೆ. ಅವರು ಒಂದು ಸಾಹಿತ್ಯಕ್ಕೆ ಪ್ರಗತಿಶೀಲವೆಂಬ ಹೆಸರಿನ ಪಟ್ಟಿ ಹಚ್ಚುತ್ತಾರೆ. ಅದು ಸಮೂಹದಲ್ಲಿ ಗುಂಪುಗಾರಿಕೆಯ ಹೋರಾಟವನ್ನು ತರ್ಜಿಸುತ್ತದೆ. ಶೋಷಿತ ವರ್ಗದವರೆನ್ನುವವರನ್ನು ಶೋಷಕರಿಗೆ ವಿರುದ್ಧವಾಗಿ ಎದ್ದು ನಿಲ್ಲುವಂತೆ ಪ್ರೇರಿಸುತ್ತದೆ. ಮಹಾತ್ಮಾ ಗಾಂಧಿಯವರ ಮುಂದಾಳ್ತನದಲ್ಲಿ ಭಾರತವು ಸಾರ್ವಜನಿಕ ಶೋಷಣೆಯನ್ನು ನಿರ್ಮೂಲಿಸುವುದಕ್ಕೆ ಒಂದು ಹೊಸ ಮಾರ್ಗವನ್ನು ಕಂಡು ಹಿಡಿದಿದೆ. ನಮ್ಮ ದೇಶದಲ್ಲಿ ಸಾರ್ವಜನಿಕ ಮತ್ತು ರಾಜಕೀಯ ಅಧಿಕಾರದ ಸೂತ್ರವನ್ನು ಕೈಗೊಂಡಿರುವವರ ಧ್ಯೇಯವು ಎಲ್ಲಾ ಶೋಷಣೆಯಿಂದ ವಿಮುಕ್ತವಾದ ಪರಿವರ್ತಿತ ಸಮಾಜವನ್ನು ಸ್ಥಾಪಿಸುವುದೇ ಆಗಿರುತ್ತದೆ ನಾವು ನಮ್ಮ ಅಹಿಂಸಾತ್ಮಕ ಕ್ರಿಯೆಯಿಂದ ಜಗತ್ತಿನಲ್ಲೇ ದೊಡ್ಡ ರಕ್ತಮತರಾದ ಜನರಿಂದ ನಮ್ಮ ಸ್ವಾತಂತ್ರ್ಯವನ್ನು ಎಳೆದುಕೊಳ್ಳಲು ಶಕ್ತರಾದೆವು. ಪರ್ವಗಳು ಹೋರಾಟಗಳಿಗೆ ಹಿಂಸಾ ರೂಪವನ್ನು ಕೊಡದೆ ಹೊಸ ಸಮಾಜವನ್ನು ನಿರ್ಮಿಸುವುದು ನಮಗೆ ಇನ್ನೂ ಸುಲಭವಾಗಬೇಕು. ಈ ವಿಷಯದಲ್ಲಿ ವಿದ್ಯಾವಂತ ಬರಹಗಾರರು ಅತ್ಯಂತ ಸಹಾಯಕರಾಗಬಲ್ಲರು. ನಮ್ಮ ಎಲ್ಲಾ ಸಾಹಿತ್ಯವು ನಿರ್ಮಾಪಕ ಮತ್ತು ರಚನಾತ್ಮಕ ಕಾರ್ಯಗಳಿಂದ ಪ್ರತಿಧ್ವನಿಸಬೇಕಾದುದು ನಮ್ಮ ದೇಶಕ್ಕೆ ಅಪೇಕ್ಷಣೀಯವಾಗಿದೆ.

ಅನು:—ಕೆ. ನಾರಾಯಣ ಆಚಾರ್
ಶಿರೋಮಣಿ, ವಿದ್ವಾನ್

ಉಡ್ಡಿ ಡಿ ಮು ಕೋರ್ಟಿನಲ್ಲಿ

S. C. 116/63.

ನೀಲು ಪೂಜಾರ್ತಿ—ನಾದಿ

ಮತ್ತು

ಪಿ ವಿ. ಅಬ್ದುಲ್‌ಖಾದರ್ ಕೂಪಾ—ಪ್ರತಿವಾದಿರು.

2ನೇ ಪ್ರತಿವಾದಿ:. ಉಡ್ಡಿ ತಾಲೂಕು ಉದ್ಯಾವರ ಗ್ರಾಮದಲ್ಲಿರುವ ಅಲ್ಬು ಪೂಜಾರ್ತಿ ಮಗ ತುಕ್ರ ಪೂಜಾರಿಗೆ—

ನಾದಿಳು ದಾವಾ ಕಟ್ಟಡದ ಬಾಬ್ತು ನಾದಿಗೆ ಬಾಕಿ ವಸೂಲಿಗೆ ಕೇಳಿ ದಾಕ್ಲು ಮೂದಿದ ಮೇಲ್ಕಂಡ ದಾವೆಯು ತಾರೀಕು 16-9-63ಕ್ಕೆ ಕನ್ಸಿಗೆ ಯಿಟ್ಟಿದೆ. ನಾವು ಉಪಾಧರಹೆಯಿದ್ದ ಪಕ್ಷದಲ್ಲಿ ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಉತ್ತರವನ್ನು ತಪ್ಪದ್ದಲ್ಲಿ ನಾವು ಗೈರ್ ಹಾಜರ್ತಿ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲ್ಪಡುವುದು.

Sd V. G. Kedlaya,
M.A.,LL.B.,
Advocate, Udipi.

ಉಡ್ಡಿ
22—9—63.

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಪಾಠಪುಸ್ತಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

ಹನಿಗತೆ

ಉಚ್ಚ ಮತ್ತು ನೀಚ

ಭೂಮೂತೆಯ ಗರ್ಭದಲ್ಲಿ ಎರಡು ಕಲ್ಲುಗಳು ಆಡಗಿದ್ದವು.

ಒಂಗು ಬಲು ಬಿರುಸು ಇತ್ತು. ಅದು ನಕ್ಷತ್ರದಂತೆ ಮಿಂಚುತ್ತಿತ್ತು. ಎರಡನೆಯದು ಕೋಮಲವಿತ್ತು. ಮತ್ತು ತನ್ನ ತಾಯಿ ನೆಲದಂತೆಯೇ ಕಪ್ಪು ಬಣ್ಣದಿತ್ತು. ಆವೆರಡೂ ದೊಡ್ಡವಾಗುತ್ತಲೇ ತಾಯಿಯ ಹತ್ತಿರ ಹೇಳಿದವು. "ಈಗ ನಾವು ನಮ್ಮ ಭಾಗ್ಯವನ್ನು ಕಂಡುಕೊಳ್ಳಲು ಮತ್ತು ನಮ್ಮ ಜೀವನದ ಗುರಿಯನ್ನು ಸಾಧಿಸಲು ಹೋಗುತ್ತೇವೆ" ಎಂದು.

ಅವರ ತಾಯಿ ಸಮ್ಮತಿ ಕೊಟ್ಟಳು. ಅವಳೂ ವಿಚಾರ ಮಾಡಿದಳು "ತಾಯಿ ಎಷ್ಟು ಕಾಲ ಮಕ್ಕಳನ್ನು ತನ್ನ ಕಣ್ಣಿದುರಿನಲ್ಲಿ ಇಟ್ಟುಕೊಳ್ಳಲು ಸಾಧ್ಯವಿದೆ?" ಎಂದು.

ತೇಜೋಮಯವಾದ ಕಲ್ಲಿನ ಜೀವನ ಉದ್ದೇಶವು ಚಕ್ರವರ್ತಿಗಳ ಕಿರೀಟವನ್ನು ಅಲಂಕರಿಸುವದು ಮತ್ತು ಸುಂದರ ಸ್ತ್ರೀಯರ ಕೂರಲನ್ನು ಇನ್ನಷ್ಟು ಸುಂದರವಾಗಿ ಮಾಡುವುದೂ ಆಗಿತ್ತು.

ಕಪ್ಪು ಕಲ್ಲಿಗೆ ಅನಿಸಿತು—"ಮಂದಿರ, ಕೀರ್ತಿ ಸ್ತಂಭ, ಅರಮನೆ ಹಾಗೂ ಇತರ ಇಮಾರತುಗಳನ್ನು ಕಟ್ಟಲಿಕ್ಕೆ ಸಹಾಯ ಮಾಡುವದೇ ನನ್ನ ಕೆಲಸ" ಎಂದು

ಬಿಳೀ ಕಲ್ಲಿಗೆ ದೃಢತಾಪೂರ್ಣ ಡಂಬದ ರಾಜಸೀವೃತ್ತಿಗಳು ಬಂದವು. ಅದು ಶೃಂಗಾರ ಮೊಳಪುಗಳಲ್ಲಿ ಅಭಿನೂತನಪಡುತ್ತಿತ್ತು. ಪರಿಶ್ರಮವನ್ನು ತಿರಸ್ಕರಿಸುತ್ತಿತ್ತು.

ಸರ್ವಸಾಮಾನ್ಯ ಮನುಷ್ಯನಂತೆ ಕಪ್ಪು ಕಲ್ಲು ಹೆಚ್ಚಿಚ್ಚು ದುಡಿಯುವ ಅಭ್ಯಾಸ ಮಾಡಿತು. ಅದು ವೈರಾಗ್ಯ, ಸಹನಾ ಶೀಲತೆ ಹಾಗೂ ಸಂತುಷ್ಟಿಯನ್ನು ಹೊಂದಿಕೊಂಡು ಹೋಗುವ ಸ್ವಭಾವ ದ್ದಾಯಿತ.

ಕೆಲವು ಕಾಲ ಗತಿಸಿತು. ಅಷ್ಟು ಕಾಲ ಬಿಳೀ ಕಲ್ಲು ರಾಜಸೀ ಶೃಂಗಾರದಲ್ಲಿ ಆನಂದದಲ್ಲಿ ಕಳೆಯಿತು ಆದರೆ ಆ ಬಡ ಕಪ್ಪು ಕಲ್ಲು ನಮ್ರತೆಯಿಂದ ತಿರಸ್ಕಾರಗಳನ್ನು ಸಹಿಸುತ್ತ ಉಳಿಯಿತು.

ಆನಂತರ ಮುಂದೆ ಕಾಲ ಚಕ್ರವು ಬದಲಾಯಿತು.

ಒಬ್ಬ ಮೂರ್ತಿಕಾರನು ಮಂದಿರದಲ್ಲೊಂದು ಶಿವಲಿಂಗವನ್ನು ತಯಾರಿಸಲಿಕ್ಕೆ ಆ ಕರಿ ಕಲ್ಲಿನನ್ನು ಆರಿಸಿಕೊಂಡನು

ಮತ್ತು ಆ ಬಿಳೀ ಕಲ್ಲು ಆ ಮೂರ್ತಿಯ ಪೀಠವಾಯಿತು.

ಭಕ್ತ ಜನರು ದೇವರ ಲಿಂಗದ ಮೇಲೆ ನಿಷ್ಠಾಪೂರ್ವಕ ಅಭಿಷೇಕ ಪಷ್ಪಾಹಾರವನ್ನು ಅರ್ಪಿಸುತ್ತಿದ್ದರು. ಮತ್ತು ಕೆಲವೇ ಬಾಡಿದ ಹೂಗಳು ಆ ಬಿಳೀ ಕಲ್ಲಿಗೆ ಒಮ್ಮೊಮ್ಮೆ ಸಿಗುತ್ತಿದ್ದವು

ಆ ಪವಿತ್ರ ಮೂರ್ತಿಯು ಉನ್ನತಭಕ್ತ ಕರಕಷ್ಟನಿಂದ ಕೆತ್ತಿ ತಯಾರಿಸಿದ್ದಾಗಿದೆ. ಮತ್ತು ಉಪಯುಕ್ತವಲ್ಲದ ಬಿಳಿಯ ಕಲ್ಲು ನಿಷ್ಪ್ರಯೋಜಕ ಪೀಠಮಾತ್ರವಾಗಿದೆ ಎಂಬ ಸದ್ದಿ ಹಬ್ಬಿತು.

ರಾತ್ರಿಯಾಗಿತ್ತು. ಎಲ್ಲ ಭಕ್ತರು ಮಂದಿರದೊಳಗಿಂದ ಹೊರಟು ಹೋಗಿದ್ದರು. ಒಮ್ಮೊಮ್ಮೆ ಬಾವಲಕ್ಕಿಗಳ ಪಟ ಪಟ ಧ್ವನಿ ಮತ್ತು ಗೂಗೆಗಳ ಶೀಳು ದನಿ ಕೇಳುತ್ತಿತ್ತು. ಆಗ ಕಪ್ಪು ಕಲ್ಲು ತನ್ನ ಜೊತೆಯ ಬಿಳೀ ಕಲ್ಲಿಗೆ ಹೇಳತು—ನಿನಗೆ ಹೆಚ್ಚಿನ ಕಷ್ಟವಾಗುತ್ತಿರಲಿಕ್ಕಿಲ್ಲವೆಂದು ನಾನು ತಿಳಿಯುತ್ತೇನೆ. ನಾನು ನಿನ್ನನ್ನ ಮೆಟ್ಟಿ ನಿಂತಿದ್ದೇನೆ.

ನಮ್ರವಾಗಿ ಹೋಗಿದ್ದ ಬಿಳಿಯ ಕಲ್ಲು ಏನೊಂದೂ ಉತ್ತರವನ್ನೇ ಕೊಡಲಿಲ್ಲ, ಕೆಸ್ಸ ಕಾಲ ಮುಗಿಯಿತು. ಹಿಂದಿನ ಪದ್ಧತಿ ಬದಲಾಯಿತು. ಕಾಲ ಚಕ್ರವು ಹೊಸ ದೇವತೆಗಳನ್ನು ನಿರ್ಮಿಸಿದೆ ಮತ್ತು ಹಳೆಯ ದೇವತೆಗಳನ್ನು ಕಿತ್ತೊಗೆದಿದೆ ಎಂಬುದು ಅದಕ್ಕೆ ತಿಳಿದು ಹೋಗಿತ್ತು.

ಚೈನಿ-ಝುಕ್ ಜಟಾಪಟಿ

(ಅನೀ ಪುಟದಿಂದ)

ತ್ತು. ಆ ಪ್ರತಿಭಟನಾ ಪತ್ರದ ಪೂರ್ತಿ ವಾರ ದೊರಕವದಿಲ್ಲ.

೧೯೬೩ ಜನವರಿ ಐದರಂದು ಝುಕ್ ಸರಕಾರವು ಚೈನಿ ದೂತನಿವಾಸಕ್ಕೆ ಸತ್ರ ಮೂಲಕ ಆದರ ದೂರನಿತ್ತ ಕಿವಿಗೊಡುವದಕ್ಕೇನೂ ಇಲ್ಲವೆಂದೂ, ಪ್ರತಿಭಟನಾ ಪತ್ರವು ರಾಜನೀತಿ ಮಟ್ಟಕ್ಕಿಂತ ದೂರವಾಗಿದೆಯೆಂದೂ, ಮಂತ್ರಿ-ಗೌರವಗಳ ಗಂಧಗಾಳಿಯೂ ಸೋಂಕಿರದಿರುವದರಿಂದ ಅನು ಸೃಷ್ಟಿಸಲ್ಪಟ್ಟಿದೆಯೆಂದೂ ತಿಳಿಸಿತು. ಇದಾದ ಕೆಲವೇ ದಿನಗಳಲ್ಲಿ ಝುಕ್ ಸರಕಾರವು ಚೈನಿ ದೂತನಿವಾಸಕ್ಕೆ ಒಂದು ಪತ್ರವನ್ನು ಕಳುಹಿಸಿತು- ಚೈನಾದಿಂದ ಝುಕ್ ಪ್ರಜೆಯೊಬ್ಬನನ್ನು ಇಷ್ಟರ ವರೆಗೆ ಹಿಂತಿರುಗಲು ಚೈನಾವು ಬಿಟ್ಟರುವದಿಲ್ಲವೆಂದೂ, ಅಲ್ಲದೆ, ಅವರನ್ನು ಅಪರಿಚಿತ ಸ್ಥಳಕ್ಕೆ ರವಾನಿಸಲಾಗುತ್ತಿದೆಯೆಂದೂ ಆ ಸತ್ರದ ಮೂಲಕ ತಿಳಿಸಲಾಯಿತು. ಆಲ್ಲದೆ ತನ್ನ ಪ್ರಜೆಗಳ ಹಿತರಕ್ಷಣೆಯನ್ನು ತಿಳಿದುಕೊಳ್ಳುವ ಹಕ್ಕನ್ನು ಕಾದಿರಿಸಿಕೊಳ್ಳಲಾಗಿದೆಯೆಂದೂ, ಅದ ಕ್ಕೆ ತಕ್ಕುದಾದ ಕ್ರಮ ತೆಗೆದುಕೊಳ್ಳಲಾಗುವದೆಂದೂ ಸ್ಪಷ್ಟಪಡಿಸಿತು.

ಹೊಂಗ್‌ಕಾಂಗಿನಲ್ಲಿರುವ ಕಮ್ಯೂನಿಸ್ಟ್ ರಾಜನೀತಿ ರಂಗಮಂಟಪದ ಪ್ರೇಕ್ಷಕರು, ಝುಕ್ ಸರಕಾರ ತೆಗೆದುಕೊಳ್ಳುವ 'ಕ್ರಮ' ಯಾವದೆಂದರೆ ಚೈನಾದಲ್ಲಿರುವ ಝುಕರನ್ನು ಹಿಂತಿರುಗಿಸದಿದ್ದಲ್ಲಿ ಝುಕ ಸ್ಲೊವೆಕಿಯಾದಲ್ಲಿರುವ ಚೈನಿಯರನ್ನು ಅವರು ಹಿಂತಿರುಗಿಸದೆ ಬಂಧನದಲ್ಲಿಡುತ್ತಾರೆಂಬುದೇ ಇದೆ. ಆದರೆ ಎಚ್ಚರಿಕೆಯನ್ನೇ ಅವರಿಗೆ ಕೊಟ್ಟರುವರೆಂದು ಪ್ರೇಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿರುವರು. ಚೈನಿಯರು ಝುಕ್ ಪ್ರಜೆಗಳನ್ನು ಸಾಮಾನ್ಯಿಯ ಅಮಿನೆ ಭದ್ರತೆ ಅಥವಾ ವಿನೆಯನ್ನಾಗಿಟ್ಟು ಕೊಂಡಿರುವದರಿಂದ ಮುಂದಿನ ವ್ಯವಹಾರವು ಪೂರ್ಣ ಸ್ಥಬ್ಧವಾಗಬಹುದೆಂಬುದನ್ನು ನಿರೀಕ್ಷಿಸಬಹುದು.

ಸಾಕ್ಷ್ಯಸಾರಾಂಶ ಟಪ್ಪಣಿಗಳೇನೂ ದೊರಕುವದಿಲ್ಲವಾದರೂ ಹೊಂಗ್‌ಕಾಂಗಿಗೆ ಬರುತ್ತಿರುವ ಸುದ್ದಿಯ ಪ್ರಕಾರ ಪರಿಸ್ಥಿತಿ ಕ್ರಮಶಃ ಹದಗಡುತ್ತಿದೆನ್ನಬಹುದು ಇತ್ತೀಚೆಗೆ ಬರ್ಲಿನಿನಲ್ಲಿ, ಪೂರ್ವ ಜರ್ಮನಿ ಕಮ್ಯೂನಿಸ್ಟ್ ಪಕ್ಷದ ಮಹಾ ಸಭೆಯಲ್ಲಿ ಚೈನಾವು ವಿರೋಧ್ಯ ಕಮ್ಯೂನಿಸ್ಟರ ಮೇಲೆ ಕೆಂಡ ಕಾರಿರುತ್ತಾರೆ. ಇದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿರುತ್ತದೆ.

ಕೂಲಿನಾರವರ ಈ ಲೇಖನದಿಂದ ಪಾಕಿನ್ತಾನಿಗಳು ಕಜ್ಜೆರಿದು ಪಶ್ಚಾತ್ತಾಪಪಡದಿದ್ದಲ್ಲಿ ಅವರ ಪಾಪದ ಕೊಡ ತುಂಬಿದೆ ಎನ್ನಬಹುದು. ತನ್ನ ತಲೆಯ ಮೇಲೆಯೇ ಕೈಯನ್ನಿಟ್ಟುಕೊಂಡ ಭಸ್ಮಾಸುರನ ಅವಸ್ಥೆಯೇ ಅವರಿಗಾಗುತ್ತದೆಂಬುದರಲ್ಲಿ ಸಂದೇಹವಿಲ್ಲ.

ಕಮ್ಯೂನಿಸ್ಟರಿಗೆನೇ ಆದೂ, ಮೊನ್ನೆಯ ವರೆಗೆ ತಮ್ಮ ಸರ್ವ ವಿಧದಲ್ಲಿ ಸಹಾಯ ಹಸ್ತ ಸಲ್ಲಿಸುತ್ತ ಬಂದಿರುವ ಕಮ್ಯೂನಿಸ್ಟರಿಗೆನೇ ಕಾಟೆ ಕೊಡುತ್ತಿರುವ ಚೈನಿ ಕಮ್ಯೂನಿಸ್ಟರು ಕಮ್ಯೂನಿಸಂ ವಿರೋಧಿ ಇಸ್ಲಾಂಮತಾನುಯಾಯಿಗಳಿಗೆ ಕೃಪೆ ತೋರಿಸುತ್ತಾರೆನ್ನು ಇದನ್ನು ಭಾರತದಲ್ಲಿರುವ ಮುಸಲ್ಮಾನರೂ ಯೋಚಿಸಿಕೊಳ್ಳಬೇಕು.

ಚೈನಾವು ಆಲ್ಲಿರುವ ಭಾರತೀಯರಿಗೆ, ಮುಸಲ್ಮಾನರಿಗೆ ಹಾಗೂ ಇತರ ಮತಾನುಯಾಯಿಗಳಿಗೆ ಮೂಕ್ಯ ಉಪದ್ರ ಕೊಡುತ್ತಿರುವದಲ್ಲವೆ ಸ್ವತಃ ಕಮ್ಯೂನಿಸ್ಟರಿಗೂ ಎರಡು ಬಗೆಯಾದ್ದಾರಿಂಬುದಕ್ಕೆ ಕೂಲಿನರ ಲೇಖನ ಒಂದು ಉತ್ತಮ ಉದಾಹರಣೆ.

—ಶಿವಶಂಕರ

ಅಮೃತ ಬಿಂದು

ವಿಪರೀತ ಜ್ಞಾನ ಹುಚ್ಚು ಹಿಡಿಸಬಹುದು. ಅಲ್ಪ ಜ್ಞಾನವ ಅವಾಂತರಕ್ಕೆಡೆ ಮಾಡಬಹುದು. ಜ್ಞಾನವೂ ಸಂಯಮದ ಕಡಿವಾಣದಲ್ಲಿ ಹಿಡಿತಮಿತವಾಗಿರಬೇಕು.

೦ ೦ ೦

ತಿಳದುಕೊಳ್ಳಬೇಕೆಂಬ ಬಯಕೆ ಮನುಷ್ಯನಿಗಿದೆಯೇನೋ ನಿಜ. ಆದರೆ ಅತನು ತಿಳಿಯಲು ಬಯಸುವುದು. ಅರ್ಧ ಕುತೂಹಲಕ್ಕಾಗಿ, ಮತ್ತರ್ಧ ತೋರಿಕೆಗಾಗಿ.

೦ ೦ ೦

ಜ್ಞಾನ-ಒಳಹೋಗಿನ ಸಾಕಷ್ಟು ಗಡಿಯಾರದಂತಿರಬೇಕು. ಸಮಯ ತಿಳಿದುಕೊಳ್ಳಲು ಅದನ್ನು ಹೊರಗೆ ತೆಗೆಯಬೇಕೇ ವಿನಾ ತನಗೆ ವಾಚಿದೆಯೆಂದು ತೋರಿಸಲು ತೆಗೆಯಬಾರದು.

೦ ೦ ೦

ನಿರ್ಬಲರು ಅದೃಷ್ಟವನ್ನು ನಂಬುತ್ತಾರೆ. ಸಬಲರು ಕಾರ್ಯಕಾರಣಗಳನ್ನು ವಿವೇಚಿಸುತ್ತಾರೆ.

೦ ೦ ೦

ನೂರು ತಿಳಿಗೇಡಿಗಳು ಸೇರಿದರೂ ಒಬ್ಬ ಜಾಣನಾಗುವುದಿಲ್ಲ. ಸಾವಿರ ಅಂಜುಬುರುಕರು ಒದ್ದಾಡಿದರೂ ಒಂದು ಧೈರ್ಯಪೂರಿತ ನಿರ್ಣಯವಾಗುವದಿಲ್ಲ. ಬುದ್ಧಿಯಿಲ್ಲದ ಬಹುಮತವಿದ್ದರೂ ಸತ್ಯದ ನೆಲೆ ದೊರೆಯುವದಿಲ್ಲ.

೦ ೦ ೦

ಮನುಷ್ಯನೂ ವ್ಯಾಧಿಯೆ, ವ್ಯಾಧಿಯು ಪ್ರೇಕ್ಷಾರ್ಯ, ಕುಟಿಲತೆ ಅವನಲ್ಲಿದೆ, ಆ ನನಿಗೂ ವ್ಯಾಧಿಗಳಿಗೂ ಇರುವ ಬೇಧ ವೆಂದರೆ ಆತ ನಗುತ್ತಾನೆ, ವ್ಯಾಧಿಗಳಂತೆ ಬಗ್ಗದೆ ನೆಟ್ಟಗೆ ನಡೆಯುತ್ತಾನೆ.

೦ ೦ ೦

ಮಾದವೆಗೆ ಮೊದಲು ಕಣ್ಣು ವತ್ತು ಕಿವಿಗಳು ಆಗಲವಾಗಿ ತೆರೆದಿರಬೇಕು ಮದುವೆಯ ನಂತರ ಅರ್ಧ ಮುಚ್ಚಿರಬೇಕು.

ವಿದ್ಯಾರ್ಥಿಗಳ 2 ಕೈಪಿಡಿಗಳು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0-25 NP ಸೇರಿಸಿ ಮನಿಆರ್ಡರು ಪೂಡಿವರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಿನಲ್ಲಿ ಶ್ರೀನಿವಾಸ್ ಬುಕ್ಸ್ ಸ್ಟಾಲ್ ಬುಕ್ ಕೊ., ಕೆನರಾ ಕಾಲೇಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ ಪಬ್ಲಿಸಿಟಿ ಸರ್ವಿಸ್ ಇವರಲ್ಲಿಯೂ, ಪುತ್ತೂರಿನಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಸಂಯುಕ್ತ ಅರಬ ಸಂಸ್ಥಾನಗಳು

(೩ನೇ ಪುಟದಿಂದ)

ಮತ್ತು ಸ್ವೇಚ್ಛಾಚಾರ ಪೋಷಕದಳಗಳಿಂದ ದೂರವಿನ್ನು ಪ್ರಗತಿಶೀಲ ರಾಜಕೀಯ ಪಕ್ಷಗಳ ಸಹಾಯದಿಂದ ಅರಬ ಏಕಾಷ್ಟ್ರ ಸಂಘಟನೆಯನ್ನು ಸಾಧಿಸಬೇಕು."

ಅರಬ ಗಣರಾಜ್ಯ ಸಂಘಟನೆಯು ಭೌಗೋಳಿಕ ಪ್ರಭಾವ ನ.ತ್ತು ಐತಿಹಾಸಿಕ ಪರಂಪರೆಗಳ ಆಧಾರದ ಮೇಲೆ ನಡೆದಿದೆ. ಆದರೆ, ಇದರೊಡನೆ ಹಲವಾರು ಆರ್ಥಿಕ ಮತ್ತು ರಾಜಕೀಯ ಆದರ್ಶಗಳೂ ಸಮೀಪವಾಗಿವೆ. ಅದರ ಆರ್ಥಿಕ ನೀತಿಯು ಸಮಾಜವಾದಿ ಸ್ವರೂಪದ್ದಾಗಿದೆ. ೧೯೬೨ ರಲ್ಲಿ ಶಾಹ ಫರೂಕರ ಪದಚ್ಯುತಿಯಾಯಿತು ಮತ್ತು ಪ್ರಾಸನಾಧಿಕಾರವು ನಸ್ಸೇರರ ಹಸ್ತವಶವಾಯಿತು. ಕೆಲವು ಸಮಯ ಸರಕಾರವು ಜನರಲ್ ನಜೀಬರ ಹೆಸರಿನಲ್ಲೂ ನಡೆಯುತ್ತಿತ್ತು. ಆರ್ಥಿಕ ಕ್ರಾಂತಿಗಾರಂಭವಾಯ್ತು. ೧೯೬೨ ಜುಲಾಯಿಯಲ್ಲಿ ನಸ್ಸೇರರು ಅರಬ ಸಮಾಜವಾದದ ಸಿದ್ಧಾಂತಗಳನ್ನು ಘೋಷಿಸಿದರು. ಅದರಂತೆ ಸಂಯುಕ್ತ ಅರಬ ಗಣರಾಜ್ಯದ ವ್ಯವಸ್ಥೆಯಲ್ಲಿ ಕೆಲವೊಂದು ಪುನರ್ರಚನೆಗಳಾದುವು.

೧. ದೇಶದ ಸಮಸ್ತ ಆರ್ಥಿಕ ಸಾಧನ ಸ್ರೋತಗಳ ಮೇಲೆ ಪರಂಪರ್ಯದ ಅಧಿಕಾರವು ದೂರವಾಯಿತು.

೨. ಐಗುಪ್ತದ ೬೫ ದೊಡ್ಡ ವ್ಯಾಪಾರ ಸಾಯಿಕ ಕಂಪೆನಿಗಳು (ಇವುಗಳಲ್ಲಿ ಬೇಂಕು, ವಿಮಾ ಕಂಪೆನಿ ಮೊದಲಾದವುಗಳೂ ಸೇರಿದ್ದುವು.) ರಾಷ್ಟ್ರೀಕೃತಗೊಂಡವು.

೩. ಸರಕಾರವು ದೇಶದ ೬೯ ಹಿರಿಯ ಖಾಸಗಿ ಕಂಪೆನಿಗಳ ಸೇ. ಶಾಸ್ತ್ರ ಪಾಲು ಬಂಡವಾಳವನ್ನು ತನ್ನ ವಶಕ್ಕೆ ತಗೆದುಕೊಂಡಿತು.

೪. ಉಳಿದ ಕಂಪೆನಿಗಳ ಡೈರೆಕ್ಟರ ಸಂಖ್ಯೆಯನ್ನು ಏಳಕ್ಕೆ ಇಂದು ನಿಲ್ಲಿಸಿತು. (ಇವರಲ್ಲಿ ಒಬ್ಬ ಶ್ರಮಿಕರ ಪ್ರತಿನಿಧಿ; ಮತ್ತೊಬ್ಬ ನೌಕರರ ಪ್ರತಿನಿಧಿ. ಡೈರೆಕ್ಟರ ವೇತನವು ೫ ಸಾವಿರ ಐಗುಪ್ತ ಪೌಂಡುಗಳಿಗಿಂತ ಹೆಚ್ಚಾಗಬಾರದು; ಮತ್ತು ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಕಂಪೆನಿಗಳಲ್ಲಿ ಡೈರೆಕ್ಟರನಾಗಲೂ ಬಾರದು.)

೫. ೧೨೦ ಎಕರೆಯೇ ಪರಮಾವಧಿ ಹಿಡುವಳಿಯಾಯಿತು.

೬. ೧೦ ಸಾವಿರ ಪೌಂಡುಗಳಿಗೆ ಮಿರಿದ ವಾರ್ಷಿಕಾದಾಯದ ಮೇಲೆ ಸೇ.೯೦ ರಂತೆ ಕರವನ್ನು ಹೇರಲಾಯಿತು.

೭. ಕಂಪೆನಿಗಳ ವಾರ್ಷಿಕ ಉಳಿತಾಯದಲ್ಲಿ ಸೇ. ೨೫ನ್ನು ಶ್ರಮಿಕರ ಕಲ್ಯಾಣಕ್ಕಾಗಿ ಸುರಕ್ಷಿತವಾಗಿಡಲಾಯಿತ.

ಈ ನೀತಿಗಳಿಂದಾಗಿ ದೇಶದ ಸುಮಾರು ೪೦೦ ಹಿರಿಯ ಉದ್ಯೋಗ ವಾಣಿಜ್ಯ ಸಂಸ್ಥೆಗಳು ಸಹಕಾರಿ ಕ್ಷೇತ್ರಕ್ಕೊಳಪಟ್ಟುವು.

ಅರಬ ಸಮಾಜವಾದಕ್ಕೆ ರಕ್ಷಣೆ ಇಲ್ಲವೇ ಬೇಕಾದ ಸಮಾಜವಾದವನ್ನು ಹಾಸಿಕರವೆಂದು ತಿಳಿಯುತ್ತಿದೆ. ಮುಂದಿನ ಕಲ್ಪಿತ ಸ್ವರ್ಗವನ್ನು ಸೃಷ್ಟಿಸಲು ಇಂದು ಜನತೆಗೆ ಅದು ಆನಾವಶ್ಯಕ ಕಷ್ಟಗಳನ್ನು ಕೊಡುತ್ತಿದೆ ಎಂದವರ ನಾಯಕರು ಹೇಳುತ್ತಾರೆ. ನಸ್ಸೇರ ಧರ್ಮವನ್ನು 'ಜನತೆಯ ಅಫೀಮು' ಎಂದು ಒಪ್ಪುವುದಿಲ್ಲ.

ಅನೇರಿಕನ್ ಪತ್ರಪ್ರತಿನಿಧಿ ಬೇಲಸು ಪ್ರಶ್ನಿಸಿದಾಗ, ನಸ್ಸೇರರು ಅರಬ ರಾಷ್ಟ್ರ ಕೂಟದ ಗುರಿ ಮತ್ತು ಕೆಲಸಗಳನ್ನು ಹೀಗೆಂದು ವಿವರಿಸಿದರು: "ನಾವು, ಐಗುಪ್ತ ಸಿರಿಯಾ ಮತ್ತು ಇರಾಕಿನ ಎಲ್ಲ ಪ್ರಗತಿಶೀಲ ತತ್ವಗಳ ಸಹಕಾರದಿಂದ ಈ ಕಾರ್ಯವನ್ನು ಪೂರ್ಣಗೊಳಿಸುವೆವು. ಸಿರಿಯಾ ಮತ್ತು ಕುವೈತ್, ಇರಾಕ್ ಮತ್ತು ಜೋರ್ಡಾನಿಗಳಲ್ಲಿ ಬಾತ್ ಪಕ್ಷ ಮತ್ತು ಅರಬ ರಾಷ್ಟ್ರವಾದಿಗಳ ಸಹಕಾರವನ್ನು ಪಡೆಯಬೇಕಾಗುವುದು ಅಲ್ಜೀರಿಯಾ ಮತ್ತು ಯೆಮನ್ ಸ್ವಾತಂತ್ರ್ಯಾಂದೋಲನಗಳನ್ನು ಸಕ್ರಿಯವಾಗಿ ನಾವು ಸಮರ್ಥಿಸಿದ್ದೇವೆ. ಅಲ್ಲಿನ ಮುಕ್ತಿ ಸೇನೆಯೊದರೂ ಅರಬದ ಸಮಾಜವಾದಿ ತತ್ವಗಳೊಡನೆ ಒಂದಾಗಿ ಕಾರ್ಯ ತತ್ಪರವಾಗುವುದು"

ಸಿರಿಯಾ ಮತ್ತು ಇರಾಕಗಳಲ್ಲಿ ಬಾಥ್ ಪಕ್ಷವಲ್ಲದೆ ಕುರ್ದಿಸ್ತಾನದ ಮುಲ್ಲಾ ಮುಸ್ತಫಾ ಬರಜಾನಿಯ ಜನರೂ ಯಿಗಳೂ ಒಹು ಮಂದಿಯಿದ್ದಾರೆ. ಮುಲ್ಲಾರು ಸಾಮ್ಯವಾದತ್ತ ಒಲಿದಿದ್ದಾರೆ. ಕಾಸೀಮರ ಕರೆಯಂತೆನರು ಇರಾಕಕ್ಕೆ ಬಂದಿದ್ದರು; ಆದರೆ ಕಾಸೀಮರನ್ನವರು ಭೇಟ್ಟಿಯಾಗಲಿಲ್ಲ. ಕಾಸೀಮರು ಮೃತ್ಯು ದಂಡಕ್ಕೆ ಗುರಿಯಾದ ಮೇಲೆ, ಅರೀಫ್ ಸರಕಾರವು ಮುಲ್ಲಾರನ್ನು ಕೈದು ಮಾಡಲು ಒಂದು ಲಕ್ಷ ದೀನಾರಗಳ ಬಹುಮಾನವನ್ನೂ ಘೋಷಿಸಿತ್ತು.

ನಸ್ಸೇರರನ್ನುಳಿದರೆ, ಸಾದಿ ಅರೇಬಿಯಾದ ರಾಜ ಸೌದ್, ಟ್ಯುನಿಶಿಯಾದ ಅಧ್ಯಕ್ಷ ಹಬೀಬ್ ಬುರ್ಗಿಬಾ, ಅಲ್ಜೀರಿಯಾದ ಪ್ರಧಾನ ಮಂತ್ರಿ ಬೆಲ್ ಬೆಲಾ ಮತ್ತು ನೊರಕ್ಕೊ ಏನರಾಜ ಹಸನರು ಸಶಕ್ತರಾಜಕಾರಣಿಗಳು. ಸಿರಿಯಾದ ಶಕ್ತಿಎಲ್ ಕ್ವತಲಿಯವರಿಗೆ ರಾಜಕೀಯ ಗ್ರಹಣಹಿಡಿದಿದೆ. ಕಾಸಿಮರು ಕೊಲೆಯಾಯಿತು.

ಅರಬ ಮತ್ತು ಐಗುಪ್ತಗಳ ವಿರೋಧವು ಬದ್ಧಮೂಲವಿದೆ. ಅರಬ ಲೀ'ನಲ್ಲಿ ಕೂಡ ಇಬ್ಬಣಗಳಿದ್ದುವು. ಆರಬರ ನಿರಂಕುಶ ರಾಜರ ಸ್ವಪ್ನದಲ್ಲಿಯೂ ನಸ್ಸೇರ ಭಯ ಹೆಚ್ಚಿದೆ.

ಜ್ಯೂನಿಯೂದ ಬುರ್ಗಿಬಾ ಮತ್ತು ನಸ್ಸೇರರ ನಡುವೆ ಅರಬ ಜಗತ್ತಿನ ನಾಯಕತ್ವದ ಬಗ್ಗೆ ಒಂದು ಬಗೆಯ ಪ್ರತಿಸ್ಪರ್ಧೆ ನಡೆದಿದೆ. ವೃದ್ಧ ಬುರ್ಗಿಬಾರ ಜೀವನದ ಬಹುಭಾಗ ಫ್ರಾನ್ಸಿನ ಜೇಲುಖಾನೆಗಳಲ್ಲಿ ಕಳೆದಿದೆ ಮತ್ತು ನೈನಿಕ ಕಾರ್ಯಾಚರಣೆಯಲ್ಲಿ ಇವರು ನೊಂದಿದ್ದಾರೆ. ಹಾಗಿದ್ದರೂ ಅವರ ಒಲವು ಫ್ರಾನ್ಸಿನ ಕಡೆಗಿದೆ. ಮೂರಿಷಾನಿಯಾ ಕೆಲ ಸಮಯ ಕ್ಕೆ ಮೊರಲು ಫ್ರೆಂಚ್ ಕಮ್ಯುನಿಟಿಯಲ್ಲಿ ಸೇರಿಕೊಂಡಿತ್ತು.

ಬೆನ್ ಬೆಲ್ಲಾರು ಈಗ ನಸ್ಸೇರರ ಮಿತ್ರ ಆದರೆ ಅವರು ಕುಂಬು ಅಹಂಕಾರಿಗಳು. ಅಲ್ಜೀರಿಯಾದ ತಮ್ಮ ಹಳೆಯ ಸಂಗಾತಿಗಳೊಡನೆಯೂ ಅವರು ಹೊಂದಿಕೊಂಡು ಹೋಗುವುದಿಲ್ಲ. ಹೀಗಿರುವಾಗ ನಸ್ಸೇರರೊಡನೆ ಸೇರಿಕೊಂಡು ಮುಂದುವರಿಯುವುದು ಸಾಧ್ಯವೆ? ರಾಜಾ ಹಸನರು ಸಂಪೂರ್ಣ ಅಮೆರಿಕೆಯ ಪ್ರಭಾವಕ್ಕೆ ಬಿದ್ದಿದ್ದಾರೆ.

ಅರಬ ಏಕತೆಯ ಆಂದೋಲನದ ಭವಿಷ್ಯವು ಈ ನಾಯಕರ ವ್ಯಕ್ತಿತ್ವದ ಬಾರಿ ಸ್ಪರಿಕ ಬಲಾಬಲಗಳನ್ನೂ ಬಹಳಷ್ಟು ಅವಲಂಬಿಸಿದೆ. ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ರಶ್ಯಗಳು ಇವುಗಳ ನಡುವೆ ಈರ್ಷ್ಯಾ-ದ್ವೇಷ ಬೀಜಗಳನ್ನು ಬಿತ್ತುತ್ತಲೇ ಇವೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿಯೂ ಧರ್ಮವು ರಾಜಕೀಯ ಐಕ್ಯಕ್ಕೆ ಕಾರಣವಾಗಬಲ್ಲುದಾದರೆ, ಇಸ್ಲಾಂ ಪ್ರೇರಿತ ಏಕತೆಯ ಸ್ಥಾಪನೆಯಲ್ಲಿ ಬಹಳ ಸಹಾಯ ಸಲ್ಲಿಸಬಹುದು. ಅಲ್ ಅಜಹರದ ವಿದ್ವಾಂಸರು ನಸ್ಸೇರರ ಪ್ರಗತಿಶೀಲ ನೀತಿಗಳನ್ನು ಸಮರ್ಥಿಸಿದ್ದಾರೆ; ಇದು ನಸ್ಸೇರಿಗೆ ತುಂಬು ಶಕ್ತಿ ಸ್ವರೂಪಿಯಾಗಿದೆ; ಏಕೆಂದರೆ, ಲೆಬನಾನಿಗಳನ್ನು ಬಿಟ್ಟರೆ, ಉಳಿದೆಲ್ಲಾ ಅರಬರು ಮುಸಲ್ಮಾನರಾಗಿದ್ದಾರೆ.

ಕಲ್ಪಿತ ಸಂಯುಕ್ತ ಅರಬರಾಜ್ಯ

ದೇಶ	ವಿಸ್ತೀರ್ಣ ಸಾವಿರ ವರ್ಗ ಮೈಲುಗಳು	ಜನಸಂಖ್ಯೆ ಲಕ್ಷ
ಐಗುಪ್ತ	೩೮೬	೨೬೬
ಸೌ. ಅರೇಬಿಯಾ	೮೭೦	೬೫
ಅಲ್ಜೀರಿಯಾ	೧೧೪	೧೧೦
ಇರಾಕ್	೧೭೪	೮೧
ಟ್ಯುನೀಶಿಯಾ	೫೮	೪೩
ಸಿರಿಯಾ	೭೨	೪೬
ಯೊರಕ್ಕೊ	೧೭೨	೧೧೯
ಸೂಡಾನ್	೯೬೭	೧೨೧
ಲಿಬಿಯಾ	೬೭೯	೧೨
ಜೋರ್ಡಾನ್	೩೭	೧೭
ಲೆಬನಾನ್	೪	೧೮
ಯಮನ್	೭೫	೫೦
ದ. ಅ. ಸಂಘ	೧೦೨	೬
ಕುವೈತ್	೬	೩
ಮುಸ್ಕತ್-ಯುಮನ್	೮೨	೪
ಮಹರೀನ್	೧	೧೫
ಕತಾರ್	೮	೧
ಮೂರಿಟಾನಿಯಾ	೧೧೪	೧೦
ಚಾಡ್	೪೭೫	೨೫

—ಗೋರಾ.

ಆತ್ಮ ಪೂಜೆ

ಹೃದಯವೆಂಬ ಬೀಗುಲದಲಿ
ನಿನ್ನ ಮೂರ್ತಿ ನಿಲ್ಲಿಸಿ
ಸದಯ ಶಾಂತಿ ಮಂತ್ರ ನುಡಿದು
ನಿನಗೆ ಪೂಜೆ ಸಲ್ಲಿಸಿ
ಸತ್ಯನೆಂಬ ಜ್ಯೋತಿಯನ್ನೆ
ಗುಡಿಯ ತುಂಬ ಬೆಳಗಿಸಿ
ನಿತ್ಯ ಚಂಚಲತೆಯ ಕೆಲುಬ
ಮನಸಿನಿಂದ ತೊಲಗಿಸಿ
ತಿನ್ನುವ ಸುವಸ್ತುಗಳನೆ
ನಿನ್ನ ಪಾದಕರ್ಪಿಸಿ
ಮುನ್ನ ಬಾಡದಿರುವ ಧರ್ಮ
ಸುಮದಿ ನಿನ್ನನರ್ಚಿಸಿ
ಜ್ಞಾನವೆಂಬ ದಿವ್ಯ ಮಂಗ-
ಳಾರತಿಯನೆ ಬೆಳಗಿಸಿ
ಬಾನ ತುಂಬ ಧ್ವನಿಸುವಂತೆ
ಭಕ್ತಿ ಗಂಟೆ ಮೊಳಗಿಸಿ
ಆತ್ಮ ಪೂಜೆ ಮಾಡಿ ಮನಕೆ
ನೀಡು ಮತಿಯ ದೇವನೆ
ಆತ್ಮನಿಂದ ಹೊರತ ದಾವ
ದೇವ ಕಾಣನಿರುವನೆ?

— ರನೂನಂದ ಬನಾರಿ,
ದೇಲಂಪಡಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಪಿತಾಳೆ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಸುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಬಿ
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ ೫೮½% ಶುದ್ಧ ಪುತ್ತೂ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ. ಹಳೆ ಚಿನ್ನದ ಆಭರಣ, ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರಿಗೆ ಸರಕಾರದ್ದೃಢೀಕರಣ ಸಿಕ್ಕಿರುತ್ತದೆ.
ಮುದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ್ದ Order ಪಡೆದುಕೊಂಡು ಪಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣ ಜ್ಯುವೆಲರಿ ವರ್ಕ್ಸ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ಭಾರತದ ಪ್ರಜೆಗಳಿಂದ

ಮಾತೃಭೂಮಿ ಸಂರಕ್ಷಣಾ ದೀಕ್ಷೆ

ಭಾರತ ನೂತೆಯ ಪವಿತ್ರ ಭೂಮಿಯು ಮೇಲೆ ದುರಾಕ್ರಮಣ ಮಾಡಿ ಮುನ್ನುಗ್ಗಿ, ನಮ್ಮ ಸ್ವಾತಂತ್ರ್ಯ ಸ್ವಾಯತ್ತೆಗಳನ್ನು ಕಬಳಿಸಿ ಬಂದ ಆ ಚೀನೀ ರಕ್ಷಸರ ಕಂಠಾಳ ಕೃತ್ಯವನ್ನು ನಾನಿಂದು ಅಂತಃಕರಣ ಪೂರ್ವಕವಾಗಿ ಶನ., ಮನ-ಧನಗಳನ್ನೊಂದನ್ನೂ ಲೆಕ್ಕಿಸದೆ, ಎಲ್ಲವನ್ನೂ ಈ ಪವಿತ್ರ ಯಜ್ಞದಲ್ಲಿ ಆರ್ಪಿಸಿ ಐಕ್ಯದಿಂದ ಸಂಘಟಿತರಾಗಿ ಎದುರಿಸಿ, ನಮ್ಮ ಭೂಮಿಯಿಂದ ಹೊರದೋಡಿಸಿ ನಮ್ಮ ಸ್ವಾತಂತ್ರ್ಯ—ಸ್ವಾಯತ್ತೆಗಳನ್ನು ರಕ್ಷಿಸಬೆಂಬ ಧೀರ ಪ್ರತಿಜ್ಞೆಯನ್ನು ಭಾರತೀಯರು ಒಕ್ಕೊರಲಿನಿಂದ ಮಾಡಬೇಕು.

ಗಡಿಯ ಬಳಿ ಚೀನೀ ಅತಿಕ್ರಮಿ ಸೈನ್ಯ ಶೇಖರವಾಗಿ, ಇಂದೋ—ನಾಳೆಯೋ ಎಂಬಂತೆ ಭಯಂಕರವಾದ ಯುದ್ಧ ಪ್ರಾರಂಭವಾಗುವ ಮುನ್ಸೂಚನೆಗಳು ಕಾಣ್ತ್ತಿರುವಾಗ ಅವರೊಂದಿಗೆ ತನ್ನ ನೀಚತನ—ಅಲ್ಪತನವನ್ನು ಜಗತ್ತಿಗೆ ಪ್ರದರ್ಶನ ಮಾಡಿ ತೋರಿಸಿದ ವಾಕಿಸ್ತಾನ ಸೇನಿಕೊಂಡಿರುವಾಗ, ಭಾರತೀಯರೇ, ನಿಮಗಿಂದು ದೊಡ್ಡ ಸಂಧಿಕಾಲ ಬಂದಿದೆ. ನಾವಿಂದು ಪೂಜ್ಯ ಪಿತೃಶ್ರೀ ಪಂಡಿತ ನೆಹರೂರವರ 'ಉತ್ತಿಷ್ಠತ-ಜಾಗ್ರತ—ಪ್ರಾಪ್ಯವರಾನ್ನಿ ಬೋಧತ' ಎಂಬ ಕವಿಕೆ ಊವಿ ಶತ್ರುಗಳನ್ನು ಸದೆಬಡಿಯಲು ಸದಾ ಸರ್ವವಿಧದಿಂದಲೂ ಒದ್ದಾಡಿಕರಾಗಿರಬೇಕು. ಇದು ನಮ್ಮ ತಾಯನ್ನು ರಕ್ಷಿಸುವ ಪುಣ್ಯ ಕರ್ತವ್ಯ. ಈ ಶತ್ರು ರಕ್ಷಿಸಲು ನಮ್ಮ ದೇಹದ ನಾಡಿ ನಾಡಿಗಳ ರಕ್ತವನ್ನೂ ಅರ್ಪಿತ. ಆಕೆಯುಳಿದರೆ ನಾವು ಬದುಕುವೆವು. ಇಲ್ಲವೇ ನಮಗೂ ನಾವು ಬಂಡಿತ ಇಂಥ ಸಂಧಿಗ್ಧ ಪರಿಸ್ಥಿತಿಯಲ್ಲಿ ನಾವು ನಮ್ಮ ಕರ್ತವ್ಯ-ಜವಾಬ್ದಾರಿಗಳನ್ನರಿತು ನಮ್ಮ ವಾಲಿನ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಬೇಕು.

ನಮ್ಮ ಗಡಿಯ ಬಳಿ ಬಂದ ಆ ಅನುರೀ ಚೀನೀಯರು ಇಣಿಕಿ ನೋಡುತ್ತಿರುವಾಗ—ಅದರಲ್ಲೂ ಇಬ್ಬರು ನಮ್ಮ ಮೇಲೆ ಕಣ್ಣಿಟ್ಟು ದುರಾಕ್ರಮಣದ ದುರುದ್ದೇಶಗಳಾಗಿರುವಾಗ, ದೇಶದ ಪ್ರಜೆಗಳ-ಪ್ರಧಾನಿಯವರ ಹಿಂದಿದ್ದು ಅವರು ಯಾವ ಕರೆಕೊಡುವರೋ, ಏನು ಹೇಳುವರೋ ಅದನ್ನು ಪೂರ್ಣ ದೇಶಪ್ರೇಮದಿಂದ ಮಾಡಬೇಕು. ಚೀನಿಯರು ಇನ್ನಾವ ಭಾಗದಲ್ಲಿ ನಮ್ಮ ಮೇಲೆ ಬೀಳುವರೋ, ಅಥವಾ ಇನ್ನಾವ ಬೆಲ್ಲಾಟ ಆಡುವರೋ? ಅದು ಅವರಿಗೆ ಗೊತ್ತಿರುವಷ್ಟು ಉಳಿದವರಿಗೆ ಗೊತ್ತಿಲ್ಲ. ಚೀನೀಯರು ಏನೇ ಮಾಡಲಿ—ಬಿಡಲಿ, ಆಥವಾ ಬುತಿಸ್ತಾನಿಗಳು ಇದೇ ತಮಗೆ ತಕ್ಕ ಕಾಲವೆಂದು ಬಗೆದು ತಮಗೆ ಬೇಕಾದುದೆಲ್ಲವನ್ನು ದಿಟ್ಟಿಸಿಕೊಳ್ಳಲಿ; ನಾವು ನಮ್ಮ ಪವಿತ್ರವಾದೀ ಪೂತೃ ಭೂಮಿಯನ್ನು ರಕ್ಷಿಸಲು—ಈ ತಾಯುಋಣ ತೀರಿಸಲು ನಮ್ಮ ಸಾಧನೆ ಮಾಡಬೇಕು.

ನಮ್ಮ ಧೀರ-ವೀರ ಸೈನಿಕರ ಅತುಲ-ಅತುಲ ಪರಾಕ್ರಮದಲ್ಲಿ ನಮಗೆ ಪೂರ್ಣ ಬುದ್ಧು ಐಂಡಿಕವಾದರೂ, ನಾವಿಂದು ದೇಶ ಪ್ರೇಮದಿಂದ ತುಂಬಿ ಅವರನ್ನು ಸರ್ವವಿಧದಿಂದಲೂ ಹುರಿದುಂಬಿಸಲು ಒಳನಾಡಿನಲ್ಲಿ ಸಕಲ ವಿಧದ ಬೆಂಬಲ-ಸಹಾಯ ನೀಡಬೇಕು. ಇಂದು ದೇಶದಾದ್ಯಂತ ಹಿಂದೆಂದೂ ಕಾಣದಂತಹ ಉತ್ಪಾದನಾ ಕಾರ್ಯ ಉತ್ಸಾಹದಿಂದ ನಡೆಯಬೇಕು. ನಮ್ಮೆಲ್ಲ ಕ್ಷೇತ್ರಗಳಲ್ಲಿಯೂ ಉತ್ಪಾದನೆ ಹೆಚ್ಚಬೇಕು. ನಾವೆಲ್ಲ ಇಂದು ಹುಮ್ಮಸ್ಸಿನಿಂದ ಎದೆಬಡಿದೆ ರಕ್ತ ಮಿಸಿ ಪರಿಶ್ರಮ ಪಡಬೇಕು. ಯಾವ ನಿಪತ್ತು ಬಂದೊದಗಿದರೂ ದೇಶದ ಉಗ್ರಾಣದಲ್ಲಿ ಸಾಕಷ್ಟು ಆಹಾರ ವಸ್ತು ಸಂಗ್ರಹವಿರುವಂತೆ ಸರಕಾರವೂ ಜನತೆಯೂ ನೋಡಿಕೊಳ್ಳಬೇಕಾದ ಕರ್ತವ್ಯವನ್ನಿಂದಿನ ಈ ಪುಣ್ಯ ಘಳಿಗೆಯಲ್ಲಿ ಇನ್ನೊಮ್ಮೆ ಸ್ಮರಿಸಬೇಕು.

"ದೇಶಕ್ಕಾದ ಬನ್ನ, ದೇಹಕ್ಕಾದ ಬನ್ನ; ದೇಶಕ್ಕಾಗಿ ದೇಹ, ದೇಶವೊಂದಿಳೆಯೆ ಉಳಿವವರಂತೆ, ದೇಶವೊಂದುಳಿಯೆ ಅಳಿವವರಾರ್" ಎಂಬುದೇ ನಮ್ಮ ಪವಿತ್ರವಾದ ನಿತ್ಯನೂತನ ದಿವ್ಯಮಂತ್ರವಾಗಬೇಕು. ನಮ್ಮೆಲ್ಲ ಆನರ್ಯಕತೆಗಳನ್ನು ಇಂದು ಕದಿಮೆ ಮಾಡಿ ಸರಳ ಜೀವನ ಮಾಡಿ ಹೆಚ್ಚು ಬೆಳೆಸಿ ಉಳಿಸಬೇಕು. ಆಹಾರ ಪದಾರ್ಥಗಳನ್ನು ಎಷ್ಟು ಬೇಕೋ ಅಷ್ಟೇ ಉಪಯೋಗಿಸಬೇಕು. ಇಂದು ಎಲ್ಲ ಕಡೆಗಳಲ್ಲಿಯೂ ಸರಕಾರೀತಿಯ ನಡೆವಳಿಕೆಗಳು ಕಾಣಬರಬೇಕು. ಜನರ ಮನಸ್ಸು ದೇಶರಕ್ಷಣೆಯೇ ಪುಣ್ಯಕರ್ತವ್ಯವೆಂಬ ಪರಿಪತ್ಯಕಾರ್ಯದಲ್ಲಿ ತಾನಾಗಿ ಮೂಲಿ ಈ ವಿಪತ್ಕಾರ್ಯದಲ್ಲಿ ನಾವು ಸಫಲರಾಗುವಂತೆ ನಮ್ಮ ಶರೀರದಲ್ಲಿ ಬಿಸಿರಕ್ತ ಹುಂತಿ, ನಾವು ವಜ್ರದೇಹಿಗಳಾಗಿ ಆ ಶತ್ರು ಕುನ್ನಿಗಳನ್ನು ಯಮಸದನಕ್ಕಟ್ಟಲು ಶಕ್ತಿ-ಸ್ಫೂರ್ತಿಗಳನ್ನಿತ್ತನೆಂತೆ ನಾವೆಲ್ಲ ಶ್ರದ್ಧಾಂತಃಕರಣ ಪೂರ್ವಕವಾಗಿ ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳಬೇಕು.

ಇಂದು ಪ್ರತಿ ಹಳ್ಳಿ, ಪ್ರತಿ ಗಲ್ಲಿ ಗಲ್ಲಿಗಳಲ್ಲಿ ರಕ್ಷಣಾ ಪಡೆಗಳ ನಿರ್ಮಾಣವಾಗಬೇಕು. ಚೀನಿಯರು ಅತ್ಯಂತ ಕ್ರೂರಿಗಳೆಂಬುದು ನಿಜ. ಮತ್ತು ಸ್ವಾರ್ಥಿಗಳೂ ಹೌದು. ನಮ್ಮ ಪುಣ್ಯಭೂಮಿ ಭಾರತಾಂಬೆಯ ಮೇಲೆ ದಂಡೆತ್ತಿ ಬರುವ ಸಾಹಸದ ಹಿಂದೆ ಅವರಿಗೆ ಈ ದೇಶದ ಪ್ರಗತಿ ಪರಂಪರೆಗಳನ್ನು ಕಂಡು ಹೊಟ್ಟೆ ಉರಿ ಎದ್ದಿದೆ, ಏಷಿಯಾದಲ್ಲೇ ಭಾರತ ಮುಂದಿದೆ ಎಂಬುದನ್ನವರು ಸಹಿಸರು. ಒನ್ಮೈ ಗಡಿಯಾಜೆ ಓಡಿಹೋದವರು ಪುನಃ ಇಣಿಕಿ ನೋಡುತ್ತಿದ್ದಾರೆ. ಅವರು ದುಡುಕಿದರೆ ಅವರನ್ನು ಹಿಮ್ಮೆಟ್ಟಿಸಿ ಪುನಃ ಈ ಕಡೆ ಕಾಲಿಡದಂತೆ ಮಾಡುವ ಶಕ್ತಿ ಭಾರತೀಯರಿಗಿದೆ; ನಮ್ಮ ಸೈನಿಕರಿಗಿದೆ. ಪ್ರಜಾಪ್ರಭುತ್ವದ ಹಿರಿಮೆಯಿಂದ ನಾಡಿನಾಧ್ಯಂತ ಒಂದು ಹೊಸ ಹುರುಪುಂಟಾಗಿ ಚೀನಿಯರ ಕುತ್ತಿಗೆಗೆ ಸುತ್ತಿಕೊಳ್ಳುವಷ್ಟು ಅವಾಯ ಈ ದಾರಿ ಶಟ್ಟುವುದು ಖಂಡಿತ. ಸಾಕಿಸ್ತಾನಿಗಳವರ ಹಿನ್ನೆಪ್ರಚೋದನೆಯಿಂದ ಚೀನೀಯರು ಉತ್ತರದ ಗಡಿಯ ಕಡೆ ನುಸುಳಿ ಬೇಕೆಂದಿರುವುದು ಅವರ ನಾತಕ್ಕೆ ನಾಂದಿಯಾದಂತೆ. ಚೀನೀಯರ ಅಹಂಭಾವಕ್ಕೆ—ದರ್ಪಕ್ಕೆ—ಸಾಮ್ರಾಜ್ಯವಾಹಿ ಮನೋವೃತ್ತಿಗೆ ಭಾರತ ಎಂದೆಂದಿಗೂ ಮಣಿಯದು; ತಲೆ ಬಾಗದೆಂಬುದನ್ನು ಅವರು ಮೊದಲು ತಿಳಿದಿರಲಿ!

ಚೀನೀಯರ ವಂಚಕತನ ನಮಗೆ ಗೊತ್ತಿದೆ. ನಮ್ಮಲ್ಲಿ ಒಗ್ಗಟ್ಟಿಲ್ಲವೆಂಬ ಬಯಲ ಭ್ರಾಂತಿ ಅವರಿಗೆ ಇರದೇ ಇರಲಿ. ನಮ್ಮಲ್ಲಿ ಎಲ್ಲವೂ ಇದೆ. ಲೋಪದೋಷಗಳೂ ಇವೆ. ಆದರೆ ಈ ಲೋಪದೋಷಗಳೆಲ್ಲ ಪ್ರಧಾನಿಯವರ ಒಂದು ಕರೆಗೆ ಬಿಣ್ಣೆಯಂತೆ ಕರಗಿ ದೇಶದಲ್ಲಿ ಹಿಂದೆಂದೂ ಕಾಣದಂತಹ ಅಚಲ ಒಗ್ಗಟ್ಟು, ಒಮ್ಮತವೂ ಕಾಣುವುದು ಸ್ಪಷ್ಟ ಸಿದ್ಧ.

ಭಾರತೀಯರೇ ಈಗ ಭಿನ್ನಭಾವಕ್ಕೆ ಎಡೆಯಿಲ್ಲ. ನಮ್ಮ ಮುಖಂಡರು ಜಾರಿಕೊಡುವ ದಾರಿಯಲ್ಲಿ ನಾವಿಂದು ನಡೆಯುವುದೇ ಕರ್ತವ್ಯ. ರಾಜಕೀಯ ಭಿನ್ನಾಭಿಪ್ರಾಯಗಳೂ, ಅನ್ಯ ಗೊಂದಲಗಳೂ, ಭಾಷಾವಾರು ಉದ್ರೇಕಗಳೂ, ಲಾಭ ಬಡಿತನಗಳೂ ಇಂದು ಮನಸ್ಸಿನಿಂದ ದೂರವಾಗಬೇಕು. ಕಾಂಗ್ರೆಸ್ಸಿನಲ್ಲಿ ಅಧಿಕಾರ-ಸ್ಥಾನ ಪಿಗಸಿರುವವರು ಅದನ್ನು ದೂಷಿಸಿ ಗುಂಪುಗಳನ್ನು ಕೂಡಿಸಿ ಗಲಾಟೆ ಮಾಡಬಾರದೆಂಬಿಸಿದ್ದಾರೆ. ಅಧಿಕಾರದ ಮೋಹಕ್ಕೂ, ಚಾಟಿಸೆಗೂ, ಇದು ಸಮಯವಲ್ಲ. ಈ ತಿನ ಎಲ್ಲಾ ಚಿಳವಳಿಯ ಪ್ರವೃತ್ತಿ ಇಂದು ಜನತೆಯ ಮನಸ್ಸಿನಿಂದ ದೂರ ಸರಿಯಬೇಕು. ರಾಷ್ಟ್ರ ರಕ್ಷಣೆಯೇ ಶ್ರುತಿಯೊಬ್ಬನ ಪರಮ ಗುರಿಯಾಗಬೇಕು! ದೇಶಕ್ಕೆ ವಿಪತ್ತೊದಗಿದ ಸಂದರ್ಭದಲ್ಲಿ ಅನ್ಯ ಮಾತ್ರ ವಿದೆಯೇ?

ತುರ್ತ ಪರಿಸ್ಥಿತಿ ಇನ್ನೂ ಮುಗಿಯಾಗಬೇಕು ಉತ್ಪಾದನಾ ಕ್ಷೇತ್ರದಲ್ಲಿ ನವ ಚೈತನ್ಯ ಕಂಡುಬರಬೇಕು. ಸ್ವಭಾವ್ಯದ ಉದ್ಯೋಗಿಗಳು ತಮ್ಮ ಸಂಬಳ ಸಾರಿಗೆಗಳತ್ತ ಲಕ್ಷ್ಯ ಕೊಡದೆ ತಮ್ಮ ಕೆಲಸಗಳನ್ನು ಶ್ರದ್ಧೆ-ಭಕ್ತಿಗಳಿಂದ ಮಾಡಿ ಪುನೀತರಾಗಬೇಕು. ನಾವಿನ ಯಾವ ಭಾಗದಲ್ಲಿ ಯಾವುದೇ ತೆರದ ಮುಷ್ಕರವಾಗಲೀ, ಚಿಳವಳಿವಾಗಲೀ ಆಗಬಾರದು. ಅಂತಹ ಅರಾಜಕತೆಗೆ ಈಗ ಅವಕಾಶವಿಲ್ಲ. ಇಂದು ಎಲ್ಲರೂ ಶತ್ರುವನ್ನು ಓಡಿಸುವತ್ತ ತಮ್ಮ ಗಮನ ಹರಿಸಬೇಕು. ಅದೊಂದೇ ಈಗ ನಮ್ಮ ಮುಂದಿರುವ ಮಹಾಕರ್ತವ್ಯವೆಂದು ನಾವೀಗ ತಿಳಿದು ಅವರ ಪರಿಪಾಲಕರಾಗಬೇಕು.

ಅಯುದ್ಧದಿಂದ ನಾವಿಂದು ಸ್ವಾಮಿವಿವೇಕಾನಂದರು "ರಾಷ್ಟ್ರದೊಂದೇ ನಿಷ್ಟೆತ್ತಿರುವ ದೇವರು. ಬೇರೆಲ್ಲ ದೇವರು ನಿದ್ರಿಸಿಬ್ಬಾರೆ. ಅವನದೇ ಕೈಗಳು ಸರ್ವತ್ರ, ರಾಷ್ಟ್ರದೇವರನ್ನು ಪೂಜಿಸಿದಾಗ ಉಳಿದೆಲ್ಲ ದೇವತೆಗಳನ್ನು ಪೂಜಿಸಿದಂತೆಯೆ ಸರಿ" ಎಂದಂತೆ ರಾಷ್ಟ್ರದೊಂದನ್ನೇ ನಮ್ಮ ಆರಾಧ್ಯ ದೇವರೆಂದು ಪೂಜಿಸಬೇಕು. ರಾಷ್ಟ್ರಹಿತಕ್ಕೂ ನೈಯುಕ್ತಿಕ ಹಿತಸಾಧನೆಗೂ ಅತ್ಯಗತ್ಯವಾದ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಶಕ್ತಿ ಸಂಪಾದನೆ ಇಂದಾಗಬೇಕು. ಕಬ್ಬಿಣದಂತಹ ಮಾಂಸಖಂಡ, ಉಕ್ಕಿನಂಥ ನರ, ಹಿಮಲಿನಂಥ ಹೃದಯವುಳ್ಳ ವೀರರು, ನಮ್ಮ ರಕ್ಷಿಯಲ್ಲಿ, ಧ್ಯೇಯದಲ್ಲಿ ಸಂಪೂರ್ಣ ವಿಶ್ವಾಸವುಳ್ಳ ಮನಸ್ವಿಗಳಾಗಬೇಕು. ಕಾಯೊವಾಚಿತ್ಯರಾದ ಧೀರತಮ ಅತಿತ್ಯ ವೀರಯುವಕಯುವತಿಯರು ನಮ್ಮ ಭಾರತವನ್ನು ಪ್ರಪಂಚದ ತಲೆಯಲ್ಲಿ ಬಲಿಷ್ಠನನ್ನಾಗಬೇಕು. ಭಾರತೀಯರೆಲ್ಲ ಅದಕ್ಕೆ ಸಿದ್ಧರು, ಭಾರತೀಯರೆಲ್ಲ ಅದಕ್ಕೆ ಬದ್ಧರು. ನಮ್ಮ ಸಾರ್ವಭೌಮತ್ವವುಳಿಸಲು ಅಹೋರಾತ್ರಿ ಹೋರಾಡಲು ನಾವು ಬದ್ಧಕಂಕಣರಾಗಿದ್ದೇವೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

O. S. 36/1961 R. E. P. 238/63

ಬಿ. ಕೆನರಾ ಟ್ರೇಡಿಂಗ್ ಎಂಡ್ ಬೋಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.— ಅರ್ಜಿದಾರರು

ಮತ್ತು

ಬಿ ಸುಂದರಿ ಹೆಗಡ್ತಿ ಕೂಡಾ— —ಎದ್ರಿರು

ಎದ್ರಿರು:—

1 ಬಿ ಸುಂದರಿ ಹೆಗಡ್ತಿ—ಶೀತಮ್ಮ ಹೆಗಡ್ತಿರ ಮಗಳು,
2. ಬಿ ಸಗುಣ ಹೆಗಡ್ತಿ
3. ಜಯಶಾಲ ಹೆಗ್ಡೆ
4. ಬಿ ರವಿರಾಜ ಹೆಗ್ಡೆ
5. ಬಿ. ಲೀಲಾವತಿ ಹೆಗಡ್ತಿ —1ನೇ ಎದ್ರಿಳ ಮಕ್ಕಳು.
6. ಬಿ. ರತ್ನಾಕರ ಹೆಗ್ಡೆ
7. ಬಿ. ಸುಭಾಕರ ಹೆಗ್ಡೆ
8. ಪ್ರಕಾಶ (ಮೃ)

ಯವನ ಗಾರ್ಡಿಯನ್ 1ನೇ ಎದ್ರಿ

9. ರಮೇಶ (ಮೃ) 10. ದಿನೇಶ (ಮೃ)
11. ಲಿಲ್ಲಿ (ಮೃ) ಯವರ ಗಾರ್ಡಿಯನ್ 1ನೇ ಪ್ರತಿವಾದಿ

12. ಅಮರ (ಮೃ)
13. ಅರುಂದತಿ (ಮೃ) —2ನೇ ಪ್ರತಿವಾದಿಳ ಮಕ್ಕಳು.
14. ಚೇದಿ (ಮೃ)

ಯವರ ಗಾರ್ಡಿಯನ್ 2ನೇ ಪ್ರತಿವಾದಿಳು.

15. ಎಚ್. ರಾಮಪ್ಪ ಬಲ್ಲಾಳ—ಹೆಬ್ರಿ ಗೋಪಾಲಕೃಷ್ಣ ಬಲ್ಲಾಳರ ಮಗ ಕಾರ್ಕಳ ತಾಲೂಕು ಹೆಬ್ರಿ ಗ್ರಾಮದವರಿರುವವರು.

ಎದ್ರಿ ಎದ್ರಿಗೆ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಪ್ರತಿವಾದಿಯ ಸೇರಿ ಡಿಕ್ರಿಯಿಂದ ಕಾಣುವ ಸ್ತಿರಾಸ್ತಿ ವಿಕ್ರಯದ ಬಗ್ಗೆ ಹಾಜರು ಪಡಿಸಿದ ವಿಕ್ರಯದ ಯಿಸ್ತಿಹಾರಿನ ಪರತುಗಳನ್ನು ನಿರ್ಣಯಿಸಲಿಕ್ಕೆ 1963ನೇ ಡಿಸೆಂಬರ್ ಸಕಟಂಬ್ರ 12ನೇ ತಾರೀಕು ನಿಶ್ಚಯಿಸೋಣಾಗಿಯವೆಯಂತ ನಿಮಗೆ ದುನಂದ ತಿಳಿಸೋಣಾಗುತ್ತದೆ.

ಉಡುಪಿ,) **M. Damodar Kamath**

REGD. No. B. G. 176
LICENCE No. 31
Licensed to Post without Prepayment

ಒಂದು ಪ್ರತ್ಯಕ್ಷಾನುಭವ

ಇದುವೆ ಜೀವನ!

ಅಂದು ನಾನು ಕಲ್ಕತ್ತೆಯ 'ಡಿಯೊಲ್ಡ' ದಲ್ಲಿ 'ಇಂಟರ್‌ವ್ಯೂ'ವನ್ನು ಮುಗಿಸಿ, ಆ ದೇ ದಿನದ ಹೌರಾ—ಮದ್ರಾಸು ಮೈಲು ರೈಲು ಗಾಡಿಯನ್ನು ಹತ್ತಿದೆ. ಕಡು ಬೇ ಸಗೆಯ ಆ ದಿನದಲ್ಲಿ ಪ್ರಯಾಣ ಮಾಡುವು ದೇ ಸ್ವಯಂಪರೀಕ್ಷೆಯಾಗಿತ್ತು! ನಾನು ಹತ್ತಿ ದ್ದ ಮದ್ರಾಸು ಕಾಂಪಾರ್ಟ್‌ಮೆಂಟು ಕೂಡಾ ಜನರಿಂದ ತುಂಬಿ ಉಸಿರು ಕಟ್ಟು ವಂತಿತ್ತು! ಎರಡು ದಿನಗಳಿಂದಲೂ ನಿ ದ್ದೆಯಿಲ್ಲ, ಬೆನ್ನು, ಕೈಕಾಲಿಲ್ಲ ನೋಯು ತಿದ್ದುವು. ಕೆಲವರಂತೂ ಧೂಳಾವಕಾಶವ ನ್ನು ಮಾಡಿಕೊಂಡು ಬಿಂಗಿ ಕೊಂಡರು.

ನಮ್ಮ ಕಂಪಾರ್ಟ್‌ಮೆಂಟಿನಲ್ಲಿದ್ದವರಲ್ಲಿ ಕೆಲವರು 'ನಿಮೂಡಿ' ಭಾಷೆಯನ್ನಾಡುತ್ತಿದ್ದರು. ಕೆಲವರು 'ಒರಿಯೂ'ವನ್ನಾಡುತ್ತಿದ್ದರು. ಮತ್ತು ಕೆಲವರು 'ಬಂಗಾಳಿ'ಯನ್ನಾಡುತ್ತಿದ್ದರು. ಒಬ್ಬರ ಭಾಷೆಯು ಇನ್ನೊಬ್ಬರಿಗೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ.

ನನ್ನ ಬಳಿಯಲ್ಲಿದ್ದವರು ಒಬ್ಬ ರಾಜ ಸ್ಥಾನಿ ಗಂಡಸು. ನಲ್ವತ್ತು ದಾಟಿರಬಹು ದಾದ ಅವರು ಸದಾ ಸರಳ ಉಡುಪಿನಲ್ಲಿದ್ದರು. ಹಿಂದಿ, ರಾಜಸ್ಥಾನಿ ಭಾಷೆಗಳಲ್ಲದೆ, ಇನ್ನ ಭಾಷೆಯೊಂದೂ ಅವರಿಗೆ ಸರಿಯಾಗಿ ಬರುತ್ತಿರಲಿಲ್ಲ.

ಅಯಾಸದಿಂದ ಬಳಲಿದ್ದ ಕಣ್ಣುತೂಕ ಡಿರುತಿದ್ದ ನನ್ನನ್ನು ಕಂಡು ಅವರಿಗೆ ಕನಿ ಕರ ಹುಟ್ಟಿರಬೇಕು. ತನ್ನ ಮೇಲೆ ನನ್ನ ನ್ನು ಎಳೆದುಕೊಂಡು

"ಯೆಹಾ ಸೋವೋ ಬಯ್ಯಾ!"—ಎಂ ದರು.

"ಸರವಾಯ್ ನಹೀಂ ಜೀ! ಶುಕ್ರಿ ಯಾ"—ನಾನೆಂದೆ.

ರೈಲು ಮುಂದೆ ಮುಂದೆ ಸಾಗುತಿತ್ತು! ಹಗಲು ಕಳೆದು ರಾತ್ರಿಯಾಯಿತು. ರೈಲು ಬಂಡಿಯು ನಿಳ್ಳು ಹಾಕುತ್ತ ಮದ್ರಾಸಿನ ಕಡೆಗೋಡುತಿತ್ತು!

೦ ೦ ೦

'ವಾಲ್ಟೇರ್'ಗೆ ಬಂದಾಗ ನನಗೆಚ್ಚರ ವಾಯಿತು. ಕಣ್ಣು ಬಿಟ್ಟು ನೋಡಲು ನಾ ನು ಆ ರಾಜಸ್ಥಾನಿ ಸೋದರನ ತೊಡೆಯ ಮೇಲೊರಗಿ ಸುಖನಿದ್ರೆ ಮಾಡುತಿ ದ್ದೆಯೆಂದರಿವಿ, ಬೇಗನೆ ಎದ್ದು ಕುಳಿತು ಕೊಂಡೆ.

ಆಗ ಅವರು—

"ಕ್ಯಾ ಬಯ್ಯ! ಸೋವೋ!"—ಎಂದರು.

ನಾನು—"ಶುಕ್ರಿಯಾ ಜೀ—ಎಂದೆ.

ನನ್ನ ಕಣ್ಣು ಬಾಡಿದಾಗ ಸ್ವಲ್ಪಾವಕಾ ಶವನ್ನು ಮಾಡಿಕೊಂಡು ನನ್ನನ್ನು ಅವರ ತೊಡೆಯ ಮೇಲೆ ತಲೆಯಿರಿಸಿ, ಸಿದ್ರೆ ಗೈ ಯುವಂತೆ ಮಾಡಿ ನನ್ನ ಆಯಾಸವನ್ನು ಸರಿಪರಿಸಿದ ಆ ರಾಜಸ್ಥಾನಿಯ ಸೋದರ ತೆಯ ತುಂಬು ಹೃದಯಕ್ಕೆ ನನ್ನ ಹೃದ ಯವು ಬಾಗಿತು!

ನನಗರಿಯದಂತೆಯೆ ನನ್ನ ಕಣ್ಣುಗ ಳಿಂದ ಎರಡು ಹನಿಗಳುದುರಿದುವು!

—ಯು. ನಾರಾಯಣ ಸೇರಿಗಾರ

ನಿಂತು ಹೋದ ಬೃಹತ್ ಸಂಪು

(ಂನೇ ಪುಟದಿಂದ)

ದ್ದರು; ತಮ್ಮ ನಾಯಕರ ರಾಜಕೀಯ ದುರುದ್ದೇಶಗಳಲ್ಲಿ ಸಿಕ್ಕಿ ಕಷ್ಟಕ್ಕೆ ಗುರಿ ಯಾದರು.

ಯಶಸ್ವಿಯಾಯಿತು, ಯಾವುದು?

ಈ ಸಂಪಿನ ಅವಧಿಯಲ್ಲಿ ತಮಗೆಷ್ಟೇ ಕಷ್ಟಗಳು ಒದಗಿದರೂ ಅವನ್ನು ಎದುರಿ ಸಿ, ಜಯಶೀಲರಾದ ಮುಂಬಯಿಯ ಜ ನರು ನಿಜಕ್ಕೂ ಅಭಿನಂದಾರ್ಹರು. ಆದ ರ್ಶವಾದಿಗಳು, ಅತ್ಯಂತ ಸಂಯಮದಿಂದ, ಸಹನೆಯಿಂದ ವರ್ತಿಸಿ ಅವರು ಎಲ್ಲರಿಗೆ ಮಾರ್ಗದರ್ಶನ ಮಾಡಿದ್ದಾರೆ. ಕೇಂದ್ರ ನೌಕರರ ಮುಷ್ಕರವು ಅಪಿಲ ಭಾರತ ಸ್ವರೂಪವನ್ನು ಕೊಂಡಿತ್ತು; ಜನ ಮ ತ್ತು ಜನತಾ ಸರಕಾರಗಳ ದೃಢತೆಯಿಂದ ಅದು ಅಸಫಲಗೊಂಡಿತು. ಆದರೆ ನೆನಪು ಉಳಿಯಬೇಕಾದ್ದೆಯೆಂದಾಗ, ಮುಂಬಯಿಯು ಈ ಸಂಪು ಆಯಶಸ್ವಿಯಾಯಿತು. ಏಕೆಂ ದರೆ, ಮುಂಬಯಿ ಸರಕಾರವಾಗಲೀ ನಗ ರ ಸಭೆಯಾಗಲೀ ಕಾರ್ಮಿಕ ವರ್ಗದವ ರಿಗೆ ಯಾವ ಆಶ್ವಾಸನೆಯನ್ನೂ ನೀಡಿ ರುವುದಿಲ್ಲ. ಕಾರ್ಮಿಕ ಸಂಘಗಳ ನಾಯ ಕರು ಚಿವನರ ಮಾತಿನಂತೆ ಸಂಪು ನಿಲ್ಲಿ ಸುವ ನಿರ್ಧಾರ ಮಾಡುವುದಕ್ಕೆ ಮೊದಲೇ ನೌಕರರು ಸಂಪನ್ನು ಬಿಟ್ಟು ಕೆಲಸಕ್ಕೆ ಹಾಜರಾಗಿದ್ದರೆನ್ನುವಾಗ, ಸಂಪು ಯಶ ಸ್ವಿಯಾದದ್ದು ಹೇಗೆ? ಅದು ಕೊನೆಗೊಂ ಡಿತು; ಅತ್ಯಂತ ಹಾನ್ಯಾಸ್ಪದವಾಗಿ ಮು ಕ್ತಾಯಗೊಂಡಿತು.

ಉಪಸಂಹಾರ

ಅತ್ಯಧಿಕ ಸಂಖ್ಯೆಯ ಕಾರ್ಮಿಕರು ಮುಂಬಯಿಯಲ್ಲಿದ್ದಾರೆ. ಭಾರತದಲ್ಲಿಯೇ ಮುಂಬಯಿ ದೊಡ್ಡ ಪಟ್ಟಣ; ಸಂಘಟ ಕರ ಕ್ಷೇತ್ರ. ಆದರೆ, ಅಲ್ಲಿಯೇ ಸಂಪು ಗಾರರು ನಿಶ್ಚರ್ತ ಶರಣು ಬರುವಂತಾ ದಾಗ, ಮತ್ತೆ ಉಳಿದೆಡೆಗಳ ಅವಸ್ಥೆಯೇ ನು? ನಮ್ಮ ಶ್ರಮಿಕ ಬಂಧುಗಳು ಇದ ನ್ನು ಗಮನಿಸಬೇಕು. ಮೂಕುವಾತಿಗೆ ಸಂ ಪಿನ ಬಿದರಿಕೆಯನ್ನು ಹಾಕದೆ ನ್ಯಾಯೋ ಚಿತ ವಿಧಾನಗಳಲ್ಲಿಯೇ ತಮ್ಮ ನ್ಯಾಯು ವಾದ ಬೇಡಿಕೆಗಳನ್ನು ಪೂರೈಸಿಕೊಳ್ಳಬೇ ಕು. ನ್ಯಾಯುವಾದ ಮತ್ತು ಸತ್ಯವಾದ ಬೇಡಿಕೆಗಳನ್ನು ಮುಂದಿಡುವುದೂ ತಪ್ಪ ಲ್ಲ; ಅವನ್ನು ಮೂಢ್ಯಮಾಡುವುದೂ ಅಪ ರಾಧವಲ್ಲ. ಸಂಘಗಾರ ಧುರೀಣರು ಮುಂಬಯಿಯಿಂದ ಪಾಠ ಕಲಿತುಕೊಳ್ಳ ಬಾರದೇಕೆ?

ನೆಹರು ಸರಕಾರ ಅವಿಶ್ವಾಸಾರ್ಹವೆ?

(ಜನೇ ಪುಟದಿಂದ)

ವೆ? ಮತ್ತೆ ಅವರಿಗೆ ಸರಕಾರದ ಮೇಲೆ ವಿಶ್ವಾಸ ಯೇಗೆ ಹುಟ್ಟಬೇಕು?

ಜಾಗತಿಕ ರಾಜಕಾರಣ ಪಟು ಜವಾ ಹರಲಾಲರ ನಿರ್ಲಿಪ್ತನೀತಿಯ ಆರ್ಥವೇ ಗ ಪಾಶ್ಚಾತ್ಯರಿಗೆ ಅಗ ತೊಡಗಿದೆ; ಅವರ ದನ್ನು ಪ್ರಶಂಸಿಸಿದ್ದಾರೆ, ಆದರೆ, ನಮ್ಮ ವಿರೋಧೀ ದಳ ಸದಸ್ಯರಿಗರಿವಾಗದುದು ವಿಚಿತ್ರಾತಿ ವಿಚಿತ್ರ. ದೇಶವು ಸರ್ವೋತೋ ಮುಖ ಪ್ರಗತಿಯತ್ತ ನಡೆಯುತ್ತಿದೆಯೆಂ ಬ ಸತ್ಯವನ್ನು ವಿದೇಶೀಯರೆಲ್ಲರೂ ಕಂಡು ಕೊಂಡಿದ್ದಾರೆ; ಆದರೆ ನಮ್ಮವರಿಗದರ ಪರಿಜ್ಞಯವಿದ್ದಂತಿಲ್ಲ. ಇಂದು ಕಾಂಗ್ರೆಸ್ಸಿ ನ ಆಡಳಿತೆಯಲ್ಲಿ ದೇಶ ಬಹುಮುಖವಾಗಿ ಬೆಳೆದಿದೆ; ಅದಿನ್ನೂ ಬೆಳೆಯು ಬೇಕು; ಬ ಲಾಢ್ಯವಾಗಬೇಕು. ಪ್ರಾಪ್ಯ ವಸ್ತುವಿ ನಿಂದ ತೃಪ್ತಿಪಡಬಾರದು; ಅಪ್ರಾಪ್ಯವ ನ್ನು ಪ್ರಾಪ್ತ ಮಾಡಿಕೊಳ್ಳುವಲ್ಲಿ ಆಸಕ್ತಿ ವಹಿಸಬೇಕು. ಈಗ ವಿರೋಧೀ ಪಕ್ಷಗ ಳ ಸದಸ್ಯರು ಮುಂದಿಟ್ಟ ಅವಿಶ್ವಾಸಗೊ ತ್ತುವಳಿಯು ಈ ಕಾರಣಕ್ಕಾಗಿದ್ದರೆ. ಆದರಿಂದ ಯಾರೂ ನೊಂದುಕೊಳ್ಳುವುದಿ ಲ್ಲ ಅದು ಹೊರತು ತಮ್ಮ ದ್ವೇಷ ಸಾಧನೆ ಗಾಗಿ ಈ ಹುಚ್ಚು ಉದ್ಯೋಗಕ್ಕಿಳಿದರು ಇಳಿದಿದ್ದು ದಾದರೆ, ಅದಕ್ಕಿಂತ ಹೇಯ ಪ್ರವೃತ್ತಿ ಬೇರೊಂದಿಲ್ಲ.

—ರಾಶಿ.

ನಾಲ್ಕೂರು ಪಂಚಾಯತ್

ತಾ. 15—8—63ರಂದು ಸ್ವಾತಂತ್ರ್ಯ ದಿನಾಚರಣೆಯು ನಾಲ್ಕೂರು ಪಂಚಾಯತ್ ಚೇರ್‌ಮೇನ್‌ರ ಅಧ್ಯಕ್ಷತೆಯಲ್ಲಿ ಸರ್ವಜನರ ಸಭೆ ಸೇರಿ ಆಚರಿಸಲ್ಪಟ್ಟಿತು. ಆ ದಿನ ಶಾಲಾ ಮಕ್ಕಳಿಗೆ ಕಡ್ಡಿ, ಪೆನ್ಸಿಲು ಪಂಚಲಾಯಿತು. ಪಂಚಾಯತ ಮೆಂಬರರೆಂದು 1962-63ನೇ ಪಂಚಾಯತ ವೆಕ್ಕ ಪರಿಕೋಧಿಸಿ ಮುಂದಿನ ಬಜೆಟಿನಲ್ಲಿ ಪಂಚಾಯತ್ ಆಫೀಸ್ ಕಟ್ಟಿಗೆ ಣ ರಚಿಸಲು ರೂ. 3,000ವನ್ನು ವಿಂಗಡಿಸಿ ಡಲಾಯಿತು ಮತ್ತು ರಸ್ತೆ ರಿಪೇರಿ ಕಾಲುಸಂ ಕ ಮಾಡುವರೆ ರೂ. 2,000ವನ್ನು ಮಂಜೂರು ಮಾಡಲಾಯಿತು. ಈ ಬಗ್ಗೆ ತಾ.4-9-63 ನೇ ದಿವಸ ಅಪರಾಹ್ನ ಗಂಟೆ 2ಕ್ಕೆ ಪಂಚಾ ಯತ್ ಆಫೀಸಿನಲ್ಲಿ ಟೆಂಡರು ಸ್ವೀಕರಿಸಲೇ ಕೆಂತಲೂ ನಿರ್ಣಯಿಸಲಾಯಿತು. ಮೊಹರಿ ಬಗ್ಗೆ ಅನೇ ದಿವಸ ಮಧ್ಯಾಹ್ನ 12 ಗಂಟೆ ಒಳಗೆ ಪಂಚಾಯತ್ ಆಫೀಸಿನಲ್ಲಿ ಕ್ಲಾರ್ಕರ ಮುಖಾಂತರ ಸಂಪೂರ್ಣ ಮೊಹರಿ ಪತೆಯ ಬಹುದು. ಟೆಂಡರು ತೊಡುವವರು 10 ರೂ ಪ್ಯಾ ದಿಪೋಸಿಟ್ ಕೊಡಬೇಕಾಗಿರುತ್ತದೆ.

ಎಸ್ಸೆಂ. ಭುಜಂಗ ಶೆಟ್ಟಿ,
ಚೇರ್‌ಮೇನ್, ನಾಲ್ಕೂರು ಪಂಚಾಯತ್

ಉಡುಪಿ ಡಿ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂ. 156/1963

ರಾಮಯ್ಯ ಶೆಟ್ಟಿ ಕೂಸಾ—ವಾದಿರು

ಮಕ್ಕ

4 ಪುಷ್ಪ ಶೆಟ್ತಿ, ಗಿಜ ಶೆಟ್ತಿ ಮಗಳು, ಕೊರಂಗ್ರಪಾಡಿ ಗ್ರಾಮದ ಕೆಮ್ಮಾರು—ಪ್ರತಿ ವಾದಿಳು.

ವಾದಿರು ಪ್ರತಿವಾದಿರ ಬಗ್ಗೆ REP. 532/61ರಲ್ಲಿ ಆನಂತ ಕೃಷ್ಣಾಚಾರ್ಯರಿಗೆ ಸಲಾಯಿಸಿದ ಹಣ ವಗೈರೆ ರೂಪಾಯಿ 1,249 ಕ್ಕೆ ಮೂಡಿದ ಸದ್ರಿ ವ್ಯಾಜ್ಯವು 4ನೇ ಪ್ರತಿವಾದಿಗೆ ನೋಟೀಸು ಮಾಡಿಸುವ ಬಗ್ಗೆ ತಾ. 5..9—1963ಕ್ಕೆ ಇಟ್ಟಿದೆ. ಅವಳಿಗೆ ಅಷ್ಟೇ ಪಣೆ ಇಲ್ಲವಾದಿರೆ ಸದ್ರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂದು ಸಂಗತಿ ಈ ಮೂಲಕ ತಿಳಿಸಿಯದೆ.

K Laxminarayana Aithal.
Vakil for Plaintiff.

ಉಡುಪಿ
ತಾ. 26—8—63

186

ಶಾಖೆಗಳು

ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ—
ಅದು ವಾಣಿಜ್ಯ ಕ್ಷೇತ್ರವಾಗಿರಲಿ,
ಕೈಗಾರಿಕಾ ಪ್ರದೇಶವಾಗಿರಲಿ, ಇಲ್ಲವೆ
ಶೈಕ್ಷಣಿಕ ಕೇಂದ್ರವಾಗಿರಲಿ—ಅಲ್ಲಿ
ಸಿಂಡಿಕೇಟ್ ಬೇಂಕಿನ ಶಾಖೆಯೊಂದು
ನಿಮ್ಮ ಆರ್ಥಿಕ ಸೇವೆಗೆ ಸಿದ್ಧವಾಗಿ ನಿಂತಿದೆ.

ಯಾವುದೇ ತರದ ನಿಮ್ಮ ಬೇಂಕಿಂಗ್
ವ್ಯವಹಾರವನ್ನು ಸಿಂಡಿಕೇಟ್ ಬೇಂಕಿನ
ಈ ವಿಶಾಲವಾದ 186 ಶಾಖಾ ಸಮುದಾಯದ
ಮೂಲಕ ನೀವು ಯಶಸ್ವಿಯಾಗಿ ನೆರೆ
ವೇರಿಸ ಬಲ್ಲಿರಿ.

ಸಿಂಡಿಕೇಟ್ ಬೇಂಕ್

ನಗುಮುಖದ ಸೇವೆ ‡‡ ‡‡ ಆರ್ಥಿಕ ಭದ್ರತೆ

The Canara Industrial & Banking Syndicate Limited, Udipi

Edited, Printed & Published by K. H.Shetty. at the Navayuga Press, Udipi, S. India.